ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–29

ಶಾಂತಿಪರ್ವ – ಮೋಕ್ಷಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೯

ಶಾಂತಿಪರ್ವ - ಮೋಕ್ಷಧರ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವ - ಮೋಕ್ಷಧರ್ಮಪರ್ವ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಶಾಂತಿಪರ್ವ - ಮೋಕ್ಷಧರ್ಮಪರ್ವ- ಭಾಗ ೨೯

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-33-4

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XII + 682 = 694
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ, ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮುನೀನ್ನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೨೯

ಶಾಂತಿಪರ್ವ - ಮೋಕ್ಷಧರ್ಮಪರ್ವ

ಪುಟ ಸಂ.

66. ಸದ್ಗುಣಗಳೇ ಲೋಕಗಳನ್ನೆಲ್ಲ ವಶೀಕರಿಸುತ್ತವೆ ಎಂಬುದಕ್ಕೆ ನಿದರ್ಶನವಾಗಿ ನಾರದರ ಮಹತ್ವವನ್ನು ಕುರಿತು ಉಗ್ರಸೇನ ಮತ್ತು ಕೃಷ್ಣನಿಗೂ ನಡೆದ ಸಂವಾದ 1

67. ಭೀಷ್ಮರು ಯುಧಿಷ್ಠಿರನನ್ನು ಕುರಿತು ಸೃಷ್ಟಿಕ್ರಮವನ್ನು ಪ್ರತಿಪಾದಿಸುವ ವ್ಯಾಸ-ಶುಕರ ಸಂವಾದವನ್ನು ಅನುವಾದಿಸಿದುದು 11

68. ಬ್ರಾಹ್ಮಪ್ರಳಯ ಮತ್ತು ಮಹಾಪ್ರಳಯಗಳ ವರ್ಣನೆ 36

69. ಬ್ರಾಹ್ಮಣನ ಕರ್ತವ್ಯಗಳು ಮತ್ತು ದಾನದ ಮಹಿಮೆ 41

70. ಬ್ರಾಹ್ಮಣರ ಕರ್ತವ್ಯಗಳ ಪ್ರತಿಪಾದನೆ. ಕಾಲರೂಪಸಮುದ್ರವನ್ನು ದಾಟುವ ಉಪಾಯವು 49

71. ಜ್ಞಾನವೇ ಮೋಕ್ಷಸಾಧನವೆಂದು ವ್ಯಾಸರು ಶುಕಮುನಿಗಳಿಗೆ ನಿರೂಪಿಸಿದುದು 57

72. ಸೃಷ್ಟಿಯ ಕಾರ್ಯಗಳಲ್ಲಿ ಬುದ್ಧಿಗೆ ಇರುವ ಮಹತ್ವ. ಬುದ್ಧಿಗೆ ಅನುಗುಣವಾಗಿ ಇರುವ ತಾರತಮ್ಯದ ವರ್ಣನೆ 68

73. ಅನೇಕ ಪ್ರಾಣಿಗಳ ವಿಮರ್ಶಾಪೂರ್ವಕವಾದ ಕರ್ಮತತ್ತ್ವದ ವಿವೇಚನೆ. ಯುಗಧರ್ಮದ ವರ್ಣನೆ ಮತ್ತು ಕಾಲನ ಮಹಿಮೆ 74

74. ಜ್ಞಾನಸಾಧನೆ ಮತ್ತು ಅದರ ಮಹತ್ವ 79

75. ವ್ಯಾಸರು ಶುಕಮುನಿಯನ್ನು ಕುರಿತು ಯೋಗಸ್ವರೂಪವನ್ನು ತಿಳಿಸಿದುದು 88

76. ವ್ಯಾಸರು ಶುಕರನ್ನು ಕುರಿತು ಕರ್ಮಜ್ಞಾನಗಳ ಬಗ್ಗೆ ವಿವರಿಸಿದುದು 96

77. ವ್ಯಾಸರು ಶುಕರನ್ನು ಕುರಿತು ಬ್ರಹ್ಮಚರ್ಯದ ಮಹತ್ವವನ್ನು ತಿಳಿಸಿದುದು 102

78. ವ್ಯಾಸರು ಶುಕಮುನಿಯನ್ನು ಕುರಿತು ಗಾರ್ಹಸ್ಥ್ಯಧರ್ಮವನ್ನು ವರ್ಣಿಸಿದುದು 109

79. ವಾನಪ್ರಸ್ಥ ಮತ್ತು ಸಂನ್ಯಾಸಧರ್ಮಗಳ ಮಹತ್ವವನ್ನು ವ್ಯಾಸರು ಶುಕಮುನಿಗೆ ನಿರೂಪಿಸಿದುದು 117

80. ವ್ಯಾಸರು ಶುಕಮುನಿಯನ್ನು ಕುರಿತು ಸಂನ್ಯಾಸಿಯ ಆಚರಣೆಗಳು ಮತ್ತು ಜ್ಞಾನವಂತನಾದ ಸಂನ್ಯಾಸಿಯ ಮಹತ್ವವನ್ನು ತಿಳಿಸುತ್ತಾರೆ 124

81. ಪರಮಾತ್ಮನ ಸರ್ವೋತ್ತಮತ್ವ ಮತ್ತು ಶ್ರೀಹರಿಯನ್ನು ನೋಡಲು ಬೇಕಾದ ಉಪಾಯ. ಪರಮಾತ್ಮ ಜ್ಞಾನಮಾರ್ಗವನ್ನು ಶುಕರಿಗೆ ವ್ಯಾಸರು ತಿಳಿಸಿದುದು 135

82. ವ್ಯಾಸರು ಶುಕಮುನಿಗೆ ಅಧ್ಯಾತ್ಮ ವಿಚಾರವನ್ನು ತಿಳಿಸಿದುದು 140

83. ಶುಕಮುನಿಗೆ ವ್ಯಾಸರು ಜ್ಞಾನಸಾಧನಗಳನ್ನು ತಿಳಿಸಿದುದು 147

84. ವ್ಯಾಸರಿಂದ ಜ್ಞಾನದ ಪ್ರಶಂಸೆ 152

85. ಜ್ಞಾನಸಾಧನೆಯ ಉಪಾಯಗಳನ್ನು ವ್ಯಾಸರು ಶುಕಮುನಿಗೆ ನಿರೂಪಿಸಿದುದು 157

86. ವ್ಯಾಸರು ಶುಕಮುನಿಯನ್ನು ಕುರಿತು ಜ್ಞಾನಸಾಧನ-ಸಾಮಗ್ರಿಗಳ ಬಗ್ಗೆ ನಿರೂಪಿಸಿದುದು 163

87. ವ್ಯಾಸರು ಶುಕಮುನಿಯನ್ನು ಕುರಿತು ಪಂಚಭೂತಗಳ ಕಾರ್ಯ ಮತ್ತು ಗುಣಗಳನ್ನು ವಿಸ್ತರಿಸಿದುದು 168

88. ಜೀವ-ಪರಮಾತ್ಮರನ್ನು ಯೋಗದ ಮೂಲಕ ಸಾಕ್ಷಾತ್ಕರಿಸುವ ವಿಧಾನವನ್ನು ವ್ಯಾಸರು ನಿರೂಪಿಸಿದುದು 171

89. ವ್ಯಾಸರು ಶುಕಮುನಿಯನ್ನು ಕುರಿತು ಕಾಮಾದಿಗಳ ಜಯದ ಅನಿವಾರ್ಯತೆಯನ್ನು ನಿರೂಪಿಸಿದುದು 175

90. ಪೃಥಿವಿ ಮೊದಲಾದ ಪಂಚಭೂತಗಳ ಬಗ್ಗೆ ವ್ಯಾಸರು ನಿರೂಪಿಸಿದುದು 179

91. ನಾರದನಿಗೂ ಅಕಂಪನನಿಗೂ ನಡೆದ ಸಂವಾದ 182

92. ಬ್ರಹ್ಮನು ಮೃತ್ಯುವನ್ನು ಸೃಷ್ಟಿಸಿ, ಪ್ರಜಾಸಂಹಾರಕ್ಕಾಗಿ ನಿಯಮಿಸಿದುದು 187

93. ನಾರದರು ಅಕಂಪನನ ಪುತ್ರಶೋಕವನ್ನು ಪರಿಹರಿಸಲು ಮೃತ್ಯು-ಬ್ರಹ್ಮಾದಿಗಳಿಗೆ ನಡೆದ ಸಂವಾದವನ್ನು ನಿರೂಪಿಸಿದುದು 192

94. ಭೀಷ್ಮರು ಯುಧಿಷ್ಠಿರನಿಗೆ ಧರ್ಮಾಧರ್ಮಗಳ ಸ್ವರೂಪವನ್ನು ತಿಳಿಸಿದುದು 202

95. ಯುಧಿಷ್ಠಿರನು ಧರ್ಮದ ಪ್ರಾಮಾಣ್ಯದ ಬಗ್ಗೆ ಭೀಷ್ಮರನ್ನು ಕುರಿತು ಪ್ರಶ್ನಿಸಿದುದು 209

96. ಜಾಜಲಿ ಮತ್ತು ತುಲಾಧಾರರ ಸಂವಾದ 214

97. ಜಾಜಲಿ ತುಲಾಧಾರರ ಧರ್ಮಸಂವಾದ 225

98. ಜಾಜಲಿಗೆ ತುಲಾಧಾರನ ಉಪದೇಶ 238

99. ಜಾಜಲಿಗೆ ಪಕ್ಷಿಯ ಉಪದೇಶ 248

100. ವಿಚಖ್ನಿ ರಾಜನಿಂದ ಅಹಿಂಸಾಧರ್ಮದ ಪ್ರಶಂಸೆ 254

101. ಭೀಷ್ಮರಿಂದ ಯುಧಿಷ್ಠಿರನಿಗೆ ಚಿರಕಾರಿ ಉಪಾಖ್ಯಾನ ವರ್ಣನೆ 258

102. ಪ್ರಜೆಗಳನ್ನು ಹಿಂಸಿಸದೆ ರಾಜ್ಯ ನಿರ್ವಹಿಸುವ ಕ್ರಮವನ್ನು ತಿಳಿಸಲು ದ್ಯುಮತ್ಸೇನ, ಸತ್ಯವಂತರಿಗೆ ನಡೆದ ಸಂವಾದವನ್ನು ಪ್ರಸ್ತಾಪಿಸಿದುದು 276

103. ಪಶುವಧೆಯನ್ನು ಮಾಡದೆ ಯಜ್ಞ ಮಾಡಬೇಕೆಂಬ ವಿಷಯದಲ್ಲಿ ಕಪಿಲ ಮತ್ತು ಸ್ಯೂಮರಶ್ಮಿ ಇವರಿಗೆ ನಡೆದ ಸಂವಾದವು 284

104. ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗಗಳ ವಿಷಯದಲ್ಲಿ ಗೋ-ಕಪಿಲರ ಸಂವಾದ 294

105. ಸ್ಯೂಮರಶ್ಮಿ-ಕಪಿಲರ ಸಂವಾದ 311

106. ಧರ್ಮಾರ್ಥಕಾಮಗಳಲ್ಲಿ ಧರ್ಮವೇ ಶ್ರೇಷ್ಠವೆಂದು ನಿರೂಪಿಸಲು ಭೀಷ್ಮರು ಯುಧಿಷ್ಠಿರನಿಗೆ ಕುಂಡಧಾರನೆಂಬ ಬ್ರಾಹ್ಮಣನ ಕಥೆಯನ್ನು ನಿರೂಪಿಸಿದುದು 323

107. ಹಿಂಸೆಗೆ ಕಾರಣವಾದ ಯಜ್ಞವು ಪ್ರಶಸ್ತವಾದುದಲ್ಲ ಎಂದು ನಾರದರು ಉಂಛವೃತ್ತಿ ಬ್ರಾಹ್ಮಣನ ಕಥೆಯನ್ನು ದೃಷ್ಟಾಂತವನ್ನಾಗಿ ನೀಡಿ ಹೇಳಿದುದು 336

108. ಭೀಷ್ಮರು ಧರ್ಮಜನಿಗೆ ಧರ್ಮಾಚರಣೆಯ ಮಹತ್ವವನ್ನು ಬೋಧಿಸಿದುದು 341

108. ಮೋಕ್ಷೋಪಾಯಗಳನ್ನು ಧರ್ಮರಾಜನಿಗೆ ಭೀಷ್ಮರು ಉಪದೇಶಿಸಿದುದು 346

110. ಭೂತಗಳ ಉತ್ಪತ್ತಿ ಮತ್ತು ವಿನಾಶಗಳ ಬಗ್ಗೆ ಅಸಿತದೇವಲನಿಗೂ ನಾರದರಿಗೂ ನಡೆದ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು 351

111. ಆಸೆಯನ್ನು ತೊರೆಯುವುದೇ ಸುಖಸಾಧನ ಎಂಬುದಕ್ಕೆ ಜನಕ-ಮಾಂಡವ್ಯರ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು 360

112. ಆಯಿತ ಮುನಿಯು ಹೇಳಿದ ಸಂನ್ಯಾಸಧರ್ಮ 364

113. ಬ್ರಹ್ಮಪ್ರಾಪ್ತಿಗೆ ಉಪಾಯ. ಶುಕ್ರ-ವೃತ್ರರ ಸಂವಾದ 369

114. ಯುಧಿಷ್ಠಿರನ ಸಂಶಯವನ್ನು ಪರಿಹರಿಸಲು ಭೀಷ್ಮರು ವೃತ್ರಾಸುರನಿಗೆ ಸನತ್ಕುಮಾರರು ಮಾಡಿದ ಉಪದೇಶವನ್ನು ತಿಳಿಸಿದುದು 377

115. ಇಂದ್ರ-ವೃತ್ರರ ಯುದ್ಧದ ವರ್ಣನೆ 398

116. ವೃತ್ರಾಸುರನ ವಧೆ. ಬ್ರಹ್ಮಹತ್ಯಾ ವಿಭಾಗ 407

117. ರುದ್ರನಿಂದ ದಕ್ಷಯಜ್ಞದ ಧ್ವಂಸ. ಶಿವನ ಕ್ರೋಧದಿಂದ ಜ್ವರದ ಉತ್ಪತ್ತಿ. ಜ್ವರದ ವಿವಿಧ ರೂಪಗಳು 421

118. ಶಿವನ ಪ್ರೇರಣೆಯಂತೆ ವೀರಭದ್ರನು ದಕ್ಷಯಾಗವನ್ನು ನಾಶಪಡಿಸಿದುದು. ದಕ್ಷನು ಮಾಡಿದ ಸ್ತೋತ್ರದಿಂದ ರುದ್ರನು ಸುಪ್ರೀತನಾಗಿ ಅವನಿಗೆ ವರವನ್ನು ಕೊಟ್ಟಿದುದು. ಶಿವಸ್ತೋತ್ರದ ಮಹಿಮೆ 434

119. ಯುಧಿಷ್ಠಿರನಿಗೆ ಭೀಷ್ಮರು, ಜ್ಞಾನವೇ ದುಃಖ ನೀಗಲು ಮಾರ್ಗವೆಂದು ತಿಳಿಸಲು ಸಮಂಗನಿಗೂ ನಾರದರಿಗೂ ನಡೆದ ಸಂವಾದವನ್ನು ನಿರೂಪಿಸಿದುದು 482

120. ನಾರದ-ಗಾಲವರ ಸಂವಾದ 487

121. ಭೀಷ್ಮರು ಯುಧಿಷ್ಠಿರನಿಗೆ ಮೋಕ್ಷದ ವಿಷಯದ ಬಗ್ಗೆ ಅರಿಷ್ಟನೇಮಿ ಹಾಗೂ ಸಗರನಿಗೆ ನಡೆದ ಸಂವಾದವನ್ನು ಉಪದೇಶಿಸಿದುದು 500

122. ಭೃಗುವಿನ ಮಗನಾದ ಉಷನಸನ ಚರಿತ್ರೆ 511

123. ಧರ್ಮರಾಜನಿಗೆ ಭೀಷ್ಮರು ಪರಾಶರಗೀತೆಯನ್ನು ಉಪದೇಶಿಸಿದುದು 519

124. ಪರಾಶರ ಗೀತೆ. ಶ್ರೇಯಸ್ಸಾಧನ ವಿಚಾರ 525

125. ಪರಾಶರ ಗೀತಾ 531

126. ಪರಾಶರ ಗೀತಾ. ಶೂದ್ರನಿಗೆ ಸೇವಾ ವೃತ್ತಿಯೇ ಪ್ರಧಾನವು ಎನ್ನಲು ಸತ್ಸಂಗದ ಮಹಿಮೆಯನ್ನು, ವರ್ಣಾಶ್ರಮದ ಮಹಿಮೆಯನ್ನು, ವರ್ಣಾಶ್ರಮದ ಧರ್ಮಪಾಲನೆಯ ಮಹತ್ವವನ್ನು ತಿಳಿಸಿದುದು 537

127. ಪರಾಶರರ ಉಪದೇಶ ಮುಂದುವರೆದುದು 542

128. ಪರಾಶರ ಗೀತಾ ಮುಂದುವರೆದುದು 549

129. ಪರಾಶರ ಗೀತಾ 558

130. ಪರಾಶರ ಗೀತಾ 567

131. ಜನಕನ ಅನೇಕ ಪ್ರಶ್ನೆಗಳಿಗೆ ಪರಾಶರರು ಉಪದೇಶಿಸುತ್ತಾ ಉಪದೇಶವನ್ನು ಉಪಸಂಹರಿಸಿದುದು 578

132. ಭೀಷ್ಮರು ಯುಧಿಷ್ಠಿರನನ್ನು ಕುರಿತು ಮೋಕ್ಷ ಸಾಧನವನ್ನು ತಿಳಿಸುವ ಹಂಸಗೀತೆಯನ್ನು ಉಪದೇಶಿಸಿದುದು 590

133. ಭೀಷ್ಮರು ಯುಧಿಷ್ಠಿರನಿಗೆ ಯೋಗಶಾಸ್ತ್ರವನ್ನು ಉಪದೇಶಿಸಿದುದು 604

134. ಯುಧಿಷ್ಠಿರನನ್ನು ಕುರಿತು ಯೋಗದ ಮಹತ್ವ ಮತ್ತು ಫಲವನ್ನು ನಿರೂಪಿಸಿದುದು 619

135. ವಸಿಷ್ಠ ಕರಾಲ ಜನಕರ ಸಂವಾದ. ಕ್ಷರ-ಅಕ್ಷರ ತತ್ತ್ವಗಳ ನಿರೂಪಣೆ ಮತ್ತು ಅವುಗಳ ಜ್ಞಾನದಿಂದ ಸಿಗುವ ಫಲ 647

136. ವಸಿಷ್ಠ ಮತ್ತು ಕರಾಳ ಜನಕರ ಸಂವಾದ 658

137. ವಸಿಷ್ಠ-ಜನಕರ ಸಂವಾದ 669

* * * * *

ಮಹಾಭಾರತ

ಮೋಕ್ಷಧರ್ಮಪರ್ವ

ಅರವತ್ತಾರನೆಯ ಅಧ್ಯಾಯ

ಸದ್ಗುಣಗಳೇ ಲೋಕಗಳನ್ನೆಲ್ಲ ವಶೀಕರಿಸುತ್ತವೆ ಎಂಬುದಕ್ಕೆ ನಿದರ್ಶನವಾಗಿ ನಾರದರ ಮಹತ್ವವನ್ನು ಕುರಿತು ಉಗ್ರಸೇನ ಮತ್ತು ಕೃಷ್ಣನಿಗೂ ನಡೆದ ಸಂವಾದ.

ಯುಧಿಷ್ಠಿರಃ

ಪ್ರಿಯಃ ಸರ್ವಸ್ಯ ಲೋಕಸ್ಯ ಸರ್ವಸತ್ತ್ವಾಭಿನಂದಿತಃ ।
ಗುಣೈಃ ಸರ್ವೈರುಪೇತಶ್ಚ ಕೋನ್ವಸ್ತಿ ಭುವಿ ಮಾನವಃ ॥೧॥

ಪಿತಾಮಹನೇ, ಸರ್ವಲೋಕಪ್ರಿಯನಾಗಿ, ಸಮಸ್ತ ಪ್ರಾಣಿಗಳಿಗೂ ರಕ್ಷಕನಾಗಿ, ಸಮಸ್ತ ಗುಣಗಳಿಂದ ಕೂಡಿದ ಪುರುಷನು ಯಾವನಾದರೂ ಈ ಭೂಮಿಯಲ್ಲಿ ಇದ್ದಾನೆಯೇ? ಇದ್ದರೆ ಯಾವನು?

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಪೃಚ್ಛತೋ ಭರತರ್ಷಭ ।
ಉಗ್ರಸೇನಸ್ಯ ಸಂವಾದಂ ನಾರದೇ ಕೇಶವಸ್ಯ ಚ ॥೨॥

ರಾಜನೇ, ನೀನು ಕೇಳುವ ವಿಷಯದಲ್ಲಿ ಕೃಷ್ಣನಿಗೆ ಉಗ್ರಸೇನನಿಗೆ ನಡೆದ ಸಂವಾದರೂಪವಾದ ಇತಿಹಾಸವಿದೆ. ನಾರದರ ವಿಷಯದಲ್ಲಿ ನಡೆದ ಇವರೀರ್ವರ ಸಂವಾದವನ್ನು ಕೇಳಿಸಿಕೊ.

ಉಗ್ರಸೇನಃ

ಯಸ್ಯ ಸಂಕಲ್ಪತೇ ಲೋಕೋ ನಾರದಸ್ಯ ಪ್ರಕೀರ್ತನೇ ।
ಮನ್ಯೇ ಸ ಗುಣಸಂಪನ್ನೋ ಬ್ರೂಹಿ ತನ್ಮಮ ಪೃಚ್ಛತಃ ॥೩॥

ಕಂಸನ ತಂದೆಯಾದ ಉಗ್ರಸೇನನು ಕೃಷ್ಣನ ಜೊತೆ ಕೇಳುತ್ತಾನೆ- ವಾಸುದೇವನೇ, ಜಗತ್ತೆಲ್ಲವೂ ನಾರದನನ್ನು ಕೊಂಡಾಡುತ್ತಿದೆ. ಅವನೇ ಸಕಲ ಗುಣಸಂಪನ್ನನೆಂದು ನನಗೆ ತೋರುತ್ತಿದೆ. ಇದರ ನಿಜಾಂಶವನ್ನು ನನಗೆ ತಿಳಿಸು.

ವಾಸುದೇವಃ

ಕುಕ್ಕುರಾಧಿಪ ಯಾನ್ಮನ್ಯೇ ಶೃಣು ತಾನ್ ಮೇ ವಿವಕ್ಷತಃ ।
ನಾರದಸ್ಯ ಗುಣಾನ್ ಸಾಧೂನ್ ಸಂಕ್ಷೇಪೇಣ ನರಾಧಿಪ ॥೪॥

ಯಾದವೇಂದ್ರನೇ, ನನ್ನನ್ನು ಕುರಿತು ನಾರದರ ವಿಷಯದಲ್ಲಿ ನೀನು ಪ್ರಶ್ನಿಸುತ್ತಿದ್ದಿ. ನಾರದರಲ್ಲಿ ಅಸಾಧಾರಣ ಗುಣಗಳಿವೆ. ನನಗೆ ತಿಳಿದ ಕೆಲವು ಗುಣಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ, ಕೇಳು.

ನ ಚಾರಿತ್ರನಿಮಿತ್ತೋಽಸ್ಯಾಹಂಕಾರೋ ದೇಹಪಾತನಃ ।
ಅಭಿನ್ನಶ್ರುತಚಾರಿತ್ರಸ್ತಸ್ಮಾತ್ ಸರ್ವತ್ರ ಪೂಜಿತಃ ॥೫॥

ನಾರದರು ಸಚ್ಚಾರಿತ್ರ್ಯಸಂಪನ್ನರು. ಆದರೆ ನಾನು ಚಾರಿತ್ರ್ಯಶೀಲನೆಂಬ ಅಹಂಕಾರ ಅವರಲ್ಲಿಲ್ಲ. ನಡತೆಯಲ್ಲಿ ಹೇಗೆ ಶ್ರೇಷ್ಠತೆ ಇದೆಯೋ ಜ್ಞಾನದಲ್ಲಿಯೂ ಅಂತಹ ಶ್ರೇಷ್ಠತೆಯನ್ನು ಹೊಂದಿದವರು. ಆದ್ದರಿಂದಲೇ ಎಲ್ಲ ಕಡೆಯಲ್ಲಿಯೂ ಪೂಜಿಸಲ್ಪಡುತ್ತಾರೆ.

ಅರತಿಃ ಕ್ರೋಧಚಾಪಲ್ಯೇ ಭಯಂ ನೈತಾನಿ ನಾರದೇ ।
ಅದೀರ್ಘಸೂತ್ರಃ ಶೂರಶ್ಚ ತಸ್ಮಾತ್ ಸರ್ವತ್ರ ಪೂಜಿತಃ ॥೬॥

ಅತೃಪ್ತಿ, ಕ್ರೋಧ, ಚಾಪಲ್ಯ, ಭಯ ಮೊದಲಾದ ದುರ್ಗುಣಗಳು ನಾರದನಲ್ಲಿಲ್ಲ. ಸತ್ಕಾರ್ಯದಲ್ಲಿ ವಿಳಂಬ ಮಾಡುವವನಲ್ಲ. ಶೂರನಾಗಿದ್ದಾನೆ. ಆದ್ದರಿಂದಲೇ ಎಲ್ಲ ಕಡೆಯಲ್ಲಿಯೂ ಪೂಜಿತನಾಗಿದ್ದಾನೆ.

ಉಪಾಸ್ಯೋ ನಾರದೋ ಬಾಢಂ ವಾಚಿ ನಾಸ್ಯ ವ್ಯತಿಕ್ರಮಃ ।
ಕಾಮತೋ ಯದಿ ವಾ ಲೋಭಾತ್ ತಸ್ಮಾತ್ ಸರ್ವತ್ರ ಪೂಜಿತಃ ॥೭॥

ಈ ಗುಣಗಳಿಂದ ನಾರದನು ಉಪಾಸ್ಯನಾಗಿದ್ದಾನೆ. ಮಾತಿನಲ್ಲಿ ಇವನನ್ನು ಮೀರಿದವರು ಯಾರೂ ಇಲ್ಲ. ಕಾಮ-ಲೋಭಗಳಿಗೆ ಅವನು ಎಂದಿಗೂ ತುತ್ತಾಗುವವನಲ್ಲ. ಆದ್ದರಿಂದಲೇ ಪೂಜಿತನಾಗಿದ್ದಾನೆ.

ಅಧ್ಯಾತ್ಮವಿಧಿತತ್ತ್ವಜ್ಞಃ ಕ್ಷಾಂತಃ ಶಕ್ತೋ ಜಿತೇಂದ್ರಿಯಃ ।
ಋಜುಶ್ಚ ಸತ್ಯವಾದೀ ಚ ತಸ್ಮಾತ್ ಸರ್ವತ್ರ ಪೂಜಿತಃ ॥೮॥

ಅಧ್ಯಾತ್ಮವಿಧಿಯನ್ನು ಸರಿಯಾಗಿ ತಿಳಿದವನಾಗಿದ್ದಾನೆ. ತಾಳ್ಮೆ, ಶಕ್ತಿ, ಇಂದ್ರಿಯಜಯ, ಋಜು (ಸರಳ)ಸ್ವಭಾವ, ಸತ್ಯವಾದಿತ್ವ ಮೊದಲಾದ ಗುಣಗಳು ಇರುವುದರಿಂದಲೇ ಪೂಜಿತನಾಗಿದ್ದಾನೆ.

ತೇಜಸಾ ಯಶಸಾ ಬುದ್ಧ್ಯಾ ಜ್ಞಾನೇನ ವಿನಯೇನ ಚ ।
ಜನ್ಮನಾ ತಪಸಾ ವೃದ್ಧಸ್ತಸ್ಮಾತ್ ಸರ್ವತ್ರ ಪೂಜಿತಃ ॥೯॥

ತೇಜಸ್ಸು, ಯಶಸ್ಸು, ಬುದ್ಧಿ, ಜ್ಞಾನ, ವಿನಯ, ಜನ್ಮ, ತಪಸ್ಸು ಇವುಗಳಿಂದ ಅಭಿವೃದ್ಧಿಯನ್ನು ಪಡೆದಿರುವುದರಿಂದ ಎಲ್ಲೆಡೆಯೂ ಪೂಜಿತನಾಗಿದ್ದಾನೆ.

ಸುಶೀಲಃ ಸುಖಸಂವೇಶಃ ಸುಭೋಜಃ ಸ್ವಾದರಃ ಶುಚಿಃ ।
ಸುವಾಕ್ಯಶ್ಚಾಪ್ಯನೀರ್ಷ್ಯಶ್ಚ ತಸ್ಮಾತ್ ಸರ್ವತ್ರ ಪೂಜಿತಃ ॥೧೦॥

ಸಚ್ಚಾರಿತ್ರ್ಯಸಂಪನ್ನನೂ, ಶುದ್ಧವಾದ ವಸ್ತ್ರಧಾರಿಯೂ, ಶುದ್ಧವಾದ ಮನೆಯುಳ್ಳವನು, ಶುದ್ಧವಾದ ಭೋಜನವುಳ್ಳವನು, ಆದರನು, ಶುಚಿಯೂ, ಸುವಾಕ್ಯ ಉಳ್ಳವನು, ಹೊಟ್ಟೆಕಿಚ್ಚು ಇಲ್ಲದವನು, ಆದ್ದರಿಂದಲೇ ಎಲ್ಲ ಕಡೆಯೂ ಪೂಜಿತನಾಗಿದ್ದಾನೆ.

ಕಲ್ಯಾಣಂ ಕುರುತೇ ಬಾಢಂ ಪಾಪಮಸ್ಮಿನ್ನ ವಿದ್ಯತೇ ।
ನ ಪ್ರೀಯತೇ ಪರಾನರ್ಥೈಸ್ತಸ್ಮಾತ್ ಸರ್ವತ್ರ ಪೂಜಿತಃ ॥೧೧॥

ಇವನು ಎಲ್ಲರಿಗೂ ಹಿತವನ್ನೇ ಮಾಡುತ್ತಾನೆ. ಆದ್ದರಿಂದ ಇವನಲ್ಲಿ ಪಾಪಕ್ಕೆ ಪ್ರಸಕ್ತಿಯಿಲ್ಲ. ಇತರರ ಅನರ್ಥಕ್ಕಾಗಿ ಎಂದಿಗೂ ಸಂತೋಷವನ್ನು ಹೊಂದುವುದಿಲ್ಲ. ಇವೇ ಅವನ ಪೂಜ್ಯತೆಗೆ ಕಾರಣಗಳು.

ವೇದಶ್ರುತಿಭಿರಾಖ್ಯಾನೈರರ್ಥಾನಭಿಜಿಗೀಷತಿ ।
ತಿತಿಕ್ಷುರನವಜ್ಞಶ್ಚ ತಸ್ಮಾತ್ ಸರ್ವತ್ರ ಪೂಜಿತಃ ॥೧೨॥

ವೇದಗಳನ್ನು ಪುರಾಣಗಳನ್ನು ಚೆನ್ನಾಗಿ ಅಧ್ಯಯನ ಮಾಡಿದವನಾಗಿ, ವಿಷಯ ಸುಖಗಳಿಂದ ವಿಮುಖನಾಗಿ, ಬಹಳ ಕ್ಷಮಾಶೀಲನಾಗಿ ಇದ್ದಾನೆ. ಯಾರನ್ನೂ ಅಪಮಾನಿಸುವುದಿಲ್ಲ. ಆದ್ದರಿಂದಲೇ ಪೂಜ್ಯನಾಗಿದ್ದಾನೆ.

ಸಮತ್ವಾಚ್ಚ ಪ್ರಿಯೋ ನಾಸ್ತಿ ನಾಪ್ರಿಯಶ್ಚ ಕಥಂಚನ ।
ಮನೋಽನುಕೂಲವಾದೀ ಚ ತಸ್ಮಾತ್ ಸರ್ವತ್ರ ಪೂಜಿತಃ ॥೧೩॥

ಅವನು ಸರ್ವವಸ್ತುಗಳಲ್ಲಿ ಸಮಬುದ್ಧಿಯುಳ್ಳವನು. ಇವನಿಗೆ ಪ್ರಿಯರು ಅಪ್ರಿಯರು ಎಂಬುವರಿಲ್ಲ. ಮನಸ್ಸಿಗೆ ಹಿತವಾಗುವಂತೆ ಮಾತನಾಡುವವನು. ಆದ್ದರಿಂದ ಇವನು ಎಲ್ಲ ಕಡೆಗಳಲ್ಲಿಯೂ ಪೂಜಿತನಾಗಿದ್ದಾನೆ.

ಬಹುಶ್ರುತಶ್ಚಿತ್ರಕಥಃ ಪಂಡಿತೋಽನಲಸೋಽಶಠಃ ।
ಅದೀನೋಽಕ್ರೋಧನೋಽಲುಬ್ಧಸ್ತಸ್ಮಾತ್ ಸರ್ವತ್ರ ಪೂಜಿತಃ ॥೧೪॥

ಅವನು ಬಹುಶ್ರುತ ವಿದ್ವಾಂಸನು, ಚಿತ್ರ-ವಿಚಿತ್ರವಾದ ಕಥೆಗಳನ್ನು ಹೇಳುವವನು, ಪಂಡಿತನು, ಉತ್ಸಾಹಿಯು, ಜ್ಞಾನಿಯು ಆಗಿದ್ದಾನೆ. ಇವನಲ್ಲಿ ಕಾರ್ಪಣ್ಯ, ಕ್ರೋಧ, ಲೋಭ, ಮೊದಲಾದ ದುರ್ಗುಣಗಳಿಲ್ಲ. ಆದ್ದರಿಂದಲೇ ಪೂಜಿತನಾಗಿದ್ದಾನೆ.

ನಾರ್ಥೇ ಧನೇ ವಾ ಕಾಮೇ ವಾ ಭೂತಪೂರ್ವೋಽಸ್ಯ ವಿಗ್ರಹಃ ।
ದೋಷಾಶ್ಚಾಸ್ಯ ಸಮುಚ್ಛಿನ್ನಾಸ್ತಸ್ಮಾತ್ ಸರ್ವತ್ರ ಪೂಜಿತಃ ॥೧೫॥

ಅರ್ಥ, ಧನ, ಕಾಮಗಳಲ್ಲಾಗಲಿ ಇವನು ಯಾರ ಜೊತೆಗೂ ವಿವಾದ ಮಾಡಿಕೊಂಡಿಲ್ಲ. ಅವನಲ್ಲಿ ದೋಷಲೇಶಕ್ಕೂ ಎಡೆಯಿಲ್ಲದ್ದರಿಂದ ಲೋಕ ಪೂಜ್ಯನಾಗಿದ್ದಾನೆ.

ದೃಢಭಕ್ತಿರನಿಂದ್ಯಾತ್ಮಾ ಶ್ರುತವಾನನೃಶಂಸವಾನ್ ।
ವೀತಸಮ್ಮೋಹದೋಷಶ್ಚ ತಸ್ಮಾತ್ ಸರ್ವತ್ರ ಪೂಜಿತಃ ॥೧೬॥

ಅವನು ದೃಢಭಕ್ತಿಯುಳ್ಳವನು. ನಿರ್ದುಷ್ಟಹೃದಯನು, ಶ್ರುತಿಗಳಲ್ಲಿ ನಿಪುಣನು, ಕ್ರೌರ್ಯ, ಮೋಹಗಳಿಲ್ಲದವನು. ಇದರಿಂದ ಲೋಕಪೂಜಿತನಾಗಿದ್ದಾನೆ.

ಅಸಕ್ತಃ ಸರ್ವಸಂಗೇಷು ಸಕ್ತಾತ್ಮೇವ ಚ ಲಕ್ಷ್ಯತೇ ।
ಅದೀರ್ಘಸಂಶಯೋ ವಾಗ್ಮೀ ತಸ್ಮಾತ್ ಸರ್ವತ್ರ ಪೂಜಿತಃ ॥೧೭॥

ಸರ್ವಸಂಗಗಳಲ್ಲಿಯೂ ಅಸಕ್ತನಾಗಿದ್ದಾನೆ. ಸಂಗವುಳ್ಳ ಪುರುಷನಂತೆ ತೋರಿಸಿಕೊಳ್ಳುತ್ತಾನೆ. ಅವನಿಗೆ ಯಾವುದೇ ತುಂಬಾ ಕಾಲದಿಂದ ಭ್ರಮೆಗಳಿರುವುದಿಲ್ಲ. ವಾಗ್ಮಿಯಾಗಿದ್ದಾನೆ. ಆದ್ದರಿಂದಲೇ ಎಲ್ಲೆಡೆಯಲ್ಲಿಯೂ ಪೂಜಿತನಾಗಿದ್ದಾನೆ.

ಸಮಾಧಿರ್ನಾಸ್ಯ ಕಾಮಾರ್ಥೇ ನಾತ್ಮಾನಂ ಸ್ತೌತಿ ಕರ್ಹಿಚಿತ್ ।
ಅನೀರ್ಷುರ್ಮೃದುಸಂವಾದಸ್ತಸ್ಮಾತ್ ಸರ್ವತ್ರ ಪೂಜಿತಃ ॥೧೮॥

ಸ್ವಾರ್ಥಕ್ಕಾಗಿ ಎಂದೂ ತಪಸ್ಸನ್ನು ಮಾಡುವುದಿಲ್ಲ. ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುವುದಿಲ್ಲ. ಅವನಿಗೆ ಮಾತ್ಸರ್ಯವಿಲ್ಲ. ಮೃದುವಾಗಿ ಮಾತನಾಡುತ್ತಾನೆ. ಆದ್ದರಿಂದ ಸರ್ವತ್ರ ಪೂಜಿತನಾಗಿದ್ದಾನೆ.

ನಾಹಂಕಾರೇ ಮುಕ್ತಿರಸ್ಯ ಚಾರಿತ್ರೇ ಬುದ್ಧಿರಾಸ್ಥಿತಾ ।
ವೇದಾರ್ಥವಿದ್ ವಿಭಾಗೇನ ಯಜ್ಞವಿದ್ಯೋಗವಿತ್ ಕವಿಃ ।
ಭಕ್ತಿಮಾನ್ ಸ ಸದಾ ವಿದ್ವಾಂಸ್ತಸ್ಮಾತ್ ಸರ್ವತ್ರ ಪೂಜಿತಃ ॥೧೯॥

ಅಹಂಕಾರ ಇರುವುದಿಲ್ಲ. ಚಾರಿತ್ರ್ಯದಲ್ಲಿ ಬುದ್ಧಿಯು ನಿಶ್ಚಲವಾಗಿದೆ. ವೇದಾರ್ಥಜ್ಞಾನಿಯಾಗಿದ್ದಾನೆ. ಯಜ್ಞಗಳನ್ನು ವಿಭಾಗದ ಮೂಲಕ ಅರ್ಥೈಸಿಕೊಂಡಿದ್ದಾನೆ. ಯೋಗಜ್ಞನಾಗಿದ್ದಾನೆ. ಕವಿಯಾಗಿದ್ದಾನೆ. ಭಕ್ತಿಮಾನ್ ಆಗಿದ್ದಾನೆ. ಯಾವತ್ತೂ ಬ್ರಹ್ಮಜ್ಞಾನದಲ್ಲಿಯೇ ರತನಾಗಿರುತ್ತಾನೆ. ಆದ್ದರಿಂದ ಲೋಕಪೂಜಿತನಾಗಿದ್ದಾನೆ.

ತ್ರಿಗುಣಂ ಗುಣಭೋಕ್ತಾರಂ ಪಂಚಯಜ್ಞಾತ್ಮಕಂ ತಥಾ ।
ಯಥಾವತ್ ಸ ವಿಜಾನಾತಿ ತಸ್ಮಾತ್ ಸರ್ವತ್ರ ಪೂಜಿತಃ ॥೨೦॥

ಮೂರುಗುಣಗಳಲ್ಲಿದ್ದು ಶುಭಗುಣ ಭೋಕ್ತನೆನಿಸಿದ, ಪಂಚಯಜ್ಞಾತ್ಮಕನಾದ ಭಗವಂತನನ್ನು ಯಥಾರ್ಥವಾಗಿ ತಿಳಿದಿದ್ದಾನೆ. ಆದ್ದರಿಂದಲೇ ಸರ್ವತ್ರ ಪೂಜಿತನಾಗಿದ್ದಾನೆ.

ಲೋಕಸ್ಯ ವಿವಿಧಂ ಚಿತ್ತಂ ಪ್ರೇಕ್ಷತೇ ಚಾಪ್ಯಕುತ್ಸಯನ್ ।
ಸಂಸರ್ಗವಿದ್ಯಾಕುಶಲಸ್ತಸ್ಮಾತ್ ಸರ್ವತ್ರ ಪೂಜಿತಃ ॥೨೧॥

ಲೋಕದ ಅನೇಕ ವಿಧವಾದ ಮನೋವೈವಿಧ್ಯಗಳನ್ನು ನಿಂದಿಸದೆ ನೋಡುತ್ತಾನೆ. ಮತ್ತೊಬ್ಬರ ಜೊತೆಗೆ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಪ್ರಾವೀಣ್ಯ ಪಡೆದವನು ಈತ. ಆದ್ದರಿಂದಲೇ ಸರ್ವತ್ರ ಪೂಜಿತನಾಗಿದ್ದಾನೆ.

ನಾಸೂಯತ್ಯಾಗಮಂ ಕಂಚಿತ್ ಸ್ವನಯೇನೋಪಜೀವತಿ ।
ಅವಂಧ್ಯಕಾಲೋಽವಶ್ಯಾತ್ಮಾ ತಸ್ಮಾತ್ ಸರ್ವತ್ರ ಪೂಜಿತಃ ॥೨೨॥

ಇವನು ವೇದಗಳನ್ನು ದ್ವೇಷಿಸುವುದಿಲ್ಲ. ತನ್ನ ಬುದ್ಧಿಯಿಂದಲೇ ಎಚ್ಚರದಿಂದ ಬದುಕುತ್ತಾನೆ. ಕಾಲವನ್ನು ವ್ಯರ್ಥಮಾಡುವುದಿಲ್ಲ. ಆದ್ದರಿಂದಲೇ ಸರ್ವತ್ರ ಪೂಜಿತನಾಗಿದ್ದಾನೆ.

ಕೃತಶ್ರಮಃ ಕೃತಪ್ರಜ್ಞೋ ನ ಚ ತೃಪ್ತಃ ಸಮಾಧಿತಃ ।
ನಿತ್ಯಯುಕ್ತೋಽಪ್ರಮತ್ತಶ್ಚ ತಸ್ಮಾತ್ ಸರ್ವತ್ರ ಪೂಜಿತಃ ॥೨೩॥

ಇವನು ಸರಿಯಾದ ಪ್ರಯತ್ನ ಮಾಡುತ್ತಿರುತ್ತಾನೆ. ಸರಿಯಾದ ಪ್ರಜ್ಞೆಯನ್ನು ಹೊಂದಿದ್ದಾನೆ. ಧ್ಯಾನದಿಂದ ಎಂದಿಗೂ ತೃಪ್ತಿಯನ್ನು ಹೊಂದುವುದಿಲ್ಲ. ನಿತ್ಯವೂ ಭಗವನ್ನಿಷ್ಠ ಬುದ್ಧಿಯುಳ್ಳವನು. ಅಪ್ರಮತ್ತನು. ವಿಷಯ ಪದಾರ್ಥಗಳ ಮೋಹ ಇರುವುದಿಲ್ಲ. ಆದ್ದರಿಂದಲೇ ಪೂಜಿತನಾಗಿದ್ದಾನೆ.

ನಾಪತ್ರಪಶ್ಚ ಯುಕ್ತಶ್ಚ ನಿಯುಕ್ತಃ ಶ್ರೇಯಸೇ ಪರೈಃ ।
ಅಭೇತ್ತಾ ಪರಗುಹ್ಯಾನಾಂ ತಸ್ಮಾತ್ ಸರ್ವತ್ರ ಪೂಜಿತಃ ॥೨೪॥

ಇವನೆಂದಿಗೂ ಲಜ್ಜೆ ಬಿಟ್ಟವನಲ್ಲ. ಉತ್ತಮರಿಂದ ಜಗತ್ತಿನ ಶ್ರೇಯಸ್ಸಿಗೋಸ್ಕರ ನಿಯುಕ್ತನಾದವನು. ಮತ್ತೊಬ್ಬರ ರಹಸ್ಯಗಳನ್ನು ಭೇದಿಸುವುದಿಲ್ಲ. ಮತ್ತೊಬ್ಬರ ಮುಂದೆ ಹೇಳುವುದಿಲ್ಲ. ಆದ್ದರಿಂದಲೇ ಸರ್ವತ್ರ ಪೂಜಿತನಾಗಿದ್ದಾನೆ.

ನ ಹೃಷ್ಯತ್ಯರ್ಥಲಾಭೇಷು ನಾಲಾಭೇ ತು ವ್ಯಥತ್ಯಪಿ ।
ಸ್ಥಿರಬುದ್ಧಿರಸಕ್ತಾತ್ಮಾ ತಸ್ಮಾತ್ ಸರ್ವತ್ರ ಪೂಜಿತಃ ॥೨೫॥

ಅರ್ಥಲಾಭವಾದಾಗ ಸಂತುಷ್ಟನಲ್ಲ, ಸಿಗದಿದ್ದಾಗ ವ್ಯಥಿತನೂ ಅಲ್ಲ. ಸ್ಥಿರ ಬುದ್ಧಿಯುಳ್ಳವನು, ಅಸಕ್ತಾತ್ಮನು. ಆದ್ದರಿಂದಲೇ ಸರ್ವತ್ರ ಪೂಜಿತನಾಗಿದ್ದಾನೆ.

ತಂ ಸರ್ವಗುಣಸಂಪನ್ನಂ ದಕ್ಷಂ ಶುಚಿಮನಾಮಯಮ್ ।
ಕಾಲಜ್ಞಂ ಚ ಪ್ರಿಯಜ್ಞಂ ಚ ಕಃ ಪ್ರಿಯಂ ನ ಕರಿಷ್ಯತಿ ॥೨೬॥

ಆದ್ದರಿಂದಲೇ ಸರ್ವಗುಣಸಂಪನ್ನನಾದ, ದಕ್ಷನಾದ, ಶುಚಿಯಾದ, ರೋಗ ರಹಿತನಾದ, ಕಾಲಜ್ಞನಾದ, ಪ್ರಿಯಜ್ಞನಾದ ಈ ವ್ಯಕ್ತಿಯು ಯಾರಿಗೆ ತಾನೇ ಅಪ್ರಿಯನಾಗುತ್ತಾನೆ?

ಇತ್ಯುಕ್ತಃ ಸಂಪ್ರಶಸ್ಯೈನಮುಗ್ರಸೇನೋ ಗತೋ ಗೃಹಾತ್ ।
ಆಸ್ತೇ ಕೃಷ್ಣಸ್ತಥೈಕಾಂತೇ ಪರ್ಯಂಕೇ ರತ್ನಭೂಷಿತೇ ॥೨೭॥

ಕೃಷ್ಣನ ಈ ಮಾತನ್ನು ಕೇಳಿಸಿಕೊಂಡು ಉಗ್ರಸೇನನು ನಾರದರನ್ನು ಮನಸ್ಸಿನಲ್ಲಿಯೇ ಬಹಳವಾಗಿ ಕೊಂಡಾಡುತ್ತಾ ತನ್ನ ಮನೆಗೆ ಹೊರಟನು. ಅಲ್ಲಿ ಕೃಷ್ಣನು ರತ್ನಾಲಂಕೃತವಾದ ಪರ್ಯಂಕದಲ್ಲಿ ಏಕಾಂತದಲ್ಲಿ ಕುಳಿತಿದ್ದನು.

ಕದಾಚಿತ್ ತತ್ರ ಭಗವಾನ್ ಪ್ರವಿವೇಶ ಮಹಾಮುನಿಃ ।
ತಮಭ್ಯರ್ಚ್ಯ ಯಥಾನ್ಯಾಯಂ ತೂಷ್ಣೀಮಾಸ್ತೇ ಜನಾರ್ದನಃ ॥೨೮॥

ಅಂತಹ ಪ್ರಸಂಗದಲ್ಲಿ ಒಂದು ಬಾರಿ ಭಗವಾನ್ ನಾರದ ಮಹಾಮುನಿಯು ಕೃಷ್ಣನ ಮನೆಗೆ ಆಗಮಿಸಿದನು. ಅವನನ್ನು ಯಥಾಯೋಗ್ಯವಾಗಿ ಪೂಜಿಸಿ ಜನಾರ್ದನನು ಸುಮ್ಮನೆ ಕುಳಿತನು.

ತಂ ಖಿನ್ನಮಿವ ಸಂಲಕ್ಷ್ಯ ಕೇಶವಂ ವಾಕ್ಯಮಬ್ರವೀತ್ ।
ಕಿಮಿದಂ ಕೇಶವ ತವ ವೈಮನಸ್ಯಂ ಜನಾರ್ದನ ।
ಅಭೂತಪೂರ್ವಂ ಗೋವಿಂದ ತನ್ಮೇ ವ್ಯಾಖ್ಯಾತುಮರ್ಹಸಿ ॥೨೯॥

ಕೃಷ್ಣನು ದುಃಖಿತನಾಗಿದ್ದಾನೋ ಎಂದು ತಿಳಿದ ನಾರದನು ಕೃಷ್ಣನನ್ನು ಕುರಿತು ಹೀಗೆ ಹೇಳಿದನು- 'ಕೇಶವನೇ, ನಿನ್ನ ಮನಸ್ಸು ಏಕೆ ದುಃಖಿತವಾಗಿದೆ? ಎಂದಿಗೂ ನಿನ್ನ ಈ ದುಃಖವನ್ನು ನಾನು ಕಂಡಿರಲಿಲ್ಲ. ಏಕೆಂದು ತಿಳಿಸು'.

ವಾಸುದೇವಃ

ನಾಸುಹೃತ್ ಪರಮಂ ಮೇಽದ್ಯ ನಾಪದೋಽರ್ಹತಿ ವೇದಿತುಮ್ ।
ಅಪಂಡಿತೋ ವಾಪಿ ಸುಹೃತ್ ಪಂಡಿತೋ ವಾಽಪ್ಯನಾತ್ಮವಾನ್ ॥೩೦॥

ನಾರದ ಮುನೀಂದ್ರನೇ, ಬಹಳ ಮುಖ್ಯ ವಿಚಾರವೊಂದು ನನ್ನ ಮನಸ್ಸನ್ನು ಕಳವಳಗೊಳಿಸುತ್ತಿದೆ. ಆದರೆ ನನಗೆ ಬಹಳ ಮಿತ್ರನಾದ, ಪಂಡಿತನಾಗಿಯೂ ಇರುವ ವ್ಯಕ್ತಿಗೆ ಮಾತ್ರ ಅದನ್ನು ತಿಳಿಸಬಹುದು. ಪಂಡಿತನಲ್ಲದ ಅಮಿತ್ರನಿಗಾಗಲೀ, ಮಿತ್ರನಲ್ಲದ ಪಂಡಿತನಿಗಾಗಲೀ ತಿಳಿಸುವಂತಹ ವಿಷಯವಲ್ಲ.

ಸ ತ್ವಂ ಸುಹೃಚ್ಚ ವಿದ್ವಾಂಶ್ಚ ಜಿತಾತ್ಮಾ ಶ್ರೋತುಮರ್ಹಸಿ ।
ಅಪ್ಯೇತದ್ ಹೃದಿ ಯದ್ ದುಃಖಂ ತದ್ ಭವಾನ್ ಶ್ರೋತುಮರ್ಹತಿ ॥

ನೀನು ಮಿತ್ರನೂ ಆಗಿರುವಿ, ಪಂಡಿತನೂ ಆಗಿರುವಿ. ಜಿತಾತ್ಮನಾಗಿರುವಿ. ಆದ್ದರಿಂದ ಕೇಳಲು ಅರ್ಹನಾಗಿರುವಿ. ನನ್ನ ಮನಸ್ಸಿನ ದುಃಖವನ್ನು ನೀನು ಧಾರಾಳವಾಗಿ ಕೇಳಲು ಅರ್ಹನಾಗಿರುವಿ. ನಿನಗೆ ಹೇಳುತ್ತೇನೆ.

ದಾಸ್ಯಮೈಶ್ವರ್ಯವಾದೇನ ಜ್ಞಾತೀನಾಂ ಚ ಕರೋಮ್ಯಹಮ್ ।
ದ್ವಿಷಂತಿ ಸತತಂ ಋದ್ಧಾ ಜ್ಞಾತಿಸಂಬಂಧಿಬಾಂಧವಾಃ ॥ ೩೨॥

ನಾನು ಜಗತ್ತಿಗೆಲ್ಲ ಅಧಿಪತಿಯು. ಐಶ್ವರ್ಯವುಳ್ಳವನು. ಈ ಭಾವದಿಂದ ನಾನೆಂದೂ ದೂರವಾಗದೆ ನನ್ನ ಜ್ಞಾತಿಗಳಿಗೆ, ಸಂಬಂಧಿಗಳಿಗೆ ಸೇವೆಯನ್ನು ಮಾಡುತ್ತಿರುತ್ತೇನೆ. ಆದರೆ ಜ್ಞಾತಿಗಳು, ಸಂಬಂಧಿಗಳು, ಬಾಂಧವರು ನನ್ನಲ್ಲಿ ಕೋಪಗೊಂಡು ನನ್ನನ್ನು ಯಾವಾಗಲೂ ದ್ವೇಷಿಸುತ್ತಲೇ ಇರುತ್ತಾರೆ.

ದಿವ್ಯಾ ಅಪಿ ತಥಾ ಭೋಗಾ ದತ್ತಾಸ್ತೇಷಾಂ ಯಥಾ ಪೃಥಕ್ ।
ತಥಾಽಪಿ ಚ ದ್ವಿಷಂತೋ ಮಾಂ ವರ್ತಂತೇ ಚ ಪರಸ್ಪರಮ್ ॥೩೩॥

ನಾನು ಅವರಿಗೆ ಬೇರೆ ಬೇರೆಯಾದ ದಿವ್ಯಭೋಗಗಳನ್ನೆಲ್ಲ ಒದಗಿಸಿಕೊಡುತ್ತಲೇ ಇದ್ದೇನೆ. ಹಾಗಿದ್ದರೂ ಅವರು ನನ್ನನ್ನು ತಮ್ಮೊಳಗೆ ಪ್ರತಿಯೊಬ್ಬರೂ ದ್ವೇಷಿಸುತ್ತಿದ್ದಾರೆ. ಇದಕ್ಕೇನು ಮಾಡಲಿ?

ನಾರದಃ

ಅನಾಯಸೇನ ಶಸ್ತ್ರೇಣ ಪರಿಮೃಜ್ಯಾನುಮೃಜ್ಯ ಚ ।
ಜಿಹ್ವಾಮುದ್ಧರ ಚೈತೇಷಾಂ ನ ವಕ್ಷ್ಯಂತಿ ತತಃ ಪರಮ್ ॥೩೪॥

ಶ್ರೀಹರಿಯೇ, ನಿನ್ನ ವಿರುದ್ಧ ಹಾಗೆ ಮಾತನಾಡುವವರ ನಾಲಿಗೆಯನ್ನು ಲೋಹಮಯವಲ್ಲದ ಆಯುಧದಿಂದ ಸೀಳಿ ಕತ್ತರಿಸಿ ತೆಗೆದುಬಿಡು. ಬಳಿಕ ನಿನ್ನ ವಿಷಯದಲ್ಲಿ ಹಾಗೆ ಮಾತನಾಡಲಾರರು.

ಭಗವಾನ್

ಅನಾಯಸಂ ಕಥಂ ವಿಂದ್ಯಾಂ ಶಸ್ತ್ರಂ ಮುನಿವರೋತ್ತಮ ।
ಯೇನೈಷಾಮುದ್ಧರೇ ಜಿಹ್ವಾ ಬ್ರೂಹಿ ತನ್ಮೇ ಯಥಾತಥಮ್ ॥೩೫॥

ಮುನೀಂದ್ರನೇ, ಅವರ ನಾಲಿಗೆಯನ್ನು ಕಬ್ಬಿಣರಹಿತ ಆಯುಧದಿಂದ ಹೇಗೆ ಸೀಳಿ ತೆಗೆಯಲಿ? ಅಂತಹ ಆಯುಧ ಯಾವುದು? ಎಂದು ನನಗೆ ತಿಳಿಸಬೇಕು.

ನಾರದಃ

ಗೋಹಿರಣ್ಯಂ ಚ ವಾಸಾಂಸಿ ರತ್ನಾದ್ಯಂ ಯದ್ಧನಂ ಬಹು ।
ಆಸ್ಯೇ ಪ್ರಕ್ಷಿಪ ಚೈತೇಷಾಂ ಶಸ್ತ್ರಮೇತದನಾಯಸಮ್ ॥೩೬॥

ಕೃಷ್ಣನೇ, ಪಶುಗಳು, ವಸ್ತ್ರಗಳು, ರತ್ನಗಳು ಮುಂತಾದ ವಸ್ತುಗಳನ್ನು ವಿಶೇಷವಾಗಿ ಅವರ ಬಾಯಿಗೆ ಹಾಕುತ್ತಿರು. ಆಗ ಅವರ ನಾಲಿಗೆ ಅಡಗಿ ಹೋಗುತ್ತದೆ. ಇದೇ ಕಬ್ಬಿಣರಹಿತ ಆಯುಧವು.

ಸುಹೃತ್ಸಂಬಂಧಿಮಿತ್ರಾಣಾಂ ಗುರೂಣಾಂ ಸ್ವಜನಸ್ಯ ಚ ।
ಆಖ್ಯಾತಂ ಶಸ್ತ್ರಮೇತದ್ಧಿ ತೇನ ಚ್ಛಿಂಧಿ ಪುನಃ ಪುನಃ ॥೩೭॥

ಮಿತ್ರರು, ಬಂಧುಗಳು, ಗುರುಗಳು, ಸ್ವಜನರಿಗೆ ಇವೇ ಅವರ ನಾಲಿಗೆಯನ್ನು ಕುಯ್ಯುವ ಕಬ್ಬಿಣದ ಆಯುಧಗಳೆಂದು ತಿಳಿ. ಅದರಿಂದ ಮತ್ತೆ ಮತ್ತೆ ಅವರ ನಾಲಿಗೆಯನ್ನು ಸೀಳುತ್ತಿರು.

ತವೈಶ್ವರ್ಯಪ್ರದಾನಾನಿ ಶ್ಲಾಘ್ಯಮೇಷಾಂ ವಚಾಂಸಿ ಚ ।
ಸಮರ್ಥಂ ತ್ವಾಮಭಿಜ್ಞಾಯ ಪ್ರವದಂತಿ ಚ ತೇ ನರಾಃ ॥೩೯॥

ಐಶ್ವರ್ಯವನ್ನು ಕೊಡುವ ನಿನ್ನನ್ನು ಅವರ ನಾಲಿಗೆಯು ಹೊಗಳಲು ಆರಂಭಿಸುತ್ತದೆ. ನಿನ್ನನ್ನು ಸಮರ್ಥ ಎನ್ನುತ್ತಾರೆ. ನಿನ್ನನ್ನೇ ಸರ್ವೋತ್ತಮ ಎಂದು ಪ್ರಶಂಸಿಸುತ್ತಾರೆ ಮಾನವರು.

ಭೀಷ್ಮಃ

ತತಃ ಪ್ರಹಸ್ಯ ಭಗವಾನ್ ಸಂಪೂಜ್ಯ ಚ ಮಹಾಮುನಿಮ್ ।
ತಥಾऽಕರೋನ್ಮಹಾತೇಜಾ ಮುನಿವಾಕ್ಯೇನ ಚೋದಿತಃ ॥೪೦॥

ನಾರದರ ಮಾತಿಗೆ ಕೃಷ್ಣನು ನಸುನಕ್ಕು ನಾರದರನ್ನು ಸತ್ಕರಿಸಿ ಕಳುಹಿಸಿ ಅವರ ಮಾತಿನಂತೆಯೇ ನಡೆಯುತ್ತಿದ್ದನು.

ಏವಂಪ್ರಭಾವೋ ಬ್ರಹ್ಮರ್ಷಿರ್ನಾರದೋ ಮುನಿಸತ್ತಮಃ ।
ಪೃಷ್ಟವಾನಸಿ ಯನ್ಮಾಂ ತ್ವಂ ತದುಕ್ತಂ ರಾಜಸತ್ತಮ ॥೪೧॥

ಈ ರೀತಿಯಾದ ಪ್ರಭಾವವುಳ್ಳವನು ನಾರದ ಮಹರ್ಷಿಯು. ಮುನಿಸತ್ತಮನೇ, ನಾರದರ ಬುದ್ಧಿಯ ಪ್ರಭಾವ ಏನೆಂಬುದನ್ನು ನಿನಗೆ ನಾನು ತಿಳಿಸಿದ್ದೇನೆ.

ಸರ್ವಧರ್ಮಹಿತೇ ಯುಕ್ತಾಃ ಸತ್ಯಧರ್ಮಪರಾಯಣಾಃ ।
ಲೋಕಪ್ರಿಯತ್ವಂ ಗಚ್ಛಂತಿ ಜ್ಞಾನವಿಜ್ಞಾನಕೋವಿದಾಃ ॥೪೨॥

ಹೀಗೆ ಎಲ್ಲಾ ಧರ್ಮಗಳಿಗೂ ವಿರೋಧವಿಲ್ಲದೆ ನಡೆಯುತ್ತಾ, ಸದ್ಧರ್ಮಗಳನ್ನೇ ಮಹತ್ತಾಗಿ ಭಾವಿಸಿ, ಜ್ಞಾನ-ವಿಜ್ಞಾನಗಳಲ್ಲಿ ಸಮರ್ಥನಾದವನು ಲೋಕದಲ್ಲಿ ಪ್ರಿಯನೆನಿಸುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಟ್‌ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಸೃಷ್ಟಿಕ್ರಮವನ್ನು ಪ್ರತಿಪಾದಿಸುವ ವ್ಯಾಸ-ಶುಕರ ಸಂವಾದವನ್ನು ಅನುವಾದಿಸಿದುದು.

ಯುಧಿಷ್ಠಿರಃ

ಆದ್ಯಂತಂ ಸರ್ವಭೂತಾನಾಂ ಜ್ಞಾತುಮಿಚ್ಛಾಮಿ ಕೌರವ ।
ಜ್ಞಾನಂ ಕರ್ಮ ಚ ಕಾಲಂ ಚ ತಥೈವಾಯುರ್ಯುಗೇಯುಗೇ ॥೧॥

ಪಿತಾಮಹನೇ, ಸಮಸ್ತ ಜೀವರ ಹುಟ್ಟು-ಸಾವುಗಳನ್ನು, ಇದರಂತೆ ಪ್ರತಿಯುಗಗಳಲ್ಲಿಯೂ ಜ್ಞಾನ-ಕರ್ಮ-ಕಾಲ ಇವುಗಳ ಗತಿಯನ್ನು ನಿನ್ನಿಂದ ತಿಳಿಯಲು ಅಪೇಕ್ಷಿಸುತ್ತೇನೆ.

ಲೋಕತತ್ತ್ವಂ ಚ ಕಾರ್ತ್ಸ್ನ್ಯೇನ ಭೂತಾನಾಮಾಗತಿಂ ಗತಿಮ್ ।
ಸರ್ಗಶ್ಚ ನಿಧನಂ ಚೈವ ಕುತ ಏತತ್ ಪ್ರವರ್ತತೇ ॥೨॥

ಪ್ರಪಂಚದ ಉತ್ಪತ್ತಿ ಮತ್ತು ಪ್ರವೃತ್ತಿಗಳು, ಭೂತಗಳು ಈ ಪ್ರಪಂಚಕ್ಕೆ ಬರುವ ಕ್ರಮ, ಇದನ್ನು ಬಿಟ್ಟು ಹೋಗುವ ರೀತಿ, ಸೃಷ್ಟಿ-ಪ್ರಲಯಗಳ ತತ್ತ್ವ, ಇವೆಲ್ಲವನ್ನು ಸಮಗ್ರವಾಗಿ ನನಗೆ ತಿಳಿಸಬೇಕು.

ಭೇದಕಂ ಭೇದತತ್ತ್ವಂ ಚ ತಥಾಽನ್ಯೇಷಾಂ ಮತಂ ತಥಾ ।
ಅವಸ್ಥಾತ್ರಿತಯಂ ಚೈವ ಯಾದೃಶಂ ಚ ಪಿತಾಮಹ ॥೩॥

ಭೇದಕ ಧರ್ಮಗಳನ್ನು, ಭೇದತತ್ತ್ವವನ್ನು, ಈ ವಿಷಯದಲ್ಲಿರುವ ಬೇರೆ ಬೇರೆ ಮತಗಳನ್ನು, ಇದೇ ರೀತಿ ನಡೆಯುವ ಬಾಲ್ಯ-ಕೌಮಾರ-ಯೌವನ ಅವಸ್ಥೆಗಳನ್ನು ನನಗೆ ತಿಳಿಸಬೇಕು.

ಯದಿ ತೇಽನುಗ್ರಹೇ ಬುದ್ಧಿರಸ್ತಾಸ್ತಿಹ ಸತಾಂ ವರ ।
ಏತದ್ ಭವಂತಂ ಪೃಚ್ಛಾಮಿ ತದ್ ಭವಾನ್ ಪ್ರಬ್ರವೀತು ಮೇ ॥೪॥

ಈ ವಿಷಯಗಳ ಬಗ್ಗೆ ನಿನ್ನ ಬುದ್ಧಿಯು ವಿಸ್ತಾರವಾಗಿ ವಿಚಾರ ಮಾಡಿದೆ. ಅದನ್ನು ನೀನು ನಮಗೆಲ್ಲ ತಿಳಿಸಿದಲ್ಲಿ ಪರಮಾನುಗ್ರಹವಾಗುತ್ತದೆ. ಆದ್ದರಿಂದ ಪೂಜ್ಯನಾದ ನಿನ್ನ ಬಳಿ ಪ್ರಶ್ನಿಸಿದ್ದೇನೆ.

ಪೂರ್ವಂ ಹಿ ಕಥಿತಂ ಶ್ರುತ್ವಾ ಭೃಗುಭಾಷಿತಮುತ್ತಮಮ್ ।
ಭರದ್ವಾಜಸ್ಯ ವಿಪ್ರರ್ಷೇಸ್ತತೋ ಮೇ ಬುದ್ಧಿರುತ್ತಮಾ ॥೫॥

ಜಾತಾ ಪರಮಧರ್ಮಿಷ್ಠಾ ದಿವ್ಯಸಂಸ್ಥಾನಸಂಸ್ಥಿತಾ ।
ತತೋ ಭೂಯಸ್ತು ಪೃಚ್ಛಾಮಿ ತದ್ ಭವಾನ್ ವಕ್ತುಮರ್ಹತಿ ॥೬॥

ಹಿಂದೆ ಇದೇ ವಿಷಯದಲ್ಲಿ ನೀನು ಭೃಗು-ಭರದ್ವಾಜರಿಗೆ ನಡೆದ ಸಂವಾದವನ್ನು ಹೇಳಿದಾಗ ನನ್ನ ಬುದ್ಧಿಯು ಅಜ್ಞಾನವನ್ನು ಪರಿಹರಿಸಿಕೊಂಡು ದೃಢವಾದ ಧರ್ಮದಲ್ಲಿ ನೆಲೆಗೊಳ್ಳುವಂತಾಯಿತು. ಆದ್ದರಿಂದ ಅದೇ ವಿಚಾರವನ್ನು ವಿಸ್ತಾರವಾಗಿ ನಿನ್ನಿಂದ ಕೇಳಬೇಕೆಂದು ಬಯಸುತ್ತಿದ್ದೇನೆ. ಹೇಳಲು ಅರ್ಹನಾಗಿರುತ್ತಿ.

ಭೀಷ್ಮಃ

ಅತ್ರ ತೇ ವರ್ತಯಿಷ್ಯೇಽಹಮಿತಿಹಾಸಂ ಪುರಾತನಮ್ ।
ಜಗೌ ಯದ್ ಭಗವಾನ್ ವ್ಯಾಸಃ ಪುತ್ರಾಯ ಪರಿಪೃಚ್ಛತೇ ॥೭॥

ಇದೇ ವಿಷಯದಲ್ಲಿ ವ್ಯಾಸಪುತ್ರನಾದ ಶುಕನು ಪ್ರಶ್ನಿಸಿದಾಗ ವ್ಯಾಸರು ಹೇಳಿದ ಪುರಾತನವಾದ ಇತಿಹಾಸವಿದೆ. ಅದನ್ನು ನಿನಗೆ ಹೇಳುತ್ತೇನೆ.

ಅಧೀತ್ಯ ವೇದಾನಖಿಲಾನ್ ಸಾಂಗೋಪನಿಷದಸ್ತಥಾ ।
ಅನಿಚ್ಛನ್ನೈಷ್ಟಿಕಂ ಕರ್ಮ ಧರ್ಮನೈಪುಣದರ್ಶನಾತ್ ॥೮॥

ಕೃಷ್ಣದ್ವೈಪಾಯನಂ ವ್ಯಾಸಂ ಪುತ್ರೋ ವೈಯಾಸಕಿಃ ಶುಕಃ ।
ಪಪ್ರಚ್ಛ ಸಂಶಯಮಿಮಂ ಛಿನ್ನಧರ್ಮಾರ್ಥಸಂಶಯಮ್ ॥೯॥

ಶುಕನು ವೇದವೇದಾಂಗಗಳನ್ನು, ಉಪನಿಷತ್ತುಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಧರ್ಮತತ್ತ್ವವನ್ನು ತಿಳಿದವನು. ಅವನು ಬ್ರಹ್ಮಚರ್ಯದಲ್ಲಿದ್ದಾಗ ಧರ್ಮಾರ್ಥ ತತ್ತ್ವಗಳಲ್ಲಿ ಸಂಶಯರಹಿತವಾದ, ಯಥಾರ್ಥ ಜ್ಞಾನವುಳ್ಳ, ತಂದೆಯಾದ ವ್ಯಾಸರನ್ನು ಕುರಿತು ಪ್ರಶ್ನಿಸಿದನು.

ಶ್ರೀಶುಕಃ

ಭೂತಗ್ರಾಮಸ್ಯ ಕರ್ತಾರಂ ಕಾಲಜ್ಞಾನೇ ಚ ನಿಶ್ಚಿತಮ್ ।
ಜ್ಞಾನಂ ಬ್ರಹ್ಮ ಚ ಯೋಗಂ ಚ ಗವಾತ್ಮಕಮಿದಂ ಜಗತ್ ॥೧೦॥

ತಂದೆಯೇ, ಕಾಲದ ಬಗ್ಗೆ ನಿಶ್ಚಿತ ಜ್ಞಾನವನ್ನು ಹೊಂದಿ ಸಕಲ ಭೂತಗಳಿಗೂ ಕರ್ತೃವೆನಿಸಿದವನು ಯಾವನು? ಭಗವಂತನ ಜ್ಞಾನ, ವೇದಗಳು, ಯೋಗ ಈ ರೀತಿಯಾಗಿ ಜ್ಞಾನಾತ್ಮಕವಾದುದು ಈ ಜಗತ್ತು.

ತ್ರಿತಯೇ ತ್ವೇನಮಾಯಾತಿ ತಥಾ ಹ್ಯೇಷೋಽಪಿ ವಾ ಪುನಃ ।
ಕೇನೈವ ಚ ವಿಭಾಗಃ ಸ್ಯಾತ್ ತುರೀಯೋ ಲಕ್ಷಣೈರ್ವಿನಾ ॥೧೧॥

ಈ ಮೂರರ ಆಧಾರದಲ್ಲಿಯೇ ಈ ಜೀವನನ್ನು ಭಗವಂತನು ಸೃಷ್ಟಿಸುತ್ತಾನೆ. ಇವುಗಳಿಂದಲೇ ಜ್ಞೇಯನಾಗಿದ್ದಾನೆ. ಈ ಮೂರರ ವಿಭಾಗವು ಯಾರಿಂದಾಯಿತು? ತುರೀಯನ ಲಕ್ಷಣವಿಲ್ಲದೆ ಹೇಗೆ ಜ್ಞೇಯನು?

ಜ್ಞಾನಜ್ಞೇಯಾಂತರೇ ಕೋಸೌ ಕೋಯಂ ಭಾವಸ್ತು ಭೇದವತ್ ।
ಯಜ್ಜ್ಞಾನಂ ಲಕ್ಷಣಂ ಚೈವ ತೇಷಾಂ ಕರ್ತಾರಮೇವ ಚ ।
ಬ್ರಾಹ್ಮಣಸ್ಯ ಚ ಯತ್ಕೃತ್ಯಂ ತದ್ ಭವಾನ್ ವಕ್ತುಮರ್ಹತಿ ॥೧೨॥

ಜ್ಞಾನ-ಜ್ಞೇಯಗಳ ಅಂತರವೇನು? ಇದಕ್ಕೆ ನಿಯಾಮಕರು ಯಾರು? ಭೇದವುಳ್ಳಂತಹ ವಸ್ತುವನ್ನು ತಿಳಿಯುವ ಬಗೆ ಹೇಗೆ? ಅವನು ಯಾರು? ಜ್ಞಾನದ ಲಕ್ಷಣವೇನು? ಜೀವರ ಸೃಷ್ಟಿ ಕರ್ತರು ಯಾರು? ಬ್ರಾಹ್ಮಣರ ಕೃತ್ಯವೇನು? ಇವೆಲ್ಲವನ್ನೂ ತಿಳಿಸಲು ಅರ್ಹನಾಗಿರುತ್ತಿ.

ಭೀಷ್ಮಃ

ತಸ್ಯೈ ಪ್ರೋವಾಚ ತತ್ಸರ್ವಂ ಪಿತಾ ಪುತ್ರಾಯ ಪೃಚ್ಛತೇ ।
ಅತೀತಾನಾಗತೇ ವಿದ್ವಾನ್ ಸರ್ವಜ್ಞಃ ಸರ್ವಧರ್ಮವಿತ್ ॥೧೩॥

ಈ ರೀತಿಯಾಗಿ ಪ್ರಶ್ನಿಸಿ ಮಗನಿಗೆ ವ್ಯಾಸರು ಉತ್ತರಿಸುತ್ತಾರೆ. ಈ ಜಗತ್ತಿನ ಭೂತ-ಭವಿಷ್ಯತ್‌ಗಳನ್ನು ತಿಳಿದವನು, ಸರ್ವಧರ್ಮವೇತೃವು, ಸರ್ವಜ್ಞನು ಆದ ವ್ಯಾಸರು ಉತ್ತರಿಸುತ್ತಾರೆ.

ಪೃಚ್ಛತಸ್ತವ ಸತ್ಪುತ್ರ ಯಥಾವತ್ ಕೀರ್ತಯಾಮ್ಯಹಮ್ ।
ಶೃಣುಷ್ವಾವಹಿತೋ ಭೂತ್ವಾ ಯಥಾऽऽವೃತಮಿದಂ ಜಗತ್ ॥೧೪॥

ಪ್ರಶ್ನಿಸುತ್ತಿರುವ ಕುಮಾರನೇ, ನಿನಗೆ ಯಥಾವತ್ತಾಗಿ ಈ ವಿಷಯದ ಬಗ್ಗೆ ಉತ್ತರಿಸುತ್ತೇನೆ. ಸಮಾಧಾನದಿಂದ, ಜಗತ್ತು ಹೇಗೆ ಆವರಿಸಲ್ಪಟ್ಟಿದೆ ಎನ್ನುವ ವಿಚಾರವನ್ನು ತಿಳಿದುಕೊ.

ಕಾರ್ಯಾದಿ ಕಾರಣಾಂತಂ ಯತ್ ಕಾರ್ಯಾಂತಂ ಕಾರಣಾದಿಕಮ್ ।
ಜ್ಞಾನಂ ತದುಭಯಂ ವಿತ್ತಾ್ವ ಸತ್ಯಂ ಚ ಪರಮಂ ಶುಭಮ್ ॥೧೫॥

ಈ ಜಗತ್ತು ಮೊದಲು ಕಾರ್ಯವಾಗಿದ್ದು ಬಳಿಕ ಕಾರಣರೂಪವಾಗಿದೆಯೋ ಅಥವಾ ಮೊದಲು ಕಾರಣವಾಗಿದ್ದು ಆಮೇಲೆ ಕಾರ್ಯರೂಪವಾಗಿದೆಯೋ? ಈ ಎರಡು ವಿಧದಿಂದ ಕಾಣುತ್ತಲೂ ಇದೆ, ಅವ್ಯಕ್ತವಾಗಿಯೂ ಇದೆ. ಆ ಜಗತ್ತು ಮತ್ತು ಬ್ರಹ್ಮ ಎಂಬ ಎರಡು ಕಾರಣಗಳನ್ನು ತಿಳಿದುಕೊ. ಪರಬ್ರಹ್ಮನು ಸತ್ಯನು, ಪರಮನು, ಕಲ್ಯಾಣನು ಎಂದು ತಿಳಿದುಕೊ.

ಬ್ರಹ್ಮೇತಿ ಚಾಭಿವಿಖ್ಯಾತಂ ತದ್ವೈ ಪಶ್ಯಂತಿ ಸೂರಯಃ ।
ಬ್ರಹ್ಮತೇಜೋಮಯಂ ಭೂತಂ ಭೂತಕಾರಣಮದ್ಭುತಮ್ ॥೧೬॥

ಈ ಜಗತ್ತಿಗೆ ಕಾರಣವಾದ ವಸ್ತುವನ್ನು ಬ್ರಹ್ಮ ಎಂದು ಹೇಳುತ್ತಾರೆ. ಆ ವಸ್ತುವನ್ನೇ ಅನ್ವೇಷಣೆ ಮಾಡುತ್ತಾರೆ. ಈ ಪಂಚಭೂತಾತ್ಮಕವಾದ ಜಗತ್ತು ಪರಬ್ರಹ್ಮನ ಸಾಮರ್ಥ್ಯದಿಂದಲೇ ಉತ್ಪನ್ನವಾಗಿದೆ. ಈ ಪಂಚಭೂತಗಳಿಗೆ ಕಾರಣನಾದ ಪರಬ್ರಹ್ಮನು ಅದ್ಭುತನೆನಿಸಿದ್ದಾನೆ.

ಆಸೀದಾದೌ ತತಸ್ತಾ್ವಹುಃ ಪ್ರಾಧಾನ್ಯಮಿತಿ ತದ್ವಿದಃ ।
ತ್ರಿಗುಣಾಂ ತಾಂ ಮಹಾಮಾಯಾಂ ವೈಷ್ಣವೀಂ ಪ್ರಕೃತಿಂ ವಿದುಃ ॥೧೭॥

ಈ ಸೃಷ್ಟಿಯ ಆರಂಭದಲ್ಲಿದ್ದ ವಸ್ತುವೇ ಇದು. ಈ ಪರಬ್ರಹ್ಮನೆಂಬ ವಸ್ತುವಿನಿಂದ ತ್ರಿಗುಣಾತ್ಮಕವಾದ, ಮಹಾಮಾಯೆ ಎನಿಸಿದ, ವಿಷ್ಣುಸಂಬಂಧಿನಿಯಾದ ಪ್ರಕೃತಿಯು ಸೃಷ್ಟಳಾದಳು.

ತದೀದೃಶಮನಾದ್ಯಂತಮವ್ಯಕ್ತಮಜರಂ ಧ್ರುವಮ್ ।
ಅಪ್ರತರ್ಕ್ಯಮವಿಜ್ಞೇಯಂ ಬ್ರಹ್ಮಾಗ್ರೇ ವಿಕೃತಂ ಚ ತತ್ ॥೧೮॥

ಈ ಮೂಲಪ್ರಕೃತಿಯು ಅನಾದಿ-ಅನಂತವು, ಅವ್ಯಕ್ತವು, ಜರಾರಹಿತವೂ, ಶಾಶ್ವತವು, ಊಹೆಗೂ ನಿಲುಕದಿರುವುದು, ತಿಳಿಯಲಾಗದುದು. ಬ್ರಹ್ಮನ ಬುದ್ಧಿಯಿಂದ ಕಾರ್ಯರೂಪದಲ್ಲಿ ಪರಿಣಾಮ ಹೊಂದಿಹುದು.

ತದ್ವೈ ಪ್ರಧಾನಮುದ್ದಿಷ್ಟಂ ತ್ರಿಸೂಕ್ಷ್ಮಂ ತ್ರಿಗುಣಾತ್ಮಕಮ್ ।
ಸಮ್ಯಗ್ಯೋಗಗುಣಂ ಸ್ವಸ್ಥಂ ತದಿಚ್ಛಾಕ್ಷೋಭಿತಂ ಮಹತ್ ॥೧೯॥

ಈ ಮೂಲಪ್ರಕೃತಿಯನ್ನೇ ಪ್ರಧಾನ ಎಂದು ಕರೆಯುತ್ತಾರೆ. ಶ್ರೀ-ಭೂ-ದುರ್ಗಾತ್ಮಕವಾದ ರೂಪಗಳು ಸತ್ತ್ವ, ರಜಸ್, ತಮೋಗುಣಗಳಿಗೆ ನಿಯಾಮಕಗಳು ಆಗಿವೆ. ಈ ಮೂರುಗುಣಗಳ ಸೂಕ್ಷ್ಮ ಅಣುಗಳೇ ಈ ಮೂರು ರೂಪಗಳಿಗೆ ನಿಯಾಮಕಗಳು. ಸ್ವಸ್ಥವೂ, ಉತ್ತಮ ಗುಣಗಳಿಂದ ಕೂಡಿರುವ ಈ ಪ್ರಕೃತಿಯು ನಾರಾಯಣನ ಇಚ್ಛೆಯಿಂದಲೇ ಶೋಭಿತವಾಗಿ ಮಹತ್ತೆನಿಸಿದೆ.

ಶಕ್ತಿತ್ರಯಾತ್ಮಿಕಾ ತಸ್ಯ ಪ್ರಕೃತಿಃ ಕಾರಣಾತ್ಮಿಕಾ ।
ಅಸ್ವತಂತ್ರಾ ಚ ಸತತಂ ವಿದಧಿಷ್ಠಾನಸಂಯುತಾ ॥೨೦॥

ಮೂರುಗುಣಗಳಿಂದ ಕೂಡಿರುವ, ಕಾರಣಾತ್ಮಿಕೆ ಎನಿಸಿದ ಪ್ರಕೃತಿಯು ಭಗವಂತನ ದೆಸೆಯಿಂದ ನೆಲೆಗೊಂಡಿದೆ. ನಿರಂತರವೂ ಈ ಮೂಲಪ್ರಕೃತಿಯು ಭಗವಂತನ ಅಧೀನವಾದುದರಿಂದ ಅಸ್ವತಂತ್ರವೆನಿಸಿದೆ. ಭಗವಂತನೆಂಬ ಆಧಾರವನ್ನೇ ಆಶ್ರಯಿಸಿದೆ.

ಸ್ವಭಾವಾಖ್ಯಂ ಸಮಾಪನ್ನಾ ಮೋಹವಿಗ್ರಹಧಾರಿಣೀ ।
ವಿವಿಧಸ್ಯಾಸ್ಯ ಜೀವಸ್ಯ ಭೋಗಾರ್ಥಂ ಸಮುಪಾಗತಾ ॥೨೧॥

ಅಸ್ವತಂತ್ರವಾದ ಈ ಪ್ರಕೃತಿಯು ಸ್ವಭಾವವೆಂಬ ನಾಮಾಂತರವುಳ್ಳದ್ದಾಗಿ, ಮೋಹರೂಪವೆನಿಸಿ, ನಾನಾ ಜೀವಗಳ ಭೋಗವನ್ನುದ್ದೇಶಿಸಿ ಪ್ರಪಂಚವಾಗಿ ಹೊರಹೊಮ್ಮಿದೆ.

ಯಥಾ ಸನ್ನಿಧಿಮಾತ್ರೇಣ ಗಂಧಕ್ಷೋಭಾಯ ಜಾಯತೇ ।
ಮನಸ್ತದ್ವದಶೇಷಸ್ಯ ಪರಾತ್ ಪರ ಇತಿ ಸ್ಮೃತಃ ॥೨೨॥

ಮನಸ್ಸು ತನ್ನ ಸಾನ್ನಿಧ್ಯಮಾತ್ರದಿಂದ ಘ್ರಾಣೇಂದ್ರಿಯವನ್ನು ಗಂಧಾದಿಗಳಲ್ಲಿ ಚಲಿಸಲು ಹೇಗೆ ಕಾರಣವಾಗುತ್ತದೋ ಇದರಂತೆ ಪರಾತ್ಪರನಾದ ಭಗವಂತನು ಅಶೇಷವಾದ ಈ ಜಗತ್ತಿಗೆ ತನ್ನ ಸಾನ್ನಿಧ್ಯದಿಂದಲೇ ಕಾರಣನೆನಿಸಿದ್ದಾನೆ.

ಸೃಷ್ಟ್ವಾ ಪ್ರವಿಶ್ಯ ತತ್ ತಸ್ಮಿನ್ ಕ್ಷೋಭಯಾಮಾಸ ವಿಷ್ಠಿತಃ ।
ಸಾತ್ವಿಕೋ ರಾಜಸಶ್ಚೈವ ತಾಮಸಶ್ಚ ತ್ರಿಧಾ ಮಹಾನ್ ॥೨೩॥

ಪರಮಾತ್ಮನು ಪ್ರಧಾನವನ್ನು ಸೃಷ್ಟಿಸಿ, ಅದರಲ್ಲಿ ತಾನೂ ಪ್ರವೇಶಿಸಿ, ಅದನ್ನು ಕ್ಷೋಭೆಗೊಳಿಸಿದಾಗ ಸಾತ್ವಿಕ, ರಾಜಸ, ತಾಮಸಗಳೆಂಬ ಮೂರು ಭೇದವುಳ್ಳ ಮಹತ್‌ತತ್ತ್ವ ಅಥವಾ ಪ್ರಧಾನತತ್ತ್ವ ಎನಿಸಿತು.

ಪ್ರಧಾನತತ್ತ್ವಾದುದ್ಭೂತೋ ಮಹತ್ತ್ವಾಚ್ಚ ಮಹಾನ್ ಸ್ಮೃತಃ ।
ಪ್ರಧಾನತತ್ತ್ವಮುದ್ಭೂತಂ ಮಹತ್ತತ್ತ್ವಂ ಸಮಾವೃಣೋತ್ ॥೨೪॥

ಪ್ರಧಾನತತ್ತ್ವದಿಂದ ಸೃಷ್ಟಿಯನ್ನು ಪಡೆದ ಕಾರಣದಿಂದ ಮಹತ್ತ್ವ ಇರುವುದರಿಂದಲೂ ಮೂರು ಗುಣಗಳಿಂದ ಉತ್ಪನ್ನವಾದ ತತ್ತ್ವಕ್ಕೆ ಮಹತ್ತತ್ತ್ವ ಎನ್ನಲಾಗಿದೆ. ಮಹತ್ತತ್ತ್ವವು ಪ್ರಧಾನತತ್ತ್ವದಿಂದ ಆವೃತವಾಗಿದೆ.

ಕಾಲಾತ್ಮನಾऽಭಿಭೂತಂ ತತ್ಕಾಲೋऽಂಶಃ ಪರಮಾತ್ಮನಃ ।
ಪುರುಷಶ್ಚಾಪ್ರಮೇಯಾತ್ಮಾ ಸ ಏವ ಇತಿ ಗೀಯತೇ ॥೨೫॥

ಮಹತ್ತತ್ತ್ವವು ಕಾಲಸ್ವರೂಪಿಯಾದ ಭಗವಂತನಿಂದ ಆವೃತವಾಗಿದೆ. ಆ ಕಾಲವೆಂಬ ಅಂಶವು ಪರಮಾತ್ಮನ ಅಂಶವೇ ಆಗಿದೆ. ಆ ಕಾಲಪುರುಷನೇ ಅಪ್ರಮೇಯನು ಎಂದು ಕರೆಸಿಕೊಳ್ಳಲ್ಪಡುತ್ತಾನೆ.

ತ್ರಿಗುಣೋಸೌ ಮಹಾಜ್ಞಾತಃ ಪ್ರಧಾನ ಇತಿ ವೈ ಶ್ರುತಿಃ ॥೨೬॥

ಸತ್ತ್ವ-ರಜಸ್-ತಮೋಗುಣಗಳೇ ವಿಸ್ತಾರಗೊಂಡಿವೆ. ಇವುಗಳನ್ನೇ ಪ್ರಧಾನ ಎಂದು ಶ್ರುತಿಯು ಹೇಳುತ್ತಿದೆ.

ಸಾತ್ವಿಕೋ ರಾಜಸಶ್ಚೈವ ತಾಮಸಶ್ಚ ತ್ರಿಧಾತ್ಮಕಃ ।
ತ್ರಿವಿಧೋऽಯಮಹಂಕಾರೋ ಮಹತ್ತತ್ತ್ವಾದಜಾಯತ ॥೨೭॥

ಮಹತ್ತತ್ತ್ವದ ದೆಸೆಯಿಂದ ಸಾತ್ವಿಕ-ರಾಜಸ-ತಾಮಸವೆಂಬ ಮೂರುವಿಧವಾದ ಅಹಂಕಾರತತ್ತ್ವದ ಸೃಷ್ಟಿಯಾಯಿತು.

ತಾಮಸೋಽಸಾವಹಂಕಾರೋ ಭೂತಾದಿರಿತಿ ಸಂಜ್ಞಿತಃ ।
ಭೂತಾನಾಮಾದಿಭೂತತ್ವಾದ್ ರಕ್ತಾಹಿಸ್ತಾಮಸ ಸ್ಮೃತಃ ॥೨೮॥

ತಾಮಸ ಅಹಂಕಾರವು ಭೂತಾದಿ ಎಂಬ ಸಂಜ್ಞೆಯನ್ನು ಹೊಂದಿದೆ. ಸಮಸ್ತ ಭೂತಗಳಿಗೂ ಮೂಲಕಾರಣವಾದುದರಿಂದ ಜಗತ್ತನ್ನು ನುಂಗುವಂತಹ ಕೆಂಪು ಬಣ್ಣದ ಸರ್ಪವಾದ ಇದನ್ನೇ ತಾಮಸ ಅಹಂಕಾರ ಎನ್ನುತ್ತಾರೆ.

ಭೂತಾದಿಃ ಸ ವಿಕುರ್ವಾಣಃ ಶಿಷ್ಟಂ ತನ್ಮಾತ್ರಕಂ ತತಃ ।
ಸಸರ್ಜ ಶಬ್ದಂ ತನ್ಮಾತ್ರಮಾಕಾಶಂ ಶಬ್ದಲಕ್ಷಣಮ್ ॥೨೯॥

ಭೂತಾದಿ ಎನಿಸಿದ ತಾಮಸ ಅಹಂಕಾರವು ಭೇದ ಹೊಂದಿ, ಉಳಿದ ಶಬ್ದಾದಿ ತನ್ಮಾತ್ರಗಳನ್ನು ಸೃಷ್ಟಿಸಿತು. ಆ ತನ್ಮಾತ್ರವು ಶಬ್ದಮಯವಾದ ಆಕಾಶವನ್ನು ಹುಟ್ಟಿಸಿತು.

ಶಬ್ದಲಕ್ಷಣಮಾಕಾಶಂ ಶಬ್ದಮಾತ್ರಂ ಸಮಾವೃಣೋತ್ ।
ತೇನ ಸಂಪೀಡ್ಯಮಾನಸ್ತು ಸ್ಪರ್ಶಮಾತ್ರಂ ಸಸರ್ಜ ಹ ॥೩೦॥

ಶಬ್ದಗುಣವುಳ್ಳ ಆಕಾಶವು ಆ ತನ್ಮಾತ್ರವನ್ನು ಘಟವು ಮಣ್ಣನ್ನು ಆವರಿಸುವಂತೆ ಆವರಿಸಿತು. ಶಬ್ದತನ್ಮಾತ್ರದಿಂದ ಕ್ಷೋಭೆಗೆ ತುತ್ತಾದ ಆಕಾಶವು ಸ್ಪರ್ಶ ತನ್ಮಾತ್ರವನ್ನು ಹುಟ್ಟಿಸಿತು.

ಶಬ್ದಮಾತ್ರಂ ತದಾಕಾಶಂ ಸ್ಪರ್ಶಮಾತ್ರಂ ಸಮಾವೃಣೋತ್ ।
ಸಸರ್ಜ ವಾಯುಸ್ತೇನಾಸೌ ಪೀಡ್ಯಮಾನ ಇತಿ ಶ್ರುತಿಃ ॥೩೧॥

ಸೂಕ್ಷ್ಮ ಶಬ್ದವುಳ್ಳ ಆಕಾಶವು ಸ್ಪರ್ಶ ತನ್ಮಾತ್ರವನ್ನು ಆವರಿಸಿಕೊಂಡಿತು. ಆ ಆಕಾಶದ ಚಲನೆಯಿಂದ ಸ್ಪರ್ಶವು ವಾಯುವನ್ನು ಹುಟ್ಟಿಸಿತು.

ಸ್ಪರ್ಶಮಾತ್ರಂ ತದಾ ವಾಯೂ ರೂಪಮಾತ್ರಂ ಸಮಾವೃಣೋತ್ ।
ತೇನ ಸಂಪೀಡ್ಯಮಾನಸ್ತು ಸಸರ್ಜಾಗ್ನಿಮಿತಿ ಶ್ರುತಿಃ ॥೩೨॥

ರೂಪಮಾತ್ರಂ ತತೋ ವಹ್ನಿಂ ಸಮುತ್ಸಜ್ಯ ಸಮಾವೃಣೋತ್ ।
ತೇನ ಸಂಪೀಡ್ಯಮಾನಸ್ತು ರಸಮಾತ್ರಂ ಸಸರ್ಜ ಹ ॥೩೩॥

ಬಳಿಕ ಸ್ಪರ್ಶವಾಯುವು ರೂಪತನ್ಮಾತ್ರವನ್ನು ಹುಟ್ಟಿಸಿ ಅದನ್ನು ಆವರಿಸಿತು. ರೂಪ ತನ್ಮಾತ್ರವು ಕ್ಷೋಭೆಗೊಂಡು ಆ ರೂಪವು ಅಗ್ನಿಯನ್ನು ಹುಟ್ಟಿಸಿತು. ಬಳಿಕ ಆ ರೂಪವು ಆವರಿಸಿಕೊಂಡಾಗ ಆ ರೂಪದ ಕ್ಷೋಭೆಯಿಂದ ಅಗ್ನಿಯಲ್ಲಿ ರಸತನ್ಮಾತ್ರವು ಹುಟ್ಟಿತು.

ವ್ಯಾಖ್ಯಾನ ವಿಶೇಷ– ಹಿಂದೆ ಪ್ರಶ್ನೆ ಮಾಡುವಾಗ ಕಾರ್ಯವು ಕಾರಣವನ್ನು ಆವರಿಸಿತು. ಕಾರಣವು ಕಾರ್ಯವನ್ನು ಆವರಿಸಿತು. ಎರಡು ಬಗೆಯಾದ ಸ್ಥಿತಿಯನ್ನು ಉತ್ತರಿಸಿ ಎಂದು ಶುಕರು ಪ್ರಶ್ನಿಸಿದ್ದಾರೆ. ಅದಕ್ಕನುಗುಣವಾಗಿ ವ್ಯಾಸರು ಹಿಂದೆ ಕಾರ್ಯವು ಕಾರಣವನ್ನು ಆವರಿಸಿತು ಎಂದು ಹೇಳಿ, ಇಲ್ಲಿ ಕಾರಣವು ಕಾರ್ಯವನ್ನು ಆವರಿಸಿತು ಎಂದು ಹೇಳುತ್ತಿದ್ದಾರೆ. ಈ ಪಂಚಭೂತ, ತನ್ಮಾತ್ರಗಳಲ್ಲಿ ಅನ್ಯೋನ್ಯ ವ್ಯಾಪ್ತಿ ಇರುವುದರಿಂದ ಕಾರ್ಯವು ಕಾರಣವನ್ನು, ಕಾರಣವು ಕಾರ್ಯವನ್ನು ಆವರಿಸಿತು ಎಂಬ ವಚನಗಳು ಸಮಂಜಸವಾಗುತ್ತವೆ.

ರೂಪಮಾತ್ರಗತಂ ತೇಜೋ ರಸಮಾತ್ರಂ ಸಮಾವೃಣೋತ್ ।
ತೇನ ಸಂಪೀಡ್ಯಮಾನಸ್ತು ಸಸರ್ಜಾಂಭ ಇತಿ ಶ್ರುತಿಃ ॥೩೪॥

ಸೂಕ್ಷ್ಮರೂಪವನ್ನು ಹೊಂದಿದ ಅಗ್ನಿಯು ರಸತನ್ಮಾತ್ರವನ್ನು ಆವರಿಸಿತು. ಆ ಅಗ್ನಿಯಿಂದ ಚೆನ್ನಾಗಿ ಕ್ಷೋಭಿತವಾಗಲ್ಪಟ್ಟ ರಸವು ಜಲವನ್ನು ಸೃಷ್ಟಿಸಿತು.

ರಸಮಾತ್ರಾತ್ಮಕಂ ಭೂಯೋ ರಸಂ ತನ್ಮಾತ್ರಮಾವೃಣೋತ್ ।
ತೇನ ಸಂಪೀಡ್ಯಮಾನಸ್ತು ಗಂಧತನ್ಮಾತ್ರಕಂ ತತಃ ॥೩೫॥

ಪುನಃ ಆ ರಸವು ಜಲವನ್ನು ಆವರಿಸಿತು. ಆ ರಸದಿಂದ ಶೋಭಿತವಾದ ಜಲವು ಗಂಧತನ್ಮಾತ್ರವನ್ನು ಹುಟ್ಟಿಸಿತು.

ಸಸರ್ಜ ಗಂಧತನ್ಮಾತ್ರಮಾವೃಣೋತ್ಕರಕಂ ತತಃ ।
ತೇನ ಸಂಪೀಡ್ಯಮಾನಸ್ತು ಕಾಠಿನ್ಯಂ ಚ ಸಸರ್ಜ ಹ ॥೩೬॥

ಜಲವು ಸೂಕ್ಷ್ಮವಾದ ಆ ಗಂಧವನ್ನು ಆವರಿಸಿತು. ಆ ಜಲದಿಂದ ಕ್ಷೋಭಿಸಲ್ಪಟ್ಟ ಗಂಧವು ಕಾಠಿಣ್ಯವನ್ನು ಅರ್ಥಾತ್ ಕಲ್ಲಿನಂತಹ ಪೃಥಿವಿಯನ್ನು ಹುಟ್ಟಿಸಿತು.

ಪೃಥಿವೀ ಜಾಯತೇ ತಸ್ಮಾದ್ ಗಂಧತನ್ಮಾತ್ರಜಾತ್ ತಥಾ ॥೩೭॥

ಆ ಕಾರಿಣ್ಯದಿಂದಲೇ ಭೂಮಿಯು ಹುಟ್ಟಿತು. ಆ ಗಂಧತನ್ಮಾತ್ರದಿಂದ ಹುಟ್ಟಿದ ಅಂಶವೇ ಪೃಥಿವಿ ಎನಿಸಿದೆ.

ಅಮ್ಮಯಂ ಸರ್ವಮೇವೇದಮಾಪಸ್ತಸ್ತಂಭಿರೇ ತಯಾ ।
ಭೂತಾನೀಮಾನಿ ಜಾತಾನಿ ಪೃಥಿವ್ಯಾದೀನಿ ವೈ ಶ್ರುತಿಃ ॥೩೮॥

ಪೃಥಿವಿ ರೂಪವಾದ ಈ ಜಗತ್ತೆಲ್ಲವೂ ನೀರಿನಿಂದಲೇ ತುಂಬಿದೆ. ಈ ಪೃಥಿವಿಯ ಅಧೋಭಾಗದಲ್ಲಿರುವ ಘನೋದಕವೆಂಬ ನೀರಿನ ಸಮುದಾಯವು ಭೂಮಿಯನ್ನು ಧರಿಸಿದೆ. ಈ ಪೃಥಿವಿಯಿಂದ ಕಣ್ಣಿಗೆ ಕಾಣುವ ಈ ಸಮಸ್ತ ಭೂತಗಳು ಉತ್ಪತ್ತಿಯನ್ನು ಪಡೆದಿವೆ ಎಂದು ಶ್ರುತಿ ಇದೆ.

ಭೂತಾನಾಂ ಮೂರ್ತಿರೇವೈಷಾಮನ್ನಂ ಚೈಷಾಂ ಮತಾ ಬುಧೈಃ ।
ತಸ್ಮಿಂಸ್ತಸ್ಮಿಂಸ್ತು ತನ್ಮಾತ್ರಾ ತನ್ಮಾತ್ರಾ ಇತಿ ತೇ ಸ್ಮೃತಾಃ ॥ ೩೯॥

ಈ ಭೂತಶರೀರಗಳೆಲ್ಲ ಅನ್ನವೆಂದೇ ಪ್ರಾಜ್ಞರ ಮತವು. ಈ ಭೂತದಲ್ಲಿರುವ ಸೂಕ್ಷ್ಮಭಾಗವೇ ತನ್ಮಾತ್ರಗಳೆಂದು ಹೇಳಲ್ಪಡುತ್ತವೆ.

ತೈಜಸಾನೀಂದ್ರಿಯಾಣ್ಯಾಹುರ್ದೇವಾ ವೈಕಾರಿಕಾ ದಶ ।
ಏಕಾದಶಂ ಮನಶ್ಚಾತ್ರ ದೇವಾ ವೈಕಾರಿಕಾ ಸ್ಮೃತಾಃ ॥೪೦॥

ತೇಜೋರೂಪವಾದ ಹತ್ತು ಇಂದ್ರಿಯಗಳನ್ನು ಕಾರ್ಯರೂಪವನ್ನು ಹೊಂದಿದ ದೇವತೆಗಳೆಂದು ಹೇಳುತ್ತಾರೆ. ಹನ್ನೊಂದನೆಯದ್ದು ಮನಸ್ಸೆಂಬ ಇಂದ್ರಿಯ ಎನ್ನುತ್ತಾರೆ. ದೇವತೆಗಳೇ ಹೀಗೆ ವಿಕಾರ ಸ್ವಭಾವವನ್ನು ಹೊಂದಿದ ಇಂದ್ರಿಯರೂಪಿಗಳೆಂದು ಕರೆಸಿಕೊಳ್ಳಲ್ಪಡುತ್ತಾರೆ.

ಏಷಾಮುದ್ಧರ್ತಕಃ ಕಾಲೋ ನಾನಾಭೇದವದಾಸ್ಥಿತಃ ।
ಪರಮಾತ್ಮಾ ಚ ಭೂತಾತ್ಮಾ ಗುಣಭೇದೇನ ಸಂಸ್ಥಿತಃ ।
ಏಕ ಏವ ತ್ರಿಧಾ ಭಿನ್ನಃ ಕರೋತಿ ವಿವಿಧಾಃ ಕ್ರಿಯಾಃ ॥೪೧॥

ಈ ಎಲ್ಲ ತತ್ತ್ವಗಳನ್ನು ನಿರಂತರವೂ ಧರಿಸಿದವನು ಕಾಲನಾಮಕನಾದ ಭಗವಂತನೇ ಆಗಿದ್ದಾನೆ. ನಾನಾ ಭೇದವುಳ್ಳವನಂತೆ ಭಿನ್ನವಾದ ಪದಾರ್ಥಗಳಲ್ಲಿ

ಸವಿಶೇಷಾಭಾವದಿಂದ ಸನ್ನಿಹಿತನಾಗಿದ್ದಾನೆ. ಭೂತಾತ್ಮನೆನಿಸಿದ ಪರಮಾತ್ಮನು ಸೃಷ್ಟಿ-ಸ್ಥಿತಿ-ಸಂಹಾರ ಎಂಬ ಮೂರುಗುಣಗಳಿಂದ ಜಗತ್ತಿನಲ್ಲಿ ಇದ್ದಾನೆ. ಒಬ್ಬನೇ ಆದ ಪರಮಾತ್ಮನು ಬ್ರಹ್ಮನಲ್ಲಿ ಬ್ರಹ್ಮರೂಪದಿಂದ, ರುದ್ರನಲ್ಲಿ ರುದ್ರರೂಪದಿಂದ ಇದ್ದು ಸೃಷ್ಟಿ-ಸಂಹಾರಗಳನ್ನು ನಡೆಸುತ್ತಾ, ಸ್ವಯಂ ವಿಷ್ಣುರೂಪದಿಂದ ಸ್ಥಿತಿಯನ್ನು ನಿರ್ವಹಿಸುತ್ತಿದ್ದಾನೆ. ಈ ರೀತಿಯಾದ ಅನೇಕ ಕ್ರಿಯೆಗಳು ಭಗವಂತನಿಂದಲೇ ನಡೆಯುತ್ತಿವೆ.

ವ್ಯಾಖ್ಯಾನ ವಿಶೇಷ– 'ಸೃಜಾಮಿ ತನ್ನಿಯುಕ್ತೋಹಂ ಹರೋ ಹರತಿ ತದ್ವಶಃ । ವಿಶ್ವಂ ಪುರುಷರೂಪೇಣ ಪರಿಪಾತಿ ತ್ರಿಶಕ್ತಿಧೃಕ್ ॥' ಎಂಬ ಭಾಗವತದ ದ್ವಿತೀಯ ಸ್ಕಂಧದ ಆರನೆಯ ಅಧ್ಯಾಯದ ಮೂವತ್ತೊಂದನೆಯ ಶ್ಲೋಕದ ಅಭಿಪ್ರಾಯವು ಇಲ್ಲಿಯೂ ಹೇಳಲ್ಪಟ್ಟಿದೆ ಎಂದು ತಿಳಿಯಬೇಕು.

ಬ್ರಹ್ಮಾ ಸೃಜತಿ ಭೂತಾನಿ ಪಾತಿ ನಾರಾಯಣೋಽವ್ಯಯಃ ।
ರುದ್ರೋ ಹಂತಿ ಜಗನ್ಮೂರ್ತಿಃ ಕಾಲ ಏಷ ಕ್ರಿಯಾಬುಧಃ ॥೪೨॥

ಬ್ರಹ್ಮನಲ್ಲಿರುವ ರೂಪದಿಂದ ಭಗವಂತನು ಸೃಷ್ಟಿಯನ್ನು ಮಾಡುತ್ತಾನೆ. ಸ್ವಯಂ ನಾರಾಯಣನಾಗಿ ಪಾಲಿಸುತ್ತಾನೆ. ರುದ್ರ ಎಂಬ ರೂಪದಿಂದ ಜಗತ್ತನ್ನು ಸಂಹರಿಸುತ್ತಾನೆ. ಇವನನ್ನೇ ಕಾಲ ಎಂದು ಕ್ರಿಯೆಗಳನ್ನು ತಿಳಿದ ಜ್ಞಾನಿಗಳು ಹೇಳುತ್ತಾರೆ.

ಕಾಲೋಽಪಿ ತನ್ಮಯೋಽಚಿಂತ್ಯಸ್ತ್ರಿಗುಣಾತ್ಮಾ ಸನಾತನಃ ।
ವ್ಯಕ್ತೋಽಸಾವಚಿಂತ್ಯೋಽಸೌ ವರ್ತತೇ ಭಿನ್ನಲಕ್ಷಣಃ ॥೪೩॥

ಕಾಲನಿಯಾಮಕನಾದ, ಕಾಲಾಂತರ್ಯಾಮಿಯಾದ ಭಗವಂತನಾದರೂ ಅಚಿಂತ್ಯನೂ, ಮೂರುಗುಣವುಳ್ಳವನೂ, ಸನಾತನನೂ, ಅವ್ಯಕ್ತನೂ, ಜಗತ್ತಿಗಿಂತ ಅತ್ಯಂತ ವಿಲಕ್ಷಣನೂ ಆಗಿ ಇದ್ದಾನೆ.

ಕಾಲಾತ್ಮನಾ ತ್ವಿದಂ ಭಿನ್ನಮಭಿನ್ನಂ ಶ್ರೂಯತೇ ಹಿ ಯತ್ ।
ಅನಾದ್ಯಂತಮಜಂ ದಿವ್ಯಮವ್ಯಕ್ತಮಜರಂ ಧ್ರುವಮ್ ।
ಅಪ್ರತರ್ಕ್ಯಮವಿಜ್ಞೇಯಂ ಬ್ರಹ್ಮಾಗ್ರೇ ಸಂಪ್ರವರ್ತತೇ ॥೪೪॥

ಹೀಗೆ ಬ್ರಹ್ಮ, ವಿಷ್ಣು, ರುದ್ರ, ಕಾಲ ಎಂಬ ನಾಲ್ಕು ರೂಪಗಳಿಂದ ಭಗವಂತನು ಕಾರ್ಯಪ್ರಪಂಚಕ್ಕೆ ಕಾರಣನಾಗಿ ಅವತಾರವನ್ನು ತಾಳಿದ್ದಾನೆ. ಈ ನಾಲ್ಕು ರೂಪಗಳು

ಮೂಲರೂಪದ ಜೊತೆಗೆ ಅಭಿನ್ನವೇ ಆಗಿರುತ್ತವೆ. ಅನಾದಿಯೂ, ಅನಂತನೂ, ಹುಟ್ಟಿಲ್ಲದವನೂ, ಅಜರನೂ, ಅವ್ಯಕ್ತನೂ, ಶಾಶ್ವತನೂ, ಊಹೆಗೆ ನಿಲುಕದವನೂ, ತಿಳಿಯಲಾಗದವನೂ ಆಗಿ ನಾರಾಯಣನು ಇದ್ದಾನೆ.

ಕಾಷ್ಠಾ ನಿಮೇಷಾ ದಶ ಪಂಚ ಚೈವ
ತ್ರಿಂಶತ್ತು ಕಾಷ್ಠಾ ಗಣಯೇತ್ ಕಲಾಂ ತಾಮ್ ।
ತ್ರಿಂಶತ್ಕಲಶ್ಚಾಪಿ ಭವೇನ್ಮುಹೂರ್ತೋ
ಭಾಗಃ ಕಲಾಯಾ ದಶಮಶ್ಚ ಯಃ ಸ್ಯಾತ್ ॥೪೫॥

ತ್ರಿಂಶನ್ಮುಹೂರ್ತಂ ತು ಭವೇದಹಶ್ಚ
ರಾತ್ರಿಶ್ಚ ಸಂಖ್ಯಾ ಮುನಿಭಿಃ ಪ್ರಣೀತಾ ।
ಮಾಸಃ ಸ್ಮೃತೋ ರಾತ್ರ್ಯಹನೀ ಚ ತ್ರಿಂಶತ್
ಸಂವತ್ಸರೋ ದ್ವಾದಶಮಾಸ ಉಕ್ತಃ ॥೪೬॥

ಸಂವತ್ಸರಂ ದ್ವೇ ಅಯನೇ ವದಂತಿ
ಸಂಖ್ಯಾವಿದೋ ದಕ್ಷಿಣಮುತ್ತರಂ ಚ ॥೪೭॥

ಕಾಲದಲ್ಲಿಯೂ ಅನೇಕ ಭೇದಗಳು ಇವೆ. ಹದಿನೈದು ನಿಮಿಷಗಳು ಒಂದು ಕಾಷ್ಠ. ಮೂವತ್ತು ಕಾಷ್ಠಗಳು ಒಂದು ಕಲೆ. ಮೂವತ್ತು ಕಲೆಗಳು ಅದರ ಮೇಲೆ ಒಂದು ಕಲೆಯ ಹತ್ತನೆಯ ಒಂದು ಭಾಗವೂ ಸೇರಿ ಮುಹೂರ್ತ ಎನಿಸುತ್ತದೆ. ಮೂವತ್ತು ಮುಹೂರ್ತಗಳು ಅಹೋರಾತ್ರವೆನಿಸುತ್ತವೆ. ಮೂವತ್ತು ಅಹೋರಾತ್ರಿಗಳು ಮಾಸವೆನಿಸುತ್ತವೆ. ಹನ್ನೆರಡು ಮಾಸಗಳು ಒಂದು ಸಂವತ್ಸರವೆನಿಸುತ್ತದೆ. ದಕ್ಷಿಣೋತ್ತರಗಳೆಂಬ ಎರಡು ಅಯನಗಳಾಗಿ ಸಂವತ್ಸರವು ವಿಭಾಗಿಸಲ್ಪಟ್ಟಿದೆ.

ಅಹೋರಾತ್ರೌ ವಿಭಜತೇ ಸೂರ್ಯೋ ಮಾನುಷಲೌಕಿಕೌ ।
ರಾತ್ರಿಃ ಸ್ವಪ್ನಾಯ ಸಂಯಾತಿ ಚೇಷ್ಟಾಯೈ ಕರ್ಮಣಾಮಹಃ ॥೪೮॥

ಮನುಷ್ಯರ ವ್ಯವಹಾರಕ್ಕಾಗಿ ಸೂರ್ಯನೇ ಹಗಲು-ರಾತ್ರಿಗಳನ್ನು ಉಂಟು ಮಾಡುತ್ತಾನೆ. ರಾತ್ರಿಯು ಎಲ್ಲಾ ಭೂತಗಳ ನಿದ್ರೆಗೂ, ಹಗಲು ಅವುಗಳು ಕರ್ಮಗಳನ್ನು ಅನುಭವಿಸುವುದಕ್ಕಾಗಿಯೂ ಏರ್ಪಟ್ಟಿದೆ.

ಪಿತ್ರ್ಯೇ ರಾತ್ರ್ಯಹನೀ ಮಾಸಃ ಪ್ರವಿಭಾಗಸ್ತಯೋಃ ಪುನಃ ।
ಶುಕ್ಲೋಽಹಃ ಕರ್ಮಚೇಷ್ಟಾಯಾಂ ಕೃಷ್ಣಃ ಸ್ವಪ್ನಾಯ ಶರ್ವರೀ ॥೪೯॥

ಮನುಷ್ಯಮಾನದಲ್ಲಿ ಒಂದು ಮಾಸವು ಪಿತೃಗಳಿಗೆ ಒಂದು ಅಹೋರಾತ್ರ ಎನಿಸುತ್ತದೆ. ಶುಕ್ಲಪಕ್ಷದ ಹದಿನೈದು ದಿನಗಳು ಪಿತೃಗಳು ಕರ್ಮಗಳನ್ನು ನಡೆಸುವ ಹಗಲುಗಳಾಗಿವೆ. ಕೃಷ್ಣಪಕ್ಷವು ಪಿತೃಗಳಿಗೆ ನಿದ್ರಾಕಾಲವಾಗಿಯೂ ವಿಭಾಗಿಸಲ್ಪಟ್ಟಿದೆ.

ದೈವೇ ರಾತ್ರ್ಯಹನೀ ಹ್ಯಬ್ದಃ ಪ್ರವಿಭಾಗಸ್ತಯೋಃ ಪುನಃ ।
ಅಹಸ್ತತ್ರೋದಗಯನಂ ರಾತ್ರಿಃ ಸ್ಯಾದ್ ದಕ್ಷಿಣಾಯನಮ್ ॥೫೦॥

ಮನುಷ್ಯಮಾನದಲ್ಲಿ ಒಂದು ಸಂವತ್ಸರವು ದೇವತೆಗಳಿಗೆ ಒಂದು ಅಹೋರಾತ್ರ ಎನಿಸಿದೆ. ದೇವತೆಗಳಿಗೆ ಉತ್ತರಾಯಣವು ಹಗಲು ಎನಿಸಿದೆ. ದಕ್ಷಿಣಾಯನವು ರಾತ್ರಿ ಎನಿಸಿದೆ.

ಯೇ ತೇ ರಾತ್ರ್ಯಹನೀ ಪೂರ್ವಂ ಕೀರ್ತಿತೇ ದೈವಲೌಕಿಕೇ ।
ತಯೋಃ ಸಂಖ್ಯಾಯ ವರ್ಷಾಗ್ರಂ ಬ್ರಾಹ್ಮೇ ವಕ್ಷ್ಯಾಮ್ಯಹಃಕ್ಷಪೇ ॥೫೧॥

ತೇಷಾಂ ಸಂವತ್ಸರಾಗ್ರಾಣಿ ಪ್ರವಕ್ಷ್ಯಾಮ್ಯನುಪೂರ್ವಶಃ ।
ಕೃತೇ ತ್ರೇತಾಯುಗೇ ಚೈವ ದ್ವಾಪರೇ ಚ ಕಲೌ ತಥಾ ॥೫೨॥

ಇದೇ ಮನುಷ್ಯಮಾನದಲ್ಲಿ ಬ್ರಹ್ಮನಿಗೂ ಹಗಲು-ರಾತ್ರಿಗಳು, ಸಂವತ್ಸರಗಳು ಎನಿಸಲ್ಪಡುತ್ತವೆ. ಅನೇಕ ಸಂವತ್ಸರಗಳು ಯುಗವೆನಿಸುತ್ತವೆ. ಆ ಯುಗಗಳು ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಭಾಗಗಳಾಗಿವೆ.

ಚತ್ವಾರ್ಯಾಹುಃ ಸಹಸ್ರಾಣಿ ವರ್ಷಾಣಾಂ ತತ್ಕೃತಂ ಯುಗಮ್ ।
ತಸ್ಯ ತಾವಚ್ಛತೀ ಸಂಧ್ಯಾ ಸಂಧ್ಯಾಂಶಶ್ಚ ತಥಾವಿಧಃ ॥೫೩॥

ಕೃತಯುಗಕ್ಕೆ ನಾಲ್ಕು ಸಾವಿರ ದಿವ್ಯಸಂವತ್ಸರಗಳು. ಆ ಯುಗಸಂಧ್ಯೆಯು ಪೂರ್ವಾಂಶ, ಉತ್ತರಾಂಶ ಎಂದು ಎರಡು ಅಂಶಗಳಿಂದ ಕೂಡಿದೆ. ಪೂರ್ವಾಂಶವು ಇನ್ನೂರು ವರ್ಷಗಳು. ಉತ್ತರಾಂಶವು ಇನ್ನೂರು ವರ್ಷವು. ಒಟ್ಟು ಯುಗಸಂಧ್ಯೆಯು ನಾಲ್ಕುನೂರು ವರ್ಷಗಳಾಗುತ್ತವೆ. ಅದರಂತೆ ಕೃತ-ತ್ರೇತಾಯುಗಗಳ ಸಂಧ್ಯೆಯಲ್ಲಿ

ಪೂರ್ವಾಂಶವು ನಾಲ್ಕುನೂರು, ಉತ್ತರಾಂಶವು ನಾಲ್ಕುನೂರು ಎಂದು ಗ್ರಹಿಸಿದರೆ ಎಂಟುನೂರು ವರ್ಷಗಳಾಗುತ್ತದೆ. ಇದೆಲ್ಲವೂ ಸೇರಿ ನಾಲ್ಕುಸಾವಿರದ ಎಂಟು ನೂರು ವರ್ಷಗಳು ಕೃತಯುಗವಾಗಿ ಗಣಿಸಲ್ಪಡುತ್ತದೆ.

ವ್ಯಾಖ್ಯಾನ ವಿಶೇಷ– ತ್ರೇತಾಯುಗ, ದ್ವಾಪರ ಯುಗಗಳ ಸಂಧ್ಯೆಯಲ್ಲಿಯೂ ಒಂದು ಪಾದ ಕಡಿಮೆಯಾಗಿ ಮುನ್ನೂರು ಸಂವತ್ಸರಗಳಾಗುತ್ತವೆ. ಸಂಧ್ಯೆಯ ಪೂರ್ವಾಂಶವು, ಉತ್ತರಾಂಶವು ಎಂದು ವಿಭಾಗಿಸಿದರೆ ನೂರ ಐವತ್ತು ವರ್ಷ ಪೂರ್ವಾಂಶವಾಗುತ್ತದೆ. ಉತ್ತರಾಂಶವು ನೂರ ಐವತ್ತು ಸಂವತ್ಸರಗಳಾಗುತ್ತದೆ. ಪುನಃ ತ್ರೇತಾಯುಗ, ದ್ವಾಪರಯುಗಗಳ, ಪೂರ್ವಾಂಶ ಉತ್ತರಾಂಶ ಎಂದು ಸೇರಿಸಿದರೆ ಆರಂಭದ ಮುನ್ನೂರು ವರ್ಷ, ನಂತರದ ಮುನ್ನೂರು ವರ್ಷ ಒಟ್ಟಿನಲ್ಲಿ ಆರು ನೂರು ವರ್ಷ ಸಂಧಿಕಾಲವೆನಿಸುತ್ತದೆ. ತ್ರೇತಾಯುಗವು ಮೂರು ಸಾವಿರ ವರ್ಷ. ಒಟ್ಟು ಮೂರುಸಾವಿರದ ಆರು ನೂರು ವರ್ಷಗಳಾಗುತ್ತದೆ. ಅದರಂತೆ ದ್ವಾಪರ ಯುಗಕ್ಕೆ ಎರಡು ಸಾವಿರ ವರ್ಷ. ಅದರಲ್ಲಿಯೂ ಸಂಧಿಕಾಲವು ಪಾದಾಂಶ ಕಡಿಮೆ ಎಂದು ಗ್ರಹಿಸಿದರೆ ಪೂರ್ವಾಂಶವು ನೂರು, ಉತ್ತರಾಂಶವು ನೂರು. ದ್ವಾಪರ-ಕಲಿಯುಗಗಳ ಸಂಧಿಯ ಆರಂಭ ಕೊನೆಯ ಅಂಶಗಳನ್ನು ಪೂರ್ವಾಂಶ, ಉತ್ತರಾಂಶ ಎಂದು ಗ್ರಹಿಸಿದರೆ ಇನ್ನೂರು-ಇನ್ನೂರು ವರ್ಷಗಳಾಗುತ್ತವೆ. ಒಟ್ಟಿನಲ್ಲಿ ದ್ವಾಪರ ಯುಗಕ್ಕೆ ಎರಡು ಸಾವಿರದ ನಾಲ್ಕು ನೂರು ವರ್ಷಗಳಾಗುತ್ತವೆ. ಇದರಂತೆ ಕಲಿಯುಗ ಕೃತಯುಗಗಳ ಸಂಧಿಯು ಪಾದಾಂಶ ಊನವಾದುದರಿಂದ ಪೂರ್ವಾಂಶವು ಐವತ್ತು, ಉತ್ತರಾಂಶವು ಐವತ್ತು. ಎರಡು ಸಂಧಿಕಾಲಗಳು ನೂರು ನೂರು ಎನಿಸುತ್ತದೆ. ಒಟ್ಟಿನಲ್ಲಿ ಕಲಿಯುಗದಲ್ಲಿ ಸಾವಿರದ ಇನ್ನೂರು ದಿವ್ಯ ಸಂವತ್ಸರಗಳಾಗುತ್ತದೆ. ಹೀಗೆ ಚತುರ್ಯುಗಗಳ ಸಂಧಿಗಳ ಸಂವತ್ಸರಗಳನ್ನು ಮಾತ್ರ ಎರಡು ಸಾವಿರ ಸಂವತ್ಸರಗಳು ಎಂದು ಇಟ್ಟುಕೊಂಡು, ಆ ಎರಡು ಸಾವಿರ ಸಂವತ್ಸರಗಳನ್ನು ನಾಲ್ಕು ಯುಗಗಳಿಗೆ ವಿಭಾಗಿಸಿಕೊಳ್ಳಬೇಕು.

ಇತರೇಷು ಸಸಂಧ್ಯೇಷು ಸಂಧ್ಯಾಂಶೇಷು ತತಸ್ತ್ರಿಷು ।
ಏಕಾಪಾಯೇನ ಸಂಯಾಂತಿ ಸಹಸ್ರಾಣಿ ಶತಾನಿ ಚ ॥೫೪॥

ಮುಂದಿನ ಮೂರು ಯುಗಗಳಲ್ಲಿಯೂ, ಯುಗ, ಸಂಧ್ಯೆ, ಸಂಧ್ಯಾಂಶವೆಂಬ ಮೂರು ವಿಭಾಗದಲ್ಲಿ ಒಂದೊಂದರಲ್ಲಿಯೂ ಕ್ರಮವಾಗಿ ಕಾಲುಭಾಗದಷ್ಟು ಕಡಿಮೆಯಾಗುತ್ತಾ ಬರುತ್ತದೆ. ಎಂದರೆ ತ್ರೇತಾಯುಗದ ಕಾಲಪ್ರಮಾಣವು ಕೃತಯುಗದ ಕಾಲಪ್ರಮಾಣದಲ್ಲಿ ಮುಕ್ಕಾಲು ಪಾಲು ಅರ್ಥಾತ್ ಮೂರು ಸಾವಿರ ವರ್ಷಗಳು. ಇದರಂತೆ ಯುಗಸಂಧಿಗಳಲ್ಲಿ ಸಂಧ್ಯಂಶಗಳಲ್ಲಿ ಕಾಲು ಭಾಗ ತಗ್ಗುತ್ತಾ ಬರುವುದರಿಂದ

ತ್ರೇತಾಯುಗದ ಕಾಲವು ಮೂರು ಸಾವಿರದ ಆರುನೂರು ದಿವ್ಯವರ್ಷಗಳಾಗುತ್ತವೆ. ಅದರಂತೆ ದ್ವಾಪರಯುಗಕ್ಕೆ ಎರಡು ಸಾವಿರದ ನಾಲ್ಕುನೂರು ವರ್ಷಗಳು. ಕಲಿಯುಗಕ್ಕೆ ಸಾವಿರದ ಇನ್ನೂರು ದಿವ್ಯಸಂವತ್ಸರಗಳಾಗುತ್ತವೆ.

ಏತಾನಿ ಶಾಶ್ವತಾನ್ ಲೋಕಾನ್ ಧಾರಯಂತಿ ಸನಾತನಾನ್ ।
ಏತದ್ ಬ್ರಹ್ಮವಿದಾಂ ತಾತ ವಿದಿತಂ ಬ್ರಹ್ಮ ಶಾಶ್ವತಮ್ ॥೫೫॥

ಈ ಕಾಲವು ಎಂದೆಂದಿಗೂ ಕೊನೆಯಿಲ್ಲದಂತೆ ಸಾಗುತ್ತಾ ಲೋಕಗಳನ್ನು ಧರಿಸುತ್ತಿದೆ. ಬ್ರಹ್ಮಜ್ಞರು ಈ ಕಾಲವನ್ನೇ ಶಾಶ್ವತವೆನ್ನುತ್ತಾರೆ. ಬ್ರಹ್ಮ ಎನ್ನುತ್ತಾರೆ.

ವ್ಯಾಖ್ಯಾನ ವಿಶೇಷ– ಕಾಲನಿಯಾಮಕನಾದ ಭಗವಂತನು ಕಾಲ ಎಂದೇ ಕರೆಸಿಕೊಂಡಿದ್ದಾನೆ.

ಚತುಷ್ಪಾತ್ ಸಕಲೋ ಧರ್ಮಃ ಸತ್ಯಂ ಚೈವ ಕೃತೇ ಯುಗೇ ।
ನಾಧರ್ಮೇಣಾಗಮಃ ಕಶ್ಚಿದ್ ಯುಗೇ ತಸ್ಮಿನ್ ಪ್ರವರ್ತತೇ ॥೫೬॥

ಕೃತಯುಗದಲ್ಲಿ ಧರ್ಮ, ಸತ್ಯಗಳೆರಡು ನಾಲ್ಕು ಪಾದಗಳನ್ನು ಊರಿ ಪೂರ್ಣವಾಗಿ ನಡೆಯುವುದರಿಂದ ಆ ಯುಗದಲ್ಲಿ ಅಧರ್ಮದ ಸಂಪರ್ಕವೇ ಇರುವುದಿಲ್ಲ.

ಇತರೇಷ್ವಾಗಮಾದ್ ಧರ್ಮಃ ಪಾದಶಸ್ತ್ವವರೋಪ್ಯತೇ ।
ಸತ್ಯಂ ಶೌಚಂ ತಥಾಯುಶ್ಚ ಧರ್ಮಶ್ಚಾಪೈತಿ ಪಾದಶಃ ।
ಚೌರ್ಯಕಾನೃತಮಾಯಾಭಿರಧರ್ಮಶ್ಚೋಪಚೀಯತೇ ॥೫೭॥

ಮುಂದಿನ ಯುಗದಲ್ಲಿ ಮೋಕ್ಷಧರ್ಮಗಳಲ್ಲಿ ಒಂದೊಂದು ಪಾದವೂ ತಗ್ಗುತ್ತಾ ಬರುತ್ತದೆ. ಸತ್ಯವೂ, ಶೌಚವೂ, ಆಯುಷ್ಯ- ಹೀಗೆ ಒಂದೊಂದು ಪಾದವು ಕಡಿಮೆಯಾಗುತ್ತಾ ಬರುತ್ತದೆ. ಅದಕ್ಕೆ ತಕ್ಕಂತೆ ಚೌರ್ಯ, ಅಸತ್ಯ, ವಂಚನೆ ಮೊದಲಾದವು ಹೆಚ್ಚುತ್ತಾ ಅಧರ್ಮವು ಅಭಿವೃದ್ಧಿಯನ್ನು ಹೊಂದುತ್ತದೆ.

ಅರೋಗಾಃ ಸರ್ವಸಿದ್ಧಾರ್ಥಾಶ್ಚತುರ್ವರ್ಷಶತಾಯುಶಃ ।
ಕೃತೇ ತ್ರೇತಾಯುಗೇ ತ್ವೇಷಾಂ ಪಾದಶೋ ಹ್ರಸತೇ ವಯಃ ॥೫೮॥

ಕೃತಯುಗದಲ್ಲಿ ಜನರು ರೋಗರಹಿತರಾಗಿ, ಸಕಲಾಭೀಷ್ಟಗಳನ್ನು ಹೊಂದಿ ನಾಲ್ಕು ನೂರು ಸಂವತ್ಸರಗಳ ತನಕ ಬದುಕುತ್ತಾರೆ. ತ್ರೇತಾಯುಗದಲ್ಲಿ ಜನರ ಆಯುಷ್ಯ ಕೃತಯುಗದ ಕಾಲುಭಾಗದಷ್ಟು ತಗ್ಗುತ್ತದೆ.

ವೇದವಾದಾಶ್ಚಾನುಯುಗಂ ಹ್ರಸಂತೀತೀಹ ನಃ ಶ್ರುತಮ್ ।
ಆಯೂಂಷಿ ಚಾಶಿಷಶ್ಚೈವ ವೇದಸ್ಯೈವ ಚ ಯತ್ ಫಲಮ್ ॥೫೯॥

ಒಂದೊಂದು ಯುಗದಲ್ಲಿಯೂ ಕ್ರಮವಾಗಿ ವೇದವಾದಗಳು ತಗ್ಗುತ್ತವೆ. ಆಯುಸ್ಸು ಕರ್ಮಗಳು, ಕರ್ಮಫಲಗಳು ಇವುಗಳೆಲ್ಲವೂ ಕ್ರಮವಾಗಿ ತಗ್ಗುತ್ತಾ ಬರುತ್ತವೆ.

ಅನ್ಯೇ ಕೃತಯುಗೇ ಧರ್ಮಾಸ್ತ್ರೇತಾಯಾಂ ದ್ವಾಪರೇಽಪರೇ ।
ಅನ್ಯೇ ಕಲಿಯುಗೇ ಧರ್ಮಾ ಯಥಾಶಕ್ತಿ ಕೃತಾ ಇವ ॥೬೦॥

ಕೃತಯುಗದ ಧರ್ಮಗಳೇ ಬೇರೆ. ತ್ರೇತಾಯುಗದ ಧರ್ಮಗಳೇ ಬೇರೆ. ದ್ವಾಪರ-ಕಲಿಯುಗದ ಧರ್ಮಗಳೇ ಬೇರೆ ಬೇರೆ. ಈ ಧರ್ಮಾಚರಣೆಯು ಆಯಾ ಯುಗಗಳಿಗೆ ತಕ್ಕಂತೆ ಮಾರ್ಪಾಡಾಗುತ್ತದೆ.

ತಪಃ ಪರಂ ಕೃತಯುಗೇ ತ್ರೇತಾಯಾಂ ಸತ್ಯಮುತ್ತಮಮ್ ।
ದ್ವಾಪರೇ ಯಜ್ಞಮೇವಾಹುರ್ದಾನಮೇವ ಕಲೌ ಯುಗೇ ॥೬೧॥

ಕೃತಯುಗದಲ್ಲಿ ತಪಸ್ಸೇ ಪ್ರಧಾನವು. ತ್ರೇತಾಯುಗದಲ್ಲಿ ಸತ್ಯವು ಪ್ರಧಾನವು. ದ್ವಾಪರ ಯುಗದಲ್ಲಿ ಯಜ್ಞವು, ಕಲಿಯುಗದಲ್ಲಿ ದಾನವು ಪ್ರಧಾನವು.

ಏತಾಂ ದ್ವಾದಶಸಾಹಸ್ರೀಂ ಯುಗಾಖ್ಯಾಂ ಕವಯೋ ವಿದುಃ ।
ಸಹಸ್ರಪರಿವರ್ತಂ ತದ್ ಬ್ರಾಹ್ಮಂ ದಿವಸಮುಚ್ಯತೇ ॥೬೨॥

ಹಿಂದೆ ಹೇಳಿದಂತೆ ಹನ್ನೆರಡು ಸಾವಿರ ದಿವ್ಯ ವರ್ಷಗಳು ಸೇರಿ ಒಂದು ಯುಗ ಪರಿವರ್ತನೆಯಾಗುತ್ತದೆ. ಇಂತಹ ನಾಲ್ಕು ಚತುರ್ಯುಗಗಳು ಸಾವಿರ ಬಾರಿ ಮುಗಿದರೆ ಬ್ರಹ್ಮನಿಗೆ ಅದು ಒಂದು ಹಗಲೆನಿಸುತ್ತದೆ.

ರಾತ್ರಿಸ್ತು ತಾವತೀ ಬ್ರಾಹ್ಮೀ ತದಾದೌ ವಿಶ್ವಮೀಶ್ವರಃ ।
ಪ್ರಲಯೇ ತ್ಮಾನಮಾವಿಶ್ಯ ಸುಪ್ತ್ವಾ ಸೋಽಂತೇ ವಿಬುಧ್ಯತೇ ॥೬೩॥

ಅಷ್ಟೇ ಯುಗಗಳು ಬ್ರಹ್ಮನಿಗೆ ಒಂದು ರಾತ್ರಿ ಎನಿಸುತ್ತದೆ. ಬ್ರಹ್ಮನಿಗೆ ಹಗಲಿನ ಆರಂಭದಲ್ಲಿ ಜಗತ್ತು ಸೃಷ್ಟಿಯನ್ನು ಹೊಂದುತ್ತದೆ. ಹಗಲು ಮುಗಿದು ರಾತ್ರಿಯು ಆರಂಭಿಸುವಾಗ ಜಗತ್ತೆಲ್ಲವನ್ನೂ ತನ್ನ ಉದರದಲ್ಲಿ ಲಯಗೊಳಿಸಿಕೊಂಡು ರಾತ್ರಿಯು ಕಳೆಯುವ ತನಕ ಯೋಗನಿದ್ರಾಸಕ್ತನಾಗಿ ಬಳಿಕ ಎಚ್ಚರಗೊಳ್ಳುತ್ತಾನೆ.

ಸಹಸ್ರಯುಗಪರ್ಯಂತಮಹರ್ಯದ್ ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂ ತಾಂ ತೇಽಹೋರಾತ್ರವಿದೋ ಜನಾಃ ॥೬೪॥

ಜ್ಞಾನಿಗಳು ಸಾವಿರ ಯುಗಪರ್ಯಂತವಾದ ಕಾಲವನ್ನು ಬ್ರಹ್ಮನ ಹಗಲೆಂದೂ, ಸಾವಿರಯುಗಗಳ ವ್ಯಾಪ್ತಿಯುಳ್ಳ ಕಾಲವನ್ನು ಬ್ರಹ್ಮನ ರಾತ್ರಿ ಎಂದು ಹೀಗೆ ಅಹೋರಾತ್ರಗಳನ್ನು ಹೇಳುತ್ತಾರೆ.

ಪ್ರತಿಬುದ್ಧೋ ವಿಕುರುತೇ ಬ್ರಹ್ಮಾಕ್ಷಯ್ಯಂ ಕ್ಷಪಾಕ್ಷಯೇ ।
ಸೃಜತೇ ಚ ಮಹದ್ಭೂತಂ ತಸ್ಮಾದ್ ವ್ಯಕ್ತಾತ್ಮಕಂ ಮನಃ ॥೬೫॥

ಎಚ್ಚರಗೊಂಡ ಭಗವಂತನು ತನ್ನಲ್ಲಿ ಲಯಗೊಂಡಿರುವ ಮಹತ್ತತ್ತ್ವವನ್ನು ಸೃಷ್ಟಿಸುತ್ತಾನೆ. ಆ ಮಹತ್ತತ್ತ್ವದಿಂದ ವ್ಯಕ್ತಾತ್ಮನೆನಿಸಿದ ಮನಸ್ಸನ್ನು ಸೃಷ್ಟಿಸುತ್ತಾನೆ.

ಮನಃ ಸೃಷ್ಟಿಂ ವಿಕುರುತೇ ಚೋದ್ಯಮಾನಂ ಸಿಸೃಕ್ಷಯಾ ।
ಆಕಾಶಂ ಜಾಯತೇ ತಸ್ಮಾತ್ ತಸ್ಯ ಶಬ್ದೋ ಗುಣೋ ಮತಃ ॥೬೬॥

ಆ ಸೃಷ್ಟಿಯಾದ ಮನಸ್ಸಿಗೆ ಸೃಷ್ಟಿಸಬೇಕೆಂಬ ಬಯಕೆಯನ್ನು ಹುಟ್ಟಿಸಿ ಸೃಷ್ಟಿಯನ್ನು ಆರಂಭಿಸುತ್ತಾನೆ. ಆದ್ದರಿಂದ ಅದರ ಮೂಲಕ ಮೊದಲು ಆಕಾಶವು ಹುಟ್ಟುತ್ತದೆ. ಆಕಾಶದ ಗುಣ ಶಬ್ದವು.

ಆಕಾಶಾತ್ ತು ವಿಕುರ್ವಾಣಾತ್ ಸರ್ವಗಂಧವಹಃ ಶುಚಿಃ ।
ಬಲವಾನ್ ಜಾಯತೇ ವಾಯುಸ್ತಸ್ಯ ಸ್ಪರ್ಶೋ ಗುಣೋ ಮತಃ ॥೬೭॥

ಆಕಾಶವು ವಿಕಾರವನ್ನು ಹೊಂದಿ ತನ್ನಿಂದ ಸ್ಪರ್ಶಗುಣವುಳ್ಳ ವಾಯುವನ್ನು ಹುಟ್ಟಿಸುತ್ತದೆ.

ವಾಯೋರಪಿ ವಿಕುರ್ವಾಣಾಜ್ಜ್ಯೋತಿರ್ಭವತಿ ಭಾಸ್ವರಮ್ ।
ರೋಚನಂ ಜನಯೇದ್ ಶುದ್ಧಂ ತದ್ ರೂಪಗುಣಮುಚ್ಯತೇ ॥೬೮॥

ಆ ವಾಯುವು ವಿಕಾರ ಹೊಂದುತ್ತಾ ಬಂದು ಅದರಿಂದ ಪ್ರಕಾಶಗುಣವುಳ್ಳ ಅಗ್ನಿಯು ಹುಟ್ಟುತ್ತದೆ. ಅದರ ಗುಣವೇ ರೂಪವು. ಶುದ್ಧವಾದ ರೂಪವು ಅಗ್ನಿಯ ಗುಣವೆನಿಸಿದೆ.

ಜ್ಯೋತಿಷೋಽಪಿ ವಿಕುರ್ವಾಣಾದ್ ಭವಂತ್ಯಾಪೋ ರಸಾತ್ಮಿಕಾಃ ।
ಅದ್ಭ್ಯೋ ಗಂಧವಹಾ ಭೂಮಿಃ ಪೂರ್ವೇಷಾಂ ಸೃಷ್ಟಿರುಚ್ಯತೇ ॥೬೯॥

ಅಗ್ನಿಯು ವಿಕಾರವನ್ನು ಹೊಂದುತ್ತಾ ಅದರಿಂದ ರಸಾತ್ಮಕವಾದ ಜಲವು ಹುಟ್ಟುತ್ತದೆ. ಆ ಜಲದಿಂದ ಗಂಧಗುಣವುಳ್ಳ ಭೂಮಿ ಹುಟ್ಟುತ್ತದೆ. ಇದನ್ನೇ ಭೂತಸೃಷ್ಟಿಯ ಕ್ರಮ ಎಂದು ಹೇಳುತ್ತಾರೆ.

ಬ್ರಹ್ಮತೇಜೋಮಯಂ ಶುಕ್ಲಂ ಯಸ್ಯ ಸರ್ವಮಿದಂ ಜಗತ್ ।
ಏಕಸ್ಯ ಬ್ರಹ್ಮಭೂತಸ್ಯ ದ್ವಯಂ ಸ್ಥಾವರಜಂಗಮಮ್ ॥೭೦॥

ಬ್ರಹ್ಮನ ತೇಜೋಮಯವಾದ ಶುಕ್ಲವೇ ಈ ಜಗತ್ತು ಎಂದು ಕರೆಸಿಕೊಳ್ಳುತ್ತದೆ. ಏಕನಾದ ವಿಷ್ಣು ಎಂಬ ಮಹಾಭೂತದಿಂದಲೇ ಸ್ಥಾವರ-ಜಂಗಮ ಎಂಬ ಎರಡು ಅಂಶಗಳು ಸೃಷ್ಟವಾಗಿವೆ.

ಅಹರ್ಮುಖೇ ವಿಬುದ್ಧಂ ತತ್ಸೃಜತೇ ವಿದ್ಯಯಾ ಜಗತ್ ।
ಅಗ್ರ ಏವ ಮಹದ್ಭೂತಮಾಶು ವ್ಯಕ್ತಾತ್ಮಕಂ ಮನಃ ॥೭೧॥

ಬ್ರಹ್ಮನ ಹಗಲಿನಲ್ಲಿಯೇ ಜಗತ್ತನ್ನು ಜ್ಞಾನಮುಖವಾಗಿ ಸಾಗುವಂತೆ ವಿದ್ಯೆಯಿಂದ ಸೃಷ್ಟಿಸುತ್ತಾನೆ. ಈ ಸೃಷ್ಟಿಯ ಆರಂಭದಲ್ಲಿ ಮಹದ್ಭೂತದಿಂದ ಸೃಷ್ಟವಾದುದು ಮನಃತತ್ತ್ವವು.

ಅಭಿಭೂಯೇಹ ಚಾತಿಷ್ಠದ್ವ್ಯಸೃಜತ್ ಸಪ್ತ ಮಾನಸಾನ್ ।
ದೂರಗಂ ಬಹುಧಾಗಾಮಿ ಪ್ರಾರ್ಥನಾಸಂಶಯಾತ್ಮಕಮ್ ॥೭೨॥

ಭಗವಂತನು ತನ್ನ ಮನಸ್ಸಿನಿಂದ ಹುಟ್ಟಿದ ಬುದ್ಧಿ, ಮನಸ್ಸು, ಪಂಚಭೂತಗಳಿಂದ ಜಗತ್ತನ್ನು ವ್ಯಾಪಿಸಿರುತ್ತಾನೆ. ಮನಸ್ಸಾದರೂ ಬಹಳ ದೂರ ಸಂಚರಿಸುವ ಸ್ವಭಾವವುಳ್ಳದ್ದಾಗಿದೆ. ಅನೇಕ ರೀತಿಯಲ್ಲಿ ಸಾಗುತ್ತದೆ. ಪ್ರಾರ್ಥನಾ ರೂಪವು ಸಂಶಯಾತ್ಮಕವೂ ಆಗಿದೆ.

ಮನಃ ಸೃಷ್ಟಿಂ ನ ಕುರುತೇ ಚೋದ್ಯಮಾನಂ ಸಿಸೃಕ್ಷಯಾ ।
ಆಕಾಶಂ ಜಾಯತೇ ತಸ್ಮಾತ್ತಸ್ಯ ಶಬ್ದೋ ಗುಣೋ ಮತಃ ॥೭೩॥

ಮನಸ್ಸು ಪ್ರೇರಿಸಲ್ಪಟ್ಟಾಗ ಸೃಷ್ಟಿಗೆ ಪ್ರೇರಿತವಾದ ಮನಸ್ಸು ಸೃಷ್ಟಿಯನ್ನು ಮಾಡುತ್ತದೆ. ಮನಸ್ಸಿನಿಂದ ಆಕಾಶವು ಹುಟ್ಟುತ್ತದೆ. ಆಕಾಶದ ಗುಣವು ಶಬ್ದ ಎನಿಸಿದೆ.

ಆಕಾಶಾತ್ತು ವಿಕುರ್ವಾಣಾತ್ ಸರ್ವಗಂಧವಹಃ ಶುಚಿಃ ।
ಬಲವಾಂಜಯತೇ ವಾಯುಸ್ತಸ್ಯ ಸ್ಪರ್ಶೋ ಗುಣೋ ಮತಃ ॥೭೪॥

ಆಕಾಶದಿಂದ ವಿಕಾರ ಹೊಂದಿದ ತತ್ತ್ವವು ವಾಯುವೆನಿಸಿದೆ. ಗಂಧವನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯವು ವಾಯುವಿನ ಗುಣವು. ವಾಯುವು ತುಂಬಾ ಬಲಿಷ್ಠವಾದುದು. ಅದರ ಗುಣವನ್ನೇ ಸ್ಪರ್ಶ ಎನ್ನುತ್ತಾರೆ.

ವಾಯೋರಪಿ ವಿಕುರ್ವಾಣಾಜ್ಜ್ಯೋತಿರ್ಭೂತಂ ತಮೋನುದಮ್ ।
ರೋಚಿಷ್ಣು ಜಾಯತೇ ತತ್ರ ತದ್ರೂಪಗುಣಮುಚ್ಯತೇ ॥೭೫॥

ವಾಯುವಿನ ವಿಕಾರವೇ ಅಗ್ನಿಯು. ಕತ್ತಲೆಯನ್ನು ಪರಿಹರಿಸುತ್ತದೆ. ಬೆಳಗುವಂತಹ ಆ ಅಗ್ನಿತತ್ತ್ವದಿಂದ ಹುಟ್ಟಿದ ಗುಣವೇ ರೂಪವೆನಿಸಿದೆ.

ಜ್ಯೋತಿಷೋಽಪಿ ವಿಕುರ್ವಾಣಾದ್ ಭವಂತ್ಯಾಪೋ ರಸಾತ್ಮಿಕಾಃ ।
ಅದ್ಭ್ಯೋ ಗಂಧಗುಣಾ ಭೂಮಿಃ ಪೂರ್ವೈಷಾ ಸೃಷ್ಟಿರುಚ್ಯತೇ ॥೭೬॥

ಅಗ್ನಿಯ ವಿಕಾರವನ್ನೇ ಜಲ ಎನ್ನುತ್ತಾರೆ. ರಸ ಎಂಬ ಗುಣವು ಜಲದ ಗುಣವು. ಆ ಜಲವೇ ವಿಕಾರ ಹೊಂದಿ ಭೂಮಿ ಸೃಷ್ಟಿಯಾಗಿದೆ. ಗಂಧವು ಭೂಮಿಯ ಗುಣವು. ಇವೇ ಮೊದಲಿನ ಸೃಷ್ಟಿ ಎನಿಸಿವೆ.

ಗುಣಾಃ ಪೂರ್ವಸ್ಯ ಪೂರ್ವಸ್ಯ ಪ್ರಾಪ್ನುವಂತ್ಯುತ್ತರೋತ್ತರಮ್ ।
ತೇಷಾಂ ಯಾವತ್ತಿಥಂ ಯದ್ಯತ್ ತತ್ತತ್ ತಾವದ್ಗುಣಂ ಸ್ಮೃತಮ್ ॥೭೭॥

ಆರಂಭದ ಭೂತಗಳ ಗುಣಗಳು ಅದರ ಅದರ ಮುಂದಿನ ಭೂತಗಳಲ್ಲಿ ಸೇರಿ ಬರುತ್ತವೆ. ಅವುಗಳಲ್ಲಿ ಒಂದೊಂದರಲ್ಲಿರುವ ಎಲ್ಲಾ ಗುಣಗಳು ಅದರದರ ಕಾರ್ಯಗಳಿಗೆ ಸಂಬಂಧಿಸಿದವು.

ಉಪಲಭ್ಯಾಪ್ಸು ಚೇದ್ ಗಂಧಂ ಕೇಚಿದ್ ಬ್ರೂಯುರನೈಪುಣಾತ್ ।
ಪೃಥಿವ್ಯಾಮೇವ ತಂ ವಿದ್ಯಾದಪಾಂ ವಾಯೋಶ್ಚ ಸಂಶ್ರಿತಮ್ ॥೭೮॥

ಕೆಲವರು ಅಜ್ಞಾನದಿಂದ ನೀರಿನಲ್ಲಿ ಕಾಣುವ ಗಂಧವನ್ನು ನೋಡಿ ಅದು ಜಲದ ಗುಣವೆಂದು ಭ್ರಮಿಸುತ್ತಾರೆ. ಆದರೆ ಆ ಗಂಧಗುಣವು ಭೂಮಿಯಲ್ಲಿ ಮಾತ್ರವೇ ಇರುತ್ತದೆ. ಪೃಥಿವಿಯ ಸಂಬಂಧದಿಂದ ಜಲದಲ್ಲಿಯೂ, ವಾಯುವಿನಲ್ಲಿಯೂ ಆ ಗಂಧಗುಣವು ತೋರುತ್ತದೆಂದು ತಿಳಿಯಬೇಕು.

ಏತೇ ತು ಸಪ್ತ ಪುರುಷಾ ನಾನಾವಿರ್ಯಾಃ ಪೃಥಕ್‌ಪೃಥಕ್ ।
ನಾಶಕ್ನುವನ್ ಪ್ರಜಾಃ ಸ್ರಷ್ಟುಮಸಮಾಗಮ್ಯ ಸರ್ವತಃ ॥೭೯॥

ಈ ಮಹತ್ತತ್ತ್ವ, ಅಹಂಕಾರತತ್ತ್ವ, ಪಂಚಭೂತಗಳೆಂಬ ಏಳರಲ್ಲಿಯೂ ಒಂದೊಂದಕ್ಕೂ ಬೇರೆ ಬೇರೆಯಾದ ವೀರ್ಯ-ಬಲಗಳಿದ್ದಾವೆ. ಇವುಗಳು ಮೊದಲು ಒಂದಕ್ಕೊಂದು ಬೇರೆಯಾಗಿದ್ದು ಪರಸ್ಪರ ಸಂಬಂಧ ಇಲ್ಲದೆ ಇದ್ದದ್ದರಿಂದ ಪ್ರಜೆಗಳನ್ನು ಸೃಷ್ಟಿಸಲು ಅಸಮರ್ಥವಾಗಿದ್ದವು.

ತೇ ಸಮೇತ್ಯ ಮಹಾತ್ಮಾನಮನ್ಯೋನ್ಯಮಭಿಸಂಶ್ರಿತಾಃ ।
ಶರೀರಾಶ್ರಯಣಂ ಪ್ರಾಪ್ತಾಸ್ತತಃ ಪುರುಷ ಉಚ್ಯತೇ ॥೮೦॥

ಮಹತ್ತಾದ ಆಕಾರವುಳ್ಳ ಆ ಭೂತಗಳು ಪರಸ್ಪರವಾಗಿ ಸಂಬಂಧ ಹೊಂದಿದ ಮೇಲೆ ಶರೀರದ ಅವಯವಗಳಾಗಿ ಸೃಷ್ಟಿಗೊಂಡವು. ಇವುಗಳ ಸೇರುವಿಕೆಯೇ ಶರೀರವೆನಿಸುತ್ತದೆ. ಅಂತಹ ಶರೀರವನ್ನು ಹೊಂದಿದ ಆತ್ಮನೇ ಪುರುಷನೆನಿಸುತ್ತಾನೆ.

ಶ್ರಯಣಾಚ್ಛರೀರಂ ಭವತಿ ಮೂರ್ತಿಮತ್ ಷೋಡಶಾತ್ಮಕಮ್ ।
ತದಾವಿಶಂತಿ ಭೂತಾನಿ ಮಹಾಂತಿ ಸಹ ಕರ್ಮಣಾ ॥೮೧॥

ಶರೀರವುಳ್ಳವನಾದ್ದರಿಂದ ಶರೀರಿ ಎನಿಸುತ್ತಾನೆ. ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚವಾಯುಗಳು, ಮನಸ್ಸು ಎಂಬ ಈ ಹದಿನಾರು ಅಂಶಗಳುಳ್ಳದ್ದೆ ಸೂಕ್ಷ್ಮಶರೀರವು. ಮನಸ್ಸುಗಳುಳ್ಳ ಸೂಕ್ಷ್ಮಶರೀರವನ್ನು ಕರ್ಮಗಳು, ಪಂಚಮಹಾಭೂತಗಳು ಸೇರಿಕೊಳ್ಳುತ್ತವೆ.

ಸರ್ವಭೂತಾನ್ಯುಪಾದಾಯ ತಪಸಶ್ಚರಣಾಯ ಚ ।
ಆದಿಕರ್ತಾ ಮಹಾಭೂತಂ ತಮೇವಾಹುಃ ಪ್ರಜಾಪತಿಮ್ ॥೮೨॥

ಆದಿಕರ್ತನಾದ ಭಗವಂತನು ಸಮಸ್ತ ಭೂತಗಳಿಂದ ತುಂಬಿರುವ ಮಹಾಭೂತ ಒಂದನ್ನು ತಪಸ್ಸನ್ನಾಚರಿಸಲು ಮೊದಲು ಸೃಷ್ಟಿಸಿದನು. ಅವನನ್ನೇ ಪ್ರಜಾಪತಿ ಎಂದು ಕರೆಯುತ್ತಾರೆ.

ಸ ವೈ ಸೃಜತಿ ಭೂತಾನಿ ಸ ಏವ ಪುರುಷಃ ಪರಃ ।
ಅಜೋ ಜನಯತೇ ಬ್ರಹ್ಮಾ ದೇವರ್ಷಿಪಿತೃಮಾನವಾನ್ ॥೮೩॥

ಈ ಪ್ರಜಾಪತಿಯೇ ಪ್ರಾಣಿಗಳನ್ನು ಸೃಷ್ಟಿಸುತ್ತಾನೆ. ಇವನೇ ಪುರುಷನು, ಪರನು, ಅಜನು ಎನಿಸುತ್ತಾನೆ. ಈ ಚತುರ್ಮುಖ ಬ್ರಹ್ಮನು ದೇವತೆಗಳನ್ನು, ಪಿತೃಗಳನ್ನು, ಮಾನವರನ್ನು ಸೃಷ್ಟಿಸುತ್ತಾನೆ.

ಲೋಕಾನ್ನದೀಃ ಸಮುದ್ರಾಂಶ್ಚ ದಿಶಃ ಶೈಲಾನ್ ವನಸ್ಪತೀನ್ ।
ನರಕಿನ್ನರರಕ್ಷಾಂಸಿ ವಯಃಪಶುಮೃಗೋರಗಾನ್ ।
ಅವ್ಯಯಂ ಚ ವ್ಯಯಂ ಚೈವ ದ್ವಯಂ ಸ್ಥಾವರಜಂಗಮಮ್ ॥೮೪॥

ಲೋಕಗಳನ್ನು, ನದಿಗಳನ್ನು, ಸಮುದ್ರಗಳನ್ನು, ದಿಕ್ಕುಗಳನ್ನು, ಪರ್ವತಗಳನ್ನು, ವೃಕ್ಷಗಳನ್ನು, ನರರನ್ನು, ಕಿನ್ನರರನ್ನು, ರಾಕ್ಷಸರನ್ನು, ಪಕ್ಷಿಗಳನ್ನು, ಪಶುಗಳನ್ನು, ಮೃಗಗಳನ್ನು, ಸರ್ಪಗಳನ್ನೆಲ್ಲವನ್ನೂ ನಾಶಹೊಂದುವ, ನಾಶ ಹೊಂದದೆ ಇರುವ ಎಂಬ ಸಮಸ್ತ ಸ್ಥಾವರ-ಜಂಗಮಗಳನ್ನು ಸೃಷ್ಟಿಸುತ್ತಾನೆ.

ತೇಷಾಂ ಯೇ ಯಾನಿ ಕರ್ಮಾಣಿ ಪ್ರಾಕ್ಸೃಷ್ಟ್ಯಾಂ ಪ್ರತಿಪೇದಿರೇ ।
ತಾನ್ಯೇವ ಪ್ರತಿಪದ್ಯಂತೇ ಸೃಜ್ಯಮಾನಾಃ ಪುನಃ ಪುನಃ ॥೮೫॥

ಹೀಗೆ ಸೃಷ್ಟಿ ಮಾಡಿದ ಪದಾರ್ಥಗಳಲ್ಲಿ ಪ್ರತಿಯೊಂದೂ ತನಗೆ ಸಂಬಂಧಿಸಿದ ಪೂರ್ವಸೃಷ್ಟಿಯಲ್ಲಿ ಉಂಟಾದ ಕರ್ಮಗಳನ್ನು ಅನುಸರಿಸಿರುತ್ತವೆ. ಆ ಕರ್ಮ ಸಂಬಂಧದಿಂದಲೇ ಮುಂದಿನ ಮುಂದಿನ ಸೃಷ್ಟಿಯಲ್ಲಿಯೂ ಹುಟ್ಟನ್ನು ಪಡೆಯುತ್ತಾ ಪುನಃ ಪುನಃ ಈ ಕರ್ಮಸಂಬಂಧದಿಂದಲೇ ಮತ್ತೂ ಹುಟ್ಟನ್ನು ಪಡೆಯುತ್ತವೆ.

ಹಿಂಸ್ರಾಹಿಂಸ್ರೇ ಮೃದುಕ್ರೂರೇ ಧರ್ಮಾಧರ್ಮೇ ಋತಾನೃತೇ ।
ಅತೋ ಯನ್ಮನ್ಯತೇ ಧಾತಾ ತಸ್ಮಾತ್ತತ್ತಸ್ಯ ರೋಚತೇ ॥೮೬॥

ಹಿಂಸೆ, ಅಹಿಂಸೆ, ಸತ್ಯ , ಸುಳ್ಳು, ಮೃದು, ಕ್ರೌರ್ಯ, ಧರ್ಮ, ಅಧರ್ಮ ಎಂಬ ವಿರುದ್ಧ ಗುಣಗಳಲ್ಲಿ ಒಂದೊಂದನ್ನು ಹೊಂದಿಸಿ ಪುನಃ ಪುನಃ ಹೊಸ ಸೃಷ್ಟಿಯಲ್ಲಿಯೂ ಅವೇ ಅವೇ ಗುಣಗಳನ್ನು ಹೊಂದುವಂತೆ ಮಾಡುತ್ತಾನೆ. ಆದ್ದರಿಂದಲೇ ಆಯಾ ಗುಣಗಳು ಕರ್ಮದ ಹಿಂದಿನ ಸಂಸ್ಕಾರದಿಂದ ಆಯಾ ವ್ಯಕ್ತಿಗಳಿಗೆ ಪ್ರಿಯವಾಗಿರುತ್ತವೆ.

ಮಹಾಭೂತೇಷು ನಾನಾತ್ವಮಿಂದ್ರಿಯಾರ್ಥೇಷು ಮೂರ್ತಿಷು ।
ವಿನಿಯೋಗಂ ಚ ಭೂತಾನಾಂ ಧಾತೈವ ವಿದಧಾತ್ಯುತ ॥೮೭॥

ಸೃಷ್ಟಿಕರ್ತನಾದ ಚತುರ್ಮುಖನು ಆಕಾಶಾದಿ ಮಹಾಭೂತಗಳಲ್ಲಿಯೂ, ಇಂದ್ರಿಯ ವಿಷಯಗಳೆನಿಸಿದ ಶಬ್ದಾದಿಗಳಲ್ಲಿಯೂ, ಶರೀರಾಕೃತಿಗಳಲ್ಲಿಯೂ ತೋರುವ ನಾನಾ ವಿಧವಾದ ಭೇದಗಳನ್ನು ಕಲ್ಪಿಸಿ, ಪ್ರಾಣಿಗಳಿಗೆ ಅವುಗಳ ವಿವಿಧ ಉಪಯೋಗಗಳನ್ನು ಸೃಷ್ಟಿಸುತ್ತಾನೆ.

ಕೇಚಿತ್ ಪುರುಷಕಾರಂ ತು ಪ್ರಾಹುಃ ಕರ್ಮವಿದೋ ಜನಾಃ ।
ದೈವಮಿತ್ಯಪರೇ ವಿಪ್ರಾಃ ಸ್ವಭಾವಂ ಭೂತಚಿಂತಕಾಃ ॥೮೮॥

ಕರ್ಮಗಳ ಗತಿಯನ್ನು ತಿಳಿದ ಕೆಲವರು ಫಲಪ್ರಾಪ್ತಿಗೆ ಪೌರುಷವೇ ಪ್ರಧಾನ ಎನ್ನುತ್ತಾರೆ. ಕೆಲವರು ಅದೃಷ್ಟವು ಕಾರಣ ಎನ್ನುತ್ತಾರೆ. ಇನ್ನು ಕೆಲವರು ಸ್ವಭಾವವೇ ಎಲ್ಲದಕ್ಕೂ ಕಾರಣ ಎನ್ನುತ್ತಾರೆ.

ಪೌರುಷಂ ಕರ್ಮ ದೈವಂ ಚ ಫಲವೃತ್ತಿಸ್ವಭಾವತಃ ।
ತ್ರಯ ಏತೇऽಪೃಥಗ್ಭೂತಾ ನವಿವೇಕಂ ತು ಕೇಚನ ॥೮೯॥

ಆದರೆ ಪೌರುಷವಾಗಲಿ, ಕರ್ಮವಾಗಲಿ, ಅದೃಷ್ಟವಾಗಲಿ ತಮ್ಮ ತಮ್ಮ ಫಲಗಳನ್ನು ಪ್ರತ್ಯೇಕವಾಗಿ ನೀಡಲು ಇವುಗಳಿಗೆ ಸಾಧ್ಯವಾಗುವುದಿಲ್ಲ. ಎಲ್ಲವೂ ಸೇರಿ ಫಲ ಪ್ರಾಪ್ತಿಗೆ ಸಾಧಕವಾಗುತ್ತವೆ ಎಂದು ಕೆಲವರು ಹೇಳುತ್ತಾರೆ.

ಏವಮೇತಚ್ಚ ನೈವಂ ಚ ಯದ್ಭೂತಂ ಸೃಜತೇ ಜಗತ್ ।
ಕರ್ಮಸ್ಥಾ ವಿಷಮಂ ಬ್ರೂಯುಃ ಸತ್ತ್ವಸ್ಥಾಃ ಸಮದರ್ಶಿನಃ ॥೯೦॥

ಈ ಜಗತ್ತಿನ ಸೃಷ್ಟಿಗೆ ದೈವವು ಕಾರಣ, ಕರ್ಮವು ಕಾರಣ. ಇದರಿಂದ ಭೂತಗಳ ಸೃಷ್ಟಿಯಾಗುತ್ತದೆ ಎಂದು ಕರ್ಮವನ್ನು ಆಶ್ರಯಿಸಿದ ಜನರು ಹೀಗೆ ಹೇಳುತ್ತಾರೆ. ಆದರೆ

ಭಗವನ್ನಿಷ್ಠರಾದ ತತ್ತ್ವಜ್ಞಾನಿಗಳು, ಸಮದರ್ಶಿಗಳು ಭಗವಂತನೇ ಕಾರಣ ಎಂದು ಹೇಳುತ್ತಾರೆ.

ತತೋ ನಿಃಶ್ರೇಯಸಂ ಜಂತೋಸ್ತಸ್ಯ ಮೂಲಂ ದಮಃ ಶಮಃ ।
ತೇನ ಸರ್ವಾನವಾಪ್ನೋತಿ ಯಾನ್ ಕಾಮಾನ್ ಮನಸೇಚ್ಛತಿ ॥೯೧॥

ಅಂತಹ ಭಗವಂತನನ್ನು ಆಶ್ರಯಿಸಿದ ಶ್ರೇಯಸ್ಸನ್ನು ಜೀವನು ಪಡೆಯಬೇಕಾದರೆ ಅದಕ್ಕೆ ಮೂಲವಾದ ಶಮ-ದಮಾದಿಗಳನ್ನು ಹೊಂದಬೇಕು. ಶಮ-ದಮಾದಿಗಳಿಂದ ಏನೇನು ಮನಸ್ಸಿನಲ್ಲಿ ಬಯಸುತ್ತಾನೋ ಅದೆಲ್ಲವನ್ನೂ ಹೊಂದುತ್ತಾನೆ.

ತಪಸಾ ತದವಾಪ್ನೋತಿ ಯದ್ಭೂತಂ ಸೃಜತೇ ಜಗತ್ ।
ಸ ತದ್ಭೂತಶ್ಚ ಸರ್ವೇಷಾಂ ಭೂತಾನಾಂ ಭವತಿ ಪ್ರಭುಃ ॥೯೨॥

ತಪಸ್ಸಿನಿಂದ ಜಗತ್ಕರ್ತನಾದ ಭಗವಂತನನ್ನು ಹೊಂದುತ್ತಾನೆ. ಹಾಗೆ ಭಗವಂತನನ್ನು ಹೊಂದಿದ ವ್ಯಕ್ತಿಯು ಭೂತಗಳಿಗೆಲ್ಲ ಪ್ರಭುವೆನಿಸುತ್ತಾನೆ.

ಋಷಯಸ್ತಪಸಾ ವೇದಾನಧ್ಯೈಷಂತ ದಿವಾನಿಶಮ್ ।
ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ॥೯೩॥

ಋಷಿಗಳು ತಪಸ್ಸಿನಿಂದಲೇ ಹಗಲು-ರಾತ್ರಿ ವೇದಾಧ್ಯಯನವನ್ನು ಮಾಡುತ್ತಾರೆ. ಆರಂಭದಲ್ಲಿ ಸ್ವಯಂಭುವಾದ ಬ್ರಹ್ಮನು ಆದ್ಯಂತರಹಿತವಾದ ನಿತ್ಯವಾದ ವೇದಗಳನ್ನು ಹೊರಹಾಕಿದನು.

ನಾಮಧೇಯಾನಿ ಚರ್ಷೀಣಾಂ ಯಾಶ್ಚ ವೇದೇಷು ಸೃಷ್ಟಯಃ ।
ಶರ್ವರ್ಯಂತೇಷು ಜಾತಾನಾಂ ತಾನ್ಯೇವೈಭ್ಯೋ ದದಾತಿ ಸಃ ॥೯೪॥

ನಾನಾ ಬಗೆಯ ಕರ್ಮಗಳು, ಋಷಿಯ ನಾಮಗಳು, ಸೃಷ್ಟಿಗೊಂಡ ಎಲ್ಲಾ ವಸ್ತುಗಳು, ಭೂತಗಳ ನಾನಾ ರೂಪಗಳು, ಅವುಗಳ ಕರ್ಮಪ್ರವೃತ್ತಿಗಳು ವೇದದಿಂದಲೇ ಪ್ರಕಟಗೊಂಡವು.

ನಾಮಭೇದಸ್ತಪಃಕರ್ಮಯಜ್ಞಾಖ್ಯಾ ಲೋಕಸಿದ್ಧಯಃ ।
ಆತ್ಮಸಿದ್ಧಿಸ್ತು ವೇದೇಷು ಪ್ರೋಚ್ಯತೇ ದಶಭಿಃ ಕ್ರಮೈಃ ॥೯೫॥

ಭಗವಂತನು ಎಲ್ಲವನ್ನೂ ವೇದಶಬ್ದದಿಂದಲೇ ಆರಂಭದಲ್ಲಿ ನಿರ್ಮಿಸಿದನು. ಋಷಿ ನಾಮಗಳೇ ಮೊದಲಾದ ಸೃಷ್ಟಿಗೊಂಡಿರುವ ಸಮಸ್ತ ಪದಾರ್ಥಗಳು ವೇದಗಳಲ್ಲಿಯೇ ಅಡಕವಾಗಿವೆ. ಬ್ರಹ್ಮನು ತನ್ನ ರಾತ್ರಿಕಾಲವು ಮುಗಿದು ಪ್ರಾತಃಕಾಲ ಪ್ರಾಪ್ತವಾದ ಕೂಡಲೇ ಪೂರ್ವಕಲ್ಪದಲ್ಲಿದ್ದ ಸೂಕ್ಷ್ಮ ಪ್ರಕೃತಿಯನ್ನು ಅನುಸರಿಸಿ ಜಗತ್ತನ್ನು ಸೃಷ್ಟಿಸುತ್ತಾನೆ.

ಯದುಕ್ತಂ ವೇದವಾದೇಷು ಗಹನಂ ವೇದದೃಷ್ಟಿಭಿಃ ।
ತದಂತೇಷು ಯಥಾಯುಕ್ತಂ ಕ್ರಮಯೋಗೇನ ಲಕ್ಷ್ಯತೇ ॥೯೬॥

ಆತ್ಮಸಿದ್ಧಿಗಾಗಿ ವೇದಗಳಲ್ಲಿ ಹತ್ತು ಕ್ರಮಗಳು ಹೇಳಲ್ಪಡುತ್ತವೆ. ನಾಮ ಭೇದಗಳು, ತಪಸ್ಸು, ಕರ್ಮ, ಯಜ್ಞ, ವೇದಾಧ್ಯಯನ, ಗೃಹಸ್ಥವೃತ್ತಿ, ವಾನಪ್ರಸ್ಥಾಶ್ರಮ, ಯಶಸ್ಕರ ಕಾರ್ಯಗಳು, ವಿವಿಧ ಧ್ಯಾನಗಳು, ಐಹಿಕಸಿದ್ಧಿ, ಮೋಕ್ಷಸಿದ್ಧಿ ಎಂಬುದಾಗಿ.

ಕರ್ಮಜೋಯಂ ಪೃಥಗ್ಭಾವೋ ದ್ವಂದ್ವಯುಕ್ತೋ ವಿಯೋಗಿನಃ ।
ಆತ್ಮಸಿದ್ಧಿಸ್ತು ವಿಜ್ಞಾತಾ ಜಹಾತಿ ಪ್ರಾಯಶೋ ಬಲಮ್ ॥೯೭॥

ದ್ವೇ ಬ್ರಹ್ಮಣೇ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥೯೮॥

ವೇದಜ್ಞರು ವೇದದಲ್ಲಿ ನಿರೂಪಿಸಿದ ಆ ಪರಬ್ರಹ್ಮನನ್ನು ಈ ಹತ್ತು ಕ್ರಮಗಳನ್ನು ಅನುಷ್ಠಾನ ಮಾಡುವುದರಿಂದ ತಿಳಿಯಬಹುದು. ಜೀವನು ಕರ್ಮದಿಂದಾಗಿ ಈ ಭಿನ್ನವಾದ ಪ್ರಕೃತಿಯ ಸ್ಥಿತಿಯನ್ನು ಹೊಂದಿರುತ್ತಾನೆ. ಸುಖ-ದುಃಖಗಳಲ್ಲಿ ಕೂಡಿರುತ್ತಾನೆ. ಯಾವಾಗ ಪರಮಾತ್ಮನ ಜ್ಞಾನವನ್ನು ಹೊಂದುತ್ತಾನೋ ಆಗ ಈ ಪ್ರಕೃತಿಯ ಬಂಧನಗಳನ್ನು ಬಿಡುತ್ತಾನೆ. ಆದ್ದರಿಂದ ಎರಡು ಬ್ರಹ್ಮಗಳನ್ನು ತಿಳಿದುಕೊಳ್ಳಬೇಕು. ಒಂದು ಶಬ್ದಬ್ರಹ್ಮನೆನಿಸಿದ ವೇದಗಳು, ಪರಬ್ರಹ್ಮನೆನಿಸಿದ ಭಗವಂತ. ಶಬ್ದಬ್ರಹ್ಮನೆನಿಸಿದ ವೇದಗಳಲ್ಲಿ ನಿಷ್ಣಾತನಾದವನು ಪರಬ್ರಹ್ಮನನ್ನು ಹೊಂದುತ್ತಾನೆ.

ಆಲಂಭಯಜ್ಞಾಃ ಕ್ಷತ್ರಸ್ಯ ಹವಿರ್ಯಜ್ಞಾ ವಿಶಸ್ತಥಾ ।
ಪರಿಚಾರಯಜ್ಞಾಃ ಶೂದ್ರಾಸ್ತು ತಪೋಯಜ್ಞಾ ದ್ವಿಜಾತಯಃ ॥೯೯॥

ಕ್ಷತ್ರಿಯರಿಗೆ ಯಜ್ಞದಲ್ಲಿ ನಡೆಸುವ ಹಿಂಸೆಯು ವಿಧಿಸಲ್ಪಟ್ಟಿದೆ. ವೈಶ್ಯರಿಗೆ ಕೃಷಿಯೇ ಯಜ್ಞವು. ಶೂದ್ರರಿಗೆ ಮೂರು ವರ್ಣದವರ ಸೇವೆಯೇ ಯಜ್ಞವು. ಆದರೆ ಬ್ರಾಹ್ಮಣರಿಗೆ ಬ್ರಹ್ಮೋಪಾಸನೆ ಎಂಬ ತಪಸ್ಸೇ ವಿಧಿಸಲ್ಪಟ್ಟಿದೆ.

ತ್ರೇತಾಯುಗೇ ವಿಧಿಸ್ತ್ವೇಷಾಂ ಯಜ್ಞಾನಾಂ ನ ಕೃತೇ ಯುಗೇ ।
ದ್ವಾಪರೇ ವಿಪ್ಲವಂ ಯಾಂತಿ ಯಜ್ಞಾಃ ಕಲಿಯುಗೇ ತಥಾ ॥೧೦೦॥

ಕೃತಯುಗಕ್ಕೆ ಯಜ್ಞಗಳು ವಿಹಿತವಲ್ಲ. ತ್ರೇತಾಯುಗದಲ್ಲಿ ಯಜ್ಞವು ಅವಶ್ಯವಾಗಿದೆ. ದ್ವಾಪರ ಮತ್ತು ಕಲಿಯುಗದಲ್ಲಿ ಯಜ್ಞಗಳ ರೀತಿಗಳೇ ಹಾಳಾಗುತ್ತವೆ.

ಅಪೃಥಗ್ಧರ್ಮಿಣೋ ಮರ್ತ್ಯಾ ಋಕ್ಸಾಮಾನಿ ಯಜೂಂಷಿ ಚ ।
ಕಾಮ್ಯಾಂ ಪುಷ್ಟಿಂ ಪೃಥಗ್ದೃಷ್ಟ್ವಾ ತಪೋಭಿಸ್ತಪ ಏವ ಚ ॥೧೦೧॥

ಕೃತಯುಗದಲ್ಲಿ ಮಾನವರು ಭಗವಂತನನ್ನು ಬಿಟ್ಟು ಬೇರೆ ಯಾವ ಧರ್ಮಗಳನ್ನೂ ಉಪಾಸನೆ ಮಾಡದೆ ಕಾಮ್ಯಕರ್ಮಗಳಲ್ಲಿ ತಿರಸ್ಕಾರವನ್ನು ಹೊಂದಿ ಋಗ್ವೇದ, ಯಜುರ್ವೇದ, ಸಾಮವೇದಗಳೊಡನೆ ಭಗವಂತನನ್ನೇ ಚಿಂತಿಸುತ್ತಿದ್ದರು. ಕಾಮ್ಯ ಕರ್ಮಗಳನ್ನು ಅನುಷ್ಠಾನ ಮಾಡುತ್ತಿರಲಿಲ್ಲ.

ತ್ರೇತಾಯಾಂ ತು ಸಮಸ್ತಾಸ್ತೇ ಪ್ರಾದುರಾಸನ್ ಮಹಾಬಲಾಃ ।
ಸಂಯಂತಾರಃ ಸ್ಥಾವರಾಣಾಂ ಜಂಗಮಾನಾಂ ಚ ಸರ್ವಶಃ ॥೧೦೨॥

ತ್ರೇತಾಯಾಂ ಸಂಹತಾ ಹ್ಯೇತೇ ಯಜ್ಞಾ ವರ್ಣಾಸ್ತಥೈವ ಚ ।
ಸಂರೋಧಾದಾಯುಷಸ್ತ್ವೇತೇ ವ್ಯಸ್ಯಂತೇ ದ್ವಾಪರೇ ಯುಗೇ ॥೧೦೩॥

ತ್ರೇತಾಯುಗದಲ್ಲಿ ವೇದಗಳು ಜನರನ್ನು ನಿರ್ಬಂಧಿಸುವ ಕಠಿಣ ವಿಧಿಗಳಾಗಿ ಇವೆ ಎಂಬುದಾಗಿ ಜನರು ಭಾವಿಸಿದರು. ಸ್ಥಾವರ-ಜಂಗಮಗಳನ್ನೆಲ್ಲ ನಿರ್ಬಂಧಿಸುವ ವಿಧಿಗಳು ವೇದಗಳು ಎಂದು ಭಾವಿಸಿದರು. ಮತ್ತು ಆ ಯುಗದಲ್ಲಿ ವೇದಗಳು, ಯಜ್ಞಗಳು, ವರ್ಣಾಶ್ರಮಗಳು, ಒಂದಕ್ಕೊಂದು ಪೂರಕವಾಗಿ ಒಟ್ಟಾಗಿ ಇದ್ದವು. ದ್ವಾಪರ ಯುಗದಲ್ಲಿ ಪ್ರಾಣಿಗಳ ಆಯುಃಪ್ರಮಾಣವು ತಗ್ಗುತ್ತಾ ಬಂದು ಅವೆಲ್ಲವೂ ವಿಭಾಗವಾಗುತ್ತಾ ಬಂದವು.

ದೃಶ್ಯಂತೇ ನ ಚ ದೃಶ್ಯಂತೇ ವೇದಾಃ ಕಲಿಯುಗೇऽಖಿಲಾಃ ।
ಉತ್ಸೀದಂತೇ ಸಯಜ್ಞಾಶ್ಚ ಕೇವಲಾ ಧರ್ಮಸೇತವಃ ॥೧೦೪॥

ಕಲಿಯುಗದಲ್ಲಾದರೂ ವೇದಗಳೇ ನಿರಾಕೃತವಾಗುತ್ತಾ ಬಂದಿವೆ. ಯಜ್ಞಗಳು ನಶಿಸುತ್ತಿವೆ. ಅಧ್ಯಯನಯಜ್ಞ, ಧರ್ಮಾದಿಗಳೆಲ್ಲ ಕಲಿಯುಗದಲ್ಲಿ ಕಂಡೂ ಕಾಣದಂತೆ ಇರುತ್ತವೆ.

ಕೃತೇ ಯುಗೇ ಯಸ್ತು ಧರ್ಮೋ ಬ್ರಾಹ್ಮಣೇಷು ಪ್ರದೃಶ್ಯತೇ ।
ಆತ್ಮವತ್ಸು ತಪೋವತ್ಸು ಶ್ರುತವತ್ಸು ಪ್ರತಿಷ್ಠಿತಃ ॥೧೦೫॥

ಕೃತಯುಗದಲ್ಲಿ ಧರ್ಮವು ಸಾಮಾನ್ಯವಾಗಿ ಶುದ್ಧಾತ್ಮರು, ತಪೋಧನರು, ಶ್ರುತವಂತರೂ ಆದ ಬ್ರಾಹ್ಮಣರಲ್ಲಿ ಕಾಣಿಸುತ್ತವೆ.

ಸಧರ್ಮಃ ಪೈತಿ ಸಂಯೋಗಂ ಯಥಾಧರ್ಮಂ ಯುಗೇ ಯುಗೇ ।
ವಿಕ್ರಿಯಂತೇ ಸ್ವಧರ್ಮಸ್ಥಾ ವೇದವಾದಾ ಯಥಾಯುಗಮ್ ॥೧೦೬॥

ಕೃತಯುಗದಲ್ಲಿದ್ದ ಧರ್ಮವು ಮುಂದಿನ ಯುಗಗಳಲ್ಲಿ ಅಧರ್ಮ ಪ್ರಾಬಲ್ಯದಿಂದ ಪೀಡಿಸಲ್ಪಟ್ಟು ತಗ್ಗುತ್ತಾ ಬರುತ್ತವೆ. ಅನೂಚಾನವಾಗಿ ಬಂದಿರುವ ವೇದಗಳು ಬಹು ಮುಖವಾಗಿ ವಿಕಾರವನ್ನು ಹೊಂದುತ್ತವೆ.

ಯಥಾ ವಿಶ್ವಾನಿ ಭೂತಾನಿ ವೃಷ್ಟ್ಯಾ ಭೂಯಾಂಸಿ ಪ್ರಾವೃಷಿ ।
ಸೃಜ್ಯಂತೇ ಜಂಗಮಸ್ಥಾನಿ ತಥಾ ಧರ್ಮಾ ಯುಗೇ ಯುಗೇ ॥೧೦೭॥

ಯಾವ ರೀತಿಯಾಗಿ ಮಳೆಗಾಲದಲ್ಲಿ ವೇಗವಾಗಿ ಬೀಳುವ ಮಳೆಯಿಂದ ಭೂಮಿಯಲ್ಲಿ ನಾನಾ ವಿಧವಾದ ಸಸ್ಯವರ್ಗಗಳು ಒಳಕೆ ಒಡೆದು ತಲೆದೋರುತ್ತವೆಯೋ ಹಾಗೆ ಪ್ರತಿ ಯುಗದಲ್ಲಿಯೂ ಹೊಸಹೊಸ ವಿಧವಾದ ಧರ್ಮಗಳು ತಲೆ ಎತ್ತುತ್ತವೆ.

ಯಥರ್ತುಷ್ವೃತುಲಿಂಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯಂತೇ ತಾನಿ ತಾನ್ಯೇವ ತಥಾ ಬ್ರಹ್ಮಾಹರಾದಿಷು ॥೧೦೮॥

ಒಂದು ಸಂವತ್ಸರದಲ್ಲಿ ಆಯಾ ಋತುಗಳು ಬಂದಾಗ ಸಸ್ಯವರ್ಗಗಳು ಹಿಂದಿನ ಋತುವಿನಲ್ಲಿದ್ದ ಲಕ್ಷಣಗಳನ್ನೆಲ್ಲ ಹೇಗೆ ಹೊಂದುತ್ತವೋ ಅದರಂತೆ ಚತುರ್ಮುಖ ಬ್ರಹ್ಮನ ದಿವಸದಲ್ಲಿ ಆಯಾ ಯುಗಗಳಲ್ಲಿ ಬರುವ ಧರ್ಮಗಳು ಪುನಃ ಪುನಃ ಅದೇ ಅದೇ ಯುಗಗಳಲ್ಲಿ ಹಿಂದಿನ ಯುಗಗಳಂತೆಯೇ ನಡೆಯುತ್ತವೆ.

ವಿಹಿತಂ ಕಾಲನಾನಾತ್ವಮನಾದಿನಿಧನಂ ತಥಾ ।
ಕೀರ್ತಿತಂ ಯತ್ ಪುರಸ್ತಾತ್ತೇ ತತ್ತಸ್ತೇ ಚಾತ್ತಿ ಚ ಪ್ರಜಾಃ ॥೧೦೯॥

ಕುಮಾರನೇ, ಹೀಗೆ ಜಗತ್ತಿನಲ್ಲಿ ನಾನಾ ವಿಧ ವಿಕಾರಗಳನ್ನು ಪ್ರಕಟಪಡಿಸುತ್ತಾ ಆದ್ಯಂತವಿಲ್ಲದೆ ನಡೆಯುತ್ತಿರುವ, ಕಾಲಾಂತರ್ಯಾಮಿಯಾದ ಭಗವಂತನ ವ್ಯಾಪಾರವನ್ನು ಮೊದಲೇ ನಿನಗೆ ತಿಳಿಸಿದ್ದೇನೆ.

ದಧಾತಿ ಪ್ರಭವೇ ಸ್ಥಾನಂ ಭೂತಾನಾಂ ಸಂಯಮೋ ಯಮಃ ।
ಸ್ವಭಾವೇನೈವ ವರ್ತಂತೇ ದ್ವಂದ್ವಯುಕ್ತಾನಿ ಭೂರಿಶಃ ॥೧೧೦॥

ಈ ಕಾಲನಾಮಕನಾದ ಭಗವಂತನೇ ಎಲ್ಲರನ್ನೂ ಹುಟ್ಟಿಸುತ್ತಾನೆ, ಸಂಹರಿಸುತ್ತಾನೆ. ಶೀತೋಷ್ಣಾದಿ ದ್ವಂದ್ವಗಳಿಗೆ ಒಳಗಾದ ಸಮಸ್ತ ಭೂತಗಳನ್ನು ಧರಿಸುವವನು ಕಾಲನೇ ಆಗಿದ್ದಾನೆ.

ಸರ್ಗಃ ಕಾಲಃ ಕ್ರಿಯಾ ವೇದಾಃ ಕರ್ತಾ ಕಾರ್ಯಂ ಕ್ರಿಯಾ ಫಲಮ್ ।
ಪ್ರೋಕ್ತಂ ತೇ ಪುತ್ರ ಸರ್ವಂ ವೈ ಯನ್ಮಾಂ ತ್ವಂ ಪರಿಪೃಚ್ಛಸಿ ॥೧೧೧॥

ಮಗನೇ, ನೀನು ಕೇಳಿದ ಭೂತಸೃಷ್ಟಿ, ಕಾಲಸ್ವರೂಪ, ಯಜ್ಞಾದಿ ಕ್ರಿಯೆಗಳು, ವೇದಗಳು, ಜಗತ್ಕರ್ತಾ, ಕಾರ್ಯ, ಕ್ರಿಯಾಫಲ ಎಲ್ಲವನ್ನೂ ನಿನಗೆ ತಿಳಿಸಿರುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆಂಟನೆಯ ಅಧ್ಯಾಯ

ಬ್ರಾಹ್ಮಪ್ರಳಯ ಮತ್ತು ಮಹಾಪ್ರಳಯಗಳ ವರ್ಣನೆ.

ವ್ಯಾಸಃ

ಪ್ರತ್ಯಾಹಾರಂ ತು ವಕ್ಷ್ಯಾಮಿ ಶರ್ವರ್ಯಾದೌ ಗತೇऽಹನಿ ।
ಯಥೇದಂ ಕುರುತೇಧ್ಯಾತ್ಮಂ ಸುಸೂಕ್ಷ್ಮಂ ವಿಶ್ವಮೀಶ್ವರಃ ॥೧॥

ಶುಕಮುನಿಯೇ, ಈಗ ನಾನು ನಿನಗೆ ಬ್ರಹ್ಮನ ಹಗಲು ಕಳೆದ ಬಳಿಕ ರಾತ್ರಿಯು ಪ್ರಾರಂಭವಾಗುವುದಕ್ಕಿಂತ ಮೊದಲು ಬ್ರಹ್ಮನಿಂದ ಆದ ಸೃಷ್ಟಿಯು ಯಾವ ರೀತಿಯಲ್ಲಿ

ಲಯ ಹೊಂದುತ್ತದೆ, ಭಗವಂತನು ಸ್ಥೂಲವಾದ ಈ ಜಗತ್ತನ್ನು ಅತ್ಯಂತ ಸೂಕ್ಷ್ಮವನ್ನಾಗಿಸಿ ತನ್ನಲ್ಲಿ ಹೇಗೆ ಇಟ್ಟುಕೊಳ್ಳುತ್ತಾನೆ ಎಂಬ ವಿಷಯವನ್ನು ಹೇಳುತ್ತೇನೆ.

ದಿವಿ ಸೂರ್ಯಾಸ್ತಥಾ ಸಪ್ತ ದಹಂತಿ ಶಿಖಿನೋಽರ್ಚಿಷಾ ।
ಸರ್ವಮೇತತ್ತದಾರ್ಚಿರ್ಭಿಃ ಪೂರ್ಣಂ ಜಾಜ್ವಲ್ಯತೇ ಜಗತ್ ॥೨॥

ಪ್ರಳಯ ಕಾಲದಲ್ಲಿ ಆಕಾಶದಲ್ಲಿ ಏಳು ಮಂದಿ ಸೂರ್ಯರು ಏಕ ಕಾಲದಲ್ಲಿ ಉದಯಿಸಿ ಭೂಮಂಡಲವನ್ನು ಸುಡುತ್ತಾರೆ. ಏಳು ಜ್ವಾಲೆಗಳು ವಿಶ್ವವನ್ನೇ ಸುಡಲು ಆರಂಭಿಸುತ್ತವೆ. ಈ ಸಂಪೂರ್ಣ ಜಗತ್ತು ಆ ಸಮಯದಲ್ಲಿ ಸೂರ್ಯನ ಪ್ರಖರವಾದ ಕಿರಣಗಳಿಂದ, ಅಗ್ನಿಯ ಜ್ವಾಲೆಗಳಿಂದ ಸಮಗ್ರವಾಗಿ ಸುಟ್ಟು ಹೋಗುತ್ತದೆ.

ಪೃಥಿವ್ಯಾಂ ಯಾನಿ ಭೂತಾನಿ ಜಂಗಮಾನಿ ಧ್ರುವಾಣಿ ಚ ।
ತಾನ್ಯೇವಾಗ್ರೇ ಪ್ರಲೀಯಂತೇ ಭೂಮಿತ್ವಮುಪಯಾಂತಿ ಚ ॥೩॥

ಭೂಮಂಡಲದಲ್ಲಿ ಯಾವ ಚರಾಚರ ಪ್ರಾಣಿಗಳಿವೆಯೋ ಅವೆಲ್ಲವೂ ನಾಶವನ್ನೇ ಹೊಂದಿ ಮಣ್ಣಾಗಿ ಬಿಡುತ್ತವೆ.

ತತಃ ಪ್ರಲೀನೇ ಸರ್ವಸ್ಮಿನ್ ಸ್ಥಾವರೇ ಜಂಗಮೇ ತಥಾ ।
ಅಕಾಷ್ಠಾ ನಿಸ್ತೃಣಾ ಭೂಮಿರ್ದೃಶ್ಯತೇ ಕೂರ್ಮಪೃಷ್ಠವತ್ ॥೪॥

ಹೀಗೆ ಸಮಸ್ತ ಚರಾಚರ ಪ್ರಾಣಿಗಳೆಲ್ಲವೂ ಭೂಮಿಯಲ್ಲಿ ಮಣ್ಣಾಗಲು ಗಿಡ, ಮರ, ಬಳ್ಳಿಗಳಿಂದಲೂ, ಗರಿಕೆ ಮೊದಲಾದ ಹುಲ್ಲುಗಳಿಂದಲೂ ರಹಿತವಾದ ಭೂಮಿಯು ಆಮೆಯ ಬೆನ್ನಿನಂತೆ ಬೋಳು ಬೋಳಾಗಿ ಕಾಣುತ್ತದೆ.

ಭೂಮೇರಪಿ ಗುಣಂ ಗಂಧಮಾಪ ಆದದತೇ ಯದಾ ।
ಅತ್ತಗಂಧಾ ತದಾ ಭೂಮಿಃ ಪ್ರಲಯತ್ವಾಯ ಕಲ್ಪತೇ ॥೫॥

ಭೂಮಿಯ ಗುಣವಾದ ಗಂಧವನ್ನು ನೀರು ಗ್ರಹಿಸುತ್ತದೆ. ಗಂಧಹೀನವಾದ ಭೂಮಿಯು ತನಗೆ ಕಾರಣವಾದ ನೀರಿನಲ್ಲಿ ಲಯ ಹೊಂದಲು ಸಿದ್ಧವಾಗುತ್ತದೆ.

ಆಪಸ್ತತಃ ಪ್ರತಿಷ್ಠಂತಿ ಊರ್ಮಿಮತ್ಯೋ ಮಹಾಸ್ವನಾಃ ।
ಸರ್ವಮೇವೇದಮಾಪೂರ್ಯ ತಿಷ್ಠಂತಿ ಚ ಚರಂತಿ ಚ ॥೬॥

ಬಳಿಕ ದೊಡ್ಡ ದೊಡ್ಡ ಅಲೆಗಳಿಂದ ಭಯಂಕರವಾದ ಶಬ್ದವನ್ನು ಮಾಡುತ್ತಾ ನೀರಿನ ಸಮುದಾಯವು ಸಮಗ್ರ ಭೂಮಂಡಲವನ್ನು ಆವರಿಸುತ್ತದೆ. ಸಮಸ್ತ ವಿಶ್ವವನ್ನೂ ತನ್ನಲ್ಲಿ ಕದಡಿಸಿಬಿಡುತ್ತದೆ.

ಅಪಾಮಪಿ ಗುಣಾಂಸ್ತಾತ ಜ್ಯೋತಿರಾದದತೇ ಯದಾ ।
ಆಪಸ್ತದಾ ಆತ್ತಗುಣಾ ಜ್ಯೋತಿಷ್ಯುಪರಮಂತಿ ಚ ॥೭॥

ನೀರಿನ ಗುಣವಾದ ರಸವನ್ನು ತೇಜಸ್ಸು ಗ್ರಹಿಸುತ್ತದೆ. ರಸದಿಂದ ಹೀನವಾದ ನೀರು ತೇಜಸ್ಸಿನಲ್ಲಿ ಲಯ ಹೊಂದುತ್ತದೆ.

ಯದಾದಿತ್ಯಂ ಸ್ಥಿತಂ ಮಧ್ಯೇ ಗೂಹಂತಿ ಶಿಖಿನೋಽರ್ಚಿಷಃ ।
ಸರ್ವಮೇವೇದಮರ್ಚಿರ್ಭಿಃ ಪೂರ್ಣಂ ಜಾಜ್ವಲ್ಯತೇ ನಭಃ ॥೮॥

ಆಕಾಶದ ಮಧ್ಯದಲ್ಲಿರುವ ಸೂರ್ಯನನ್ನು ಅಗ್ನಿಯ ಏಳು ಜ್ವಾಲೆಗಳು ಯಾವಾಗ ಮುಚ್ಚುತ್ತವೆಯೋ ಆಗ ಆಕಾಶವೆಲ್ಲವೂ ಜ್ವಾಲೆಗಳಿಂದ ತುಂಬಿಕೊಂಡಿರುತ್ತದೆ.

ಜ್ಯೋತಿಷೋಽಪಿ ಗುಣಂ ರೂಪಂ ವಾಯುರಾದದತೇ ಯದಾ ।
ಪ್ರಶಾಮ್ಯತಿ ತದಾ ಜ್ಯೋತಿರ್ವಾಯುರ್ಘೋಧೂಯತೇ ಮಹಾನ್ ॥೯॥

ಅಗ್ನಿಯ ಗುಣವಾದ ರೂಪವನ್ನು ವಾಯುವು ನುಂಗುತ್ತದೆ. ಅಗ್ನಿಯು ವಾಯುವಿನಲ್ಲಿ ಲಯ ಹೊಂದುತ್ತದೆ. ವಾಯುವು ಭಯಂಕರವಾದ ವೇಗದಿಂದ ಆಕಾಶವನ್ನು ಕ್ಷೋಭೆಗೊಳಿಸುತ್ತದೆ.

ತತಸ್ತು ಮೂಲಮಾಸಾದ್ಯ ವಾಯುಃ ಸಂಭವಮಾತ್ಮನಃ ।
ಅಧಶ್ಚೋರ್ಧ್ವಂ ಚ ತಿರ್ಯಕ್ಚ ದೋಧವೀತಿ ದಿಶೋ ದಶ ॥೧೦॥

ಬಳಿಕ ವಾಯುವು ಮಹಾಶಬ್ದದಿಂದ ಕೂಡಿಕೊಂಡು ತನ್ನ ಉತ್ಪತ್ತಿಗೆ ಕಾರಣವಾದ ಆಕಾಶವನ್ನು ಸೇರಿಕೊಂಡು, ಹತ್ತು ದಿಕ್ಕುಗಳಲ್ಲಿಯೂ ಮೇಲೆ ಕೆಳಗೆ, ಎಲ್ಲೆಡೆಯೂ ಬಲವಾಗಿ ಬೀಸುತ್ತದೆ.

ವಾಯೋರಪಿ ಗುಣಂ ಸ್ಪರ್ಶಮಾಕಾಶಂ ಗ್ರಸತೇ ಯದಾ ।
ಪ್ರಶಾಮ್ಯತಿ ತದಾ ವಾಯುಃ ಖಂ ತು ತಿಷ್ಠತಿ ನಾನದತ್ ॥೧೧॥

ವಾಯುವಿನ ಗುಣವಾದ ಸ್ಪರ್ಶವನ್ನು ಆಕಾಶವು ನುಂಗುತ್ತದೆ. ಆ ಗುಣವನ್ನು ಕಳೆದುಕೊಂಡ ವಾಯುವು ಆಕಾಶದಲ್ಲಿ ಲೀನವಾಗಿ ಉಪಶಮನ ಹೊಂದುತ್ತದೆ. ಕೊನೆಗೆ ಆಕಾಶ ಒಂದೇ ಶಬ್ದಗುಣದೊಡನೆ ಉಳಿದುಕೊಳ್ಳುತ್ತದೆ.

ಆಕಾಶಸ್ಯ ಗುಣಂ ಶಬ್ದಮಭಿವ್ಯಕ್ತಾತ್ಮಕಂ ಮನಃ ।
ಮನಸೋ ವ್ಯಕ್ತಮವ್ಯಕ್ತಂ ಶಾಮ್ಯತಿ ಪ್ರತಿಸಂಚರೇ ॥೧೨॥

ಬಳಿಕ ಆಕಾಶದ ಗುಣವಾದ ಶಬ್ದವನ್ನು ಅಭಿವ್ಯಕ್ತಿಗೊಳಿಸಿದ ಮನಸ್ಸು ಆ ಶಬ್ದವನ್ನು ತನ್ನಲ್ಲೇ ವಿಲೀನಗೊಳಿಸಿಕೊಳ್ಳುತ್ತದೆ. ಮನಸ್ತತ್ತ್ವವು ಮಹತ್ತತ್ತ್ವದಲ್ಲಿಯೂ, ಮಹತ್ತತ್ತ್ವವು ಅವ್ಯಕ್ತತತ್ತ್ವದಲ್ಲಿಯೂ ಪ್ರಳಯ ಕಾಲದಲ್ಲಿ ಲಯವನ್ನು ಹೊಂದುತ್ತದೆ.

ತದಾತ್ಮಗುಣಮಾವಿಶ್ಯ ಮನೋ ಗ್ರಸತಿ ಚಂದ್ರಮಾಃ ।
ಮನಸ್ಯುಪರತೇऽಧ್ಯಾತ್ಮಾ ಚಂದ್ರಮಸ್ಯವತಿಷ್ಠತೇ ॥೧೩॥

ಆ ಮಹಾಪ್ರಳಯದ ಕಾಲದಲ್ಲಿ ಮನಸ್ಸಿಗೆ ನಿಯಾಮಕನಾದ ಚಂದ್ರನು ಮನಸ್ಸನ್ನು ನುಂಗುತ್ತಾನೆ. ಮನಸ್ಸು ಶಾಂತವಾದರೂ ಅದು ಚಂದ್ರನಲ್ಲಿ ಪ್ರತಿಷ್ಠಿತವಾಗಿದೆ.

ತಂ ತು ಕಾಲೇನ ಮಹತಾ ಸಂಕಲ್ಪಃ ಕುರುತೇ ವಶೇ ।
ಚಿತ್ತಂ ಗ್ರಸತಿ ಸಂಕಲ್ಪಂ ತಚ್ಚ ಜ್ಞಾನಮನುತ್ತಮಮ್ ॥೧೪॥

ಚಂದ್ರನು ಬಹಳ ಕಾಲದ ಬಳಿಕ ಸಂಕಲ್ಪದ ವಶವಾಗುತ್ತಾನೆ. ಆ ಮನಸ್ಸಿನಲ್ಲಿರುವ ಸಂಕಲ್ಪವನ್ನು ಚಿತ್ತವು ನುಂಗುತ್ತದೆ. ಆ ಚಿತ್ತ ಎಂಬುದೇನಿದೆಯೋ ಅದು ಅನುತ್ತಮವಾದ ಜ್ಞಾನ ಎಂದು ಕರೆಸಿಕೊಳ್ಳುತ್ತದೆ.

ಕಾಲೋ ಗಿರತಿ ವಿಜ್ಞಾನಂ ಕಾಲೋ ಬಲಮಿತಿ ಶ್ರುತಿಃ ।
ಬಲಂ ಕಾಲೋ ಗ್ರಸತಿ ತು ತಂ ವಿದ್ವಾನ್ ಕುರುತೇ ವಶೇ ॥೧೫॥

ಕಾಲವು ವಿಜ್ಞಾನವನ್ನು ನುಂಗುತ್ತದೆ. ಕಾಲನನ್ನು ಶಕ್ತಿಯು ನುಂಗುತ್ತದೆ. ಮಹಾಕಾಲನು ಶಕ್ತಿಯನ್ನು ನುಂಗುತ್ತಾನೆ. ಅಂತಹ ಮಹಾಕಾಲನನ್ನು ವಿದ್ವಾಂಸನಾದವನು ತನ್ನ ವಶದಲ್ಲಿಟ್ಟುಕೊಳ್ಳುತ್ತಾನೆ. ಬ್ರಹ್ಮನೇ ಅಂತಹ ವಿದ್ವಾಂಸನಾಗಿದ್ದಾನೆ.

ಆಕಾಶಸ್ಯ ಯಥಾ ಘೋಷಂ ತಂ ವಿದ್ವಾನ್ ಕುರುತೇऽऽತ್ಮನಿ ।
ತದವ್ಯಕ್ತಂ ಪರಂ ಬ್ರಹ್ಮ ತಚ್ಛಾಶ್ವತಮನುತ್ತಮಮ್ ।
ಏವಂ ಸರ್ವಾಣಿ ಭೂತಾನಿ ಬ್ರಹ್ಮೈವ ಪ್ರತಿಸಂಚರಃ ॥೧೬॥

ಹೇಗೆ ಆಕಾಶದ ಗುಣವಾದ ಶಬ್ದವನ್ನು ವ್ಯಕ್ತ ಮನಸ್ಸು ತನ್ನಲ್ಲಿ ಲಯಗೊಳಿಸಿಕೊಂಡಿತೋ ಅದೇ ರೀತಿ ಮಹಾಕಾಲನು ತನ್ನಲ್ಲಿ ಲಯ ಮಾಡಿಕೊಳ್ಳುತ್ತಾನೆ. ಆ ಅವ್ಯಕ್ತ ತತ್ತ್ವನೆನಿಸಿದ ಪರಬ್ರಹ್ಮನು ಶಾಶ್ವತನೂ, ಅನುತ್ತಮನೂ ಆಗಿದ್ದಾನೆ. ಈ ರೀತಿಯಾಗಿ ಪ್ರತಿ ಪ್ರಳಯ ಕಾಲದಲ್ಲಿಯೂ ಸಮಸ್ತ ಭೂತಗಳು ಕೊನೆಯಲ್ಲಿ ಭಗವಂತನಲ್ಲಿಯೇ ಲಯ ಹೊಂದುತ್ತವೆ.

ಯಥಾವತ್ ಕೀರ್ತಿತಂ ಸಮ್ಯಗೇವಮೇತದಸಂಶಯಮ್ ।
ಬೋಧ್ಯಂ ವಿದ್ಯಾಮಯಂ ದೃಷ್ಟ್ವಾ ಯೋಗಿಭಿಃ ಪರಮಾತ್ಮಭಿಃ ॥೧೭॥

ಶ್ರೇಷ್ಠರಾದ ಯೋಗಿಗಳು ಜ್ಞಾನಮಯನಾದ ಭಗವಂತನನ್ನು ತಮ್ಮ ಜ್ಞಾನ ದೃಷ್ಟಿಯಿಂದ ನೋಡಿ, ಯಥಾರ್ಥವಾಗಿ ಸಂದೇಹ ಬಾರದಂತೆ ವರ್ಣಿಸಿದ್ದಾರೆ. ಅವರು ಹೇಗೆ ಹೇಳಿದ್ದಾರೋ ಅದೇ ರೀತಿ ನಾನು ನಿನಗೆ ಬ್ರಹ್ಮವಸ್ತುವಿನ ಸ್ವರೂಪವನ್ನು ತಿಳಿಸಿದ್ದೇನೆ.

ಏವಂ ವಿಸ್ತಾರಸಂಕ್ಷೇಪೌ ಬ್ರಹ್ಮಾಂಡೋಂತೇ ಪುನಃ ಪುನಃ ।
ಯುಗಸಾಹಸ್ರಯೋರಾದಾವಹ್ನೋ ರಾತ್ರ್ಯಾ ಸ್ತಥೈವ ಚ ॥೧೮॥

ಈ ರೀತಿಯಾಗಿ ಬಾರಿ ಬಾರಿಗೂ ಬ್ರಹ್ಮನ ದಿನದ ಅರ್ಥಾತ್ ಸಾವಿರ ಯುಗಗಳ ಆದಿಯಲ್ಲಿ ಪುನಃ ಸೃಷ್ಟಿಯು ಆರಂಭವಾಗುತ್ತದೆ. ಬ್ರಹ್ಮನ ರಾತ್ರಿಯು ಅಷ್ಟು ಕಾಲ ಇರುತ್ತದೆ. ಪುನಃ ಸಾವಿರ ಯುಗಗಳ ಆದಿಯಲ್ಲಿ ಸೃಷ್ಟಿಯು ಹೀಗೆ ವಿಸ್ತಾರ ಹೊಂದುತ್ತದೆ. ಕೊನೆಯಲ್ಲಿ ಪುನಃ ಸಂಕ್ಷೇಪವನ್ನು ಹೊಂದುತ್ತದೆ. ಈ ವಿಷಯವನ್ನು ಹೀಗೆ ನಿರೂಪಿಸಲಾಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪ್ರತ್ಯಾಹಾರಕಥನಂ ನಾಮ ಅಷ್ಟಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂಬತ್ತನೆಯ ಅಧ್ಯಾಯ

ಬ್ರಾಹ್ಮಣನ ಕರ್ತವ್ಯಗಳು ಮತ್ತು ದಾನದ ಮಹಿಮೆ.

ವ್ಯಾಸಃ

ಭೂತಗ್ರಾಮೇ ನಿಯುಕ್ತಂ ಯತ್ತದೇತತ್ ಕೀರ್ತಿತಂ ಮಯಾ ।
ಬ್ರಾಹ್ಮಣಸ್ಯ ತು ಯತ್ಕೃತ್ಯಂ ತತ್ತೇ ವಕ್ಷ್ಯಾಮಿ ಪೃಚ್ಛತೇ ॥೧॥

ವ್ಯಾಸರು– ಮಗನೇ, ಸಮಸ್ತ ಪಂಚಭೂತಗಳ ವಿಷಯದಲ್ಲಿ ನೀನು ಪ್ರಶ್ನಿಸಿದಂತೆ ಅದಕ್ಕನುಸಾರವಾಗಿ ಉತ್ತರಿಸಿದ್ದೇನೆ. ಎಲ್ಲಾ ವಿಷಯಗಳನ್ನು ಹೇಳಿದ್ದೇನೆ. ಮುಂದೆ ಬ್ರಾಹ್ಮಣನ ಕರ್ತವ್ಯವು ಏನು ಎಂದು ನಿರೂಪಿಸುತ್ತೇನೆ. ಏಕಾಗ್ರ ಮನಸ್ಸಿನಿಂದ ಕೇಳು.

ಜಾತಕರ್ಮಪ್ರಭೃತ್ಯಸ್ಯ ಕರ್ಮಣಾಂ ದಕ್ಷಿಣಾವತಾಮ್ ।
ಕ್ರಿಯಾ ಸ್ಯಾದಾಸಮಾವೃತ್ತೇರಾಚಾರ್ಯೈ ವೇದಪಾರಗೈ ॥೨॥

ಬ್ರಾಹ್ಮಣನು ಮಗು ಹುಟ್ಟಿದ ಬಳಿಕ ತನ್ನ ಮಗನಿಗೆ ಜಾತಕರ್ಮದಿಂದ ಆರಂಭಿಸಿ ಸಮಾವರ್ತನ ಪರ್ಯಂತ ದಕ್ಷಿಣಾಯುಕ್ತವಾದ ಸಮಸ್ತ ಕರ್ಮಗಳನ್ನು ವೇದಜ್ಞರಾದ ಆಚಾರ್ಯ ಪುರುಷರಿಂದ ನಡೆಸಬೇಕು.

ಅಧೀತ್ಯ ವೇದಾನಖಿಲಾನ್ ಗುರುಶುಶ್ರೂಷಣೇ ರತಃ ।
ಗುರೂಣಾಮನೃಣೋ ಭೂತ್ವಾ ಸಮಾವರ್ತೇತ ಯಜ್ಞವಿತ್ ॥೩॥

ಉಪನಯನವಾದ ಬಳಿಕ ಬ್ರಾಹ್ಮಣ ಕುಮಾರನು ಗುರುಶುಶ್ರೂಷೆಯಲ್ಲಿ ರತನಾಗಿ, ಸಮಗ್ರ ವೇದಗಳನ್ನು ಅಧ್ಯಯನ ಮಾಡಬೇಕು. ಬಳಿಕ ಗುರುದಕ್ಷಿಣೆಯನ್ನು ನೀಡಿ, ಆಚಾರ್ಯಋಣದಿಂದ ಮುಕ್ತನಾಗಿ, ಯಜ್ಞಪ್ರಕ್ರಿಯೆಯನ್ನು ತಿಳಿದು ಸಮಾವರ್ತನ ಎಂಬ ಸಂಸ್ಕಾರವನ್ನು ಮಾಡಿಕೊಳ್ಳಬೇಕು.

ಆಚಾರ್ಯೇಣಾಭ್ಯನುಜ್ಞಾತಶ್ಚತುರ್ಣಾಮೇಕಮಾಶ್ರಮಮ್ ।
ಆ ವಿಮೋಕ್ಷಾಚ್ಛರೀರಸ್ಯ ಸೋಽನುತಿಷ್ಠೇದ್ ಯಥಾವಿಧಿ ॥೪॥

ಪುನಃ ಆಚಾರ್ಯರಿಂದ ಅನುಜ್ಞೆಯನ್ನು ಪಡೆದು, ನಾಲ್ಕು ಆಶ್ರಮಗಳಲ್ಲಿ ಯಾವುದಾದರೂ ಒಂದು ಆಶ್ರಮವನ್ನು ಆಶ್ರಯಿಸಿ, ಆ ಆಶ್ರಮಕ್ಕೆ ಸಂಬಂಧಿಸಿದ ನಿಯಮಗಳನ್ನು ಶಾಸ್ತ್ರವಿಧಿಯಂತೆ ಜೀವನ ಪರ್ಯಂತ ಅನುಷ್ಠಾನ ಮಾಡಬೇಕು.

ಪ್ರಜಾಸರ್ಗೇಣ ದಾರೈಶ್ಚ ಬ್ರಹ್ಮಚರ್ಯೇಣ ವಾ ಪುನಃ ।
ವನೇ ಗುರುಸಕಾಶೇ ವಾ ಯತಿಧರ್ಮೇಣ ವಾ ಪುನಃ ॥೫॥

ಗೃಹಸ್ಥಸ್ತ್ವೇವ ಸರ್ವೇಷಾಂ ಚತುರ್ಣಾಂ ಮೂಲಮುಚ್ಯತೇ ।
ತತ್ರ ಪಕ್ವಕಷಾಯೋ ಹಿ ದಾಂತಃ ಸರ್ವತ್ರ ಸಿದ್ಧ್ಯತಿ ॥೬॥

ಪತ್ನಿಯರ ಜೊತೆಗೆ ಪ್ರಜಾಸರ್ಗವಿಧಿಯಿಂದ ಕರ್ತವ್ಯನ್ನಾಚರಿಸುವ ಗೃಹಸ್ಥಾಶ್ರಮಕ್ಕಾಗಲೀ, ಬ್ರಹ್ಮಚರ್ಯಾಶ್ರಮಕ್ಕಾಗಲೀ, ಗುರುವಿನ ಬಳಿ ವಾಸಿಸುವ ವಾನಪ್ರಸ್ಥಾಶ್ರಮಕ್ಕಾಗಲೀ, ಯತಿಧರ್ಮಕ್ಕಾಗಲೀ ಗೃಹಸ್ಥಾಶ್ರಮವೇ ಆಧಾರವಾದುದು. ಆದ್ದರಿಂದ ಎಲ್ಲ ಆಶ್ರಮಗಳಿಗೂ ಮೂಲವಾದುದೇ ಗೃಹಸ್ಥಾಶ್ರಮ ಎನ್ನುತ್ತಾರೆ. ಆದ್ದರಿಂದ ಗೃಹಸ್ಥಾಶ್ರಮದಲ್ಲಿ ಇರುವ ವ್ಯಕ್ತಿಯು ರಾಗಾದಿ ದೋಷಗಳೆಲ್ಲ ನೀಗಿದ ಬಳಿಕ ಪರಿಪಕ್ವತೆಯನ್ನು ಪಡೆದು ಜಿತೇಂದ್ರಿಯನಾದಾಗ ಗೃಹಸ್ಥನು ಸಿದ್ಧಿಯನ್ನು ಹೊಂದುತ್ತಾನೆ.

ಪ್ರಜಾವಾನ್ ಶ್ರೋತ್ರಿಯೋ ಯಜ್ವಾ ಮುಕ್ತೋ ದಿವ್ಯೈಃ ಪಿತೃಭಿರ್ಋಣೈಃ ।
ಅಥಾನ್ಯಾನಾಶ್ರಮಾನ್ ಪಶ್ಚಾತ್ ಪೂತೋ ಗಚ್ಛತಿ ಕರ್ಮಭಿಃ ॥೭॥

ಗೃಹಸ್ಥನು ಸಂತಾನ ಪಡೆದಾಗ ಪಿತೃ ಋಣದಿಂದಲೂ, ವೇದಾಧ್ಯಯನದಿಂದ ಋಷಿ ಋಣದಿಂದಲೂ, ಯಜ್ಞಾದಿಗಳಿಂದ ದೇವ ಋಣದಿಂದಲೂ ಮುಕ್ತನಾಗುತ್ತಾನೆ. ಈ ಕರ್ತವ್ಯಗಳಿಂದ ಪರಿಶುದ್ಧನಾದ ಈತನು ವಾನಪ್ರಸ್ಥ, ಸಂನ್ಯಾಸ ಈ ಆಶ್ರಮಗಳನ್ನು ಸ್ವೀಕರಿಸಬಹುದು.

ಯತ್ ಪೃಥಿವ್ಯಾಂ ಪುಣ್ಯತಮಂ ವಿದ್ಯಾಸ್ಥಾನಂ ತದಾವಸೇತ್ ।
ಯತೇತ ತಸ್ಮಿನ್ ಪ್ರಾಮಾಣ್ಯಂ ಗಂತುಂ ಯಶಸಿ ಚೋತ್ತಮೇ ॥೮॥

ಈ ಭೂಮಿಯಲ್ಲಿ ಯಾವ ಸ್ಥಳವು ಪುಣ್ಯವೆನಿಸಿದೆಯೋ, ಉತ್ತಮವೆನಿಸಿದೆಯೋ ಅಲ್ಲಿಯೇ ವಾಸ ಮಾಡಬೇಕು. ಅಲ್ಲಿಯೇ ವಾಸವಾಗಿದ್ದು ಉತ್ತಮವಾದ ಕೀರ್ತಿಯಿಂದ ಆದರ್ಶ ಪುರುಷನಾಗಿ ಇರಲು ಪ್ರಯತ್ನಿಸಬೇಕು.

ತಪಸಾ ವಾ ಸುಮಹತಾ ವಿದ್ಯಾನಾಂ ಪಾರಣೇನ ವಾ ।
ಇಜ್ಯಯಾ ವಾ ಪ್ರಧಾನೈರ್ವಾ ವಿಪ್ರಾಣಾಂ ವರ್ಧತೇ ಯಶಃ ॥೯॥

ತಪಸ್ಸನ್ನಾಚರಿಸಿ ಆದರ್ಶ ಪುರುಷನಾಗಬೇಕು. ಪಾಂಡಿತ್ಯವನ್ನು ಸಂಪಾದನೆ ಮಾಡುವುದರಲ್ಲಾದರೂ ಆದರ್ಶ ಪುರುಷನಾಗಬೇಕು. ಯಜ್ಞದಲ್ಲಾದರೂ ಆದರ್ಶ ಪುರುಷನಾಗಬೇಕು. ಅಥವಾ ಬ್ರಾಹ್ಮಣರಿಗೆ ದಾನ ಕೊಡುವುದರಲ್ಲಾದರೂ ಆದರ್ಶ ಪುರುಷನಾಗಬೇಕು.

ಯಾವದಸ್ಯ ಭವತ್ಯಸ್ಮಿಲ್ಲೋಕೇ ಕೀರ್ತಿರ್ಯಶಸ್ಕರೀ ।
ತಾವತ್ ಪುಣ್ಯಕೃತಾಲ್ಲೋಕಾನನಂತಾನ್ ಪುರುಷೋಽಶ್ನುತೇ ॥೧೦॥

ತಪಸ್ಸು, ವಿದ್ಯೆ, ದಾನ, ಯಜ್ಞ ಇವುಗಳಿಂದ ಬ್ರಾಹ್ಮಣನ ಕೀರ್ತಿಯು ಅಭಿವೃದ್ಧಿಯನ್ನು ಹೊಂದುತ್ತದೆ. ಎಲ್ಲಿಯ ತನಕ ಇಂತಹ ಕೀರ್ತಿ ಇರುವುದೋ ಅವನು ಪುಣ್ಯವಂತರು ಅನುಭವಿಸುವ ಅನಂತಾನಂತ ಲೋಕಗಳನ್ನು ಅಷ್ಟು ಕಾಲ ಹೊಂದಿ ಸುಖಭೋಗವನ್ನು ಅನುಭವಿಸುತ್ತಾನೆ.

ಅಧ್ಯಾಪಯೇದಧೀಯೀತ ಯಾಜಯೇತ ಯಜೇತ ಚ ।
ನ ವೃಥಾ ಪ್ರತಿಗೃಹ್ಣೀಯಾನ್ನ ಚ ದದ್ಯಾತ್ ಕಥಂಚನ ॥೧೧॥

ಬ್ರಾಹ್ಮಣನಾದವನು ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹಗಳಲ್ಲಿ ನಿರಂತರ ನಿರತನಾಗಿರಬೇಕು. ವ್ಯರ್ಥವಾದ ದಾನವನ್ನು ಸ್ವೀಕರಿಸಬಾರದು. ಅಯೋಗ್ಯರಿಗೆ ದಾನವನ್ನು ಮಾಡಲೂ ಬಾರದು.

ಯಾಜ್ಯತಃ ಶಿಷ್ಯತೋ ವಾಪಿ ಕನ್ಯಯಾ ವಾ ಧನಂ ಮಹತ್ ।
ಯದ್ಯಾಗಚ್ಛೇದ್ ಯಜೇದ್ ದದ್ಯಾನ್ನೈಕೋಽಶ್ನೀಯಾತ್ ಕಥಂಚನ ॥

ಯಾಗವನ್ನು ಮಾಡಿದಾಗ ಯಜಮಾನನು ನೀಡಿದ ದಕ್ಷಿಣೆ, ಕನ್ಯಾ ಸ್ವೀಕಾರ ಮಾಡಿದಾಗ ಮಾವನು ನೀಡಿದ ವರದಕ್ಷಿಣೆ ಅಥವಾ ಪಾಠ ಹೇಳಿದಾಗ ಶಿಷ್ಯನು ಕೊಡುವ ಗುರುದಕ್ಷಿಣೆ ಇಂತಹ ಸಂಪತ್ತಿನಿಂದ ದಾನ ಮಾಡಬೇಕು. ಅಂತಹ ಧನವನ್ನು ಸ್ವಾರ್ಥಿಯಾಗಿ ತಾನೊಬ್ಬನೇ ಉಪಭೋಗಿಸಬಾರದು.

ಗೃಹಮಾವಸತೋ ಹ್ಯಸ್ಯ ನಾನ್ಯತ್ತೀರ್ಥಂ ಪ್ರತಿಗ್ರಹಾತ್ ।
ದೇವರ್ಷಿಪಿತೃಗುರ್ವರ್ಥಂ ವೃದ್ಧಾತುರಬುಭುಕ್ಷತಾಮ್ ॥೧೩॥

ದೇವತೆಗಳ, ಋಷಿಗಳ, ಪಿತೃಗಳ, ಗುರುಗಳ, ವೃದ್ಧರ, ರೋಗಿಗಳ, ಹಸಿದವರ ಸಲುವಾಗಿ ಬ್ರಾಹ್ಮಣನು ಧನವನ್ನು ಸಂಗ್ರಹಿಸಬಹುದು. ದಾನವನ್ನು ಸ್ವೀಕರಿಸಬಹುದು. ಇಂತಹ ಪವಿತ್ರವಾದ ಮಾರ್ಗಗಳನ್ನು ಬಿಟ್ಟು ಸ್ವಾರ್ಥ ದೃಷ್ಟಿಯಿಂದ ಹಣವನ್ನು ಸಂಗ್ರಹಿಸಬಾರದು.

ಅಂತರ್ಹಿತಾಭಿತಪ್ತಾನಾಂ ಯಥಾಶಕ್ತಿ ಬುಭೂಷತಾಮ್ ।
ದ್ರವ್ಯಾಣಾಮತಿಶಕ್ಯಾಪಿ ದೇಯಮೇಷಾಂ ಕೃತಾದಪಿ ॥೧೪॥

ದರಿದ್ರರಾಗಿ ದಾರಿದ್ರ್ಯವನ್ನು ಹೇಳಿಕೊಳ್ಳದೆ ಇರುವ ದುಃಖಿತರಾದ ಶ್ರೋತ್ರಿಯರಿಗೆ ಸಂಪಾದಿಸಿದ ಹಣದಲ್ಲಿ ಶಕ್ತಿ ಮೀರಿ ದಾನ ಮಾಡಬೇಕು.

ಅರ್ಹತಾಮನುರೂಪಾಣಾಂ ನಾದೇಯಂ ಹ್ಯಸ್ತಿ ಕಿಂಚನ ।
ಉಚ್ಚೈಃಶ್ರವಸಮಪ್ಯಶ್ವಂ ಪ್ರಾಪಣೀಯಂ ಸತಾಂ ವಿದುಃ ॥೧೫॥

ಅರ್ಹರಾದ ವ್ಯಕ್ತಿಗಳಿಗೆ ಕೊಡಬಾರದೆಂಬ ವಸ್ತುವೇ ಜಗತ್ತಿನಲ್ಲಿಲ್ಲ. ಸತ್ಪಾತ್ರರಿಗೆ ಇಂದ್ರನ ಉಚ್ಚೈಃಶ್ರವಸ್ಸೆಂಬ ಕುದುರೆಯನ್ನಾದರೂ ದಾನ ಮಾಡಬಹುದೆಂದು ಸತ್ಪುರುಷರ ಅಭಿಪ್ರಾಯವಾಗಿದೆ.

ಅನುನೀಯ ತಥಾ ಕಾವ್ಯಃ ಸತ್ಯಸಂಧೋ ಮಹಾವ್ರತಃ ।
ಸ್ವೈಃ ಪ್ರಾಣೈರ್ಬ್ರಾಹ್ಮಣಪ್ರಾಣಾನ್ ಪರಿತ್ರಾಯ ದಿವಂ ಗತಃ ॥೧೬॥

ಮಹಾವ್ರತನಾದ, ಸತ್ಯಸಂಧನಾದ ಶುಕ್ರಾಚಾರ್ಯನು ಸ್ವೇಚ್ಛೆಯಿಂದ ತನ್ನ ಉದರದಲ್ಲಿರುವ ಕಚನೆಂಬ ಬ್ರಾಹ್ಮಣನ ಪ್ರಾಣವನ್ನು ರಕ್ಷಿಸಲು ತನ್ನ ಪ್ರಾಣವನ್ನೇ ತೊರೆದು ಸ್ವರ್ಗವನ್ನು ಪಡೆದುಕೊಂಡನು.

ರಂತಿದೇವಶ್ಚ ಸಾಂಕೃತ್ಯೋ ವಸಿಷ್ಠಾಯ ಮಹಾತ್ಮನೇ ।
ಅಪಃ ಪ್ರದಾಯ ಶೀತೋಷ್ಣಾ ನಾಕಪೃಷ್ಠೇ ಮಹೀಯತೇ ॥೧೭॥

ರಂತಿದೇವನೆಂಬ ರಾಜನು ಮಹಾದುರ್ಭಿಕ್ಷಸಮಯದಲ್ಲಿ ತಾನು ಊಟ ಮಾಡದೆ ಹಗಲು-ರಾತ್ರಿ ಬಹುದಿನ ಪರ್ಯಂತ ದೀನರಾದವರಿಗೆ ಅನ್ನವನ್ನು ಕೊಟ್ಟು ತನಗೆ ಪ್ರಾಣಸಂಕಟ ಬಂದಾಗ ಬಾಯಾರಿಕೆಯನ್ನು ಪರಿಹರಿಸಿಕೊಳ್ಳಲು ತಂದ ಬಿಸಿ ನೀರನ್ನು

ಕುಡಿಯಬೇಕೆಂದು ಇದ್ದಾಗ ಭಿಕ್ಷು ರೂಪದಲ್ಲಿ ವಸಿಷ್ಠರು ಆಗಮಿಸಿದರು. ಅವರಿಗೆ ಆ ನೀರನ್ನು ಕೊಟ್ಟು ಆ ಕ್ಷಣದಲ್ಲಿಯೇ ಪ್ರಾಣವನ್ನು ತೊರೆದು ಸ್ವರ್ಗಕ್ಕೆ ಹೋದನು.

ಆತ್ರೇಯಶ್ಚಂದ್ರದಮಯೋರರ್ಹತೋರ್ವಿವಿಧಂ ಧನಮ್ ।
ದತ್ತ್ವಾ ಲೋಕಾನ್ಯಯೌ ಧೀಮಾನನಂತಾನ್ ಸ ಮಹೀಪತಿಃ ॥೧೮॥

ಅತ್ರಿವಂಶಜನಾದ, ಬುದ್ಧಿವಂತನಾದ ಇಂದ್ರದಮನರಾಜನು ಅರ್ಹನಾದ ಒಬ್ಬ ಬ್ರಾಹ್ಮಣನಿಗೆ ಅನೇಕ ವಿಧವಾದ ಧನವನ್ನು ನೀಡಿ ಅಕ್ಷಯವಾದ ಲೋಕಗಳನ್ನು ಹೊಂದಿದನು.

ಶಿಬಿರೌಶೀನರೋಽಂಗಾನಿ ಸುತಂ ಚ ಪ್ರಿಯಮೌರಸಮ್ ।
ಬ್ರಾಹ್ಮಣಾರ್ಥಮುಪಾಕೃತ್ಯ ನಾಕಪೃಷ್ಠಮಿತೋ ಗತಃ ॥೧೯॥

ಉಶೀನರನ ಮಗನಾದ ಶಿಬಿಯು ಒಬ್ಬ ಬ್ರಾಹ್ಮಣನಿಗೆ ತನ್ನ ಶರೀರವನ್ನೇ ನೀಡಿ, ಪ್ರಿಯನಾದ ತನ್ನ ಔರಸ ಪುತ್ರನನ್ನು ಅವನಿಗೆ ದಾನವಾಗಿ ಕೊಟ್ಟು ಅದರ ಫಲವಾಗಿ ಸ್ವರ್ಗ ಏರಿದನು.

ಪ್ರತರ್ದನಃ ಕಾಶಿಪತಿಃ ಪ್ರದಾಯ ನಯನೇ ಸ್ವಕೇ ।
ಬ್ರಾಹ್ಮಣಾಯಾತುಲಾಂ ಕೀರ್ತಿಮಿಹ ಚಾಮುತ್ರ ಚಾಶ್ನುತೇ ॥೨೦॥

ಕಾಶಿರಾಜನ ಮಗನಾದ ಪ್ರತರ್ದನನು ಕುರುಡನೊಬ್ಬನಿಗೆ ತನ್ನ ಎರಡು ಕಣ್ಣುಗಳನ್ನೇ ದಾನ ಮಾಡಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅತುಲವಾದ ಕೀರ್ತಿಯನ್ನು ಪಡೆದುಕೊಂಡನು.

ದಿವ್ಯಂ ಮೃಷ್ಟಶಲಾಕಂ ತು ಸೌವರ್ಣಂ ಪರಮರ್ದ್ಧಿಮತ್ ।
ಛತ್ರಂ ದೇವಾವೃಧೋ ದತ್ತ್ವಾ ಸರಾಷ್ಟ್ರೋಽಭ್ಯಪತದ್ ದಿವಮ್ ॥೨೧॥

ದೇವಾವೃಧನೆಂಬ ರಾಜನು ಎಂಟು ಕಡ್ಡಿಗಳಿಂದ ಯುಕ್ತವಾಗಿದ್ದ, ಬಂಗಾರ-ಮಯವಾದ, ಬಹುಮೂಲ್ಯವಾದ ತನ್ನ ಛತ್ರವನ್ನೇ ಬ್ರಾಹ್ಮಣನಿಗೆ ದಾನ ಮಾಡಿ ಅದರ ಫಲವಾಗಿ ತನ್ನ ಪ್ರಜೆಗಳ ಜೊತೆ ಸ್ವರ್ಗ ಸೇರಿದನು.

ಸಾಂಕೃತಿಶ್ಚ ತಥಾತ್ರೇಯಃ ಶಿಷ್ಯೇಭ್ಯೋ ಬ್ರಹ್ಮ ನಿರ್ಗುಣಮ್ ।
ಉಪದಿಶ್ಯ ಮಹಾತೇಜಾ ಗತೋ ಲೋಕಾನನುತ್ತಮಾನ್ ॥೨೨॥

ಅತ್ರಿವಂಶದಲ್ಲಿ ಹುಟ್ಟಿದ ಮಹಾತೇಜಸ್ವಿಯಾದ ಸಾಂಕೃತಿಯು ತನ್ನ ಶಿಷ್ಯನಿಗೆ ಭಗವತ್ತತ್ತ್ವೋಪದೇಶವೆಂಬ ಜ್ಞಾನವನ್ನು ದಾನ ಮಾಡಿ ಉತ್ತಮ ಲೋಕವನ್ನು ಹೊಂದಿದನು.

ಅಂಬರೀಷೋ ಗವಾಂ ದತ್ತ್ವಾ ಬ್ರಾಹ್ಮಣೇಭ್ಯಃ ಪ್ರತಾಪವಾನ್ ।
ಅರ್ಬುದಾನಿ ದಶೈಕಂ ಚ ಸರಾಷ್ಟ್ರೋಽಭ್ಯಪತದ್ ದಿವಮ್ ॥೨೩॥

ಪ್ರತಾಪವಂತನಾದ ಅಂಬರೀಷನು ನೂರ ಹತ್ತುಕೋಟಿ ಗೋವುಗಳನ್ನು ದಾನ ಮಾಡಿ ಅದರ ಫಲವಾಗಿ ಸ್ವರ್ಗ ಸೇರಿದನು.

ಸಾವಿತ್ರೀ ಕುಂಡಲೇ ದಿವ್ಯೇ ಶರೀರಂ ಜನಮೇಜಯಃ ।
ಬ್ರಾಹ್ಮಣಾರ್ಥೇ ಪರಿತ್ಯಜ್ಯ ಜಗ್ಮತುರ್ಲೋಕಮುತ್ತಮಮ್ ॥೨೪॥

ಸಾವಿತ್ರಿಯು ತನ್ನ ದಿವ್ಯವಾದ ಎರಡು ಕರ್ಣ-ಕುಂಡಲಗಳನ್ನು ಬ್ರಾಹ್ಮಣನಿಗೆ ದಾನ ಮಾಡಿದಳು. ಜನಮೇಜಯನು ಬ್ರಾಹ್ಮಣನಿಗಾಗಿ ತನ್ನ ಶರೀರವನ್ನೇ ತ್ಯಾಗ ಮಾಡಿದ. ಇದರಿಂದ ಅವರಿಬ್ಬರೂ ಉತ್ತಮ ಲೋಕಗಳನ್ನು ಹೊಂದಿದರು.

ಸರ್ವರತ್ನಂ ವೃಷಾದರ್ಭೋ ಯುವನಾಶ್ವಃ ಪ್ರಿಯಾಃ ಸ್ತ್ರಿಯಃ ।
ರಮ್ಯಮಾವಸಥಂ ಚೈವ ದತ್ತ್ವಾಮುಂ ಲೋಕಮಾಸ್ಥಿತಃ ॥೨೫॥

ವೃಷದರ್ಭಿಯ ಮಗನಾದ ಯುವನಾಶ್ವನು ತನ್ನಲ್ಲಿದ್ದ ಸಮಸ್ತ ರತ್ನಗಳನ್ನು, ಪ್ರಿಯರಾದ ಸ್ತ್ರೀಯರನ್ನು, ರಮಣೀಯವಾದ ಮನೆಯನ್ನು ಬ್ರಾಹ್ಮಣರಿಗೆ ದಾನ ಮಾಡಿ ಅದರ ಫಲವಾಗಿ ಸ್ವರ್ಗಲೋಕವನ್ನು ಹೊಂದಿದನು.

ನಿಮೀ ರಾಷ್ಟ್ರಂ ಚ ವೈದೇಹೋ ಜಾಮದಗ್ನ್ಯೋ ವಸುಂಧರಾಮ್ ।
ಬ್ರಾಹ್ಮಣೇಭ್ಯೋ ದದೌ ಚಾಪಿ ಗಯಶ್ಚೋರ್ವೀಂ ಸಪತ್ತನಾಮ್ ॥೨೬॥

ವಿದೇಹರಾಜನಾದ ನಿಮಿಯು ತನ್ನ ರಾಷ್ಟ್ರವನ್ನು, ಜಮದಗ್ನಿಯ ಮಗನಾದ ಪರಶುರಾಮನು ಮತ್ತು ಗಯನು ನಗರಗಳಿಂದ ಯುಕ್ತವಾದ ಭೂಮಿಯನ್ನೇ ಬ್ರಾಹ್ಮಣರಿಗೆ ದಾನ ಮಾಡಿದರು.

ಅವರ್ಷತಿ ಚ ಪರ್ಜನ್ಯೇ ಸರ್ವಭೂತಾನಿ ಚಾಸಕೃತ್ ।
ವಸಿಷ್ಠೋ ಜೀವಯಾಮಾಸ ಪ್ರಜಾಪತಿರಿವ ಪ್ರಜಾಃ ॥೨೭॥

ಒಮ್ಮೆ ಬಹಳ ಸಮಯ ಪರ್ಜನ್ಯನು ಮಳೆ ಸುರಿಸಲಿಲ್ಲ. ಆಗ ವಸಿಷ್ಠ ಮಹರ್ಷಿಗಳು ಮಳೆಯನ್ನು ಸುರಿಸಿ ಪ್ರಜೆಗಳನ್ನು ಪ್ರಜಾಪತಿಗಳಂತೆ ಬದುಕಿಸಿದರು.

ಕರಂಧಮಸ್ಯ ಪುತ್ರಸ್ತು ಮರುತ್ತೋ ನೃಪತಿಸ್ತಥಾ ।
ಕನ್ಯಾಮಂಗಿರಸೇ ದತ್ತ್ವಾ ದಿವಮಾಶು ಜಗಾಮ ಹ ॥೨೮॥

ಕರಂಧಮನ ಮಗನಾದ, ಸತ್ಕರ್ಮರತನಾದ ಮರುತ್ತನು ಅಂಗಿರಸರಿಗೆ ಕನ್ಯೆಯನ್ನು ದಾನ ಮಾಡಿ ಅದರ ಫಲದಿಂದ ಕೂಡಲೇ ಸ್ವರ್ಗಕ್ಕೆ ಹೋದನು.

ಬ್ರಹ್ಮದತ್ತಶ್ಚ ಪಾಂಚಾಲ್ಯೋ ರಾಜಾ ಬುದ್ಧಿಮತಾಂ ವರಃ ।
ನಿಧಿಂ ಶಂಖಂ ದ್ವಿಜಾಗ್ರ್ಯೇಭ್ಯೋ ದತ್ತ್ವಾ ಲೋಕಾನವಾಪ್ತವಾನ್ ॥೨೯॥

ಪಾಂಚಾಲರಾಜನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಬ್ರಹ್ಮದತ್ತನು ಶ್ರೇಷ್ಠ ಬ್ರಾಹ್ಮಣರಿಗೆ ನೂರು ಶತಕೋಟಿ ನಿಧಿಯನ್ನು ದಾನ ಮಾಡಿ ಪುಣ್ಯಲೋಕಗಳನ್ನು ಪಡೆದನು.

ರಾಜಾ ಮಿತ್ರಸಹಶ್ಚಾಪಿ ವಸಿಷ್ಠಾಯ ಮಹಾತ್ಮನೇ ।
ಮದಯಂತೀಂ ಪ್ರಿಯಂ ದತ್ತ್ವಾ ತಯಾ ಸಹ ದಿವಂ ಗತಃ ॥೩೦॥

ಮಿತ್ರಸಹ ರಾಜನು ಮಹಾತ್ಮರಾದ ವಸಿಷ್ಠರಿಗೆ ತನ್ನ ಪ್ರಿಯಪತ್ನಿಯಾದ ಮದಯಂತಿಯನ್ನು ಸೇವಿಸಲು ಕೊಟ್ಟು, ಅವಸಾನದ ಬಳಿಕ ಅವಳೊಡನೆ ಸ್ವರ್ಗ ಸೇರಿದನು.

ಸಹಸ್ರಜಿಚ್ಚ ರಾಜರ್ಷಿಃ ಪ್ರಾಣಾನಿಷ್ಟಾನ್ ಮಹಾಯಶಾಃ ।
ಬ್ರಾಹ್ಮಣಾರ್ಥೇ ಪರಿತ್ಯಜ್ಯ ಗತೋ ಲೋಕಾನನುತ್ತಮಾನ್ ॥೩೧॥

ಯಶೋವಂತನಾದ, ರಾಜರ್ಷಿಯಾದ ಸಹಸ್ರಜಿತ್ ರಾಜನು ಬ್ರಾಹ್ಮಣರ ನಿಮಿತ್ತದಿಂದ ತನ್ನ ಪ್ರಿಯವಾದ ಪ್ರಾಣವನ್ನೇ ಅರ್ಪಿಸಿ ಉತ್ತಮ ಲೋಕಕ್ಕೆ ಹೋದನು.

ಸರ್ವಕಾಮೈಶ್ಚ ಸಂಪೂರ್ಣಂ ದತ್ತ್ವಾ ವೇಶ್ಮ ಹಿರಣ್ಮಯಮ್ ।
ಮುದ್ಗಲಾಯ ಗತಃ ಸ್ವರ್ಗಂ ಶತದ್ಯುಮ್ನೋ ಮಹೀಪತಿಃ ॥೩೨॥

ಶತದ್ಯುಮ್ನ ಎಂಬ ಮಹೀಪತಿಯು ಸಮಸ್ತ ಭೋಗ ವಸ್ತುಗಳಿಂದ ತುಂಬಿದ ಬಂಗಾರಮಯವಾದ ಭವನವನ್ನು ಮುದ್ಗಲನೆಂಬ ವಿಪ್ರನಿಗೆ ದಾನ ಮಾಡಿ ಅದರ ಫಲವಾಗಿ ಸ್ವರ್ಗವನ್ನು ಸೇರಿದನು.

ನಾಮ್ನಾ ಚ ದ್ಯುತಿಮಾನ್ನಾಮ ಶಾಲ್ವರಾಜಃ ಪ್ರತಾಪವಾನ್ ।
ದತ್ತ್ವಾ ರಾಜ್ಯಮೃಚೀಕಾಯ ಗತೋ ಲೋಕಾನನುತ್ತಮಾನ್ ॥೩೩॥

ದ್ಯುತಿಮಂತ ಎಂಬ ಹೆಸರಿನಿಂದ ಖ್ಯಾತಿ ಗಳಿಸಿದ, ಪ್ರತಾಪವಂತನಾದ ಶಾಲ್ವರಾಜನು ಋಚೀಕನಿಗೆ ರಾಜ್ಯವನ್ನೇ ದಾನ ಮಾಡಿ ಅದರ ಫಲವಾಗಿ ಉತ್ತಮೋತ್ತಮ ಲೋಕಗಳನ್ನು ಹೊಂದಿದನು.

ಮದಿರಾಶ್ವಶ್ಚ ರಾಜರ್ಷಿರ್ದತ್ತ್ವಾ ಕನ್ಯಾಂ ಸುಮಧ್ಯಮಾಮ್ ।
ಹಿರಣ್ಯಹಸ್ತಾಯ ಗತೋ ಲೋಕಾಂದೇವೈರಭಿಷ್ಟುತಾನ್ ॥೩೪॥

ಮದಿರಾಶ್ವನೆಂಬ ರಾಜರ್ಷಿಯು ಹಿರಣ್ಯಹಸ್ತನೆಂಬ ಬ್ರಾಹ್ಮಣನಿಗೆ ಸುಂದರಿಯಾದ ಕನ್ಯೆಯನ್ನು ದಾನ ಮಾಡಿ ದೇವತೆಗಳಿಂದಲೂ ಸಮ್ಮಾನಿತವಾದ ಪುಣ್ಯಲೋಕಗಳನ್ನು ಪಡೆದುಕೊಂಡನು.

ಲೋಮಪಾದಶ್ಚ ರಾಜರ್ಷಿಃ ಶಾಂತಾಂ ದತ್ತ್ವಾ ಸುತಾಂ ಪ್ರಭುಃ ।
ಋಶ್ಯಶೃಂಗಾಯ ವಿಪುಲೈಃ ಸರ್ವಕಾಮೈರಯುಜ್ಯತ ॥೩೫॥

ಲೋಮಪಾದನೆಂಬ ರಾಜರ್ಷಿಯು ತನ್ನ ಮಗಳಾದ ಶಾಂತೆಯನ್ನು ಋಷ್ಯಶೃಂಗ ಮುನಿಗೆ ದಾನ ಮಾಡಿ ಅದರ ಫಲವಾಗಿ ಇಷ್ಟಾರ್ಥಗಳನ್ನು ಪಡೆದುಕೊಂಡನು.

ದತ್ತ್ವಾ ಶತಸಹಸ್ರಂ ತು ಗವಾಂ ರಾಜಾ ಪ್ರಸೇನಜಿತ್ ।
ಸವತ್ಸಾನಾಂ ಮಹಾತೇಜಾ ಗತೋ ಲೋಕಾನನುತ್ತಮಾನ್ ॥೩೬॥

ಮಹಾತೇಜಸ್ವಿಯಾದ ಪ್ರಸೇನಜಿತ್ ಎಂಬ ರಾಜನು ಒಂದು ಲಕ್ಷ ಗೋವುಗಳನ್ನು ಕರುಗಳ ಜೊತೆಗೆ ಬ್ರಾಹ್ಮಣರಿಗೆ ದಾನ ಮಾಡಿ ಅತ್ಯಂತ ಶ್ರೇಷ್ಠವಾದ ಲೋಕಗಳನ್ನು ಪಡೆದುಕೊಂಡನು.

ಏತೇ ಚಾನ್ಯೇ ಚ ಬಹವೋ ದಾನೇನ ತಪಸಾ ಚ ಹ ।
ಮಹಾತ್ಮಾನೋ ಗತಾಃ ಸ್ವರ್ಗಂ ಶಿಷ್ಟಾತ್ಮಾನೋ ಜಿತೇಂದ್ರಿಯಾಃ ॥೩೭॥

ಇಷ್ಟೇ ಅಲ್ಲದೆ, ಶಿಷ್ಟರಾದ, ಜಿತೇಂದ್ರಿಯರಾದ ಇನ್ನೂ ಅನೇಕ ಮಂದಿ ಮಹಾತ್ಮರು ದಾನ ಮಾಡುವುದರಿಂದಲೂ, ತಪಸ್ಸಿನಿಂದಲೂ ಸ್ವರ್ಗ ಸೇರಿರುವರು.

ತೇಷಾಂ ಪ್ರತಿಷ್ಠಿತಾ ಕೀರ್ತಿರ್ಯಾವತ್ಸ್ಥಾಸ್ಯತಿ ಮೇದಿನೀ ।
ದಾನಯಜ್ಞಪ್ರಜಾಸರ್ಗೈರೇತೇ ಹಿ ದಿವಮಾಪ್ನುವನ್ ॥೩೮॥

ಆ ದಾನ ಮಾಡಿದ ಮಹಾನುಭಾವರ ಕೀರ್ತಿಯು ಈ ಭೂಮಂಡಲ ಇರುವ ತನಕವೂ ಪ್ರಪಂಚದಲ್ಲಿ ಪ್ರತಿಷ್ಠಿತವಾಗಿರುತ್ತದೆ. ಈ ಮಹಾತ್ಮರೆಲ್ಲರೂ ದಾನ, ಯಜ್ಞ, ಸತ್ಸಂತಾನಗಳಿಂದ ಸ್ವರ್ಗವನ್ನು ಪಡೆದುಕೊಂಡಿದ್ದಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತನೆಯ ಅಧ್ಯಾಯ

ಬ್ರಾಹ್ಮಣರ ಕರ್ತವ್ಯಗಳ ಪ್ರತಿಪಾದನೆ. ಕಾಲರೂಪಸಮುದ್ರವನ್ನು ದಾಟುವ ಉಪಾಯವು.

ವ್ಯಾಸಃ

ತ್ರಯೀವಿದ್ಯಾಮವೇಕ್ಷೇತ ವೇದೇಷೂಕ್ತಾಮಥಾಂಗತಃ ।
ಋಕ್ಸಾಮವರ್ಣಾಕ್ಷರತೋ ಯಜುಷೋऽಥರ್ವಣಸ್ತಥಾ ॥೧॥

ಶುಕದೇವನೇ, ಬ್ರಾಹ್ಮಣನಾದವನು ಮೂರು ವೇದಗಳಲ್ಲಿ ಹೇಳಿರುವ ಭಗವದ್ವಿದ್ಯೆಯನ್ನು ಚಿಂತಿಸಬೇಕು. ಷಡಂಗಗಳಿಂದ ಸಹಿತವಾದ ವೇದಗಳಲ್ಲಿ ಹೇಳಿದ ಋಗ್ವೇದ, ಸಾಮವೇದ, ಇವುಗಳ ವರ್ಣ-ಅಕ್ಷರದಿಂದ ಯಜುರ್ವೇದ-ಅಥರ್ವಣ ವೇದದಿಂದ ಹೇಳಲ್ಪಟ್ಟ ವಿದ್ಯೆಯನ್ನು ಅಭ್ಯಾಸ ಮಾಡಬೇಕು.

ವೇದವಾದೇಷು ಕುಶಲಾ ಹ್ಯಧ್ಯಾತ್ಮಕುಶಲಾಶ್ಚ ಯೇ ।
ಸತ್ತ್ವವಂತೋ ಮಹಾಭಾಗಾಃ ಪಶ್ಯಂತಿ ಪ್ರಭವಾಪ್ಯಯೌ ॥೨॥

ವೇದಗಳ ಪ್ರವಚನಗಳಲ್ಲಿ ನಿಪುಣರಾದ, ಅಧ್ಯಾತ್ಮಜ್ಞಾನದಲ್ಲಿ ಕುಶಲರಾದ, ಸತ್ತ್ವ ಸಂಪನ್ನರಾದ, ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರು ಜಗತ್ತಿನ ಸೃಷ್ಟಿ-ಸಂಹಾರಗಳನ್ನು ಚೆನ್ನಾಗಿ ಶಾಸ್ತ್ರಗಳ ಮೂಲಕ ತಿಳಿದಿರುತ್ತಾರೆ.

ಏವಂ ಧರ್ಮೇಣ ವರ್ತೇತ ಕ್ರಿಯಾಃ ಶಿಷ್ಟವದಾಚರೇತ್ ।
ಅಸಂರೋಧೇನ ಭೂತಾನಾಂ ವೃತ್ತಿಂ ಲಿಪ್ಸೇತ ವೈ ದ್ವಿಜಃ ॥೩॥

ಆದ್ದರಿಂದ ಬ್ರಾಹ್ಮಣರು ಧರ್ಮಾನುಕೂಲವಾಗಿ ವ್ಯವಹರಿಸುತ್ತಾ ಶಿಷ್ಟಪುರುಷರಂತೆ ಸದಾಚಾರ ಸಂಪನ್ನರಾಗಿರಬೇಕು. ಬ್ರಾಹ್ಮಣನಾದವನು ಯಾರಿಗೂ ಕಷ್ಟವಾಗದ ರೀತಿಯಲ್ಲಿ ತಾನು ವೃತ್ತಿಯನ್ನು ಆಶ್ರಯಿಸಬೇಕು.

ಸದ್ಭ್ಯ ಆಗತವಿಜ್ಞಾನಃ ಶಿಷ್ಟಃ ಶಾಸ್ತ್ರವಿಚಕ್ಷಣಃ ।
ಸ್ವಧರ್ಮೇಣ ಕ್ರಿಯಾ ಲೋಕೇ ಕುರ್ವಾಣಃ ಸತ್ಯಸಂಗರಃ ॥೪॥

ಸತ್ಪುರುಷರ ಸೇವೆಯನ್ನು ಮಾಡುತ್ತಾ ತತ್ತ್ವಜ್ಞಾನವನ್ನು ಹೊಂದಿರಬೇಕು. ಸಜ್ಜನನಾಗಿರಬೇಕು. ಶಾಸ್ತ್ರದಲ್ಲಿ ಪಾಟವವನ್ನು ಹೊಂದಿರಬೇಕು. ವರ್ಣಾಶ್ರಮ ಧರ್ಮಗಳಿಗೆ ಉಚಿತವಾದ ಸತ್ಕರ್ಮಾನುಷ್ಠಾನ ಮಾಡುತ್ತಾ, ಸತ್ಯವಚನದಲ್ಲಿ ಆಸಕ್ತನಾಗಿರಬೇಕು.

ತಿಷ್ಠತ್ಯೇತೇಷು ಗೃಹವಾನ್ ಷಟ್ಸು ಕರ್ಮಸು ಸ ದ್ವಿಜಃ ।
ಪಂಚಭಿಃ ಸತತಂ ಯಜ್ಞೈಃ ಶ್ರದ್ದಧಾನೋ ಯಜೇತ ಚ ॥೫॥

ಗೃಹಸ್ಥನಾದವನು ಷಟ್ಕರ್ಮದಲ್ಲಿ ಯಾವಾಗಲೂ ರತನಾಗಿರಬೇಕು. ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ ಎಂಬ ಐದು ಯಜ್ಞಗಳಲ್ಲಿ ಶ್ರದ್ಧೆಯಿಂದ ಭಗವಂತನನ್ನು ಆರಾಧಿಸಬೇಕು.

ಧೃತಿಮಾನಪ್ರಮತ್ತಶ್ಚ ದಾಂತೋ ಧರ್ಮವಿದಾತ್ಮವಾನ್ ।
ವೀತಹರ್ಷಭಯಕ್ರೋಧೋ ಬ್ರಾಹ್ಮಣೋ ನಾವಸೀದತಿ ॥೬॥

ಧೈರ್ಯವಂತನಾಗಿರಬೇಕು. ಸತ್ಕರ್ಮಗಳಲ್ಲಿ ಅಪಚಾರಗಳನ್ನು ಎಸಗಬಾರದು. ಜಿತೇಂದ್ರಿಯನಾಗಿಯೂ, ಧರ್ಮವೇತ್ತೃವೂ, ಪರಮಾತ್ಮನ ಚಿಂತನೆಯುಳ್ಳವನು,

ಹರ್ಷ-ಭಯ-ಕ್ರೋಧಗಳಿಂದ ದೂರನಾದವನೂ ಆದ ಇಂತಹ ಬ್ರಾಹ್ಮಣನು ಎಂದಿಗೂ ದುಃಖಿತನಾಗುವುದಿಲ್ಲ.

ದಾನಮಧ್ಯಯನಂ ಯಜ್ಞಸ್ತಪೋ ಹ್ರೀರಾರ್ಜವಂ ದಮಃ ।
ಏತೈರ್ವರ್ಧಯತೇ ತೇಜಃ ಪಾಪ್ಮಾನಂ ಚಾಪಕರ್ಷತಿ ॥೭॥

ದಾನ-ವೇದಾಧ್ಯಯನ-ಯಜ್ಞ-ತಪಸ್ಸು-ಲಜ್ಜೆ-ಸರಳತೆ-ಇಂದ್ರಿಯನಿಗ್ರಹ ಇಂತಹ ಸದ್ಗುಣಗಳಿಂದ ತೇಜಸ್ಸು ಅಭಿವೃದ್ಧಿಯಾಗುತ್ತದೆ. ಪಾಪವು ಕ್ಷಯ ಹೊಂದುತ್ತದೆ.

ಧೂತಪಾಪ್ಮಾ ತು ಮೇಧಾವೀ ಲಘ್ವಾಹಾರೋ ಜಿತೇಂದ್ರಿಯಃ ।
ಕಾಮಕ್ರೋಧೌ ವಶೇ ಕೃತ್ವಾ ನಿನೀಷೇದ್ ಬ್ರಹ್ಮಣಃ ಪದಮ್ ॥೮॥

ಬುದ್ಧಿವಂತನಾದ ಬ್ರಾಹ್ಮಣನು ತನ್ನ ಪಾಪಗಳನ್ನೆಲ್ಲ ಪರಿಹರಿಸಿಕೊಂಡು, ಆಹಾರವನ್ನು ಸ್ವಲ್ಪವೇ ಸ್ವೀಕರಿಸಿ, ಜಿತೇಂದ್ರಿಯನಾಗಿ ಕಾಮ-ಕ್ರೋಧಗಳನ್ನು ಮನಸ್ಸಿನಿಂದ ನಿಗ್ರಹಿಸಿ, ಭಗವಂತನ ಸ್ಥಾನವಾದ ವೈಕುಂಠವನ್ನು ಹೊಂದಲು ಅಪೇಕ್ಷೆಯುಳ್ಳವನಾಗಿರಬೇಕು.

ಅಗ್ನೀಂಶ್ಚ ಬ್ರಾಹ್ಮಣಾಂಶ್ಚಾರ್ಚೇದ್ ದೇವತಾಃ ಪ್ರಣಮೇತ ಚ ।
ವರ್ಜಯೇದ್ರುಷತೀಂ ವಾಚಂ ಹಿಂಸಾಂ ಚಾಧರ್ಮಸಂಹಿತಾಮ್ ॥೯॥

ಪ್ರತಿದಿನವೂ ಬ್ರಾಹ್ಮಣರನ್ನು ಆರಾಧಿಸಬೇಕು. ಅಗ್ನಿಯನ್ನು ಆರಾಧಿಸಬೇಕು. ದೇವತೆಗಳನ್ನು ಆರಾಧಿಸಿ ನಮಸ್ಕರಿಸಬೇಕು. ಎಂದಿಗೂ ಅಧರ್ಮಯುಕ್ತವಾದ ಅಶುಭ ಮಾತುಗಳನ್ನು ಆಡಬಾರದು. ಅಧರ್ಮಭೂಯಿಷ್ಠವಾದ ಹಿಂಸೆಯನ್ನು ಮಾಡಬಾರದು.

ಏಷಾ ಪೂರ್ವತರಾ ವೃತ್ತಿರ್ಬ್ರಾಹ್ಮಣಸ್ಯ ವಿಧೀಯತೇ ।
ಜ್ಞಾನಾಗಮೇನ ಕರ್ಮಾಣಿ ಕುರ್ವನ್ ಕರ್ಮಸು ಸಿದ್ಧ್ಯತಿ ॥೧೦॥

ಪರಂಪರಾಗತವಾದ ಈ ರೀತಿಯಾದ ಕರ್ತವ್ಯಗಳು ಬ್ರಾಹ್ಮಣನಿಗೆ ವಿಧಿಸಲ್ಪಟ್ಟಿವೆ. ಜ್ಞಾನಪ್ರಾಪ್ತಿಯಾದ ಬಳಿಕ ಕರ್ಮಗಳನ್ನು ಮಾಡುತ್ತಿದ್ದರೆ ಕರ್ಮದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ.

ಪಂಚೇಂದ್ರಿಯಜಲಾಂ ಘೋರಾಂ ಲೋಭಕೂಲಾಂ ಸುದುಸ್ತರಾಮ್ ।
ಮನ್ಯುಪಂಕಾಮನಾಧೃಷ್ಯಾಂ ನದೀಂ ತರತಿ ಬುದ್ಧಿಮಾನ್ ॥೧೧॥

ಪಂಚಜ್ಞಾನೇಂದ್ರಿಯಗಳೇ ನದಿಯ ನೀರಿನ ಸ್ಥಾನದಲ್ಲಿವೆ. ಭಯಂಕರವಾದ ಲೋಭವೇ ಎರಡು ತೀರ ಪ್ರದೇಶಗಳು. ಕೋಪವೇ ಈ ನದಿಯ ಕೆಸರು. ಇಂತಹ ಸಂಸಾರ ನದಿಯನ್ನು ಬುದ್ಧಿವಂತನಾದವನು ದಾಟುತ್ತಾನೆ.

ಕಾಮಮನ್ಯೂದ್ಧತಂ ಯತ್ ಸ್ಯಾನ್ನಿತ್ಯಮತ್ಯಂತಮೋಹಿತಮ್ ।
ಮಹತಾ ವಿಧಿದೃಷ್ಟೇನ ಬಲೇನಾಪ್ರತಿಘಾತಿನಾ ।
ಸ್ವಭಾವಸ್ರೋತಸಾ ವೃತ್ತಮುಹ್ಯತೇ ಸತತಂ ಜಗತ್ ॥೧೨॥

ಕಾಮ, ಸಿಟ್ಟುಗಳಿಂದ ಮೀರಿ ಬರುತ್ತಿರುವ, ಅತ್ಯಂತ ಮೋಹಗೊಳಿಸುತ್ತಿರುವ, ಎದುರಿಸಲು ಅಸಾಧ್ಯವಾಗಿ, ಬಲಶಾಲಿಯಾಗಿ, ವಿಧಿಯ ಪ್ರೇರಣೆಯಂತೆ ಚಲಿಸುವ ಸ್ವಭಾವವುಳ್ಳ ಕಾಲಪುರುಷನು ಈ ಜಗತ್ತನ್ನು ನಿರಂತರ ಒಯ್ಯುತ್ತಿದ್ದಾನೆ. ಸ್ವಾಭಾವಿಕವಾಗಿ ಈ ನದಿಯು ಯಾವ ಕೊರತೆಯೂ ಇಲ್ಲದೆ ಹರಿಯುತ್ತಲೇ ಇದೆ. ಸಮಸ್ತ ಜಗತ್ತು ಇದರಲ್ಲಿ ಮೋಹಿತವಾಗುತ್ತಲೇ ಇದೆ.

ಕಾಲೋದಕೇನ ಮಹತಾ ವರ್ಷಾವರ್ತೇನ ಸಂತತಮ್ ।
ಮಾಸೋರ್ಮಿಣರ್ತುವೇಗೇನ ಪಕ್ಷೋಲಪತೃಣೇನ ಚ ॥೧೩॥

ಕಾಲವೆಂಬ ದೊಡ್ಡ ನೀರಿನ ಪ್ರವಾಹವುಳ್ಳ, ಸಂವತ್ಸರವೆಂಬ ಸುಳಿಯಿಂದ ಕೂಡಿರುವ, ಮಾಸಗಳೆಂಬ ಅಲೆಗಳಿಂದ ಕೂಡಿರುವ, ಋತುಗಳೆಂಬ ವೇಗಗಳಿಂದ ಕೂಡಿರುವ, ಪಕ್ಷಗಳೆಂಬ ಗರಿಕೆಯ ಪೊದೆಗಳಿಂದ ತುಂಬಿರುವ;

ನಿಮೇಷೋನ್ಮೇಷಫೇನೇನ ಅಹೋರಾತ್ರಜವೇನ ಚ ।
ಕಾಮಗ್ರಾಹೇಣ ಘೋರೇಣ ವೇದಯಜ್ಞಪ್ಲವೇನ ಚ ॥೧೪॥

ಕಣ್ಣುರೆಪ್ಪೆ ಮುಚ್ಚುವುದು, ತೆರೆಯುವುದು ಎಂಬ ಕಾಲದ ನೊರೆಗಳಿಂದ ತುಂಬಿರುವ, ಹಗಲು-ರಾತ್ರಿಗಳೆಂಬ ವೇಗಗಳಿಂದ ಕೂಡಿರುವ, ಕಾಮವೆಂಬ ಭಯಂಕರವಾದ ಮೊಸಳೆಯಿಂದ ಕೂಡಿರುವ, ವೇದ-ಯಜ್ಞ ಎಂಬ ದೋಣಿಯಿಂದ ಕೂಡಿರುವ;

ಧರ್ಮದ್ವೀಪೇನ ಭೂತಾನಾಂ ಚಾರ್ಥಕಾಮರವೇಣ ಚ ।
ಋತಸೋಪಾನತೀರೇಣ ವಿಹಿಂಸಾತರುವಾಹಿನಾ ॥೧೫॥

ಎಲ್ಲಾ ಜೀವರಿಗೆ ಸಂಬಂಧಿಸಿದ ಧರ್ಮದ್ವೀಪದಿಂದ ಕೂಡಿದ, ಅರ್ಥ-ಕಾಮ ಎಂಬ ಶಬ್ದದಿಂದ ಆವೃತವಾದ, ಸತ್ಯವೆಂಬ ಸೋಪಾನದ ತೀರವುಳ್ಳ, ವಿಹಿಂಸೆ ಎಂಬ ವೃಕ್ಷದಿಂದ ಚಲಿಸುವ;

ಯುಗಹ್ರದೌಘಮಧ್ಯೇನ ಬ್ರಹ್ಮಪ್ರಾಯಭವೇನ ಚ ।
ಧಾತ್ರಾ ಸೃಷ್ಟಾನಿ ಭೂತಾನಿ ಕೃಷ್ಯಂತೇ ಯಮಸಾದನಮ್ ॥೧೬॥

ಯುಗಗಳೆಂಬ ಸುಳಿಯುಳ್ಳ, ಸರೋವರಗಳ ಮಧ್ಯವುಳ್ಳ, ಒಬ್ಬ ಬ್ರಹ್ಮನ ಆಯುಷ್ಯವೆಂಬ ಹುಟ್ಟುಳ್ಳ, ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಎಲ್ಲಾ ಪ್ರಾಣಿಗಳು ಈ ಕಾಲ ಪ್ರವಾಹದಲ್ಲಿ ಬಿದ್ದು ಯಮನ ಲೋಕದ ಕಡೆ ಸೆಳೆಯಲ್ಪಡುತ್ತಿವೆ.

ಏತತ್ ಪ್ರಜ್ಞಾಮಯೈರ್ಧೀರಾ ನಿಸ್ತರಂತಿ ಮನೀಷಿಣಃ ।
ಪ್ಲವೈರಪ್ಲವವಂತೋ ಹಿ ಕಿಂ ಕರಿಷ್ಯಂತ್ಯಚೇತಸಃ ॥೧೭॥

ಬುದ್ಧಿವಂತರಾದ ಮನುಷ್ಯರು ಪ್ರಜ್ಞಾರೂಪವಾದ ನೌಕೆಗಳಿಂದ ಈ ಕಾಲ ನದಿಗಳನ್ನು ದಾಟುತ್ತಾರೆ. ಪ್ರಜ್ಞಾನೌಕೆ ಇಲ್ಲದ ಅಜ್ಞಾನಿಗಳು ಸರಿಯಾದ ಚಿಂತನೆಯಿಲ್ಲದೆ ಏನು ಮಾಡಲು ಸಾಧ್ಯ ? ಕೊಚ್ಚಿಹೋಗುತ್ತಾರೆ.

ಉಪಪನ್ನಂ ಹಿ ಯತ್ ಪ್ರಾಜ್ಞೋ ನಿಸ್ತರೇನ್ನೇತರೋ ಜನಃ ।
ದೂರತೋ ಗುಣದೋಷೌ ಹಿ ಪ್ರಾಜ್ಞಃ ಸರ್ವತ್ರ ಪಶ್ಯತಿ ॥೧೮॥

ಜ್ಞಾನಿಯಾದವನು ಅಜ್ಞಾನ ನೌಕೆಯಿಂದ ಈ ಸಮುದ್ರನೌಕೆಯನ್ನು ದಾಟುತ್ತಾನೆ. ಅಜ್ಞಾನಿಯಾದವನು ದಾಟುವುದಿಲ್ಲ ಎಂಬುದು ಯೋಗ್ಯವಾಗಿದೆ. ಮೊದಲೇ ಪ್ರಾಜ್ಞನಾದವನು ಗುಣ-ದೋಷಗಳನ್ನು ಎಲ್ಲ ರೀತಿಯಲ್ಲಿಯೂ ಅರ್ಥ ಮಾಡಿಕೊಂಡಿರುತ್ತಾನೆ.

ಸಂಶಯಾತ್ಮಾ ಸ ಕಾಮಾತ್ಮಾ ಚಲಚಿತ್ತೋಽಲ್ಪಚೇತನಃ ।
ಅಪ್ರಾಜ್ಞೋ ನ ತರತ್ಯೇವ ಯೋ ಹ್ಯಾಸ್ತೇ ನ ಸ ಗಚ್ಛತಿ ॥೧೯॥

ಸಂಶಯದಿಂದ ಕೂಡಿದ ಚೇತನನು, ಕಾಮನೆಗಳಿಂದ ತುಂಬಿದ ಮನಸ್ಸುಳ್ಳವನು ಚಲಚಿತ್ತನಾಗಿ, ಅಲ್ಪಚೇತನನಾಗಿ, ಅಪ್ರಜ್ಞನಾಗಿ ಯಾವನು ಇದ್ದಾನೋ ಅವನೂ ಈ ಸಂಸಾರ ಸಮುದ್ರವನ್ನು ದಾಟುವುದಿಲ್ಲ, ಮುಂದೂ ಹೋಗುವುದಿಲ್ಲ.

ಅಪ್ಲವೋ ಹಿ ಮಹಾದೋಷಮುಹ್ಯಮಾನೋऽಧಿಗಚ್ಛತಿ ।
ಕಾಮಗ್ರಾಹಗೃಹೀತಸ್ಯ ಜ್ಞಾನಮಪ್ಯಸ್ಯ ನ ಪ್ಲವಃ ॥೨೦॥

ಜ್ಞಾನವೆಂಬ ನೌಕೆಯಿಲ್ಲದವನು ಮೋಹದಿಂದ ಮಹಾದೋಷವನ್ನೇ ಹೊಂದುತ್ತಾನೆ. ಕಾಮವೆಂಬ ಮೊಸಳೆಯಿಂದ ಬಂಧಿತನಾದವಗೆ ಜ್ಞಾನವು ಎಂದಿಗೂ ನೌಕೆಯಾಗುವುದಿಲ್ಲ. ಕಾಮಾಂಧವೆಂಬ ಶಾಸ್ತ್ರಗಳು ಉದ್ಧರಿಸುವುದಿಲ್ಲ ಎಂದು ಭಾವ.

ತಸ್ಮಾದುನ್ಮಜ್ಜನಸ್ಯಾರ್ಥೇ ಪ್ರಯತೇತ ವಿಚಕ್ಷಣಃ ।
ಏತದುನ್ಮಜ್ಜನಂ ತಸ್ಯ ಯದಯಂ ಬ್ರಾಹ್ಮಣೋ ಭವೇತ್ ॥೨೧॥

ಆದ್ದರಿಂದ ಬುದ್ಧಿವಂತನಾದ ಮನುಷ್ಯನು ಸಂಸಾರಸಾಗರವನ್ನು ದಾಟಲು ನಿರಂತರ ಪ್ರಯತ್ನಿಸಬೇಕು. ಸಂಸಾರಸಾಗರದಿಂದ ದಾಟುವುದು ಎಂದರೆ ಬ್ರಾಹ್ಮಣನಾಗಿ ಬ್ರಹ್ಮಜ್ಞಾನವನ್ನು ಹೊಂದುವುದು ಎಂದು ಅರ್ಥ.

ತ್ರ್ಯವದಾತೇ ಕುಲೇ ಜಾತಸ್ತ್ರಿಸಂದೇಹಸ್ತ್ರಿಕರ್ಮಕೃತ್ ।
ತಸ್ಮಾದುನ್ಮಜ್ಜನಸ್ತಿಷ್ಠೇನ್ನಿಸ್ತರೇತ್ ಪ್ರಜ್ಞಯಾ ಯಥಾ ॥೨೨॥

ಶ್ರೇಷ್ಠವಾದ ಕುಲದಲ್ಲಿ ಹುಟ್ಟಿದವನು ದಾನ ತೆಗೆದುಕೊಳ್ಳುವುದರಲ್ಲಿ, ಪಾಠ ಮಾಡುವುದರಲ್ಲಿ, ಯಜ್ಞ ಮಾಡಿಸುವುದರಲ್ಲಿ ಅಪೇಕ್ಷೆಯನ್ನು ನಿಮಿತ್ತ ಇಟ್ಟುಕೊಳ್ಳುವಾಗ ತುಂಬಾ ಎಚ್ಚರವನ್ನು ವಹಿಸಬೇಕು. ಸಂದೇಹದಿಂದಲೇ ವಿಚಾರ ಮಾಡಿ ಮುಂದೆ ಹೋಗಬೇಕು. ಆದರೆ ಅಧ್ಯಯನ, ಯಜನ, ದಾನ ಈ ಮೂರು ಕರ್ಮಗಳನ್ನು ಮಾಡುವಾಗ ನಿಸ್ಸಂದೇಹನಾಗಿ ಇರಬೇಕು. (ಇದನ್ನೇ ಸರ್ವವೇದಾಂತ ಪ್ರತ್ಯಯಾಧಿಕರಣದಲ್ಲಿ ವಿವರಿಸಿದ್ದಾರೆ). ಆದ್ದರಿಂದ ಈ ಸಂಸಾರವೆಂಬ ಸಾಗರದಿಂದ ಮೇಲೇಳಲು ಪ್ರಯತ್ನ ಮಾಡಲೇಬೇಕು. ಅದಕ್ಕೆ ಯೋಗ್ಯವಾದ ಜ್ಞಾನವನ್ನು ಹೊಂದಲೇಬೇಕು.

ಸಂಸೃತಸ್ಯ ಹಿ ದಾಂತಸ್ಯ ನಿಯತಸ್ಯ ಕೃತಾತ್ಮನಃ ।
ಪ್ರಾಜ್ಞಸ್ಯಾನಂತರಾ ಸಿದ್ಧಿರಿಹ ಲೋಕೇ ಪರತ್ರ ಚ ॥೨೩॥

ಸಂಸಾರದಿಂದ ಸಂಪನ್ನನಾದ, ಜಿತೇಂದ್ರಿಯನಾದ, ವ್ರತನಿಷ್ಠನಾದ, ಸತ್ಕರ್ಮಗಳನ್ನು ಮಾಡಿರುವ ಪ್ರಾಜ್ಞನಿಗೆ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ತಡವಾಗದೆ ಬೇಗ ಸಿದ್ಧಿಯಾಗುತ್ತದೆ.

ವರ್ತತೇ ತೇಷು ಗೃಹವಾನಕ್ರುದ್ಧ್ಯನ್ನನಸೂಯಕಃ ।
ಪಂಚಭಿಃ ಸತತಂ ಯಜ್ಞೈರ್ವಿಘಸಾಶೀ ಯಜೇತ ಚ ॥೨೪॥

ಕ್ರೋಧರಹಿತನಾದ ಗೃಹಸ್ಥ ಬ್ರಾಹ್ಮಣನು ಅಸೂಯಾರಹಿತನಾಗಿ ನಿಯಮಗಳನ್ನು ಪಾಲಿಸಿ, ಪಂಚ ರೀತಿಯಿಂದ ಯಜ್ಞಗಳನ್ನು ಮಾಡುತ್ತಿರಬೇಕು. ಯಜ್ಞಶಿಷ್ಟವಾದ ಅನ್ನವನ್ನೇ ಊಟ ಮಾಡಬೇಕು.

ಸತಾಂ ವೃತ್ತೇನ ವರ್ತೇತ ಕ್ರಿಯಾಃ ಶಿಷ್ಟವದಾಚರೇತ್ ।
ಅಸಂರೋಧೇನ ಧರ್ಮಸ್ಯ ವೃತ್ತಿಂ ಲಿಪ್ಸೇದಗರ್ಹಿತಾಮ್ ॥೨೫॥

ಸದ್ಧರ್ಮದಿಂದ ವರ್ತಿಸಬೇಕು. ಶಿಷ್ಟಾಚಾರವನ್ನು ಪರಿಪಾಲಿಸಬೇಕು. ಇನ್ನೊಬ್ಬರ ಜೀವನಕ್ಕೆ ತೊಂದರೆಯಾಗದಂತೆ ಅನಿಂದಿತವಾದ ಜೀವನವನ್ನು ಇಟ್ಟುಕೊಳ್ಳಬೇಕು.

ಶ್ರುತಿವಿಜ್ಞಾನತತ್ತ್ವಜ್ಞಃ ಶಿಷ್ಟಾಚಾರೋ ವಿಚಕ್ಷಣಃ ।
ಸ್ವಧರ್ಮೇಣ ಕ್ರಿಯಾವಾಂಶ್ಚ ಕರ್ಮಣಾ ಸೋಽಪ್ಯಸಂಕರಃ ॥೨೬॥

ವೇದಗಳು ತಿಳಿಸಿರುವ ರಹಸ್ಯತತ್ತ್ವವೆನಿಸಿದ ಭಗವಂತನ ವಿಚಾರವನ್ನು ತಿಳಿದಿರಬೇಕು. ಶಿಷ್ಟಾಚಾರನಾಗಿರಬೇಕು, ತುಂಬಾ ಜಾಣನಾಗಿರಬೇಕು. ಸ್ವಧರ್ಮಾಚರಣೆಯನ್ನು ಅನುಷ್ಠಾನ ಮಾಡುವುದರಲ್ಲಿ ಆಸಕ್ತನಾಗಿರಬೇಕು. ಕರ್ಮಗಳಲ್ಲಿ ಸಾಂಕರ್ಯವನ್ನು ಮಾಡಬಾರದು. ಅರ್ಥಾತ್ ತನ್ನ ಬ್ರಾಹ್ಮಣೋಚಿತವಾದ ಕರ್ಮವನ್ನೇ ತಾನು ಮಾಡಬೇಕು.

ಕ್ರಿಯಾವಾನ್ ಶ್ರದ್ದಧಾನಶ್ಚ ದಾತಾ ಪ್ರಾಜ್ಞೋಽನಸೂಯಕಃ ।
ಧರ್ಮಾಧರ್ಮವಿಶೇಷಜ್ಞಃ ಸರ್ವಂ ತರತಿ ದುಸ್ತರಮ್ ॥೨೭॥

ಕ್ರಿಯೆಗಳನ್ನು ಮಾಡುವ, ಶ್ರದ್ಧಾಳುವಾದ, ದಾನಬುದ್ಧಿಯುಳ್ಳ, ಪ್ರಾಜ್ಞನಾದ, ಅಮಾತ್ಸರ್ಯವುಳ್ಳ, ಧರ್ಮಾಧರ್ಮ ವಿಶೇಷಜ್ಞಾನವುಳ್ಳ ವ್ಯಕ್ತಿಯು ಯಾರಿಂದಲೂ ದಾಟಲಾಗದ ಕಷ್ಟಗಳೆಲ್ಲವನ್ನೂ ದಾಟುತ್ತಾನೆ.

ಧೃತಿಮಾನಪ್ರಮತ್ತಶ್ಚ ದಾಂತೋ ಧರ್ಮವಿದಾತ್ಮವಾನ್ ।
ವೀತಹರ್ಷಭಯಕ್ರೋಧೋ ಬ್ರಾಹ್ಮಣೋ ನಾವಸೀದತಿ ॥೨೮॥

ಧೈರ್ಯವಂತನಾದ, ಜಾಗರೂಕನಾದ, ದಾಂತನಾದ, ಧರ್ಮವೇತ್ತೃವಾದ, ಮನೋನಿಗ್ರಹವುಳ್ಳ, ಹರ್ಷ-ಭಯ-ಕ್ರೋಧಗಳುಳ್ಳ ಬ್ರಾಹ್ಮಣನು ಎಂದಿಗೂ ದುಃಖಿತನಾಗುವುದಿಲ್ಲ.

ಏಷಾ ಪೂರ್ವತರಾ ವೃತ್ತಿರ್ಬ್ರಾಹ್ಮಣಸ್ಯ ವಿಧೀಯತೇ ।
ಜ್ಞಾನವಿತ್ತ್ವೇನ ಕರ್ಮಾಣಿ ಕುರ್ವನ್ ಸರ್ವತ್ರ ಸಿದ್ಧ್ಯತಿ ॥೨೯॥

ಪುರಾಣ ಕಾಲದಿಂದಲೂ ಬ್ರಾಹ್ಮಣನ ವೃತ್ತಿಯು ಹೀಗೆ ವಿಧಿಸಲ್ಪಟ್ಟಿದೆ. ಜ್ಞಾನ ಪೂರ್ವಕವಾಗಿ ಕರ್ಮವನ್ನು ಮಾಡುವ ಬ್ರಾಹ್ಮಣನಿಗೆ ಎಲ್ಲ ಕಡೆಯಲ್ಲಿಯೂ ಸಿದ್ಧಿ ಉಂಟಾಗುತ್ತದೆ.

ಅಧರ್ಮಂ ಧರ್ಮಕಾಮೋಪಿ ಕರೋತಿ ಹ್ಯವಿಚಕ್ಷಣಃ ।
ಧರ್ಮಂ ಚಾಧರ್ಮಸಂಕಾಶಂ ಶೋಚನ್ನಿವ ಕರೋತಿ ಸಃ ॥೩೦॥

ಸಜ್ಜನನು ಧರ್ಮಾಚರಣೆಯನ್ನು ಹೇಗೆ ಹೆದರದೆ ಮಾಡುತ್ತಾನೋ ಹಾಗೆ ಅಜ್ಞಾನಿಯಾದ ದುರ್ಜನನು ಅಧರ್ಮವನ್ನು ಹೆದರದೆ ಮಾಡುತ್ತಾನೆ. ಉತ್ತಮ ಜ್ಞಾನಿಯಾದ ವ್ಯಕ್ತಿಯು ಅಧರ್ಮವನ್ನು ಹೆದರಿಕೊಂಡು ಶಂಕೆಯಿಂದ ಹೇಗೆ ಮಾಡುತ್ತಾನೋ ಹಾಗೆ ಅಧಮನಾದ ವ್ಯಕ್ತಿಯು ಧರ್ಮವನ್ನು ಶಂಕೆಯಿಂದಲೇ ಆಚರಿಸುತ್ತಾನೆ.

ಧರ್ಮಂ ಕರೋಮೀತಿ ಕರೋತ್ಯಧರ್ಮ-
ಮಧರ್ಮಕಾಮಶ್ಚ ಕರೋತಿ ಧರ್ಮಮ್ ।
ಉಭೇ ಬಾಲಃ ಕರ್ಮಣೀ ನ ಪ್ರಜಾನನ್
ಸ ಜಾಯತೇ ಮ್ರಿಯತೇ ಚಾಪಿ ದೇಹೀ ॥೩೧॥

ಅನ್ನದಾನಾದಿ ಧರ್ಮವನ್ನು ಮಾಡುತ್ತೇನೆಂದು ಪ್ರವೃತ್ತನಾದ ವ್ಯಕ್ತಿಯು ಪಂಕ್ತಿ ಭೇದವನ್ನು, ಬ್ರಾಹ್ಮಣರನ್ನು ಹೆದರಿಸುವುದು ಮುಂತಾದ ಅಧರ್ಮವನ್ನು ಮಾಡುತ್ತಾನೆ. ಅಧರ್ಮಕಾಮನಾದ ವ್ಯಕ್ತಿಯು ರಾತ್ರಿ ಮಾಡಬಾರದ ಅಗಮ್ಯಾಗಮನವನ್ನು ಮಾಡಿ ಪ್ರಾತಃಕಾಲದಲ್ಲಿ ತಾನು ತಪಸ್ವಿ ಎಂದು ತೋರಿಸಿಕೊಳ್ಳಲು ನಾಲ್ಕುಗಂಟೆಗೆ ಎದ್ದು ಸ್ನಾನಾದಿ ಧರ್ಮಾಚರಣೆಯನ್ನು ಮಾಡುತ್ತಾನೆ. ಈ ರೀತಿಯಾಗಿ ಅಧರ್ಮ ಮಾಡುವ ಈರ್ವರೂ ಕರ್ಮಗಳ ರಹಸ್ಯವನ್ನು ತಿಳಿದವರಲ್ಲ. ಪುನಃ ಅವರು ಹುಟ್ಟುತ್ತಾರೆ, ಪುನಃ ಸಾಯುತ್ತಾರೆ. ಕರ್ಮಬಂಧನದಲ್ಲೇ ತೊಳಲುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಜ್ಞಾನವೇ ಮೋಕ್ಷಸಾಧನವೆಂದು ವ್ಯಾಸರು ಶುಕಮುನಿಗಳಿಗೆ ನಿರೂಪಿಸಿದುದು.

ವ್ಯಾಸಃ

ಅಥ ಚೇದ್ ರೋಚಯೇದೇತದ್ ದ್ರುಹ್ಯೇತ ಮನಸಾ ತಥಾ ।
ಉನ್ಮಜ್ಜಂಶ್ಚ ನಿಮಜ್ಜಂಶ್ಚ ಜ್ಞಾನವಾನ್ ಪ್ಲವವಾನ್ ಭವೇತ್ ॥೧॥

ಮಗನೇ, ಮನುಷ್ಯನ ಮನಸ್ಸೇ ಈ ಸಂಸಾರವೆಂಬ ನದಿಯಲ್ಲಿ ಮುಳುಗಿಸುವುದಕ್ಕೂ, ತೇಲಿಸುವುದಕ್ಕೂ ಕಾರಣವಾಗಿದೆ. ಇದರ ವಿರುದ್ಧ ದಾಟಬೇಕೆಂದರೆ ಜ್ಞಾನವೆಂಬ ತೆಪ್ಪವನ್ನು ಆಶ್ರಯಿಸಬೇಕು.

ಪ್ರಜ್ಞಯಾ ನಿರ್ಮಿತೈರ್ಧೀರಾಸ್ತಾರಯಂತ್ಯಬುಧಾನ್ ಪ್ಲವೈಃ ।
ನಾಬುಧಾಸ್ತಾರಯಂತ್ಯನ್ಯಾನಾತ್ಮಾನಂ ವಾ ಕಥಂಚನ ॥೨॥

ಭಗವತ್ತತ್ತ್ವ, ಸಂಸಾರ ಇವುಗಳನ್ನು ತಿಳಿದ ವ್ಯಕ್ತಿಗಳು ಈ ಸಂಸಾರದಲ್ಲಿ ಮೂರ್ಖರಾದವರನ್ನು ತಮ್ಮ ಜ್ಞಾನವೆಂಬ ದೋಣಿಯಿಂದ ದಾಟಿಸಲುಬಲ್ಲರು. ಮೂರ್ಖರಾದವರು ತಮ್ಮನ್ನಾಗಲಿ, ಮತ್ತೊಬ್ಬರನ್ನಾಗಲೀ ಈ ಸಂಸಾರವೆಂಬ ಕಾಲದಿಂದ ಉದ್ಧರಿಸಲು ಸಮರ್ಥರಲ್ಲ.

ಛಿನ್ನದೋಷೋ ಮುನಿರ್ಯೋಗಯುಕ್ತೋ ಯುಂಜೀತ ದ್ವಾದಶ ।
ದಶಕರ್ಮಸುಖಾನರ್ಥಾನುಪಾಯಾಪಾಯನಿಷ್ಠಿಯಃ ॥೩॥

ಕಾಮಾದಿ ದೋಷಗಳನ್ನು ನಿಗ್ರಹಿಸಿಕೊಂಡ, ಸಂಗಗಳನ್ನು ತ್ಯಾಗ ಮಾಡಿದ ವ್ಯಕ್ತಿಗೆ ಸಾಧನೆಗೆ ಈ ಹನ್ನೆರಡು ಗುಣಗಳು ಮುಖ್ಯವಾಗಿವೆ. ಯಜನ, ಯಾಜನ, ದಾನ, ಪ್ರತಿಗ್ರಹ, ಅಧ್ಯಯನ, ಅಧ್ಯಾಪನ ಎಂಬ ಆರು ಕರ್ಮಗಳು, ಕಾಮ-ಕ್ರೋಧ-ಲೋಭ-ಮೋಹ-ಮದ-ಮತ್ಸರವೆಂಬ ಆರು ಕರ್ಮಗಳು ಅಥವಾ ಸ್ನಾನ-ಶೌಚ-ತಪಸ್ಸು-ಸತ್ಯ-ದಯಾ-ತಿತಿಕ್ಷ ಎಂಬ ಆರು ಕರ್ಮಗಳು. ಹತ್ತು ಇಂದ್ರಿಯಗಳಿಗೆ ತೃಪ್ತಿಯನ್ನುಂಟು ಮಾಡಿಸುವ ಹತ್ತು ಕರ್ಮಗಳು. ಅವುಗಳಿಂದ ಹುಟ್ಟುವ ಆರು ಸುಖಗಳು, ಅನರ್ಥಗಳು. ಇವುಗಳ ಉಪಾಯ-ಅಪಾಯಗಳನ್ನು ಚೆನ್ನಾಗಿ ತಿಳಿದಿರಬೇಕು.

ಚಕ್ಷುರಾಚಾರಸಂಗ್ರಾಹೇ ಮನಸಾ ದರ್ಶನೇನ ಚ ।
ಯಚ್ಛೇದ್ ವಾಙ್ಮನಸೀ ಬುದ್ಧ್ಯಾ ಯ ಇಚ್ಛೇಜ್ಜ್ಞಾನಮುತ್ತಮಮ್ ।
ಜ್ಞಾನೇನ ಯಚ್ಛೇದಾತ್ಮಾನಂ ಯ ಇಚ್ಛೇಚ್ಛಾಂತಿಮಾತ್ಮನಃ ॥೪॥

ಚಕ್ಷುರಿಂದ್ರಿಯವು ವಿಷಯಪದಾರ್ಥಗಳ ಕಡೆ ಸಂಚರಿಸುವುದರಿಂದ ಆಗುವ ದೋಷಗಳನ್ನು, ಗುಣಗಳನ್ನು ಮನಸ್ಸಿನ ವ್ಯಾಪಾರದಿಂದ ಚಿಂತಿಸಿ ಮಾತು, ಮನಸ್ಸನ್ನು ಬುದ್ಧಿಯಿಂದ ನಿಯಂತ್ರಿಸಬೇಕು. ಶಾಂತಿಯನ್ನು ಹೊಂದಲು ಬಯಸುವವನು ಜ್ಞಾನದಿಂದ ಬುದ್ಧಿಯನ್ನು ನಿಯಂತ್ರಿಸಬೇಕು.

ಏತೇಷಾಂ ಚೇದನುದ್ರಷ್ಟಾ ಪುರುಷೋಽಪಿ ಸುದಾರುಣಃ ।
ಯದಿ ವಾ ಸರ್ವವೇದಜ್ಞೋ ಯದಿ ವಾಪ್ಯನೃಚೋಽಜಪಃ ॥೫॥

ಯದಿ ವಾ ಧಾರ್ಮಿಕೋ ಯಜ್ವಾ ಯದಿ ವಾ ಪಾಪಕೃತ್ತಮಃ ।
ಯದಿ ವಾ ಪುರುಷವ್ಯಾಘ್ರೋ ಯದಿ ವಾ ಕ್ಲೈಬ್ಯಧಾರಿತಾ ॥೬॥

ತರತ್ಯೇವ ಮಹಾದುರ್ಗಂ ಜರಾಮರಣಸಾಗರಮ್ ।
ಏವಂ ಹ್ಯೇತೇನ ಯೋಗೇನ ಯುಂಜಾನೋಽಪ್ಯೇಕಮಂತತಃ ।
ಅಪಿ ಜಿಜ್ಞಾಸಮಾನೋ ಹಿ ಶಬ್ದಬ್ರಹ್ಮಾತಿವರ್ತತೇ ॥೭॥

ಮನುಷ್ಯನು ಅತ್ಯಂತ ಕ್ರೂರನಾಗಿರಲಿ ಅಥವಾ ಸರ್ವವೇದಗಳನ್ನು ತಿಳಿದವನಾಗಿರಲಿ, ಬ್ರಾಹ್ಮಣನಾಗಿದ್ದು ವೇದಜ್ಞಾನದಿಂದ ಶೂನ್ಯನಾಗಿರಲಿ, ಧಾರ್ಮಿಕನಾಗಿರಲಿ, ಯಜ್ಞಶೀಲನಾಗಿರಲಿ, ಘೋರಪಾಪಗಳನ್ನು ಮಾಡಿದವನಾಗಿರಲಿ, ಪುರುಷಶ್ರೇಷ್ಠನಾಗಿರಲಿ, ಕಷ್ಟಮಯ ಜೀವನವನ್ನು ನಡೆಸುವವನಾಗಿರಲಿ, ಅವನು ಹಿಂದೆ ಹೇಳಿದ ಹನ್ನೆರಡು ಯೋಗಗಳನ್ನು ಆಶ್ರಯಿಸಿದ್ದೇ ಆದಲ್ಲಿ, ಆ ಯೋಗಗಳ ಉಪಾಯದಿಂದ ತನ್ನ ಮನಸ್ಸನ್ನು ಭಗವಂತನಲ್ಲಿ ನೆಲೆಗೊಳಿಸಿದ್ದಾದ ಪಕ್ಷದಲ್ಲಿ ಅತ್ಯಂತ ದುರ್ಗಮವಾದ ಜರಾ-ಮರಣಗಳನ್ನು ದಾಟುತ್ತಾನೆ. ಬ್ರಹ್ಮನ ವಿಷಯದಲ್ಲಿ ಜಿಜ್ಞಾಸೆಯನ್ನು ಮಾಡುತ್ತಾ, ವೈದಿಕ ವಿಧಿ-ನಿಷೇಧಗಳನ್ನು ದಾಟಿ ಪರಮಾತ್ಮನನ್ನು ಹೊಂದುತ್ತಾನೆ.

ಧರ್ಮೋಪಸ್ಥೋ ಹ್ರೀವರೂಥ ಉಪಾಯಾಪಾಯಕೂಬರಃ ।
ಅಪಾನಾಕ್ಷಃ ಪ್ರಾಣಯುಗಃ ಪ್ರಜ್ಞಾ ಯುರ್ಜೀವಬಂಧನಃ ॥೮॥

ಧ್ಯಾನಯೋಗವೆಂಬುದು ಸುಂದರ ರಥದಂತಿದೆ. ರಥದಲ್ಲಿ ಕುಳಿತುಕೊಳ್ಳುವ ಸ್ಥಾನವೇ ಧರ್ಮ ಎನಿಸಿದೆ. ಲಜ್ಜೆಯು ಆವರಣವಾಗಿದೆ. ಉಪಾಯಗಳು ಮೂಕಿಗಳಾಗಿವೆ. ಅಚ್ಚುಮರವು ಅಪಾನವಾಯುವಾಗಿದೆ. ಪ್ರಾಣವಾಯುವು ನೊಗವಾಗಿದೆ. ಬುದ್ಧಿಯು ಜೀವನವಾಗಿದೆ. ಪ್ರಜ್ಞೆಯು ಆಯುಷ್ಯವಾಗಿದೆ. ಜೀವನವು ಬಂಧನವಾಗಿದೆ (ಕಟ್ಟುವಿಕೆಯು ಜೀವನವಾಗಿದೆ).

ಚೇತನಾಬಂಧುರಶ್ಚಾರುರಾಚಾರಗ್ರಹನೇಮಿವಾನ್ ।
ದರ್ಶನಸ್ಪರ್ಶನವಹೋ ಘ್ರಾಣಶ್ರವಣವಾಹನಃ ॥೯॥

ಚೈತನ್ಯವು ನೊಗದ ಕೆಳಗಿನ ಮೂಕಿಯ ಕಂಬವಾಗಿದೆ. ವ್ರತಾಚಾರವು ಚಕ್ರದ ನೇಮಿಯಾಗಿದೆ. ನೇತ್ರ, ತ್ವಚೆ, ಘ್ರಾಣ, ಶ್ರವಣಗಳನ್ನು ಈ ರಥವು ಹೊತ್ತುಕೊಂಡಿದೆ.

ಪ್ರಜ್ಞಾ ನಾಭಿಃ ಸರ್ವತಂತ್ರಪ್ರತೋದೋ ಜ್ಞಾನಸಾರಥಿಃ ।
ಕ್ಷೇತ್ರಜ್ಞಾಧಿಷ್ಠಿತೋ ಧೀರಃ ಶ್ರದ್ಧಾದಮಪುರಃಸರಃ ॥೧೦॥

ಪ್ರಜ್ಞೆಯು ಅದರ ನಾಭಿಯಾಗಿದೆ. ಶಾಸ್ತ್ರಗಳು ಚಾವಟಿಯಾಗಿದೆ. ಜ್ಞಾನವೇ ಸಾರಥಿಯಾಗಿದೆ. ಕ್ಷೇತ್ರಜ್ಞನಾದ ಭಗವಂತನು ಈ ರಥದಲ್ಲಿ ಕುಳಿತು ಈ ರಥವನ್ನು

ಮೆಲ್ಲನೆ ನಡೆಸುತ್ತಿದ್ದಾನೆ. ಶ್ರದ್ಧೆ ಮತ್ತು ದಮಗಳನ್ನು ಮುಂದೆ ಮಾಡಿಕೊಂಡು ಈ ರಥವು ಮುಂದೆ ಸಾಗುತ್ತಿದೆ.

ತ್ಯಾಗವರ್ತ್ಮಾನುಗಃ ಕ್ಷೇಮ್ಯಃ ಶೌಚಗಾಧ್ವಾನಗೋಚರಃ ।
ಜೀವಯುಕ್ತೋ ರಥೋ ದಿವ್ಯೋ ಬ್ರಹ್ಮಲೋಕೇ ವಿರಾಜತೇ ॥೧೧॥

ತ್ಯಾಗವೆಂಬ ಸೂಕ್ಷ್ಮಗುಣವು ಈ ರಥವನ್ನು ಹಿಂಬಾಲಿಸುತ್ತಿದೆ. ಕ್ಷೇಮವೆನಿಸಿದ ಶೌಚರತರಾದ ಮುನಿಗಳಿಗೆ ಸದಾಚಾರವೇ ಸಾಗುವ ದಾರಿ ಎನಿಸಿದೆ. ಜೀವನಿಂದ ಯುಕ್ತವಾದ ಈ ದಿವ್ಯರಥವು ಬ್ರಹ್ಮಲೋಕದಲ್ಲಿ ವಿರಾಜಿಸುತ್ತಿದೆ.

ಅಥ ಸಂತ್ವರಮಾಣಸ್ಯ ರಥಮೇತಂ ಯುಯುಕ್ಷತಃ ।
ಅಕ್ಷರಂ ಗಂತುಮನಸೋ ವಿಧಿಂ ವಕ್ಷ್ಯಾಮಿ ಶೀಘ್ರಗಮ್ ॥೧೨॥

ಈ ಧ್ಯಾನಯೋಗವೆಂಬ ರಥದಲ್ಲಿ ಕುಳಿತು ಬೇಗ ಆ ಪರಬ್ರಹ್ಮನ ಬಳಿ ಸಾಗಬೇಕು ಎಂದು ಬಯಸುವ ಸಾಧಕನಿಗೆ ಪರಬ್ರಹ್ಮನನ್ನು ಹೊಂದುವ ಉಪಾಯವನ್ನು ಹೇಳುತ್ತೇನೆ.

ಸಪ್ತ ಯೋ ಧಾರಣಾಃ ಕೃತ್ವಾ ವಾಗ್ಯತಃ ಪ್ರತಿಪದ್ಯತೇ ।
ಪೃಷ್ಠತಃ ಪಾರ್ಶ್ವತಶ್ಚಾನ್ಯಾ ಯಾವತ್ಯಸ್ತಾಃ ಪ್ರಧಾರಣಾಃ ॥೧೩॥

ಯಾವ ಸಾಧಕನು ವಾಕ್‌ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತಾನೋ ಅವನು ಪಂಚಜ್ಞಾನೇಂದ್ರಿಯಗಳಿಗೆ, ಮನಸ್ಸು-ಬುದ್ಧಿಗಳಿಗೆ ಸಂಬಂಧಿಸಿದ ಏಳು ಧಾರಣೆಗಳನ್ನು ಸಿದ್ಧಿಮಾಡಿಕೊಳ್ಳುತ್ತಾನೆ. ಇವುಗಳ ಅಧೀನವಾಗಿ ಪೃಥಿವಿ ಗುಣಗಳಾದ ಗಂಧ, ರಸಾದಿ ಪ್ರಧಾರಣೆಗಳು ಸಾಧಕನ ಹಿಂದೆ, ಆಚೆ-ಈಚೆ, ಸರ್ವಾಂಗಗಳಲ್ಲಿಯೂ ಅನುಕೂಲವಾಗಿ ಇರುತ್ತವೆ.

ಕ್ರಮಶಃ ಪಾರ್ಥಿವಂ ಯಚ್ಚ ವಾಯವ್ಯಂ ಖಂ ತಥಾ ಪಯಃ ।
ಜ್ಯೋತಿಷೋ ಯತ್ತದೈಶ್ವರ್ಯಮಹಂಕಾರಸ್ಯ ಬುದ್ಧಿತಃ ॥೧೪॥

ಸಾಧಕನು ಕ್ರಮವಾಗಿ ಭೂಮಿ, ನೀರು, ತೇಜಸ್ಸು, ವಾಯು, ಆಕಾಶ, ಅಹಂಕಾರ, ವಿಜ್ಞಾನತತ್ತ್ವ ಇವುಗಳ ಮೇಲೆ ಹಿಡಿತವನ್ನು ಸಾಧಿಸಿಕೊಳ್ಳಬಹುದು.

ಅವ್ಯಕ್ತಸ್ಯ ತಥೈಶ್ವರ್ಯಂ ಕ್ರಮಶಃ ಪ್ರತಿಪದ್ಯತೇ ।
ವಿಕ್ರಮಾಶ್ಚಾಪಿ ಯಸ್ಯೈತೇ ತಥಾ ಯುಂಕ್ತೇ ಸ ಯೋಗತಃ ॥೧೫॥

ಅಥಾಸ್ಯ ಯೋಗಯುಕ್ತಸ್ಯ ಸಿದ್ಧಿಮಾತ್ಮನಿ ಪಶ್ಯತಃ ।
ನಿರ್ಮಥ್ಯಮಾನಃ ಸೂಕ್ಷ್ಮತ್ವಾದ್ ರೂಪಾಣೀಮಾನಿ ದರ್ಶಯೇತ್ ॥೧೬॥

ಬಳಿಕ ಅವ್ಯಕ್ತ ತತ್ತ್ವವು ಕ್ರಮವಾಗಿ ತನ್ನ ಅಧೀನಕ್ಕೆ ಒಳಪಡುತ್ತದೆ. ಯುಕ್ತಿಯಿಂದ ಯೋಗವನ್ನು ಅಭ್ಯಾಸ ಮಾಡುವವನಿಗೆ ಉಂಟಾಗುವ ಅನುಭವಕ್ರಮವನ್ನು, ಯೋಗಾಭ್ಯಾಸ ನಿರತನಾದ ಯೋಗಿಗೆ ಪೃಥಿವೀ ಜಯವೇ ಮೊದಲಾದ ಐಶ್ವರ್ಯಗಳು ಯಾವ ರೀತಿಯಲ್ಲಿ ಲಭಿಸುತ್ತವೆ ಎಂಬ ವಿಷಯವನ್ನು, ಸಾಧಕನು ಸ್ಥೂಲದೇಹದ ಮೇಲಿನ ಅಭಿಮಾನವನ್ನು ತೊರೆದು ಸೂಕ್ಷ್ಮದೃಷ್ಟಿಯುಳ್ಳವನಾದ ಕಾರಣ ಅವನಿಗೆ ದೊರೆಯುವ ಅಲೌಕಿಕ ಚಿಹ್ನೆಗಳು ಏನು ಎಂಬುದನ್ನು ನಿನಗೆ ತಿಳಿಸುತ್ತೇನೆ.

ಶೈಶಿರಸ್ತು ಯಥಾ ಧೂಮಃ ಸೂಕ್ಷ್ಮಃ ಸಂಶ್ರಯತೇ ನಭಃ ।
ತಸ್ಯ ದೇಹಾದ್ ವಿಯುಕ್ತಸ್ಯ ಪೂರ್ವರೂಪಂ ಭವತ್ಯುತ ॥೧೭॥

ಶಿಶಿರ ಕಾಲದ ಸೂಕ್ಷ್ಮವಾದ ಇಬ್ಬನಿಯು ಆಕಾಶವನ್ನು ಆವರಿಸಿದಂತೆ ಕಾಣುತ್ತದೆ. ಯೋಗಿಯ ಅನುಭವದಲ್ಲಿ ಇದು ಮೊದಲನೆಯ ರೂಪವಾಗಿದೆ. ಲಿಂಗದೇಹದಿಂದ ಮುಕ್ತನಾದವನಿಗೆ ಕಾಣುವ ಭಗವಂತನ ಅನುಭವವು ಹೀಗೆ ಇರುತ್ತದೆ.

ವ್ಯಾಖ್ಯಾನ ವಿಶೇಷ– ಮಹಾಪ್ರಳಯ ಕಾಲದಲ್ಲಿ ಸತ್ಯಲೋಕದಲ್ಲಿರುವ ಅಪರೋಕ್ಷಜ್ಞಾನಿಗಳಿಗೆ ಚತುರ್ಮುಖ ಬ್ರಹ್ಮನಿಂದ ಸೇರಿಕೊಂಡು ಪೃಥಿವ್ಯಾದಿ ಆವರಣಗಳನ್ನು ದಾಟಿ ಭಗವಂತನ ಉದರದಲ್ಲಿ ಪ್ರವೇಶ ಹೊಂದುವ ಕ್ರಮವನ್ನು ಹೇಳುತ್ತಿದ್ದಾರೆ. ಜ್ಞಾನಿಗಳು ಭೋಗೋಚಿತವಾದ ದಿವ್ಯದೇಹದಿಂದ ಕೂಡಿದಾಗ ಅನಾದಿಕಾಲದಿಂದ ಇರುವ ಲಿಂಗದೇಹದಿಂದ ಕೂಡಿದವರಾಗಿರುತ್ತಾರೆ. ಹೊಗೆಯು ಸಂಪೂರ್ಣ ನಾಶವಾದ ಬಳಿಕ ಆಕಾಶದಲ್ಲಿ ಜಲಸಂಗ್ರಹ ಯೋಗ್ಯವಾದ ಮೇಘರೂಪವು ಹೇಗೆ ಕಾಣಿಸುತ್ತದೋ ಹಾಗೆ ಹೃದಯದಲ್ಲಿ ಬ್ರಹ್ಮಾಂಡಕ್ಕೆ ಆಧಾರಭೂತವಾದ, ಆದಿ ಕೂರ್ಮನಲ್ಲಿ ಆಶ್ರಯವನ್ನು ಹೊಂದಿರುವ ಜಗತ್ತನ್ನು ನೋಡುತ್ತಾನೆ. ಲಿಂಗದೇಹ ಯುಕ್ತನಾದಾಗ ಹೃದಯದಲ್ಲಿ ಲಿಂಗದೇಹದ ಧೂಮವು ಹೊರಟು ಹೋಗುತ್ತಿರಲು ಬ್ರಹ್ಮಾಂಡಾಧಾರವಾದ ಭಗವಂತನ ರೂಪವನ್ನು ಚೆನ್ನಾಗಿ ನೋಡುತ್ತಾನೆ. ಮೊದಲನೆಯ ಆವರಣದಲ್ಲಿರುವ ಬಂಗಾರದ ಕರ್ಪರಕ್ಕೆ ಆಶ್ರಯವಾದ ಆದಿ ಕೂರ್ಮರೂಪವನ್ನು ಲಿಂಗದೇಹದ ಬಂಧನವನ್ನು ಪರಿಹರಿಸಿಕೊಳ್ಳುತ್ತಾ ಸಾಧಕನು ನೋಡುತ್ತಾನೆ.

ಅಥ ಧೂಮಸ್ಯ ವಿರಮೇ ದ್ವಿತೀಯಂ ರೂಪದರ್ಶನಮ್ ।
ಜಲರೂಪಮಿವಾಕಾಶೇ ತತ್ಸೈವಾತ್ಮನಿ ಪಶ್ಯತಿ ॥೧೮॥

ಅಪಾಂ ವ್ಯತಿಕ್ರಮೇ ಚಾಪಿ ವಹ್ನಿರೂಪಂ ಪ್ರಕಾಶತೇ ।
ತಸ್ಮಿನ್ನುಪರತೇ ಚಾಸ್ಯ ಪೀತವಸ್ತ್ರವದಿಷ್ಯತೇ ।
ಊರ್ಣಾರೂಪಸವರ್ಣಂ ಚ ತಸ್ಯ ರೂಪಂ ಪ್ರಕಾಶತೇ ॥೧೯॥

ಭಗವಂತನ ಪೃಥಿವಿಗೆ ಆಧಾರರೂಪವಾದ ರೂಪವನ್ನು ನೋಡಿದ ಬಳಿಕ ಬ್ರಹ್ಮಾಂಡದ ಎರಡನೆಯ ಆವರಣಭೂತವಾದ ಜಲಾಧಾರಕವಾದ ಭಗವಂತನ ರೂಪವನ್ನು ನೋಡುತ್ತಾನೆ. ಅದನ್ನೂ ದಾಟಿದ ಬಳಿಕ ಮೂರನೆಯ ಆಧಾರವಾದ ಭಗವಂತನ ರೂಪವನ್ನು ನೋಡುತ್ತಾನೆ. ಅದನ್ನೂ ದಾಟಿದ ಬಳಿಕ ಹಳದಿ ಬಟ್ಟೆಯಂತೆ ಕಾಣಿಸುತ್ತಿರುವ ಉಣ್ಣೆಯ ರೂಪಕ್ಕೆ ಸಮಾನವಾದ ಬಂಗಾರದ ಬಣ್ಣದಿಂದ ಕಂಗೊಳಿಸುವ ಬುದ್ಧಿ ತತ್ತ್ವಕ್ಕೆ ಆಶ್ರಯವಾದ ವಾಯು ಆವರಣವಾದ ರೂಪವನ್ನು ನೋಡುತ್ತಾನೆ.

ಅಥ ಶ್ವೇತಾಂ ಗತಿಂ ಗತ್ವಾ ವಾಯವ್ಯಂ ಸೂಕ್ಷ್ಮಮಪ್ಯಜಃ ।
ಸುಶುಕ್ಲಂ ಚೇತಸಃ ಸೌಕ್ಷ್ಮ್ಯಮವ್ಯಕ್ತಂ ಬ್ರಹ್ಮಣೋಽಸ್ಯ ವೈ ॥೨೦॥

ಬಳಿಕ ಬಿಳಿಯಾದ ಅಂಗಕಾಂತಿಯನ್ನು ಹೊಂದಿದ ಸಾಧಕನು ಅಹಂಕಾರ ತತ್ತ್ವಕ್ಕೆ ಆಧಾರವಾದ ಭಗವದ್ರೂಪವನ್ನು ನೋಡುತ್ತಾನೆ. ಬಳಿಕ ಚಿತ್ತ-ಪ್ರವರ್ತಕವಾದ, ಮಹತ್ತತ್ತ್ವಾಭಿಮಾನಿಯಾದ, ಬ್ರಹ್ಮನಿಗೆ ನಿಯಾಮಕನಾದ ಭಗವಂತನ ಶುಕ್ಲಸೂಕ್ಷ್ಮ ರೂಪವನ್ನು ನೋಡುತ್ತಾನೆ. ಬಳಿಕ ಅವ್ಯಕ್ತತತ್ತ್ವಾಧಾರವಾದ ಭಗವಂತನ ರೂಪವನ್ನು ಯೋಗಿಯು ನೋಡುತ್ತಾನೆ.

ಏತೇಷ್ವಪಿ ಹಿ ಜಾತೇಷು ಫಲಜಾತಾನಿ ಮೇ ಶೃಣು ।
ಜಾತಸ್ಯ ಪಾರ್ಥಿವೈಶ್ವರ್ಯೇ ಸೃಷ್ಟಿರಿಷ್ಟಾ ವಿಧೀಯತೇ ॥೨೧॥

ಹಿಂದೆ ಹೇಳಿದ ತತ್ತ್ವಗಳಲ್ಲಿ ಹುಟ್ಟಿದ ಅಭಿಮಾನಿದೇವತೆಗಳಿಗೆ ಯಾವ ಯಾವ ಫಲಗಳು ಲಭಿಸುತ್ತವೆ ಎಂದು ಹೇಳುತ್ತೇನೆ, ಕೇಳು. ಪೃಥಿವಿ ತತ್ತ್ವವೆನಿಸಿದ ಸುವರ್ಣ ಕರ್ಪರವೆಂಬ ಐಶ್ವರ್ಯದಿಂದ ಹುಟ್ಟಿದ ಪೃಥಿವಿಯ ಅಭಿಮಾನಿ ದೇವತೆಯ

ದೆಸೆಯಿಂದ ಸೃಷ್ಟಿಮಾಡುವ ಸಾಮರ್ಥ್ಯವು ಉಂಟಾಗುತ್ತದೆ. ಅದೇ ಭೂಲೋಕವೆಂಬ ರೂಪಾಂತರವನ್ನು ಹೊಂದಿದೆ.

ಪ್ರಜಾಪತಿರಿವಾಕ್ಷೋಭ್ಯಃ ಶರೀರಾತ್ ಸೃಜತಿ ಪ್ರಜಾಃ ।
ಅಂಗುಲ್ಯಂಗುಷ್ಠಮಾತ್ರೇಣ ಹಸ್ತಪಾದೇನ ವಾ ತಥಾ ॥೨೨॥

ವಾಯುತತ್ತ್ವದಿಂದ ಹುಟ್ಟಿದ ಮುಖ್ಯಪ್ರಾಣನು ಚತುರ್ಮುಖ ಬ್ರಹ್ಮನಂತೆ ತನ್ನ ಶರೀರದಿಂದಲೇ ಪ್ರಜೆಗಳನ್ನು ಸೃಷ್ಟಿಸುತ್ತಾನೆ. ತನ್ನ ದೇಹದ ಹೆಬ್ಬೆರಳನ್ನು ಒತ್ತುವುದರಿಂದಲೇ, ಹಸ್ತ-ಪಾದಗಳ ನಿಕ್ಷೇಪದಿಂದಲೇ ಪೃಥಿವಿಯನ್ನು ಪ್ರಳಯ ಕಾಲದಲ್ಲಿ ಅಲುಗಾಡಿಸುತ್ತಾನೆ. ವಾಯುತತ್ತ್ವಾಭಿಮಾನಿಯಾದ ಮುಖ್ಯಪ್ರಾಣನ ಸಾಮರ್ಥ್ಯವು ಈ ತರನಾಗಿದೆ ಎಂದು ಭಾವ.

ಪೃಥಿವೀಂ ಕಂಪಯತ್ಯೇಕೋ ಗುಣೋ ವಾಯೋರಿತಿ ಸ್ಮೃತಃ ।
ಆಕಾಶಭೂತಶ್ಚಾಕಾಶೇ ಸವರ್ಣತ್ವಾತ್ ಪ್ರಕಾಶತೇ ॥೨೩॥

ಪೃಥಿವಿಯನ್ನೇ ಚಲಿಸುವ ಸಾಮರ್ಥ್ಯಗುಣವು ವಾಯುವಿನ ಗುಣವು ಎಂದು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಇದರಂತೆ ಆಕಾಶತತ್ತ್ವಾಭಿಮಾನಿಯಾದ, ಭೂತಾಕಾಶಕ್ಕೆ ಅಭಿಮಾನಿಯಾದ ಉತ್ತಮವಾದ ಅಭಿಮಾನ, ಅಭಿಮಾನಿ ದೇವತೆಯು ಉತ್ತಮವಾದ ಬಣ್ಣದಿಂದ ಕೂಡಿದವನಾಗಿ ಬೆಳಗುತ್ತಾನೆ.

ವರ್ಣತೋ ಗೃಹ್ಯತೇ ಚಾಪ್ಸು ನಾಪಃ ಪಿಬತಿ ಚಾಶಯಾನ್ ।
ನ ಚಾಸ್ಯ ತೇಜಸಾ ರೂಪಂ ದೃಶ್ಯತೇ ಶಾಮ್ಯತೇ ತಥಾ ॥೨೪॥

ಇಷ್ಟಬಂದಂತೆ ತನ್ನ ರೂಪವನ್ನು ಮರೆಸಿಕೊಳ್ಳುವುದಕ್ಕೆ ಸಮರ್ಥನಾಗುತ್ತಾನೆ. ಆಕಾಶದಲ್ಲಿ ನೀರು ತುಂಬಿಕೊಳ್ಳುತ್ತಿದ್ದರೂ ಆಸೆಯಿಂದ ನೀರನ್ನು ಸ್ವಯಂ ತಾನು ಕುಡಿಯುವುದಿಲ್ಲ. ಆಕಾಶತತ್ತ್ವಾಭಿಮಾನಿಯು ಬೇರೆಯವರಿಗೆ ದಾನ ಮಾಡುವ ಸ್ವಭಾವವುಳ್ಳವನಾಗಿದ್ದಾನೆ. ಇತರ ಭೂತಗಳಿಗೆ ಆಯಾ ಐಶ್ವರ್ಯ ಪದಾರ್ಥಗಳನ್ನು ತನ್ನಲ್ಲಿ ಸಂಗ್ರಹಿಸಿಕೊಳ್ಳುವುದಿಲ್ಲ ಎಂದು ಭಾವ. ಅಗ್ನಿ ತತ್ತ್ವಾಭಿಮಾನಿಯು ತನ್ನ ತೇಜಸ್ಸಿನಿಂದ ಬೆಳಗುತ್ತಾನೆ. ಇವನ ರೂಪವನ್ನು ಯಾರಿಂದಲೂ ನೋಡಲಾಗುವುದಿಲ್ಲ. ಆ ಮಹಾತೇಜಸ್ಸನ್ನು ಉಪಶಮನಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ.

ಅಹಂಕಾರಸ್ಯ ವಿಜಿತೇ ಪಂಚೈತೇ ಸ್ಯುರ್ವಶಾನುಗಾಃ ।
ಷಣ್ಣಾಮಾತ್ಮನಿ ಬುದ್ಧೌ ಚ ಜಿತಾಯಾಂ ಪ್ರಭವತ್ಯಥ ॥೨೫॥

ಅಹಂಕಾರವನ್ನು ಜಯಿಸಿದಾಗ ಈ ಪಂಚಭೂತಗಳು ವಶವಾಗುತ್ತವೆ. ಪಂಚಭೂತ, ಅಹಂಕಾರಗಳನ್ನು ಜಯಿಸಿದ ಬಳಿಕ ಬುದ್ಧಿಯು ವಶವಾಗುತ್ತದೆ.

ನಿರ್ದೋಷಾ ಪ್ರತಿಭಾ ಹ್ಯೇನಂ ಕೃತ್ಸ್ನಾ ಸಮಭಿವರ್ತತೇ ।
ತಥೈವ ವ್ಯಕ್ತಮಾತ್ಮಾನಮವ್ಯಕ್ತಂ ಪ್ರತಿಪದ್ಯತೇ ॥೨೬॥

ಬುದ್ಧಿಯನ್ನು ಜಯಿಸಿದ ಬಳಿಕ ನಿರ್ದುಷ್ಟವಾದ ಪ್ರತಿಭೆಯು ಈ ಸಾಧಕ ಪುರುಷನನ್ನು ಸಮಗ್ರವಾಗಿ ವ್ಯಾಪಿಸುತ್ತದೆ. ಪ್ರತಿಭಾಶೀಲನಾಗುತ್ತಾನೆ. ಬಳಿಕ ಹಿಂದೆ ಹೇಳಿದ ಪಂಚಭೂತಗಳಲ್ಲೆಲ್ಲ ಇರುವ ಗುಣಗಳನ್ನು ಹೊಂದಿರುವ, ಮಹತ್ತತ್ತ್ವಾಭಿಮಾನಿಯಾದ ಚತುರ್ಮುಖ ಬ್ರಹ್ಮನನ್ನು ಸಾಧಕನು ಹೊಂದುತ್ತಾನೆ. ಚತುರ್ಮುಖ ಬ್ರಹ್ಮನನ್ನು ಹೊಂದಿದ ಬಳಿಕ ಪ್ರಕೃತಿ ತತ್ತ್ವಾಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ಹೊಂದುತ್ತಾನೆ.

ಯತೋ ನಿಃಸರತೇ ಲೋಕೋ ಭವತಿ ವ್ಯಕ್ತಸಂಜ್ಞಕಃ ।
ತತ್ರಾವ್ಯಕ್ತಮಯೀಂ ವ್ಯಾಖ್ಯಾಂ ಶೃಣು ತ್ವಂ ವಿಸ್ತರೇಣ ಮೇ ।
ತಥಾ ವ್ಯಕ್ತಮಯೀಂ ಚೈವ ಸಂಖ್ಯಾಂ ಪೂರ್ವಂ ನಿಬೋಧ ಮೇ ॥೨೭॥

ವ್ಯಕ್ತವೆನಿಸಿದ ಈ ಜಗತ್ತೆಲ್ಲವೂ ಅವ್ಯಕ್ತತತ್ತ್ವಾಭಿಮಾನಿನಿಯಾದ ಲಕ್ಷ್ಮೀದೇವಿಯಿಂದಲೇ ಹೊರಹೊಮ್ಮಿದೆ. ಆ ಅವ್ಯಕ್ತ ತತ್ತ್ವಾಭಿಮಾನಿನಿಯಾದ ಲಕ್ಷ್ಮಿಯ ಬಗ್ಗೆ ವಿಸ್ತಾರವಾದ ವಿವರಣೆಯನ್ನು ನೀನು ಕೇಳಿಸಿಕೊ. ಅದರಂತೆ ವ್ಯಕ್ತವೆನಿಸಿದ ಜಗತ್ತಿನಲ್ಲಿರುವ ಸಂಖ್ಯೆ ಏನೆಂಬುದನ್ನು ಮೊದಲು ತಿಳಿದುಕೊ.

ಪಂಚವಿಂಶತಿತತ್ತ್ವಾನಿ ತುಲ್ಯಾನ್ಯುಭಯತಃ ಸಮಮ್ ।
ಯೋಗೇ ಸಾಂಖ್ಯೇಽಪಿ ಚ ತಥಾ ವಿಶೇಷಾಂಸ್ತತ್ರ ಮೇ ಶೃಣು ॥೨೮॥

ಪ್ರಕೃತಿತತ್ತ್ವದಿಂದ ಕೂಡಿದ ಜಗತ್ತಿನಲ್ಲಿರುವ ತತ್ತ್ವಗಳು ಇಪ್ಪತ್ತೈದು ಎಂದು ಯೋಗಶಾಸ್ತ್ರದಲ್ಲಿ, ಸಾಂಖ್ಯಶಾಸ್ತ್ರದಲ್ಲಿ ಎರಡು ಕಡೆಯೂ ಒಂದೇ ರೀತಿಯಾಗಿ ಹೇಳಿದ್ದಾರೆ. ಇವುಗಳಲ್ಲಿರುವ ವಿಶೇಷವನ್ನು ಹೇಳುತ್ತೇನೆ, ಕೇಳು.

ವ್ಯಾಖ್ಯಾನ ವಿಶೇಷ– ಕೆಲವರು ಸಾಂಖ್ಯ ಎಂದರೆ ಸಾಂಖ್ಯಮತದ ಶಾಸ್ತ್ರ ಎಂದು ಭಾವಿಸಿದ್ದಾರೆ. 'ಯಥಾರ್ಥಸಾಂಖ್ಯವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ' ಎಂದು ಹೇಳಿದಂತೆ ಯಥಾರ್ಥತತ್ತ್ವವನ್ನು ಹೇಳುವ ಶಾಸ್ತ್ರವೇ ಸಾಂಖ್ಯಶಾಸ್ತ್ರವೆನಿಸಿದೆ. ವೇದಶಾಸ್ತ್ರಕ್ಕೂ ಸಾಂಖ್ಯಶಾಸ್ತ್ರಕ್ಕೂ ವ್ಯತ್ಯಾಸ ಇರುವುದಿಲ್ಲ. ಹಾಗಾಗಿ ಸಾಂಖ್ಯಶಾಸ್ತ್ರ ಎಂದರೆ ವೇದಶಾಸ್ತ್ರ ಎಂದೇ ಅರ್ಥ.

ಪ್ರೋಕ್ತಂ ತದ್ ವ್ಯಕ್ತಮಿತ್ಯೇವ ಜಾಯತೇ ವರ್ಧತೇ ಚ ಯತ್ ।
ಜೀರ್ಯತೇ ಮ್ರಿಯತೇ ಚೈವ ಚತುರ್ಭಿರ್ಲಕ್ಷಣೈರ್ಯುತಮ್ ॥೨೯॥

ಯಾವುದು ಹುಟ್ಟು, ಬೆಳವಣಿಗೆ, ಮುಪ್ಪು, ಸಾವು ಎಂಬ ನಾಲ್ಕು ಲಕ್ಷಣಗಳಿಂದ ಕೂಡಿದೆಯೋ ಅದಕ್ಕೆ ವ್ಯಕ್ತ ಎಂದೇ ಹೇಳುತ್ತಾರೆ.

ವಿಪರೀತಮತೋ ಯತ್ತು ತದವ್ಯಕ್ತಮುದಾಹೃತಮ್ ।
ದ್ವಾವಾತ್ಮಾನೌ ಚ ವೇದೇಷು ಸಿದ್ಧಾಂತೇಷ್ವಪ್ಯುದಾಹೃತೌ ॥೩೦॥

ಯಾವುದು ನಾಲ್ಕು ಲಕ್ಷಣಗಳಿಂದ ಕೂಡಿಲ್ಲವೋ ಅದನ್ನು ಅವ್ಯಕ್ತ ಎನ್ನುತ್ತಾರೆ. ಮಹಾಭಾರತ, ಪಂಚರಾತ್ರ, ಬ್ರಹ್ಮಮೀಮಾಂಸಾಶಾಸ್ತ್ರಗಳಲ್ಲಿ ಜೀವ-ಪರಮಾತ್ಮ ಎಂಬ ಎರಡು ತತ್ತ್ವಗಳನ್ನು ಹೇಳಿದ್ದಾರೆ.

ಚತುರ್ಲಕ್ಷಣಜಂ ತ್ವನ್ಯಂ ಚತುರ್ವರ್ಜಂ ಪ್ರಚಕ್ಷತೇ ।
ವ್ಯಕ್ತಮವ್ಯಕ್ತಜಂ ಚೈವ ತಥಾ ಬುದ್ಧಮಥೇತರತ್ ।
ಸತ್ತ್ವಂ ಕ್ಷೇತ್ರಜ್ಞ ಇತ್ಯೇತದ್ ದ್ವಯಮಪ್ಯನುದರ್ಶಿತಮ್ ॥೩೧॥

ಈ ಜೀವ-ಪರಮಾತ್ಮರಿಬ್ಬರಲ್ಲಿ ಈ ಜೀವಾತ್ಮ ತತ್ತ್ವವು ನಾಲ್ಕು ಲಕ್ಷಣಗಳಿಂದ ಎಂದರೆ ಜಾಯತೇ, ವರ್ಧತೇ, ಕ್ಷೀಯತೇ, ಮ್ರಿಯತೇ ಎಂಬ ಲಕ್ಷಣಗಳಿಂದ ಹುಟ್ಟನ್ನು ಪಡೆದಿದೆ. ಈ ಜೀವತತ್ತ್ವಕ್ಕಿಂತಲೂ ಅತ್ಯಂತ ಭಿನ್ನನಾದ ಪರಮಾತ್ಮತತ್ತ್ವವು ಜಾಯತೇ, ವರ್ಧತೇ, ಕ್ಷೀಯತೇ, ಮ್ರಿಯತೇ ಎಂಬ ನಾಲ್ಕು ಲಕ್ಷಣಗಳಿಂದ ದೂರವಾಗಿದೆ. ಪರಮಾತ್ಮತತ್ತ್ವಕ್ಕಿಂತಲೂ ಅರ್ಥಾತ್ ಅವ್ಯಕ್ತತತ್ತ್ವಕ್ಕಿಂತಲೂ ಭಿನ್ನನಾದ ವ್ಯಕ್ತನೆನಿಸಿದ ಜೀವನು ಅವ್ಯಕ್ತನೆನಿಸಿದ ಪರಮಾತ್ಮನಿಂದಲೇ ಹುಟ್ಟನ್ನು ಪಡೆದಿರುತ್ತಾನೆ. ವ್ಯಕ್ತನೆನಿಸಿದ ಜೀವನನ್ನು ಸತ್ತ್ವವೆಂದು, ಅವ್ಯಕ್ತನೆನಿಸಿದ ಪರಮಾತ್ಮನನ್ನು ಕ್ಷೇತ್ರಜ್ಞನೆಂದು ಹೇಳುತ್ತಾರೆ. ಇವೆರಡರ ಲಕ್ಷಣಗಳನ್ನು ನಾನು ಹೇಳಿದ್ದೇನೆ.

ದ್ವಾವಾತ್ಮಾನೌ ಚ ವೇದೇಷು ವಿಷಯೇಷು ಚ ಲಕ್ಷಿತೌ ।
ವಿಷಯಪ್ರತಿಸಂಹಾರಃ ಸಾಂಖ್ಯಾನಾಂ ಸಿದ್ಧಿಲಕ್ಷಣಃ ॥೩೨॥

ಹೀಗೆ ಜೀವ ಮತ್ತು ಪರಮಾತ್ಮ ಎಂಬ ಎರಡು ತತ್ತ್ವಗಳು ವೇದಗಳಲ್ಲಿ ಹೇಳಲ್ಪಟ್ಟಿವೆ. ಅಜ್ಞಾನವೆಂಬ ವಿಷವನ್ನು ಪರಿಹರಿಸುವ ಸಿದ್ಧಾಂತವು ವಿಷಯ ಎಂದು ಕರೆಯಲ್ಪಟ್ಟಿದೆ. ವಿಷಯ ಎನಿಸಿದ ಸತ್ಸಿದ್ಧಾಂತಗಳಲ್ಲಿ ಇವರಿಬ್ಬರ ಸ್ವರೂಪವನ್ನು ಹೀಗೆ ನಿರೂಪಿಸಿದ್ದಾರೆ- ವೇದಗಳಲ್ಲಿ ಪ್ರತಿಪಾದಿತರಾದ ಇಬ್ಬರು ಆತ್ಮರು ಜೀವ-ಪರಮಾತ್ಮರು. ಅವರಿಬ್ಬರ ಲಕ್ಷಣಗಳು ವಿರುದ್ಧವಾದ ಲಕ್ಷಣಗಳಾಗಿವೆ ಎಂದು ವೇದ ಸಿದ್ಧಾಂತದಲ್ಲಿ ತೋರಿಸಲಾಗಿದೆ. ಜ್ಞಾನಿಗಳಿಗೆ ಅವ್ಯಕ್ತತತ್ತ್ವನೆನಿಸಿದ ಭಗವಂತನಿಂದಲೇ ಸಿದ್ಧಿಯು ಉಂಟಾಗುತ್ತದೆ ಎಂದು ವೇದ ಸಿದ್ಧಾಂತದಿಂದ ನಿರ್ಣಯವಾಗುತ್ತದೆ.

ನಿರ್ಮಮಶ್ಚಾನಹಂಕಾರೋ ನಿರ್ದ್ವಂದ್ವಶ್ಛಿನ್ನಸಂಶಯಃ ।
ನೈವ ಕ್ರುಧ್ಯತಿ ನ ದ್ವೇಷ್ಟಿ ನಾನೃತಾ ಭಾಷತೇ ಗಿರಃ ॥೩೩॥

ಅಕ್ರುಷ್ಟಸ್ತಾಡಿತಶ್ಚೈವ ಮೈತ್ರೇಣ ಧ್ಯಾತಿ ನಾಶುಭಮ್ ।
ವಾಗ್ದಂಡಕರ್ಮಮನಸಾಂ ತ್ರಯಾಣಾಂ ಚ ನಿವರ್ತಕಃ ॥೩೪॥

ಸಮಃ ಸರ್ವೇಷು ಭೂತೇಷು ಬ್ರಹ್ಮಾಣಮಭಿವರ್ತತೇ ।
ನೈವೇಚ್ಛತಿ ನ ಚಾನಿಚ್ಛೋ ಯಾತ್ರಾಮಾತ್ರವ್ಯವಸ್ಥಿತಃ ॥೩೫॥

ಯಾರು ಅಹಂಕಾರ, ಮಮಕಾರಗಳನ್ನು ಬಿಟ್ಟು ದ್ವಂದ್ವರಹಿತನಾಗಿ ಸಂಶಯಗಳನ್ನೆಲ್ಲ ಪರಿಹರಿಸಿಕೊಂಡು, ಯಾರಲ್ಲಿಯೂ ಕೋಪ-ದ್ವೇಷಗಳಿಲ್ಲದೆ, ಅಸತ್ಯವನ್ನು ಮಾತನಾಡದೆ, ತನ್ನನ್ನು ಯಾರಾದರೂ ಬೈದರೂ ಕೈ ಎತ್ತಿ ಹೊಡೆದರೂ ಅವರಲ್ಲಿ ಪ್ರೀತಿಯನ್ನು ತೋರಿಸುತ್ತಾ, ಮತ್ತೊಬ್ಬರಿಗೆ ಕೇಡನ್ನು ಬಯಸದೆ, ಮನೋ-ವಾಕ್-ಕಾಯಗಳನ್ನು ಅಡಗಿಸಿಕೊಂಡು ಎಲ್ಲ ಪ್ರಾಣಿಗಳಲ್ಲಿಯೂ ಒಂದೇ ರೀತಿಯಾಗಿ ವರ್ತಿಸುತ್ತಾನೋ ಅವನು ಗುಣಪರಿಪೂರ್ಣನಾದ ಭಗವಂತನ ಪಾದವನ್ನು ಸೇರುತ್ತಾನೆ. ಅವನು ವಿಷಯ ಸುಖಗಳಲ್ಲಿ ಅತಿಯಾದ ಅಭಿಲಾಷೆಯನ್ನಾಗಲಿ, ನಿರಾಸಕ್ತಿಯನ್ನಾಗಲಿ ಹೊಂದುವುದಿಲ್ಲ. ದೇಹಧಾರಣೆಗೆ ಬೇಕಾದಷ್ಟನ್ನೇ ಸ್ವೀಕರಿಸುತ್ತಾನೆ.

ಅಲೋಲುಪೋಽವ್ಯಥೋ ದಾಂತೋ ನ ಕೃತೀ ನ ನಿರಾಕೃತಿಃ ।
ನಾಸ್ಯೇಂದ್ರಿಯಮನೇಕಾಗ್ರಂ ನಾತಿಕ್ಷಿಪ್ತಮನೋರಥಃ ।
ಅಹಿಂಸ್ರಃ ಸರ್ವಭೂತಾನಾಮೀದೃಕ್ಸಾಂಖ್ಯೋ ವಿಮುಚ್ಯತೇ ॥೩೬॥

ವಿಷಯಪದಾರ್ಥಗಳಲ್ಲಿ ಆಸಕ್ತನಾಗದೆ, ಅವುಗಳಿಂದ ವ್ಯತಿತನಾಗದೆ, ಭಗವನ್ನಿಷ್ಠ ಬುದ್ಧಿಯಿಂದ ಅತಿಯಾದ ಜಗತ್ತಿನ ವ್ಯಾಪಾರಗಳನ್ನು ಮಾಡದೆ, ವಿಹಿತ ಕರ್ಮಗಳನ್ನು ಮಾಡುತ್ತಾ, ಇಂದ್ರಿಯಗಳಿಗೆ ಬೇಕಾದ ಸುಖಗಳನ್ನು ಹೆಚ್ಚಾಗಿ ಗಮನಿಸದೆ, ಮನಸ್ಸಿನ ಅಭಿಲಾಷೆಗಳನ್ನು ಅತಿಯಾಗಿ ನಿರಾಕರಿಸದೆ, ಯಾವ ಪ್ರಾಣಿಗಳಿಗೂ ಹಿಂಸೆಯನ್ನು ಮಾಡದೆ ಯಾವ ವ್ಯಕ್ತಿಯು ಯಥಾರ್ಥಜ್ಞಾನವನ್ನು ಹೊಂದಿರುತ್ತಾನೋ ಅವನು ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ.

ಅವಿಯೋಗಾದ್ ವಿಮುಚ್ಯಂತೇ ಕಾರಣೈರ್ಯೈರ್ನಿಬೋಧ ಮೇ ।
ಯೋಗೈಶ್ವರ್ಯಮತಿಕ್ರಾಂತೋ ಯೋಽತಿಕ್ರಾಮತಿ ಮುಚ್ಯತೇ ॥೩೭॥

ಇತ್ಯೇಷಾ ಭಾವಜಾ ಬುದ್ಧಿಃ ಕಥಿತಾ ತೇ ನ ಸಂಶಯಃ ।
ಏವಂ ಭವತಿ ನಿರ್ದ್ವಂದ್ವೋ ಬ್ರಹ್ಮಾಣಂ ಚಾಧಿಗಚ್ಛತಿ ॥೩೮॥

ಯಾವ ಸಾಧನದ ಉಪಾಯವನ್ನು ಬಿಡದೆ ಬಿಡುಗಡೆಯನ್ನು ಹೊಂದುತ್ತಾನೋ ಆ ಕಾರಣವನ್ನೇ ನಾನು ಹಿಂದೆ ಹೇಳಿದ್ದೇನೆ ಎಂಬುದಾಗಿ ತಿಳಿ. ಯಾರು ಪರಮಾತ್ಮನ ಯೋಗೈಶ್ವರ್ಯವನ್ನು ಅಲ್ಲಗಳೆದು, ಅದನ್ನು ಅತಿಕ್ರಮಿಸಿದ್ದು ಮಿಥ್ಯಾಜ್ಞಾನಿಯಾಗಿ ಇದ್ದಾನೋ ಅರ್ಥಾತ್ ಶ್ರುತಿ-ಸ್ಮೃತಿ-ಯುಕ್ತಿಗಳನ್ನು ಅತಿಕ್ರಮಿಸಿ ವರ್ತಿಸುತ್ತಿದ್ದಾನೋ ಅಂತಹ ಮಿಥ್ಯಾಜ್ಞಾನಿಯನ್ನು ನಿರಾಕರಿಸಿ ಅರ್ಥಾತ್ ಅದ್ವೈತ ಮತವನ್ನು ನಿರಾಕರಿಸಿ, ಯಾವಾಗಲೂ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸುತ್ತಿರುತ್ತಾನೋ ಅವನು ಈ ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಈ ರೀತಿಯಾಗಿ ಮನಃಪೂರ್ವಕವಾಗಿ ಉಂಟಾದ ಜ್ಞಾನವನ್ನು ನಿನಗೆ ಉಪದೇಶಿಸಿದ್ದೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಯಾವನು ನಾನು ಹೇಳಿದ ರೀತಿಯಲ್ಲಿ ಶೀತೋಷ್ಣ, ಸುಖ-ದುಃಖ, ಲಾಭ-ಅಲಾಭಗಳಲ್ಲಿ ದ್ವಂದ್ವರಹಿತನಾಗಿ ಬದುಕುತ್ತಾನೋ ಅವನು ಗುಣಪರಿಪೂರ್ಣನಾದ ಭಗವಂತನನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಶುಕಾನುಪ್ರಶ್ನೇ ಮೋಕ್ಷೋಪಾಯವಿಧಿರ್ನಾಮ
ಏಕಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ಸೃಷ್ಟಿಯ ಕಾರ್ಯಗಳಲ್ಲಿ ಬುದ್ಧಿಗೆ ಇರುವ ಮಹತ್ವ.
ಬುದ್ಧಿಗೆ ಅನುಗುಣವಾಗಿ ಇರುವ ತಾರತಮ್ಯದ ವರ್ಣನೆ.

ವ್ಯಾಸಃ

ಅಥ ಜ್ಞಾನಪ್ಲವಂ ಧೀರೋ ಗೃಹೀತ್ವಾ ಶಾಂತಿಮಾಸ್ಥಿತಃ ।
ಉನ್ಮಜ್ಜಂಶ್ಚ ನಿಮಜ್ಜಂಶ್ಚ ಜ್ಞಾನಮೇವಾಭಿಸಂಶ್ರಯೇತ್ ॥೧॥

ಶುಕನೇ, ತನಗೆ ಶಾಂತಿಯನ್ನು ಹೊಂದಲು ಬಯಸುವ ಧೀರನಾದ ವ್ಯಕ್ತಿಯು ಜ್ಞಾನವೆಂಬ ದೋಣಿಯನ್ನು ಅವಲಂಬಿಸಿ ಸಾಗಬೇಕು. ಸಂಸಾರದಲ್ಲಿ ಮುಳುಗಿ ಏಳುತ್ತಾ ಇರುವ ವ್ಯಕ್ತಿಗೆ ಜ್ಞಾನವೆಂಬ ದೋಣಿಯೇ ಆಶ್ರಯವಾಗಿದೆ.

ಶುಕಃ

ಕಿಂ ತಜ್ಜ್ಞಾನಮಥೋ ವಿದ್ಯಾ ಯಯಾ ನಿಸ್ತರತಿ ದ್ವಯಮ್ ।
ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತಿರಿತಿ ಚೈವ ಹಿ ॥೨॥

ತಂದೆಯೇ, ವಿದ್ಯೆ ಅಥವಾ ಜ್ಞಾನವು ಹುಟ್ಟು-ಸಾವು ಎಂಬ ಎರಡು ದೋಷಗಳನ್ನು ದಾಟಿಸುತ್ತದೆ. ಅದು ಹೇಗೆ ಎನ್ನುವುದನ್ನು ತಿಳಿಸು. ಪ್ರವೃತ್ತಿ ಧರ್ಮ ಎಂದರೆ ಏನು? ಅಥವಾ ನಿವೃತ್ತಿ ಧರ್ಮ ಎಂದರೆ ಏನು? ಎನ್ನುವುದನ್ನು ತಿಳಿಸು.

ವ್ಯಾಸಃ

ಯಸ್ತು ಪಶ್ಯೇತ್ ಸ್ವಭಾವೇನ ವಿನಾ ಭಾವಮಚೇತನಃ ।
ಪುಷ್ಯತೇ ಚ ಪುನಃ ಸರ್ವಾನ್ ಪ್ರಜ್ಞಯಾ ಮುಕ್ತಹೇತುಕಃ ॥೩॥

ಯಾವ ಬೌದ್ಧನು ಆಯಾ ವಸ್ತುಗಳ ಸ್ವಭಾವವಿಲ್ಲದೆ ಬೇರೆ ಕಾರಣವಿಲ್ಲ ಎಂದು ಹೇಳುತ್ತಾನೋ, ಈಶ್ವರ ಅದೃಷ್ಟಾದಿ ಕಾರಣಗಳನ್ನು ನಿರಾಕರಿಸಿ ಎಲ್ಲವನ್ನೂ ಬುದ್ಧಿಯಿಂದಲೇ ಸಮರ್ಪಿಸುತ್ತಾನೋ ಅವನು ಅಜ್ಞಾನಿ ಎನಿಸುತ್ತಾನೆ.

ಯೇಷಾಂ ಚೈಕಾಂತಭಾವೇನ ಸ್ವಭಾವಃ ಕಾರಣಂ ಮತಮ್ ।
ದೂರ್ವಾತೃಣಬೃಸೀಕಾ ವೈ ತೇ ಲಭಂತೇ ನ ಕಿಂಚನ ॥೪॥

ಸ್ವಭಾವದಿಂದಲೇ ಜಗತ್ತು ನಡೆಯುತ್ತಿದೆ. ಸ್ವಭಾವಕ್ಕಿಂತ ಭಿನ್ನವಾದ ಕಾರಣವು ಬೇರೆ ಯಾವುದೂ ಇಲ್ಲ ಎಂದು ಹೇಳುವ ಬೌದ್ಧನು ಇನ್ನೊಬ್ಬರನ್ನು ವಂಚಿಸಲು ದರ್ಭೆ ಹುಲ್ಲುಗಳ ಆಸನಗಳನ್ನು ಸ್ವೀಕರಿಸುತ್ತಾನೆ.

ಯೇ ಚೈನಂ ಪಕ್ಷಮಾಶ್ರಿತ್ಯ ವರ್ತಯಂತ್ಯಲ್ಪಚೇತಸಃ ।
ಸ್ವಭಾವಂ ಕಾರಣಂ ಜ್ಞಾತ್ವಾ ನ ಶ್ರೇಯಃ ಪ್ರಾಪ್ನುವಂತಿ ತೇ ॥೫॥

ಕೆಲವರು ಈ ಬೌದ್ಧ ಮತವನ್ನೇ ಅವಲಂಬಿಸಿಕೊಂಡು ಮೂರ್ಖರಾಗಿ ವರ್ತಿಸುತ್ತಾರೆ. ಎಲ್ಲದಕ್ಕೂ ಸ್ವಭಾವವೇ ಕಾರಣ ಎನ್ನುತ್ತಾ ಶ್ರೇಯಸ್ಸನ್ನು ಹೊಂದುವುದಿಲ್ಲ.

ಸ್ವಭಾವೋ ಹಿ ವಿನಾಶಾಯ ಮೋಹಕರ್ಮಮನೋಭವಃ ।
ನಿರುಕ್ತಮೇತಯೋರೇತತ್ ಸ್ವಭಾವಪರಿಭಾವಯೋಃ ॥೬॥

ಬೌದ್ಧರ ಕಲ್ಪನೆಯಿಂದ ಉಂಟಾಗಿರುವ ಮನಸ್ಸಿನಲ್ಲಿ ಹುಟ್ಟಿರುವ ಸ್ವಭಾವವೇ ಜಗತ್ತಿಗೆ ಕಾರಣ ಎಂದು ಅವರು ಹೇಳುತ್ತಾರೆ. ಈ ಕಾರಣದಿಂದಲೇ ಆ ವಾದಿಗಳು ವಿನಾಶಕ್ಕೆ ತುತ್ತಾಗುತ್ತಾರೆ. ಸ್ವಭಾವ, ಪರಿಭಾವ ಈ ಎರಡು ಶಬ್ದಗಳಿಗೂ ನಿರುಕ್ತರ ಪ್ರಕಾರ ಒಂದೇ ಅರ್ಥವು ಹೇಳಲ್ಪಟ್ಟಿದೆ.

ವ್ಯಾಖ್ಯಾನ ವಿಶೇಷ– ಪರಿಭಾವ ಎಂದರೆ ತಿರಸ್ಕಾರ, ಅಭಾವ ಎಂದರೆ ಅರ್ಥ. ಸ್ವಭಾವ ಎಂದರೂ 'ಸುಷ್ಠು ಅಭಾವಃ ಯಸ್ಮಾತ್' ಎಂಬ ಶ್ರುತಿಯಿಂದ ಅಭಾವ ಎಂಬ ಅರ್ಥವೇ ಹೇಳಲ್ಪಡುತ್ತದೆ.

ಕೃಷ್ಯಾದೀನಿ ಹಿ ಕರ್ಮಾಣಿ ಸಸ್ಯಸಂಹರಣಾನಿ ಚ ।
ಪ್ರಜ್ಞಾವದ್ಭಿಃ ಪ್ರಕಲ್ಪ್ತಾನಿ ಯಾನಾಸನಗೃಹಾಣಿ ಚ ॥೭॥

ಸ್ವಭಾವವೇ ಕಾರಣ ಎಂದರೆ ಕೃಷ್ಯಾದಿಗಳು ವ್ಯರ್ಥವೇ ಆದಾವು. ಕೃಷ್ಯಾದಿಗಳನ್ನು ಮಾಡುವವರು ಪ್ರಜ್ಞಾಪೂರ್ವಕವಾಗಿ ಭೂಮಿಯನ್ನು ಉಳಬೇಕು. ನೀರನ್ನು ನೀಡಬೇಕು. ಗೊಬ್ಬರಗಳನ್ನು ಹಾಕಬೇಕು. ಆದ್ದರಿಂದ ಕೃಷ್ಯಾದಿಗಳು ಕಾರಣದಿಂದಲೇ ಕೂಡಿವೆ. ಬೀಜಗಳ ಸಂಗ್ರಹವನ್ನು ಮಾಡುತ್ತಾರೆ. ಪ್ರಯಾಣ ಮಾಡಲು ಗಾಡಿಗಳನ್ನು, ಕುಳಿತುಕೊಳ್ಳಲು ಆಸನಗಳನ್ನು, ವಾಸಿಸಲು ಮನೆಗಳನ್ನು ಕಾರಣಗಳಿಂದಲೇ ಮಾಡಿಕೊಳ್ಳುತ್ತಾರೆ ಹೊರತು ಸ್ವಭಾವದಿಂದಲೇ ಇವುಗಳನ್ನು ನಿರ್ಮಿಸಲು ಆಗುವುದಿಲ್ಲ.

ಆಕ್ರೀಡಾನಾಂ ಗೃಹಾಣಾಂ ಚ ಗದಾನಾಮಗದಸ್ಯ ಚ ।
ಪ್ರಜ್ಞಾವಂತಃ ಪ್ರವಕ್ತಾರೋ ಜ್ಞಾನವದ್ಭಿರನುಷ್ಠಿತಾಃ ॥೮॥

ಆಟವಾಡಲು ಮೈದಾನ, ವಾಸಿಸಲು ಮನೆ ಇವೆಲ್ಲವನ್ನೂ ಪ್ರಾಜ್ಞರಾದವರು ಮಾಡಿಕೊಳ್ಳುತ್ತಾರೆ. ಆಯುರ್ವೇದವನ್ನು ತಿಳಿದವರು ರೋಗಿಗಳ ರೋಗದ ಕಾರಣವನ್ನು ತಿಳಿದು, ಅದರ ಪರಿಹಾರಕ್ಕೆ ಔಷಧವನ್ನು ಕೊಡುತ್ತಾರೆ. ಇದ್ಯಾವುದೂ ಸ್ವಭಾವದಿಂದಲೇ ನಡೆಯುವುದಲ್ಲ. ಪ್ರಜ್ಞಾವಂತರು ಅನುಷ್ಠಾನ ಮಾಡಿದ ಎಲ್ಲಾ ವ್ಯಾಪಾರಗಳು ಬುದ್ಧಿಪೂರ್ವಕವಾಗಿಯೇ ನಡೆಯುತ್ತವೆ, ಸ್ವಭಾವದಿಂದಲ್ಲ.

ಪ್ರಜ್ಞಾ ಸಂಯೋಜಯತ್ಯರ್ಥೈಃ ಪ್ರಜ್ಞಾ ಶ್ರೇಯೋಽಧಿಗಚ್ಛತಿ ।
ರಾಜಾನೋ ಭುಂಜತೇ ರಾಜ್ಯಂ ಪ್ರಜ್ಞಯಾ ತುಲ್ಯಲಕ್ಷಣಾಃ ॥೯॥

ಬುದ್ಧಿಯಿಂದಲೇ ಐಶ್ವರ್ಯದ ಪ್ರಾಪ್ತಿಯಾಗುತ್ತದೆ. ಬುದ್ಧಿಯಿಂದ ಶ್ರೇಯಸ್ಸನ್ನು ಹೊಂದುತ್ತಾರೆ. ಒಂದೇ ರೀತಿಯಾದ ಬುದ್ಧಿಯುಳ್ಳ ರಾಜರಲ್ಲಿ ಯಾರು ಯುಕ್ತಿ ಬದ್ಧವಾಗಿ ಆಡಳಿತವನ್ನು ನಡೆಸುತ್ತಾರೋ ಅವರು ಉಪಭೋಗಿಸುತ್ತಾರೆ.

ಪಾರಾವರ್ಯಂ ತು ಭೂತಾನಾಂ ಜ್ಞಾನೇನೈವೋಪಲಭ್ಯತೇ ।
ವಿದ್ಯಯಾ ತಾತ ಸೃಷ್ಟಾನಾಂ ವಿದ್ಯೈವ ಪರಮಾ ಗತಿಃ ॥೧೦॥

ಜೀವರಲ್ಲಿ ಕಾಣಿಸುವ ತಾರತಮ್ಯವು ಈ ಜ್ಞಾನನಿಮಿತ್ತವಾಗಿಯೇ ಹೊಂದಿಕೆ ಆಗುತ್ತದೆ. ತಾರತಮ್ಯಕ್ಕೆ ಕಾರಣವು ಜ್ಞಾನದಲ್ಲಿರುವ ತಾರತಮ್ಯವು. ಸ್ವಭಾವದಿಂದಲೇ ಎಲ್ಲವೂ ಆಗುತ್ತದೆ ಎಂದು ಬೌದ್ಧರು ಹೇಳಿದರೆ ವಿದ್ಯೆಯಿಂದಲೇ ಸಕಲ ಪ್ರಾಣಿಗಳು ಉತ್ತತ್ತಿಯನ್ನು ಹೊಂದುತ್ತಾರೆ, ಪರಮಾತ್ಮನ ಜ್ಞಾನದಿಂದಲೇ ಉತ್ತಮ ಗತಿಯನ್ನು ಹೊಂದುತ್ತಾರೆ ಎಂಬ ಶ್ರುತಿ ನಿರ್ಣಯಕ್ಕೆ ಏನು ಅರ್ಥ?

ಭೂತಾನಾಂ ಜನ್ಮ ಸರ್ವೇಷಾಂ ವಿವಿಧಾನಾಂ ಚತುರ್ವಿಧಮ್ ।
ಜರಾಯ್ವಂಡಮಥೋದ್ಭೇದಂ ಸ್ವೇದಂ ಚಾಪ್ಯುಪಲಕ್ಷಯೇತ್ ॥೧೧॥

ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳ ಹುಟ್ಟನ್ನು ತಿಳಿದುಕೊಳ್ಳಬೇಕು. ಪ್ರಾಣಿಗಳು ನಾಲ್ಕು ವಿಧವಾಗಿವೆ. ಗರ್ಭಕೋಶದಿಂದ ಹುಟ್ಟುವ ಪ್ರಾಣಿಗಳು, ಮೊಟ್ಟೆಯಿಂದ

ಜನಿಸುವ ಪ್ರಾಣಿಗಳು, ನೆಲವನ್ನು ಭೇದಿಸಿಕೊಂಡು ಹುಟ್ಟುವ ಪಾಣಿಗಳು, ಬೆವರು ನೀರಿನಿಂದ ಹುಟ್ಟುವ ಪ್ರಾಣಿಗಳು ಎಂದು. ಇವುಗಳನ್ನು ಗಮನಿಸಬೇಕು.

ಸ್ಥಾವರೇಭ್ಯೋ ವಿಶಿಷ್ಟಾನಿ ಜಂಗಮಾನ್ಯುಪಲಕ್ಷಯೇತ್ ।
ಉಪಪನ್ನಂ ಹಿ ಯಚ್ಚೇಷ್ಟಾ ವಿಶಿಷ್ಯೇತ ವಿಶೇಷ್ಯಯೋಃ ॥೧೨॥

ಚಲಿಸದೆ ಇರುವ ಗಿಡ-ಮರಗಳಿಗಿಂತಲೂ ಚಲಿಸುವ ಪ್ರಾಣಿಗಳು ಶ್ರೇಷ್ಠ. ಇದು ಯುಕ್ತಿಯುಕ್ತವೂ ಆಗಿದೆ. ಚಲಿಸುವ ಪ್ರಾಣಿಗಳಲ್ಲಿ ವಿಶೇಷ ರೂಪವನ್ನು ಕಾಣಬಹುದು.

ಆಹುರ್ದ್ವಿಬಹುಪಾದಾನಿ ಜಂಗಮಾನಿ ದ್ವಯಾನಿ ಚ ।
ಬಹುಪಾದ್ಭ್ಯೋ ವಿಶಿಷ್ಟಾನಿ ದ್ವಿಪಾದಾನಿ ಬಹೂನ್ಯಪಿ ॥೧೩॥

ಚಲಿಸುವ ಪ್ರಾಣಿಗಳಲ್ಲಿಯೂ ಅನೇಕ ಕಾಲುಗಳುಳ್ಳ ಪ್ರಾಣಿಗಳು, ದ್ವಿಪಾದ ಉಳ್ಳ ಪ್ರಾಣಿಗಳು ಎಂದು ಎರಡು ವಿಧವಿದೆ. ಬಹುಪಾದ ಪ್ರಾಣಿಗಿಂತಲೂ ಎರಡು ಪಾದವುಳ್ಳ ಪ್ರಾಣಿಗಳು ಶ್ರೇಷ್ಠವಾದವುಗಳು.

ದ್ವಿಪದಾನಿ ದ್ವಯಾನ್ಯಾಹುಃ ಪಾರ್ಥಿವಾನ್ಯುತ್ತರಾಣಿ ಚ ।
ಪಾರ್ಥಿವಾನಿ ವಿಶಿಷ್ಟಾನಿ ತಾನಿ ಹ್ಯನ್ನಾನಿ ಭುಂಜತೇ ॥೧೪॥

ಎರಡು ಪಾದವುಳ್ಳ ಪ್ರಾಣಿಗಳಲ್ಲಿಯೂ ಮನುಷ್ಯರು, ಪಕ್ಷಿಗಳು ಎಂದು ಎರಡು ಭೇದವಿದೆ. ಅದರಲ್ಲಿ ಆಕಾಶದಲ್ಲಿ ಹಾರುವ ಪಕ್ಷಿಗಳಿಗಿಂತಲೂ ಮನುಷ್ಯರು ಶ್ರೇಷ್ಠತೆಯಿಂದ, ಅನೇಕ ಅನ್ನವೇ ಮೊದಲಾದ ಭೋಗಗಳನ್ನು ಅನುಭವಿಸುತ್ತಾರೆ.

ಪಾರ್ಥಿವಾನಿ ದ್ವಯಾನ್ಯಾಹುರ್ಮಧ್ಯಮಾನೀತರಾಣಿ ಚ ।
ಮಧ್ಯಮಾನಿ ವಿಶಿಷ್ಟಾನಿ ಜಾತಿಧರ್ಮೋಪಧಾರಣಾತ್ ॥೧೫॥

ಪೃಥಿವಿಯಲ್ಲಿ ಸಂಚರಿಸುವ ಪ್ರಾಣಿಗಳಲ್ಲಿಯೂ ಮಧ್ಯಮ ಭೂತದ ಪ್ರಾಣಿಗಳು, ಅಧಮ ಭೂತಗಳ ಪ್ರಾಣಿಗಳು ಎಂದು ಎರಡು ವಿಧವಾಗಿವೆ. ಜಾತಿ, ವರ್ಣ ಧರ್ಮಗಳನ್ನು ಹೊಂದಿರುವ ಕಾರಣ ಅಧಮಭೂತ ಪ್ರಾಣಿಗಳಿಗಿಂತ ಮಧ್ಯಮ ಭೂತ ಪ್ರಾಣಿಗಳು ಶ್ರೇಷ್ಠವಾದವುಗಳು.

ಮಧ್ಯಮಾನಿ ದ್ವಯಾನ್ಯಾಹುರ್ಧರ್ಮಜ್ಞಾನೀತರಾಣಿ ಚ ।
ಧರ್ಮಜ್ಞಾನಿ ವಿಶಿಷ್ಟಾನಿ ಕಾರ್ಯಾಕಾರ್ಯೋಪಧಾರಣಾತ್ ॥೧೬॥

ಮಧ್ಯಮ ಭೂತ ಪ್ರಾಣಿಗಳಲ್ಲಿಯೂ ಅರ್ಥಾತ್ ಮನುಷ್ಯರಲ್ಲಿಯೂ ಧರ್ಮವನ್ನು ತಿಳಿದವರು, ಧರ್ಮವನ್ನು ತಿಳಿಯದಿದ್ದವರು ಎಂಬ ಎರಡು ಭೇದವಿದೆ. ಧರ್ಮಜ್ಞರು ಇವರಲ್ಲಿ ಶ್ರೇಷ್ಠರು. ಇವರು ಕಾರ್ಯಾಕಾರ್ಯಗಳನ್ನು ತಿಳಿದು ಕರ್ತವ್ಯವನ್ನು ಪಾಲಿಸುತ್ತಾರೆ.

ಧರ್ಮಜ್ಞಾನಿ ದ್ವಯಾನ್ಯಾಹುರ್ವೇದಜ್ಞಾನೀತರಾಣಿ ಚ ।
ವೇದಜ್ಞಾನಿ ವಿಶಿಷ್ಟಾನಿ ವೇದೋ ಹ್ಯೇಷು ಪ್ರತಿಷ್ಠಿತಃ ॥೧೭॥

ಧರ್ಮಜ್ಞರಲ್ಲಿಯೂ ವೇದವನ್ನು ತಿಳಿದವರು, ವೇದವನ್ನು ತಿಳಿಯದೆ ಇರುವವರು ಎಂಬ ಎರಡು ಭೇದವಿದೆ. ಕೇವಲ ಧರ್ಮಜ್ಞರಿಗಿಂತ ವೇದ ತಿಳಿದು ಧರ್ಮಜ್ಞರು ಆಗಿರುವವರು ಉತ್ತಮರು. ಕಾರಣ ಸಮಸ್ತ ಧರ್ಮಗಳಲ್ಲಿಯೂ ಶ್ರೇಷ್ಠವಾದುದು ವೇದವು. ಅದರಲ್ಲಿ ವೇದವು ಪ್ರತಿಷ್ಠಿತವಾಗಿದೆ.

ವೇದಜ್ಞಾನಿ ದ್ವಯಾನ್ಯಾಹುಃ ಪ್ರವಕ್ತೃಣೇತರಾಣಿ ಚ ।
ಪ್ರವಕ್ತೃಣಿ ವಿಶಿಷ್ಟಾನಿ ಸರ್ವಧರ್ಮೋಪಧಾರಣಾತ್ ॥೧೮॥

ವೇದಜ್ಞರಲ್ಲಿಯೂ ಎರಡು ವಿಧ. ಪ್ರವಚನಕಾರರು, ಪ್ರವಚನ ಮಾಡದೆ ಇರುವವರು. ಇವರಲ್ಲಿ ಪ್ರವಚನ ಮಾಡುವವರು ಶ್ರೇಷ್ಠರು. ಕಾರಣ ಅವರು ಎಲ್ಲ ಧರ್ಮಗಳನ್ನು ತಿಳಿದು ಬೋಧಿಸುತ್ತಾರೆ.

ವಿಜ್ಞಾಯಂತೇ ಹಿ ಯೈರ್ವೇದಾಃ ಸರ್ವಧರ್ಮಕ್ರಿಯಾಫಲಾಃ ।
ಸಯಜ್ಞಾಃ ಸಖಿಲಾ ವೇದಾಃ ಪ್ರವಕ್ತೃಭ್ಯೋ ವಿನಿಃಸೃತಾಃ ॥೧೯॥

ಇಂತಹ ಪ್ರವಕ್ತೃಗಳ ಮುಖದಿಂದ ಪ್ರವಚನ ಮೂಲಕವಾಗಿ ಹೊರಹೊಮ್ಮುವ ಧರ್ಮ-ಕರ್ಮಗಳ ಫಲದಿಂದ ಕೂಡಿದ ಸಮಸ್ತ ವೇದಗಳ ಜ್ಞಾನವು ಇತರರಿಗೆ ತಿಳಿಯುತ್ತದೆ. ಇವರಿಂದ ಬೇರೆಯವರು ಜ್ಞಾನಲಾಭವನ್ನು ಹೊಂದುತ್ತಾರೆ.

ಪ್ರವಕ್ತೃಣಿ ದ್ವಯಾನ್ಯಾಹುರಾತ್ಮಜ್ಞಾನೀತರಾಣಿ ಚ ।
ಆತ್ಮಜ್ಞಾನಿ ವಿಶಿಷ್ಟಾನಿ ಜನ್ಮಾಜನ್ಮೋಪಧಾರಣಾತ್ ॥೨೦॥

ಪ್ರವಚನ ಮಾಡುವವರಲ್ಲಿಯೂ ಆತ್ಮಜ್ಞಾನವುಳ್ಳವರು, ಆತ್ಮಜ್ಞಾನವಿಲ್ಲದೆ ಇರುವವರು ಎಂಬ ಎರಡು ಭೇದವಿದೆ. ಹುಟ್ಟು-ಸಾವುಗಳನ್ನು ತಿಳಿದವರಿಗಿಂತ ಪರಮಾತ್ಮನ ಜ್ಞಾನವನ್ನು ಹೊಂದಿದವರು ಶ್ರೇಷ್ಠರು.

ಧರ್ಮದ್ವಯಂ ಹಿ ಯೋ ವೇದ ಸ ಸರ್ವಃ ಸರ್ವಧರ್ಮವಿತ್ ।
ಸ ತ್ಯಾಗೀ ಸತ್ಯಸಂಕಲ್ಪಃ ಸ ತು ಕ್ಷಾಂತಃ ಸ ಈಶ್ವರಃ ॥೨೧॥

ಸಮಸ್ತ ಧರ್ಮಗಳನ್ನು ಧರಿಸಿದವನು ನಾರಾಯಣನೇ. ಧಾರಯತಿ ಇತಿ ಧರ್ಮಃ' ಎಂಬ ವ್ಯುತ್ಪತ್ತಿಯಿಂದ ಸಮಸ್ತ ಧರ್ಮಗಳನ್ನು ಧರಿಸಿದವನೂ, ತಿಳಿದವನು ನಾರಾಯಣನೇ ಆಗಿದ್ದಾನೆ. ಅವನೇ ಧರ್ಮಜ್ಞನು, ಅವನೇ ಸರ್ವಜ್ಞನು ಎಂದು ಜ್ಞಾನಿಗಳು ಸ್ತುತಿಸುತ್ತಾರೆ. ಧರ್ಮಪದೋಕ್ತನಾದ ನಾರಾಯಣನನ್ನೇ ತ್ಯಾಗಿ ಎಂದು ಅರ್ಥಾತ್ ದೋಷತ್ಯಾಗಿ ಎಂದು, ಸತ್ಯಸಂಕಲ್ಪನೆಂದು, ಕ್ಷಾಂತನೆಂದು, ಈಶ್ವರನೆಂದು ಸ್ತುತಿಸುತ್ತಾರೆ.

ಧರ್ಮಜ್ಞಾನಪ್ರತಿಷ್ಠಂ ಹಿ ತಂ ದೇವಾ ಬ್ರಾಹ್ಮಣಂ ವಿದುಃ ।
ಶಬ್ದಬ್ರಹ್ಮಣಿ ನಿಷ್ಣಾತಂ ಪರೇ ಚ ಕೃತನಿಶ್ಚಯಮ್ ॥೨೨॥

ಯಾವನು ಭಗವತ್ತತ್ತ್ವದಲ್ಲಿ ಜ್ಞಾನವುಳ್ಳವನಾಗಿದ್ದಾನೋ ಅವನನ್ನೇ ದೇವತೆಗಳು ಬ್ರಾಹ್ಮಣನು ಎನ್ನುತ್ತಾರೆ. ಸರ್ವೋತ್ತಮನಾದ ವಸ್ತುವಿನಲ್ಲಿ ನಿಶ್ಚಯವನ್ನು ಹೊಂದಿರುವ, ಶಬ್ದಬ್ರಹ್ಮನಲ್ಲಿ ನಿಷ್ಣಾತನಾದವನೇ ಬ್ರಾಹ್ಮಣನೆನಿಸುತ್ತಾನೆ.

ಅಂತಃಸ್ಥಂ ಚ ಬಹಿಷ್ಠಂ ಚ ಯೇऽऽಧಿಯಜ್ಞಾಧಿದೈವತಮ್ ।
ಜಾನಂತಿ ತಾನ್ನಮಸ್ಯಾಮಸ್ತೇ ದೇವಾಸ್ತಾತ ತೇ ದ್ವಿಜಾಃ ॥೨೩॥

ಅಂತರ್ಯಾಮಿಯಾಗಿರುವ, ಸರ್ವತ್ರ ವ್ಯಾಪ್ತನಾದ, ಅಧಿಯಜ್ಞನೆನಿಸಿದ, ಅಧಿದೈವನೆನಿಸಿದ ಪರಮಾತ್ಮನನ್ನು ಯಾರು ತಿಳಿದಿದ್ದಾರೋ ಅಂತಹ ಜ್ಞಾನಿಗಳಾದ ಬ್ರಾಹ್ಮಣರನ್ನು ನಮಿಸೋಣ. ಅಂತಹ ಬ್ರಾಹ್ಮಣರೇ ದೇವತಾಸದೃಶರು.

ತೇಷು ವಿಶ್ವಮಿದಂ ಭೂತಂ ಸಾಗ್ರಂ ಚ ಜಗದಾಹಿತಮ್ ।
ತೇಷಾಂ ಮಾಹಾತ್ಮ್ಯಭಾವಸ್ಯ ಸದೃಶಂ ನಾಸ್ತಿ ಕಿಂಚನ ॥೨೪॥

ಅಂತಹ ವ್ಯಕ್ತಿಗಳಲ್ಲಿ ಈ ವಿಶ್ವ, ಜಗತ್ತು, ಸಕಲ ಪ್ರಾಣಿಗಳು ಸನ್ನಿಹಿತರಾಗಿದ್ದಾರೆ. ಭಗವಂತನನ್ನೇ ಧರಿಸಿರುವುದರಿಂದ ಎಲ್ಲವೂ ಅವನಲ್ಲಿದೆ ಎನ್ನಬಹುದು. ಅವನ ಮಾಹಾತ್ಮ್ಯಕ್ಕೆ ಸದೃಶವಾದದ್ದು ಬೇರೆ ಯಾವುದೂ ಇರುವುದಿಲ್ಲ.

ಆದಿಂ ತೇ ನಿಧನಂ ಚೈವ ಕರ್ಮ ಚಾತೀತ್ಯ ಸರ್ವಶಃ ।
ಚತುರ್ವಿಧಸ್ಯ ಭೂತಸ್ಯ ಸರ್ವಸ್ಯೇಶಾಃ ಸ್ವಯಂಭುವಃ ॥೨೫॥

ಬ್ರಹ್ಮಜ್ಞಾನದಲ್ಲಿಯೇ ರತರಾದವರು ಹುಟ್ಟು-ಸಾವುಗಳ ಬಂಧನವನ್ನು ಪೂರ್ಣವಾಗಿ ದಾಟಿ, ನಾಲ್ಕು ವಿಧ ಪ್ರಾಣಿಗಳಿಗೂ ಅಧಿಪತಿಗಳಾಗಿ ಮೆರೆಯುತ್ತಾರೆ. ಕಾರಣ ಎಲ್ಲರಿಗೂ ಒಡೆಯನಾದವನು ನಾರಾಯಣ ಎಂಬ ತಿಳುವಳಿಕೆಯನ್ನು ಹೊಂದಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ದ್ವಿಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ಮೂರನೆಯ ಅಧ್ಯಾಯ

ಅನೇಕ ಪ್ರಾಣಿಗಳ ವಿಮರ್ಶಾಪೂರ್ವಕವಾದ ಕರ್ಮತತ್ತ್ವದ ವಿವೇಚನೆ. ಯುಗಧರ್ಮದ ವರ್ಣನೆ ಮತ್ತು ಕಾಲನ ಮಹಿಮೆ

ವ್ಯಾಸಃ

ಏಷಾ ಪೂರ್ವತರಾ ವೃತ್ತಿರ್ಬ್ರಹ್ಮಣಸ್ಯ ವಿಧೀಯತೇ ।
ಜ್ಞಾನವಾನೇವ ಕರ್ಮಾಣಿ ಕುರ್ವನ್ ಸರ್ವತ್ರ ಸಿದ್ಧ್ಯತಿ ॥೧॥

ಶುಕನೇ, ಬ್ರಾಹ್ಮಣನಿಗೆ ಈ ಅಧ್ಯಾಪನವೃತ್ತಿಯು ಬಹಳ ಹಿಂದಿನಿಂದಲೂ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿದೆ. ಜ್ಞಾನನಿಷ್ಠನಾಗಿಯೇ ನಿಷ್ಕಾಮ ಕರ್ಮವನ್ನು ಮಾಡುತ್ತಾ ಎಲ್ಲೆಡೆಯೂ ಸಿದ್ಧಿಯನ್ನು ಹೊಂದುತ್ತಾನೆ.

ತತ್ರ ಚೇನ್ನ ಭವೇದೇವಂ ಸಂಶಯಃ ಕರ್ಮನಿಶ್ಚಯೇ ।
ಕಿಂ ನು ಕರ್ಮ ಸ್ವಭಾವೋऽಯಂ ಜ್ಞಾನಕರ್ಮೇತಿ ವಾ ಪುನಃ ॥೨॥

ತತ್ರ ವೇದ ವಿವಿತ್ಸಾಯಾಜ್ಞಾನಂ ಚೇತ್ ಪುರುಷಂ ಪ್ರತಿ ।
ಉಪಪತ್ತ್ಯುಪಲಬ್ಧಿಭ್ಯಾಂ ವರ್ಣಯಿಷ್ಯಾಮಿ ತಚ್ಛೃಣು ॥೩॥

ಕರ್ಮದ ಸ್ವಭಾವವಾಗಲೀ, ಜ್ಞಾನದ ಕರ್ಮವಾಗಲೀ, ಸ್ವಭಾವವಾಗಲೀ ಯಾವುದು ಸಿದ್ಧಿಯನ್ನು ಉಂಟುಮಾಡುತ್ತದೆ ಎಂಬ ವಿಷಯದಲ್ಲಿ ನಿಶ್ಚಯವಿಲ್ಲದಿದ್ದರೆ ವೇದವಿಚಾರ ಮಾಡುವ ಪುರುಷನಿಗೆ ಜ್ಞಾನವು ಉಂಟಾಗುವುದಿಲ್ಲ. ಈ ರೀತಿಯಾಗಿ ಜ್ಞಾನವುಂಟಾಗಿದ್ದರೆ ಉಪಪತ್ತಿ -ಉಪಲಬ್ಧಗಳಿಂದ ಅರ್ಥಾತ್ ಅನುಮಾನ, ಪ್ರತ್ಯಕ್ಷಗಳಿಂದ ಧರ್ಮಜ್ಞಾನವನ್ನು ನಿನಗೆ ವರ್ಣಿಸುತ್ತೇನೆ.

ಪೌರುಷಂ ಕಾರಣಂ ಕೇಚಿದಾಹುಃ ಕರ್ಮಸು ಮಾನವಾಃ ।
ದೈವಮೇಕೇ ಪ್ರಶಂಸಂತಿ ಸ್ವಭಾವಂ ಚಾಪರೇ ಜನಾಃ ॥೪॥

ಕೆಲವರು ಕರ್ಮಸಿದ್ಧಿಗೆ ಪೌರುಷವೇ ಕಾರಣ ಎನ್ನುತ್ತಾರೆ. ಕೆಲವರು ದೈವವು, ಕೆಲವರು ಸ್ವಭಾವವು ಸಿದ್ಧಿಗೆ ಕಾರಣ ಎಂದು ಅಭಿಪ್ರಾಯಪಡುತ್ತಾರೆ.

ಪೌರುಷಂ ಕರ್ಮ ದೈವಂ ಚ ಫಲವೃತ್ತಿಸ್ವಭಾವತಃ ।
ತ್ರಯಮೇತತ್ ಪೃಥಗ್ಭೂತಮವಿವೇಕಂ ತು ಕೇಚನ ॥೫॥

ಪೌರುಷ, ಕರ್ಮ, ದೈವ ಈ ಮೂರು ಫಲಪ್ರಾಪ್ತಿಗೆ ಅಪೇಕ್ಷಿತವಾಗಿವೆ. ಕೆಲವರು ಪ್ರತ್ಯೇಕ ಪ್ರತ್ಯೇಕವಾಗಿರುವುದೆಂದು ಮೂರೂ ಸೇರಿ ಕಾರಣವಲ್ಲ ಎನ್ನುವುದು ಸರಿಯಲ್ಲ. ಆದರೆ ಇದು ಅವಿವೇಕಿಗಳ ಜ್ಞಾನವಾಗಿದೆ.

ಏತದೇವಂ ನ ಚಾಪ್ಯೇವಮುಭೇ ಚಾಪಿ ನ ಚಾಪ್ಯುಭೇ ।
ಕರ್ಮಸ್ಥಾ ವಿಷಮಂ ಬ್ರೂಯುಃ ಸತ್ತ್ವಸ್ಥಾಃ ಸಮದರ್ಶಿನಃ ॥೬॥

ಎಲ್ಲವೂ ಸೇರಿ ಕಾರಣ ಎಂದು ಸಜ್ಜನರು ಹೇಳುತ್ತಾರೆ. ಪುರುಷ ಪ್ರಯತ್ನ ಮತ್ತು ಕರ್ಮ ಇವು ಜಗತ್ತಿಗೆ ಕಾರಣ ಎಂದು ಮೀಮಾಂಸಕರ ಅಭಿಪ್ರಾಯ. ಪುರುಷ ಪ್ರಯತ್ನ, ಕರ್ಮ ಎರಡಲ್ಲ. ಪುರುಷಪ್ರಯತ್ನ ಒಂದೇ ಕಾರಣ ಎನ್ನುವುದು ಚಾರ್ವಾಕರ ಮತ. ಕರ್ಮಠರಾದವರು ತಮ್ಮ ಮನಸ್ಸಿಗೆ ಯಾವುದು ವಿಷಯವೋ ಅದೇ ಕಾರಣ ಎನ್ನುತ್ತಾರೆ. ಸಾತ್ವಿಕರಾದ ಜ್ಞಾನಿಗಳು, ಸಮದರ್ಶಿಗಳು ಯಥಾರ್ಥವಾಗಿ ಯಾವ ಯಾವುದು ಸಿದ್ಧಿಗೆ ಕಾರಣವೋ ಅದೆಲ್ಲವನ್ನೂ ಅಂಗೀಕರಿಸುತ್ತಾರೆ.

ತ್ರೇತಾಯಾಂ ದ್ವಾಪರೇ ಚೈವ ಕಲಿಜಾಶ್ಚ ಸಸಂಶಯಾಃ ।
ತಪಸ್ವಿನಃ ಪ್ರಶಾಂತಾಶ್ಚ ಸತ್ತ್ವಸ್ಥಾಶ್ಚ ಕೃತೇ ಯುಗೇ ॥೭॥

ತ್ರೇತಾ, ದ್ವಾಪರ, ಕಲಿಯುಗದಲ್ಲಿ ಜನಿಸಿದ ಜನರು ಈ ವಿಷಯದಲ್ಲಿ ಸಂಶಯ ಉಳ್ಳವರಾಗಿದ್ದಾರೆ. ತಪಸ್ವಿಗಳು, ಪ್ರಶಾಂತಾತ್ಮರು, ಸತ್ವಗುಣ ಸಂಪನ್ನರು ಕೃತಯುಗದ ಜನರು ಮಾತ್ರ ಆಗಿರುತ್ತಾರೆ.

ಅಪೃಥಗ್ದರ್ಶಿನಃ ಸರ್ವೇ ಋಕ್ಸಾಮಸು ಯಜುಃಷು ಚ ।
ಕಾಮದ್ವೇಷೌ ಪೃಥಗ್ ದೃಷ್ಟ್ವಾ ತಪಃ ಕೃತ ಉಪಾಸತೇ ॥೮॥

ಸತ್ಯಯುಗ ಎನಿಸಿದ ಕೃತಯುಗದ ಜನರು ಋಗ್ವೇದ, ಯಜುರ್ವೇದ, ಸಾಮವೇದಗಳಲ್ಲಿ ಪ್ರತ್ಯೇಕತೆಯನ್ನು ನೋಡದೆ ಅಖಂಡವಾದ ಒಂದೇ ವೇದ ಎಂದು ಭಾವಿಸಿ ಅಧ್ಯಯನ ಮಾಡುತ್ತಾರೆ. ಕಾಮದ್ವೇಷಗಳನ್ನು ಬಿಟ್ಟು ತಪೋನಿರತರಾಗಿರುತ್ತಾರೆ.

ತಪೋಧರ್ಮೇಣ ಸಂಯುಕ್ತಸ್ತಪೋನಿತ್ಯಃ ಸುಸಂಶಿತಃ ।
ತೇನ ಸರ್ವಾನವಾಪ್ನೋತಿ ಕಾಮಾನ್ಯಾನ್ಮನಸೇಚ್ಛತಿ ॥೯॥

ತಪೋಧರ್ಮದಿಂದ ಕೂಡಿರುವ ಅವರು ಕಠೋರ ವ್ರತನಿಷ್ಠರಾಗಿ ನಿತ್ಯವೂ ತಪಸ್ಸಿನಲ್ಲಿಯೇ ನಿರತರಾಗಿ ಇರುತ್ತಾ, ತಮ್ಮ ಮನೋವಾಂಛಿತವಾದ ಕಾಮನೆಗಳನ್ನು ಪಡೆದುಕೊಳ್ಳುತ್ತಾರೆ.

ತಪಸಾ ತದವಾಪ್ನೋತಿ ಯದ್ಭೂತ್ವಾ ಸೃಜತೇ ಜಗತ್ ।
ಸ ತದ್ರೂಪಸ್ತತೋ ಸರ್ವೋ ಭೂತಾನಾಂ ಭವತಿ ಪ್ರಭುಃ ॥೧೦॥

ಯಾವ ಜಗತ್ತನ್ನು ಸೃಷ್ಟಿಸುತ್ತಾನೋ ಅಂತಹ ಭಗವಂತನನ್ನು ತಪಸ್ಸಿನಿಂದ ಸಾಧಕನು ಹೊಂದುತ್ತಾನೆ. ಜಗತ್ತಿನ ಸಮಸ್ತವನ್ನು ಸೃಷ್ಟಿಸುವ ರೂಪವುಳ್ಳಂತಹ ಭಗವಂತನು ಸರ್ವ ಎನಿಸಿದ್ದಾನೆ. ಸಮಸ್ತ ಭೂತಗಳಿಗೂ ಸ್ವಾಮಿ ಎನಿಸಿದ್ದಾನೆ.

ವ್ಯಾಖ್ಯಾನ ವಿಶೇಷ– ಈ ಪದ್ಯದಿಂದ 'ಹರಿಃ ಸರ್ವೋತ್ತಮಃ ಸರ್ವಸ್ರಷ್ಟೃತ್ವಾತ್, ವ್ಯತಿರೇಕೇಣ ದೇವದತ್ತವತ್' ಎಂಬ ಅನುಮಾನವು ಹೇಳಲ್ಪಟ್ಟಿದೆ.

ತದುಕ್ತಂ ವೇದವಾದೇಷು ಗಹನಂ ವೇದದರ್ಶಿಭಿಃ ।
ವೇದಾಂತೇಷು ಪುನರ್ವ್ಯಕ್ತಂ ಕ್ರಮಯೋಗೇನ ಲಕ್ಷ್ಯತೇ ॥೧೧॥

ಸಮಸ್ತ ವೇದಗಳಲ್ಲಿ ಆ ಪರಬ್ರಹ್ಮ ವಸ್ತುವೇ ನಿರೂಪಿಸಲ್ಪಟ್ಟಿದೆ. ಅತ್ಯಂತ ರಹಸ್ಯವಾದ ತತ್ತ್ವವನ್ನು ವೇದಜ್ಞರು ತಿಳಿಯುತ್ತಾರೆ. ಉಪನಿಷತ್ತುಗಳಲ್ಲಿಯೂ ಈ ಭಗವತ್ತತ್ತ್ವವೇ ನಿರೂಪಿತವಾಗಿದೆ. ನಿವೃತ್ತಿಕರ್ಮಯೋಗನಿರತರು ಇದನ್ನು ತಿಳಿದುಕೊಳ್ಳುತ್ತಾರೆ.

ಆಲಂಭಯಜ್ಞಾಃ ಕ್ಷತ್ರಾಶ್ಚ ಹವಿರ್ಯಜ್ಞಾ ವಿಶಃ ಸ್ಮೃತಾಃ ।
ಪರಿಚಾರಯಜ್ಞಾಃ ಶೂದ್ರಾಶ್ಚ ಜಪಯಜ್ಞಾ ದ್ವಿಜಾತಯಃ ॥೧೨॥

ಹಿಂಸಾ ಪ್ರಧಾನವಾದ ಯಜ್ಞವುಳ್ಳ ಕ್ಷತ್ರಿಯರು ಪ್ರಾಣಿಗಳನ್ನು ಯಜ್ಞದಲ್ಲಿ ಆಲಂಭನ ಮಾಡುತ್ತಾರೆ. ವೈಶ್ಯರು ಹವಿಸ್ಸೇ ಪ್ರಧಾನವಾದ ಯಜ್ಞವನ್ನು ಮಾಡುತ್ತಾರೆ. ಶೂದ್ರರು ಸೇವಾ ರೂಪವಾದ ಯಜ್ಞವನ್ನು ಮಾಡುತ್ತಾರೆ. ಬ್ರಾಹ್ಮಣರು ಜಪವೇ ಪ್ರಧಾನವಾದ ಯಜ್ಞವನ್ನು ಮಾಡುತ್ತಾರೆ.

ಪರಿನಿಷ್ಠಿತಕಾರ್ಯೋ ಹಿ ಸ್ವಾಧ್ಯಾಯೇನ ದ್ವಿಜೋ ಭವೇತ್ ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥೧೩॥

ವಿಹಿತವಾದ ಕರ್ಮವನ್ನೇ ವಿಷ್ಣುಪೂಜೆ ಎಂದು ಆಚರಿಸುವ ಸ್ವಾಧ್ಯಾಯಶೀಲನಾದ ಬ್ರಾಹ್ಮಣನು ದ್ವಿಜ ಎಂದು ಕರೆಸಿಕೊಳ್ಳುತ್ತಾನೆ. ಏನು ಮಾಡಲಿ, ಮಾಡದಿರಲಿ, ಬ್ರಾಹ್ಮಣ್ಯರಕ್ಷಣೆಗೆ ಮೈತ್ರ ಎನಿಸಿದ ಗಾಯತ್ರಿಯೇ ಪ್ರಧಾನವಾಗಿದೆ.

ತ್ರೇತಾದೌ ಸಕಲಾ ವೇದಾ ಯಜ್ಞಾ ವರ್ಣಾಶ್ರಮಾಸ್ತಥಾ ।
ಸಂರೋಧಾದಾಯುಷಸ್ತ್ವೇತೇ ವ್ಯಸ್ಯಂತೇ ದ್ವಾಪರೇ ಯುಗೇ ॥೧೪॥

ತ್ರೇತಾಯುಗದ ಆದಿಯಲ್ಲಿ ಅರ್ಥಾತ್ ಕೃತಯುಗದಲ್ಲಿ ವೇದ, ಯಜ್ಞ, ವರ್ಣಾಶ್ರಮಗಳು ಏಕರೂಪವಾಗಿಯೂ ಶುದ್ಧವಾಗಿಯೂ ಇರುತ್ತವೆ. ದ್ವಾಪರ ಯುಗದಲ್ಲಿ ಮನುಷ್ಯನ ಆಯುಷ್ಯವು ಕಡಿಮೆಯಾಗುವುದರಿಂದ ಆ ವೇದಗಳಲ್ಲಿ ಯಜ್ಞ, ವರ್ಣಾಶ್ರಮಗಳ ವಿಭಾಗ ಉಂಟಾಗುತ್ತವೆ.

ದ್ವಾಪರೇ ವಿಪ್ಲವಂ ಯಾಂತಿ ವೇದಾಃ ಕಲಿಯುಗೇ ತಥಾ ।
ದೃಶ್ಯಂತೇ ನಾಪಿ ದೃಶ್ಯಂತೇ ಕಲೇರಂತೇ ಪುನಃ ಪುನಃ ॥೧೫॥

ದ್ವಾಪರ, ಕಲಿಯುಗದಲ್ಲಿ ವೇದಗಳು ಪ್ರಾಯಶಃ ಕ್ಷೋಭೆಗೆ ಒಳಗಾಗುತ್ತವೆ. ಕಲಿಯುಗದ ಕೊನೆಯಲ್ಲಿ ಕೆಲವೇ ಸ್ಥಳಗಳಲ್ಲಿ ವೇದಾಧ್ಯಯನವು ಉಳಿದಿರುತ್ತದೆ. ಕೆಲವು ಕಡೆ ವೇದದ ಹೆಸರೂ ಕೇಳಿಸುವುದಿಲ್ಲ.

ಉತ್ಸೀದಂತಿ ಸ್ವಧರ್ಮಾಶ್ಚ ತತ್ರಾಧರ್ಮೇಣ ಪೀಡಿತಾಃ ।
ಗವಾಂ ಭೂಮೇಶ್ಚ ಯೇ ಚಾಪಾಮೋಷಧೀನಾಂ ಚ ಯೇ ರಸಾಃ ॥

ಕಲಿಯುಗದ ಕೊನೆಯಲ್ಲಿ ಧರ್ಮವೆಲ್ಲವೂ ನಶಿಸಿಹೋಗಿರುತ್ತದೆ. ಜನರೆಲ್ಲರೂ ಅಧರ್ಮ ವ್ಯವಹಾರದಿಂದ ಕೂಡಿರುತ್ತಾರೆ. ಹಸುಗಳು ಸಮೃದ್ಧವಾಗಿ ಹಾಲು ನೀಡುವುದಿಲ್ಲ. ಭೂಮಿಯಲ್ಲಿ ಪೈರು-ಪಚ್ಚೆಗಳು ಉದಿಸುವುದಿಲ್ಲ. ಓಷಧಿಗಳಲ್ಲಿ ಸತ್ತ್ವ ಇರುವುದಿಲ್ಲ. ಎಲ್ಲವೂ ಕ್ಷೀಣವಾಗಿರುತ್ತವೆ.

ಅಧರ್ಮಾಂತರ್ಹಿತಾ ವೇದಾ ವೇದಧರ್ಮಾಸ್ತಥಾಶ್ರಮಾಃ ।
ವಿಕ್ರಿಯಂತೇ ಸ್ವಧರ್ಮಸ್ಥಾಃ ಸ್ಥಾವರಾಣಿ ಚರಾಣಿ ಚ ॥೧೭॥

ಕಲಿಯುಗದಲ್ಲಿ ಅಧರ್ಮದಿಂದ ವೇದ, ವೈದಿಕ ಧರ್ಮ, ಕರ್ಮ, ಆಶ್ರಮ ಧರ್ಮಗಳೆಲ್ಲ ನಶಿಸಿ ಹೋಗುತ್ತವೆ. ಸ್ವಧರ್ಮನಿಷ್ಠರು, ಚರಾಚರ ಪ್ರಾಣಿಗಳು ತಮ್ಮ ಮನೋಭಾವಕ್ಕೆ ವಿರುದ್ಧವಾದ ಧರ್ಮವನ್ನು ಹೊಂದಿರುತ್ತಾರೆ. ಧರ್ಮವು ವಿಕಾರವನ್ನು ಹೊಂದುತ್ತದೆ.

ಯಥಾ ಸರ್ವಾಣಿ ಭೂತಾನಿ ವೃಷ್ಟಿರ್ಭೌಮಾನಿ ವರ್ಷತಿ ।
ಸೃಜತೇ ಸರ್ವತೋಽಂಗಾನಿ ತಥಾ ವೇದಾ ಯುಗೇ ಯುಗೇ ॥೧೮॥

ಯಾವ ರೀತಿ ಪರ್ಜನ್ಯನು ಆಯಾ ಕಾಲದಲ್ಲಿ ಮಳೆಯನ್ನು ಸುರಿಸುತ್ತಾ, ಭೂಮಿಯಲ್ಲಿರುವ ಸಮಸ್ತ ಪ್ರಾಣಿಗಳನ್ನು ರಕ್ಷಿಸಿ ಪುಷ್ಟಿಯನ್ನು ತುಂಬುತ್ತಾನೋ ಅದರಂತೆ ವೇದಗಳು ಪ್ರತಿಯೊಂದು ವಿಧದಲ್ಲಿಯೂ ಷಡಂಗಗಳಿಂದ ಸಹಿತವಾಗಿ ಧಾರ್ಮಿಕ ಪುಷ್ಟಿಯನ್ನು ತುಂಬುತ್ತವೆ.

ವಿಸೃತಂ ಕಾಲನಾನಾತ್ವಮನಾದಿನಿಧನಂ ಚ ಯತ್ ।
ಕೀರ್ತಿತಂ ತತ್ ಪುರಸ್ತಾನ್ಮೇ ಯತಃ ಸಂಯಾಂತಿ ಯಾಂತಿ ಚ ॥೧೯॥

ಕಾಲದಲ್ಲಿ ಅನೇಕ ಬಗೆಗಳಿವೆ ಎಂಬುದು ನಿಶ್ಚಿತವಾಗಿದೆ. ಆದ್ಯಂತವಿಲ್ಲದ್ದು ಕಾಲವು. ಕಾಲವೇ ಪ್ರಜೆಗಳನ್ನು ಸೃಷ್ಟಿಸುತ್ತದೆ ಮತ್ತು ಸಂಹರಿಸುತ್ತದೆ. ಈ ವಿಷಯವನ್ನು ಹಿಂದೆ ತಿಳಿಸಲಾಗಿದೆ. ಇಲ್ಲಿ ಕಾಲವೆಂದರೆ ಕಾಲನಿಯಾಮಕನಾದ ಭಗವಂತ ಎಂದು ಅರ್ಥ.

ಧಾತೇದಂ ಪ್ರಭವಸ್ಥಾನಂ ಭೂತಾನಾಂ ಸಂಯಮೋ ಯಮಃ ।
ಸ್ವಭಾವೇನ ಪ್ರವರ್ತಂತೇ ದ್ವಂದ್ವಸೃಷ್ಟಾನಿ ಭೂರಿಶಃ ॥೨೦॥

ಭಗವಂತನೇ ಈ ಪ್ರಾಣಿಗಳ ಉತ್ಪತ್ತಿಗೆ, ಪಾಲನೆಗೆ, ಸಂಹಾರಕ್ಕೆ, ನಿಯಂತ್ರಣಕ್ಕೆ ಕಾರಣನಾಗಿದ್ದಾನೆ. ಸ್ತ್ರೀ-ಪುರುಷ ಎಂಬ ವಿಭಾಗದಿಂದ ಹುಟ್ಟಿದ ಎಲ್ಲಾ ಪ್ರಾಣಿಗಳು ಸಹಜವಾಗಿ ಕಾಲನ ನಿಯಮನಕ್ಕೆ ಒಳಪಟ್ಟು ನಡೆಯುತ್ತವೆ.

ಸರ್ಗಃ ಕಾಲೋ ಧೃತಿರ್ವೇದಾಃ ಕರ್ತಾ ಕಾರ್ಯಂ ಕ್ರಿಯಾ ಫಲಮ್ ।
ಏತತ್ತೇ ಕಥಿತಂ ತಾತ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೧॥

ಶುಕನೇ, ನಿನ್ನ ಪ್ರಶ್ನೆಗನುಗುಣವಾಗಿ ಸೃಷ್ಟಿ, ಕಾಲ, ವೇದ, ಕರ್ತೃ, ಕಾರ್ಯ, ಕರ್ಮಫಲ ಇವುಗಳನ್ನು ತಿಳಿಸಿದ್ದೇನೆ. ಇನ್ನೂ ಏನನ್ನು ಕೇಳಬಯಸುವಿ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತಾಲ್ಕನೆಯ ಅಧ್ಯಾಯ

ಜ್ಞಾನಸಾಧನೆ ಮತ್ತು ಅದರ ಮಹತ್ವ.

ಭೀಷ್ಮಃ

ಇತ್ಯುಕ್ತೋಭಿಪ್ರಶಂಸ್ಯೈತತ್ ಪರಮರ್ಷೇಸ್ತು ಶಾಸನಮ್ ।
ಮೋಕ್ಷಧರ್ಮಾರ್ಥಸಂಯುಕ್ತಮಿದಂ ಪ್ರಷ್ಟುಂ ಪ್ರಚಕ್ರಮೇ ॥೧॥

ಯುಧಿಷ್ಠಿರನೇ, ಪರಮರ್ಷಿಗಳಾದ ವೇದವ್ಯಾಸರು ಶುಕಮುನಿಯನ್ನು ಕುರಿತು ಹೀಗೆ ಉಪದೇಶಿಸಿದ ನಂತರ, ಅವರ ನಿರ್ದೇಶನವನ್ನು ಆಧರಿಸಿ ಮೋಕ್ಷ ಧರ್ಮಗಳ ಅರ್ಥದಿಂದ ಕೂಡಿದ ಪ್ರಶ್ನೆಗಳನ್ನು ಕೇಳಲು ಶುಕಮುನಿಯು ಉಪಕ್ರಮಿಸಿದನು.

ಶುಕಃ

ಪ್ರಜಾವಾನ್ ಶ್ರೋತ್ರಿಯೋ ಯಜ್ವಾ ವೃದ್ಧಃ ಪ್ರಜ್ಞೋಽನಸೂಯಕಃ ।
ಅನಾಗತಮನೈತಿಹ್ಯಂ ಕಥಂ ಬ್ರಹ್ಮಾಧಿಗಚ್ಛತಿ ॥೨॥

ತಂದೆಯೇ, ಪ್ರಜಾವಂತನು, ಶ್ರೋತ್ರಿಯನು, ಯಾಜ್ಞಿಕನು, ಹಿರಿಯನು, ಪ್ರಜಾವಂತನು, ಮಾತ್ಸರ್ಯ ಇಲ್ಲದವನು ಇಂತಹ ವ್ಯಕ್ತಿಯು ಬ್ರಹ್ಮಸ್ವರೂಪವನ್ನು ಹೇಗೆ ತಿಳಿಯಬೇಕು? ಬ್ರಹ್ಮನು ಪ್ರತ್ಯಕ್ಷಗೋಚರನಾಗುವುದಿಲ್ಲ. ಯುಕ್ತಿಗೂ ಗೋಚರಿಸುವುದಿಲ್ಲ. ವೇದಗಳಿಂದಲೂ ಹೀಗೇ ಎಂದು ನಿರೂಪಿಸಲಾಗದ ಬ್ರಹ್ಮನನ್ನು ತಿಳಿಯುವ ಬಗೆ ಹೇಗೆ?

ತಪಸಾ ಬ್ರಹ್ಮಚರ್ಯೇಣ ಸರ್ವತ್ಯಾಗೇನ ಮೇಧಯಾ ।
ಸಾಂಖ್ಯೇ ವಾ ಯದಿ ವಾ ಯೋಗೇ ಏತತ್ ಪೃಷ್ಟೋಽಭಿಧತ್ಸ್ವ ಮೇ ॥

ಆ ಬ್ರಹ್ಮನನ್ನು ತಪಸ್ಸಿನಿಂದ ತಿಳಿಯಬೇಕೋ ಅಥವಾ ಬ್ರಹ್ಮಚರ್ಯದಿಂದ ತಿಳಿಯಬೇಕೋ? ಸರ್ವಸ್ವವನ್ನು ತ್ಯಾಗ ಮಾಡುವುದರಿಂದಲೋ, ಮೇಧಾಶಕ್ತಿಯಿಂದಲೋ, ಸಾಂಖ್ಯಶಾಸ್ತ್ರಗಳಿಂದಲೋ, ಯೋಗಶಾಸ್ತ್ರದಿಂದಲೋ, ಹೇಗೆ ತಿಳಿಯಬೇಕೆಂದು ಪ್ರಶ್ನಿಸುತ್ತಿರುವ ನನಗೆ ಹೇಳು.

ಮನಸಶ್ಚೇಂದ್ರಿಯಾಣಾಂ ಚಾಪ್ಯೈಕಾಗ್ರ್ಯಂ ಸಮವಾಪ್ಯತೇ ।
ಯೇನೋಪಾಯೇನ ಪುರುಷೈಸ್ತಚ್ಚ ವ್ಯಾಖ್ಯಾತುಮರ್ಹಸಿ ॥೪॥

ಪುರುಷನು ಯಾವ ಉಪಾಯದಿಂದ ಮನಸ್ಸಿಗೂ ಇಂದ್ರಿಯಗಳಿಗೂ ಏಕಾಗ್ರತೆಯನ್ನು ಸಾಧಿಸಿಕೊಳ್ಳಬಲ್ಲನು? ಇದನ್ನೂ ತಿಳಿಸಲು ಅರ್ಹನಾಗಿರುತ್ತಿ.

ವ್ಯಾಸಃ

ನಾನ್ಯತ್ರ ವಿದ್ಯಾತಪಸೋರ್ನಾನ್ಯತ್ರೇಂದ್ರಿಯನಿಗ್ರಹಾತ್ ।
ನಾನ್ಯತ್ರ ಸರ್ವಸಂತ್ಯಾಗಾತ್ ಸಿದ್ಧಿಂ ವಿಂದತಿ ಕಶ್ಚನ ॥೫॥

ಮಗನೇ, ವಿದ್ಯೆ, ತಪಸ್ಸು, ಇಂದ್ರಿಯನಿಗ್ರಹ, ಲೋಭವಿಲ್ಲದಿರುವಿಕೆ ಇವುಗಳಿಲ್ಲದಿದ್ದರೆ ಬೇರೆ ಯಾವುದರಿಂದಲೂ ಮನುಷ್ಯನು ಸಿದ್ಧಿಯನ್ನು ಹೊಂದಲಾರನು.

ಮಹಾಭೂತಾನಿ ಸರ್ವಾಣಿ ಪೂರ್ವಸೃಷ್ಟಿಃ ಸ್ವಯಂಭುವಃ ।
ಭೂಯಿಷ್ಠಂ ಪ್ರಾಣಭೃದ್ ವಾಮೇ ನಿವಿಷ್ಟಾನಿ ಶರೀರಿಷು ॥೬॥

ಪಂಚಮಹಾಭೂತವು ಬ್ರಹ್ಮನಿಂದ ಮೊದಲು ಸೃಷ್ಟಿಗೊಂಡಿವೆ. ಪ್ರತೀ ದೇಹವನ್ನು ಧರಿಸಿದ ಶರೀರದಲ್ಲಿಯೂ ಪಂಚಭೂತಗಳ ಅಂಶವು ನೆಲೆಸಿವೆ.

ಭೂಮೇರ್ದೇಹೋ ಜಲಾತ್ ಸಾರೋ ಜ್ಯೋತಿಷಶ್ಚಕ್ಷುಷೀ ಸ್ಮೃತೇ ।
ಪ್ರಾಣಾಪಾನಾಶ್ರಯೋ ವಾಯುಃ ಖೇಷ್ವಾಕಾಶಂ ಶರೀರಿಣಾಮ್ ॥೭॥

ಪ್ರಾಣಿಗಳ ದೇಹಗಳು ಭೂಮಿಯಿಂದಲೂ, ಅವುಗಳ ಉದರವು ಜಲದಿಂದಲೂ, ಕಣ್ಣುಗಳು ತೇಜಸ್ಸಿನಿಂದಲೂ, ಪ್ರಾಣಾಪಾನಾದಿ ವಾಯುವು ವಾಯುವಿನಿಂದಲೂ, ಕಿವಿಗಳೇ ಮೊದಲಾದ ರಂಧ್ರಗಳು ಉಂಟಾಗಿದೆ.

ಕ್ರಾಂತೇ ವಿಷ್ಣುರ್ಬಲೇ ಶಕ್ರಃ ಕೋಷ್ಠೇऽಗ್ನಿರ್ಭುಕ್ತಮರ್ಹತಿ ।
ಕರ್ಣಯೋಃ ಪ್ರದಿಶಃ ಶ್ರೋತ್ರೇ ಜಿಹ್ವಾಯಾಂ ವಾಕ್ ಸರಸ್ವತೀ ॥೮॥

ಅದರಂತೆ ಸಮಸ್ತ ಪ್ರಾಣಿಗಳ ಪಾದದಲ್ಲಿ ವಿಷ್ಣುವು, ಕೈಯಲ್ಲಿ ಇಂದ್ರನು, ಉದರದಲ್ಲಿ ಅಗ್ನಿಯು, ಕಿವಿಗಳಲ್ಲಿ ದಿಗ್ದೇವತೆಯು, ನಾಲಿಗೆಯಲ್ಲಿ ಸರಸ್ವತಿಯು ಅಭಿಮಾನಿ ದೇವತೆಗಳಾಗಿ ನೆಲೆಸಿರುತ್ತಾರೆ.

ಕರ್ಣೌ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಂಚಮೀ ।
ದರ್ಶನಾನೀಂದ್ರಿಯೋಕ್ತಾನಿ ದ್ವಾರಾಣ್ಯಾಹಾರಸಿದ್ಧಯೇ ॥೯॥

ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್ ಎಂಬ ಈ ಐದು ಆಯಾ ವಿಷಯಗಳನ್ನು ಗ್ರಹಿಸುತ್ತವೆ. ಆದ್ದರಿಂದ ಇವುಗಳನ್ನು ಜ್ಞಾನೇಂದ್ರಿಯಗಳೆಂದು ಕರೆಯುತ್ತಾರೆ.

ಶಬ್ದಂ ಸ್ಪರ್ಶಂ ತಥಾ ರೂಪಂ ರಸಂ ಗಂಧಂ ಚ ಪಂಚಮಮ್ ।
ಇಂದ್ರಿಯಾಣಿ ಪೃಥಕ್ತ್ವರ್ಥಾನ್ಮನಸೋ ದರ್ಶಯಂತ್ಯುತ ॥೧೦॥

ಇವು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ಇಂದ್ರಿಯಾರ್ಥಗಳು ಎಂದು ಕರೆಯಲ್ಪಟ್ಟಿವೆ. ಇವುಗಳು ಇಂದ್ರಿಯಗಳಿಗಿಂತಲೂ ಪ್ರತ್ಯೇಕವಾಗಿದ್ದು, ಮನಸ್ಸಿಗೆ ವಿಷಯಗಳನ್ನು ತೋರಿಸುತ್ತವೆ.

ಶುಕಃ

ಪ್ರಜಾವಾನ್ ಶ್ರೋತ್ರಿಯೋ ಯಜ್ವಾ ವೃದ್ಧಃ ಪ್ರಜ್ಞೋಽನಸೂಯಕಃ ।
ಅನಾಗತಮನೈತಿಹ್ಯಂ ಕಥಂ ಬ್ರಹ್ಮಾಧಿಗಚ್ಛತಿ ॥೨॥

ತಂದೆಯೇ, ಪ್ರಜಾವಂತನು, ಶ್ರೋತ್ರಿಯನು, ಯಾಜ್ಞಿಕನು, ಹಿರಿಯನು, ಪ್ರಜಾವಂತನು, ಮಾತ್ಸರ್ಯ ಇಲ್ಲದವನು ಇಂತಹ ವ್ಯಕ್ತಿಯು ಬ್ರಹ್ಮಸ್ವರೂಪವನ್ನು ಹೇಗೆ ತಿಳಿಯಬೇಕು? ಬ್ರಹ್ಮನು ಪ್ರತ್ಯಕ್ಷಗೋಚರನಾಗುವುದಿಲ್ಲ. ಯುಕ್ತಿಗೂ ಗೋಚರಿಸುವುದಿಲ್ಲ. ವೇದಗಳಿಂದಲೂ ಹೀಗೇ ಎಂದು ನಿರೂಪಿಸಲಾಗದ ಬ್ರಹ್ಮನನ್ನು ತಿಳಿಯುವ ಬಗೆ ಹೇಗೆ?

ತಪಸಾ ಬ್ರಹ್ಮಚರ್ಯೇಣ ಸರ್ವತ್ಯಾಗೇನ ಮೇಧಯಾ ।
ಸಾಂಖ್ಯೇ ವಾ ಯದಿ ವಾ ಯೋಗೇ ಏತತ್ ಪೃಷ್ಟೋಽಭಿಧತ್ಸ್ವ ಮೇ ॥

ಆ ಬ್ರಹ್ಮನನ್ನು ತಪಸ್ಸಿನಿಂದ ತಿಳಿಯಬೇಕೋ ಅಥವಾ ಬ್ರಹ್ಮಚರ್ಯದಿಂದ ತಿಳಿಯಬೇಕೋ? ಸರ್ವಸ್ವವನ್ನು ತ್ಯಾಗ ಮಾಡುವುದರಿಂದಲೋ, ಮೇಧಾಶಕ್ತಿಯಿಂದಲೋ, ಸಾಂಖ್ಯಶಾಸ್ತ್ರಗಳಿಂದಲೋ, ಯೋಗಶಾಸ್ತ್ರದಿಂದಲೋ, ಹೇಗೆ ತಿಳಿಯಬೇಕೆಂದು ಪ್ರಶ್ನಿಸುತ್ತಿರುವ ನನಗೆ ಹೇಳು.

ಮನಸಶ್ಚೇಂದ್ರಿಯಾಣಾಂ ಚಾಪ್ಯೈಕಾಗ್ರ್ಯಂ ಸಮವಾಪ್ಯತೇ ।
ಯೇನೋಪಾಯೇನ ಪುರುಷೈಸ್ತಚ್ಚ ವ್ಯಾಖ್ಯಾತುಮರ್ಹಸಿ ॥೪॥

ಪುರುಷನು ಯಾವ ಉಪಾಯದಿಂದ ಮನಸ್ಸಿಗೂ ಇಂದ್ರಿಯಗಳಿಗೂ ಏಕಾಗ್ರತೆಯನ್ನು ಸಾಧಿಸಿಕೊಳ್ಳಬಲ್ಲನು? ಇದನ್ನೂ ತಿಳಿಸಲು ಅರ್ಹನಾಗಿರುತ್ತಿ.

ವ್ಯಾಸಃ

ನಾನ್ಯತ್ರ ವಿದ್ಯಾತಪಸೋರ್ನಾನ್ಯತ್ರೇಂದ್ರಿಯನಿಗ್ರಹಾತ್ ।
ನಾನ್ಯತ್ರ ಸರ್ವಸಂತ್ಯಾಗಾತ್ ಸಿದ್ಧಿಂ ವಿಂದತಿ ಕಶ್ಚನ ॥೫॥

ಮಗನೇ, ವಿದ್ಯೆ, ತಪಸ್ಸು, ಇಂದ್ರಿಯನಿಗ್ರಹ, ಲೋಭವಿಲ್ಲದಿರುವಿಕೆ ಇವುಗಳಿಲ್ಲದಿದ್ದರೆ ಬೇರೆ ಯಾವುದರಿಂದಲೂ ಮನುಷ್ಯನು ಸಿದ್ಧಿಯನ್ನು ಹೊಂದಲಾರನು.

ಮಹಾಭೂತಾನಿ ಸರ್ವಾಣಿ ಪೂರ್ವಸೃಷ್ಟಿಃ ಸ್ವಯಂಭುವಃ ।
ಭೂಯಿಷ್ಠಂ ಪ್ರಾಣಭೃದ್ ವಾಮೇ ನಿವಿಷ್ಟಾನಿ ಶರೀರಿಷು ॥೬॥

ಪಂಚಮಹಾಭೂತವು ಬ್ರಹ್ಮನಿಂದ ಮೊದಲು ಸೃಷ್ಟಿಗೊಂಡಿವೆ. ಪ್ರತೀ ದೇಹವನ್ನು ಧರಿಸಿದ ಶರೀರದಲ್ಲಿಯೂ ಪಂಚಭೂತಗಳ ಅಂಶವು ನೆಲೆಸಿವೆ.

ಭೂಮೇರ್ದೇಹೋ ಜಲಾತ್ ಸಾರೋ ಜ್ಯೋತಿಷಶ್ಚಕ್ಷುಷೀ ಸ್ಮೃತೇ ।
ಪ್ರಾಣಾಪಾನಾಶ್ರಯೋ ವಾಯುಃ ಖೇಷ್ವಾಕಾಶಂ ಶರೀರಿಣಾಮ್ ॥೭॥

ಪ್ರಾಣಿಗಳ ದೇಹಗಳು ಭೂಮಿಯಿಂದಲೂ, ಅವುಗಳ ಉದರವು ಜಲದಿಂದಲೂ, ಕಣ್ಣುಗಳು ತೇಜಸ್ಸಿನಿಂದಲೂ, ಪ್ರಾಣಾಪಾನಾದಿ ವಾಯುವು ವಾಯುವಿನಿಂದಲೂ, ಕಿವಿಗಳೇ ಮೊದಲಾದ ರಂಧ್ರಗಳು ಉಂಟಾಗಿದೆ.

ಕ್ರಾಂತೇ ವಿಷ್ಣುರ್ಬಲೇ ಶಕ್ರಃ ಕೋಷ್ಠೇऽಗ್ನಿರ್ಭುಕ್ತಮರ್ಹತಿ ।
ಕರ್ಣಯೋಃ ಪ್ರದಿಶಃ ಶ್ರೋತ್ರೇ ಜಿಹ್ವಾಯಾಂ ವಾಕ್ ಸರಸ್ವತೀ ॥೮॥

ಅದರಂತೆ ಸಮಸ್ತ ಪ್ರಾಣಿಗಳ ಪಾದದಲ್ಲಿ ವಿಷ್ಣುವು, ಕೈಯಲ್ಲಿ ಇಂದ್ರನು, ಉದರದಲ್ಲಿ ಅಗ್ನಿಯು, ಕಿವಿಗಳಲ್ಲಿ ದಿಗ್ದೇವತೆಯು, ನಾಲಿಗೆಯಲ್ಲಿ ಸರಸ್ವತಿಯು ಅಭಿಮಾನಿ ದೇವತೆಗಳಾಗಿ ನೆಲೆಸಿರುತ್ತಾರೆ.

ಕರ್ಣೌ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಂಚಮೀ ।
ದರ್ಶನಾನೀಂದ್ರಿಯೋಕ್ತಾನಿ ದ್ವಾರಾಣ್ಯಾಹಾರಸಿದ್ಧಯೇ ॥೯॥

ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್ ಎಂಬ ಈ ಐದು ಆಯಾ ವಿಷಯಗಳನ್ನು ಗ್ರಹಿಸುತ್ತವೆ. ಆದ್ದರಿಂದ ಇವುಗಳನ್ನು ಜ್ಞಾನೇಂದ್ರಿಯಗಳೆಂದು ಕರೆಯುತ್ತಾರೆ.

ಶಬ್ದಂ ಸ್ಪರ್ಶಂ ತಥಾ ರೂಪಂ ರಸಂ ಗಂಧಂ ಚ ಪಂಚಮಮ್ ।
ಇಂದ್ರಿಯಾಣಿ ಪೃಥಕ್ತ್ವರ್ಥಾನ್ಮನಸೋ ದರ್ಶಯಂತ್ಯುತ ॥೧೦॥

ಇವು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ಇಂದ್ರಿಯಾರ್ಥಗಳು ಎಂದು ಕರೆಯಲ್ಪಟ್ಟಿವೆ. ಇವುಗಳು ಇಂದ್ರಿಯಗಳಿಗಿಂತಲೂ ಪ್ರತ್ಯೇಕವಾಗಿದ್ದು, ಮನಸ್ಸಿಗೆ ವಿಷಯಗಳನ್ನು ತೋರಿಸುತ್ತವೆ.

ಇಂದ್ರಿಯಾಣಿ ಮನೋ ಯುಂಕ್ತೇ ವಶ್ಯಾನ್ಯಂತೇವ ವಾಜಿನಃ ।
ಮನಶ್ಚಾಪಿ ಸದಾ ಯುಂಕ್ತೇ ಭೂತಾತ್ಮಾ ಹೃದಯಾಶ್ರಿತಃ ॥೧೧॥

ಮನಸ್ಸು ಇಂದ್ರಿಯಗಳನ್ನು ನಿಯಮಿಸುತ್ತದೆ. ಆ ಮನಸ್ಸು ಸಾರಥಿಯು ತನ್ನ ಇಷ್ಟ ಬಂದ ಕಡೆ ಕುದುರೆಗಳನ್ನು ನಡೆಸುವ ಹಾಗೆ ಬೇಕಾದಲ್ಲಿ ಇಂದ್ರಿಯಗಳನ್ನು ಕರೆದೊಯ್ಯುತ್ತದೆ. ಈ ಮನಸ್ಸೂ ಕೂಡ ಹೃದಯನ್ನಾಶ್ರಯಿಸಿರುವ ಬುದ್ಧಿಯನ್ನು ಅವಲಂಬಿಸಿಕೊಂಡಿದೆ.

ಇಂದ್ರಿಯಾಣಾಂ ತಥೈವೇಷಾಂ ಸರ್ವೇಷಾಮೀಶ್ವರಂ ಮನಃ ।
ನಿಯಮೇ ಚ ವಿಸರ್ಗೇ ಚ ಭೂತಾತ್ಮಾ ಮನಸಸ್ತಥಾ ॥೧೨॥

ಮನಸ್ಸಿಗೆ ಸಮಸ್ತ ಇಂದ್ರಿಯಗಳನ್ನು, ಇಂದ್ರಿಯಾರ್ಥಗಳನ್ನು ನೇಮಿಸುವುದರಲ್ಲಿ, ನಡೆಸುವುದರಲ್ಲಿ ಪ್ರಭುತ್ವವು ಇರುತ್ತದೆ.

ಇಂದ್ರಿಯಾಣೀಂದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಮನಃ ।
ಪ್ರಾಣಾಪಾನೌ ಚ ಜೀವಶ್ಚ ನಿತ್ಯಂ ದೇಹೇಷು ದೇಹಿನಾಮ್ ॥೧೩॥

ಇಂದ್ರಿಯಗಳು, ಇಂದ್ರಿಯಾರ್ಥಗಳು, ಸ್ವಭಾವ, ಬುದ್ಧಿ, ಚೇತನ, ಮನಸ್ಸು, ಪ್ರಾಣ, ಅಪಾನ, ಜೀವ ಇವೆಲ್ಲವೂ ದೇಹಧಾರಿಗಳಲ್ಲಿ ನಿತ್ಯವೂ ನೆಲೆಗೊಂಡಿವೆ.

ಆಶ್ರಯೋಽನ್ಯೋಽಸ್ತಿ ಸತ್ತ್ವಸ್ಯ ಗುಣಃ ಸತ್ತ್ವಸ್ಯ ಚೇತನಾ ।
ಸತ್ತ್ವಂ ಹಿ ತೇಜಃ ಸೃಜತಿ ನ ಗುಣಾನ್ ವೈ ಕದಾಚನ ॥೧೪॥

ದೇಹಕ್ಕೆ ನಿಜವಾದ ನೆಲೆ ಎಂಬುದು ಇರುವುದಿಲ್ಲ. ಆದ್ದರಿಂದ ದೇಹವೆಂಬುದು ಆತ್ಮಕ್ಕೆ ಆಶ್ರಯವೆನಿಸಲಾರದು. ಕಣ್ಣಿಗೆ ಕಾಣದಿರುವ ಭಗವಂತನೇ ಈ ಪ್ರಾಣಿ ಸಮೂಹಕ್ಕೆ ಆಶ್ರಯನಾಗಿದ್ದಾನೆ. ಮೇಲೆ ಹೇಳಿದ ಗುಣಗಳೆಲ್ಲವೂ ಬುದ್ಧಿಯ ವೃತ್ತಿಗಳೆನಿಸಿವೆ. ಜೀವನಲ್ಲಿರುವ ಸತ್ತ್ವವೇ ದರ್ಶನ, ಸ್ಪರ್ಶನಾದಿ ಸಾಮರ್ಥ್ಯವನ್ನು ಜೀವನಿಗೆ ಉಂಟುಮಾಡುತ್ತದೆ. ಆದರೆ ಸತ್ತ್ವವೆನಿಸಿದ ಬುದ್ಧಿಯು ರೂಪಾದಿ ಗುಣಗಳನ್ನು, ಸತ್ವಾದಿ ಗುಣಗಳನ್ನು ಯಾವ ರೀತಿಯಲ್ಲಿಯೂ ಸೃಷ್ಟಿಸಲು ಸಮರ್ಥವಾಗುವುದಿಲ್ಲ.

ಏವಂ ಸಪ್ತದಶಂ ದೇಹೇ ವೃತಂ ಷೋಡಶಭಿರ್ಗುಣೈಃ ।
ಮನೀಷೀ ಮನಸಾ ವಿಪ್ರಾಃ ಪಶ್ಯತ್ಯಾತ್ಮಾನಮಾತ್ಮನಿ ॥೧೫॥

ಹೀಗೆ ಏಕಾದಶ ಇಂದ್ರಿಯಗಳು, ಪಂಚಮಹಾಭೂತಗಳು ಇವುಗಳಿಂದ ಕೂಡಿದ ಜ್ಞಾನಿಯಾದವನು ಈ ದೇಹವು ಪರಮಾತ್ಮನ ಆಧಾರದಿಂದ ನೆಲೆಸಿದೆ ಎನ್ನುವುದನ್ನು ಮನಸ್ಸಿನಿಂದ, ತಾನೂ ತನ್ನ ದೇಹವು ಭಗವಂತನ ಆಧಾರದಲ್ಲಿದೆ ಎಂದು ತಿಳಿದುಕೊಳ್ಳುತ್ತಾನೆ.

ನ ಹ್ಯಯಂ ಚಕ್ಷುಷಾ ದೃಶ್ಯೋ ನ ಚ ಸರ್ವೈರಪೀಂದ್ರಿಯೈಃ ।
ಮನಸಾ ಸಂಪ್ರದೀಪ್ತೇನ ಮಹಾನಾತ್ಮಾ ಪ್ರಕಾಶತೇ ॥೧೬॥

ಈ ಪರಮಾತ್ಮನನ್ನು ಕಣ್ಣುಗಳಿಂದಾಗಲೀ, ಇತರ ಇಂದ್ರಿಯಗಳಿಂದಾಗಲೀ ನೋಡಲಾಗುವುದಿಲ್ಲ. ತಿಳಿಯಲೂ ಸಾಧ್ಯವಿಲ್ಲ. ಮಹಾತ್ಮನಾದ ಪರಮಾತ್ಮನು ಶುದ್ಧವಾದ ಮನೋರೂಪವಾದ ದೀಪದಿಂದ ಬುದ್ಧಿಯಲ್ಲಿ ಪ್ರಕಾಶಿಸುತ್ತಾನೆ.

ಅಶಬ್ದಸ್ಪರ್ಶರೂಪಂ ತದರಸಾಗಂಧಮವ್ಯಯಮ್ ।
ಅಶರೀರಂ ಶರೀರೇ ಸ್ವೇ ನಿರೀಕ್ಷೇತ ನಿರಿಂದ್ರಿಯಮ್ ॥೧೭॥

ಭಗವಂತನಾದರೂ ಪ್ರಾಕೃತವಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಂದ ರಹಿತನಾಗಿದ್ದಾನೆ. ಅವಿಕಾರಿಯಾಗಿದ್ದಾನೆ. ಪ್ರಾಕೃತವಾದ ಶರೀರದಿಂದಲೂ, ಇಂದ್ರಿಯಗಳಿಂದಲೂ ರಹಿತನಾಗಿದ್ದಾನೆ. ಹೀಗಿದ್ದರೂ ಅಂತಹ ಭಗವಂತನನ್ನು ನಮ್ಮ ಶರೀರದಲ್ಲಿಯೇ ಚಿಂತಿಸಬೇಕು.

ಅವ್ಯಕ್ತಂ ವ್ಯಕ್ತದೇಹೇಷು ಮರ್ತ್ಯೇಷ್ವಮರಮಾಶ್ರಿತಮ್ ।
ಯೋಽನುಪಶ್ಯತಿ ಸ ಪ್ರೇತ್ಯ ಕಲ್ಪತೇ ಬ್ರಹ್ಮಭೂಯಸೇ ॥೧೮॥

ಪರಮಾತ್ಮನು ಮರಣಶೀಲರಾದ ಸಮಸ್ತ ಜೀವರ ದೇಹವನ್ನೇ ಆಧಾರವಾಗಿರಿಸಿಕೊಂಡು ಅವ್ಯಕ್ತನಾಗಿ ಇದ್ದಾನೆ. ಇವನನ್ನು ಜ್ಞಾನದ ದೃಷ್ಟಿಯಿಂದ ನಿರಂತರ ಯಾವನು ನೋಡುತ್ತಾನೋ ಅವನು ಮರಣದ ಬಳಿಕ ಆ ಬ್ರಹ್ಮನ ಪಾದವನ್ನೇ ಸೇರುತ್ತಾನೆ.

ವಿದ್ಯಾಭಿಜನಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥೧೯॥

ವಿದ್ಯೆಯಿಂದಲೂ, ಸತ್ಕುಲದಿಂದಲೂ ಸಂಪನ್ನನಾಗಿರುವ ಬ್ರಾಹ್ಮಣನಲ್ಲಿಯೂ, ಗೋವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ನಾಯಿ ಮಾಂಸವನ್ನು ತಿನ್ನುವವನಲ್ಲಿಯೂ ಪಂಡಿತರಾದವರು ಎಲ್ಲೆಡೆಯೂ ನಾರಾಯಣನನ್ನೇ ನೋಡುತ್ತಾರೆ.

ಸ ಹಿ ಸರ್ವೇಷು ಭೂತೇಷು ಜಂಗಮೇಷು ಧ್ರುವೇಷು ಚ ।
ವಸತ್ಯೇಕೋ ಮಹಾನಾತ್ಮಾ ಯೇನ ಸರ್ವಮಿದಂ ತತಮ್ ॥೨೦॥

ಆ ಪರಮಾತ್ಮನಾದರೂ ಸಮಸ್ತ ಪ್ರಾಣಿಗಳಲ್ಲಿಯೂ, ಶಾಶ್ವತವಾದ ಸ್ಥಾವರ-ಜಂಗಮಗಳಲ್ಲಿಯೂ ವಾಸಿಸುತ್ತಿದ್ದಾನೆ. ಅವನೊಬ್ಬನೇ ಪರಮ ಚೇತನನು. ಅವನಿಂದಲೇ ಜಗತ್ತೆಲ್ಲವೂ ವ್ಯಾಪ್ತವಾಗಿದೆ.

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಯದಾ ಪಶ್ಯತಿ ಭೂತಾತ್ಮಾ ಬ್ರಹ್ಮ ಸಂಪದ್ಯತೇ ತದಾ ॥೨೧॥

ಯಾವನು ಪರಮಾತ್ಮನನ್ನು ಸಮಸ್ತ ಪ್ರಾಣಿಗಳ ಅಂತರ್ಯಾಮಿ ಎಂದು, ಸಮಸ್ತ ಪ್ರಾಣಿಗಳು ಭಗವಂತನ ಹೃದಯದಲ್ಲಿದ್ದಾರೆಂದು ಚಿಂತಿಸುತ್ತಾನೋ ಅಂತಹ ಚೇತನನು ಪರಬ್ರಹ್ಮನನ್ನು ಹೊಂದುತ್ತಾನೆ.

ಯಾವಾನಾತ್ಮನಿ ವೇದಾತ್ಮಾ ತಾವಾನಾತ್ಮಾ ಪರಾತ್ಮನಿ ।
ಯ ಏವಂ ಸತತಂ ವೇದ ಸೋಽಮೃತತ್ವಾಯ ಕಲ್ಪತೇ ॥೨೨॥

ನಮ್ಮ ಹೃದಯದಲ್ಲಿ ಜ್ಞಾನಸ್ವರೂಪಿಯಾದ ಯಾವ ಭಗವಂತನಿದ್ದಾನೋ, ಅವನೇ ಇತರರ ಹೃದಯಗುಹೆಯಲ್ಲಿಯೂ ನೆಲೆಸಿದ್ದಾನೆ ಎಂದು ತಿಳಿದವನು ಅಮೃತತ್ತ್ವವನ್ನು ಹೊಂದಲು ಸಮರ್ಥನಾಗುತ್ತಾನೆ.

ವ್ಯಾಖ್ಯಾನ ವಿಶೇಷ– ಯಾರು ಎಷ್ಟು ಎಷ್ಟು ವೇದಾಭ್ಯಾಸವನ್ನು ಮಾಡುತ್ತಾರೋ ಅಷ್ಟು ಅಷ್ಟು ಅವರಿಗೆ ಪರಮಾತ್ಮನಿಗೂ ಅವನಿಗೂ ಇರುವ ಭೇದ ಬುದ್ಧಿಯು ನಿವಾರಣೆಯಾಗುತ್ತದೆ ಎಂದು ಭಾವ.

ಸರ್ವಭೂತಾತ್ಮಭೂತಸ್ಯ ಸರ್ವಭೂತಹಿತಸ್ಯ ಚ ।
ದೇವಾಪಿ ಮಾರ್ಗೇ ಮುಹ್ಯಂತಿ ಅಪದಸ್ಯ ಪದೈಷಿಣಃ ॥೨೩॥

ಎಲ್ಲ ಪ್ರಾಣಿಗಳ ಅಂತರ್ಯಾಮಿಯಾಗಿ ನಿಂತಿರುವ, ಸಮಸ್ತ ಭೂತಗಳ ಹಿತಚಿಂತಕನಾದ, ಪ್ರಾಕೃತದೇಹರಹಿತನಾದ ಭಗವಂತನನ್ನು ಹೊಂದಲು ಬಯಸುವ ದೇವತೆಗಳೂ ಕೂಡ ಮೋಹಕ್ಕೆ ತುತ್ತಾಗುತ್ತಾರೆ.

ಶಕುನೀನಾಮಿವಾಕಾಶೇ ಜಲೇ ವಾರಿಚರಸ್ಯ ವಾ ।
ಯಥಾ ಗತಿರ್ನ ದೃಶ್ಯೇತ ತಥೈವ ಸುಮಹಾತ್ಮನಃ ॥೨೪॥

ಆಕಾಶದಲ್ಲಿ ಹಾರಾಡುವ ಪಕ್ಷಿಗಳ ಪಾದಚಿಹ್ನೆಗಳು ಹೇಗೆ ಕಾಣಿಸುವುದಿಲ್ಲವೋ, ನೀರಿನಲ್ಲಿ ಸಂಚರಿಸುವ ಜಲಚರಪ್ರಾಣಿಗಳ ಪಾದಚಿಹ್ನೆಗಳು ಹೇಗೆ ಗೋಚರಿಸುವುದಿಲ್ಲವೋ ಹಾಗೆ ಮಹಾನುಭಾವನಾದ ಭಗವಂತನ ಗತಿಯು ಗೋಚರವಾಗುವುದಿಲ್ಲ.

ಕಾಲಃ ಪಚತಿ ಭೂತಾನಿ ಸರ್ವಾಣ್ಯೇವಾತ್ಮನಾತ್ಮನಿ ।
ಯಸ್ಮಿಂಸ್ತು ಪಚ್ಯತೇ ಕಾಲಸ್ತಂ ನ ವೇದೇಹ ಕಶ್ಚನ ॥೨೫॥

ಮೃತ್ಯುದೇವನು ಸಮಸ್ತ ಪ್ರಾಣಿಗಳನ್ನು ತನ್ನಲ್ಲಿರಿಸಿಕೊಂಡು ಪಾಕ ಮಾಡುತ್ತಾನೆ. ಅಂತಹ ಕಾಲನನ್ನು ಪಾಕ ಮಾಡುವವನು ಭಗವಂತನು. ಇವನನ್ನು ಇಲ್ಲಿ ತಿಳಿದವರು ಯಾರೂ ಇರುವುದಿಲ್ಲ.

ನ ತದೂರ್ಧ್ವಂ ನ ತಿರ್ಯಕ್ಚ ನಾಧೋ ನ ಚ ತಿರಃ ಪುನಃ ।
ನ ಮಧ್ಯೇ ಪ್ರತಿಗೃಹ್ಣೀತೇ ನೈವ ಕಶ್ಚಿತ್ ಕುತಶ್ಚನ ॥೨೬॥

ಆ ಪರಮಾತ್ಮನನ್ನು ಮೇಲೆ, ಕೆಳಗೆ, ಆಚೆ, ಈಚೆ, ಮಧ್ಯ, ಯಾವ ಕಡೆಯಿಂದಲೂ ಹಿಡಿಯಲು ಸಾಧ್ಯವಿಲ್ಲ. ಅವನನ್ನು ಈ ಲೋಕದಲ್ಲಿ ಯಾವ ಪುರುಷನು ಎಂದಿಗೂ ಹಿಡಿದಾನು ಎಂದು ಹೇಳಲು ಸಾಧ್ಯವಾಗದು.

ಸರ್ವೇऽಂತಃಸ್ಥಾ ಇಮೇ ಲೋಕಾ ಬಾಹ್ಯಮೇಷಾಂ ನ ಕಿಂಚನ ।
ಯಃ ಸಹಸ್ರಂ ಸಮಾಗಚ್ಛೇದ್ಯಥಾ ಬಾಣೋ ಗುಣಚ್ಯುತಃ ॥೨೭॥

ಸಮಸ್ತ ಲೋಕಗಳು ಅವನಲ್ಲಿ ಅಡಕವಾಗಿವೆ. ಈ ಲೋಕಗಳಲ್ಲಿ ಅವನನ್ನು ಬಿಟ್ಟು ಪ್ರತ್ಯೇಕವಾಗಿರುವ ಒಂದು ಲೋಕ ಎಂಬುದಿಲ್ಲ. ಸಿಂಜನಿಯಿಂದ ಬಿಡಲ್ಪಟ್ಟ (ಹೆದೆಯೇರಿಸಿ ಬಿಟ್ಟ) ಬಾಣವು ಎಷ್ಟು ಶೀಘ್ರವಾಗಿ ಚಲಿಸುತ್ತದೋ ಇದರಂತೆ ಈ ಭಗವಂತನು ಸಹಸ್ರಾರು ಲೋಕಗಳನ್ನು ಪ್ರವೇಶಿಸುತ್ತಲೇ ಇದ್ದಾನೆ.

ನೈವಾಂತಂ ಕಾರಣಸ್ಯೇಯಾದ್ಯದ್ಯಪಿ ಸ್ಯಾನ್ಮನೋಜವಃ ।
ತಸ್ಮಾತ್ ಸೂಕ್ಷ್ಮಾತ್ ಸೂಕ್ಷ್ಮತರಂ ನಾಸ್ತಿ ಸ್ಥೂಲತರಂ ತತಃ ॥೨೮॥

ಈ ಜಗತ್ತಿಗೆ ಕಾರಣನಾದ ಭಗವಂತನ ಕೊನೆಯನ್ನು ಮುಟ್ಟಲು ಯಾವ ಮನೋವೇಗಕ್ಕೂ ಸಾಧ್ಯವಾಗುವುದಿಲ್ಲ. ಆ ಭಗವಂತನಿಗಿಂತ ಸೂಕ್ಷ್ಮಕ್ಕಿಂತ, ಸೂಕ್ಷ್ಮವಾದ ವಸ್ತುವು ಇನ್ನೊಂದು ಇರುವುದಿಲ್ಲ. ಅವನ ಸ್ಥೂಲಕ್ಕಿಂತ ಮತ್ತೊಂದು ಸ್ಥೂಲತರವಾದ ವಸ್ತುವು ಜಗತ್ತಿನಲ್ಲಿ ಇರುವುದಿಲ್ಲ.

ಸರ್ವತಃಪಾಣಿಪಾದಂ ತತ್ ಸರ್ವತೋಕ್ಷಿಶಿರೋಮುಖಮ್ ।
ಸರ್ವತಃಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೨೯॥

ಆ ಪರಬ್ರಹ್ಮನ ಸ್ವರೂಪಕ್ಕಾದರೂ ಎಲ್ಲ ಕಡೆಯಲ್ಲಿಯೂ ಕೈ-ಕಾಲುಗಳಿವೆ. ಎಲ್ಲ ಕಡೆಯಲ್ಲಿಯೂ ಕಣ್ಣು, ತಲೆ, ಮುಖ ಮತ್ತು ಕಿವಿಗಳಿವೆ. ಪರಬ್ರಹ್ಮವು ಪ್ರಪಂಚದಲ್ಲಿ ಎಲ್ಲವನ್ನೂ ಆವರಿಸಿ ನಿಂತಿರುವ ಪದಾರ್ಥವೆನಿಸಿದೆ.

ತದೇವಾಣೋರಣುತರಂ ತನ್ಮಹದ್ಭ್ಯೋ ಮಹತ್ತರಮ್ ।
ತದಂತಃ ಸರ್ವಭೂತಾನಾಂ ಧ್ರುವಂ ತಿಷ್ಠನ್ನ ದೃಶ್ಯತೇ ॥೩೦॥

ಆ ಪರಬ್ರಹ್ಮ ವಸ್ತುವು ಅಣುವಿಗಿಂತಲೂ ಅಣುವಾದುದು. ಮಹತ್ತಿಗಿಂತಲೂ ಮಹತ್ತರವಾದುದು. ಎಲ್ಲ ಪ್ರಾಣಿಗಳ ಒಳಗೂ ಅದು ನಿಶ್ಚಿತವಾಗಿ ಇದೆ. ಆದರೆ ಯಾರಿಗೂ ತನ್ನ ಇರುವನ್ನು ತೋರುವುದಿಲ್ಲ.

ಅಕ್ಷರಶ್ಚಕ್ಷರಶ್ಚೈವ ದ್ವೈಧೀಭಾವೋऽಯಮಾತ್ಮನಃ ।
ಕ್ಷರಃ ಸರ್ವೇಷು ಭೂತೇಷು ದಿವ್ಯಂ ಹ್ಯಮೃತಮಕ್ಷರಮ್ ॥೩೧॥

ಪರಮಾತ್ಮನ ದೆಸೆಯಿಂದ ಜೀವರಿಗೆ ಹೇಗೆ ಭೇದವು ಸತ್ಯವಾಗಿ ಇದೆಯೋ ಅದರಂತೆ ಕ್ಷರ ಮತ್ತು ಅಕ್ಷರ ಎಂದು ಇಬ್ಬರು ಪುರುಷರು ಇದ್ದಾರೆ. ಸಮಸ್ತ ಭೂತಗಳಲ್ಲಿಯೂ ಭಗವಂತನು ಕ್ಷರನಾಮಕನಾಗಿದ್ದಾನೆ. ಮುಕ್ತಾತ್ಮರಲ್ಲಿ ಭಗವಂತನು ಅಕ್ಷರನಾಮಕನಾಗಿ ಇದ್ದಾನೆ.

ನವದ್ವಾರಂ ಪುರಂ ಗತ್ವಾ ಹಂಸೋ ಹಿ ನಿಯತೋ ವಶೀ ।
ಈಶಃ ಸರ್ವಸ್ಯ ಭೂತಸ್ಯ ಸ್ಥಾವರಸ್ಯ ಚರಸ್ಯ ಚ ॥೩೨॥

ಚರಾಚರಾದಿ ಸಮಸ್ತ ಪ್ರಾಣಿಗಳಿಗೂ ದೊರೆಯಾದ ಭಗವಂತನು ಎಲ್ಲವನ್ನೂ ತನ್ನಲ್ಲಿ ವಶಪಡಿಸಿಕೊಂಡು, ಒಂಬತ್ತು ದ್ವಾರಗಳಿಂದ ಕೂಡಿರುವ ಶರೀರವೆಂಬ ಪಟ್ಟಣವನ್ನು ಪ್ರವೇಶಿಸಿ, ಹಂಸ ಎಂಬ ಹೆಸರಿನಿಂದ ಆ ಪಟ್ಟಣಕ್ಕೆ ಪ್ರಭುವಾಗಿ ನೆಲೆಸಿದ್ದಾನೆ.

ಪಾತೇನಾಜಂ ವಿಕಲ್ಪಾನಾಂ ನವಾನಾಂ ಸಂಶಯೇನ ಶಯಃ ।
ಶರೀರಾಣಾಮಜಸ್ಯಾಹುರ್ಹಂಸತ್ವಂ ಪಾರದರ್ಶಿನಃ ॥೩೩॥

ಪರಮಾತ್ಮನು ಜನ್ಮರಹಿತನಾಗಿದ್ದರೂ ಹೊಸ ಹೊಸ ಶರೀರಗಳಿಗೆ ಸಂಬಂಧ ಪಟ್ಟಂತಹ ಉತ್ಪತ್ತಿ-ಸ್ಥಿತಿ-ಲಯಗಳನ್ನು ಮಾಡುತ್ತಾನೋ ಈ ಕಾರಣದಿಂದ ಜ್ಞಾನಿಗಳು ನಾಶರಹಿತನಾದ ಪರಮಾತ್ಮನಿಗೆ ಹಂಸತ್ವವನ್ನು ಹೇಳುತ್ತಾರೆ. 'ಅನಹಿಂಸಾಗತಿ' ಎಂಬ ಶಬ್ದದಿಂದ ಗತಿಯುಳ್ಳವನು. ಪ್ರತಿಯೊಂದು ಶರೀರದ ಸಾರಾಸಾರ ವಿವೇಚನೆಯನ್ನು ಮಾಡುತ್ತಾ, ಆಯಾ ಜೀವರಿಗೆ ಅವುಗಳನ್ನು ತಂದೊಡ್ಡುವವನು, ಆಯಾ ಶರೀರದಲ್ಲಿ ಗತಿಯುಳ್ಳವನು ಎಂಬರ್ಥದಲ್ಲಿ ಪಾರದರ್ಶಿಗಳು ಹಂಸತ್ವವನ್ನು ಹೇಳುತ್ತಾರೆ ಎಂದು ಭಾವ.

ಹಂಸೋಕ್ತಂ ಯತ್ ಕ್ಷರಂ ಚೈವ ಕೂಟಸ್ಥಂ ಯತ್ತದಕ್ಷರಮ್ ।
ತದ್ ವಿದ್ವಾನಕ್ಷರಂ ಪ್ರಾಪ್ಯ ಜಹಾತಿ ಪ್ರಾಣಜನ್ಮನೀ ॥೩೪॥

ಕ್ಷರ ಪುರುಷನಾದ ಜೀವನನ್ನು ಹಂಸ ಎಂದು ಹೇಳುತ್ತಾರೆ. ಇದು ಕೇವಲ ಹೆಸರಿಗೆ ಮಾತ್ರ. ಸಾರಾಸಾರ ವಿವೇಕ ಇಲ್ಲದ ಹಂಸ ಜೀವನಾಗಿದ್ದಾನೆ. ಕೂಟಸ್ಥ ಎನಿಸಿದ ಅಕ್ಷರನಾಮಕನಾದ ಪರಮಾತ್ಮನ ಸ್ವರೂಪವು ವಿಕಾರ ಇಲ್ಲದೆ ಇರುವುದರಿಂದ ಮುಖ್ಯ

ಹಂಸ ಎನಿಸಿದೆ. ಅಂತಹ ಅಕ್ಷರನಾಮಕನಾದ ಪರಮಾತ್ಮನನ್ನು ಯಾವನು ಚೆನ್ನಾಗಿ ತಿಳಿದು ಅವನನ್ನು ಹೊಂದುತ್ತಾನೋ ಅವನು ಹುಟ್ಟು-ಸಾವುಗಳಿಂದ ಮುಕ್ತನಾಗುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಬ್ರಹ್ಮಾಧಿಗಮೋಪಾಯವಿಧಿರ್ನಾಮ ಚತುಃಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ವ್ಯಾಸರು ಶುಕಮುನಿಯನ್ನು ಕುರಿತು ಯೋಗಸ್ವರೂಪವನ್ನು ತಿಳಿಸಿದುದು.

ವ್ಯಾಸಃ

ಪೃಚ್ಛತಸ್ತವ ಸತ್ಪುತ್ರ ಯಥಾವದಿಹ ತತ್ತ್ವತಃ ।
ಸಾಂಖ್ಯನ್ಯಾಯೇನ ಸಂಯುಕ್ತಂ ಯದೇತತ್ ಕೀರ್ತಿತಂ ಮಯಾ ।
ಯೋಗಕೃತ್ಯಂ ತು ತೇ ಕೃತ್ಸ್ನಂ ವರ್ತಯಿಷ್ಯಾಮಿ ತಚ್ಛೃಣು ॥೧॥

ಕುಮಾರನೇ, ಇಲ್ಲಿಯ ತನಕ ನಿನಗೆ ಜ್ಞಾನಿಗಳ ಧರ್ಮಗಳನ್ನು ತಿಳಿಸಿದ್ದೇನೆ. ಇನ್ನು ಯೋಗದ ಫಲವನ್ನು ತಿಳಿಸುತ್ತೇನೆ, ಕೇಳು.

ಏಕತ್ವಂ ಬುದ್ಧಿಮನಸೋರಿಂದ್ರಿಯಾಣಾಂ ಚ ಸರ್ವಶಃ ।
ಆತ್ಮನೋ ಧ್ಯಾಯಿನಸ್ತಾತ ಜ್ಞಾನಮೇತದನುತ್ತಮಮ್ ॥೨॥

ಬುದ್ಧಿ, ಮನಸ್ಸು, ಇಂದ್ರಿಯಗಳಿಂದ ಎಲ್ಲ ವಿಧದಿಂದಲೂ ಏಕವಿಷಯತ್ವವನ್ನು ಸಾಧಿಸಿಕೊಂಡು, ಪರಮಾತ್ಮನನ್ನೇ ನಿರಂತರ ಧ್ಯಾನಿಸುವಿಕೆಯೇ ಅನುತ್ತಮವಾದ ಜ್ಞಾನ ಎನಿಸುತ್ತದೆ.

ತದೇತದುಪಶಾಂತೇನ ದಾಂತೇನಾಧ್ಯಾತ್ಮಶೀಲಿನಾ ।
ಆತ್ಮಾರಾಮೇಣ ಬುದ್ಧೇನ ಬೋದ್ಧವ್ಯಂ ಶುಚಿಕರ್ಮಣಾ ॥೩॥

ಉತ್ತಮ ಜ್ಞಾನವನ್ನು ಮನುಷ್ಯನಾದವನು ಶಾಂತಾತ್ಮನು, ದಾಂತಾತ್ಮನು, ಅಧ್ಯಾತ್ಮ ಶೀಲನು, ಪರಮಾತ್ಮನಿಂದಲೇ ಸಂತೋಷ ಹೊಂದುವವನು, ಜ್ಞಾನಿಯೂ ಸದಾಚಾರಸಂಪನನೂ ಆದ ಗುರುಗಳ ಮುಖದಿಂದ ತಿಳಿದುಕೊಳ್ಳಬೇಕು.

ಯೋಗದೋಷಾನ್ ಸಮುಚ್ಛಿದ್ಯ ಪಂಚ ಯಾನ್ಕವಯೋ ವಿದುಃ ।
ಕಾಮಂ ಕ್ರೋಧಂ ಚ ಲೋಭಂ ಚ ಭಯಂ ಸ್ವಪ್ನಂ ಚ ಪಂಚಮಮ್ ॥

ಕ್ರೋಧಂ ಶಮೇನ ಜಯತಿ ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾದ್ಧೀರೋ ನಿದ್ರಾಮುಚ್ಛೇತ್ತುಮರ್ಹತಿ ॥೫॥

ವಿದ್ವಾಂಸರು ಹೇಳಿರುವ ಐದು ಬಗೆಯ ಯೋಗದೋಷಗಳನ್ನು ಸಂಪೂರ್ಣ ಪರಿಹರಿಸಿಕೊಂಡಿರಬೇಕು. ಕಾಮ, ಕ್ರೋಧ, ಲೋಭ, ಭಯ, ಸ್ವಪ್ನ - ಈ ಐದು ಯೋಗದೋಷಗಳೆನಿಸಿವೆ. ಮನೋನಿಗ್ರಹದಿಂದ ಕ್ರೋಧವನ್ನೂ, ಸಂಕಲ್ಪತ್ಯಾಗದಿಂದ ಕಾಮವನ್ನೂ, ಸತ್ತ್ವಗುಣವನ್ನಾಶ್ರಯಿಸಿ ನಿದ್ರೆಯನ್ನು ಜಯಿಸಬೇಕು.

ಧೃತ್ಯಾ ಶಿಶ್ನೋದರಂ ರಕ್ಷೇತ್ ಪಾಣಿಪಾದಂ ಚ ಚಕ್ಷುಷಾ ।
ಚಕ್ಷುಃ ಶ್ರೋತ್ರೇ ಚ ಮನಸಾ ಮನೋ ವಾಚಂ ಚ ಕರ್ಮಣಾ ॥೬॥

ಧೈರ್ಯದಿಂದ ಉಪಸ್ಥ ಜಿಹ್ವೆಗಳನ್ನು ರಕ್ಷಿಸಬೇಕು. ಕಣ್ಣಿನಿಂದ ಕೈ-ಕಾಲುಗಳನ್ನು ಹತೋಟಿಗೆ ತಂದುಕೊಳ್ಳಬೇಕು. ಮನಸ್ಸಿನ ಸಹಾಯದಿಂದ ಕಣ್ಣು, ಕಿವಿಗಳನ್ನು ನಿಗ್ರಹಿಸಿಕೊಳ್ಳಬೇಕು. ಸತ್ಕರ್ಮಾಚರಣೆಯ ಮೂಲಕ ಮನಸ್ಸು, ಮಾತುಗಳನ್ನು ನಿಯಂತ್ರಿಸಿಕೊಳ್ಳಬೇಕು.

ಅಪ್ರಮಾದಾದ್ ಭಯಂ ಜಹ್ಯಾಲ್ಲೋಭಂ ಪ್ರಾಜ್ಞೋಪಸೇವನಾತ್ ।
ಏವಮೇತಾನ್ ಯೋಗದೋಷಾನ್ ಜಯೇನ್ನಿತ್ಯಮತಂದ್ರಿತಃ ॥೭॥

ಜಾಗರೂಕನಾಗಿದ್ದು ಭಯವನ್ನು ತ್ಯಜಿಸಬೇಕು. ವಿದ್ವಾಂಸರ ಸೇವೆಯಿಂದ ಅಹಂಕಾರವನ್ನು ಜಯಿಸಬೇಕು. ಈ ರೀತಿಯಾಗಿ ಪ್ರತಿದಿನವೂ ಆಲಸ್ಯ ಇಲ್ಲದವನಾಗಿ ಮೇಲೆ ಹೇಳಿದ ಯೋಗದೋಷಗಳನ್ನು ಜಯಿಸುತ್ತಿರಬೇಕು.

ಅಗ್ನೀಂಶ್ಚ ಬ್ರಾಹ್ಮಣಾಂಶ್ಚಾರ್ಚೇದ್ ದೇವತಾಃ ಪ್ರಣಮೇತ ಚ ।
ವರ್ಜಯೇದ್ರುಷಿತಾಂ ವಾಚಂ ಹಿಂಸಾಯುಕ್ತಾಂ ಮನೋನುಗಾಮ್ ॥

ಅಗ್ನಿಗಳನ್ನು, ಬ್ರಾಹ್ಮಣರನ್ನು ಪೂಜಿಸಬೇಕು. ದೇವತೆಗಳಿಗೆ ನಮಸ್ಕರಿಸಬೇಕು. ನಿಷ್ಠುರವಾದ ಮಾತುಗಳನ್ನು ತ್ಯಜಿಸಬೇಕು. ಹಿಂಸಾಯುಕ್ತವಾದ, ಮನಸ್ಸನ್ನು ವಿಷಯದ ಕಡೆ ಒಡ್ಡುವ ಪ್ರಚೋದನೆಯ ಮಾತುಗಳನ್ನು ಆಡಬಾರದು.

ಬ್ರಹ್ಮ ತೇಜೋಮಯಂ ಶುಕ್ಲಂ ಯಸ್ಯ ಸರ್ವಮಿದಂ ತತಮ್ ।
ಏತಸ್ಯ ಸೂತ್ರಭೂತಸ್ಯ ದ್ವಯಂ ಸ್ಥಾವರಜಂಗಮಮ್ ॥೯॥

ಪರಮಾತ್ಮನ ಶುದ್ಧವಾದ ಯಾವ ಸ್ವರೂಪವಿದೆಯೋ ಅದರಿಂದಲೇ ಈ ಜಗತ್ತೆಲ್ಲವೂ ವ್ಯಾಪ್ತವಾಗಿದೆ. ಈ ಸ್ಥಾವರ-ಜಂಗಮ ಎಂಬ ಎರಡು ಈ ಭಗವಂತನ ಅಧೀನದಲ್ಲಿಯೇ ನಡೆಯುತ್ತಿದೆ.

ಧ್ಯಾನಮಧ್ಯಯನಂ ದಾನಂ ಸತ್ಯಂ ಹ್ರೀರಾರ್ಜವಂ ಕ್ಷಮಾ ।
ಶೌಚಮಾಹಾರಸಂಶುದ್ಧಿರಿಂದ್ರಿಯಾಣಾಂ ಚ ನಿಗ್ರಹಃ ॥೧೦॥

ಧ್ಯಾನ, ವೇದಾಧ್ಯಯನ, ದಾನ, ಸತ್ಯನಿಷ್ಠೆ, ಲಜ್ಜೆ, ಸರಳತೆ, ಕ್ಷಮೆ, ಶೌಚ, ಆಹಾರ ಶುದ್ಧಿ, ಇಂದ್ರಿಯನಿಗ್ರಹ;

ಏತೈರ್ವಿವರ್ಧತೇ ತೇಜಃ ಪಾಪ್ಮಾನಂ ಚಾಪಕರ್ಷತಿ ।
ಸಿದ್ಧ್ಯಂತಿ ಚಾಸ್ಯ ಸರ್ವಾರ್ಥಾ ವಿಜ್ಞಾನಂ ಚ ಪ್ರವರ್ತತೇ ॥೧೧॥

ಇವೇ ಮೊದಲಾದ ಸತ್ಕರ್ಮಗಳಿಂದ ತೇಜಸ್ಸು ವೃದ್ಧಿಯನ್ನು ಹೊಂದುತ್ತದೆ. ಪಾಪಗಳು ನಾಶವಾಗುತ್ತವೆ. ಧ್ಯಾನ-ಅಧ್ಯಯನಗಳಲ್ಲಿ ಆಸಕ್ತನಾದವನಿಗೆ ಸಮಸ್ತ ಪುರುಷಾರ್ಥಗಳು ಸಿದ್ಧಿಸುತ್ತವೆ. ಪರಮಾತ್ಮನ ವಿಷಯಕವಾದ ವಿಶೇಷ ಜ್ಞಾನವು ಉಂಟಾಗುತ್ತದೆ.

ಸಮಃ ಸರ್ವೇಷು ಭೂತೇಷು ಲಬ್ಧಾಲಬ್ಧೇನ ವರ್ತಯನ್ ।
ಧೂತಪಾಪ್ಮಾ ತು ತೇಜಸ್ವೀ ಲಘ್ವಾಹಾರೋ ಜಿತೇಂದ್ರಿಯಃ ।
ಕಾಮಕ್ರೋಧೌ ವಶೇ ಕೃತ್ವಾ ನಿನೀಷೇದ್ ಬ್ರಹ್ಮಣಃ ಪದಮ್ ॥೧೨॥

ಯೋಗಿಯಾದವನು ಸಮಸ್ತ ಪ್ರಾಣಿಗಳಲ್ಲಿಯೂ ಭಗವಂತನನ್ನು ನೋಡಬೇಕು. ಏನು ಸಿಕ್ಕಲಿ ಸಿಕ್ಕದೆ ಇರಲಿ, ಯದೃಚ್ಛಾಲಾಭನಾಗಿ ವರ್ತಿಸುತ್ತಿರಬೇಕು. ಪಾಪಗಳನ್ನು ಝಾಡಿಸಿಕೊಂಡು ಪಾಪಹಾರಿಯಾಗಿ, ತೇಜಸ್ವಿಯಾಗಿ, ಜಿತೇಂದ್ರಿಯನಾಗಿ, ಕಾಮ-ಕ್ರೋಧಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಬ್ರಹ್ಮಪದವಿಯನ್ನು ಹೊಂದಲು ಬಯಸಬೇಕು.

ಮನಸಶ್ಚೇಂದ್ರಿಯಾಣಾಂ ಚ ಕೃತ್ವೈಕಾಗ್ರ್ಯಂ ಸಮಾಹಿತಃ ।
ಪ್ರಾಗ್ರಾತ್ರಾಪರರಾತ್ರೇಷು ಧಾರಯೇನ್ಮನ ಆತ್ಮನಾ ॥೧೩॥

ಯೋಗಿಯಾದವನು ಮನಸ್ಸನ್ನು ಮತ್ತು ಇಂದ್ರಿಯಗಳನ್ನು ಭಗವಂತನಲ್ಲಿ ಏಕಾಗ್ರಗೊಳಿಸಿ, ರಾತ್ರಿಯ ಮೊದಲನೆಯ ಮತ್ತು ಕೊನೆಯ ಯಾಮದಲ್ಲಿ ಧ್ಯಾನಕ್ಕೆ ಕುಳಿತು ಇಂದ್ರಿಯಗಳಿಂದ ಸಹಿತವಾದ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಬೇಕು.

ಜಂತೋಃ ಪಂಚೇಂದ್ರಿಯಸ್ಯಾಸ್ಯ ಯದೇಕಂ ಛಿದ್ರಮಿಂದ್ರಿಯಮ್ ।
ತತೋಽಸ್ಯ ಸ್ರವತಿ ಪ್ರಜ್ಞಾ ದೃತೇಃ ಪಾದಾದಿವೋದಕಮ್ ॥೧೪॥

ಒಂದೇ ಸಣ್ಣ ರಂಧ್ರವಿದ್ದರೂ ಚರ್ಮದ ಚೀಲದ ಕೆಳಭಾಗದಿಂದ ನೀರು ಸೋರಿ ಹೋಗುವಂತೆ, ಪಂಚೇಂದ್ರಿಯಗಳಲ್ಲಿ ಒಂದು ಇಂದ್ರಿಯದ ಹಿಡಿತವು ತಪ್ಪಿ ಹೋದರೂ ಮನುಷ್ಯನ ಪ್ರಜ್ಞೆಯು ಕ್ಷಯ ಹೊಂದುತ್ತದೆ.

ಮನಸ್ತು ಪೂರ್ವಮಾದದ್ಯಾತ್ಕುಮೀನಾನಿವ ಮತ್ಸ್ಯಹಾ ।
ತತಃ ಶ್ರೋತ್ರಂ ತತಶ್ಚಕ್ಷುರ್ಜಿಹ್ವಾಂ ಘ್ರಾಣಂ ಚ ಯೋಗವಿತ್ ॥೧೫॥

ಬೆಸ್ತನು ತುಂಬಾ ಚೇಷ್ಟೆ ಮಾಡುವ ಮೀನನ್ನು ಮೊದಲು ಹಿಡಿದು ಬುಟ್ಟಿಯಲ್ಲಿ ಇಟ್ಟುಕೊಳ್ಳುವಂತೆ ಯೋಗಿಯಾದವನು ತುಂಬಾ ವಿಷಯಗಳ ಕಡೆ ಚೇಷ್ಟೆ ಮಾಡಿ ಚಲಿಸುವ ಮನಸ್ಸನ್ನು ನಿಗ್ರಹಿಸಿ ವಶಪಡಿಸಿಕೊಳ್ಳಬೇಕು. ಬಳಿಕ ಕಿವಿ, ಕಣ್ಣು, ನಾಲಿಗೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.

ತತ ಏತಾನಿ ಸಂಯಮ್ಯ ಮನಸಿ ಸ್ಥಾಪಯೇದ್ಯತಿಃ ।
ತಥೈವಾಪೋಹ್ಯ ಸಂಕಲ್ಪಾನ್ಮನೋ ಹ್ಯಾತ್ಮನಿ ಧಾರಯೇತ್ ॥೧೬॥

ಬಳಿಕ ಈ ಐದು ಇಂದ್ರಿಯಗಳನ್ನು ವಶಪಡಿಸಿಕೊಂಡು ಮನಸ್ಸಿನ ಹತೋಟಿಯಲ್ಲಿ ಇಡಬೇಕು. ಅದರಂತೆ ಬಾಹ್ಯ ಸಂಕಲ್ಪಗಳನ್ನೆಲ್ಲ ತೊರೆದು ಬುದ್ಧಿಯ ಹತೋಟಿಗೆ ಸಿಗುವಂತೆ ಮಾಡಬೇಕು.

ಪಂಚ ಜ್ಞಾನೇನ ಸಂಧಾಯ ಮನಸಿ ಸ್ಥಾಪಯೇದ್ಯತಿಃ ।
ಯದೈತಾನ್ಯವತಿಷ್ಠಂತೇ ಮನಃಷಷ್ಠಾನಿ ಚಾತ್ಮನಿ ।
ಪ್ರಸೀದಂತಿ ಚ ಸಂಸ್ಥಾಯ ತದಾ ಬ್ರಹ್ಮ ಪ್ರಕಾಶತೇ ॥೧೭॥

ಪಂಚ ಜ್ಞಾನೇಂದ್ರಿಯಗಳನ್ನು ಮನಸ್ಸಿನಲ್ಲಿ ನೆಲೆಗೊಳಿಸಿ, ಆರನೆಯದಾದ ಮನಸ್ಸಿನಿಂದ ಕೂಡಿದ ಐದು ಇಂದ್ರಿಯಗಳು ಬುದ್ಧಿಯನ್ನು ಸೇರಿ ಯಾವಾಗ ಪ್ರಸನ್ನತೆಯನ್ನು ಹೊಂದುತ್ತವೋ ಆಗ ಯೋಗಿಗೆ ಬ್ರಹ್ಮನು ಕಾಣಿಸುತ್ತಾನೆ.

ವಿಧೂಮ ಇವ ದೀಪ್ತಾರ್ಚಿರಾದಿತ್ಯ ಇವ ದೀಪ್ತಿಮಾನ್ ।
ವೈದ್ಯುತೋಽಗ್ನಿರಿವಾಕಾಶೇ ಪಶ್ಯತ್ಯಾತ್ಮಾನಮಾತ್ಮನಾ ।
ಸರ್ವಂ ಚ ತತ್ರ ಸರ್ವತ್ರ ವ್ಯಾಪಕತ್ವಾಚ್ಚ ದೃಶ್ಯತೇ ॥೧೮॥

ಧೂಮರಹಿತವಾದ ಅಗ್ನಿಯಂತೆ ಬೆಳಗುವ, ಸೂರ್ಯನಂತೆ ಆಕಾಶದಲ್ಲಿ ಹೊಳೆಯುವ, ಮಿಂಚಿನ ಬೆಳಕಿನಂತೆ ಇರುವ ಯೋಗಿಯು ತನ್ನ ಅಂತಃಕರಣದಲ್ಲಿ ಪರಮಾತ್ಮನನ್ನು ನೋಡುತ್ತಾನೆ. ಆ ಸಮಯದಲ್ಲಿ ತೇಜೋರೂಪಿಯಾದ ಪರಮಾತ್ಮನಲ್ಲಿಯೇ ಎಲ್ಲವೂ ಆಶ್ರಯವನ್ನು ಪಡೆದಿರುವ ದೃಶ್ಯವನ್ನು ನೋಡುತ್ತಾನೆ. ಭಗವತ್‌ವ್ಯಾಪ್ತಿಯ ದರ್ಶನವು ಉಂಟಾಗುತ್ತದೆ.

ತಂ ಪಶ್ಯಂತಿ ಮಹಾತ್ಮಾನೋ ಬ್ರಾಹ್ಮಣಾ ಯೇ ಮನೀಷಿಣಃ ।
ಧೃತಿಮಂತೋ ಮಹಾಪ್ರಾಜ್ಞಾಃ ಸರ್ವಭೂತಹಿತೇ ರತಾಃ ॥೧೯॥

ಪರಮಾತ್ಮನನ್ನು ಮಹಾತ್ಮರಾದ, ಜ್ಞಾನಿಗಳಾದ ಬ್ರಾಹ್ಮಣರು ಹೃದಯದಲ್ಲಿಯೇ ನೋಡುತ್ತಾರೆ. ಧೈರ್ಯವಂತರಾದ, ಮಹಾಪ್ರಾಜ್ಞರಾದ, ಸರ್ವಪ್ರಾಣಿಗಳ ಹಿತದಲ್ಲಿಯೇ ಆಸಕ್ತರಾದ ಅವರು ಬ್ರಹ್ಮದರ್ಶನವನ್ನು ಹೊಂದುತ್ತಾರೆ.

ಏವಂ ಪರಿಮಿತಂ ಕಾಲಮಾಚರನ್ ಸಂಶಿತವ್ರತಃ ।
ಆಸೀನೋ ಹಿ ರಹಸ್ಯೇಕೋ ಗಚ್ಛೇದಕ್ಷರಸಾತ್ಮ್ಯತಾಮ್ ॥೨೦॥

ಹೀಗೆ ಪ್ರತಿದಿನವೂ ನಿಯತವಾದ ಕಾಲದ ತನಕ ಏಕಾಂತ ಸ್ಥಳದಲ್ಲಿ ಒಬ್ಬನೇ ಕುಳಿತು, ಕಠೋರ ವ್ರತನಿಷ್ಠನಾಗಿ, ಯೋಗಾಭ್ಯಾಸ ನಿರತನಾಗಿ, ಅಕ್ಷರಬ್ರಹ್ಮನನ್ನು ಚಿಂತಿಸುತ್ತಿರುವವನು ಅವನಂತೆ ನಿರ್ದುಃಖಿಯಾಗುತ್ತಾನೆ.

ವಿಮೋಹೋಽಭ್ರಮ ಆವರ್ತೇ ಘ್ರಾಣಶ್ರವಣದರ್ಶನೇ ।
ಅದ್ಭುತಾನಿ ರಸಸ್ಪರ್ಶೇ ಶೀತೋಷ್ಣೇ ಮಾರುತಾಕೃತಿಃ ॥೨೧॥

ಯೋಗಾಭ್ಯಾಸದಲ್ಲಿಮುಂದುವರೆಯುತ್ತಿರುವಾಗ ಎಲ್ಲೆಡೆಯಿಂದಲೂ ಗಂಧವನ್ನು ಆಘ್ರಾಣಿಸುವ ವಿಷಯದಲ್ಲಿ, ಶಬ್ದವನ್ನು ಕೇಳುವ ವಿಷಯದಲ್ಲಿ, ಬಾಹ್ಯವಾದ ರೂಪ ದರ್ಶನದ ವಿಷಯದಲ್ಲಿ ಮೋಹ-ಭ್ರಮೆಗಳು ಉಂಟಾಗುವುದಿಲ್ಲ. ಇದಕ್ಕಿಂತ ವ್ಯತಿರಿಕ್ತವಾಗಿ ಕಲ್ಪನಾರಹಿತವಾದ, ಅದ್ಭುತವಾದ ರಸಗಳ ಮನೋಹರವಾದ ಸ್ಪರ್ಶಗಳ, ಶೀತೋಷ್ಣಗಳ ವಾತಾವರಣವು ಉಂಟಾಗುತ್ತದೆ. ವಾಯುರೂಪನಾಗಿ ಆಕಾಶದಲ್ಲಿ ಸಂಚರಿಸುವ ಸಾಮರ್ಥ್ಯವು ಲಭಿಸುತ್ತದೆ.

ಪ್ರತಿಭಾಮುಪಸರ್ಗಾಂಶ್ಚಾಪ್ಯುಪಸಂಗೃಹ್ಯ ಯೋಗತಃ ।
ತಾಂಸ್ತತ್ತ್ವವಿದನಾದೃತ್ಯ ಸ್ವಾತ್ಮನೈವ ನಿವರ್ತಯೇತ್ ॥೨೨॥

ದಿವ್ಯವಾದ ಪ್ರತಿಭೆಯು ಹುಟ್ಟುತ್ತದೆ. ದಿವ್ಯಭೋಗಗಳು ತಾವಾಗಿಯೇ ದೊರೆಯುತ್ತವೆ. ಎಲ್ಲಸಿದ್ಧಿಗಳು ಯೋಗಬಲದಿಂದ ಲಭಿಸುತ್ತಿದ್ದರೂ ತತ್ತ್ವಜ್ಞನಾದ ಯೋಗಿಯು ಆ ಸಿದ್ಧಿಗಳೆಲ್ಲವೂ ಪರಮಾತ್ಮನ ದರ್ಶನಕ್ಕೆ ವಿಘ್ನಕಾರಕವೆಂದು ಭಾವಿಸಿ ಅವುಗಳನ್ನು ತಿರಸ್ಕರಿಸಿ ಪರಮಾತ್ಮನಲ್ಲಿಯೇ ಆಸಕ್ತನಾಗಿರಬೇಕು.

ಕುರ್ಯಾತ್ ಪರಿಚಯಂ ಯೋಗೇ ತ್ರೈಕಾಲ್ಯಂ ನಿಯತೋ ಮುನಿಃ ।
ಗಿರಿಶೃಂಗೇ ತಥಾ ಚೈತ್ಯೇ ವೃಕ್ಷಾಗ್ರೇಷು ಚ ಯೋಜಜೇತ್ ॥೨೩॥

ಮುನಿಯು ನಿತ್ಯವೂ ನಿಯಮದಲ್ಲಿದ್ದು ಪರ್ವತದ ಶಿಖರದಲ್ಲಾಗಲಿ, ದೇವಾಲಯದ ಮೂಲದಲ್ಲಾಗಲಿ, ಮರಗಳ ಮೂಲಗಳಲ್ಲಾಗಲಿ ಕುಳಿತುಕೊಂಡು ದಿನದ ಮೂರುಕಾಲಗಳಲ್ಲಿಯೂ ಯೋಗಾಭ್ಯಾಸವನ್ನು ಅನುಷ್ಠಾನ ಮಾಡಬೇಕು.

ಸನ್ನಿಯಮ್ಯೇಂದ್ರಿಯಗ್ರಾಮಂ ಗೋಷ್ಠೇ ಭಾಂಡಮನಾ ಇವ ।
ಏಕಾಗ್ರಶ್ಚಿಂತಯೇನ್ನಿತ್ಯಂ ಯೋಗಾನ್ನೋದ್ವೇಜಯೇನ್ಮನಃ ॥೨೪॥

ಹಣದ ಭಂಡಾರವನ್ನು ತುಂಬಿಸಲು ಬಯಸುವವನು ಭಾಂಡಾಗಾರದಲ್ಲಿ ಹಣವನ್ನು ಸಂಗ್ರಹಿಸಿ ಇಡುವಂತೆ, ಯೋಗಸಾಧಕನು ಇಂದ್ರಿಯಗಳ ಸಮುದಾಯವನ್ನು ಮನಸ್ಸಿನ ಜೊತೆಗೂಡಿಸಿ, ಹೃತ್ಪುಂಡರೀಕದಲ್ಲಿ ನೆಲೆಗೊಳಿಸಿ, ಪರಮಾತ್ಮನನ್ನು ಏಕಾಗ್ರತೆಯಿಂದ ಧ್ಯಾನ ಮಾಡಬೇಕು. ಮನಸ್ಸು ಉದ್ವಿಗ್ನವಾಗದಂತೆ ಯೋಗಾನುಷ್ಠಾನ ಮಾಡಬೇಕು.

ಯೇನೋಪಾಯೇನ ಶಕ್ಯೇತ ಸನ್ನಿಯಂತುಂ ಚಲಂ ಮನಃ ।
ತಂ ತಂ ಯುಕ್ತೋ ನಿಷೇವೇತ ನ ಚೈವ ವಿಚಲೇತ್ತತಃ ॥೨೫॥

ಯಾವ ಉಪಾಯದಿಂದ ಮನಸ್ಸನ್ನು ನಿಗ್ರಹಿಸಲು ಸಾಧ್ಯವಾಗುತ್ತದೋ ಅಂತಹ ಉಪಾಯವನ್ನು ಸಾಧಕನು ಆಶ್ರಯಿಸಬೇಕು. ಈ ಸಾಧನೆಯಿಂದ ಯಾವತ್ತೂ ವಿಚಲಿತನಾಗಬಾರದು.

ಶೂನ್ಯಾ ಗಿರಿಗುಹಾಶ್ಚೈವ ದೇವತಾಯತನಾನಿ ಚ ।
ಶೂನ್ಯಾಗಾರಾಣಿ ಚೈಕಾಗ್ರೋ ನಿವಾಸಾರ್ಥಮುಪಕ್ರಮೇತ್ ॥೨೬॥

ಏಕಾಗ್ರಚಿತ್ತನಾದ ಯೋಗಿಯು ಜನರಿಲ್ಲದ ಪರ್ವತದ ಗುಹೆಗಳನ್ನು, ದೇವಾಲಯಗಳನ್ನು, ಏಕಾಂತವಾಗಿರುವ ಗೃಹಗಳನ್ನು ವಾಸಕ್ಕೆ ಆರಿಸಿಕೊಳ್ಳಬೇಕು.

ನಾಭಿಷ್ವಜೇತ್ ಪರಂ ವಾಚಾ ಕರ್ಮಣಾ ಮನಸಾಪಿ ವಾ ।
ಉಪೇಕ್ಷಕೋ ಯತಾಹಾರೋ ಲಬ್ಧಾಲಬ್ಧೇ ಸಮೋ ಭವೇತ್ ॥೨೭॥

ಯೋಗಸಾಧಕನು ಮಾತು, ಮನಸ್ಸು, ಕೃತಿಗಳಿಂದ ಬೇರೆಯವರಲ್ಲಿ ಅಧಿಕವಾದ ಸಂಗವನ್ನು ಇಟ್ಟುಕೊಳ್ಳಬಾರದು. ಪ್ರಾಪಂಚಿಕ ಮನಸ್ಸಿನಲ್ಲಿ ನಿರ್ಲಿಪ್ತನಾಗಿರಬೇಕು. ನಿಯತವಾದ ಆಹಾರವನ್ನು ಹೊಂದಿ ಲಾಭಾಲಾಭಗಳಲ್ಲಿ ಸಮನಾಗಿರಬೇಕು.

ಯಶ್ಚೈನಮಭಿನಂದೇತ ಯಶ್ಚೈನಮಪವಾದಯೇತ್ ।
ಸಮಸ್ತಯೋಶ್ಚಾಪ್ಯುಭಯೋರ್ನಾಭಿಧ್ಯಾಯೇಚ್ಛುಭಾಶುಭಮ್ ॥೨೮॥

ಯೋಗಿಯಾದವನು ಸಮ್ಮಾನಿಸುವ ಅಥವಾ ನಿಂದಿಸುವವನ ವಿಷಯದಲ್ಲಿ ಸಮನಾಗಿ ವರ್ತಿಸಬೇಕು. ಹೊಗಳಿದವನಿಗೆ ಶುಭಕಾಮನೆಯನ್ನು, ನಿಂದಿಸಿದವನಿಗೆ ಅನಿಷ್ಟಕಾಮನೆಯನ್ನು ಮಾಡಬಾರದು.

ನ ಪ್ರಹೃಷ್ಯೇತ ಲಾಭೇಷು ನಾಲಾಭೇಷು ಚ ಚಿಂತಯೇತ್ ।
ಸಮಃ ಸರ್ವೇಷು ಭೂತೇಷು ಸಧರ್ಮಾ ಮಾತರಿಶ್ವನಃ ॥೨೯॥

ಲಾಭದಿಂದ ಸಂತುಷ್ಟನಾಗಬಾರದು, ನಷ್ಟದಿಂದ ಚಿಂತೆಗೀಡಾಗಬಾರದು. ವಾಯುವು ಪಕ್ಷಪಾತವಿಲ್ಲದೆ ಎಲ್ಲೆಡೆಯೂ ಸಂಚರಿಸುವಂತೆ ತನ್ನ ಮನಸ್ಸು ಒಂದೇ

ರೀತಿಯಲ್ಲಿ ವರ್ತಿಸುವಂತೆ ಮಾಡಬೇಕು. ವಾಯುವು ಎಲ್ಲರಲ್ಲಿಯೂ ಸಮಾನವಾಗಿ ಸಂಚರಿಸುವಂತೆ ಸಮಸ್ತ ಪ್ರಾಣಿಗಳಲ್ಲಿಯೂ ಸಮದಿಂದ ಇರಬೇಕು.

ಏವಂ ಸರ್ವಾತ್ಮನಃ ಸಾಧೋಃ ಸರ್ವತ್ರ ಸಮದರ್ಶಿನಃ ।
ಷಣ್ಮಾಸಾನ್ನಿತ್ಯಯುಕ್ತಸ್ಯ ಶಬ್ದಬ್ರಹ್ಮಾತಿವರ್ತತೇ ॥೩೦॥

ಈ ರೀತಿಯಾಗಿ ಎಲ್ಲೆಡೆಯೂ ಸಾಧುವಾದವನು ಸಮದರ್ಶಿಯಾಗಿ ಇದ್ದಾಗ ಆರು ತಿಂಗಳ ತನಕ ಯೋಗಾಭ್ಯಾಸ ರತನಾದವನು ವಿಧಿ-ನಿಷೇಧಗಳನ್ನು ಮೀರಿ ಭಗವಂತನನ್ನು ಹೊಂದುತ್ತಾನೆ.

ವೇದನಾರ್ತಾಃ ಪ್ರಜಾ ದೃಷ್ಟ್ವಾ ಸಮಲೋಷ್ಟಾಶ್ಮಕಾಂಚನಃ ।
ಏತಸ್ಮಿನ್ನಿರತೋ ಮಾರ್ಗೇ ವಿರಮೇನ್ನ ವಿಮೋಹಿತಃ ॥೩೧॥

ಯೋಗಿಯಾದವನು ವಿಷಯಪದಾರ್ಥಗಳಲ್ಲಿ ಆಸಕ್ತರಾದವರು ಯಾವ ದುಃಖವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಕಂಡುಕೊಂಡು, ಪ್ರಾಪಂಚಿಕ ವ್ಯವಹಾರಗಳಿಂದ ವಿರಕ್ತನಾಗಿರಬೇಕು. ಮಣ್ಣುಹೆಂಟೆ, ಕಲ್ಲು, ಚಿನ್ನ ಎಲ್ಲವನ್ನೂ ಸಮಾನವಾಗಿ ಕಾಣಬೇಕು. ಈ ಯೋಗಮಾರ್ಗದಲ್ಲಿ ನಿರತನಾದವನು ಪ್ರಾಪಂಚಿಕ ಸುಖಗಳಿಂದ ಮೋಹಿತನಾಗಿ ಯೋಗಾಭ್ಯಾಸವನ್ನು ನಿಲ್ಲಿಸಬಾರದು.

ಅಪಿ ವರ್ಣ್ಯಾಪಕೃಷ್ಟಸ್ತು ನಾರೀ ವಾ ಧರ್ಮಕಾಂಕ್ಷಿಣೀ ।
ತಾವಪ್ಯೇತೇನ ಮಾರ್ಗೇಣ ಗಚ್ಛೇತಾಂ ಪರಮಾಂ ಗತಿಮ್ ॥೩೨॥

ಧೀಕೃತನಾದ ಬ್ರಹ್ಮಚಾರಿಯಾಗಲಿ, ಧರ್ಮವನ್ನು ಬಯಸುವ ನಾರಿಮಣಿಯಾಗಲಿ ಈ ಯೋಗಮಾರ್ಗವನ್ನು ಆಶ್ರಯಿಸಿದರೆ ಅವರು ಪರಮಗತಿಯನ್ನು ಹೊಂದುತ್ತಾರೆ.

ಅಜಂ ಪುರಾಣಮಜರಂ ಸನಾತನಂ
ಯದಿಂದ್ರಿಯೈರುಪಲಭತೇ ನರೋऽಚಲಃ ।
ಅಣೋರಣೀಯೋ ಮಹತೋ ಮಹತ್ತರಂ
ತದಾತ್ಮನಾ ಪಶ್ಯತಿ ಯುಕ್ತ ಆತ್ಮವಾನ್ ॥೩೩॥

ಚಿತ್ತವನ್ನು ಜಯಿಸಿ ಯೋಗಾಭ್ಯಾಸದಲ್ಲಿ ನಿರತನಾದ ಯೋಗಿಯು ನಿಶ್ಚಲವಾದ ತನ್ನ ಇಂದ್ರಿಯಗಳಿಂದ ಜನ್ಮವಿಲ್ಲದವನೂ, ಸನಾತನನೂ, ಜರೆ (ಮುಪ್ಪು) ಇಲ್ಲದವನು,

ಅಣುವಿಗಿಂತಲೂ ಅಣುವು, ಮಹತ್ತಿಗಿಂತಲೂ ಮಹತ್ತನೂ ಆದ ಪರಮಾತ್ಮನನ್ನು ಬುದ್ಧಿಯ ಮೂಲಕ ಕಂಡುಕೊಳ್ಳುತ್ತಾನೆ.

ಇದಂ ಮಹರ್ಷೇರ್ವಚನಂ ಮಹಾತ್ಮನೋ
ಯಥಾವದುಕ್ತಂ ಮನಸಾನುದೃಶ್ಯ ಚ ।
ಅವೇಕ್ಷ್ಯ ಚೇಯಾತ್ ಪರಮೇಷ್ಠಿಸಾತ್ಮ್ಯತಾಂ
ಪ್ರಯಾಂತಿ ಯಾಂ ಭೂತಗತಿಂ ಮನೀಷಿಣಃ ॥೩೪॥

ಯುಧಿಷ್ಠಿರನೇ, ವ್ಯಾಸ ಮಹರ್ಷಿಗಳು ಹೇಳಿರುವ ಉಪದೇಶ ವಚನಗಳನ್ನು ಮನಸ್ಸಿನಲ್ಲಿ ವಿಮರ್ಶಿಸಿ ಇದೇ ಯುಕ್ತವಾಗಿದೆ ಎಂದು ಚಿಂತಿಸಿ ಅವರು ಹೇಳಿದಂತೆ ಯಾರು ಯೋಗಾಭ್ಯಾಸವನ್ನು ಮಾಡುತ್ತಾರೋ ಅಂತಹ ಜ್ಞಾನಿಗಳು ಸಾಮಾನ್ಯ ಜೀವರಿಂದ ಹೊಂದಲಾಗದೆ ಇರುವ ಪರಮಾತ್ಮನ ಸಾದೃಶ್ಯವನ್ನು ಹೊಂದುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತಾರನೆಯ ಅಧ್ಯಾಯ

ವ್ಯಾಸರು ಶುಕರನ್ನು ಕುರಿತು ಕರ್ಮಜ್ಞಾನಗಳ ಬಗ್ಗೆ ವಿವರಿಸಿದುದು.

ಶುಕಃ

ಯದಿದಂ ವೇದವಚನಂ ಕುರು ಕರ್ಮ ತ್ಯಜೇತಿ ಚ ।
ಕಾಂ ದಿಶಂ ವಿದ್ಯಯಾ ಯಾಂತಿ ಕಾಂ ಚ ಗಚ್ಛಂತಿ ಕರ್ಮಣಾ ॥೧॥

ತಂದೆಯೇ, ಕೆಲವು ಕಡೆ ವೇದಗಳು ಕರ್ಮಗಳನ್ನು ಮಾಡು ಎಂದು ವಿಧಿಸುತ್ತಿವೆ. ಇನ್ನು ಕೆಲವು ಕಡೆ ಕರ್ಮಗಳನ್ನು ತ್ಯಜಿಸು ಎಂದು ಹೇಳುತ್ತಿವೆ. ಹೀಗಿರುವಾಗ ಮನುಷ್ಯನು ಏನು ಮಾಡಬೇಕು? ಕರ್ಮದಿಂದ ಹೊಂದುವ ಗತಿ ಯಾವುದು? ಜ್ಞಾನದಿಂದ ಹೊಂದುವ ಗತಿ ಯಾವುದು?

ಏತದ್ವೈ ಶ್ರೋತುಮಿಚ್ಛಾಮಿ ತದ್ಭವಾನ್ ಪ್ರಬ್ರವೀತು ಮೇ ।
ಏತತ್ತ್ವನ್ಯೋನ್ಯವೈರೂಪ್ಯೇ ವರ್ತತೇ ಪ್ರತಿಕೂಲತಃ ॥೨॥

ಈ ವೇದದ ವಚನಗಳೇ ವಿರುದ್ಧವಾಗಿ ಹೇಳುವಂತೆ ತೋರುತ್ತಿರುವುದರಿಂದ ಇದರ ಸತ್ಯಾಂಶವೇನು ಎಂಬುದನ್ನು ನಿನ್ನ ಮುಖದಿಂದ ತಿಳಿಯಲು ಬಯಸುತ್ತೇನೆ ಎಂದು ಹೇಳಿದನು.

ಭೀಷ್ಮಃ

ಇತ್ಯುಕ್ತಃ ಪ್ರತ್ಯುವಾಚೇದಂ ಪರಾಶರಸುತಃ ಸುತಮ್ ।
ಕರ್ಮವಿದ್ಯಾಮಯಾವೇತೌ ವ್ಯಾಖ್ಯಾಸ್ಯಾಮಿ ಕ್ಷರಾಕ್ಷರೌ ॥೩॥

ಈ ರೀತಿಯಾಗಿ ಶುಕರು ಹೇಳುತ್ತಿರಲು ಪರಾಶರ ಮಗನಾದ ವ್ಯಾಸರು ಶುಕನನ್ನು ಕುರಿತು ಉತ್ತರಿಸುತ್ತಾರೆ. ಮಗನೇ, ಕ್ಷರ-ಅಕ್ಷರ ಫಲವನ್ನು ನೀಡುವ ಕರ್ಮ- ವಿದ್ಯೆಗಳ ಬಗ್ಗೆ ನಿನಗೆ ತಿಳಿಸುತ್ತೇನೆ.

ಯಾಂ ದಿಶಂ ವಿದ್ಯಯಾ ಯಾಂತಿ ಯಾಂ ಚ ಗಚ್ಛಂತಿ ಕರ್ಮಣಾ ।
ಶೃಣುಷ್ವೈಕಮನಾಃ ಪುತ್ರ ಗಹ್ವರಂ ಹ್ಯೇತದಂತರಮ್ ॥೪॥

ಬ್ರಹ್ಮವಿದ್ಯೆಯಿಂದ ಯಾವ ದಿಕ್ಕಿಗೆ ಸಾಗುತ್ತಾರೊ ಕರ್ಮಾಚರಣೆಯಿಂದ ಯಾವ ದಿಕ್ಕಿಗೆ ಸಾಗುತ್ತಾರೊ ಇವೆರಡು ಅತ್ಯಂತ ಕಠಿಣವೂ, ರಹಸ್ಯವೂ ಆದ ವಿಚಾರಗಳಾಗಿವೆ. ಏಕಾಗ್ರತೆಯಿಂದ ಇವುಗಳ ಬಗ್ಗೆ ತಿಳಿದುಕೊ.

ಅಸ್ತಿ ಧರ್ಮ ಇತಿ ಹ್ಯುಕ್ತ್ವಾ ನಾಸ್ತೀತ್ಯತ್ರೈವ ಯೋ ವದೇತ್ ।
ತಸ್ಯ ಪಕ್ಷಸ್ಯ ಸದೃಶಮಿದಂ ಮಮ ಭವೇದಥ ॥೫॥

ನಾನು ನಿನಗೆ ಉಪದೇಶ ಮಾಡುವ ವಾಕ್ಯವು ಜ್ಞಾನಿಗಳ ಮಧ್ಯದಲ್ಲಿ ಧರ್ಮ ಇದೆ ಎಂದು ಹೇಳಿ, ಪುನಃ ಇಲ್ಲ ಎಂದು ಹೇಳಿದರೆ ಹೇಗೆ ಆಗುತ್ತದೋ ಅದರಂತೆ ನನ್ನ ವಾಕ್ಯವು ಆಗುತ್ತದೆ. ನಿನ್ನ ಪ್ರಶ್ನೆಗೆ ಸಮಾಧಾನವನ್ನು ಹೇಳುವುದು ಕಷ್ಟವಿದೆ.

ದ್ವಾವಿಮಾವಥ ಪಂಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ ।
ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೌ ಚ ಸುಭಾಷಿತಃ ॥೬॥

ವೇದದಲ್ಲಿ ಕಾಣಿಸಿರುವ ಧರ್ಮದ ಮಾರ್ಗಗಳು ಎರಡು. ಒಂದು ಪ್ರವೃತ್ತಿ ಮಾರ್ಗ, ಮತ್ತೊಂದು ನಿವೃತ್ತಿ ಮಾರ್ಗ ಎಂದು ಎರಡು ಮಾರ್ಗಗಳು ಹೇಳಲ್ಪಟ್ಟಿವೆ.

ಕರ್ಮಣಾ ಬದ್ಧ್ಯತೇ ಜಂತುರ್ವಿದ್ಯಯಾ ತು ಪ್ರಮುಚ್ಯತೇ ।
ತಸ್ಮಾತ್ ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ ॥೭॥

ಪ್ರವೃತ್ತಿ ಕರ್ಮದಿಂದ ಜೀವನು ಬಂಧನಕ್ಕೆ ತುತ್ತಾಗುತ್ತಾನೆ. ಜ್ಞಾನ ಪೂರ್ವಕವಾಗಿ ಆಚರಿಸುವ ನಿವೃತ್ತಿ ಕರ್ಮದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಆದ್ದರಿಂದ ಸಂಸಾರದಿಂದ ದಡವನ್ನು ಮುಟ್ಟ ಬಯಸುವ ಯತಿಗಳು ಪ್ರವೃತ್ತಿ ಕರ್ಮಗಳನ್ನು ಆಚರಿಸುವುದಿಲ್ಲ.

ಕರ್ಮಣಾ ಜಾಯತೇ ಪ್ರೇತ್ಯ ಮೂರ್ತಿಮಾನ್ ಷೋಡಶಾತ್ಮಕಃ ।
ವಿದ್ಯಯಾ ಜಾಯತೇ ನಿತ್ಯಮವ್ಯಯೋ ಹ್ಯವ್ಯಯಾತ್ಮಕಃ ॥೮॥

ಕರ್ಮಗಳನ್ನು ಆಚರಿಸಿದವರು ಮೃತರಾದ ಮೇಲೆ ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚಭೂತಗಳು, ಮನಸ್ಸು ಎಂಬ ಹದಿನಾರು ಕಲೆಗಳ ಜೊತೆಗೆ ಪುನಃ ಜನ್ಮವನ್ನು ಹೊಂದುತ್ತಾರೆ. ಆದರೆ ವಿದ್ಯೆಯನ್ನು ಹೊಂದಿದವರು ವಿಕಾರವಿಲ್ಲದ ನಿತ್ಯವಾದ ಬ್ರಹ್ಮನನ್ನು ಹೊಂದುತ್ತಾರೆ.

ಕರ್ಮ ತ್ವೇಕೇ ಪ್ರಶಂಸಂತಿ ಸ್ವಲ್ಪಬುದ್ಧಿತರಾ ನರಾಃ ।
ತೇನ ತೇ ದೇಹಜಾಲಾನಿ ರಮಯಂತ ಉಪಾಸತೇ ॥೯॥

ಅಲ್ಪಬುದ್ಧಿಯುಳ್ಳ ಕೆಲವರು ಪ್ರವೃತ್ತಿ ಕರ್ಮವನ್ನೇ ಪ್ರಶಂಸೆ ಮಾಡುತ್ತಾರೆ. ಅವರು ತಾವು ಪ್ರಶಂಸೆ ಮಾಡುತ್ತಾ ಅನೇಕರನ್ನು ಮೋಹಿತರನ್ನಾಗಿ ಮಾಡಿ ತಮ್ಮ ಮಾರ್ಗಕ್ಕೇ ಸೆಳೆಯುತ್ತಾರೆ.

ಯೇ ತು ಬುದ್ಧಿಂ ಪರಾಂ ಪ್ರಾಪ್ತಾ ಧರ್ಮನೈಪುಣ್ಯದರ್ಶಿನಃ ।
ನ ತೇ ಕರ್ಮ ಪ್ರಶಂಸಂತಿ ಕೂಪಂ ನದ್ಯಾಂ ಪಿಬನ್ನಿವ ॥೧೦॥

ಯಾರು ಧರ್ಮತತ್ತ್ವವನ್ನು ಚೆನ್ನಾಗಿ ತಿಳಿದಿದ್ದಾರೋ ಅಂತಹ ಪ್ರಾಜ್ಞರು ನದಿಯ ಜಲದ ಸವಿಯನ್ನು ಸವಿದವನು ಬಾವಿ ನೀರನ್ನು ಹೇಗೆ ಉಪೇಕ್ಷಿಸುತ್ತಾನೋ ಹಾಗೆ ಜ್ಞಾನದ ಮಾರ್ಗವನ್ನು ತಿಳಿದವರಾದ್ದರಿಂದ ಕರ್ಮ ಮಾರ್ಗವನ್ನು ಆದರಿಸಲಾರರು.

ಕರ್ಮಣಃ ಫಲಮಾಪ್ನೋತಿ ಸುಖದುಃಖೇ ಭವಾಭವೌ ।
ವಿದ್ಯಯಾ ತದವಾಪ್ನೋತಿ ಯತ್ರ ಗತ್ವಾ ನ ಶೋಚತಿ ॥೧೧॥

ಮನುಷ್ಯನು ತನ್ನ ಕರ್ಮಗಳಿಗೆ ಫಲವಾಗಿ ಸುಖ-ದುಃಖಗಳನ್ನು, ಜನನ-ಮರಣಗಳನ್ನು ಅನುಭವಿಸುತ್ತಾನೆ. ಬ್ರಹ್ಮಜ್ಞಾನಿಯು ಪರಬ್ರಹ್ಮನನ್ನು ಹೊಂದಿ ಎಂದಿಗೂ ದುಃಖಕ್ಕೆ ತುತ್ತಾಗುವುದಿಲ್ಲ.

ಯತ್ರ ಗತ್ವಾ ನ ಮ್ರಿಯತೇ ಯತ್ರ ಗತ್ವಾ ನ ಜಾಯತೇ ।
ನ ಜೀರ್ಯತೇ ಯತ್ರ ಗತ್ವಾ ಯತ್ರ ಗತ್ವಾ ನ ವರ್ಧತೇ ॥೧೨॥

ಆ ಬ್ರಹ್ಮನನ್ನು ಹೊಂದಿದ ವ್ಯಕ್ತಿಯು ಸಾಯುವುದೂ ಇಲ್ಲ, ಹುಟ್ಟುವುದೂ ಇಲ್ಲ. ಜನನ-ವೃದ್ಧಿ-ಜರಾ-ಮರಣಗಳು ಇಲ್ಲದೆ ಇರುವ ಸ್ಥಿತಿಯನ್ನು ಹೊಂದುತ್ತಾನೆ.

ಯತ್ರ ತದ್ಬ್ರಹ್ಮ ಪರಮಮವ್ಯಕ್ತಮಜರಂ ಧ್ರುವಮ್ ।
ಅವ್ಯಾಹತಮನಾಯಾಸಮಮೃತಂ ಚಾವಿಯೋಗಿ ಚ ॥೧೩॥

ಆ ಬ್ರಹ್ಮನ ಸ್ವರೂಪವು ಮಾತು, ಮನಸ್ಸುಗಳಿಗೆ ನಿಲುಕದಿರುವುದರಿಂದ ಶ್ರೇಷ್ಠವೂ, ಅವ್ಯಕ್ತವೂ, ಶಾಶ್ವತವೂ, ಅವ್ಯಾಹತವೂ, ಆಯಾಸರಹಿತವೂ, ಅಮೃತವೂ, ಅವಿಯೋಗಿಯೂ ಆಗಿದೆ.

ದ್ವಂದ್ವೈರ್ಯತ್ರ ನ ಬಾಧ್ಯಂತೇ ಮಾನಸೇನ ಚ ಕರ್ಮಣಾ ।
ಸಮಾಃ ಸರ್ವತ್ರ ಮೈತ್ರಾಶ್ಚ ಸರ್ವಭೂತಹಿತೇ ರತಾಃ ॥೧೪॥

ಯಾವ ಪರಬ್ರಹ್ಮನನ್ನು ಹೊಂದಿದ ಸಾಧಕರು ಮಾನಸಿಕವಾದ ಕರ್ಮಗಳಿಂದ ಯುಕ್ತರಾಗುವುದಿಲ್ಲ. ಸುಖ-ದುಃಖವಾದ ದ್ವಂದ್ವಗಳಲ್ಲಿ ಸಿಲುಕುವುದಿಲ್ಲ. ಸಮಸ್ತ ಭೂತಗಳಲ್ಲಿಯೂ ಹಿತಚಿಂತಕರಾಗಿ ಇರುತ್ತಾರೆ. ಮೈತ್ರೀಭಾವವನ್ನು ಹೊಂದಿರುತ್ತಾರೆ. ಎಲ್ಲೆಡೆಯೂ ಭಗವಂತನನ್ನೇ ಕಾಣುತ್ತಾರೆ.

ವಿದ್ಯಾಮಯೋऽನ್ಯಃ ಪುರುಷಸ್ತಾತ ಕರ್ಮಮಯೋऽಪರಃ ।
ವಿದ್ಧಿ ಚಂದ್ರಮಸಂ ದರ್ಶೇ ಸೂಕ್ಷ್ಮಯಾ ಕಲಯಾ ಸ್ಥಿತಮ್ ॥೧೫॥

ಭಗವದ್‌ಜ್ಞಾನವನ್ನು ಸಂಪಾದಿಸುವ ಪುರುಷನೇ ಬೇರೆ, ಕರ್ಮ ಮಾರ್ಗದಲ್ಲಿ ಸಾಗುವ ಪುರುಷನೇ ಬೇರೆ. ಅಮಾವಾಸ್ಯೆ ದಿವಸ ಸೂಕ್ಷ್ಮವಾದ ಕಲೆಯಿಂದ ಸೂರ್ಯಮಂಡಲದಲ್ಲಿ ಇರುವಂತಹ ಗಮಾಗಮನವುಳ್ಳ, ವೃದ್ಧಿ-ಹ್ರಾಸವುಳ್ಳ ಚಂದ್ರನಂತೆ, ಪ್ರಳಯ ಕಾಲದಲ್ಲಿ ಭಗವಂತನ ಉದರದಲ್ಲಿ ಸೇರಿರುವ, ಸೃಷ್ಟಿಕಾಲದಲ್ಲಿ

ಸ್ಥೂಲರೂಪದಿಂದ ಪುನಃ ಉತ್ಪತ್ತಿಯನ್ನು ಹೊಂದುವ ಜೀವನು ಕರ್ಮ ಮಯನಾದ ಪುರುಷ ಎಂದು ತಿಳಿ. ಜ್ಞಾನ ಮಾರ್ಗವನ್ನು ಬಿಟ್ಟು ಕರ್ಮ ಮಾರ್ಗದಲ್ಲೇ ಸಾಗುವ ವ್ಯಕ್ತಿಯು ಅಮಾವಾಸ್ಯೆಯ ಚಂದ್ರನಂತೆ ಹ್ರಾಸವನ್ನು, ಹುಣ್ಣಿಮೆಯ ಚಂದ್ರನಂತೆ ವೃದ್ಧಿಯನ್ನು ಅರ್ಥಾತ್ ಹುಟ್ಟು-ಸಾವುಗಳನ್ನು ಹೊಂದುತ್ತಲೇ ಇರುತ್ತಾನೆ. ಸುಖ-ದುಃಖಗಳನ್ನು ಅನುಭವಿಸುತ್ತಿರುತ್ತಾನೆ ಎಂದು ಭಾವ.

ತದೇತದೃಷಿಣಾ ಪ್ರೋಕ್ತಂ ವಿಸ್ತರೇಣಾನುಮೀಯತೇ ।
ನವಜಂ ಶಶಿನಂ ದೃಷ್ಟ್ವಾ ವಕ್ರಂ ತಂತುಮಿವಾಂಬರೇ ॥೧೬॥

ಈ ವಿಷಯವನ್ನೇ ಮಹರ್ಷಿಗಳೊಬ್ಬರು ವಿಸ್ತಾರವಾಗಿ ಹೇಳಿದ್ದಾರೆ. ಅಮಾವಾಸ್ಯೆಯ ಬಳಿಕ ಪ್ರತಿಪದೆಯ ರಾತ್ರಿಯಲ್ಲಿ ಉದಯಮಾನನಾದ ಚಂದ್ರನನ್ನು ನೋಡಿದಾಗ ಆ ಚಂದ್ರನು ವಕ್ರವಾಗಿ ಇಟ್ಟ ದಾರದಂತೆ ಕಾಣಿಸುತ್ತಾನೆ. ಅದನ್ನು ಕಂಡು ವಕ್ರ ದಾರದಂತೆ ಇರುವ ವ್ಯಕ್ತಿಯೇ ಚಂದ್ರನೆಂದು ಅನುಮಾನ ಮಾಡುತ್ತಾರೆ.

ಏಕಾದಶವಿಕಾರಾತ್ಮಾ ಕಲಾಸಂಭಾರಸಂಭೃತಃ ।
ಮೂರ್ತಿಮಾನಿತಿ ತಂ ವಿದ್ಧಿ ತಾತ ಕರ್ಮಗುಣಾತ್ಮಕಮ್ ॥೧೭॥

ಇದರಂತೆ ಹದಿನಾರು ಕಲೆಗಳ ಭಾರವನ್ನು ಧರಿಸಿರುವ ಚಂದ್ರನಮ್ತೆ, ಕರ್ಮಾಸಕ್ತನಾದ ಮನುಷ್ಯನು ಹನ್ನೊಂದು ವಿಕಾರಗಳಿಂದ ಅರ್ಥಾತ್ ಏಕಾದಶ ಇಂದ್ರಿಯಗಳ ವಿಕಾರಗಳಿಂದ ಕೂಡಿದವನಾಗಿ ಪ್ರತಿಪತ್‌ನ ಚಂದ್ರನ ರೂಪದಲ್ಲಿ ಜನ್ಮವನ್ನು ತಾಳುತ್ತಾನೆ. ಅರ್ಥಾತ್ ತ್ರಿಗುಣಾತ್ಮಕವಾದ ಶರೀರವನ್ನು ಹೊಂದುತ್ತಾನೆ. ಚಂದ್ರನಿಗೆ ವೃದ್ಧಿ-ಕ್ಷಯವಿರುವಂತೆ ಕರ್ಮಠನಾದ ಮನುಷ್ಯನಿಗೂ ವೃದ್ಧಿ-ಕ್ಷಯಗಳು ನಿರಂತರ ಒದಗಿ ಬರುತ್ತವೆ.

ತಸ್ಮಿನ್ ಯಃ ಸಂಸ್ಥಿತೋ ಹ್ಯಗ್ನಿರ್ನಿತ್ಯಂ ಸ್ಥಾಲ್ಯಾಮಿವಾಹಿತಃ ।
ಆತ್ಮಾನಂ ತಂ ವಿಜಾನೀಹಿ ನಿತ್ಯಂ ತ್ಯಾಗಜಿತಾತ್ಮಕಮ್ ॥೧೮॥

ಯಾವನು ಜ್ಞಾನಮಾರ್ಗವನ್ನೇ ಅನುಸರಿಸುತ್ತಾನೋ ಅವನು ಸೂರ್ಯ ಮಂಡಲದಲ್ಲಿ ಉಷ್ಣಭಾಸ್ವರತೇಜೋರೂಪದ ಬೆಂಕಿಯು ಯಾವಾಗಲೂ ವಿಕಾರ ರಹಿತವಾಗಿ ಇರುತ್ತದೋ ಇದರಂತೆ ನಿತ್ಯವೂ ಏಕಪ್ರಕಾರದಲ್ಲಿರುವ ಪರಮಾತ್ಮನನ್ನು

ತಿಳಿದವನು ನಿರ್ವಿಕಾರಿಯಾಗಿ, ಜನನ-ಮರಣ ರಹಿತನಾಗಿ ಒಂದೇ ಕ್ರಮದಲ್ಲಿ ಇರುತ್ತಾನೆ ಎಂದು ತಿಳಿ.

ತಮೋ ರಜಶ್ಚ ಸತ್ತ್ವಂ ಚ ವಿದ್ಧಿ ಜೀವಗುಣಾತ್ಮಕಂ ।
ಜೀವಮಾತ್ಮಗುಣಂ ವಿದ್ಯಾದಾತ್ಮಾನಂ ಪರಮಾತ್ಮನಃ ॥೧೯॥

ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಜೀವನ ಗುಣಗಳೆಂದು ತಿಳಿ ಹೊರತು ಇವುಗಳು ಪರಮಾತ್ಮನ ಗುಣಗಳಲ್ಲ. ಈ ಮೂರು ಗುಣಗಳು ಜೀವನಿಗೆ ತಾತ್ಕಾಲಿಕವಾಗಿವೆಯೇ ಹೊರತು ಸ್ವಭಾವಭೂತವಾದವುಗಳಲ್ಲ. ಜೀವನು ಅಂತರ್ಯಾಮಿಯಾದ ಗುಣಗಳಂತೆ ಗುಣಗಳನ್ನು ಹೊಂದಿರುತ್ತಾನೆ. ಎಂದಿಗೂ ಪ್ರತಿಬಿಂಬವು ಬಿಂಬದ ಸಾದೃಶ್ಯವನ್ನು ಹೊಂದಿರುತ್ತದೆ. ಅಂತರ್ಯಾಮಿಯಾದ ಪರಮಾತ್ಮನಾದರೂ ತನ್ನ ಮೂಲರೂಪದಂತೆ ಗುಣಗಳನ್ನು ಹೊಂದಿರುತ್ತಾನೆ ಎಂದು ತಿಳಿ.

ಅಚೇತನಂ ಜೀವಗುಣಂ ವದಂತಿ
ಸ ಚೇಷ್ಟತೇ ಚೇಷ್ಟಯತೇ ಚ ಸರ್ವಮ್ ।
ತತಃ ಪರಂ ಕ್ಷೇತ್ರವಿದೋ ವದಂತಿ
ಪ್ರಾವರ್ತಯದ್ಯೋ ಭುವನಾನಿ ಸಪ್ತ ॥೨೦॥

ಜ್ಞಾನಿಗಳು ಜೀವನಲ್ಲಿರುವ ಚೈತನ್ಯಕ್ಕೂ ಪರಮಾತ್ಮನೇ ಕಾರಣನಾದುದರಿಂದ ಪರಮಾತ್ಮನ ಅಧೀನವಾಗಿ ಚೈತನ್ಯ ಹೊಂದಿರುವ ಜೀವನನ್ನು ಅಚೇತನದಂತೆ ವ್ಯವಹರಿಸುತ್ತಾರೆ. ಪರಮಾತ್ಮನಾದರೂ ಸ್ವತಂತ್ರವಾಗಿ ಚೇಷ್ಟೆ ಮಾಡುತ್ತಾನೆ. ಜೀವ ಜಡಾತ್ಮಕವಾದ ಜಗತ್ತನ್ನು ಇವನೇ ಬದುಕಿಸುತ್ತಾನೆ. ಆ ಕಾರಣದಿಂದ ಜ್ಞಾನಿಗಳು ಪರಮಾತ್ಮನನ್ನು ಜೀವ-ಜಡಾತ್ಮಕ ಜಗತ್ತಿಗಿಂತಲೂ ಅತ್ಯಂತ ಭಿನ್ನನೆಂದೂ, ಉತ್ತಮನೆಂದೂ ಹೇಳುತ್ತಾರೆ. ಹದಿನಾಲ್ಕು ಲೋಕಗಳನ್ನು ಸೃಷ್ಟಿಸುವ ಪರಮಾತ್ಮನನ್ನು ಸರ್ವೋತ್ತಮನೆಂದೂ ಹೇಳುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಷಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೇಳನೆಯ ಅಧ್ಯಾಯ

ವ್ಯಾಸರು ಶುಕರನ್ನು ಕುರಿತು ಬ್ರಹ್ಮಚರ್ಯದ ಮಹತ್ವವನ್ನು ತಿಳಿಸಿದುದು.

ಶುಕಃ

ಕ್ಷರಾತ್ ಪ್ರಭೃತಿ ಯಃ ಸರ್ಗಃ ಸಗುಣಾನೀಂದ್ರಿಯಾಣಿ ಚ ।
ಬುದ್ಧೈಶ್ವರ್ಯಾಭಿಸರ್ಗಾರ್ಥಂ ಯದ್ ಧ್ಯಾನಂ ಚಾತ್ಮನಃ ಶುಭಮ್ ॥

ತಂದೆಯೇ, ಭಗವಂತನಿಂದ ಉಂಟಾದ ಕ್ಷರ ಮೊದಲಾದ ಇಪ್ಪತ್ನಾಲ್ಕು ತತ್ತ್ವಗಳ ಸೃಷ್ಟಿಯನ್ನು ವಿವರಿಸಿರಿ. ಪುನಃ ಜೀವನಿಗೆ ಪ್ರತ್ಯೇಕವಾಗಿ ವಿಷಯೇಂದ್ರಿಯಗಳ ಸಂಗ್ರಹದಿಂದ ಉಂಟಾಗುವ ವಿಶೇಷ ಸೃಷ್ಟಿಯನ್ನು ವಿವರಿಸಿರಿ. ಇವುಗಳಲ್ಲಿ ಜೀವರ ಸೃಷ್ಟಿಯು ಬುದ್ಧಿಯ ಪ್ರಭುತ್ವಕ್ಕೆ ಒಳಪಟ್ಟದ್ದು. ಸಾಮಾನ್ಯ ಸೃಷ್ಟಿಗಿಂತಲೂ ವಿಶೇಷ ಸೃಷ್ಟಿ ಎನಿಸಿದ ಈ ಆತ್ಮನ ಉತ್ಪತ್ತಿಯು ಅತ್ಯಂತ ಮಂಗಳಕರವಾದ ಭಗವಂತನ ಧ್ಯಾನಯೋಗವಾದ ಇದು ಶ್ರೇಷ್ಠವಾದುದೆಂದು ಭಾವಿಸಿದ್ದೇನೆ.

ಭೂಯ ಏವ ತು ಲೋಕೇಽಸ್ಮಿನ್ ಸದ್ವೃತ್ತಿಂ ವೃತ್ತಿಹೈತುಕೀಮ್ ।
ಯಯಾ ಸಂತಃ ಪ್ರವರ್ತಂತೇ ತದಿಚ್ಛಾಮ್ಯನುವರ್ಣಿತಮ್ ॥೨॥

ಈ ಲೋಕದಲ್ಲಿ ಸಜ್ಜನರು ಯಾವ ವೃತ್ತಿಯನ್ನು ಪ್ರಾಮಾಣಿಕ ಎಂದು ನಂಬಿ ಪ್ರವರ್ತಿಸುತ್ತಿದ್ದಾರೋ ಅಂತಹ ಕಾಲೋಚಿತವಾದ ಸತ್ಪುರುಷರ ಮಾರ್ಗವನ್ನೇ ನಾನೂ ಅನುಸರಿಸಲು ಇಚ್ಛಿಸಿದ್ದೇನೆ.

ವೇದೇ ವಚನಮುಕ್ತಂ ತು ಕುರು ಕರ್ಮ ತ್ಯಜೇತಿ ಚ ।
ಕಥಮೇತದ್ ವಿಜಾನೀಯಾಂ ತಚ್ಚ ವ್ಯಾಖ್ಯಾತುಮರ್ಹಸಿ ॥೩॥

ಕರ್ಮ ಮಾಡು, ಕರ್ಮವನ್ನು ತ್ಯಜಿಸು ಎಂಬ ಎರಡೂ ವಾಕ್ಯಗಳು ವೇದದಲ್ಲಿ ಇವೆ. ಯಾವ ಕರ್ಮವನ್ನು ಮಾಡಬೇಕು, ಯಾವ ಕರ್ಮವನ್ನು ಬಿಡಬೇಕು ಎಂಬುದನ್ನು ನೀನೇ ವಿವರಿಸಿ ತಿಳಿಸು.

ಲೋಕವೃತ್ತಾಂತತತ್ತ್ವಜ್ಞಃ ಪೂತೋಽಹಂ ಗುರುಶಾಸನಾತ್ ।
ಕೃತ್ವಾ ಬುದ್ಧಿಂ ವಿಯುಕ್ತಾತ್ಮಾ ತ್ಯಕ್ಷ್ಯಾಮ್ಯಾತ್ಮಾನಮವ್ಯಥಃ ॥೪॥

ತಂದೆಯೇ, ನಿಮ್ಮಂತಹ ಗುರುಗಳ ಉಪದೇಶದಿಂದಲೇ ನಾನು ಪವಿತ್ರನಾಗಿದ್ದೇನೆ. ಲೋಕವೃತ್ತಾಂತದ ತತ್ತ್ವವನ್ನು ತಿಳಿದವನಾಗಿದ್ದೇನೆ. ನಿಮ್ಮ ಉಪದೇಶದಿಂದಲೇ ಧರ್ಮಾಚರಣೆಯಿಂದ ಬುದ್ಧಿಯನ್ನು ಸಂಸ್ಕರಿಸಿಕೊಂಡು, ದೇಹಾಭಿಮಾನವನ್ನು ತೊರೆದು, ಅವಿನಾಶಿಯಾದ ಪರಮಾತ್ಮನನ್ನು ನೋಡಬಯಸುತ್ತೇನೆ.

ವ್ಯಾಸಃ

ಯೈಷಾ ವೈ ವಿಹಿತಾ ವೃತ್ತಿಃ ಪುರಸ್ತಾದ್ಬ್ರಹ್ಮಣಾ ಸ್ವಯಮ್ ।
ಏಷಾ ಪೂರ್ವತರೈಃ ಸದ್ಭಿರಾಚೀರ್ಣಾ ಪರಮರ್ಷಿಭಿಃ ॥೫॥

ಶುಕದೇವನೇ, ಹಿಂದೆ ಬ್ರಹ್ಮನು ತಾನಾಗಿ ವಿಧಿಸಿದ ಬ್ರಹ್ಮಚರ್ಯ ಎಂಬ ವೃತ್ತಿಯನ್ನು ಅನೇಕ ಋಷಿಗಳು ಆಚರಿಸಿದ್ದಾರೆ.

ಬ್ರಹ್ಮಚರ್ಯೇಣ ವೈ ಲೋಕಾನ್ ಜಯಂತಿ ಪರಮರ್ಷಯಃ ।
ಆತ್ಮನಶ್ಚ ಹೃದಿ ಶ್ರೇಯಸ್ತ ನ್ವಿಚ್ಛ ಮನಸಾತ್ಮನಿ ॥೬॥

ಆ ಬ್ರಹ್ಮಚರ್ಯ ವ್ರತದಿಂದಲೇ ಅವರು ಸಮಸ್ತ ಲೋಕಗಳನ್ನು ಜಯಿಸಿರುತ್ತಾರೆ. ಅವರು ತಮ್ಮ ಶ್ರೇಯಸ್ಸಿಗಾಗಿ ಮನಸ್ಸನ್ನು ಬುದ್ಧಿಯಿಂದ ನಿಯಂತ್ರಿಸಿಕೊಳ್ಳುತ್ತಾರೆ.

ವನೇ ಮೂಲಫಲಾಶೀ ಚ ತಪ್ಯನ್ ಸುವಿಪುಲಂ ತಪಃ ।
ಪುಣ್ಯಾಯತನಚಾರೀ ಚ ಭೂತಾನಾಮವಿಹಿಂಸಕಃ ॥೭॥

ಅರಣ್ಯದಲ್ಲಿ ವಾಸ ಮಾಡಿಕೊಂಡು, ಶ್ರೇಷ್ಠವಾದ ತಪಸ್ಸನ್ನು ಮಾಡುತ್ತಾ, ಫಲ-ಮೂಲಗಳನ್ನೇ ಆಹಾರವನ್ನಾಗಿಸಿಕೊಂಡು ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತಾರೆ. ಪ್ರಾಣಿಹಿಂಸೆಯಿಂದ ವಿಮುಖರಾಗಿರುತ್ತಾರೆ.

ವಿಧೂಮೇ ಸನ್ನಮುಸಲೇ ವಾನಪ್ರಸ್ಥಪ್ರತಿಶ್ರಯೇ ।
ಕಾಲೇ ಪ್ರಾಪ್ತೇ ಚರನ್ ಭೈಕ್ಷಂ ಕಲ್ಪತೇ ಬ್ರಹ್ಮಭೂಯಸೇ ॥೮॥

ಬೆಂಕಿಯ ಹೊಗೆಯಾಗಲಿ, ಒನಕೆಯ ಶಬ್ದವಾಗಲಿ ಇಲ್ಲದಂಥ ಶಾಂತವಾದ ಮನೆಗಳಲ್ಲಿ ವಾಸ ಮಾಡಿಕೊಂಡು, ಭೋಜನಕಾಲವು ಸನ್ನಿಹಿತವಾದಾಗ

ಭಿಕ್ಷಾಟನೆಯನ್ನು ಮಾಡಿ, ದೇಹವನ್ನು ಧರಿಸಿಕೊಂಡು ಸಂಚರಿಸುತ್ತಾರೆ. ಇವರು ಪರಬ್ರಹ್ಮನನ್ನು ಹೊಂದಲು ಅರ್ಹರಾಗಿರುತ್ತಾರೆ.

ನಿಃಸ್ತುತಿರ್ನಿರ್ನಮಸ್ಕಾರಃ ಪರಿತ್ಯಜ್ಯ ಶುಭಾಶುಭೇ ।
ಅರಣ್ಯೇ ವಿಚರೈಕಾಕೀ ಯೇನ ಕೇನಚಿದಾಶಿತಃ ॥೯॥

ಶುಕದೇವನೇ, ನೀನೂ ಸಹ ಇತರರು ಮಾಡುವ ಸ್ತೋತ್ರಗಳಿಂದ, ನಮಸ್ಕಾರಗಳಿಂದ ವಿಮುಖನಾಗಿ, ಶುಭಾಶುಭಗಳನ್ನು ತ್ಯಜಿಸಿ ಅರಣ್ಯದಲ್ಲಿ ಸಂಚರಿಸುತ್ತಾ, ಸಿಕ್ಕಿದ್ದನ್ನು ಸಿಕ್ಕಿದಲ್ಲಿ ಭುಂಜಿಸುತ್ತಾ ಸಂಚರಿಸುತ್ತಿರು.

ಶುಕಃ

ಯದಿದಂ ವೇದವಚನಂ ಲೋಕವಾದೇ ವಿರುದ್ಧ್ಯತೇ ।
ಪ್ರಮಾಣೇ ಚಾಪ್ರಮಾಣೇ ಚ ವಿರುದ್ಧೇ ಶಾಸ್ತ್ರತಾ ಕುತಃ ॥೧೦॥

ತಂದೆಯೇ, ವೇದಗಳಲ್ಲಿ ಕರ್ಮ ಮಾಡು, ಕರ್ಮ ಮಾಡಬೇಡ ಎಂಬ ಎರಡು ಪ್ರಕಾರವಾದ ವಾಕ್ಯಗಳಿವೆ. ಲೋಕದ ದೃಷ್ಟಿಯಿಂದ ಅವುಗಳು ವಿರುದ್ಧವಾದಂತೆ ಕಾಣಿಸುತ್ತವೆ. ಈ ವಾಕ್ಯಗಳು ಪ್ರಮಾಣವೋ ಅಪ್ರಮಾಣವೋ? ಪ್ರಮಾಣವೆಂದರೆ ಪರಸ್ಪರ ವಿರುದ್ಧವಾದ ವಿಚಾರವನ್ನು ಹೇಳುವ ಶಾಸ್ತ್ರವು ಹೇಗೆ ಶಾಸ್ತ್ರತ್ವವನ್ನು ಹೊಂದುತ್ತದೆ?

ಇತ್ಯೇತಚ್ಛ್ರೋತುಮಿಚ್ಛಾಮಿ ಭಗವಾನ್ ಪ್ರಬ್ರವೀತು ಮೇ ।
ಕರ್ಮಣಾಮವಿರೋಧೇನ ಕಥಮೇತತ್ ಪ್ರವರ್ತತೇ ॥೧೧॥

ಹೀಗೆ ಕರ್ಮಗಳಿಗೆ ವಿರೋಧವಿಲ್ಲದಂತೆ ಶಾಸ್ತ್ರದ ಪ್ರಕಾರ ಕರ್ಮಗಳನ್ನು ಮಾಡಿದರೆ ಮೋಕ್ಷಪ್ರಾಪ್ತಿಯು ಹೇಗಾಗುತ್ತದೆ ಎನ್ನುವ ವಿಚಾರವನ್ನು ನಿಮ್ಮಿಂದ ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಇತ್ಯುಕ್ತಃ ಪ್ರತ್ಯುವಾಚೇದಂ ಗಂಧವತ್ಯಾಃ ಸುತಃ ಸುತಮ್ ।
ಋಷಿಸ್ತತ್ಪೂಜಯನ್ವಾಕ್ಯಂ ಪುತ್ರಸ್ಯಾಮಿತತೇಜಸಃ ॥೧೨॥

ಯುಧಿಷ್ಠಿರನೇ, ಶುಕಮುನಿಯು ಹೀಗೆ ಪ್ರಶ್ನಿಸಿದಾಗ ಯೋಜನ ಗಂಧಿಯ ಮಗನಾದ ವ್ಯಾಸಮಹರ್ಷಿಯು ಮಹಾತೇಜಸ್ವಿಯಾದ ಮಗನ ಪ್ರಶ್ನೆಯನ್ನು ಪ್ರಶಂಸಿಸುತ್ತಾ ಉತ್ತರವನ್ನು ನೀಡಿದರು.

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋऽಥ ಭಿಕ್ಷುಕಃ ।
ಯಥೋಕ್ತಕಾರಿಣಃ ಸರ್ವೇ ಗಚ್ಛಂತಿ ಪರಮಾಂ ಗತಿಮ್ ॥೧೩॥

ಶುಕನೇ, ಗೃಹಸ್ಥನಾಗಲಿ, ಬ್ರಹ್ಮಚಾರಿಯಾಗಲೀ, ವಾನಪ್ರಸ್ಥ-ಸಂನ್ಯಾಸಿಗಳಾಗಲಿ ತಮ್ಮ ತಮ್ಮ ಆಶ್ರಮಕ್ಕೆ ವಿಹಿತವಾದ ಶಾಸ್ತ್ರೋಕ್ತ ಕರ್ಮಗಳನ್ನೇ ಮಾಡುತ್ತಿದ್ದರೆ ಅವರು ಉತ್ತಮ ಗತಿಯನ್ನು ಹೊಂದುತ್ತಾರೆ.

ಏಕೋ ಯ ಆಶ್ರಮಾನೇತಾನನುತಿಷ್ಠೇದ್ಯಥಾವಿಧಿ ।
ಅಕಾಮದ್ವೇಷಸಂಯುಕ್ತಃ ಸ ಪರತ್ರ ಮಹೀಯತೇ ॥೧೪॥

ಒಬ್ಬನೇ ಪುರುಷನು ರಾಗ-ದ್ವೇಷಗಳನ್ನು ತೊರೆದು ಶಾಸ್ತ್ರವಿಧಿಗನುಗುಣವಾಗಿ ಆಶ್ರಮಧರ್ಮಗಳನ್ನು ಪರಿಪಾಲಿಸಿದರೆ ಪರಮಗತಿಯನ್ನು ಹೊಂದುತ್ತಾನೆ.

ಚತುಷ್ಪದೀ ಹಿ ನಿಃಶ್ರೇಣೀ ಬ್ರಹ್ಮಣ್ಯೇಷಾ ಪ್ರತಿಷ್ಠಿತಾ ।
ಏತಾಮಾಶ್ರಿತ್ಯ ನಿಃಶ್ರೇಣೀಂ ಬ್ರಹ್ಮಲೋಕೇ ಮಹೀಯತೇ ॥೧೫॥

ನಾಲ್ಕು ಆಶ್ರಮಗಳು ಭಗವಂತನಿಂದಲೇ ಪ್ರತಿಷ್ಠಿತವಾಗಿವೆ. ಈ ನಾಲ್ಕು ಆಶ್ರಮಗಳು ಭಗವಂತನ ಬಳಿ ಸಾಗಲು ನಾಲ್ಕು ಪಾದಗಳಿಂದ ಕೂಡಿರುವ ಏಣಿಯಂತೆ ಇವೆ. ಇವುಗಳನ್ನು ಏರಿ ಹೋದವನು ಬ್ರಹ್ಮಲೋಕದಲ್ಲಿ ಪೂಜಿತನಾಗುತ್ತಾನೆ.

ಆಯುಷಸ್ತು ಚತುರ್ಭಾಗಂ ಬ್ರಹ್ಮಚಾರ್ಯನಸೂಯಕಃ ।
ಗುರೌ ವಾ ಗುರುಪುತ್ರೇ ವಾ ವಸೇದ್ಧರ್ಮಾರ್ಥಕೋವಿದಃ ॥೧೬॥

ಬ್ರಹ್ಮಚಾರಿಯು ಆಯುಷ್ಯದ ಕಾಲುಭಾಗವನ್ನು ಬ್ರಹ್ಮಚರ್ಯವ್ರತಕ್ಕಾಗಿ ಮೀಸಲಾಗಿಟ್ಟು ಗುರುವಿನ ಬಳಿಯಾಗಲೀ, ಗುರುಪುತ್ರನ ಬಳಿಯಲ್ಲಾಗಲೀ ವಾಸವಾಗಿದ್ದು, ಧರ್ಮಾರ್ಥಗಳಲ್ಲಿ ಆಸಕ್ತನಾಗಿ, ಗುರುಶುಶ್ರೂಷೆಯಲ್ಲಿ ನಿರತನಾಗಿರಬೇಕು.

ಕರ್ಮಾತಿರೇಕೇಣ ಗುರೋರಧ್ಯೇತವ್ಯಂ ಬುಭೂಷತಾ ।
ದಕ್ಷಿಣೋ ನಾಪವಾದೀ ಸ್ಯಾದಾಹೂತೋ ಗುರುಮಾಶ್ರಯೇತ್ ॥೧೭॥

ವಿದ್ಯಾಭಿಲಾಷಿಯಾದ ಬ್ರಹ್ಮಚಾರಿಯು ಗುರುಗಳ ಸೇವೆಯ ಕಾರ್ಯವು ಪೂರ್ಣವಾದ ಬಳಿಕ ಅವರ ಬಳಿ ಕುಳಿತು ಅಧ್ಯಯನವನ್ನು ಮಾಡಬೇಕು. ಯಾವಾಗಲೂ ಎಲ್ಲರ ವಿಷಯದಲ್ಲಿಯೂ ಉದಾರಿಯಾಗಿರಬೇಕು. ಯಾರ ಮೇಲೂ ಕಳಂಕವನ್ನು ಅರ್ಥಾತ್ ಚಾಡಿಯನ್ನು ಹೇಳಬಾರದು. ಗುರುಗಳು ಕರೆದ ಕೂಡಲೇ ಅವರ ಸೇವೆಗೆ ಸಿದ್ಧನಾಗಿರಬೇಕು. ಗುರುಗಳು ಕರೆದಾಗ ಅಧ್ಯಯನಕ್ಕೆ ಸಾಗಬೇಕು.

ಜಘನ್ಯಶಾಯೀ ಪೂರ್ವಂ ಸ್ಯಾದುತ್ಥಾಯೀ ಗುರುವೇಶ್ಮನಿ ।
ಯಚ್ಚ ಶಿಷ್ಯೇಣ ಕರ್ತವ್ಯಂ ಕಾರ್ಯಂ ದಾಸೇನ ವಾ ಪುನಃ ॥೧೮॥

ಗುರುಗಳು ಮಲಗಿದ ಬಳಿಕ ಮಲಗಬೇಕು. ಗುರುಗಳು ಮಲಗಿದ ಸ್ಥಳಕ್ಕಿಂತ ತಗ್ಗಾದ ಸ್ಥಳದಲ್ಲಿ ಮಲಗಬೇಕು. ಗುರುಗಳು ಏಳುವುದಕ್ಕಿಂತಲೂ ಮೊದಲೇ ಎದ್ದು, ಗುರುಗಳ ಮನೆಯಲ್ಲಿ ಶಿಷ್ಯನು ಮಾಡಬೇಕಾದ ಸಮಸ್ತ ಕಾರ್ಯಗಳನ್ನು ಅಥವಾ ದಾಸನು ಮಾಡಬೇಕಾದ ಕಾರ್ಯಗಳನ್ನು ಮಾಡಬೇಕು.

ಕೃತಮಿತ್ಯೇವ ತತ್ ಸರ್ವಂ ಕೃತ್ವಾ ತಿಷ್ಠೇತ ಪಾರ್ಶ್ವತಃ ।
ಕಿಂಕರಃ ಸರ್ವಕಾರೀ ಚ ಸರ್ವಕರ್ಮಸು ಕೋವಿದಃ ॥೧೯॥

ಗುರುಗಳು ಆದೇಶಿಸಿದಾಗ ಅವರ ಆಜ್ಞೆಯನ್ನು ಶೀಘ್ರವಾಗಿ ಮಾಡಿ ಮುಗಿಸಿ ಗುರುಗಳೇ ನಾನು ಈ ಕಾರ್ಯವನ್ನು ಮಾಡಿದ್ದೇನೆ ಎಂದು ಹೇಳಿ ಅವರ ಪಕ್ಕದಲ್ಲಿ ಮುಂದಿನ ಆಜ್ಞೆಯನ್ನು ನಿರೀಕ್ಷಿಸುತ್ತಾ ನಿಲ್ಲಬೇಕು. ಗುರುಗಳು ಹೇಳಿದ ಎಲ್ಲಾ ಕಾರ್ಯಗಳನ್ನು ಸೇವಕನಂತೆ ಕುಶಲನಾಗಿ ಮಾಡಿ ಮುಗಿಸಬೇಕು.

ಶುಚಿರ್ದಕ್ಷೋ ಗುಣೋಪೇತೋ ಬ್ರೂಯಾದಿಷುರಿವಾತ್ವರಃ ।
ಚಕ್ಷುಷಾ ಗುರುಮವ್ಯಗ್ರೋ ನಿರೀಕ್ಷೇತ ಜಿತೇಂದ್ರಿಯಃ ॥೨೦॥

ಬ್ರಹ್ಮಚಾರಿಯು ಅಂತರಂಗ, ಬಹಿರಂಗ ಶುದ್ಧಿಯುಳ್ಳವನಾಗಿರಬೇಕು. ದಕ್ಷನಾಗಿರಬೇಕು. ಗುಣವಂತನಾಗಿರಬೇಕು. ಮನಸ್ಸಿನಲ್ಲಿ ಸದ್ಭಾವನೆಯನ್ನಿಟ್ಟುಕೊಂಡು

ಪ್ರಿಯವಾದ ಮಾತುಗಳನ್ನೇ ಸ್ನೇಹಿತರಲ್ಲಿ ಆಡಬೇಕು. ಜಿತೇಂದ್ರಿಯನಾಗಿ, ಏಕಾಗ್ರಚಿತ್ತನಾಗಿ, ಭಕ್ತಿಪೂರ್ಣವಾದ ದೃಷ್ಟಿಯಿಂದ ಗುರುಗಳನ್ನು ನೋಡಬೇಕು. ಎಂದಿಗೂ ಸಿಟ್ಟಿನಿಂದ ಗುರುಗಳನ್ನು ನೋಡಬಾರದು.

ನಾಭುಕ್ತವತಿ ಚಾಶ್ನೀಯಾದಪೀತವತಿ ನೋ ಪಿಬೇತ್ ।
ನಾತಿತಿಷ್ಠತಿ ತಥಾಸೀತ ನಾಸುಪ್ತೇ ಪ್ರಸ್ವಪೇತ ಚ ॥೨೧॥

ಗುರುಗಳು ಊಟ ಮಾಡದೆ ತಾನು ಊಟ ಮಾಡಬಾರದು. ಗುರುಗಳು ನೀರು ಪಾನ ಮಾಡದಿದ್ದಲ್ಲಿ ತಾನೂ ಕುಡಿಯಬಾರದು. ಗುರುಗಳು ನಿದ್ರೆಯಿಂದ ಏಳದಿದ್ದಾಗ ತಾನು ಗುರುಗಳಿಗೆ ನಿದ್ರಾಭಂಗವಾಗದಂತೆ ನೋಡಿಕೊಳ್ಳಬೇಕು.

ಉತ್ತಾನಾಭ್ಯಾಂ ಚ ಪಾಣಿಭ್ಯಾಂ ಪಾದಾವಸ್ಯ ಮೃದು ಸ್ಪೃಶೇತ್ ।
ದಕ್ಷಿಣಂ ದಕ್ಷಿಣೇನೈವ ಸವ್ಯಂ ಸವ್ಯೇನ ಪೀಡಯೇತ್ ॥೨೨॥

ಎರಡು ಕೈಗಳನ್ನು ಮೇಲಕ್ಕೆತ್ತಿ ಗುರುಗಳ ಎರಡು ಪಾದಗಳನ್ನು ಮೃದುವಾಗಿ ಮುಟ್ಟಬೇಕು. ಬಲಗೈಯಿಂದ ಗುರುಗಳ ಬಲಗಾಲನ್ನು, ಎಡಗೈಯಿಂದ ಗುರುಗಳ ಎಡಕಾಲನ್ನು ಒತ್ತಬೇಕು.

ಅಭಿವಾದ್ಯ ಗುರುಂ ಬ್ರೂಯಾದಧೀಷ್ವ ಭಗವನ್ನಿತಿ ।
ಇದಂ ಕರಿಷ್ಯೇ ಭಗವನ್ನಿದಂ ಚಾಪಿ ಕೃತಂ ಮಯಾ ॥೨೩॥

ಗುರುಗಳಿಗೆ ಅಭಿವಾದನ ಮಾಡಿ ಕೈಜೋಡಿಸಿಕೊಂಡು ಭಗವನ್, ನನಗೆ ವಿದ್ಯೆಯನ್ನು ಹೇಳಿಕೊಡಿ. ತಮ್ಮ ಈ ಕೆಲಸವನ್ನು ಮಾಡಿ ಮುಗಿಸಿದ್ದೇನೆ. ತಾವು ಹೇಳಿದ ಈ ಕೆಲಸವನ್ನು ಮುಂದೆ ಮಾಡುತ್ತೇನೆ. ನೀವು ಮುಂದೆ ಹೇಳಲಿರುವ ಕಾರ್ಯವನ್ನೂ ಮಾಡುತ್ತೇನೆ ಎಂದು ಪ್ರಾರ್ಥಿಸಬೇಕು.

ಇತಿ ಸರ್ವಮನುಜ್ಞಾಪ್ಯ ನಿವೇದ್ಯ ಗುರವೇ ಧನಮ್ ।
ಕುರ್ಯಾತ್ಕೃತ್ವಾ ಚ ತತ್ ಸರ್ವಮಾಖ್ಯೇಯಂ ಗುರವೇ ಪುನಃ ॥೨೪॥

ಹೀಗೆ ಎಲ್ಲ ವಿಷಯಗಳನ್ನು ಯಥಾ ವಿಧಿಯಾಗಿ ಗುರುಗಳಿಗೆ ಹೇಳುತ್ತಾ ಅವರಿಂದ ಅನುಜ್ಞೆಯನ್ನು ಪಡೆದು, ಅವರು ಹೇಳಿದ ಕಾರ್ಯಗಳನ್ನು ಮಾಡಿ ಮುಗಿಸಿ, ನಡೆದ

ಕಾರ್ಯಗಳನ್ನೆಲ್ಲ ಮಾಡಿ ಮುಗಿಸಿ, ಪುನಃ ಗುರುಗಳ ಬಳಿಗೆ ಹೋಗಿ ನಡೆದ ಕಾರ್ಯದ ಬಗ್ಗೆ ಮಾಹಿತಿಯನ್ನು ನೀಡಬೇಕು.

ಯಾಂಸ್ತು ಗಂಧಾನ್ ರಸಾನ್ ವಾಪಿ ಬ್ರಹ್ಮಚಾರೀ ನ ಸೇವತೇ ।
ಸೇವೇತ ತಾನ್ ಸಮಾವೃತ್ತ ಇತಿ ಧರ್ಮೇಷು ನಿಶ್ಚಯಃ ॥೨೫॥

ವಿಧವಿಧವಾದ ಗಂಧಗಳನ್ನಾಗಲಿ, ಷಡ್ರಸಗಳಿಂದ ಕೂಡಿದ ಅನ್ನವನ್ನಾಗಲೀ ಬ್ರಹ್ಮಚಾರಿಯು ಸೇವನೆ ಮಾಡಬಾರದು. ಸಮಾವರ್ತನವಾದ ಬಳಿಕ ಇವುಗಳನ್ನು ಸೇವಿಸಬೇಕೆಂದು ಧರ್ಮಶಾಸ್ತ್ರಗಳ ನಿರ್ಣಯವಾಗಿದೆ.

ಯೇ ಕೇಚಿದ್ ವಿಸ್ತರೇಣೋಕ್ತಾ ನಿಯಮಾ ಬ್ರಹ್ಮಚಾರಿಣಃ ।
ತಾನ್ ಸರ್ವಾನನುಗೃಹ್ಣೀಯಾದ್ ಭವೇಚ್ಚಾನಪಗೋ ಗುರೋಃ ॥೨೬॥

ಬ್ರಹ್ಮಚಾರಿಯು ಅನುಸರಿಸಬೇಕಾದ ನಿಯಮಗಳು ಶಾಸ್ತ್ರಗಳಲ್ಲಿ ಹೇಗೆ ಹೇಳಲ್ಪಟ್ಟಿವೆಯೋ ಅವುಗಳನ್ನು ಕಟ್ಟುನಿಟ್ಟಾಗಿ ಬ್ರಹ್ಮಚಾರಿಯು ಅನುಷ್ಠಾನ ಮಾಡಬೇಕು. ಯಾವಾಗಲೂ ಗುರುಗಳ ಸಮೀಪದಲ್ಲೇ ಇರಬೇಕು.

ಸ ಏವಂ ಗುರವೇ ಪ್ರೀತಿಮುಪಹೃತ್ಯ ಯಥಾಬಲಮ್ ।
ಆಶ್ರಮೇಷ್ವಾಶ್ರಮೇಷ್ವೇವಂ ಶಿಷ್ಯೋ ವರ್ತೇತ ಕರ್ಮಣಾ ॥೨೭॥

ಈ ರೀತಿಯಾಗಿ ಬ್ರಹ್ಮಚಾರಿಯು ಯಥಾಶಕ್ತಿ ಗುರುಸೇವೆ ಮಾಡಿ ಅವರ ಪ್ರೀತಿ ಸಂಪಾದಿಸಬೇಕು. ಗುರುಶುಶ್ರೂಷೆಯ ಮೂಲಕ ವಿದ್ಯೆಯನ್ನು ಹೊಂದಿದ ಬಳಿಕ ಗುರುದಕ್ಷಿಣೆಯನ್ನು ನೀಡಿ, ಅವರ ಆಜ್ಞೆಯನ್ನು ಪಡೆದು ಮುಂದಿನ ಆಶ್ರಮಕ್ಕೆ ಸಾಗಬೇಕು.

ವೇದವ್ರತೋಪವಾಸೇನ ಚತುರ್ಥೇ ಚಾಯುಷೋ ಗತೇ ।
ಗುರವೇ ದಕ್ಷಿಣಾಂ ದತ್ತ್ವಾ ಸಮಾವರ್ತೇದ್ ಯಥಾವಿಧಿ ॥೨೮॥

ಹೀಗೆ ವೇದವ್ರತಗಳನ್ನು ಮಾಡುತ್ತಾ, ಗುರುವಿನ ಬಳಿಯಲ್ಲಿ ಕಾಲುಭಾಗದ ಆಯುಷ್ಯವನ್ನು ಕಳೆದ ಬಳಿಕ ಶಿಷ್ಯನು ಮುಂದಿನ ಸಮಾವರ್ತನ ಸಂಸ್ಕಾರವನ್ನು ವಿಧಿಬದ್ಧವಾಗಿ ಮಾಡಿಸಿಕೊಳ್ಳಬೇಕು.

ಧರ್ಮಲಬ್ಧ್ಯೈರ್ಯುತೋ ದಾರೈರಗ್ನೀನುತ್ಪಾದ್ಯ ಧರ್ಮತಃ ।
ದ್ವಿತೀಯಮಾಯುಷೋ ಭಾಗಂ ಗೃಹಮೇಧಿವ್ರತೀ ಭವೇತ್ ॥೨೯॥

ಧರ್ಮದಿಂದ ಲಭಿಸಿದ ಕನ್ಯೆಯನ್ನು ಸ್ವೀಕರಿಸಿ, ಧರ್ಮಪತ್ನಿಯೊಡನೆ ಧಾರ್ಮಿಕವಾಗಿ ಅಗ್ನಿಪ್ರತಿಷ್ಠಾಪನೆ ಮಾಡಿ ಔಪಾಸನ, ವೈಶ್ವದೇವಾಗ್ನಿ ಹೋತ್ರಗಳನ್ನು ಆಚರಿಸಬೇಕು. ಹೀಗೆ ಬ್ರಾಹ್ಮಣನು ತನ್ನ ಆಯುಷ್ಯದ ಎರಡನೆಯ ಭಾಗವನ್ನು ಉತ್ತಮ ವ್ರತಶೀಲನಾಗಿ ಕಳೆಯಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆಂಟನೆಯ ಅಧ್ಯಾಯ

ವ್ಯಾಸರು ಶುಕಮುನಿಯನ್ನು ಕುರಿತು ಗಾರ್ಹಸ್ಥ್ಯಧರ್ಮವನ್ನು ವರ್ಣಿಸಿದುದು.

ವ್ಯಾಸಃ

ದ್ವಿತೀಯಮಾಯುಷೋ ಭಾಗಂ ಗೃಹಮೇಧೀ ಗೃಹೇ ವಸೇತ್ ।
ಧರ್ಮಲಬ್ಧ್ಯೈರ್ಯುತೋ ದಾರೈರಗ್ನೀನುತ್ಪಾದ್ಯ ಸುವ್ರತಃ ॥೧॥

ಮಗುವೇ, ಗೃಹಸ್ಥನು ತನ್ನ ಎರಡನೆಯ ಭಾಗದ ಆಯುಷ್ಯವನ್ನು ಮನೆಯಲ್ಲಿಯೇ ವಾಸ ಮಾಡುತ್ತಾ ಕಳೆಯಬೇಕು. ಧರ್ಮಾನುಸಾರವಾಗಿ ದೊರೆತ ಕನ್ಯೆಯನ್ನು ಸ್ವೀಕರಿಸಿ, ಆಹಿತಾಗ್ನಿಯಾಗಿ ಅದಕ್ಕೆ ಸಂಬಂಧಿಸಿದಂತೆ ವ್ರತಾನುಷ್ಠಾನವನ್ನು ಮಾಡಬೇಕು.

ಗೃಹಸ್ಥವೃತ್ತಯಶ್ಚೈವ ಚತಸ್ರಃ ಕವಿಭಿಃ ಸ್ಮೃತಾಃ ।
ಕುಸೂಲಧಾನ್ಯಃ ಪ್ರಥಮಃ ಕುಂಭಧಾನ್ಯಸ್ತ್ವನಂತರಮ್ ॥೨॥

ವಿದ್ವಾಂಸರು ಬ್ರಾಹ್ಮಣಗೃಹಸ್ಥನಿಗೆ ನಾಲ್ಕು ವಿಧವಾದ ಜೀವನದ ವೃತ್ತಿಯನ್ನು ಹೇಳಿದ್ದಾರೆ. ಮೊದಲನೆಯದ್ದು ಕುಸೂಲಧಾನ್ಯ ವೃತ್ತಿಯು. ಎರಡನೆಯದ್ದು ಕುಂಭಧಾನ್ಯ ವೃತ್ತಿಯು.

ವ್ಯಾಖ್ಯಾನ ವಿಶೇಷ– ತೃಣಗಳಿಂದ ಹೆಣೆದ ಚೀಲದಲ್ಲಿ ಬಂಧಿಸಿಟ್ಟ ಧಾನ್ಯವು ಕುಸೂಲ ಧಾನ್ಯ ಎನಿಸಿದೆ. ಇಪ್ಪತ್ನಾಲ್ಕು ಸೇರುಗಳ ಅಕ್ಕಿಯನ್ನು ಹುಲ್ಲಿನಲ್ಲಿ ಹೆಣೆದ ಚೀಲದಲ್ಲಿ ಬಂಧಿಸಿಟ್ಟರೆ ಅದು ಕುಸೂಲಧಾನ್ಯ ಎಂದು ಕರೆಸಿಕೊಳ್ಳುತ್ತದೆ. ಒಂದು ತಿಂಗಳು ಕಾಲ ತನಗೂ, ತನ್ನ ಹೆಂಡತಿಗೂ ಜೀವನೋಪಾಯಕ್ಕೆ ಬೇಕಾದ ಧಾನ್ಯಸಂಗ್ರಹವನ್ನು ಹೊಂದಿದವನು ಕುಸೂಲಧಾನ್ಯ ಗೃಹಸ್ಥನೆನಿಸುತ್ತಾನೆ. ಕುಂಭಧಾನ್ಯ ಎಂದರೆ ದೊಡ್ಡ ಮಡಿಕೆಯಲ್ಲಿ ಅಡಿಕೆಯನ್ನು ತುಂಬಿಟ್ಟು ಜೀವನ ಮಾಡುವ ಗೃಹಸ್ಥನು ಕುಂಭಧಾನ್ಯವುಳ್ಳವನು ಎಂದು ಅರ್ಥ.

ಅಶಸ್ತನೋऽಥ ಕಾಪೋತೀಮಾಶ್ರಿತೋ ವೃತ್ತಿಮಾಹರೇತ್ ।
ತೇಷಾಂ ಪರಃ ಪರೋ ಜ್ಯಾಯಾನ್ ಧರ್ಮತೋ ಲೋಕಜಿತ್ತಮಃ ॥೩॥

ಯಾರು ಬಿಂದಿಗೆ ಮಾತ್ರ ಧಾನ್ಯವನ್ನು ಸಂಗ್ರಹಿಸಿಡುತ್ತಾನೋ ಅವನು ಅಶಸ್ತನ ಎಂದು ಕರೆಸಿಕೊಳ್ಳುತ್ತಾನೆ. ಅರ್ಥಾತ್ ಒಂದು ದಿನಕ್ಕೆ ಮಾತ್ರ ಯೋಗ್ಯಧಾನ್ಯ ಸಂಗ್ರಹವುಳ್ಳವನು ಎಂದರ್ಥ. ಆ ಕಾಲಕ್ಕೆ ಸಂಬಂಧಿಸಿದ ಆಹಾರವನ್ನು ಮಾತ್ರ ಸ್ವೀಕರಿಸುವವನು ಕಪೋತವೃತ್ತಿ ಬ್ರಾಹ್ಮಣ ಎಂದು ಕರೆಸಿಕೊಳ್ಳುತ್ತಾನೆ. ಈ ನಾಲ್ಕು ವಿಧ ಗೃಹಸ್ಥರಲ್ಲಿ ಮುಂದಿನ ಮುಂದಿನ ಗೃಹಸ್ಥರು ಉತ್ತಮ ಧರ್ಮನಿರತರು ಎಂದು ಕರೆಸಿಕೊಳ್ಳುತ್ತಾರೆ. ಮುಂದಿನ ಮುಂದಿನ ಧರ್ಮಗಳು ಶ್ರೇಷ್ಠವಾದವುಗಳು.

ಷಟ್‌ಕರ್ಮಾ ವರ್ತಯತ್ಯೇಕಸ್ತ್ರಿಭಿರನ್ಯಃ ಪ್ರವರ್ತತೇ ।
ದ್ವಾಭ್ಯಾಮೇಕಶ್ಚತುರ್ಥಸ್ತು ಬ್ರಹ್ಮಸತ್ರೇ ವ್ಯವಸ್ಥಿತಃ ॥
ಗೃಹಮೇಧಿವ್ರತಾನ್ಯತ್ರ ಮಹಾಂತೀಹ ಪ್ರಚಕ್ಷತೇ ॥೪॥

ಕುಸೂಲಧಾನ್ಯವೃತ್ತಿಯುಳ್ಳ ಬ್ರಾಹ್ಮಣನು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪರಿಗ್ರಹ ಎಂಬ ಷಟ್ಕರ್ಮದಲ್ಲಿ ನಿರತನಾಗಿರುತ್ತಾನೆ. ಕುಂಭಧಾನ್ಯದ ವೃತ್ತಿಯ ಬ್ರಾಹ್ಮಣನು ಯಜನ, ಯಾಜನ, ದಾನ ಈ ಮೂರು ಕರ್ಮಗಳಲ್ಲಿ ನಿರತನಾಗಿರುತ್ತಾನೆ. ಅಶಸ್ತನ ವೃತ್ತಿಯಲ್ಲಿರುವ ಬ್ರಾಹ್ಮಣನು ಯಜನ, ಅಧ್ಯಯನಗಳಲ್ಲಿ ನಿರತನಾಗಿರುತ್ತಾನೆ. ನಾಲ್ಕನೆಯ ಕಾಪೋತ ವೃತ್ತಿಯಲ್ಲಿರುವ ಬ್ರಾಹ್ಮಣನು, ಬ್ರಾಹ್ಮಣರು ಮಾಡುವ ಸತ್ರಯಾಗದಲ್ಲಿ ಸೇವಕನಾಗಿ ಅದನ್ನು ತೆಗೆದುಕೊಂಡು ಬಾ, ಇದನ್ನು ತೆಗೆದುಕೊಂಡು ಬಾ ಎಂದು ಯಾಜ್ಞಿಕರು ಹೇಳುವ ಆಜ್ಞೆಯನ್ನು ಧರಿಸಿದವನಾಗಿರುತ್ತಾನೆ. ಗೃಹಸ್ಥನಾದವನಿಗೆ ಶಾಸ್ತ್ರದಲ್ಲಿ ಅನೇಕ ವಿಧವಾದ ಶ್ರೇಷ್ಠ ವ್ರತಗಳು ಹೇಳಲ್ಪಟ್ಟಿವೆ.

ನಾತ್ಮಾರ್ಥಂ ಪಾಚಯೇದನ್ನಂ ನ ವೃಥಾ ಘಾತಯೇತ್ ಪಶೂನ್ ।
ಪ್ರಾಣೇ ವಾ ಯದಿ ವಾಪ್ರಾಣೇ ಸಂಸ್ಕಾರಂ ಯಜುಷಾರ್ಹತಿ ॥೫॥

ಗೃಹಸ್ಥನಾದವನು ಕೇವಲ ತನಗಾಗಿ ಎಂದೂ ಅಡಿಗೆ ಮಾಡಿಸಬಾರದು. ಯಜ್ಞ ಸಮಯದ ಹೊರತಾಗಿ ಬೇರೆ ಕಾಲದಲ್ಲಿ ವ್ಯರ್ಥವಾಗಿ ಪಶುಗಳನ್ನು ಹಿಂಸಿಸಬಾರದು. ಪಿತೃಶ್ರಾದ್ಧಕ್ಕೋಸ್ಕರ ತಂದಿರುವ ವಸ್ತುವು ಪ್ರಾಣಿಯಾಗಲಿ, ಧಾನ್ಯವಾಗಲಿ, ನಿತ್ಯ ಭೋಜನಕ್ಕೋಸ್ಕರ ತಂದಿರುವ ವ್ರೀಹ್ಯಾದಿಗಳನ್ನು ಭೂರ್ಭುವಃಸ್ವಃ ಎಂಬ ಯಜುರ್ಮಂತ್ರದಿಂದ ಪ್ರೋಕ್ಷಿಸದೆ ಮನೆಯೊಳಗೆ ತರಬಾರದು. ಭುಂಜಿಸುವ ಪದಾರ್ಥಗಳನ್ನು ಗೃಹಸ್ಥನು ಮನೆಯೊಳಗೆ ತರಬೇಕಾದರೆ ತೊಳೆದೇ ತರಬೇಕು ಎಂದು ಅಭಿಪ್ರಾಯ.

ನ ದಿವಾ ಪ್ರಸ್ವಪೇಜ್ಜಾತು ನ ಪೂರ್ವಾಪರರಾತ್ರಯೋಃ ।
ನ ಭುಂಜೀತಾಂತರಾಕಾಲೇ ನಾನೃತಾವಾಹ್ವಯೇತ್ ಸ್ತ್ರಿಯಮ್ ॥೬॥

ಗೃಹಸ್ಥನಾದವನು ಹಗಲಿನಲ್ಲಿ ಮಲಗಬಾರದು. ರಾತ್ರಿಯಲ್ಲಿ ಮೊದಲನೆಯ ಮತ್ತು ಕೊನೆಯ ಯಾಮಗಳಲ್ಲಿ ಮಲಗಬಾರದು. ಮಧ್ಯಾಹ್ನ ವೇಳೆಯಲ್ಲಿ ಮತ್ತು ರಾತ್ರಿಯ ವೇಳೆಯಲ್ಲಿ ಮಾತ್ರ ಭೋಜನ ಮಾಡಬೇಕು. ಮಧ್ಯಕಾಲದಲ್ಲಿ ಏನನ್ನೂ ತಿನ್ನಬಾರದು. ಋತುಸಮಯದ ಹೊರತಾಗಿ ಬೇರೆ ದಿವಸಗಳಲ್ಲಿ ಪತ್ನಿಯನ್ನು ಸಮಾಗಮಕ್ಕೆ ಆಹ್ವಾನಿಸಬಾರದು.

ನಾಸ್ಯಾನಶ್ನನ್ ವಸೇದ್ ವಿಪ್ರೋ ಗೃಹೇ ಕಶ್ಚಿದಪೂಜಿತಃ ।
ತಥಾಸ್ಯಾತಿಥಯಃ ಪೂಜ್ಯಾ ಹವ್ಯಕವ್ಯವಹಾಃ ಸದಾ ॥೭॥

ವೇದವಿದ್ಯಾವ್ರತಸ್ನಾತಾಃ ಶ್ರೋತ್ರಿಯಾ ವೇದಪಾರಗಾಃ ।
ಸ್ವಧರ್ಮಜೀವಿನೋ ದಾಂತಾಃ ಕ್ರಿಯಾವಂತಸ್ತಪಸ್ವಿನಃ ।
ತೇಷಾಂ ಹವ್ಯಂ ಚ ಕವ್ಯಂ ಚಾಪ್ಯರ್ಹಣಾರ್ಥಂ ವಿಧೀಯತೇ ॥೮॥

ಮನೆಗೆ ಬಂದ ಯಾವ ಬ್ರಾಹ್ಮಣಅತಿಥಿಯೂ ಭೋಜನ ಸತ್ಕಾರವಿಲ್ಲದೆ ಮನೆಯಲ್ಲಿ ವಾಸ ಮಾಡಬಾರದು. ಅತಿಥಿಗಳಿಗೆ ಭೋಜನ ನೀಡಬೇಕು. ಗೃಹಸ್ಥನ ಮನೆಯ ಬಾಗಿಲಿಗೆ ಅತಿಥಿಗಳ ರೂಪದಲ್ಲಿ ವೇದ-ವೇದಾಂತ ಪಾರಂಗತರಾದ ವಿದ್ವಾಂಸರು, ಸ್ನಾತಕರು, ಶ್ರೋತ್ರಿಯರು, ಯಜ್ಞಾನ್ನ, ಶ್ರಾದ್ಧಾನ್ನಗಳನ್ನು ಭೋಜನ ಮಾಡುವವರು,

ವ್ಯಾಖ್ಯಾನ ವಿಶೇಷ– ತೃಣಗಳಿಂದ ಹೆಣೆದ ಚೀಲದಲ್ಲಿ ಬಂಧಿಸಿಟ್ಟ ಧಾನ್ಯವು ಕುಸೂಲ ಧಾನ್ಯ ಎನಿಸಿದೆ. ಇಪ್ಪತ್ನಾಲ್ಕು ಸೇರುಗಳ ಅಕ್ಕಿಯನ್ನು ಹುಲ್ಲಿನಲ್ಲಿ ಹೆಣೆದ ಚೀಲದಲ್ಲಿ ಬಂಧಿಸಿಟ್ಟರೆ ಅದು ಕುಸೂಲಧಾನ್ಯ ಎಂದು ಕರೆಸಿಕೊಳ್ಳುತ್ತದೆ. ಒಂದು ತಿಂಗಳು ಕಾಲ ತನಗೂ, ತನ್ನ ಹೆಂಡತಿಗೂ ಜೀವನೋಪಾಯಕ್ಕೆ ಬೇಕಾದ ಧಾನ್ಯಸಂಗ್ರಹವನ್ನು ಹೊಂದಿದವನು ಕುಸೂಲಧಾನ್ಯ ಗೃಹಸ್ಥನೆನಿಸುತ್ತಾನೆ. ಕುಂಭಧಾನ್ಯ ಎಂದರೆ ದೊಡ್ಡ ಮಡಿಕೆಯಲ್ಲಿ ಅಡಿಕೆಯನ್ನು ತುಂಬಿಟ್ಟು ಜೀವನ ಮಾಡುವ ಗೃಹಸ್ಥನು ಕುಂಭಧಾನ್ಯವುಳ್ಳವನು ಎಂದು ಅರ್ಥ.

ಅಶಸ್ತನೋऽಥ ಕಾಪೋತೀಮಾಶ್ರಿತೋ ವೃತ್ತಿಮಾಹರೇತ್ ।
ತೇಷಾಂ ಪರಃ ಪರೋ ಜ್ಯಾಯಾನ್ ಧರ್ಮತೋ ಲೋಕಜಿತ್ತಮಃ ॥೩॥

ಯಾರು ಬಿಂದಿಗೆ ಮಾತ್ರ ಧಾನ್ಯವನ್ನು ಸಂಗ್ರಹಿಸಿಡುತ್ತಾನೋ ಅವನು ಅಶಸ್ತನ ಎಂದು ಕರೆಸಿಕೊಳ್ಳುತ್ತಾನೆ. ಅರ್ಥಾತ್ ಒಂದು ದಿನಕ್ಕೆ ಮಾತ್ರ ಯೋಗ್ಯಧಾನ್ಯ ಸಂಗ್ರಹವುಳ್ಳವನು ಎಂದರ್ಥ. ಆ ಕಾಲಕ್ಕೆ ಸಂಬಂಧಿಸಿದ ಆಹಾರವನ್ನು ಮಾತ್ರ ಸ್ವೀಕರಿಸುವವನು ಕಪೋತವೃತ್ತಿ ಬ್ರಾಹ್ಮಣ ಎಂದು ಕರೆಸಿಕೊಳ್ಳುತ್ತಾನೆ. ಈ ನಾಲ್ಕು ವಿಧ ಗೃಹಸ್ಥರಲ್ಲಿ ಮುಂದಿನ ಮುಂದಿನ ಗೃಹಸ್ಥರು ಉತ್ತಮ ಧರ್ಮನಿರತರು ಎಂದು ಕರೆಸಿಕೊಳ್ಳುತ್ತಾರೆ. ಮುಂದಿನ ಮುಂದಿನ ಧರ್ಮಗಳು ಶ್ರೇಷ್ಠವಾದವುಗಳು.

ಷಟ್‌ಕರ್ಮಾ ವರ್ತಯತ್ಯೇಕಸ್ತ್ರಿಭಿರನ್ಯಃ ಪ್ರವರ್ತತೇ ।
ದ್ವಾಭ್ಯಾಮೇಕಶ್ಚತುರ್ಥಸ್ತು ಬ್ರಹ್ಮಸತ್ರೇ ವ್ಯವಸ್ಥಿತಃ ॥
ಗೃಹಮೇಧಿವ್ರತಾನ್ಯತ್ರ ಮಹಾಂತೀಹ ಪ್ರಚಕ್ಷತೇ ॥೪॥

ಕುಸೂಲಧಾನ್ಯವೃತ್ತಿಯುಳ್ಳ ಬ್ರಾಹ್ಮಣನು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪರಿಗ್ರಹ ಎಂಬ ಷಟ್ಕರ್ಮದಲ್ಲಿ ನಿರತನಾಗಿರುತ್ತಾನೆ. ಕುಂಭಧಾನ್ಯದ ವೃತ್ತಿಯ ಬ್ರಾಹ್ಮಣನು ಯಜನ, ಯಾಜನ, ದಾನ ಈ ಮೂರು ಕರ್ಮಗಳಲ್ಲಿ ನಿರತನಾಗಿರುತ್ತಾನೆ. ಅಶಸ್ತನ ವೃತ್ತಿಯಲ್ಲಿರುವ ಬ್ರಾಹ್ಮಣನು ಯಜನ, ಅಧ್ಯಯನಗಳಲ್ಲಿ ನಿರತನಾಗಿರುತ್ತಾನೆ. ನಾಲ್ಕನೆಯ ಕಾಪೋತ ವೃತ್ತಿಯಲ್ಲಿರುವ ಬ್ರಾಹ್ಮಣನು, ಬ್ರಾಹ್ಮಣರು ಮಾಡುವ ಸತ್ರಯಾಗದಲ್ಲಿ ಸೇವಕನಾಗಿ ಅದನ್ನು ತೆಗೆದುಕೊಂಡು ಬಾ, ಇದನ್ನು ತೆಗೆದುಕೊಂಡು ಬಾ ಎಂದು ಯಾಜ್ಞಿಕರು ಹೇಳುವ ಆಜ್ಞೆಯನ್ನು ಧರಿಸಿದವನಾಗಿರುತ್ತಾನೆ. ಗೃಹಸ್ಥನಾದವನಿಗೆ ಶಾಸ್ತ್ರದಲ್ಲಿ ಅನೇಕ ವಿಧವಾದ ಶ್ರೇಷ್ಠ ವ್ರತಗಳು ಹೇಳಲ್ಪಟ್ಟಿವೆ.

ನಾತ್ಮಾರ್ಥಂ ಪಾಚಯೇದನ್ನಂ ನ ವೃಥಾ ಘಾತಯೇತ್ ಪಶೂನ್ ।
ಪ್ರಾಣೇ ವಾ ಯದಿ ವಾಪ್ರಾಣೇ ಸಂಸ್ಕಾರಂ ಯಜುಷಾರ್ಹತಿ ॥೫॥

ಗೃಹಸ್ಥನಾದವನು ಕೇವಲ ತನಗಾಗಿ ಎಂದೂ ಅಡಿಗೆ ಮಾಡಿಸಬಾರದು. ಯಜ್ಞ ಸಮಯದ ಹೊರತಾಗಿ ಬೇರೆ ಕಾಲದಲ್ಲಿ ವ್ಯರ್ಥವಾಗಿ ಪಶುಗಳನ್ನು ಹಿಂಸಿಸಬಾರದು. ಪಿತೃಶ್ರಾದ್ಧಕ್ಕೋಸ್ಕರ ತಂದಿರುವ ವಸ್ತುವು ಪ್ರಾಣಿಯಾಗಲಿ, ಧಾನ್ಯವಾಗಲಿ, ನಿತ್ಯ ಭೋಜನಕ್ಕೋಸ್ಕರ ತಂದಿರುವ ವ್ರೀಹ್ಯಾದಿಗಳನ್ನು ಭೂರ್ಭುವಃಸ್ವಃ ಎಂಬ ಯಜುರ್ಮಂತ್ರದಿಂದ ಪ್ರೋಕ್ಷಿಸದೆ ಮನೆಯೊಳಗೆ ತರಬಾರದು. ಭುಂಜಿಸುವ ಪದಾರ್ಥಗಳನ್ನು ಗೃಹಸ್ಥನು ಮನೆಯೊಳಗೆ ತರಬೇಕಾದರೆ ತೊಳೆದೇ ತರಬೇಕು ಎಂದು ಅಭಿಪ್ರಾಯ.

ನ ದಿವಾ ಪ್ರಸ್ವಪೇಜ್ಜಾತು ನ ಪೂರ್ವಾಪರರಾತ್ರಯೋಃ ।
ನ ಭುಂಜೀತಾಂತರಾಕಾಲೇ ನಾನೃತಾವಾಹ್ವಯೇತ್ ಸ್ತ್ರಿಯಮ್ ॥೬॥

ಗೃಹಸ್ಥನಾದವನು ಹಗಲಿನಲ್ಲಿ ಮಲಗಬಾರದು. ರಾತ್ರಿಯಲ್ಲಿ ಮೊದಲನೆಯ ಮತ್ತು ಕೊನೆಯ ಯಾಮಗಳಲ್ಲಿ ಮಲಗಬಾರದು. ಮಧ್ಯಾಹ್ನ ವೇಳೆಯಲ್ಲಿ ಮತ್ತು ರಾತ್ರಿಯ ವೇಳೆಯಲ್ಲಿ ಮಾತ್ರ ಭೋಜನ ಮಾಡಬೇಕು. ಮಧ್ಯಕಾಲದಲ್ಲಿ ಏನನ್ನೂ ತಿನ್ನಬಾರದು. ಋತುಸಮಯದ ಹೊರತಾಗಿ ಬೇರೆ ದಿವಸಗಳಲ್ಲಿ ಪತ್ನಿಯನ್ನು ಸಮಾಗಮಕ್ಕೆ ಆಹ್ವಾನಿಸಬಾರದು.

ನಾಸ್ಯಾನಶ್ನನ್ ವಸೇದ್ ವಿಪ್ರೋ ಗೃಹೇ ಕಶ್ಚಿದಪೂಜಿತಃ ।
ತಥಾಸ್ಯಾತಿಥಯಃ ಪೂಜ್ಯಾ ಹವ್ಯಕವ್ಯವಹಾಃ ಸದಾ ॥೭॥

ವೇದವಿದ್ಯಾವ್ರತಸ್ನಾತಾಃ ಶ್ರೋತ್ರಿಯಾ ವೇದಪಾರಗಾಃ ।
ಸ್ವಧರ್ಮಜೀವಿನೋ ದಾಂತಾಃ ಕ್ರಿಯಾವಂತಸ್ತಪಸ್ವಿನಃ ।
ತೇಷಾಂ ಹವ್ಯಂ ಚ ಕವ್ಯಂ ಚಾಪ್ಯರ್ಹಣಾರ್ಥಂ ವಿಧೀಯತೇ ॥೮॥

ಮನೆಗೆ ಬಂದ ಯಾವ ಬ್ರಾಹ್ಮಣಅತಿಥಿಯೂ ಭೋಜನ ಸತ್ಕಾರವಿಲ್ಲದೆ ಮನೆಯಲ್ಲಿ ವಾಸ ಮಾಡಬಾರದು. ಅತಿಥಿಗಳಿಗೆ ಭೋಜನ ನೀಡಬೇಕು. ಗೃಹಸ್ಥನ ಮನೆಯ ಬಾಗಿಲಿಗೆ ಅತಿಥಿಗಳ ರೂಪದಲ್ಲಿ ವೇದ-ವೇದಾಂತ ಪಾರಂಗತರಾದ ವಿದ್ವಾಂಸರು, ಸ್ನಾತಕರು, ಶ್ರೋತ್ರಿಯರು, ಯಜ್ಞಾನ್ನ, ಶ್ರಾದ್ಧಾನ್ನಗಳನ್ನು ಭೋಜನ ಮಾಡುವವರು,

ಜಿತೇಂದ್ರಿಯರು, ಸ್ವಧರ್ಮನಿಷ್ಠರು, ಕ್ರಿಯಾನಿಷ್ಠರು, ತಪಸ್ವಿಗಳು, ಇವರು ಆಗಮಿಸಿದಾಗ ಅವರಿಗೆ ವಿಧಿವತ್ತಾಗಿ ಹವ್ಯ-ಕವ್ಯಾದಿಗಳನ್ನು ಅರ್ಪಿಸಬೇಕೆಂದು ಶಾಸ್ತ್ರವು ಹೇಳುತ್ತಿದೆ. ಹವ್ಯ-ಕವ್ಯವನ್ನು ಸ್ವೀಕರಿಸುವ ಪೂಜ್ಯರನ್ನು ಗೃಹಸ್ಥನು ನಿತ್ಯವೂ ಸತ್ಕರಿಸುತ್ತಿರಬೇಕು.

ನಖಿರೈಃ ಸಂಪ್ರಯಾತಸ್ಯ ಸ್ವಧರ್ಮಾಜ್ಞಾನಕಸ್ಯ ಚ ।
ಅಪವಿದ್ಧಾಗ್ನಿಹೋತ್ರಸ್ಯ ಗುರೋರ್ವಾಲೀಕಕಾರಿಣಃ ॥೯॥

ಸಂವಿಭಾಗೋಽತ್ರ ಭೂತಾನಾಂ ಸರ್ವೇಷಾಮೇವ ಶಿಷ್ಯತೇ ।
ತಥೈವಾಪಚಮಾನೇಭ್ಯಃ ಪ್ರದೇಯಂ ಗೃಹಮೇಧಿನಾ ॥೧೦॥

ಶ್ರೋತ್ರಿಯನಾದ ಗೃಹಸ್ಥನು ಕೇವಲ ವೇಷಕ್ಕಾಗಿ ನಖ-ಕೇಶಗಳನ್ನು ಧರಿಸಿಕೊಂಡು ಬರುವವರಿಗೆ, ಡಂಭಕ್ಕಾಗಿ ಯಾಗಾದಿ ಕರ್ಮಗಳನ್ನು ನಡೆಸುವವರಿಗೆ, ಶಾಸ್ತ್ರವಿಧಿಗೆ ಬದ್ಧರಾಗದೆ ಅಗ್ನಿಹೋತ್ರಾದಿ ಕರ್ಮಗಳನ್ನು ಬಿಟ್ಟು ಭ್ರಷ್ಟರಾದವರಿಗೆ, ಗುರುವನ್ನು ಮೋಸ ಮಾಡಿದ ವಂಚಕರಿಗೆ, ಮನೆಯಲ್ಲಿ ಎಂದಿಗೂ ಪಾಕಯಜ್ಞ ಕರ್ಮವನ್ನು ಮಾಡದೆ ಇದ್ದವರಿಗೆ, ಮಾಡಿದ ಪಾಕದಲ್ಲಿ ವಿಭಾಗವನ್ನು ಮಾಡಿ ಅನ್ನವನ್ನು ನೀಡಬಾರದು.

ವ್ಯಾಖ್ಯಾನ ವಿಶೇಷ– ಇಂತಹವರಿಗೂ ಅನ್ನವನ್ನು ನೀಡಬೇಕು ಎಂದು ಕೆಲವು ವ್ಯಾಖ್ಯಾನಕಾರರು ಹೇಳಿರುತ್ತಾರೆ. ಆದರೆ 'ಸಂವಿಭಾಗೋ ನ' ಎಂದು ಲಕ್ಷಾಲಂಕಾರದಲ್ಲಿ ವಾದಿರಾಜರು ನೀಡಬಾರದು ಎಂದು ಅನ್ವಯ ಮಾಡಿ ಹೇಳಿದ್ದಾರೆ.

ವಿಘಸಾಶೀ ಭವೇನ್ನಿತ್ಯಂ ನಿತ್ಯಂ ಚಾಮೃತಭೋಜನಃ ।
ಅಮೃತಂ ಯಜ್ಞಶೇಷಂ ಸ್ಯಾದ್ಭೋಜನಂ ಹವಿಷಾ ಸಮಮ್ ।
ಭೃತ್ಯಶೇಷಂ ತು ಯೋಶ್ನಾತಿ ತಮಾಹುರ್ವಿಘಸಾಶಿನಮ್ ॥೧೧॥

ಗೃಹಸ್ಥನಾದವನು ಪ್ರತಿನಿತ್ಯವೂ ಭೋಜನಶೇಷವನ್ನೂ, ಯಜ್ಞಶೇಷವನ್ನೂ ಭುಂಜಿಸಬೇಕು. ಇದರಿಂದ ಅವನು ಅಮೃತಾಶಿಯು ಆಗುತ್ತಾನೆ. ಯಜ್ಞಶೇಷವು ಅಮೃತವಾಗಿದ್ದು ಆ ಭೋಜನವು ಹವಿರ್ಭೋಜನಕ್ಕೆ ಸಮಾನವಾಗಿರುತ್ತದೆ. ಭೃತ್ಯ ವರ್ಗದವರೆಲ್ಲರಿಗೂ ಊಟ ಬಡಿಸಿದ ಬಳಿಕ ಯಾವ ಗೃಹಸ್ಥನು ಊಟ ಮಾಡುತ್ತಾನೋ ಅವನು ವಿಘಸಾಶಿ ಎಂದು ಕರೆಸಿಕೊಳ್ಳುತ್ತಾನೆ.

ಸ್ವದಾರನಿರತೋ ದಾಂತೋ ಹ್ಯನಸೂಯುರ್ಜಿತೇಂದ್ರಿಯಃ ।
ಋತ್ವಿಕ್ಪುರೋಹಿತಾಚಾರ್ಯೈರ್ಮಾತುಲಾತಿಥಿಸಂಶ್ರಿತೈಃ ॥೧೨॥

ವೃದ್ಧಬಾಲಾತುರೈರ್ವೈದ್ಯೈರ್ಜ್ಞಾತಿಸಂಬಂಧಿಬಾಂಧವೈಃ ।
ಮಾತಾಪಿತೃಭ್ಯಾಂ ಜಾಮೀಭಿರ್ಭ್ರಾತ್ರಾ ಪುತ್ರೇಣ ಭಾರ್ಯಯಾ ॥೧೩॥

ದುಹಿತ್ರಾ ದಾಸವರ್ಗೇಣ ವಿವಾದಂ ನ ಸಮಾಚರೇತ್ ।
ಏತಾನ್ ವಿಮುಚ್ಯ ಸಂವಾದಾನ್ ಸರ್ವಪಾಪೈಃ ಪ್ರಮುಚ್ಯತೇ ॥೧೪॥

ಗೃಹಸ್ಥನಾದವನು ತನ್ನ ಪತ್ನಿಯಲ್ಲಿ ಅನುರಾಗವುಳ್ಳವನಾಗಿರಬೇಕು. ಜಿತೇಂದ್ರಿಯನಾಗಿರಬೇಕು. ಅಸೂಯಾರಹಿತನಾಗಿರಬೇಕು. ಜಿತೇಂದ್ರಿಯ-ನಾಗಿರಬೇಕು. ಋತ್ವಿಜರು, ಪುರೋಹಿತರು, ಆಚಾರ್ಯರು, ಸೋದರಮಾವಂದಿರು, ಅತಿಥಿಗಳು, ಆಶ್ರಿತರು, ವೃದ್ಧರು, ಬಾಲಕರು, ರೋಗಿಗಳು, ವೈದ್ಯರು, ಜ್ಞಾತಿ-ಬಾಂಧವರು, ಸಂಬಂಧಿಗಳು, ಬಂಧುಗಳು, ತಂದೆ-ತಾಯಿಯರು, ಗಂಡುಮಕ್ಕಳು, ಹೆಣ್ಣುಮಕ್ಕಳು, ಹೆಂಡತಿ ಮತ್ತು ಸೇವಕವರ್ಗದವರು ಇವರೊಡನೆ ಯಾವಾಗಲೂ ವಿವಾದ ಮಾಡಬಾರದು. ಅವರಿಗೆ ಸೇರಬೇಕಾದ ಅಂಶವನ್ನು ಕೊಡಬೇಕು. ಇವರಲ್ಲಿ ಯಾರೊಡನೆಯೂ ವಿವಾದ ಮಾಡದಿರುವ ಗೃಹಸ್ಥನು ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ.

ಏತೈರ್ಜಿತೈಸ್ತು ಜಯತಿ ಸರ್ವಾಲ್ಲೋಕಾನ್ನ ಸಂಶಯಃ ।
ಆಚಾರ್ಯೋ ಬ್ರಹ್ಮಲೋಕೇಶಃ ಪ್ರಾಜಾಪತ್ಯೇ ಪಿತಾ ಪ್ರಭುಃ ॥೧೫॥

ಅತಿಥಿಸ್ತ್ವಿಂದ್ರಲೋಕೇಶೋ ದೇವಲೋಕಸ್ಯ ಚರ್ತ್ವಿಜಃ ।
ಜಾಮಯೋಽಪ್ಸರಸಾಂ ಲೋಕೇ ವೈಶ್ವದೇವೇ ತು ಜ್ಞಾತಯಃ ॥೧೬॥

ಋತ್ವಿಜರು, ಪುರೋಹಿತರು ಮೊದಲಾದವರನ್ನು ಯಾವ ಗೃಹಸ್ಥನು ತನ್ನಲ್ಲಿರುವ ವಿನಯ, ಸೌಶೀಲ್ಯಾದಿ ಗುಣಗಳಿಂದ ಜಯಿಸುತ್ತಾನೋ ಅವನು ಸಮಸ್ತ ಲೋಕಗಳನ್ನು ಜಯಿಸುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಆಚಾರ್ಯನು ಬ್ರಹ್ಮಲೋಕದ ಸ್ವಾಮಿ ಎನಿಸಿದ್ದಾನೆ. ಬ್ರಹ್ಮನು ಪ್ರಜಾಪತಿ ಲೋಕಕ್ಕೆ ಒಡೆಯ ಎನಿಸಿದ್ದಾನೆ. ಅತಿಥಿಯು ಇಂದ್ರಲೋಕಕ್ಕೆ ಸ್ವಾಮಿ ಎನಿಸಿದರೆ, ಋತ್ವಿಜರು ದೇವಲೋಕಕ್ಕೆ ಅಧಿಪತಿ ಎನಿಸುತ್ತಾರೆ. ಕುಟುಂಬದ ಸ್ತ್ರೀಯರು ಅಪ್ಸರೆಯರ ಲೋಕಕ್ಕೆ ಸ್ವಾಮಿ ಎನಿಸಿರುತ್ತಾರೆ. ಜ್ಞಾತಿಗಳು ವಿಶ್ವೇದೇವತೆಗಳ ಲೋಕಕ್ಕೆ ಅಧಿಕಾರಿಗಳಾಗಿರುತ್ತಾರೆ.

ಸಂಬಂಧಿಬಾಂಧವಾ ದಿಕ್ಷು ಪೃಥಿವ್ಯಾಂ ಮಾತೃಮಾತುಲೌ ।
ವೃದ್ಧಬಾಲಾತುರಕೃಶಾಸ್ತಾ ಕಾಶೇ ಪ್ರಭವಿಷ್ಣವಃ ॥೧೭॥

ಸಂಬಂಧಿಗಳು ಮತ್ತು ಬಂಧುಗಳು ದಿಕ್ಪಾಲಕರ ಸ್ಥಾನವುಳ್ಳವರಾಗಿರುತ್ತಾರೆ. ತಾಯಿ ಮತ್ತು ಸೋದರ ಮಾವಂದಿರು ಭೂಮಿಯ ಆಧಿಪತ್ಯವುಳ್ಳವರಾಗಿರುತ್ತಾರೆ. ವೃದ್ಧರು, ಬಾಲಕರು, ರೋಗಿಗಳು, ದುರ್ಬಲರು ಆಕಾಶದಲ್ಲಿ ಪ್ರಭುತ್ವವುಳ್ಳವರಾಗಿರುತ್ತಾರೆ. ಇವರೆಲ್ಲರೂ ಸಂತುಷ್ಟರಾದರೆ ಅವರ ಅಧಿಕಾರದಲ್ಲಿರುವ ಲೋಕಗಳನ್ನು ಆ ಗೃಹಸ್ಥನು ಪಡೆದುಕೊಳ್ಳುತ್ತಾನೆ.

ಭ್ರಾತಾ ಜ್ಯೇಷ್ಠಃ ಸಮಃ ಪಿತ್ರಾ ಭಾರ್ಯಾ ಪುತ್ರಃ ಸ್ವಕಾ ತನುಃ ।
ಛಾಯಾ ಸ್ವಾ ದಾಶವರ್ಗಸ್ತು ದುಹಿತಾ ಕೃಪಣಂ ಪರಮ್ ॥೧೮॥

ಹಿರಿಯಣ್ಣನು ತಂದೆಗೆ ಸಮಾನನು, ಪತ್ನಿ-ಪುತ್ರರು ತನ್ನ ಶರೀರ ರೂಪರೇ ಆಗಿದ್ದಾರೆ. ಸೇವಕರು ಗೃಹಸ್ಥನ ನೆರಳಿನಂತಿದ್ದಾರೆ. ಮಗಳು ಎಲ್ಲರಿಗಿಂತ ಹೆಚ್ಚು ದಯಾ ಪಾತ್ರಳಾಗಿರುತ್ತಾಳೆ.

ತಸ್ಮಾದೇತೈರಧಿಕ್ಷಿಪ್ತಃ ಸಹೇನ್ನಿತ್ಯಮಸಂಜ್ವರಃ ।
ಗೃಹಧರ್ಮರತೋ ವಿದ್ವಾಂಧರ್ಮನಿತ್ಯೋ ಜಿತಕ್ಲಮಃ ॥೧೯॥

ಆದ್ದರಿಂದ ಗೃಹಸ್ಥನು ಇವರಿಂದ ಆಕ್ಷೇಪಿಸಲ್ಪಟ್ಟರೂ ಕ್ರೋಧರಹಿತನಾಗಿ ಅವರ ತಿರಸ್ಕಾರವನ್ನು ಸಹಿಸಿಕೊಳ್ಳಬೇಕು. ಗೃಹಸ್ಥಧರ್ಮವನ್ನು ಪಾಲಿಸುವ ವಿದ್ವಾಂಸನು ನಿಶ್ಚಿಂತನಾಗಿದ್ದು, ಶ್ರಮವನ್ನು ಜಯಿಸಿ ಧರ್ಮಶೀಲನಾಗಿರಬೇಕು.

ನ ಚಾರ್ಥಬದ್ಧಃ ಕರ್ಮಾಣಿ ಧರ್ಮಂ ವಾ ಕಂಚಿದಾಚರೇತ್ ।
ಗೃಹಸ್ಥವೃತ್ತಯಸ್ತಿಸ್ರಸ್ತಾಸಾಂ ನಿಃಶ್ರೇಯಸಂ ಪರಮ್ ॥೨೦॥

ಧರ್ಮಾತ್ಮನಾದ ಗೃಹಸ್ಥನು ಹಣದ ಆಸೆಗೆ ಕಟ್ಟುಬಿದ್ದು ಧರ್ಮಕಾರ್ಯಗಳನ್ನು ಮಾಡಬಾರದು. ಗೃಹಸ್ಥನ ಜೀವಿಕೆಗೆ ಯಾವ ಮೂರು ವೃತ್ತಿಗಳನ್ನು ಹೇಳಿದ್ದಾರೋ ಅವುಗಳಲ್ಲಿ ಮುಂದಿನ ಮುಂದಿನ ವೃತ್ತಿಗಳನ್ನು ಶ್ರೇಷ್ಠವೆಂದು ತಿಳಿದು ಅದನ್ನು ಆಚರಿಸಬೇಕು. ಕುಂಭಧಾನ್ಯ, ಉಂಛಶಿಲ, ಕಾಪೋತ ವೃತ್ತಿಗಳನ್ನು ಶ್ರೇಷ್ಠವೆಂದು ತಿಳಿದು ಆಚರಿಸಬೇಕು.

ಪರಸ್ಪರಂ ತಥೈವಾಹುಶ್ಚಾತುರಾಶ್ರಮ್ಯಮೇವ ತತ್ ।
ಯೇ ಚೋಕ್ತಾ ನಿಯಮಾಸ್ತೇಷಾಂ ಸರ್ವಂ ಕಾರ್ಯಂ ಬುಭೂಷತಾ ॥

ನಾಲ್ಕು ಆಶ್ರಮಗಳನ್ನು ಪರಸ್ಪರ ಒಂದಕ್ಕೊಂದು ಪೂರಕವೆಂದು ಹೇಳುತ್ತಾರೆ. ಆಯಾ ಆಶ್ರಮಗಳ ನಿಯಮಗಳನ್ನು ಶಾಸ್ತ್ರೋಕ್ತ ವಿಧಿಯಿಂದ ಶ್ರೇಯಾಕಾಂಕ್ಷಿಯಾದ ಪುರುಷನು ಪರಿಪಾಲಿಸಬೇಕು.

ಕುಂಭೀಧಾನ್ಯೈ ರುಂಛಶಿಲೈಃ ಕಾಪೋತೀಂ ಚಾಸ್ಥಿತೈಸ್ತಥಾ ।
ಯಸ್ಮಿಂಶ್ಚೈತೇ ವಸಂತ್ಯರ್ಹಾಸ್ತದ್ರಾಷ್ಟ್ರಮಭಿವರ್ಧತೇ ॥೨೨॥

ಕುಂಭೀಧಾನ್ಯ ಗಳಿಂದ ಶಿಲವೃತ್ತಿ, ಉಂಛವೃತ್ತಿ (ಒಂದು ಬಾರಿ ಅಂಕಲನ್ನು ಎತ್ತಿದ ಬಳಿಕ ಸ್ವೀಕರಿಸುವುದು ಶಿಲವೃತ್ತಿ ಎನಿಸಿದೆ. ಎರಡು ಬಾರಿ ಅಂಕಲು ಎತ್ತಿದ ಬಳಿಕ ಧಾನ್ಯವನ್ನು ಸ್ವೀಕರಿಸುವುದು ಉಂಛವೃತ್ತಿ ಎನಿಸಿದೆ). ಪಕ್ಷಿಗಳು ತಿಂದು ಉಳಿದ್ದದ್ದನ್ನು ತಿನ್ನುವ ವೃತ್ತಿಗೆ ಕಾಪೋತ ವೃತ್ತಿ ಎನ್ನುತ್ತಾರೆ. ಬ್ರಾಹ್ಮಣರಾದವರು ಇಂತಹ ವೃತ್ತಿಗಳನ್ನು ಆಶ್ರಯಿಸಿ, ಯಾವ ಸ್ಥಳದಲ್ಲಿ ವಾಸ ಮಾಡುತ್ತಾರೋ ಆ ರಾಷ್ಟ್ರವು ಬಹಳ ಅಭಿವೃದ್ಧಿಯನ್ನು ಹೊಂದುತ್ತದೆ.

ದಶ ಪೂರ್ವಾನ್ ದಶ ಪರಾನ್ ಪುನಾತಿ ಚ ಪಿತಾಮಹಾನ್ ।
ಗೃಹಸ್ಥವೃತ್ತಯಸ್ತ್ವೇತಾ ವರ್ತಯೇದ್ಯೋ ಗತವ್ಯಥಃ ॥೨೩॥

ಯಾವ ಗೃಹಸ್ಥನು ಮನಸ್ಸಿನಲ್ಲಿ ಸ್ವಲ್ಪವೂ ಕ್ಲೇಶ ಹೊಂದದೆ, ಮೂರು ವೃತ್ತಿಯಲ್ಲಿ ಯಾವುದಾದರೂ ಒಂದು ವೃತ್ತಿಯನ್ನು ಆಶ್ರಯಿಸಿ ಜೀವನ ನಡೆಸುತ್ತಾನೋ ಅಂತಹ ಗೃಹಸ್ಥನು ತನ್ನ ಹಿಂದಿನ ಪಿತೃ-ಪಿತಾಮಹರೇ ಮೊದಲಾದ ಹತ್ತು ತಲೆಮಾರಿನ ವ್ಯಕ್ತಿಗಳನ್ನು ಮುಂದಿನ ಹತ್ತು ತಲೆಮಾರಿನವರನ್ನು ಪಾವನಗೊಳಿಸುತ್ತಾನೆ.

ಸ ಚಕ್ರಚರಲೋಕಾನಾಂ ಸದೃಶೀಂ ಪ್ರಾಪ್ನುಯಾದ್ ಗತಿಮ್ ।
ಯತೇಂದ್ರಿಯಾಣಾಮಥ ವಾ ಗತಿರೇಷಾ ವಿಧೀಯತೇ ॥೨೪॥

ಇಂತಹ ಗೃಹಸ್ಥನು ಚಕ್ರವರ್ತಿಗಳು ಹೊಂದುವ ಲೋಕಗಳಿಗೆ ಸದೃಶವಾದ ಉತ್ತಮ ಲೋಕಗಳನ್ನು ಹೊಂದುತ್ತಾನೆ. ಜಿತೇಂದ್ರಿಯರಿಗೆ ಲಭಿಸುವ ಸದ್ಗತಿಯು ಇವನಿಗೆ ಲಭಿಸುತ್ತದೆ.

ಸಂಬಂಧಿಬಾಂಧವಾ ದಿಕ್ಷು ಪೃಥಿವ್ಯಾಂ ಮಾತೃಮಾತುಲೌ ।
ವೃದ್ಧಬಾಲಾತುರಕೃಶಾಸ್ತಾ ಕಾಶೇ ಪ್ರಭವಿಷ್ಣವಃ ॥೧೭॥

ಸಂಬಂಧಿಗಳು ಮತ್ತು ಬಂಧುಗಳು ದಿಕ್ಪಾಲಕರ ಸ್ಥಾನವುಳ್ಳವರಾಗಿರುತ್ತಾರೆ. ತಾಯಿ ಮತ್ತು ಸೋದರ ಮಾವಂದಿರು ಭೂಮಿಯ ಆಧಿಪತ್ಯವುಳ್ಳವರಾಗಿರುತ್ತಾರೆ. ವೃದ್ಧರು, ಬಾಲಕರು, ರೋಗಿಗಳು, ದುರ್ಬಲರು ಆಕಾಶದಲ್ಲಿ ಪ್ರಭುತ್ವವುಳ್ಳವರಾಗಿರುತ್ತಾರೆ. ಇವರೆಲ್ಲರೂ ಸಂತುಷ್ಟರಾದರೆ ಅವರ ಅಧಿಕಾರದಲ್ಲಿರುವ ಲೋಕಗಳನ್ನು ಆ ಗೃಹಸ್ಥನು ಪಡೆದುಕೊಳ್ಳುತ್ತಾನೆ.

ಭ್ರಾತಾ ಜ್ಯೇಷ್ಠಃ ಸಮಃ ಪಿತ್ರಾ ಭಾರ್ಯಾ ಪುತ್ರಃ ಸ್ವಕಾ ತನುಃ ।
ಛಾಯಾ ಸ್ವಾ ದಾಶವರ್ಗಸ್ತು ದುಹಿತಾ ಕೃಪಣಂ ಪರಮ್ ॥೧೮॥

ಹಿರಿಯಣ್ಣನು ತಂದೆಗೆ ಸಮಾನನು, ಪತ್ನಿ-ಪುತ್ರರು ತನ್ನ ಶರೀರ ರೂಪರೇ ಆಗಿದ್ದಾರೆ. ಸೇವಕರು ಗೃಹಸ್ಥನ ನೆರಳಿನಂತಿದ್ದಾರೆ. ಮಗಳು ಎಲ್ಲರಿಗಿಂತ ಹೆಚ್ಚು ದಯಾ ಪಾತ್ರಳಾಗಿರುತ್ತಾಳೆ.

ತಸ್ಮಾದೇತೈರಧಿಕ್ಷಿಪ್ತಃ ಸಹೇನ್ನಿತ್ಯಮಸಂಜ್ವರಃ ।
ಗೃಹಧರ್ಮರತೋ ವಿದ್ವಾಂಧರ್ಮನಿತ್ಯೋ ಜಿತಕ್ಲಮಃ ॥೧೯॥

ಆದ್ದರಿಂದ ಗೃಹಸ್ಥನು ಇವರಿಂದ ಆಕ್ಷೇಪಿಸಲ್ಪಟ್ಟರೂ ಕ್ರೋಧರಹಿತನಾಗಿ ಅವರ ತಿರಸ್ಕಾರವನ್ನು ಸಹಿಸಿಕೊಳ್ಳಬೇಕು. ಗೃಹಸ್ಥಧರ್ಮವನ್ನು ಪಾಲಿಸುವ ವಿದ್ವಾಂಸನು ನಿಶ್ಚಿಂತನಾಗಿದ್ದು, ಶ್ರಮವನ್ನು ಜಯಿಸಿ ಧರ್ಮಶೀಲನಾಗಿರಬೇಕು.

ನ ಚಾರ್ಥಬದ್ಧಃ ಕರ್ಮಾಣಿ ಧರ್ಮಂ ವಾ ಕಂಚಿದಾಚರೇತ್ ।
ಗೃಹಸ್ಥವೃತ್ತಯಸ್ತಿಸ್ರಸ್ತಾಸಾಂ ನಿಃಶ್ರೇಯಸಂ ಪರಮ್ ॥೨೦॥

ಧರ್ಮಾತ್ಮನಾದ ಗೃಹಸ್ಥನು ಹಣದ ಆಸೆಗೆ ಕಟ್ಟುಬಿದ್ದು ಧರ್ಮಕಾರ್ಯಗಳನ್ನು ಮಾಡಬಾರದು. ಗೃಹಸ್ಥನ ಜೀವಿಕೆಗೆ ಯಾವ ಮೂರು ವೃತ್ತಿಗಳನ್ನು ಹೇಳಿದ್ದಾರೋ ಅವುಗಳಲ್ಲಿ ಮುಂದಿನ ಮುಂದಿನ ವೃತ್ತಿಗಳನ್ನು ಶ್ರೇಷ್ಠವೆಂದು ತಿಳಿದು ಅದನ್ನು ಆಚರಿಸಬೇಕು. ಕುಂಭಧಾನ್ಯ, ಉಂಛಶಿಲ, ಕಾಪೋತ ವೃತ್ತಿಗಳನ್ನು ಶ್ರೇಷ್ಠವೆಂದು ತಿಳಿದು ಆಚರಿಸಬೇಕು.

ಪರಸ್ಪರಂ ತಥೈವಾಹುಶ್ಚಾತುರಾಶ್ರಮ್ಯಮೇವ ತತ್ ।
ಯೇ ಚೋಕ್ತಾ ನಿಯಮಾಸ್ತೇಷಾಂ ಸರ್ವಂ ಕಾರ್ಯಂ ಬುಭೂಷತಾ ॥

ನಾಲ್ಕು ಆಶ್ರಮಗಳನ್ನು ಪರಸ್ಪರ ಒಂದಕ್ಕೊಂದು ಪೂರಕವೆಂದು ಹೇಳುತ್ತಾರೆ. ಆಯಾ ಆಶ್ರಮಗಳ ನಿಯಮಗಳನ್ನು ಶಾಸ್ತ್ರೋಕ್ತ ವಿಧಿಯಿಂದ ಶ್ರೇಯಾಕಾಂಕ್ಷಿಯಾದ ಪುರುಷನು ಪರಿಪಾಲಿಸಬೇಕು.

ಕುಂಭೀಧಾನ್ಯೈ ರುಂಛಶಿಲೈಃ ಕಾಪೋತೀಂ ಚಾಸ್ಥಿತೈಸ್ತಥಾ ।
ಯಸ್ಮಿಂಶ್ಚೈತೇ ವಸಂತ್ಯರ್ಹಾಸ್ತದ್ರಾಷ್ಟ್ರಮಭಿವರ್ಧತೇ ॥೨೨॥

ಕುಂಭೀಧಾನ್ಯ ಗಳಿಂದ ಶಿಲವೃತ್ತಿ, ಉಂಛವೃತ್ತಿ (ಒಂದು ಬಾರಿ ಅಂಕಲನ್ನು ಎತ್ತಿದ ಬಳಿಕ ಸ್ವೀಕರಿಸುವುದು ಶಿಲವೃತ್ತಿ ಎನಿಸಿದೆ. ಎರಡು ಬಾರಿ ಅಂಕಲು ಎತ್ತಿದ ಬಳಿಕ ಧಾನ್ಯವನ್ನು ಸ್ವೀಕರಿಸುವುದು ಉಂಛವೃತ್ತಿ ಎನಿಸಿದೆ). ಪಕ್ಷಿಗಳು ತಿಂದು ಉಳಿದ್ದದ್ದನ್ನು ತಿನ್ನುವ ವೃತ್ತಿಗೆ ಕಾಪೋತ ವೃತ್ತಿ ಎನ್ನುತ್ತಾರೆ. ಬ್ರಾಹ್ಮಣರಾದವರು ಇಂತಹ ವೃತ್ತಿಗಳನ್ನು ಆಶ್ರಯಿಸಿ, ಯಾವ ಸ್ಥಳದಲ್ಲಿ ವಾಸ ಮಾಡುತ್ತಾರೋ ಆ ರಾಷ್ಟ್ರವು ಬಹಳ ಅಭಿವೃದ್ಧಿಯನ್ನು ಹೊಂದುತ್ತದೆ.

ದಶ ಪೂರ್ವಾನ್ ದಶ ಪರಾನ್ ಪುನಾತಿ ಚ ಪಿತಾಮಹಾನ್ ।
ಗೃಹಸ್ಥವೃತ್ತಯಸ್ತ್ವೇತಾ ವರ್ತಯೇದ್ಯೋ ಗತವ್ಯಥಃ ॥೨೩॥

ಯಾವ ಗೃಹಸ್ಥನು ಮನಸ್ಸಿನಲ್ಲಿ ಸ್ವಲ್ಪವೂ ಕ್ಲೇಶ ಹೊಂದದೆ, ಮೂರು ವೃತ್ತಿಯಲ್ಲಿ ಯಾವುದಾದರೂ ಒಂದು ವೃತ್ತಿಯನ್ನು ಆಶ್ರಯಿಸಿ ಜೀವನ ನಡೆಸುತ್ತಾನೋ ಅಂತಹ ಗೃಹಸ್ಥನು ತನ್ನ ಹಿಂದಿನ ಪಿತೃ-ಪಿತಾಮಹರೇ ಮೊದಲಾದ ಹತ್ತು ತಲೆಮಾರಿನ ವ್ಯಕ್ತಿಗಳನ್ನು ಮುಂದಿನ ಹತ್ತು ತಲೆಮಾರಿನವರನ್ನು ಪಾವನಗೊಳಿಸುತ್ತಾನೆ.

ಸ ಚಕ್ರಚರಲೋಕಾನಾಂ ಸದೃಶೀಂ ಪ್ರಾಪ್ನುಯಾದ್ ಗತಿಮ್ ।
ಯತೇಂದ್ರಿಯಾಣಾಮಥ ವಾ ಗತಿರೇಷಾ ವಿಧೀಯತೇ ॥೨೪॥

ಇಂತಹ ಗೃಹಸ್ಥನು ಚಕ್ರವರ್ತಿಗಳು ಹೊಂದುವ ಲೋಕಗಳಿಗೆ ಸದೃಶವಾದ ಉತ್ತಮ ಲೋಕಗಳನ್ನು ಹೊಂದುತ್ತಾನೆ. ಜಿತೇಂದ್ರಿಯರಿಗೆ ಲಭಿಸುವ ಸದ್ಗತಿಯು ಇವನಿಗೆ ಲಭಿಸುತ್ತದೆ.

ಸ್ವರ್ಗಲೋಕೋ ಗೃಹಸ್ಥಾನಾಮುದಾರಮನಸಾಂ ಹಿತಃ ।
ಸ್ವರ್ಗೋ ವಿಮಾನಸಂಯುಕ್ತೋ ವೇದದೃಷ್ಟಃ ಸುಪುಷ್ಪಿತಃ ॥೨೫॥

ಶ್ರೇಷ್ಠರಾದ ಗೃಹಸ್ಥರಿಗೆ ಹಿತಕರವಾದ, ವಿಮಾನದಿಂದ ಕೂಡಿದ, ಪುಷ್ಪಗಳಿಂದ ಶೋಭಾಯಮಾನವಾಗಿರುವ, ವೇದಗಳಲ್ಲಿ ವರ್ಣಿತವಾಗಿರುವ ಸ್ವರ್ಗಲೋಕಗಳು ದೊರೆಯುತ್ತವೆ.

ಸ್ವರ್ಗಲೋಕೇ ಗೃಹಸ್ಥಾನಾಂ ಪ್ರತಿಷ್ಠಾ ನಿಯತಾತ್ಮನಾಮ್ ।
ಬ್ರಹ್ಮಣಾ ವಿಹಿತಾ ಶ್ರೇಣಿರೇಷಾ ಯಸ್ಮಾತ್ ಪ್ರಮುಚ್ಯತೇ ।
ದ್ವಿತೀಯಂ ಕ್ರಮಶಃ ಪ್ರಾಪ್ಯ ಸ್ವರ್ಗಲೋಕೇ ಮಹೀಯತೇ ॥೨೬॥

ಜಿತೇಂದ್ರಿಯರಾದ ಗೃಹಸ್ಥರಿಗೆ ಸ್ವರ್ಗಲೋಕವೇ ನಿತ್ಯ ನೆಲೆಯಾಗಿರುತ್ತದೆ. ಬ್ರಹ್ಮನು ಗೃಹಸ್ಥಾಶ್ರಮವನ್ನು ಸ್ವರ್ಗಪ್ರಾಪ್ತಿಗೆ ಕಾರಣ ಎಂದಿದ್ದಾನೆ. ಅದನ್ನು ಪರಿಪಾಲಿಸುವ ವಿಧಾನವನ್ನು ಶಾಸ್ತ್ರಗಳ ಮೂಲಕ ತಿಳಿಸಿದ್ದಾನೆ. ಆದ್ದರಿಂದ ಎರಡನೆಯ ಆಶ್ರಮವೆನಿಸಿದ ಗೃಹಸ್ಥಾಶ್ರಮವನ್ನು ಪಡೆದ ಸಾಧಕನು ಅದನ್ನು ಚೆನ್ನಾಗಿ ಅನುಷ್ಠಾನ ಮಾಡಿ, ಬಳಿಕ ಸ್ವರ್ಗಲೋಕದಲ್ಲಿ ವಿರಾಜಮಾನನಾಗುತ್ತಾನೆ.

ಅತಃ ಪರಂ ಪರಮಮುದಾರಮಾಶ್ರಮಂ
ತೃತೀಯಮಾಹುಸ್ತ್ಯಜತಾಂ ಕಲೇವರಮ್ ।
ವನೌಕಸಾಂ ಗೃಹಪತೀನಾಮನುತ್ತಮಂ
ಶೃಣುಷ್ವೈತತ್ಕ್ಲಿಷ್ಟಶರೀರಕಾರಿಣಾಮ್ ॥೨೭॥

ಗೃಹಸ್ಥಾಶ್ರಮವಾದ ಬಳಿಕ ಶರೀರವನ್ನು ತ್ಯಾಗ ಮಾಡುವವರಿಗೆ ವಾನಪ್ರಸ್ಥಾಶ್ರಮ ಇದೆ. ಅದನ್ನು ಮೂರನೆಯ ಆಶ್ರಮ ಎನ್ನುತ್ತಾರೆ. ತಪಸ್ಸಿನಿಂದ ಶರೀರವನ್ನು ಕೃಶವನ್ನಾಗಿ ಮಾಡುವ ವನವಾಸಿಗಳ ವಾನಪ್ರಸ್ಥಾಶ್ರಮ ಧರ್ಮವನ್ನು ಹೇಳುತ್ತೇನೆ, ಕೇಳು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂಬತ್ತನೆಯ ಅಧ್ಯಾಯ

ವಾನಪ್ರಸ್ಥ ಮತ್ತು ಸಂನ್ಯಾಸಧರ್ಮಗಳ ಮಹತ್ವವನ್ನು ವ್ಯಾಸರು ಶುಕಮುನಿಗೆ ನಿರೂಪಿಸಿದುದು.

ಭೀಷ್ಮಃ

ಪ್ರೋಕ್ತಾ ಗೃಹಸ್ಥವೃತ್ತಿಸ್ತೇ ವಿಹಿತಾ ಯಾ ಮನೀಷಿಣಾಮ್ ।
ತದನಂತರಮುಕ್ತಂ ಯತ್ತನ್ನಿಬೋಧ ಯುಧಿಷ್ಠಿರ ॥೧॥

ಯುಧಿಷ್ಠಿರನೇ, ಜ್ಞಾನಿಗಳಿಂದ ಹೇಳಲ್ಪಟ್ಟ ಗೃಹಸ್ಥಾಶ್ರಮದ ವೃತ್ತಿಯನ್ನು ವ್ಯಾಸರು ಶುಕಮುನಿಗೆ ಹೇಳಿದಂತೆ ನಿನಗೆ ತಿಳಿಸಿದ್ದೇನೆ. ಬಳಿಕ ವ್ಯಾಸರು ಹೇಳಿದ ವಿಚಾರ ಏನೆಂಬುದನ್ನು ಹೇಳುತ್ತೇನೆ, ಕೇಳು.

ಕ್ರಮಶಸ್ತ್ವವಧೂಯೈನಾಂ ತೃತೀಯಾಂ ವೃತ್ತಿಮುತ್ತಮಾಮ್ ।
ಸಂಯೋಗವ್ರತಖಿನ್ನಾನಾಂ ವಾನಪ್ರಸ್ಥಾಶ್ರಮೌಕಸಾಮ್ ॥೨॥

ಶ್ರೂಯತಾಂ ಪಾರ್ಥ ಭದ್ರಂ ತೇ ಸರ್ವಲೋಕಾಶ್ರಯಾತ್ಮನಾಮ್ ।
ಪ್ರೇಕ್ಷಾಪೂರ್ವಂ ಪ್ರವತ್ತಾನಾಂ ಪುಣ್ಯದೇಶನಿವಾಸಿನಾಮ್ ॥೩॥

ಪೃಥಾಸುತನೆ, ಕ್ರಮವಾಗಿ ಎರಡನೆಯ ಆಶ್ರಮವಾದ ಗಾರ್ಹಸ್ಥ್ಯವನ್ನು ತೊರೆದು, ಪತ್ನಿಯೊಡನೆ ವ್ರತಾನುಷ್ಠಾನದಲ್ಲಿ ಶ್ರಮವಹಿಸುತ್ತಾ, ವಾನಪ್ರಸ್ಥಾಶ್ರಮವನ್ನೇ ನೆಲೆಯನ್ನಾಗಿ ಮಾಡಿಕೊಂಡಿರುವ, ಸರ್ವಲೋಕಾಶ್ರಯವೆನಿಸಿದ ವಾನಪ್ರಸ್ಥಧರ್ಮಿಗಳ ವ್ರತ- ನಿಯಮಗಳಲ್ಲಿ ಆಸಕ್ತರಾದ, ಜ್ಞಾನಪೂರ್ವಕವಾಗಿ ಅನುಷ್ಠಾನಶೀಲರಾಗಿರುವ, ಪುಣ್ಯದೇಶ ನಿವಾಸಿಗಳಾಗಿರುವ ವಾನಪ್ರಸ್ಥಾಶ್ರಮಿಗಳ ಧರ್ಮವನ್ನು ಹೇಳುತ್ತೇನೆ, ಕೇಳು.

ವ್ಯಾಸಃ

ಗೃಹಸ್ಥಸ್ತು ಯದಾ ಪಶ್ಯೇದ್ವಲೀಪಲಿತಮಾತ್ಮನಃ ।
ಅಪತ್ಯಸ್ಯೈವ ಚಾಪತ್ಯಂ ವನಮೇವ ತದಾಶ್ರಯೇತ್ ॥೪॥

ತೃತೀಯಮಾಯುಷೋ ಭಾಗಂ ವಾನಪ್ರಸ್ಥಾಶ್ರಮೇ ವಸೇತ್ ।
ತಾನೇವಾಗ್ನೀನ್ ಪರಿಚರೇದ್ ಯಜಮಾನೋ ದಿವೌಕಸಃ ॥೫॥

ಗೃಹಸ್ಥನಾದವನು ತನ್ನ ತಲೆಯ ಕೂದಲುಗಳು ನರೆತಿರುವುದನ್ನು, ಚರ್ಮವು ಸುಕ್ಕುಗಟ್ಟಿರುವುದನ್ನು ಗಮನಿಸುತ್ತಾನೋ, ಮಕ್ಕಳಿಗೆ ಮಕ್ಕಳಾಗಿರುವುದನ್ನು ಕಾಣುತ್ತಾನೋ ಆಗ ಅವನು ತನ್ನ ಆಯುಷ್ಯದ ಮೂರನೆಯ ಭಾಗವನ್ನು ಕಳೆಯಲು ಅರಣ್ಯಕ್ಕೆ ಸಾಗಬೇಕು. ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು. ಗೃಹಸ್ಥಾಶ್ರಮದಲ್ಲಿರುವ ಅಗ್ನಿಗಳನ್ನು ವಾನಪ್ರಸ್ಥಾಶ್ರಮದಲ್ಲಿಯೂ ಉಪಾಸನೆ ಮಾಡಬೇಕು. ದೇವತಾರಾಧನೆಯನ್ನೂ ಮಾಡಬೇಕು.

ನಿಯತೋ ನಿಯತಾಹಾರಃ ಷಷ್ಠಭಕ್ತೋಪ್ರಮಾದವಾನ್ ।
ತದಗ್ನಿಹೋತ್ರಂ ತಾ ಗಾವೋ ಯಜ್ಞಾಂಗಾನಿ ಚ ಸರ್ವಶಃ ॥೬॥

ನಿಯಮಸ್ಥನಾದ ವಾನಪ್ರಸ್ಥಾಶ್ರಮಿಯು ನಿಯಮಾನುಸಾರ ಭೋಜನ ಮಾಡಬೇಕು. ದಿನದ ಆರನೆಯ ಭಾಗದಲ್ಲಿ ಒಂದು ಬಾರಿ ಊಟ ಮಾಡಬೇಕು. ಜಾಗರೂಕನಾಗಿರಬೇಕು. ಅಗ್ನಿಹೋತ್ರ, ಗೋಸೇವೆ, ಯಜ್ಞಗಳು- ಈ ಎಲ್ಲವನ್ನೂ ಗೃಹಸ್ಥಾಶ್ರಮಿಯಂತೆ ಆಚರಿಸಬೇಕು.

ಅಕೃಷ್ಟಂ ವೈ ವ್ರೀಹಿಯವಂ ನೀವಾರಂ ವಿಘಸಾನಿ ಚ ।
ಹವೀಂಷಿ ಸಂಪ್ರಯಚ್ಛೇತ ಮಖೇಷ್ವತ್ರಾಪಿ ಪಂಚಸು ॥೭॥

ಕೃಷಿ ಮಾಡದೆ ಭೂಮಿಯಲ್ಲಿ ಬೆಳೆಯುವ ಭತ್ತ, ಗೋಧಿ, ನವಣೆ, ಅತಿಥಿಗಳಿಗೆ ನೀಡಿ ಉಳಿದ ಅನ್ನ ಇವುಗಳಿಂದ ಜೀವನ ನಿರ್ವಹಣೆಯನ್ನು ಮಾಡಬೇಕು. ಪಂಚಮಹಾಯಜ್ಞಗಳನ್ನು ಮಾಡಿ ದೇವತೆಗಳಿಗೆ ಹವಿಸ್ಸನ್ನು ಸಮರ್ಪಿಸಬೇಕು.

ವಾನಪ್ರಸ್ಥಾಶ್ರಮೇಽಪ್ಯೇತಾಶ್ಚತಸ್ರೋ ವೃತ್ತಯಃ ಸ್ಮೃತಾಃ ।
ಸದ್ಯಃಪ್ರಕ್ಷಿಲಕಾಃ ಕೇಚಿತ್ಕೇಚಿನ್ಮಾಸಿಕಸಂಚಯಾಃ ॥೮॥

ವಾರ್ಷಿಕಂ ಸಂಚಯಂ ಕೇಚಿತ್ ಕೇಚಿದ್ ದ್ವಾದಶವಾರ್ಷಿಕಮ್ ।
ಕುರ್ವಂತ್ಯತಿಥಿಪೂಜಾರ್ಥಂ ಯಜ್ಞತಂತ್ರಾರ್ಥಸಿದ್ಧಯೇ ॥೯॥

ವಾನಪ್ರಸ್ಥಾಶ್ರಮದಲ್ಲಿಯೂ ನಾಲ್ಕು ವಿಧ ವೃತ್ತಿಗಳಿವೆ. ಅಂದು ಸಂಗ್ರಹವಾದ ಪದಾರ್ಥಗಳನ್ನು ಅಂದೇ ತಿಂದು ಮುಗಿಸುವುದು, ಒಂದು ತಿಂಗಳಿಗೆ ಸಾಕಾಗುವಷ್ಟು ಧಾನ್ಯವನ್ನು ಸಂಗ್ರಹಿಸುವುದು, ವರ್ಷಕ್ಕೆ ಪೂರ್ತಿಯಾಗುವಷ್ಟು ಧಾನ್ಯವನ್ನು

ಸಂಗ್ರಹಿಸುವುದು, ಹನ್ನೆರಡು ವರ್ಷಗಳಿಗೆ ಧಾನ್ಯವನ್ನು ಸಂಗ್ರಹಿಸಿಕೊಳ್ಳುವುದು. ಹೀಗೆ ಒಬ್ಬೊಬ್ಬರ ಆಚರಣೆಗಳು ಒಂದೊಂದು ವಿಧವಾಗಿವೆ. ಕೆಲವರು ಅತಿಥಿಗಳನ್ನು ಸತ್ಕರಿಸುವುದಕ್ಕೆ, ಯಜ್ಞಕರ್ಮಗಳಿಗಾಗಿ ಹನ್ನೆರಡು ವರ್ಷಗಳಿಗೆ ಬೇಕಾಗುವಷ್ಟು ಧಾನ್ಯವನ್ನು ಸಂಗ್ರಹಿಸಿರುತ್ತಾರೆ.

ಅಭ್ರಾವಕಾಶಾ ವರ್ಷಾಸು ಹೇಮಂತೇ ಜಲಸಂಶ್ರಯಾಃ ।
ಗ್ರೀಷ್ಮೇ ಚ ಪಂಚತಪಸಃ ಶಶ್ವಚ್ಚ ಮಿತಭೋಜನಾಃ ॥೧೦॥

ವಾನಪ್ರಸ್ಥಾಶ್ರಮಿಗಳು ಮಳೆಗಾಲದಲ್ಲಿ ಮೋಡದಿಂದ ಕೂಡಿದ ಆಕಾಶವನ್ನೇ ಹೊದ್ದಿಕೆ ಮಾಡಿಕೊಂಡಿರುತ್ತಾರೆ. ಹೇಮಂತ ಋತುವಿನಲ್ಲಿ ನೀರಿನ ಆಶ್ರಯ ಹೊಂದುತ್ತಾರೆ. ಗ್ರೀಷ್ಮ ಋತುವಿನಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ಕುಳಿತು ತಪಸ್ಸನ್ನು ಮಾಡುತ್ತಾರೆ. ಯಾವಾಗಲೂ ಮಿತಾಹಾರಿಗಳಾಗಿರುತ್ತಾರೆ.

ಭೂಮೌ ವಿಪರಿವರ್ತಂತೇ ತಿಷ್ಠೇದ್ವಾ ಪ್ರಪದೈರಪಿ ।
ಸ್ಥಾನಾಸನೈರ್ವರ್ತಯಂತಿ ಸವನೇಷ್ವಭಿಷಿಂಚತೇ ॥೧೧॥

ವಾನಪ್ರಸ್ಥಾಶ್ರಮಿಗಳು ಭೂಮಿಯಲ್ಲೇ ಮಲಗುತ್ತಾರೆ. ತುದಿಗಾಲಿನಲ್ಲಿ ನಿಂತು ತಪಸ್ಸನ್ನು ಮಾಡುತ್ತಾರೆ. ಒಂದೇ ಸ್ಥಳದಲ್ಲಿ, ಒಂದೇ ಆಸನದಲ್ಲಿ ಯಾವಾಗಲೂ ಧ್ಯಾನಾಸಕ್ತರಾಗಿರುತ್ತಾರೆ. ಮೂರುಕಾಲಗಳಲ್ಲಿಯೂ ಸ್ನಾನ ಮಾಡುತ್ತಾರೆ.

ದಂತೋಲೂಖಲಿನಃ ಕೇಚಿದಶ್ಮಕುಟ್ಟಾಸ್ತಥಾಪರೇ ।
ಶುಕ್ಲಪಕ್ಷೇ ಪಿಬಂತ್ಯೇಕೇ ಯವಾಗೂಂ ಕ್ವಥಿತಾಂ ಸಕೃತ್ ॥೧೨॥

ಕೃಷ್ಣಪಕ್ಷೇ ಪಿಬಂತ್ಯೇಕೇ ಭುಂಜತೇ ಚ ಯಥಾಕ್ರಮಮ್ ।
ಮೂಲೈರೇಕೇ ಫಲೈರೇಕೇ ಪುಷ್ಪೈರೇಕೇ ದೃಢವ್ರತಾಃ ॥೧೩॥

ವಾನಪ್ರಸ್ಥಾಶ್ರಮಿಗಳಲ್ಲಿ ಕೆಲವರು, ಧಾನ್ಯಗಳನ್ನು ಯಾವುದೇ ಯಂತ್ರೋಪಕರಣಗಳ ಸಹಾಯದಿಂದ ಕುಟ್ಟಿಪುಡಿಮಾಡದೆ ಹಲ್ಲುಗಳಿಂದಲೇ ಪುಡಿ ಮಾಡಿ ತಿನ್ನುತ್ತಾರೆ. ಇನ್ನು ಕೆಲವರು ಕಲ್ಲಿನಿಂದ ಕುಟ್ಟಿಪುಡಿಮಾಡಿ ತಿನ್ನುತ್ತಾರೆ. ಕೆಲವರು ಶುಕ್ಲಪಕ್ಷದಲ್ಲಿಮಾತ್ರ ಚೆನ್ನಾಗಿ ಬೇಯಿಸಿದ ಅನ್ನದ ಗಂಜಿಯನ್ನು ಕುಡಿಯುತ್ತಾರೆ. ಕೆಲವರು ಕೃಷ್ಣಪಕ್ಷದಲ್ಲಿ ಗಂಜಿಯನ್ನು ಪಾನ ಮಾಡುತ್ತಾರೆ. ಇನ್ನು ಕೆಲವರು ಸಿಕ್ಕಿದಾಗ ಭೋಜನ

ಮಾಡುತ್ತಾರೆ. ಕೆಲವರು ಕಂದ-ಮೂಲಗಳಿಂದಲೂ, ಇನ್ನು ಕೆಲವರು ಹಣ್ಣು ಸೇವನೆಯಿಂದಲೂ ಜೀವನ ಮಾಡುತ್ತಾರೆ. ಕೆಲವರು ಪುಷ್ಪಗಳಿಂದಲೂ ಜೀವನ ಮಾಡುತ್ತಾರೆ.

ವರ್ತಯಂತಿ ಯಥಾನ್ಯಾಯಂ ವೈಖಾನಸಮತಂ ಶ್ರಿತಾಃ ।
ಏತಾಶ್ಚಾನ್ಯಾಶ್ಚ ವಿವಿಧಾ ದೀಕ್ಷಾಸ್ತೇಷಾಂ ಮನೀಷಿಣಾಮ್ ॥೧೪॥

ವಾನಪ್ರಸ್ಥಾಶ್ರಮ ಹೊಂದಿದವರು ಹೀಗೆ ಯೋಗ್ಯವಾದ ಮಾರ್ಗಗಳನ್ನು ಅವಲಂಬಿಸಿ, ತಮ್ಮ ಧರ್ಮಗಳಲ್ಲಿ ನಡೆದುಕೊಳ್ಳುತ್ತಾರೆ. ವಿದ್ವಾಂಸರಾದ ವಾನಪ್ರಸ್ಥಾಶ್ರಮಿಗಳಿಗೆ ಇವುಗಳೇ ಅಲ್ಲದೆ ಇನ್ನೂ ಅನೇಕ ನಿಯಮಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ.

ಚತುರ್ಥಶ್ಚೌಪನಿಷದೋ ಧರ್ಮಃ ಸಾಧಾರಣಃ ಸ್ಮೃತಃ ।
ವಾನಪ್ರಸ್ಥೋ ಗೃಹಸ್ಥಶ್ಚ ತತೋಽನ್ಯಃ ಸಂಪ್ರವರ್ತತೇ ॥೧೫॥

ನಾಲ್ಕನೆಯ ಆಶ್ರಮವಾದ ಸಂನ್ಯಾಸಕ್ಕೆ ವಿಹಿತವಾಗಿರುವ ಉಪನಿಷತ್ತಿನಲ್ಲಿ ಹೇಳಿರುವ ಕ್ಷಮ, ದಮ, ಉಪರತಿ ಮೊದಲಾದ ಧರ್ಮಗಳು ಎಲ್ಲಾ ಆಶ್ರಮಗಳಿಗೂ ಸಮಾನವಾದ ಧರ್ಮಗಳು ಎಂದು ಹೇಳಲ್ಪಟ್ಟಿವೆ. ವಾನಪ್ರಸ್ಥ, ಗೃಹಸ್ಥಾಶ್ರಮ-ಗಳಿಗಿಂತಲೂ ಬೇರೆಯಾದ ಧರ್ಮವು ಸಂನ್ಯಾಸಿಗಳಿಗೆ ಹೇಳಲ್ಪಟ್ಟಿವೆ.

ಅಸ್ಮಿನ್ನೇವ ಯುಗೇ ತಾತ ವಿಪ್ರೈಃ ಸರ್ವಾರ್ಥದರ್ಶಿಭಿಃ ।
ಅಗಸ್ತ್ಯಃ ಸಪ್ತ ಋಷಯೋ ಮಧುಚ್ಛಂದೋಽಘಮರ್ಷಣಃ ॥೧೬॥

ಸಾಂಕೃತಿಃ ಸುದಿವಾ ತಂಡಿರ್ಯವಾನ್ನೋಽಥ ಕೃತಶ್ರಮಃ ।
ಅಹೋವೀರ್ಯಸ್ತಥಾ ಕಾವ್ಯಸ್ತಾಂಡ್ಯೋ ಮೇಧಾತಿಥಿರ್ಬುಧಃ ॥೧೭॥

ಶಲೋ ವಾಕಶ್ಚ ನಿರ್ವಾಕಃ ಶೂನ್ಯಪಾಲಃ ಕೃತಶ್ರಮಃ ।
ಏವಂ ಧರ್ಮಸು ವಿದ್ವಾಂಸಸ್ತತಃ ಸ್ವರ್ಗಮುಪಾಗಮನ್ ॥೧೮॥

ಮಗುವೇ, ಈ ಯುಗದಲ್ಲಿಯೂ ಸರ್ವಾರ್ಥದರ್ಶಿಗಳಾದ ಬ್ರಾಹ್ಮಣರು ವಾನಪ್ರಸ್ಥದ ಪಾಲನೆಯನ್ನು ಮಾಡಿರುತ್ತಾರೆ. ಹಾಗೆ ಮಾಡಿರುವ ವ್ಯಕ್ತಿಗಳಲ್ಲಿ ಪ್ರಮುಖರು ಯಾರೆಂದರೆ ಅಗಸ್ತ್ಯರು, ಸಪ್ತರ್ಷಿಗಳು, ಮಧುಚ್ಛಂದರು, ಅಘಮರ್ಷಣ,

ಸಾಂಕೃತಿ, ಸುದಿವ, ತಂಡಿ, ಯವಾನ್ನ, ಕೃತಶ್ರಮ, ಅಹೋವೀರ್ಯ, ಕಾವ್ಯ, ತಾಂಡ್ಯ, ಮೇಧಾತಿಥಿ, ಬುಧ, ಶಲ, ವಾಕ, ನಿರ್ವಾಕ, ಪರಿಶ್ರಮಿಯಾದ ಶೂನ್ಯಪಾಲ ಇವರೆಲ್ಲರೂ ಧರ್ಮವನ್ನಾಚರಿಸಿ ಈಗಾಗಲೇ ಸ್ವರ್ಗವನ್ನು ಸೇರಿರುತ್ತಾರೆ.

ತಾತ ಪ್ರತ್ಯಕ್ಷಧರ್ಮಾಣಸ್ತಥಾ ಯಾಯಾವರಾ ಗಣಾಃ ।
ಋಷೀಣಾಮುಗ್ರತಪಸಾಂ ಧರ್ಮನೈಪುಣದರ್ಶಿನಾಮ್ ॥೧೯॥

ಅವಾಚ್ಯಾಪರಿಮೇಯಾಶ್ಚ ಬ್ರಾಹ್ಮಣಾ ವನಮಾಶ್ರಿತಾಃ ।
ವೈಖಾನಸಾ ವಾಲಖಿಲ್ಯಾಃ ಸಿಕತಾಶ್ಚ ತಥಾಪರೇ ॥೨೦॥

ಮಗನೇ, ಇವರೆಲ್ಲರೂ ಧರ್ಮದ ವಿಷಯದಲ್ಲಿ ಪ್ರತ್ಯಕ್ಷ ದೀಕ್ಷೆ ಉಳ್ಳವರು. ಉಗ್ರತಪಸ್ವಿಗಳಾದ ಋಷಿಗಳಲ್ಲಿ ಧರ್ಮನೈಪುಣ್ಯದರ್ಶಿಗಳಲ್ಲಿ ಯಾಯಾವರಾ ಎಂಬ ದೊಡ್ಡ ಗುಂಪೇ ಇದೆ. ವಾನಪ್ರಸ್ಥಾಶ್ರಮಿಗಳಾದ ಬ್ರಾಹ್ಮಣರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ಲೆಕ್ಕ ಮಾಡಲೂ ಸಾಧ್ಯವಿಲ್ಲ, ಹೇಳಲೂ ಸಾಧ್ಯವಿಲ್ಲ. ವೈಖಾನಸರು, ವಾಲಖಿಲ್ಯರು, ಸಿಕತರು ಈ ಧರ್ಮವನ್ನು ಪರಿಪಾಲಿಸಿದ್ದಾರೆ.

ಕರ್ಮಭಿಸ್ತೇ ನಿರಾನಂದಾ ಧರ್ಮನಿತ್ಯಾ ಜಿತೇಂದ್ರಿಯಾಃ ।
ಗತಾಃ ಪ್ರತ್ಯಕ್ಷಧರ್ಮಾಣಸ್ತೇ ಸರ್ವೇ ವನಮಾಶ್ರಿತಾಃ ।
ಅನಕ್ಷತ್ರಾ ಅನಾಧೃಷ್ಯಾ ದೃಶ್ಯಂತೇ ಜ್ಯೋತಿಷಾಂ ಗಣಾಃ ॥೨೧॥

ಕಾಮ್ಯಕರ್ಮಗಳಿಂದ ಅವರೆಂದಿಗೂ ಆನಂದಪಟ್ಟಿಲ್ಲ. ಜಿತೇಂದ್ರಿಯರಾಗಿ ಧರ್ಮದಲ್ಲೇ ಆಸಕ್ತರಾದ ಇವರೆಲ್ಲರೂ ಸದಾ ಧರ್ಮತತ್ಪರರಾಗಿ ಇದ್ದು ವನವನ್ನು ಸೇರಿರುತ್ತಾರೆ. ಅವರು ನಕ್ಷತ್ರಗಳಿಗಿಂತ ಭಿನ್ನರಾಗಿ, ಯಾರಿಂದಲೂ ಎದುರಿಸಲಾಗದ, ಜ್ಯೋತಿರ್ಮಯವಾದ ಆಕಾರವನ್ನು ಹೊಂದಿ ಕಾಣಿಸಿಕೊಳ್ಳುತ್ತಿದ್ದಾರೆ.

ಜರಯಾ ಚ ಪರಿದ್ಯೂನೋ ವ್ಯಾಧಿನಾ ಚ ಪ್ರಪೀಡಿತಃ ।
ಚತುರ್ಥೇ ಚಾಯುಷಃ ಶೇಷೇ ವಾನಪ್ರಸ್ಥಾಶ್ರಮಂ ತ್ಯಜೇತ್ ।
ಸದ್ಯಸ್ಕಾರಾಂ ನಿರೂಪ್ಯೇಷ್ಟಿಂ ಸಾರ್ವವೇದಾಂ ಸದಕ್ಷಿಣಾಮ್ ॥೨೨॥

ಮುಪ್ಪಿನಿಂದ ದುರ್ಬಲನಾದ, ನಾನಾ ವ್ಯಾಧಿಗಳಿಂದ ಪೀಡಿತನಾದ ವಾನಪ್ರಸ್ಥಾಶ್ರಮಿಯು ಆಯುಸ್ಸಿನ ಮೂರನೆಯ ಭಾಗವು ಮುಕ್ತಾಯವಾಗಿ, ನಾಲ್ಕನೆಯ

ಭಾಗವು ಪ್ರಾರಂಭವಾದ ಬಳಿಕ ಆ ಆಶ್ರಮವನ್ನು ತೊರೆದು ಸಂನ್ಯಾಸಿಯಾಗಬೇಕು. ಹಾಗೆ ಸಂನ್ಯಾಸಿಯಾಗುವಾಗ ಸಮಸ್ತ ವೇದಗಳಿಗೆ ಸಂಬಂಧಿಸಿದ, ಎಲ್ಲಾ ವೇದಗಳಲ್ಲಿಯೂ ವಿಹಿತವಾದ, ದಕ್ಷಿಣಾಸಹಿತವಾದ, ಒಂದೇ ದಿನದಲ್ಲಿ ಮುಗಿಯುವ ಯಾಗವೊಂದನ್ನು ಮಾಡಿ ಸಂನ್ಯಾಸಿಯಾಗಬೇಕು.

ಆತ್ಮಯಾಜೀ ಸೋऽऽತ್ಮರತಿರಾತ್ಮಕ್ರೀಡಾತ್ಮಸಂಶ್ರಯಃ ।
ಆತ್ಮನ್ಯಗ್ನೀನ್ ಸಮಾರೋಪ್ಯ ತ್ಯಕ್ತ್ವಾ ಸರ್ವಪರಿಗ್ರಹಾನ್ ॥೨೩॥

ಸಾದ್ಯಸ್ಕಾಂಶ್ಚ ಯಜೇದ್ ಯಜ್ಞಾನಿಷ್ಟೀಶ್ಚೈವೇಹ ಸರ್ವದಾ ।
ಸದೈವ ಯಾಜಿನಾಂ ಯಜ್ಞಾದಾತ್ಮನೀಜ್ಯಾ ನಿವರ್ತತೇ ॥೨೪॥

ಪರಮಾತ್ಮನಲ್ಲೇ ಯಾಗವನ್ನು ಮಾಡುವವನಾಗಿ, ಪರಮಾತ್ಮನಲ್ಲಿ ರತಿ ಹೊಂದಿದವನಾಗಿ, ಪರಮಾತ್ಮನಲ್ಲೇ ಕ್ರೀಡೆ ಹೊಂದಿದವನಾಗಿ, ಪರಮಾತ್ಮನನ್ನೇ ಆಶ್ರಯಿಸಿದವನಾಗಿ, ಪರಮಾತ್ಮನನ್ನು ಚಿಂತಿಸುತ್ತಾ, ತನ್ನಲ್ಲೇ ಅಗ್ನಿಯನ್ನು ಆರೋಪಿಸಿಕೊಂಡು, ಸಮಸ್ತ ಸ್ವೀಕಾರಗಳನ್ನು ತ್ಯಜಿಸಿ, ಆಗಲೇ ಮಾಡಿ ಮುಗಿಸಬಹುದಾದ ಬ್ರಹ್ಮಯಜ್ಞಾದಿಗಳನ್ನು, ಇಷ್ಟಿಗಳನ್ನು ಮಾಡಬೇಕು. ಯಾಜ್ಞಿಕರು ಮಾಡುವ ಕರ್ಮಯಜ್ಞಗಳನ್ನು ಬಿಟ್ಟು ಪರಮಾತ್ಮನನ್ನೇ ಕುರಿತು ಮಾಡುವ ಯಜ್ಞಗಳಲ್ಲಿ ರತನಾಗಿರಬೇಕು.

ತ್ರೀಂಶ್ಚೈವಾಗ್ನೀನ್ಯಜೇತ್ ಸಮ್ಯಗಾತ್ಮನ್ಯೇವಾತ್ಮಮೋಕ್ಷಣಾತ್ ।
ಪ್ರಾಣೇಭ್ಯೋ ಯಜುಷಾ ಪಂಚ ಷ ಪ್ರಾಶ್ನೀಯಾದಕುತ್ಸಯನ್ ॥೨೫॥

ಆತ್ಮನಲ್ಲಿಯೇ ಮೂರು ಅಗ್ನಿಗಳನ್ನು ವಿಧಿಪೂರ್ವಕವಾಗಿ ಸಮಾರೋಪ ಮಾಡಿಕೊಂಡು, ದೇಹಪತನವಾಗುವ ತನಕ ಪ್ರಾಣಾಗ್ನಿಹೋತ್ರದ ವಿಧಿಯಿಂದ ಶ್ರದ್ಧೆಯಿಂದಲೇ ಯಜ್ಞವನ್ನು ಮಾಡುತ್ತಿರಬೇಕು. ಯಜುರ್ವೇದದ ಪ್ರಾಣಾಯಸ್ವಾಹಾ ಮುಂತಾದ ಮಂತ್ರಗಳನ್ನು ಉಪಯೋಗಿಸುತ್ತಾ, ಐದು ಅಥವಾ ಆರು ಬಾರಿ ತುತ್ತುಗಳನ್ನು ಸ್ವೀಕರಿಸಬೇಕು. ದೊರೆತ ಅನ್ನವು ರುಚಿಯಾಗಿರಲಿ, ಅರುಚಿಯಾಗಿರಲಿ ನಿಂದಿಸದೆ ಸ್ವೀಕರಿಸಬೇಕು.

ಕೇಶಲೋಮನಖಾನಾಪ್ಯ ವಾನಪ್ರಸ್ಥೋ ಮುನಿಸ್ತತಃ ।
ಆಶ್ರಮಾದಾಶ್ರಮಂ ಸದ್ಯಃ ಪೂತೋ ಗಚ್ಛತಿ ಕರ್ಮಭಿಃ ॥೨೬॥

ವಾನಪ್ರಸ್ಥಾಶ್ರಮಿಯಾದ ಮುನಿಯು ಕೇಶ, ಲೋಮ, ಉಗುರುಗಳನ್ನು ತೆಗೆಸಿ, ಸಂನ್ಯಾಸದೀಕ್ಷೆಗೆ ಸಂಬಂಧಿಸಿದ ಹೋಮಗಳನ್ನು ಮಾಡಿ, ಪವಿತ್ರನಾಗಿ ವಾನಪ್ರಸ್ಥಾಶ್ರಮದಿಂದ ಪುಣ್ಯಮಯವಾದ ಸಂನ್ಯಾಸಾಶ್ರಮಕ್ಕೆ ಸಾಗಬೇಕು. ಆಯಾ ಕರ್ಮಗಳಿಂದ ಪವಿತ್ರನಾಗಿ ಈ ಆಶ್ರಮಗಳಿಗೆ ಸಾಗಬೇಕು.

ಅಭಯಂ ಸರ್ವಭೂತೇಭ್ಯೋ ಯೋ ದತ್ತ್ವಾ ಪ್ರವ್ರಜೇದ್ದ್ವಿಜಃ ।
ಲೋಕಾಸ್ತೇಜೋಮಯಾಸ್ತಸ್ಯ ಪ್ರೇತ್ಯ ಚಾನಂತ್ಯಮಶ್ನುತೇ ॥೨೭॥

ಬ್ರಾಹ್ಮಣನು ಎಲ್ಲ ಪ್ರಾಣಿಗಳಿಗೂ ಅಭಯದಾನ ಮಾಡಿ, ಸಂನ್ಯಾಸಿಯಾಗಿ ಗೃಹಾದಿಗಳನ್ನು ತ್ಯಜಿಸಿ ಹೊರಟು ಹೋಗಬೇಕು. ಇವನು ಮರಣಾನಂತರದಲ್ಲಿ ತೇಜೋಮಯವಾದ ಲೋಕಗಳಿಗೆ ಹೋಗುತ್ತಾನೆ.

ಸುಶೀಲವೃತ್ತೋ ವ್ಯಪನೀತಕಲ್ಮಷೋ
ನ ಚೇಹ ನಾಮುತ್ರ ಚ ಕರ್ತುಮೀಹತೇ ।
ಅರೋಷಮೋಹೋ ಗತಸಂಧಿವಿಗ್ರಹೋ
ಭವೇದುದಾಸೀನವದಾತ್ಮವಿನ್ನರಃ ॥೨೮॥

ಇಂಥ ವ್ಯಕ್ತಿಯು ಒಳ್ಳೆಯ ಚಾರಿತ್ರ್ಯಸಂಪನ್ನನಾಗಿ ಪಾಪಗಳನ್ನು ಕಳೆದುಕೊಂಡವನಾಗಿರುತ್ತಾನೆ. ಆತ್ಮಜ್ಞಾನಿಯಾದ ಪುರುಷನು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಕಾಮ್ಯಕರ್ಮಗಳನ್ನು ಮಾಡಲು ಬಯಸುವುದಿಲ್ಲ. ಕ್ರೋಧ-ಮೋಹಗಳು ಅವನಲ್ಲಿ ಇರುವುದಿಲ್ಲ. ಸ್ನೇಹಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ, ಕಲಹ ಮಾಡುವುದಿಲ್ಲ. ಎಲ್ಲ ವಿಷಯಗಳಲ್ಲಿಯೂ ಉದಾಸೀನನಂತಿರುತ್ತಾನೆ.

ಯಮೇಷು ಚೈವಾತ್ಮಗತೇಷು ನ ವ್ಯಥೇತ್
ಸ್ವಶಾಸ್ತ್ರಸೂತ್ರಾಹುತಿಮಂತ್ರವಿಕ್ರಮಃ ।
ಭವೇದ್ ಯಥೇಷ್ಟಾ ಗತಿರಾತ್ಮಯಾಜಿನೋ
ನ ಸಂಶಯೋ ಧರ್ಮಪರೇ ಜಿತೇಂದ್ರಿಯೇ ॥೨೯॥

ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಯಮಗಳ ಪರಿಪಾಲನೆಯಲ್ಲಿ ಶೌಚ, ಸಂತೋಷ ಮೊದಲಾದ ತನ್ನಲ್ಲಿರುವ ವಿಷಯಗಳಲ್ಲಿ

ಎಂದಿಗೂ ಅವನು ದುಃಖಿತನಾಗುವುದಿಲ್ಲ. ಹಿಂಸೆ ಎಂದು ಭಾವಿಸುವುದಿಲ್ಲ. ತನ್ನ ಶಾಸ್ತ್ರದಲ್ಲಿರುವ, ತನಗೆ ಸಂಬಂಧಪಟ್ಟ ಸೂತ್ರಗಳಲ್ಲಿರುವ ಯಾವ ಮಂತ್ರಗಳಿವೆಯೋ ಅವುಗಳಲ್ಲಿ ಎಂದಿಗೂ ಔದಾಸೀನ್ಯವನ್ನು ತಾಳುವುದಿಲ್ಲ. ಉತ್ಸಾಹವನ್ನು ಹೊಂದಿರುತ್ತಾನೆ. ಧರ್ಮಪರನಾದ, ಜಿತೇಂದ್ರಿಯನಾದ ಅಂತಹ ಆತ್ಮಜ್ಞಾನಿಗೆ ಅವನು ಬಯಸಿದ ಸದ್ಗತಿಯು ದೊರೆಯುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ತತಃ ಪರಂ ಶ್ರೇಷ್ಠಮತೀವ ಸದ್ಗುಣೈ-
ರಧಿಷ್ಠಿತಂ ತ್ರೀನಧಿವೃತ್ತಮುತ್ತಮಮ್ ।
ಚತುರ್ಥಮುಕ್ತಂ ಪರಮಾಶ್ರಮಂ ಶೃಣು
ಪ್ರಕೀರ್ತ್ಯಮಾನಂ ಪರಮಂ ಪರಾಯಣಮ್ ॥೩೦॥

ವಾನಪ್ರಸ್ಥಧರ್ಮಕ್ಕಿಂತ ಅತ್ಯಂತ ಶ್ರೇಷ್ಠವೆನಿಸಿದ, ಸದ್ಗುಣಗಳಿಂದ ತುಂಬಿದ, ಹಿಂದೆ ಹೇಳಿದ ಮೂರು ಆಶ್ರಮಗಳಿಗಿಂತಲೂ ಅಧಿಕ ಗುಣಗಳಿಂದ ಕೂಡಿರುವ ತುರ್ಯಾಶ್ರಮವು ಶ್ರೇಷ್ಠವು ಎಂದು ಹೇಳಲ್ಪಟ್ಟಿದೆ. ಶ್ರೇಷ್ಠವಾದ ಆಶ್ರಯವೆನಿಸಿದ ಈ ತುರ್ಯಾಶ್ರಮವನ್ನೇ ಮುಂದೆ ವರ್ಣಿಸುತ್ತೇನೆ, ಕೇಳಿಸಿಕೊ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಶುಕಾನುಪ್ರಶ್ನೇ ಏಕೋನಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ವ್ಯಾಸರು ಶುಕಮುನಿಯನ್ನು ಕುರಿತು ಸಂನ್ಯಾಸಿಯ ಆಚರಣೆಗಳು ಮತ್ತು ಜ್ಞಾನವಂತನಾದ ಸಂನ್ಯಾಸಿಯ ಮಹತ್ವವನ್ನು ತಿಳಿಸುತ್ತಾರೆ.

ಶುಕಃ

ವರ್ತಮಾನಸ್ತಥೈವಾತ್ರ ವಾನಪ್ರಸ್ಥಾಶ್ರಮೇ ಯಥಾ ।
ಯೋಕ್ತವ್ಯೋऽऽತ್ಮಾ ಯಥಾ ಶಕ್ಯಾ ಪರಂ ವೈ ಕಾಂಕ್ಷತಾ ಪದಮ್ ॥೧॥

ತಂದೆಯೇ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ್ದರೂ ವಾನಪ್ರಸ್ಥಾಶ್ರಮಿಯಂತೆಯೇ ಬ್ರಹ್ಮಯಜ್ಞದಲ್ಲಿಯೇ ನಿರತನಾಗಿರುವ, ಭಗವಂತನನ್ನು

ಕಂಡುಕೊಳ್ಳಬೇಕೆಂದು ಆಕಾಂಕ್ಷೆಯುಳ್ಳ ಸಂನ್ಯಾಸಿಯು ತನ್ನ ಶಕ್ತಿಗೆ ಅನುಗುಣವಾಗಿ ಮನಸ್ಸನ್ನು ಪರಮಾತ್ಮನ ಚಿಂತನೆಯಲ್ಲಿ ಹೇಗೆ ತೊಡಗಿಸಬೇಕು?

ವ್ಯಾಸಃ

ಪ್ರಾಪ್ಯ ಸಂಸ್ಕಾರಮೇತಾಭ್ಯಾಮಾಶ್ರಮಾಭ್ಯಾಂ ತತಃ ಪರಮ್ ।
ಯತ್ ಕಾರ್ಯಂ ಪರಮಾರ್ಥಾರ್ಥಂ ತದಿಹೈಕಮನಾಃ ಶೃಣು ॥೨॥

ಶುಕಮುನಿಯೇ, ಬ್ರಹ್ಮಚರ್ಯ ಮತ್ತು ಗೃಹಸ್ಥಾಶ್ರಮಗಳ ಮೂಲಕ ಸಂಸ್ಕಾರವನ್ನು ಹೊಂದಿದ ಬಳಿಕ ಭಗವಂತನ ಪ್ರಾಪ್ತಿಗಾಗಿ ಯಾವ ಕರ್ತವ್ಯಗಳನ್ನು ಮಾಡಬೇಕೆಂದು ಹೇಳುತ್ತೇನೆ, ಏಕಾಗ್ರ ಮನಸ್ಸಿನಿಂದ ಕೇಳು.

ಕಾಷಾಯಾಂಬರಯಿತ್ವಾ ತು ಶ್ರೇಣಿಸ್ಥಾನೇಷು ಚ ತ್ರಿಷು ।
ಪ್ರವ್ರಜೇಚ್ಚ ಪರಂ ಸ್ಥಾನಂ ಪರಿವ್ರಜ್ಯಾಮನುತ್ತಮಾಮ್ ॥೩॥

ಒಂದು, ಎರಡು, ಮೂರು ಎಂಬ ಮೆಟ್ಟಿಲುಗಳಲ್ಲಿ ಮೂರನೆಯ ಸ್ಥಾನದಲ್ಲಿರುವ ವಾನಪ್ರಸ್ಥಾಶ್ರಮಿಯು ರಾಗ-ದ್ವೇಷಗಳೆಂಬ ದೋಷಗಳನ್ನು ಮನಸ್ಸಿನಲ್ಲಿಯೇ ಸುಟ್ಟು ಹಾಕಿ, ಬಳಿಕ ಉತ್ತಮೋತ್ತಮವಾದ ನಾಲ್ಕನೆಯ ಆಶ್ರಮವಾದ ಸಂನ್ಯಾಸವನ್ನು ಸ್ವೀಕರಿಸಬೇಕು.

ತದ್ ಭವಾನೇವಮಭ್ಯಸ್ಯ ವರ್ತತಾಂ ಶ್ರೂಯತಾಂ ತಥಾ ।
ಏಕ ಏವ ಚರೇನ್ನಿತ್ಯಂ ಸಿದ್ಧ್ಯರ್ಥಮಸಹಾಯವಾನ್ ॥೪॥

ಶುಕನೇ, ನೀನೂ ಈ ಸಂನ್ಯಾಸಧರ್ಮದ ನಿಯಮವನ್ನು ಕೇಳಿ ಅಭ್ಯಾಸ ಮಾಡಿಕೊ. ಸಂನ್ಯಾಸಿಯಾದವನು ಸಿದ್ಧಿಯನ್ನು ಹೊಂದುವ ದೃಷ್ಟಿಯಿಂದ ಯಾರ ಉಪಕಾರವನ್ನು ಬಯಸದೆ ಏಕಾಕಿಯಾಗಿ ಸಂನ್ಯಾಸ ಧರ್ಮವನ್ನು ಪಾಲಿಸಬೇಕು.

ಏಕಶ್ಚರತಿ ಯಃ ಪಶ್ಯನ್ನ ಜಹಾತಿ ನ ಹೀಯತೇ ।
ಅನಗ್ನಿರನಿಕೇತಃ ಸ್ಯಾದ್ ಗ್ರಾಮಮನ್ನಾರ್ಥಮಾಶ್ರಯೇತ್ ॥೫॥

ಯಾವನು ಜಗತ್ತೆಲ್ಲವನ್ನು ಭಗವಂತನ ನಿಯಮನಕ್ಕೆ ಒಳಪಟ್ಟಿದೆ ಎಂದು ನೋಡುತ್ತಾ ಏಕಾಕಿಯಾಗಿ ಸಂಚರಿಸುತ್ತಾ ಇದ್ದಾನೋ ಅಂತಹ ಸಂನ್ಯಾಸಿಯು ಯಾರನ್ನೂ ತ್ಯಾಗ

ಮಾಡುವುದಿಲ್ಲ. ಅವನನ್ನು ಇತರರು ತ್ಯಜಿಸುವುದಿಲ್ಲ. ಸಂನ್ಯಾಸಿಯಾದವನು ಅಗ್ನಿಕಾರ್ಯರಹಿತನು, ಮನೆ-ಮಠಾದಿಗಳಿಂದ ರಹಿತನೂ ಆಗಿರಬೇಕು. ಅನ್ನಕ್ಕೋಸ್ಕರ ಗ್ರಾಮದಲ್ಲಿ ಸಂಚರಿಸಬೇಕು.

ಅಶಸ್ತನವಿಧಾನಃ ಸ್ಯಾನ್ಮುನಿರ್ಭಾವಸಮನ್ವಿತಃ ।
ಲಘ್ವಾಶೀ ನಿಯತಾಹಾರಃ ಸಕೃದನ್ನನಿಷೇವಿತಾ ॥೬॥

ಸಂನ್ಯಾಸಿಯಾದವನು ಮರುದಿನಕ್ಕಾಗಿ ಆಹಾರವನ್ನು ಸಂಗ್ರಹಿಸಬಾರದು. ಏಕಾಗ್ರತೆಯನ್ನು ಸಂಪಾದಿಸಿಕೊಂಡು ಮೌನಿಯಾಗಿರಬೇಕು. ಸ್ವಲ್ಪವೇ ಆಹಾರವನ್ನು ನಿಯತಕಾಲದಲ್ಲಿ ಭುಂಜಿಸಬೇಕು. ದಿನಕ್ಕೆ ಒಂದೇ ಬಾರಿ ಊಟ ಮಾಡಬೇಕು.

ಕಪಾಲಂ ವೃಕ್ಷಮೂಲಾನಿ ಕುಚೇಲಮಸಹಾಯತಾ ।
ಉಪೇಕ್ಷಾ ಸರ್ವಭೂತಾನಾಮೇತಾವದ್ ಭಿಕ್ಷುಲಕ್ಷಣಮ್ ॥೭॥

ಭಿಕ್ಷಾಪಾತ್ರೆಯನ್ನು, ಕಮಂಡಲುವನ್ನು ಧರಿಸಿರಬೇಕು. ವೃಕ್ಷಗಳ ಬುಡದಲ್ಲಿ ವಾಸಿಸಬೇಕು. ಸಾಧಾರಣವಾದ ಖಾವಿಯ ಬಟ್ಟೆಯನ್ನು ಧರಿಸಿರಬೇಕು. ಸಹಾಯಕ್ಕಾಗಿ ಯಾರನ್ನೂ ಇಟ್ಟುಕೊಳ್ಳಬಾರದು. ಸರ್ವಪ್ರಾಣಿಗಳಲ್ಲಿಯೂ ಉದಾಸೀನ ಭಾವದಿಂದ ಇರಬೇಕು. ಇದು ಸಂನ್ಯಾಸಿಯ ಲಕ್ಷಣವು.

ಯಸ್ಮಿನ್ ವಾಚಃ ಪ್ರವಿಶಂತಿ ಕೂಪೇ ಪ್ರಾಪ್ತಾಃ ಶಿಲಾ ಇವ ।
ನ ವಕ್ತಾರಂ ಪುನರ್ಯಾಂತಿ ಸ ಕೈವಲ್ಯಾಶ್ರಮೇ ವಸೇತ್ ॥೮॥

ಆಳವಾದ ಹೊಂಡದಲ್ಲಿ ಬಿದ್ದ ಆನೆಗಳು ಮೇಲೆದ್ದು ಬರಲು ಸಾಧ್ಯವಾಗದೆ ಅಲ್ಲಿಯೇ ಘೀಳಿಡುವಂತೆ ಇತರರು ಆಡುವ ನಿಂದಾ-ಸ್ತುತಿ ರೂಪವಾದ ಮಾತುಗಳು ಯಾವ ಸಂನ್ಯಾಸಿಯ ಕಿವಿಯನ್ನು ಸೇರಿದ ಬಳಿಕ ಅವುಗಳು ಮತ್ತೆ ತಿರುಗಿ ಹಿಂದೆ ಬರುವುದಿಲ್ಲ. ಅಂದರೆ ಯಾವ ಸಂನ್ಯಾಸಿಯು ಮತ್ತೊಬ್ಬರ ನಿಂದಾ-ಸ್ತುತಿಗಳಲ್ಲಿ ಮುಂದುವರೆಯುವುದಿಲ್ಲವೋ ಅಂತಹವರು ಮೋಕ್ಷಾಶ್ರಮವೆನಿಸಿದ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು.

ನೈವ ಪಶ್ಯೇನ್ನ ಶೃಣುಯಾದವಾಚ್ಯಂ ಜಾತು ಕಸ್ಯಚಿತ್ ।
ಬ್ರಾಹ್ಮಣಾನಾಂ ವಿಶೇಷೇಣ ನೈವ ಬ್ರೂಯಾತ್ ಕಥಂಚನ ॥೯॥

ಸಂನ್ಯಾಸಿಯಾದವನು ನಿಂದಕನನ್ನು ನೋಡಬಾರದು. ಅವನ ಮಾತುಗಳನ್ನೂ ಕೇಳಬಾರದು. ಇವನೂ ಮತ್ತೊಬ್ಬರ ಬಗ್ಗೆ ಅವಾಚ್ಯ ಮಾತುಗಳನ್ನು ಹೇಳಬಾರದು. ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರ ವಿಷಯದಲ್ಲಿ ಎಂತಹ ಸಂದರ್ಭದಲ್ಲಿಯೂ ಅವಹೇಳಕಾರಿಯಾದ ಮಾತುಗಳನ್ನು ಹೇಳಬಾರದು.

ಯದ್ಬ್ರಾಹ್ಮಣಸ್ಯ ಕುಶಲಂ ತದೇವ ಸತತಂ ವದೇತ್ ।
ತೂಷ್ಣೀಮಾಸೀತ ನಿಂದಾಯಾಂ ಕುರ್ವನ್ ಭೇಷಜಮಾತ್ಮನಃ ॥೧೦॥

ವೇದಾಧ್ಯಯನಸಂಪನ್ನರಾದ ಬ್ರಾಹ್ಮಣರಿಗೆ ಯಾವುದು ಹಿತವೋ ಅದನ್ನೇ ಹೇಳುತ್ತಿರಬೇಕು. ನಿಂದೆಯ ಮಾತನ್ನು ಕೇಳುತ್ತಿದ್ದರೂ ಅದನ್ನು ಭವರೋಗ ನಿವಾರಣೆಗೆ ಔಷಧವೆಂದು ಭಾವಿಸಿ ಸುಮ್ಮನಿರಬೇಕು.

ಯೇನ ಪೂರ್ಣಮಿವಾಕಾಶಂ ಭವತ್ಯೇಕೇನ ಸರ್ವದಾ ।
ಶೂನ್ಯಂ ಯೇನ ಜನಾಕೀರ್ಣಂ ತಂ ದೇವಾ ಬ್ರಾಹ್ಮಣಂ ವಿದುಃ ॥೧೧॥

ಆಕಾಶವು ಅಸಂಗವಾಗಿ, ವ್ಯಾಪ್ತವಾಗಿ, ನಿರ್ಲಿಪ್ತವಾಗಿ ಹೇಗೆ ಇರುತ್ತದೋ ಅದರಂತೆ ಸಂನ್ಯಾಸಿಯು ಏಕಾಕಿಯಾಗಿದ್ದು, ಅಸಂಗನಾದ ಭಗವಂತನ ಸಂಬಂಧವನ್ನು ಹೊಂದಿ ಜಗತ್ತೆಲ್ಲವನ್ನೂ ಉಪೇಕ್ಷಿಸಬೇಕು. ಅಂತಹವನನ್ನು ದೇವತೆಗಳು ಬ್ರಾಹ್ಮಣ ಎನ್ನುತ್ತಾರೆ.

ಯೇನ ಕೇನಚಿದಾಚ್ಛನ್ನೋ ಯೇನ ಕೇನಚಿದಾಶಿತಃ ।
ಯತ್ರ ಕ್ವ ಚ ನ ಶಾಯೀ ಚ ತಂ ದೇವಾ ಬ್ರಾಹ್ಮಣಂ ವಿದುಃ ॥೧೨॥

ಯಾವ ವ್ಯಕ್ತಿಯು ಬಟ್ಟೆ ಸಿಕ್ಕಿದರೆ ತನ್ನ ಶರೀರವನ್ನು ಮುಚ್ಚಿಕೊಳ್ಳುತ್ತಾನೋ, ಹಸಿವಾದಾಗಲೂ ಪದಾರ್ಥ ಸಿಕ್ಕಿದರೆ ತಿನ್ನುತ್ತಾನೋ, ಸಿಕ್ಕಿದ ಜಾಗದಲ್ಲಿ ಮಲಗುತ್ತಾನೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ಅಹೇರಿವ ಗಣಾದ್ಭೀತಃ ಸೌಹಿತ್ಯಾನ್ನರಕಾದಿವ ।
ಕುಣಪಾದಿವ ಚ ಸ್ತ್ರೀಭ್ಯಸ್ತಂ ದೇವಾ ಬ್ರಾಹ್ಮಣಂ ವಿದುಃ ॥೧೩॥

ಹಾವನ್ನು ಕಂಡಾಗ ಭಯಪಡುವಂತೆ ಯಾವ ಸಂನ್ಯಾಸಿಯು ಜನರನ್ನು ಕಂಡರೆ ಭಯಪಡುತ್ತಾನೋ, ನರಕವನ್ನು ಕಂಡಾಗ ಭಯಪಡುವಂತೆ ಮೃಷ್ಟಾನ್ನವನ್ನು ಕಂಡಾಗ

ಭಯಪಡುತ್ತಾನೋ, ಹೆಣವನ್ನು ಕಂಡಾಗ ದೂರವಾಗಿ ನಿಲ್ಲುವಂತೆ ಸ್ತ್ರೀಸಂಗಕ್ಕೆ ಹೆದರಿ ದೂರ ನಿಲ್ಲುತ್ತಾನೋ ಅಂತಹವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ನ ಕ್ರುದ್ಧ್ಯೇನ್ನ ಪ್ರಹಷ್ಯೇಚ್ಚ ಮಾನಿತೋಮಾನಿತಶ್ಚ ಯಃ ।
ಸರ್ವಭೂತೇಷ್ವಭಯದಸ್ತಂ ದೇವಾ ಬ್ರಾಹ್ಮಣಂ ವಿದುಃ ॥೧೪॥

ಯಾವ ವ್ಯಕ್ತಿಯು ಸಮ್ಮಾನಿತನಾದರೆ ಹರ್ಷಗೊಳ್ಳುವುದಿಲ್ಲವೋ, ಯಾವ ವ್ಯಕ್ತಿಯು ಅವಮಾನಿತನಾದರೆ ದುಃಖಗೊಳ್ಳುವುದಿಲ್ಲವೋ, ಸಮಸ್ತ ಪ್ರಾಣಿಗಳಿಗೂ ಅಭಯ ದಾನ ಮಾಡುತ್ತಿದ್ದಾನೆಯೋ ಅಂತಹವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ನಾಭಿನಂದೇತ ಮರಣಂ ನಾಭಿನಂದೇತ ಜೀವಿತಮ್ ।
ಕಾಲಮೇವ ಪ್ರತೀಕ್ಷೇತ ನಿದೇಶಂ ಭೃತಕೋ ಯಥಾ ॥೧೫॥

ಸಂನ್ಯಾಸಿಯಾದವನು ಮರಣವನ್ನು ಪ್ರಶಂಸಿಸಬಾರದು, ಬದುಕನ್ನು ಹೊಗಳಬಾರದು. ಸ್ವಾಮಿಯ ಆಜ್ಞೆಯನ್ನು ಸೇವಕನು ಎದುರು ನೋಡುವಂತೆ ಸಂನ್ಯಾಸಿಯು ಭಗವಂತನ ವ್ಯಾಪಾರವನ್ನೇ ನೋಡುತ್ತಿರಬೇಕು.

ಅನಭ್ಯಾಹತಚಿತ್ತಃ ಸ್ಯಾದನಭ್ಯಾಹತವಾಕ್ತಥಾ ।
ನಿರ್ಮುಕ್ತಃ ಸರ್ವಪಾಪೇಭ್ಯೋ ನಿರಮಿತ್ರಸ್ಯ ಕಿಂ ಭಯಮ್ ॥೧೬॥

ಸಂನ್ಯಾಸಿಯ ಮನಸ್ಸು ರಾಗ-ದ್ವೇಷಗಳಿಂದ ಕಲುಷಿತವಾಗಿರಬಾರದು. ನಿಂದೆ ಮೊದಲಾದ ದೋಷಗಳಿಲ್ಲದ ಮಾತುಗಳು ಅವನಲ್ಲಿರಬೇಕು. ಸರ್ವಪಾಪಗಳಿಂದಲೂ ವಿಮುಕ್ತನಾಗಿರಬೇಕು. ಶತ್ರುರಹಿತನಾದ ಇಂತಹ ಸಂನ್ಯಾಸಿಗೆ ಭಯಕ್ಕೆ ಅವಕಾಶವೆಲ್ಲಿ?

ಅಭಯಂ ಸರ್ವಭೂತೇಭ್ಯೋ ಭೂತಾನಾಮಭಯಂ ಯತಃ ।
ತಸ್ಯ ದೇಹಾದ್ ವಿಮುಕ್ತಸ್ಯ ಭಯಂ ನಾಸ್ತಿ ಕುತಶ್ಚನ ॥೧೭॥

ಯಾವ ಸಂನ್ಯಾಸಿಯು ಸಮಸ್ತ ಪ್ರಾಣಿಗಳಿಗೂ ಅಭಯದಾನ ಮಾಡಿ, ಎಲ್ಲ ಪ್ರಾಣಿಗಳಿಂದ ತಾನೂ ಅಭಯವನ್ನು ಹೊಂದಿರುತ್ತಾನೋ, ಮೋಹದಿಂದ ವಿಮುಕ್ತನಾದ ಸಂನ್ಯಾಸಿಗೆ ಯಾವುದರಿಂದಲೂ ಯಾವುದೇ ವಿಧವಾದ ಭಯವು ಇರುವುದಿಲ್ಲ.

ಯಥಾ ನಾಗಪದೇऽನ್ಯಾನಿ ಪದಾನಿ ಪದಗಾಮಿನಾಮ್ ।
ಸರ್ವಾಣ್ಯೇವಾಪಿಧೀಯಂತೇ ಪದಜಾತಾನಿ ಕೌಂಜರೇ ॥೧೮॥

ಏವಂ ಸರ್ವಮಹಿಂಸಾಯಾಂ ಧರ್ಮಾರ್ಥಮಪಿಧೀಯತೇ ।
ಅಮೃತಃ ಸ ನಿತ್ಯಂ ವಸತಿ ಯೋऽಹಿಂಸಾಂ ಪ್ರತಿಪದ್ಯತೇ ॥೧೯॥

ಕಾಲನಿಂದ ಸಂಚರಿಸುವ ಪ್ರಾಣಿಗಳ ಹೆಜ್ಜೆಯ ಗುರುತು ಆನೆಗಳ ಹೆಜ್ಜೆಗಳ ಗುರುತಿನಲ್ಲಿ ಹೇಗೆ ಮುಚ್ಚಿಹೋಗುತ್ತದೋ, ಇದರಂತೆ ಸಮಸ್ತ ಧರ್ಮ-ಅರ್ಥಗಳು ಅಹಿಂಸಾಧರ್ಮದಲ್ಲಿ ಅಡಗಿಕೊಂಡಿವೆ. ಯಾವಾತನು ಯಾವುದೇ ಕಾರಣದಿಂದ ಹಿಂಸೆಯನ್ನು ಆಶ್ರಯಿಸುವುದಿಲ್ಲವೋ ಅಂಥವನು ಅಮೃತಮಯನಾಗಿ ಸಂನ್ಯಾಸಾಶ್ರಮದಲ್ಲಿ ಇರುತ್ತಾನೆ.

ಅಹಿಂಸಕಃ ಸಮಃ ಸತ್ಯೋ ಧೃತಿಮಾನ್ನಿಯತೇಂದ್ರಿಯಃ ।
ಶರಣ್ಯಃ ಸರ್ವಭೂತಾನಾಂ ಗತಿಮಾಪ್ನೋತ್ಯನುತ್ತಮಾಮ್ ॥೨೦॥

ಅಹಿಂಸಾ ಪಾಲಕನು, ಸರ್ವತ್ರ ಭಗವಂತನನ್ನು ಕಾಣುವವನು, ಸತ್ಯನಿಷ್ಠನು, ಧೈರ್ಯವಂತನು, ಜಿತೇಂದ್ರಿಯನು, ಪ್ರಾಣಿಗಳಿಗೆಲ್ಲ ಆಶ್ರಯದಾತನು ಇಂತಹ ಸಂನ್ಯಾಸಿಯು ಅತ್ಯಂತ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ಏವಂ ಪ್ರಜ್ಞಾನತೃಪ್ತಸ್ಯ ನಿರ್ಭಯಸ್ಯ ಮನೀಷಿಣಃ ।
ನ ಮೃತ್ಯುಮತಿಗೋ ಭಾವಃ ಸ ಮೃತ್ಯುಮಧಿಗಚ್ಛತಿ ॥೨೧॥

ಹೀಗೆ ಯಾವ ಸಂನ್ಯಾಸಿಯು ಭಗವಂತನ ಜ್ಞಾನದಿಂದ ತೃಪ್ತನಾಗಿದ್ದು, ಯಾರಿಂದಲೂ ಭಯಪಡದೆ ಆಸೆಯನ್ನು ತ್ಯಜಿಸಿ ಇದ್ದಾನೋ ಅಂತಹ ಸಂನ್ಯಾಸಿಯನ್ನು ಮೃತ್ಯುವಿಗೂ ದಾಟಲಾಗದು. ಪ್ರತಿಯಾಗಿ ಈತನೇ ಮೃತ್ಯುವನ್ನು ಅತಿಕ್ರಮಿಸುತ್ತಾನೆ, ಅಮರನಾಗುತ್ತಾನೆ.

ವಿಮುಕ್ತಂ ಸರ್ವಸಂಗೇಭ್ಯೋ ಮುನಿಮಾಕಾಶವತ್ಸ್ಥಿತಮ್ ।
ಅಸ್ವಮೇಕಚರಂ ಶಾಂತಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೨॥

ಯಾವ ಸಂನ್ಯಾಸಿಯು ಸರ್ವಸಂಗ ತ್ಯಾಗಿಯಾಗಿ, ಮೌನಿಯಾಗಿ, ನಿರ್ಮಲವಾದ ಆಕಾಶದಂತೆ ನಿರ್ಲಿಪ್ತನಾಗಿ, ಸಮಸ್ತ ವಸ್ತುಗಳಲ್ಲಿಯೂ ಅಭಿಮಾನಶೂನ್ಯನಾಗಿ,

ಏಕಾಕಿಯಾಗಿ, ಶಾಂತನಾಗಿ ಸಂಚರಿಸುತ್ತಾನೋ ಅಂತಹವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ಜೀವಿತಂ ಯಸ್ಯ ಧರ್ಮಾರ್ಥಂ ಧರ್ಮೋ ರತ್ಯರ್ಥಮೇವ ಚ ।
ಅಹೋರಾತ್ರಾಶ್ಚ ಪುಣ್ಯಾರ್ಥಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೩॥

ಯಾರ ಜೀವನವು ಧರ್ಮಕ್ಕಾಗಿಯೇ ಇರುವುದೋ, ಆ ಧರ್ಮವು ಶ್ರೀಹರಿಯ ಪ್ರೀತಿಗೋಸ್ಕರವೇ ಆಚರಿಸಲ್ಪಡುತ್ತದೋ, ಯಾವನ ಹಗಲು-ರಾತ್ರಿಗಳು ಪುಣ್ಯ ಕಾರ್ಯದಲ್ಲಿಯೇ ರತವಾಗಿವೆಯೋ ಅಂತಹವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ನಿರಾಶಿಷಮನಾರಂಭಂ ನಿರ್ನಮಸ್ಕಾರಮಸ್ತುತಿಮ್ ।
ಅಕ್ಷೀಣಂ ಕ್ಷೀಣಕರ್ಮಾಣಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೪॥

ಯಾವನು ಕಾಮನಾರಹಿತನೋ, ಸರ್ವಪ್ರಕಾರಗಳಿಂದಲೂ ಬಂಧಕ ಕರ್ಮಗಳನ್ನು ತ್ಯಜಿಸಿರುವನೋ, ನಮಸ್ಕಾರ- ಹೊಗಳಿಕೆಗಳಿಂದ ದೂರನಾಗಿದ್ದಾನೋ, ಸಕಲ ಬಂಧಕಗಳಿಂದ ಮುಕ್ತನಾಗಿದ್ದಾನೋ ಅಂತಹವನನ್ನು ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ಸರ್ವಾಣಿ ಭೂತಾನಿ ಸುಖೇ ರಮಂತೇ
ಸರ್ವಾಣಿ ದುಃಖಸ್ಯ ಭೃಶಂ ತ್ರಸಂತಿ ।
ತೇಷಾಂ ಭಯೋತ್ಪಾದನಜಾತಖೇದಃ
ಕುರ್ಯಾನ್ನ ಕರ್ಮಾಣಿ ಹಿ ಶ್ರದ್ದಧಾನಃ ॥೨೫॥

ಸಮಸ್ತ ಪ್ರಾಣಿಗಳು ಸುಖ ಒದಗಿದಾಗ ಪ್ರಸನ್ನವಾಗಿರುತ್ತವೆ. ದುಃಖಕ್ಕೆ ಭಯ ಪಡುತ್ತವೆ. ಪ್ರಾಣಿಗಳಿಗೆ ಭಯವನ್ನು ನೀಡುವುದರಿಂದ ಯಾವ ವ್ಯಕ್ತಿಗೆ ಸಂಕಟ ಉಂಟಾಗುತ್ತದೋ, ಶ್ರದ್ಧಾಳುವಾದ ಅಂತಹ ಮನುಷ್ಯನು ಭಯವನ್ನುಂಟು ಮಾಡುವ ದೇಹಯಾತ್ರಾ ಕರ್ಮಗಳಲ್ಲಿ ನಿರತನಾಗಬಾರದು.

ದಾನಂ ಹಿ ಭೂತಾಭಯದಕ್ಷಿಣಾಯಾಃ
ಸರ್ವಾಣಿ ದಾನಾನ್ಯಧಿತಿಷ್ಠತೀಹ ।

ತೀಕ್ಷ್ಣಾಂ ತನುಂ ಯಃ ಪ್ರಥಮಂ ಜಹಾತಿ
ಸೋಽನಂತಮಾಪ್ನೋತ್ಯಭಯಂ ಪ್ರಜಾಭ್ಯಃ ॥೨೬॥

ಜಗತ್ತಿನಲ್ಲಿ ಪ್ರಾಣಿಗಳಿಗೆ ಅಭಯವೆಂಬ ದಕ್ಷಿಣೆಯನ್ನು ದಾನ ಮಾಡಿದಾಗ ಸಿಗುವ ಪುಣ್ಯಕ್ಕಿಂತ ಮಿಗಿಲಾದ ಪುಣ್ಯವು ಬೇರೆ ಯಾವ ದಾನದಿಂದಲೂ ದೊರೆಯದು. ಯಾವನು ಹಿಂಸೆಯನ್ನು ತ್ಯಜಿಸುವನೋ ಅವನು ಸರ್ವಪ್ರಜೆಗಳಿಂದಲೂ ಅಭಯವನ್ನು ಪಡೆದು ಮೋಕ್ಷವನ್ನು ಹೊಂದುತ್ತಾನೆ. ಕ್ರೂರವಾದ ಮಾತುಗಳನ್ನು ಆಡದಿರುವವನು ಭಗವಂತನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

ಸ ದತ್ತಮಾಸ್ಯೇನ ಹವಿರ್ಜುಹೋತಿ
ಲೋಕಸ್ಯ ನಾಭಿರ್ಜಗತಃ ಪ್ರತಿಷ್ಠಾ ।
ತಸ್ಯಾಂಗಮಂಗಾನಿ ಕೃತಾಕೃತಂ ಚ
ವೈಶ್ವಾನರಃ ಸರ್ವಮೇವ ಪ್ರಪೇದೇ ॥೨೭॥

ಯಾವ ಸಂನ್ಯಾಸಿಯು ಬೇಡಿದ ಭಿಕ್ಷಾನ್ನವನ್ನೇ ವೈಶ್ವಾನರನಿಗೆ ಆಹುತಿ ಎಂದು ತನ್ನ ಬಾಯಿಯ ಮೂಲಕ, ದೇವತೆಗಳ ಮೂಲಕ ಭಗವಂತನಿಗೆ ನೀಡುತ್ತಾನೋ ಅಂತಹ ವೈಶ್ವಾನರ ಭಗವಂತನು ಲೋಕಗಳಿಗೆಲ್ಲ ಆಧಾರನೂ, ಕೇಂದ್ರನೂ, ಜಗತ್ತಿನ ಅಂಗ-ಪ್ರತ್ಯಂಗಗಳು, ಕಾರ್ಯ-ಕಾರಣಗಳು ಆಗಿರುವ ಸರ್ವೋತ್ತಮನಾಗಿದ್ದಾನೆ. ಯತಿಯಾದವನು ಸ್ವೀಕರಿಸುವ ಅನ್ನವನ್ನೇ ಯಜ್ಞ ಎಂದು ಭಾವಿಸಿದರೆ ಎಲ್ಲ ಪುಣ್ಯ ಕರ್ಮಗಳನ್ನು ಮಾಡಿದವನ ಫಲವನ್ನು ಹೊಂದುತ್ತಾನೆ.

ಪ್ರಾದೇಶಮಾತ್ರೇ ಹೃದಿ ನಿಶ್ರಿತಂ ಯತ್
ತಸ್ಮಿನ್ ಪ್ರಾಣಾನಾತ್ಮಯಾಜೀ ಜುಹೋತಿ ।
ತಸ್ಯಾಗ್ನಿಹೋತ್ರಂ ಹುತಮಾತ್ಮಸಂಸ್ಥಂ
ಸರ್ವೇಷು ಲೋಕೇಷು ಸದೈವತೇಷು ॥೨೮॥

ವೈಶ್ವಾನರ ಯಜ್ಞವನ್ನು ಮಾಡುವ ಜ್ಞಾನಿಯು ನಾಭಿಯಿಂದ ಹೃದಯದ ತನಕ ಪ್ರಾದೇಶಮಾತ್ರದಲ್ಲಿ ಪ್ರಕಟವಾಗುವ ವೈಶ್ವಾನರ ಭಗವಂತನಲ್ಲಿ ತನ್ನ ಇಂದ್ರಿಯಗಳನ್ನು ಹೋಮಿಸುತ್ತಾನೆ. ಜ್ಞಾನಿಯು ಮಾಡುವ ಪ್ರಾಣಾಗ್ನಿ ಹೋತ್ರವು ಅವನ ಶರೀರದಲ್ಲಿಯೇ

ಆದರೂ ಅಂತರ್ಯಾಮಿಯಾದ ಭಗವಂತನು ತೃಪ್ತಿಯನ್ನು ಹೊಂದಿರುವುದರಿಂದ ಸಮಸ್ತ ಲೋಕಗಳಲ್ಲಿಯೂ ಪ್ರಾಣಾಗ್ನಿಹೋತ್ರವು ನಡೆದಂತಾಗುತ್ತದೆ.

ದೈವಂ ತ್ರಿಧಾತುಂ ತ್ರಿವೃತಂ ಸುಪೂರ್ಣಂ
ಯೇ ವಿದ್ಯುರಗ್ರ್ಯಂ ಪರಮಾರ್ಥತಾಂ ಚ ।
ತೇ ಸರ್ವಲೋಕೇಷು ಮಹೀಯಮಾನಾ
ದೇವಾಃ ಸಮರ್ಥಾಃ ಸುಕೃತಂ ವ್ರಜಂತಿ ॥೨೯॥

ಯಾರು ಕಾಲ-ಪುರುಷ-ಪ್ರಕೃತಿಗಳನ್ನು ಧರಿಸಿರುವ ವಿಜ್ಞಾನ, ಐಶ್ವರ್ಯ, ಮಂತ್ರಶಕ್ತಿಗಳಿಂದ ಕೂಡಿರುವ, ಮೂರು ವೇದಗಳನ್ನು ವ್ಯಾಪಿಸಿರುವ, ಮೂರು ಲೋಕಗಳನ್ನು ವ್ಯಾಪಿಸಿರುವ, ಪರಿಪೂರ್ಣನಾದ, ಸರ್ವೋತ್ತಮನಾದ ನಾರಾಯಣನನ್ನು ಪರಮ ಚೇತನನೆಂದು ತಿಳಿದಿರುತ್ತಾರೋ ಅಂತಹ ಜ್ಞಾನಿಗಳು ಸಮಸ್ತ ಲೋಕದಿಂದಲೂ ಸಮ್ಮಾನಿತರಾಗುತ್ತಾರೆ. ದೇವತೆಗಳು ಇವರ ವಿಷಯದಲ್ಲಿ ಪುಣ್ಯಕರವಾದ ಮಾತುಗಳನ್ನು ಹೇಳುತ್ತಾರೆ.

ವೇದಾಂಶ್ಚ ವೇದ್ಯಂ ಚ ವಿಧಿಂ ಚ ಕೃತ್ಸ್ನ-
ಮಥೋ ನಿರುಕ್ತಂ ಪರಮಾರ್ಥತಾಂ ಚ ।
ಸರ್ವಂ ಶರೀರಾತ್ಮನಿ ಯಃ ಪ್ರವೇದ
ತಸ್ಮೈ ಸ್ಮ ದೇವಾಃ ಸ್ಪೃಹಯಂತಿ ನಿತ್ಯಮ್ ॥೩೦॥

ಜ್ಞಾನವನ್ನು, ಜ್ಞೇಯವನ್ನು, ಸಮಗ್ರವಾದ ವಿಧಿಗಳನ್ನು, ವೈದಿಕ ಶಬ್ದಗಳ ಅಭಯವಾರ್ತೆಗಳನ್ನು, ಪರಬ್ರಹ್ಮತತ್ತ್ವವನ್ನು, ಶರೀರದ ಅಂತರ್ಯಾಮಿಯಾಗಿರುವ ನಾರಾಯಣನನ್ನು ಯಾವನು ಚೆನ್ನಾಗಿ ತಿಳಿದುಕೊಂಡಿರುತ್ತಾನೋ ಅಂತಹ ಜ್ಞಾನಿಯ ದರ್ಶನವನ್ನು ದೇವತೆಗಳು ಅಪೇಕ್ಷಿಸುತ್ತಾರೆ.

ಭೂಮಾವಸಕ್ತಂ ದಿವಿ ಚಾಪ್ರಮೇಯಂ
ಹಿರಣ್ಮಯಂ ಯೋಽಂಡಜಮಂಡಮಧ್ಯೇ ।
ಪತತ್ರಿಣಂ ಪಕ್ಷಿಣಮಂತರಿಕ್ಷೇ
ಯೋ ವೇದ ಭೋಗ್ಯಾತ್ಮನಿ ದೀಪ್ತರಶ್ಮಿಃ ॥೩೧॥

ಭೂಮಿಯಲ್ಲಿದ್ದರೂ ವಿರಕ್ತನಾಗಿರುವ, ಆಕಾಶದಲ್ಲಿದ್ದರೂ ಅಪ್ರಮೇಯನೆನಿಸಿದ, ಬ್ರಹ್ಮಾಂಡದ ಮಧ್ಯದಲ್ಲಿ ಪಿಂಡಾಂಡವೆಂಬ ಶರೀರದ ಮಧ್ಯದಲ್ಲಿ ಇದ್ದರೂ ಪಕ್ಷಿಯ ರೂಪದಲ್ಲಿರುವ ಪರಮಾತ್ಮನನ್ನು ಭೋಗಾಯತನವಾದ ಈ ಶರೀರದ ಹೃದಯಾಕಾಶದಲ್ಲಿ ತಿಳಿಯುತ್ತಾನೋ ಅವನು ತೇಜೋಮಯವಾದ ರಶ್ಮಿಗಳಿಂದ ಪ್ರಕಾಶಿಸುತ್ತಾನೆ.

ಆವರ್ತಮಾನಮಜರಂ ವಿವರ್ತನಂ
ಷಣ್ನೇಮಿಕಂ ದ್ವಾದಶಾರಂ ಸುಪರ್ವ ।
ಯಸ್ಯೇದಮಾಸ್ಯೇ ಪರಿಯಾತಿ ವಿಶ್ವಂ
ತತ್ ಕಾಲಚಕ್ರಂ ನಿಹಿತಂ ಗುಹಾಯಾಮ್ ॥೩೨॥

ನಿರಂತರ ಸುತ್ತುತ್ತಿರುವ, ಜೀರ್ಣವಾಗದ, ಆರು ಋತುಗಳೆಂಬ ಗುಂಭಗಳನ್ನು ಹೊಂದಿರುವ, ಹನ್ನೆರಡು ಮಾಸಗಳೆಂಬ ಅರೆ ಕಾಲುಗಳನ್ನು ಹೊಂದಿರುವ, ದರ್ಶಪೂರ್ಣ ಮಾಸಾದಿ ಪರ್ವಗಳನ್ನು ಹೊಂದಿರುವ ಕಾಲಚಕ್ರವು ಬುದ್ಧಿ ಎಂಬ ಗುಹೆಯಲ್ಲಿ ಅಡಗಿದೆ. ಈ ಕಾಲಚಕ್ರದ ಮುಖದಲ್ಲಿ ಜಗತ್ತೇ ತಿನ್ನುವ ಭಕ್ಷ್ಯದಂತೆ ಆಗಿ ಅದರ ಮುಖದಲ್ಲಿ ಬೀಳುತ್ತಿದೆ. ಈ ಕಾಲಸ್ವರೂಪಿಯು ಪರಮಾತ್ಮನೇ ಆಗಿದ್ದಾನೆ. ಅಂತಹ ಭಗವಂತನನ್ನು ಕಂಡವನನ್ನು ದೇವತೆಗಳು ಗೌರವಿಸುತ್ತಾರೆ.

ಯಃ ಸಂಪ್ರಸಾದಂ ಜಗತಃ ಶರೀರಂ
ಸರ್ವಾನ್ ಸ ಲೋಕಾನಧಿಗಚ್ಛತೀಹ ।
ತಸ್ಮಿನ್ ಹುತಂ ತರ್ಪಯತೀಹ ದೇವಾಂ-
ಸ್ತೇ ವೈ ತೃಪ್ತಾಸ್ತರ್ಪಯಂತ್ಯಾಸ್ಯಮಸ್ಯ ॥೩೩॥

ಯಾವನು ಪ್ರಸನ್ನತೆಯನ್ನು ಉಂಟುಮಾಡುತ್ತಾನೋ, ಜಗತ್ತಿಗೆ ಶರೀರದಂತಿದ್ದಾನೋ ಅಂತಹ ಪರಮಾತ್ಮನು ಸರ್ವಲೋಕಗಳನ್ನು ಮೀರಿ ನಿಂತಿದ್ದಾನೆ. ಆ ಪರಮಾತ್ಮನಲ್ಲಿ ಮಾಡುವ ಇಂದ್ರಿಯಾದಿಗಳ ತರ್ಪಣವು ದೇವತೆಗಳನ್ನೇ ತೃಪ್ತಿಗೊಳಿಸುತ್ತದೆ. ತೃಪ್ತರಾದ ದೇವತೆಗಳು ಹೊರಬರುವ ಜ್ಞಾನಿಯ ಮುಖದಿಂದ ಜ್ಞಾನಾಮೃತದ ಸೇಚನೆಯಿಂದ ತೃಪ್ತಿಗೊಳ್ಳುತ್ತಾರೆ.

ತೇಜೋಮಯೋ ನಿತ್ಯತನುಃ ಪುರಾಣೋ
ಲೋಕಾನನಂತಾನಭಯಾನುಪೈತಿ ।

ಭೂತಾನಿ ಯಸ್ಮಾನ್ನ ತ್ರಸಂತೇ ಕದಾಚಿತ್
ಸ ಭೂತೇಭ್ಯೋ ನ ತ್ರಸತೇ ಕದಾಚಿತ್ ॥೩೪॥

ತೇಜೋಮಯನು, ನಿತ್ಯವಾದ ಶರೀರವುಳ್ಳವನು, ಪುರಾಣಪುರುಷನು ಆಗಿ, ಭಯವೇ ಇಲ್ಲದ ಅಸಂಖ್ಯಾತವಾದ ಲೋಕಗಳನ್ನು ಹೊಂದುತ್ತಾನೆ. ಯಾರಿಂದ ಯಾವ ಪ್ರಾಣಿಗಳು ಭಯಪಡುವುದಿಲ್ಲವೋ ಅಂತಹವರು ಯಾವಾಗಲೂ ಯಾವ ಪ್ರಾಣಿಗಳಿಗೂ ಭಯಪಡುವುದಿಲ್ಲ.

ಅಗರ್ಹಣೀಯೋ ನ ಚ ಗರ್ಹತೇಽನ್ಯಾನ್
ಸ ವೈ ವಿಪ್ರಾಃ ಪರಮಾತ್ಮಾನಮೀಕ್ಷೇತ್ ।
ವಿನೀತಮೋಹೋ ವ್ಯಪನೀತಕಲ್ಮಷೋ
ನ ಚೇಹ ನಾಮುತ್ರ ಚ ಯೋಽರ್ಥಮೃಚ್ಛತಿ ॥೩೫॥

ಇತರರನ್ನು ನಿಂದಿಸದೆ, ತಾನೂ ನಿಂದ್ಯನಾಗದಿರುವ ವಿಪ್ರನೇ ವಿಪ್ರನು. ಅಂತಹವನು ಪರಮಾತ್ಮನನ್ನು ಹೃದಯದಲ್ಲಿ ನೋಡುತ್ತಾನೆ. ಮೋಹ-ಪಾಪಗಳಿಂದ ಯಾವನು ರಹಿತನೋ ಆ ಜ್ಞಾನಿಯು ಇಹ-ಪರಲೋಕಗಳಲ್ಲಿ ಆಸಕ್ತನಾಗಿರುವುದಿಲ್ಲ.

ಅರೋಷಮೋಹಃ ಸಮಲೋಷ್ಟಕಾಂಚನಃ
ಪ್ರಹೀಣಶೋಕೋ ಗತಸಂಧಿವಿಗ್ರಹಃ ।
ಅಪೇತನಿಂದಾಸ್ತುತಿರಪ್ರಿಯಾಪ್ರಿಯ-
ಶ್ಚರನ್ನುದಾಸೀನವದೇಷ ಭಿಕ್ಷುಕಃ ॥೩೬॥

ರೋಷ-ಮೋಹಗಳಿಲ್ಲದ ಆ ಸಂನ್ಯಾಸಿಯು ಮಣ್ಣಿನ ಹೆಂಟೆಯನ್ನು, ಚಿನ್ನವನ್ನು ಸಮಾನನಾಗಿ ಕಾಣುತ್ತಾನೆ. ಧನವಿಹೀನನಾದವನು, ಸ್ನೇಹ-ಹಗೆತನ-ನಿಂದಾ-ಸ್ತುತಿ-ಪ್ರಿಯ-ಅಪ್ರಿಯ ಈ ಎಲ್ಲವನ್ನೂ ಮೀರಿ ಉದಾಸೀನನಂತೆ ಸಂಚರಿಸುವವನೆ ನಿಜವಾದ ಸಂನ್ಯಾಸಿಯು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂದನೆಯ ಅಧ್ಯಾಯ

ಪರಮಾತ್ಮನ ಸರ್ವೋತ್ತಮತ್ವ ಮತ್ತು ಶ್ರೀಹರಿಯನ್ನು ನೋಡಲು ಬೇಕಾದ ಉಪಾಯ. ಪರಮಾತ್ಮ ಜ್ಞಾನಮಾರ್ಗವನ್ನು ಶುಕರಿಗೆ ವ್ಯಾಸರು ತಿಳಿಸಿದುದು.

ವ್ಯಾಸಃ

ಪ್ರಕೃತೇಸ್ತು ವಿಕಾರಾ ಯೇ ಕ್ಷೇತ್ರಜ್ಞಸ್ಯೇಃ ಪರಿಶ್ರಿತಃ ।
ತೇ ಚೈನಂ ನ ಪ್ರಜಾನಂತಿ ಸ ತು ಜಾನಾತಿ ತಾನಪಿ ॥೧॥

ಪ್ರಕೃತಿಯ ವಿಕಾರವೆನಿಸಿದ ಮನಸ್ಸು, ಇಂದ್ರಿಯ ಮೊದಲಾದವುಗಳಿಂದ ಪರಮಾತ್ಮನು ಜೀವಾತ್ಮನನ್ನು ಈ ಸಂಸಾರದಲ್ಲಿ ಬಂಧಿಸಿದ್ದಾನೆ. ಜಡಗಳಾದ ದೇಹೇಂದ್ರಿಯಾದಿಗಳು ಅವನನ್ನು ತಿಳಿಯಲಾರವು. ಆದರೆ ಕ್ಷೇತ್ರಜ್ಞನಾದ ಭಗವಂತನು ಇವುಗಳೆಲ್ಲವನ್ನೂ ತಿಳಿದಿದ್ದಾನೆ.

ತೈಶ್ಚೈಷ ಕುರುತೇ ಕಾರ್ಯಂ ಮನಃಷಷ್ಠೈರಿಹೇಂದ್ರಿಯೈಃ ।
ಸುದಾಂತೈರಿವ ಸಂಯಂತಾ ದೃಢೈಃ ಪರಮವಾಜಿಭಿಃ ॥೨॥

ಬುದ್ಧಿವಂತನಾದ ಸಾರಥಿಯು ಚೆನ್ನಾಗಿ ಪಳಗಿರುವ ಶ್ರೇಷ್ಠವಾದ ಕುದುರೆಗಳಿಂದ ಯಾವ ರೀತಿ ರಥವನ್ನು ಚೆನ್ನಾಗಿ ನಡೆಸುತ್ತಾನೋ ಅದೇ ರೀತಿ ಕ್ಷೇತ್ರಜ್ಞನೆನಿಸಿದ ಪರಮಾತ್ಮನು ಮನಸ್ಸಿನಿಂದ ಐದು ಇಂದ್ರಿಯಗಳಿಂದ ಕೂಡಿದ ಈ ಜೀವನ ದೇಹವೆಂಬ ರಥವನ್ನು ಮುನ್ನಡೆಸುತ್ತಿದ್ದಾನೆ.

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಃ ಪರಮಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥೩॥

ಇಂದ್ರಿಯಾಭಿಮಾನಿ ದೇವತೆಗಳಿಗಿಂತಲೂ ಇಂದ್ರಿಯವಿಷಯಗಳಿಗೆ ಅಭಿಮಾನಿಗಳಾದ ದೇವತೆಗಳು ಶ್ರೇಷ್ಠರು. ಇಂದ್ರಿಯಾರ್ಥಾಭಿಮಾನಿಗಳಿಗಿಂತಲೂ ಮನೋಭಿಮಾನಿ ದೇವತೆಯು ಬಲಿಷ್ಠನು. ಮನೋಭಿಮಾನಿ ದೇವತೆಗಿಂತಲೂ ಬುದ್ಧ್ಯಭಿಮಾನಿ ದೇವತೆ ಬಲಿಷ್ಠನು. ಬುದ್ಧ್ಯಭಿಮಾನಿ ದೇವತೆಗಿಂತಲೂ ಮಹತತ್ತ್ವಾಭಿಮಾನಿ ದೇವತೆಯು ಶ್ರೇಷ್ಠನು.

ಮಹತಃ ಪರಮವ್ಯಕ್ತಮವ್ಯಕ್ತಾತ್ ಪರತೋಽಮೃತಮ್ ।
ಅಮೃತಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ॥೪॥

ಮಹತ್ತತ್ತ್ವಾಭಿಮಾನಿ ದೇವತೆಗಿಂತಲೂ ಅವ್ಯಕ್ತ ತತ್ತ್ವಾಭಿಮಾನಿನಿಯಾದ ಮಹಾಲಕುಮಿಯು ಶ್ರೇಷ್ಠಳು. ಅವ್ಯಕ್ತ ತತ್ತ್ವಾಭಿಮಾನಿ ದೇವತೆಗಿಂತಲೂ ಸರ್ವೋತ್ತಮನಾದ ಅಮೃತನೆನಿಸಿದ ಭಗವಂತನು ಶ್ರೇಷ್ಠನು. ಆ ಅಮೃತಮಯನಾದ ಪರಬ್ರಹ್ಮತತ್ತ್ವವೇ ಎಲ್ಲದಕ್ಕಿಂತಲೂ ಸರ್ವೋತ್ತಮವಾಗಿದೆ. ಪರಮಾತ್ಮನಿಗಿಂತಲೂ ಮಿಗಿಲಾದ ಯಾವ ತತ್ತ್ವಗಳೂ ಇರುವುದಿಲ್ಲ. ಅವನೇ ಶ್ರೇಷ್ಠವಾದ ಗತಿಯೂ ಆಗಿದ್ದಾನೆ.

ಏವಂ ಸರ್ವೇಷು ಭೂತೇಷು ಗೂಢೋಽಽತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ತತ್ತ್ವದರ್ಶಿಭಿಃ ॥೫॥

ಹೀಗೆ ಸಮಸ್ತ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನು ಇಂದ್ರಿಯಗಳ ಮೂಲಕ ಗೋಚರನಾಗುವುದಿಲ್ಲ. ಸೂಕ್ಷ್ಮದರ್ಶಿಗಳಾದ ಜ್ಞಾನಿಗಳು ತಮ್ಮ ಸೂಕ್ಷ್ಮವಾದ, ಶ್ರೇಷ್ಠವಾದ ಬುದ್ಧಿಯಿಂದ ಅವನನ್ನು ಕಾಣುತ್ತಾರೆ.

ಅಂತರಾತ್ಮನಿ ಸಂಲೀಯ ಮನಃಷಷ್ಠಾನಿ ಮೇಧಯಾ ।
ಇಂದ್ರಿಯಾಣೀಂದ್ರಿಯಾರ್ಥಾಂಶ್ಚ ಬಹು ಚಿಂತ್ಯಮಚಿಂತಯನ್ ॥೬॥

ಧ್ಯಾನೋಪರಮಣಂ ಕೃತ್ವಾ ವಿದ್ಯಾಸಂಪಾದಿತಂ ಮನಃ ।
ಅನೀಶ್ವರಃ ಪ್ರಶಾಂತಾತ್ಮಾ ತತೋಽರ್ಛತ್ಯಮೃತಂ ಪದಮ್ ॥೭॥

ಜ್ಞಾನಿಯಾದವನು ಬುದ್ಧಿಯ ಮೂಲಕವಾಗಿ ಮನಸ್ಸಿನಿಂದ ಸಹಿತವಾದ ಇಂದ್ರಿಯಾರ್ಥಗಳನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ ಅನೇಕ ವಿಧವಾಗಿ ಇರುವ ಪ್ರಾಪಂಚಿಕ ವಿಷಯಗಳನ್ನು ಚಿಂತಿಸದೆ, ಭಗವದ್ಜ್ಞಾನದಿಂದ ಸಂಸ್ಕಾರವನ್ನು ಹೊಂದಿದ ಮನಸ್ಸನ್ನು ಧ್ಯಾನಯೋಗದಿಂದ ಪರಮಾತ್ಮನಲ್ಲೇ ನೆಲೆಗೊಳಿಸಿ, ನಾನು ದೇವನಲ್ಲ ಎಂಬ ಭಾವನೆಯನ್ನು ತೊರೆದು, ಪ್ರಶಾಂತಾತ್ಮನಾದ ವ್ಯಕ್ತಿಯು ಅಮೃತಪದವೆನಿಸಿದ ಮೋಕ್ಷವನ್ನು ಹೊಂದುತ್ತಾನೆ.

ಇಂದ್ರಿಯಾಣಾಂ ತು ಸರ್ವೇಷಾಂ ವಶ್ಯಾತ್ಮಾ ಚಲಿತಸ್ಮೃತಿಃ ।
ಆತ್ಮನಃ ಸಂಪ್ರದಾನೇನ ಮತ್ಯೋ೯ ಮೃತ್ಯುಮುಪಾಶ್ನುತೇ ॥೮॥

ಯಾವ ವ್ಯಕ್ತಿಯು ಸಮಸ್ತ ಇಂದ್ರಿಯಗಳಿಗೂ ದಾಸನಾಗಿ, ಚಂಚಲವಾದ ಸ್ಮರಣೆಯುಳ್ಳವನಾಗಿ, ಕಾಮ-ಕ್ರೋಧಗಳಿಗೆ ತನ್ನನ್ನು ಸಮರ್ಪಿಸಿಕೊಂಡಿದ್ದಾನೋ ಅವನು ವಿನಾಶವನ್ನೇ ಹೊಂದುತ್ತಾನೆ.

ಹಿತ್ವಾ ತು ಸರ್ವಸಂಕಲ್ಪಾನ್ ಸತ್ತ್ವೇ ಚಿತ್ತಂ ನಿವೇಶಯೇತ್ ।
ಸತ್ತ್ವೇ ಚಿತ್ತಂ ಸಮಾವೇಶ್ಯ ತತಃ ಕಾಲಂಜರೋ ಭವೇತ್ ॥೯॥

ಸಮಸ್ತ ಸಂಕಲ್ಪಗಳನ್ನೂ ನೀಗಿ ಚಿತ್ತವನ್ನು ಬುದ್ಧಿಯಲ್ಲಿ ನೆಲೆಗೊಳಿಸಬೇಕು. ಹೀಗೆ ಮನಸ್ಸನ್ನು ಬುದ್ಧಿಯಲ್ಲಿ ನೆಲೆಗೊಳಿಸಿದವನು ಕಾಲವನ್ನೇ ತನ್ನಲ್ಲಿ ಜೀರ್ಣಿಸಿಕೊಳ್ಳುತ್ತಾನೆ.

ಚಿತ್ತಪ್ರಸಾದೇನ ಯತಿರ್ಜಹಾತಿ ಹಿ ಶುಭಾಶುಭಮ್ ।
ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮಾನಂತ್ಯಮಶ್ನುತೇ ॥೧೦॥

ಮನಸ್ಸಿನ ಪ್ರಸನ್ನತೆಯಿಂದ ಯತಿಯಾದವನು ಈ ಲೋಕದಲ್ಲಿ ಕಾಣುವ ಶುಭಾಶುಭಗಳನ್ನು ಬಿಟ್ಟುಬಿಡುತ್ತಾನೆ. ಸ್ವಚ್ಛವಾದ ಮನಸ್ಸಿನಿಂದ ಕೂಡಿರುವ ಯೋಗಿಯು ಯಾವಾಗಲೂ ಪರಮಾತ್ಮನಲ್ಲಿ ತನ್ನ ಬುದ್ಧಿಯನ್ನು ಕೇಂದ್ರೀಕರಿಸಿಕೊಂಡು ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ಲಕ್ಷಣಂ ತು ಪ್ರಸಾದಸ್ಯ ಯಥಾ ತೃಪ್ತಃ ಸುಖಂ ಸ್ವಪೇತ್ ।
ನಿವಾತೇ ವಾ ಯಥಾ ದೀಪೋ ದೀಪ್ಯಮಾನೋ ನ ಕಂಪತೇ ॥೧೧॥

ಮನಸ್ಸಿನ ಪ್ರಸನ್ನತೆಯುಳ್ಳವನು ಯಾವುದೇ ವಿಧದ ಚಿಂತೆಗಳಿಲ್ಲದೆ ನೆಮ್ಮದಿಯಾಗಿ ನಿದ್ರಿಸುವಂತೆ, ಗಾಳಿ ಬೀಸದ ಜಾಗದಲ್ಲಿ ದೀಪವು ಚಲಿಸದೆ ಹೇಗೆ ಬೆಳಗುತ್ತದೋ ಅದರಂತೆ ಪರಮಾತ್ಮನಲ್ಲಿಯೇ ಚಿತ್ತವುಳ್ಳವನು ಪ್ರಸನ್ನನಾಗಿರುತ್ತಾನೆ.

ಏವಂ ಪೂರ್ವಾಪರೇ ರಾತ್ರೇ ಯುಂಜನ್ನಾತ್ಮಾನಮಾತ್ಮನಾ ।
ಸತ್ತ್ವಾಹಾರವಿಶುದ್ಧಾತ್ಮಾ ಪಶ್ಯತ್ಯಾತ್ಮಾನಮಾತ್ಮನಿ ॥೧೨॥

ಹೀಗೆ ಯೋಗಿಯಾದವನು ಮಿತಾಹಾರಿಯಾಗಿ, ಶುದ್ಧವಾದ ಮನಸ್ಸಿನಿಂದ ಕೂಡಿದವನಾಗಿ ರಾತ್ರಿಯ ಮೊದಲು ಮತ್ತು ಕೊನೆಯ ಯಾಮಗಳಲ್ಲಿ ತನ್ನ ಮನಸ್ಸನ್ನು

ಪರಮಾತ್ಮನಲ್ಲಿ ಏಕಾಗ್ರಗೊಳಿಸುತ್ತಿದ್ದರೆ ಅಂತಹ ಅಂತರ್ಯಾಮಿಯಾದ ಪರಮಾತ್ಮನನ್ನು ತನ್ನಲ್ಲಿಯೇ ಕಂಡುಕೊಳ್ಳುತ್ತಾನೆ.

ರಹಸ್ಯಂ ಸರ್ವವೇದಾನಾಮನ್ಯೈತಿಹ್ಯಮನಾಗಮಮ್ ।
ಆತ್ಮಪ್ರತ್ಯಯಿಕಂ ಶಾಸ್ತ್ರಮಿದಂ ಪುತ್ರಾನುಶಾಸನಮ್ ॥೧೩॥

ಮಗನೇ, ಇಲ್ಲಿಯ ತನಕ ನಿನಗಾಗಿ ಉಪದೇಶಿಸಿದ ಈ ಶಾಸ್ತ್ರವು ಸಮಸ್ತ ವೇದಗಳ ರಹಸ್ಯವೆಂದು ತಿಳಿದುಕೊ. ಈ ರಹಸ್ಯವನ್ನು ಕೇವಲ ಅನುಮಾನದಿಂದಾಗಲಿ, ಶಾಸ್ತ್ರದಿಂದಾಗಲಿ ತಿಳಿಯಲಾಗುವುದಿಲ್ಲ. ಅನುಭವೈಕವೇದ್ಯವಾಗಿದೆ.

ಧರ್ಮಾಖ್ಯಾನೇಷು ಸರ್ವೇಷು ಸತ್ಯಾಖ್ಯಾನೇಷು ಯದ್ವಸು ।
ದೃಶೇತಋಕ್ಸಹಸ್ರಾಣಿ ನಿರ್ಮಥ್ಯಾಮೃತಮುದ್ಧೃತಮ್ ॥೧೪॥

ಈ ಪರಮಾತ್ಮನೆಂಬ ವಸ್ತುವು ರಹಸ್ಯತತ್ತ್ವವನ್ನು ಧರ್ಮಾಖ್ಯಾನವೆನಿಸಿದ ಸ್ಮೃತಿ ಗ್ರಂಥಗಳಲ್ಲಿ, ಸತ್ಯಾಖ್ಯಾನವೆನಿಸಿದ ವೇದ-ಪುರಾಣಗಳಲ್ಲಿ, ಸಮಸ್ತ ಶಾಸ್ತ್ರಗ್ರಂಥಗಳಲ್ಲಿ ಹೇಳಲ್ಪಟ್ಟ ಸಂಪತ್ತು ಎನಿಸಿದೆ. ಪ್ರತ್ಯಕ್ಷ ಸಹಕೃತವಾದ ಸಾವಿರಾರು ಋಗ್ವೇದದ ಮಂತ್ರವನ್ನು ಮಥನ ಮಾಡಿ ಈ ಭಗವತ್ತತ್ತ್ವವೆಂಬ ಅಮೃತವು ತೆಗೆಯಲ್ಪಟ್ಟಿದೆ.

ನವನೀತಂ ಯಥಾ ದಧ್ನಃ ಕಾಷ್ಠಾದಗ್ನಿರ್ಯಥೈವ ಚ ।
ತಥೈವ ವಿದುಷಾಂ ಜ್ಞಾನಂ ಪುತ್ರಹೇತೋಃ ಸಮುದ್ಧೃತಮ್ ।
ಸ್ನಾತಕಾನಾಮಿದಂ ಶಾಸ್ತ್ರಂ ವಾಚ್ಯಂ ಪುತ್ರಾನುಶಾಸನಮ್ ॥೧೫॥

ಯಾವ ರೀತಿ ಜನರು ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆಯುತ್ತಾರೋ, ಅರಣಿಯನ್ನು ಮಥನ ಮಾಡಿ ಅಗ್ನಿಯನ್ನು ಪಡೆಯುತ್ತಾರೋ ಅದರಂತೆ ಶುಕನೇ, ನಿನಗಾಗಿ ಅನೇಕ ವಿದ್ವಾಂಸರ ಬುದ್ಧಿಯನ್ನು ಒಟ್ಟಾಗಿ ಮಥನ ಮಾಡಿ, ಈ ಬ್ರಹ್ಮತತ್ತ್ವವೆಂಬ ನವನೀತವನ್ನು ಹೊರತೆಗೆದಿದ್ದೇನೆ. ಈ ತತ್ತ್ವವನ್ನು ನನ್ನ ಆದೇಶದಂತೆ ಉತ್ತಮಾಧಿಕಾರಿಗಳಿಗಲ್ಲದ ಬೇರೆಯವರಿಗೆ ಉಪದೇಶಿಸಬಾರದು. ವೇದವ್ರತರೆನಿಸಿದ ಸ್ನಾತಕರಿಗೆ ಇದನ್ನು ಉಪದೇಶಿಸಬಹುದು.

ತದಿದಂ ನಾಪ್ರಶಾಂತಾಯ ನಾದಾಂತಾಯಾತಪಸ್ವಿನೇ ।
ನಾವೇದವಿದುಷೇ ವಾಚ್ಯಂ ತಥಾ ನಾನುಗತಾಯ ಚ ॥೧೬॥

ಯಾರಿಗೆ ಭಗವನ್ನಿಷ್ಠವಾದ ಬುದ್ಧಿ, ಇಂದ್ರಿಯನಿಗ್ರಹ, ತಪಸ್ಸು, ವೇದಾಧ್ಯಯನ, ಗುರೂಪಾಸನೆ ಇವುಗಳಲ್ಲಿ ಯಾವುದೂ ಇಲ್ಲವೋ ಅಂತಹವನು ಈ ಜ್ಞಾನೋಪದೇಶಕ್ಕೆ ಪಾತ್ರನೆನಿಸಲಾರ.

ನಾಸೂಯಕಾಯಾನೃಜವೇ ನ ಚಾನಿರ್ದಿಷ್ಟಕಾರಿಣೇ ।
ನ ತರ್ಕಶಾಸ್ತ್ರದಗ್ಧಾಯ ತಥೈವ ಪಿಶುನಾಯ ಚ ॥೧೭॥

ಅಸೂಯಾಪರನಿಗೆ, ಅವಿಧೇಯನಿಗೆ, ಕುಟಿಲ ಬುದ್ಧಿಯುಳ್ಳವನಿಗೆ, ಹೇಳಿದ ಕಾರ್ಯವನ್ನು ಮಾಡದವನಿಗೆ, ತರ್ಕಶಾಸ್ತ್ರದಲ್ಲಿಯೇ ಮನಸ್ಸನ್ನು ದೃಢವಾಗಿಸಿಕೊಂಡವನಿಗೆ, ಚಾಡಿಕೋರನಿಗೆ ಈ ಮೋಕ್ಷಶಾಸ್ತ್ರವನ್ನು ಉಪದೇಶಿಸಬಾರದು.

ಶ್ಲಾಘತೇ ಶ್ಲಾಘನೀಯಾಯ ಪ್ರಶಾಂತಾಯ ತಪಸ್ವಿನೇ ।
ಇದಂ ಪ್ರಿಯಾಯ ಪುತ್ರಾಯ ಶಿಷ್ಯಾಯಾನುಗತಾಯ ಚ ।
ರಹಸ್ಯಧರ್ಮಂ ವಕ್ತವ್ಯಂ ನಾನ್ಯಸ್ಮೈ ತು ಕಥಂಚನ ॥೧೮॥

ಈ ರಹಸ್ಯವಾದ ಪರತತ್ತ್ವವನ್ನು ತತ್ತ್ವಜ್ಞಾನವನ್ನು ಪ್ರಶಂಸಿಸುವ, ಹೊಗಳಿಸಿಕೊಳ್ಳುವ ಗುಣಗಳುಳ್ಳ, ಪ್ರಶಾಂತನಾದ ತಪಸ್ವಿಯಾದ, ತನ್ನ ಪ್ರಿಯ ಪುತ್ರನಿಗಾಗಲಿ, ವಿಧೇಯನಾದ ಶಿಷ್ಯನಿಗಾಗಲಿ ಉಪದೇಶಿಸಬೇಕು. ಈ ರಹಸ್ಯ ಧರ್ಮವನ್ನು ಯಾವುದೇ ಕಾರಣದಿಂದ ಇಂತಹ ಅರ್ಹತೆಯನ್ನು ಪಡೆಯದಿದ್ದವನಿಗೆ ಉಪದೇಶಿಸಬಾರದು.

ಯದ್ಯಪ್ಯಸ್ಯ ಮಹೀಂ ದದ್ಯಾದ್ ರತ್ನಪೂರ್ಣಾಮಿಮಾಂ ನರಃ ।
ಇದಮೇವ ತತಃ ಶ್ರೇಯ ಇತಿ ಮನ್ಯೇತ ತತ್ತ್ವವಿತ್ ॥೧೯॥

ಸಮಸ್ತ ರತ್ನಗಳಿಂದ ಸಮೃದ್ಧವಾದ ಸಮಗ್ರ ಈ ಭೂಮಂಡಲವನ್ನೇ ದಕ್ಷಿಣೆಯಾಗಿ ನೀಡಿದರೂ ತತ್ತ್ವಜ್ಞಾನಿಗೆ ಈ ಜ್ಞಾನದಿಂದ ಉಂಟಾಗುವಷ್ಟು ತೃಪ್ತಿ ಆ ಭೂದಾನದಿಂದ ಲಭಿಸದು. ರತ್ನಪೂರ್ಣವಾದ ಭೂಮಿಗಿಂತಲೂ ಈ ತತ್ತ್ವಜ್ಞಾನವನ್ನೇ ಶ್ರೇಷ್ಠವೆಂದು ಭಾವಿಸುತ್ತಾನೆ.

ಅತೋ ಗುಹ್ಯತರಾರ್ಥಂ ತದಧ್ಯಾತ್ಮಮತಿಮಾನುಷಮ್ ।
ಯತ್ತನ್ಮಹರ್ಷಿಭಿರ್ದೃಷ್ಟಂ ವೇದಾಂತೇಷು ಚ ಗೀಯತೇ ।
ತತ್ತೇಹಂ ಸಂಪ್ರವಕ್ಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೦॥

ಮಗನೇ, ನೀನು ನನ್ನನ್ನು ಕುರಿತು ಯಾವ ಪ್ರಶ್ನೆಗಳನ್ನು ಕೇಳಿದೆಯೋ ಇದಕ್ಕಿಂತಲೂ ರಹಸ್ಯವೆನಿಸಿದ, ಅಲೌಕಿಕವಾದ, ಮನುಷ್ಯರಿಂದ ತಿಳಿಯಲಾಗದ, ಮಹರ್ಷಿಗಳಿಂದ ನೋಡಲ್ಪಡುತ್ತಿರುವ, ವೇದಾಂತಗಳಲ್ಲಿ ಕೊಂಡಾಡಲ್ಪಡುತ್ತಿರುವ ಅಧ್ಯಾತ್ಮಜ್ಞಾನವನ್ನು ಉಪದೇಶಿಸುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಏಕಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆರಡನೆಯ ಅಧ್ಯಾಯ

ವ್ಯಾಸರು ಶುಕಮುನಿಗೆ ಅಧ್ಯಾತ್ಮ ವಿಚಾರವನ್ನು ತಿಳಿಸಿದುದು.

ಶುಕಃ

ಅಧ್ಯಾತ್ಮಂ ವಿಸ್ತರೇಣೇಹ ಪುನರೇವ ವದಸ್ವ ಮೇ ।
ಯದಧ್ಯಾತ್ಮಂ ಯಥಾ ಚೇದಂ ಭಗವನ್ನೃಷಿಸತ್ತಮ ॥೧॥

ಪೂಜ್ಯರೇ, ಮುನಿಶ್ರೇಷ್ಠರೇ, ಪುನಃ ನೀವು ಅಧ್ಯಾತ್ಮ ಶಾಸ್ತ್ರವನ್ನೇ ನನಗೆ ವಿಸ್ತಾರವಾಗಿ ಹೇಳಿರಿ. ಅಧ್ಯಾತ್ಮವೆಂದರೆ ಏನು? ಇದನ್ನು ತಿಳಿಯುವುದು ಹೇಗೆ? ಎಂದು ವಿವರಿಸಿರಿ.

ವ್ಯಾಸಃ

ಅಧ್ಯಾತ್ಮಂ ಯದಿದಂ ತಾತ ಪುರುಷಸ್ಯೇಹ ವಿದ್ಯತೇ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ತಸ್ಯ ವ್ಯಾಖ್ಯಾಮಿಮಾಂ ಶೃಣು ॥೨॥

ಮಗನೇ, ಮನುಷ್ಯನಿಗಾಗಿ ಯಾವ ಅಧ್ಯಾತ್ಮವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆಯೋ ಅದನ್ನು ನಿನಗೆ ವ್ಯಾಖ್ಯಾನ ಮಾಡುತ್ತೇನೆ. ಅಧ್ಯಾತ್ಮಕ್ಕೆ ಸಂಬಂಧಿಸಿದ ವಿಚಾರವನ್ನು ಹೇಳುತ್ತೇನೆ, ಕೇಳು.

ಭೂಮಿರಾಪಸ್ತಥಾ ಜ್ಯೋತಿರ್ವಾಯುರಾಕಾಶಮೇವ ಚ ।
ಮಹಾಭೂತಾನಿ ಭೂತಾನಾಂ ಸಾಗರಸ್ಯೋರ್ಮಯೋ ಯಥಾ ॥೩॥

ಪೃಥಿವಿ, ಜಲ, ಅಗ್ನಿ, ವಾಯು, ಆಕಾಶ ಎಂಬ ಈ ಪಂಚಮಹಾಭೂತಗಳು ಪ್ರಾಣಿಗಳ ಶರೀರಗಳಿಗೆ ಕಾರಣಗಳಾದ ದ್ರವ್ಯಗಳೆನಿಸಿವೆ. ಸಾಗರದಲ್ಲಿ ಹುಟ್ಟುವ ಅಲೆಗಳು ಮೇಲೇಳುತ್ತಾ ಪುನಃ ನೀರಿನಲ್ಲೇ ಲಯ ಹೊಂದುವಂತೆ ಪ್ರಾಣಿಗಳಿಗೆ ಪಂಚಭೂತಗಳು ಶರೀರ ರೂಪದಲ್ಲಿ ಅಭಿವ್ಯಕ್ತಿಯನ್ನು ಪಡೆದು, ಪುನಃ ಈ ಪಂಚಭೂತಗಳು ಅಲ್ಲೇ ಲಯವನ್ನು ಹೊಂದುತ್ತವೆ.

ಪ್ರಸಾಯ್ಯೇಹ ಯಥಾಂಗಾನಿ ಕೂರ್ಮಃ ಸಂಹರತೇ ಪುನಃ ।
ತದ್ವನ್ಮಹಾಂತಿ ಭೂತಾನಿ ಯವೀಯಃಸು ವಿಕುರ್ವತೇ ॥೪॥

ಯಾವ ರೀತಿ ಕೂರ್ಮವು ತನಗೆ ಬೇಕಾದಾಗ ತನ್ನ ಎಲ್ಲ ಅವಯವಗಳನ್ನು ಹೊರಗೆ ಚೆಲ್ಲಿ, ಬೇಕಾದಾಗ ಪುನಃ ತನ್ನೊಳಗೆ ಸೆಳೆದುಕೊಳ್ಳುವುದೋ ಇದರಂತೆ ಮಹಾಭೂತಗಳು ದೇಹರೂಪದಲ್ಲಿ ಸ್ಥೂಲರೂಪವನ್ನು ಹೊಂದಿ ದೇಹ ಪತನವಾದ ಬಳಿಕ ಸೂಕ್ಷ್ಮವಾಗಿ ಭಾಗಶಃ ಆತ್ಮನಲ್ಲಿಯೇ ಸೇರಿಕೊಳ್ಳುತ್ತವೆ.

ವ್ಯಾಖ್ಯಾನ ವಿಶೇಷ– ಪಂಚಭೂತಗಳು ಭಾಗಶಃ ಸೂಕ್ಷ್ಮಭಾಗದಿಂದ ಜೀವನಲ್ಲಿ ಸೇರಿ ಮೃತನಾದ ಬಳಿಕ ಸಾಗುವುದರಿಂದ ಪಂಚಭೂತಗಳ ಸಂಬಂಧವನ್ನು ಜೀವಾತ್ಮನು ಕೂಡಲೇ ಕಳೆದುಕೊಳ್ಳಲಾಗುವುದಿಲ್ಲ. ಈ ಸೂಕ್ಷ್ಮವಾದ ಪಂಚಭೂತಗಳೇ ಸ್ಥೂಲವಾದ ದೇಹಪ್ರಾಪ್ತಿಗೆ ಕಾರಣವಾಗುತ್ತವೆ. ಸಮುದ್ರದ ಸೂಕ್ಷ್ಮ ಅಲೆಗಳೇ ಸ್ಥೂಲ ಅಲೆಗಳಾಗಿರುವಂತೆ ಭಾಗಶಃ ಜೀವನ ಜೊತೆಗೆ ಹೋದ ಪಂಚಭೂತಗಳೇ ಪುನಃ ಜನ್ಮಾಂತರದಲ್ಲಿ ಸ್ಥೂಲದೇಹಕ್ಕೆ ಕಾರಣವಾಗುತ್ತವೆ. ಸಮುದ್ರದ ಅಲೆಗಳು ನಿರಂತರ ಹೀಗೆ ಉತ್ಪತ್ತಿಯಾಗುವಂತೆ ಜೀವನಿಗೂ ನಿರಂತರ ಈ ಪಂಚಭೂತಗಳ ಸಮಷ್ಟಿಯಾದ ಈ ದೇಹದ ಅಲೆಗಳು ಹುಟ್ಟುತ್ತಲೇ ಇರುತ್ತವೆ. ಆದ್ದರಿಂದ ಜೀವಾತ್ಮನು ವಿರಕ್ತನಾಗಿ, ಶ್ರವಣ-ಮನನಾದಿಗಳ ಮೂಲಕ ಭಗವತ್ತತ್ತ್ವಜ್ಞೆಯನ್ನು ಹೊಂದಿ, ಆ ಪರಮಾತ್ಮನ ಪ್ರಸಾದಕ್ಕೆ ಭಾಗಿಯಾಗಿ ಪಂಚಭೂತಗಳ ಬಂಧನವನ್ನು ಪರಿಹರಿಸಿಕೊಳ್ಳಬೇಕು. 'ಭೂತಬಂಧಸ್ತು ಸಂಸಾರಃ ಮುಕ್ತಿಸ್ತೇಭ್ಯೋ ವಿಮೋಚನಂ' ಎಂದು ಸಾಧನಾಧ್ಯಾಯದಲ್ಲಿ ನಿರೂಪಿಸಿರುವ ಪ್ರಮೇಯವನ್ನು ವ್ಯಾಸರು ಇಲ್ಲಿ ತಿಳಿಸಿದ್ದಾರೆ.

ಇತಿ ತನ್ಮಯಮೇವೇದಂ ಸರ್ವಂ ಸ್ಥಾವರಜಂಗಮಮ್ ।
ಸರ್ಗೇ ಚ ಪ್ರಲಯೇ ಚೈವ ತಸ್ಮಾನ್ನಿರ್ದಿಶ್ಯತೇ ತಥಾ ॥೫॥

ಹೀಗೆ ಸಮಸ್ತ ಚರಾಚರ ಪ್ರಾಣಿಗಳೆಲ್ಲವೂ ಪಂಚಭೂತಗಳ ಸಂಬಂಧವನ್ನು ನಿತ್ಯವೂ ಪಡೆದಿರುತ್ತವೆ. ಸೃಷ್ಟಿಯ ಕಾಲದಲ್ಲಿ ಪಂಚಭೂತಗಳಿಂದಲೇ ಈ ಸ್ಥಾವರ-ಜಂಗಮಗಳ ಉತ್ಪತ್ತಿಯಾಗುತ್ತದೆ. ಲಯ ಕಾಲದಲ್ಲಿ ಕಣ್ಣಿಗೆ ಕಾಣುವ ಈ ಸ್ಥಾವರ-ಜಂಗಮಗಳೆಲ್ಲವೂ ಪಂಚಭೂತಗಳಲ್ಲೆ ಲಯ ಹೊಂದುತ್ತವೆ.

ಮಹಾಭೂತಾನಿ ಪಂಚೈವ ಸರ್ವಭೂತೇಷು ಭೂತಕೃತ್ ।
ಅಕರೋತ್ ತಾತ ವೈಷಮ್ಯಂ ಯಸ್ಮಿನ್ ಯದನುಪಶ್ಯತಿ ॥೬॥

ಸಮಸ್ತ ಪ್ರಾಣಿಗಳಲ್ಲಿ ಪಂಚಮಹಾಭೂತಗಳ ಸಮಾವೇಶವೇ ಕಾಣಿಸುತ್ತಿದೆ. ಹೀಗಿದ್ದರೂ ಪಂಚಮಹಾಭೂತಗಳ ಸೃಷ್ಟಿಕರ್ತನಾದ ಭಗವಂತನು ಪ್ರಾಣಿಗಳ ಕರ್ಮಾನುಗುಣವಾಗಿ ಪಂಚಮಹಾಭೂತಗಳನ್ನು ಸಮಾವೇಶಗೊಳಿಸಿದ್ದಾನೆ. ಆದ್ದರಿಂದಲೇ ಆಯಾ ಜೀವರ ಕರ್ಮಾನುಗುಣವಾಗಿ ಅವರ ಪಂಚಭೂತಾತ್ಮಕವಾದ ಶರೀರದಲ್ಲಿಯೂ ವ್ಯತ್ಯಾಸವು ಕಾಣುತ್ತದೆ.

ಶುಕಃ

ಅಕರೋದ್ ಯಚ್ಛರೀರೇಷು ಕಥಂ ತದುಪಲಕ್ಷಯೇತ್ ।
ಇಂದ್ರಿಯಾಣಿ ಗುಣಾಃ ಕೇಚಿತ್ ಕಥಂ ತಾನುಪಲಕ್ಷಯೇತ್ ॥೭॥

ತಂದೆಯೇ, ಬ್ರಹ್ಮನು ಮನುಷ್ಯ , ಪಶು, ಪಕ್ಷಿಗಳ ಶರೀರದಲ್ಲಿ ಏರ್ಪಡಿಸಿರುವ ವೈಷಮ್ಯ ಭಾವವನ್ನು ನಾವು ಹೇಗೆ ತಿಳಿಯಬಹುದು? ಶರೀರದಲ್ಲಿ ಇಂದ್ರಿಯಗಳು ಇವೆ. ಗುಣಗಳು ಇವೆ. ಇವುಗಳಲ್ಲಿ ಪಂಚಮಹಾಭೂತಗಳನ್ನು ವಿಭಾಗಿಸಿ ತಿಳಿಯುವ ಕ್ರಮ ಹೇಗೆ?

ವ್ಯಾಸಃ

ಏತತ್ತೇ ವರ್ತಯಿಷ್ಯಾಮಿ ಯಥಾವದಿಹ ದರ್ಶನಮ್ ।
ಶೃಣು ತತ್ತ್ವಮಿಹೈಕಾಗ್ರೋ ಯಥಾತತ್ತ್ವಂ ಯಥಾ ಚ ತತ್ ॥೮॥

ಮಗನೇ, ಈ ವಿಷಯದಲ್ಲಿ ಕ್ರಮವಾಗಿ ಇರುವ ತತ್ತ್ವವನ್ನು ನಿನಗೆ ತಿಳಿಸುತ್ತೇನೆ. ಸಮಸ್ತ ವಿಷಯಗಳು ಯಥಾರ್ಥವಾಗಿ ಹೇಗೆ ಇರುತ್ತವೆ ಎಂಬುದನ್ನು ಹೇಳುತ್ತೇನೆ. ಏಕಾಗ್ರತೆಯಿಂದ ಕೇಳು.

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಸಂಭವಮ್ ।
ಪ್ರಾಣಶ್ಚೇಷ್ಟಾ ತಥಾ ಸ್ಪರ್ಶ ಏತೇ ವಾಯುಗುಣಾಸ್ತ್ರಯಃ ॥೯॥

ಶಬ್ದ, ಶ್ರೋತ್ರೇಂದ್ರಿಯದ ದ್ವಾರಾ ಇವು ಆಕಾಶವೆಂಬ ಭೂತದಿಂದ ಉಂಟಾದವು. ಪ್ರಾಣ, ಚೇಷ್ಟೆ, ಸ್ಪರ್ಶ ಎಂಬ ಈ ಮೂರು ವಾಯುತತ್ತ್ವದ ಗುಣಗಳು.

ರೂಪಂ ಚಕ್ಷುರ್ವಿಪಾಕಶ್ಚ ತ್ರಿಧಾ ಜ್ಯೋತಿರ್ವಿಧೀಯತೇ ।
ರಸೋಽಥ ರಸನಂ ಸ್ನೇಹೋ ಗುಣಾಸ್ತ್ವೇತೇ ತ್ರಯೋಽಂಭಸಾಮ್ ॥

ರೂಪ, ಕಣ್ಣು, ಜಠರಾಗ್ನಿ ಎಂಬ ಮೂರು ಅಗ್ನಿಯ ಗುಣಗಳು. ರಸ, ನಾಲಿಗೆ, ಜಿಡ್ಡು - ಈ ಮೂರು ಜಲತತ್ತ್ವದ ಗುಣಗಳು.

ಘ್ರೇಯಂ ಘ್ರಾಣಂ ಶರೀರಂ ಚ ಭೂಮೇರೇತೇ ಗುಣಾಸ್ತ್ರಯಃ ।
ಏತಾವಾನಿಂದ್ರಿಯಗ್ರಾಮೋ ವ್ಯಾಖ್ಯಾತಃ ಪಾಂಚಭೌತಿಕಃ ॥೧೧॥

ಗಂಧ, ಮೂಗು, ಶರೀರ - ಈ ಮೂರು ಪೃಥಿವಿ ತತ್ತ್ವದ ಗುಣಗಳು. ಹೀಗೆ ಇಂದ್ರಿಯ ಸಮುದಾಯಗಳಿಂದ ಸಹಿತವಾದ ಈ ಶರೀರವನ್ನು ಪಾಂಚಭೌತಿಕ ಎನ್ನುತ್ತಾರೆ.

ವಾಯೋಃ ಸ್ಪರ್ಶೋ ರಸೋಽದ್ಭ್ಯಶ್ಚ ಜ್ಯೋತಿಷೋ ರೂಪಮುಚ್ಯತೇ ।
ಆಕಾಶಪ್ರಭವಃ ಶಬ್ದೋ ಗಂಧೋ ಭೂಮಿಗುಣಃ ಸ್ಮೃತಃ ॥೧೨॥

ಸ್ಪರ್ಶವು ವಾಯುವಿನ ಗುಣ. ರಸವು ನೀರಿನ ಗುಣ. ರೂಪವು ತೇಜಸ್ಸಿನ ಗುಣ. ಶಬ್ದವು ಆಕಾಶದ ಗುಣ. ಗಂಧವು ಭೂಮಿಯ ಗುಣ ಎನ್ನುತ್ತಾರೆ.

ಮನೋ ಬುದ್ಧಿಶ್ಚ ಭಾವಶ್ಚ ತ್ರಯ ಏತೇಽಽತ್ಮಯೋನಿಜಾಃ ।
ನ ಗುಣಾನತಿವರ್ತಂತೇ ಗುಣೇಭ್ಯಃ ಪರಮಾ ಮತಾಃ ॥೧೩॥

ಮನಸ್ಸು , ಬುದ್ಧಿ, ಸ್ವಭಾವ - ಈ ಮೂರು ಮನೋಮಯಗಳೆನಿಸುತ್ತವೆ. ಬಾಹ್ಯವಾದ ರೂಪ-ರಸಾದಿಗಳಿಗಿಂತಲೂ ಇವು ಶ್ರೇಷ್ಠವಾದವು. ಆದರೆ ರೂಪ-ರಸಾದಿ ಗುಣಗಳನ್ನು ಅತಿಕ್ರಮಿಸಿ ಮನಸ್ಸು, ಬುದ್ಧಿ, ಸ್ವಭಾವಗಳು ಹೋಗುವುದಿಲ್ಲ.

ಇಂದ್ರಿಯಾಣಿ ನರೇ ಪಂಚ ಷಷ್ಠಂ ತು ಮನ ಉಚ್ಯತೇ ।
ಸಪ್ತಮೀಂ ಬುದ್ಧಿಮೇವಾಹುಃ ಕ್ಷೇತ್ರಜ್ಞಂ ಪುನರಷ್ಟಮಮ್ ॥೧೪॥

ಮನುಷ್ಯನಿಗೆ ಐದು ಇಂದ್ರಿಯಗಳಿವೆ. ಆರನೆಯ ಇಂದ್ರಿಯ ಮನಸ್ಸೆನಿಸಿದೆ. ಏಳನೆಯದ್ದು ಬುದ್ಧಿ ಎನಿಸಿದೆ. ಜೀವನನ್ನು ಎಂಟನೆಯವನು ಎಂದು ಹೇಳುತ್ತಾರೆ.

ಚಕ್ಷುರಾಲೋಚನಾಯೈವ ಸಂಶಯಂ ಕುರುತೇ ಮನಃ ।
ಬುದ್ಧಿರಧ್ಯವಸಾನಾಯ ಸಾಕ್ಷೀ ಕ್ಷೇತ್ರಜ್ಞ ಉಚ್ಯತೇ ॥೧೫॥

ಕಣ್ಣು ರೂಪವನ್ನು ನೋಡುತ್ತದೆ. ಮನಸ್ಸು ಇದೋ ಅದೋ ಎಂದು ಸಂಶಯವನ್ನು ಹೊಂದುವ ಸ್ವಭಾವವುಳ್ಳದ್ದು. ಬುದ್ಧಿಯು ನಿರ್ಣಯ ಮಾಡುವ ಗುಣವುಳ್ಳದ್ದು. ಇದೆಲ್ಲದಕ್ಕೂ ಸಾಕ್ಷಿಯಾಗಿರುವವನು ಕ್ಷೇತ್ರಜ್ಞನೆನಿಸುತ್ತಾನೆ.

ರಜಸ್ತಮಶ್ಚ ಸತ್ತ್ವಂ ಚ ತ್ರಯ ಏತೇ ಸ್ವಯೋನಿಜಾಃ ।
ಸಮಾಃ ಸರ್ವೇಷು ಭೂತೇಷು ತದ್ಗುಣೇಷೂಪಲಕ್ಷಯೇತ್ ॥೧೬॥

ಸತ್ತ್ವ-ರಜಸ್-ತಮೋಗುಣಗಳು ಅವುಗಳಿಗೆ ಮೂಲಕಾರಣವೆನಿಸಿದ ಪ್ರಕೃತಿಯಿಂದ ಉತ್ಪತ್ತಿಯನ್ನು ಹೊಂದಿವೆ. ಎಲ್ಲ ಭೂತಗಳಲ್ಲಿಯೂ ಈ ಮೂರು ಗುಣಗಳಿವೆ. ಮನುಷ್ಯನ ಕಾರ್ಯಗಳ ಮೂಲಕ ಈ ಗುಣಗಳನ್ನು ಗುರುತಿಸಬಹುದು.

ಯಥಾ ಕೂರ್ಮ ಇಹಾಂಗಾನಿ ಪ್ರಸಾರ್ಯ ವಿನಿಯಚ್ಛತಿ ।
ಏವಮೇವೇಂದ್ರಿಯಗ್ರಾಮಂ ಬುದ್ಧಿಃ ಸೃಷ್ಟಾ ನಿಯಚ್ಛತಿ ॥೧೭॥

ಹೇಗೆ ಆಮೆಯು ಬೇಕಾದಾಗ ತನ್ನ ಅವಯವಗಳನ್ನು ಹೊರಗೆ ಚೆಲ್ಲಿ, ಪುನಃ ಬೇಕಾದಾಗ ಒಳಗೆ ಸೆಳೆದುಕೊಳ್ಳುವುದೋ ಇದರಂತೆ ಬುದ್ಧಿಯು ಸ್ವಾಧೀನದಲ್ಲಿರುವ ಇಂದ್ರಿಯಗಳ ಸಮೂಹವನ್ನು ಬೇಕಾದಾಗ ವಿಷಯಗಳ ಕಡೆ ಕಳುಹಿಸಿ ಪುನಃ ಅವುಗಳಿಂದ ಹಿಂದಕ್ಕೆ ಸೆಳೆದುಕೊಳ್ಳುತ್ತದೆ.

ಯದೂರ್ಧ್ವಂ ಪಾದತಳಯೋರವಾಙ್ಮೂರ್ಧ್ನಶ್ಚ ಪಶ್ಯತಿ ।
ಏತಸ್ಮಿನ್ನೇವ ಕೃತ್ಯೇ ವೈ ವರ್ತತೇ ಬುದ್ಧಿರುತ್ತಮಾ ॥೧೮॥

ಈ ಯಾವ ಕಣ್ಣಿಗೆ ಕಾಣುವ ಜಗತ್ತನ್ನು ಮನುಷ್ಯನು ತನ್ನ ಬುದ್ಧಿಯಿಂದ ಭಗವದಧೀನವೆಂದು ನೋಡುತ್ತಾನೋ ಅರ್ಥಾತ್ 'ಪಾತಾಲಮೇತಸ್ಯ ಹಿ

ಪಾದಮೂಲಮ್' ಎಂಬ ಭಾಗವತದ ವಚನಗಳಂತೆ ಈ ಜಗತ್ತು ಭಗವಂತನ ಪಾದತಲಗಳಿಂದ ಮೇಲಕ್ಕೂ ಇದೆ ಎಂದು ಯೋಚಿಸುತ್ತಾನೋ ಎಂದರೆ ತ್ರಿವಿಕ್ರಮಾವತಾರದಲ್ಲಿ ಭಗವಂತನು ಈ ಜಗತ್ತನ್ನು ತನ್ನಿಂದ ಕೆಳಗಡೆ ನೋಡುತ್ತಾನೆ. ವಾಮನಾವತಾರದಲ್ಲಿ ತನ್ನಿಂದ ಮೇಲೆ ನೋಡುತ್ತಾನೆ. ಅವನ ಶಕ್ತಿಯಿಂದ ಈ ಜಗತ್ತು ತುಂಬಾ ಕೆಳಗಿದೆ ಎಂದು ನೋಡುತ್ತಾನೆ. ಅವನ ರೂಪವಿಶೇಷಗಳೆಲ್ಲವೂ ಈ ಜಗತ್ತಿಗಿಂತ ಶ್ರೇಷ್ಠವಾದವುಗಳೆಂದು ನೋಡುತ್ತಾನೆ. ಈ ರೀತಿಯಾಗಿ ಭಗವಂತನ ಬುದ್ಧಿಯಲ್ಲಿ ಜಗತ್ತು ನೆಲೆಸಿದೆ. ಈ ಜಗತ್ತಿಗೆಲ್ಲ ನಿಯಾಮಕನಾದವನು ಭಗವಂತನಾಗಿದ್ದಾನೆ ಎಂದು ಭಗವಂತನ ವ್ಯಾಪಾರಗಳನ್ನು ಯಾವ ಸಾಧಕನು ತನ್ನ ಬುದ್ಧಿಯಿಂದ ಯೋಚಿಸುತ್ತಿರುತ್ತಾನೋ ಅವನ ಬುದ್ಧಿಯೇ ಉತ್ತಮ ಬುದ್ಧಿ ಎಂದು ಕರೆಸಿಕೊಳ್ಳುತ್ತದೆ.

ಗುಣಾನುನ್ನೀಯತೇ ಬುದ್ಧಿರ್ಬುದ್ಧಿರೇವೇಂದ್ರಿಯಾಣ್ಯಪಿ ।
ಮನಃಷಷ್ಠಾನಿ ಸರ್ವಾಣಿ ಬುದ್ಧ್ಯಭಾವೇ ಕುತೋ ಗುಣಾಃ ॥೧೯॥

ಬುದ್ಧಿಯು ವೈರಾಗ್ಯಾದಿ ಗುಣಗಳನ್ನು ಉನ್ನತ ಮಟ್ಟಕ್ಕೆ ಏರಿಸುತ್ತದೆ. ಇದೇ ಬುದ್ಧಿಯು ಶ್ರೋತ್ರಾದಿ ಬಾಹ್ಯೇಂದ್ರಿಯಗಳನ್ನು ನಿಯಮಿಸುತ್ತದೆ. ಮನಸ್ಸು ಮತ್ತು ಇಂದ್ರಿಯಗಳೊಡನೆ ಬುದ್ಧಿಯು ಸಮಾವೇಶಗೊಳ್ಳದಿದ್ದಲ್ಲಿ ವಿಷಯಗಳ ಅನುಭವವು ಜೀವನಿಗೆ ಹೇಗೆ ಬರಲು ಸಾಧ್ಯ ?

ತತ್ರ ಯತ್ ಪ್ರೀತಿಸಂಯುಕ್ತಂ ಕಿಂಚಿದಾತ್ಮನಿ ಲಕ್ಷಯೇತ್ ।
ಪ್ರಶಾಂತಮಿವ ಸಂಶುದ್ಧಂ ಸತ್ತ್ವಂ ತದುಪಧಾರಯೇತ್ ॥೨೦॥

ಜೀವನು ತನ್ನ ಮನಸ್ಸಿನಲ್ಲಿ ಆ ಭಗವಂತನನ್ನು ಪ್ರೀತಿಯುಕ್ತವಾದ ಭಾವನೆಯಿಂದ ಕಂಡಾಗ ಪ್ರಶಾಂತವೂ, ಶುದ್ಧವೂ ಆಗಿರುವ ಸತ್ವಗುಣವು ಆವಿರ್ಭಾವವಾಗಿದೆ ಎಂದು ತಿಳಿಯಬೇಕು.

ಯತ್ತು ಸಂತಾಪಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ರಜಃ ಪ್ರವರ್ತಕಂ ತತ್ಸ್ಯಾತ್ ಸತತಂ ಹಾರಿ ದೇಹಿನಾಮ್ ॥೨೧॥

ದೇಹದಲ್ಲಿಯಾಗಲಿ, ಮನಸ್ಸಿನಲ್ಲಾಗಲಿ ಸಂತಾಪಯುಕ್ತವಾದ ಭಾವವು ಕಂಡುಬಂದರೆ ರಜೋಗುಣದ ಆವಿರ್ಭಾವವಾಗಿದೆ ಎಂದು ತಿಳಿಯಬೇಕು.

ಯತ್ತು ಸಮ್ಮೋಹಸಂಯುಕ್ತಮವ್ಯಕ್ತವಿಷಯಂ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರ್ಯತಾಮ್ ॥೨೨॥

ಮನಸ್ಸು ಯಾವಾಗಲೂ ಭ್ರಾಂತಿಯಿಂದ ಕೂಡಿರುತ್ತದೋ, ಮನಸ್ಸಿನ ವಿಷಯವು ಅಸ್ಪಷ್ಟವಾಗಿರುತ್ತದೋ, ಊಹೆ ಮಾಡಲು ಸಾಧ್ಯವಾಗಿರುತ್ತದೋ, ಯಾವುದನ್ನೂ ತಿಳಿಯಲಾಗುವುದಿಲ್ಲವೋ ಆಗ ತಮೋಗುಣದ ಆವಿರ್ಭಾವವಾಗಿದೆ ಎಂದು ತಿಳಿಯಬೇಕು.

ಪ್ರಹರ್ಷಃ ಪ್ರೀತಿರಾನಂದಃ ಸಾಮ್ಯಂ ಸ್ವಸ್ಥಾತ್ಮಚಿತ್ತತಾ ।
ಅಕಸ್ಮಾದ್ ಯದಿ ವಾ ಕಸ್ಮಾದ್ವರ್ತತೇ ಸಾತ್ತಿ ್ವಕೋ ಗುಣಃ ॥೨೩॥

ಅತ್ಯಂತ ಸಂತೋಷ, ಪ್ರೀತಿ, ಆನಂದ, ಸಮತೆ, ಚಿತ್ತಸ್ವಾಸ್ಥ್ಯ ಈ ಸದ್ಗುಣಗಳು ಕಾರಣವಿಲ್ಲದೆ ಅಥವಾ ಯಾವುದಾದರೂ ಕಾರ್ಯದಿಂದ ಉಂಟಾಗಿವೆ ಎಂದಿದ್ದರೆ ಅವನಲ್ಲಿ ಸಾತ್ವಿಕ ಗುಣವುಂಟಾಗಿದೆ ಎಂದು ತಿಳಿಯಬೇಕು.

ಅಭಿಮಾನೋ ಮೃಷಾವಾದೋ ಲೋಭೋ ಮೋಹಸ್ತಥಾಕ್ಷಮಾ ।
ಲಿಂಗಾನಿ ರಜಸಸ್ತಾನಿ ವರ್ತಂತೇ ಹೇತ್ವಹೇತುತಃ ॥೨೪॥

ಅಭಿಮಾನ, ಸುಳ್ಳುಮಾತು, ಲೋಭ, ಮೋಹ, ಅಸಹನೆ, ಇವುಗಳು ಸಕಾರಣದಿಂದಾಗಲಿ, ಅಕಾರಣದಿಂದಾಗಲಿ ಉಂಟಾದರೆ ಇವುಗಳನ್ನು ರಜೋಗುಣದ ಚಿಹ್ನೆ ಎಂದು ಭಾವಿಸಬೇಕು.

ತಥಾ ಮೋಹಃ ಪ್ರಮಾದಶ್ಚ ತಂದ್ರೀ ನಿದ್ರಾಪ್ರಬೋಧಿತಾ ।
ಕಥಂಚಿದಭಿವರ್ತಂತೇ ವಿಜ್ಞೇಯಾಸ್ತಾಮಸಾ ಗುಣಾಃ ॥೨೫॥

ಹೀಗೆ ಮೋಹ, ಪ್ರಮಾದ, ಆಲಸ್ಯ , ನಿದ್ರೆ , ಅಜ್ಞಾನ ಇವುಗಳು ಸಕಾರಣವಾಗಿ, ಅಕಾರಣವಾಗಿ ಒಬ್ಬನಲ್ಲಿ ಉಂಟಾದರೆ ಇವುಗಳನ್ನು ತಾಮಸಗುಣಗಳೆಂದು ತಿಳಿಯಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ವ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ಮೂರನೆಯ ಅಧ್ಯಾಯ

ಶುಕಮುನಿಗೆ ವ್ಯಾಸರು ಜ್ಞಾನಸಾಧನಗಳನ್ನು ತಿಳಿಸಿದುದು.

ವ್ಯಾಸಃ

ಮನಃ ಪ್ರಸೃಜತೇ ಭಾವಂ ಬುದ್ಧಿರಧ್ಯವಸಾಯಿನೀ ।
ಹೃದಯಂ ಪ್ರಿಯಾಪ್ರಿಯೇ ವೇದ ತ್ರಿವಿಧಾ ಕರ್ಮಚೋದನಾ ॥೧॥

ಮಗನೇ, ಮನಸ್ಸು ಕರ್ಮಗಳನ್ನು ಮಾಡಲು ಅನೇಕ ವಿಧವಾದ ಪ್ರೇರಣೆಗಳನ್ನು ಹೊಂದುತ್ತದೆ. ಆ ಪ್ರೇರಣೆಗಳಲ್ಲಿ ಯೋಗ್ಯ ಯಾವುದು ಎಂಬುದನ್ನು ಬುದ್ಧಿಯು ನಿರ್ಣಯಿಸುತ್ತದೆ. ಹೃದಯವು ಪ್ರಿಯಾಪ್ರಿಯಗಳನ್ನು ತಿಳಿಯುತ್ತದೆ. ಈ ಮೂರು ಕರ್ಮಪ್ರೇರಕಗಳೆನಿಸಿವೆ.

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಃ ಪರಮಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಪರೋ ಮತಃ ॥೨॥

ಇಂದ್ರಿಯಗಳಿಗಿಂತಲೂ ಇಂದ್ರಿಯಗಳ ವಿಷಯಗಳು ಶ್ರೇಷ್ಠವಾದವುಗಳು. ಇಂದ್ರಿಯಾರ್ಥಗಳಿಗಿಂತಲೂ ಮನಸ್ಸು ಶ್ರೇಷ್ಠವಾದುದು. ಮನಸ್ಸಿಗಿಂತಲೂ ಬುದ್ಧಿಯು ಶ್ರೇಷ್ಠವಾದುದು. ಬುದ್ಧಿಗಿಂತಲೂ ಮಹತ್ತತ್ತ್ವಾಭಿಮಾನಿ ದೇವತೆಯು ಶ್ರೇಷ್ಠನಾದವನು.

ಬುದ್ಧಿರಾತ್ಮಾ ಮನುಷ್ಯಸ್ಯ ಬುದ್ಧಿರೇವಾತ್ಮನೋऽऽತ್ಮಿಕಾ ।
ಯದಾ ವಿಕುರುತೇ ಭಾವಂ ತದಾ ಭವತಿ ಸಾ ಮನಃ ॥೩॥

ಮನುಷ್ಯನಿಗೆ ಮನಸ್ಸಿಗಿಂತ ಬುದ್ಧಿಯೇ ತುಂಬಾ ಪ್ರಮುಖವಾದುದು. ಪರಮಾತ್ಮನನ್ನು ತೋರಿಸುವ ಸಾಮರ್ಥ್ಯವು ಈ ಬುದ್ಧಿಗೆ ಇದೆ. ಆ ಬುದ್ಧಿಯು ಪರಮಾತ್ಮನ ಸಂಬಂಧವನ್ನು ತೊರೆದು ವಿಕೃತಭಾವವನ್ನು ಹೊಂದಿದಾಗ ಅದೇ ಮನಸ್ಸೆಂದು ಕರೆಯಲ್ಪಡುತ್ತದೆ.

ಇಂದ್ರಿಯಾಣಾಂ ಪೃಥಗ್ಭಾವಾದ್ ಬುದ್ಧಿರ್ವಿಕ್ರಿಯತೇ ಹ್ಯಣು ।
ಶೃಣ್ವತೀ ಭವತಿ ಶ್ರೋತ್ರಂ ಸ್ಪೃಶತೀ ಸ್ಪರ್ಶ ಉಚ್ಯತೇ ॥೪॥

ಇಂದ್ರಿಯಗಳು ಪೃಥಕ್ಕಾಗಿ ಇರುವುದರಿಂದ ಅವುಗಳ ಕ್ರಿಯೆಗಳು ಭಿನ್ನವಾಗಿಯೇ ಇರುತ್ತವೆ. ಆದ್ದರಿಂದ ಬುದ್ಧಿಯು ಇಂದ್ರಿಯಗಳ ಮೂಲಕ ನಾನಾ ವಿಕಾರಗಳನ್ನು

ಹೊಂದುತ್ತದೆ. ಶಬ್ದವನ್ನು ಕೇಳುವಾಗ ಬುದ್ಧಿಯು ಶ್ರೋತೃರೂಪವಾಗುತ್ತದೆ. ಮುಟ್ಟುವಾಗ ಸ್ಪರ್ಶರೂಪವನ್ನು ತಾಳುತ್ತದೆ.

ಪಶ್ಯಂತೀ ಭವತೇ ದೃಷ್ಟೀ ರಸತೀ ರಸನಂ ಭವೇತ್ ।
ಜಿಘ್ರತೀ ಭವತಿ ಘ್ರಾಣಂ ಬುದ್ಧಿರ್ವಿಕ್ರಿಯತೇ ಪೃಥಕ್ ॥೫॥

ನೋಡುವಾಗ ಬುದ್ಧಿಯು ದೃಷ್ಟಿರೂಪವನ್ನು ಹೊಂದುತ್ತದೆ. ಸವಿಯುವಾಗ ರಸನೇಂದ್ರಿಯವಾಗಿ, ಆಘ್ರಾಣಿಸುವಾಗ ಘ್ರಾಣೇಂದ್ರಿಯವಾಗಿ ಬುದ್ಧಿಯು ವಿಕಾರವನ್ನು ಹೊಂದುತ್ತದೆ.

ಇಂದ್ರಿಯಾಣೀತಿ ತಾನ್ಯಾಹುಸ್ತೇಷ್ವದೃಶ್ಯಾಧಿತಿಷ್ಠತಿ ।
ತಿಷ್ಠತೀ ಪುರುಷೇ ಬುದ್ಧಿಸ್ತ್ರಿಷು ಭಾವೇಷು ವರ್ತತೇ ॥೬॥

ಬುದ್ಧಿಯ ವಿಕಾರಗಳೇ ಇಂದ್ರಿಯಗಳು. ಈ ಎಲ್ಲಾ ಇಂದ್ರಿಯಗಳಿಗೂ ನಿಯಾಮಕನಾಗಿ, ಅದೃಶ್ಯನಾಗಿ ಭಗವಂತನು ಇದ್ದಾನೆ. ಹೀಗೆ ಬುದ್ಧಿಯು ದೇಹದಲ್ಲಿದ್ದು ಸಾತ್ವಿಕ, ರಾಜಸ, ತಾಮಸ ಎಂಬ ಮೂರು ಭಾವಗಳಲ್ಲಿ ಪ್ರವೃತ್ತಿಯನ್ನು ಹೊಂದುತ್ತದೆ.

ಕದಾಚಿಲ್ಲಭತೇ ಪ್ರೀತಿಂ ಕದಾಚಿದಪಿ ಶೋಚತೇ ।
ನ ಸುಖೇನ ನ ದುಃಖೇನ ಕದಾಚಿದಿಹ ಯುಜ್ಯತೇ ॥೭॥

ಇದೇ ಕಾರಣದಿಂದ ಕೆಲವೊಮ್ಮೆ ಬುದ್ಧಿಯು ಸಂತೋಷದಿಂದ ಇರುತ್ತದೆ, ಮತ್ತೊಮ್ಮೆ ದುಃಖದಿಂದಲೂ, ಮಗದೊಮ್ಮೆ ಸುಖ-ದುಃಖಗಳೆರಡು ಇಲ್ಲದಂತಹ ಸ್ಥಿತಿಯಲ್ಲಿ ಇರುತ್ತದೆ.

ಸೇಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನತಿವರ್ತತೇ ।
ಸರಿತಾಂ ಸಾಗರೋ ಭರ್ತಾ ಮಹಾವೇಲಾಮಿವೋರ್ಮಿಮಾನ್ ॥೮॥

ಆದ್ದರಿಂದ ಬುದ್ಧಿಯ ಮುಖ್ಯಕಾರ್ಯಗಳೆಂದರೆ ಸತ್ವ-ರಜಸ್-ತಮೋ ಭಾವಗಳನ್ನು ಕಲ್ಪಿಸುವುದು. ಈ ಬುದ್ಧಿಯು ಭಗವದ್ಭಕ್ತಿಯನ್ನು ಹೊಂದಿದಾಗ ಬಾಹ್ಯವಾದ ಮೂರು ವಿಕಾರಗಳನ್ನು ಮೀರಿ ನಿಲ್ಲುತ್ತದೆ. ನದಿಗಳಿಗೆ ಒಡೆಯನಾದ ಮಹಾತರಂಗಗಳಿಂದ ಕೂಡಿರುವ ಸಮುದ್ರನು ಯಾವ ರೀತಿ ವಿಶಾಲವಾದ

ಪ್ರದೇಶವನ್ನು ಉಲ್ಲಂಘಿಸುವನೋ ಆ ರೀತಿಯಾಗಿ ಸತ್ತ್ವಾದಿ ಬಾಹ್ಯಗುಣಗಳ ವಿಕಾರವನ್ನು ಮೀರಿ ಭಗವಂತನಲ್ಲಿ ವರ್ತಿಸುತ್ತದೆ.

ಯದಾ ಪ್ರಾರ್ಥಯತೇ ಕಿಂಚಿತ್ತದಾ ಭವತಿ ಸಾ ಮನಃ ।
ಅಧಿಷ್ಠಾನಾನಿ ವೈ ಬುದ್ಧ್ಯಾ ಪೃಥಗೇತಾನಿ ಸಂಸ್ಮರೇತ್ ।
ಇಂದ್ರಿಯಾಣ್ಯೇವ ಮೇಧ್ಯಾನಿ ವಿಜೇತವ್ಯಾನಿ ಕೃತ್ಸ್ನಶಃ ॥೯॥

ಯಾವಾಗ ಮನುಷ್ಯನ ಬುದ್ಧಿಯು ವಿಷಯವನ್ನು ಆಶಿಸುತ್ತದೋ ಆಗ ಆ ಬುದ್ಧಿಯೇ ಮನಸ್ಸಾಗಿ ಪರಿವರ್ತನೆಯನ್ನು ಹೊಂದುತ್ತದೆ. ಸಮಸ್ತ ಇಂದ್ರಿಯಗಳ ಗುಣಗಳು ಬುದ್ಧಿಯನ್ನೇ ಆಶ್ರಯಿಸಿಕೊಂಡಿವೆ. ಇಂದ್ರಿಯಗಳೇ ಶುದ್ಧವಾದ ಹವಿಸ್ಸುಗಳು ಎನಿಸಿವೆ. ಅಂತಹ ಇಂದ್ರಿಯಗಳನ್ನು ಪೂರ್ಣವಾಗಿ ಜಯಿಸಬೇಕು.

ಸರ್ವಾಣ್ಯೇವಾನುಪೂರ್ವ್ಯೇಣ ಯದ್ಯನ್ನಾನುವಿಧೀಯತೇ ।
ಅವಿಭಾಗಗತಾ ಬುದ್ಧಿರ್ಭಾವೇ ಮನಸಿ ವರ್ತತೇ ।
ಪ್ರವರ್ತಮಾನಂ ತು ರಜಃ ಸತ್ತ್ವಮಪ್ಯನುವರ್ತತೇ ॥೧೦॥

ಬುದ್ಧಿಯು ಐದು ಇಂದ್ರಿಯಗಳನ್ನು ಕ್ರಮವಾಗಿ ಅನುಸರಿಸಿ ಹೋಗುತ್ತಿರುತ್ತದೆ. ಯಾವಾಗ ಬುದ್ಧಿಯು ಒಂದು ಇಂದ್ರಿಯವನ್ನು ಅನುಸರಿಸಿ ಸಾಗುತ್ತದೋ ಆಗ ಆ ವಿಷಯದ ಗ್ರಹಣವು ಮನಸ್ಸಿನಲ್ಲುಂಟಾಗುತ್ತದೆ. ಪ್ರವೃತ್ತಿ ಸ್ವಭಾವವುಳ್ಳ ರಜೋಗುಣವು ಸತ್ತ್ವಗುಣವನ್ನೇ ಹಿಂಬಾಲಿಸುತ್ತದೆ.

ಯೇ ಚೈವ ಭಾವಾ ವರ್ತಂತೇ ಸರ್ವ ಏಷ್ವೇವ ತೇ ತ್ರಿಷು ।
ಅನ್ವರ್ಥಾಃ ಸಂಪ್ರವರ್ತಂತೇ ರಥನೇಮಿಮರಾ ಇವ ॥೧೧॥

ಜಗತ್ತಿನಲ್ಲಿರುವ ಪದಾರ್ಥಗಳೆಲ್ಲವೂ ಆರಗಳು ಚಕ್ರದ ನೇಮಿಯನ್ನು ಹೇಗೆ ಅವಲಂಬಿಸಿವೆಯೋ ಹಾಗೆ ಮೂರುಗುಣಗಳನ್ನೇ ಆಶ್ರಯಿಸಿವೆ.

ಪ್ರದೀಪಾರ್ಥಂ ನರಃ ಕುರ್ಯಾದಿಂದ್ರಿಯೈರ್ಬುದ್ಧಿಸತ್ತಮೈಃ ।
ನಿಶ್ಚರದ್ಬಿರ್ಯಥಾಯೋಗಮುದಾಸೀನೈರ್ಯದೃಚ್ಛಯಾ ॥೧೨॥

ದೀಪವು ಕತ್ತಲೆಯಲ್ಲಿರುವ ವಸ್ತುಗಳನ್ನು ತೋರಿಸುವಂತೆ ಮನಸ್ಸೆಂಬ ದೀಪವು ಜ್ಞಾನೇಂದ್ರಿಯಗಳಿಗೆ ಪದಾರ್ಥಗಳನ್ನು ತೋರಿಸಿಕೊಡುತ್ತದೆ. ಮನಸ್ಸೇ ಇಲ್ಲದಿದ್ದಲ್ಲಿ ಜ್ಞಾನೇಂದ್ರಿಯಗಳಿಂದ ಯಾವ ಲಾಭವೂ ಇರುವುದಿಲ್ಲ.

ಏವಂಸ್ವಭಾವಮೇವೇದಮಿತಿ ವಿದ್ವಾನ್ನ ಮುಹ್ಯತಿ ।
ಅಶೋಚನ್ನಪ್ರಹಷ್ಯಂಶ್ಚ ನಿತ್ಯಂ ವಿಗತಮತ್ಸರಃ ॥೧೩॥

ಇದು ಜಗತ್ತಿನ ಸ್ವಭಾವವಾಗಿದೆ. ಇದು ಹೀಗೆ ಸರಿ ಎಂಬುದನ್ನು ತಿಳಿದ ವಿದ್ವಾಂಸನು ಮೋಹಕ್ಕೆ ತುತ್ತಾಗುವುದಿಲ್ಲ. ಸುಖದಲ್ಲಿ ಹರ್ಷಗೊಳ್ಳುವುದಿಲ್ಲ. ಸಂಕಟ ಒದಗಿದಾಗ ಶೋಕಿಸುವುದಿಲ್ಲ. ಈರ್ಷ್ಯೆ-ದ್ವೇಷ ಮೊದಲಾದ ದೋಷಗಳಿಗೆ ತುತ್ತಾಗುವುದಿಲ್ಲ.

ನ ಹ್ಯಾತ್ಮಾ ಶಕ್ಯತೇ ದ್ರಷ್ಟುಮಿಂದ್ರಿಯೈಃ ಕಾಮಗೋಚರೈಃ ।
ಪ್ರವರ್ತಮಾನೈರನಯೇ ದುರ್ಧರೈರಕೃತಾತ್ಮಭಿಃ ॥೧೪॥

ದುಷ್ಕರ್ಮಶೀಲರಾದ, ಮಲಿನ ಅಂತಃಕರಣ ಹೊಂದಿರುವ, ಅನ್ಯಾಯದಿಂದ ವ್ಯವಹರಿಸುವ ಅಜ್ಞಾನಿಗಳು ಕಾಮಾದಿಗಳಲ್ಲಿ ಆಸಕ್ತರಾಗಿ ಅಂತಹ ದುಷ್ಟ ಇಂದ್ರಿಯಗಳ ಮೂಲಕ ಪರಮಾತ್ಮನನ್ನು ನೋಡಲಾರರು.

ತೇಷಾಂ ತು ಮನಸಾ ರಶ್ಮೀನ್ ಯದಾ ಸಮ್ಯಗ್ ನಿಯಚ್ಛತಿ ।
ತದಾ ಪ್ರಕಾಶತೇ ಹ್ಯಾತ್ಮಾ ಘಟೇ ದೀಪ ಇವ ಜ್ವಲನ್ ।
ಸರ್ವೇಷಾಮೇವ ಭೂತಾನಾಂ ತಮಸ್ಯಪಗತೇ ಯಥಾ ॥೧೫॥

ಯಾವಾಗ ಮನುಷ್ಯನು ಮನಸ್ಸೆಂಬ ಹಗ್ಗದಿಂದ ಇಂದ್ರಿಯಗಳೆಂಬ ಕುದುರೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾನೋ, ಅವನಿಗೆ ದೀಪದ ಪ್ರಕಾಶದಂತೆ ಹೊಳೆಯುವ ಪರಮಾತ್ಮನ ದರ್ಶನವಾಗುತ್ತದೆ. ಕತ್ತಲೆಯು ಪರಿಹಾರವಾದ ಬಳಿಕ ಪದಾರ್ಥಗಳು ಹೇಗೆ ಎಲ್ಲ ಪ್ರಾಣಿಗಳಿಗೂ ಕಾಣಿಸುತ್ತವೋ ಆ ರೀತಿ ಭಗವಂತನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ.

ಯಥಾ ವಾರಿಚರಃ ಪಕ್ಷೀ ನ ಲಿಪ್ಯತಿ ಜಲೇ ಚರನ್ ।
ಏವಮೇವ ಕೃತಪ್ರಜ್ಞೋ ನದೋಷೈರ್ವಿಷಯಾಂಶ್ಚರನ್ ।
ಅಸಜ್ಜಮಾನಃ ಸರ್ವೇಷು ನ ಕಥಂಚನ ಲಿಪ್ಯತೇ ॥೧೬॥

ನೀರಿನಲ್ಲಿ ಸಂಚರಿಸುವ ಹಕ್ಕಿಯು ನೀರಿನಿಂದ ಹೇಗೆ ಒದ್ದೆಯಾಗುವುದಿಲ್ಲವೋ ಇದರಂತೆ ಮುಕ್ತಾತ್ಮನಾದ ಯೋಗಿಯು ಪ್ರಾಕೃತ ವಿಷಯರಾಗಾದಿದೋಷಗಳಿಂದ ಲಿಪ್ತನಾಗುವುದಿಲ್ಲ. ಶುದ್ಧವಾದ ಬುದ್ಧಿಯುಳ್ಳವನು ಪುತ್ರ-ಮಿತ್ರ-ಕಳತ್ರರಲ್ಲಿ

ಅನಾಸಕ್ತನಾಗಿರುವುದರಿಂದ ಅವುಗಳನ್ನನುಭವಿಸುತ್ತಿದ್ದರೂ ಆ ದೋಷಗಳ ಲೇಪ ಅವನಿಗಿರುವುದಿಲ್ಲ.

ತ್ಯಕ್ತ್ವಾ ಪೂರ್ವಕೃತಂ ಕರ್ಮ ರತಿರ್ಯಸ್ಯ ಸದಾತ್ಮನಿ ।
ಸರ್ವಭೂತಾತ್ಮಭೂತಸ್ಯ ಗುಣಮಾರ್ಗೇಷ್ವಸಜ್ಜತಃ ॥೧೭॥

ಯಾವನು ಪೂರ್ವಪ್ರಾರಬ್ಧಗಳನ್ನೆಲ್ಲ ತೊಳೆದುಕೊಂಡು, ಪರಮಾತ್ಮನಲ್ಲಿ ಅನುರಕ್ತನಾಗಿ, ಸಮಸ್ತ ಪ್ರಾಣಿಗಳ ಅಂತರ್ಯಾಮಿಯಾದ ಪರಮಾತ್ಮನನ್ನೇ ನೋಡುತ್ತಾನೋ ಅವನು ಸಮಸ್ತ ಭೂತಗಳಿಗೂ ಅಂತರ್ಯಾಮಿಯಾದ ಭಗವಂತನನ್ನು ಕಾಣುವುದರಿಂದ ಸತ್ತ್ವಾದಿ ಗುಣ ಸಂಬಂಧದಲ್ಲಿ ಆಸಕ್ತನಾಗುವುದಿಲ್ಲ. ಪುಣ್ಯ-ಪಾಪಗಳ ಸಂಬಂಧವನ್ನು ಹೊಂದುವುದಿಲ್ಲ ಎಂದು ಭಾವ.

ಸತ್ತ್ವಮಾತ್ಮಾ ಪ್ರಸವತಿ ಗುಣಾನ್ ವಾಪಿ ಕದಾಚನ ।
ನ ಗುಣಾ ವಿದುರಾತ್ಮಾನಂ ಗುಣಾನ್ ವೇದ ಸ ಸರ್ವದಾ ॥೧೮॥

ಸತ್ತ್ವಗುಣವು ಪರಮಾತ್ಮನನ್ನು ತೋರಿಸುತ್ತದೆ. ಬಂಧಕ ಗುಣಗಳನ್ನು ಬಳಿಕ ಹುಟ್ಟಿಸುವುದಿಲ್ಲ. ಅಪ್ರಧಾನರಾದ ಕನಿಷ್ಠ ಜೀವರು ಪರಮಾತ್ಮನನ್ನು ತಿಳಿಯರು. ಜ್ಞಾನಿಯಾದ ಜೀವನು ಪರಮಾತ್ಮನ ಗುಣಗಳನ್ನು ಯಾವಾಗಲೂ ತಿಳಿಯುತ್ತಾನೆ.

ದ್ರಷ್ಟಾರಂ ಗುಣಾನಾಂ ಸ ಸ್ರಷ್ಟಾ ಚೈವ ಯಥಾತಥಮ್ ।
ಸತ್ತ್ವಕ್ಷೇತ್ರಜ್ಞಯೋರೇತದಂತರಂ ವಿದ್ಧಿ ಸೂಕ್ಷ್ಮಯೋಃ ॥೧೯॥

ಭಗವಂತನೇ ಸಮಸ್ತ ಗುಣಗಳ ದ್ರಷ್ಟಾರನಾಗಿದ್ದಾನೆ. ಅವನೇ ಸ್ರಷ್ಟಾರನು ಆಗಿದ್ದಾನೆ ಅರ್ಥಾತ್ ಯಥಾವತ್ತಾಗಿ ಸೃಷ್ಟಿಯನ್ನು ಮಾಡುವವನು. ಈ ಜೀವ ಮತ್ತು ಪರಮಾತ್ಮರು ಬಾಹ್ಯ ಇಂದ್ರಿಯಗಳಿಗೆ ಅಗೋಚರರಾಗಿದ್ದಾರೆ. ಕ್ಷೇತ್ರಾಭಿಮಾನಿಯಾದ ಜೀವನಿಗೂ, ಕ್ಷೇತ್ರಜ್ಞನಾದ ಪರಮಾತ್ಮನಿಗೂ ಬಹಳ ಅಂತರವಿದೆ ಎಂದು ತಿಳಿ.

ಸೃಜತೇ ತು ಗುಣಾನೇಕ ಏಕೋ ನ ಸೃಜತೇ ಗುಣಾನ್ ।
ಪೃಥಗ್ಭೂತೌ ಪ್ರಕೃತ್ಯಾ ತೌ ಸಂಪ್ರಯುಕ್ತೌ ಚ ಸರ್ವದಾ ॥೨೦॥

ಕ್ಷೇತ್ರಜ್ಞನಾದ ಪರಮಾತ್ಮನು ಗುಣಗಳನ್ನು ಸೃಷ್ಟಿಸುತ್ತಾನೆ. ಜೀವಾತ್ಮನು ಸೃಷ್ಟಿಸುವ

ವಿಷಯದಲ್ಲಿ ಅಸಮರ್ಥನಾಗಿದ್ದಾನೆ. ಸ್ವಾಭಾವಿಕವಾಗಿ ಜೀವ-ಪರಮಾತ್ಮರಲ್ಲಿ ಭೇದವಿದೆ. ಆದರೆ ಎಂದಿಗೂ ಅತ್ಯಂತ ಭಿನ್ನರಾದ ಜೀವರು ಒಟ್ಟಿಗೆ ಇರುತ್ತಾರೆ.

ಯಥಾ ಮತ್ಸ್ಯೋऽದ್ಭಿರನ್ಯಃ ಸನ್ ಸಂಪ್ರಯುಕ್ತೌ ತಥೈವ ತೌ ।
ಮಶಕೋದುಂಬರೌ ಚಾಪಿ ಸಂಪ್ರಯುಕ್ತೌ ಯಥಾ ಸಹ ॥೨೧॥

ಇಷೀಕಾ ವಾ ಯಥಾ ಮುಂಜೇ ಪೃಥಕ್ಚ ಸಹ ಚೈವ ಚ ।
ತಥೈವ ಸಹಿತಾವೇತಾವನ್ಯೋನ್ಯಸ್ಮಿನ್ ಪ್ರತಿಷ್ಠಿತೌ ॥೨೨॥

ಜಲದಲ್ಲಿರುವ ಮತ್ಸ್ಯವು ನೀರಿಗಿಂತ ಅತ್ಯಂತ ಭಿನ್ನವಾಗಿದ್ದರೂ ಆ ನೀರಿನ ಸಂಬಂಧವನ್ನು ನಿತ್ಯವೂ ಹೇಗೆ ಹೊಂದಿರುತ್ತದೋ, ಅದರಂತೆ ಜೀವ-ಪರಮಾತ್ಮರಲ್ಲಿ ಅತ್ಯಂತ ಭೇದವಿದ್ದರೂ ನಿತ್ಯಸಂಬಂಧವಿದೆ. ಅತ್ತಿಹಣ್ಣಿನಲ್ಲಿ ಇರುವ ನುಸಿಗಳಿಗೆ ಅತ್ತಿಯಂಥ ಭೇದವೇ ಇದ್ದರೂ ಅತ್ತಿಹಣ್ಣಿನ ಜೊತೆ ನಿತ್ಯಸಂಬಂಧವನ್ನು ಹೊಂದಿರುವಂತೆ ಜೀವ-ಪರಮಾತ್ಮರಿಗೆ ನಿತ್ಯ ಸಂಬಂಧವಿದೆ. ಮೌಂಜಿಹುಲ್ಲಿನಲ್ಲಿ ಕಾಸಹುಲ್ಲು ಪ್ರತ್ಯೇಕವಾಗಿ ಕಾಣುತ್ತದೆ. ಪ್ರತ್ಯೇಕವಾಗಿದ್ದರೂ ಒಟ್ಟಿಗೆಯೂ ಕಾಣಿಸುತ್ತದೆ. ಅದರಂತೆ ಜೀವ-ಪರಮಾತ್ಮರು ಪರಸ್ಪರ ಅನ್ಯೋನ್ಯ ಸಂಬಂಧವುಳ್ಳವರಾಗಿದ್ದಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತ್ರ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ನಾಲ್ಕನೆಯ ಅಧ್ಯಾಯ

ವ್ಯಾಸರಿಂದ ಜ್ಞಾನದ ಪ್ರಶಂಸೆ.

ವ್ಯಾಸಃ

ಸೃಜತೇ ತ್ರಿಗುಣಾನ್ ಸತ್ತ್ವಂ ಕ್ಷೇತ್ರಜ್ಞಸ್ತ್ವನುತಿಷ್ಠತಿ ।
ಗುಣಾನ್ ವಿಕ್ರಿಯತಃ ಸರ್ವಾನುದಾಸೀನವದೀಶ್ವರಃ ॥೧॥

ಕ್ಷೇತ್ರಜ್ಞನಾದ ಪರಮಾತ್ಮನು ಉದಾಸೀನನಂತೆ ವಿಕಾರನಾದ ತ್ರಿಗುಣಗಳನ್ನು ನೋಡುತ್ತಿರುತ್ತಾನೆ. ಅವುಗಳಿಗೆ ಸ್ವಾಮಿಯಾಗಿದ್ದು ಜೀವರ ಸಮೂಹವನ್ನು, ತ್ರಿಗುಣಗಳ ಸಂಬಂಧವನ್ನು ಸೃಷ್ಟಿಸುತ್ತಾನೆ.

ವ್ಯಾಖ್ಯಾನ ವಿಶೇಷ– ಅನೇಕ ಅಧ್ಯಾಯಗಳಲ್ಲಿ ಕ್ಷೇತ್ರಜ್ಞ ಎಂಬ ಶಬ್ದದ ಆವೃತ್ತಿಯಿದೆ. ಅನೇಕ ವ್ಯಾಖ್ಯಾನಕಾರರು ಕ್ಷೇತ್ರಜ್ಞನೆಂದರೆ ಜೀವ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಕೃಷ್ಣನು ಗೀತೆಯಲ್ಲಿ 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ' ಎಂಬ ಪದ್ಯದಲ್ಲಿ ಕ್ಷೇತ್ರಜ್ಞನಾದವನು ನಾನೇ ಎಂದು ಹೇಳಿಕೊಂಡಿದ್ದಾನೆ. ಆದ್ದರಿಂದ ಕ್ಷೇತ್ರಜ್ಞ ಶಬ್ದವಾಚ್ಯತ್ವ ಭಗವಂತನಲ್ಲಿಯೇ ತಿಳಿಯಬೇಕು. 'ಕ್ಷೇತ್ರಜ್ಞೋ ಭಗವಾನ್ ವಿಷ್ಣುಃ ನಹ್ಯನಃ ಕ್ಷೇತ್ರಮನ್ಯಥಾ। ವೇತ್ತಸೋ ಭಗವಾನ್ ಜ್ಞೇಯೋ ವ್ಯಕ್ತಾವ್ಯಕ್ತ ವಿಲಕ್ಷಣಃ। ಸ ತು ಜೀವೇಷು ಸರ್ವೇಷು ಬಹಿಶ್ಚೈವ ವ್ಯವಸ್ಥಿತಃ। ವಿಲಕ್ಷಣಶ್ಚ ಸರ್ವೇಭ್ಯೋಪಿ ಸದೈವ ಚ॥' ಭಗವಾನ್ ವಿಷ್ಣುವೇ ಕ್ಷೇತ್ರಜ್ಞನೆನಿಸಿದ್ದಾನೆ. ಬೇರೆ ಯಾರೂ ಅವ್ಯಕ್ತಾದಿ ಕ್ಷೇತ್ರಗಳನ್ನು ಚೆನ್ನಾಗಿ ಅರಿಯಲಾರರು. ಪರಮಾತ್ಮನು ವ್ಯಕ್ತ-ಅವ್ಯಕ್ತಗಳಿಗಿಂತಲೂ ವಿಭಿನ್ನನು. ಕ್ಷೇತ್ರಜ್ಞನಾದ ಹರಿಯು ಜೀವರ ಒಳಗೆ-ಹೊರಗೆ ನಿಯಾಮಕನಾಗಿದ್ದಾನೆ. ಆದ್ದರಿಂದ ಎಲ್ಲವನ್ನೂ ತಿಳಿಯುವ ಸಾಮರ್ಥ್ಯ ಉಳ್ಳವನು ಎಂದು ಪ್ರಮಾಣ ವಾಕ್ಯವು ಸಂವಾದಿಯಾಗಿದೆ. ಭಾಗವತದಲ್ಲಿಯೂ ಕ್ಷೇತ್ರಜ್ಞನಾದವನು ಭಗವಂತನೇ ಎಂದು ಹೇಳಲು ಅನೇಕ ಪ್ರಮಾಣಗಳಿವೆ. ಆದ್ದರಿಂದ ಪ್ರಕೃತ ಕ್ಷೇತ್ರಜ್ಞನೇ ಈ ಎಲ್ಲಾ ಅಧ್ಯಾಯಗಳಲ್ಲಿಯೂ ಪ್ರಸ್ತುತನಾಗಿದ್ದಾನೆ ಎಂದು ತಿಳಿಯಬೇಕು.

ಸ್ವಭಾವಯುಕ್ತಂ ತತ್ ಸರ್ವಂ ಯದಿಮಾನ್ ಸೃಜತೇ ಗುಣಾನ್ ।
ಊರ್ಣನಾಭಿರ್ಯಥಾ ಸೂತ್ರಂ ಸೃಜತೇ ತಂತುವದ್ ಗುಣಾನ್ ॥೨॥

ಪ್ರಧ್ವಸ್ತಾ ನ ನಿವರ್ತಂತೇ ಪ್ರವೃತ್ತಿರ್ನೋಪಲಭ್ಯತೇ ।
ಏವಮೇಕೇ ವ್ಯವಸ್ಯಂತಿ ನಿವೃತ್ತಿರಿತಿ ಚಾಪರೇ ॥೩॥

ಯಾವ ರೀತಿ ಜೇಡರ ಹುಳುವು ತನ್ನ ಶರೀರದಿಂದಲೇ ದಾರಗಳನ್ನು ಸ್ವಾಭಾವಿಕವಾಗಿ ಸೃಷ್ಟಿಸುವುದೋ ಅದರಂತೆ ಭಗವಂತನು ತ್ರಿಗುಣಾತ್ಮಕವಾದ ಸಮಸ್ತ ಪದಾರ್ಥಗಳನ್ನು ಸೃಷ್ಟಿಸುತ್ತಾನೆ. ಈ ಜಗತ್ತು ಸರ್ವಪ್ರಳಯವನ್ನು ಹೊಂದಿದ ಬಳಿಕ ಸಮಗ್ರವಾಗಿ ನಿತ್ಯವೂ ನಾಶವಾಗಿಯೇ ಇರುತ್ತದೆ. ಎಂದೂ ಉತ್ಪತ್ತಿಯನ್ನು ಹೊಂದುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಸರ್ವಜಗತ್ತು ನಿವೃತ್ತಿಯನ್ನು ಹೊಂದುತ್ತದೆ, ಪ್ರವೃತ್ತಿಯನ್ನೂ ಹೊಂದುತ್ತದೆ ಎಂದು ಹೇಳುತ್ತಾರೆ.

ಉಭಯಂ ಸಂಪ್ರಧಾರ್ಯೈತದಧ್ಯವಸ್ಯೇದ್ಯಥಾಮತಿ ।
ಅನೇನೈವ ವಿಧಾನೇನ ಭವೇದ್ ಗರ್ಭಶಯೋ ಮಹಾನ್ ॥೪॥

ಈ ಪ್ರವೃತ್ತಿ-ನಿವೃತ್ತಿಗಳು ನಿರಂತರವಾಗುತ್ತಿರುತ್ತದೆ ಎಂಬ ವಿಷಯವನ್ನೇ ಯಥಾಮತಿಯಾಗಿ ಗ್ರಹಿಸಬೇಕು. ಈ ರೀತಿ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ

ಕಾರಣನಾದ ಭಗವಂತನನ್ನೇ ಬುದ್ಧಿಯಿಂದ ಆಲೋಚಿಸುತ್ತಾ, ಸಮಸ್ತ ಜೀವರ ಹೃದಯದಲ್ಲಿ ನಿಯಾಮಕನಾಗಿದ್ದಾನೆ, ಮಹಾತ್ಮನಾಗಿದ್ದಾನೆ ಎಂದು ಭಾವಿಸಬೇಕು.

ಅನಾದಿನಿಧನಂ ನಿತ್ಯಮಾಸಾದ್ಯ ವಿಚರೇನ್ನರಃ ।
ಅಕ್ರುದ್ಧ್ಯನ್ನಪ್ರಹಷ್ಯಂಶ್ಚ ನಿತ್ಯಂ ವಿಗತಮತ್ಸರಃ ॥೫॥

ಆ ಭಗವಂತನಾದರೂ ಆದ್ಯಂತರಹಿತನಾಗಿದ್ದಾನೆ. ಅಂತಹ ಭಗವಂತನನ್ನು ತಿಳಿದ ಜ್ಞಾನಿಯು ಹರ್ಷ, ಕ್ರೋಧ, ಈರ್ಷೆ, ದ್ವೇಷಗಳಿಂದ ರಹಿತನಾಗಿ ಸಂಚರಿಸುತ್ತಾನೆ.

ಇತ್ಯೇವಂ ಹೃದಯಗ್ರನ್ಥಿಂ ಬುದ್ಧಿಚಿಂತಾಮಯಂ ದೃಢಮ್ ।
ಅತೀತ್ಯ ಸುಖಮಾಸೀತ ಅಶೋಚಂಶ್ಛಿನ್ನಸಂಶಯಃ ॥೬॥

ಈ ರೀತಿ ಸಾಧಕನಾದವನು ಬುದ್ಧಿಯ ಚಿಂತೆಯೇ ಮೊದಲಾದ ಗುಣಗಳಿಂದ ಬಂಧಿತವಾಗಿರುವ ಅಜ್ಞಾನಗ್ರಂಥಿಯನ್ನು ಭಗವಂತನ ಜ್ಞಾನದಿಂದ ಪರಿಹರಿಸಿಕೊಂಡು, ಸಂಶಯ ಮುಕ್ತನಾಗಿ, ದುಃಖರಹಿತನಾಗಿ ಸುಖದಿಂದ ವರ್ತಿಸಬೇಕು.

ತಪ್ಯೇಯುಃ ಪ್ರಚ್ಯುತಾಃ ಪೃಥ್ವ್ಯಾ ಯಥಾ ಪೂರ್ಣಾಂ ನದೀಂ ನರಾಃ ।
ಅವಗಾಢಾ ಹ್ಯವಿದ್ವಾಂಸೋ ವಿದ್ಧಿ ಲೋಕಮಿಮಂ ತಥಾ ॥೭॥

ಯಾವ ರೀತಿ ಈಜಲು ಬಾರದ ವ್ಯಕ್ತಿಯು ದಡದಿಂದ ಜಾರಿ, ಪ್ರವಾಹದಿಂದ ಹರಿಯುವ ನದಿಯಲ್ಲಿ ಬಿದ್ದು, ಮುಳುಗಿ ಪರಿತಾಪ ಹೊಂದುತ್ತಾನೋ ಅದೇ ರೀತಿ ಅಜ್ಞಾನಿಯಾದವರು ಈ ಪ್ರಾಕೃತಿಕ ಸಂಸಾರ ಸಾಗರದಲ್ಲಿ ಮುಳುಗಿ ಬ್ರಹ್ಮಜ್ಞಾನವಿಲ್ಲದೆ ಪರಿತಪಿಸುತ್ತಿದ್ದಾರೆ ಎಂಬುದನ್ನು ತಿಳಿ.

ನ ತು ತಾಮ್ಯತಿ ವೈ ವಿದ್ವಾನ್ ಸ್ಥಲೇ ಚರತಿ ತತ್ತ್ವವಿತ್ ।
ಏವಂ ಯೋ ವಿಂದತೇತ್ಮಾನಂ ಕೇವಲಂ ಜ್ಞಾನಮಾತ್ಮನಃ ॥೮॥

ಆದರೆ ಯಾವನಿಗೆ ನದಿಯಲ್ಲಿ ಈಜುವ ಪರಿಣತಿಯು ಇರುವುದೋ ಅವನು ಪರಿತಾಪವನ್ನು ಹೊಂದುವುದಿಲ್ಲ. ನೆಲದಲ್ಲಿ ನಡೆಯುವಂತೆ ನೀರಿನಲ್ಲಿಯೂ ಸಂಚರಿಸುತ್ತಾನೆ. ಇದರಂತೆ ಪರಮಾತ್ಮನ ಜ್ಞಾನವನ್ನು ಹೊಂದಿರುವಂತಹ ತತ್ತ್ವವೇತ್ತೃವು ಸಂಸಾರ ಸಾಗರವನ್ನು ಸುಲಭವಾಗಿ ದಾಟುತ್ತಾನೆ.

ಏವಂ ಬುದ್ಧ್ವಾ ನರಃ ಸರ್ವಾಂ ಭೂತಾನಾಮಾಗತಿಂ ಗತಿಮ್ ।
ಸಮವೇಕ್ಷ್ಯ ಶನೈಃ ಸಮ್ಯಗ್ ಲಭತೇ ಶಮಮುತ್ತಮಮ್ ॥೯॥

ಈ ರೀತಿಯಾಗಿ ಸಮಸ್ತ ಜೀವರ ಉತ್ಪತ್ತಿ ಮತ್ತು ಲಯಗಳು ಭಗವಂತನಿಂದಲೇ ನಡೆಯುತ್ತವೆ ಎಂಬ ರಹಸ್ಯವನ್ನು ತಿಳಿದಿದ್ದಾನೋ ಅವನು ಭಗವಂತನ ವ್ಯಾಪಾರವನ್ನು ನೋಡುತ್ತಾ ಕ್ರಮವಾಗಿ ಪರಮಶಾಂತಿಯನ್ನು ಹೊಂದುತ್ತಾನೆ.

ಏತದ್ವೈ ಜನ್ಮಸಾಮರ್ಥ್ಯಂ ಬ್ರಾಹ್ಮಣಸ್ಯ ವಿಶೇಷತಃ ।
ಆತ್ಮಜ್ಞಾನಂ ಶಮಶ್ಚೈವ ಪರ್ಯಾಪ್ತಂ ತತ್ ಪರಾಯಣಮ್ ॥೧೦॥

ವಿಶೇಷವಾಗಿ ಬ್ರಾಹ್ಮಣನ ಜನ್ಮದ ಸಾಮರ್ಥ್ಯವು ಪರಮಾತ್ಮಜ್ಞಾನವು, ಇಂದ್ರಿಯ ನಿಗ್ರಹವು, ಭಗವಂತನನ್ನೇ ಆಶ್ರಯ ಹೊಂದುವಿಕೆಯು ಇವುಗಳಿಂದಲೇ ಸಿದ್ಧವಾಗುತ್ತದೆ. ಬ್ರಾಹ್ಮಣನು ತನ್ನ ಬಲವನ್ನು ಆತ್ಮಜ್ಞಾನದಲ್ಲಿಯೇ ತೋರಿಸಬೇಕು ಎಂದು ಭಾವ.

ಏತದ್ ಬುದ್ಧ್ವಾ ಭವೇದ್ ಬುದ್ಧಃ ಕಿಮನ್ಯದ್ ಬುದ್ಧಲಕ್ಷಣಮ್ ।
ವಿಜ್ಞಾಯೈತದ್ ವಿಮುಚ್ಯಂತೇ ಕೃತಕೃತ್ಯಾ ಮನೀಷಿಣಃ ॥೧೧॥

ಭಗವಂತನನ್ನು ತಿಳಿದ ಬಳಿಕವೇ ಬುದ್ಧಿವಂತನಾಗುತ್ತಾನೆ. ಈ ಜ್ಞಾನಿಯ ಜ್ಞಾನವಿಲ್ಲದ ಬೇರೆ ಲಕ್ಷಣ ಯಾವುದು? ಭಗವಂತನನ್ನು ತಿಳಿದೇ ಕೃತಕೃತ್ಯರಾಗಿ ಸಂಸಾರದಿಂದ ಜ್ಞಾನಿಗಳಾದವರು ಬಿಡುಗಡೆ ಹೊಂದುತ್ತಾರೆ.

ನ ಭವತಿ ವಿದುಷಾಂ ಮಹದ್ಭಯಂ ಯದ್
ಅವಿದುಷಾಂ ಸುಮಹದ್ಭಯಂ ಭವೇತ್ ।
ನ ಹಿ ಗತಿರಧಿಕಾಸ್ತಿ ಕಸ್ಯಚಿದ್
ಭವತಿ ಹಿ ಯಾ ವಿದುಷಃ ಸನಾತನೀ ॥೧೨॥

ಪರಲೋಕದ ವಿಷಯದಲ್ಲಿ ಅಜ್ಞಾನಿಗಳಾದವರಿಗೆ ಯಾವ ಮಹಾಭಯವಿದೆಯೋ ಆ ಭಯವು ಜ್ಞಾನಿಯಾದವನಿಗೆ ಇರುವುದಿಲ್ಲ. ಜ್ಞಾನಿಯಾದವನಿಗೆ ಯಾವ ಶ್ರೇಷ್ಠವಾದ ಗತಿಯು ಲಭಿಸುವುದೋ ಅದಕ್ಕಿಂತ ಉತ್ತಮವಾದ ಬೇರೆ ಗತಿಯು ಇರುವುದಿಲ್ಲ. ಬೇರೆ ಯಾರಿಗೂ ಅದು ದೊರೆಯುವುದಿಲ್ಲ.

ಲೋಕಮಾತುರಸೂಯಂತ ಜನ-
ಸ್ತತ್ತದೇವ ಚ ನಿರೀಕ್ಷ್ಯ ಶೋಚತೇ ।
ತತ್ರ ಪಶ್ಯ ಕುಶಲಾನಶೋಚತೋ
ಯೇ ವಿದುಸ್ತದುಭಯಂ ಕೃತಾಕೃತಮ್ ॥೧೩॥

ಪ್ರಕೃತಿಯ ದೆಸೆಯಿಂದ ಕೆಲವು ಜನರು ದ್ವೇಷವನ್ನು ಹೊಂದುತ್ತಾರೆ. ದುಃಖಿಗಳನ್ನು, ರೋಗಿಗಳನ್ನು ನೋಡಿ ಶೋಕಪಡುತ್ತಾರೆ. ಆದರೆ ಈ ಸುಖ-ದುಃಖಗಳಿಗೆ ಕಾರಣವಾದ ಪುಣ್ಯ-ಪಾಪಗಳ ಸಂಬಂಧವನ್ನು, ಅದಕ್ಕೆ ನಿಯಾಮಕನಾದ ಭಗವಂತನನ್ನು ಜ್ಞಾನಿಗಳಾದವರು ನೋಡುತ್ತಾ ಆ ಸುಖ-ದುಃಖಗಳ ವಿಷಯದಲ್ಲಿ ಎಂದಿಗೂ ಶೋಕ ಹೊಂದುವುದಿಲ್ಲ. ವ್ಯಕ್ತಿಗಳಲ್ಲಿ ದೋಷಗಳನ್ನು ಎಣಿಸುವುದಿಲ್ಲ. ನಿಜವಾದ ಕುಶಲರು ಅವರೇ ಎಂದು ತಿಳಿ.

ಯತ್ ಕರೋತ್ಯನಭಿಸಂಧಿಪೂರ್ವಕಂ
ತಚ್ಚ ನಿರ್ಹ್ಯದತಿ ಯತ್ ಪುರಾ ಕೃತಮ್ ।
ನ ಪ್ರಿಯಂ ತದುಭಯಂ ನ ಚಾಪ್ರಿಯಂ
ತಸ್ಯ ತಜ್ಜನಯತೀಹ ಕುರ್ವತಃ ॥೧೪॥

ಯಾವ ವಿವೇಕಿಯಾದ ಪುರುಷನು ನಿಷ್ಕಾಮ ಭಾವನೆಯಿಂದ ಭಗವತ್ಪ್ರೀತಿಗಾಗಿ ಕರ್ಮವನ್ನು ಮಾಡುತ್ತಾನೋ ಆ ಕರ್ಮವು ಅವನು ಹಿಂದೆ ಮಾಡಿದ ಅಶುಭ ಕರ್ಮದ ದುಷ್ಫಲಗಳನ್ನು ತೊಡೆದು ಹಾಕುತ್ತದೆ. ಬುದ್ಧಿಹೀನನಾಗಿ ಪುಣ್ಯಪಾಪಗಳನ್ನು ಮಾಡುವ ಪುರುಷನಿಗೆ ಅಬುದ್ಧಿಪೂರ್ವಕವಾಗಿ ಮಾಡಿದ ಪುಣ್ಯಕಾರ್ಯವು ಪ್ರಿಯ ಜನಕವಾಗುವುದಿಲ್ಲ. ಅಬುದ್ಧಿಪೂರ್ವಕವಾಗಿ ಮಾಡಿದ ಪಾಪಕರ್ಮವು ದುಃಖ ಕಾರಣವೂ ಆಗುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಚತುರಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೈದನೆಯ ಅಧ್ಯಾಯ

ಜ್ಞಾನಸಾಧನೆಯ ಉಪಾಯಗಳನ್ನು ವ್ಯಾಸರು ಶುಕಮುನಿಗೆ ನಿರೂಪಿಸಿದುದು.

ಶುಕಃ

ಯಸ್ಮಾದ್ಧರ್ಮಾತ್ ಪರೋ ಧರ್ಮೋ ವಿದ್ಯತೇ ನೇಹ ಕಶ್ಚನ ।
ಯೋ ವಿಶಿಷ್ಟಶ್ಚ ಧರ್ಮೇಭ್ಯಸ್ತಂ ಭವಾನ್ ಪ್ರಬ್ರವೀತು ಮೇ ॥೧॥

ಶುಕ– ಜನಕನೇ, ಎಲ್ಲ ಧರ್ಮಗಳಿಗಿಂತಲೂ ಉತ್ತಮವಾದ ಧರ್ಮವು ಯಾವುದು? ಆ ಧರ್ಮಕ್ಕಿಂತ ಹಿರಿದಾದ ಬೇರೆ ಯಾವ ಧರ್ಮವು ಇಲ್ಲವೋ ಅಂತಹ ಶ್ರೇಷ್ಠವಾದ ಧರ್ಮದ ಬಗ್ಗೆ ನನಗೆ ತಿಳಿಸಿರಿ.

ವ್ಯಾಸಃ

ಧರ್ಮಂ ತೇ ಸಂಪ್ರವಕ್ಷ್ಯಾಮಿ ಪುರಾಣಮೃಷಿಸಂಸ್ತುತಮ್ ।
ವಿಶಿಷ್ಟಂ ಸರ್ವಧರ್ಮೇಭ್ಯಸ್ತಮಿಹೈಕಮನಾಃ ಶೃಣು ॥೨॥

ವ್ಯಾಸರು– ಋಷಿಗಳು ಹೇಳಿರುವ, ಸಮಸ್ತ ಧರ್ಮಗಳಿಗಿಂತಲೂ ಉತ್ತಮವಾಗಿರುವ ಪ್ರಾಚೀನ ಧರ್ಮವನ್ನು ನಿನಗೆ ತಿಳಿಸುತ್ತೇನೆ. ಶ್ರದ್ಧೆಯಿಂದ ಕೇಳು.

ಇಂದ್ರಿಯಾಣಿ ಪ್ರಮಾಥೀನಿ ಬುದ್ಧ್ಯಾ ಸಂಯಮ್ಯ ಯತ್ನತಃ ।
ಸರ್ವತೋ ನಿಷ್ಪತಿಷ್ಣೂನಿ ಪಿತಾ ಬಾಲಾನಿವಾತ್ಮಜಾನ್ ॥೩॥

ನಮ್ಮನ್ನು ವಿಷಯಪದಾರ್ಥಗಳ ಕಡೆ ಸೆಳೆದಿಡುವ ಇಂದ್ರಿಯಗಳನ್ನು ಬುದ್ಧಿಯಿಂದ ನಿಯಂತ್ರಿಸಿಕೊಂಡು, ತಂದೆಯಾದವನು ತನ್ನ ಸಣ್ಣ ಮಕ್ಕಳನ್ನು ಯಾವ ರೀತಿಯಲ್ಲಿ ಅಂಕೆಯಲ್ಲಿಟ್ಟುಕೊಳ್ಳುತ್ತಾನೋ ಆ ರೀತಿ ಸಂಯಮವನ್ನು ಪ್ರಯತ್ನ ಪೂರ್ವಕವಾಗಿ ಇಂದ್ರಿಯಗಳ ವಿಷಯದಲ್ಲಿ ಹೊಂದಬೇಕು.

ಮನಸಶ್ಚೇಂದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ ।
ತಜ್ಜ್ಞಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ ॥೪॥

ಮನಸ್ಸು, ಇಂದ್ರಿಯಗಳನ್ನು ಏಕಾಗ್ರಗೊಳಿಸುವುದೇ ಶ್ರೇಷ್ಠವಾದ ತಪಸ್ಸೆನಿಸಿದೆ. ಮನಸ್ಸಿನ ಏಕಾಗ್ರತೆ ಎಂಬ ಧರ್ಮವು ಸಮಸ್ತ ಧರ್ಮಗಳಿಗಿಂತ ಶ್ರೇಷ್ಠತಮವಾದ ಧರ್ಮ ಎನಿಸಿದೆ.

ತಾನಿ ಸರ್ವಾಣಿ ಸಂಧಾಯ ಮನಃಷಷ್ಠಾನಿ ಮೇಧಯಾ ।
ಆತ್ಮತೃಪ್ತ ಇವಾಸೀತ ಬಹು ಚಿಂತ್ಯಮಚಿಂತಯನ್ ॥೫॥

ಸಮಸ್ತ ಇಂದ್ರಿಯಗಳನ್ನು ಬುದ್ಧಿಯ ಮೂಲಕ ಸ್ಥಿರಗೊಳಿಸಿ, ಬಾಹ್ಯ ಚಿಂತನೆಗಳಿಂದ ಮುಕ್ತನಾಗಿ, ಪರಮಾತ್ಮನ ಚಿಂತನೆಯಲ್ಲಿಯೇ ತೃಪ್ತನಾಗಿರುವಂತೆ ನಿಶ್ಚಿಂತನೂ, ಭಗವನ್ನಿಷ್ಠ ಬುದ್ಧಿಯನ್ನು ಉಳ್ಳವನೂ ಆಗಿ ನಿಶ್ಚಲನಾಗಿ ಇರಬೇಕು.

ಗೋಚರೇಭ್ಯೋ ನಿವೃತ್ತಾನಿ ಯದಾ ಸ್ಥಾಸ್ಯಂತಿ ವೇಶ್ಮನಿ ।
ತದಾ ತ್ವಮಾತ್ಮನಾತ್ಮಾನಂ ಪರಂ ದ್ರಕ್ಷ್ಯಸಿ ಶಾಶ್ವತಮ್ ॥೬॥

ವಿಷಯಗಳ ಕಡೆ ಸಾಗುವ ಇಂದ್ರಿಯಗಳು ಯಾವಾಗ ತಮ್ಮ ಸ್ಥಳಗಳಲ್ಲಿ ಸ್ಥಿರವಾಗಿ ನೆಲೆಸುತ್ತವೆಯೋ ಆಗ ನೀನು ಶಾಶ್ವತನಾದ, ಸರ್ವೋತ್ತಮನಾದ ಆ ಪರಬ್ರಹ್ಮನನ್ನು ನೋಡುವವನಾಗುತ್ತಿ.

ಸರ್ವಾತ್ಮಾನಂ ಮಹಾತ್ಮಾನಂ ವಿಧೂಮಮಿವ ಪಾವಕಮ್ ।
ತಂ ಪಶ್ಯಂತಿ ಮಹಾತ್ಮಾನೋ ಬ್ರಾಹ್ಮಣಾ ಯೇ ಮನೀಷಿಣಃ ॥೭॥

ಆ ಭಗವಂತನಾದರೂ ಸರ್ವಾಂತರ್ಯಾಮಿಯಾಗಿದ್ದಾನೆ. ಪರಮ ಚೇತನನಾಗಿದ್ದಾನೆ. ಹೊಗೆಯಿಂದ ರಹಿತನಾದ ಅಗ್ನಿಯಂತೆ ಇದ್ದಾನೆ. ಜ್ಞಾನಿಗಳಾದ ಯಾವ ಬ್ರಾಹ್ಮಣರಿದ್ದಾರೋ, ಮಹಾತ್ಮರಾದ ಅವರು ಅಂತಹ ಧೂಮರಹಿತವಾದ ಅಗ್ನಿಯಂತಿರುವ ಭಗವಂತನನ್ನು ನೋಡುತ್ತಾರೆ.

ಯಥಾ ಪುಷ್ಪಫಲೋಪೇತೋ ಬಹುಶಾಖೋ ಮಹಾದ್ರುಮಃ ।
ಆತ್ಮನೋ ನಾಭಿಜಾನೀತೇ ಕ್ವ ಮೇ ಪುಷ್ಪಂ ಕ್ವ ಮೇ ಫಲಮ್ ॥೮॥

ಏವಮಾತ್ಮಾ ನ ಜಾನೀತೇ ಕ್ವ ಗಮಿಷ್ಯೇ ಕುತೋ ನ್ವಹಮ್ ।
ಅನ್ಯೋ ಹ್ಯತ್ರಾಂತರಾತ್ಮಾಸ್ತಿ ಯಃ ಸರ್ವಮನುಪಶ್ಯತಿ ॥೯॥

ಯಾವ ರೀತಿಯಾಗಿ ಪುಷ್ಪ-ಫಲಗಳಿಂದ ಕೂಡಿರುವ, ಅನೇಕ ಶಾಖೆಗಳಿಂದ ತುಂಬಿರುವ ಮಹಾದ್ರುಮವು ತನ್ನಲ್ಲಿಯೇ ಇರುವ ಅನೇಕ ಪುಷ್ಪಗಳನ್ನಾಗಲಿ, ಫಲಗಳನ್ನಾಗಲಿ ಎಲ್ಲಿದ್ದಾವೆ ಎಂದು ತಿಳಿಯುವುದಿಲ್ಲವೋ ಅದೇ ರೀತಿಯಾಗಿ

ಜೀವಾತ್ಮನು ತಾನು ಎಲ್ಲಿಂದ ಬಂದವನು? ಎಲ್ಲಿಗೆ ಹೋಗುತ್ತಾನೆ? ಎಂಬುದನ್ನು ತಿಳಿದವನಾಗಿರುವುದಿಲ್ಲ. ಶರೀರದಲ್ಲಿ ಜೀವಾತ್ಮನಲ್ಲದೆ ಸರ್ವೋತ್ತಮನಾದ ಅಂತರ್ಯಾಮಿಯಾದ ಪರಮಾತ್ಮನೂ ಇದ್ದಾನೆ. ಅವನು ಈ ಜೀವನ ಸಮಸ್ತ ಆಗು-ಹೋಗುಗಳನ್ನು ನೋಡುತ್ತಿರುತ್ತಾನೆ.

ಜ್ಞಾನದೀಪೇನ ದೀಪ್ತೇನ ಪಶ್ಯತ್ಯಾತ್ಮಾನಮಾತ್ಮನಾ ।
ದೃಷ್ಟ್ವಾ ತ್ವಮಾತ್ಮನಾತ್ಮಾನಂ ನಿರಾತ್ಮಾ ಭವ ಸರ್ವವಿತ್ ॥೧೦॥

ಪ್ರಜ್ವಲಿತವಾದ ಜ್ಞಾನಮಯ ದೀಪದ ಮೂಲಕ ಜ್ಞಾನಿಯು ತನ್ನಲ್ಲಿಯೇ ಇರುವ ಪರಬ್ರಹ್ಮನನ್ನು ಕಾಣುತ್ತಾನೆ. ಅದರಂತೆ ನೀನೂ ಅಹಂಕಾರರಹಿತನಾಗಿ ಆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಸರ್ವಜ್ಞನಾಗು.

ವಿಮುಕ್ತಃ ಸರ್ವಪಾಪೇಭ್ಯೋ ಮುಕ್ತತ್ವಚ ಇವೋರಗಃ ।
ಪರಾಂ ಬುದ್ಧಿಮವಾಪ್ಯೇಹ ವಿಪಾಪ್ಮಾ ವಿಗತಜ್ವರಃ ॥೧೧॥

ಪೊರೆಯನ್ನು ಕಳಚಿಕೊಂಡಿರುವ ಹಾವಿನಂತೆ ಸಮಸ್ತ ಪಾಪಗಳಿಂದಲೂ ಮುಕ್ತನಾಗಿ, ಪರಮಾತ್ಮ ವಿಷಯಕವಾದ ಶ್ರೇಷ್ಠವಾದ ಬುದ್ಧಿಯನ್ನು ಆಶ್ರಯಿಸಿ ಪಾಪರಹಿತನೂ, ಚಿಂತಾ ರಹಿತನೂ ಆಗು.

ಸರ್ವತಃಸ್ರೋತಸಂ ಘೋರಾಂ ನದೀಂ ಲೋಕಪ್ರವಾಹಿನೀಮ್ ।
ಪಂಚೇಂದ್ರಿಯಗ್ರಾಹವತೀಂ ಮನಃಸಂಕಲ್ಪರೋಧಸಮ್ ॥೧೨॥

ಸಂಸಾರವೆಂಬುದು ದೊಡ್ಡ ನದಿಯ ಪ್ರವಾಹದಂತೆ ಮಹಾಭಯಂಕರವಾದುದು. ನಾನಾ ಮುಖವಾಗಿ ಹರಿಯುವ ನದಿಯಂತಿದೆ. ಮಹಾನದಿಯಲ್ಲಿರುವ ಮೊಸಳೆಗಳಂತೆ ಪಂಚಜ್ಞಾನೇಂದ್ರಿಯಗಳೇ ಮೊಸಳೆಗಳು. ಮನಸ್ಸಿನ ಸಂಕಲ್ಪವೆಂಬುದೇ ಅದರ ತೀರ ಪ್ರದೇಶವಾಗಿದೆ.

ಲೋಭಮೋಹತೃಣಚ್ಛನ್ನಾಂ ಕಾಮಕ್ರೋಧಸರೀಸೃಪಾಮ್ ।
ಸತ್ಯತೀರ್ಥಾನೃತಕ್ಷೋಭಾಂ ಕ್ರೋಧಪಂಕಾಂ ಸರಿದ್ವರಾಮ್ ॥೧೩॥

ಲೋಭ-ಮೋಹಗಳೇ ಅದರ ಮೇಲೆ ಬೆಳೆದಿರುವ ಆಚ್ಛಾದಿತ ಜೊಂಡುಗಳು. ಕಾಮ-ಕ್ರೋಧಗಳೇ ಅದರೊಳಗಿನ ಹಾವುಗಳು. ಸತ್ಯವೇ ಅದರ ತೀರ್ಥವು.

ಅಸತ್ಯವೆಂಬುದು ಅದರಲ್ಲಡಗಿದ ಅಲೆಯಂತಿದೆ. ಕೋಪವೆಂಬುದೇ ಸಂಸಾರ ನದಿಯ ಕೆಸರು. ಇಂತಹದ್ದು ಸಂಸಾರ ನದಿ.

ಅವ್ಯಕ್ತಪ್ರಭವಾಂ ಶೀಘ್ರಂ ದುಸ್ತರಾಮಕೃತಾತ್ಮಭಿಃ ।
ಪ್ರತರಸ್ವ ನದೀಂ ಬುದ್ಧ್ಯಾ ಕಾಮಗ್ರಾಹಸಮಾಕುಲಾಮ್ ॥೧೪॥

ಅವ್ಯಕ್ತ ಪ್ರಕೃತಿಯ ದೆಸೆಯಿಂದ ಇದು ಹುಟ್ಟುತ್ತದೆ. ಅತ್ಯಂತ ವೇಗದಿಂದ ಕೂಡಿದೆ. ಜಿತೇಂದ್ರಿಯರಲ್ಲದ ವ್ಯಕ್ತಿಗಳಿಗೆ, ಸತ್ಕರ್ಮಶೀಲರಲ್ಲದವರಿಗೆ ಇದನ್ನು ದಾಟಲು ಬಹಳ ದುಸ್ತರವು. ಕಾಮದಿಂದ ತುಂಬಿರುವ ಇಂತಹ ನದಿಯನ್ನು ಬ್ರಹ್ಮಜ್ಞಾನವೆಂಬ ವಿವೇಕದಿಂದ ನೀನು ದಾಟಬೇಕು.

ಸಂಸಾರಸಾಗರಗಮಾಂ ಯೋನಿಪಾತಾಲದುಸ್ತರಾಮ್ ।
ಆತ್ಮಜನ್ಮೋದ್ಭವಾಂ ತಾತ ಜಿಹ್ವಾವರ್ತಾಂ ದುರಾಸದಾಮ್ ॥೧೫॥

ಈ ನದಿಯು ಸಂಸಾರವೆಂಬ ಸಮುದ್ರವನ್ನೇ ಸೇರುತ್ತದೆ. ಜಾತಿ ವ್ಯಕ್ತಿಗಳೇ ಅದರ ಆಳವು. ಜನನವೇ ಆ ಸಂಸಾರನದಿಯ ಉಗಮವು. ಮಾತುಗಳೇ ದಾಟಲಾಗದ ಅದರ ಸುಳಿಗಳು.

ಯಾಂ ತರಂತಿ ಕೃತಪ್ರಜ್ಞಾ ಧೃತಿಮಂತೋ ಮನೀಷಿಣಃ ।
ತಾಂ ತೀರ್ಣಃ ಸರ್ವತೋಮುಕ್ತೋ ವಿಪೂತಾತ್ಮಾತ್ಮವಿಚ್ಛುಚಿಃ ॥೧೬॥

ಧೈರ್ಯಶಾಲಿಗಳಾದ ಪ್ರಾಜ್ಞರು ಈ ನದಿಯನ್ನು ದಾಟಬಲ್ಲರು. ನೀನು ಶಾಂತ ಮನಸ್ಕನಾಗಿ ಈ ನದಿಯನ್ನು ದಾಟಿದಾಗ ಶುದ್ಧನಾಗುತ್ತಿ.

ಉತ್ತಮಾಂ ಬುದ್ಧಿಮಾಸ್ಥಾಯ ಬ್ರಹ್ಮಭೂಯಂ ಗಮಿಷ್ಯಸಿ ।
ಸಂತೀರ್ಣಃ ಸರ್ವಸಂಕ್ಲೇಶಾನ್ ಪ್ರಸನ್ನಾತ್ಮಾ ವಿಕಲ್ಮಷಃ ॥೧೭॥

ಮಗನೇ, ಉತ್ತಮವಾದ ಬುದ್ಧಿಯಿಂದ ಬ್ರಹ್ಮಜ್ಞಾನವನ್ನು ನೀನು ಹೊಂದಿ, ಸಮಸ್ತ ಕ್ಲೇಶಗಳನ್ನು ದಾಟಿ, ಪ್ರಸನ್ನ ಮನಸ್ಕನಾಗಿ, ಕಲ್ಮಷರಹಿತನಾಗಿ ಸಮಸ್ತ ಕ್ಲೇಶಗಳಿಂದಲೂ ಮುಕ್ತನಾಗಿರು.

ಭೂಮಿಷ್ಠಾನೀವ ಭೂತಾನಿ ಪರ್ವತಸ್ಥೋ ನಿಶಾಮಯ ।
ಅಕ್ರುದ್ಧ್ಯನ್ನಪ್ರಹಷ್ಯಂಶ್ಚ ನ ನೃಶಂಸಮತಿಸ್ತಥಾ ।
ತತೋ ದ್ರಕ್ಷ್ಯಸಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ॥೧೮॥

ಪರ್ವತದ ಮೇಲೆ ನಿಂತವನು ಕೆಳಗೆ ನಿಂತಿರುವ ಪ್ರಾಣಿಗಳನ್ನು ನೋಡುವಂತೆ ಈ ಲೋಕವನ್ನು ನೋಡುತ್ತಿರು. ಕೋಪ-ಹರ್ಷಗಳಿಗೆ ತುತ್ತಾಗದಿರು. ಸಿಟ್ಟುಗೊಳ್ಳದ ಬುದ್ಧಿ ಇದ್ದಲ್ಲಿ ನೀನು ಸಮಸ್ತ ಭೂತಗಳ ಉತ್ಪತ್ತಿ, ವಿನಾಶಗಳನ್ನು ಭಗವಂತನ ದೆಸೆಯಿಂದ ಎಂಬುದನ್ನು ಕಾಣಬಲ್ಲೆ.

ಏವಂ ವೈ ಸರ್ವಧರ್ಮೇಭ್ಯೋ ವಿಶಿಷ್ಟಂ ಮೇನಿರೇ ಬುಧಾಃ ।
ಧರ್ಮಂ ಧರ್ಮಭೃತಾಂ ಶ್ರೇಷ್ಠ ಮುನಯಸ್ತತ್ತ್ವದರ್ಶಿನಃ ॥೧೯॥

ಹಿಂದಿನ ಜ್ಞಾನಿಗಳೆಲ್ಲರೂ ಇಂತಹ ಭಗವದ್‌ಜ್ಞಾನವನ್ನೇ ವಿಶೇಷವಾಗಿ ಸರ್ವಧರ್ಮಗಳಿಗಿಂತಲೂ ಶ್ರೇಷ್ಠವಾದ ಜ್ಞಾನವೆಂದು ತಿಳಿದಿದ್ದಾರೆ. ಮುನಿಗಳು, ತತ್ತ್ವದರ್ಶಿಗಳು, ಧಾರ್ಮಿಕಶ್ರೇಷ್ಠರೆಲ್ಲರೂ ಹೀಗೆ ಬ್ರಹ್ಮಜ್ಞಾನದಿಂದ ಸಂಸಾರವನ್ನು ದಾಟುವುದೇ ಶ್ರೇಷ್ಠವೆಂದು ತಿಳಿದಿದ್ದಾರೆ.

ಆತ್ಮನೋಽವ್ಯಯಿನೋ ಜ್ಞಾತ್ವಾ ಇದಂ ಪುತ್ರಾನುಶಾಸನಮ್ ।
ಪ್ರಯತಾಯ ಪ್ರವಕ್ತವ್ಯಂ ಹಿತಾಯಾನುಗತಾಯ ಚ ॥೨೦॥

ಮಗನೇ, ಈ ಉಪದೇಶವು ನಾಶರಹಿತನಾದ ಪರಮಾತ್ಮನ ಜ್ಞಾನೋಪದೇಶವು ಎಂದು ತಿಳಿದು, ನೀನು ವಿಧೇಯನಾದ, ಜಿತೇಂದ್ರಿಯನಾದ, ಅನುಸರಿಸಿ ಬರುವ ವ್ಯಕ್ತಿಗೆ ಮಾತ್ರವೇ ಈ ತತ್ತ್ವವನ್ನು ಹೇಳಬಹುದು.

ಆತ್ಮಜ್ಞಾನಮಿದಂ ಗುಹ್ಯಂ ಸರ್ವಗುಹ್ಯತಮಂ ಮಹತ್ ।
ಅಬ್ರುವಂ ಯದಹಂ ತಾತ ಆತ್ಮಸಾಕ್ಷಿಕಮಂಜಸಾ ॥೨೧॥

ಅತ್ಯಂತ ರಹಸ್ಯವಾದ ಈ ಪರಮಾತ್ಮ ಜ್ಞಾನವು ಅತ್ಯಂತ ಗಹನವಾಗಿಯೂ, ಮಹಾತ್ಮ್ಯವುಳ್ಳದ್ದೂ ಆಗಿದೆ. ನಾನು ಯಾವ ಮಹತ್ತಜ್ಞಾನವನ್ನು ನಿನಗೆ ಹೇಳಿದ್ದೇನೋ ಅದು ನನ್ನ ಪ್ರತ್ಯಕ್ಷ ಅನುಭವವಾಗಿದೆ.

ನೈವ ಸ್ತ್ರೀ ನ ಪುಮಾನೇತನ್ನೈವ ಚೇದಂ ನಪುಂಸಕಮ್ ।
ಅದುಃಖಮಸುಖಂ ಬ್ರಹ್ಮ ಭೂತಭವ್ಯಭವಾತ್ಮಕಮ್ ॥೨೨॥

ಈ ಪರಬ್ರಹ್ಮನು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ, ನಪುಂಸಕನೂ ಅಲ್ಲ. ಸುಖ-ದುಃಖಗಳನ್ನು ದಾಟಿರುವ ಭೂತ-ಭವಿಷ್ಯತ್-ವರ್ತಮಾನ ಕಾಲಗಳಲ್ಲಿ ವ್ಯಾಪ್ತವಾಗಿರುವ ಪರಿಪೂರ್ಣವಾದ ಬ್ರಹ್ಮವೆನಿಸಿದೆ.

ನೈತಜ್ಜ್ಞಾತ್ವಾ ಪುಮಾನ್ ಸ್ತ್ರೀ ವಾ ಪುನರ್ಭವಮವಾಪ್ನುಯಾತ್ ।
ಅಭವಪ್ರತಿಪತ್ತ್ಯರ್ಥಮೇತದ್ ವರ್ತ್ಮ ವಿಧೀಯತೇ ॥೨೩॥

ಈ ಬ್ರಹ್ಮಜ್ಞಾನವನ್ನು ಹೊಂದಿದ ವ್ಯಕ್ತಿ ಪುರುಷನಾಗಲಿ, ಸ್ತ್ರೀಯಾಗಲಿ ಪುನಃ ಹುಟ್ಟನ್ನು ಪಡೆಯುವುದಿಲ್ಲ. ಪುನರ್ಜನ್ಮವಾಗದಿರಲೆಂದೇ ಈ ರಹಸ್ಯವು ನಿರೂಪಿಸಲ್ಪಟ್ಟಿದೆ.

ಯಥಾ ಮತಾನಿ ಸರ್ವಾಣಿ ನ ಚೈತಾನಿ ಯಥಾ ತಥಾ ।
ಕಥಿತಾನಿ ಮಯಾ ಪುತ್ರ ಭವಂತಿ ನ ಭವಂತಿ ಚ ॥೨೪॥

ಮಗನೇ, ಬ್ರಹ್ಮಜ್ಞಾನವನ್ನು ಹೊಂದಲು ಯಾವ ಜ್ಞಾನಿಗಳ ಅಭಿಪ್ರಾಯವಿದೆಯೋ ಅದೆಲ್ಲವನ್ನೂ ಯಥಾವತ್ತಾಗಿ ಉಪದೇಶಿಸಿದ್ದೇನೆ. ಯೋಗ್ಯ ಅನುಷ್ಠಾನಶೀಲರಿಗೆ ಇವುಗಳು ಫಲಿಸುತ್ತವೆ. ಅನುಷ್ಠಾನಶೀಲರಾಗದವರಿಗೆ ಫಲಿಸುವುದಿಲ್ಲ.

ತತ್ಪ್ರೀತಿಯುಕ್ತೇನ ಗುಣಾನ್ವಿತೇನ
ಪುತ್ರೇಣ ಸತ್ಪುತ್ರಗುಣಾನ್ವಿತೇನ ।
ಪೃಷ್ಟೋ ಹೀದಂ ಪ್ರೀತಿಮತಾ ಹಿತಾರ್ಥಂ
ಬ್ರೂಯಾತ್ ಸುತಸ್ಯೇಹ ಯದುಕ್ತಮೇತತ್ ॥೨೫॥

ಶುಕಮುನಿಯೇ, ಪ್ರೀತಿಯುಳ್ಳವನು, ಗುಣವಂತನೂ, ಜಿತೇಂದ್ರಿಯನೂ ಆದ ಶಿಷ್ಯನಾಗಲಿ, ಪುತ್ರನಾಗಲಿ ಈ ಉತ್ತಮ ಧರ್ಮವನ್ನು ಕುರಿತು ಪ್ರಶ್ನಿಸಿದಾಗ ಅವರಿಗೆ ಮನಸ್ಸಂತೋಷದಿಂದ ಈ ವಿಷಯಗಳನ್ನು ನಾನು ಹೇಳಿದ ರೀತಿಯಲ್ಲಿ ಯಥಾರ್ಥವಾಗಿ ಉಪದೇಶ ಮಾಡುವುದು ನಿನ್ನ ಕರ್ತವ್ಯವೂ ಆಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತಾರನೆಯ ಅಧ್ಯಾಯ

ವ್ಯಾಸರು ಶುಕಮುನಿಯನ್ನು ಕುರಿತು ಜ್ಞಾನಸಾಧನ-ಸಾಮಗ್ರಿಗಳ ಬಗ್ಗೆ ನಿರೂಪಿಸಿದುದು.

ವ್ಯಾಸಃ

ಗಂಧಾನ್ ರಸಾನ್ನಾನುರುಂಧ್ಯಾತ್ ಸುಖಂ ವಾ
ನಾಲಂಕಾರಾಂಶ್ಚಾಪ್ನುಯಾತ್ತಸ್ಯ ತಸ್ಯ ।
ಮಾನಂ ಚ ಕೀರ್ತಿಂ ಚ ಯಶಶ್ಚ ನೇಚ್ಛೇತ್
ಸ ವೈ ಪ್ರಚಾರಃ ಪಶ್ಯತೋ ಬ್ರಾಹ್ಮಣಸ್ಯ ॥೧॥

ಮಗನೇ, ಪರಮಾತ್ಮನ ಜ್ಞಾನವನ್ನು ಸಂಪಾದಿಸಲು ಬಯಸಿದ ಸಾಧಕನು ಸುಗಂಧವನ್ನಾಗಲಿ, ರಸವನ್ನಾಗಲಿ, ಇತರ ವಿಷಯ ಸುಖಗಳನ್ನಾಗಲಿ ಹೊಂದಲು ತವಕ ಪಡಬಾರದು. ಇವುಗಳನ್ನೆಲ್ಲ ದೂರವಿರಿಸಬೇಕು. ಮಾನ, ಕೀರ್ತಿ, ಔದಾರ್ಯ, ಇದರಿಂದ ಉಂಟಾಗುವ ಯಶಸ್ಸು ಇವುಗಳನ್ನೂ ಬಯಸಬಾರದು. ವಿದ್ವಾಂಸನಾದ ಬ್ರಾಹ್ಮಣನಿಗೆ ಇವುಗಳಲ್ಲಿರುವ ನಿರ್ಲಿಪ್ತತೆಯೇ ಮುಖ್ಯವಾದ ಲಕ್ಷಣವು.

ಸರ್ವಾನ್ ವೇದಾನಧೀಯೀತ ಶುಶ್ರೂಷುರ್ಬ್ರಹ್ಮಚರ್ಯವಾನ್ ।
ಋಚೋ ಯಜೂಂಷಿ ಸಾಮಾನಿ ನ ತೇನ ನ ಸ ಬ್ರಾಹ್ಮಣಃ ॥೨॥

ಬ್ರಹ್ಮಜ್ಞಾನವನ್ನು ಬಯಸುವವನು ಸಮಸ್ತ ವೇದಗಳನ್ನು ಅಧ್ಯಯನ ಮಾಡಬೇಕು. ಗುರುಸೇವೆಯನ್ನು ಮಾಡಬೇಕು. ಬ್ರಹ್ಮಚರ್ಯವನ್ನು ಪಾಲಿಸಬೇಕು. ಹೀಗೆ ಮಾಡುತ್ತಾ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಅಧ್ಯಯನ ಮಾಡಿದವನು ಶ್ರೇಷ್ಠ ಬ್ರಾಹ್ಮಣನಾಗುತ್ತಾನೆ.

ಜ್ಞಾತಿವತ್ ಸರ್ವಭೂತಾನಾಂ ಸರ್ವವಿತ್ ಸರ್ವವೇದವಿತ್ ।
ನಾಕಾಮೋ ಮ್ರಿಯತೇ ಜಾತು ನ ತೇನ ನ ಚ ಬ್ರಾಹ್ಮಣಃ ॥೩॥

ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ಬಂಧುವಿನಂತೆ ಆತ್ಮೀಯತೆಯಿಂದ ನಡೆದುಕೊಳ್ಳಬೇಕು. ಎಲ್ಲ ಭೂತಗಳಲ್ಲಿಯೂ ಭಗವಂತನಿದ್ದಾನೆ ಎಂದು ಅರಿತವನು ವೇದಜ್ಞನು, ಸಮಸ್ತ ಶಾಸ್ತ್ರಜ್ಞನು ಆಗಿರುತ್ತಾನೆ. ಕಾಮರಹಿತನಾಗಿರುತ್ತಾನೆ. ಅವನಿಗೆ ಮೃತ್ಯುವಿನ ಭಯವಿರದು. ಅವನು ನಿಜವಾದ ಬ್ರಾಹ್ಮಣನೆನಿಸುತ್ತಾನೆ.

ಇಷ್ಟೀಶ್ಚ ವಿವಿಧಾಃ ಪ್ರಾಪ್ಯ ಕ್ರತೂಂಶ್ಚೈವಾಪ್ತದಕ್ಷಿಣಾನ್ ।
ನೈವ ಪ್ರಾಪ್ನೋತಿ ಬ್ರಾಹ್ಮಣ್ಯಮಭಿಧ್ಯಾನಾತ್ ಕಥಂಚನ ॥೪॥

ನಾನಾ ವಿಧವಾದ ಇಷ್ಟಿಗಳನ್ನು, ಬಹುದಕ್ಷಿಣಕವಾದ ಕ್ರತುಗಳನ್ನು ಮಾಡಿಯೂ ಬ್ರಹ್ಮಜ್ಞಾನವನ್ನು ಹೊಂದದಿದ್ದರೆ ಅವನು ಯಾವುದೇ ಕಾರಣದಿಂದಲೂ ಬ್ರಾಹ್ಮಣತ್ವವನ್ನು ಹೊಂದಿದವನಾಗುವುದಿಲ್ಲ.

ಯದಾ ಚಾಯಂ ನ ಬಿಭೇತಿ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಂಪದ್ಯತೇ ತದಾ ॥೫॥

ಸಾಧಕನು ಇತರ ಪ್ರಾಣಿಗಳ ವಿಷಯದಿಂದ ಯಾವಾಗ ಭಯ ಹೊಂದುವುದಿಲ್ಲವೋ, ಇತರ ಪ್ರಾಣಿಗಳಿಗೂ ಯಾವಾಗ ಭಯಪಡಿಸುವುದಿಲ್ಲವೋ, ಕಾಮ-ದ್ವೇಷಗಳಿಂದ ಮುಕ್ತನಾಗಿರುತ್ತಾನೋ ಅವನು ಗುಣಪರಿಪೂರ್ಣನಾದ ಪರಮಾತ್ಮನನ್ನು ಹೊಂದುತ್ತಾನೆ.

ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೬॥

ಯಾವ ಸಾಧಕನು ಸಮಸ್ತ ಭೂತಗಳ ವಿಷಯದಲ್ಲಿ ಮಾತು-ಮನಸ್ಸು-ಕೃತಿಗಳಿಂದ ಕೆಡಕನ್ನು ಮಾಡುವುದಿಲ್ಲವೋ ಆಗ ಅವನು ಗುಣಪರಿಪೂರ್ಣನಾದ ಭಗವಂತನನ್ನು ಹೊಂದುತ್ತಾನೆ.

ಕಾಮಬಂಧನಮೇವೈಕಂ ನಾನ್ಯದಸ್ತೀಹ ಬಂಧನಮ್ ।
ಕಾಮಬಂಧನಮುಕ್ತೋ ಹಿ ಬ್ರಹ್ಮಭೂಯಾಯ ಕಲ್ಪತೇ ॥೭॥

ಜಗತ್ತಿನಲ್ಲಿ ನಿಜವಾದ ಬಂಧನವೆಂದರೆ ಕಾಮದ ಅಪ್ಪುಗೆಯಾಗಿದೆ. ಬೇರೆ ಯಾವುದೂ ಬಂಧನವೆನಿಸುವುದಿಲ್ಲ. ಆದ್ದರಿಂದ ಕಾಮವನ್ನು ಸರ್ವಾತ್ಮನಾ ತ್ಯಜಿಸಿದವನು ಬ್ರಹ್ಮಜ್ಞಾನವನ್ನು ಹೊಂದಿದವನಾಗುತ್ತಾನೆ.

ಕಾಮತೋ ಮುಚ್ಯಮಾನಸ್ತು ಧೂಮ್ರಾಭ್ರಾದಿವ ಚಂದ್ರಮಾಃ ।
ವಿರಜಾಃ ಕಾಲಮಾಕಾಂಕ್ಷನ್ ಧೀರೋ ಧೈರ್ಯೇಣ ವರ್ತತೇ ॥೮॥

ಕಾಮನೆಗಳಿಂದ ಮುಕ್ತನಾದ ಧೀರ ಪುರುಷನು ಮೇಘಾಚ್ಛಾದಿತ ಮೋಡಗಳಿಂದ ಮುಕ್ತನಾದ ಚಂದ್ರನಂತೆ ರಜೋಗುಣಗಳಿಂದ ಮುಕ್ತನಾಗಿ, ನೈರ್ಮಲ್ಯಭಾವವನ್ನು ಹೊಂದಿ ಧೈರ್ಯದಿಂದ ತನ್ನ ಮೃತ್ಯುವನ್ನು, ಪ್ರತೀಕ್ಷೆಮಾಡುತ್ತಾನೆ.

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ಅಕಾಮಕಾಮೋ ನ ತು ಕಾಮಕಾಮಃ
ಸ ವೈ ಲೋಕಾತ್ ಸ್ವರ್ಗಮುಪೈತಿ ದೇಹೀ ॥೯॥

ನದಿಗಳು ನೀರಿನಿಂದ ತುಂಬುತ್ತಿದ್ದರೂ ವ್ಯತ್ಯಾಸ ಹೊಂದದ ಸಮುದ್ರವನ್ನು ನೀರು ಹೋಗಿ ಸೇರುವಂತೆ, ವಿಷಯಭೋಗಗಳು ಲಭಿಸುತ್ತಿದ್ದರೂ ಮನೋವಿಕಾರವಿಲ್ಲದ ಅಪರೋಕ್ಷಜ್ಞಾನಿಯನ್ನು ವಿಷಯಭೋಗಗಳು ಹೊಂದುತ್ತವೆ. ಇಂತಹ ಜ್ಞಾನಿಯು ವಿಷಯಾಸಕ್ತನೆಂದು ಕರೆಸಿಕೊಳ್ಳುವುದಿಲ್ಲ. ಅವನು ಮೋಕ್ಷವನ್ನು ಹೊಂದುತ್ತಾನೆ. ನಿಷಿದ್ಧ ವಿಷಯಗಳನ್ನು ಭೋಗಿಸುವವನೇ ವಿಷಯಾಸಕ್ತನೆನಿಸುತ್ತಾನೆ. ಅವನು ಮೋಕ್ಷ ಹೊಂದುವುದಿಲ್ಲ.

ವೇದಸ್ಯೋಪನಿಷತ್ ಸತ್ಯಂ ಸತ್ಯಸ್ಯೋಪನಿಷದ್ ದಮಃ ।
ದಮಸ್ಯೋಪನಿಷದ್ ದಾನಂ ದಾನಸ್ಯೋಪನಿಷತ್ತಪಃ ॥೧೦॥

ವೇದಗಳ ರಹಸ್ಯವು ಸತ್ಯ ಎನಿಸಿದೆ. ಸತ್ಯದ ರಹಸ್ಯವು ಇಂದ್ರಿಯನಿಗ್ರಹವೆನಿಸಿದೆ. ಇಂದ್ರಿಯನಿಗ್ರಹದ ರಹಸ್ಯವು ದಾನವೆನಿಸಿದೆ. ದಾನದ ರಹಸ್ಯವು ತಪಸ್ಸು ಎನಿಸಿದೆ.

ತಪಸೋಪನಿಷತ್ಯಾಗಸ್ಯಾಗಸ್ಯೋಪನಿಷತ್ ಸುಖಮ್ ।
ಸುಖಸ್ಯೋಪನಿಷತ್ಸ್ವರ್ಗಃ ಸ್ವರ್ಗಸ್ಯೋಪನಿಷಚ್ಛಮಃ ॥೧೧॥

ತಪಸ್ಸಿನ ರಹಸ್ಯವು ತ್ಯಾಗವೆನಿಸಿದೆ. ತ್ಯಾಗದ ರಹಸ್ಯವು ಸುಖವೆನಿಸಿದೆ. ಸುಖದ ರಹಸ್ಯವು ಸ್ವರ್ಗ ಎನಿಸಿದೆ. ಸ್ವರ್ಗದ ರಹಸ್ಯವು ಭಗವನ್ನಿಷ್ಠವಾದ ಬುದ್ಧಿ ಎನಿಸಿದೆ.

ಕ್ಲೇದನೇ ಶೋಕಮನಸೋಃ ಸಂತಾಪಂ ತೃಷ್ಣಯಾ ಸಹ ।
ಸತ್ತ್ವಮಿಚ್ಛಸಿ ಸಂತೋಷಾಚ್ಛಾಂತಿಲಕ್ಷಣಮುತ್ತಮಮ್ ॥೧೨॥

ಶೋಕ, ಮನಸ್ಸುಗಳು ಅನ್ಯೋನ್ಯ ಮಿಶ್ರಣ ಹೊಂದಿದಾಗ ದುಃಖಿತನಾಗುತ್ತಾನೆ. ಈ ಮನಸ್ಸಿನಲ್ಲಿ ಆಸೆಗಳು ದೂರವಾದಾಗ ಸಂತಾಪವೂ ದೂರವಾಗುತ್ತದೆ. ಬಳಿಕ ಸತ್ತ್ವಗುಣವನ್ನು ಹೊಂದಲು ಬಯಸುತ್ತಾನೆ. ಸತ್ತ್ವಗುಣದಿಂದ ಉತ್ತಮವಾದ ಶಾಂತಿಯು ಲಭಿಸುತ್ತದೆ.

ವಿಶೋಕೋ ನಿರ್ಮಮಃ ಶಾಂತಃ ಪ್ರಸನ್ನಾತ್ಮಾತ್ಮವಿತ್ತಮಃ ।
ಷಡ್ಭಿರ್ಲಕ್ಷಣವಾನೇತೈಃ ಸಮಗ್ರಃ ಪುನರೇಷ್ಯತಿ ॥೧೩॥

ದುಃಖಪಡದಿರುವಿಕೆ, ಮಮಕಾರ ಇಲ್ಲದಿರುವಿಕೆ, ಪ್ರಶಾಂತತೆ, ಚಿತ್ತಪ್ರಸನ್ನತೆ, ಮಾತ್ಸರ್ಯರಾಹಿತ್ಯ, ಸಂತೋಷ ಮೊದಲಾದ ಆರು ಲಕ್ಷಣಗಳು ಸತ್ತ್ವಗುಣದಿಂದ ಲಭಿಸುತ್ತವೆ. ಇದರಿಂದ ಜೀವನು ಪೂರ್ಣತೆಯನ್ನು ಹೊಂದುತ್ತಾನೆ.

ಷಡ್ಭಿಃ ಸತ್ತ್ವಗುಣೋಪೇತೈಃ ಪ್ರಾಜ್ಞೈರಧಿಕಮಂತ್ರಿಭಿಃ ।
ಯೇ ವಿದುಃ ಪ್ರೇತ್ಯ ಚಾತ್ಮಾನಮಿಹಸ್ಥಾಂಸ್ತಾಂಸ್ತಥಾ ವಿದುಃ ॥೧೪॥

ಮೇಲೆ ಹೇಳಿದ ಆರು ಸತ್ತ್ವಗುಣಗಳನ್ನು ಹೊಂದಿದ ಪ್ರಾಜ್ಞರು ಶ್ರೇಷ್ಠವಾದ ಆಲೋಚನೆಗಳಿಂದ ಅಂತರ್ಯಾಮಿಯಾದ ಪರಮಾತ್ಮನನ್ನು ತಿಳಿಯುತ್ತಾರೋ ಅವರು ಬಳಿಕವೂ ಅಂತಹ ಪರಬ್ರಹ್ಮನನ್ನೇ ಪುನಃ ಪುನಃ ಹೊಂದುತ್ತಾರೆ.

ಅಕೃತ್ರಿಮಮಸಂಹಾರ್ಯಂ ಪ್ರಾಕೃತಂ ನಿರುಪಸ್ಕೃತಮ್ ।
ಅಧ್ಯಾತ್ಮಂ ಸುಕೃತಂ ಪ್ರಾಪ್ತಃ ಸುಖಮವ್ಯಯಮಶ್ನುತೇ ॥೧೫॥

ಕೃತ್ರಿಮವಲ್ಲದ, ಅವಿನಾಶಿಯಾದ, ಸ್ವಾಭಾವಿಕವಾದ, ಯಾವುದೇ ಎರವಲನ್ನು ಪಡೆಯದಿರುವ, ಅಧ್ಯಾತ್ಮ ಎಂಬ ಪುಣ್ಯವನ್ನು ಹೊಂದಿದ ವ್ಯಕ್ತಿಯು ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ನಿಷ್ಪ್ರಚಾರಂ ಮನಃ ಕೃತ್ವಾ ಪ್ರತಿಷ್ಠಾಪ್ಯ ಚ ಸರ್ವತಃ ।
ಯಾಮಯಂ ಲಭತೇ ತುಷ್ಟಿಂ ಸಾ ನ ಶಕ್ಯಮತೋಽನ್ಯಥಾ ॥೧೬॥

ಮನಸ್ಸನ್ನು ಚಂಚಲವಾಗದಿರುವಂತೆ ವಿಷಯಗಳಿಂದ ವಿಮುಖವಾಗಿಸಿ ಭಗವಂತನಲ್ಲಿಯೇ ನೆಲೆಗೊಳಿಸಿದ ಯಾವ ಪುರುಷನು ಯಾವ ಸಂತೋಷವನ್ನು

ಹೊಂದುತ್ತಾನೋ ಆ ಸಂತೋಷವನ್ನು ಬೇರೆ ಯಾವ ವಿಧಾನದಿಂದಲೂ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಯೇನ ತೃಪ್ಯತ್ಯಭುಂಜಾನೋ ಯೇನ ತುಷ್ಯತ್ಯವಿತ್ತವಾನ್ ।
ಯೇನಾಸ್ನೇಹೋ ಬಲಂ ಧತ್ತೇ ಯಸ್ತಂ ವೇದ ಸ ವೇದವಿತ್ ॥೧೭॥

ಯಾವ ಪರಮಾತ್ಮನ ಜ್ಞಾನದಿಂದ ಊಟ ಮಾಡದೆ ಇದ್ದಲ್ಲಿಯೂ ತೃಪ್ತಿಯನ್ನು ಹೊಂದುತ್ತಾನೋ, ಧನವಿಲ್ಲದೆ ಇದ್ದರೂ ಸಂತೋಷವನ್ನು ಹೊಂದುತ್ತಾನೋ, ಯಾವ ಭಗವಂತನಿಂದ ತೈಲ-ಘೃತಾದಿ ವೈಭವವಿಲ್ಲದೇ ಇದ್ದರೂ ದೈಹಿಕವಾದ ಬಲವನ್ನು ಹೊಂದುತ್ತಾನೋ ಅಂತಹ ಬ್ರಹ್ಮಜ್ಞನನ್ನು ತಿಳಿದವನೇ ವೇದಜ್ಞನೆನಿಸುತ್ತಾನೆ.

ಸಂಗೋಪ್ಯ ಹ್ಯಾತ್ಮನೋ ದ್ವಾರಾಣ್ಯಪಿಧಾಯ ವಿಚಿಂತಯನ್ ।
ಯೋ ಹ್ಯಾಸ್ತೇ ಬ್ರಾಹ್ಮಣಃ ಶಿಷ್ಟಃ ಸ ಆತ್ಮರತಿರುಚ್ಯತೇ ॥೧೮॥

ಯಾವ ಸಾಧಕನು ಇಂದ್ರಿಯಗಳ ಬಾಹ್ಯವ್ಯಾಪಾರಗಳನ್ನು ತಡೆದು, ನಿಸ್ಸಂಗನಾಗಿ ಬ್ರಹ್ಮಜ್ಞಾನದಲ್ಲಿಯೇ ರತನಾಗಿರುತ್ತಾನೋ ಅಂತಹ ಶಿಷ್ಟನು ಪರಮಾತ್ಮನಲ್ಲಿಯೇ ರತಿಯುಳ್ಳವನು ಎಂದು ಕರೆಸಿಕೊಳ್ಳುತ್ತಾನೆ.

ಸಮಾಹಿತಂ ಪರೇ ತತ್ತ್ವೇ ಕ್ಷೀಣಕಾಮಮವಸ್ಥಿತಮ್ ।
ಸರ್ವತಃ ಸುಖಮನ್ವೇತಿ ವಪುಶ್ಚಾಂದ್ರಮಸಂ ಯಥಾ ॥೧೯॥

ಆ ಪರತತ್ತ್ವದಲ್ಲಿಯೇ ಚಿತ್ತೈಕಾಗ್ರತೆಯನ್ನು ಹೊಂದಿದವನು, ಯಾವುದೇ ಕಾಮನೆಗಳನ್ನು ಹೊಂದದಿರುವವನು ಶುಕ್ಲಪಕ್ಷದ ಚಂದ್ರನಂತೆ ಪ್ರವೃದ್ಧಮಾನವಾದ ಸಮಸ್ತ ವಿಧವಾದ ಸುಖವನ್ನು ಹೊಂದುತ್ತಾನೆ.

ಅವಿಶೇಷಾಣಿ ಭೂತಾನಿ ಗುಣಾಂಶ್ಚಾಭಜತೋ ಮುನೇಃ ।
ಸುಖೇನಾಪೋಹ್ಯತೇ ದುಃಖಂ ಭಾಸ್ಕರೇಣ ತಮೋ ಯಥಾ ॥೨೦॥

ಸಮಸ್ತ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾದ ಭಗವಂತನನ್ನು ಸಮಾನವಾಗಿ ಕಾಣುತ್ತಾನೋ, ತ್ರಿಗುಣಾತೀತನಾಗಿದ್ದಾನೋ ಅಂತಹ ಸಾಧಕನ ದುಃಖವು ಸೂರ್ಯನಿಂದ ಅಂಧಕಾರವು ನೀಗಿ ಹೋಗುವಂತೆ ಅನಾಯಾಸವಾಗಿ ಹೊರಟು ಹೋಗುತ್ತದೆ.

ತಮತಿಕ್ರಾಂತಕರ್ಮಾಣಮತಿಕ್ರಾಂತಗುಣಕ್ಷಯಮ್ ।
ಬ್ರಾಹ್ಮಣಂ ವಿಷಯಾಶ್ಲಿಷ್ಟಂ ಜರಾಮೃತ್ಯೂ ನ ವಿಂದತಃ ॥೨೧॥

ಕಾಮ್ಯ ಕರ್ಮಗಳನ್ನು ಪರಿತ್ಯಾಗ ಮಾಡಿರುವ, ತ್ರಿಗುಣಗಳ ಸಂಬಂಧವನ್ನು ನೀಗಿರುವ, ವಿಷಯ ವಾಸನೆಯಿಂದ ರಹಿತನಾದ ಬ್ರಾಹ್ಮಣನನ್ನು ಜರಾ-ಮೃತ್ಯುಗಳು ಬಾಧಿಸುವುದಿಲ್ಲ.

ಸ ಯದಾ ಸರ್ವತೋ ಮುಕ್ತಃ ಸಮಃ ಪರ್ಯವತಿಷ್ಠತೇ ।
ಇಂದ್ರಿಯಾಣೀಂದ್ರಿಯಾರ್ಥಾಂಶ್ಚ ಶರೀರಸ್ಥೋऽತಿವರ್ತತೇ ॥೨೨॥

ಯಾವಾಗ ಸಾಧಕನು ಸಮಸ್ತ ವಿಧವಾದ ಬಂಧನಗಳಿಂದಲೂ ವಿಮುಕ್ತನಾಗಿ ರಾಗ-ದ್ವೇಷಗಳಲ್ಲಿ ಸಮಬುದ್ಧಿಯುಳ್ಳವನಾಗಿದ್ದರೆ ಈ ಶರೀರದಲ್ಲಿರುವಾಗಲೇ ಅವನು ಇಂದ್ರಿಯಾರ್ಥಗಳನ್ನು ಮೀರಿದವನಾಗಿರುತ್ತಾನೆ.

ಕಾರಣಂ ಪರಮಂ ಪ್ರಾಪ್ಯ ಅತಿಕ್ರಾಂತಸ್ಯ ಕಾರ್ಯತಾಮ್ ।
ಪುನರಾವರ್ತನಂ ನಾಸ್ತಿ ಸಂಪ್ರಾಪ್ತಸ್ಯ ಪರಾತ್ ಪರಮ್ ॥೨೩॥

ಹೀಗೆ ಸಮಸ್ತ ಜಗತ್ಕಾರಣನಾದ ಪರಬ್ರಹ್ಮನನ್ನು ಹೊಂದಿ, ಕಾರ್ಯಾತ್ಮಕವಾದ ಈ ಪ್ರಕೃತಿತತ್ತ್ವವನ್ನು ಯಾವ ಸಾಧಕನು ಮೀರಿ ನಿಲ್ಲುತ್ತಾನೋ ಅಂತಹ ಪರಮ ಪದವನ್ನು ಹೊಂದಿದ ಬ್ರಹ್ಮಜ್ಞಾನಿಗೆ ಪುನರ್ಜನ್ಮದ ಭಯವು ಇರುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಡಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೇಳನೆಯ ಅಧ್ಯಾಯ

ವ್ಯಾಸರು ಶುಕಮುನಿಯನ್ನು ಕುರಿತು ಪಂಚಭೂತಗಳ ಕಾರ್ಯ ಮತ್ತು ಗುಣಗಳನ್ನು ವಿಸ್ತರಿಸಿದುದು.

ವ್ಯಾಸಃ

ದ್ವಂದ್ವಾನಿ ಮೋಕ್ಷಜಿಜ್ಞಾಸುರರ್ಥಧರ್ಮಾವನುಷ್ಠಿತಃ ।
ವಕ್ತ್ರಾ ಗುಣವತಾ ಶಿಷ್ಯಃ ಶ್ರಾವ್ಯಃ ಪೂರ್ವಮಿದಂ ಮಹತ್ ॥೧॥

ಮಗನೇ, ಧರ್ಮಾರ್ಥಗಳನ್ನೇ ಅನುಷ್ಠಾನ ಮಾಡುತ್ತಾ, ಸುಖ- ದುಃಖಾದಿ ದ್ವಂದ್ವಗಳಲ್ಲಿ ಸಿಲುಕಿದ ಶ್ರದ್ಧೆಯುಳ್ಳ, ಮೋಕ್ಷಮಾರ್ಗವನ್ನು ಅವಲಂಬಿಸಿದ ಜಿಜ್ಞಾಸುವು ಮೊದಲಿಗೆ ಉತ್ತಮ ಪ್ರವಚನಕಾರನಾದ ಆಚಾರ್ಯಪುರುಷನಿಂದ ಈ ಮಹತ್ವಪೂರ್ಣವಾದ ಅಧ್ಯಾತ್ಮ ವಿಚಾರವನ್ನು ತಿಳಿಯಬೇಕು.

ಆಕಾಶಂ ಮಾರುತೋ ಜ್ಯೋತಿರಾಪಃ ಪೃಥ್ವೀ ಚ ಪಂಚಮೀ ।
ಭಾವಾಭಾವೌ ಚ ಕಾಲಶ್ಚ ಸರ್ವಭೂತೇಷು ಪಂಚಸು ॥೨॥

ಆಕಾಶ, ವಾಯು, ಜಲ, ಅಗ್ನಿ, ಪೃಥಿವಿ, ಭಾವ, ಅಭಾವ, ಕಾಲ ಇವುಗಳು ಪಂಚಭೂತಾತ್ಮಕವಾದ ಪ್ರಾಣಿಗಳ ಎಲ್ಲ ಶರೀರದಲ್ಲಿಯೂ ಇರುತ್ತವೆ.

ಅಂತರಾತ್ಮಕಮಾಕಾಶಂ ತನ್ಮಯಂ ಶ್ರೋತ್ರಮಿಂದ್ರಿಯಮ್ ।
ತಸ್ಯ ಶಬ್ದಂ ಗುಣಂ ವಿದ್ಯಾನ್ಮೂರ್ತಿಶಾಸ್ತ್ರವಿಧಾನವಿತ್ ॥೩॥

ಆಕಾಶವು ಬರಿ ಬಯಲಿನಿಂದ ಕೂಡಿಕೊಂಡಿದೆ. ಶ್ರವಣೇಂದ್ರಿಯವು ಆಕಾಶಮಯವಾಗಿದೆ. ಶಾಸ್ತ್ರಜ್ಞರು ಶಬ್ದವನ್ನು ಆಕಾಶದ ಗುಣವೆಂದು ಹೇಳುತ್ತಾರೆ.

ಚರಣಂ ಮಾರುತಾತ್ಮೇತಿ ಪ್ರಾಣಾಪಾನೌ ಚ ತನ್ಮಯೌ ।
ಸ್ಪರ್ಶನಂ ಚೇಂದ್ರಿಯಂ ವಿದ್ಯಾತ್ತಥಾ ಸ್ಪರ್ಶಂ ಚ ತನ್ಮಯಮ್ ॥೪॥

ವಾಯುವು ಚಲನಾತ್ಮಕವಾದುದು. ಪ್ರಾಣಾಪಾನಗಳು ವಾಯುಸ್ವರೂಪವಾಗಿವೆ. ಸ್ಪರ್ಶೇಂದ್ರಿಯವು ವಾಯುಮಯವಾಗಿದೆ ಎಂದು ತಿಳಿಯಬೇಕು.

ತತಃ ಪಾಕಃ ಪ್ರಕಾಶಶ್ಚ ಜ್ಯೋತಿಶ್ಚಕ್ಷುಶ್ಚ ತನ್ಮಯಮ್ ।
ತಸ್ಯ ರೂಪಂ ಗುಣಂ ವಿದ್ಯಾತ್ತಮೋನ್ವಯಸಿತಾತ್ಮಕಮ್ ॥೫॥

ಪಾಕವು, ಬೆಳಕು, ಜೀರ್ಣಕಾರ್ಯವು, ನೇತ್ರವು - ಈ ಗುಣಗಳು ಅಗ್ನಿತತ್ತ್ವದ ಕಾರ್ಯವಾಗಿವೆ. ತೇಜಸ್ಸು ಕತ್ತಲನ್ನು ಪರಿಹರಿಸುವ ಗುಣವುಳ್ಳದ್ದು.

ಪ್ರಕ್ಲೇದಃ ಕ್ಷುದ್ರತಾ ಸ್ನೇಹ ಇತ್ಯಾಪೋ ಹ್ಯುಪದಿಶ್ಯತೇ ।
ರಸನಂ ಚೇಂದ್ರಿಯಂ ಜಿಹ್ವಾ ರಸಶ್ಚಾಪಾಂ ಗುಣೋ ಮತಃ ॥೬॥

ಬೆವರು, ದ್ರವ, ಜಿಡ್ಡು ಇವು ಜಲಮಯಗಳು. ರಸನೇಂದ್ರಿಯಗಳು, ರಸಗಳು ಜಲಮಯವೇ ಆಗಿವೆ.

ಸಂಘಾತಃ ಪಾರ್ಥಿವೋ ಧಾತುರಸ್ಥಿದಂತನಖಾನಿ ಚ ।
ಶ್ಮಶ್ರು ಲೋಮ ಚ ಕೇಶಾಶ್ಚ ಸಿರಾಃ ಸ್ನಾಯು ಚ ಚರ್ಮ ಚ ॥೭॥

ಘನವಾದ ವಸ್ತುಗಳು, ಹಲ್ಲುಗಳು, ಉಗುಳುಗಳು ಪಾರ್ಥಿವ ಎನಿಸಿವೆ. ಮೀಸೆ, ಮೈಕೂದಲು, ತಲೆಕೂದಲು, ಶಾಸ್ವಕೋಶಗಳು, ಚರ್ಮ ಇವೆಲ್ಲವೂ ಪಾರ್ಥಿವ ಎನಿಸಿವೆ.

ಇಂದ್ರಿಯಂ ಘ್ರಾಣಸಂಜ್ಞಾನಂ ನಾಸಿಕೇತ್ಯಭಿಧೀಯತೇ ।
ಗಂಧಶ್ಚೈವೇಂದ್ರಿಯಾರ್ಥೋ೯ಯಂ ವಿಜ್ಞೇಯಃ ಪೃಥಿವೀಮಯಃ ॥೮॥

ಘ್ರಾಣೇಂದ್ರಿಯವೆನಿಸಿದ ಮೂಗು, ಅದಕ್ಕೆ ವಿಷಯವಾದ ಗಂಧವು ಪೃಥಿವಿಮಯ ಎನಿಸಿದೆ.

ಉತ್ತರೇಷು ಗುಣಾಃ ಸಂತಿ ಸರ್ವೇ ಸರ್ವೇಷು ಚೋತ್ತರಾಃ ।
ಪಂಚಾನಾಂ ಭೂತಸಂಘಾನಾಂ ಸಂತತಿಂ ಮುನಯೋ ವಿದುಃ ॥೯॥

ಕುಮಾರನೇ, ಮೇಲೆ ಹೇಳಿದ ಪಂಚಭೂತಗಳಲ್ಲಿ ಹಿಂದಿನ ಭೂತಗಳ ಗುಣಗಳು ಮುಂದಿನ ಭೂತಗಳಲ್ಲಿ ಸೇರಿಕೊಂಡಿವೆ. ಮುಂದಿನ ಗುಣಗಳು ಹಿಂದಿನ ಭೂತಗಳಲ್ಲಿ ಇರುವುದಿಲ್ಲ ಎಂದು ಜ್ಞಾನಿಗಳು ತಿಳಿದಿದ್ದಾರೆ. ಪಂಚಭೂತಗಳ ಗುಣಗಳನ್ನು, ಕಾರ್ಯಗಳನ್ನು ಋಷಿಗಳು ಹೀಗೆ ತಿಳಿಸಿದ್ದಾರೆ.

ಮನೋ ನವಮಮೇತೇಷಾಂ ತು ಬುದ್ಧಿಸ್ತು ದಶಮೀ ಸ್ಮೃತಾ ।
ಏಕಾದಶೋ೭ಂತರಾತ್ಮಾ ಚ ಸರ್ವತಃ ಪರ ಉಚ್ಯತೇ ॥೧೦॥

ಹಿಂದೆ ಹೇಳಿದಂತೆ ಇಂದ್ರಿಯಪಂಚಕಗಳು, ಗುಣಪಂಚಕಗಳು ಇವುಗಳನ್ನು ಹೊಂದಿರುವ ಪಂಚಭೂತಗಳು, ಭಾವಾಭಾವ, ಕಾಲ ಎಂಬ ಎಂಟು ಪದಾರ್ಥಗಳ ನಡುವೆ ಒಂಬತ್ತನೆಯದ್ದಾಗಿ ಮನಸ್ತತ್ತ್ವವೂ ಇದೆ. ಬುದ್ಧಿಯು ಹತ್ತನೆಯ ತತ್ತ್ವ ಎನಿಸಿದೆ. ಆತ್ಮನು ಹನ್ನೊಂದನೆಯ ತತ್ತ್ವ ಎನಿಸಿದ್ದಾನೆ. ಈ ಹನ್ನೊಂದನೆಯ ತತ್ತ್ವ ಎನಿಸಿದ ಪರಮಾತ್ಮನೇ ಎಲ್ಲಕ್ಕಿಂತಲೂ ಮಿಗಿಲಾದವನು ಎನಿಸಿದ್ದಾನೆ.

ವ್ಯವಸಾಯಾತ್ಮಿಕಾ ಬುದ್ಧಿರ್ಮನೋ ವ್ಯಾಕರಣಾತ್ಮಕಮ್ ।
ಕರ್ಮಾನುಮಾನಾದ್ ವಿಜ್ಞೇಯಃ ಸ ಜೀವಃ ಕ್ಷೇತ್ರಸಂಜ್ಞಕಃ ॥೧೧॥

ಬುದ್ಧಿಯು ನಿಶ್ಚಯಾತ್ಮಕವಾದುದು. ಮನಸ್ಸು ವಿಕಾರಾತ್ಮಕವಾದುದು. ಶರೀರ, ಚೇಷ್ಟೆಗಳೆಂಬ ಕಾರಣಗಳಿಂದ ಕ್ಷೇತ್ರ ಎಂದು ಕರೆಸಿಕೊಳ್ಳುವ ಜೀವನನ್ನು ತಿಳಿದುಕೊಳ್ಳಬೇಕು. ಕ್ಷೇತ್ರಜ್ಞನಾದವನು ಭಗವಂತನೇ ಆಗಿದ್ದಾನೆ.

ಏಭಿಃ ಕಾಲಾಷ್ಟಮೈರ್ಭಾವೈರ್ಯಃ ಸರ್ವೈಃ ಸರ್ವಮನ್ವಿತಮ್ ।
ಪಶ್ಯತ್ಯಕಲುಷಂ ಪ್ರಾಜ್ಞಃ ಸ ಮೋಹಂ ನಾನುವರ್ತತೇ ॥೧೨॥

ಈ ರೀತಿಯಾಗಿ ಮನುಷ್ಯನು ಸಮಸ್ತ ಜಗತ್ತು ಪಂಚಭೂತಗಳು, ಭಾವ, ಅಭಾವ, ಕಾಲ ಎಂಬ ಎಂಟು ಪದಾರ್ಥಗಳಿಂದ ಕೂಡಿದೆ ಎಂದು ಸರಿಯಾಗಿ ತಿಳಿದಿರುವನೋ ಅವನು ಕಲುಶವಿಲ್ಲದ ಬುದ್ಧಿಯಿಂದ ಭಗವಂತನನ್ನು ನೋಡುತ್ತಾನೆ. ಅವನೆಂದಿಗೂ ಮೋಹವಶನಾಗುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆಂಟನೆಯ ಅಧ್ಯಾಯ

ಜೀವ-ಪರಮಾತ್ಮರನ್ನು ಯೋಗದ ಮೂಲಕ ಸಾಕ್ಷಾತ್ಕರಿಸುವ ವಿಧಾನವನ್ನು ವ್ಯಾಸರು ನಿರೂಪಿಸಿದುದು.

ವ್ಯಾಸಃ

ಶರೀರಾದ್ ವಿಪ್ರಮುಕ್ತಂ ಹಿ ಸೂಕ್ಷ್ಮಭೂತಂ ಶರೀರಿಣಮ್ ।
ಕರ್ಮಭಿಃ ಪರಿಪಶ್ಯಂತಿ ಶಾಸ್ತ್ರೋಕ್ತೈಃ ಶಾಸ್ತ್ರಚೇತಸಃ ॥೧॥

ಕುಮಾರನೇ, ಶಾಸ್ತ್ರಜ್ಞರು ಸ್ಥೂಲಶರೀರದಿಂದ ಮುಕ್ತರಾಗಿ ಸೂಕ್ಷ್ಮವಾದ ಲಿಂಗಶರೀರವನ್ನು ಹೊಂದಿರುವ ಜೀವಾತ್ಮನನ್ನು ಯೋಗಸಾಧನೆಗಳಿಂದ, ಸತ್ಕರ್ಮಾನುಷ್ಠಾನಗಳಿಂದಲೂ ತಿಳಿಯಬಲ್ಲರು.

ಯಥಾ ಮರೀಚ್ಯಃ ಸಹಿತಾಶ್ಚರಂತಿ
ಗಚ್ಛಂತಿ ತಿಷ್ಠಂತಿ ಚ ದೃಶ್ಯಮಾನಾಃ ।
ದೇಹೈರ್ವಿಮುಕ್ತಾ ವಿಚರಂತಿ ಲೋಕಾಂ-
ಸ್ತಥೈವ ಸತ್ತ್ವಾನ್ಯತಿಮಾನುಷಾಣಿ ॥೨॥

ಯಾವ ರೀತಿಯಾಗಿ ಸೂರ್ಯನ ಕಿರಣಗಳು ಒಂದಕ್ಕೊಂದು ಹೊಂದಿಕೊಂಡು ಎಲ್ಲ ಕಡೆಯಲ್ಲಿಯೂ ಚಲಿಸುತ್ತವೆಯೋ, ಎಲ್ಲರಿಗೂ ಕಾಣುವಂತೆ ಆಕಾಶವನ್ನೆಲ್ಲ ವ್ಯಾಪಿಸಿರುತ್ತವೆಯೋ ಅದರಂತೆ ಸ್ಥೂಲದೇಹರಿಂದ ವಿಮುಕ್ತರಾದ ಜೀವರು ಮನುಷ್ಯ ಲೋಕದಿಂದ ದಾಟಿದವರಾಗಿ, ಉತ್ತಮ ಲೋಕಗಳಲ್ಲಿ ಸಂಚರಿಸುತ್ತಾರೆ.

ಪ್ರತಿರೂಪಂ ಯಥೈವಾಪ್ಸು ತಾಪಃ ಸೂರ್ಯಸ್ಯ ಲಕ್ಷ್ಯತೇ ।
ಸತ್ತ್ವವಾಂಸ್ತು ತಥಾ ಸತ್ತ್ವಂ ಪ್ರತಿರೂಪಂ ಪ್ರಪಶ್ಯತಿ ॥೩॥

ಯಾವ ರೀತಿ ಸೂರ್ಯನ ಪ್ರತಿಬಿಂಬವು ಜಲಾಶಯಗಳಲ್ಲಿ ಕಾಣಿಸುತ್ತದೋ, ಸೂರ್ಯನ ತಾಪವು ನಮಗೆ ಅನುಭವ ಗೋಚರವಾಗುತ್ತದೋ ಅದೇ ರೀತಿ ಜ್ಞಾನ ಸತ್ತ್ವವುಳ್ಳ, ಸತ್ತ್ವಗುಣವುಳ್ಳ ಯೋಗಿಯು ಜೀವರಾಶಿಗಳ ಪ್ರತಿರೂಪಗಳನ್ನು ಕಾಣುತ್ತಾನೆ.

ತಾನಿ ಸೂಕ್ಷ್ಮಾಣಿ ಸತ್ತ್ವಸ್ಥಾ ವಿಮುಕ್ತಾನಿ ಶರೀರತಃ ।
ಸ್ವೇನ ತತ್ತ್ವೇನ ತತ್ತ್ವಜ್ಞಾಃ ಪಶ್ಯಂತಿ ನಿಯತೇಂದ್ರಿಯಾಃ ॥೪॥

ಸ್ಥೂಲಶರೀರದಿಂದ ಬಿಡುಗಡೆ ಹೊಂದಿರುವ ಲಿಂಗಶರೀರಿಗಳಾದ ಜೀವರನ್ನು ಕಾಣಲು ಇಂದ್ರಿಯಗಳನ್ನು ವಶೀಕರಿಸಿಕೊಂಡಿರುವ ತತ್ತ್ವಜ್ಞರೇ ಸಮರ್ಥರಾಗಿರುತ್ತಾರೆ.

ಸ್ವಪತಾಂ ಜಾಗ್ರತಾಂ ಚೈವ ಸರ್ವೇಷಾಮಾತ್ಮಚಿಂತಿತಮ್ ।
ಪ್ರಧಾನದ್ವೈಧಮುಕ್ತಾನಾಂ ಜಹತಾಂ ಕರ್ಮಜಂ ರಜಃ ॥೫॥

ಯಥಾಹನಿ ತಥಾ ರಾತ್ರೌ ಯಥಾ ರಾತ್ರೌ ತಥಾಹನಿ ।
ವಶೇ ತಿಷ್ಠತಿ ಸತ್ತ್ವಾತ್ಮಾ ಸತತಂ ಯೋಗಯೋಗಿನಾಮ್ ॥೬॥

ತಮ್ಮ ಸಂಕಲ್ಪದಿಂದಲೂ, ಕರ್ಮದಿಂದಲೂ ಉಂಟಾಗುವ ಕಾಮಾದಿಗಳನ್ನು ತೊರೆದವರು, ಸಂಶಯದಿಂದ ಮುಕ್ತರಾದವರು, ಪ್ರಕೃತಿ ಸಂಬಂಧದಿಂದ

ಬಿಡಲ್ಪಟ್ಟವರು ಆದ ಯೋಗಿಗಳು ಮಲಗಿದ್ದರೂ, ಎಚ್ಚರಗೊಂಡಿದ್ದರೂ ರಾತ್ರಿಯಲ್ಲಿ ಹೇಗೋ ಹಾಗೆ ಹಗಲಿನಲ್ಲಿಯೂ, ಹಗಲಿನಲ್ಲಿ ಹೇಗೋ ಹಾಗೆ ರಾತ್ರಿಯಲ್ಲಿಯೂ ಅವರಿಗೆ ಜೀವಾತ್ಮನು ವಶವರ್ತಿಯಾಗಿರುತ್ತಾನೆ. ತಮ್ಮ ನಿಗ್ರಹದಲ್ಲಿ ತಾವು ಇರುತ್ತಾರೆ ಎಂದು ಭಾವ.

ತೇಷಾಂ ನಿತ್ಯಂ ಸದಾನಿತ್ಯೋ ಭೂತಾತ್ಮಾ ಸತತಂ ಗುಣೈಃ ।
ಸಪ್ತಭಿಸ್ತ್ವನ್ವಿತಃ ಸೂಕ್ಷ್ಮೈಶ್ಚರಿಷ್ಣುರಜರಾಮರಃ ॥೭॥

ಮನೋಬುದ್ಧಿಪರಾಭೂತಃ ಸ್ವದೇಹಪರದೇಹವಿತ್ ।
ಸ್ವಪ್ನೇಷ್ವಪಿ ಭವತ್ಯೇಷ ವಿಜ್ಞಾತಾ ಸುಖದುಃಖಯೋಃ ॥೮॥

ಸ್ವಭಾವತಃ ಸದಾ ನಿತ್ಯನಾದ, ಅಜರಾಮರನಾದ ಜೀವನು ಪಂಚ ಮಹಾಭೂತಗಳ ಗುಣಗಳಾದ ರೂಪ-ರಸಾದಿಗಳಿಂದ ನಿರಂತರವೂ ಸಂಚರಿಸುತ್ತಾ ಪಂಚೇಂದ್ರಿಯಗಳು, ಮನಸ್ಸು, ಬುದ್ಧಿಗಳಿಂದ ಕೂಡಿದವನಾಗಿ, ತನ್ನ ಸ್ವರೂಪ ಯೋಗ್ಯವಾದ ದೇಹವನ್ನು, ವಿಪರೀತ ದೇಹವನ್ನು ಕರ್ಮವಶದಿಂದ ಹೊಂದುವವನಾಗಿರುತ್ತಾನೆ. ಮನಸ್ಸು, ಬುದ್ಧಿಗಳಿಂದ ಪರಾಜಿತನಾಗಿರುತ್ತಾನೆ. ಸುಖ-ದುಃಖಗಳನ್ನು ಸ್ವಪ್ನದಲ್ಲಿಯೂ ಕಾಣುತ್ತಿರುತ್ತಾನೆ.

ತತ್ರಾಪಿ ಲಭತೇ ದುಃಖಂ ತತ್ರಾಪಿ ಲಭತೇ ಸುಖಮ್ ।
ಕ್ರೋಧಲೋಭೌ ತು ತತ್ರಾಪಿ ಕೃತ್ವಾ ವ್ಯಸನಮರ್ಚ್ಛತಿ ॥೯॥

ಮನೋಬುದ್ಧಿ ಇಂದ್ರಿಯಗಳಿಗೆ ವಶನಾಗಿರುವ ಜೀವನು ಕನಸಿನಲ್ಲಿಯೂ ದುಃಖವನ್ನು ಅನುಭವಿಸುತ್ತಾನೆ, ಸುಖವನ್ನೂ ಅನುಭವಿಸುತ್ತಾನೆ. ಅವನು ನಿದ್ರಾ ಸಮಯದಲ್ಲಿಯೂ ಕ್ರೋಧ-ಲೋಭಗಳಿಗೆ ಅಧೀನನಾಗಿ ಮಹಾದುಃಖವನ್ನೇ ಅನುಭವಿಸುತ್ತಾನೆ.

ಪ್ರೀಣಿತಶ್ಚಾಪಿ ಭವತಿ ಮಹತೋರ್ಥಾನವಾಪ್ಯ ಚ ।
ಕರೋತಿ ಪುಣ್ಯಂ ತತ್ರಾಪಿ ಜಾಗ್ರನ್ನಿವ ಚ ಪಶ್ಯತಿ ॥೧೦॥

ಸ್ವಪ್ನಾವಸ್ಥೆಯಲ್ಲಿಯೂ ಅಪಾರವಾದ ಐಶ್ವರ್ಯವನ್ನು ಪಡೆದುಕೊಂಡಾಗ ಸಂತೋಷ ಪಡುತ್ತಾನೆ. ಕನಸಿನಲ್ಲಿಯೇ ಪುಣ್ಯಕಾರ್ಯವನ್ನು ಮಾಡುತ್ತಾನೆ.

ಜಾಗ್ರದವಸ್ಥೆಯಲ್ಲಿ ಎಲ್ಲವನ್ನೂ ನೋಡುವಂತೆ ಸ್ವಪ್ನಾವಸ್ಥೆಯಲ್ಲಿಯೂ ಅದೇ ರೀತಿ ಸುಖ-ದುಃಖಗಳನ್ನು ನೋಡುತ್ತಿರುತ್ತಾನೆ.

ತಮೇವಮತಿತೇಜೋಂಶಂ ಭೂತಾತ್ಮಾನಂ ಹೃದಿ ಸ್ಥಿತಮ್ ।
ತಮೋರಜೋಭ್ಯಾಮಾವಿಷ್ಟಾ ನಾನುಪಶ್ಯಂತಿ ಮೂರ್ತಿಷು ॥೧೧॥

ಅತ್ಯಂತ ತೇಜಸ್ಸಿನಿಂದ ಕೂಡಿರುವ, ಸಮಸ್ತ ಜೀವರ ಅಂತರ್ಯಾಮಿಯಾಗಿರುವ ಭಗವಂತನನ್ನು ತಮ್ಮ ಹೃದಯದಲ್ಲೇ ಇದ್ದಾನೆಂದು ರಜೋಗುಣ, ತಮೋಗುಣಗಳಿಂದ ಆವಿಷ್ಟರಾದ ಜೀವರು ಕಾಣುವುದಿಲ್ಲ.

ಶಾಸ್ತ್ರಯೋಗಪರಾ ಭೂತ್ವಾ ಸ್ವಮಾತ್ಮಾನಂ ಪರೀಪ್ಸವಃ ।
ಅನುಚ್ಛ್ವಾಸಾನ್ಯಮೂರ್ತೀನಿ ಯಾನಿ ವಜ್ರೋಪಮಾನ್ಯಪಿ ॥೧೨॥

ಪೃಥಗ್ಭೂತೇಷು ಸೃಷ್ಟೇಷು ಚತುರ್ವಾಶ್ರಮಕರ್ಮಸು ।
ಸಮಾಧೌ ಯೋಗಮೇವೈತಚ್ಛಾಂಡಿಲ್ಯಃ ಸಮಮಬ್ರವೀತ್ ॥೧೩॥

ಯೋಗಶಾಸ್ತ್ರಪರಾಯಣರಾಗಿ ಭಗವಂತನನ್ನು ನೋಡಲು ಬಯಸುವವರು ಶ್ವಾಸೋಚ್ಛ್ವಾಸರಹಿತವಾದ, ವಜ್ರದಂತೆ ಅಚಲವಾದ ಶಿಖರಗಳುಳ್ಳ, ದೇಹ ರಹಿತಗಳಾದ, ಪ್ರತ್ಯೇಕವಾಗಿ ಸೃಷ್ಟಿಯನ್ನು ಹೊಂದಿರುವ, ನಾಲ್ಕು ಆಶ್ರಮಗಳಲ್ಲಿ ಕೂಡಿರುವ ಆಶ್ರಮಧರ್ಮಗಳಿಂದ, ಆಶ್ರಮ ಕರ್ಮಾನುಷ್ಠಾನದಲ್ಲಿ ನಿರತರಾಗಿರುವ ವ್ಯಕ್ತಿಗಳಿಗೆ ಸಮಾಧಿಯೋಗವೇ ಅಚಲ ಶೃಂಗಗಳಿಗೆ ಸಮಾನವಾಗಿದೆಯೋ ಅಂತಹ ಶಾಂಡಿಲ್ಯಮುನಿಯು ಭಗವತ್ತತ್ತ್ವವನ್ನು ಹೊಂದುವ ಬಗೆ ಹೇಗೆ ಎಂಬುದನ್ನು ತಿಳಿಸಿದ್ದಾನೆ. ಸಮಾಧಿಯ ಪ್ರಕಾರವನ್ನು ಉಚ್ಛ್ವಾಸರಹಿತವೆಂದು, ವಜ್ರದಂತ ಶೃಂಗವುಳ್ಳದ್ದೆಂದು, ದೇಹರಹಿತವಾದದ್ದೆಂದು ಇಲ್ಲಿ ತಿಳಿಸಲಾಗಿದೆ.

ವಿದಿತ್ವಾ ಸಪ್ತ ಸೂಕ್ಷ್ಮಾಣಿ ಷಡಂಗಂ ಚ ಮಹೇಶ್ವರಮ್ ।
ಪ್ರಧಾನವಿನಿಯೋಗಸ್ಥಃ ಪರಂ ಬ್ರಹ್ಮಾಧಿಗಚ್ಛತಿ ॥೧೪॥

ಪಂಚೇಂದ್ರಿಯ, ಬುದ್ಧಿ, ಮನಸ್ಸುಗಳನ್ನು ಏಳು ಸೂಕ್ಷ್ಮಗಳೆಂದಿದ್ದಾರೆ. ಇವುಗಳನ್ನು ಚೆನ್ನಾಗಿ ಅರಿತು, ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನನ್ನು ತಿಳಿದು,

ಅಂತಃಕರಣದಲ್ಲಿ ಪರಮಾತ್ಮನನ್ನೇ ನೋಡುವಂತಹ ಸ್ಥಿರನಾದ ಯೋಗಿಯು ಪರಬ್ರಹ್ಮನನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂಬತ್ತನೆಯ ಅಧ್ಯಾಯ

ವ್ಯಾಸರು ಶುಕಮುನಿಯನ್ನು ಕುರಿತು ಕಾಮಾದಿಗಳ ಜಯದ ಅನಿವಾರ್ಯತೆಯನ್ನು ನಿರೂಪಿಸಿದುದು.

ವ್ಯಾಸಃ

ಹೃದಿ ಕಾಮದ್ರುಮಶ್ಚಿತ್ತ್ರೋ ಮೋಹಸಂಚಯಸಂಭವಃ ।
ಕ್ರೋಧಮಾನಮಹಾಸ್ಕಂಧೋ ವಿವಿತ್ಸಾಪರಿಮೋಚನಃ ॥೧॥

ಮಗನೇ, ಮನುಷ್ಯನ ಹೃದಯದಲ್ಲಿ ಬೇರು ಬಿಡುತ್ತಿರುವ ಕಾಮವೆಂಬ ವೃಕ್ಷವು ಅತ್ಯಂತ ವಿಚಿತ್ರವಾದುದು. ಕಾಮವೆಂಬ ವೃಕ್ಷಕ್ಕೆ ಮೋಹವೇ ಬೀಜವಾಗಿದೆ. ಕ್ರೋಧ-ಅಹಂಕಾರಗಳು ಆ ವೃಕ್ಷದ ದೊಡ್ಡ ಕಾಂಡವೆನಿಸಿವೆ. ಕರ್ಮಾಸಕ್ತಿಯೇ ಅದರ ಪಾತಿ.

ತಸ್ಯ ಚಾಜ್ಞಾನಮಾಧಾರಃ ಪ್ರಮಾದಃ ಪರಿಷೇಚನಮ್ ।
ಸೋऽಭ್ಯಸೂಯಾಪಲಾಶೋ ಹಿ ಪುರಾ ದುಷ್ಕೃತಸಾರವಾನ್ ॥೨॥

ಅಜ್ಞಾನವೆಂಬುದು ಅದರ ಆಧಾರವಾದ ಬೇರು. ಪ್ರಮಾದವು ಅದಕ್ಕೆ ಬೇಕಾಗಿರುವ ನೀರು. ಅಸೂಯೆ ಎಂಬುದೇ ಅದರ ಎಲೆಗಳು. ದುಷ್ಕರ್ಮಗಳೇ ಅದರ ತಿರುಳು.

ಸಮ್ಮೋಹಚಿಂತಾವಿಟಪಃ ಶೋಕಶಾಖೋ ಭಯಂಕರಃ ।
ಮೋಹನೀಭಿಃ ಪಿಪಾಸಾಭಿರ್ಲತಾಭಿಃ ಪರಿವೇಷ್ಟಿತಃ ॥೩॥

ಮೋಹ-ಚಿಂತೆಗಳು ಆ ಮರದ ಸಣ್ಣಕವಲುಗಳು. ಶೋಕವು ಅದರ ಕೊಂಬೆ. ಭಯವೇ ಮೊಳಕೆ. ಮೋಹಕರವಾದ ಅಸತ್ಕಾಮನೆಗಳು ಮರವನ್ನು ಸುತ್ತಿರುವ ಬಳ್ಳಿಗಳು.

ಉಪಾಸತೇ ಮಹಾವೃಕ್ಷಂ ಸುಲುಬ್ಧಾಸ್ತಂ ಫಲೇಪ್ಸವಃ ।
ಆಯಾಸೈಃ ಸಂಯತಃ ಪಾಶೈಃ ಫಲಾನಿ ಪರಿವೇಷ್ಟಯನ್ ॥೪॥

ಲೋಭದಲ್ಲಿ ಆಸಕ್ತರಾದವರು ಈ ಮರದ ಫಲದಲ್ಲಿಯೇ ಆಸೆಯುಳ್ಳವರು ಆಗಿರುತ್ತಾರೆ. ಅನಾದಿ ಕಾಮವಾಸನೆ ಎಂಬ ಪಾಶಗಳಿಂದ ಬಂಧಿತರಾಗಿ ಆ ಮರದ ಸುತ್ತಲೂ ಆತುರದಿಂದ ಕಾದಿರುತ್ತಾರೆ.

ಯಸ್ತಾನ್ ಪಾಶಾನ್ವಶೇ ಕೃತ್ವಾ ತಂ ವೃಕ್ಷಮಪಕರ್ಷತಿ ।
ಗತಃ ಸ ದುಃಖಯೋರಂತಂ ಯತಮಾನಸ್ತಯೋರ್ದ್ವಯೋಃ ॥೫॥

ಈ ಸಂಸಾರ ವೃಕ್ಷದ ಮೋಹ ಪಾಶಗಳನ್ನೇ ತಮ್ಮ ವಶ ಮಾಡಿಕೊಂಡು, ಅದರ ಬಲದಿಂದಲೇ ಕಾಮವೃಕ್ಷವನ್ನು ಬಲವಾಗಿ ಸೆಳೆದು ನಾಶ ಮಾಡುವವರು ಈ ಸಾಂಸಾರಿಕ ದುಃಖಗಳ ಜನನ-ಮರಣವೆಂಬ ಭಯದಿಂದ ತಪ್ಪಿಸಿಕೊಳ್ಳಬಲ್ಲರು.

ಸಂರೋಹತ್ಯಕೃತಪ್ರಜ್ಞಃ ಸಂತಾಪೇನ ಹಿ ಪಾದಪಮ್ ।
ಸ ತಮೇವ ತತೋ ಹಂತಿ ವಿಷಂ ಗ್ರಸ್ತಮಿವಾತುರಮ್ ॥೬॥

ವಿವೇಕರಹಿತನಾದವನು ಈ ಸಂಸಾರ ವೃಕ್ಷವನ್ನು ಏರಿ, ಸಂತಾಪವೆಂಬ ಮರವನ್ನೇ ಆಶ್ರಯಿಸಿಕೊಂಡು, ಅಲ್ಲಿರುವ ವಿಷಯ ಸುಖಗಳೆಂಬ ಫಲಗಳನ್ನೇ ಭ್ರಮೆಯಿಂದ ತಿನ್ನುತ್ತಾ ಮುಳುವಿಕೆಗೆ ಈಡಾಗುತ್ತಾನೆ.

ತಸ್ಯಾನುಶಯಮೂಲಸ್ಯ ಮೂಲಮುದ್ಧ್ರಿಯತೇ ಬಲಾತ್ ।
ತ್ಯಾಗಾಪ್ರಮಾದಾಕೃತಿನಾ ಸಾಮ್ಯೇನ ಪರಮಾಸಿನಾ ॥೭॥

ವಿವೇಕಿಗಳಾದವರು ಯೋಗವೆಂಬ ಬಲವಾದ ಕತ್ತಿಯಿಂದ ಬಹಳ ಆಳಕ್ಕಿರುವ ಆ ಮರದ ಬೇರನ್ನು ಕತ್ತರಿಸಿ ಕಿತ್ತೊಗೆಯುತ್ತಾರೆ. ಆ ಕಾಮವೃಕ್ಷದ ವ್ಯಾಪ್ತಿಯನ್ನರಿತು ಅದರಿಂದುಂಟಾಗುವ ದುಃಖಗಳನ್ನು ಪರಿಹರಿಸಿಕೊಳ್ಳುತ್ತಾರೆ.

ಏವಂ ಯೋ ವೇದ ಕಾಮಸ್ಯ ಕೇವಲಂ ಪರಿಕರ್ಷಣಮ್ ।
ವಧಂ ವೈ ಕಾಮಶಾಸ್ತ್ರಸ್ಯ ಸ ದುಃಖಾನ್ಯತಿವರ್ತತೇ ॥೮॥

ಈ ರೀತಿಯಾಗಿ ಯಾವನು ಕಾಮವನ್ನು ನಿಗ್ರಹಿಸುವ ಉಪಾಯವನ್ನು ತಿಳಿದಿದ್ದಾನೋ, ಕಾಮಶಾಸ್ತ್ರದ ವಧೆಯನ್ನು ಮಾಡಲು ಬಯಸುತ್ತಾನೋ ಅವನು ದುಃಖಗಳನ್ನು ದಾಟುತ್ತಾನೆ.

ಶರೀರಂ ಪುರಮಿತ್ಯಾಹುಃ ಸ್ವಾಮಿನೀ ಬುದ್ಧಿರಿಷ್ಯತೇ ।
ತತ್ರ ಬುದ್ಧೇಃ ಶರೀರಸ್ಥಂ ಮನೋ ನಾಮಾರ್ಥಚಿಂತಕಮ್ ॥೯॥

ಶರೀರವೆಂಬುದೇ ಒಂದು ಪಟ್ಟಣವಿದ್ದಂತೆ. ಬುದ್ಧಿಯೇ ಅದನ್ನು ಆಳುವ ರಾಣಿ ಎನಿಸಿದ್ದಾಳೆ. ಬುದ್ಧಿ ಎಂಬ ರಾಣಿಗೆ ಮನಸ್ಸೆಂಬುದು ಕಾರ್ಯಾಲೋಚನೆಗೆ ಬೇಕಾಗಿರುವ ಮಂತ್ರಿಯಂತಿದೆ.

ಇಂದ್ರಿಯಾಣಿ ಜನಾಃ ಪೌರಾಸ್ತದರ್ಥಂ ತು ಪರಾ ಕೃತಿಃ ।
ತತ್ರ ದ್ವೌ ದಾರುಣೌ ದೋಷೌ ತಮೋ ನಾಮ ರಜಸ್ತಥಾ ॥೧೦॥

ಇಂದ್ರಿಯಗಳೇ ಪಟ್ಟಣದಲ್ಲಿ ವಾಸ ಮಾಡುವ ಜನರು. ಆ ಇಂದ್ರಿಯಗಳನ್ನುದ್ದೇಶಿಸಿ ಅನೇಕ ಕರ್ಮಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಆ ಕರ್ಮಗಳನ್ನು ಮಾಡುವಾಗ ಪ್ರಧಾನವಾದ ರಜಸ್ಸು-ತಮಸ್ಸು ಎಂಬ ಪ್ರಬಲವಾದ ಎರಡು ದೋಷಗಳು ಹುಟ್ಟಿಕೊಳ್ಳುತ್ತವೆ.

ಯದರ್ಥಮುಪಜೀವಂತಿ ಪೌರಾಃ ಸಹಪುರೇಶ್ವರಾಃ ।
ಅದ್ವಾರೇಣ ತಮೇವಾರ್ಥಂ ದ್ವೌ ದೋಷಾವುಪಜೀವತಃ ॥೧೧॥

ಯಾವ ಕಾರಣದಿಂದ ಇಂದ್ರಿಯಗಳೆಂಬ ಪ್ರಜೆಗಳು, ಮನಸ್ಸೆಂಬ ಮಂತ್ರಿ, ಬುದ್ಧಿ ಎಂಬ ರಾಣಿ ಇವರೆಲ್ಲರೂ ಪರಮ ಪುರುಷಾರ್ಥಗಳನ್ನು ಪಡೆಯಬೇಕೆಂದು ಈ ದೇಹವೆಂಬ ಪಟ್ಟಣದಲ್ಲಿ ವಾಸ ಮಾಡಿದ್ದಾರೋ ಅವರ ಮೇಲೆ ರಜೋಗುಣ, ತಮೋಗುಣವೆಂಬ ದೋಷಗಳು ಅತಿಕ್ರಮಣ ಮಾಡಿ, ಅವರನ್ನು ಪಡೆಯದಂತೆ ಮಾಡಿ, ತಪ್ಪು ಮಾರ್ಗದಲ್ಲಿ ಸೆಳೆದುಕೊಂಡು ಹೋಗಿ ಸಿದ್ಧಿಯಿಂದ ವಂಚಿಸುತ್ತವೆ.

ತತ್ರ ಬುದ್ಧಿರ್ಹಿ ದುರ್ಧರ್ಷಾ ಮನಃ ಸಾಧರ್ಮ್ಯಮುಚ್ಯತೇ ।
ಪೌರಾಶ್ಚಾಪಿ ಮನಸ್ತ್ರಾಸ್ತೇಷಾಮಪಿ ಚಲಾ ಸ್ಥಿತಿಃ ॥೧೨॥

ಬುದ್ಧಿ ಎಂಬ ರಾಣಿಯು ಸಾಮಾನ್ಯರಿಂದ ಸೆಳೆಯಲಾಗದ ವ್ಯಕ್ತಿತ್ವ ಉಳ್ಳವಳಾಗಿದ್ದರೂ ನನಗೆ ಮಂತ್ರಿಯಾದ ಮನಸ್ಸು ಕೆಟ್ಟ ಹಾದಿಯಲ್ಲಿ ಸಾಗಿದಾಗ ಅನಿವಾರ್ಯವಾಗಿ ಆ ಮಂತ್ರಿಯನ್ನೇ ಈ ರಾಣಿಯು ಅನುಸರಿಸಬೇಕಾಗುತ್ತದೆ. ಬಳಿಕ ಇಂದ್ರಿಯಗಳೆಂಬ ಪ್ರಜೆಗಳು ಮಂತ್ರಿಯ ದಾರಿಯನ್ನೇ ಅನುಸರಿಸಬೇಕಾಗುತ್ತದೆ. ಎಲ್ಲರೂ ಚಾಂಚಲ್ಯದ ಸ್ಥಿತಿಯನ್ನು ಹೊಂದುತ್ತಾರೆ.

ಯದರ್ಥಂ ಬುದ್ಧಿರಧ್ಯಾಸ್ತೇ ನ ಸೋರ್ಥಃ ಪರಿಷೀದತಿ ।
ಯದರ್ಥಂ ಪೃಥಗಧ್ಯಾಸ್ತೇ ಮನಸ್ತತ್ ಪರಿಷೀದತಿ ॥೧೩॥

ಪೃಥಗ್ಭೂತಂ ಯದಾ ಬುದ್ಧ್ಯಾ ಮನೋ ಭವತಿ ಕೇವಲಮ್ ।
ತತ್ಕೈನಂ ವಿವೃತಂ ಶೂನ್ಯಂ ರಜಃ ಪರ್ಯವತಿಷ್ಠತೇ ॥೧೪॥

ಬುದ್ಧಿ ಎಂಬ ರಾಣಿಯು ಯಾವ ಪುರುಷಾರ್ಥವನ್ನು ತನಗೆ ಹಿತವೆಂದು ತಿಳಿದು ಅದನ್ನು ಪಡೆಯುವ ಉದ್ದೇಶದಿಂದ ಪ್ರಯತ್ನವನ್ನು ಹೊಂದುತ್ತದೋ ಆ ಪುರುಷಾರ್ಥಗಳೇ ಅದಕ್ಕೆ ದುಃಖಕರಗಳಾಗಿ, ಕೊನೆಗೆ ನಾಶವನ್ನು ತಂದೊಡ್ಡುತ್ತವೆ. ಯಾವಾಗ ಮನಸ್ಸು ಬುದ್ಧಿಯಿಂದ ಪ್ರತ್ಯೇಕವಾಗುವುದೋ ಆಗ ಮನಸ್ಸು ಮಾತ್ರ ಇರುತ್ತದೆ. ಆಗ ಬುದ್ಧಿಯು ಮನಸ್ಸು ಬೇರೆಯಾದ್ದರಿಂದ ಅವೆರಡು ವಿನಾಶವನ್ನು ಹೊಂದುತ್ತವೆ. ಕಾರಣ ಮನಸ್ಸು ವಿಷಯವನ್ನು ಗ್ರಹಿಸುತ್ತದೆ. ಅದರ ಸಾಧಕ-ಬಾಧಕಗಳನ್ನು ನಿರ್ಣಯಿಸಲಾರದು. ಬುದ್ಧಿ-ಮನಸ್ಸುಗಳ ಸಂಬಂಧವು ಕಳಚಿ ಹೋದುದರಿಂದ ಬುದ್ಧಿಯು ರಜೋಗುಣದ ಸಂಬಂಧವನ್ನು ಹೊಂದಿ ಬುದ್ಧಿಯೂ ಹಾಳಾಗುತ್ತದೆ. ಬುದ್ಧಿಯ ಸಹಕಾರವಿಲ್ಲದ ಮನಸ್ಸೂ ಹಾಳಾಗುತ್ತದೆ.

ತನ್ಮನಃ ಕುರುತೇ ಸಖ್ಯಂ ರಜಸಾ ಸಹ ಸಂಗತಮ್ ।
ತಂ ಚಾದಾಯ ಜನಂ ಪೌರಂ ರಜಸೇ ಸಂಪ್ರಯಚ್ಛತಿ ॥೧೫॥

ಮನಸ್ಸು ರಜೋಗುಣದ ಜೊತೆಗೆ ಸಖ್ಯವನ್ನು ಮಾಡಿ ತಾನು ಕೆಡುವುದಲ್ಲದೆ, ಬುದ್ಧಿ ಇಂದ್ರಿಯಗಳು, ಆತ್ಮ ಎಲ್ಲರನ್ನೂ ಹಾಳುಮಾಡುತ್ತದೆ. ಮಂತ್ರಿಯು ಹಾಳಾದಾಗ

ರಾಣಿ, ಪ್ರಜೆಗಳು ಎಲ್ಲರನ್ನೂ ತಪ್ಪು ಮಾರ್ಗಕ್ಕೆ ಸೆಳೆಯುವಂತೆ. ಇಲ್ಲಿಯೂ ರಜೋಗುಣ ತಮೋಗುಣಗಳಿಂದ ಆಗುವ ಅನರ್ಥಗಳನ್ನು ಹೀಗೆ ತಿಳಿಯಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಕಾಮತ್ಯಾಗೋಪಾಯಕಥನಂ ನಾಮ ಏಕೋನನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ಪೃಥಿವಿ ಮೊದಲಾದ ಪಂಚಭೂತಗಳ ಬಗ್ಗೆ ವ್ಯಾಸರು ನಿರೂಪಿಸಿದುದು.

ಭೀಷ್ಮಃ

ಭೂತಾನಾಂ ಗುಣಸಂಖ್ಯಾನಂ ಭೂಯಃ ಪುತ್ರ ನಿಶಾಮಯ ।
ದ್ವೈಪಾಯನಮುಖಾದ್ ಭ್ರಷ್ಟಂ ಶ್ಲಾಘಯಾ ಪರಯಾನಘ ॥೧॥

ನಿರ್ದುಷ್ಟನಾದ ಧರ್ಮರಾಜನೇ, ದ್ವೈಪಾಯನರ ಮುಖದಿಂದ ವರ್ಣಿಸಲ್ಪಟ್ಟ ಪಂಚಮಹಾಭೂತಗಳ ನಿರೂಪಣೆಯನ್ನು ಪುನಃ ಹೇಳುತ್ತೇನೆ. ವಿಶೇಷವಾದ ಶ್ರದ್ಧೆಯಿಂದ ಇದನ್ನು ಕೇಳಿಸಿಕೊ.

ದೀಪ್ತಾನಲನಿಭಃ ಪ್ರಾಹ ಭಗವಾನ್ ಧೂಮ್ರವರ್ಚಸೇ ।
ತತೋऽಹಮಪಿ ವಕ್ಷ್ಯಾಮಿ ಭೂಯಃ ಪುತ್ರ ನಿದರ್ಶನಮ್ ॥೨॥

ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳ ವೇದವ್ಯಾಸರು ಹೊಗೆ ಮುಚ್ಚಿದ ಕೆಂಡದಂತಿದ್ದ ತಮ್ಮ ಮಗನಾದ ಶುಕಮುನಿಗೆ ತಿಳಿಸಿದ ಪಂಚಭೂತಗಳನ್ನೆಲ್ಲ ಯಥಾವತ್ತಾಗಿ ಉಪದೇಶಿಸುತ್ತೇನೆ, ಕೇಳು.

ಭೂಮೇಃ ಸ್ಥೈರ್ಯಂ ಪೃಥುತ್ವಂ ಚ ಕಾಠಿನ್ಯಂ ಪ್ರಸವಾತ್ಮತಾ ।
ಗಂಧೋ ಗುರುತ್ವಂ ಶಕ್ತಿಶ್ಚ ಸಂಘಾತಃ ಸ್ಥಾಪನಾ ಧೃತಿಃ ॥೩॥

ಸ್ಥಿರತ್ವ, ಗುರುತ್ವ, ಕಾಠಿಣ್ಯ, ಅಂಕುರೋತ್ಪಾದನ ಶಕ್ತಿ, ಗಂಧ, ಧೈರ್ಯ, ಗ್ರಹಣ ಶಕ್ತಿ, ನಿಬಿಡತೆ, ಆಧಾರವಾಗಿರುವಿಕೆ, ಧಾರಣಶಕ್ತಿ - ಈ ಹತ್ತು ಭೂಮಿಯ ಗುಣಗಳಾಗಿವೆ.

ಅಪಾಂ ಶೈತ್ಯಂ ರಸಃ ಕ್ಲೇದೋ ದ್ರವತ್ವಂ ಸ್ನೇಹಸೌಮ್ಯತಾ ।
ಜಿಹ್ವಾನಿಷ್ಪಂದನಂ ಭೂಮಾ ಭೌಮಾಪ್ಯಾಸ್ರವಣಂ ತಥಾ ॥೪॥

ನೀರಿನಲ್ಲಿ ಶೈತ್ಯ, ದ್ರವ, ನೆನೆಸುವಿಕೆ, ಸೋರುವಿಕೆ, ಅಂಟು, ಮೃದುತ್ವ, ರಸನೇಂದ್ರಿಯ, ಹರಿಯುವುದು, ಹೆಚ್ಚಾಗುವಿಕೆ, ಇವೆಲ್ಲವೂ ನೀರಿನ ಗುಣಗಳೆನಿಸಿವೆ.

ಅಗ್ನೇರ್ದುರ್ಧರ್ಷತಾ ತೇಜಸ್ತಾಪಃ ಪಾಕಃ ಪ್ರಕಾಶನಮ್ ।
ಶೌಚಂ ರಾಗೋ ಲಘುಸ್ತೈಕ್ಷ್ಣ್ಯಂ ದಶಮಂ ಚೋರ್ಧ್ವಭಾಗಿತಾ ॥೫॥

ಅಗ್ನಿಯಲ್ಲಿ ಮುಟ್ಟಲಾಗದಿರುವುದು, ಪ್ರಕಾಶ, ಉಷ್ಣ, ಪಕ್ವ ಮಾಡುವಿಕೆ, ನೇತ್ರೇಂದ್ರಿಯ, ಶುಚಿತ್ವ, ರಾಗ, ಲಘುತ್ವ, ತೀಕ್ಷ್ಣತೆ, ಮೇಲ್ಮುಖವಾಗಿ ಉರಿಯುವುದು ಇಷ್ಟು ಗುಣಗಳಿವೆ.

ವಾಯೋರನಿಯಮಃ ಸ್ಪರ್ಶೋ ವಾದಸ್ಥಾನಂ ಸ್ವತಂತ್ರತಾ ।
ಬಲಂ ಶೈಘ್ರ್ಯಂ ಚ ಮೋಹಶ್ಚ ಚೇಷ್ಟಾ ಕರ್ಮಕೃತಾ ಭವಃ ॥೬॥

ವಾಯುವಿನಲ್ಲಿ ಶೀತ, ಉಷ್ಣ ಎಂಬ ಎರಡು, ನಿಯಮವಿಲ್ಲದ ಸ್ಪರ್ಶ, ವಾಗಿಂದ್ರಿಯ, ಚಲನೆ, ಬಲ, ಮಲ-ಮೂತ್ರಗಳ ವಿಸರ್ಜನೆಗೆ ಬೇಕಾದ ಗತಿ, ಗತಿಸ್ವಾತಂತ್ರ್ಯ, ಚೇಷ್ಟೆ, ಉಚ್ಛ್ವಾಸ, ನಿಃಶ್ವಾಸಗಳು, ಉತ್ಪತ್ತಿ-ನಾಶಗಳು ಈ ಗುಣಗಳು ಇವೆ.

ಆಕಾಶಸ್ಯ ಗುಣಃ ಶಬ್ದೋ ವ್ಯಾಪಿತ್ವಂ ಛಿದ್ರತಾಪಿ ಚ ।
ಅನಾಶ್ರಯಮನಾಲಂಬಮವ್ಯಕ್ತಮವಿಕಾರಿತಾ ॥೭॥

ಅಪ್ರತೀಘಾತತಾ ಚೈವ ಭೂತತ್ವಂ ವಿಕೃತಾನಿ ಚ ।
ಗುಣಾಃ ಪಂಚಾಶತಂ ಪ್ರೋಕ್ತಾಃ ಪಂಚಭೂತಾತ್ಮಭಾವಿತಾಃ ॥೮॥

ಶಬ್ದದಲ್ಲಿ, ವ್ಯಾಪನ ಶಕ್ತಿ, ಛಿದ್ರತೆ, ಆಧಾರವಿಲ್ಲದಿರುವಿಕೆ, ಅನಾಶ್ರಯ, ಅನಾಲಂಬ, ಅವ್ಯಕ್ತತೆ, ಅವಿಕಾರಿತ್ವ, ಅಪ್ರತಿಘಾತಿತ್ವ, ಭೂತತ್ವ, ವಿಕೃತತ್ವ ಎಂಬ ಹತ್ತು ಗುಣಗಳಿವೆ. ಹೀಗೆ ಪಂಚಭೂತಗಳಿಗೆ ಒಟ್ಟು ಐವತ್ತು ಗುಣಗಳು ಹೇಳಲ್ಪಟ್ಟಿವೆ.

ಚಲೋಪಪತ್ತಿರ್ವ್ಯಕ್ತಿಶ್ಚ ವಿಸರ್ಗಃ ಕಲ್ಪನಾ ಕ್ಷಮಾ ।
ಸದಸಚ್ಚ್ರುತತಾ ಚೈವ ಮನಸೋ ನವ ವೈ ಗುಣಾಃ ॥೯॥

ಫಲವಿಷಯಕವಾದ ಆಲೋಚನೆ, ಭ್ರಮೆ, ನೆನಪು, ತಾಳ್ಮೆ, ವೈರಾಗ್ಯ, ಕ್ಷಮಾ, ಇಚ್ಛಾ-ದ್ವೇಷಗಳು, ವೇಗ, ಚಾಂಚಲ್ಯ, ಇಷ್ಟು ಮನಸ್ಸಿನ ಒಂಬತ್ತು ಗುಣಗಳಾಗಿವೆ.

ಇಷ್ಟಾನಿಷ್ಟವಿಕಲ್ಪಶ್ಚ ವ್ಯವಸಾಯಃ ಸಮಾಧಿತಾ ।
ಸಂಶಯಃ ಪ್ರತಿಪತ್ತಿಶ್ಚ ಬುದ್ಧೌ ಪಂಚೇಹ ಯೇ ಗುಣಾಃ ॥೧೦॥

ಇಷ್ಟಾನಿಷ್ಟಗಳನ್ನು ಬಯಸದಿರುವುದು, ವ್ಯವಸಾಯ, ಚಿತ್ತನಿಯಮನ, ಚೆನ್ನಾಗಿ ಆಶ್ರಯವನ್ನು ಹೊಂದುವುದು, ನಿಶ್ಚಯಜ್ಞಾನ ಎಂಬುವನ್ನು ಬುದ್ಧಿಯ ಐದು ಗುಣಗಳೆಂದು ವಿದ್ವಾಂಸರು ಹೇಳುತ್ತಾರೆ.

ಯುಧಿಷ್ಠಿರಃ

ಕಥಂ ಪಂಚಗುಣಾ ಬುದ್ಧಿಃ ಕಥಂ ಪಂಚೇಂದ್ರಿಯಾ ಗುಣಾಃ ।
ಏತನ್ಮೇ ಸರ್ವಮಾಚಕ್ಷ್ವ ಸೂಕ್ಷ್ಮಜ್ಞಾನಂ ಪಿತಾಮಹ ॥೧೧॥

ಎಲ್ಲಕ್ಕಿಂತ ಶ್ರೇಷ್ಠವಾದ ಬುದ್ಧಿಯು ಬಹುಗುಣ ಉಳ್ಳದ್ದಾಗಿರಬೇಕಿತ್ತು. ಭೀಷ್ಮರೇ, ಬುದ್ಧಿಯು ಐದೇ ಗುಣವುಳ್ಳದ್ದಾಗಿರುವುದು ಏಕೆ? ಪಂಚಭೂತಗಳಿಗೆ ಪಂಚೇಂದ್ರಿಯಗಳು ಹೇಗೆ ಗುಣಗಳಾಗುತ್ತವೆ? ಈ ಸೂಕ್ಷ್ಮಜ್ಞಾನದ ವಿಷಯವಾಗಿ ನನಗೆ ತಿಳಿಸಬೇಕು.

ಭೀಷ್ಮಃ

ಆಹುಃ ಷಷ್ಟಿಂ ಭೂತಗುಣಾನ್ ವೈ ಭೂತವಿಸೃಷ್ಟಾನ್ ನಿತ್ಯವಿಷಕ್ತಾನ್ ।
ಭೂತವಿಷಕ್ತಾಶ್ಚಾಕ್ಷರಸೃಷ್ಟಾನ್ ಪುತ್ರ ನ ನಿತ್ಯಂ ತದಿಹ ವದಂತಿ ॥೧೨॥

ಧರ್ಮರಾಜನೇ, ಬುದ್ಧಿಗೆ ಅರವತ್ತು ಗುಣಗಳಿವೆ ಎಂದು ವಿದ್ವಾಂಸರು ಹೇಳುತ್ತಾರೆ. ಹೇಗೆಂದರೆ ಪಂಚಭೂತಗಳು ಬುದ್ಧಿಯ ಗುಣಗಳೇ ಆಗಿವೆ. ಬುದ್ಧಿಯ ಐದು ಗುಣಗಳು ಪಂಚಭೂತಗಳ ಐವತ್ತು ಗುಣಗಳ ಜೊತೆಗೆ ಸೇರಿ ಐವತ್ತೈದು ಆಗುತ್ತವೆ. ಅವುಗಳ ಜೊತೆಗೆ ಪಂಚಭೂತಗಳು ಬುದ್ಧಿಯ ಐದು ಗುಣಗಳೇ ಆಗಿರುವುದರಿಂದ ಅವುಗಳನ್ನೂ ಸೇರಿಸಿದರೆ ಅರವತ್ತು ಗುಣಗಳಾಗುತ್ತವೆ. ಈ ಅರವತ್ತು ಗುಣಗಳು ಪ್ರಕೃತಿಯ ಜೊತೆಗೆ ಮೇಲನವನ್ನು ಹೊಂದಿರುತ್ತವೆ. ಒಟ್ಟಿನಲ್ಲಿ ಎಲ್ಲ ಗುಣಗಳು ಬುದ್ಧಿಯ ವಿಕಾರದಿಂದಲೇ ಉತ್ಪನ್ನವಾಗಿರುವುದರಿಂದ ಎಲ್ಲವನ್ನೂ

ಬುದ್ಧಿಯ ಗುಣಗಳೇ ಎಂದು ಹೇಳಬಹುದು. ಅಸಾರತ ನಿಶ್ಚಯದಲ್ಲಿ ಬುದ್ಧಿಯೇ ವಿವೇಕವನ್ನು ಹೇಳುವುದರಿಂದ ಅರವತ್ತು ಗುಣಗಳನ್ನು ಬುದ್ಧಿಯ ಗುಣಗಳು ಎಂದು ತಿಳಿಯಬೇಕು. ಅವ್ಯಕ್ತತತ್ತ್ವದ ದೆಸೆಯಿಂದ ಪರಮಾತ್ಮನೇ ಈ ಎಲ್ಲ ಗುಣಗಳನ್ನು ಸೃಷ್ಟಿ ಮಾಡಿರುತ್ತಾನೆ. ಈ ಯಾವ ಪ್ರಕೃತಿಯ ಗುಣಗಳೂ ಜೀವನ ಜೊತೆಗೆ ನಿತ್ಯ ಸಂಬಂಧವನ್ನು ಹೊಂದಿರುವುದಿಲ್ಲ.

ತತ್ಪುತ್ರ ಚಿಂತಾಕಲಿತಂ ಯದುಕ್ತ-
ಮನಾಗತಂ ವೈ ತವ ಸಂಪ್ರತೀಹ ।
ಭೂತಾರ್ಥತತ್ತ್ವಂ ತದವಾಪ್ಯ ಸರ್ವಂ
ಭೂತಪ್ರಭಾವಾದ್ ಭವ ಶಾಂತಬುದ್ಧಿಃ ॥೧೩॥

ಮಗನೇ, ಇಲ್ಲಿಯ ತನಕ ಧ್ಯಾನಕ್ಕೆ ಸಂಬಂಧಿಸಿದಂತೆ ನಿನಗೆ ಏನೆಲ್ಲ ಬೋಧಿಸಿದ್ದೇನೋ ಈ ವಿಷಯಗಳನ್ನು ಯಾರೂ ತಿಳಿದಿರುವುದಿಲ್ಲ. ಈ ಭೂತಾರ್ಥತತ್ತ್ವಗಳನ್ನು ಚೆನ್ನಾಗಿ ತಿಳಿದು, ಇದರ ಪ್ರಭಾವವನ್ನೂ ಅರಿತು, ಇದರಲ್ಲಿ ಹೇಗೆ ವರ್ತಿಸಬೇಕೆಂದು ಕ್ರಿಯಾಲೋಚಿಸಿ ಶಾಂತಬುದ್ಧಿಯುಳ್ಳವನಾಗು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಗುಣಭೂತಕಥನಂ ನಾಮ ನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು.

॥ ಶುಕಾನುಪ್ರಶ್ನಃ ಸಮಾಪ್ತಃ ॥

★ ★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ನಾರದನಿಗೂ ಅಕಂಪನನಿಗೂ ನಡೆದ ಸಂವಾದ.

ಯುಧಿಷ್ಠಿರಃ

ಯ ಇಮೇ ಪೃಥಿವೀಪಾಲಾಃ ಶೇರತೇ ಪೃಥಿವೀತಳೇ ।
ಪೃತನಾಮಧ್ಯ ಏತೇ ಹಿ ಗತಸತ್ತ್ವಾ ಮಹಾಬಲಾಃ ॥೧॥

ಪಿತಾಮಹನೇ, ಈ ರಣರಂಗದ ಮಧ್ಯದಲ್ಲಿ ಮಹಾ ಬಲಾಢ್ಯರೆನಿಸಿದ ಅನೇಕ ಮಂದಿ ರಾಜರು ಸತ್ವ ಕಳೆದುಕೊಂಡು ನೆಲದಲ್ಲಿ ಮಲಗಿರುತ್ತಾರೆ.

ಏಕೈಕಶೋ ಭೀಮಬಲಾ ನಾಗಾಯುತಬಲಾಸ್ತಥಾ ।
ಏತೇ ಹಿ ನಿಹತಾಃ ಸಂಖ್ಯೇ ತುಲ್ಯತೇಜೋಬಲೈರ್ನರೈಃ ॥೨॥

ಒಬ್ಬೊಬ್ಬರೂ ಭಯಂಕರವಾದ ಸೈನ್ಯವುಳ್ಳವರು. ಹತ್ತು ಸಾವಿರ ಆನೆಗಳ ಬಲವುಳ್ಳವರು. ಇವರೆಲ್ಲರೂ ತಮಗೆ ಸಮಾನವಾದ ತೇಜಸ್ಸು, ಬಲ ಉಳ್ಳ ಮನುಷ್ಯರಿಂದಲೇ ಹತರಾಗಿ ಬಿದ್ದಿರುತ್ತಾರೆ.

ನೈಷಾಂ ಪಶ್ಯಾಮಿ ಹಂತಾರಂ ಪ್ರಾಣಿನಾಂ ಸಂಯುಗೇ ಪುರಾ ।
ವಿಕ್ರಮೇಣೋಪಸಂಪನ್ನಾಸ್ತೇಜೋಬಲಸಮನ್ವಿತಾಃ ॥೩॥

ಇವರನ್ನು ಕೊಲ್ಲಬಲ್ಲವನು ಒಬ್ಬನೂ ಇಲ್ಲವೆಂದೇ ನಾನು ತಿಳಿದಿದ್ದೆ. ಕೊಲ್ಲುವವನಿದ್ದಾನೆಂದು ತಿಳಿದಿರಲಿಲ್ಲ. ಇವರು ಬಲ-ಪರಾಕ್ರಮಗಳಲ್ಲಿ ಕೊನೆ ಇಲ್ಲದವರು, ತುಂಬಾ ಜಾಣರು, ಧೈರ್ಯವಂತರು.

ಅಥ ಚೇಮೇ ಮಹಾಪ್ರಾಜ್ಞ ಶೇರತೇ ಹಿ ಗತಾಸವಃ ।
ಮೃತಾ ಇತಿ ಚ ಶಬ್ದೋಯಂ ವರ್ತತ್ಯೇಷು ಗತಾಸುಷು ॥೪॥

ಹೀಗಿದ್ದರೂ ಪ್ರಾಣವನ್ನು ತೆತ್ತು ನೆಲದಲ್ಲಿ ಬಿದ್ದಿದ್ದಾರಲ್ಲ! ಇವರನ್ನು ಮೃತರೆಂದು ಜನರು ಹೇಳುತ್ತಾರೆ. ಭಯಂಕರ ಪರಾಕ್ರಮಿಗಳಾದ ಇವರಲ್ಲಿ ಮೃತರೆಂಬ ವ್ಯವಹಾರವು ಹೇಗೆ ಹೊಂದುತ್ತದೆ?

ಇಮೇ ಮೃತಾ ನೃಪತಯಃ ಪ್ರಾಯಶೋ ಭೀಮವಿಕ್ರಮಾಃ ।
ತತ್ರ ಮೇ ಸಂಶಯೋ ಜಾತಃ ಕುತಃ ಸಂಜ್ಞಾ ಮೃತಾ ಇತಿ ॥೫॥

ಭೀಮ ಪರಾಕ್ರಮಿಗಳಾದ ಇವರೆಲ್ಲರೂ ಪ್ರಾಯಶಃ ಮೃತರಾಗಿದ್ದಾರೆ. ಇಲ್ಲಿ ನನಗೆ ಸಂಶಯ ಉಂಟಾಗಿದೆ. ಮೃತ ಎನ್ನುವ ಸಂಜ್ಞೆಯು ಯಾರಿಗೆ?

ಕಸ್ಯ ಮೃತ್ಯುಃ ಕುತೋ ಮೃತ್ಯುಃ ಕೇನ ಮೃತ್ಯುರಿಹ ಪ್ರಜಾಃ ।
ಹರತ್ಯಮರಸಂಕಾಶ ತನ್ಮೇ ಬ್ರೂಹಿ ಪಿತಾಮಹ ॥೬॥

ಯಾರಿಗೆ ಮೃತ್ಯುವು? ಯಾರಿಂದ ಮೃತ್ಯುವು? ಯಾವ ಕಾರಣದಿಂದ ಮೃತ್ಯುವು? ದೇವತೆಗಳ ಮಧ್ಯದಲ್ಲಿ ಸಂಹರಿಸುವಂತಹ ಶಕ್ತಿ ಯಾರಲ್ಲಿದೆ? ಪಿತಾಮಹನೇ, ಎಲ್ಲವನ್ನೂ ಹೇಳು.

ಭೀಷ್ಮಃ

ಪುರಾ ಕೃತಯುಗೇ ತಾತ ರಾಜಾಸೀದವಿಕಂಪಕಃ ।
ಸ ಶತ್ರುವಶಮಾಪನ್ನಃ ಸಂಗ್ರಾಮೇ ಕ್ಷೀಣವಾಹನಃ ॥೭॥

ಯುಧಿಷ್ಠಿರನೇ, ಹಿಂದೆ ಕೃತಯುಗದಲ್ಲಿ ಯಾರಿಂದಲೂ ಕಂಪನ ಹೊಂದದೆ ಇರುವ, ಅವಿಕಂಪನ ಎಂಬ ರಾಜನಿದ್ದನು. ಅವನು ಒಮ್ಮೆ ತನ್ನ ಪರಿವಾರವನ್ನೆಲ್ಲ ಯುದ್ಧದಲ್ಲಿ ಕಳೆದುಕೊಂಡನು. ಕಡೆಗೆ ಶತ್ರುಗಳ ವಶನಾದನು.

ತತ್ರ ಪುತ್ರೋ ಹರಿರ್ನಾಮ ನಾರಾಯಣಸಮೋ ಬಲೇ ।
ಸ ಶತ್ರುಭಿರ್ಹತಃ ಸಂಖ್ಯೇ ಸಬಲಃ ಸಪದಾನುಗಃ ॥೮॥

ಅವನಿಗೆ ವಿಷ್ಣುವಿಗೆ ಸಮಾನವಾದ ಬಲವುಳ್ಳ ಹರಿ ಎಂಬ ಮಗನಿದ್ದನು. ಅವನೂ ತನ್ನ ಶತ್ರುಸೈನ್ಯದೊಡನೆ ಕಾದಾಡಿ ಶತ್ರುಗಳಿಂದ ಹತನಾದನು.

ಸ ರಾಜಾ ಶತ್ರುವಶಗಃ ಪುತ್ರಶೋಕಸಮನ್ವಿತಃ ।
ಯದೃಚ್ಛಯಾ ಶಾಂತಿಪರೋ ದದರ್ಶ ಭುವಿ ನಾರದಮ್ ॥೯॥

ಶತ್ರುಗಳಿಗೆ ಸಿಕ್ಕಿ ಬಿದ್ದಿರುವ ಅಕಂಪನ ರಾಜನು ಪುತ್ರಶೋಕವನ್ನು ಹೊಂದುವ ಸ್ಥಿತಿಯಲ್ಲಿದ್ದಾಗ ಭಗವತ್ಸಂಕಲ್ಪದಂತೆ ಶಾಂತಾತ್ಮರಾದ ನಾರದರು ಭೂಮಿಯಲ್ಲಿ ಸಂಚರಿಸುತ್ತಿರುವುದನ್ನು ಕಂಡನು.

ಸ ತಸ್ಮೈ ಸರ್ವಮಾಚಷ್ಟ ಯಥಾ ವೃತ್ತಂ ಜನೇಶ್ವರಃ ।
ಶತ್ರುಭಿರ್ಗ್ರಹಣಂ ಸಂಖ್ಯೇ ಪುತ್ರಸ್ಯ ಮರಣಂ ತಥಾ ॥೧೦॥

ಆ ನಾರದರನ್ನು ಕಂಡು ರಾಜನು ತನಗುಂಟಾದ ಕಷ್ಟವನ್ನು, ಯುದ್ಧದಲ್ಲಿ ಆದ ಪುತ್ರವಿಯೋಗವನ್ನು ನಾರದರಲ್ಲಿ ಹೇಳಿಕೊಂಡನು.

ತಸ್ಯ ತದ್ವಚನಂ ಶ್ರುತ್ವಾ ನಾರದೋಽಥ ತಪೋಧನಃ ।
ಆಖ್ಯಾನಮಿದಮಾಚಷ್ಟ ಪುತ್ರಶೋಕಾಪಹಂ ತದಾ ॥೧೧॥

ತಪೋಧನರಾದ ನಾರದರು ಅವನ ಮಾತುಗಳನ್ನು ಕೇಳಿಸಿಕೊಂಡು, ಪುತ್ರಶೋಕವನ್ನು ಪರಿಹರಿಸುವ ಈ ಆಖ್ಯಾನವನ್ನು ಅವನಿಗೆ ಹೇಳಿದರು.

ರಾಜನ್ ಶೃಣು ಸಮಾಖ್ಯಾನಮದ್ಯೇದಂ ಬಹುವಿಸ್ತರಮ್ ।
ಯಥಾ ವೃತ್ತಂ ಶ್ರುತಂ ಚೈವ ಮಯಾಪಿ ವಸುಧಾಧಿಪ ॥೧೨॥

ರಾಜನೇ, ಅತ್ಯಂತ ವಿಸ್ತಾರವಾದ, ದೊಡ್ಡ ಕಥೆಯೊಂದನ್ನು ಅದು ಹೇಗೆ ನಡೆದಿದೆಯೋ ಹಾಗೆ ನಾನು ಕೇಳಿದಂತೆ ನಿನಗೆ ತಿಳಿಸುತ್ತೇನೆ.

ಪ್ರಜಾಃ ಸೃಷ್ಟ್ವಾ ಮಹಾತೇಜಾಃ ಪ್ರಜಾಸರ್ಗೇ ಪಿತಾಮಹಃ ।
ಅತೀವ ವೃದ್ಧಾ ಬಹುಲಾ ನಾಮ್ರಿಯತ ಪುನಃ ಪ್ರಜಾಃ ॥೧೩॥

ಮಹಾತೇಜಸ್ವಿಯಾದ ಪಿತಾಮಹನು ಪ್ರಜೆಗಳನ್ನು ಸೃಷ್ಟಿಸುವ ಕಾಲದಲ್ಲಿ ಅನೇಕ ಪ್ರಜೆಗಳನ್ನು ಸೃಷ್ಟಿಸಿದನು. ಆ ಪ್ರಜೆಗಳು ದಿನ ದಿನ ಚೆನ್ನಾಗಿ ಬೆಳೆದರು. ಆ ಪ್ರಜೆಗಳ ಸಂಖ್ಯೆಯು ಮಿತಿ ಮೀರಿತು. ಹುಟ್ಟಿದವರು ಯಾರೂ ಸಾಯಲೇ ಇಲ್ಲ.

ನ ಹ್ಯಂತರಮಭೂತ್ ಕಿಂಚಿತ್ ಕ್ವಚಿಜ್ಜಂತುಭಿರಚ್ಯುತ ।
ನಿರುಚ್ಛ್ವಾಸಮಿವೋನ್ನದ್ಧಂ ತ್ರೈಲೋಕ್ಯಮಭವನ್ನೃಪ ॥೧೪॥

ಬ್ರಹ್ಮನ ಸಹನೆಯು ಮೀರಿತು. ಒಂದು ಪ್ರಾಣಿಗೂ ಮತ್ತೊಂದು ಪ್ರಾಣಿಗೂ ಅಂತರವೇ ಇಲ್ಲದಷ್ಟು ಪ್ರಾಣಿಗಳ ಸಂಖ್ಯೆಯು ಬೆಳೆದು ಹೋಯಿತು. ವಿಶ್ವವೆಲ್ಲವೂ ಪ್ರಾಣಿಗಳ ಸಮುದಾಯದಿಂದಲೇ ತುಂಬಿ ಹೋಯಿತು. ಉಸಿರಾಡುವುದಕ್ಕೂ ಸಾಧ್ಯವಿಲ್ಲದೆ ಇರುವಷ್ಟು ಜನರು ತುಂಬಿ ಹೋದರು.

ತಸ್ಯ ಚಿಂತಾ ಸಮುತ್ಪನ್ನಾ ಸಂಹಾರಂ ಪ್ರತಿ ಭೂಪತೇ ।
ಚಿಂತಯನ್ನಾಧ್ಯಗಚ್ಛಚ್ಚ ಸಂಹಾರೇ ಹೇತುಕಾರಣಮ್ ॥೧೫॥

ಇಂತಹ ಪರಿಸ್ಥಿತಿಯಲ್ಲಿ ಬ್ರಹ್ಮನಿಗೆ ಚಿಂತೆಯು ಉತ್ಪನ್ನವಾಯಿತು. ಜನರ ಸಂಹಾರವನ್ನು ಹೇಗೆ ಮಾಡಬೇಕೆಂದು ಯೋಚಿಸಲಾರಂಭಿಸಿದನು. ಎಷ್ಟೇ ಚಿಂತಿಸಿದರೂ ಸಂಹಾರಕ್ಕೆ ಯುಕ್ತಿಯುಕ್ತವಾದ ಯಾವ ಕಾರಣವೂ ತೋರಲೇ ಇಲ್ಲ.

ತಸ್ಯ ರೋಷಾನ್ಮಹಾರಾಜ ಖೇಭ್ಯೋಽಗ್ನಿರುದತಿಷ್ಠತ ।
ತೇನ ಸರ್ವಾ ದಿಶೋ ರಾಜಂದದಾಹ ಸ ಪಿತಾಮಹಃ ॥೧೬॥

ಇದರಿಂದ ಬ್ರಹ್ಮನು ರೋಷಾವಿಷ್ಟನಾದನು. ಆ ರೋಷದ ಪರಿಣಾಮದಿಂದ ಬ್ರಹ್ಮನ ಇಂದ್ರಿಯಗಳಿಂದ ಅಗ್ನಿಯು ಉತ್ಪನ್ನವಾಯಿತು. ಆ ಹುಟ್ಟಿದ ಅಗ್ನಿಯಿಂದಲೇ ಪಿತಾಮಹನು ದಿಕ್ಕುಗಳನ್ನು ಸುಡಲಾರಂಭಿಸಿದನು.

ತತೋ ದಿವಂ ಭುವಂ ಖಂ ಚ ಜಗಚ್ಚ ಸಚರಾಚರಮ್ ।
ದದಾಹ ಪಾವಕೋ ರಾಜನ್ ಭಗವತ್ಕೋಪಸಂಭವಃ ॥೧೭॥

ಅವನ ಕೋಪಾಗ್ನಿಯಿಂದ ಹುಟ್ಟಿದ ಅಗ್ನಿಯು ಸ್ವರ್ಗವನ್ನು, ಭೂಮಿಯನ್ನು, ಆಕಾಶವನ್ನು, ಸಮಗ್ರ ಚರಾಚರ ಜಗತ್ತನ್ನು ಭಸ್ಮ ಮಾಡಿತು.

ತತ್ಪ್ರದಹ್ಯಂತ ಭೂತಾನಿ ಜಂಗಮಾನಿ ಧ್ರುವಾಣಿ ಚ ।
ಮಹತಾ ಕೋಪವೇಗೇನ ಕುಪಿತೇ ಪ್ರಪಿತಾಮಹೇ ॥೧೮॥

ಆ ಪಿತಾಮಹನ ಕ್ರೋಧಾಗ್ನಿಯಿಂದಲೇ ಸ್ಥಾವರ-ಜಂಗಮ ಪ್ರಾಣಿಗಳೆಲ್ಲವೂ ಕರಕಲಾದವು.

ತತೋ ಹರಿಜಟಃ ಸ್ಥಾಣುರ್ವೇದಾಧ್ವರಪತಿಃ ಶಿವಃ ।
ಜಗಾದ ಶರಣಂ ದೇವೋ ಬ್ರಹ್ಮಾಣಂ ಪರವೀರಹಾ ॥೧೯॥

ಬಳಿಕ ವೇದಾಧ್ವರಪತಿ, ಸ್ಥಾಣು, ಹರಿಜಟ, ಶಿವ ಮುಂತಾದ ನಾಮಗಳಿಂದ ಖ್ಯಾತನಾದ, ಶತ್ರುಭಯಂಕರನಾದ ಮಹಾರುದ್ರನು ಲೋಕಭಯಕ್ಕಾಗಿ ಚತುರ್ಮುಖನನ್ನು ಮೊರೆ ಹೊಕ್ಕನು.

ತಸ್ಮಿನ್ನಭಿಗತೇ ಸ್ಥಾಣೌ ಪ್ರಜಾನಾಂ ಹಿತಕಾಮ್ಯಯಾ ।
ಅಬ್ರವೀದ್ವರದೋ ದೇವೋ ಜ್ವಲನ್ನಿವ ತದಾ ಶಿವಮ್ ॥೨೦॥

ಮಂಗಳಸ್ವರೂಪಿಯಾದ, ಪ್ರಜೆಗಳಿಗೆ ಹಿತವನ್ನುಂಟು ಮಾಡುವ ಇಚ್ಛೆಯಿಂದ ಮಹಾದೇವನು ತನ್ನ ಬಳಿ ಬಂದು ಹೀಗೆ ಪ್ರಾರ್ಥಿಸಿದಾಗ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಪರಮದೇವನಾದ ಬ್ರಹ್ಮನು ಶಿವನನ್ನುದ್ದೇಶಿಸಿ ಹೀಗೆ ಹೇಳಿದನು.

ಕರವಾಣ್ಯದ್ಯ ಕಂ ಕಾಮಂ ವರಾರ್ಹೋಽಸಿ ಮತ್ತೋ ಮಮ ।
ಕರ್ತಾ ಹ್ಯಸ್ಮಿ ಪ್ರಿಯಂ ಶಂಭೋ ತವ ಯದ್ಧೃತಿ ವರ್ತತೇ ॥೨೧॥

ರುದ್ರನೇ, ನೀನು ನನ್ನಿಂದ ವರವನ್ನು ಪಡೆಯಲು ಅರ್ಹನಾಗಿರುವಿ. ನಿನ್ನ ಯಾವ ಇಚ್ಛೆಯನ್ನು ನಾನು ಪೂರ್ಣಗೊಳಿಸಲಿ, ನಿನ್ನ ಹೃದಯದಲ್ಲಿರುವ ಪ್ರಿಯವಾದ ಮನೋರಥವನ್ನು ನಾನು ನಡೆಸಿಕೊಡುತ್ತೇನೆ ಎಂದು ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಏಕನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆರಡನೆಯ ಅಧ್ಯಾಯ

ಬ್ರಹ್ಮನು ಮೃತ್ಯುವನ್ನು ಸೃಷ್ಟಿಸಿ, ಪ್ರಜಾಸಂಹಾರಕ್ಕಾಗಿ ನಿಯಮಿಸಿದುದು.

ಸ್ಥಾಣುಃ

ಪ್ರಜಾಸರ್ಗನಿಮಿತ್ತಂ ಮೇ ಕಾರ್ಯವತ್ತಾಮಿಮಾಂ ಪ್ರಭೋ ।
ವಿದ್ಧಿ ಸೃಷ್ಟಾಸ್ತ್ವಯಾ ಹೀಮಾ ಮಾ ಕ್ರುಧ್ಯಾಸಾಂ ಪಿತಾಮಹ ॥೧॥

ಪ್ರಭುವೇ, ಪಿತಾಮಹನೇ, ನನ್ನ ಪ್ರಾರ್ಥನೆಯು ಪ್ರಜಾಸೃಷ್ಟಿಯ ನಿಮಿತ್ತವಾಗಿಯೇ ಇದೆ. ಪ್ರಜಾಸೃಷ್ಟಿಯ ರಕ್ಷಣೆಗಾಗಿಯೇ ನಾನು ಪ್ರಾರ್ಥಿಸುತ್ತಿದ್ದೇನೆ. ನೀನೇ ಸೃಷ್ಟಿಸಿದ ಈ ಪ್ರಜೆಗಳ ವಿಷಯದಲ್ಲಿ ಪಿತಾಮಹನೇ, ನೀನು ಕೋಪ ಹೊಂದಬೇಡ.

ತವ ತೇಜೋಗ್ನಿನಾ ದೇವ ಪ್ರಜಾ ದಹ್ಯಂತಿ ಸರ್ವಶಃ ।
ತಾಂ ದೃಷ್ಟ್ವಾ ಮಮ ಕಾರುಣ್ಯಂ ಮಾ ಕ್ರುಧ್ಯಾಸಾಂ ಜಗತ್ಪ್ರಭೋ ॥೨॥

ಪಿತಾಮಹನೇ, ನಿನ್ನ ಕೋಪವೆಂಬ ಮಹಾತೇಜಸ್ಸಿನಿಂದ ಹುಟ್ಟಿರುವ ಅಗ್ನಿಯಿಂದ ಪ್ರಜೆಗಳೆಲ್ಲರೂ ಕರಕಲಾಗುತ್ತಿದ್ದಾರೆ. ಹೀಗೆ ದಹಿಸುತ್ತಿರುವ ಪ್ರಜೆಗಳನ್ನು ಕಂಡು ನನಗೆ ಕರುಣೆಯುಂಟಾಗಿದೆ. ಜಗತ್ಪ್ರಭುವೇ, ಇವರಲ್ಲಿ ಕ್ರುದ್ಧನಾಗಬೇಡ.

ಪ್ರಜಾಪತಿಃ

ನ ಕುಪ್ಯೇ ನ ಚ ಮೇ ಕಾಮೋ ನ ಭವೇರನ್ ಪ್ರಜಾ ಇತಿ ।
ಲಾಘವಾರ್ಥಂ ಧರಣ್ಯಾಸ್ತು ತತಃ ಸಂಹಾರ ಇಷ್ಯತೇ ॥೩॥

ಮಹಾರುದ್ರನೇ, ನಾನು ಪ್ರಜೆಗಳಲ್ಲಿ ಕೋಪ ಹೊಂದುವುದಿಲ್ಲ. ಪ್ರಜೆಗಳೇ ಲೋಕದಲ್ಲಿರಬಾರದೆಂದು ನನ್ನ ಅಭಿಪ್ರಾಯವಲ್ಲ. ಆದರೆ ಪ್ರಾಣಿಗಳಿಂದ ಭೂಮಿಗೆ ಭಾರವು ಅಧಿಕವಾಗಿದೆ. ಅದಕ್ಕಾಗಿ ಈ ಸಂಹಾರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದೇನೆ.

ಇಯಂ ಹಿ ಮಾಂ ಸದಾ ದೇವೀ ಭಾರಾರ್ತಾ ಸಮಚೋದಯತ್ ।
ಸಂಹಾರಾರ್ಥಂ ಮಹಾದೇವ ಭಾರೇಣಾಪ್ಸು ನಿಮಜ್ಜತಿ ॥೪॥

ಮಹಾದೇವನೇ, ಪ್ರಜೆಗಳ ಭಾರದಿಂದ ಪೀಡಿತಳಾಗಿ ನೀರಿನಲ್ಲಿ ಮುಳುಗಿ ಹೋಗುತ್ತಿರುವ ಭೂಮಿಯು ಆ ಪ್ರಜೆಗಳ ಉಪಸಂಹಾರಕ್ಕಾಗಿ ನನ್ನನ್ನು ಪ್ರಾರ್ಥಿಸುತ್ತಿದ್ದಾಳೆ.

ಯದಾಹಂ ನಾಧಿಗಚ್ಛಾಮಿ ಬುದ್ಧ್ಯಾ ಬಹು ವಿಚಾರಯನ್ ।
ಸಂಹಾರಮಾಸಾಂ ವೃದ್ಧಾನಾಂ ತತೋ ಮಾಂ ಕ್ರೋಧ ಆವಿಶತ್ ॥೫॥

ನಾನು ನನ್ನ ಬುದ್ಧಿಯಿಂದ ಎಷ್ಟು ವಿಚಾರ ಮಾಡಿದರೂ ಉಪಾಯವು ತೋರದೆ ನನಗೆ ಚಿಂತೆ ಏರ್ಪಟ್ಟಿದೆ. ಆದ್ದರಿಂದ ಈ ಬೆಳೆದ ಪ್ರಜಾವರ್ಗವನ್ನು ಸಂಹಾರ ಮಾಡಬೇಕು ಎಂದು ಚಿಂತಿಸುತ್ತಿರುವಾಗಲೇ ನನ್ನಲ್ಲಿ ಉಪಾಯವು ಉತ್ಪನ್ನವಾಗದೆ ಕ್ರೋಧವುಂಟಾಯಿತು.

ಸ್ಥಾಣುಃ

ಸಂಹಾರಾಂತಂ ಪ್ರಸೀದಸ್ವ ಮಾ ಕ್ರುಧಸ್ತ್ರಿದಶೇಶ್ವರ ।
ಮಾ ಪ್ರಜಾಃ ಸ್ಥಾವರಂ ವೈ ಚ ಜಂಗಮಂ ಚ ವಿನೀನಶಃ ॥೬॥

ಪಿತಾಮಹನೇ, ಇಂತಹ ಸಂಹಾರ ಕಾರ್ಯವನ್ನು ನಿಲ್ಲಿಸು, ಕೋಪವನ್ನು ಅಡಗಿಸು. ಸ್ಥಾವರ-ಜಂಗಮಾತ್ಮಕವಾದ ಪ್ರಪಂಚವನ್ನು ನೀನು ಸಂಹಾರ ಮಾಡಬೇಡ.

ಪಲ್ವಲಾನಿ ಚ ಸರ್ವಾಣಿ ಸರ್ವಂ ಚೈವ ತೃಣೋಲಪಮ್ ।
ಸ್ಥಾವರಂ ಜಂಗಮಂ ಚೈವ ಭೂತಗ್ರಾಮಂ ಚತುರ್ವಿಧಮ್ ॥೭॥

ನಿನ್ನ ಕೋಪದಿಂದ ಜಲಾಶಯಗಳೆಲ್ಲವೂ ಇಂಗಿಹೋಗಿವೆ. ಹುಲ್ಲು ಕಡ್ಡಿಗಳೆಲ್ಲವೂ ಸುಟ್ಟುಹೋಗುತ್ತಿವೆ. ಸಸ್ಯವರ್ಗಗಳು ಕರಕಲಾಗಿವೆ. ಚತುರ್ವಿಧ ಜಂಗಮ ಪ್ರಾಣಿಗಳು ದಗ್ಧವಾಗಿವೆ.

ತದೇತದ್ ಭಸ್ಮಸಾದ್ಭೂತಂ ಜಗತ್ ಸರ್ವಮುಪಪ್ಲುತಮ್ ।
ಪ್ರಸೀದ ಭಗವನ್ ಸಾಧೋ ವರ ಏಷ ವೃತೋ ಮಯಾ ॥೮॥

ಜಗತ್ತೆಲ್ಲವೂ ಅಕಾಲದಲ್ಲಿ ಭಸ್ಮವಾಗುತ್ತಿದೆ. ಮಹಾತ್ಮನೇ ಕರುಣಿಸು, ನಿನ್ನಲ್ಲಿ ವರವನ್ನು ಬೇಡುತ್ತೇನೆ.

ನಷ್ಟಾ ನ ಪುನರೇಷ್ಯಂತಿ ಪ್ರಜಾ ಹ್ಯೇತಾಃ ಕಥಂಚನ ।
ತಸ್ಮಾನ್ನಿವರ್ತ್ಯತಾಮೇತತ್ತೇಜಃ ಸ್ವೇನೈವ ತೇಜಸಾ ॥೯॥

ಸತ್ತ ಬಳಿಕ ಪ್ರಾಣಿಗಳು ತಿರುಗಿ ಬರಲಾರವು. ನಿನ್ನ ತೇಜಸ್ಸಿನಿಂದಲೇ ನಿನ್ನ ಕೋಪವನ್ನು ನಿಗ್ರಹಿಸಬೇಕಾಗಿದೆ.

ಉಪಾಯಮನ್ಯಂ ಸಂಪಶ್ಯ ಪ್ರಜಾನಾಂ ಹಿತಕಾಮ್ಯಯಾ ।
ಯಥೇಮೇ ಜಂತವಃ ಸರ್ವೇ ನಿವರ್ತೇರನ್ ಪರಂತಪ ॥೧೦॥

ಪ್ರಜೆಗಳ ಹಿತಕ್ಕಾಗಿ ಬೇರೆ ಯಾವುದಾದರೂ ಉಪಾಯವನ್ನು ಅನ್ವೇಷಣೆ ಮಾಡು. ಪ್ರಾಣಿಗಳೆಲ್ಲವೂ ತಮ್ಮ ಸಂತತಿಗಳಿಂದ ಬದುಕುವಂತಾಗಲಿ.

ಅಭಾವಮಭಿಗಚ್ಛೇಯುರುತ್ಸನ್ನಪ್ರಜನಾಃ ಪ್ರಜಾಃ ।
ಅಧಿದೈವನಿಯುಕ್ತೋಽಸ್ಮಿ ತ್ವಯಾ ಲೋಕೇಷ್ವಿಹೇಶ್ವರ ॥೧೧॥

ಪ್ರಜೆಗಳ ಸಂತಾನವೇ ನಾಶವಾದರೆ ಪ್ರಜೆಗಳೇ ಇರುವುದಿಲ್ಲ. ನಾನು ಪ್ರಜೆಗಳ ರಕ್ಷಣಾರ್ಥವಾಗಿಯೇ ನಿನ್ನಿಂದ ನಿಯುಕ್ತನಾಗಿದ್ದೇನೆ. ಆದ್ದರಿಂದ ನನ್ನ ಪ್ರಾರ್ಥನೆಯಂತೆ ಸಂಹಾರ ಕಾರ್ಯವನ್ನು ನಿಲ್ಲಿಸು.

ತ್ವದ್ಭವಂ ಹಿ ಜಗನ್ನಾಥ ಜಗತ್ ಸ್ಥಾವರಜಂಗಮಮ್ ।
ಪ್ರಸಾದ್ಯ ತ್ವಾಂ ಮಹಾದೇವ ಯಾಚಾಮ್ಯಾವೃತ್ತಿಜಾಃ ಪ್ರಜಾಃ ॥೧೨॥

ಜಗನ್ನಾಥನೇ, ಸಮಸ್ತ ಚರಾಚರ ಪ್ರಾಣಿಗಳು ನಿನ್ನಿಂದ ಸೃಷ್ಟವಾಗಿವೆ. ಆದ್ದರಿಂದ ನಿನ್ನಲ್ಲಿಯೇ ಪ್ರಾರ್ಥಿಸುತ್ತಿದ್ದೇನೆ. ಸತ್ತ ಪ್ರಾಣಿಗಳೆಲ್ಲ ನಿನ್ನಿಂದ ಹುಟ್ಟುವಂತಾಗಲಿ.

ನಾರದಃ

ಶ್ರುತ್ವಾ ತು ವಚನಂ ದೇವಃ ಸ್ಥಾಣೋರ್ನಿಯತವಾಙ್ಮನಾಃ ।
ತೇಜಸ್ತತ್ಸ್ವಂ ನಿಜಗ್ರಾಹ ಪುನರೇವಾಂತರಾತ್ಮನಾ ॥೧೩॥

ತತೋऽಗ್ನಿಮುಪಸಂಗೃಹ್ಯ ಭಗವಾಲ್ಲೋಕಪೂಜಿತಃ ।
ಪ್ರವೃತ್ತಿಂ ಚ ನಿವೃತ್ತಿಂ ಚ ಕಲ್ಪಯಾಮಾಸ ವೈ ಪ್ರಭುಃ ॥೧೪॥

ನಿಗ್ರಹವುಳ್ಳ ಮಾತು, ಮನಸ್ಸುಗಳಿಂದ ಕೂಡಿರುವ ಚತುರ್ಮುಖ ಬ್ರಹ್ಮನು ಸ್ಥಾಣುವಿನ ಈ ಮಾತುಗಳನ್ನು ಕೇಳಿ, ಕೋಪದಿಂದ ಉಂಟಾದ ತೇಜಸ್ಸನ್ನು ತನ್ನಲ್ಲಿ ಉಪಸಂಹರಿಸಿ, ಅದನ್ನು ಅಲ್ಲಿಯೇ ಅಡಗಿಸಿಕೊಂಡನು. ಆಗ ಲೋಕ ಪೂಜಿತನಾದ ಬ್ರಹ್ಮನು ಕೋಪಾಗ್ನಿಯನ್ನು ಉಪಸಂಹಾರ ಮಾಡಿ, ಪ್ರಜೆಗಳಿಗಾಗಿ ಮತ್ತೊಂದು ಕ್ರಮದಿಂದ ಹುಟ್ಟು-ಸಾವುಗಳ ಮಾರ್ಗವನ್ನು ವ್ಯವಸ್ಥೆ ಮಾಡಿದನು.

ಉಪಸಂಹರತಸ್ತಸ್ಯ ತಮಗ್ನಿಂ ರೋಷಜಂ ತದಾ ।
ಪ್ರಾದುರ್ಬಭೂವ ವಿಶ್ವೇಭ್ಯಃ ಖೇಭ್ಯೋ ನಾರೀ ಮಹಾತ್ಮನಃ ॥೧೫॥

ಹೀಗೆ ಬ್ರಹ್ಮನು ತನ್ನ ಕೋಪದಿಂದ ಉತ್ಪನ್ನವಾದ ಅಗ್ನಿಯನ್ನು ತನ್ನಲ್ಲಿ ಉಪಸಂಹಾರ ಮಾಡಿಕೊಂಡಾಗ ಮಹಾತ್ಮನಾದ ಆ ಬ್ರಹ್ಮನ ಸಮಸ್ತ ಇಂದ್ರಿಯಗಳಿಂದ ಒಬ್ಬ ನಾರಿಯು ಉತ್ಪನ್ನಳಾದಳು.

ಕೃಷ್ಣಾ ರಕ್ತಾಂಬರಧರಾ ರಕ್ತನೇತ್ರತಲಾಂತರಾ ।
ದಿವ್ಯಕುಂಡಲಸಂಪನ್ನಾ ದಿವ್ಯಾಭರಣಭೂಷಿತಾ ॥೧೬॥

ಆಕೆಯು ಕೆಂಪು, ಕಪ್ಪು ವಸ್ತ್ರಗಳನ್ನು ಧರಿಸಿದ್ದಳು. ಗುಳಿಬಿದ್ದ ಕಪ್ಪಾದ ಕಣ್ಣುಗಳುಳ್ಳವಳಾಗಿದ್ದಳು. ದಿವ್ಯವಾದ ಕುಂಡಲಗಳಿಂದ ಅಲಂಕೃತಳಾಗಿದ್ದಳು. ದಿವ್ಯವಾದ ಆಭರಣಗಳಿಂದಲೂ ಭೂಷಿತಳಾಗಿದ್ದಳು.

ಸಾ ವಿನಿಃಸೃತ್ಯ ವೈ ಖೇಭ್ಯೋ ದಕ್ಷಿಣಾಮಾಶ್ರಿತಾ ದಿಶಮ್ ।
ದದೃಶಾತೇಥ ತೌ ಕನ್ಯಾಂ ದೇವೌ ವಿಶ್ವೇಶ್ವರಾವುಭೌ ॥೧೭॥

ಆ ನಾರಿಯು ಬ್ರಹ್ಮನ ಅವಯವಗಳಿಂದ ಹೊರಟು ದಕ್ಷಿಣ ದಿಕ್ಕಿನ ಕಡೆ ತೆರಳಿದಳು. ಆ ಕನ್ಯೆಯನ್ನು ಬ್ರಹ್ಮ-ರುದ್ರರು ನೋಡಿದರು.

ತಾಮಾಹೂಯ ತದಾ ದೇವೋ ಲೋಕಾನಾಮಾದಿರೀಶ್ವರಃ ।
ಮೃತ್ಯೋ ಇತಿ ಮಹೀಪಾಲ ಜಹಿ ಚೇಮಾಃ ಪ್ರಜಾ ಇತಿ ॥೧೮॥

ಬ್ರಹ್ಮನು ಅವಳನ್ನು ಕುರಿತು ಮೃತ್ಯು ದೇವತೆಯೇ ಎಂದು ಕರೆದು, ನಾನೇ ಪ್ರಾಣಿಗಳ ಸಂಹಾರಕ್ಕಾಗಿ ನಿನ್ನನ್ನು ನಿರ್ಮಿಸಿದ್ದೇನೆ. ನೀನು ಪ್ರಜೆಗಳನ್ನು ಸಂಹರಿಸಬೇಕು ಎಂದು ಹೇಳಿದನು.

ತ್ವಂ ಹಿ ಸಂಹಾರಬುದ್ಧ್ಯಾ ಮೇ ಚಿಂತಿತಾ ರುಷಿತೇನ ಚ ।
ತಸ್ಮಾತ್ ಸಂಹರ ಸರ್ವಾಸ್ತ್ವಂ ಪ್ರಜಾಃ ಸಜಡಪಂಡಿತಾಃ ॥೧೯॥

ಅವಿಶೇಷೇಣ ಚೈವ ತ್ವಂ ಪ್ರಜಾಃ ಸಂಹರ ಭಾಮಿನಿ ।
ಮಮ ತ್ವಂ ಹಿ ನಿಯೋಗೇನ ಶ್ರೇಯಃ ಪರಮವಾಪ್ಸ್ಯಸಿ ॥೨೦॥

ರೋಷಗೊಂಡ ನನ್ನಿಂದ ಸಂಹಾರಬುದ್ಧಿಯಿಂದಲೇ ಚಿಂತಿಸಲ್ಪಟ್ಟವಳಾಗಿ ನೀನು ಉತ್ಪನ್ನಳಾಗಿರುವಿ. ಆದ್ದರಿಂದ ಪಂಡಿತ, ಮೂಢ, ಭಾಗ್ಯವಂತ ಎಂಬ ಭೇದವಿಲ್ಲದೆ ಎಲ್ಲರನ್ನೂ ನೀನು ಸಂಹರಿಸು. ನನ್ನ ಆಜ್ಞೆಯಿಂದ ನಿನಗೆ ಶ್ರೇಯಸ್ಸು ಉಂಟಾಗಲಿ.

ಏವಮುಕ್ತಾ ತು ಸಾ ದೇವೀ ಮೃತ್ಯುಃ ಕಮಲಮಾಲಿನೀ ।
ಪ್ರದಧ್ಮೌ ದುಃಖಿತಾ ಬಾಲಾ ಸಾಶ್ರುಪಾತಮತೀವ ಹಿ ॥೨೧॥

ಬ್ರಹ್ಮದೇವನ ಬಾಯಿಂದ ಹೊರಟ ಮಾತುಗಳನ್ನು ಕೇಳಿ, ಕಮಲಪುಷ್ಪಗಳ ಮಾಲೆಗಳಿಂದ ಅಲಂಕೃತಳಾಗಿದ್ದ ಮೃತ್ಯುದೇವತೆಯು ಕಣ್ಣೀರು ಸುರಿಸುತ್ತಾ ಚಿಂತಾಮಗ್ನಳಾದಳು. ಅವಳ ಕಣ್ಣಿನಿಂದ ಧಾರೆಯಾಗಿ ನೀರು ಸುರಿಯತೊಡಗಿತು.

ಪಾಣಿಭ್ಯಾಂ ಚೈವ ಜಗ್ರಾಹ ತಾನ್ಯಶ್ರೂಣಿ ಜನೇಶ್ವರಃ ।
ಮಾನವಾನಾಂ ಹಿತಾರ್ಥಾಯ ಯಯಾಚೇ ಪುನರೇವ ಚ ॥೨೨॥

ಅದನ್ನು ಕಂಡ ಬ್ರಹ್ಮನು ಅವಳ ಕಣ್ಣೀರನ್ನು ತಾನೇ ಕೈಯೊಡ್ಡಿ ತಡೆದು, ಅಂಜಲಿಯಿಂದ ಹಿಡಿದುಕೊಂಡನು. ಪ್ರಜೆಗಳ ಹಿತಕ್ಕಾಗಿಯೇ ಈ ಆದೇಶವನ್ನು ಮಾಡಿದ್ದೇನೆಂದು ಪುನಃ ಅವಳನ್ನು ಸಂತೈಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಿನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ಮೂರನೆಯ ಅಧ್ಯಾಯ

ನಾರದರು ಅಕಂಪನನ ಪುತ್ರಶೋಕವನ್ನು ಪರಿಹರಿಸಲು ಮೃತ್ಯು-ಬ್ರಹ್ಮಾದಿಗಳಿಗೆ ನಡೆದ ಸಂವಾದವನ್ನು ನಿರೂಪಿಸಿದುದು.

ನಾರದಃ

ವಿನೀಯ ದುಃಖಮಬಲಾ ಸಾ ತ್ವತೀವಾಯತೇಕ್ಷಣಾ ।
ಉವಾಚ ಪ್ರಾಂಜಲಿರ್ಭೂತ್ವಾ ಲತೇವಾವರ್ಜಿತಾ ತದಾ ॥೧॥

ರಾಜನೇ, ಮೃತ್ಯುದೇವತೆಯು ತನಗುಂಟಾದ ದುಃಖವನ್ನು ಪ್ರಯತ್ನ ಪೂರ್ವಕವಾಗಿ ತಡೆದುಕೊಂಡು, ಬಗ್ಗಿದ ಲತೆಯಂತೆ ವಿನಮ್ರಳಾಗಿ, ಬದ್ಧಾಂಜಲಿಯಾಗಿ ನಿಂತು ಬ್ರಹ್ಮದೇವರಿಗೆ ಹೀಗೆ ಹೇಳಿದಳು.

ತ್ವಯಾ ಸೃಷ್ಟಾ ಕಥಂ ನಾರೀ ಮಾದೃಶೀ ವದತಾಂ ವರ ।
ರೌದ್ರಕರ್ಮಾಭಿಜಾಯೇತ ಸರ್ವಪ್ರಾಣಿಭಯಂಕರೀ ॥೨॥

ವಾಗ್ಮಿಶ್ರೇಷ್ಠನೇ, ಒಂದು ವೇಳೆ ನಿನಗೆ ನನ್ನಿಂದ ಕ್ರೂರ ಕರ್ಮಗಳನ್ನು ಮಾಡಿಸುವ ಇಚ್ಛೆಯೇ ಇದ್ದಲ್ಲಿ, ನನ್ನಂತಹ ಕೋಮಲ ಹೃದಯಳಾದ ನಾರಿಯನ್ನು ಏಕೆ ಸೃಷ್ಟಿ ಮಾಡಿರುವಿ? ನನ್ನಂತಹ ಸ್ತ್ರೀಗೆ ಸರ್ವಪ್ರಾಣಿಗಳಿಗೂ ಭಯಂಕರವಾದ ಕ್ರೂರಕರ್ಮವನ್ನು ಮಾಡಲು ಹೇಗೆ ಸಾಧ್ಯವಾಗುತ್ತದೆ?

ಬಿಭೇಮ್ಯಹಮಧರ್ಮಸ್ಯ ಧರ್ಮ್ಯಮಾದಿಶ ಕರ್ಮ ಮೇ ।
ತ್ವಂ ಮಾಂ ಭೀತಾಮವೇಕ್ಷಸ್ವ ಶಿವೇನೇಶ್ವರ ಚಕ್ಷುಷಾ ॥೩॥

ಅಧರ್ಮಕ್ಕೆ ನನ್ನ ಮನಸ್ಸು ಸಮ್ಮತಿಸುತ್ತಿಲ್ಲ. ಬೇರೆ ಯಾವುದಾದರೂ ಧರ್ಮಯುಕ್ತವಾದ ಕಾರ್ಯವನ್ನು ನನಗೆ ಆದೇಶಿಸು. ಹೆದರಿರುವ ನನ್ನನ್ನು ನೀನು ನೋಡು. ಶುಭಕರವಾದ ನಿನ್ನ ದೃಷ್ಟಿಯು ನನ್ನಲ್ಲಿರಲಿ.

ಬಾಲಾನ್ವೃದ್ಧಾನ್ವಯಃಸ್ಥಾಂಶ್ಚ ನ ಹರೇಯಮನಾಗಸಃ ।
ಪ್ರಾಣಿನಃ ಪ್ರಾಣಿನಾಮೀಶ ನಮಸ್ತೇऽಭಿಪ್ರಸೀದ ಮೇ ॥೪॥

ನಾನು ನಿರಪರಾಧಿಗಳಾದ ಬಾಲಕರನ್ನು, ವೃದ್ಧರನ್ನು, ತರುಣರನ್ನು, ಇತರ ಪ್ರಾಣಿಗಳನ್ನು ಕಾರಣವಿಲ್ಲದೆ ಕೊಲ್ಲಲಾರೆನು. ನಿನ್ನನ್ನು ನಮಸ್ಕರಿಸಿ ಬೇಡಿಕೊಳ್ಳುತ್ತೇನೆ. ತಂದೆಯೇ, ನನ್ನ ವಿಷಯದಲ್ಲಿ ಪ್ರಸನ್ನನಾಗು.

ಪ್ರಿಯಾನ್ ಪುತ್ರಾನ್ ವಯಸ್ಯಾಂಶ್ಚ ಭ್ರಾತೄನ್ ಮಾತೄಃ ಪಿತೄನಪಿ ।
ಅಪಧ್ಯಾಸ್ಯಂತಿ ಯದ್ದೇವ ಮೃತಾಂಸ್ತೇಷಾಂ ಬಿಭೇಮ್ಯಹಮ್ ॥೫॥

ಪ್ರೀತಿಪಾತ್ರರಾದ ಮಕ್ಕಳು, ಬಾಲಕರು, ತಂದೆ, ತಾಯಿ, ಸಹೋದರರು ಇವರಲ್ಲಿ ಒಬ್ಬರಿಂದೊಬ್ಬರನ್ನು ಅಗಲಿಸಿ, ಸಾಯಿಸುತ್ತಾ ಹೋದರೆ ಅವರು, ಮೃತರಾದವರ ಸಂಬಂಧಿಗಳು ನನ್ನನ್ನು ಶಪಿಸದೆ ಬಿಡುತ್ತಾರೆಯೇ? ಅದನ್ನು ಸ್ಮರಿಸಿದಾಗಲೆ ನಾನು ಹೆದರುತ್ತಿದ್ದೇನೆ.

ಕೃಪಣಾಶ್ರುಪರಿಕ್ಲೇದೋ ದಹೇನ್ಮಾಂ ಶಾಶ್ವತೀಃ ಸಮಾಃ ।
ತೇಭ್ಯೋಽಹಂ ಬಲವದ್ಭೀತಾ ಶರಣಂ ತ್ವಾಮುಪಾಗತಾ ॥೬॥

ದುಃಖಿಸುವ ಜನರ ಕಣ್ಣೀರು ಅನೇಕ ವರ್ಷಗಳ ಕಾಲ ನನ್ನನ್ನು ಸುಟ್ಟುಹಾಕುತ್ತದೆ. ಅಂತಹ ವ್ಯಕ್ತಿಗಳಿಂದ ನಾನು ಭೀತಳಾಗಿದ್ದೇನೆ. ನಿನ್ನಲ್ಲಿಯೇ ಶರಣು ಹೊಕ್ಕಿದ್ದೇನೆ.

ಯಮಸ್ಯ ಭವನೇ ದೇವ ಯಾತ್ಯಂತೇ ಪಾಪಕರ್ಮಿಣಃ ।
ಪ್ರಸಾದಯೇ ತ್ವಾ ವರದ ಪ್ರಸಾದಂ ಕುರು ಮೇ ಪ್ರಭೋ ॥೭॥

ಪಾಪಕರ್ಮಿಗಳು ಯಮನ ಗೃಹಕ್ಕೆ ಕೊನೆಗೆ ನನ್ನಿಂದ ದೂಡಲ್ಪಡುತ್ತಾರೆ. ನೀನು ಪ್ರಸನ್ನ ಮನಸ್ಸಿನಿಂದ ಅನುಗ್ರಹಿಸುವುದಾದರೆ ನನಗೊಂದು ವರವನ್ನು ನೀಡು.

ಏತಮಿಚ್ಛಾಮ್ಯಹಂ ಕಾಮಂ ತ್ವತ್ತೋ ಲೋಕಪಿತಾಮಹ ।
ಇಚ್ಛೇಯಂ ತ್ವತ್ ಪ್ರಸಾದಾಚ್ಚ ತಪಸ್ತಪ್ತುಂ ಸುರೇಶ್ವರ ॥೮॥

ನಿನ್ನಿಂದ ಪಿತಾಮಹನೇ, ನಾನೊಂದು ವರವನ್ನು ಬೇಡಲು ಬಯಸುತ್ತೇನೆ. ನಿನ್ನ ಅನುಗ್ರಹದಿಂದ ನಾನು ತಪಸ್ಸನ್ನು ಮಾಡಲು ಹೊರಡುತ್ತೇನೆ. ನನಗೆ ಅನುಮತಿಯನ್ನು ನೀಡು.

ಪಿತಾಮಹಃ

ಮೃತ್ಯೋ ಸಂಕಲ್ಪಿತಾ ಮೇ ತ್ವಂ ಪ್ರಜಾಸಂಹಾರಹೇತುನಾ ।
ಗಚ್ಛ ಸಂಹರ ಸರ್ವಾಸ್ತ್ವಂ ಪ್ರಜಾ ಮಾ ಚ ವಿಚಾರಯ ॥೯॥

ಮೃತ್ಯುದೇವತೆಯೇ, ನಾನು ಕೋಪಾವೇಷದಲ್ಲಿ ಇದ್ದಾಗ ಪ್ರಜೆಗಳ ಸಂಹಾರದ

ಉದ್ದೇಶದಿಂದ ನಿನ್ನನ್ನು ಸೃಷ್ಟಿಸಿದ್ದೇನೆ. ಆದ್ದರಿಂದ ನಿನ್ನ ಕೆಲಸವು ಸಂಹಾರಕ್ಕೆ ಸಂಬಂಧಿಸಿದುದಾಗಿದೆ ಎಂದು ತಿಳಿ. ಇದರಲ್ಲಿ ಯಾವ ಸಂದೇಹವನ್ನು ಹೊಂದಬೇಡ.

ಏತದೇವಮವಶ್ಯಂ ಹಿ ಭವಿತಾ ನೈತದನ್ಯಥಾ ।
ಕ್ರಿಯತಾಮನವದ್ಯಾಂಗಾ ಯಥೋಕ್ತಂ ಮದ್ವಚೋಽನಘೇ ॥೧೦॥

ಇದು ಅವಶ್ಯವಾಗಿಯೂ ಹೀಗೆ ನಡೆಯಬೇಕಲ್ಲದೆ ಇದಕ್ಕೆ ವಿರುದ್ಧವಾಗಿ ನಡೆಯಬಾರದು. ನಿರ್ದುಷ್ಟವಾದ ಶರೀರವುಳ್ಳವಳೇ, ಅನಘೆಯೇ, ನಾನು ಹೇಳಿದಂತೆ ನೀನು ಮಾಡು.

ನಾರದಃ

ಏವಮುಕ್ತಾ ಮಹಾಬಾಹೋ ಮೃತ್ಯುಃ ಪರಪುರಂಜಯ ।
ನ ವ್ಯಾಜಹಾರ ತಸ್ಥೌ ಚ ಪ್ರಹ್ವಾ ಭಗವದುನ್ಮುಖೀ ॥೧೧॥

ಶತ್ರುಸಂಹಾರಕನಾದ ಅಕಂಪನನೇ, ಮಹಾಬಾಹುವಾದ ಚಕ್ರವರ್ತಿಯೇ, ಈ ರೀತಿಯಾಗಿ ಚತುರ್ಮುಖ ಬ್ರಹ್ಮನು ನುಡಿಯಲು ಮೃತ್ಯುದೇವತೆಯು ಮರುಮಾತನಾಡಲಿಲ್ಲ. ಬ್ರಹ್ಮನ ಮುಂದೆ ಏನೂ ಮಾತನಾಡದೆ ತಲೆ ತಗ್ಗಿಸಿ ಸುಮ್ಮನೆ ನಿಂತಳು.

ಪುನಃ ಪುನರಥೋಕ್ತಾ ಸಾ ಗತಸತ್ತ್ವೇವ ಭಾಮಿನೀ ।
ತೂಷ್ಣೀಮಾಸೀತ್ತತೋ ದೇವೋ ದೇವಾನಾಮೀಶ್ವರೇಶ್ವರಃ ॥೧೨॥

ಪ್ರಸಸಾದ ಕಿಲ ಬ್ರಹ್ಮಾ ಸ್ವಯಮೇವಾತ್ಮನಾತ್ಮವಾನ್ ।
ಸ್ಮಯಮಾನಶ್ಚ ಲೋಕೇಶೋ ಲೋಕಾನ್ ಸರ್ವಾನವೈಕ್ಷತ ॥೧೩॥

ಚತುರ್ಮುಖ ಬ್ರಹ್ಮನಾದರೂ ಪುನಃ ಪುನಃ ಹೀಗೆ ನಿರ್ಬಂಧಿಸಿದನು. ಆ ಮೃತ್ಯುದೇವತೆಯು ಸತ್ತ್ವಹೀನಳಂತೆ ಸುಮ್ಮನೆ ನಿಂತಳು. ದೇವತೆಗಳಿಗೆಲ್ಲ ಒಡೆಯನಾದ ಬ್ರಹ್ಮನು ತಾನೇ ಕೋಪವನ್ನು ಅಡಗಿಸಿಕೊಂಡು, ಮಂದಹಾಸವನ್ನು ಬೀರುತ್ತಾ ಸಮಸ್ತ ಲೋಕಗಳನ್ನು ಪ್ರೀತಿಯಿಂದಲೇ ನೋಡಿದನು.

ನಿವೃತ್ತರೋಷೇ ತಸ್ಮಿಂಸ್ತು ಭಗವತ್ಯಪರಾಜಿತೇ ।
ಸಾ ಕನ್ಯಾಪಜಗಾಮಾಸ್ಯ ಸಮೀಪಾದಿತಿ ನಃ ಶ್ರುತಮ್ ॥೧೪॥

ಬ್ರಹ್ಮನ ಕೋಪವು ಶಾಂತವಾದ ಬಳಿಕ ಆ ಕನ್ಯೆಯು ಚತುರ್ಮುಖ ಬ್ರಹ್ಮನ ಸಮೀಪದಿಂದ ಹೊರಟು ಹೋದಳು ಎಂದು ನಾವು ಕೇಳಿಸಿಕೊಂಡಿದ್ದೇವೆ.

ಅಪಸೃತ್ಯಾಪ್ರತಿಶ್ರುತ್ಯ ಪ್ರಜಾಸಂಹರಣಂ ತದಾ ।
ತ್ವರಮಾಣೇವ ರಾಜೇಂದ್ರ ಮೃತ್ಯುರ್ಧೇನುಕಮಭ್ಯಯಾತ್ ॥೧೫॥

ಆ ಕನ್ಯೆಯು ಪ್ರಜಾಸಂಹಾರ ಕಾರ್ಯವನ್ನು ಮಾಡುತ್ತೇನೆ ಎಂದು ಸಮ್ಮತಿಯ ಮಾತುಗಳನ್ನು ಬ್ರಹ್ಮನಿಗೆ ನೀಡದೆ ಅಲ್ಲಿಂದ ಬಹಳ ವೇಗವಾಗಿ ಗೋತೀರ್ಥದ ಕಡೆಗೆ ತಪಸ್ಸನ್ನಾಚರಿಸಲು ತೆರಳಿದಳು.

ಸಾ ತತ್ರ ಪರಮಂ ದೇವೀ ತಪೋಽಚರತ ದುಶ್ಚರಮ್ ।
ಸಮಾ ಹ್ಯೇಕಪದೇ ತಸ್ಥೌ ದಶ ಪದ್ಮಾನಿ ಪಂಚ ಚ ॥೧೬॥

ಅಲ್ಲಿ ಆ ಮೃತ್ಯುದೇವಿಯು ಅತ್ಯಂತ ಘೋರವಾದ, ಯಾರಿಂದಲೂ ಆಚರಿಸಲಾಗದ ತಪಸ್ಸನ್ನು ಆಚರಿಸಲು ಪ್ರಾರಂಭಿಸಿದಳು. ಒಂದೇ ಪಾದದಲ್ಲಿ ನಿಂತು ಹದಿನೈದು ಪದ್ಮ ಸಂವತ್ಸರಗಳ ತನಕ ತಪಸ್ಸನ್ನು ಮಾಡುತ್ತಿದ್ದಳು.

ತಾಂ ತಥಾ ಕುರ್ವತೀಂ ತತ್ರ ತಪಃ ಪರಮದುಶ್ಚರಮ್ ।
ಪುನರೇವ ಮಹಾತೇಜಾ ಬ್ರಹ್ಮಾ ವಚನಮಬ್ರವೀತ್ ॥೧೭॥

ಆ ರೀತಿ ದುಶ್ಚರವಾದ ತಪಸ್ಸನ್ನು ಮಾಡುತ್ತಿರುವ ಮೃತ್ಯುದೇವತೆಯ ಬಳಿ ಮಹಾತೇಜಸ್ವಿಯಾದ ಚತುರ್ಮುಖ ಬ್ರಹ್ಮನು ಪುನಃ ಆಗಮಿಸಿ ಹೀಗೆ ಹೇಳಿದನು.

ಕುರುಷ್ವ ಮೇ ವಚೋ ಮೃತ್ಯೋ ತದನಾದೃತ್ಯ ಸತ್ವರಾ ।
ತಥೈವೈಕಪದೇ ತಾತ ಪುನರನ್ಯಾನಿ ಸಪ್ತ ಸಾ ॥೧೮॥

ಮೃತ್ಯುದೇವತೆಯೇ, ನನ್ನ ಮಾತನ್ನು ಪರಿಪಾಲಿಸು ಎಂದು ಹೇಳಿದನು. ಆದರೆ ಮೃತ್ಯುದೇವತೆಯು ಅನಾದರಣೆ ಮಾಡಿ ಪುನಃ ಒಂದೇ ಪಾದದಲ್ಲಿ ನಿಂತು ಪುನಃ ಏಳು ಪದ್ಮಸಂಖ್ಯೆಯ ಸಂವತ್ಸರಗಳ ಕಾಲ ತಪಸ್ಸನ್ನಾಚರಿಸಿದಳು.

ತಸ್ಥೌ ಪದ್ಮಾನಿ ಷಟ್ ಚೈವ ಪಂಚ ದ್ವೇ ಚೈವ ಮಾನದ ।
ಭೂಯಃ ಪದ್ಮಾಯುತಂ ತಾತ ಮೃಗೈಃ ಸಹ ಚಚಾರ ಸಾ ॥೧೯॥

ಪೂಜ್ಯನೇ, ಇದಾದ ಬಳಿಕ ಪುನಃ ಆ ಮೃತ್ಯುದೇವತೆಯು ಒಂದೇ ಬೆರಳಿನಲ್ಲಿ ಹದಿನಾರು ಸಾವಿರ ಪದ್ಮಸಂವತ್ಸರಗಳ ಕಾಲ ತಪಸ್ಸನ್ನಾಚರಿಸಿದಳು. ಪುನಃ ಮೃಗಗಳ ಜೊತೆಗೆ ಸೇರಿ ಹತ್ತು ಸಾವಿರ ಪದ್ಮವರ್ಷಗಳ ಕಾಲ ಒಂದೇ ಕಾಲಿನಲ್ಲಿ ನಿಂತು ತಪಸ್ಸನ್ನಾಚರಿಸಿದಳು.

ಪುನರ್ಗತ್ವಾ ತತೋ ರಾಜನ್ ಮೌನಮಾತಿಷ್ಠದುತ್ತಮಮ್ ।
ಅಪ್ಸು ವರ್ಷಸಹಸ್ರಾಣಿ ಸಪ್ತ ಚೈಕಂ ಚ ಪಾರ್ಥಿವ ॥೨೦॥

ಪುನಃ ಮೃತ್ಯುದೇವತೆಯು ಉತ್ತಮವಾದ ಮೌನವ್ರತವನ್ನು ಧರಿಸಿ ಎಂಟು ಸಾವಿರ ವರ್ಷಗಳ ಕಾಲ ನೀರಿನಲ್ಲಿ ನಿಂತು ತಪಸ್ಸನ್ನು ಮಾಡಿದಳು.

ತತೋ ಜಗಾಮ ಸಾ ಕನ್ಯಾ ಕೌಶಿಕೀಂ ಭರತರ್ಷಭ ।
ತತ್ರ ವಾಯುಜಲಾಹಾರಾ ಚಚಾರ ನಿಯಮಂ ಪುನಃ ॥೨೧॥

ಬಳಿಕ ಆ ಮೃತ್ಯುಕನ್ಯೆಯು ಕೌಶಿಕೀ ನದಿಯ ತೀರಕ್ಕೆ ಹೋದಳು. ಅಲ್ಲಿ ಪುನಃ ಗಾಳಿ ಮತ್ತು ನೀರನ್ನೇ ಆಹಾರವಾಗಿ ಮಾಡಿಕೊಂಡು ಕಠೋರವಾದ ನಿಯಮಗಳನ್ನು ಪಾಲಿಸುತ್ತಿದ್ದಳು.

ತತೋ ಯಯೌ ಮಹಾಭಾಗಾ ಗಂಗಾಂ ಮೇರುಂ ಚ ಕೇವಲಮ್ ।
ತಸ್ಥೌ ದಾರ್ವಿವ ನಿಶ್ಚೇಷ್ಟಾ ಭೂತಾನಾಂ ಹಿತಕಾಮ್ಯಯಾ ॥೨೨॥

ನಂತರ ಮಹಾಭಾಗ್ಯಶಾಲಿನಿಯಾದ ಮೃತ್ಯುದೇವತೆಯು ಗಂಗಾನದಿಯ ತೀರಕ್ಕೂ, ಅಲ್ಲಿಂದ ಮೇರುಪರ್ವತಕ್ಕೂ ಹೋಗಿ, ಪ್ರಜೆಗಳಿಗೆಲ್ಲ ಹಿತಮಾಡುವ ದೃಷ್ಟಿಯಿಂದ ಮರದ ಕೊರಳಿನಂತೆ ನಿಶ್ಚೇಷ್ಟಳಾಗಿ ನಿಂತು ತಪಸ್ಸನ್ನು ಮಾಡಿದಳು.

ತತೋ ಹಿಮವತೋ ಮೂರ್ಧ್ನಿ ಯತ್ರ ದೇವಾಃ ಸಮೀಜಿರೇ ।
ತತ್ರಾಂಗುಷ್ಠೇನ ರಾಜೇಂದ್ರ ನಿಖರ್ವಮಪರಂ ತತಃ ।
ತಸ್ಥೌ ಪಿತಾಮಹಂ ಚೈವ ತೋಷಯಾಮಾಸ ಯತ್ನತಃ ॥೨೩॥

ಬಳಿಕ ಮೃತ್ಯುದೇವತೆಯು ಮೇರು ಪರ್ವತದಿಂದ ಹಿಮವದ್ ಪರ್ವತದ ಶಿಖರಕ್ಕೆ ಮರಳಿ ಬಂದು, ಕಾಲಿನ ಹೆಬ್ಬೆರಳಿನಲ್ಲಿ ನಿಂತು ನಿಖರ್ವ ವರ್ಷಗಳ ಪರ್ಯಂತ

ಅರ್ಥಾತ್ ಹತ್ತುಸಾವಿರ ಕೋಟಿ ವರ್ಷಗಳ ತಪಸ್ಸನ್ನು ಮಾಡಿ, ನಿರಂತರ ಪ್ರಯತ್ನದಿಂದ ಚತುರ್ಮುಖ ಬ್ರಹ್ಮನನ್ನು ಸಂತೋಷಪಡಿಸಿದಳು.

ತತಸ್ತಾಮಬ್ರವೀತ್ತತ್ರ ಲೋಕಾನಾಂ ಪ್ರಭವಾಪ್ಯಯಃ ।
ಕಿಮಿದಂ ವರ್ತತೇ ಪುತ್ರಿ ಕ್ರಿಯತಾಂ ತದ್ವಚೋ ಮಮ ॥೨೪॥

ಲೋಕಗಳ ಸೃಷ್ಟಿಕಾರಣನಾದ ಚತುರ್ಮುಖ ಬ್ರಹ್ಮನು ಮೃತ್ಯುದೇವತೆಯ ಬಳಿ ಬಂದು ಅವಳನ್ನುದ್ದೇಶಿಸಿ- 'ಮಗಳೇ, ನೀನು ಏನು ಮಾಡುತ್ತಿರುವಿ? ನಾನು ಹೇಳಿದಂತೆ ಮಾಡು' ಎಂದು ಹೇಳಿದನು.

ತತೋऽಬ್ರವೀತ್ ಪುನರ್ಮೃತ್ಯುರ್ಭಗವಂತಂ ಪಿತಾಮಹಮ್ ।
ನ ಹರೇಯಂ ಪ್ರಜಾ ದೇವ ಪುನಸ್ತಾ ತ್ವಹಂ ಪ್ರಸಾದಯೇ ॥೨೫॥

ಬ್ರಹ್ಮನ ಮಾತನ್ನು ಕೇಳಿಸಿಕೊಂಡ ಮೃತ್ಯುದೇವತೆಯು ಪೂಜ್ಯನಾದ ಪಿತಾಮಹನನ್ನುದ್ದೇಶಿಸಿ- 'ದೇವನೇ, ನಾನು ಪ್ರಜೆಗಳ ಪ್ರಾಣವನ್ನು ಅಪಹರಿಸುವುದಿಲ್ಲ. ನಾನು ಪುನಃ ನನ್ನ ತಪಸ್ಸನ್ನು ಮುಂದುವರೆಸುತ್ತೇನೆ. ನಿನ್ನನ್ನು ಪ್ರಸನ್ನಗೊಳಿಸುತ್ತೇನೆ' ಎಂದು ಹೇಳಿದಳು.

ತಾಮಧರ್ಮಭಯತ್ರಸ್ತಾಂ ಪುನರೇವ ಚ ಯಾಚತೀಮ್ ।
ತದಾಬ್ರವೀದ್ ದೇವದೇವೋ ನಿಗೃಹ್ಯೇದಂ ವಚಸ್ತತಃ ॥೨೬॥

ಹೀಗೆ ಹೇಳಿ ತಪಸ್ಸಿಗೆ ಹೊರಡಲು ನಿಂತಿರುವ ಆಕೆಯನ್ನು ಕುರಿತು, ಪ್ರಾಣವನ್ನು ಅಪಹರಿಸಿದರೆ ಅಧರ್ಮವಾಗುತ್ತದೆ ಎಂದು ಭಯದಿಂದ ಭೀತಳಾಗಿದ್ದ, ಪುನಃ ಪುನಃ ಪ್ರಾರ್ಥಿಸುತ್ತಿದ್ದ ಆಕೆಯನ್ನು ಕುರಿತು ತಪಸ್ಸಿನ ಪ್ರವೃತ್ತಿಯನ್ನು ತಡೆದು, ದೇವದೇವನಾದ ಬ್ರಹ್ಮನು ಹೀಗೆ ಹೇಳಿದನು.

ಅಧರ್ಮೋ ನಾಸ್ತಿ ತೇ ಮೃತ್ಯೋ ಸಂಯಚ್ಛೇಮಾಃ ಪ್ರಜಾಃ ಶುಭೇ ।
ಮಯಾ ಹ್ಯುಕ್ತಂ ಮೃಷಾ ಭದ್ರೇ ಭವಿತಾ ನೇಹ ಕಿಂಚನ ॥೨೭॥

ಮೃತ್ಯುದೇವತೆಯೇ, ಶುಭಾಂಗಿನಿಯೇ, ನೀನು ಪ್ರಜೆಗಳನ್ನು ಸಂಹರಿಸುವುದರಿಂದ ಯಾವ ದೋಷದಿಂದಲೂ ಲಿಪ್ತಳಾಗುವುದಿಲ್ಲ. ಅಧರ್ಮವೂ ಉಂಟಾಗುವುದಿಲ್ಲ. ನಾನು ಹೇಳಿದ ವಚನವು ಎಂದಿಗೂ ಸುಳ್ಳಾಗುವುದಿಲ್ಲ.

ಧರ್ಮಃ ಸನಾತನಶ್ಚ ತ್ವಾಮಿಹೈವಾನುಪ್ರವೇಕ್ಷ್ಯತೇ ।
ಅಹಂ ಚ ಏಬುಧಾಶ್ಚೈವ ತ್ವದ್ಧಿತೇ ನಿರತಾಃ ಸದಾ ॥೨೮॥

ಸನಾತನ ಧರ್ಮವು ನಿನ್ನ ಶರೀರವನ್ನು ಪ್ರವೇಶಿಸುತ್ತದೆ. ಸಮಸ್ತ ದೇವತೆಗಳು, ನಾನು, ಎಲ್ಲರೂ ನಿನ್ನ ಹಿತದಲ್ಲಿಯೇ ನಿರತರಾಗಿರುತ್ತೇವೆ.

ಇಮಮನ್ಯಂ ಚ ತೇ ಕಾಮಂ ದದಾಮಿ ಮನಸೇಪ್ಸಿತಮ್ ।
ನ ತ್ವಾ ದೋಷೇಣ ಯಾಸ್ಯಂತಿ ವ್ಯಾಧಿಸಂಪೀಡಿತಾಃ ಪ್ರಜಾಃ ॥೨೯॥

ನಾನು ನಿನಗೆ ಇದಲ್ಲದೆ ಮತ್ತೊಂದು ವರವನ್ನು ನೀಡುತ್ತೇನೆ. ವ್ಯಾಧಿಗಳಿಂದ ಪೀಡಿತರಾದ ಪ್ರಜೆಗಳು ಪ್ರಾಣವನ್ನು ಅಪಹರಿಸಿದ ಬಳಿಕ ನಿನ್ನ ಮೇಲೆ ದೋಷಾರೋಪಣೆಯನ್ನು ಮಾಡುವುದಿಲ್ಲ. ವ್ಯಾಧಿಯೇ ಕಾರಣ ಎಂದು ಹೇಳುತ್ತಾರೆ.

ಪುರುಷೇಷು ಚ ರೂಪೇಣ ಪುರುಷಸ್ತ್ವಂ ಭವಿಷ್ಯಸಿ ।
ಸ್ತ್ರೀಷು ಸ್ತ್ರೀರೂಪಿಣೇ ಚೈವ ತೃತೀಯೇಷು ನಪುಂಸಕಮ್ ॥೩೦॥

ನೀನು ಪುರುಷರಲ್ಲಿ ಪುರುಷರೂಪದಿಂದಲೇ ಇರುತ್ತಿರುವಿ. ಸ್ತ್ರೀಯರಲ್ಲಿ ಸ್ತ್ರೀ ರೂಪದಿಂದ, ನಪುಂಸಕರಲ್ಲಿ ನಪುಂಸಕ ರೂಪದಿಂದ ವಾಸ ಮಾಡುವಿ.

ಸೈವಮುಕ್ತಾ ಮಹಾರಾಜ ಕೃತಾಂಜಲಿರುವಾಚ ಹ ।
ಪುನರೇವ ಮಹಾತ್ಮಾನಂ ನೇತಿ ದೇವೇಶಮವ್ಯಯಮ್ ॥೩೧॥

ಈ ರೀತಿಯಾಗಿ ಬ್ರಹ್ಮನಿಂದ ಹೇಳಲ್ಪಟ್ಟ ಆಕೆಯು ಬದ್ಧಾಂಜಲಿಯಾಗಿ ನಿಂತು ಮಹಾತ್ಮನಾದ, ದೇವೇಶನಾದ, ಅವ್ಯಯನಾದ ಬ್ರಹ್ಮನನ್ನು ಕುರಿತು ಪುನಃ ನಾನು ಸಂಹರಿಸುವುದಿಲ್ಲ ಎಂದೇ ಹೇಳಿಬಿಟ್ಟಳು.

ತಾಮಬ್ರವೀತ್ತದಾ ದೇವೋ ಮೃತ್ಯೋ ಸಂಹರ ಮಾನವಾನ್ ।
ಅಧರ್ಮಸ್ತೇ ನ ಭವಿತಾ ತಥಾ ಧ್ಯಾಸ್ಯಾಮ್ಯಹಂ ಶುಭೇ ॥೩೨॥

ಬ್ರಹ್ಮದೇವನು ಸಮಾಧಾನದಿಂದಲೇ ಆಕೆಗೆ ಹೀಗೆ ಹೇಳಿದನು. ಶುಭಸ್ವರೂಪಳೇ, ಪ್ರಾಣಿಗಳನ್ನು ಸಂಹರಿಸು. ನಿನ್ನನ್ನು ಅಧರ್ಮವು ಪೀಡಿಸುವುದಿಲ್ಲ. ನಿನ್ನ ವಿಷಯದಲ್ಲಿ ನಾನು ಶುಭವನ್ನೇ ಚಿಂತಿಸುತ್ತೇನೆ. ಆದ್ದರಿಂದ ಅಧರ್ಮಕ್ಕೆ ಭಯಪಡಬೇಡ.

ಯಾನಶ್ರುಬಿಂದೂನ್ ಪತಿತಾನಪಶ್ಯಂ
ಯೇ ಪಾಣಿಭ್ಯಾಂ ಧಾರಿತಾಸ್ತೇ ಪುರಸ್ತಾತ್ ।
ತೇ ವ್ಯಾಧಯೋ ಮಾನವಾನ್ ಘೋರರೂಪಾಃ
ಪ್ರಾಪ್ತೇ ಕಾಲೇ ಪೀಡಯಿಷ್ಯಂತಿ ಮೃತ್ಯೋ ॥೩೩॥

ಮೃತ್ಯುದೇವತೆಯೇ, ಹಿಂದೆ ನೀನು ಕಣ್ಣೀರನ್ನಿಡುತ್ತಿರುವಾಗ ನಾನು ಅದನ್ನು ನೋಡಿ ನನ್ನ ಬೊಗಸೆಯಿಂದಲೇ ಆಶ್ರುಬಿಂದುವನ್ನು ಧರಿಸಿದೆನು. ನಿನ್ನ ಕಣ್ಣೀರಿನ ಹನಿಗಳೇ ವ್ಯಾಧಿಗಳಾಗಿವೆ. ಕಾಲವು ಸನ್ನಿಹಿತವಾದಾಗ ಘೋರರೂಪವಾದ ವ್ಯಾಧಿಗಳಾಗಿ, ನಿನ್ನ ಕಣ್ಣೀರು ಪರಿಣಾಮವನ್ನು ಹೊಂದಿ ಮನುಷ್ಯರನ್ನು ಮೃತ್ಯುವಶವನ್ನಾಗಿ ಮಾಡುತ್ತದೆ.

ಸರ್ವೇಷಾಂ ತ್ವಂ ಪ್ರಾಣಿನಾಮಂತಕಾಲೇ
ಕಾಮಕ್ರೋಧೌ ಸಹಿತೌ ಯೋಜಯೇಥಾಃ ।
ಏವಂ ಧರ್ಮಸ್ತ್ವಾ ಮುಪೈಷ್ಯತ್ಯಮೇಯೋ
ನ ಚಾಧರ್ಮಂ ಲಪ್ಸ್ಯಸೇ ತುಲ್ಯವೃತ್ತಿಃ ॥೩೪॥

ಸಮಸ್ತ ಪ್ರಾಣಿಗಳನ್ನು ಅವರ ಅಂತ್ಯಕಾಲದಲ್ಲಿ ಕಾಮ-ಕ್ರೋಧಗಳ ಜೊತೆಗೆ ನೀನು ಸಂಯೋಜಿಸಬೇಕು. ಈ ರೀತಿ ಮಾಡುವುದರಿಂದ ಊಹಿಸಲಾರದ ಧರ್ಮವು ನಿನ್ನ ಸಹಕಾರಕ್ಕೆ ಬರುತ್ತದೆ. ಎಲ್ಲೆಡೆಯೂ ಒಂದೇ ರೀತಿ ವರ್ತಿಸುವ ನೀನು ಯಾವುದೇ ರೀತಿಯ ಪಾಪಕ್ಕೂ ಭಾಜನಳಾಗುವುದಿಲ್ಲ.

ಏವಂ ಧರ್ಮಂ ಪಾಲಯಿಷ್ಯಸ್ಯಘೋಕ್ತಂ
ನ ಚಾತ್ಮಾನಂ ಮಜ್ಜಯಿಷ್ಯಸ್ಯಧರ್ಮೇ ।
ತಸ್ಮಾತ್ ಕಾಮಂ ರೋಚಯಾಭ್ಯಾಗತಂ ತ್ವಂ
ಸಂಯೋಜ್ಯಾಘೋ ಸಂಹರಸ್ವೇಹ ಜಂತೂನ್ ॥೩೫॥

ನಾನು ಹೇಳಿದ ಧರ್ಮವನ್ನು ನೀನು ಪಾಲಿಸಿದಲ್ಲಿ ನಿನಗೆ ಪಾಪಲೇಪವು ಆಗುವುದಿಲ್ಲ. ಆದ್ದರಿಂದ ನಿನಗೆ ಲಭಿಸಿದ ಅಧಿಕಾರವನ್ನು ಸಂತೋಷವಾಗಿ ಸ್ವೀಕರಿಸು. ಮನುಷ್ಯನ ಜೊತೆಗೆ ಕಾಮವನ್ನು ಸಂಯೋಜಿಸಿ ಜಗತ್ತಿನಲ್ಲಿರುವ ಪ್ರಾಣಿಗಳನ್ನೆಲ್ಲ ಸಂಹರಿಸು.

ಸಾ ವೈ ತದಾ ಮೃತ್ಯುಸಂಜ್ಞಾಪದೇಶಾ-
ಚ್ಚಾಪಾದ್ಭೀತಾ ಬಾಢಮಿತ್ಯಬ್ರವೀತ್ತಮ್ ।
ಅಥೋ ಪ್ರಾಣಾನ್ ಪ್ರಾಣಿನಾಮಂತಕಾಲೇ
ಕಾಮಕ್ರೋಧೌ ಪ್ರಾಪ್ಯ ನಿರ್ಮೋಹ್ಯ ಹಂತಿ ॥೩೬॥

ಚತುರ್ಮುಖ ಬ್ರಹ್ಮನು ಹೀಗೆ ಹೇಳಿದ ತರುವಾಯ, ಅವನ ಮಾತನ್ನು ಕೇಳದಿದ್ದರೆ ಎಲ್ಲಿ ಬ್ರಹ್ಮನು ಶಪಿಸುತ್ತಾನೋ ಎಂಬ ಭಯದಿಂದ 'ಹಾಗೆ ಆಗಲಿ' ಎಂದು ಅವನನ್ನು ಕುರಿತು ಮೃತ್ಯುದೇವತೆಯು ಹೇಳಿದಳು. ಬ್ರಹ್ಮನ ಆಜ್ಞೆಯಂತೆ ಮೃತ್ಯುದೇವತೆಯು ಅಂತ್ಯಕಾಲದಲ್ಲಿ ಜೀವರಿಗೆ ಕಾಮ-ಕ್ರೋಧವನ್ನು ಸೇರಿಸಿ ಮೋಹವಶರನ್ನಾಗಿ ಮಾಡಿ ಸಂಹರಿಸುತ್ತಾಳೆ.

ಮೃತ್ಯೋರ್ಯೇ ತೇ ವ್ಯಾಧಯಶ್ಚಾಶ್ರುಪಾತಾ
ಮನುಷ್ಯಾಣಾಂ ರುಜ್ಯತೇ ಯೈಃ ಶರೀರಮ್ ।
ಸರ್ವೇಷಾಂ ವೈ ಪ್ರಾಣಿನಾಂ ಪ್ರಾಣನಾಂತೇ
ತಸ್ಮಾಚ್ಛೋಕಂ ಮಾ ಕೃಥಾ ಬುಧ್ಯ ಬುದ್ಧ್ಯಾ ॥೩೭॥

ಹಿಂದೆ ಮೃತ್ಯುದೇವತೆಯ ಕಣ್ಣುಗಳಿಂದ ಯಾವ ಅಶ್ರುಬಿಂದುಗಳು ಉದುರಿದವೋ ಮುಂದೆ ಜ್ವರವೇ ಮೊದಲಾದ ರೋಗಗಳಾಗಿ ಪರಿಣಾಮ ಹೊಂದಿದವು. ಆದ್ದರಿಂದ ಮನುಷ್ಯನ ಶರೀರವು ಮೃತ್ಯುದೇವತೆಯ ಅಶ್ರುಬಿಂದುವಿನಿಂದ ಜರಾಗ್ರಸ್ಥವಾಗುತ್ತದೆ. ಪ್ರಾಣಿಗಳ ಆಯುಷ್ಯ ಮುಗಿದ ಬಳಿಕ ಮೃತ್ಯುದೇವತೆಯು ಪ್ರಾಣಿಗಳ ಬಳಿಗೆ ಸಾಗುತ್ತಾಳೆ. ಇದನ್ನು ಅರ್ಥೈಸಿಕೊಂಡ ನೀನು ನಿನ್ನ ಮಗನ ಮರಣಕ್ಕಾಗಿ ಶೋಕ ಹೊಂದಬೇಡ. ಆಯುಷ್ಯವು ಮುಗಿದ ಬಳಿಕ ಮೃತ್ಯುವು ಒದಗುತ್ತದೆ ಎಂಬುದು ವಿಧಿಯ ನಿರ್ಣಯವಾಗಿದೆ. ಇದನ್ನು ಸಮಾಲೋಚಿಸು.

ಸರ್ವೇ ದೇವಾಃ ಪ್ರಾಣಿನಾಂ ಪ್ರಾಯಣಾಂತೇ
ಗತ್ವಾ ವೃತ್ತಾಃ ಸನ್ನಿವೃತ್ತಾಸ್ತಥೈವ ।
ಏವಂ ಸರ್ವೇ ಮಾನವಾಃ ಪ್ರಾಯಣಾಂತೇ
ಗತ್ವಾವೃತ್ತಾ ದೇವವದ್ರಾಜಸಿಂಹ ॥೩೮॥

ಸಮಸ್ತ ದೇವತೆಗಳು ಜೀವರ ಮರಣಕಾಲದಲ್ಲಿ ಆ ದೇಹದಿಂದ ಹೊರಟು ಹೋಗುತ್ತಾರೆ. ತಮ್ಮ ಮೂಲರೂಪದಲ್ಲಿ ಸೇರಿರುತ್ತಾರೆ. ಪುನಃ ಆ ಜೀವರು ಜನ್ಮಾಂತರವನ್ನು ಹೊಂದುವ ಕಾಲದಲ್ಲಿ ಅದೇ ತತ್ತ್ವಾಭಿಮಾನಿ ದೇವತೆಗಳು ಆಗಮಿಸಿ ಆ ಜೀವನ ಶರೀರದಲ್ಲಿ ಪ್ರವೇಶಿಸುತ್ತಾರೆ. ಫಲವು ಮುಗಿದ ಬಳಿಕ ಮನುಷ್ಯನೇ ಮೊದಲಾದ ಯೋನಿಗಳಲ್ಲಿ ಜನ್ಮವನ್ನು ತಾಳುತ್ತಾರೆ.

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥೩೯॥

ವಾಯುದೇವರು ಅಸುರರಿಗೆ ಭಯಂಕರರು. ಏಕೆಂದರೆ ಯಮಭಟರಿಗೂ ಭಯಂಕರವಾದ ಧ್ವನಿಯು ಇವರಲ್ಲಿದೆ. ಮಹಾಬಲಿಷ್ಠರಾಗಿದ್ದಾರೆ. ಎಲ್ಲ ಪ್ರಾಣಿಗಳ ಶ್ವಾಸಾಭಿಮಾನಿ ಚೇಷ್ಟಾಪ್ರದನು. ಪ್ರಾಣಿಗಳ ದೇಹವು ಪತನ ಹೊಂದಲು ದೇಹದಲ್ಲಿ ವಾಯುದೇವನು ಇಲ್ಲದಿರುವುದೇ ಮುಖ್ಯಕಾರಣ. ಮುಮುಕ್ಷುಗಳಿಗೆ ಚರಮ ದೇಹವು ಪತನ ಹೊಂದಿದಾಗ ಅವರು ಪುನಃ ಸಂಸಾರಕ್ಕೆ ಬಾರದಿರುವಂತೆ ವಾಯುದೇವರು ಅನುಗ್ರಹಿಸುತ್ತಾರೆ. ಆದ್ದರಿಂದ ವಾಯುದೇವನೇ ದೇವತೆಗಳಿಗೂ ದೇವತೆ. ದೇವತೆಗಳಲ್ಲಿ ಸರ್ವೋತ್ಕೃಷ್ಟ ದೇವತೆ ಎನಿಸಿದ್ದಾನೆ.

ಸರ್ವೇ ದೇವಾ ಮರ್ತ್ಯಸಂಜ್ಞಾವಿಶಿಷ್ಟಾಃ
ಸರ್ವೇ ಮರ್ತ್ಯಾ ದೇವಸಂಜ್ಞಾವಿಶಿಷ್ಟಾಃ ।
ತಸ್ಮಾತ್ ಪುತ್ರಂ ಮಾ ಶುಚೋ ರಾಜಸಿಂಹ
ಪುತ್ರಃ ಸ್ವರ್ಗಂ ಪ್ರಾಪ್ಯ ತೇ ಮೋದತೇ ಹ ॥೪೦॥

ಸಮಸ್ತ ದೇವತೆಗಳು ಮರ್ತ್ಯ ಎಂಬ ಸಂಜ್ಞೆಯಿಂದ ಕೂಡಿದವರಾಗಿರುತ್ತಾರೆ. ಸಮಸ್ತ ಲೋಕದ ಮರ್ತ್ಯರು ಮರಣದ ಬಳಿಕ ಸತ್ಕಾರ್ಯದ ಫಲವಾಗಿ ಸ್ವರ್ಗಲೋಕಕ್ಕೆ ಹೋಗುವುದರಿಂದ ದೇವ ಎಂಬ ಸಂಜ್ಞೆಯನ್ನು ಹೊಂದುತ್ತಾರೆ. ಆದ್ದರಿಂದ ರಾಜಸಿಂಹನೇ, ನೀನು ನಿನ್ನ ಮಗನ ನಿಮಿತ್ತವಾಗಿ ದುಃಖವನ್ನು ಹೊಂದಬೇಡ. ನಿನ್ನ ಮಗನು ಸ್ವರ್ಗವನ್ನು ಪಡೆದು ಆನಂದ ಹೊಂದಿದ್ದಾನೆ.

ಸಾ ವೈ ತದಾ ಮೃತ್ಯುಸಂಜ್ಞಾಪದೇಶಾ-
ಚ್ಚಾಪಾದ್ಭೀತಾ ಬಾಢಮಿತ್ಯಬ್ರವೀತ್ತಮ್ ।
ಅಥೋ ಪ್ರಾಣಾನ್ ಪ್ರಾಣಿನಾಮಂತಕಾಲೇ
ಕಾಮಕ್ರೋಧೌ ಪ್ರಾಪ್ಯ ನಿರ್ಮೋಹ್ಯ ಹಂತಿ ॥೩೬॥

ಚತುರ್ಮುಖ ಬ್ರಹ್ಮನು ಹೀಗೆ ಹೇಳಿದ ತರುವಾಯ, ಅವನ ಮಾತನ್ನು ಕೇಳದಿದ್ದರೆ ಎಲ್ಲಿ ಬ್ರಹ್ಮನು ಶಪಿಸುತ್ತಾನೋ ಎಂಬ ಭಯದಿಂದ 'ಹಾಗೆ ಆಗಲಿ' ಎಂದು ಅವನನ್ನು ಕುರಿತು ಮೃತ್ಯುದೇವತೆಯು ಹೇಳಿದಳು. ಬ್ರಹ್ಮನ ಆಜ್ಞೆಯಂತೆ ಮೃತ್ಯುದೇವತೆಯು ಅಂತ್ಯಕಾಲದಲ್ಲಿ ಜೀವರಿಗೆ ಕಾಮ-ಕ್ರೋಧವನ್ನು ಸೇರಿಸಿ ಮೋಹವಶರನ್ನಾಗಿ ಮಾಡಿ ಸಂಹರಿಸುತ್ತಾಳೆ.

ಮೃತ್ಯೋರ್ಯೇ ತೇ ವ್ಯಾಧಯಶ್ಚಾಶ್ರುಪಾತಾ
ಮನುಷ್ಯಾಣಾಂ ರುಜ್ಯತೇ ಯೈಃ ಶರೀರಮ್ ।
ಸರ್ವೇಷಾಂ ವೈ ಪ್ರಾಣಿನಾಂ ಪ್ರಾಣನಾಂತೇ
ತಸ್ಮಾಚ್ಛೋಕಂ ಮಾ ಕೃಥಾ ಬುಧ್ಯ ಬುದ್ಧ್ಯಾ ॥೩೭॥

ಹಿಂದೆ ಮೃತ್ಯುದೇವತೆಯ ಕಣ್ಣುಗಳಿಂದ ಯಾವ ಅಶ್ರುಬಿಂದುಗಳು ಉದುರಿದವೋ ಮುಂದೆ ಜ್ವರವೇ ಮೊದಲಾದ ರೋಗಗಳಾಗಿ ಪರಿಣಾಮ ಹೊಂದಿದವು. ಆದ್ದರಿಂದ ಮನುಷ್ಯನ ಶರೀರವು ಮೃತ್ಯುದೇವತೆಯ ಅಶ್ರುಬಿಂದುವಿನಿಂದ ಜರಾಗ್ರಸ್ಥವಾಗುತ್ತದೆ. ಪ್ರಾಣಿಗಳ ಆಯುಷ್ಯ ಮುಗಿದ ಬಳಿಕ ಮೃತ್ಯುದೇವತೆಯು ಪ್ರಾಣಿಗಳ ಬಳಿಗೆ ಸಾಗುತ್ತಾಳೆ. ಇದನ್ನು ಅರ್ಥೈಸಿಕೊಂಡ ನೀನು ನಿನ್ನ ಮಗನ ಮರಣಕ್ಕಾಗಿ ಶೋಕ ಹೊಂದಬೇಡ. ಆಯುಷ್ಯವು ಮುಗಿದ ಬಳಿಕ ಮೃತ್ಯುವು ಒದಗುತ್ತದೆ ಎಂಬುದು ವಿಧಿಯ ನಿರ್ಣಯವಾಗಿದೆ. ಇದನ್ನು ಸಮಾಲೋಚಿಸು.

ಸರ್ವೇ ದೇವಾಃ ಪ್ರಾಣಿನಾಂ ಪ್ರಾಯಣಾಂತೇ
ಗತ್ವಾ ವೃತ್ತಾಃ ಸನ್ನಿವೃತ್ತಾಸ್ತಥೈವ ।
ಏವಂ ಸರ್ವೇ ಮಾನವಾಃ ಪ್ರಾಯಣಾಂತೇ
ಗತ್ವಾವೃತ್ತಾ ದೇವವದ್ರಾಜಸಿಂಹ ॥೩೮॥

ಸಮಸ್ತ ದೇವತೆಗಳು ಜೀವರ ಮರಣಕಾಲದಲ್ಲಿ ಆ ದೇಹದಿಂದ ಹೊರಟು ಹೋಗುತ್ತಾರೆ. ತಮ್ಮ ಮೂಲರೂಪದಲ್ಲಿ ಸೇರಿರುತ್ತಾರೆ. ಪುನಃ ಆ ಜೀವರು ಜನ್ಮಾಂತರವನ್ನು ಹೊಂದುವ ಕಾಲದಲ್ಲಿ ಅದೇ ತತ್ತ್ವಾಭಿಮಾನಿ ದೇವತೆಗಳು ಆಗಮಿಸಿ ಆ ಜೀವನ ಶರೀರದಲ್ಲಿ ಪ್ರವೇಶಿಸುತ್ತಾರೆ. ಫಲವು ಮುಗಿದ ಬಳಿಕ ಮನುಷ್ಯನೇ ಮೊದಲಾದ ಯೋನಿಗಳಲ್ಲಿ ಜನ್ಮವನ್ನು ತಾಳುತ್ತಾರೆ.

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥೩೯॥

ವಾಯುದೇವರು ಅಸುರರಿಗೆ ಭಯಂಕರರು. ಏಕೆಂದರೆ ಯಮಭಟರಿಗೂ ಭಯಂಕರವಾದ ಧ್ವನಿಯು ಇವರಲ್ಲಿದೆ. ಮಹಾಬಲಿಷ್ಠರಾಗಿದ್ದಾರೆ. ಎಲ್ಲ ಪ್ರಾಣಿಗಳ ಶ್ವಾಸಾಭಿಮಾನಿ ಚೇಷ್ಟಾಪ್ರದನು. ಪ್ರಾಣಿಗಳ ದೇಹವು ಪತನ ಹೊಂದಲು ದೇಹದಲ್ಲಿ ವಾಯುದೇವನು ಇಲ್ಲದಿರುವುದೇ ಮುಖ್ಯಕಾರಣ. ಮುಮುಕ್ಷುಗಳಿಗೆ ಚರಮ ದೇಹವು ಪತನ ಹೊಂದಿದಾಗ ಅವರು ಪುನಃ ಸಂಸಾರಕ್ಕೆ ಬಾರದಿರುವಂತೆ ವಾಯುದೇವರು ಅನುಗ್ರಹಿಸುತ್ತಾರೆ. ಆದ್ದರಿಂದ ವಾಯುದೇವನೇ ದೇವತೆಗಳಿಗೂ ದೇವತೆ. ದೇವತೆಗಳಲ್ಲಿ ಸರ್ವೋತ್ಕೃಷ್ಟ ದೇವತೆ ಎನಿಸಿದ್ದಾನೆ.

ಸರ್ವೇ ದೇವಾ ಮರ್ತ್ಯಸಂಜ್ಞಾವಿಶಿಷ್ಟಾಃ
ಸರ್ವೇ ಮರ್ತ್ಯಾ ದೇವಸಂಜ್ಞಾವಿಶಿಷ್ಟಾಃ ।
ತಸ್ಮಾತ್ ಪುತ್ರಂ ಮಾ ಶುಚೋ ರಾಜಸಿಂಹ
ಪುತ್ರಃ ಸ್ವರ್ಗಂ ಪ್ರಾಪ್ಯ ತೇ ಮೋದತೇ ಹ ॥೪೦॥

ಸಮಸ್ತ ದೇವತೆಗಳು ಮರ್ತ್ಯ ಎಂಬ ಸಂಜ್ಞೆಯಿಂದ ಕೂಡಿದವರಾಗಿರುತ್ತಾರೆ. ಸಮಸ್ತ ಲೋಕದ ಮರ್ತ್ಯರು ಮರಣದ ಬಳಿಕ ಸತ್ಕಾರ್ಯದ ಫಲವಾಗಿ ಸ್ವರ್ಗಲೋಕಕ್ಕೆ ಹೋಗುವುದರಿಂದ ದೇವ ಎಂಬ ಸಂಜ್ಞೆಯನ್ನು ಹೊಂದುತ್ತಾರೆ. ಆದ್ದರಿಂದ ರಾಜಸಿಂಹನೇ, ನೀನು ನಿನ್ನ ಮಗನ ನಿಮಿತ್ತವಾಗಿ ದುಃಖವನ್ನು ಹೊಂದಬೇಡ. ನಿನ್ನ ಮಗನು ಸ್ವರ್ಗವನ್ನು ಪಡೆದು ಆನಂದ ಹೊಂದಿದ್ದಾನೆ.

ಏವಂ ಮೃತ್ಯುರ್ದೇವಸೃಷ್ಟಾ ಪ್ರಜಾನಾಂ
ಪ್ರಾಪ್ತೇ ಕಾಲೇ ಸಂಹರಂತೀ ಯಥಾವತ್ ।
ತಸ್ಯಾಶ್ಚೈವ ವ್ಯಾಧಯಸ್ತೇಽಶ್ರುಪಾತಾಃ
ಪ್ರಾಪ್ತೇ ಕಾಲೇ ಸಂಹರಂತೀಹ ಜಂತೂನ್ ॥೪೧॥

ಯುಧಿಷ್ಠಿರನೇ, ಈ ರೀತಿಯಾಗಿ ಬ್ರಹ್ಮನೇ ಪ್ರಾಣಿಗಳ ಸಂಹಾರಕ್ಕಾಗಿ ಮೃತ್ಯುವನ್ನು ಸೃಷ್ಟಿಸಿದ್ದಾನೆ. ಕಾಲವು ಸನ್ನಿಹಿತವಾದ ಕೂಡಲೇ ನಿಯಮದಂತೆ ಮೃತ್ಯುವು ಪ್ರಾಣಿಗಳನ್ನು ಸಂಹರಿಸುತ್ತದೆ. ಮೃತ್ಯುವಿನ ಅಶ್ರುಬಿಂದುಗಳೇ ವ್ಯಾಧಿಗಳು. ವ್ಯಾಧಿಗಳು ಕಾಲವು ಸನ್ನಿಹಿತವಾದಾಗ ಮನುಷ್ಯರನ್ನು ಆಶ್ರಯಿಸಿ ಅವರನ್ನು ಸಂಹಾರ ಮಾಡುತ್ತವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಮೃತ್ಯುಪ್ರಜಾಪತಿಸಂವಾದೋ ನಾಮ
ತ್ರಿನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

॥ ಮೃತ್ಯುಪ್ರಜಾಪತಿಸಂವಾದಃ ಸಮಾಪ್ತಃ ॥

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಧರ್ಮಾಧರ್ಮಗಳ ಸ್ವರೂಪವನ್ನು ತಿಳಿಸಿದುದು.

ಯುಧಿಷ್ಠಿರಃ

ಇಮೇ ವೈ ಮಾನವಾಃ ಸರ್ವೇ ಧರ್ಮಂ ಪ್ರತಿ ವಿಶಂಕಿತಾಃ ।
ಕೋಽಯಂ ಧರ್ಮಃ ಕುತೋ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೧॥

ಪಿತಾಮಹನೇ, ಈ ಜಗತ್ತಿನಲ್ಲಿರುವ ಎಲ್ಲ ಮಾನವರು ಧರ್ಮದ ವಿಷಯದಲ್ಲಿ ಸಂದೇಹವುಳ್ಳವರೇ ಆಗಿದ್ದಾರೆ. ಧರ್ಮ ಎಂದರೆ ಯಾವುದು? ಎಲ್ಲಿಂದ ಈ ಧರ್ಮವು ಸೃಷ್ಟವಾಗಿದೆ? ಅದನ್ನು ನನಗೆ ತಿಳಿಸಿರಿ.

ಧರ್ಮಸ್ತ್ವಯಮಿಹಾರ್ಥಃ ಕಿಮಮುತ್ರಾರ್ಥೋಽಪಿ ವಾ ಭವೇತ್ ।
ಉಭಯಾರ್ಥೋಽಪಿ ವಾ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೨॥

ಲೌಕಿಕ ಪ್ರಯೋಜನಗಳನ್ನು ಒದಗಿಸಿಕೊಡುವ ಕರ್ಮಗಳು ಧರ್ಮ ಎಂದು ಕರೆಯಲ್ಪಡುತ್ತವೆಯೇ? ಅಥವಾ ಪಾರಲೌಕಿಕವಾದ ಪ್ರಯೋಜನವನ್ನು ತಂದುಕೊಡುವ ಕರ್ಮಗಳು ಧರ್ಮ ಎಂದು ಹೆಸರನ್ನು ಪಡೆಯುತ್ತವೆಯೇ? ಅಥವಾ ಇಹ-ಪರಗಳ ಪ್ರಯೋಜನಕ್ಕಾಗಿ ಹೊರಟ ಕರ್ಮಗಳಿಗೆ ಧರ್ಮ ಎಂದು ಹೆಸರೋ? ಇದನ್ನು ವಿಷದಪಡಿಸಿರಿ.

ಭೀಷ್ಮಃ

ಸದಾಚಾರಃ ಸ್ಮೃತಿರ್ವೇದಾಸ್ತ್ರಿವಿಧಂ ಧರ್ಮಲಕ್ಷಣಮ್ ।
ಚತುರ್ಥಮರ್ಥಮಿತ್ಯಾಹುಃ ಕವಯೋ ಧರ್ಮಲಕ್ಷಣಮ್ ॥೩॥

ಯುಧಿಷ್ಠಿರನೇ, ಸದಾಚಾರ, ಸ್ಮೃತಿ, ವೇದಗಳು - ಈ ಮೂರು ಧರ್ಮದ ಲಕ್ಷಣಗಳು. ಕೆಲವು ವಿದ್ವಾಂಸರು ಅರ್ಥವನ್ನು ನಾಲ್ಕನೆಯ ಧರ್ಮಲಕ್ಷಣ ಎಂದು ಹೇಳುತ್ತಾರೆ.

ಅಪಿ ಹ್ಯುಕ್ತಾನಿ ಕರ್ಮಾಣಿ ವ್ಯವಸ್ಯಂತ್ಯುತ್ತರಾವರೇ ।
ಲೋಕಯಾತ್ರಾರ್ಥಮೇವೇಹ ಧರ್ಮಸ್ಯ ನಿಯಮಃ ಕೃತಃ ।
ಉಭಯತ್ರ ಸುಖೋದಕ ಇಹ ಚೈವ ಪರತ್ರ ಚ ॥೪॥

ಶಾಸ್ತ್ರೋಕ್ತ ಧರ್ಮಕಾರ್ಯಗಳಲ್ಲಿ ಕೆಲವು ಪ್ರಧಾನವಾದವುಗಳು, ಕೆಲವು ಅಪ್ರಧಾನವಾದವುಗಳು ಎಂದು ನಿರ್ಣಯಿಸಿರುತ್ತಾರೆ. ಲೋಕಯಾತ್ರೆಯ ನಿರ್ವಹಣೆಗಾಗಿಯೇ ಧರ್ಮದ ನಿಯಮವು ಮಾಡಲ್ಪಟ್ಟಿದೆ. ಧರ್ಮ ಪರಿಪಾಲಕರಿಗೆ ಇಹ-ಪರಲೋಕಗಳಲ್ಲಿಯೂ ಸುಖವಿದೆ ಎಂದು ನಿರ್ಣಯ.

ಅಲಬ್ಧ್ವಾ ನಿಪುಣಂ ಧರ್ಮಂ ಪಾಪಃ ಪಾಪೇ ಪ್ರಸಜ್ಜತಿ ।
ನ ಚ ಪಾಪಕೃತಃ ಪಾಪಾನ್ಮುಚ್ಯಂತೇ ಕೇಚಿದಾಪದಿ ॥೫॥

ಇಂತಹ ಧರ್ಮವನ್ನು ಆಶ್ರಯಿಸದಿರುವ ಪಾಪಿಯು ಪುನಃ ಪುನಃ ಅಸತ್ಕರ್ಮಗಳನ್ನೇ ಮಾಡುತ್ತಾ ದುಃಖಭಾಗಿಯಾಗುತ್ತಾನೆ. ಪಾಪಿಯಾದ ಮನುಷ್ಯನು ಆಪತ್ತು ಒದಗಿದಾಗಲೂ ಪಾಪಕರ್ಮದಿಂದ ನಿವೃತ್ತನಾಗುವುದಿಲ್ಲ.

ಏವಂ ಮೃತ್ಯುರ್ದೇವಸೃಷ್ಟಾ ಪ್ರಜಾನಾಂ
ಪ್ರಾಪ್ತೇ ಕಾಲೇ ಸಂಹರಂತೀ ಯಥಾವತ್ ।
ತಸ್ಯಾಶ್ಚೈವ ವ್ಯಾಧಯಸ್ತೇಽಶ್ರುಪಾತಾಃ
ಪ್ರಾಪ್ತೇ ಕಾಲೇ ಸಂಹರಂತೀಹ ಜಂತೂನ್ ॥೪೧॥

ಯುಧಿಷ್ಠಿರನೇ, ಈ ರೀತಿಯಾಗಿ ಬ್ರಹ್ಮನೇ ಪ್ರಾಣಿಗಳ ಸಂಹಾರಕ್ಕಾಗಿ ಮೃತ್ಯುವನ್ನು ಸೃಷ್ಟಿಸಿದ್ದಾನೆ. ಕಾಲವು ಸನ್ನಿಹಿತವಾದ ಕೂಡಲೇ ನಿಯಮದಂತೆ ಮೃತ್ಯುವು ಪ್ರಾಣಿಗಳನ್ನು ಸಂಹರಿಸುತ್ತದೆ. ಮೃತ್ಯುವಿನ ಅಶ್ರುಬಿಂದುಗಳೇ ವ್ಯಾಧಿಗಳು. ವ್ಯಾಧಿಗಳು ಕಾಲವು ಸನ್ನಿಹಿತವಾದಾಗ ಮನುಷ್ಯರನ್ನು ಆಶ್ರಯಿಸಿ ಅವರನ್ನು ಸಂಹಾರ ಮಾಡುತ್ತವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಮೃತ್ಯುಪ್ರಜಾಪತಿಸಂವಾದೋ ನಾಮ
ತ್ರಿನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

॥ ಮೃತ್ಯುಪ್ರಜಾಪತಿಸಂವಾದಃ ಸಮಾಪ್ತಃ ॥

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಧರ್ಮಾಧರ್ಮಗಳ ಸ್ವರೂಪವನ್ನು ತಿಳಿಸಿದುದು.

ಯುಧಿಷ್ಠಿರಃ

ಇಮೇ ವೈ ಮಾನವಾಃ ಸರ್ವೇ ಧರ್ಮಂ ಪ್ರತಿ ವಿಶಂಕಿತಾಃ ।
ಕೋಽಯಂ ಧರ್ಮಃ ಕುತೋ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೧॥

ಪಿತಾಮಹನೇ, ಈ ಜಗತ್ತಿನಲ್ಲಿರುವ ಎಲ್ಲ ಮಾನವರು ಧರ್ಮದ ವಿಷಯದಲ್ಲಿ ಸಂದೇಹವುಳ್ಳವರೇ ಆಗಿದ್ದಾರೆ. ಧರ್ಮ ಎಂದರೆ ಯಾವುದು? ಎಲ್ಲಿಂದ ಈ ಧರ್ಮವು ಸೃಷ್ಟವಾಗಿದೆ? ಅದನ್ನು ನನಗೆ ತಿಳಿಸಿರಿ.

ಧರ್ಮಸ್ತ್ವಯಮಿಹಾರ್ಥಃ ಕಿಮಮುತ್ರಾರ್ಥೋಽಪಿ ವಾ ಭವೇತ್ ।
ಉಭಯಾರ್ಥೋಽಪಿ ವಾ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೨॥

ಲೌಕಿಕ ಪ್ರಯೋಜನಗಳನ್ನು ಒದಗಿಸಿಕೊಡುವ ಕರ್ಮಗಳು ಧರ್ಮ ಎಂದು ಕರೆಯಲ್ಪಡುತ್ತವೆಯೇ? ಅಥವಾ ಪಾರಲೌಕಿಕವಾದ ಪ್ರಯೋಜನವನ್ನು ತಂದುಕೊಡುವ ಕರ್ಮಗಳು ಧರ್ಮ ಎಂದು ಹೆಸರನ್ನು ಪಡೆಯುತ್ತವೆಯೇ? ಅಥವಾ ಇಹ-ಪರಗಳ ಪ್ರಯೋಜನಕ್ಕಾಗಿ ಹೊರಟ ಕರ್ಮಗಳಿಗೆ ಧರ್ಮ ಎಂದು ಹೆಸರೋ? ಇದನ್ನು ವಿಷದಪಡಿಸಿರಿ.

ಭೀಷ್ಮಃ

ಸದಾಚಾರಃ ಸ್ಮೃತಿರ್ವೇದಾಸ್ತ್ರಿವಿಧಂ ಧರ್ಮಲಕ್ಷಣಮ್ ।
ಚತುರ್ಥಮರ್ಥಮಿತ್ಯಾಹುಃ ಕವಯೋ ಧರ್ಮಲಕ್ಷಣಮ್ ॥೩॥

ಯುಧಿಷ್ಠಿರನೇ, ಸದಾಚಾರ, ಸ್ಮೃತಿ, ವೇದಗಳು - ಈ ಮೂರು ಧರ್ಮದ ಲಕ್ಷಣಗಳು. ಕೆಲವು ವಿದ್ವಾಂಸರು ಅರ್ಥವನ್ನು ನಾಲ್ಕನೆಯ ಧರ್ಮಲಕ್ಷಣ ಎಂದು ಹೇಳುತ್ತಾರೆ.

ಅಪಿ ಹ್ಯುಕ್ತಾನಿ ಕರ್ಮಾಣಿ ವ್ಯವಸ್ಯಂತ್ಯುತ್ತರಾವರೇ ।
ಲೋಕಯಾತ್ರಾರ್ಥಮೇವೇಹ ಧರ್ಮಸ್ಯ ನಿಯಮಃ ಕೃತಃ ।
ಉಭಯತ್ರ ಸುಖೋದಕ ಇಹ ಚೈವ ಪರತ್ರ ಚ ॥೪॥

ಶಾಸ್ತ್ರೋಕ್ತ ಧರ್ಮಕಾರ್ಯಗಳಲ್ಲಿ ಕೆಲವು ಪ್ರಧಾನವಾದವುಗಳು, ಕೆಲವು ಅಪ್ರಧಾನವಾದವುಗಳು ಎಂದು ನಿರ್ಣಯಿಸಿರುತ್ತಾರೆ. ಲೋಕಯಾತ್ರೆಯ ನಿರ್ವಹಣೆಗಾಗಿಯೇ ಧರ್ಮದ ನಿಯಮವು ಮಾಡಲ್ಪಟ್ಟಿದೆ. ಧರ್ಮ ಪರಿಪಾಲಕರಿಗೆ ಇಹ-ಪರಲೋಕಗಳಲ್ಲಿಯೂ ಸುಖವಿದೆ ಎಂದು ನಿರ್ಣಯ.

ಅಲಬ್ಧ್ವಾ ನಿಪುಣಂ ಧರ್ಮಂ ಪಾಪಃ ಪಾಪೇ ಪ್ರಸಜ್ಜತಿ ।
ನ ಚ ಪಾಪಕೃತಃ ಪಾಪಾನ್ಮುಚ್ಯಂತೇ ಕೇಚಿದಾಪದಿ ॥೫॥

ಇಂತಹ ಧರ್ಮವನ್ನು ಆಶ್ರಯಿಸದಿರುವ ಪಾಪಿಯು ಪುನಃ ಪುನಃ ಅಸತ್ಕರ್ಮಗಳನ್ನೇ ಮಾಡುತ್ತಾ ದುಃಖಭಾಗಿಯಾಗುತ್ತಾನೆ. ಪಾಪಿಯಾದ ಮನುಷ್ಯನು ಆಪತ್ತು ಒದಗಿದಾಗಲೂ ಪಾಪಕರ್ಮದಿಂದ ನಿವೃತ್ತನಾಗುವುದಿಲ್ಲ.

ಅಪಾಪವಾದೀ ಭವತಿ ಯದಾ ಭವತಿ ಧರ್ಮವಿತ್ ।
ಧರ್ಮಸ್ಯ ನಿಷ್ಠಾ ಸ್ವಾಚಾರಸ್ತಮೇವಾಶ್ರಿತ್ಯ ಭೋತ್ಸ್ಯಸೇ ॥೬॥

ಅದೇ ರೀತಿ ಧರ್ಮಕಾರ್ಯಾಸಕ್ತರು ಆಪತ್ಕಾಲದಲ್ಲಿಯೂ ಪಾಪಕರ್ಮಗಳನ್ನು ಮಾಡುವುದಿಲ್ಲ. ಸದಾಚಾರವೇ ಧರ್ಮದ ಆಧಾರವೆನಿಸಿದೆ. ನೀನೂ ಈ ಸದಾಚಾರವನ್ನು ಆಶ್ರಯಿಸಿದಲ್ಲಿ ಧರ್ಮದ ಫಲವನ್ನು ಅನುಭವಿಸುತ್ತಿ.

ಯದಾಧರ್ಮಸಮಾವಿಷ್ಟೋ ಧನಂ ಗೃಹ್ಣಾತಿ ತಸ್ಕರಃ ।
ರಮತೇ ನಿರ್ಹರನ್ ಸ್ತೇನಃ ಪರವಿತ್ತಮರಾಜಕೇ ॥೭॥

ಧರ್ಮಮಾರ್ಗದಲ್ಲೇ ಪ್ರವೃತ್ತಿಯುಳ್ಳವನಾಗಿದ್ದರೂ ಕಳ್ಳನು ಮತ್ತೊಬ್ಬನ ಧನವನ್ನು ಅಪಹರಿಸುತ್ತಿರುತ್ತಾನೆ. ರಾಜನೇ ಇಲ್ಲದೆ ಇರುವ ದೇಶದಲ್ಲಿ ಪರರ ಸ್ವತ್ತನ್ನು ಅಪಹರಿಸಿದ ಕಳ್ಳನು ಸುಖವಾಗಿಯೇ ಇರುತ್ತಾನೆ.

ಯದಾಸ್ಯ ತದ್ಧರಂತ್ಯನ್ಯೇ ತದಾ ರಾಜಾನಮಿಚ್ಛತಿ ।
ತದಾ ತೇಷಾಂ ಸ್ಪೃಹಯತೇ ಯೇ ವೈ ತುಷ್ಟಾಃ ಸ್ವಕೈರ್ಧನೈಃ ॥೮॥

ಆದರೆ ಕಳ್ಳತನ ಮಾಡಿದ ಅವನ ಧನವನ್ನೇ ಮತ್ತೊಬ್ಬರು ಅಪಹರಿಸಿದಾಗ ಆ ಕಳ್ಳನೇ ರಕ್ಷಣೆಗಾಗಿ ರಾಜನನ್ನು ಅಪೇಕ್ಷಿಸುತ್ತಾನೆ. ಆಗ ಆ ಕಳ್ಳನು ತನ್ನಲ್ಲಿರುವ ಧನದಿಂದಲೇ ತೃಪ್ತಿ ಹೊಂದುವ ಸ್ಥಿತಿಯನ್ನು ಬಯಸುತ್ತಾನೆ.

ಅಭೀತಃ ಶುಚಿರಭ್ಯೇತಿ ರಾಜದ್ವಾರಮಶಂಕಿತಃ ।
ನ ಹಿ ದುಶ್ಚರಿತಂ ಕಿಂಚಿದಂತರಾತ್ಮನಿ ಪಶ್ಯತಿ ॥೯॥

ಮೋಸ ಮಾಡದೆ ಇರುವ ವ್ಯಕ್ತಿಯು ಭಯವಿಲ್ಲದೆ ಶುದ್ಧ ಮನಸ್ಸಿನಿಂದಲೇ ರಾಜದ್ವಾರವನ್ನು ನಿರ್ಭೀತಿಯಿಂದ ಪ್ರವೇಶಿಸುತ್ತಾನೆ. ಕಾರಣ ಅವನ ಮನಸ್ಸಿನಲ್ಲಿ ಯಾವುದೇ ಅಧರ್ಮಗಳ ದೋಷವು ಕಾಣಿಸುವುದಿಲ್ಲ.

ಸತ್ಯಸ್ಯ ವಚನಂ ಸಾಧು ನ ಸತ್ಯಾದ್ ವಿದ್ಯತೇ ಪರಮ್ ।
ಸತ್ಯೇನ ವಿಧೃತಂ ಸರ್ವಂ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥೧೦॥

ಸತ್ಯವನ್ನು ಹೇಳುವುದೇ ನಿಜವಾದ ಸದ್ಧರ್ಮವೆನಿಸಿದೆ. ಸತ್ಯವನ್ನು ಹೇಳುವುದಕ್ಕಿಂತ

ಶ್ರೇಷ್ಠವಾದ ಧರ್ಮ ಇನ್ನೊಂದಿಲ್ಲ. ಸತ್ಯದಿಂದಲೇ ಜಗತ್ತು ಧರಿಸಲ್ಪಟ್ಟಿದೆ. ಸತ್ಯದಿಂದಲೇ ಎಲ್ಲವೂ ಪ್ರತಿಷ್ಠಾಪಿತವಾಗಿದೆ.

ಅಪಿ ಪಾಪಕೃತೋ ರೌದ್ರಾಃ ಸತ್ಯಂ ಕೃತ್ವಾ ಪೃಥಕ್‌ಪೃಥಕ್ ।
ಅದ್ರೋಹಮವಿಸಂವಾದಂ ಪ್ರವರ್ತಂತೇ ತದಾಶ್ರಯಾಃ ।
ತೇ ಚೇನ್ಮಿಥೋಽಧೃತಿಂ ಕುರ್ಯುರ್ವಿನಶ್ಯೇಯುರಸಂಶಯಮ್ ॥೧೧॥

ಪಾಪಕಾರ್ಯದಲ್ಲಿ ಪ್ರವೃತ್ತರಾದ ಪಾಪಿಗಳು ತಮ್ಮೊಳಗೆ ತಾವು ನಿರ್ಣಯಿಸಿಕೊಂಡ ಸತ್ಯವನ್ನು ಅನುಸರಿಸಿ, ಯಾವುದೇ ಗೊಂದಲವಿಲ್ಲದೆ ತಮ್ಮ ಕಾರ್ಯವನ್ನು ನೆರವೇರಿಸಿಕೊಳ್ಳುತ್ತಾರೆ. ಅವರಲ್ಲಿಯೇ ಯಾರಾದರೂ ಒಬ್ಬ ವ್ಯಕ್ತಿಯು ಕುಹಕವನ್ನಾಶ್ರಯಿಸಿ ಸತ್ಯಕ್ಕೆ ವಿರುದ್ಧವಾಗಿ ನಡೆದಾಗ ಅದರ ಪರಿಣಾಮದಿಂದ ಎಲ್ಲರೂ ವಿನಾಶವನ್ನು ಹೊಂದುತ್ತಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಯಾರು ಪರಸ್ಪರ ರಹಸ್ಯದಲ್ಲಿ ಮಾಡಿದ ಸತ್ಯಪ್ರತಿಜ್ಞೆಯನ್ನು ಮುರಿಯುತ್ತಾರೋ ಅವರು ಧರ್ಮಕ್ಕೆ ಎಸೆದ ದ್ರೋಹದಿಂದ ಪರಸ್ಪರ ಕಾದಾಡಿ ವಿನಾಶವನ್ನು ಹೊಂದುತ್ತಾರೆ.

ನ ಹರ್ತವ್ಯಂ ಪರಧನಮಿತಿ ಧರ್ಮಃ ಸನಾತನಃ ।
ಮನ್ಯಂತೇ ಬಲವಂತಸ್ತಂ ದುರ್ಬಲೈಃ ಸಂಪ್ರವರ್ತಿತಮ್ ।
ಯದಾ ನಿಯಂತಿ ದೌರ್ಬಲ್ಯಮಥೈಷಾಮೇವ ರೋಚತೇ ॥೧೨॥

ಯಾವುದೇ ಕಾರಣದಿಂದ ಮತ್ತೊಬ್ಬರ ಸ್ವತ್ತನ್ನು ಅಪಹರಿಸಬಾರದೆಂಬುದು ಸನಾತನ ಧರ್ಮವು. ಧನ-ಜನ ಬಲವನ್ನು ಹೊಂದಿದ ಕೆಲವರು ಧರ್ಮಾಚರಣೆಯು ಕೇವಲ ದುರ್ಬಲರ ಅನುಷ್ಠಾನ ಎಂದು ಭಾವಿಸುತ್ತಾರೆ. ಆದರೆ ಯಾವಾಗ ವಿಪರೀತವಾದ ದೌರ್ಬಲ್ಯವನ್ನು ಹೊಂದುತ್ತಾರೋ ಆಗ ಅವರಿಗೆ ಧರ್ಮಮಾರ್ಗವೇ ರುಚಿಸುತ್ತದೆ.

ನ ಹ್ಯತ್ಯಂತಂ ಬಲಯುತಾ ಭವಂತಿ ಸುಖಿನೋಽಪಿ ವಾ ।
ತಸ್ಮಾದನಾರ್ಜವೇ ಬುದ್ಧಿರ್ನ ಕಾರ್ಯಾ ತೇ ಕಥಂಚನ ॥೧೩॥

ಧರ್ಮರಾಜನೇ, ಅತ್ಯಂತ ಬಲಿಷ್ಠರಾದವರು ಸುಖಿಗಳಾಗಿರುತ್ತಾರೆ ಎಂದು ನಿರ್ಣಯಿಸಲಾಗುವುದಿಲ್ಲ. ಆದ್ದರಿಂದ ನಿನ್ನ ಬುದ್ಧಿಯು ಎಂದಿಗೂ ಕುಟಿಲತೆಯನ್ನು ಯೋಚಿಸದಿರಲಿ.

ಅಸಾಧುಭ್ಯೋಽಸ್ಯ ನ ಭಯಂ ನ ಚೋರೇಭ್ಯೋ ನ ರಾಜತಃ ।
ನ ಕಿಂಚಿತ್ ಕಸ್ಯಚಿತ್ಕುರ್ವನ್ನಿರ್ಭಯಃ ಶುಚಿರಾವಸೇತ್ ॥೧೪॥

ಯಾವನು ಪ್ರಾಮಾಣಿಕವಾಗಿ ವರ್ತಿಸುತ್ತಾನೋ ಅವನಿಗೆ ದುರ್ಜನರಿಂದಾಗಲಿ, ಚೋರರಿಂದಾಗಲಿ, ರಾಜನಿಂದಾಗಲಿ ಭಯವು ಇರುವುದಿಲ್ಲ. ಶುದ್ಧವಾದ ಆಚಾರ-ವಿಚಾರವುಳ್ಳ ಮನುಷ್ಯನು ಯಾವಾಗಲೂ ನಿರ್ಭಯನಾಗಿರುತ್ತಾನೆ.

ಸರ್ವತಃ ಶಂಕತೇ ಸ್ತೇನೋ ಮೃಗೋ ಗ್ರಾಮಮಿವೇಯಿವಾನ್ ।
ಬಹುಧಾಚರಿತಂ ಪಾಪಮನ್ಯತ್ರೈವಾನುಪಶ್ಯತಿ ॥೧೫॥

ಕಳ್ಳನು ಯಾವಾಗಲೂ ಎಲ್ಲರ ವಿಷಯದಲ್ಲಿಯೂ ಊರಿಗೆ ಪ್ರವೇಶಿಸಿದ ಕಾಡು ಜಿಂಕೆಯಂತೆ ನಿಷ್ಕಾರಣವಾಗಿ ಭಯಪಡುತ್ತಲೇ ಇರುತ್ತಾನೆ. ದೋಷಿಯಾದವನು ಮತ್ತೊಬ್ಬರನ್ನು ಪಾಪಬುದ್ಧಿಯುಳ್ಳವರೆಂಬಂತೆ ನೋಡುತ್ತಾನೆ.

ಮುದಿತಃ ಶುಚಿರಭ್ಯೇತಿ ಸರ್ವತೋ ನಿರ್ಭಯಃ ಸದಾ ।
ನ ಹಿ ದುಶ್ಚರಿತಂ ಕಿಂಚಿದಾತ್ಮನೋಽನ್ಯೇಷು ಪಶ್ಯತಿ ॥೧೬॥

ನಿಷ್ಕಲ್ಮಶನಾದವನು ಎಲ್ಲ ಕಡೆಯೂ ಭಯರಹಿತನಾಗಿ ಸಂಚರಿಸುತ್ತಾನೆ. ಅವನು ಎಲ್ಲರನ್ನು ತನ್ನಂತೆ ನಿರ್ದುಷ್ಟನೆಂದೇ ಭಾವಿಸುತ್ತಾನೆ. ತನ್ನಲ್ಲಿರುವ ಸಣ್ಣ ದೋಷವು ಮತ್ತೊಬ್ಬರಲ್ಲಿಲ್ಲ ಎಂದೇ ಭಾವಿಸುತ್ತಾನೆ.

ದಾತವ್ಯಮಿತ್ಯಯಂ ಧರ್ಮ ಉಕ್ತೋ ಭೂತಹಿತೈ ರತ್ರೈಃ ।
ತಂ ಮನ್ಯಂತೇ ಧನಯುತಾಃ ಕೃಪಣೈಃ ಸಂಪ್ರವರ್ತಿತಮ್ ॥೧೭॥

ಪ್ರಾಣಿಗಳ ಹಿತಚಿಂತಕರಾದ ಪ್ರಾಚೀನರು ದಾನ ಮಾಡಬೇಕೆಂದು ಹೇಳಿ ಆ ಧರ್ಮವನ್ನೇ ಪ್ರಶಂಸೆ ಮಾಡಿದ್ದಾರೆ. ಆದರೆ ಧನಿಕರು, ಬಡವರು ತಮಗಾಗಿ ಮಾಡಿಟ್ಟ ನಿಯಮವೆಂದು ಅದನ್ನು ಉಪೇಕ್ಷಿಸುತ್ತಾರೆ.

ಯದಾ ನಿಯತಿಕಾರ್ಪಣ್ಯಮಥೈಷಾಮೇವ ರೋಚತೇ ।
ನ ಹ್ಯತ್ಯಂತಂ ಧನವಂತೋ ಭವಂತಿ ಸುಖಿನೋಽಪಿ ವಾ ॥೧೮॥

ಒಂದು ವೇಳೆ ಅದೇ ಶ್ರೀಮಂತರು ದೌರ್ಭಾಗ್ಯ ವಶದಿಂದ ತಮ್ಮ ಗಳಿಸಿದ ಸಂಪತ್ತನ್ನು ಕಳೆದುಕೊಂಡಾಗ, ಭಿಕ್ಷೆ ಬೇಡುವ ಅವಸ್ಥೆಯು ಒದಗಿದಾಗ ಧರ್ಮದ

ನಿರ್ಣಯದ ಮಹಿಮೆ ಏನು ಎಂಬುದು ಅವರಿಗೆ ತಿಳಿಯುತ್ತದೆ. ಇಷ್ಟಾಗಿ ಅಧಿಕ ಧನವಂತರು ಸುಖಿಗಳಾಗಿರುತ್ತಾರೆ ಎಂದು ಹೇಳಲು ಬರುವುದಿಲ್ಲ.

ಯದನ್ಯೈರ್ವಿಹಿತಂ ನೇಚ್ಛೇದಾತ್ಮನಃ ಕರ್ಮ ಪೂರುಷಃ ।
ನ ತತ್ಪರೇಷು ಕುರ್ವೀತ ಜಾನನ್ನಪ್ರಿಯಮಾತ್ಮನಃ ॥೧೯॥

ಬೇರೆಯವರು ತನ್ನ ವಿಷಯದಲ್ಲಿ ಅಪ್ರಿಯವನ್ನು ಮಾಡಿದಾಗ ಇದು ಅಪ್ರಿಯವೆಂದು ಯಾವ ವ್ಯಕ್ತಿಯು ತಿಳಿದಿರುತ್ತಾನೋ ಅಂತಹ ಅಪ್ರಿಯವಾದ ಕಾರ್ಯವನ್ನು ಮತ್ತೊಬ್ಬರ ವಿಷಯದಲ್ಲಿ ಇವನು ಎಂದಿಗೂ ಮಾಡಬಾರದು.

ಯೋಽನ್ಯಸ್ಯ ಸ್ಯಾದುಪರತಃ ಸ ಕಂ ಕಿಂ ವಕ್ತುಮರ್ಹತಿ ।
ಯದನ್ಯಸ್ತಸ್ಯ ತತ್ಕುರ್ಯಾನ್ನ ಮೃಷ್ಯೇದಿತಿ ಮೇ ಮತಿಃ ॥೨೦॥

ಯಾವನು ಮತ್ತೊಬ್ಬರ ವಿಷಯದಲ್ಲಿ ನಿರುಪದ್ರವಿಯಾಗಿ, ಶಾಂತನಾಗಿದ್ದಾನೋ ಅವನ ವಿಷಯದಲ್ಲಿ ಮತ್ತೊಬ್ಬನು ಏನು ಹೇಳಲು ಸಾಧ್ಯ ? ಒಂದು ವೇಳೆ ಮತ್ತೊಬ್ಬನು ಅವನನ್ನು ನಿಂದಿಸಿದಲ್ಲಿ ಧರ್ಮವೂ ಅದನ್ನು ಸಹಿಸದು ಎಂಬುದೇ ನನ್ನ ಬುದ್ಧಿಯು.

ಜೀವಿತುಂ ಯಃ ಸ್ವಯಂ ಚೇಚ್ಛೇತ್ ಕಥಂ ಸೋಽನ್ಯಂ ಪ್ರಘಾತಯೇತ್।
ಯದ್ಯದಾತ್ಮನ ಇಚ್ಛೇತ ತತ್ ಪರಸ್ಯಾಪಿ ಚಿಂತಯೇತ್ ॥೨೧॥

ಯಾವನು ಸುಖವಾಗಿ ಬದುಕಬೇಕೆಂದು ಇಚ್ಛಿಸುತ್ತಾನೋ ಅವನು ಬೇರೆಯವರಿಗೆ ಹೇಗೆ ತಾನೆ ಕೇಡನ್ನು ಬಯಸುತ್ತಾನೆ? ತನಗೆ ಯಾವುದು ಬಯಸುತ್ತಾನೋ ಇತರರಿಗೂ ಅದು ಭೋಗ್ಯವೆಂದೇ ತಿಳಿಯಬೇಕು.

ಅತಿರಿಕ್ತಃ ಸಂವಿಭಜೇದ್ ಭೋಗ್ಯೈರನ್ಯಾನಕಿಂಚನಾನ್ ।
ಏತಸ್ಮಾತ್ ಕಾರಣಾದ್ಧಾತ್ರಾ ಕುಸೀದಂ ಸಂಪ್ರವರ್ತಿತಮ್ ॥೨೨॥

ಹೆಚ್ಚಾದ ಸಂಪತ್ತುಳ್ಳವನು ತ್ಯಾಗ ಬುದ್ಧಿಯಿಂದ ಬಡವರಿಗೆ ಆ ಪದಾರ್ಥಗಳನ್ನು ಹಂಚಿಕೊಡಬೇಕು. ಈ ಬಡವರ ರಕ್ಷಣೆಗಾಗಿಯೇ ಚತುರ್ಮುಖ ಬ್ರಹ್ಮನು ಕುಸೀದ ಎಂಬ ವೃತ್ತಿಯನ್ನು ಸೃಷ್ಟಿಸಿದ್ದಾನೆ. ಬಡ್ಡಿಗಾಗಿ ಹಣ ಕೊಡುವ ವೃತ್ತಿಯನ್ನು ಸೃಷ್ಟಿಸಿದ್ದಾನೆ ಎಂದು ಭಾವ.

ಯಸ್ಮಿಂಸ್ತು ದೇವಾಃ ಸಮಯೇ ಸಂತಿಷ್ಠೇರಂಸ್ತಥಾ ಭವೇತ್ ।
ಅಥ ಚೇಲ್ಲಾಭಸಮಯೇ ಸ್ಥಿತಿರ್ಧರ್ಮೇऽಪಿ ಶೋಭನಾ ॥೨೩॥

ಧರ್ಮಾಚರಣೆಯ ಪ್ರತಿಯೊಂದು ಸಂದರ್ಭದಲ್ಲಿಯೂ ದೇವತೆಗಳೇ ಇದಕ್ಕೆ ಸಾಕ್ಷಿಯಾಗಿರುತ್ತಾರೆಂದು ಅವರು ಮೆಚ್ಚುವಂತೆ ವರ್ತಿಸಬೇಕು. ಯಾವುದಾದರೂ ಲಾಭವು ದೊರಕಿದ ಸಂದರ್ಭದಲ್ಲಿಯೂ ಆ ಲಾಭಾಂಶದಿಂದ ಧರ್ಮಕಾರ್ಯಗಳನ್ನು ಮಾಡುವುದು ಉತ್ತಮವೆಂದು ನಿರ್ಣಯವು.

ಸರ್ವಂ ಪ್ರಯಾಭ್ಯುಪಗತಂ ಧರ್ಮಮಾಹುರ್ಮನೀಷಿಣಃ ।
ಪಶ್ಯೈತಂ ಲಕ್ಷಣೋದ್ದೇಶಂ ಧರ್ಮಾಧರ್ಮೇ ಯುಧಿಷ್ಠಿರ ॥೨೪॥

ಯುಧಿಷ್ಠಿರನೇ, ಸಮಸ್ತ ಜನರೊಡನೆ ಪ್ರೀತಿಪೂರ್ವಕವಾಗಿ ವ್ಯವಹರಿಸುವುದೇ ಶ್ರೇಷ್ಠವಾದ ಧರ್ಮವೆಂದು ವಿದ್ವಾಂಸರು ಹೇಳುತ್ತಾರೆ. ಇದಕ್ಕೆ ವಿಪರೀತವಾದುದೇ ಅಧರ್ಮ. ಧರ್ಮಾಧರ್ಮಗಳಲ್ಲಿ ಸಂಕ್ಷೇಪ ರೂಪದಲ್ಲಿರುವ ಈ ಲಕ್ಷಣಗಳನ್ನು ನೀನು ಗಮನಿಸು.

ಲೋಕಸಂಗ್ರಹಸಂಯುಕ್ತಂ ವಿಧಾತ್ರಾ ವಿಹಿತಂ ಪುರಾ ।
ಸೂಕ್ಷ್ಮಧರ್ಮಾರ್ಥನಿಯತಂ ಸತಾಂ ಚರಿತಮುತ್ತಮಮ್ ॥೨೫॥

ಚತುರ್ಮುಖ ಬ್ರಹ್ಮನು ಸತ್ಪುರುಷರಿಗಾಗಿ ಹಿಂದೆ ಯಾವ ಸೂಕ್ಷ್ಮ ಸದಾಚಾರಗಳನ್ನು, ಧರ್ಮಾರ್ಥಗಳನ್ನು ನಿರ್ಣಯಿಸಿದ್ದಾನೋ ಅದು ಲೋಕ ಕಲ್ಯಾಣದ ಉದ್ದೇಶದಿಂದ ಕೂಡಿದೆ.

ಧರ್ಮಲಕ್ಷಣಮಾಖ್ಯಾತಮೇತತ್ತೇ ಕುರುಸತ್ತಮ ।
ತಸ್ಮಾದನಾರ್ಜವೇ ಬುದ್ಧಿರ್ನ ಕಾರ್ಯಾ ತೇ ಕಥಂಚನ ॥೨೬॥

ಕುರುಶ್ರೇಷ್ಠನೇ, ನಿನಗೆ ಧರ್ಮದ ಲಕ್ಷಣವೇನೆಂದು ತಿಳಿಸಿದ್ದೇನೆ. ನಿನ್ನ ಬುದ್ಧಿಯು ಯಾವುದೇ ಕಾರಣದಿಂದ ಕುಟಿಲತೆಯ ಮಾರ್ಗದಲ್ಲಿ ಸಾಗದಿರಲಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಚತುರ್ನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೈದನೆಯ ಅಧ್ಯಾಯ

ಯುಧಿಷ್ಠಿರನು ಧರ್ಮದ ಪ್ರಾಮಾಣ್ಯದ ಬಗ್ಗೆ ಭೀಷ್ಮರನ್ನು ಕುರಿತು ಪ್ರಶ್ನಿಸಿದುದು.

ಯುಧಿಷ್ಠಿರಃ

ಸೂಕ್ಷ್ಮಂ ಸಾಧು ಸಮಾದಿಷ್ಟಂ ಭವತಾ ಧರ್ಮಲಕ್ಷಣಮ್ ।
ಪ್ರತಿಭಾ ತ್ವಸ್ತಿ ಮೇ ಕಾಚಿತ್ತಾಂ ಬ್ರೂಯಾಮನುಮಾನತಃ ॥೧॥

ಪೂಜ್ಯರಾದ ಭೀಷ್ಮರೇ, ಸೂಕ್ಷ್ಮವಾದ ಧರ್ಮದ ಲಕ್ಷಣವೇನೆಂಬುದನ್ನು ನೀವು ಉಪದೇಶಿಸಿರುತ್ತೀರಿ. ಆದರೆ ಅನುಮಾನದಿಂದ ಈಗ ನನಗೊಂದು ವಿಚಾರವು ಬುದ್ಧಿಯಲ್ಲಿ ಹುಟ್ಟಿರುವುದು. ಈ ವಿಷಯದಲ್ಲಿ ಗುಣ- ದೋಷಗಳನ್ನು ತಿಳಿಯಬೇಕೆಂದು ನನಗೆ ತೋರುತ್ತಿದೆ.

ಭೂಯಾಂಸೋ ಹೃದಯೇ ಯೇ ಮೇ ಪ್ರಶ್ನಾಸ್ತೇ ವ್ಯಾಹೃತಾಸ್ತ್ವಯಾ ।
ಇಮಮನ್ಯಂ ಪ್ರವಕ್ಷ್ಯಾಮಿ ನ ರಾಜನ್ ವಿಗ್ರಹಾದಿವ ॥೨॥

ನನ್ನ ಹೃದಯದಲ್ಲಿ ಅನೇಕ ಪ್ರಶ್ನೆಗಳಿವೆ. ಅದರಲ್ಲಿ ಎಷ್ಟೋ ಪ್ರಶ್ನೆಗಳಿಗೆ ನೀವು ಈಗಾಗಲೇ ಉತ್ತರಿಸಿರುತ್ತೀರಿ. ಆದರೆ ನನ್ನ ಇನ್ನೊಂದು ಪ್ರಶ್ನೆಗೆ ಉತ್ತರವನ್ನು ಹೇಳಬೇಕು. ನಾನು ತಿಳಿಯಬೇಕೆಂದು ಕೇಳುತ್ತಿದ್ದೇನೆ ಹೊರತು ವಾದಕ್ಕಾಗಿ ಕೇಳುತ್ತಿದ್ದೇನೆ ಎಂದು ಭಾವಿಸಬಾರದು.

ಇಮಾನಿ ಹಿ ಪ್ರಾಪಯಂತಿ ಸೃಜಂತ್ಯುತ್ತಾರಯಂತಿ ಚ ।
ನ ಧರ್ಮಃ ಪರಿಪಾಠೇನ ಶಕ್ಯೋ ಭಾರತ ವೇದಿತುಮ್ ॥೩॥

ಜಗತ್ತಿನ ಸಮಸ್ತ ಜೀವರು ಸ್ವಯಂ ಪ್ರೇರಣೆಯಿಂದ ಪ್ರಾಣಿಗಳನ್ನು ಸೃಷ್ಟಿಸುತ್ತವೆ. ಅದರಂತೆ ಬದುಕುತ್ತವೆ. ಕೊನೆಗೆ ನಾಶಮಾಡುತ್ತವೆ. ಇದೆಲ್ಲವೂ ಸ್ವಾಭಾವಿಕವಾಗಿಯೇ ನಡೆಯುತ್ತದೆ. ವೇದಗಳನ್ನು ಪಠನ ಮಾಡಿದ ಮಾತ್ರದಿಂದ ಧರ್ಮಾಧರ್ಮಗಳನ್ನು ತಿಳಿಯಲು ಸಾಧ್ಯವಿಲ್ಲ.

ಅನ್ಯೋ ಧರ್ಮಃ ಸಮಸ್ಥಸ್ಯ ವಿಷಮಸ್ಥಸ್ಯ ಚಾಪರಃ ।
ಆಪದಸ್ತು ಕಥಂ ಶಕ್ಯಾಃ ಪರಿಪಾಠೇನ ವೇದಿತುಮ್ ॥೪॥

ಕಾರಣ ಧರ್ಮಗಳಲ್ಲಿ ಅನೇಕ ಪ್ರಭೇದಗಳಿವೆ. ಸ್ವಸ್ಥಾತ್ಮನಾದ ವ್ಯಕ್ತಿಗಿರುವ ಧರ್ಮವೇ ಬೇರೆ. ವಿಷಮ ಸ್ಥಿತಿಯಲ್ಲಿರುವವನ ಧರ್ಮವೇ ಬೇರೆ. ಆಪದ್ಧರ್ಮಗಳು ಕೇವಲ ವೇದಪಠನದಿಂದ ಹೇಗೆ ತಿಳಿಯಲು ಸಾಧ್ಯವಾಗುತ್ತವೆ?

ಸದಾಚಾರೋ ಮತೋ ಧರ್ಮಃ ಸಂತಸ್ತಾ ಚ್ಚಾರಲಕ್ಷಣಾಃ ।
ಸಾಧ್ಯಾಸಾಧ್ಯಂ ಕಥಂ ಶಕ್ಯಂ ಸದಾಚಾರೋ ಹ್ಯಲಕ್ಷಣಮ್ ॥೫॥

ಸತ್ಪುರುಷರ ಆಚರಣೆಯೇ ಧರ್ಮವಾಗುತ್ತದೆ. ಧರ್ಮಾಚರಣೆಯ ಲಕ್ಷಣ ಉಳ್ಳವರು ಸತ್ಪುರುಷರು ಎಂದು ನೀನು ಹೇಳಿದೆ. ಆದರೆ ಸಜ್ಜನರು ಯಾರೆಂದು ಅವರ ಸದಾಚಾರದಿಂದ ತಿಳಿಯಬೇಕಾಗಿದೆ. ಹೀಗಿದ್ದಾಗ ಧರ್ಮದಿಂದ ಸಜ್ಜನರೋ ಅಥವಾ ಸಜ್ಜನರಿಂದ ಧರ್ಮವೊ ಎಂಬ ಸಂದೇಹವು ಉಂಟಾಗುತ್ತದೆ. ಆದ್ದರಿಂದ ಸದಾಚಾರವನ್ನು ಒಂದು ಲಕ್ಷಣದಿಂದ ತಿಳಿಯುವುದು ಕಷ್ಟಕರವಾಗಿದೆ.

ದೃಶ್ಯತೇ ಧರ್ಮರೂಪೇಣ ಹ್ಯಧರ್ಮಂ ಪ್ರಾಕೃತಶ್ಚರನ್ ।
ಧರ್ಮಂ ಚಾಧರ್ಮರೂಪೇಣ ಕಶ್ಚಿದಪ್ರಾಕೃತಶ್ಚರನ್ ॥೬॥

ಕೆಲವರು ಜಗತ್ತಿನಲ್ಲಿ ಅಧರ್ಮವನ್ನೇ ಆಚರಿಸುತ್ತಿರುತ್ತಾರೆ. ಅಂತಹ ನೀಚ ಸ್ವಭಾವದವರು ಆ ಅಧರ್ಮದ ಮುಖವನ್ನು ಮುಚ್ಚಿಕೊಂಡು ಧರ್ಮಶೀಲರಂತೆ ತೋರಿಸಿಕೊಳ್ಳುತ್ತಾರೆ. ಉತ್ತಮನಾದ ಜೀವನು ಅಧರ್ಮ ಆಚರಿಸುವಂತೆ ಕಾಣಿಸುತ್ತಾನೆ. ಧರ್ಮಶೀಲನೇ ಆಗಿರುತ್ತಾನೆ. ಎಂದಿಗೂ ತಾನು ಮಾಡುವ ಧರ್ಮದ ಬಗ್ಗೆ ಪ್ರಶಂಸೆ ಮಾಡಿಕೊಳ್ಳುವುದಿಲ್ಲ.

ಪುನರಸ್ಯ ಪ್ರಮಾಣಂ ಹಿ ನಿರ್ದಿಷ್ಟಂ ಶಾಸ್ತ್ರಕೋವಿದೈಃ ।
ವೇದವಾದಾಶ್ಚಾನುಯುಗಂ ಹ್ರಸಂತೀತಿ ಹ ನಃ ಶ್ರುತಮ್ ॥೭॥

ಇದೇ ವಿಚಾರದಲ್ಲಿ ಶಾಸ್ತ್ರಜ್ಞರ ಪ್ರಮಾಣಗಳು ನಿರ್ದೇಶಿಸಲ್ಪಡುತ್ತವೆ. ವೇದ ವಾದಗಳೂ ಕೂಡ ಪ್ರತಿಯುಗದಲ್ಲಿ ಸ್ವಲ್ಪ ಸ್ವಲ್ಪ ಸಂಕುಚಿತಗಳಾಗುತ್ತಾ ಬರುತ್ತವೆಂದು ನಮಗೆ ತಿಳಿಯುತ್ತಿದೆ.

ಅನ್ಯೇ ಕೃತಯುಗೇ ಧರ್ಮಾಸ್ತ್ರೇತಾಯಾಂ ದ್ವಾಪರೇऽಪರೇ ।
ಅನ್ಯೇ ಕಲಿಯುಗೇ ಧರ್ಮಾ ಯಥಾಶಕ್ತಿಕೃತಾ ಇವ ॥೮॥

ಕೃತಯುಗದ ಧರ್ಮಗಳೇ ಬೇರೆ, ತ್ರೇತಾಯುಗದ ಧರ್ಮಗಳೇ ಬೇರೆ. ಇದರಂತೆ ದ್ವಾಪರ-ಕಲಿಯುಗಗಳಲ್ಲಿಯೂ ಧರ್ಮಗಳು ಭಿನ್ನಭಿನ್ನವಾದವುಗಳು. ಆಯಾ ಯುಗಗಳಲ್ಲಿ ಇರುವ ಮನುಷ್ಯರ ಶಕ್ತಿಯನ್ನನುಸರಿಸಿ ಧರ್ಮಗಳು ಬೇರೆ ರೀತಿ ವಿಧಿಸಲ್ಪಟ್ಟಿವೆ ಎಂಬಂತೆ ತೋರುತ್ತಿದೆ.

ಆಮ್ನಾಯವಚನಂ ಸತ್ಯಮಿತ್ಯಯಂ ಲೋಕಸಂಗ್ರಹಃ ।
ಆಮ್ನಾಯೇಭ್ಯಃ ಪುನರ್ವೇದಾಃ ಪ್ರಸೃತಾ ವಿಶ್ವತೋಮುಖಾಃ ॥೯॥

ಹೀಗೆ ವೇದವಾಕ್ಯಗಳೇ ಎಲ್ಲಾ ಯುಗಗಳಿಗೂ ಸಮವಾಗಿರುವುದಿಲ್ಲ. ವೇದವಚನಗಳು ಸತ್ಯ ಎಂದು ಜಗತ್ತು ಹೇಳುತ್ತಿದೆ. ಆದರೆ ವೇದಗಳಿಂದಲೇ ಅನೇಕ ಪ್ರಕಾರವಾದ ವಿಭಾಗಗಳು ವೇದವ್ಯಾಸರಿಂದ ಪ್ರಸಿದ್ಧವಾಗಿ ಬೆಳೆದು ಬಂದಿವೆ.

ತೇ ಚೇತ್ ಸರ್ವಪ್ರಮಾಣಂ ವೈ ಪ್ರಮಾಣಂ ತನ್ನ ವಿದ್ಯತೇ ।
ಪ್ರಮಾಣೇ ಚಾಪ್ರಮಾಣೇ ಚ ವಿರುದ್ಧೇ ಶಾಸ್ತ್ರತಾ ಕುತಃ ॥೧೦॥

ಆ ವೇದಗಳು ಎಲ್ಲರಿಗೂ ಪ್ರಮಾಣವೆಂದಾದಲ್ಲಿ ಧರ್ಮದ ವಿಷಯದಲ್ಲಿ ಪ್ರಮಾಣವಾಗುತ್ತವೆ. ಆದರೆ ಹಾಗೆ ಹೇಳಲು ಬರುವುದಿಲ್ಲ. ಯಾವುದು ಪ್ರಮಾಣ, ಯಾವುದು ಅಪ್ರಮಾಣ ಎಂದು ವೇದಗಳಲ್ಲೇ ಗೊಂದಲ ಉಂಟಾದಲ್ಲಿ ಅದು ಪ್ರಮಾಣವಾಗಲು ಹೇಗೆ ಸಾಧ್ಯ ?

ಧರ್ಮಸ್ಯ ಹ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಯಾ ಯಾ ವಿಕ್ರಿಯತೇ ಸಂಸ್ಥಾ ತತಃ ಸಾಪಿ ಪ್ರಣಶ್ಯತಿ ॥೧೧॥

ಬಲಿಷ್ಠರಾದ ದುರಾತ್ಮರು ಧರ್ಮವನ್ನು ನಿಂದಿಸುತ್ತಿದ್ದಾರೆ. ಧರ್ಮದ ಮೂಲಸ್ಥಾನವನ್ನೇ ವಿಕೃತಗೊಳಿಸುತ್ತಿದ್ದಾರೆ. ಇದರಿಂದ ಧರ್ಮದ ಮೂಲವೆನಿಸಿದ ವೇದವು ನಾಶ ಹೊಂದುತ್ತಿದೆ.

ವಿದ್ಮ ಚೈವಂ ನ ವಾ ವಿದ್ಮ ಶಕ್ಯಂ ವಾ ವೇದಿತುಂ ನ ವಾ ।
ಅಣೀಯಾಂಕ್ಷುರಧಾರಾಯಾ ಗರೀಯಾನ್ ಪರ್ವತಾದಪಿ ॥೧೨॥

ಧರ್ಮವನ್ನು ನಾವು ತಿಳಿದಿದ್ದೇವೋ ಇಲ್ಲವೋ. ಅದನ್ನು ತಿಳಿಯಲು ಸಾಧ್ಯವಾಗುತ್ತದೋ, ಇಲ್ಲವೋ. ಆದರೆ ಇಷ್ಟನ್ನು ಹೇಳಬಹುದು- ಧರ್ಮವಿಂದು

ಕತ್ತಿಯ ಅಲುಗಿಗಿಂತಲೂ ಸೂಕ್ಷ್ಮವಾದುದು. ಪರ್ವತಕ್ಕಿಂತಲೂ ದೊಡ್ಡದಾದುದು ಎಂದು.

ಗಂಧರ್ವನಗರಾಕಾರಃ ಪ್ರಥಮಂ ಸಂಪ್ರದೃಶ್ಯತೇ ।
ಅನ್ವೀಕ್ಷ್ಯಮಾಣಃ ಕವಿಭಿಃ ಪುನರ್ಗಚ್ಛತ್ಯದರ್ಶನಮ್ ॥೧೩॥

ಧರ್ಮವೆಂಬುದು ಆರಂಭದಲ್ಲಿ ಗಂಧರ್ವನಗರದಂತೆ ಕಾಣಿಸುತ್ತದೆ. ಕಾಲ್ಪನಿಕವೆಂದು ತೋರುತ್ತದೆ. ಪುನಃ ಅದನ್ನು ಸರಿಯಾಗಿ ವಿಮರ್ಶಿಸಿದಾಗ ಆ ಗಂಧರ್ವ ನಗರಿಯೇ ಮರೆಯಾಗಿ ಬಿಡುತ್ತದೆ.

ನಿಪಾನಾನೀವ ಗೋಭ್ಯಾಶೇ ಕ್ಷೇತ್ರೇ ಕುಲ್ಯೇವ ಭಾರತ ।
ಸ್ಮೃತೋಽಪಿ ಶಾಶ್ವತೋ ಧರ್ಮೋ ವಿಪ್ರಹೀಣೋ ನ ದೃಶ್ಯತೇ ॥೧೪॥

ಗೋವುಗಳೇ ಇಲ್ಲದೆ ಗೋವುಗಳು ನೀರು ಕುಡಿಯುವ ತೊಟ್ಟಿ ಇದ್ದಂತೆ, ಕೃಷಿ ಮಾಡುವ ಭೂಮಿಯೇ ಇಲ್ಲದೆ ನೀರಿನ ತೋಡು ಹರಿಯುವಂತೆ, ವಿಪ್ರರೇ ಇಲ್ಲದಿದ್ದಾಗ ಧರ್ಮವು ನಾಶವನ್ನು ಹೊಂದುತ್ತದೆ.

ಕಾಮಾದನ್ಯೇ ಭಯಾದನ್ಯೇ ಕಾರಣೈರಪರೈಸ್ತಥಾ ।
ಅಸಂತೋ ಹಿ ವೃಥಾಚಾರಂ ಭಜಂತೇ ಬಹವೋಽಪರೇ ॥೧೫॥

ಕೆಲವರು ಕಾಮದಿಂದಲೂ, ಇನ್ನು ಕೆಲವರು ಭಯದಿಂದಲೂ, ಇನ್ನು ಕೆಲವರು ಬೇರೆ ಫಲ ಲಾಭದ ಕಾರಣದಿಂದಲೂ ಧರ್ಮವನ್ನು ನಡೆಸುತ್ತಾರೆ. ಅಸಜ್ಜನರು ಅನೇಕ ಜನ ಕೇವಲ ಡಾಂಭಿಕತನದಿಂದ ಅಶ್ರದ್ಧೆಯಿಂದ ಧರ್ಮಕಾರ್ಯಗಳನ್ನು ನಡೆಸುತ್ತಾರೆ.

ಧರ್ಮೋ ಭವತಿ ಸ ಕ್ಷಿಪ್ರಾಂ ವಿಲೀನಸ್ತ್ವೇವ ಸಾಧುಷು ।
ಅನ್ಯೇ ತಾನಾಹುರುನ್ಮತ್ತಾನಪಿ ಚಾವಹಸಂತ್ಯುತ ॥೧೬॥

ಅಸಾಧುಗಳಾದ ಕೆಲವರು ನಡೆಸಿದ ವಿಪರೀತ ಧರ್ಮವೂ ಕೆಲವೊಂದು ವೇಳೆ ಧರ್ಮವೆನಿಸುತ್ತದೆ. ನಿಜವಾಗಿ ಧರ್ಮವನ್ನು ಆಚರಿಸುವವರನ್ನು ಅಸಜ್ಜನರು ಕೆಲವೊಂದು ವೇಳೆ ಉನ್ಮತ್ತರೆಂದು ಅಪಹಾಸ್ಯ ಮಾಡುತ್ತಾರೆ, ಹೀಗಳೆಯುತ್ತಾರೆ.

ಮಹಾಜನಾ ಹ್ಯುಪಾವೃತ್ತಾ ರಾಜಧರ್ಮಂ ಸಮಾಶ್ರಿತಾಃ ।
ನ ಹಿ ಸರ್ವಹಿತಃ ಕಶ್ಚಿದಾಚಾರಃ ಸಂಪ್ರದೃಶ್ಯತೇ ॥೧೭॥

ಹಿಂದೆ ಪೂಜ್ಯರಾದ ಮಹಾತ್ಮರು ಧರ್ಮ ಮಾರ್ಗವನ್ನು ಬಿಟ್ಟು ರಾಜಧರ್ಮವನ್ನು ಆಶ್ರಯಿಸಿರುತ್ತಿದ್ದರು. ಇದೆಲ್ಲವನ್ನೂ ಪರಿಶೀಲಿಸಿದಾಗ ಸಾಧಾರಣವಾಗಿ ಎಲ್ಲರಿಗೂ ಹಿತವಾದ ಧರ್ಮಾಚರಣೆ ಯಾವುದೂ ಇರುವಂತೆ ತೋರುತ್ತಿಲ್ಲ.

ತೇನೈವಾನ್ಯಃ ಪ್ರಭವತಿ ಸೋಽಪರಂ ಬಾಧತೇ ಪುನಃ ।
ದೃಶ್ಯತೇ ಚೈವ ಸ ಪುನಸ್ತುಲ್ಯರೂಪೋ ಯದೃಚ್ಛಯಾ ॥೧೮॥

ಯೇನೈವಾನ್ಯಃ ಪ್ರಭವತಿ ಸೋಽಪರಾನಪಿ ಬಾಧತೇ ।
ಆಚಾರಾಣಾಮನೈಕಾಗ್ರ್ಯಂ ಸರ್ವೇಷಾಮೇವ ಲಕ್ಷಯೇತ್ ॥೧೯॥

ಒಬ್ಬನು ಒಂದು ನಡತೆಯಿಂದ ಉನ್ನತಿಯನ್ನು ಸಾಧಿಸುತ್ತಾನೆ. ಅದೇ ನಡತೆಯು ಇನ್ನೊಬ್ಬನಿಗೆ ಹಾನಿಯನ್ನುಂಟು ಮಾಡುತ್ತದೆ. ಅದೇ ನಡತೆಯನ್ನು ಇನ್ನೊಬ್ಬನು ಅನುಸರಿಸಿದಾಗ ಯಾವುದೇ ವ್ಯತ್ಯಾಸವಿಲ್ಲದೆ ಒಂದೇ ರೀತಿಯಾಗಿರುತ್ತಾನೆ. ಒಬ್ಬನಿಗೆ ಕ್ಷೇಮವನ್ನುಂಟು ಮಾಡಿದ ಧರ್ಮ ಇನ್ನೊಬ್ಬನಿಗೆ ಹಾನಿಕಾರಕವಾಗುವುದು. ಒಟ್ಟಿನಲ್ಲಿ ಆಚಾರ-ವ್ಯವಹಾರಗಳಲ್ಲಿ ಏಕತ್ವವಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಅವರವರು ಇಚ್ಛೆಯಿಂದ ಧರ್ಮವನ್ನು ಅವಲಂಬಿಸಿದಂತೆ ಕಾಣುತ್ತಿದೆ.

ಚಿರಾಭಿಪನ್ನಃ ಕವಿಭಿಃ ಪೂರ್ವಂ ಧರ್ಮ ಉದಾಹೃತಃ ।
ತೇನಾಚಾರೇಣ ಪೂರ್ವೇಣ ಸಂಸ್ಥಾ ಭವತಿ ಶಾಶ್ವತೀ ॥೨೦॥

ಪಿತಾಮಹನೇ, ವಿದ್ವಾಂಸರು ಬಹಳ ಕಾಲದಿಂದ ಆಚರಿಸುತ್ತಿದ್ದ ಧರ್ಮವನ್ನು ನೀನು ಹೇಳಿರುವೆ. ಹಿಂದಿನವರ ಧರ್ಮವನ್ನೇ ಇಂದು ಆದರಿಸಬೇಕಾಗಿದೆ. ಆ ಹಿಂದಿನ ಆಚಾರದ ಕಟ್ಟುಪಾಡೇ ಈಗ ಶಾಶ್ವತವಾಗಿ ಇಲ್ಲಿಯ ತನಕ ನೆಲೆಗೊಂಡಿರುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತಾರನೆಯ ಅಧ್ಯಾಯ

ಜಾಜಲಿ ಮತ್ತು ತುಲಾಧಾರರ ಸಂವಾದ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ತುಲಾಧಾರಸ್ಯ ವಾಕ್ಯಾನಿ ಧರ್ಮೇ ಜಾಜಲಿನಾ ಸಹ ॥೧॥

ಧರ್ಮಪುತ್ರನೇ, ನಿನ್ನ ಪ್ರಶ್ನೆಗೆ ಸಂಬಂಧಿಸಿದಂತೆ ಜಾಜಲಿ ಎಂಬ ಮಹರ್ಷಿಗೂ ತುಲಾಧಾರನೆಂಬ ವೈಶ್ಯನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ.

ವನೇ ವನಚರಃ ಕಶ್ಚಿಜ್ಜಾಜಲಿರ್ನಾಮ ವೈ ದ್ವಿಜಃ ।
ಸಾಗರೋದ್ದೇಶಮಾಗಮ್ಯ ತಪಸ್ತೇಪೇ ಮಹಾತಪಾಃ ॥೨॥

ಹಿಂದೆ ಜಾಜಲಿ ಎಂಬ ಬ್ರಾಹ್ಮಣನು ವಾನಪ್ರಸ್ಥವೃತ್ತಿಯನ್ನು ಅವಲಂಬಿಸಿಕೊಂಡು ಕಾಡಿನಲ್ಲಿಯೇ ಸಂಚರಿಸುತ್ತಿದ್ದನು. ಅವನು ಮಹಾತಪಸ್ವಿಯಾಗಿ ಸಮುದ್ರದ ತೀರಕ್ಕೆ ಹೋಗಿ ಘೋರವಾದ ತಪಸ್ಸನ್ನು ಮಾಡಿದನು.

ನಿಯತೋ ನಿಯತಾಹಾರಶ್ಚೀರಾಜಿನಜಟಾಧರಃ ।
ಮಲಪಂಕಧರೋ ಧೀಮಾನ್ ಬಹೂನ್ ವರ್ಷಗಣಾನ್ ಮುನಿಃ ॥೩॥

ನಿಯಮದಿಂದ ವಾಸ ಮಾಡುತ್ತಾ ನಿಯತವಾದ ಆಹಾರವನ್ನು ಸ್ವೀಕರಿಸುತ್ತಿದ್ದನು. ನಾರುಮಡಿಯನ್ನು ಧರಿಸಿದ್ದನು. ಜಟಾಧಾರಿಯಾಗಿದ್ದನು. ಅನೇಕ ವರ್ಷಗಳ ತನಕ ಜ್ಞಾನಿಯಾದ ಅವನು ಮೈಮೇಲೆ ಅಂಟಿದ ಕೊಳೆ, ಕೆಸರನ್ನೂ ತೊಳೆಯದೆ ತಪಸ್ಸನ್ನು ಮಾಡುತ್ತಿದ್ದನು.

ಸ ಕದಾಚಿನ್ಮಹಾತೇಜಾ ಜಲವಾಸೋ ಮಹೀಪತೇ ।
ಚಚಾರ ಲೋಕಾನ್ ವಿಪ್ರರ್ಷಿಃ ಪ್ರೇಕ್ಷಮಾಣೋ ಮನೋಜವಃ ॥೪॥

ಸಮುದ್ರದ ನೀರಿನಲ್ಲಿಯೇ ವಾಸ ಮಾಡುತ್ತಿದ್ದ, ಮಹಾತೇಜಸ್ವಿಯಾಗಿದ್ದ, ಮನೋವೇಗದ ಗತಿಯುಳ್ಳವನಾಗಿದ್ದ ಆ ಬ್ರಾಹ್ಮಣಶ್ರೇಷ್ಠನು ಒಮ್ಮೆ ಸಮಸ್ತ ಲೋಕಗಳನ್ನು ನೋಡುತ್ತಾ ಸಂಚರಿಸುತ್ತಿದ್ದನು.

ಸ ಚಿಂತಯಾಮಾಸ ಮುನಿರ್ಜಲಮಧ್ಯೇ ಕದಾಚನ ।
ವಿಪ್ರೇಕ್ಷ್ಯ ಸಾಗರಾಂತಾಂ ವೈ ಮಹೀಂ ಸವನಕಾನನಾಮ್ ॥೫॥

ಸಾಗರದ ತನಕ ವ್ಯಾಪಿಸಿದ ಕಾಡು, ವನಗಳಿಂದ ಕೂಡಿದ ಭೂಮಿಯನ್ನೆಲ್ಲ ನೋಡಿದ ಬಳಿಕ ಪುನಃ ಜಲವಾಸವನ್ನೇ ಮಾಡಲು ಯೋಚಿಸಿದ ಆ ಜಾಜಲಿಯು ಹೀಗೆ ಚಿಂತಿಸಿದನು.

ನ ಮಯಾ ಸದೃಶೋಽಸ್ತೀಹ ಲೋಕೇ ಸ್ಥಾವರಜಂಗಮೇ ।
ಅಪ್ಸು ವೈಹಾಯಸಂ ಗಚ್ಛೇನ್ಮಯಾ ಯೋಽನ್ಯಃ ಸಹೇತಿ ವೈ ॥೬॥

ಈಗ ಜಗತ್ತಿನಲ್ಲಿ ಸ್ಥಾವರ-ಜಂಗಮ ಪ್ರಾಣಿಗಳಲ್ಲಿ ಯಾರೂ ನನಗೆ ಸಮಾನರಾದವರು ಇರುವುದಿಲ್ಲ. ನಾನು ವಾಯುಬಂಧನವನ್ನು ಮಾಡಿಕೊಂಡು ನೀರಿನ ಮೇಲೆಯೇ ನಡೆದುಕೊಂಡು ಹೋಗಬಲ್ಲೆನು.ನೀರಿನಲ್ಲಿ ಮುಳುಗದಿರುವಂತೆ ಸಂಚರಿಸುವ ನನಗೆ ಬೇರೆ ಯಾರು ಸಮಾನರಾಗಿ ಸಂಚರಿಸಲು ಸಾಧ್ಯ ?

ಸ ದೃಶ್ಯಮಾನೋ ರಕ್ಷೋಭಿರ್ಜಲಮಧ್ಯೇಽವದತ್ತತಃ ।
ಅಬ್ರುವಂಶ್ಚ ಪಿಶಾಚಾಸ್ತಂ ನೈವಂ ತ್ವಂ ವಕ್ತುಮರ್ಹಸಿ ॥೭॥

ಈ ರೀತಿ ರಾಕ್ಷಸರಿಗೆ ಕಾಣಿಸದಂತೆ ನೀರಿನ ಮಧ್ಯದಲ್ಲಿ ವಾಸ ಮಾಡಿಕೊಂಡಿದ್ದ ಜಾಜಲಿಯು ಹೀಗೆ ಹೇಳಿದ ಕೂಡಲೇ ಪಿಶಾಚರು ಮುನಿಯನ್ನು ಕುರಿತು ನೀನು ಹೀಗೆ ಹೇಳುವುದು ಸರಿಯಲ್ಲ ಎಂದು ಹೇಳಿದವು.

ತುಲಾಧಾರೋ ವಣಿಗ್ಧರ್ಮಾ ವಾರಾಣಸ್ಯಾಂ ಮಹಾಯಶಾಃ ।
ಸೋಽಪ್ಯೇವಂ ನಾರ್ಹತೇ ವಕ್ತುಂ ಯಥಾ ತ್ವಂ ದ್ವಿಜಸತ್ತಮ ॥೮॥

ಕಾಶಿ ಎಂಬ ಮಹಾನಗರಿಯಲ್ಲಿ ವೈಶ್ಯವೃತ್ತಿಯನ್ನು ಆಶ್ರಯಿಸಿಕೊಂಡು ಬದುಕುತ್ತಿರುವ ತುಲಾಧಾರನೆಂಬ ಯಶೋವಂತನಾದ ವ್ಯಕ್ತಿ ಇದ್ದಾನೆ. ಅವನು ನಿನ್ನಂತೆ ಅಹಂಕಾರದ ಮಾತುಗಳನ್ನು ಹೇಳುವುದಿಲ್ಲ.

ಇತ್ಯುಕ್ತೋ ಜಾಜಲಿರ್ಭೂತೈಃ ಪ್ರತ್ಯುವಾಚ ಮಹಾತಪಾಃ ।
ಪಶ್ಯೇಯಂ ತಮಹಂ ಪ್ರಾಜ್ಞಂ ತುಲಾಧಾರಂ ಯಶಸ್ವಿನಮ್ ॥೯॥

ಈ ರೀತಿಯಾಗಿ ಭೂತ, ಪಿಶಾಚಿಗಳು ಜಾಜಲಿಯನ್ನು ಕುರಿತು ಹೇಳುತ್ತಿರಲು ಮಹಾತಪಸ್ವಿಯಾದ ಜಾಜಲಿಯು ಭೂತಗಳನ್ನು ಕುರಿತು ಉತ್ತರಿಸಿದನು. ಕೀರ್ತಿಸಂಪನ್ನನಾದ, ಜ್ಞಾನಿಯಾದ ತುಲಾಧಾರನನ್ನು ನಾನು ಈಗಲೇ ಹೋಗಿ ನೋಡುತ್ತೇನೆ.

ಇತಿ ಬ್ರುವಾಣಂ ತಮೃಷಿಂ ರಕ್ಷಾಂಸ್ಯುದ್ಧೃತ್ಯ ಸಾಗರಾತ್ ।
ಅಬ್ರುವನ್ ಗಚ್ಛ ಪನ್ಥಾನಮಾಸ್ಥಾಯೇಮಂ ದ್ವಿಜೋತ್ತಮ ॥೧೦॥

ಹೀಗೆ ಹೇಳಿದ ಜಾಜಲಿಯನ್ನು ರಾಕ್ಷಸರು ಸಾಗರದಿಂದ ಮೇಲಕ್ಕೆ ಎತ್ತಿ ಒಂದು ಸ್ಥಳದಲ್ಲಿ ನಿಲ್ಲಿಸಿ ಹೇಳಿದರು. ಬ್ರಾಹ್ಮಣ ಶ್ರೇಷ್ಠನೇ, ನೀನು ಈ ಮಾರ್ಗವನ್ನು ಅನುಸರಿಸಿ ಕಾಶಿಪಟ್ಟಣಕ್ಕೆ ಹೋಗಬಹುದು ಎಂದು.

ಇತ್ಯುಕ್ತೋ ಜಾಜಲಿರ್ಭೂತೈರ್ಜಗಾಮ ವಿಮನಾಸ್ತದಾ ।
ವಾರಾಣಸ್ಯಾಂ ತುಲಾಧಾರಂ ಸಮಾಸಾದ್ಯಾಬ್ರವೀದ್ ವಚಃ ॥೧೧॥

ಈ ರೀತಿ ಜಾಜಲಿಯು ಭೂತಗಳಿಂದ ಹೇಳಲ್ಪಟ್ಟ ಬಳಿಕ ಖಿನ್ನ ಮನಸ್ಕನಾಗಿ ವಾರಣಾಸಿಯಲ್ಲಿದ್ದ ತುಲಾಧಾರನ ಬಳಿಗೆ ಹೋಗಿ ಅವನ ಬಳಿ ಹೀಗೆ ನುಡಿದನು.

ಯುಧಿಷ್ಠಿರಃ

ಕಿಂ ಕೃತಂ ಸುಕೃತಂ ಕರ್ಮ ತಾತ ಜಾಜಲಿನಾ ಪುರಾ ।
ಯೇನ ಸಿದ್ಧಿಂ ಪರಾಂ ಪ್ರಾಪ್ತಸ್ತನ್ನೋ ವ್ಯಾಖ್ಯಾತುಮರ್ಹಸಿ ॥೧೨॥

ತಂದೆಯೇ, ಅತ್ಯಂತ ಶ್ರೇಷ್ಠವಾದ ಸಿದ್ಧಿಯನ್ನು ಪಡೆಯಲು ಜಾಜಲಿಯು ಅಂತಹ ಯಾವ ಪುಣ್ಯಕ್ಕೆ ಸಂಬಂಧಿಸಿದ ಕರ್ಮವನ್ನು ಆಚರಿಸಿದ್ದ? ಈ ವಿಷಯವನ್ನು ನನಗೆ ಕೃಪೆತೋರಿ ಹೇಳಿರಿ.

ಭೀಷ್ಮಃ

ಅತೀವ ತಪಸಾ ಯುಕ್ತೋ ಘೋರೇಣ ಸ ಬಭೂವ ಹ ।
ನದ್ಯುಪಸ್ಪರ್ಶನರತಃ ಸಾಯಂ ಪ್ರಾತರ್ಮಹಾತಪಾಃ ॥೧೩॥

ಯುಧಿಷ್ಠಿರನೇ, ಜಾಜಲಿಯು ಅತ್ಯಂತ ಘೋರವಾದ ತಪಸ್ಸಿನಲ್ಲಿಯೇ

ನಿರತನಾಗಿದ್ದನು. ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಪ್ರತಿದಿನವೂ ಸ್ನಾನ ಸಂಧ್ಯಾವಂದನೆಗಳನ್ನು ವಿಧಿಬದ್ಧವಾಗಿ ಆಚರಿಸುತ್ತಿದ್ದನು.

ಅಗ್ನೀನ್ ಪರಿಚರನ್ ಸಮ್ಯಕ್ ಸ್ವಾಧ್ಯಾಯಪರಮೋ ದ್ವಿಜಃ ।
ವಾನಪ್ರಸ್ಥವಿಧಾನಜ್ಞೋ ಜಾಜಲಿರ್ಜ್ವಲಿತಃ ಶ್ರಿಯಾ ॥೧೪॥

ಅಗ್ನಿಹೋತ್ರವನ್ನು ಮಾಡುತ್ತಿದ್ದನು. ವೇದಾಧ್ಯಯನದಲ್ಲಿ ಆಸಕ್ತನಾಗಿರುತ್ತಿದ್ದನು. ವಾನಪ್ರಸ್ಥಾಶ್ರಮದ ವಿಧಿಗಳನ್ನೆಲ್ಲ ಚೆನ್ನಾಗಿ ಅರಿತು, ಅದನ್ನು ಪರಿಪಾಲಿಸುತ್ತಾ ಬ್ರಹ್ಮತೇಜಸ್ಸಿನಿಂದ ಕಂಗೊಳಿಸುತ್ತಿದ್ದನು.

ಸತ್ಯೇ ತಪಸಿ ತಿಷ್ಠನ್ ಸ ನ ಚ ಧರ್ಮಮವೈಕ್ಷತ ।
ವರ್ಷಾಸ್ವಾಕಾಶಶಾಯೀ ಸ ಹೇಮಂತೇ ಜಲಸಂಶ್ರಯಃ ॥೧೫॥

ವಾತಾತಪಸಹೋ ಗ್ರೀಷ್ಮೇ ನ ಚ ಧರ್ಮಮವಿಂದತ ।
ದುಃಖಶಯ್ಯಾಶ್ಚ ವಿವಿಧಾ ಭೂಮೌ ಚ ಪರಿವರ್ತನಮ್ ॥೧೬॥

ಸತ್ಯ, ತಪಸ್ಸಿನಲ್ಲಿ ನಿಷ್ಠನಾದ ಅವನು ಧರ್ಮಜ್ಞನೆಂಬ ಅಭಿಮಾನವನ್ನು ಹೊಂದಿರಲಿಲ್ಲ. ಮಳೆಗಾಲದಲ್ಲಿ ಆಕಾಶವನ್ನೇ ಹೊದ್ದಿಕೆ ಮಾಡಿಕೊಂಡು ಹೇಮಂತ ಋತುವಿನಲ್ಲಿ ನೀರಿನಲ್ಲಿ ಕುಳಿತು, ಗ್ರೀಷ್ಮ ಋತುವಿನಲ್ಲಿ ಗಾಳಿ-ಬಿಸಿಲನ್ನು ಸಹಿಸಿಕೊಂಡು ತಪಸ್ಸು ಮಾಡುತ್ತಿದ್ದರೂ ತಾನು ಧರ್ಮಾತ್ಮನೆಂಬ ಅಹಂಕಾರವನ್ನು ಹೊಂದಿರಲಿಲ್ಲ. ಅವನು ಭೂಮಿಯಲ್ಲಿ ಮಲಗಿಕೊಂಡು ನಿದ್ರೆಬಾರದೆ ಹೊರಳಾಡುತ್ತಿದ್ದನು. ದುಃಖದಾಯಕವಾದ ಕಲ್ಲು-ಮಣ್ಣುಗಳ ನೆಲದಲ್ಲಿಯೇ ಮಲಗುತ್ತಿದ್ದನು.

ತತಃ ಕದಾಚಿತ್ಸ ಮುನಿರ್ವರ್ಷಾಸ್ವಾಕಾಶಮಾಸ್ಥಿತಃ ।
ಅಂತರಿಕ್ಷಾಜ್ಜಲಂ ಮೂರ್ಧ್ನಾ ಪ್ರತ್ಯಗೃಹ್ಣಾನ್ಮುಹುರ್ಮುಹುಃ ॥೧೭॥

ಹೀಗೆ ವ್ರತಾನುಷ್ಠಾನ ಮಾಡುತ್ತಿರಲು ಒಮ್ಮೆ ಮಳೆಗಾಲದಲ್ಲಿ ಆಕಾಶವನ್ನೇ ಹೊದ್ದಿಗೆಯನ್ನಾಗಿ ಮಾಡಿಕೊಂಡು ತಪಸ್ಸು ಮಾಡುತ್ತಾ ಬಯಲಿನಲ್ಲಿ ನಿಂತಿದ್ದನು. ಆ ಸಮಯದಲ್ಲಿ ಅಂತರಿಕ್ಷದಿಂದ ತಲೆಯ ಮೇಲೆ ಧಾರಾಕಾರವಾಗಿ ಮಳೆಯು ಸುರಿಯುತ್ತಿತ್ತು. ಪುನಃ ಪುನಃ ಬೀಳುತ್ತಿದ್ದ ಆ ಮಳೆಯನ್ನು ಸಹಿಸಿಕೊಳ್ಳುತ್ತಿದ್ದನು.

ಅಥ ತಸ್ಯ ಜಟಾಃ ಕ್ಲಿನ್ನಾ ಬಭೂವುರ್ಗ್ರಥಿತಾಃ ಪ್ರಭೋ ।
ಅರಣ್ಯಗಮನಾನ್ನಿತ್ಯಂ ಮಲಿನೋ ಮಲಸಂಯುತಾಃ ॥೧೮॥

ಆ ಮಳೆಯ ನೀರಿನಿಂದ ಅವನ ಜಟೆಯೆಲ್ಲವು ತೊಯ್ದು ಹೋಗಿ ಗಂಟು ಗಂಟಾಗುತ್ತಿದ್ದವು. ಅರಣ್ಯದಲ್ಲಿ ಸಂಚರಿಸುತ್ತಿದ್ದ ಕಾರಣ ಅವನ ಶರೀರವೆಲ್ಲವೂ ಮಲಿನವಾಗಿತ್ತು.

ಸ ಕದಾಚಿನ್ನಿರಾಹಾರೋ ವಾಯುಭಕ್ಷೋ ಮಹಾತಪಾಃ ।
ತಸ್ಥೌ ಕಾಷ್ಠವದವ್ಯಗ್ರೋ ನ ಚಚಾಲ ಚ ಕರ್ಹಿಚಿತ್ ॥೧೯॥

ಆ ಜಾಜಲಿಯು ಒಂದು ಬಾರಿ ಆಹಾರವನ್ನೇ ಸೇವಿಸದೆ ವಾಯುಭಕ್ಷಕನಾಗಿ, ಮಹಾತಪಸ್ವಿಯಾಗಿ, ಒಂದು ಕಟ್ಟಿಗೆಯ ತುಂಡಿನಂತೆ ಸ್ಥಿರಚಿತ್ತನಾಗಿ ಅರಣ್ಯದ ಒಂದು ಸ್ಥಳದಲ್ಲಿ ತಪಸ್ಸಿಗಾಗಿ ನಿಂತನು. ಎಷ್ಟು ಸಮಯವಾದರೂ ಆ ಸ್ಥಳದಿಂದ ಚಲಿಸಲೇ ಇಲ್ಲ.

ತಸ್ಯ ಸ್ಮ ಸ್ಥಾಣುಭೂತಸ್ಯ ನಿರ್ವಿಚೇಷ್ಟಸ್ಯ ಭಾರತ ।
ಕುಲಿಂಗಶಕುನೌ ರಾಜನ್ನೀಡಂ ಶಿರಸಿ ಚಕ್ರತುಃ ॥೨೦॥

ಮೋಟು ಮರದಂತೆ ನಿಶ್ಚಂಚಲವಾಗಿ ನಿಂತಿರುವ, ಚೇಷ್ಟಾರಹಿತನಾದ ಆ ಜಾಜಲಿಯ ಜಟೆಗಟ್ಟಿದ ಶಿರಸ್ಸಿನಲ್ಲಿ ಗುಬ್ಬಚ್ಚಿ ದಂಪತಿಗಳು ಗೂಡು ಮಾಡಿಕೊಂಡವು.

ಸ ತೌ ದಯಾವಾನ್ ವಿಪ್ರರ್ಷಿರುಪಪ್ರೇಕ್ಷತ ದಂಪತೀ ।
ಕುರ್ವಾಣಂ ನೀಡಕಂ ತತ್ರ ಜಟಾಸು ತೃಣತಂತುಭಿಃ ॥೨೧॥

ದಯಾವಂತನಾದ ಬ್ರಹ್ಮರ್ಷಿಯಾದ ಜಾಜಲಿಯು ಎರಡು ಪಕ್ಷಿಗಳು ಹುಲ್ಲು ಕಡ್ಡಿಗಳನ್ನು ತಂದು ತನ್ನ ತಲೆಯ ಮೇಲೆ ಗೂಡು ಕಟ್ಟಿಕೊಳ್ಳುತ್ತಿದ್ದರೂ ಅದನ್ನು ಉಪೇಕ್ಷಿಸಿದನು.

ಯದಾ ಸ ನ ಚಲತ್ಯೇವ ಸ್ಥಾಣುಭೂತೋ ಮಹಾತಪಾಃ ।
ತತಸ್ತೌ ಪರಿವಿಶ್ವಸ್ತೌ ಸುಖಂ ತತ್ರೋಷತುಸ್ತದಾ ॥೨೨॥

ತಲೆಯನ್ನು ಒಮ್ಮೆಯೂ ಕೊಡವಿಕೊಳ್ಳಲೂ ಇಲ್ಲ. ಅವುಗಳಿಗೂ ತೊಂದರೆಯಾಗದಂತೆ ಸ್ಥಾಣುವಿನಂತೆ ನಿಂತನು. ಅವನು ವಿಚಲಿತನಾಗದೆ ನಿಂತ

ಬಳಿಕ ವಿಶ್ವಾಸ ಹೊಂದಿದ ಗುಬ್ಬಚ್ಚಿಗಳು ಸಂತೋಷದಿಂದ ಅವನ ತಲೆಯಲ್ಲಿಯೇ ಕಾಲ ಕಳೆದವು.

ಅತೀತಾಸ್ವಥ ವರ್ಷಾಸು ಶರತ್ಕಾಲ ಉಪಸ್ಥಿತೇ ।
ಪ್ರಾಜಾಪತ್ಯೇನ ವಿಧಿನಾ ವಿಶ್ವಾಸಾತ್ ಕಾಮಮೋಹಿತೌ ॥೨೩॥

ಹೀಗೆ ಮಳೆಗಾಲವು ಮುಗಿದು ಶರತ್ಕಾಲವು ಆರಂಭವಾಯಿತು. ಕಾಮ ಮೋಹಿತವಾದ ಆ ಗುಬ್ಬಚ್ಚಿಗಳು ಪ್ರಾಜಾಪತ್ಯ ವಿಧಿಯಿಂದ ಸಮಾಗಮವನ್ನು ಮಾಡಿದವು.

ತತ್ರಾಪಾತಯತಾಂ ರಾಜನ್ ಶಿರಸ್ಯಂಡಾನಿ ಖೇಚರೌ ।
ತಾನ್ಯಬುಧ್ಯತ ತೇಜಸ್ವೀ ಸ ವಿಪ್ರಾಃ ಸಂಶಿತವ್ರತಃ ॥೨೪॥

ಮಹರ್ಷಿಯ ವಿಷಯದಲ್ಲಿ ವಿಶ್ವಾಸವಿದ್ದ ಕಾರಣ ಅವನ ತಲೆಯ ಮೇಲೆ ಇರುವ ಗೂಡಿನಲ್ಲಿ ಮೊಟ್ಟೆಗಳನ್ನು ಇಟ್ಟವು. ಕಠೋರ ವ್ರತನಿಷ್ಠನಾಗಿದ್ದ ತೇಜಸ್ವಿಯಾದ ಜಾಜಲಿಯು ತನ್ನ ತಲೆಯ ಮೇಲಿರುವ ಗೂಡಿನಲ್ಲಿ ಗುಬ್ಬಚ್ಚಿಗಳು ಮೊಟ್ಟೆ ಇಟ್ಟಿಯೆಂದು ತಿಳಿದುಕೊಂಡನು.

ಬುದ್ಧ್ವಾ ಚ ಸ ಮಹಾತೇಜಾ ನ ಚಚಾಲೈವ ಜಾಜಲಿಃ ।
ಧರ್ಮೇ ಧೃತಮನಾ ನಿತ್ಯಂ ನಾಧರ್ಮಂ ಸ ತ್ವರೋಚಯತ್ ॥೨೫॥

ಇದನ್ನು ತಿಳಿದ ಮಹಾತೇಜಸ್ವಿಯಾದ ಜಾಜಲಿಯು ಮತ್ತೂ ಸ್ಥಿರವಾಗಿ ನಿಂತನು. ಧರ್ಮದಲ್ಲಿಯೇ ನಿಷ್ಠವಾದ ಮನಸ್ಸುಳ್ಳ ಅವನು ತಲೆಯನ್ನಾಡಿಸಿದಲ್ಲಿ ಪಕ್ಷಿಗಳಿಗೆ ತೊಂದರೆಯಾಗುತ್ತದೆ ಎಂದು, ಅಧರ್ಮ ಮಾಡಬಾರದೆಂದು ಮತ್ತೂ ಸ್ಥಿರವಾಗಿಯೇ ನಿಂತನು.

ಅಹನ್ಯಹನಿ ಚಾಗಮ್ಯ ತತಸ್ತೌ ತಸ್ಯ ಮೂರ್ಧನಿ ।
ಆಶ್ವಾಸಿತೌ ವೈ ವಸತಃ ಸಂಪ್ರಹೃಷ್ಟೌ ತದಾ ವಿಭೋ ॥೨೬॥

ಪ್ರತಿದಿನವೂ ಆ ಪಕ್ಷಿಗಳು ಬೆಳಗಾದ ಕೂಡಲೇ ಆಹಾರಕ್ಕೋಸ್ಕರ ಪರಿಭ್ರಮಣ ಮಾಡಿ, ಸಾಯಂಕಾಲದಲ್ಲಿ ಋಷಿಯ ತಲೆಯ ಮೇಲಿದ್ದ ತಮ್ಮ ಗೂಡಿಗೆ ಬಂದು ಸಂತೋಷದಿಂದಲೇ ವಾಸ ಮಾಡುತ್ತಿದ್ದವು.

ಅಂಡೇಭ್ಯಸ್ತ್ವಥ ಪುಷ್ಟೇಭ್ಯಃ ಪ್ರಜಾಯಂತ ಶಕುಂತಕಾಃ ।
ವ್ಯವರ್ಧಂತ ಚ ತತ್ರೈವ ನ ಚಾಕಂಪತ ಜಾಜಲಿಃ ॥೨೭॥

ಆ ಮೊಟ್ಟೆಯು ಬಲಿತ ಬಳಿಕ ಅವುಗಳೆಲ್ಲ ಒಡೆದು ಆ ಮೊಟ್ಟೆಗಳಿಂದ ಪುಟ್ಟ ಪುಟ್ಟ ಹಕ್ಕಿಗಳು ಹೊರಬಂದವು. ಅವುಗಳೂ ಅವನ ತಲೆಯ ಮೇಲೆ ಬೆಳೆಯ ತೊಡಗಿದವು. ಆದರೂ ಜಾಜಲಿಯು ತನ್ನ ದೇಹವನ್ನು ಅಲ್ಲಾಡಿಸಲಿಲ್ಲ.

ಸ ರಕ್ಷಮಾಣಸ್ತ್ವಂಡಾನಿ ಕುಲಿಂಗಾನಾಂ ಯತವ್ರತಃ ।
ತಥೈವ ತಸ್ಥೌ ಧರ್ಮಾತ್ಮಾ ನಿರ್ವಿಚೇಷ್ಟಃ ಸಮಾಹಿತಃ ॥೨೮॥

ಜಿತೇಂದ್ರಿಯನಾದ ಜಾಜಲಿಯು ಗುಬ್ಬಚ್ಚಿಗಳ ಮರಿಗಳನ್ನು ಏಕಾಗ್ರತೆಯಿಂದ ಚೆನ್ನಾಗಿ ರಕ್ಷಿಸುತ್ತಾ ಅಲ್ಲಿಯೇ ನಿಂತನು.

ತತಸ್ತು ಕಾಲಸಮಯೇ ಬಭೂವುಸ್ತೇऽಥ ಪಕ್ಷಿಣಃ ।
ಬುಬುಧೇ ತಾಂಶ್ಚ ಸ ಮುನಿರ್ಜಾತಪಕ್ಷಾನ್ ಶಕುಂತಕಾನ್ ॥೨೯॥

ಸ್ವಲ್ಪ ಕಾಲವು ಕಳೆದ ಬಳಿಕ ಮರಿಗಳು ರೆಕ್ಕೆ ಬಲಿತು ಹಾರಾಡುವ ಹಕ್ಕಿಗಳಾದವು. ಗುಬ್ಬಚ್ಚಿಯ ಮರಿಗಳಿಗೆ ರೆಕ್ಕೆ ಬಲಿತಿರುವುದನ್ನು ಜಾಜಲಿಯು ತಿಳಿದುಕೊಂಡನು.

ತತಃ ಕದಾಚಿತ್ತಾಂಸ್ತತ್ರ ಪಶ್ಯನ್ ಪಕ್ಷೀನ್ಯತವ್ರತಃ ।
ಬಭೂವ ಪರಮಪ್ರೀತಸ್ತದಾ ಮತಿಮತಾಂ ವರಃ ॥೩೦॥

ವ್ರತಶೀಲನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಜಾಜಲಿಯು ಒಂದು ಬಾರಿ ಆ ಮರಿಗಳೆಲ್ಲವೂ ರೆಕ್ಕೆಯನ್ನು ಹೊಂದಿ ಹಾರಾಡುತ್ತಾ ತನ್ನ ಬಳಿ ಬರುವುದನ್ನು ಕಂಡು ತುಂಬಾ ಸಂತುಷ್ಟನಾದನು.

ತಥಾ ತಾನಭಿಸಂವೃದ್ಧಾಂದೃಷ್ಟ್ವಾ ಚಾಪ್ಲುವತಾಂ ಮುದಮ್ ।
ಶಕುನೌ ನಿರ್ಭಯೌ ತತ್ರ ಊಷತುಶ್ಚಾತ್ಮಜೈಃ ಸಹ ॥೩೧॥

ಜಾಜಲಿಯು ತಮ್ಮ ವಿಷಯದಲ್ಲಿ ಪ್ರೀತಿ ಹೊಂದಿದ್ದಾನೆಂದು ಗುಬ್ಬಚ್ಚಿ ದಂಪತಿಗಳು ಅರ್ಥ ಮಾಡಿಕೊಂಡು ಸಂತೋಷವನ್ನು ಹೊಂದಿದವು. ಅವುಗಳು ನಿರ್ಭೀತಿಯಿಂದ ತಮ್ಮ ಮಕ್ಕಳ ಜೊತೆಗೆ ಅವನ ತಲೆಯ ಮೇಲೆ ವಾಸ ಮಾಡತೊಡಗಿದವು.

ಜಾತಪಕ್ಷಾಂಶ್ಚ ಸೋಽಪಶ್ಯದುಡ್ಡೀನಾನ್ ಪುನರಾಗತಾನ್ ।
ಸಾಯಂ ಸಾಯಂ ದ್ವಿಜಾನ್ ವಿಪ್ರೋ ನ ಚಾಕಂಪತ ಜಾಜಲಿಃ ॥೩೨॥

ರೆಕ್ಕೆ ಬಲಿತ ಹಕ್ಕಿ ಮರಿಗಳು ಪ್ರಾತಃಕಾಲದಲ್ಲಿ ಆಹಾರಕ್ಕಾಗಿ ಪರಿಭ್ರಮಣವನ್ನು ಮಾಡಿ ಪುನಃ ಸಾಯಂಕಾಲ ತನ್ನ ತಲೆಯ ಮೇಲೆ ಆಗಮಿಸಿ ನಿದ್ರಿಸುವುದನ್ನು ಆ ಬ್ರಾಹ್ಮಣನು ನೋಡಿದನು. ಪ್ರತಿ ದಿನವೂ ಸಂಧ್ಯಾಕಾಲದಲ್ಲಿ ಬಂದು ನಿದ್ರಿಸುವ ಅವುಗಳನ್ನು ಕಂಡು ಜಾಜಲಿಯು ತನ್ನ ದೇಹವನ್ನು ಅಲ್ಲಾಡಿಸಲಿಲ್ಲ.

ಕದಾಚಿತ್ ಪುನರಭ್ಯೇತ್ಯ ಪುನರ್ಗಚ್ಛಂತಿ ಸಂತತಮ್ ।
ತ್ಯಕ್ತಾ ಮಾತೃಪಿತೃಭ್ಯಾಂ ತೇ ನ ಚಾಕಂಪತ ಜಾಜಲಿಃ ॥೩೩॥

ಹಕ್ಕಿ ಮರಿಗಳ ಪುಕ್ಕವು ಬಲಿಯಲು ಗುಬ್ಬಚ್ಚಿ ದಂಪತಿಗಳು ಮರಿಗಳನ್ನು ಬಿಟ್ಟು ಬೇರೆ ಕಡೆ ಹೊರಟು ಹೋದವು. ಹಕ್ಕಿ ಮರಿಗಳಾದರೂ ಅವನ ತಲೆಯಲ್ಲಿಯೇ ಆಹಾರಕ್ಕೋಸ್ಕರ ಸಂಚರಿಸಿ ಪುನಃ ಬಂದು ವಾಸ ಮಾಡುತ್ತಿದ್ದವು. ಅವುಗಳಿಗಾಗಿ ಜಾಜಲಿಯು ತನ್ನ ದೇಹವನ್ನು ಸ್ಪಂದಿಸಲೇ ಇಲ್ಲ.

ಅಥ ತೇ ದಿವಸಂ ಚಾರೀಂ ಗತ್ವಾ ಸಾಯಂ ಪುನರ್ನೃಪ ।
ಉಪಾವರ್ತಂತ ತತ್ರೈವ ನಿವಾಸಾರ್ಥಂ ಶಕುಂತಕಾಃ ॥೩೪॥

ಪ್ರಾತಃಕಾಲದಲ್ಲಿ ಆಹಾರಕ್ಕಾಗಿ ಸಂಚರಿಸಿದ ಹಕ್ಕಿಯ ಮರಿಗಳು ಪುನಃ ಸಾಯಂಕಾಲ ಅವನ ತಲೆಯ ಮೇಲೆ ವಾಸ ಮಾಡಲು ಗೂಡಿಗಾಗಿ ಆಗಮಿಸುತ್ತಿದ್ದವು.

ಕದಾಚಿದ್ದಿವಸಾನ್ ಪಂಚ ಸಮುತ್ಪತ್ಯ ವಿಹಂಗಮಾಃ ।
ಷಷ್ಠೇಽಹನಿ ಸಮಾಜಗ್ಮುರ್ನ ಚಾಕಂಪತ ಜಾಜಲಿಃ ॥೩೫॥

ಒಂದು ಬಾರಿ ಆ ಹಕ್ಕಿಯ ಮರಿಗಳು ಐದು ದಿವಸಗಳ ಕಾಲ ಬೇರೆ ಕಡೆ ವಿಹಾರ ಮಾಡಿ ಆರನೆಯ ದಿವಸ ಆ ಜಾಜಲಿಯ ತಲೆಯ ಮೇಲಿನ ಗೂಡಿನ ಬಳಿ ಬಂದವು. ಹಾಗಿದ್ದರೂ ಜಾಜಲಿಯು ಅಲ್ಲಿಂದ ಕಂಪಿಸಿರಲಿಲ್ಲ.

ಕ್ರಮೇಣ ಚ ಪುನಃ ಸರ್ವೇ ದಿವಸಾನಿ ಬಹೂನ್ಯಪಿ ।
ನೋಪಾವರ್ತಂತ ಶಕುನಾ ಜಾತಪ್ರಾಣಾಃ ಸ್ಮ ತೇ ಯದಾ ॥೩೬॥

ಕದಾಚಿನ್ಮಾಸಮಾತ್ರೇಣ ಸಮುತ್ಪತ್ಯ ವಿಹಂಗಮಾಃ ।
ನೈವಾಗಚ್ಛಂಸ್ತತೋ ರಾಜನ್ ಪ್ರಾತಿಷ್ಠತ ಸ ಜಾಜಲಿಃ ॥೩೭॥

ಕ್ರಮೇಣ ಆ ಪಕ್ಷಿಗಳು ಬಹಳ ದಿವಸಗಳ ತನಕ ಆ ಗೂಡಿನ ಕಡೆಗೆ ಹಿಂದಿರುಗಿ ಬರಲೇ ಇಲ್ಲ. ಒಮ್ಮೆ ಆಕಾಶಗಾಮಿಗಳಾದ ಪಕ್ಷಿಗಳು ಹಾರಿ ಹೋಗಿ ಒಂದು ತಿಂಗಳು ಕಾಲ ಹಿಂದಿರುಗಿ ಬರಲಿಲ್ಲ. ಆಗ ಜಾಜಲಿಯು ಆ ಸ್ಥಳವನ್ನು ಬಿಟ್ಟು ಬೇರೆ ಕಡೆ ಹೊರಟನು.

ತತಸ್ತೇಷು ಪ್ರಲೀನೇಷು ಜಾಜಲಿರ್ಜಾತವಿಸ್ಮಯಃ ।
ಸಿದ್ಧೋಽಸ್ಮೀತಿ ಮತಿಂ ಚಕ್ರೇ ತತಸ್ತಂ ಮಾನ ಆವಿಶತ್ ॥೩೮॥

ಬಳಿಕ ಅವನು ತನ್ನಲ್ಲಿರುವ ಸ್ಥಿರತೆಗೆ ತಾನೇ ಆಶ್ಚರ್ಯ ಪಡುತ್ತಾ, ನಾನು ಕೃತಾರ್ಥನಾದೆನು. ನನ್ನ ತಪಸ್ಸು ಸಿದ್ಧಿಸಿತು ಎಂಬ ಅಹಂಕಾರವು ಅವನನ್ನು ಪ್ರವೇಶಿಸಿತು.

ಸ ತಥಾ ನಿರ್ಗತಾಂದಷ್ಟ್ವಾ ಶಕುಂತಾನ್ನಿಯತವ್ರತಃ ।
ಸಂಭಾವಿತಾತ್ಮಾ ಸಂಭಾವ್ಯ ಭೃಶಂ ಪ್ರೀತಸ್ತದಾಭವನ್ ॥೩೯॥

ಆ ಕಾಡುಹಕ್ಕಿಗಳು ತನ್ನ ತಲೆಯಲ್ಲಿ ಆಶ್ರಯವನ್ನು ಪಡೆದು ಸಂತತಿಯನ್ನೂ ಪಡೆದು ಹೋದ ಕಾರಣದಿಂದ ತನ್ನಲ್ಲಿರುವ ಧರ್ಮ ಬುದ್ಧಿಗೆ ತಾನೇ ಸಂತೋಷ ಪಡುತ್ತಿದ್ದನು.

ಸ ನದ್ಯಾಂ ಸಮುಪಸ್ಪೃಶ್ಯ ತರ್ಪಯಿತ್ವಾ ಹುತಾಶನಮ್ ।
ಉದಯಂತಮಥಾದಿತ್ಯಮಭ್ಯಗಚ್ಛನ್ಮಹಾತಪಾಃ ॥೪೦॥

ಬಳಿಕ ಅವನು ನದಿಯಲ್ಲಿ ಸ್ನಾನ ಮಾಡಿ, ತರ್ಪಣಗಳನ್ನು ಕೊಟ್ಟು, ಅಗ್ನಿಕಾರ್ಯವನ್ನು ಮಾಡಿ, ಸೂರ್ಯೋದಯವಾಗುತ್ತಿರಲು ಉಪಸ್ಥಾನವನ್ನು ಮಾಡಿದನು.

ಸಂಭಾವ್ಯ ಚಟಕಾನ್ಮೂರ್ಧ್ನಿ ಜಾಜಲಿರ್ಜಪತಾಂ ವರಃ ।
ಆಸ್ಫೋಟಯತ್ತದಾಕಾಶೇ ಧರ್ಮಃ ಪ್ರಾಪ್ತೋ ಮಯೇತಿ ವೈ ॥೪೧॥

ಆ ಪಕ್ಷಿಗಳಿಗೆ ತನ್ನ ತಲೆಯಲ್ಲಿ ಆಶ್ರಯವನ್ನು ನೀಡಿದುದಕ್ಕಾಗಿ ಅವನು ತನ್ನ ತೋಳನ್ನು ತಟ್ಟಿಕೊಳ್ಳುತ್ತಾ ನಾನೇ ಧಾರ್ಮಿಕಶ್ರೇಷ್ಠನು, ಧರ್ಮವು ನನಗೆ ಒದಗಿದೆ ಎಂದು ಗಟ್ಟಿಯಾಗಿ ಹೇಳಿದನು.

ಅಥಾಂತರಿಕ್ಷೇ ವಾಗಾಸೀತ್ತಾಂ ಸ ಶುಶ್ರಾವ ಜಾಜಲಿಃ ।
ಧರ್ಮೇಣ ನ ಸಮಸ್ತ್ವಂ ವೈ ತುಲಾಧಾರಸ್ಯ ಜಾಜಲೇ ॥೪೨॥

ಕೂಡಲೇ ಆಕಾಶದಲ್ಲಿ ಅಂತರಿಕ್ಷವಾಣಿಯೊಂದು ಅವನ ಕಿವಿಗೆ ಕೇಳಿಸಿತು. ಜಾಜಲಿಯೇ, ನೀನು ಧರ್ಮದಿಂದ ತುಲಾಧಾರನೆಂಬ ವೈಶ್ಯನಿಗೆ ಸಮಾನನಾಗಿರುವುದಿಲ್ಲ. ಅಹಂಕಾರ ಹೊಂದಬೇಡ.

ವಾರಾಣಸ್ಯಾಂ ಮಹಾಪ್ರಾಜ್ಞಸ್ತುಲಾಧಾರಃ ಪ್ರತಿಷ್ಠಿತಃ ।
ಸೋಽಪ್ಯೇವಂ ನಾರ್ಹತೇ ವಕ್ತುಂ ಯಥಾ ತ್ವಂ ಭಾಷಸೇ ದ್ವಿಜ ॥೪೩॥

ವಾರಣಾಸಿಯಲ್ಲಿ ಮಹಾಪ್ರಾಜ್ಞನಾದ ತುಲಾಧಾರನು ವಾಸ ಮಾಡಿಕೊಂಡಿದ್ದಾನೆ. ನೀನು ಹೇಗೆ ಅಹಂಕಾರದ ಮಾತುಗಳನ್ನು ಆಡುತ್ತಿರುವೆಯೋ ಅಂತಹ ಮಾತುಗಳನ್ನು ವೈಶ್ಯನಾದ ತುಲಾಧಾರನು ಹೇಳುತ್ತಿಲ್ಲ.

ಸೋಽಮರ್ಷವಶಮಾಪನ್ನಸ್ತುಲಾಧಾರದಿದೃಕ್ಷಯಾ ।
ಪೃಥಿವೀಮಚರದ್ರಾಜನ್ಯತ್ರಸಾಯಂಗಹೋ ಮುನಿಃ ॥೪೪॥

ಈ ರೀತಿಯಾದ ಮಾತನ್ನು ಕೇಳಿ ಸಹಿಸಿಕೊಳ್ಳದೆ ಕೂಡಲೇ ತುಲಾಧಾರನನ್ನು ನೋಡಬೇಕೆಂಬ ಕಾತುರತೆಯಿಂದ ಮೌನವ್ರತವನ್ನು ಧರಿಸಿ ಬೆಳಗಿನ ಜಾವದಲ್ಲಿ ಕಾಶಿ ಪಟ್ಟಣದ ಕಡೆ ಹೊರಟನು.

ಕಾಲೇನ ಮಹತಾಗಚ್ಛತ್ಸ ತು ವಾರಾಣಸೀಂ ಪುರೀಮ್ ।
ವಿಕ್ರೀಣಂತಂ ಚ ಪಣ್ಯಾನಿ ತುಲಾಧಾರಂ ದದರ್ಶ ಸಃ ॥೪೫॥

ತುಂಬಾ ದಿವಸಗಳ ಕಾಲ ಸಂಚರಿಸುತ್ತಾ ಕಾಶಿಪಟ್ಟಣವನ್ನು ಸೇರಿಕೊಂಡನು. ಅಲ್ಲಿ ತುಲಾಧಾರನು ತನ್ನ ಅಂಗಡಿಯಲ್ಲಿ ಮಾರಾಟ ಮಾಡುತ್ತಿರುವ ದೃಶ್ಯವನ್ನು ಕಂಡನು.

ಸೋಽಪಿ ದೃಷ್ಟ್ವೈವ ತಂ ವಿಪ್ರಮಾಯಾಂತಂ ಭಾಂಡಜೀವನಃ ।
ಸಮುತ್ಥಾಯ ಸುಸಂಹೃಷ್ಟಃ ಸ್ವಾಗತೇನಾಭ್ಯಪೂಜಯತ್ ॥೪೬॥

ವೈಶ್ಯನು ಹಣವನ್ನು ಬಡ್ಡಿಗೆ ಕೊಟ್ಟು ಬದುಕುವವನಾಗಿದ್ದನು. ಆ ಬ್ರಾಹ್ಮಣನನ್ನು

ಕಂಡ ಕೂಡಲೇ ಆ ವರ್ತಕನಾದ ತುಲಾಧಾರನು ಎದ್ದು ನಿಂತು ಅತ್ಯಂತ ಸಂತೋಷದಿಂದ ಅವನನ್ನು ಸ್ವಾಗತಿಸಿ ಪೂಜಿಸಿದನು.

ತುಲಾಧಾರಃ

ಆಯಾನೇವಾಸಿ ವಿದಿತೋ ಮಮ ಬ್ರಹ್ಮನ್ನ ಸಂಶಯಃ ।
ಬ್ರವೀಮಿ ಯತ್ತು ವಚನಂ ತಚ್ಛ್ರುಣುಷ್ವ ದ್ವಿಜೋತ್ತಮ ॥೪೭॥

ದ್ವಿಜೋತ್ತಮನೇ, ನೀನು ಬರುವ ಸಮಾಚಾರವನ್ನು ನಾನು ಮೊದಲೇ ಬಲ್ಲವನಾಗಿದ್ದೆ. ನಾನು ಹೇಳುವ ಮಾತುಗಳನ್ನು ನೀನು ಕೇಳಿಸಿಕೊ.

ಸಾಗರಾನೂಪಮಾಶ್ರಿತ್ಯ ತಪಸ್ತಪ್ತಂ ತ್ವಯಾ ಮಹತ್ ।
ನ ಚ ಧರ್ಮಸ್ಯ ಸಂಜ್ಞಾಂ ತ್ವಂ ಪುರಾ ವೇತ್ಥ ಕಥಂಚನ ॥೪೮॥

ನೀನು ಸಮುದ್ರದ ತೀರದಲ್ಲಿ ಮಹಾತಪಸ್ಸನ್ನು ಮಾಡುತ್ತಿದ್ದುದನ್ನು ನಾನು ತಿಳಿದವನಾಗಿದ್ದೇನೆ. ನೀನು ಹಿಂದೆ ಆ ಧರ್ಮವನ್ನು ಮಾಡುತ್ತಿದ್ದೇನೆ ಎಂಬ ಸ್ಮರಣೆಯನ್ನು ಹೊಂದಿರಲಿಲ್ಲ.

ತತಃ ಸಿದ್ಧಸ್ಯ ತಪಸಾ ತವ ವಿಪ್ರಾ ಶಕುಂತಕಾಃ ।
ಕ್ಷಿಪ್ರಾಂ ಶಿರಸ್ಯಜಾಯಂತ ತೇ ಚ ಸಂಭಾವಿತಾಸ್ತ್ವಯಾ ॥೪೯॥

ತಪಸ್ಸಿನಲ್ಲಿ ನೀನು ಸಿದ್ಧಿ ಹೊಂದಿದ ಬಳಿಕ ನಿನ್ನ ತಲೆಯ ಮೇಲೆ ಕೆಲವು ಹಕ್ಕಿಗಳು ಗೂಡನ್ನು ಕಟ್ಟಿ ಮೊಟ್ಟೆಯನ್ನಿಟ್ಟವು. ನೀನು ಅವುಗಳನ್ನು ಧರ್ಮಬುದ್ಧಿಯಿಂದ ಚೆನ್ನಾಗಿಯೇ ರಕ್ಷಿಸಿದೆ.

ಜಾತಪಕ್ಷಾ ಯದಾ ತೇ ಚ ಗತಾಶ್ಚಾರೀಮಿತಸ್ತತಃ ।
ಮನ್ಯಮಾನಸ್ತತೋ ಧರ್ಮಂ ಚಟಕಪ್ರಭವಂ ದ್ವಿಜ ।
ಖೇ ವಾಚಂ ತ್ವಮಥಾಶ್ರೌಷೀರ್ಮಾಂ ಪ್ರತಿ ದ್ವಿಜಸತ್ತಮ ॥೫೦॥

ಅವುಗಳಿಗೆ ರೆಕ್ಕೆ ಬಂದು ಸಂಚಾರಕ್ಕೆ ಹೊರಟು ಹೋದ ಬಳಿಕ ಅವುಗಳಿಗೆ ಆಶ್ರಯದಾತ ನಾನು ಎಂದೂ, ನಾನೇ ಮಹಾಧಾರ್ಮಿಕನೆಂದೂ ಅಹಂಕಾರ ಪಟ್ಟಿ. ಅದೇ ಪ್ರಸಂಗದಲ್ಲಿ ನಿನಗೆ ಆಕಾಶವಾಣಿಯೊಂದು ಕೇಳಿಸಿತು.

ಅಮರ್ಷವಶಮಾಪನ್ನಸ್ತತಃ ಪ್ರಾಪ್ತೋ ಭವಾನಿಹ ।
ಕರವಾಣಿ ಪ್ರಿಯಂ ಕಿಂ ತೇ ತದ್ ಬ್ರೂಹಿ ದ್ವಿಜಸತ್ತಮ ॥೫೧॥

ಆ ಆಕಾಶವಾಣಿಯನ್ನು ಸಹಿಸಲಾಗದೆ ನೀನು ಇಲ್ಲಿಗೆ ಬಂದಿರುವಿ. ನಿನಗೆ ಈ ಹಿತವಾದ ಯಾವ ಕಾರ್ಯವನ್ನು ನಾನು ಮಾಡಲಿ? ಬ್ರಾಹ್ಮಣೋತ್ತಮನೇ, ಅದನ್ನು ತಿಳಿಸು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತುಲಾಧಾರಜಾಜಲಿಸಂವಾದೋ ನಾಮ ಷಣ್ಣವತಿತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೇಳನೆಯ ಅಧ್ಯಾಯ

ಜಾಜಲಿ ತುಲಾಧಾರರ ಧರ್ಮಸಂವಾದ.

ಭೀಷ್ಮಃ

ಇತ್ಯುಕ್ತಃ ಸ ತದಾ ತೇನ ತುಲಾಧಾರೇಣ ಧೀಮತಾ ।
ಪ್ರೋವಾಚ ವಚನಂ ಧೀಮಾಂಜಾಜಲಿರ್ಜಪತಾಂ ವರಃ ॥೧॥

ಧರ್ಮರಾಜನೇ, ಜ್ಞಾನಿಯಾದ ತುಲಾಧಾರನು ಜಾಜಲಿಯನ್ನು ಕುರಿತು ಹೀಗೆ ಹೇಳಿದ ಬಳಿಕ ಜಪಶೀಲರಲ್ಲಿ ಶ್ರೇಷ್ಠರಾದ, ಧೀಮಂತನಾದ ಜಾಜಲಿಯು ತುಲಾಧಾರನನ್ನು ಕುರಿತು ಹೀಗೆ ಹೇಳಿದನು.

ವಿಕ್ರೀಣಾನಃ ಸರ್ವರಸಾನ್ ಸರ್ವಗಂಧಾಂಶ್ಚ ವಾಣಿಜ ।
ವನಸ್ಪತೀನೋಷಧೀಶ್ಚ ತೇಷಾಂ ಮೂಲಫಲಾನಿ ಚ ॥೨॥

ವೈಶ್ಯಕುಲೋತ್ಪನ್ನನೇ, ನೀನು ಎಲ್ಲ ವಿಧವಾದ ರಸಗಳನ್ನು, ಗಂಧಗಳನ್ನು, ಓಷಧಿಗಳನ್ನು, ವನಸ್ಪತಿಗಳನ್ನು, ಕಂದಮೂಲಫಲಗಳನ್ನು ಮಾರಾಟ ಮಾಡುತ್ತಿರುವಿ.

ಅಧ್ಯಗಾ ನೈಷ್ಠಿಕೀಂ ಬುದ್ಧಿಂ ಕುತಸ್ತ್ವಮಿದಮಾಗತಮ್ ।
ಏತದಾಚಕ್ಷ್ವ ಮೇ ಸರ್ವಂ ನಿಖಿಲೇನ ಮಹಾಮತೇ ॥೩॥

ಹೀಗಿದ್ದರೂ ಧರ್ಮದಲ್ಲಿಯೇ ದೃಢವಾದ ಬುದ್ಧಿಯುಳ್ಳವನಾಗಿರುವಿ. ಈ ಜ್ಞಾನ ಎಲ್ಲಿಂದ ನಿನಗೆ ಒದಗಿತು? ಈ ವಿಷಯದಲ್ಲಿ ಎಲ್ಲವನ್ನೂ ಸಮಗ್ರವಾಗಿ ನನಗೆ ತಿಳಿಸು.

ಏವಮುಕ್ತಸ್ತುಲಾಧಾರೋ ಬ್ರಾಹ್ಮಣೇನ ಯಶಸ್ವಿನಾ ।
ಉವಾಚ ಧರ್ಮಸೂಕ್ಷ್ಮಾಣಿ ವೈಶ್ಯೋ ಧರ್ಮಾರ್ಥತತ್ತ್ವವಿತ್ ॥೪॥

ಜಾಜಲಿಂ ಕಷ್ಟತಪಸಂ ಜ್ಞಾನತೃಪ್ತಸ್ತದಾ ನೃಪ ॥೪॥

ಯುಧಿಷ್ಠಿರನೇ, ಕೀರ್ತಿಸಂಪನ್ನನಾದ ಬ್ರಾಹ್ಮಣನು ಹೀಗೆ ಹೇಳಿದ ಬಳಿಕ ತುಲಾಧಾರನು ಧರ್ಮಾರ್ಥ ತತ್ತ್ವವನ್ನು ಅರಿತು ಧರ್ಮಸೂಕ್ಷ್ಮಗಳಾದ ಮಾತುಗಳನ್ನು ಹೇಳಿದನು. ಕಷ್ಟದಿಂದ ತಪಸ್ಸನ್ನಾಚರಿಸಿದ ಜಾಜಲಿಯನ್ನು ಕುರಿತು ಜ್ಞಾನತೃಪ್ತನಾದ ತುಲಾಧಾರನು ಹೀಗೆ ಹೇಳಿದನು.

ವೇದಾಹಂ ಜಾಜಲೇ ಧರ್ಮಂ ಸರಹಸ್ಯಂ ಸನಾತನಮ್ ।
ಸರ್ವಭೂತಹಿತಂ ಮೈತ್ರಂ ಪುರಾಣಂ ಯಂ ಜನಾ ವಿದುಃ ॥೫॥

ಜಾಜಲಿಯೇ, ಸರ್ವಪ್ರಾಣಿಗಳಿಗೂ ಹಿತಕರವಾದ, ಎಲ್ಲರೊಡನೆಯೂ ಮೈತ್ರೀ ಭಾವವನ್ನುಂಟು ಮಾಡುವ ಯಾವ ಧರ್ಮವನ್ನು ಜನರು ಪ್ರಾಚೀನವೆಂದು ತಿಳಿದಿದ್ದರೋ, ಅಂತಹ ಸನಾತನವಾದ ಧರ್ಮವನ್ನು, ಅದರಲ್ಲಿ ಅಡಕವಾದ ಸೂಕ್ಷ್ಮರಹಸ್ಯಗಳನ್ನು ನಾನು ತಿಳಿದಿರುತ್ತೇನೆ.

ಅದ್ರೋಹೇಣೈವ ಭೂತಾನಾಮಲ್ಪದ್ರೋಹೇಣ ವಾ ಪುನಃ ।
ಯಾ ವೃತ್ತಿಃ ಸ ಪರೋ ಧರ್ಮಸ್ತೇನ ಜೀವಾಮಿ ಜಾಜಲೇ ॥೬॥

ಜಾಜಲಿಯೇ, ಯಾವ ರೀತಿ ಜೀವನ ನಿರ್ವಹಣೆಯಿಂದ ಯಾವ ಪ್ರಾಣಿಗಳಿಗೂ ದ್ರೋಹವಾಗುವುದಿಲ್ಲವೋ ಅಥವಾ ಅತ್ಯಂತ ಕನಿಷ್ಠ ಪ್ರಮಾಣದ ದ್ರೋಹ ನಡೆಯುವುದೋ ಅಂತಹ ಜೀವನ ವೃತ್ತಿಯನ್ನು ಅನುಸರಿಸುವುದೇ ಶ್ರೇಷ್ಠವಾದ ಧರ್ಮ. ಅಂತಹ ಜೀವನ ವೃತ್ತಿಯನ್ನು ಆಶ್ರಯಿಸಿ ನಾನು ಜೀವಿಸುತ್ತಿದ್ದೇನೆ.

ಪರಿಚ್ಛಿನ್ನೈಃ ಕಾಷ್ಠತೃಣೈರ್ಮಯೇದಂ ಶರಣಂ ಕೃತಮ್ ।
ಅಲಕ್ತಂ ಪದ್ಮಕಂ ತುಂಗಂ ಗಂಧಾಂಶ್ಚೋಚ್ಚಾವಚಾಂಸ್ತಥಾ ॥೭॥

ರಸಾಂಶ್ಚ ತಾಂಸ್ತಾನ್ ವಿಪ್ರರ್ಷೇ ಮದ್ಯವರ್ಜಾನಹಂ ಬಹೂನ್ ।
ಕ್ರೀತ್ವಾ ವೈ ಪ್ರತಿವಿಕ್ರೀಣೇ ಪರಹಸ್ತಾದಮಾಯಯಾ ॥೮॥

ಯಾರೋ ತುಂಡರಿಸಿ ಒಗೆದ ಕಾಷ್ಠ-ತೃಣಗಳಿಂದ, ಹುಲ್ಲುಗಳಿಂದಲೂ ನಾನು ಈ ಗುಡಿಸಿಲನ್ನು ಕಟ್ಟುಕೊಂಡಿರುತ್ತೇನೆ. ಅರಗು, ಪದ್ಮಕ, ಹೊನ್ನೆಮರದ ತೊಗಟೆ, ನಾನಾ ವಿಧವಾದ ಗಂಧಗಳು, ಬೇರೆ ವಿಧವಾದ ರಸಗಳು ಇವುಗಳನ್ನು ನಾನು ಕ್ರಯಕ್ಕೆ ತೆಗೆದುಕೊಂಡು, ಮದ್ಯವನ್ನು ಮಾರಾಟ ಮಾಡದೆ ಮತ್ತೊಬ್ಬರಿಗೆ ಯಾವುದೇ ಕುಟಿಲತೆ, ಮೋಸ, ವಂಚನೆಗಳಿಲ್ಲದೆ ಅವರಿಗೆ ಮಾರಾಟ ಮಾಡಿ, ಅದರಿಂದ ಬಂದ ಲಾಭಾಂಶದಿಂದ ಜೀವನ ನಡೆಸುತ್ತಿದ್ದೇನೆ.

ಸರ್ವೇಷಾಂ ಯಃ ಸುಹೃನ್ನಿತ್ಯಂ ಸರ್ವೇಷಾಂ ಚ ಹಿತೇ ರತಃ ।
ಕರ್ಮಣಾ ಮನಸಾ ವಾಚಾ ಸ ಧರ್ಮಂ ವೇದ ಜಾಜಲೇ ॥೯॥

ಜಾಜಲಿಯೇ, ಯಾವ ವ್ಯಕ್ತಿಯು ಮಾತು, ಮನಸ್ಸು, ಕೃತಿಗಳಿಂದ ಸಮಸ್ತ ಪ್ರಾಣಿಗಳಿಗೂ ಇಷ್ಟನಾಗುತ್ತಾನೋ, ಎಲ್ಲ ಪ್ರಾಣಿಗಳ ಹಿತದಲ್ಲಿಯೂ ಆಸಕ್ತನಾಗಿರುತ್ತಾನೋ ಅವನು ಧರ್ಮದ ಸ್ವರೂಪವನ್ನು ತಿಳಿದಿರುತ್ತಾನೆ.

ನಾಹಂ ಪರೇಷಾಂ ಕರ್ಮಾಣಿ ಪ್ರಶಂಸಾಮಿ ಶಪಾಮಿ ವಾ ।
ಆಕಾಶಸ್ಯೇವ ವಿಪ್ರರ್ಷೇ ಪಶ್ಯಲ್ಲೋಕಸ್ಯ ಚಿತ್ರತಾಮ್ ॥೧೦॥

ನಾನು ಮತ್ತೊಬ್ಬರ ಕರ್ಮಗಳನ್ನು ಅತಿಯಾಗಿ ಪ್ರಶಂಸಿಸಲು ಹೋಗುವುದಿಲ್ಲ, ಶಪಿಸಲೂ ಹೋಗುವುದಿಲ್ಲ. ಲೋಕದಲ್ಲಿರುವ ವೈಚಿತ್ರ್ಯಗಳನ್ನು ನೋಡುತ್ತಾ ಆಕಾಶದಂತೆ ಅಸಂಗನಾಗಿರುತ್ತೇನೆ.

ನಾನುರುದ್ಧ್ಯೇ ವಿರುದ್ಧ್ಯೇ ವಾ ನ ದ್ವೇಷ್ಮಿ ನ ಚ ಕಾಮಯೇ ।
ಸಮೋಽಸ್ಮಿ ಸರ್ವಭೂತೇಷು ಪಶ್ಯ ಮೇ ಜಾಜಲೇ ವ್ರತಮ್ ॥೧೧॥

ನಾನು ಒಬ್ಬನನ್ನು ಅತಿಯಾಗಿ ತೃಪ್ತಿಪಡಿಸಲು ಹೋಗುವುದಿಲ್ಲ. ಅವನಿಗೆ ವಿರೋಧ ಮಾಡಲು ಹೋಗುವುದಿಲ್ಲ. ದ್ವೇಷವನ್ನು ಮಾಡೆನು, ಪ್ರೀತಿಸಲೂ ಹೋಗೆನು. ಸಮಸ್ತ ಪ್ರಾಣಿಗಳ ಅಂತರ್ಯಾಮಿಯಾಗಿ ಭಗವಂತನಿದ್ದಾನೆ ಎಂದು ಅವನನ್ನೇ ನೋಡುತ್ತಿದ್ದೇನೆ. ಜಾಜಲಿಯೇ, ಇದೇ ನನ್ನ ವ್ರತವಾಗಿದೆ.

ಇಷ್ಟಾನಿಷ್ಟವಿಮುಕ್ತಸ್ಯ ಪ್ರೀತಿರಾಗಬಹಿಷ್ಕೃತಃ ।
ತುಲಾ ಮೇ ಸರ್ವಭೂತೇಷು ಸಮಾ ತಿಷ್ಠತಿ ಜಾಜಲೇ ॥೧೨॥

ಇಷ್ಟಾನಿಷ್ಟಗಳಿಂದ ವಿಮುಕ್ತವಾಗಿರುವ, ಪ್ರೀತಿ-ರಾಗಗಳಿಂದ ದೂರವಾಗಿರುವ ನನ್ನ ತಕ್ಕಡಿಯು ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ಒಂದೇ ನೀತಿಯನ್ನು ತೋರಿಸುತ್ತಿದೆ.

ಇತಿ ಮಾಂ ತ್ವಂ ವಿಜಾನೀಹಿ ಸರ್ವಲೋಕಸ್ಯ ಜಾಜಲೇ ।
ಸಮಂ ಮತಿಮತಾಂ ಶ್ರೇಷ್ಠ ಸಮಲೋಷ್ಟಾಶ್ಮಕಾಂಚನಮ್ ॥೧೩॥

ಜಾಜಲಿಯೇ, ಈ ರೀತಿಯಾಗಿ ಧರ್ಮಶೀಲನಾದವನು ನಾನು ಎಂಬುದನ್ನು ನೀನು ತಿಳಿದುಕೊ. ಸಮಸ್ತ ಜಗತ್ತಿನಲ್ಲಿ ಭಗವಂತನೇ ನಿಯಾಮಕನಾಗಿದ್ದಾನೆಂದು ಭಾವಿಸುತ್ತಾ ಮಣ್ಣಿನ ಹೆಂಟೆ, ಕಲ್ಲು, ಕಾಂಚನಗಳನ್ನು ಸಮಾನವಾಗಿ ನೋಡು.

ಯಥಾಂಧಬಧಿರೋನ್ಮತ್ತಾ ಉಚ್ಛ್ವಾಸಪರಮಾಃ ಸದಾ ।
ದೇವೈರಪಿಹಿತದ್ವಾರಾಃ ಸೋಪಮಾ ಪಶ್ಯತೋ ಮಮ ॥೧೪॥

ದೇವತೆಗಳಿಂದ ಮುಚ್ಚಲ್ಪಟ್ಟ ನೇತ್ರಾದಿ ಇಂದ್ರಿಯದ್ವಾರವುಳ್ಳ ಅನೇಕ ಮನುಷ್ಯರು ಕುರುಡರಾಗಿಯೂ, ಕಿವುಡರಾಗಿಯೂ, ಹುಚ್ಚರಾಗಿಯೂ, ಕೇವಲ ಉಸಿರಾಟ ಉಳ್ಳವರಾಗಿಯೂ ಕಾಣಿಸುತ್ತಾರೆ. ಅವರಂತೆ ನಾನೂ ಇದ್ದೇನೆ ಎಂದು ಉಪಮಾನವನ್ನು ನನಗೆ ನೀನು ನೀಡಬಹುದು.

ಯಥಾ ವೃದ್ಧಾತುರಕೃಶಾ ನಿಃಸ್ಪೃಹಾ ವಿಷಯಾನ್ ಪ್ರತಿ ।
ತಥಾರ್ಥಕಾಮಭೋಗೇಷು ಮಮಾಪಿ ವಿಗತಾ ಸ್ಪೃಹಾ ॥೧೫॥

ಹೇಗೆ ವೃದ್ಧರಿಗೆ, ರೋಗಿಗಳಿಗೆ, ದುರ್ಬಲರಿಗೆ ವಿಷಯ ಭೋಗಗಳಲ್ಲಿ ಆಸಕ್ತಿಯೇ ಇರುವುದಿಲ್ಲವೋ ಅದರಂತೆ ನನಗೂ ಅರ್ಥ-ಕಾಮಗಳಲ್ಲಿ ಭೋಗಾಸಕ್ತಿಯು ಹೊರಟು ಹೋಗಿದೆ.

ಯದಾ ಚಾಯಂ ನ ಬಿಭೇತಿ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ತದಾ ಸಿದ್ಧ್ಯತಿ ವೈ ದ್ವಿಜಃ ॥೧೬॥

ಯಾವಾಗ ಪುರುಷನು ಬೇರೆಯವರಿಂದ ಹೆದರುವುದಿಲ್ಲವೋ, ಬೇರೆಯವರನ್ನು ಹೆದರಿಸುವುದಿಲ್ಲವೋ ಯಾವುದನ್ನೂ ಇಚ್ಛಿಸುವುದಿಲ್ಲವೋ, ಯಾವುದನ್ನೂ ದ್ವೇಷಿಸುವುದಿಲ್ಲವೋ ಆಗ ಅವನು ಸಿದ್ಧಿಯನ್ನು ಹೊಂದುತ್ತಾನೆ.

ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೧೭॥

ಯಾವ ವ್ಯಕ್ತಿಯು ಮಾತು, ಕೃತಿ, ಮನಸ್ಸುಗಳಿಂದ ಮತ್ತೊಬ್ಬರ ಬಗ್ಗೆ ಕೆಡುಕನ್ನು ಚಿಂತಿಸುವುದಿಲ್ಲವೋ ಅವನು ಗುಣಪರಿಪೂರ್ಣನಾದ ಪರಮಾತ್ಮನನ್ನು ಹೊಂದುತ್ತಾನೆ.

ನ ಭೂತೋ ನ ಭವಿಷ್ಯಶ್ಚ ನ ಚ ಧರ್ಮೋಽಸ್ತಿ ಕಶ್ಚನ ।
ಯೋಽಭಯಃ ಸರ್ವಭೂತಾನಾಂ ಸ ಪ್ರಾಪ್ನೋತ್ಯಭಯಂ ಪದಮ್ ॥

ಯಸ್ಮಾದುದ್ವಿಜತೇ ಲೋಕಃ ಸರ್ವೋ ಮೃತ್ಯುಮುಖಾದಿವ ।
ವಾಕ್ಕ್ರೂರಾದ್ ದಂಡಪಾರುಷ್ಯಾತ್ ಸ ಪ್ರಾಪ್ನೋತಿ ಮಹದ್ಭಯಮ್ ॥

ಯಾವನು ಹಿಂದಿನ, ಮುಂದಿನ ಪಾಪಗಳಿಂದ ಲಿಪ್ತನಾಗಿರುವುದಿಲ್ಲವೋ, ಸಮಸ್ತ ಭೂತಗಳಿಗೂ ಅಭಯವನ್ನು ನೀಡುತ್ತಾನೋ ಅವನು ಭಯರಹಿತವಾದ ಸ್ಥಾನವನ್ನೇ ಹೊಂದುತ್ತಾನೆ. ಯಾರ ವಿಷಯದಲ್ಲಿ ಮೃತ್ಯುವನ್ನು ಕಂಡಂತೆ ಲೋಕವೆಲ್ಲವೂ ಭಯ ಹೊಂದುತ್ತದೋ, ಯಾರು ಕಠಿಣವಾದ ಮಾತುಗಳನ್ನೇ ಆಡುತ್ತಾನೋ, ಕಠಿಣವಾದ ಶಿಕ್ಷೆಗಳನ್ನು ವಿಧಿಸುತ್ತಾನೋ ಅವನು ಮಹಾಭಯವನ್ನೇ ಹೊಂದುತ್ತಾನೆ.

ಯಥಾವದ್ ವರ್ತಮಾನಾನಾಂ ವೃದ್ಧಾನಾಂ ಪುತ್ರಪೌತ್ರಿಣಾಮ್ ।
ಅನುವರ್ತಾಮಹೇ ವೃತ್ತಮಹಿಂಸ್ರಾಣಾಂ ಮಹಾತ್ಮನಾಮ್ ॥೨೦॥

ಪುತ್ರ, ಪೌತ್ರರಿಂದ ಕೂಡಿರುವ, ಶಾಸ್ತ್ರೋಕ್ತ ಆಚಾರ-ವಿಚಾರಗಳನ್ನು ಇಟ್ಟುಕೊಂಡಿರುವ, ಯಾರಿಗೂ ಹಿಂಸೆ ಮಾಡದ ಸ್ವಭಾವವಿರುವ ಹಿರಿಯರಾದ ವೃದ್ಧರ ವೃತ್ತಿಗಳನ್ನೇ ನಾನು ಅನುಸರಿಸಿ ನಡೆಯುತ್ತಿದ್ದೇನೆ.

ಪ್ರನಷ್ಟಃ ಶಾಶ್ವತೋ ಧರ್ಮಃ ಸದಾಚಾರೇಣ ಮೋಹಿತಃ ।
ತೇನ ವೈದ್ಯಸ್ತಪಸ್ವೀ ವಾ ಬಲವಾನ್ ವಾ ವಿಮೋಹ್ಯತೇ ॥೨೧॥

ಸರಿಯಾದ ಆಚರನೆಯಿಲ್ಲದೆ ಮೋಹಕ್ಕೆ ತುತ್ತಾದ ವ್ಯಕ್ತಿಗಳಿಂದ ಸನಾತನವಾದ ಧರ್ಮವು ನಾಶ ಹೊಂದುತ್ತಿದೆ. ಆದ್ದರಿಂದಲೇ ವಿದ್ವಾಂಸರಾದವರು, ತಪಸ್ವಿಗಳು, ಕಾಮ-ಕ್ರೋಧಗಳನ್ನು ಜಯಿಸಿ ಮನೋಬಲವನ್ನು ಸಾಧಿಸಿದವರು ಮೋಹವಶರಾಗುತ್ತಾರೆ.

ಆಚಾರಾಜ್ಜಾಜಲೇ ಪ್ರಾಜ್ಞಃ ಕ್ಷಿಪ್ರಾಂ ಧರ್ಮಮವಾಪ್ನುಯಾತ್ ।
ಏವಂ ಯಃ ಸಾಧುಭಿರ್ದಾಂತಶ್ಚರೇದದ್ರೋಹಚೇತಸಾ ॥೨೨॥

ಜಾಜಲಿಯೇ, ಯಾವ ಪುರುಷನು ಮನಸ್ಸಿನಲ್ಲಿಯೂ ಮತ್ತೊಬ್ಬರಿಗೆ ದ್ರೋಹವನ್ನು ಎಣಿಸದೆ ಸಾಧುಪುರುಷರಿಂದ ಆಚರಿಸಲ್ಪಡುವ ಸದಾಚಾರವನ್ನೇ ಅನುಷ್ಠಾನ ಮಾಡುತ್ತಾನೋ ಅಂತಹ ಜ್ಞಾನಿಯು ವೇದೋಕ್ತವಾದ ಸದಾಚಾರವನ್ನು ಪಾಲಿಸುತ್ತಾ ವೇದ, ಧರ್ಮದ ರಹಸ್ಯಗಳನ್ನು ತಿಳಿದುಕೊಳ್ಳುತ್ತಾನೆ.

ನದ್ಯಾಂ ಯಥಾ ಚೇಹ ಕಾಷ್ಠಮುಹ್ಯಮಾನಂ ಯದೃಚ್ಛಯಾ ।
ಯದೃಚ್ಛಯೈವ ಕಾಷ್ಠೇನ ಸಂಧಿಂ ಗಚ್ಛೇತ ಕೇನಚಿತ್ ॥೨೩॥

ತತ್ರಾಪರಾಣಿ ದಾರೂಣಿ ಸಂಸೃಜ್ಯಂತೇ ತತಸ್ತತಃ ।
ತೃಣಕಾಷ್ಠಕರೀಷಾಣಿ ಕದಾಚಿನ್ನಸಮೀಕ್ಷಯಾ ।
ಏವಮೇವಾಯಮಾಚಾರಃ ಪ್ರಾದುರ್ಭೂತೋ ಯತಸ್ತತಃ ॥೨೪॥

ನದಿಯ ಪ್ರವಾಹದಲ್ಲಿ ತಾನಾಗಿಯೇ ತೇಲಿ ಬರುವ ಕಟ್ಟಿಗೆಯೊಂದು ಇನ್ನೊಂದು ತಾನಾಗಿಯೇ ತೇಲಿ ಬರುವ ಕಟ್ಟಿಗೆಯ ಜೊತೆಗೆ ಸೇರಿಕೊಳ್ಳುತ್ತದೋ, ಆ ಎರಡು ಕಟ್ಟಿಗೆಗಳು ತೇಲಿ ಹೋಗುವಾಗ ಅದರಂತೆ ಹಲವಾರು ಕಟ್ಟಿಗೆಗಳು ನೀರಿನ ಪ್ರವಾಹದಲ್ಲಿ ಕೊಚ್ಚಿಕೊಂಡು ಬರುತ್ತಾ ಮೊದಲಿನ ಕಟ್ಟಿಗೆಯ ಜೊತೆಗೆ ಸಂಬಂಧವನ್ನು ಹೊಂದುತ್ತವೋ, ಬಳಿಕ ಅವುಗಳ ಜೊತೆ ಹುಲ್ಲು, ಕಾಷ್ಠ, ಬೆರಣಿಯ ಚೂರು ಇವೆಲ್ಲವೂ ಸೇರಿಕೊಳ್ಳುತ್ತವೋ, ಇವೆಲ್ಲವೂ ಒಟ್ಟಾಗಿದ್ದು ಆಕಸ್ಮಿಕವೇ ವಿನಾ ಆ ಯಾವ ಸಂಬಂಧವನ್ನು ಹೊಂದಿದ ಪದಾರ್ಥಗಳಿಗೂ ನಿಜವಾದ ಸಂಬಂಧವು ಇರುವುದಿಲ್ಲ. ಇದರಂತೆ ಈ ಸಂಸಾರದಲ್ಲಿಯೂ ಸಂಯೋಗ, ವಿಯೋಗಗಳು ನಡೆದುಕೊಂಡು ಬರುತ್ತಿವೆ.

ಯಸ್ಮಾನ್ನೋದ್ವಿಜತೇ ಭೂತಂ ಜಾತು ಕಿಂಚಿತ್ ಕಥಂಚನ ।
ಅಭಯಂ ಸರ್ವಭೂತೇಭ್ಯಃ ಸ ಪ್ರಾಪ್ನೋತಿ ಸದಾ ಮುನೇ ॥೨೫॥

ಯಾವನಿಂದ ಯಾವುದೇ ಪ್ರಾಣಿಗಳು ಯಾವುದೇ ಕಾರಣದಿಂದ ಉದ್ವೇಗಕ್ಕೆ ತುತ್ತಾಗುವುದಿಲ್ಲವೋ ಅವನು ಎಲ್ಲಾ ಪ್ರಾಣಿಗಳಿಂದಲೂ ಅಭಯವನ್ನು ಹೊಂದುತ್ತಾನೆ.

ಯಸ್ಮಾದುದ್ವಿಜತೇ ವಿದ್ವನ್ ಸರ್ವಲೋಕೋ ವೃಕಾದಿವ ।
ಕ್ರೋಶತಸ್ತೀರಮಾಸಾದ್ಯ ಯಥಾ ಸರ್ವೇ ಜಲೇಚರಾಃ ॥೨೬॥

ನದಿಯ ತೀರಕ್ಕೆ ಬಂದು ಕೂಗಿಕೊಳ್ಳುವ ತೋಳಕ್ಕೆ ನದಿಯಲ್ಲಿರುವ ಜಲಚರ ಪ್ರಾಣಿಗಳು ಹೇಗೆ ಭಯವನ್ನು ಹೊಂದುತ್ತವೋ ಅದರಂತೆ ಕಠೋರ ಸ್ವಭಾವದವನ ಮಾತುಗಳಿಂದ ಜಗತ್ತೆಲ್ಲವೂ ಉದ್ವಿಗ್ನವಾಗುತ್ತದೆ.

ಸಹಾಯವಾನ್ ದ್ರವ್ಯವಾನ್ ಯಃ ಸುಭಗೋऽನ್ಯೋऽಪರಸ್ತಥಾ ।
ತತಸ್ತಾನೇವ ಕವಯಃ ಶಾಸ್ತ್ರೇಷು ಪ್ರವದಂತ್ಯುತ ।
ಕೀರ್ತ್ಯರ್ಥಮಲ್ಪಹೃಲ್ಲೇಖಾಃ ಪಟವಃ ಕೃತ್ಸ್ನನಿರ್ಣಯಾಃ ॥೨೭॥

ಸಹಾಯ ಸ್ವಭಾವವುಳ್ಳವನು, ದ್ರವ್ಯವಂತನಾದವನು, ಸಚ್ಚಾರಿತ್ರ್ಯ ಸಂಪನ್ನನಾದವನು, ಇನ್ನೂ ಬೇರೆ ಬೇರೆ ಗುಣಗಳುಳ್ಳಂತಹ ವ್ಯಕ್ತಿಯು, ಅಭಯ ದಾನ ಮಾಡಲು ಸಮರ್ಥರಾದ ಅವರನ್ನೇ ವಿದ್ವಾಂಸರು ಶಾಸ್ತ್ರಜ್ಞರಲ್ಲಿ ಶ್ರೇಷ್ಠರೆಂದು ಹೇಳುತ್ತಾರೆ. ಆದರೆ ಕೆಲವರು ಕ್ಷಣಿಕವಾದ ಆಸೆಗಳಿಗೆ ತುತ್ತಾಗಿ, ಕೀರ್ತಿ ಕಾಮುಕರಾಗಿ ಅಭಯದಾನ ವ್ರತವನ್ನು ಮಾಡುತ್ತಾರೆ. ಜ್ಞಾನಿಗಳಾದರೂ ಭಗವಂತನ ಪ್ರಾಪ್ತಿಗಾಗಿ ಈ ವ್ರತವನ್ನು ಆಚರಿಸುತ್ತಾರೆ.

ತಪೋಭಿರ್ಯಜ್ಞದಾನೈಶ್ಚ ವಾಕ್ಯೈಃ ಪ್ರಜ್ಞಾಶ್ರಿತೈಸ್ತಥಾ ।
ಪ್ರಾಪ್ನೋತ್ಯಭಯದಾನಸ್ಯ ಯದ್ಯತ್ಫಲಮಿಹಾಶ್ನುತೇ ॥೨೮॥

ಈ ಜಗತ್ತಿನಲ್ಲಿ ಯಜ್ಞ, ತಪಸ್ಸು, ದಾನ, ಉಪದೇಶಗಳಿಂದ ಯಾವ ಫಲಗಳನ್ನು ಮನುಷ್ಯನು ಹೊಂದಬಲ್ಲನೋ ಆ ಎಲ್ಲ ಫಲಗಳನ್ನು ಅಭಯದಾನದಿಂದಲೇ ಪಡೆದುಕೊಳ್ಳಬಹುದು.

ಲೋಕೇ ಯಃ ಸರ್ವಭೂತೇಭ್ಯೋ ದದಾತ್ಯಭಯದಕ್ಷಿಣಾಮ್ ।
ಸ ಸರ್ವಯಜ್ಞೈರೀಜಾನಃ ಪ್ರಾಪ್ನೋತ್ಯಭಯದಕ್ಷಿಣಾಮ್ ।
ನ ಭೂತಾನಾಮಹಿಂಸಾಯಾ ಜ್ಯಾಯಾನ್ ಧರ್ಮೋಽಸ್ತಿ ಕಶ್ಚನ ॥೨೯॥

ಲೋಕದಲ್ಲಿ ಎಲ್ಲರಿಗೂ ಅಭಯವೆಂಬ ದಕ್ಷಿಣೆಯನ್ನು ಯಾವನು ನೀಡುತ್ತಾನೋ ಅವನು ಸಮಸ್ತ ಯಜ್ಞಗಳನ್ನು ಆಚರಿಸಿದವನಾಗುತ್ತಾನೆ. ಅವನು ಎಲ್ಲರಿಂದಲೂ ಅಭಯ ರೂಪವಾದ ದಕ್ಷಿಣೆಯನ್ನು ಹೊಂದುತ್ತಾನೆ. ಅಹಿಂಸಾ ವ್ರತಕ್ಕಿಂತ ಶ್ರೇಷ್ಠವಾದ ಧರ್ಮವೇ ಜಗತ್ತಿನಲ್ಲಿ ಇರುವುದಿಲ್ಲ.

ಯಸ್ಮಾನ್ನೋದ್ವಿಜತೇ ಭೂತಂ ಜಾತು ಕಿಂಚಿತ್ ಕಥಂಚನ ।
ಸೋಽಭಯಂ ಸರ್ವಭೂತೇಭ್ಯಃ ಸಂಪ್ರಾಪ್ನೋತಿ ಮಹಾಮುನೇ ॥೩೦॥

ಯಾವ ವ್ಯಕ್ತಿಯಿಂದ ಯಾವ ಪ್ರಾಣಿಯು ಯಾವ ಕಾಲದಲ್ಲಿಯೂ ಎಂದಿಗೂ ಉದ್ವೇಗಕ್ಕೆ ತುತ್ತಾಗುವುದಿಲ್ಲವೋ ಅವನು ಅಭಯವನ್ನು ಹೊಂದುತ್ತಾನೆ.

ಯಸ್ಮಾದುದ್ವಿಜತೇ ಲೋಕಃ ಸರ್ಪಾದ್ ವೇಶ್ಮಗತಾದಿವ ।
ನ ಸ ಧರ್ಮಮವಾಪ್ನೋತಿ ಇಹ ಲೋಕೇ ಪರತ್ರ ಚ ॥೩೧॥

ಯಾವನಿಂದ ಜನರು ಸರ್ಪವನ್ನು ನೋಡಿದಂತೆ ಭಯಗೊಳ್ಳುವುದೋ ಅವನು ಇಹಪರಲೋಕಗಳಲ್ಲಿ ಯಾವ ರೀತಿಯಾದ ಧರ್ಮಫಲವನ್ನೂ ಹೊಂದುವುದಿಲ್ಲ.

ಸರ್ವಭೂತಾತ್ಮಭೂತಸ್ಯ ಸಮ್ಯಗ್ ಭೂತಾನಿ ಪಶ್ಯತಃ ।
ದೇವಾಪಿ ಮಾರ್ಗೇ ಮುಹ್ಯಂತಿ ಅಪದಸ್ಯ ಪದೈಷಿಣಃ ॥೩೨॥

ಸಕಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯನ್ನೇ ಕಾಣುವ, ವಿರಕ್ತನ ಮಾರ್ಗವನ್ನು ಅನುಸರಿಸುವ ಸ್ವಭಾವವುಳ್ಳ ವ್ಯಕ್ತಿಯ ವಿಷಯದಲ್ಲಿ ದೇವತೆಗಳು ಆಶ್ಚರ್ಯವನ್ನು ಹೊಂದುತ್ತಾರೆ.

ದಾನಂ ಭೂತಾಭಯಸ್ಯಾಹುಃ ಸರ್ವದಾನೇಭ್ಯ ಉತ್ತಮಮ್ ।
ಬ್ರವೀಮಿ ತೇ ಸತ್ಯಮಿದಂ ಶ್ರದ್ದಧಸ್ವ ಚ ಜಾಜಲೇ ॥೩೩॥

ಪ್ರಾಣಿಗಳಿಗೆ ಅಭಯದಾನ ಮಾಡುವುದೇ ಉತ್ತಮ ದಾನ ಎನ್ನುತ್ತಾರೆ. ಜಾಜಲಿಯೇ, ಈ ಮಾತು ಸತ್ಯವೆಂದು ಹೇಳುತ್ತಿದ್ದೇನೆ. ನನ್ನ ಮಾತಿನಲ್ಲಿ ಶ್ರದ್ಧೆ ಇಡು.

ಸ ಏವ ಸುಭಗೋ ಭೂತ್ವಾ ಪುನರ್ಭವತಿ ದುರ್ಭಗಃ ।
ವ್ಯಾಪತ್ತಿಂ ಕರ್ಮಣಾಂ ದೃಷ್ಟ್ವಾ ಜುಗುಪ್ಸಂತಿ ಜನಾಃ ಸದಾ ॥೩೪॥

ಯಾರು ಕಾಮನೆಯಿಂದ ಧರ್ಮಗಳನ್ನು ಆಚರಿಸುತ್ತಾರೋ ಅವರು ಸುಖವನ್ನು ಹೊಂದುತ್ತಾರೆ. ಪುಣ್ಯದ ಮೊತ್ತವು ಬರಿದಾದ ಬಳಿಕ ಪುನಃ ದುರ್ಭಾಗ್ಯರೇ ಆಗುತ್ತಾರೆ. ಈ ಕಾಮ್ಯಕರ್ಮ ಫಲವು ಅನಿಷ್ಟವಾದುದು ಎಂದು ತಿಳಿದು ಜ್ಞಾನಿಗಳು ಆ ಕಾಮ್ಯ ಕರ್ಮಾನುಷ್ಠಾನದಲ್ಲಿ ಜುಗುಪ್ಸೆಯನ್ನು ಹೊಂದುತ್ತಾರೆ.

ಅಕಾರಣೋ ಹಿ ನೇಹಾಸ್ತಿ ಧರ್ಮಃ ಸೂಕ್ಷ್ಮೋಽಪಿ ಜಾಜಲೇ ।
ಭೂತಭವ್ಯಾರ್ಥಮೇವೇಹ ಧರ್ಮಪ್ರವಚನಂ ಕೃತಮ್ ॥೩೫॥

ಜಾಜಲಿಯೇ, ಕಾರಣನಾದ ಭಗವಂತನಿಲ್ಲದೆ ಯಾವುದೇ ಧರ್ಮ ಸೂಕ್ಷ್ಮಗಳು ನೆಲೆಸಲು ಸಾಧ್ಯವಿಲ್ಲ. ಸಮಸ್ತ ಪ್ರಾಣಿಗಳಿಗೆ ಹಿತಕರವಾದ ಧರ್ಮವನ್ನೇ ನಾನು ನಿನಗೆ ಬೋಧಿಸಿದ್ದೇನೆ.

ಸೂಕ್ಷ್ಮತ್ವಾನ್ನ ಸ ವಿಜ್ಞಾತುಂ ಶಕ್ಯತೇ ಬಹುನಿಹ್ನವಃ ।
ಉಪಲಭ್ಯಾಂತರಾ ಚಾನ್ಯಾನಾಚಾರಾನವಬುದ್ಧ್ಯತೇ ॥೩೬॥

ಧರ್ಮವು ಬಹಳ ಸೂಕ್ಷ್ಮವಾಗಿರುವುದರಿಂದ ಅದನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಅದರ ನೈಜ ರೂಪವನ್ನು ಮುಚ್ಚಿಡುವ ಅನೇಕ ಮಾರ್ಗಗಳೇ ಇವೆ. ಸತ್ಪುರುಷರ ಸಹವಾಸ ಮಾಡಿ, ಅವರ ಆಚಾರ-ವ್ಯವಹಾರಗಳನ್ನು ಅನುಸರಿಸುವ ಮನುಷ್ಯನು ಧರ್ಮದ ರಹಸ್ಯವನ್ನು ತಿಳಿದಾನು.

ಯೇ ಚ ಛಿಂದಂತಿ ವೃಷಣಾನ್ಯೇ ಚ ಭಿಂದಂತಿ ನಸ್ತಕಾನ್ ।
ವಹಂತಿ ಮಹತೋ ಭಾರಾನ್ ಬಧ್ನಂತಿ ದಮಯಂತಿ ಚ ॥೩೭॥

ಕೆಲವು ಜನರು ಹೋರಿಗಳ ಬೀಜಗಳನ್ನು ಒಡೆಯುತ್ತಾರೆ. ಮೂಗಿನ ಹೊಳ್ಳೆಗಳನ್ನು ಒಡೆದು ಮೂಗು ದಾರವನ್ನು ಹಾಕುತ್ತಾರೆ. ಅವುಗಳ ಹೆಗಲಿಗೆ ನೊಗಗಳನ್ನು ಹಾಕಿ ಗಾಡಿಗಳನ್ನು ಕಟ್ಟಿ ದಂಡಿಸುತ್ತಾರೆ.

ಹತ್ವಾ ಸತ್ತ್ವಾನಿ ಖಾದಂತಿ ತಾನ್ಕಥಂ ನ ವಿಗರ್ಹಸೇ ।
ಮಾನುಷಾ ಮಾನುಷಾನೇವ ದಾಸಭೋಗೇನ ಭುಂಜತೇ ॥೩೮॥

ಅನೇಕ ಪ್ರಾಣಿಗಳನ್ನು ಕೊಂದು ಅವುಗಳನ್ನು ತಿನ್ನುತ್ತಾರೆ. ಕೆಲವು ಮನುಷ್ಯರು ಮನುಷ್ಯರನ್ನೇ ಗುಲಾಮರನ್ನಾಗಿ ಮಾಡಿಕೊಂಡು ಅವರ ಬದುಕನ್ನೇ ತಿನ್ನುತ್ತಾರೆ. ಅಂತಹ ನಿಂದ್ಯರನ್ನು ನೀನೇಕೆ ನಿಂದಿಸುತ್ತಿಲ್ಲ?

ವಧಬಂಧವಿರೋಧೇನ ಕಾರಯಂತಿ ದಿವಾನಿಶಮ್ ।
ಆತ್ಮನಾ ಚಾಪಿ ಜಾನಾಸಿ ಯದ್ದುಃಖಂ ವಧತಾಡನೇ ॥೩೯॥

ಜನರು ಹಿಂಸೆ, ಬಂಧನಗಳಿಂದ ದುಃಖವಾಗುತ್ತದೆ ಎಂದು ತಿಳಿದೂ ಕೂಡ ಇತರರನ್ನು ಹಿಂಸೆ, ಬಂಧನಗಳಲ್ಲಿಟ್ಟು ಹಗಲು-ರಾತ್ರಿ ದುಡಿಸಿಕೊಳ್ಳುತ್ತಾರೆ. ಅವರನ್ನು ನೀನೇಕೆ ನಿಂದಿಸುತ್ತಿಲ್ಲ?

ಪಂಚೇಂದ್ರಿಯೇಷು ಭೂತೇಷು ಸರ್ವಂ ವಸತಿ ದೈವತಮ್ ।
ಆದಿತ್ಯಶ್ಚಂದ್ರಮಾ ವಾಯುರ್ಬ್ರಹ್ಮ ಪ್ರಾಣಃ ಕ್ರತುರ್ಯಮಃ ॥೪೦॥

ಪಂಚೇಂದ್ರಿಯಗಳಿಂದ ಕೂಡಿದ ಸಮಸ್ತ ಪ್ರಾಣಿಗಳಲ್ಲಿಯೂ ಸೂರ್ಯ, ಚಂದ್ರ, ವಾಯು, ಬ್ರಹ್ಮ, ಪ್ರಾಣ, ಯಜ್ಞ, ಯಮ ಎಲ್ಲರೂ ವಾಸ ಮಾಡುತ್ತಾರೆ.

ತಾನಿ ಜೀವಾನಿ ವಿಕ್ರೀಯ ಕಾ ಮೃತೇಷು ವಿಚಾರಣಾ ।
ಕಾ ತೈಲೇ ಕಾ ಘೃತೇ ಬ್ರಹ್ಮನ್ ಮಧುನ್ಯಪ್ಸ್ವೌಷಧೇಷು ವಾ ॥೪೧॥

ಅಂತಹ ದೇವತೆಗಳು ವಾಸ ಮಾಡುವ ಶರೀರವನ್ನು ಯಾವಾತನು ಮಾರಾಟ ಮಾಡಿ ಜೀವಿಸುತ್ತಾನೋ ಅವನಿಗೆ ಪಾಪವೇ ಸಂಭವಿಸುತ್ತದೆ. ಹೀಗಿರಲು ಮೃತ ಪ್ರಾಣಿಗಳನ್ನು ಮಾರಿದವನಿಗೆ ದೋಷವನ್ನು ಏನೆಂದು ಹೇಳಲಿ? ಎಣ್ಣೆ, ತುಪ್ಪ, ಜೇನುತುಪ್ಪ, ಓಷಧಿಗಳು ಇವುಗಳನ್ನು ಮಾರಿದವನಿಗೆ ಯಾವ ಹಾನಿಯೂ ಆಗದು.

ಅದಂಶಮಶಕೇ ದೇಶೇ ಸುಖಂ ಸಂವರ್ಧಿತಾನ್ ಪಶೂನ್ ।
ತಾಂಶ್ಚ ಮಾತುಃ ಪ್ರಿಯಾಂಜನನ್ಯಾಕ್ರಮ್ಯ ಬಹುಧಾ ನರಾಃ ।
ಬಹುದಂಶಕುಶಾಂದೇಶಾನ್ನಯಂತಿ ಬಹುಕರ್ದಮಾನ್ ॥೪೨॥

ಸೊಳ್ಳೆಗಳು, ಕಾಡು ನೊಣಗಳು ಇಲ್ಲದಿರುವ ದೇಶದಲ್ಲಿ ಸುಖವಾಗಿ ಬೆಳೆದ ಹಸುವಿನ ಕರುಗಳನ್ನು ಅವುಗಳು ತಾಯಿಗೆ ಪ್ರಿಯವಾದುದೆಂದು ತಿಳಿದಿದ್ದರೂ ತಾಯಿಯನ್ನು ಬಿಟ್ಟು ಬರಲು ಇಷ್ಟಪಡದಿದ್ದರೂ ಕ್ರೂರಿಗಳಾದ ಜನರು ಅವುಗಳನ್ನು

ಸೆಳೆದುಕೊಂಡು ಎಳೆಯುತ್ತಾ ಕಾಡುನೊಣ, ಸೊಳ್ಳೆ, ಕೆಸರುಗಳಿಂದ ಕೂಡಿದ ದೇಶಕ್ಕೆ ಎಳೆದೊಯ್ಯುತ್ತಾರೆ.

ವಾಹಸಂಪೀಡಿತಾ ಧುರ್ಯಾಃ ಸೀದಂತ್ಯವಿಧಿನಾಪರೇ ।
ನ ಮನ್ಯೇ ಭ್ರೂಣಹತ್ಯಾಪಿ ವಿಶಿಷ್ಟಾ ತೇನ ಕರ್ಮಣಾ ॥೪೩॥

ಇಷ್ಟೇ ಅಲ್ಲದೆ ನೀತಿಗೆಟ್ಟ ಅವರು ಎಷ್ಟು ಭಾರ ಹೊರಿಸಬೇಕು ಎಂಬ ನಿಯಮವಿಲ್ಲದೆ, ಗಾಡಿಗಳಿಗೆ ಅಥವಾ ನೇಗಿಲುಗಳಿಗೆ ಅವುಗಳನ್ನು ಸಂಯೋಜಿಸಿ ಅವುಗಳನ್ನು ಪೀಡಿಸುತ್ತಾರೆ. ಅತಿಯಾದ ಭಾರವನ್ನು ಹೊರಿಸುವುದರಿಂದ ಪೀಡಿತವಾದ ವೃಷಭಗಳು ಬಹಳ ಬೇಗ ವಿನಾಶವನ್ನು ಹೊಂದುತ್ತವೆ. ಭ್ರೂಣಹತ್ಯೆಯು ಹೋರಿಗಳನ್ನು ಪೀಡಿಸುವ ಪಾಪಕರ್ಮಕ್ಕಿಂತಲೂ ಅಧಿಕವಾದ ಪಾಪ ಎನಿಸುವುದಿಲ್ಲ.

ಕೃಷಿಂ ಸಾಧ್ವಿತಿ ಮನ್ಯಂತೇ ಸಾ ಚ ವೃತ್ತಿಃ ಸುದಾರುಣಾ ।
ಭೂಮಿಂ ಭೂಮಿಶಯಾಂಶ್ಚೈವ ಹಂತಿ ಕಾಷ್ಠಮಯೋಮುಖಮ್ ।
ತಥೈವಾನಡುಹೋ ಯುಕ್ತಾನ್ ಸಮವೇಕ್ಷಸ್ವ ಜಾಜಲೇ ॥೪೪॥

ಕೆಲವರು ಕೃಷಿಯನ್ನು ಒಳ್ಳೆಯದೆಂದು ಭಾವಿಸುತ್ತಾರೆ. ಆದರೆ ಆ ಕೃಷಿ ವೃತ್ತಿಯು ಅತ್ಯಂತ ಕ್ರೂರವಾದುದೇ ಆಗಿದೆ. ಕಬ್ಬಿಣದ ಗುಳವನ್ನು ಅಗ್ರಭಾಗದಲ್ಲಿ ಹಾಕಿ ನೇಗಿಲಿನಿಂದ ಭೂಮಿಯನ್ನು ಪೀಡಿಸುವಾಗ ಆ ನೇಗಿಲು ಅನೇಕ ಹುಳು-ಹುಪ್ಪಟೆಗಳನ್ನು ಕೊಲ್ಲುತ್ತದೆ. ಆ ನೇಗಿಲಿನಿಂದ ಸೆಳೆಯುವ ಎತ್ತುಗಳೂ ಹಿಂಸೆಗೆ ತುತ್ತಾಗುತ್ತವೆ. ಇವೆಲ್ಲವನ್ನೂ ಜಾಜಲಿಯೇ, ನೀನೇ ವಿಚಾರ ಮಾಡು.

ಅಘ್ನ್ಯಾ ಇತಿ ಗವಾಂ ನಾಮ ಕ ಏನಾನ್ ಹಂತುಮರ್ಹತಿ ।
ಮಹಚ್ಚಕ್ರಾಕುಶಲಂ ಪೃಷಧ್ರೋ ಗಾಲಭನ್ನಿವ ॥೪೫॥

ಗೋವುಗಳು ಎಂದಿಗೂ ಹಿಂಸೆಗೆ ಪಾತ್ರವಾದವುಗಳಲ್ಲ. ಗೋವುಗಳಿಗೆ ಅಘ್ನ್ಯಾಃ ಎಂದೇ ಹೆಸರು. ಕೊಲ್ಲಬಾರದು ಎಂದೇ ಆ ನಾಮವು ಸೂಚಿಸುತ್ತಿದ್ದಾಗ ಅಂತಹ ಗೋವುಗಳನ್ನು ಕೊಲ್ಲಲು ಯಾರು ಇಚ್ಛಿಸುತ್ತಾರೆ? ಯಾರು ಹಸುಗಳನ್ನಾಗಲಿ, ಎತ್ತುಗಳನ್ನಾಗಲಿ ಕೊಲ್ಲುತ್ತಾರೋ ಅವರು ಪೃಷಧ್ರ ಎಂಬ ಜ್ಞಾನಿಯು ಗೋವನ್ನು ಹಿಂಸಿಸಿ ದುಃಖಿತನಾದಂತೆ ಮಹಾಪಾಪವನ್ನೇ ಹೊಂದುತ್ತಾರೆ.

ಋಷಯೋ ಯತಯೋ ಹ್ಯೇತನ್ನಹುಷೇ ಪ್ರತ್ಯವೇದಯನ್ ।
ಗಾಂ ಮಾತರಂ ಚಾಪ್ಯವಧೀರ್ವೃಷಭಂ ಚ ಪ್ರಜಾಪತಿಮ್ ।
ಅಕಾರ್ಯಂ ನಹುಷಾಕಾರ್ಷೀರ್ಲಪ್ಸ್ಯಮಸ್ತ್ವತ್ಕೃತೇ ಭಯಮ್ ॥೪೬॥

ಜಿತೇಂದ್ರಿಯರಾದ ಋಷಿಗಳು ನಹುಷನಿಗೂ ಈ ಸಮಾಚಾರವನ್ನು ತಿಳಿಸಿದ್ದಾರೆ. ನಹುಷನೇ, ನೀನು ತಾಯಿಯಾದ ಗೋವನ್ನು, ಪ್ರಜಾಪತಿಯಾದ ಎತ್ತನ್ನು ಹೊಂದಿರುವೆ. ಇದರಿಂದ ನೀನು ಮಾಡಬಾರದ ಪಾಪಕರ್ಮವನ್ನು ಮಾಡಿರುವೆ. ನಿನ್ನ ಈ ಜುಗುಪ್ಸಿತವಾದ ಕರ್ಮದಿಂದ ನಾವೆಲ್ಲರೂ ದುಃಖಿತರಾಗಿದ್ದೇವೆ.

ಶತಂ ಚೈಕಂ ಚ ರೋಗಾಣಾಂ ಸರ್ವಭೂತೇಷ್ವಪಾತಯನ್ ।
ಋಷಯಸ್ತೇ ಮಹಾಭಾಗಾಃ ಪ್ರಜಾಸ್ವೇವ ಹಿ ಜಾಜಲೇ ।
ಭ್ರೂಣಹಂ ನಹುಷಂ ತ್ವಾಹುರ್ನ ತೇ ಹೋಷ್ಯಾಮಹೇ ಹವಿಃ ॥೪೭॥

ಇಂತಹ ಅಕಾರ್ಯವನ್ನು ಮಾಡಿರುವ ನಹುಷನೇ ನಿನ್ನಿಂದ ನಾವು ಭಯವನ್ನೇ ಹೊಂದುತ್ತೇವೆ, ಧರ್ಮವನ್ನು ಹೊಂದಲಾರೆವು. ನಹುಷನು ಮಾಡಿದ ಪಾಪವನ್ನು ಋಷಿಗಳು ನೂರಾವೊಂದು ರೋಗಗಳನ್ನಾಗಿ ಪರಿವರ್ತಿಸಿ ಎಲ್ಲ ಪ್ರಾಣಿಗಳ ಮೇಲೆ ಅದನ್ನು ಹಾಕಿಬಿಟ್ಟರು. ನಹುಷನೇ, ನೀನು ಭ್ರೂಣಹತ್ಯೆಯನ್ನು ಮಾಡಿದವನು ಎಂದು ನಿಂದಿಸುತ್ತಾ ನಿನ್ನ ಹೋಮಕ್ಕೆ ನಾವು ಹೋತ್ರರಾಗಿ ಬಂದು ನಾವು ಅಗ್ನಿಗೆ ಆಹುತಿಯನ್ನು ನೀಡೆವು ಎಂದು ಪ್ರತಿಭಟಿಸಿದರು.

ಇತ್ಯುಕ್ತ್ವಾ ತೇ ಮಹಾತ್ಮಾನಃ ಸರ್ವೇ ತತ್ತ್ವಾರ್ಥದರ್ಶಿನಃ ।
ಋಷಯೋ ಯತಯಃ ಶಾಂತಾಸ್ತರಸಾ ಪ್ರತ್ಯವೇದಯನ್ ॥೪೮॥

ತತ್ತ್ವಾರ್ಥದರ್ಶಿಗಳಾದ, ಮಹಾನುಭಾವರಾದ ಆ ಎಲ್ಲ ಋಷಿಗಳು ಹೀಗೆ ಹೇಳುತ್ತಾ ನಹುಷನು ಪಾಪಕಾರ್ಯವನ್ನು ಮನಃಪೂರ್ವಕವಾಗಿ ಮಾಡಿಲ್ಲ ಎಂದು ಕೂಡಲೇ ತಿಳಿದು ಶಾಂತರಾದರು.

ಈದೃಶಾನಶಿವಾನ್ಘೋರಾನಾಚಾರಾನಿಹ ಜಾಜಲೇ ।
ಕೇವಲಾಚರಿತತ್ವಾತ್ತು ನಿಪುಣಾನ್ನಾವಬುದ್ಧ್ಯಸೇ ॥೪೯॥

ಜಾಜಲಿಯೇ, ಈ ರೀತಿಯಾದ ಅನೇಕ ಅಮಂಗಳಕರ, ಭಯಂಕರ ಆಚಾರಗಳು ನಡೆಯುತ್ತಿದ್ದರೂ ನೀನು ಅದನ್ನು ನೋಡುತ್ತಿದ್ದರೂ ಇವೆಲ್ಲ ಹಿಂದಿನಿಂದ ನಡೆದು ಬಂದಿವೆ ಎಂಬ ಕಾರಣದಿಂದ ನೋಡುತ್ತಾ, ಅವುಗಳ ದೌಷ್ಪ್ಯವನ್ನು ತಿಳಿಯದವನಾಗಿದ್ದಿ.

ಕಾರಣಾದ್ಧರ್ಮಮನ್ವಿಚ್ಛೇನ್ನ ಲೋಕಚರಿತಂ ಚರೇತ್ ।
ಯೋ ಹನ್ಯಾದ್ಯಶ್ಚ ಮಾಂ ಸ್ತೌತಿ ತತ್ರಾಪಿ ಶೃಣು ಜಾಜಲೇ ॥೫೦॥

ಧರ್ಮಕ್ಕೂ ಕಾರಣ ಏನೆಂಬುದನ್ನು, ಅದರ ಸ್ವರೂಪವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಲೋಕವು ಮಾಡುವ ಆಚರಣೆಗಳನ್ನು ವಿಚಾರ ಮಾಡದೆ ಅನುಷ್ಠಾನಕ್ಕೆ ತರಬಾರದು. ಜಾಜಲಿಯೇ, ನನ್ನ ವಿಷಯವನ್ನೇ ಹೇಳುತ್ತೇನೆ. ನನ್ನನ್ನು ಹಿಂಸಿಸಿದವರು, ಪ್ರಶಂಸಿಸಿದವರು ಅವರಿಬ್ಬರೂ ನನ್ನ ದೃಷ್ಟಿಯಲ್ಲಿ ಸಮಾನರೇ ಆಗಿರುತ್ತಾರೆ.

ಸಮೌ ತಾವಪಿ ಮೇ ಸ್ಯಾತಾಂ ನ ಹಿ ಮೇ ಸ್ತಃ ಪ್ರಿಯಾಪ್ರಿಯೇ ।
ಏತದೀದೃಶಕಂ ಧರ್ಮಂ ಪ್ರಶಂಸಂತಿ ಮನೀಷಿಣಃ ॥೫೧॥

ನಾನು ಹಿಂಸಕನನ್ನು ಅಪ್ರಿಯನೆಂದು, ಪ್ರಶಂಸೆ ಮಾಡಿದವನನ್ನು ಪ್ರಿಯನೆಂದು ಭಾವಿಸುವುದಿಲ್ಲ. ವಿದ್ವಾಂಸರು ಈ ರೀತಿಯಾದ ಸಮತ್ವವುಳ್ಳ ಧರ್ಮವನ್ನೇ ಪ್ರಶಂಸೆ ಮಾಡುತ್ತಾರೆ.

ಉಪಪತ್ತ್ಯಾ ಹಿ ಸಂಪನ್ನೋ ಯತಿಭಿಶ್ಚೈವ ಸೇವ್ಯತೇ ।
ಸತತಂ ಧರ್ಮಶೀಲೈಶ್ಚ ನೈಪುಣ್ಯೇನೋಪಲಕ್ಷಿತಃ ॥೫೨॥

ವಿವೇಕದಿಂದ ನಿರ್ಣಯವಾದ, ಸಮತ್ವದಿಂದ ಕೂಡಿದ ಧರ್ಮವು ಯತಿಗಳಿಂದಲೂ, ಧರ್ಮಶೀಲರಿಂದಲೂ ಯಾವಾಗಲೂ ಸೇವಿಸಲು ಅರ್ಹವಾಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆಂಟನೆಯ ಅಧ್ಯಾಯ

ಜಾಜಲಿಗೆ ತುಲಾಧಾರನ ಉಪದೇಶ.

ಜಾಜಲಿಃ

ಯಥಾ ಪ್ರವರ್ತಿತೋ ಧರ್ಮಸ್ತುಲಾಂ ಧಾರಯತಾ ತ್ವಯಾ ।
ಸ್ವರ್ಗದ್ವಾರಂ ಚ ವೃತ್ತಿಂ ಚ ಭೂತಾನಾಮವರೋತ್ಸ್ಯತೇ ॥೧॥

ಮುನಿಶ್ರೇಷ್ಠನೇ, ತಕ್ಕಡಿಯನ್ನು ಧರಿಸಿರುವ ನೀನು ಪ್ರಾಣಿಗಳಿಗೆ ಸ್ವರ್ಗದ್ವಾರವನ್ನು, ಜೀವನ ವೃತ್ತಿಯನ್ನು ಪ್ರತಿರೋಧಿಸುವಂತಹ ಧರ್ಮವನ್ನೇ ಪ್ರಾರಂಭಿಸಿರುವೆ.

ಕೃಷ್ಯಾ ಹ್ಯನ್ನಂ ಪ್ರಭವತಿ ತತಸ್ತ್ವಮಪಿ ಜೀವಸಿ ।
ಪಶುಭಿಶ್ಚೌಷಧೀಭಿಶ್ಚ ಮರ್ತ್ಯಾ ಜೀವಂತಿ ವಾಣಿಜ ॥೨॥

ನೀನು ಕೃಷಿಯನ್ನು ನಿಂದಿಸುತ್ತಿರುವೆಯಲ್ಲವೆ? ಆದರೆ ಕೃಷಿಯಿಂದಲೇ ಪ್ರಾಣಿಗಳಿಗೆಲ್ಲ ಅನ್ನದ ಉತ್ಪತ್ತಿಯಾಗುತ್ತಿದೆ. ನೀನೂ ಆ ಅನ್ನದಿಂದ ಜೀವಿಸಿರುವೆ. ಗೋವುಗಳಿಂದಲೂ, ಕೃಷಿಯಿಂದಲೂ ಮನುಷ್ಯನಿಗೆ ಜೀವನವು ನಡೆಯುತ್ತದೆ.

ಯತೋ ಯಜ್ಞಃ ಪ್ರಭವತಿ ನಾಸ್ತಿಕ್ಯಮಪಿ ಜಲ್ಪಸಿ ।
ನ ಹಿ ವರ್ತೇದಯಂ ಲೋಕೋ ವಾರ್ತಾಮುತ್ಸೃಜ್ಯ ಕೇವಲಮ್ ॥೩॥

ಯಾಗಾದಿ ಕರ್ಮಗಳಿಗೂ ಗೋವು, ಧಾನ್ಯಗಳು ಮುಖ್ಯವಾಗಿವೆ. ನೀನು ನಾಸ್ತಿಕ್ಯವಾದವನ್ನು ಖಂಡಿಸುತ್ತಿರುವೆ. ಕೃಷಿಯನ್ನೇ ತ್ಯಜಿಸಿದರೆ ಜಗತ್ತು ಬದುಕುವುದು ಹೇಗೆ?

ತುಲಾಧಾರಃ

ವಕ್ಷ್ಯಾಮಿ ಜಾಜಲೇ ವೃತ್ತಿಂ ನಾಸ್ಮಿ ಬ್ರಾಹ್ಮಣ ನಾಸ್ತಿಕಃ ।
ನ ಚ ಯಜ್ಞಂ ವಿನಿಂದಾಮಿ ಯಜ್ಞವಿತ್ತು ಸುದುರ್ಲಭಃ ॥೪॥

ಜಾಜಲಿ ಬ್ರಾಹ್ಮಣನೇ, ನಾನು ನಾಸ್ತಿಕನಲ್ಲ. ಧಾರ್ಮಿಕ ಜೀವನದ ಪದ್ಧತಿಯನ್ನೇ ಹೇಳುತ್ತಿದ್ದೇನೆ. ನಾನು ಯಾಗವನ್ನು ನಿಂದಿಸುವುದೂ ಇಲ್ಲ. ಯಜ್ಞದ ಮರ್ಮವನ್ನು ಸರಿಯಾಗಿ ತಿಳಿದವನು ಲೋಕದಲ್ಲಿ ಅತ್ಯಂತ ದುರ್ಲಭನು.

ನಮೋ ಬ್ರಾಹ್ಮಣಯಜ್ಞಾಯ ಯೇ ಚ ಯಜ್ಞವಿದೋ ಜನಾಃ ।
ಸ್ವಯಜ್ಞಂ ಬ್ರಾಹ್ಮಣಾ ಹಿತ್ವಾ ಕ್ಷಾತ್ರಂ ಯಜ್ಞಮಿಹಾಸ್ಥಿತಾಃ ॥೫॥

ಯಜ್ಞಕ್ಕೆ ನನ್ನ ನಮಸ್ಕಾರವಿರಲಿ. ಯಜ್ಞವೇತ್ತೃಗಳಿಗೂ ನನ್ನ ಪ್ರಣಾಮವು. ಆದರೆ ಬ್ರಾಹ್ಮಣರು ತಮ್ಮ ಯಜ್ಞವನ್ನು ಬಿಟ್ಟು ಕ್ಷತ್ರಿಯರ ಯಜ್ಞವನ್ನು ಅನುಷ್ಠಾನ ಮಾಡುತ್ತಿದ್ದಾರೆ.

ಲುಬ್ಧೈರ್ವಿತ್ತಪರೈರ್ಬ್ರಹ್ಮನ್ನಾಸ್ತಿಕೈಃ ಸಂಪ್ರವರ್ತಿತಮ್ ।
ವೇದವಾದಾನವಿಜ್ಞಾಯ ಸತ್ಯಾಭಾಸಮಿವಾನೃತಮ್ ॥೬॥

ಇದಂ ದೇಯಮಿದಂ ದೇಯಮಿತಿ ನಾಂತಂ ಚಿಕೀರ್ಷತಿ ।
ಅತಃ ಸೈನ್ಯಂ ಪ್ರಭವತಿ ವಿಕರ್ಮಾಣಿ ಚ ಜಾಜಲೇ ।
ತದೇವ ಸುಕೃತಂ ಹವ್ಯಂ ಯೇನ ತುಷ್ಯಂತಿ ದೇವತಾಃ ॥೭॥

ನಾಸ್ತಿಕರು ಕೆಲವರು ಲೋಭದಿಂದ, ಹಣದ ಆಸೆಯಿಂದ ವೇದವಾದಗಳ ಅರ್ಥವನ್ನು ಸರಿಯಾಗಿ ತಿಳಿಯದೆ, ವಂಚನೆಗಾಗಿ ಸತ್ಯಾಭಾಸವನ್ನು ಹೊಂದಿರುವ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾ, ಯಜ್ಞದಲ್ಲಿ ಇದನ್ನು ದಾನ ಮಾಡಬೇಕು. ಕರ್ಮಸಿದ್ಧಿಗಾಗಿ ಇದನ್ನು ಕೊಡಬೇಕು, ಇದು ಪ್ರಶಸ್ತವು. ಹೀಗೆ ದಾನಾದಿ ಕರ್ಮಗಳಿಗೆ ಪ್ರೇರಣೆಯನ್ನು ನೀಡುತ್ತಿದ್ದಾರೆ. ಇದರಿಂದ ಸುಲಿಗೆ, ಕಳ್ಳತನ, ದುಷ್ಕೃತ್ಯಗಳೇ ನಡೆಯುತ್ತಿವೆ. ದೇವತೆಗಳು ತೃಪ್ತಿಯನ್ನು ಹೊಂದುವುದನ್ನು ಹವ್ಯ ಎಂದು, ಪುಣ್ಯ ಎಂದು ಕರೆಯುತ್ತಾರೆ. ಇವರ ವ್ಯಾಪಾರಗಳಲ್ಲಿ ಇದು ಕಾಣಿಸುತ್ತಿಲ್ಲ.

ನಮಸ್ಕಾರೇಣ ಹವಿಷಾ ಸ್ವಾಧ್ಯಾಯೈರೌಷಧೈಸ್ತಥಾ ।
ಪೂಜಾ ಸ್ಯಾದ್ದೇವತಾನಾಂ ಹಿ ಯಥಾ ಶಾಸ್ತ್ರನಿದರ್ಶನಮ್ ॥೮॥

ನಮಸ್ಕಾರ, ಹವಿಸ್ಸಮರ್ಪಣೆ, ಅಧ್ಯಯನ, ಅಧ್ಯಾಪನ, ಅನ್ನ ಇವುಗಳಿಂದಲೇ ದೇವತೆಗಳನ್ನು ಪೂಜೆ ಮಾಡಲು ಸಾಧ್ಯವಿದೆ ಎಂದು ಶಾಸ್ತ್ರದಲ್ಲಿ ನಿರ್ದೇಶನವಿದೆ.

ಇಷ್ಟಾಪೂರ್ತಾದಸಾಧೂನಾಂ ವಿಷಮಾ ಜಾಯತೇ ಪ್ರಜಾ ।
ಲುಬ್ಧೇಭ್ಯೋ ಜಾಯತೇ ಲುಬ್ಧಃ ಸಮೇಭ್ಯೋ ಜಾಯತೇ ಸಮಃ ॥೯॥

ಕೇವಲ ಸ್ವರ್ಗಕಾಮನೆಯಿಂದಲೋ, ಕೀರ್ತಿಯ ಅಪೇಕ್ಷೆಯಿಂದಲೋ ಪ್ರವೃತ್ತಿ ಕರ್ಮನಿರತರಾಗಿರುವ ಅಸಜ್ಜನರಿಂದ, ಅವರ ಸ್ವಭಾವಕ್ಕನುಗುಣವಾದ ಸಂತಾನವೇ

ಹುಟ್ಟುತ್ತದೆ. ಲೋಭಿಯಾದವನಿಗೆ ಲೋಭಿಯಾದ ಮಗನೇ ಹುಟ್ಟುತ್ತಾನೆ. ಸಮದರ್ಶಿಯಾದವನಿಗೆ ಸಮದರ್ಶಿಯಾದ ಮಕ್ಕಳೇ ಹುಟ್ಟುತ್ತಾರೆ.

ಯಜಮಾನಸ್ತಥಾತ್ಮಾನಮೃತ್ವಿಜಶ್ಚ ತಥಾ ಪ್ರಜಾಃ ।
ಯಜ್ಞಾತ್ ಪ್ರಜಾ ಪ್ರಭವತಿ ನಭಸೋಽಂಭ ಇವಾಮಲಮ್ ॥೧೦॥

ಯಾವ ರೀತಿಯಾಗಿ ಯಜಮಾನನು ವಿಷ್ಣುಪ್ರೀತಿಗೋಸ್ಕರವೇ ಕರ್ಮವನ್ನು ಮಾಡುತ್ತಾನೋ ಅದೇ ರೀತಿ ಋತ್ವಿಜರು ನಡೆದುಕೊಳ್ಳುತ್ತಾರೆ. ಆ ಯಜಮಾನನಾದ ರಾಜನಿಗೆ ತಕ್ಕಂತೆ ಪ್ರಜೆಗಳೂ ಇರುತ್ತಾರೆ. ಈ ಯೋಗ್ಯವಾದ ಯಜ್ಞದಿಂದ ಆಕಾಶದಿಂದ ನಿರ್ಮಲವಾದ ಮಳೆಯು ಬೀಳುವಂತೆ ಶುದ್ಧವಾದ ಸಂತಾನೋತ್ಪತ್ತಿಯಾಗುತ್ತದೆ.

ಅಗ್ನೌ ಪ್ರಾಸ್ತಾಹುತಿರ್ಬ್ರಹ್ಮನ್ನಾದಿತ್ಯಮುಪತಿಷ್ಠತಿ ।
ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥೧೧॥

ವಿಪ್ರಶ್ರೇಷ್ಠನೇ, ಮಂತ್ರಪೂರ್ವಕವಾಗಿ ನೀಡುವ ಹೋಮದ್ರವ್ಯವು ಸೂರ್ಯನನ್ನು ತಲುಪುತ್ತದೆ. ಸೂರ್ಯನಿಂದ ಮಳೆ, ಮಳೆಯಿಂದ ಅನ್ನ, ಅನ್ನದಿಂದ ಪ್ರಜೆಗಳು ಹೀಗೆ ಜೀವನವು ಚಲಿಸುತ್ತದೆ.

ತಸ್ಮಾತ್ ಸ್ವನುಷ್ಠಿತಾತ್ ಪೂರ್ವೇ ಸರ್ವಾನ್ಕಾಮಾಂಶ್ಚ ಲೇಭಿರೇ ।
ಅಕೃಷ್ಟಪಚ್ಯಾ ಪೃಥಿವೀ ಆಶೀರ್ಭಿರ್ವೀರುಧೋಽಭವನ್ ।
ನ ತೇ ಯಜ್ಞೇಷ್ವಾತ್ಮಸು ವಾ ಫಲಂ ಪಶ್ಯಂತಿ ಕಿಂಚನ ॥೧೨॥

ಹಿಂದಿನ ಜ್ಞಾನಿಗಳು ಧರ್ಮನಿಶ್ಚಯವುಳ್ಳವರಾಗಿ ಶ್ರದ್ಧೆಯಿಂದ ಯಜ್ಞಗಳನ್ನು ಅನುಷ್ಠಾನ ಮಾಡುತ್ತಿದ್ದರು. ಅದರಿಂದಲೇ ಎಲ್ಲ ವಿಧವಾದ ಕಾಮನೆಗಳನ್ನು ಹೊಂದುತ್ತಿದ್ದರು. ಕೃಷಿಮಾಡಿದಾಗ ಭೂಮಿ ಸಮೃದ್ಧಿಯನ್ನು ನೀಡುತ್ತಿತ್ತು. ಸತ್ಸಂಕಲ್ಪಗಳಿಂದಲೇ ಫಲ-ಪುಷ್ಪಗಳನ್ನು ಕೊಡುವ ಬಳ್ಳಿಗಳು ಬೆಳೆಯುತ್ತಿದ್ದವು. ಯಜ್ಞದಲ್ಲಿ ಯಾವ ಫಲವನ್ನೂ ಅವರು ನಿರೀಕ್ಷಿಸುತ್ತಿರಲಿಲ್ಲ.

ಶಂಕಮಾನಾಃ ಫಲಂ ಯಜ್ಞೇ ಯೇ ಯಜೇರನ್ಕಥಂಚನ ।
ಜಾಯಂತೇಽಸಾಧವೋ ಧೂರ್ತಾ ಲುಬ್ಧಾ ವಿತ್ತಪ್ರಯೋಜನಾಃ ॥೧೩॥

ಯಜ್ಞದಿಂದ ಫಲವು ಸಿಗುತ್ತದೋ, ಇಲ್ಲವೋ ಎಂದು ಸಂದೇಹದಿಂದ ಯಾರು ಯಜ್ಞವನ್ನು ಮಾಡುತ್ತಾರೋ ಅವರು ಅಸತ್ಪುರುಷರು, ಧೂರ್ತರು, ಲೋಭಿಗಳು, ಹಣವೇ ಮುಖ್ಯವಾದ ಪ್ರಯೋಜನವಾಗಿ ಉಳ್ಳವರು.

ಸ ಸ್ಮ ಪಾಪಕೃತಾಂ ಲೋಕಾನ್ ಗಚ್ಛೇದಶುಭಕರ್ಮಣಾ ।
ಪ್ರಮಾಣಮಪ್ರಮಾಣೇನ ಯಃ ಕುರ್ಯಾದಶುಭಂ ನರಃ ।
ಪಾಪಾತ್ಮಾ ಸೋಽಕೃತಪ್ರಜ್ಞಃ ಸದೈವೇಹ ದ್ವಿಜೋತ್ತಮ ॥೧೪॥

ಬ್ರಾಹ್ಮಣಶ್ರೇಷ್ಠನೇ, ಪ್ರಾಮಾಣಿಕವಾದ ವೇದವನ್ನು ತನ್ನ ಅಪ್ರಮಾಣವಾದ ಕುತರ್ಕದಿಂದ ಅಮಂಗಳವೆಂದು ಯಾವನು ಹೇಳುತ್ತಾನೋ ಅವನ ವೃತ್ತಿಯು ಶುದ್ಧವಾದುದಲ್ಲ. ಈ ರೀತಿ ವಾದಿಸುವ ವ್ಯಕ್ತಿಯ ಮನಸ್ಸು ಯಾವಾಗಲೂ ಪಾಪ ಕರ್ಮಗಳಲ್ಲಿಯೇ ತೊಡಗಿಸಿಕೊಂಡಿರುತ್ತದೆ. ಅವನು ತನ್ನ ಮನಸ್ಸಿನಲ್ಲಿ ಹುಟ್ಟುವ ಪಾಪ ಪ್ರೇರಣೆಯಿಂದ ಪಾಪಕರ್ಮಗಳನ್ನೇ ಮಾಡುತ್ತಾ ಪಾಪಿಷ್ಠರು ಸಾಗುವ ನರಕಕ್ಕೆ ಸಾಗುತ್ತಾನೆ.

ಕರ್ತವ್ಯಮಿತಿ ಕರ್ತವ್ಯಂ ವೇತ್ತಿ ಯೋ ಬ್ರಾಹ್ಮಣೋಭಯಮ್ ।
ಬ್ರಹ್ಮೈವ ವರ್ತತೇ ಲೋಕೇ ನೈತಿ ಕರ್ತವ್ಯತಾಂ ಪುನಃ ॥೧೫॥

ಯಾವನು ವೇದೋಕ್ತ ಕರ್ಮಗಳನ್ನು ಮಾಡಬೇಕೆಂಬ ಭಾವನೆಯಿಂದ ತಿಳಿದು ಆ ವೇದೋಕ್ತ ವಿಧಿಯನ್ನು ನಡೆಸದಿದ್ದರೆ, ಅದಕ್ಕೆ ಅಂಜುತ್ತಾ ಯಜ್ಞಕ್ಕೆ ವಿಷಯವು ಪರಮಾತ್ಮನೇ ಎಂದು ತಿಳಿದು, ಈ ಕರ್ತವ್ಯಗಳಿಗೆ ನಾನು ಕರ್ತೃವಲ್ಲ, ಭಗವಂತನೇ ಕರ್ತಾ ಎಂದು ಹೇಳುತ್ತಾನೋ ಅವನೇ ನಿಜವಾದ ಬ್ರಾಹ್ಮಣನು.

ವಿಗುಣಂ ಚ ಪುನಃ ಕರ್ಮ ಜ್ಯಾಯ ಇತ್ಯನುಶುಶ್ರುಮ ।
ಸರ್ವಭೂತೋಪಘಾತಶ್ಚ ಫಲಭಾವೇ ಚ ಸಂಯಮಃ ॥೧೬॥

ಕರ್ಮಗಳಲ್ಲಿ ಲೋಪ-ದೋಷಗಳುಂಟಾದರೆ ಅದು ಫಲ ಕೊಡುವುದಿಲ್ಲ. ಆದರೆ ಭಗವನ್ನಿಷ್ಠೆಯಿಂದ ಮಾಡುವ ಕರ್ಮ ವಿಗುಣವಾಗಿದ್ದರೂ ಶ್ರೇಷ್ಠವೇ ಎನಿಸುತ್ತದೆ. ಗುಣಹೀನವಾದ ಕರ್ಮವು ವಿಪತ್ಕಾರಿಯಾಗಿದೆ ಎಂದು ತಿಳಿದು, ಅದೇ ಕರ್ಮವನ್ನು ನಿಷ್ಕಾಮ ಭಾವದಿಂದ ಮಾಡಿದರೆ ಅದು ಶ್ರೇಷ್ಠ ಕರ್ಮವಾಗುತ್ತದೆ.

ಸತ್ಯಯಜ್ಞಾ ದಮಯಜ್ಞಾ ಅಲುಬ್ಧಾಶ್ಚಾತೃತೃಪ್ತಯಃ ।
ಉತ್ಪನ್ನತ್ಯಾಗಿನಃ ಸರ್ವೇ ಜನಾ ಆಸನ್ನಮತ್ಸರಾಃ ॥೧೭॥

ಹಿಂದಿನ ಕಾಲದ ಬ್ರಾಹ್ಮಣರು ಸತ್ಯನಿಷ್ಠರಾಗಿ, ಇಂದ್ರಿಯಸಂಯಮವನ್ನು ಹೊಂದಿ ಯಜ್ಞಗಳನ್ನು ಮಾಡುತ್ತಿದ್ದರು. ಅವರು ಮೋಕ್ಷದ ಲೋಭವಿದ್ದರೂ ಲೌಕಿಕ ಧನದ ಮೋಹ ಹೊಂದುತ್ತಿರಲಿಲ್ಲ. ನಾಳೆಗೆ ಬೇಕೆಂದು ವಸ್ತುವನ್ನು ಸಂಗ್ರಹಿಸದೆ ಸಿಕ್ಕದ್ದನ್ನು ಮತ್ತೊಬ್ಬರಿಗೆ ದಾನ ಮಾಡುತ್ತಿದ್ದರು. ಹಿಂದಿನವರೆಲ್ಲ ಮಾತ್ಸರ್ಯರಹಿತರು ಆಗಿರುತ್ತಿದ್ದರು.

ಕ್ಷೇತ್ರಕ್ಷೇತ್ರಜ್ಞತತ್ತ್ವಜ್ಞಾಃ ಸ್ವಯಜ್ಞಪರಿನಿಷ್ಠಿತಾಃ ।
ಬ್ರಾಹ್ಮಂ ವೇದಮಧೀಯಂತಸ್ತೋಷಯಂತ್ಯಮರಾನಪಿ ॥೧೮॥

ಅವರೆಲ್ಲರೂ ಜೀವ-ಪರಮಾತ್ಮರ ಭೇದಜ್ಞಾನವನ್ನು ಹೊಂದಿರುತ್ತಿದ್ದರು. ಆತ್ಮಯಜ್ಞ ಪರಾಯಣರಾಗಿರುತ್ತಿದ್ದರು. ಉಪನಿಷತ್ತು, ವೇದಗಳನ್ನು ಅಧ್ಯಯನ ಮಾಡುತ್ತಾ ಸಂತುಷ್ಟರಾಗಿ ಮತ್ತೊಬ್ಬರಿಗೂ ಸಂತೋಷ ನೀಡುತ್ತಿದ್ದರು.

ಅಖಿಲಂ ದೈವತಂ ಸರ್ವಂ ಬ್ರಹ್ಮ ಬ್ರಾಹ್ಮಣಸಂಶ್ರಿತಮ್ ।
ತೃಪ್ಯಂತಿ ತೃಪ್ಯತೋ ದೇವಾಸ್ತಪ್ತಾಸ್ತಪ್ತಸ್ಯ ಜಾಜಲೇ ॥೧೯॥

ಜಾಬಲಿಯೇ, ಸಮಸ್ತ ದೇವತೆಗಳು, ಸಮಸ್ತ ವೇದಗಳು ಬ್ರಹ್ಮಜ್ಞಾನಿಯನ್ನೇ ಆಶ್ರಯ ಹೊಂದಿವೆ. ಆದ್ದರಿಂದ ಬ್ರಾಹ್ಮಣನು ತೃಪ್ತಿ ಹೊಂದಿದರೆ ದೇವತೆಗಳೂ ಸಂತುಷ್ಟರಾಗುತ್ತಾರೆ, ತೃಪ್ತಿಯನ್ನು ಹೊಂದುತ್ತಾರೆ.

ಯಥಾ ಸರ್ವರಸೈಸ್ತೃಪ್ತೋ ನಾಭಿನಂದತಿ ಕಿಂಚನ ।
ತಥಾ ಪ್ರಜ್ಞಾನತೃಪ್ತಸ್ಯ ನಿತ್ಯಂ ತೃಪ್ತಿಃ ಸುಖೋದಯಾ ॥೨೦॥

ಎಲ್ಲಾ ರಸಗಳಿಂದಲೂ ತೃಪ್ತನಾದವನು ಯಾವ ರಸವನ್ನೂ ಬಯಸಲು ಹೋಗುವುದಿಲ್ಲ. ಅದರಂತೆ ಜ್ಞಾನತೃಪ್ತನಾದವನು ಬೇರೆ ಯಾವುದರಿಂದಲೂ ತೃಪ್ತಿಯನ್ನು ಅಪೇಕ್ಷಿಸುವುದಿಲ್ಲ. ಜ್ಞಾನತೃಪ್ತಿಯೇ ಶ್ರೇಷ್ಠವಾದ ಸುಖದ ತೃಪ್ತಿ ಎನಿಸಿದೆ.

ಧರ್ಮಾರಾಮಾ ಧರ್ಮಸುಖಾಃ ಕೃತ್ಸ್ನವ್ಯವಸಿತಾಸ್ತಥಾ ।
ಅಸ್ತಿ ನಸ್ತತ್ತತೋ ಭೂಯ ಇತಿ ಪ್ರಜ್ಞಾಗವೇಷಿಣಃ ॥೨೧॥

ಧರ್ಮದಲ್ಲಿಯೇ ರತಿಯುಳ್ಳವರಾಗಿ, ಧರ್ಮದಿಂದಲೇ ಸುಖವನ್ನು ಹೊಂದಿದವರಾಗಿ, ಕರ್ತವ್ಯಾಕರ್ತವ್ಯಗಳನ್ನು ನಿಶ್ಚಯ ಮಾಡಿಕೊಂಡು ಕರ್ಮಗಳನ್ನು ಮಾಡುತ್ತಿರುತ್ತಾರೆ. ಆದರೆ ಈ ಎಲ್ಲ ಧರ್ಮಕ್ಕಿಂತಲೂ ಅಧಿಕವಾದ, ವ್ಯಾಪಕವಾದ ಪರಮಾತ್ಮತತ್ತ್ವವಿದೆ ಎಂದು ಪ್ರಾಜ್ಞರಾದವರು ಹೇಳುತ್ತಾರೆ.

ಜ್ಞಾನವಿಜ್ಞಾನಿನಃ ಕೇಚಿತ್ ಪರಂ ಪಾರಂ ತಿತೀರ್ಷವಃ ।
ಅತೀವ ತತ್ ಸದಾ ಪುಣ್ಯಂ ಪುಣ್ಯಾಭಿಜನಸಂಹಿತಮ್ ॥೨೨॥

ಜ್ಞಾನ-ವಿಜ್ಞಾನ ಸಂಪನ್ನರಾದ ಕೆಲವರು ಸಂಸಾರ ಸಾಗರವನ್ನು ದಾಟಲು ಬಯಸಿ, ಅತ್ಯಂತ ಪುಣ್ಯಪ್ರದವಾದ, ಪವಿತ್ರವಾದ, ಪುಣ್ಯಾತ್ಮರಿಂದ ಕೂಡಿರುವ ಬ್ರಹ್ಮಲೋಕವನ್ನು ಹೊಂದುತ್ತಾರೆ.

ಯತ್ರ ಗತ್ವಾ ನ ಶೋಚಂತಿ ನ ಚ್ಯವಂತಿ ವ್ಯಥಂತಿ ಚ ।
ತೇ ತು ತದ್ಬ್ರಹ್ಮಣಃ ಸ್ಥಾನಂ ಪ್ರಾಪ್ನುವಂತೀಹ ಸಾತ್ತ್ವಿಕಾಃ ॥೨೩॥

ಅಲ್ಲಿಗೆ ಹೋದ ಬಳಿಕ ಅವರು ದುಃಖವನ್ನು ಹೊಂದುವುದಿಲ್ಲ. ಅವರಿಗೆ ಪದಚ್ಯುತಿ, ವ್ಯಥೆಗಳು ಇರುವುದಿಲ್ಲ. ಅಂತಹ ಸಾತ್ತ್ವಿಕರು ಬ್ರಹ್ಮನ ಸ್ಥಾನವೆನಿಸಿದ ವೈಕುಂಠವನ್ನೇ ಸೇರುತ್ತಾರೆ.

ನೈವ ತೇ ಸ್ವರ್ಗಮಿಚ್ಛಂತಿ ನ ಯಜಂತಿ ಯಶೋಧನೈಃ ।
ಸತಾಂ ವರ್ತ್ಮಾನುವರ್ತಂತೇ ಯಥಾಬಲಮಹಿಂಸಯಾ ॥೨೪॥

ಅವರು ಸ್ವರ್ಗವನ್ನಾಗಲಿ, ಧನ-ಕೀರ್ತಿಗಳನ್ನಾಗಲಿ ಬಯಸಿ ಯಜ್ಞ ಮಾಡುವುದಿಲ್ಲ. ಹಿಂಸೆ ಇಲ್ಲದೆ ಇರುವ ಸಜ್ಜನರ ಮಾರ್ಗವನ್ನೇ ಅನುಸರಿಸುತ್ತಾ ಯಜ್ಞವನ್ನು ಆಚರಿಸುತ್ತಾರೆ.

ವನಸ್ಪತೀನೋಷಧೀಶ್ಚ ಫಲಮೂಲಂ ಚ ತೇ ವಿದುಃ ।
ನ ಚೈತಾನೃತ್ವಿಜೋ ಲುಬ್ಧಾ ಯಾಜಯಂತಿ ಧನಾರ್ಥಿನಃ ॥೨೫॥

ಓಷಧಿಗಳನ್ನು, ಫಲ-ಮೂಲಗಳನ್ನು ಅವರು ಯಜ್ಞದ ಹವಿಸ್ಸೆಂದು ಭಾವಿಸುತ್ತಾ ಅದರಿಂದಲೇ ಜೀವನವನ್ನು ನಿರ್ವಹಿಸುತ್ತಾರೆ. ಧನದ ಅಪೇಕ್ಷೆಯಿಂದ ಲೋಭಿಗಳಾಗಿ ಯಜ್ಞವನ್ನು ಮಾಡಿಸುವುದಿಲ್ಲ.

ಸ್ವಮೇವ ಚಾರ್ಥಂ ಕುರ್ವಾಣಾ ಯಜ್ಞಂ ಚಕ್ರುಃ ಪುನರ್ದ್ವಿಜಾಃ ।
ಪರಿನಿಷ್ಠಿತಕರ್ಮಾಣಃ ಪ್ರಜಾನುಗ್ರಹಕಾಮ್ಯಯಾ ॥೨೬॥

ಜ್ಞಾನಮುಖವಾಗಿ ತಾವೇ ಪುರುಷಾರ್ಥವನ್ನು ಸಂಪಾದಿಸಿಕೊಂಡಿರುವ ಬ್ರಾಹ್ಮಣರು ತಮ್ಮನ್ನೇ ಯಜ್ಞದ ಉಪಕರಣವನ್ನಾಗಿ ಭಾವಿಸಿ, ಲೋಕಹಿತಕ್ಕಾಗಿ ಯಜ್ಞವನ್ನು ಮಾಡುತ್ತಾರೆ.

ಪ್ರಾಪಯೇಯುಃ ಪ್ರಜಾಃ ಸ್ವರ್ಗಂ ಸ್ವಧರ್ಮಚರಣೇನ ವೈ ।
ಇತಿ ಮೇ ವರ್ತತೇ ಬುದ್ಧಿಃ ಸಮಾ ಸರ್ವತ್ರ ಜಾಜಲೇ ॥೨೭॥

ಸಜ್ಜನರಾದ ಅವರು ತಮ್ಮ ವರ್ಣವಿಹಿತವಾದ ಆಚರಣೆಯಿಂದಲೇ ಮತ್ತೊಬ್ಬರಿಗೂ ಸ್ವರ್ಗವನ್ನು ನೀಡಬಲ್ಲರು. ಇದನ್ನು ಆಲೋಚಿಸುತ್ತಾ ನನ್ನ ಬುದ್ಧಿಯು ಸರ್ವತ್ರ ಸಮಭಾವದಿಂದ ಕೂಡಿದೆ.

ಪ್ರಯುಂಜತೇ ಯಾನಿ ಯಜ್ಞೇ ಸದಾ ಪ್ರಾಜ್ಞಾ ದ್ವಿಜರ್ಷಭ ।
ತೇನ ತೇ ದೇವಯಾನೇನ ಪಥಾ ಯಾಂತಿ ಮಹಾಮುನೇ ॥೨೮॥

ಪ್ರಾಜ್ಞರಾದ ಬ್ರಾಹ್ಮಣಶ್ರೇಷ್ಠರು ಪುನರಾವೃತ್ತಿ ರಹಿತವಾದ ಯಜ್ಞಗಳನ್ನು ಮಾಡುತ್ತಾ ದೇವತೆಗಳನ್ನು ಆರಾಧಿಸುತ್ತಾರೋ ಆ ದೇವತೆಗಳ ಅನುಗ್ರಹದಿಂದ ದೇವಯಾನದ ಮೂಲಕ ಊರ್ಧ್ವಲೋಕಗಳಿಗೆ ಪ್ರಯಾಣಿಸುತ್ತಾರೆ.

ಆವೃತ್ತಿಸ್ತತ್ರ ಚೈಕಸ್ಯ ನಾಸ್ತ್ಯಾವೃತ್ತಿರ್ಮನೀಷಿಣಾಮ್ ।
ಉಭೌ ತೌ ದೇವಯಾನೇನ ಗಚ್ಛತೋ ಜಾಜಲೇ ಪಥಾ ॥೨೯॥

ಯಾವನು ಕಾಮನೆಗಳಲ್ಲಿ ಆಸಕ್ತನಾಗಿದ್ದಾನೋ ಆ ಮನುಷ್ಯನಿಗೆ ಈ ಪ್ರಪಂಚದಲ್ಲಿ ಹುಟ್ಟು-ಸಾವುಗಳಿವೆ. ಜ್ಞಾನಿಯಾದವನಿಗೆ ಪುನರಾವೃತ್ತಿ ಇಲ್ಲ. ವಾಸ್ತವಿಕವಾಗಿ ಇಬ್ಬರೂ ದೇವಯಾನದ ಮೂಲಕವೇ ಊರ್ಧ್ವಲೋಕಗಳಿಗೆ ಹೋದರೂ ಸಂಕಲ್ಪ ಭೇದದಿಂದ ಒಬ್ಬ ಪುನಃ ಹುಟ್ಟುತ್ತಾನೆ ಮತ್ತೊಬ್ಬ ಹುಟ್ಟುವುದಿಲ್ಲ.

ಸ್ವಯಂ ಚೈಷಾಮನಡುಹೋ ಯುಜ್ಯಂತಿ ಚ ವಹಂತಿ ಚ ।
ಸ್ವಯಮುಸ್ರಾಶ್ಚ ದುಹ್ಯಂತೇ ಮನಃಸಂಕಲ್ಪಸಿದ್ಧಿಭಿಃ ॥೩೦॥

ಮಹಾತ್ಮರ ಮನಸ್ಸಿನಲ್ಲಿ ಇಚ್ಛೆಗಳು ಏನಾದರೂ ಉಂಟಾದರೆ ಆ ಸಂಕಲ್ಪದಿಂದಲೇ ಆ ಕಾರ್ಯವು ಸಿದ್ಧಿಸುತ್ತದೆ. ಎತ್ತುಗಳು ಗಾಡಿಯ ನೊಗಕ್ಕೆ ಬಿಗಿದುಕೊಂಡು ತಾವೇ ಗಾಡಿಯನ್ನು ಸೆಳೆದುಕೊಂಡು ಹೋಗುತ್ತವೆ. ಹಸುಗಳು ಕರೆಯದೆಯೇ ಹಾಲನ್ನು ಕೆಚ್ಚಲಿನಿಂದ ಸುರಿಸುತ್ತವೆ. ಇದೆಲ್ಲವೂ ಬ್ರಾಹ್ಮಣರ ಸಂಕಲ್ಪ ಶಕ್ತಿಯಿಂದಲೇ ನಡೆಯುತ್ತದೆ.

ಸ್ವಯಂ ಯೂಪಾನುಪಾದಾಯ ಯಜಂತೇ ಸ್ಸಾಪ್ತದಕ್ಷಿಣೈಃ ।
ಯಸ್ತಥಾಭಾವಿತಾತ್ಮಾ ಸ್ಯಾತ್ ಸ ಗಾಮಾಲಬ್ಧುಮರ್ಹತಿ ॥೩೧॥

ಜ್ಞಾನಿಗಳ ಸಂಕಲ್ಪ ಸಿದ್ಧಿಯೇ ಬಹಳ ಪ್ರಭಾವಿಯಾದುದು. ಅವರು ಮಾನಸಿಕವಾಗಿ ಸಂಕಲ್ಪಿಸಿಯೇ ಯಜ್ಞಕ್ಕೆ ಸಂಬಂಧಿಸಿದ ಯೂಪವನ್ನು ಸ್ಥಾಪಿಸಿ ಯಥೇಚ್ಛವಾದ ದಕ್ಷಿಣೆಗಳಿಂದ ಕೂಡಿದ ಯಾಗವನ್ನು ಮಾಡುತ್ತಾರೆ. ಅಂತಹ ಪರಿಶುದ್ಧರಾದ ಚೇತನರೇ ಪಶುವಧ ರೂಪವಾದ ಯಾಗವನ್ನು ನಡೆಸಲು ಅರ್ಹರಾಗಿದ್ದಾರೆ. ಹೀಗಿದ್ದರೂ ಅವರು ಪಶುವಧೆಗೆ ಸಮ್ಮತಿಸದೆ ಧ್ಯಾನಾದಿಗಳಿಂದಲೇ ಯಾಗವನ್ನು ಮುಗಿಸುತ್ತಾರೆ.

ಓಷಧೀಭಿಸ್ತಥಾ ಬ್ರಹ್ಮನ್ ಯಜೇರಂಸ್ತೇ ನತಾದೃಶಾಃ ।
ಬುದ್ಧಿತ್ಯಾಗಂ ಪುರಸ್ಕೃತ್ಯ ತಾದೃಶಂ ಪ್ರಬ್ರವೀಮಿ ತೇ ॥೩೨॥

ಯೋಗಸಿದ್ಧಿಯನ್ನು ಪಡೆದ ಮಹಾಪುರುಷರು ಅನ್ನಾದಿಗಳ ಮೂಲಕ ಯಜ್ಞವನ್ನು ಮಾಡಬಲ್ಲರು. ಧನಲುಬ್ಧರಾದ ಋತ್ವಿಜರು ಇಂತಹ ಮಾನಸಿಕ ಯಜ್ಞಕ್ಕೆ ಸಿದ್ಧರಿರಲಾರರು. ಕರ್ಮತ್ಯಾಗಿಗಳ ಮಹಿಮೆ ಇಷ್ಟು ಅದ್ಭುತವು. ಆದ್ದರಿಂದ ತ್ಯಾಗಿಗಳ ಧರ್ಮವನ್ನೇ ಮುಖ್ಯವಾಗಿಟ್ಟುಕೊಂಡು ನಾನು ಮಾತನಾಡಿದ್ದೇನೆ.

ನಿರಾಶಿಷಮನಾರಂಭಂ ನಿರ್ನಮಸ್ಕಾರಮಸ್ತುತಿಮ್ ।
ಅಕ್ಷೀಣಂ ಕ್ಷೀಣಕರ್ಮಾಣಂ ತಂ ದೇವಾ ಬ್ರಾಹ್ಮಣಂ ವಿದುಃ ॥೩೩॥

ಯಾವನ ಮನಸ್ಸಿನಲ್ಲಿ ಕಾಮನೆಗಳಿಲ್ಲವೋ, ಫಲದ ಇಚ್ಛೆಯಿಂದ ಕರ್ಮವನ್ನು ಮಾಡುವುದಿಲ್ಲವೋ, ನಮಸ್ಕಾರ ಹೊಗಳಿಕೆಯಿಂದ ದೂರನಾಗಿದ್ದಾನೋ, ಈ ಬಾಹ್ಯ ಉಪಾಧಿಗಳಿಲ್ಲದೇ ಇದ್ದರೂ ಕ್ಷೀಣತೆಯನ್ನು ಹೊಂದುವುದಿಲ್ಲವೋ, ಬಾಹ್ಯ ಕರ್ಮಗಳನ್ನು ಕ್ಷೀಣ ಮಾಡಿಕೊಂಡಿದ್ದಾನೋ ಅಂತಹ ಬ್ರಾಹ್ಮಣನನ್ನೇ ದೇವತೆಗಳು ಬ್ರಾಹ್ಮಣ ಎನ್ನುತ್ತಾರೆ.

ನಾಶ್ರಾವಯನ್ನ ಚ ಯಜನ್ನ ದದದ್ಬ್ರಾಹ್ಮಣೇಷು ಚ ।
ಗ್ರಾಮ್ಯಾಂ ವೃತ್ತಿಂ ಲಿಪ್ಸಮಾನಃ ಕಾಂ ಗತಿಂ ಯಾತಿ ಜಾಜಲೇ ।
ಇದಂ ತು ದೈವತಂ ಕೃತ್ವಾ ಯಥಾ ಯಜ್ಞಮವಾಪ್ನುಯಾತ್ ॥೩೪॥

ಅಧ್ಯಯನ-ಅಧ್ಯಾಪನಗಳನ್ನು ಮಾಡದೆ, ಯಜ್ಞ ಮಾಡದೆ, ಬ್ರಾಹ್ಮಣರಿಗೆ ದಾನ ಮಾಡದೆ, ವೇದೋಕ್ತ ವರ್ಣಾಶ್ರಮೋಚಿತ ಕರ್ಮಗಳನ್ನು ಮಾಡದೆ, ಕೇವಲ ಗ್ರಾಮ್ಯ ವೃತ್ತಿಗಳನ್ನೇ ಅಪೇಕ್ಷಿಸುವ ವ್ಯಕ್ತಿಯು ಹೇಗೆ ತಾನೆ ಸದ್ಗತಿಯನ್ನು ಹೊಂದಬಲ್ಲನು? ಜಾಜಲಿಯೇ, ನಿಷ್ಕಾಮ ಭಾವನೆಯಿಂದ ಹರಿಪ್ರೀತ್ಯರ್ಥವಾಗಿ ಮಾಡುವ ಯಜ್ಞ ಕರ್ಮಿಯು ಯಥಾರ್ಥವಾದ ಫಲವನ್ನು ಹೊಂದುತ್ತಾನೆ.

ಜಾಜಲಿಃ

ನ ವೈ ಮುನೀನಾಂ ಶೃಣುಮಃ ಸ್ಮ ತತ್ತ್ವಂ
ಪೃಚ್ಛಾಮಿ ತ್ವಾ ವಾಣಿಜ ಕಷ್ಟಮೇತತ್ ।
ಪೂರ್ವೇ ಪೂರ್ವೇ ಚಾಸ್ಯ ನಾವೇಕ್ಷಮಾಣಾ
ನಾತಃ ಪರಂ ತಮೃಷಯಃ ಸ್ಥಾಪಯಂತಿ ॥೩೫॥

ಮುನಿಶ್ರೇಷ್ಠನೇ, ನಾನು ಆತ್ಮಜ್ಞಾನಿಗಳ ಮಾನಸಿಕ ಯಜ್ಞದ ತತ್ತ್ವಗಳನ್ನು ಕೇಳುತ್ತಿಲ್ಲ. ಆ ತತ್ತ್ವಗಳನ್ನು ಗ್ರಹಿಸುವುದು, ಅದರಂತೆ ವರ್ತಿಸುವುದು ಬಹಳ ಕಠಿಣವು. ನೀನು ಹೇಳಿದ ಯೋಗಸಿದ್ಧಾಂತವನ್ನು ಹಿಂದಿನವರು ಅನುಸರಿಸಿದಂತಿಲ್ಲ. ಆದ್ದರಿಂದಲೇ ಮುಂದಿನ ಮಹರ್ಷಿಗಳಿಗೆ ಎಲ್ಲರಿಗೂ ಅವರು ವಿಧಿಸಲಿಲ್ಲ.

ಅಸ್ಮಿನ್ನೇವಾತ್ಮತೀರ್ಥೇ ನ ಪಶವಃ ಪ್ರಾಪ್ನುಯುಃ ಸುಖಮ್ ।
ಅಥ ಸ್ವಕರ್ಮಣಾ ಕೇನ ವಾಣಿಜ ಪ್ರಾಪ್ನುಯಾತ್ ಸುಖಮ್ ।
ಶಂಸ ಮೇ ತನ್ಮಹಾಪ್ರಾಜ್ಞ ಭೃಶಂ ವೈ ಶ್ರದ್ದಧಾಮಿ ತೇ ॥೩೬॥

ನೀನು ಹೇಳಿದಂತೆ ಪಶುಸಮಾನರಾದ, ಅಜ್ಞಾನಿಗಳಾದ ಮನುಷ್ಯರು ಈ ಪುಣ್ಯ ಭೂಮಿಯಲ್ಲಿ ಹೇಗೆ ತಾನೆ ಆತ್ಮಯಜ್ಞದ ಕಡೆ ಪ್ರವೃತ್ತಿಯನ್ನು ಹೊಂದಿಯಾರು? ಅವರು ತಮ್ಮ ಕರ್ಮಗಳಿಂದ ಹೇಗೆ ತಾನೆ ಸುಖವನ್ನು ಹೊಂದಲು ಸಾಧ್ಯ ? ಮಹಾಪ್ರಾಜ್ಞನೇ, ಈ ವಿಷಯವನ್ನು ನನಗೆ ತಿಳಿಸು. ನಿನ್ನ ವಿಷಯದಲ್ಲಿ ನನಗೆ ಶ್ರದ್ಧೆಯುಂಟಾಗಿದೆ.

ತುಲಾಧಾರಃ

ಉತ ಯಜ್ಞಾ ಉತಾಯಜ್ಞಾ ಮಖಂ ನಾರ್ಹಂತಿ ತೇ ಕ್ವಚಿತ್ ।
ಆಜ್ಯೇನ ಪಯಸಾ ದಧ್ನಾ ಸತೃತ್ಯಾಮಿಕ್ಷಯಾ ತ್ವಚಾ ।
ವಾಲೈಃ ಶೃಂಗೇಣ ಪಾದೇನ ಸಂಭವತ್ಯೇವ ಗೌರ್ಮಖಮ್ ॥೩೭॥

ಡಾಂಭಿಕರಾದ ಕೆಲವರು ಮಾಡುವ ಯಜ್ಞವು ಅನೇಕ ದೋಷಗಳಿಂದ ಕೂಡಿರುವುದರಿಂದ ಯಜ್ಞ ಎಂದು ಕರೆಸಿಕೊಳ್ಳುವುದಿಲ್ಲ. ಇವರಿಗೆ ಮಾನಸಿಕ ಯಜ್ಞವನ್ನು ಮಾಡಲು ಅರ್ಹತೆ ಇರುವುದಿಲ್ಲ. ಯಜ್ಞಕ್ಕಾಗಲಿ, ಯಜ್ಞ ಫಲಕ್ಕಾಗಲಿ ಇವರು ಅರ್ಹರಾಗಿರುವುದಿಲ್ಲ. ಶ್ರದ್ಧಾಳುವಾದವನು ಸ್ವಲ್ಪ ಬಿಸಿಯಾದ ಹಾಲಿನಲ್ಲಿ ಮೇಲನ ಮಾಡಿದ ಮೊಸರಿನಿಂದಲೇ ಹವಿರ್ದಾನ ಮಾಡಿ ಯಜ್ಞವನ್ನು ಪೂರ್ಣ ಮಾಡುತ್ತಾನೆ. ಇದರಿಂದಲೇ ಅವನ ಬದುಕು ಪೂರ್ಣತೆಯನ್ನು ಹೊಂದುತ್ತದೆ. ಅಥವಾ ಶ್ರದ್ಧಾಳುವು ಭಗವನ್ನಿಷ್ಠವಾದ ಬುದ್ಧಿಯಿಂದಲೇ ಯಾವ ಬಾಹ್ಯ ಯಜ್ಞವನ್ನೂ ಆಚರಿಸದೆ ಮರಣ ಹೊಂದಿದರೂ ಮೃತನಾದ ಬಳಿಕ ಅವನನ್ನು ಉದ್ದೇಶಿಸಿ ಮಾಡುವ ಗೋಪುಚ್ಛದಿಂದ ಪಿತೃತರ್ಪಣಗಳನ್ನು, ಗೋಶೃಂಗದಿಂದ ದೇವತಾಭಿಷೇಕವನ್ನು, ಗೋ ಪಾದಧೂಳಿಯಿಂದ ಪ್ರೋಕ್ಷಣೆಯನ್ನು ಆ ಗತಿಸಿದ ಜೀವನ ಹೆಸರಿನಲ್ಲಿ ಮಾಡಿದರೂ ಬಳಿಕ ಬ್ರಾಹ್ಮಣರನ್ನು ಪೂಜಿಸಿ ಊಟ ಮಾಡಿಸಿದರೂ ವೈಶ್ಯ ಜಾತಿಯವರಿಗೆ ಯಜ್ಞದ ಸಮಸ್ತ ಫಲವು ಲಭಿಸುತ್ತದೆ.

ಪತ್ನೀಂ ಚಾನೇನ ವಿಧಿನಾ ಪ್ರಕರೋತಿ ನಿಯೋಜಯನ್ ।
ಪುರೋಡಾಶೋ ಹಿ ಸರ್ವೇಷಾಂ ಪಶೂನಾಂ ಮೇಧ್ಯ ಉಚ್ಯತೇ ॥೩೮॥

ಹಿಂಸಾ ಯಜ್ಞವನ್ನು ಮಾಡದೆ ಆಜ್ಯಾದಿಗಳ ಮೂಲಕ ಯಜ್ಞವನ್ನು ಮಾಡುವ ವಿಧಿಯಲ್ಲಿ ಶ್ರದ್ಧೆಯೇ ಪತ್ನಿಯು, ಯಾಗವೇ ದೇವತೆಯು. ಹೀಗೆ ಮನಸ್ಸಿನಿಂದ ಭಾವಿಸಿ ಭಗವಂತನನ್ನು ಆರಾಧಿಸಿದಲ್ಲಿ ಯಜ್ಞರೂಪಿಯಾದ ಪರಮಾತ್ಮನನ್ನೇ ಹೊಂದುತ್ತಾನೆ. ಯಜ್ಞಕ್ಕೆ ಪಶುಗಳಿಗಿಂತಲೂ ಶ್ರೇಷ್ಠವಾದುದು ಅಕ್ಕಿಹಿಟ್ಟಿನಿಂದ ಮಾಡಿದ ಪುರೋಡಾಶವೆಂಬ ಹವಿಸ್ಸು ಎಂದು ಹೇಳಲ್ಪಟ್ಟಿದೆ.

ಸರ್ವಾ ನದ್ಯಃ ಸರಸ್ವತ್ಯಃ ಸರ್ವೇ ಪುಣ್ಯಾಃ ಶಿಲೋಚ್ಚಯಾಃ ।
ಜಾಜಲೇ ತೀರ್ಥಮಾತ್ಮೈವ ಮಾ ಸ್ಮ ದೇಶಾತಿಥಿರ್ಭವ ॥೩೯॥

ಎಲ್ಲ ನದಿಗಳು ಸರಸ್ವತಿ ನದಿಗಳ ರೂಪಗಳೇ ಆಗಿವೆ. ಎಲ್ಲ ಪರ್ವತಗಳು ಪುಣ್ಯ ಪ್ರದೇಶಗಳೇ ಆಗಿವೆ. ಅದರಂತೆ ಪರಮಾತ್ಮನೇ ಪವಿತ್ರ ತೀರ್ಥನೆನಿಸಿದ್ದಾನೆ. ಆದ್ದರಿಂದ ತೀರ್ಥಯಾತ್ರೆಗಾಗಿ ದೇಶಾಟನೆಯನ್ನು ಮಾಡಬೇಕಾಗಿಲ್ಲ.

ಏತಾನೀದೃಶಕಾಂಧರ್ಮಾನಾಚರನ್ನಿಹ ಜಾಜಲೇ ।
ಕಾರಣೈರ್ಧರ್ಮಮನ್ವಿಚ್ಛನ್ನ ಲೋಕಾನಾಪ್ನುತೇ ಶುಭಾನ್ ॥೪೦॥

ಯಾರು ನಾನು ಹೇಳಿದ ಅಹಿಂಸಾ ಪ್ರಧಾನವಾದ ಧರ್ಮವನ್ನು ಆಚರಿಸುತ್ತಾರೋ ಅವರು ಸಾಧಾರಣವಾದ ಅಥವಾ ಸುಲಭವಾದ ಸಲಕರಣೆಗಳನ್ನೇ ಹೊಂದಿ ಶುಭ ಲೋಕಗಳನ್ನು ಪಡೆಯುತ್ತಾರೆ. ದಿ

ಭೀಷ್ಮಃ

ಏತಾನೀದೃಶಕಾಂಧರ್ಮಾಂಸ್ತುಲಾಧಾರಃ ಪ್ರಶಂಸತಿ ।
ಉಪಪತ್ತ್ಯಾ ಹಿ ಸಂಪನ್ನಾನ್ನಿತ್ಯಂ ಸದ್ಭಿರ್ನಿಷೇವಿತಾನ್ ॥೪೧॥

ಧರ್ಮರಾಜನೇ, ತುಲಾಧಾರನು ಹೀಗೆ ಯುಕ್ತಿಬದ್ಧವಾದ, ಸಜ್ಜನರಿಂದ ಆದರಿಸಲು ಯೋಗ್ಯವಾದ ಧರ್ಮಗಳನ್ನೆಲ್ಲ, ಸಜ್ಜನರಿಂದ ಆಚರಿಸಲ್ಪಟ್ಟ ಧರ್ಮವನ್ನು ಪ್ರಶಂಸೆ ಮಾಡುತ್ತಿದ್ದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂಬತ್ತನೆಯ ಅಧ್ಯಾಯ

ಜಾಜಲಿಗೆ ಪಕ್ಷಿಯ ಉಪದೇಶ.

ತುಲಾಧಾರಃ

ಸದ್ಭಿರ್ವಾ ಯದಿ ವಾऽಸದ್ಭಿರಯಂ ಪಂಥಾಃ ಸಮಾಶ್ರಿತಃ ।
ಪ್ರತ್ಯಕ್ಷಂ ಕ್ರಿಯತಾಂ ಸಾಧು ತತೋ ಜ್ಞಾಸ್ಯಸಿ ತದ್ಯಥಾ ॥೧॥

ಜಾಜಲಿಯೇ, ನಾನು ಧರ್ಮಮಾರ್ಗದ ಬಗ್ಗೆ ನಿನಗೆ ತಿಳಿಸಿದ್ದೇನೆ. ನಾನು ಹೇಳಿದ ವಿಷಯದಲ್ಲಿ ಸಜ್ಜನರು ಆಶ್ರಯಿಸಿದ ಧರ್ಮ ಮಾರ್ಗ ಯಾವುದು? ಅಸಜ್ಜನರು ಆಶ್ರಯಿಸಿದ ಅಧರ್ಮ ಯಾವುದು? ಎಂಬುದನ್ನು ನೀನೇ ಚೆನ್ನಾಗಿ ಪರ್ಯಾಲೋಚಿಸು. ಸನ್ಮಾರ್ಗದ ಪ್ರಕಾರವು ಯಾವ ರೀತಿ ಇದೆ ಎಂದು ನಿನಗೆ ತೋರುತ್ತದೋ ಅದಕ್ಕನುಗುಣವಾಗಿ ಉಪಾಯವನ್ನು ಹೇಳುತ್ತೇನೆ. ಬಳಿಕ ನೀನು ಸರಿಯಾದ ಮಾರ್ಗವನ್ನು ತಿಳಿದುಕೊಳ್ಳಬಹುದು.

ಏತೇ ಶಕುಂತಾ ಬಹವಃ ಸಮಂತಾದ್ ವಿಚರಂತಿ ಹಿ ।
ತವೋತ್ತಮಾಂಗೇ ಸಂಭೂತಾಃ ಶ್ಯೇನಾಶ್ಚಾನ್ಯಾಶ್ಚ ಜಾತಯಃ ॥೨॥

ಅನೇಕ ಗುಬ್ಬಚ್ಚಿಗಳು ಈ ಆಕಾಶದಲ್ಲಿ ಸುತ್ತಲೂ ಹಾರಾಡುತ್ತಿವೆ. ಅನೇಕ ಜಾತಿಯ ಪಕ್ಷಿಗಳಲ್ಲಿ ನಿನ್ನ ತಲೆಯಲ್ಲಿಯೇ ಹುಟ್ಟಿ ಬೆಳೆದ ಪಕ್ಷಿಗಳೂ ಇವೆ. ಬೇರೆ ಜಾತಿಯ ಗಿಡುಗವೇ ಮೊದಲಾದ ಪಕ್ಷಿಗಳೂ ಇವೆ.

ಆಹ್ವಯೈನಾನ್ ಮಹಾಬ್ರಹ್ಮನ್ ವಿಶಮಾನಾಂಸ್ತತಸ್ತತಃ ।
ಪಶ್ಯೇಮಾನ್ ಹಸ್ತಪಾದೇಷು ಶ್ಲಿಷ್ಟಾನ್ ದೇಹೇ ಚ ಸರ್ವಶಃ ॥೩॥

ಮಹಾಬ್ರಾಹ್ಮಣನೇ, ಅಲ್ಲಲ್ಲಿ ಹೋಗಿ ಸೇರಿಕೊಳ್ಳಲು ಹವಣಿಸುತ್ತಿರುವ ಆ ಪಕ್ಷಿಗಳನ್ನು ನೀನು ಆಹ್ವಾನಿಸು. ಕಾಲುಗಳನ್ನು ದೇಹದಲ್ಲಿ ಅಡಗಿಸಿಕೊಂಡು ಹಾರಾಡುತ್ತಿರುವ ಆ ಪಕ್ಷಿಗಳನ್ನು ನೀನು ನೋಡು.

ಸಂಭಾವಯಂತಿ ಪಿತರಂ ತ್ವಯಾ ಸಂಭಾವಿತಾಃ ಖಿಗಾಃ ।
ಅಸಂಶಯಂ ಪಿತಾ ಚ ತ್ವಂ ಪುತ್ರಾನಾಹ್ವಯ ಜಾಜಲೇ ॥೪॥

ನಿನ್ನಿಂದ ರಕ್ಷಿಸಲ್ಪ ಆ ಪಕ್ಷಿಗಳು ನಿನ್ನನ್ನು ತಂದೆ ಎಂದೇ ಭಾವಿಸಿವೆ. ನೀನು ಆ ಪಕ್ಷಿಗಳ ತಂದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಜಾಜಲಿಯೇ, ನಿನ್ನ ಮಕ್ಕಳಾದ ಆ ಪಕ್ಷಿಗಳನ್ನು ಆಹ್ವಾನಿಸು.

ಭೀಷ್ಮಃ

ತತೋ ಜಾಜಲಿನಾ ತೇನ ಸಮಾಹೂತಾಃ ಪತತ್ರಿಣಃ ।
ವಾಚಮುಚ್ಚಾರಯನ್ ದಿವ್ಯಾಂ ಧರ್ಮಸ್ಯ ವಚನಾತ್ ಕಿಲ ॥೫॥

ಯುಧಿಷ್ಠಿರನೇ, ಬಳಿಕ ಜಾಜಲಿಯು ಆ ಪಕ್ಷಿಗಳನ್ನು ಆಹ್ವಾನಿಸಿದನು. ಆ ಹಕ್ಕಿಗಳೆಲ್ಲವೂ ಧರ್ಮಶಾಸ್ತ್ರಗಳಿಂದ ಸಿದ್ಧವಾದ ಮಾತುಗಳನ್ನು ಉಚ್ಚರಿಸುತ್ತಿದ್ದವು.

ಅಹಿಂಸಾದಿಕೃತಂ ಕರ್ಮ ಇಹ ಚೈವ ಪರತ್ರ ಚ ।
ಶ್ರದ್ಧಾಂ ನಿಹಂತಿ ವೈ ಬ್ರಹ್ಮನ್ ಸಾ ಹತಾ ಹಂತಿ ತಂ ನರಮ್ ॥೬॥

ತಾನು ಅಹಿಂಸಾದಿ ಕರ್ಮಗಳನ್ನು ಮಾಡಿದ್ದರೂ ಅಹಂಕಾರದಿಂದ ಆ ಕರ್ಮಗಳನ್ನು ಮಾಡಿದಲ್ಲಿ ಅದು ಇಹ-ಪರಲೋಕಗಳಲ್ಲಿನ ಶ್ರದ್ಧೆಯನ್ನು ನಾಶಪಡಿಸುತ್ತದೆ. ತನಗಿಂತ ಉತ್ತಮರಾದವರಲ್ಲಿ ಶ್ರದ್ಧೆಯನ್ನು, ಭಕ್ತಿಯನ್ನು ತೋರಿಸಲು ಅಹಂಕಾರಾದಿಗಳಿಂದ ಮಾಡಿದ ಕರ್ಮವು ಬಿಡುವುದಿಲ್ಲ.

ಶ್ರದ್ಧಾವೃದ್ಧಂ ವಾಙ್ಮನಸೀ ನ ಯಜ್ಞಸ್ತ್ರಾತುಮರ್ಹತಿ ।
ಅತ್ರ ಗಾಥಾ ಬ್ರಹ್ಮಗೀತಾಃ ಕೀರ್ತಯಂತಿ ಪುರಾವಿದಃ ॥೭॥

ಶ್ರದ್ಧಾಲೋಪದಿಂದ ಕೆಟ್ಟುಹೋದ ಕರ್ಮವನ್ನು ಮನಸ್ಸಾಗಲಿ, ವಾಕ್ ಆಗಲಿ ರಕ್ಷಿಸಲಾರವು. ಇದೇ ವಿಷಯವಾಗಿ ಹಿಂದೆ ಹೇಳಿದ ಬ್ರಹ್ಮಗೀತೆಯಿಂದ ಕೆಲವು ಗಾಥೆಗಳನ್ನು ಹೇಳುತ್ತಾರೆ.

ಶುಚೇರಶ್ರದ್ದಧಾನಸ್ಯ ಶ್ರದ್ದಧಾನಸ್ಯ ಚಾಶುಚೇಃ ।
ದೇವಾಶ್ಚಿತ್ತಮಮನ್ಯಂತ ಸದೃಶಂ ಯಜ್ಞಕರ್ಮಣಿ ॥೮॥

ಶುಚಿತ್ವವಿದ್ದು ಶ್ರದ್ಧೆಯಿಲ್ಲದವನ ದ್ರವ್ಯಗಳು, ಶ್ರದ್ಧೆಯಿದ್ದು ಶುಚಿತ್ವವಿಲ್ಲದವನ ದ್ರವ್ಯಗಳು ಇವೆರಡು ಸಮಾನವೆಂದು ದೇವತೆಗಳು ಭಾವಿಸಿದ್ದಾರೆ. ಯಜ್ಞ ಕರ್ಮಗಳಿಗೆ ಈ ಎರಡೂ ಪ್ರತಿಬಂಧಕಗಳೇ.

ಶ್ರೋತ್ರಿಯಸ್ಯ ಕದರ್ಯಸ್ಯ ವದಾನ್ಯಸ್ಯ ಚ ವಾರ್ಧುಷೇಃ ।
ಮೀಮಾಂಸಿತ್ವೋಭಯಂ ದೇವಾಃ ಸಮಮನ್ನಮಕಲ್ಪಯನ್ ॥೯॥

ಶುದ್ಧನಾದ ಶ್ರೋತ್ರಿಯನ ಲೋಭದಿಂದ ಕೂಡಿದ ಅನ್ನವು, ಬಡ್ಡಿಯಿಂದ ಜೀವಿಸುವ ಉದಾರಿಯ ಅನ್ನವು ಎರಡೂ ಸಮಾನವೆಂದು ದೇವತೆಗಳು ಹೇಳಿದ್ದಾರೆ. ಈ ಎರಡು ಅನ್ನಗಳಲ್ಲಿ ವ್ಯತ್ಯಾಸವಿರುವುದಿಲ್ಲ.

ಪ್ರಜಾಪತಿಸ್ತಾನುವಾಚ ವಿಷಮಂ ಕೃತಮಿತ್ಯುತ ।
ಶ್ರದ್ಧಾಪೂತಂ ವದಾನ್ಯಸ್ಯ ಹತಮಶ್ರದ್ಧಯೇತರತ್ ।
ಭೋಜ್ಯಮನ್ನಂ ವದಾನ್ಯಸ್ಯ ಕದರ್ಯಸ್ಯ ನ ವಾರ್ಹಥಃ ॥೧೦॥

ಹೀಗೆ ದೇವತೆಗಳು ಹೇಳಿದಾಗ ಪ್ರಜಾಪತಿ ದೇವತೆಗಳ ಅಭಿಪ್ರಾಯವನ್ನು ನಿರಾಕರಿಸುತ್ತಾನೆ. ದೇವತೆಗಳೇ, ನೀವು ವಿಪರೀತವಾಗಿ ತಿಳಿದಿದ್ದೀರಿ ಎಂದು ಬ್ರಹ್ಮನು ಹೇಳಿದನು. ದಾತನ ಅನ್ನಕ್ಕೆ ಶ್ರದ್ಧೆಯಿಂದಲೇ ಶುದ್ಧಿ. ಕೃಪಣನ ಅನ್ನವು ಅಶ್ರದ್ಧೆಯಿಂದಲೇ ಅಶುಚಿ ಎನಿಸುತ್ತದೆ. ಬಡ್ಡಿಯಿಂದ ಜೀವಿಸುವ ಉದಾರಿಯ ಅನ್ನವು ಗ್ರಾಹ್ಯವೇ ಆಗಿದೆ. ಲೋಭಿಯ ಅನ್ನವು ಅಭೋಜ್ಯವಾಗಿದೆ. ಶ್ರದ್ಧೆ ಇಲ್ಲದವನೊಬ್ಬನೇ ದೇವತೆಗಳಿಗೆ ಹವಿಸ್ಸುಗಳನ್ನು ಕೊಡಲು ಅರ್ಹನಾಗಿರುವುದಿಲ್ಲ. ಜಿಪುಣನೂ ಶ್ರದ್ಧೆಯಿಂದಲೇ ಪದಾರ್ಥವನ್ನು ಕೊಟ್ಟರೆ ಆ ಅನ್ನವು ಸ್ವೀಕಾರಾರ್ಹವಾಗಿದೆ. ಶ್ರದ್ಧೆಯೇ ಮುಖ್ಯವಾದುದು. ಶ್ರದ್ಧೆಯಿಂದಲೇ ಪದಾರ್ಥಗಳು ಕಾಲಾಂತರದಲ್ಲಿ ಶುಚಿತ್ವವನ್ನು ಹೊಂದಬಲ್ಲವು.

ಅಶ್ರದ್ದಧಾನ ಏವೈಕೋ ದೇವಾನಾಂ ನಾರ್ಹತೇ ಹವಿಃ ।
ತಸ್ಯೈವಾನ್ನಂ ನ ಭೋಕ್ತವ್ಯಮಿತಿ ಧರ್ಮವಿದೋ ವಿದುಃ ॥೧೧॥

ಅಶ್ರದ್ಧೆಯುಳ್ಳ ಪುರುಷನ ಹವಿಸ್ಸನ್ನು ದೇವತೆಗಳು ಸ್ವೀಕರಿಸರು. ಅಂತಹ ಅಶ್ರದ್ಧೆಯುಳ್ಳ ಪುರುಷನ ಅನ್ನವನ್ನೇ ತಿನ್ನಬಾರದೆಂದು ಧರ್ಮಜ್ಞಾನಿಗಳು ಹೇಳುತ್ತಾರೆ.

ಅಶ್ರದ್ಧಾ ಪರಮಂ ಪಾಪಂ ಶ್ರದ್ಧಾ ಪಾಪಪ್ರಮೋಚನೀ ।
ಜಹಾತಿ ಪಾಪಂ ಶ್ರದ್ಧಾವಾನ್ ಸರ್ಪೋ ಜೀರ್ಣಾಮಿವ ತ್ವಚಮ್ ॥೧೨॥

ಅಶ್ರದ್ಧೆಯೇ ಕ್ರೂರವಾದ ಪಾತಕವು. ಶ್ರದ್ಧೆಯು ಸರ್ವಪಾಪ ನಿವಾರಕವು. ಸರ್ಪವು ತನ್ನ ಪೊರೆಯನ್ನು ಹೇಗೆ ಕಳಚಿಕೊಳ್ಳುತ್ತದೋ ಹಾಗೆ ಶ್ರದ್ಧಾಳುವು ತನ್ನ ಪಾಪವನ್ನು ಪರಿಹರಿಸಿಕೊಳ್ಳಬಲ್ಲನು.

ಜ್ಯಾಯಸೀ ಯಾ ಪವಿತ್ರಾಣಾಂ ನಿವೃತ್ತಿಃ ಶ್ರದ್ಧಯಾ ಸಹ ।
ನಿವೃತ್ತಶೀಲದೋಷೋ ಯಃ ಶ್ರದ್ಧಾವಾನ್ ಪೂತ ಏವ ಸಃ ॥೧೩॥

ಯುಧಿಷ್ಠಿರನೇ, ಬಳಿಕ ಜಾಜಲಿಯು ಆ ಪಕ್ಷಿಗಳನ್ನು ಆಹ್ವಾನಿಸಿದನು. ಆ ಹಕ್ಕಿಗಳೆಲ್ಲವೂ ಧರ್ಮಶಾಸ್ತ್ರಗಳಿಂದ ಸಿದ್ಧವಾದ ಮಾತುಗಳನ್ನು ಉಚ್ಚರಿಸುತ್ತಿದ್ದವು.

ಅಹಿಂಸಾದಿಕೃತಂ ಕರ್ಮ ಇಹ ಚೈವ ಪರತ್ರ ಚ ।
ಶ್ರದ್ಧಾಂ ನಿಹಂತಿ ವೈ ಬ್ರಹ್ಮನ್ ಸಾ ಹತಾ ಹಂತಿ ತಂ ನರಮ್ ॥೬॥

ತಾನು ಅಹಿಂಸಾದಿ ಕರ್ಮಗಳನ್ನು ಮಾಡಿದ್ದರೂ ಅಹಂಕಾರದಿಂದ ಆ ಕರ್ಮಗಳನ್ನು ಮಾಡಿದಲ್ಲಿ ಅದು ಇಹ-ಪರಲೋಕಗಳಲ್ಲಿನ ಶ್ರದ್ಧೆಯನ್ನು ನಾಶಪಡಿಸುತ್ತದೆ. ತನಗಿಂತ ಉತ್ತಮರಾದವರಲ್ಲಿ ಶ್ರದ್ಧೆಯನ್ನು, ಭಕ್ತಿಯನ್ನು ತೋರಿಸಲು ಅಹಂಕಾರಾದಿಗಳಿಂದ ಮಾಡಿದ ಕರ್ಮವು ಬಿಡುವುದಿಲ್ಲ.

ಶ್ರದ್ಧಾವೃದ್ಧಂ ವಾಙ್ಮನಸೀ ನ ಯಜ್ಞಸ್ತ್ರಾತುಮರ್ಹತಿ ।
ಅತ್ರ ಗಾಥಾ ಬ್ರಹ್ಮಗೀತಾಃ ಕೀರ್ತಯಂತಿ ಪುರಾವಿದಃ ॥೭॥

ಶ್ರದ್ಧಾಲೋಪದಿಂದ ಕೆಟ್ಟುಹೋದ ಕರ್ಮವನ್ನು ಮನಸ್ಸಾಗಲಿ, ವಾಕ್ ಆಗಲಿ ರಕ್ಷಿಸಲಾರವು. ಇದೇ ವಿಷಯವಾಗಿ ಹಿಂದೆ ಹೇಳಿದ ಬ್ರಹ್ಮಗೀತೆಯಿಂದ ಕೆಲವು ಗಾಥೆಗಳನ್ನು ಹೇಳುತ್ತಾರೆ.

ಶುಚೇರಶ್ರದ್ದಧಾನಸ್ಯ ಶ್ರದ್ದಧಾನಸ್ಯ ಚಾಶುಚೇಃ ।
ದೇವಾಶ್ಚಿತ್ತಮಮನ್ಯಂತ ಸದೃಶಂ ಯಜ್ಞಕರ್ಮಣಿ ॥೮॥

ಶುಚಿತ್ವವಿದ್ದು ಶ್ರದ್ಧೆಯಿಲ್ಲದವನ ದ್ರವ್ಯಗಳು, ಶ್ರದ್ಧೆಯಿದ್ದು ಶುಚಿತ್ವವಿಲ್ಲದವನ ದ್ರವ್ಯಗಳು ಇವೆರಡು ಸಮಾನವೆಂದು ದೇವತೆಗಳು ಭಾವಿಸಿದ್ದಾರೆ. ಯಜ್ಞ ಕರ್ಮಗಳಿಗೆ ಈ ಎರಡೂ ಪ್ರತಿಬಂಧಕಗಳೇ.

ಶ್ರೋತ್ರಿಯಸ್ಯ ಕದರ್ಯಸ್ಯ ವದಾನ್ಯಸ್ಯ ಚ ವಾರ್ಧುಷೇಃ ।
ಮೀಮಾಂಸಿತ್ವೋಭಯಂ ದೇವಾಃ ಸಮಮನ್ನಮಕಲ್ಪಯನ್ ॥೯॥

ಶುದ್ಧನಾದ ಶ್ರೋತ್ರಿಯನ ಲೋಭದಿಂದ ಕೂಡಿದ ಅನ್ನವು, ಬಡ್ಡಿಯಿಂದ ಜೀವಿಸುವ ಉದಾರಿಯ ಅನ್ನವು ಎರಡೂ ಸಮಾನವೆಂದು ದೇವತೆಗಳು ಹೇಳಿದ್ದಾರೆ. ಈ ಎರಡು ಅನ್ನಗಳಲ್ಲಿ ವ್ಯತ್ಯಾಸವಿರುವುದಿಲ್ಲ.

ಪ್ರಜಾಪತಿಸ್ತಾನುವಾಚ ವಿಷಮಂ ಕೃತಮಿತ್ಯುತ ।
ಶ್ರದ್ಧಾಪೂತಂ ವದಾನ್ಯಸ್ಯ ಹತಮಶ್ರದ್ಧಯೇತರತ್ ।
ಭೋಜ್ಯಮನ್ನಂ ವದಾನ್ಯಸ್ಯ ಕದರ್ಯಸ್ಯ ನ ವಾರ್ಹತಿಃ ॥೧೦॥

ಹೀಗೆ ದೇವತೆಗಳು ಹೇಳಿದಾಗ ಪ್ರಜಾಪತಿ ದೇವತೆಗಳ ಅಭಿಪ್ರಾಯವನ್ನು ನಿರಾಕರಿಸುತ್ತಾನೆ. ದೇವತೆಗಳೇ, ನೀವು ವಿಪರೀತವಾಗಿ ತಿಳಿದಿದ್ದೀರಿ ಎಂದು ಬ್ರಹ್ಮನು ಹೇಳಿದನು. ದಾತನ ಅನ್ನಕ್ಕೆ ಶ್ರದ್ಧೆಯಿಂದಲೇ ಶುದ್ಧಿ. ಕೃಪಣನ ಅನ್ನವು ಅಶ್ರದ್ಧೆಯಿಂದಲೇ ಅಶುಚಿ ಎನಿಸುತ್ತದೆ. ಬಡ್ಡಿಯಿಂದ ಜೀವಿಸುವ ಉದಾರಿಯ ಅನ್ನವು ಗ್ರಾಹ್ಯವೇ ಆಗಿದೆ. ಲೋಭಿಯ ಅನ್ನವು ಅಭೋಜ್ಯವಾಗಿದೆ. ಶ್ರದ್ಧೆ ಇಲ್ಲದವನೊಬ್ಬನೇ ದೇವತೆಗಳಿಗೆ ಹವಿಸ್ಸುಗಳನ್ನು ಕೊಡಲು ಅರ್ಹನಾಗಿರುವುದಿಲ್ಲ. ಜಿಪುಣನೂ ಶ್ರದ್ಧೆಯಿಂದಲೇ ಪದಾರ್ಥವನ್ನು ಕೊಟ್ಟರೆ ಆ ಅನ್ನವು ಸ್ವೀಕಾರಾರ್ಹವಾಗಿದೆ. ಶ್ರದ್ಧೆಯೇ ಮುಖ್ಯವಾದುದು. ಶ್ರದ್ಧೆಯಿಂದಲೇ ಪದಾರ್ಥಗಳು ಕಾಲಾಂತರದಲ್ಲಿ ಶುಚಿತ್ವವನ್ನು ಹೊಂದಬಲ್ಲವು.

ಅಶ್ರದ್ದಧಾನ ಏವೈಕೋ ದೇವಾನಾಂ ನಾರ್ಹತೇ ಹವಿಃ ।
ತಸ್ಯೈವಾನ್ನಂ ನ ಭೋಕ್ತವ್ಯಮಿತಿ ಧರ್ಮವಿದೋ ವಿದುಃ ॥೧೧॥

ಅಶ್ರದ್ಧೆಯುಳ್ಳ ಪುರುಷನ ಹವಿಸ್ಸನ್ನು ದೇವತೆಗಳು ಸ್ವೀಕರಿಸರು. ಅಂತಹ ಅಶ್ರದ್ಧೆಯುಳ್ಳ ಪುರುಷನ ಅನ್ನವನ್ನೇ ತಿನ್ನಬಾರದೆಂದು ಧರ್ಮಜ್ಞಾನಿಗಳು ಹೇಳುತ್ತಾರೆ.

ಅಶ್ರದ್ಧಾ ಪರಮಂ ಪಾಪಂ ಶ್ರದ್ಧಾ ಪಾಪಪ್ರಮೋಚನೀ ।
ಜಹಾತಿ ಪಾಪಂ ಶ್ರದ್ಧಾವಾನ್ ಸರ್ಪೋ ಜೀರ್ಣಾಮಿವ ತ್ವಚಮ್ ॥೧೨॥

ಅಶ್ರದ್ಧೆಯೇ ಕ್ರೂರವಾದ ಪಾತಕವು. ಶ್ರದ್ಧೆಯು ಸರ್ವಪಾಪ ನಿವಾರಕವು. ಸರ್ಪವು ತನ್ನ ಪೊರೆಯನ್ನು ಹೇಗೆ ಕಳಚಿಕೊಳ್ಳುತ್ತದೋ ಹಾಗೆ ಶ್ರದ್ಧಾಳುವು ತನ್ನ ಪಾಪವನ್ನು ಪರಿಹರಿಸಿಕೊಳ್ಳಬಲ್ಲನು.

ಜ್ಯಾಯಸೀ ಯಾ ಪವಿತ್ರಾಣಾಂ ನಿವೃತ್ತಿಃ ಶ್ರದ್ಧಯಾ ಸಹ ।
ನಿವೃತ್ತಶೀಲದೋಷೋ ಯಃ ಶ್ರದ್ಧಾವಾನ್ ಪೂತ ಏವ ಸಃ ॥೧೩॥

ಶ್ರದ್ಧೆಯಿಂದ ಕೂಡಿರುವ ನಿವೃತ್ತಿ ಮಾರ್ಗವು ಪವಿತ್ರವಾದ ಮಾರ್ಗಗಳಲ್ಲಿಯೂ ಪವಿತ್ರ ಎನಿಸಿದೆ. ಆಸೆ ಎಂಬ ದೋಷದಿಂದ ನಿವೃತ್ತನಾದ ಶ್ರದ್ಧಾವಂತನು ಪವಿತ್ರಾತ್ಮನೆಂದೇ ನಿರ್ಣಯವು.

ಕಿಂ ತಸ್ಯ ತಪಸಾ ಕಾರ್ಯಂ ಕಿಂ ವೃತ್ತೇನ ಕಿಮಾತ್ಮನಾ ।
ಶ್ರದ್ಧಾಮಯೋಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ ॥೧೪॥

ತಪಸ್ಸು, ಶೀಲ, ಮನಸ್ಸಿನ ಸಂಯಮ ಇವುಗಳು ಎಲ್ಲವೂ ಇದ್ದರೂ ಶ್ರದ್ಧೆ ಇಲ್ಲದಿದ್ದಲ್ಲಿ ವ್ಯರ್ಥವು. ಶ್ರದ್ಧೆ ಉಳ್ಳವನಾಗಿದ್ದಲ್ಲಿ ಆ ಶ್ರದ್ಧಾವಂತ ಪುರುಷನು ಆ ಜೀವನ ಸ್ವಭಾವವನ್ನು ತಿಳಿಸುತ್ತದೆ. ಕಾರಣ ಚೇತನನು ಶ್ರದ್ಧಾಸ್ವರೂಪನೇ ಆಗಿದ್ದಾನೆ. ಶ್ರದ್ಧೆ ಇಲ್ಲದೆ ಮಾಡಿದ ತಪಸ್ಸು ಮುಂತಾದವುಗಳೆಲ್ಲವೂ ವ್ಯರ್ಥವೇ ಸರಿ.

ಇತಿ ಧರ್ಮಃ ಸಮಾಖ್ಯಾತಃ ಸದ್ಭಿರ್ಧರ್ಮಾರ್ಥದರ್ಶಿಭಿಃ ।
ವಯಂ ಜಿಜ್ಞಾಸಮಾನಾಸ್ತ್ವಾ ಸಂಪ್ರಾಪ್ತಾ ಧರ್ಮದರ್ಶನಾತ್ ॥೧೫॥

ಹೀಗೆ ಸತ್ಪುರುಷರು ಧರ್ಮವನ್ನು ವ್ಯಾಖ್ಯಾನಿಸಿದ್ದಾರೆ. ನಾವೂ ಈ ಧರ್ಮದ ವಿಷಯದಲ್ಲಿ ಜಿಜ್ಞಾಸೆ ಮಾಡುತ್ತಿದ್ದಾಗ, ಶ್ರದ್ಧೆಯ ಸಂಬಂಧವಾದ ಈ ಧರ್ಮವನ್ನು ಧರ್ಮದರ್ಶನವುಳ್ಳ ಮುನಿಯಿಂದ ತಿಳಿದುಕೊಂಡಿದ್ದೇವೆ.

ಶ್ರದ್ಧಾಂ ಕುರು ಮಹಾಪ್ರಾಜ್ಞ ತತಃ ಪ್ರಾಪ್ಸ್ಯಸಿ ಯತ್ ಪರಮ್ ।
ಕಸ್ಮಿನ್ನೇವಾನುತೀರ್ಥೇನ ಪಶವಃ ಪ್ರಾಪ್ನುಯುಃ ಸುಖಮ್ ।
ಪತ್ನೀವ್ರತೇನ ವಿಧಿನಾ ಪ್ರಕರೋತಿ ನಿಯೋಜನಮ್ ॥೧೬॥

ಶ್ರದ್ಧಾವಾನ್ ಶ್ರದ್ದಧಾನಶ್ಚ ಧರ್ಮಾಂಶ್ಚೈವೇಹ ವಾಣಿಜ ।
ಸ್ವರ್ಗಮಿ ಸ್ಥಿತಶ್ಚೈವ ಗರೀಯಾನೇಷ ಜಾಜಲೇ ॥೧೭॥

ಜಾಜಲಿಯೇ, ನೀನು ಶ್ರದ್ಧಾವಂತನಾಗು. ದೊಡ್ಡವರಲ್ಲಿ, ಪೂಜ್ಯವಾದ ವಿಷಯಗಳಲ್ಲಿ ಶ್ರದ್ಧೆಯನ್ನು ಹೊಂದು. ಆ ಶ್ರದ್ಧೆಯಿಂದಲೇ ಭಗವಂತನನ್ನು ಹೊಂದುತ್ತಿ. ಯಾವ ಆಶ್ರಮದಲ್ಲಿ ಅನುಕೂಲ ಶಾಸ್ತ್ರದಿಂದ ಪತ್ನಿವ್ರತ ವಿಧಿಯಿಂದಲೂ ಸ್ವಯಂ ಶ್ರದ್ಧೆಯುಳ್ಳವನಾಗಿ, ಧರ್ಮದಲ್ಲಿಯೂ ಶ್ರದ್ಧೆಯುಳ್ಳವನಾಗಿ ಸುಖವನ್ನು, ಪಶು ಸಮೃದ್ಧಿಯನ್ನು ಹೇಗೆ ಹೊಂದುತ್ತಾರೆ ಎಂದರೆ ಜಾಜಲಿಯೇ, ಶ್ರದ್ಧಾವಂತನು

ಶ್ರದ್ಧೆಯನ್ನೇ ನಿಷ್ಠೆಯಿಂದ ಧರಿಸಿದವನು ಆಗಿರುತ್ತಾನೆ. ಶ್ರದ್ಧೆ, ಧರ್ಮಗಳು ಒಂದಕ್ಕೊಂದು ಪೂರಕವಾಗಿವೆ. ಯಾವನು ಶ್ರದ್ಧಾಪೂರ್ವಕನಾಗಿ ಸ್ವಧರ್ಮದಲ್ಲಿ ನಿರತನಾಗಿರುತ್ತಾನೋ ಅವನು ಎಲ್ಲರಿಗಿಂತ ಶ್ರೇಷ್ಠನೆನಿಸುತ್ತಾನೆ.

ಏವಂ ಬಹುಮತಾರ್ಥಂ ಚ ತುಲಾಧಾರೇಣ ಭಾಷಿತಮ್ ।
ಸಮ್ಯಕ್ಚೈವಮುಪಾಲಬ್ಧೋ ಧರ್ಮಶ್ಚೋಕ್ತಃ ಸನಾತನಃ ॥೧೮॥

ಹೀಗೆ ಬಹುವಿಧವಾದ ಅರ್ಥಗಳಿಂದ ತುಂಬಿದ, ತುಲಾಧಾರನಿಂದ ಹೇಳಲ್ಪಟ್ಟ ಮಾತುಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಜಾಜಲಿಯು ಆ ಧರ್ಮವನ್ನು ಸ್ವೀಕರಿಸಿದನು. ಇಂತಹ ಸನಾತನವಾದ ಧರ್ಮವು ತುಲಾಧಾರನಿಂದ ಹೇಳಲ್ಪಟ್ಟಿತು.

ತಸ್ಯ ವಿಖ್ಯಾತವೀರ್ಯಸ್ಯ ಶ್ರುತ್ವಾ ವಾಕ್ಯಾನಿ ಸ ದ್ವಿಜಃ ।
ತುಲಾಧಾರಸ್ಯ ಕೌಂತೇಯ ಶಾಂತಿಮೇವಾನ್ವಪದ್ಯತ ॥೧೯॥

ಆ ಬ್ರಾಹ್ಮಣನು ವಿಖ್ಯಾತನಾದ, ಪ್ರಭಾವಶಾಲಿಯಾದ ತುಲಾಧಾರನ ಮಾತುಗಳನ್ನು ಕೇಳಿಸಿಕೊಂಡು ತನ್ನ ಮನಸ್ಸಿನಲ್ಲಿ ಶಾಂತಿಯನ್ನೇ ಹೊಂದಿದನು.

ತತೋಽಚಿರೇಣ ಕಾಲೇನ ತುಲಾಧಾರಃ ಸ ಏವ ಚ ।
ದಿವಂ ಗತ್ವಾ ಮಹಾಪ್ರಾಜ್ಞೌ ವಿಹರೇತಾಂ ಯಥಾಸುಖಮ್ ।
ಸ್ವಂ ಸ್ವಂ ಸ್ಥಾನಮುಪಾಗಮ್ಯ ಸ್ವಕರ್ಮಫಲನಿರ್ಜಿತಮ್ ॥೨೦॥

ಬಳಿಕ ತುಲಾಧಾರನು ಸ್ವಲ್ಪ ಸಮಯದಲ್ಲಿಯೇ ಸ್ವರ್ಗಕ್ಕೆ ಹೋದನು. ಅದೇ ಸ್ಥಳವನ್ನು ಜಾಜಲಿಯೂ ಹೊಂದಿದನು. ಇಬ್ಬರೂ ಮಹಾಪ್ರಾಜ್ಞರಾಗಿ ಸುಖವನ್ನು ಹೊಂದಿದರು. ತಮ್ಮ ತಮ್ಮ ಕರ್ಮಫಲದಿಂದ ಸಂಪಾದಿಸಲ್ಪಟ್ಟ ತಮ್ಮ ತಮ್ಮ ಸ್ಥಾನವನ್ನು ಹೊಂದಿ ಸುಖವನ್ನು ಪಡೆದರು.

ಸಮಾನಾಂ ಶ್ರದ್ದಧಾನಾನಾಂ ಸಂಯತಾನಾಂ ಸುಚೇತಸಾಮ್ ।
ಕುರ್ವತಾಂ ಯಜ್ಞ ಇತ್ಯೇವ ನ ಯಜ್ಞೋ ಜಾತು ನೇಷ್ಯತೇ ॥೨೧॥

ಯಾರಿಗೆ ಲಾಭಾಲಾಭಗಳು ಸಮಾನವಾಗಿದೆಯೋ, ಯಾರು ಶ್ರದ್ಧಾಳುಗಳಾಗಿದ್ದರೋ, ಜಿತೇಂದ್ರಿಯರಾಗಿದ್ದಾರೋ, ಶುದ್ಧಚಿತ್ತರಾಗಿದ್ದಾರೋ,

ಯಾಗವನ್ನು ಕೀರ್ತಿಯ ಆಸೆಯಿಲ್ಲದ ಕರ್ತವ್ಯ ಎಂಬ ದೃಷ್ಟಿಯಿಂದ ಮಾಡುತ್ತಾರೋ, ಶ್ರದ್ಧೆಯ ಕಾರಣದಿಂದಲೇ ಮಾಡಿದ ಯಜ್ಞವು ಎಂದೂ ನಿಷ್ಫಲವಾಗುವುದಿಲ್ಲ.

ಶ್ರದ್ಧಾ ವೈ ಸಾತ್ತ್ವಿಕೀ ದೇವೀ ಸೂರ್ಯಸ್ಯ ದುಹಿತಾ ನೃಪ ।
ಸಾವಿತ್ರೀ ಪ್ರಸವಿತ್ರೀ ಚ ಜೀವವಿಶ್ವಾಸಿನೀ ತಥಾ ॥೨೨॥

ಶ್ರದ್ಧೆಯು ಸಾತ್ತ್ವಿಕಿ ಎನಿಸಿದ್ದಾಳೆ. ಸೂರ್ಯನ ಮಗಳಾಗಿದ್ದಾಳೆ. ಸಾವಿತ್ರೀ, ಪ್ರಸವಿತ್ರೀ, ಜೀವವಿಶ್ವಾಸಿನಿ ಎಂದು ಶ್ರದ್ಧೆಯನ್ನು ಕರೆಯುತ್ತಾರೆ.

ವಾಗ್ಘ್ರದ್ಧಂ ತ್ರಾಯತೇ ಶ್ರದ್ಧಾ ಮನೋವೃದ್ಧಂ ಚ ಭಾರತ ।
ಯಥೌಪಮ್ಯೋಪದೇಶೇನ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೩॥

ಮಾತಿನ ಉಚ್ಚಾರಣೆಯಲ್ಲಿ ತಪ್ಪಾದದ್ದನ್ನು, ವಿದ್ಯೆಯಲ್ಲಿ ತಪ್ಪಾದದ್ದನ್ನು, ಮನಸ್ಸಿನಲ್ಲಿ ತಪ್ಪಾದದ್ದನ್ನು ಶ್ರದ್ಧೆಯು ಸರಿ ಮಾಡುತ್ತದೆ. ಈ ಎಲ್ಲ ದೋಷಗಳನ್ನು ಪರಿಹರಿಸುವುದು ಭಗವದ್ಭಕ್ತಿ ಎಂಬ ಶ್ರದ್ಧೆಯೇ ಆಗಿದೆ. ಧರ್ಮರಾಜನೇ, ನಿನಗೆ ತುಲಾಧಾರನು ಮಾಡಿದ ಉಪದೇಶವನ್ನು ದೃಷ್ಟಾಂತ ರೂಪವಾಗಿ ಹೇಳಿದ್ದೇನೆ. ನಿನ್ನ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಪುನಃ ನನ್ನಿಂದ ಬೇರೆ ಯಾವ ವಿಷಯವನ್ನು ಕೇಳಲು ಬಯಸುತ್ತಿ ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

॥ ತುಲಾಧಾರಜಾಜಲಿ ಸಂವಾದಃ ಸಮಾಪ್ತಃ ॥

★ ★ ★ ★ ★

ನೂರನೆಯ ಅಧ್ಯಾಯ

ವಿಚಖ್ನು ರಾಜನಿಂದ ಅಹಿಂಸಾಧರ್ಮದ ಪ್ರಶಂಸೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪ್ರಜಾನಾಮನುಕಂಪಾರ್ಥಂ ಗೀತಂ ರಾಜ್ಞಾ ವಿಚಖ್ನುನಾ ॥೧॥

ಯುಧಿಷ್ಠಿರನೇ, ಪ್ರಾಣಿದಯಾಪರನಾಗಿರಬೇಕು ಎಂಬ ವಿಷಯದಲ್ಲಿ ವಿಚಖ್ನು ರಾಜನು ಪ್ರಜೆಗಳ ಮೇಲಿನ ಅನುಕಂಪದಿಂದ ಹೇಳಿದ, ಪುರಾತನ ಇತಿಹಾಸ ರೂಪವಾದ ಗೀತೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೆ ಹೇಳುತ್ತೇನೆ.

ಛಿನ್ನಸ್ಥೂಣಂ ವೃಷಂ ದೃಷ್ಟ್ವಾ ವಿರಾವಂ ಚ ಗವಾಂ ಭೃಶಮ್ ।
ಗೋಗ್ರಹೇ ಯಜ್ಞವಾಟಸ್ಯ ಪ್ರೇಕ್ಷಮಾಣಃ ಸ ಪಾರ್ಥಿವಃ ॥೨॥

ಸ್ವಸ್ತಿ ಗೋಭ್ಯೋಽಸ್ತು ಲೋಕೇಷು ತತೋ ನಿರ್ವಚನಂ ಕೃತಮ್ ।
ಹಿಂಸಾಯಾಂ ಹಿ ಪ್ರವತ್ತಾಯಾಮಾಶೀರೇಷಾನುಕಲ್ಪಿತಾ ॥೩॥

ಗವಾಲಂಬನ ಯಜ್ಞದ ಸಮಯದಲ್ಲಿ ಕತ್ತರಿಸಲ್ಪಟ್ಟ ಶೃಂಗಗಳುಳ್ಳ ಹೋರಿಯನ್ನು ನೋಡಿ, ಎಲ್ಲ ಯಜ್ಞಶಾಲೆಯಲ್ಲಿದ್ದ ಹಸುಗಳು ಜೋರಾಗಿ ವಿಲಪಿಸುತ್ತಿದ್ದುದನ್ನು ವಿಚಖ್ನು ಎಂಬ ರಾಜನು ಒಮ್ಮೆ ನೋಡಿದನು. ಆ ಯಜ್ಞವಾಟದಲ್ಲಿ ಗೋವುಗಳೆಲ್ಲವೂ ಕಿರುಚುತ್ತಿದ್ದುದನ್ನು ನೋಡಿದ ರಾಜನು ಲೋಕದಲ್ಲಿರುವ ಗೋವುಗಳಿಗೆಲ್ಲ ಮಂಗಳವಾಗಲಿ ಎಂದು ಕೂಗಿ ಹೇಳಿದನು. ಈ ವಿಚಖ್ನು ಎಂಬ ರಾಜನ ಮಾತು ಹಿಂಸೆಯಲ್ಲಿ ಪ್ರವೃತ್ತಿಯನ್ನು ಹೊಂದುವವರಿಗೆಲ್ಲ ಮಾರ್ಗದರ್ಶನ ಮಾಡುವ ಮಾತಾಗಿ ಪ್ರಸಿದ್ಧಿ ಹೊಂದಿತು.

ಅವ್ಯವಸ್ಥಿತಮರ್ಯಾದೈರ್ವಿಮೂಢೈರ್ನಾಸ್ತಿಕೈರ್ನರೈಃ ।
ಸಂಶಯಾತ್ಮಭಿರವ್ಯಕ್ತೈರ್ಹಿಂಸಾ ಸಮನುಕೀರ್ತಿತಾ ॥೪॥

ಯಾರು ಧರ್ಮಮರ್ಯಾದೆಯನ್ನು ಮೀರಿ ಹೋಗುತ್ತಾರೋ ಅಂತಹ ಮೂರ್ಖರು, ನಾಸ್ತಿಕರು, ಸಂಶಯದಿಂದ ಕೂಡಿದ ಮನಸ್ಸುಳ್ಳವರು, ಅಪ್ರಸಿದ್ಧರು ಅಂತಹವರು ಮಾತ್ರವೇ ಹಿಂಸೆಯನ್ನು ಸಮರ್ಥಿಸುತ್ತಾರೆ.

ಸರ್ವಕರ್ಮಸ್ವಹಿಂಸಾ ಹಿ ಧರ್ಮಾತ್ಮಾ ಮನುರಬ್ರವೀತ್ ।
ಕಾಮರಾಗಾದ್ ವಿಹಿಂಸಂತಿ ಬಹಿರ್ವೇದ್ಯಾಂ ಪಶೂನ್ನರಾಃ ॥೫॥

ಧರ್ಮಾತ್ಮನಾದ ಮನುವು ಎಲ್ಲ ಕರ್ಮಗಳಲ್ಲಿಯೂ ಅಹಿಂಸೆಯನ್ನೇ ಪ್ರತಿಪಾದಿಸಿದ್ದಾನೆ. ಮನುಷ್ಯರು ಕಾಮರಾಗಗಳಿಗೆ ತುತ್ತಾಗಿ, ತಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಯಜ್ಞದ ಬಹಿರ್ವೇದಿಗಳಲ್ಲಿ ಪಶುಗಳನ್ನು ಹಿಂಸಿಸುತ್ತಾರೆ.

ತಸ್ಮಾತ್ ಪ್ರಮಾಣತಃ ಕಾರ್ಯೋ ಧರ್ಮಃ ಸೂಕ್ಷ್ಮೋ ವಿಜಾನತಾ ।
ಅಹಿಂಸೈವ ಹಿ ಸರ್ವೇಭ್ಯೋ ಧರ್ಮೇಭ್ಯೋ ಜ್ಯಾಯಸೀ ಮತಾ ॥೬॥

ಆದ್ದರಿಂದ ವೈದಿಕ ಪ್ರಮಾಣಗಳಿಂದ ಧರ್ಮಸೂಕ್ಷ್ಮವನ್ನು ಚೆನ್ನಾಗಿ ತಿಳಿದು ನಿರ್ಣಯಿಸಬೇಕು. ಸಮಸ್ತ ಧರ್ಮಗಳಿಗಿಂತಲೂ ಶ್ರೇಷ್ಠವಾದುದು ಅಹಿಂಸಾ ಧರ್ಮವೇ ಎಂಬುದು ನಿರ್ಣಯವಾಗಿದೆ.

ಉಪೋಷ್ಯ ಸಂಶ್ರಿತೋ ಭೂತ್ವಾ ಹಿತ್ವಾ ವೇದಕೃತಾಂ ಶುಚಿಃ ।
ಆಚಾರ ಇತ್ಯನಾಚಾರಾಃ ಕೃಪಣಾಃ ಫಲಹೇತವಃ ॥೭॥

ಕೆಲವರು ಉಪವಾಸದಲ್ಲಿ ನಿಯಮ, ವ್ರತಾನುಷ್ಠಾನಗಳಿಂದ ಇದ್ದು, ವೇದದಲ್ಲಿ ಹೇಳಿದ ಸೂಕ್ಷ್ಮಾರ್ಥವನ್ನು ತೊರೆದು, ಶುಚಿಯಾದ ಆಚಾರವೇ ಇದೆ ಎಂದು ತಿಳಿದು ಅನಾಚಾರಿಗಳಾಗಿ, ಕಾಮ್ಯಫಲಗಳನ್ನು ಬಯಸುವವರಾಗಿ ಕೃಪಣ ಬುದ್ಧಿಯಿಂದ ಪ್ರವರ್ತಿಸುತ್ತಾರೆ.

ಯದಿ ಛಿಂದಂತಿ ವೃಕ್ಷಾಂಶ್ಚ ಯೂಪಾಂಶ್ಚೋದ್ದಿಶ್ಯ ಮಾನವಾಃ ।
ವೃಥಾ ಮಾಂಸಾನಿ ಖಾದಂತಿ ನೈಷ ಧರ್ಮಃ ಪ್ರಶಂಸ್ಯತೇ ॥೮॥

ಮನುಷ್ಯರು ಹೆಸರಿಗೆ ಯಜ್ಞದ ಯೂಪ ಎಂದು ಹೇಳಿಕೊಂಡು ವೃಕ್ಷಗಳನ್ನು ಯಜ್ಞದ ಯೂಪಕ್ಕಾಗಿ ಎಂದು ಹೇಳುತ್ತಾ ತುಂಡರಿಸುತ್ತಾರೆ. ವ್ಯರ್ಥವಾಗಿ ಪಶುವಧೆಗಳನ್ನು ಮಾಡಿ ಮಾಂಸವನ್ನು ತಿನ್ನುತ್ತಾರೆ. ಈ ಧರ್ಮವು ಯಾವತ್ತೂ ಪ್ರಶಸ್ತವಾದುದಲ್ಲ.

ಮಾಂಸಂ ಮಧು ಸುರಾ ಮತ್ಸ್ಯಾ ಆಸವಂ ಕೃಸರೋದನಮ್ ।
ಧೂರ್ತೈಃ ಪ್ರವರ್ತಿತಂ ಹ್ಯೇತನ್ನೈತದ್ವೇದೇಷು ಕಲ್ಪಿತಮ್ ॥೯॥

ಮಾಂಸ, ಮಧು, ಸುರೆ, ಮೀನು, ಮದ್ಯ, ಎಳ್ಳನ್ನ, (ಸೂಪ, ತಿಲ, ಹೆಸರುಬೇಳೆ ಮೊದಲಾದವುಗಳಿಂದ ಕೂಡಿದ ಅನ್ನಕ್ಕೆ ಕೃಸರೋದನ ಎಂದು ಹೆಸರು). ಇಂತಹ ಪದಾರ್ಥಗಳಿಂದ ಧೂರ್ತರಾದವರು ಯಜ್ಞದ ಸಂಭಾರಗಳೆಂದು ಸಿದ್ಧತೆಗಳನ್ನು ಮಾಡಿಕೊಂಡು ಬಳಿಕ ಅದನ್ನು ಸೇವಿಸುತ್ತಾರೆ. ಆದರೆ ವೇದಗಳಲ್ಲಿ ಇವುಗಳನ್ನು ವಿಧಿಸಿರುವುದಿಲ್ಲ. ಇದು ಅವರ ಕಲ್ಪನೆ ಮಾತ್ರವಾಗಿದೆ.

ಕಾಮಾನ್ಮೋಹಾಚ್ಚ ಲೋಭಾಚ್ಚ ಲೌಲ್ಯಮೇತತ್ ಪ್ರವರ್ತಿತಮ್ ।
ವಿಷ್ಣುಮೇವಾಭಿಜಾನಂತಿ ಸರ್ವಯಜ್ಞೇಷು ಬ್ರಾಹ್ಮಣಾಃ ।
ಪಾಯಸೈಃ ಸುಮನೋಭಿಶ್ಚ ತಸ್ಯಾಪಿ ಯಜನಂ ಸ್ಮೃತಮ್ ॥೧೦॥

ಧೂರ್ತರಾದವರು ಕಾಮ, ಮೋಹ, ಲೋಭ, ಚಾಪಲ್ಯಗಳಿಗೆ ಸಿಲುಕಿ ಇಂತಹ ನಿಷಿದ್ಧವಾದ ಪದಾರ್ಥಗಳನ್ನು ಸೇವಿಸುತ್ತಾರೆ. ಬ್ರಾಹ್ಮಣರು ಎಲ್ಲ ಯಜ್ಞಗಳಲ್ಲಿಯೂ ವಿಷ್ಣುವನ್ನೇ ಪರದೈವವೆಂದು ಆರಾಧಿಸುತ್ತಾರೆ. ಪಾಯಸಗಳಿಂದಲೂ, ಮನೋಹರವಾದ ಪುಷ್ಪಗಳಿಂದಲೂ ಭಗವಂತನನ್ನು ಪೂಜಿಸಬೇಕು ಎಂದು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿದೆ.

ಯಜ್ಞಿಯಾಶ್ಚೈವ ಯೇ ವೃಕ್ಷಾ ವೇದೇಷು ಪರಿಕಲ್ಪಿತಾಃ ।
ಯಚ್ಚಾಪಿ ಕಿಂಚಿತ್ ಕರ್ತವ್ಯಮನ್ಯಚ್ಚೋಕ್ಷೈಃ ಸುಸಂಸ್ಕೃತಮ್ ।
ಮಹಾಸತ್ತ್ವೈಃ ಶುದ್ಧಭಾವೈಃ ಸರ್ವಂ ದೇವಾರ್ಹಮೇವ ತತ್ ॥೧೧॥

ಯಜ್ಞಕ್ಕೆ ಸಂಬಂಧಿಸಿದ, ವೇದವಿಹಿತವಾದ ಯಾವ ವೃಕ್ಷಗಳು ಇದ್ದಾವೆಯೋ ಅವುಗಳನ್ನು ಯಜ್ಞಕಾರ್ಯದಲ್ಲಿ ಉಪಯೋಗಿಸಬೇಕು. ಅದರ ಜೊತೆಗೆ ಬೇರೆ ಏನನ್ನೂ ಹೋಮದ್ರವ್ಯವನ್ನಾಗಿ ಉಪಯೋಗಿಸುವುದಿದ್ದಲ್ಲಿಯೂ ಭೂರ್ಭುವಃ ಸ್ವಃ ಎಂಬ ಮಂತ್ರದಿಂದ ಪ್ರೋಕ್ಷಿಸಿ, ಆ ವಸ್ತುವನ್ನು ಪವಿತ್ರವನ್ನಾಗಿ ಮಾಡಿಕೊಂಡು, ಸಾತ್ವಿಕನಾದ ವ್ಯಕ್ತಿಯು ಶುದ್ಧವಾದ ಭಾವದಿಂದ ಎಲ್ಲವೂ ದೇವರ ಪೂಜೆಗೆ ಯೋಗ್ಯವಾದುದೆಂದು ಸಮರ್ಪಿಸಬೇಕು.

ಯುಧಿಷ್ಠಿರಃ

ಶರೀರಮಾಪದಶ್ಚಾಪಿ ವಿವದಂತಿ ಅಹಿಂಸತಃ ।
ಕಥಂ ಯಾತ್ರಾ ಶರೀರಸ್ಯ ನಿರಾರಂಭಸ್ಯ ಸೇತ್ಸ್ಯತಿ ॥೧೨॥

ಪಿತಾಮಹನೇ, ಹಿಂಸೆ ಮಾಡದಿರುವ ಪುರುಷನ ಶರೀರವನ್ನು ಆಪತ್ತುಗಳು, ಪರಸ್ಪರ ವಿವಾದ ಮಾಡುತ್ತವೆ. ಆಪತ್ತುಗಳಿಗೆ ಬರಬೇಡಿರಿ ಎಂದು ಶರೀರವು ಹೇಳುತ್ತದೆ. ಕ್ಷುಧಾದಿ ಆಪತ್ತುಗಳು ಬರುತ್ತೇವೆಂದು ಹೇಳುತ್ತವೆ. ಪ್ರವೃತ್ತಿಯೇ ಇಲ್ಲದೆ ಶರೀರ ಯಾತ್ರೆಯು ಸಿದ್ಧಿಸುವುದು ಹೇಗೆ? ಶರೀರವು ಮುಂದುವರೆಯ- ಬೇಕಾದರೆ ಅದಕ್ಕೆ ಬೇಕಾದ ಆಹಾರಕ್ಕೆ ಒಂದು ವೃತ್ತಿಯನ್ನು ಕಲ್ಪಿಸಿಕೊಳ್ಳಲೇಬೇಕಲ್ಲವೆ?

ಭೀಷ್ಮಃ

ಯಥಾ ಶರೀರಂ ನ ಗ್ಲಾಯೇನ್ನೇಯಾನ್ಮೃತ್ಯುವಶಂ ಯಥಾ ।
ತಥಾ ಕರ್ಮಸು ವರ್ತೇತ ಸಮರ್ಥೋ ಧರ್ಮಮಾಚರೇತ್ ॥೧೩॥

ಧರ್ಮಪುತ್ರನೇ, ಶರೀರವನ್ನು ಪೀಡಿಸದೆ ಅಧರ್ಮವನ್ನು ಮಾಡಿ ಮೃತ್ಯುವಿಗೂ ಈಡಾಗದೆ ಇರುವಂತೆ ಯೋಗ್ಯವಾದ ಕರ್ಮಗಳನ್ನು ಆಚರಿಸಬೇಕು. ಯೋಗ್ಯವಾದ ಧರ್ಮವನ್ನು ಆಚರಿಸುವವನೇ ಸಮರ್ಥನು ಎನಿಸುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ವಿಚಖ್ನಿಗೀತಾಸು ಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ಭೀಷ್ಮರಿಂದ ಯುಧಿಷ್ಠಿರನಿಗೆ ಚಿರಕಾರಿ ಉಪಾಖ್ಯಾನ ವರ್ಣನೆ.

ಯುಧಿಷ್ಠಿರಃ

ಕಥಂ ಕಾರ್ಯಂ ಪರೀಕ್ಷೇತ ಶೀಘ್ರಂ ವಾಥ ಚಿರೇಣ ವಾ ।
ಸರ್ವಥಾ ಕಾರ್ಯದುರ್ಗೇऽಸ್ಮಿನ್ ಭವಾನ್ನಃ ಪರಮೋ ಗುರುಃ ॥೧॥

ಪಿತಾಮಹನೇ, ಯಾವುದಾದರೊಂದು ಕಾರ್ಯವನ್ನು ಮಾಡಲೇಬೇಕು ಎಂದು ಇಕ್ಕಟ್ಟಿಗೆ ಸಿಲುಕಿದಾಗ ಆ ಕಾರ್ಯವನ್ನು ಹೇಗೆ ಪರೀಕ್ಷಿಸಬೇಕು? ಶೀಘ್ರವಾಗಿ ಆ ಕಾರ್ಯವನ್ನು ಮಾಡಬೇಕೊ? ವಿಳಂಬ ಮಾಡಬೇಕೊ? ಎಂಬುದನ್ನು ತಿಳಿಸು. ನೀನೇ ನಮಗೆ ಪರಮಗುರುವಾಗಿರುವಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಚಿರಕಾರೇಸ್ತು ಯತ್ ಪೂರ್ವಂ ವೃತ್ತಮಾಂಗಿರಸೇ ಕುಲೇ ॥೨॥

ಕುಮಾರನೇ, ಇದೇ ವಿಷಯದಲ್ಲಿ ಆಂಗಿರಸ ಕುಲದಲ್ಲಿ ಹುಟ್ಟಿದ ಚಿರಕಾರಿ ಎಂಬುವವನ ಉಪಾಖ್ಯಾನವನ್ನು ಪ್ರಾಚೀನರು ಉಪದೇಶಿಸುತ್ತಾರೆ, ಕೇಳು.

ಚಿರಕಾರಿಕ ಭದ್ರಂ ತೇ ಭದ್ರಂ ತೇ ಚಿರಕಾರಿಕ ।
ಚಿರಕಾರೀ ಹಿ ಮೇಧಾವೀ ನಾಪರಾಧ್ಯತಿ ಕರ್ಮಸು ॥೩॥

ಚಿರಕಾರಿಯೇ, ನಿನಗೆ ಮಂಗಳವಾಗಲಿ. ಚಿರಕಾರಿಯೇ, ನಿನಗೆ ಶುಭವಾಗಲಿ. ಚಿರಕಾರಿಯು ತುಂಬಾ ಜಾಣನು. ಅವನು ಯಾವ ಕಾರ್ಯಗಳಲ್ಲಿಯೂ ಅಪರಾಧವನ್ನು ಎಸಗುವುದಿಲ್ಲ.

ಚಿರಕಾರೀ ಮಹಾಪ್ರಾಜ್ಞೋ ಗೌತಮಸ್ಯಾಭವತ್ ಸುತಃ ।
ಚಿರಂ ಹಿ ಸರ್ವಕಾರ್ಯಾಣಿ ಸಮೇಕ್ಷಾವಾನ್ ಪ್ರಪದ್ಯತೇ ॥೪॥

ಚಿರಕಾರಿಯು ಗೌತಮರ ಮಹಾಜಾಣನಾದ ಮಗನಾಗಿದ್ದನು. ಎಲ್ಲಾ ಕಾರ್ಯಗಳನ್ನು ಕಾರ್ಯದ ಪರಿಣಾಮಗಳನ್ನು ವಿಮರ್ಶಿಸಿದ ಬಳಿಕವೇ, ಬಹಳ ಸಮಯದ ಬಳಿಕ ಯೋಗ್ಯವಾದ ಕರ್ಮಗಳನ್ನು ಮಾಡುತ್ತಿದ್ದನು.

ಚಿರಂ ಸಂಚಿಂತಯನ್ನರ್ಥಾಂಶ್ಚಿರಂ ಜಾಗ್ರಚ್ಚಿರಂ ಸ್ವಪನ್ ।
ಚಿರಕಾರ್ಯಾಭಿಸಂಪತ್ತೇಶ್ಚಿರಕಾರೀ ತಥೋಚ್ಯತೇ ॥೫॥

ಅವನು ಯಾವುದೇ ವಿಷಯವನ್ನಾಗಲಿ ಬಹಳ ಕಾಲ ವಿಚಾರ ಮಾಡುತ್ತಿದ್ದನು. ಬಹಳ ಕಾಲ ಎಚ್ಚರವಾಗಿರುತ್ತಿದ್ದನು. ಮಲಗಿದನೆಂದರೆ ಬಹಳ ಕಾಲವೇ ನಿದ್ರಿಸುತ್ತಿದ್ದನು. ಎಲ್ಲಾ ಕಾರ್ಯಗಳನ್ನು ನಿಧಾನವಾಗಿಯೇ ಪೂರ್ಣಗೊಳಿಸುವ ಕಾರಣದಿಂದ ಎಲ್ಲರೂ ಅವನನ್ನು ಚಿರಕಾರಿ ಎಂದೇ ಕರೆಯುತ್ತಿದ್ದರು.

ಅಲಸಗ್ರಹಣಂ ಪ್ರಾಪ್ತೋ ದುರ್ಮೇಧಾವೀ ತಥೋಚ್ಯತೇ ।
ಬುದ್ಧಿಲಾಘವಯುಕ್ತೇನ ಜನೇನಾದೀರ್ಘದರ್ಶಿನಾ ॥೬॥

ಅಲ್ಪಬುದ್ಧಿಯುಳ್ಳವರು, ಮುಂದಾಗುವುದನ್ನು ಯೋಚಿಸಲು ಸಾಮರ್ಥ್ಯ ಇಲ್ಲದಿರುವ ಅಜ್ಞಜನರು ಚಿರಕಾರಿಯನ್ನು ದಡ್ಡನೆಂದು, ದುರ್ಬುದ್ಧಿಯವನೆಂದು ವಿಚಾರ ಮಾಡದೆ ಹೇಳುತ್ತಿದ್ದರು.

ವ್ಯಭಿಚಾರೇ ತು ಕಸ್ಮಿಂಶ್ಚಿದ್ ವ್ಯತಿಕ್ರಮ್ಯಾಪರಾನ್ ಸುತಾನ್ ।
ಪಿತ್ರೋಕ್ತಃ ಕುಪಿತೇನಾಥ ಜಹೀಮಾಂ ಜನನೀಮಿತಿ ॥೭॥

ಒಂದು ಬಾರಿ ಅವನ ತಾಯಿಯಾದ ಅಹಲ್ಯೆಯ ಮೇಲೆ ವ್ಯಭಿಚಾರದ ದೋಷವು ಆರೋಪಿತವಾಯಿತು. ಆಗ ಚಿರಕಾರಿಯ ತಂದೆಯಾದ ಗೌತಮನು ಪತ್ನಿಯ ಮೇಲೆ ಕೋಪಗೊಂಡು, ಇತರ ಮಕ್ಕಳನ್ನು ಬಿಟ್ಟು ಚಿರಕಾರಿಯನ್ನು ಮಾತ್ರ ಕರೆದು ಮಗನೇ, ಈಗಲೇ ನಿನ್ನ ತಾಯಿಯನ್ನು ಕೊಂದುಬಿಡು ಎಂದು ಹೇಳಿದನು.

ವ್ಯಾಖ್ಯಾನ ವಿಶೇಷ– ಇಂದ್ರನು ಬಂದು ಅಹಲ್ಯೆಯ ಸಂಗ ಮಾಡಲು ಗೌತಮರು ಅಹಲ್ಯೆಗೆ ಶಿಲೆಯಾಗು ಎಂದು ಶಾಪಕೊಟ್ಟ ಕಥೆಯನ್ನು ನಾವು ಕೇಳಿದ್ದೇವೆ. ಆದರೆ ಗೌತಮರು ಮಗನನ್ನು ಕರೆದು ತಾಯಿಯ ತಲೆಯನ್ನು ತುಂಡರಿಸು ಎಂದು ಹೇಳಿದ ಕಥೆಯು ಮಹಾಭಾರತದಲ್ಲಿದೆ. ಇದಕ್ಕೆ ವಾದಿರಾಜ ಗುರುಸಾರ್ವಭೌಮರು ಹೀಗೆ ನಿರ್ಣಯವನ್ನು ಕೊಡುತ್ತಾರೆ. ಒಂದು ಬಾರಿ ಇಂದ್ರನು ಆಗಮಿಸಿದಾಗ ಗೌತಮರು ಮಗನನ್ನು ಕರೆದು ತಾಯಿಯ ಶಿರಚ್ಛೇದನ ಮಾಡಲು ಹೇಳಿದರು. ಮತ್ತೊಂದು ಬಾರಿ ಇಂದ್ರನು ಆಗಮಿಸಿ ಅಹಲ್ಯೆಯನ್ನು ಸ್ಪರ್ಶಿಸಿದಾಗ ಅವಳಿಗೆ ಶಿಲೆಯಾಗು ಎಂದು ಶಾಪವನ್ನು ಕೊಟ್ಟರು. ಹೀಗೆ ಎರಡು ಕಥೆಯನ್ನು ಪ್ರಮಾಣವೆಂದು ಎರಡು ಬಾರಿ ನಡೆದ ಕಥೆಗಳೆಂದು ತಿಳಿಯಬೇಕು ಎಂದು ನಿರ್ಣಯಿಸಿದ್ದಾರೆ.

ಸ ತಥೇತಿ ಚಿರೇಣೋಕ್ತಾ ಸ್ವಭಾವಾಚ್ಚಿರಕಾರಿಕಃ ।
ವಿಮೃಶ್ಯ ಚಿರಕಾರಿತ್ವಾಚ್ಚಿಂತಯಾಮಾಸ ವೈ ಚಿರಮ್ ॥೮॥

ತಂದೆಯು ಹೀಗೆ ಹೇಳಿದ ಕೂಡಲೇ ಚಿರಕಾರಿಯು ತುಂಬಾ ಹೊತ್ತು ವಿಮರ್ಶೆ ಮಾಡಿ, ಸ್ವಾಭಾವಿಕವಾಗಿ ನಿಧಾನಕ್ಕೆ ಕಾರ್ಯವನ್ನು ಮಾಡುವವನಾದ್ದರಿಂದ ಹಾಗೆಯೇ ಆಗಲಿ ಎಂದನು. ಬಳಿಕ ಚಿರಕಾರಿಯಾದ ಕಾರ್ಯದಿಂದಲೇ ತುಂಬಾ ಸಮಯ ತಂದೆಯ ಮಾತನ್ನು ವಿಮರ್ಶಿಸತೊಡಗಿದನು.

ಪಿತುರಾಜ್ಞಾಂ ಕಥಂ ಕುರ್ಯಾಂ ನ ಹನ್ಯಾಂ ಮಾತರಂ ಕಥಮ್ ।
ಕಥಂ ಧರ್ಮಚ್ಛಲೇ ನಾಸ್ಮಿನ್ನಿಮಜ್ಜೇಯಮಸಾಧುವತ್ ॥೯॥

ಅವನ ಆಲೋಚನೆಯು ಹೀಗಿತ್ತು. ವಿಧಿಯೇ, ನಾನು ಹೇಗೆ ತಾನೇ ತಾಯಿಯನ್ನು ಕೊಲ್ಲಲಿ? ತಂದೆಯ ಆಜ್ಞೆಯನ್ನು ಹೇಗೆ ನಡೆಸಲಿ? ಇಂತಹ ಧರ್ಮಸಂಕಟದಲ್ಲಿ ಅಸಜ್ಜನನಂತೆ ನಾನು ಮುಳುಗಿ ಹೋಗಿದ್ದೇನೆ. ಮೇಲೆ ಏಳುವ ಬಗೆ ಹೇಗೆ?

ಪಿತುರಾಜ್ಞಾ ಪರೋ ಧರ್ಮಃ ಸ್ವಧರ್ಮೋ ಮಾತೃರಕ್ಷಣಮ್ ।
ಅಸ್ವತಂತ್ರಂ ಚ ಪುತ್ರತ್ವಂ ಕಿಂ ನು ಮಾಂ ನಾತ್ರ ಪೀಡಯೇತ್ ॥೧೦॥

ತಂದೆಯ ಆಜ್ಞೆಯನ್ನು ರಕ್ಷಿಸುವುದು ಪರಮಧರ್ಮವಾಗಿದೆ. ತಾಯಿಯನ್ನು ರಕ್ಷಿಸುವುದು ಸ್ವಧರ್ಮವಾಗಿದೆ. ಹೀಗಿದ್ದಾಗ ಅಸ್ವತಂತ್ರನಾದ ಮಗನಾಗಿ ನಾನು ಏನು ಮಾಡಲಿ? ಅಧರ್ಮವು ನನ್ನನ್ನು ಪೀಡಿಸದಿರುವಂತೆ ಹೇಗೆ ವರ್ತಿಸಲಿ?

ಸ್ತ್ರಿಯಂ ಹತ್ವಾ ಮಾತರಂ ಚ ಕೋ ಹಿ ಜಾತು ಸುಖೀ ಭವೇತ್ ।
ಪಿತರಂ ಚಾಪ್ಯವಜ್ಞಾಯ ಕಃ ಪ್ರತಿಷ್ಠಾಮವಾಪ್ನುಯಾತ್ ॥೧೧॥

ಸ್ತ್ರೀಯನ್ನು ಕೊಂದು, ಅದರಲ್ಲಿಯೂ ತಾಯಿಯನ್ನು ಸಂಹಾರ ಮಾಡಿ ಯಾವನು ತಾನೇ ಯಾವಾಗಲೂ ಸುಖಿಯಾಗಿರಬಲ್ಲ? ತಂದೆಯ ಆಜ್ಞೆಯನ್ನು ತಿರಸ್ಕರಿಸಿ ಯಾವನು ತಾನೇ ಲೋಕದಲ್ಲಿ ಸ್ಥಿರವಾದ ಪ್ರತಿಷ್ಠೆಯನ್ನು ಹೊಂದಬಲ್ಲ?

ಅನವಜ್ಞಾ ಪಿತುರ್ಯುಕ್ತಾ ಧಾರಣಂ ಮಾತೃರಕ್ಷಣಮ್ ।
ಯುಕ್ತಕ್ಷಮಾವುಭಾವೇತೌ ನಾತಿವರ್ತೇತಮಾಂ ಕಥಮ್ ॥೧೨॥

ತಂದೆಯ ಆಜ್ಞೆಯನ್ನು ತಿರಸ್ಕರಿಸದೆ ಇರುವುದೇ ಶ್ರೇಷ್ಠವಾದುದು. ಅದರಂತೆ ತಾಯಿಯನ್ನು ರಕ್ಷಿಸುವುದು ಕರ್ತವ್ಯದಲ್ಲಿ ಸೇರಿದೆ. ಈ ಎರಡೂ ಪಕ್ಷಗಳು ಯುಕ್ತವೂ, ಉಚಿತವೂ ಆಗಿವೆ. ಈ ಎರಡನ್ನು ನನ್ನಿಂದ ವರ್ತಿಸಲು ಹೇಗೆ ಸಾಧ್ಯವಾದೀತು?

ಪಿತಾ ಹ್ಯಾತ್ಮಾನಮಾಧತ್ತೇ ಜಾಯಾಯಾಂ ಜಜ್ಞಿಯಾಮಿತಿ ।
ಶೀಲಚಾರಿತ್ರಗೋತ್ರಸ್ಯ ಧಾರಣಾರ್ಥಂ ಕುಲಸ್ಯ ಚ ॥೧೩॥

ತಂದೆಯಾದವನು ಪತ್ನಿಯ ಗರ್ಭದಲ್ಲಿ ತನ್ನನ್ನೇ ರೇತಸ್ಸಿನ ಮೂಲಕ ನಿಕ್ಷೇಪವನ್ನು ಮಾಡುತ್ತಾನೆ. ತನ್ನ ಶೀಲ, ಸದಾಚಾರ, ಗೋತ್ರ, ಕುಲ ಇವುಗಳನ್ನು ಧರಿಸುವುದು ಈ ಗರ್ಭಾಧಾನದ ವಿಧಿಯ ಉದ್ದೇಶವಾಗಿದೆ.

ಸೋಽಹಮಾತ್ಮಾ ಸ್ವಯಂ ಪಿತ್ರಾ ಪುತ್ರತ್ವೇ ಪ್ರಕೃತಃ ಪುನಃ ।
ವಿಜ್ಞಾನಂ ಮೇ ಯಥಾ ನ ಸ್ಯಾದ್ ಬುಬುಧೇ ಚಾತ್ಮಸಂಭವಮ್ ॥೧೪॥

ಈ ಕಾರಣದಿಂದ ನಾನು ಸ್ವಯಂ ತಂದೆಯಿಂದಲೇ ಪುತ್ರತ್ವವನ್ನು ಹೊಂದಿರುತ್ತೇನೆ. ಈ ವಿರುದ್ಧವಾದ ಜ್ಞಾನದ ಗೊಂದಲಗಳು ನನಗೆ ಉಂಟಾಗದಿರುವಂತೆ ಹೇಗೆ ತಿಳಿಯಲಿ? ತಂದೆಯಿಂದಲೇ ಜನ್ಮವನ್ನು ಪಡೆದ ನಾನು ಹೇಗೆ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಿ?

ಜಾತಕರ್ಮಣಿ ಯತ್ ಪ್ರಾಹ ಪಿತಾ ಯಚ್ಚೋಪಕರ್ಮಣಿ ।
ಪರ್ಯಾಪ್ತಃ ಸ ದೃಢೀಕಾರಃ ಪಿತುರ್ಗೌರವನಿಶ್ಚಯೇ ॥೧೫॥

ಜಾತಕರ್ಮದ ಸಮಯದಲ್ಲಿ, ಉಪನಯನದ ಸಮಯದಲ್ಲಿ ತಂದೆಯು 'ಆತ್ಮಾ ವೈ ಪುತ್ರನಾಮಾಸಿ' 'ಆಚಾರ್ಯ ದೇವೋಭವ' ಮುಂತಾದ ಆದೇಶಗಳನ್ನು ಮಾಡುತ್ತಾನೆ. ಇಂತಹ ಅವನ ಉಪದೇಶ ವಾಕ್ಯಗಳೇ ತಂದೆಯಲ್ಲಿ ಗೌರವವನ್ನು ನಿಶ್ಚಯ ಮಾಡಲು ಬೇಕಾದ ಪ್ರಮಾಣಗಳಾಗಿವೆ.

ಗುರುರಗ್ರ್ಯಃ ಪರೋ ಧರ್ಮಃ ಪೋಷಣಾಧ್ಯಯನಾದ್ಧಿತಃ ।
ಪಿತಾ ಯದಾಹ ಧರ್ಮಃ ಸ ವೇದೇಷ್ವಪಿ ಸುನಿಶ್ಚಿತಃ ॥೧೬॥

ತಂದೆಯು ಮಗನನ್ನು ಪೋಷಿಸಿ ಅಧ್ಯಯನಾದಿಗಳನ್ನು ಮಾಡಿಸುವುದರಿಂದ ಅವನು ಉತ್ತಮನು ಎಂಬುದು ಪರಮಧರ್ಮವೇ ಆಗಿದೆ. ವೇದಗಳಲ್ಲಿ ನಿಶ್ಚಯ ಜ್ಞಾನವನ್ನು ಹೊಂದಿದ ತಂದೆಯು ಏನು ಹೇಳುತ್ತಾನೋ ಅದೇ ಮಗನ ಪಾಲಿಗೆ ಧರ್ಮವೆನಿಸಿದೆ.

ಪ್ರೀತಿಮಾತ್ರಂ ಪಿತುಃ ಪುತ್ರಃ ಸರ್ವಂ ಪುತ್ರಸ್ಯ ವೈ ಪಿತಾ ।
ಶರೀರಾದೀನಿ ದೇಯಾನಿ ಪಿತಾ ತ್ವೇಕಃ ಪ್ರಯಚ್ಛತಿ ॥೧೭॥

ತಂದೆಗೆ ಮಗನೇ ಪ್ರೀತಿಪಾತ್ರನಾಗಿರುತ್ತಾನೆ. ಅದರಂತೆ ಮಗನಿಗೆ ತಂದೆಯೇ ಸರ್ವಸ್ವವೂ ಆಗಿರುತ್ತಾನೆ. ತಂದೆಯಾದವನು ಮಾತ್ರ ಮಗನಿಗೆ ಶರೀರವೇ ಮೊದಲಾದ ಕೊಡಬಹುದಾದ ವಸ್ತುಗಳನ್ನು ಕೊಡುತ್ತಾನೆ. ಬೇರೆ ಯಾರಿಗೂ ಇವನಂತೆ ಕೊಡಲು ಶಕ್ಯವಿಲ್ಲ ಎಂದು ಭಾವ.

ತಸ್ಮಾತ್ ಪಿತುರ್ವಚಃ ಕಾರ್ಯಂ ನ ವಿಚಾರ್ಯಂ ಕಥಂಚನ ।
ಪಾತಕಾನ್ಯಪಿ ಪೂಯಂತೇ ಪಿತುರ್ವಚನಕಾರಿಣಃ ॥೧೮॥

ಆ ಕಾರಣದಿಂದ ತಂದೆಯ ಆಜ್ಞೆಯನ್ನು ನೆರವೇರಿಸಬೇಕು. ಇದರಲ್ಲಿ ಯಾವ ಸಂಶಯವೂ ಇಲ್ಲ. ತಂದೆಯ ವಚನವನ್ನು ಪರಿಪಾಲಿಸುವವರಿಗೆ ಅನೇಕ ಪಾತಕಗಳು ಪರಿಹಾರವಾಗುತ್ತವೆ.

ಭೋಗೇ ಭಾಗ್ಯೇ ಪ್ರಸವನೇ ಸರ್ವಲೋಕನಿದರ್ಶನೇ ।
ಭರ್ತ್ರಾ ಚೈವ ಸಮಾಯೋಗೇ ಸೀಮಂತೋನ್ನಯನೇ ತಥಾ ॥೧೯॥

ಮಗನಿಗೆ ಬೇಕಾದ ಭೋಗ್ಯವಸ್ತುಗಳನ್ನು ಒದಗಿಸುವುದರಲ್ಲಿ ಯಾಗದಲ್ಲಿಯೂ, ಲೋಕವ್ಯವಹಾರದಲ್ಲಿಯೂ, ಗರ್ಭಾಧಾನ ಮೊದಲಾದ ಸಂಸ್ಕಾರಗಳಲ್ಲಿಯೂ ತಂದೆಯೇ ಮುಖ್ಯಧರ್ಮಸ್ಥಾನದಲ್ಲಿದ್ದಾನೆ.

ಪಿತಾ ಸ್ವರ್ಗಃ ಪಿತಾ ಧರ್ಮಃ ಪಿತಾ ಪರಮಕಂ ತಪಃ ।
ಪಿತರಿ ಪ್ರೀತಿಮಾಪನ್ನೇ ಸರ್ವಾಃ ಪ್ರೀಯಂತಿ ದೇವತಾಃ ॥೨೦॥

ತಂದೆಯೇ ಸ್ವರ್ಗ ಎನಿಸಿದ್ದಾನೆ. ತಂದೆಯೇ ಧರ್ಮವೆನಿಸಿದ್ದಾನೆ. ತಂದೆಯೇ ತಪಸ್ಸು ಎನಿಸಿದ್ದಾನೆ. ತಂದೆಯು ಪ್ರೀತನಾದರೆ ಸಮಸ್ತ ದೇವತೆಗಳು ಪ್ರೀತರಾಗುತ್ತಾರೆ.

ಆಶಿಷಸ್ತಾ ಭಜಂತ್ಯೇನಂ ಪುರುಷಂ ಪ್ರಾಹ ಯಾಃ ಪಿತಾ ।
ನಿಷ್ಕೃತಿಃ ಸರ್ವಪಾಪಾನಾಂ ಪಿತಾ ಯದಭಿನಂದತಿ ॥೨೧॥

ತಂದೆಯ ಆಶೀರ್ವಾದವೆಲ್ಲ ಮಗನಲ್ಲಿ ಪೂರ್ಣವಾಗಿದ್ದರೆ ಅವುಗಳು ನಿಯಮೇನ ಫಲಿಸುತ್ತವೆ. ಸಮಸ್ತ ಪಾಪಗಳಿಗೆ ಪ್ರಾಯಶ್ಚಿತ್ತವು ತಂದೆಯ ಸಂತೋಷವೇ ಆಗಿದೆ. ತಂದೆಯು ಅಭಿನಂದಿಸಿದರೆ ಸಮಸ್ತ ಪಾಪಗಳು ಪರಿಹಾರವಾಗುತ್ತವೆ.

ಮುಚ್ಯತೇ ಬಂಧನಾತ್ ಪುಷ್ಪಂ ಫಲಂ ವೃಂತಾತ್ ಪ್ರಮುಚ್ಯತೇ ।
ಕ್ಲಿಶ್ಯನ್ನಪಿ ಸುತಸ್ನೇಹೈಃ ಪಿತಾ ಸ್ನೇಹಂ ನ ಮುಂಚತಿ ॥೨೨॥

ಮರದಿಂದ ಹೂವುಗಳು ಕಳಚಿ ಬೀಳುತ್ತವೆ. ತೊಟ್ಟಿನಿಂದ ಹಣ್ಣುಗಳು ಉದುರಿ ಹೋಗುತ್ತವೆ. ಆದರೆ ತಂದೆಯು ಎಷ್ಟೇ ಕ್ಲೇಶಪಟ್ಟರೂ ಮಗನಲ್ಲಿರುವ ಪ್ರೇಮವನ್ನು ಅವನೆಂದಿಗೂ ಬಿಡಲಾರನು.

ಏತದ್ ವಿಚಿಂತಿತಂ ತಾವತ್ ಪುತ್ರಸ್ಯ ಪಿತೃಗೌರವಮ್ ।
ಪಿತಾ ಹ್ಯಲ್ಪತರಂ ಸ್ಥಾನಂ ಚಿಂತಯಿಷ್ಯಾಮಿ ಮಾತರಮ್ ॥೨೩॥

ತಂದೆಯಲ್ಲಿ ಮಗನು ಗೌರವವನ್ನು ತೋರಿಸಬೇಕು ಎನ್ನಲು ಇವುಗಳೇ ಯಥೇಷ್ಟವಾದ ಪ್ರಮಾಣಗಳಾಗಿವೆ. ತಂದೆಯು ಮಗನಿಗೆ ಸಾಧಾರಣವಾದ ಅಲ್ಪ ಸ್ಥಾನವನ್ನು ಹೊಂದಿದವನಲ್ಲ. ಇದನ್ನು ನಾನು ಯೋಚಿಸಬೇಕಾಗಿದೆ.

ಯೋ ಹ್ಯಯಂ ಮಯಿ ಸಂಘಾತೋ ಮರ್ತ್ಯತ್ವೇ ಪಾಂಚಭೌತಿಕಃ ।
ಅಸ್ಯ ಮೇ ಜನನೀ ಹೇತುಃ ಪಾವಕಸ್ಯ ಯಥಾರಣಿಃ ।
ಮಾತಾ ದೇಹಾರಣಿಃ ಪುಂಸಾಂ ಸರ್ವಸ್ಯಾರ್ತಸ್ಯ ನಿರ್ವೃತಿಃ ॥೨೪॥

ಇನ್ನು ತಾಯಿಯ ಬಗ್ಗೆ ಹೇಳುವುದಾದರೆ ನಾನು ಮನುಷ್ಯನಾಗಿ ಹುಟ್ಟುವಾಗ, ಪಂಚಭೂತ ವಿಕಾರವಾದ ಈ ದೇಹವನ್ನು ತಾಳುವಾಗ ಈ ತಾಯಿಯೇ ಕಾರಣಳಾಗಿದ್ದಾಳೆ. ಬೆಂಕಿಯ ಉತ್ಪತ್ತಿಗೆ ಅರಣಿಯು ಹೇಗೆ ಪ್ರಧಾನ ಪಾತ್ರವನ್ನು ವಹಿಸುತ್ತದೋ ಅದರಂತೆ ನನ್ನ ಉತ್ಪತ್ತಿಗೆ ಈ ತಾಯಿಯ ದೇಹವೇ ಅರಣಿಯಂತಾಗಿದೆ. ದುಃಖಾರ್ತರಾದ ಪುರುಷರಿಗೆ ತಾಯಿಯೇ ದುಃಖದ ಪರಿಹಾರಕಳೆನಿಸಿದ್ದಾಳೆ.

ನ ಚ ಶೋಚತಿ ನಾಪ್ಯೇನಂ ಸ್ಥಾವಿರ್ಯಮಪಕರ್ಷತಿ ।
ಶ್ರಿಯಾ ಹೀನೋಽಪಿ ಯೋ ಗೇಹೇ ಅಂಬೇತಿ ಪ್ರತಿಪದ್ಯತೇ ॥೨೫॥

ತಾಯಿಯು ಇರುವಾಗ ಯಾವಾಗಲೂ ಯಾವುದಕ್ಕೂ ಶೋಕಪಡುವುದಿಲ್ಲ. ಸಿರಿತನವಾಗಲಿ, ಶೋಕವಾಗಲಿ, ಚಿಂತೆಯಾಗಲಿ ಇಲ್ಲದೆ ಇರುವುದರಿಂದ ವೃದ್ಧಾಪ್ಯವು ಅವನನ್ನು ಆಕ್ರಮಿಸುವುದಿಲ್ಲ.

ಪುತ್ರಪೌತ್ರಸಮಾಕೀರ್ಣೋ ಜನನೀಂ ಯಃ ಸಮಾಶ್ರಿತಃ ।
ಅಪಿ ವರ್ಷಶತಸ್ಯಾಂತೇ ಸ ದ್ವಿಹಾಯನವಚ್ಚರೇತ್ ॥೨೬॥

ಅವನು ಸಂಪತ್ತಿನಿಂದ ಹೀನನಾಗಿದ್ದರೂ ಮನೆಗೆ ಆಗಮಿಸಿ ಅಮ್ಮಾ ಎಂದು ಕೂಗುತ್ತಾ ಪ್ರವೇಶಿಸಿದ ಕೂಡಲೇ ಅವನ ದುಃಖವೆಲ್ಲವೂ ಪರಿಹಾರವಾಗುತ್ತದೆ. ಒಬ್ಬ ಮನುಷ್ಯನಿಗೆ ಮಕ್ಕಳು, ಮೊಮ್ಮಕಳು ಈ ಪರಿವಾರವೇ ಮನೆ ತುಂಬಿರಬಹುದು. ನೂರು ವರ್ಷ ಆಯುಷ್ಯವೂ ತುಂಬಿರಬಹುದು. ಆದರೆ ಅವನು ತನ್ನ ತಾಯಿಯನ್ನು ಆಶ್ರಯಿಸಿದಾಗ ಎರಡು ವರ್ಷದ ಮಗುವಿನಂತೆ ವರ್ತಿಸುತ್ತಾನೆ.

ಸಮರ್ಥಂ ವಾ ಸಮರ್ಥಂ ವಾ ಕೃಶಂ ವಾಪ್ಯಕೃಶಂ ತಥಾ ।
ರಕ್ಷತ್ಯೇವ ಸುತಂ ಮಾತಾ ನಾನ್ಯಃ ಪೋಷ್ಟಾ ವಿಧಾನತಃ ॥೨೭॥

ತಾಯಿಯ ಪಾಲಿಗೆ ಮಗನು ಸಮರ್ಥನೇ ಆಗಿರಲಿ, ಅಸಮರ್ಥನೇ ಆಗಿರಲಿ, ಕೃಶನಾಗಿರಲಿ, ಸ್ಥೂಲನೇ ಆಗಿರಲಿ, ತಾಯಿಯು ಯಾವುದೇ ರೀತಿಯ ತಾರತಮ್ಯವನ್ನೂ ಮಾಡದೆ ವಿಹಿತವಾದ ರೀತಿಯಲ್ಲಿ ಮಕ್ಕಳನ್ನು ಪೋಷಿಸುತ್ತಾಳೆ. ತಾಯಿಯಂತೆ ಪೋಷಿಸುವವರು ಬೇರೆ ಯಾರೂ ಇರಲು ಸಾಧ್ಯವಿಲ್ಲ.

ತದಾ ಸ ವೃದ್ಧೋ ಭವತಿ ಯದಾ ಭವತಿ ದುಃಖಿತಃ ।
ತದಾ ಶೂನ್ಯಂ ಜಗತ್ತಸ್ಯ ಯದಾ ಮಾತ್ರಾ ವಿಯುಜ್ಯತೇ ॥೨೮॥

ಯಾವಾಗ ಪುರುಷನು ತಾಯಿಯಿಂದ ಅಗಲುತ್ತಾನೋ ಆಗ ಅವನು ವೃದ್ಧನೆನಿಸುತ್ತಾನೆ. ಆಗ ದುಃಖಿತನೆನಿಸುತ್ತಾನೆ. ಆಗಲೇ ಜಗತ್ತೆಲ್ಲವೂ ಅವನ ಪಾಲಿಗೆ ಶೂನ್ಯವೆನಿಸುತ್ತದೆ.

ನಾಸ್ತಿ ಮಾತೃಸಮಾ ಛಾಯಾ ನಾಸ್ತಿ ಮಾತೃಸಮಾ ಗತಿಃ ।
ನಾಸ್ತಿ ಮಾತೃಸಮಂ ತ್ರಾಣಂ ನಾಸ್ತಿ ಮಾತೃಸಮಾ ಪ್ರಪಾ ॥೨೯॥

ಜಗತ್ತಿನಲ್ಲಿ ತಾಯಿಯ ನೆರಳಿಗಿಂತ ಶ್ರೇಷ್ಠವಾದ ನೆರಳು ಬೇರೆ ಯಾವುದೂ ಇರುವುದಿಲ್ಲ. ತಾಯಿಗೆ ಸಮಾನವಾದ ಗತಿಯು, ಆಶ್ರಯವು ಬೇರೆ ಯಾವುದೂ ಇರುವುದಿಲ್ಲ. ತಾಯಿಗೆ ಸಮಾನವಾದ ರಕ್ಷಣೆ ಬೇರೆ ಯಾವುದೂ ಇರುವುದಿಲ್ಲ. ತಾಯಿಗೆ ಸಮಾನವಾದ ಪ್ರೀತಿ ಪಾತ್ರರು ಯಾರೂ ಇರುವುದಿಲ್ಲ.

ಕುಕ್ಷಿಸಂಧಾರಣಾದ್ಧಾತ್ರೀ ಜನನಾಜ್ಜನನೀ ಸ್ಮೃತಾ ।
ಅಂಗಾನಾಂ ವರ್ಧನಾದಂಬಾ ವೀರಸೂತ್ವೇನ ವೀರಸೂಃ ॥೩೦॥

ಶಿಶೋಃ ಶುಶ್ರೂಷಣಾಚ್ಛುಶ್ರೂರ್ಮಾತಾ ದೇಹಮನಂತರಮ್ ।
ಚೇತನಾವಾನ್ನರೋ ಹನ್ಯಾದ್ಯಸ್ಯ ನಾಸುಷಿರಂ ಶಿರಃ ॥೩೧॥

ತಾಯಿಯು ಮಗನನ್ನು ತನ್ನ ಗರ್ಭದಲ್ಲಿ ಧರಿಸುವುದರಿಂದ ಧಾತ್ರೀ ಎಂದು, ಹಡೆಯುವುದರಿಂದ ಜನನೀ ಎಂದು, ಅಂಗಾಂಗಗಳನ್ನು ವೃದ್ಧಿಗೊಳಿಸುವುದರಿಂದ ಅಂಬೆ ಎಂದೂ, ವೀರನಾದ ಮಗನನ್ನು ಪಡೆಯುವುದರಿಂದ ವೀರಸೂ ಎಂದೂ, ಮಗುವನ್ನು ಶುಶ್ರೂಷೆ ಮಾಡುವುದರಿಂದ ಶುಶ್ರೂ ಎಂದು - ಹೀಗೆ ತಾಯಿಯು ಮಗನಿಗೆ ಎರಡನೆಯ ದೇಹವೇ ಆಗಿದ್ದಾಳೆ. ಯಾರ ತಲೆಯು ವಿಚಾರಶೂನ್ಯ

ಆಗಿದೆಯೋ ಅವನು, ಯಾರ ತಲೆಯು ಸಾವಿರ ಹೋಳಾಗಿದೆಯೋ ಅವನು ತಾಯಿಯನ್ನು ಕೊಂದಾನು. ಸರಿಯಾದ ತಲೆ ಇದ್ದವನು, ವಿಚಾರಶೀಲನಾದವನು ಎಂದಿಗೂ ಮಾತೃಹತ್ಯೆಯನ್ನು ಎಸಗನು.

ದಂಪತ್ಯೋಃ ಪ್ರಾಣಸಂಶ್ಲೇಷೇ ಯೋಽಭಿಸಂಧಿಃ ಕೃತಃ ಕಿಲ ।
ತಂ ಮಾತಾ ವಾ ಪಿತಾ ವೇದ ಭೂತಾರ್ಥೋ ಮಾತರಿ ಸ್ಥಿತಃ ॥೩೨॥

ದಂಪತಿಗಳ ಸಂಯೋಗ ಕಾಲದಲ್ಲಿ ಒಳ್ಳೆಯ ಮಗನು ಹುಟ್ಟಲಿ ಎಂಬ ಅಪೇಕ್ಷೆಯು ತಂದೆ-ತಾಯಿ ಇಬ್ಬರಿಗೂ ಸಮಾನವೇ ಆಗಿರುತ್ತದೆ. ಮಗನ ಬಗ್ಗೆ ಅನೇಕ ಆಶಯಗಳು ಇಬ್ಬರಲ್ಲಿದ್ದರೂ ಯಥಾರ್ಥವಾಗಿ ಸಮಸ್ತ ವಿಧವಾದ ಅಭಿಲಾಷೆಗಳು ತಾಯಿಯ ಹೃದಯದಲ್ಲಿಯೇ ವಿಶೇಷವಾಗಿ ತುಂಬಿಕೊಂಡಿರುತ್ತವೆ.

ಮಾತಾ ಜಾನಾತಿ ಯದ್ ಗೋತ್ರಂ ಮಾತಾ ಜಾನಾತಿ ಯಸ್ಯ ಸಃ ।
ಮಾತುರ್ಭರಣಮಾತ್ರೇಣ ಪ್ರೀತಿಃ ಸ್ನೇಹಃ ಪಿತುಃ ಪ್ರಜಾಃ ॥೩೩॥

ತಾಯಿಯಾದವಳು ಮಗನ ಗೋತ್ರವು ಯಾವುದೆಂಬುದನ್ನು ತಿಳಿದಿರುತ್ತಾಳೆ. ತನ್ನ ಹೊಟ್ಟೆಯಲ್ಲಿ ಹುಟ್ಟಿರುವವನು, ಯಾವ ಪುರುಷನಿಗೆ ಸಂಬಂಧಿಸಿದವನೆಂದು ತಿಳಿದಿರುತ್ತಾಳೆ. ಆ ಶಿಶುವನ್ನು ನವಮಾಸ ಪರ್ಯಂತ ಭರಣ ಮಾಡುವುದರಿಂದಲೇ ತಾಯಿಗೆ ಪ್ರೀತಿ-ಸ್ನೇಹಗಳು ಉಂಟಾಗುತ್ತವೆ. ಸಂತಾನವು ತಂದೆಯ ಅಧೀನಕ್ಕೆ ಒಳಪಟ್ಟಿರುತ್ತದೆ.

ಪಾಣಿಬಂಧಂ ಸ್ವಯಂ ಕೃತ್ವಾ ಸಹಧರ್ಮಮುಪೇತ್ಯ ಚ ।
ಯದಿ ಯಾಪ್ಯಂತಿ ಪುರುಷಾಃ ಸ್ತ್ರಿಯೋ ನಾರ್ಹಂತಿ ಯಾಪ್ಯತಾಮ್ ॥

ಪುರುಷನು ಕನ್ಯೆಯ ಪಾಣಿಗ್ರಹಣವನ್ನು ತಾನೇ ಮಾಡಿ, ಸಹಧರ್ಮಚಾರಿಣಿಯನ್ನಾಗಿ ಅವಳನ್ನು ಸ್ವೀಕರಿಸಿ, ಶಾಸ್ತ್ರವಿಧಿಗೆ ಅನುಗುಣವಾಗಿ ಸಂನ್ಯಾಸಧರ್ಮವನ್ನು ಅನುಸರಿಸಿ, ಪತ್ನಿಯನ್ನೂ ಪರಿತ್ಯಜಿಸಿ ಹೊರಟು ಹೋಗುತ್ತಾನೆ. ಆದರೆ ಇಂತಹ ಸಂನ್ಯಾಸಧರ್ಮವು ಸ್ತ್ರೀಯರಿಗೆ ವಿಧಿಸಲ್ಪಟ್ಟಿರುವುದಿಲ್ಲ.

ಭರಣಾದ್ಧಿ ಸ್ತ್ರಿಯೋ ಭರ್ತಾ ಪಾತ್ಯಾಚ್ಚೈವ ಸ್ತ್ರಿಯಾಃ ಪತಿಃ ।
ಗುಣಸ್ಯಾಸ್ಯ ನಿವೃತ್ತೌ ತು ನ ಭರ್ತಾ ನ ಪತಿಃ ಪತಿಃ ॥೩೫॥

ಪತ್ನಿಯ ಭರಣ-ಪೋಷಣಾದಿಗಳನ್ನು ಮಾಡುವುದರಿಂದಲೇ ಪುರುಷನು ಭರ್ತಾ ಎನಿಸಿದ್ದಾನೆ. ಪಾಲನೆ ಮಾಡುವುದರಿಂದಲೇ ಪತಿ ಎಂದು ಕರೆಸಿಕೊಳ್ಳುತ್ತಾನೆ. ಈ ಎರಡೂ ಗುಣಗಳು ಪುರುಷನಲ್ಲಿ ಇಲ್ಲದಿದ್ದಲ್ಲಿ ಅವನು ಭರ್ತಾ, ಪತಿ ಎಂಬ ನಾಮಗಳಿಗೆ ಪಾತ್ರನಾಗುವುದಿಲ್ಲ.

ಏವಂ ಸ್ತ್ರೀ ನಾಪರಾಧ್ನೋತಿ ನರ ಏವಾಪರಾದ್ಧ್ಯತಿ ।
ವ್ಯುಚ್ಚರಂಶ್ಚ ಮಹಾದೋಷಂ ನರ ಏವಾಪರಾದ್ಧ್ಯತಿ ॥೩೬॥

ಸ್ತ್ರೀಯು ಬಹುತೇಕ ಅಪರಾಧಗಳನ್ನು ಮಾಡುವುದಿಲ್ಲ. ಪುರುಷನೇ ಅಪರಾಧ ಮಾಡುತ್ತಾನೆ. ಸ್ತ್ರೀಯನ್ನು ಉಲ್ಲಂಘಿಸಿ ಹೊರಟ ಮಹಾದೋಷವನ್ನು, ಅಪರಾಧವನ್ನು ಪುರುಷನೇ ಹೊಂದುತ್ತಾನೆ.

ಸ್ತ್ರಿಯಾ ಹಿ ಪರಮೋ ಭರ್ತಾ ದೈವತಂ ಪರಮಂ ಸ್ಮೃತಮ್ ।
ತಸ್ಯಾತ್ಮನಾ ತು ಸದೃಶಮಾತ್ಮಾನಂ ಪರಮಂ ದದೌ ।
ಸರ್ವಕಾರ್ಯಾಪರಾಧ್ಯತ್ವಾನ್ನಾಪರಾದ್ಧ್ಯಂತಿ ಚಾಂಗನಾಃ ॥೩೭॥

ಹೆಣ್ಣಿಗೆ ಪತಿಯೇ ಪರಮಶ್ರೇಷ್ಠನಾದವನು. ಸ್ತ್ರೀಗೆ ಎಲ್ಲಾ ದೇವತೆಗಳಿಗಿಂತಲೂ ಪತಿಯೇ ಪರಮೋತ್ಕೃಷ್ಟನಾದ ದೇವತೆ ಎಂದು ಹೇಳಲ್ಪಟ್ಟಿದೆ. ತನ್ನ ಪತಿಯ ಶರೀರಕ್ಕೆ ಅನುಗುಣವಾದ ಶರೀರವನ್ನು, ವೇಷಭೂಷಣಗಳನ್ನು ಧರಿಸಿ ಆಗಮಿಸಿದ ಇಂದ್ರನನ್ನು ನೋಡಿ, ತನ್ನ ಶ್ರೇಷ್ಠವಾದ ಶರೀರವನ್ನು ಅವನಿಗೆ ಅರ್ಪಿಸಿದಳು. ಸಮಸ್ತ ಕಾರ್ಯಗಳಲ್ಲಿಯೂ ಸ್ತ್ರೀಯರು ಪರಾಧೀನರಾದುದರಿಂದ ಅವರೆಂದಿಗೂ ಅಪರಾಧಿಗಳಾಗುವುದಿಲ್ಲ.

ಯಶ್ಚನೋಕ್ತೋಽಥ ನಿರ್ದೇಶಃ ಸ್ತ್ರಿಯಾ ಮೈಥುನವೃತ್ತಯೇ ।
ತಸ್ಯ ಸ್ಮಾರಯತೋ ವ್ಯಕ್ತಮಧರ್ಮೋ ನಾತ್ರ ಸಂಶಯಃ ॥೩೮॥

ಸ್ತ್ರೀಯರಿಗೆ ಋತುಕಾಲಕ್ಕಿಂತ ಅತಿರಿಕ್ತವಾದ ಕಾಲದಲ್ಲಿ ಮೈಥುನ ವ್ಯಾಪಾರವು ಹೇಳಲ್ಪಟ್ಟಿರುವುದಿಲ್ಲ. ಬೇರೆ ಸಮಯದಲ್ಲಿ ಮೈಥುನ ಭಾವವನ್ನು ಸ್ಮರಿಸುವ ಪುರುಷನಿಗೆ ಅಧರ್ಮ ಉಂಟಾಗುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯಾವನ್ನಾರೀಂ ಮಾತರಂ ಚ ಗೌರವೇ ಚಾಧಿಕೇ ಸ್ಥಿತಾಮ್ ।
ಅವಧ್ಯಾಂ ತು ವಿಜಾನೀಯುಃ ಪಶವೋಽಪ್ಯವಿಚಕ್ಷಣಾಃ ॥೩೯॥

ಗೌರವದ ಸ್ಥಾನದಲ್ಲಿ ತಾಯಿಯನ್ನು, ನಾರಿಯನ್ನು ಯಾರು ಅವಧ್ಯಳು ಎಂಬುದಾಗಿ ತಿಳಿದುಕೊಳ್ಳುವುದಿಲ್ಲವೋ ಅವರು ಪಶುತುಲ್ಯರು, ದಡ್ಡರು.

ದೇವತಾನಾಂ ಸಮಾವಾಯಮೇಕಸ್ಥಂ ಪಿತರಂ ವಿದುಃ ।
ಮರ್ತ್ಯಾನಾಂ ದೇವತಾನಾಂ ಚ ಸ್ನೇಹಾದಧ್ಯೇತಿ ಮಾತರಮ್ ॥೪೦॥

ತಂದೆಯ ವಿಷಯವನ್ನು ನೋಡಿದಾಗ ಮಗನು ತಂದೆಯನ್ನು ಅನೇಕ ದೇವತೆಗಳ ಸಮುದಾಯವೆಂದೇ ಭಾವಿಸಬೇಕು. ಮನುಷ್ಯರಲ್ಲಿಯೂ, ದೇವತೆಗಳಲ್ಲಿಯೂ ಇರುವ ಭಾವವನ್ನು ಮಗನು ತಾಯಿಯಲ್ಲಿ ಹೆಚ್ಚಾಗಿಯೇ ತೋರಿಸಬೇಕು.

ಏವಂ ವಿಮೃಶತಸ್ತಸ್ಯ ಚಿರಕಾರಿತಯಾ ಬಹು ।
ದೀರ್ಘಃ ಕಾಲೋ ವ್ಯತಿಕ್ರಾಂತಸ್ತತಸ್ತಸ್ಯಾಗಮತ್ ಪಿತಾ ॥೪೧॥

ಈ ರೀತಿಯಾಗಿ ವಿಚಾರ ಮಾಡುತ್ತಿರುವ ಆ ಚಿರಕಾರಿಗೆ, ಈಗ ಏನು ಮಾಡುವುದು? ಎಂದು ಚಿಂತಿಸುತ್ತಲೇ ದೀರ್ಘಕಾಲವು ಕಳೆದು ಹೋಯಿತು. ಇಷ್ಟರಲ್ಲಿ ಕಾಡಿಗೆ ಹೋದ ಗೌತಮರು ಹಿಂದಿರುಗಿ ಬಂದರು.

ಮೇಧಾತಿಥಿರ್ಮಹಾಪ್ರಾಜ್ಞೋ ಗೌತಮಸ್ತಪಸಿ ಸ್ಥಿತಃ ।
ವಿಮೃಶ್ಯ ತೇನ ಕಾಲೇನ ಪತ್ನ್ಯಾಃ ಸಂಸ್ಥಾವ್ಯತಿಕ್ರಮಮ್ ॥೪೨॥

ಅವನಾದರೂ ಮೇಧಾತಿಥಿ ಗೌತಮನು ಮಹಾಪ್ರಾಜ್ಞನು. ತಾನು ತಪಸ್ಸಿನಲ್ಲಿ ಕುಳಿತು ಎಲ್ಲವನ್ನೂ ವಿಮರ್ಶೆ ಮಾಡಿ, ತನ್ನ ಪತ್ನಿಯನ್ನು ಸಂಹರಿಸುವುದು ಯೋಗ್ಯವಾದುದಲ್ಲ ಎಂದು ನಿಶ್ಚಯಿಸಿದ್ದನು.

ಸೋಽಬ್ರವೀದ್ ಭೃಶಸಂತಪ್ತೋ ಭೃಶಮಶ್ರೂಣಿ ವರ್ತಯನ್ ।
ಶ್ರುತಧೈರ್ಯಪ್ರಸಾದೇನ ಪಶ್ಚಾತ್ತಾಪಮುಪಾಗತಃ ॥೪೩॥

ಅತ್ಯಂತ ಪಶ್ಚಾತ್ತಾಪದಿಂದ ಸಂತಾಪಗೊಂಡ ಗೌತಮನು ದುಃಖದಿಂದ ಕಣ್ಣೀರನ್ನು ಸುರಿಸುತ್ತಾ, ವೇದಾಧ್ಯಯನದ ಮೂಲಕ ಧೈರ್ಯವನ್ನು ಹೊಂದಿದ ಕಾರಣದಿಂದ ಚಿಂತೆ, ದುಃಖವನ್ನು ದಾಟಿದ ಬಳಿಕ ಸೈರಿಸಿಕೊಂಡು ಹೀಗೆ ಹೇಳಿದನು.

ಆಶ್ರಮಂ ಮಮ ಸಂಪ್ರಾಪ್ತಸ್ತ್ರಿಲೋಕೇಶಃ ಪುರಂದರಃ ।
ಅತಿಥಿವ್ರತಮಾಸ್ಥಾಯ ಬ್ರಾಹ್ಮಣಂ ರೂಪಮಾಸ್ಥಿತಃ ॥೪೪॥

ಮೂರುಲೋಕದ ಒಡೆಯನಾದ ಪುರಂದರನು ನನ್ನ ಆಶ್ರಮಕ್ಕೆ ಆಗಮಿಸಿದನು. ಅತಿಥಿ ವ್ರತವನ್ನು ಆಶ್ರಯಿಸಿ ಬ್ರಾಹ್ಮಣ ರೂಪವನ್ನು ಹೊಂದಿದನು.

ಸಮಯಾ ಸಾಂತ್ವಿತೋ ವಾಗ್ಭಿಃ ಸ್ವಾಗತೇನಾಭಿಪೂಜಿತಃ ।
ಅರ್ಘ್ಯಂ ಪಾದ್ಯಂ ಚ ನ್ಯಾಯೇನ ತಯಾಭಿಪ್ರತಿಪಾದಿತಃ ॥೪೫॥

ಅವನನ್ನು ಯೋಗ್ಯವಾದ ಮಾತುಗಳಿಂದ ಸಾಂತ್ವನಗೊಳಿಸಿ, ಸ್ವಾಗತವನ್ನು ನೀಡಿ ಪೂಜಿಸಿದೆನು. ಬ್ರಾಹ್ಮಣ ವೇಷದಲ್ಲಿರುವ ಅವನಿಗೆ ಅರ್ಘ್ಯ-ಪಾದ್ಯಗಳನ್ನು ನ್ಯಾಯದ ರೀತಿಯಲ್ಲಿಯೇ ಇತ್ತು ಸತ್ಕರಿಸಿದೆನು.

ಪರವಾನಸ್ಮಿ ಚೇತ್ಯುಕ್ತಃ ಪ್ರಣಯಿಷ್ಯತಿ ತೇನ ಚ ।
ಅತ್ರ ಚಾಕುಶಲೇ ಜಾತೇ ಸ್ತ್ರಿಯೋ ನಾಸ್ತಿ ವ್ಯತಿಕ್ರಮಃ ॥೪೬॥

ಏವಂ ನ ಸ್ತ್ರೀ ನ ಚೈವಾಹಂ ನಾಧ್ವಗಸ್ತ್ರಿದಶೇಶ್ವರಃ ।
ಅಪರಾದ್ಧ್ಯತಿ ಧರ್ಮಸ್ಯ ಪ್ರಮಾದಸ್ತ್ವಪರಾದ್ಧ್ಯತಿ ॥೪೭॥

ಉಪಚಾರದಿಂದ ಇಂದ್ರನು ಪ್ರಸನ್ನನಾಗುತ್ತಾನೆಂದು ನಾನು ನಿನ್ನ ಅಧೀನನಾಗಿರುತ್ತೇನೆ ಎಂದು ಹೇಳಿದೆನು. ಈ ಇಂದ್ರನ ಅಭಿಪ್ರಾಯವನ್ನು ತಿಳಿಯುವುದರಲ್ಲಿ ಮಂದಳಾದ ನನ್ನ ಪತ್ನಿಯು ಅವನ ಪ್ರದರ್ಶನಕ್ಕೆ ತುತ್ತಾದಳು. ಇಲ್ಲಿ ನನ್ನ ಪತ್ನಿಯ ಅಪರಾಧವೇನೂ ಇರುವುದಿಲ್ಲ. ಈ ಸಂದರ್ಭದಲ್ಲಿ ನನ್ನ ಪತ್ನಿಯು ಅಪರಾಧಿನಿಯಲ್ಲ. ನಾನೂ ಅಪರಾಧಿಯಲ್ಲ. ಬ್ರಾಹ್ಮಣ ವೇಷದಲ್ಲಿ ಆಗಮಿಸಿದ ದೇವತೆಗಳ ಈಶ್ವರನಾದ ಇಂದ್ರನೂ ಅಪರಾಧಿಯಲ್ಲ. ನಾನು ಧರ್ಮದ ವಿಷಯದಲ್ಲಿ ಪ್ರಮಾದ ಮಾಡಿ ಆಡಿದ ಆಕೆಯನ್ನು ಕೊಲ್ಲು ಎಂಬ ಮಾತೇ ಅಪರಾಧವಾಗಿದೆ.

ವ್ಯಾಖ್ಯಾನ ವಿಶೇಷ– ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಪ್ರದರ್ಶನಾತ್ ಎಂಬ ಶಬ್ದಕ್ಕೆ ಗುರುರಾಜರು 'ಬಲಾತ್ಕಾರೇಣ ರಮಣಾತ್ ಅನೇನ ಅಹಲ್ಯಾಃ ನಾಪರಾಧ್ಯೋಽಸ್ತಿತಿ ಸೂಚಿತಮ್' ಎಂದು ಹೇಳಿದ್ದಾರೆ. ಇಂದ್ರನೇ ರಮಣ ಮಾಡಿದ್ದಾನಾದ್ದರಿಂದ ಅಹಲ್ಯೆಯ ಅಪರಾಧವು ಇಲ್ಲ. ಭಗವತ್ಸಂಕಲ್ಪಕ್ಕನುಗುಣವಾಗಿ ಇಂದ್ರನು ಆಗಮಿಸಿದ್ದಾನಾದ್ದರಿಂದ ಇಂದ್ರನ ಅಪರಾಧವೂ ಇಲ್ಲ ಎಂಬ ಈ ಗೌತಮರ ನಿರ್ಣಯವು ಶಾಸ್ತ್ರೀಯವಾದುದು.

ಈರ್ಷ್ಯಾಜಂ ವ್ಯಸನಂ ಪ್ರಾಹುಸ್ತೇನ ಚೈವೋರ್ಧ್ವರೇತಸಃ ।
ಈರ್ಷ್ಯಯಾ ತ್ವಹಮಾಕ್ಷಿಪ್ತೋ ಮಗ್ನೋ ದುಷ್ಕೃತಸಾಗರೇ ॥೪೮॥

ಊರ್ಧ್ವರೇತಸ್ಕರಾದ ಋಷಿಗಳು ಪ್ರಮಾದವನ್ನು ಈರ್ಷ್ಯೆಯಿಂದ ಹುಟ್ಟಿದ ವ್ಯಸನವೆನ್ನುತ್ತಾರೆ. ಈರ್ಷ್ಯೆಯ ಕಾರಣದಿಂದಲೇ ನಾನು ಪಾಪಸಾಗರದಲ್ಲಿ ಎಸೆಯಲ್ಪಟ್ಟವನಾಗಿ ಮುಳುಗಿ ಹೋದೆನು.

ಹತ್ವಾ ಸಾಧ್ವೀಂ ಚ ನಾರೀಂ ಚ ವ್ಯಸನಿತ್ವಾಚ್ಚ ಶಾಸಿತಾಮ್ ।
ಭರ್ತೃವ್ಯತ್ವೇನ ಭಾರ್ಯಾಂ ಚ ಕೋ ನು ಮಾಂ ತಾರಯಿಷ್ಯತಿ ॥೪೯॥

ಸಾಧ್ವಿಯಾದ ನಾರಿಯನ್ನು, ವ್ಯಸನಿಯಾದ ಇಂದ್ರನಿಂದ ಬಲಾತ್ಕಾರಕ್ಕೆ ತುತ್ತಾಗಿರುವ ಈಕೆಯನ್ನು ಭರಿಸಬೇಕಾದದ್ದು, ಪೋಷಿಸಬೇಕಾದದ್ದು ನನ್ನ ಕರ್ತವ್ಯವಾಗಿದೆ. ಒಂದು ವೇಳೆ ಈಕೆಯನ್ನು ಕೊಂದ ಬಳಿಕ ಯಾರು ನನ್ನನ್ನು ಸ್ತ್ರೀ ಹತ್ಯಾ ಪಾಪದಿಂದ ದಾಟಿಸುತ್ತಾರೆ?

ಅಂತರೇಣ ಮಯಾಜ್ಞಪ್ತಶ್ಚಿರಕಾರೀ ಹ್ಯುದಾರಧೀಃ ।
ಯದ್ಯದ್ಯ ಚಿರಕಾರೀ ಸ್ಯಾತ್ಸ ಮಾಂ ತ್ರಾಯೇತ ಪಾತಕಾತ್ ॥೫೦॥

ಉದಾರವಾದ ಬುದ್ಧಿಯುಳ್ಳ ಚಿರಕಾರಿಗೆ ತಾಯಿಯನ್ನೇ ಕೊಲ್ಲು ಎಂದು ನಾನು ಆಜ್ಞಾಪಿಸಿದೆನು. ಅವನು ತನ್ನ ಹೆಸರಿಗೆ ತಕ್ಕಂತೆ ತನ್ನ ಕಾರ್ಯದಲ್ಲಿ ವಿಳಂಬ ಮಾಡಿದ್ದಲ್ಲಿ ಅವನೇ ನನ್ನನ್ನು ಮಹಾಪಾತಕದಿಂದ ದಾಟಿಸಿಯಾನು!

ಚಿರಕಾರಿಕ ಭದ್ರಂ ತೇ ಭದ್ರಂ ತೇ ಚಿರಕಾರಿಕ ।
ಯದ್ಯದ್ಯ ಚಿರಕಾರೀ ತ್ವಂ ತತೋಽಸಿ ಚಿರಕಾರಿಕಃ ॥೫೧॥

ಚಿರಕಾರಿಯೇ ನಿನಗೆ ಮಂಗಳವಾಗಲಿ. ವಿಳಂಬಿಯೇ, ನಿನಗೆ ಕಲ್ಯಾಣವಾಗಲಿ. ನೀನು ನಿನ್ನ ಹೆಸರಿಗನುಗುಣವಾಗಿ ಕಾರ್ಯದಲ್ಲಿ ವಿಳಂಬವನ್ನು ಮಾಡಿದ್ದಲ್ಲಿ ನೀನು ನಿಜವಾಗಿಯೂ ಚಿರಕಾರಿ ಎಂದು ಪ್ರಸಿದ್ಧನಾಗುತ್ತಿ.

ತ್ರಾಹಿ ಮಾಂ ಮಾತರಂ ಚೈವ ತಪೋ ಯಚ್ಚಾರ್ಜಿತಂ ಮಯಾ ।
ಆತ್ಮಾನಂ ಪಾತಕೇಭ್ಯಶ್ಚ ಭವಾದ್ಯ ಚಿರಕಾರಿಕಃ ॥೫೨॥

ಮಗನೇ, ನೀನು ನಿಧಾನಕ್ಕೆ ಕಾರ್ಯತತ್ಪರನಾಗು. ನನ್ನನ್ನು, ನಿನ್ನ ತಾಯಿಯನ್ನು

ರಕ್ಷಿಸು. ನನ್ನಿಂದ ಗಳಿಸಲ್ಪಟ್ಟ ತಪಸ್ಸನ್ನು ರಕ್ಷಿಸು. ನನ್ನನ್ನು ಸ್ತ್ರೀಹತ್ಯಾದಿ ಪಾಪಗಳಿಂದ ರಕ್ಷಿಸು.

ಸಹಜಂ ಚಿರಕಾರಿತ್ವಂ ಚಿರಪ್ರಾಜ್ಞತಯಾ ತವ ।
ಸಫಲಂ ತತ್ತವಾದ್ಯಾಸ್ತು ಭವಾದ್ಯ ಚಿರಕಾರಿಕಃ ॥೫೩॥

ನೀನು ಅತ್ಯಂತ ಜಾಣನಾಗಿರುವುದರಿಂದ ಚಿರಕಾರಿತ್ವ ಎಂಬ ಹೆಸರು ನಿನಗೆ ಸಹಜವಾದ ಗುಣವಾಗಿದೆ. ನಿನ್ನ ಚಿರಕಾರಿತ್ವವು ಸಾರ್ಥಕ್ಯ ಹೊಂದಲಿ. ನೀನು ನಿನ್ನ ಕಾರ್ಯದಲ್ಲಿ ವಿಳಂಬ ಮಾಡು.

ಚಿರಮಾಶಂಸಿತೋ ಮಾತ್ರಾ ಚಿರಂ ಗರ್ಭೇಣ ಧಾರಿತಃ ।
ಸಫಲಂ ಚಿರಕಾರಿತ್ವಂ ಕುರು ತ್ವಂ ಚಿರಕಾರಿಕ ॥೫೪॥

ಬಹಳ ಕಾಲದಿಂದ ನಿನ್ನ ತಾಯಿಯು ನಿನ್ನನ್ನು ಗರ್ಭದಲ್ಲಿ ಧರಿಸಿ ಸಲಹಿದ್ದಾಳೆ. ಅವಳು ಚಿರಕಾಲ ಗರ್ಭದಲ್ಲಿ ಧರಿಸಿದ್ದರಿಂದಲೇ ನೀನು ಬಹಳ ಕಾಲವನ್ನು ಕ್ರಿಯೆಗಳಲ್ಲಿ ತೆಗೆದುಕೊಳ್ಳುತ್ತಿ. ಆ ತಾಯಿಯು ಬಹಳ ಕಾಲ ಧರಿಸಿದ ಕಾರಣದಿಂದ ಆ ಹೆಸರನ್ನು ಸಫಲವನ್ನಾಗಿಸು.

ಚಿರಾಯತೇ ಚ ಸಂತಾಪಾಚ್ಚಿರಂ ಸ್ವಪಿತಿ ವಾರಿತಃ ।
ಆವಯೋಶ್ಚಿರಸಂತಾಪಾದವೇಕ್ಷ್ಯ ಚಿರಕಾರಿಕ ॥೫೫॥

ನನ್ನ ಪ್ರಿಯಪುತ್ರನಾದ ಚಿರಕಾರಿಯು ದುಃಖವು ಸನ್ನಿಹಿತವಾಗಿದ್ದರೂ ವಿಳಂಬ ಕಾರ್ಯಸ್ವಭಾವವನ್ನು ಬಿಡನು. ನಮ್ಮೀರ್ವರಿಗೆ ಚಿರಕಾಲ ಒದಗುವ ಸಂತಾಪವನ್ನು ಗಮನಿಸಿಯಾದರೂ ಚಿರಕಾರಿಯು ವಿಳಂಬ ಕಾರ್ಯವನ್ನು ಮಾಡಿದವನಾಗಲಿ.

ಏವಂ ಸ ದುಃಖಿತೋ ರಾಜನ್ಮಹರ್ಷಿರ್ಗೌತಮಸ್ತದಾ ।
ಚಿರಕಾರಿಂ ದದರ್ಶಾಥ ಪುತ್ರಂ ಸ್ಥಿತಮಥಾಂತಿಕೇ ॥೫೬॥

ಈ ರೀತಿಯಾಗಿ ಗೌತಮಋಷಿಯು ಬಹಳ ದುಃಖಿತನಾಗಿ, ತನ್ನ ಸಮೀಪದಲ್ಲಿಯೇ ಇದ್ದ ಚಿರಕಾರಿಯನ್ನು ನೋಡಿದನು.

ಚಿರಕಾರೀ ತು ಪಿತರಂ ದೃಷ್ಟ್ವಾ ಪರಮದುಃಖಿತಃ ।
ಶಸ್ತ್ರಂ ತ್ಯಕ್ತ್ವಾ ತತೋ ಮೂರ್ಧ್ನಾ ಪ್ರಸಾದಾಯೋಪಚಕ್ರಮೇ ॥೫೭॥

ಚಿರಕಾರಿಯಾದರೂ ತಂದೆಯನ್ನು ಕಂಡೊಡನೆ ಪರಮ ದುಃಖಿತನಾಗಿ ಕತ್ತಿಯನ್ನು ತೊರೆದು ತಂದೆಯ ಪಾದಗಳ ಮೇಲೆ ತಲೆಯನ್ನಿಟ್ಟು ತಂದೆಯನ್ನು ಪ್ರಸನ್ನಗೊಳಿಸಲು ಪ್ರಾರಂಭಿಸಿದನು.

ಗೌತಮಸ್ತು ಸುತಂ ದೃಷ್ಟ್ವಾ ಶಿರಸಾ ಪತಿತಂ ಭುವಿ ।
ಪತ್ನೀಂ ಚೈವ ನಿರಾಕಾರಾಂ ಪರಾಮಭ್ಯಗಮನ್ಮುದಮ್ ॥೫೮॥

ತನ್ನ ಪಾದದಲ್ಲಿ ಬಿದ್ದಿರುವ ಮಗನನ್ನು ಮತ್ತು ತನ್ನ ಪಾದದಲ್ಲಿಯೇ ಶುದ್ಧ ಭಾವನೆಯಿಂದ ಬಿದ್ದಿರುವ ಪತ್ನಿಯನ್ನು ಕಂಡ ಗೌತಮರು ಅತ್ಯಂತ ಶ್ರೇಷ್ಠವಾದ ಸಂತೋಷವನ್ನು ಹೊಂದಿದರು.

ನ ಹಿ ಸಾ ತೇನ ಸಂಭೇದಂ ಪತ್ನೀ ನೀತಾ ಮಹಾತ್ಮನಾ ।
ವಿಜನೇ ಚಾಶ್ರಮಸ್ಥೇನ ಪುತ್ರಶ್ಚಾಪಿ ಸಮಾಹಿತಃ ॥೫೯॥

ನಿರ್ಜನವಾದ ಆಶ್ರಮದಲ್ಲಿ ವಾಸ ಮಾಡುತ್ತಿದ್ದ ಗೌತಮರು ಧರ್ಮದಲ್ಲಿಯೇ ಏಕಾಗ್ರ ಮನಸ್ಸನ್ನು ಹೊಂದಿದ ಮಗನಾದ ಚಿರಕಾರಿಯನ್ನಾಗಲಿ, ಪತ್ನಿಯನ್ನಾಗಲಿ ಎಂದೂ ಬಿಟ್ಟು ಹೋಗಲಿಲ್ಲ.

ಹನ್ಯಾತ್ತ್ವನಪವಾದೇನ ಶಸ್ತ್ರಪಾಣೌ ಸುತೇ ಸ್ಥಿತೇ ।
ವಿನೀತಂ ಪ್ರಶ್ನಯಿತ್ವಾ ಚ ವಿವಾಸೇ ಚಾತ್ಮಕರ್ಮಸು ॥೬೦॥

ಗೌತಮರು ಮೊದಲು ನಿನ್ನ ತಾಯಿಯನ್ನು ಕೊಲ್ಲು ಎಂದು ಆಜ್ಞೆಯನ್ನು ಮಾಡಿದ ಕೂಡಲೇ ಅವನು ಶಸ್ತ್ರಪಾಣಿಯಾಗಿ ನಿಂತನು. ಅವನು ಗೌತಮರ ವಿಷಯದಲ್ಲಿ ವಿನೀತನೂ ಆಗಿದ್ದನು. ಈಗ ಗೌತಮನು ಅವನನ್ನು ತಾಯಿಯ ವಿಷಯದಲ್ಲಿ ಪ್ರಶ್ನಿಸಿ, ಸಮ್ಮತಿಸಿ ತನ್ನ ಕೆಲಸಗಳಲ್ಲಿ ಬಹುಕಾಲ ವಿಚಾರವನ್ನು ಮಾಡಿ ಇರುತ್ತಿ ಎಂದು ಹೇಳಿದನು.

ಬುದ್ಧಿಶ್ಚಾಸೀತ್ ಸುತಂ ದೃಷ್ಟ್ವಾ ಪಿತುಶ್ಚರಣಯೋರ್ನತಮ್ ।
ಶಸ್ತ್ರಗ್ರಹಣಚಾಪಲ್ಯಂ ಸಂವೃಣೋತಿ ಭಯಾದಿತಿ ॥೬೧॥

ಶಸ್ತ್ರವನ್ನು ತ್ಯಾಗ ಮಾಡಿ ತನ್ನ ಕಾಲಿನ ಮೇಲೆ ಬಿದ್ದಿರುವುದನ್ನು ಕಂಡ ಗೌತಮನು, ತನ್ನಲ್ಲಿ ಭಯದಿಂದಾಗಿ ತನ್ನ ಶಸ್ತ್ರಗ್ರಹಣ ಚಪಲತೆಯನ್ನು ಮುಚ್ಚಿಡುತ್ತಿದ್ದಾನೆಂದು ಅವನ ಬುದ್ಧಿಗೆ ತೋರಿತು.

ತತಃ ಪಿತ್ರಾ ಚಿರಂ ಸ್ತುತ್ವಾ ಚಿರಂ ಚಾಘ್ರಾಯ ಮೂರ್ಧನಿ ।
ಚಿರಂ ದೋರ್ಭ್ಯಾಂ ಪರಿಷ್ವಜ್ಯ ಚಿರಂ ಜೀವೇತ್ಯುದಾಹೃತಃ ॥೬೨॥

ಬಳಿಕ ಗೌತಮನು ತನ್ನ ಎರಡೂ ಕೈಗಳಿಂದ ಅವನನ್ನು ಮೇಲಕ್ಕೆತ್ತಿ ಆಲಿಂಗಿಸಿದನು. ಅವನನ್ನು ಅನೇಕ ಕಾಲ ಪ್ರಶಂಸಿಸಿದನು. ಪ್ರೀತಿಯಿಂದ ಅವನ ತಲೆಯನ್ನು ಮತ್ತೂ ಮತ್ತೂ ಆಘ್ರಾಣಿಸಿದನು.

ಏವಂ ಸ ಗೌತಮಃ ಪುತ್ರಂ ಪ್ರೀತಿಹರ್ಷಸಮನ್ವಿತಃ ।
ಅಭಿನಂದ್ಯ ಮಹಾಪ್ರಾಜ್ಞ ಇದಂ ವಚನಮಬ್ರವೀತ್ ॥೬೩॥

ಈ ರೀತಿಯಾಗಿ ಗೌತಮನು ಪ್ರೀತಿ-ಹರ್ಷಗಳಿಂದ ಕೂಡಿಕೊಂಡು ಮಗನನ್ನು ಅಭಿನಂದಿಸಿ ಈ ರೀತಿಯಾದ ಮಾತುಗಳನ್ನು ಹೇಳಿದನು.

ಚಿರಕಾರಿಕ ಭದ್ರಂ ತೇ ಚಿರಕಾರೀ ಚಿರಂ ಭವ ।
ಚಿರಾಯಯತಿ ತೇ ಸೌಮ್ಯ ಚಿರಮಸ್ಮಿ ನ ದುಃಖಿತಃ ॥೬೪॥

ತುಂಬಾ ಕಾಲದ ಬಳಿಕ ಕೆಲಸವನ್ನು ಮಾಡುವ ಚಿರಕಾರಿಯೇ, ನಿನಗೆ ಮಂಗಳವಾಗಲಿ. ನೀನು ಚಿರಂಜೀವಿಯಾಗು. ನಿನ್ನ ಕಾರ್ಯವು ಹೀಗೇ ಚಿರಕಾಲ ವಿಳಂಬವಾಗುತ್ತಿದ್ದರೆ ನಾನೂ ಚಿರಕಾಲದ ತನಕ ದುಃಖಕ್ಕೆ ಈಡಾಗುವುದಿಲ್ಲ ಎಂದನು.

ಗಾಥಾಶ್ಚಾಪ್ಯಬ್ರವೀದ್ ವಿದ್ವಾನ್ ಗೌತಮೋ ಮುನಿಸತ್ತಮಃ ।
ಚಿರಕಾರಿಷು ಧೀರೇಷು ಗುಣೋದ್ದೇಶಸಮಾಶ್ರಯಾತ್ ॥೬೫॥

ಹೀಗೆ ಹೇಳುತ್ತಾ ಋಷಿಶ್ರೇಷ್ಠನು ಅವನ ಚಿರಕಾರಿತ್ವವನ್ನು ಪ್ರಶಂಸಿಸಿ, ಕೆಲವು ಗಾದೆಗಳನ್ನು ಹೇಳಿದನು. ಚಿರಕಾರಿಯ ಗುಣೋದ್ದೇಶಗಳನ್ನು ಅನುಸರಿಸಿ ಕೆಲವು ಶ್ಲೋಕಗಳನ್ನು ಹೇಳಿದನು.

ಚಿರೇಣ ಮಿತ್ರಂ ಬಧ್ನೀಯಾಚ್ಚಿರೇಣ ಚ ಕೃತಂ ತ್ಯಜೇತ್ ।
ಚಿರೇಣ ಹಿ ಕೃತಂ ಮಿತ್ರಂ ಚಿರಂ ಧಾರಣಮರ್ಹತಿ ॥೬೬॥

ಬಹಳ ಕಾಲದ ತನಕ ಚೆನ್ನಾಗಿ ಆಲೋಚಿಸಿ ಒಬ್ಬ ಮಿತ್ರನ ಸಂಬಂಧವನ್ನು ಬೆಳೆಸಬೇಕು. ಮೈತ್ರಿಯನ್ನು ಹೊಂದಿದ ಬಳಿಕ ಬೇಗ ಮೈತ್ರಿಯನ್ನು ಕಳೆದುಕೊಳ್ಳಬಾರದು. ಅನಿವಾರ್ಯವಾದರೂ ಬಹಳ ಕಾಲ ಯೋಚಿಸಿ ನಂತರ ಮಿತ್ರತ್ವವನ್ನು ತ್ಯಜಿಸಬೇಕು. ಮಿತ್ರತ್ವವು ಹೆಚ್ಚು ಕಾಲ ಧರಿಸಲು ಯೋಗ್ಯವಾಗಿರುತ್ತದೆ.

ರಾಗೇ ದರ್ಪೇ ಚ ಮಾನೇ ಚ ದ್ರೋಹೇ ಪಾಪೇ ಚ ಕರ್ಮಣಿ ।
ಅಪ್ರಿಯೇ ಚೈವ ಕರ್ತವ್ಯೇ ಚಿರಕಾರೀ ಪ್ರಶಂಸ್ಯತೇ ॥೬೭॥

ರಾಗ, ದರ್ಪ, ಅಭಿಮಾನ, ದ್ರೋಹ, ಪಾಪಕರ್ಮ, ಅಪ್ರಿಯಕಾರ್ಯ - ಈ ವಿಷಯದಲ್ಲಿ ಯಾವನು ತಡ ಮಾಡುತ್ತಾನೋ ಅವನು ಪ್ರಶಂಸಾಪಾತ್ರನಾಗುತ್ತಾನೆ.

ಬಂಧೂನಾಂ ಸುಹೃದಾಂ ಚೈವ ಭೃತ್ಯಾನಾಂ ಸ್ತ್ರೀಜನಸ್ಯ ಚ ।
ಅವ್ಯಕ್ತೇಷ್ವಪರಾಧೇಷು ಚಿರಕಾರೀ ಪ್ರಶಂಸ್ಯತೇ ॥೬೮॥

ಬಂಧುಗಳು, ಸ್ನೇಹಿತರು, ಸೇವಕರು, ಸ್ತ್ರೀಯರು ಇವರು ತಿಳಿಯದಂತೆ ಅಪರಾಧಗಳನ್ನು ಮಾಡಿದಾಗ ಅದಕ್ಕೆ ಶಿಕ್ಷೆಯನ್ನು ವಿಧಿಸುವಾಗ ಚಿರಕಾರಿಯು ದೃಷ್ಟಾಂತವಾಗುತ್ತಾನೆ.

ಏವಂ ಸ ಗೌತಮಸ್ತಸ್ಯ ಪ್ರೀತಃ ಪುತ್ರಸ್ಯ ಭಾರತ ।
ಕರ್ಮಣಾ ತೇನ ಕೌರವ್ಯ ಚಿರಕಾರಿತಯಾ ತಯಾ ॥೬೯॥

ಏವಂ ಸರ್ವೇಷು ಕಾರ್ಯೇಷು ವಿಮೃಶ್ಯ ಪುರುಷಸ್ತತಃ ।
ಚಿರೇಣ ನಿಶ್ಚಯಂ ಕೃತ್ವಾ ಚಿರಂ ನ ಪರಿತಪ್ಯತೇ ॥೭೦॥

ಹೀಗೆ ಗೌತಮನು ಮಗನು ವಿಚಾರ ಮಾಡಿ ನಿಧಾನಕ್ಕೆ ಕಾರ್ಯಗಳನ್ನು ಮಾಡುವ ಸ್ವಭಾವವನ್ನು ಹೊಂದಿರುವ ಗುಣವನ್ನು ಕಂಡು ಬಹಳ ಪ್ರಸನ್ನನಾದನು. ಈ ರೀತಿ ಬಹಳ ಕಾಲ ವಿಚಾರ ಮಾಡಿ ಕಾರ್ಯ ಮಾಡುವ ಪುರುಷನು ಪಶ್ಚಾತ್ತಾಪ ಪಡುವ ಪ್ರಸಂಗವು ಒದಗುವುದಿಲ್ಲ.

ಚಿರಂ ಧಾರಯತೇ ರೋಷಂ ಚಿರಂ ಕರ್ಮ ನಿಯಚ್ಛತಿ ।
ಪಶ್ಚಾತ್ತಾಪಕರಂ ಕರ್ಮ ನ ಕಿಂಚಿದುಪಪದ್ಯತೇ ॥೭೧॥

ಯಾವನು ತುಂಬಾ ಕಾಲದ ತನಕ ಕೋಪವನ್ನು ಹೊರಹಾಕುವುದಿಲ್ಲವೋ, ರೋಷವನ್ನು ಬಹಳ ಕಾಲ ತಡೆದು ನಿಲ್ಲಿಸುತ್ತಾನೋ ಅವನು ಮಾಡುವ ಯಾವ ಕಾರ್ಯಗಳಿಗೂ ಪಶ್ಚಾತ್ತಾಪ ಪಡುವ ಅವಶ್ಯಕತೆ ಇರುವುದಿಲ್ಲ.

ಚಿರಂ ವೃದ್ಧಾನುಪಾಸೀತ ಚಿರಮನ್ವಾಸ್ಯ ಪೂಜಯೇತ್ ।
ಚಿರಂ ಧರ್ಮಾನ್ನಿಷೇವೇತ ಕುರ್ಯಾಚ್ಚಾನ್ವೇಷಣಂ ಚಿರಮ್ ॥೭೨॥

ಬಹಳ ಕಾಲದ ತನಕ ವೃದ್ಧರ ಸೇವೆಯನ್ನು ಮಾಡಿರಿ. ಬಹಳ ಕಾಲದ ತನಕ ವೃದ್ಧರನ್ನು ಅನುಸರಿಸಿ ಅವರನ್ನು ಪೂಜಿಸಿ. ಬಹಳ ಕಾಲ ಧರ್ಮವನ್ನು ಸೇವಿಸಿ. ಬಹಳ ಕಾಲ ಧರ್ಮದ ಅನ್ವೇಷಣೆಯನ್ನು ಮಾಡಿ.

ಚಿರಮನ್ವಾಸ್ಯ ವಿದುಷಶ್ಚಿರಂ ಶಿಷ್ಟಾನ್ನಿಷೇವ್ಯ ಚ ।
ಚಿರಂ ವಿನೀಯ ಚಾತ್ಮಾನಂ ಚಿರಂ ಯಾತ್ಯನವಜ್ಞತಾಮ್ ॥೭೩॥

ಬಹಳ ಕಾಲ ವಿದ್ವಾಂಸರ ಜೊತೆಯಲ್ಲಿ ವಾಸಿಸುತ್ತಾ, ಶಿಷ್ಟರನ್ನು ಸೇವಿಸುತ್ತಾ, ಮನೋನಿಗ್ರಹವನ್ನು ಸಂಪಾದಿಸುವವನು ತುಂಬಾ ಕಾಲ ಆದರವನ್ನು ಹೊಂದುತ್ತಾನೆ. ಎಲ್ಲರಿಂದಲೂ ಸನ್ಮಾನಕ್ಕೆ ಪಾತ್ರನಾಗುತ್ತಾನೆ.

ಬ್ರುವತಶ್ಚ ಪರಸ್ಯಾಪಿ ವಾಕ್ಯಂ ಧರ್ಮೋಪಸಂಹಿತಮ್ ।
ಚಿರಂ ಪೃಚ್ಛೇಚ್ಚಿರಂ ಬ್ರೂಯಾಚ್ಚಿರಂ ನ ಪರಿಭೂಯತೇ ॥೭೪॥

ಧರ್ಮಕ್ಕೆ ಸಂಬಂಧಿಸಿದ ಮಾತುಗಳನ್ನು ಹೇಳುವವನು ಧರ್ಮಸಂಬಂಧ ಪ್ರಶ್ನೆಗಳನ್ನು ಕೇಳಿದರೆ ಧರ್ಮೋಪದೇಶಕನು ಯೋಚಿಸಿ ಕಾಲಿಕವಾಗಿ ಉತ್ತರಿಸಬೇಕು. ಹೀಗೆ ಮಾಡುವುದರಿಂದ ಉಪದೇಶಕನಿಗಾಗಲಿ, ಪೃಚ್ಛಕನಿಗಾಗಲಿ ಪರಿತಾಪ ಉಂಟಾಗುವುದಿಲ್ಲ.

ಉಪಾಸ್ಯ ಬಹುಲಾಸ್ತಸ್ಮಿನ್ನಾಶ್ರಮೇ ಸುಮಹಾತಪಾಃ ।
ಸಮಾಃ ಸ್ವರ್ಗಂ ಗತೋ ವಿಪ್ರಾಃ ಪುತ್ರೇಣ ಸಹಿತಸ್ತದಾ ॥೭೫॥

ಈ ಪ್ರಕರಣದ ಬಳಿಕ ತಪಸ್ವಿಯಾದ, ಬ್ರಹ್ಮರ್ಷಿಯಾದ ಗೌತಮನು ಆ ಆಶ್ರಮದಲ್ಲಿಯೇ ಬಹುವರ್ಷ ವಾಸವಾಗಿದ್ದು, ಕೊನೆಗೆ ಪುತ್ರನ ಜೊತೆಗೆ ಸ್ವರ್ಗ ಸೇರಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚಿರಕಾರಿಕೋಪಾಖ್ಯಾನೇ ಏಕಾಧಿಕಶತತಮೋऽಧ್ಯಾಯಃ॥
ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎರಡನೆಯ ಅಧ್ಯಾಯ

ಪ್ರಜೆಗಳನ್ನು ಹಿಂಸಿಸದೆ ರಾಜ್ಯ ನಿರ್ವಹಿಸುವ ಕ್ರಮವನ್ನು ತಿಳಿಸಲು ದ್ಯುಮತ್ಸೇನ, ಸತ್ಯವಂತರಿಗೆ ನಡೆದ ಸಂವಾದವನ್ನು ಪ್ರಸ್ತಾಪಿಸಿದುದು.

ಯುಧಿಷ್ಠಿರಃ

ಕಥಂ ರಾಜಾ ಪ್ರಜಾ ರಕ್ಷೇನ್ನ ಚ ಕಿಂಚಿತ್ ಪ್ರತಾಪಯೇತ್ ।
ಪೃಚ್ಛಾಮಿ ತ್ವಾಂ ಸತಾಂ ಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೧॥

ಪಿತಾಮಹನೇ, ರಾಜನಾದವನು ಪ್ರಜಾರಕ್ಷಕನಾಗಿದ್ದಾಗ ಪ್ರಜೆಗಳನ್ನು ಹಿಂಸಿಸಬಾರದು. ಯಾವ ಜೀವರನ್ನೂ ಹಿಂಸಿಸದೆ ಹೇಗೆ ಪ್ರಜಾ ಪರಿಪಾಲನೆ ಮಾಡಬೇಕು ಎಂಬುದನ್ನು ನನಗೆ ತಿಳಿಸು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ದ್ಯುಮತ್ಸೇನಸ್ಯ ಸಂವಾದಂ ರಾಜ್ಞಾ ಸತ್ಯವತಾ ಸಹ ॥೨॥

ಧರ್ಮಪುತ್ರನೇ, ಈ ವಿಷಯದಲ್ಲಿ ದ್ಯುಮತ್ಸೇನನಿಗೂ, ಸತ್ಯವಂತನಿಗೂ ನಡೆದ ಸಂವಾದ ರೂಪವಾದ ಇತಿಹಾಸ ಒಂದನ್ನು ಉದಾಹರಿಸುತ್ತಾರೆ.

ಅವ್ಯಾಹೃತಂ ವ್ಯಾಜಹಾರ ಸತ್ಯವಾನಿತಿ ನಃ ಶ್ರುತಮ್ ।
ವಧಾಯ ನೀಯಮಾನೇಷು ಪಿತುರೇವಾನುಶಾಸನಾತ್ ॥೩॥

ಒಮ್ಮೆ ಸತ್ಯವಂತನು ತನ್ನ ತಂದೆಯಾದ ದ್ಯುಮತ್ಸೇನನ ಆದೇಶದಂತೆ ಕೆಲವು ಕೊಲೆಗಾರರನ್ನು ವಧಿಸಲು ಕರೆದುಕೊಂಡು ಹೋಗುತ್ತಿರುವಾಗ ಆಡಿದ ಮಾತು.

ಅಧರ್ಮತಾಂ ಯಾತಿ ಧರ್ಮೋ ಯಾತ್ಯಧರ್ಮಶ್ಚ ಧರ್ಮತಾಮ್ ।
ವಧೋ ನಾಮ ಭವೇದ್ಧರ್ಮೋ ನೈತದ್ಭವಿತುಮರ್ಹತಿ ॥೪॥

ಲೋಕದಲ್ಲಿ ಕೆಲವು ಬಾರಿ ಧರ್ಮವು ಅಧರ್ಮವಾಗುತ್ತದೆ. ಅಧರ್ಮವು ಧರ್ಮವಾಗುತ್ತದೆ. ಆದರೆ ಇಂತಹ ವಧ ಕಾರ್ಯವು ಧರ್ಮವೆಂದು ಎಂದಿಗೂ ಹೇಳಲು ಸಾಧ್ಯವಾಗುವುದಿಲ್ಲ ಎಂದು ಹೇಳಿದನಂತೆ.

ದ್ಯುಮತ್ಸೇನಃ

ಅಥ ಚೇದವಧ್ಯೋ ಧರ್ಮ್ಯೋ ಧರ್ಮಃ ಕೋ ಜಾತುಚಿದ್ಭವೇತ್ ।
ದಸ್ಯವಶ್ಚೇನ್ನ ಹನ್ಯೇರನ್ ಸತ್ಯವನ್ ಸಂಕರೋ ಭವೇತ್ ॥೫॥

ಮಗನು ಹೀಗೆ ಹೇಳಿದಾಗ ಮಗನನ್ನು ಕುರಿತು ದ್ಯುಮತ್ಸೇನನು ಕುಮಾರನೇ, ಇಂತಹ ವಧಾರ್ಹರನ್ನು ಕೊಲ್ಲದಿರುವುದು ಧರ್ಮವಾಗುವ ಪಕ್ಷದಲ್ಲಿ ಈ ಧರ್ಮಕ್ಕೆ ಎಲ್ಲಿ ಸ್ಥಾನ ಲಭಿಸುತ್ತದೆ? ಕಳ್ಳರನ್ನು, ಕೊಲೆಗಾರರನ್ನು ಕೊಲ್ಲದೆ ಬಿಟ್ಟರೆ ಅದು ಅಧರ್ಮವಾಗುವುದರಿಂದ ಧರ್ಮಾಧರ್ಮ ಸಾಂಕರ್ಯ ಉಂಟಾಗುತ್ತದೆ.

ಮಮೇದಮಿತಿ ನಾಸ್ಯೈತತ್ ಪ್ರವರ್ತೇತ ಕಲೌ ಯುಗೇ ।
ಲೋಕಯಾತ್ರಾ ನ ಚೈವ ಸ್ಯಾದಥ ಚೇದ್ ವೇತ್ಥ ಶಂಸ ನಃ ॥೬॥

ಕಲಿಯುಗ ಪ್ರಾರಂಭವಾದ ಬಳಿಕ ಇದು ನನ್ನದು, ಇದು ಅವನದ್ದಲ್ಲ ಎಂದು ಹೇಳಿಕೊಂಡು, ಎಲ್ಲರ ಮುಂದೆಯೇ ಪರದ್ರವ್ಯವನ್ನು ಅಪಹರಿಸಿ ಹೋಗುತ್ತಾರೆ. ಇಂತಹ ತಲೆ ಒಡುಕರನ್ನು ಸಂಹರಿಸದಿದ್ದರೆ ಲೋಕವ್ಯವಹಾರವೇ ನಾಶವಾದೀತು! ಇಂತಹ ವಧಾರ್ಹರನ್ನು ವಧೆ ಮಾಡದೆ, ಲೋಕವನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವುದು ಹೇಗೆ? ನೀನೇ ಹೇಳು.

ಸತ್ಯವಾನ್

ಸರ್ವ ಏವ ತ್ರಯೋ ವರ್ಣಾಃ ಕಾರ್ಯಾ ಬ್ರಾಹ್ಮಣಬಂಧನಾಃ ।
ಧರ್ಮಪಾಶನಿಬದ್ಧಾನಾಮಲ್ಪೋ ವ್ಯಪಚರಿಷ್ಯತಿ ॥೭॥

ತಂದೆಯೇ, ಕ್ಷತ್ರಿಯ, ವೈಶ್ಯ , ಶೂದ್ರ - ಮೂರು ವರ್ಣದವರನ್ನು ಬ್ರಾಹ್ಮಣರ ಅಧೀನರನ್ನಾಗಿ ಮಾಡಬೇಕು. ಧರ್ಮಪಾಶ ನಿಬದ್ಧರಾದವರ ಮಧ್ಯದಲ್ಲಿ ಯಾವ ಲೋಪವೂ ಇಲ್ಲದಂತೆ ಆ ಕಳ್ಳರು ಧರ್ಮಾಚರಣೆಯನ್ನು ಮಾಡುತ್ತಾರೆ. ಬ್ರಾಹ್ಮಣರ ಉಪದೇಶದಿಂದ ಧರ್ಮಬುದ್ಧಿಯುಳ್ಳವರಾಗುತ್ತಾರೆ ಎಂದು ಭಾವ.

ಯೋ ಯಸ್ತೇಷಾಮಪಚರೇತ್ತಮಾಚಕ್ಷೀತ ವೈ ದ್ವಿಜಃ ।
ಅಯಂ ಮೇ ನ ಶೃಣೋತೀತಿ ತಸ್ಮಿನ್ರಾಜಾ ಪ್ರಧಾರಯೇತ್ ॥೮॥

ಒಂದು ವೇಳೆ ಬ್ರಾಹ್ಮಣನ ಒಡನಾಡಿಯಾಗಿದ್ದರೂ ಅವನು ಅಪಚಾರವನ್ನು ಮಾಡಿದರೆ ಬ್ರಾಹ್ಮಣನು, ಈ ವ್ಯಕ್ತಿಯು ನನ್ನ ಮಾತನ್ನು ಕೇಳುತ್ತಿಲ್ಲ ಎಂದು ರಾಜನ ಬಳಿ ಹೇಳಬೇಕು. ಬ್ರಾಹ್ಮಣನ ಮಾತಿನಂತೆ ಆ ಅಪರಾಧಿಗೆ ರಾಜನು ಶಿಕ್ಷೆಯನ್ನು ನೀಡಬೇಕು.

ತತ್ತ್ವಭೇದೇನ ಯಚ್ಚಾಸ್ತ್ರಂ ತತ್ ಕಾರ್ಯಂ ನಾನ್ಯಥಾ ವಧಃ ।
ಅಸಮೀಕ್ಷ್ಯೈವ ಕರ್ಮಾಣಿ ನೀತಿಶಾಸ್ತ್ರಂ ಯಥಾವಿಧಿ ॥೯॥

ಶಿಕ್ಷೆಯನ್ನು ವಿಧಿಸುವಾಗಲೂ ಪ್ರಾಣಾಪಾಯವಾಗದಂತೆ ಶಿಕ್ಷೆಯನ್ನು ವಿಧಿಸಬೇಕು. ನೀತಿ ಶಾಸ್ತ್ರ ಅರಿಯದೆ ಅಪರಾಧಗಳ ಪೂರ್ವಾಪರವನ್ನು ಪರಿಶೀಲಿಸದೆ ಶಿಕ್ಷೆಯನ್ನು ವಿಧಿಸಬಾರದು.

ದಸ್ಯೂನ್ ಹಿನಸ್ತಿ ವೈ ರಾಜಾ ಭೂಯಸೋ ವಾಪ್ಯನಾಗಸಃ ।
ಭಾರ್ಯಾ ಮಾತಾ ಪಿತಾ ಪುತ್ರೋ ಹನ್ಯತೇ ಪುರುಷೇ ಹತೇ ।
ಪರೇಣಾಪಕೃತೇ ರಾಜಾ ತಸ್ಮಾತ್ ಸಮ್ಯಕ್‌ಪ್ರಧಾರಯೇತ್ ॥೧೦॥

ರಾಜನು ಕಳ್ಳರನ್ನು ವಧಿಸುತ್ತಾನೆ. ಅದರಂತೆ ನಿರಪರಾಧಿಗಳನ್ನು ವಧಿಸುತ್ತಾನೆ. ಇದರಿಂದ ಮರಣದಂಡನೆಗೆ ತುತ್ತಾದವನ ಹೆಂಡತಿ, ತಾಯಿ, ತಂದೆ, ಮಗ ಇವರೆಲ್ಲರೂ ಜೀವಿಕೆಯನ್ನು ಕಳೆದುಕೊಂಡು ಮರಣ ಹೊಂದುತ್ತಾರೆ. ಆದ್ದರಿಂದ ಒಬ್ಬನ ಜೊತೆಗೆ ಇಷ್ಟೂ ಮಂದಿಯನ್ನು ಕೊಂದಂತಾಗುತ್ತದೆ. ಆದ್ದರಿಂದ ಮತ್ತೊಬ್ಬರ ಅಪಕಾರಕ್ಕೆ ತುತ್ತಾದ ರಾಜನು ಶಿಕ್ಷೆಗಿಂತ ಮೊದಲೇ ವಿಮರ್ಶೆ ಮಾಡಿ ಶಿಕ್ಷಿಸಬೇಕು.

ಅಸಾಧುಶ್ಚೈವ ಪುರುಷೋ ಲಭತೇ ಶೀಲಮೇಕದಾ ।
ಸಾಧೋಶ್ಚಾಪಿ ಹ್ಯಸಾಧುಭ್ಯೋ ಜಾಯತೇ ಶೋಭನಾ ಪ್ರಜಾ ॥೧೧॥

ಕಳ್ಳನಾಗಿದ್ದರೂ ಸಜ್ಜನರ ಸಹವಾಸದಿಂದ ಒಳ್ಳೆಯ ಗುಣವನ್ನು ಹೊಂದಿದರೆ ಅವನನ್ನು ಸಾಧು ಎಂದು ಬಿಡಬೇಕು. ಸಜ್ಜನರ ಸಂಗದಿಂದ ಆ ದುಷ್ಟನಿಗೂ ಸತ್ಸಂತಾನವು ದೊರೆಯುತ್ತದೆ.

ನ ಮೂಲಘಾತಃ ಕರ್ತವ್ಯೋ ನೈಷ ಧರ್ಮಃ ಸನಾತನಃ ।
ಅಪಿ ಖಿಲ್ವವಧೇನೈವ ಪ್ರಾಯಶ್ಚಿತ್ತಂ ವಿಧೀಯತೇ ॥೧೨॥

ಎಂದಿಗೂ ದುಷ್ಟರನ್ನು ತಿದ್ದಲು ಪ್ರಯತ್ನಿಸದೆ ಮರಣದಂಡನೆಯನ್ನು ವಿಧಿಸಿದಲ್ಲಿ ಅವರ ಮೂಲವೇ ನಾಶವಾದಂತಾಗುತ್ತದೆ. ಹೀಗೆ ಮಾಡುವುದು ಸನಾತನ ಧರ್ಮವೆನಿಸುವುದಿಲ್ಲ. ಅವನನ್ನು ಸಂಹಾರ ಮಾಡದೆ ಬೇರೆ ಶಿಕ್ಷೆಗಳನ್ನು ನೀಡಿ ಪ್ರಾಯಶ್ಚಿತ್ತವನ್ನು ಮಾಡಬೇಕು.

ಉದ್ವೇಜನೇನ ಬಂಧೇನ ವಿರೂಪಕರಣೇನ ಚ ।
ವಧದಂಡೇನ ತೇ ಕ್ಲೇಶ್ಯಾ ನ ಪುರೋಽಹಿತಸಂಪದಾ ॥೧೩॥

ಅಪರಾಧ ಮಾಡಿದವನಿಗೆ, ಪುನಃ ಇನ್ನೊಂದು ಬಾರಿ ಅಪರಾಧ ಮಾಡಿದಲ್ಲಿ ಸಂಪತ್ತೆಲ್ಲವನ್ನೂ ಅಪಹರಿಸುವುದಾಗಿ ಭಯ ಹುಟ್ಟಿಸಬೇಕು. ಪುನಃ ಅಪರಾಧ ಮಾಡಿದರೆ ಬಂಧನ ಮಾಡಬೇಕು. ಮಗದೊಮ್ಮೆ ಅಪರಾಧ ಮಾಡಿದರೆ ಅಂಗಗಳನ್ನೇ ವಿಕೃತಗೊಳಿಸಬೇಕು. ಎಂದಿಗೂ ಮರಣ ದಂಡನೆಯನ್ನು ವಿಧಿಸಿ ಬಂಧು-ಮಿತ್ರರಿಗೆ ಕ್ಲೇಶವನ್ನುಂಟು ಮಾಡಬಾರದು.

ಯದಾ ಪುರೋಹಿತಂ ವಾ ತೇ ಪರ್ಯೇಯುಃ ಶರಣೈಷಿಣಃ ।
ಕರಿಷ್ಯಾಮಃ ಪುನರ್ಬ್ರಹ್ಮನ್ನ ಪಾಪಮಿತಿ ವಾದಿನಃ ॥೧೪॥

ತದಾ ವಿಸರ್ಗಮರ್ಹಾಃ ಸ್ಯುರಿತೀದಂ ನೃಪಶಾಸನಮ್ ।
ಬಿಭ್ರದ್ದಂಡಾಜಿನಂ ಮುಂಡೋ ಬ್ರಾಹ್ಮಣೋಽರ್ಹತಿ ವಾಸಸಮ್ ॥೧೫॥

ಬ್ರಾಹ್ಮಣರಲ್ಲಿ ಹೋಗಿ ಶರಣು ಹೊಂದಿದ ಕಳ್ಳರು, ಬ್ರಾಹ್ಮಣನೇ, ನಾವು ಪುನಃ ಪಾಪ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದಲ್ಲಿ ಅವರು ಬಂಧನಾರ್ಹರಲ್ಲ ಎಂದು ಬ್ರಹ್ಮಶಾಸನವೇ ಇದೆ. ದಂಡವನ್ನು ಹಿಡಿದು, ಮೃಗಚರ್ಮವನ್ನು ಹೊದ್ದು, ಮುಂಡನ ಮಾಡಿಕೊಂಡ ಬ್ರಾಹ್ಮಣ ಸಂನ್ಯಾಸಿಯು ಅಪರಾಧ ಮಾಡಿದಲ್ಲಿ ಶಿಕ್ಷಾರ್ಹನಾಗುತ್ತಾನೆ.

ಗರೀಯಾಂಸೋ ಗರೀಯಾಂಸಮಪರಾಧೇ ಪುನಃ ಪುನಃ ।
ತಥಾ ವಿಸರ್ಗಮರ್ಹಂತಿ ನ ಯಥಾ ಪ್ರಥಮೇ ತಥಾ ॥೧೬॥

ಪುನಃ ಪುನಃ ದೊಡ್ಡ ದೊಡ್ಡ ಅಪರಾಧಗಳನ್ನು ಮಾಡುತ್ತಿದ್ದರೆ ಅವರನ್ನು ಬಿಡುವದು ಯೋಗ್ಯವೆನಿಸುವುದಿಲ್ಲ. ಅವರಿಗೆ ಶಿಕ್ಷೆಯನ್ನು ವಿಧಿಸಬೇಕು. ಮೊದಲನೆಯ ಅಪರಾಧದಲ್ಲಿ ಬಿಟ್ಟಂತೆ ಬಿಡುವುದು ಯೋಗ್ಯವಲ್ಲ.

ದ್ಯುಮತ್ಸೇನಃ

ಯತ್ರ ಯತ್ರೈವ ಶಕ್ಯೇರನ್ ಸಂಯಂತುಂ ಸಮಯೇ ಪ್ರಜಾಃ ।
ಸ ತಾವತ್ ಪ್ರೋಚ್ಯತೇ ಧರ್ಮೋ ಯಾವನ್ನ ಪ್ರತಿಲಘ್ಯತೇ ॥೧೭॥

ಮಗನೇ, ಪ್ರಜೆಗಳನ್ನು ಧರ್ಮದ ನಿಯಂತ್ರಣದಲ್ಲಿ ಇಡುವದು ಸಾಧ್ಯವಾಗಲು ಅಲ್ಲಿಯೇ ಅವರನ್ನು ನಿಯಂತ್ರಿಸುವುದು ಧರ್ಮವಾಗಿದೆ. ಧರ್ಮದ ಉಲ್ಲಂಘನೆಯಾಗದಿರುವ ತನಕ ಧರ್ಮವು ಉಳಿದಿರುತ್ತದೆ.

ಅಹನ್ಯಮಾನೇಷು ಪುನಃ ಸರ್ವಮೇವ ಪರಾಭವೇತ್ ।
ಪೂರ್ವೇ ಪೂರ್ವತರೇ ಚೈವ ಸುಶಾಸ್ಯಾ ಅಭವಂಜನಾಃ ॥೧೮॥

ಧರ್ಮವನ್ನು ಉಲ್ಲಂಘಿಸಿದ ಕಳ್ಳರನ್ನು ಸಂಹರಿಸದಿದ್ದಲ್ಲಿ ರಾಜ್ಯಾಡಳಿತಗಳೆಲ್ಲವೂ ವಿಫಲವಾಗುತ್ತವೆ. ಸತ್ಪುರುಷರಿಗೆ ಹಾನಿಯುಂಟಾಗುತ್ತದೆ. ಹಿಂದಿನ, ಅದಕ್ಕಿಂತಲೂ ಹಿಂದಿನ ಪ್ರಜೆಗಳನ್ನು ಆಳುವುದು ಸುಲಭವಾಗಿತ್ತು.

ಮೃದವಃ ಸತ್ಯಭೂಯಿಷ್ಠಾ ಅಲ್ಪದ್ರೋಹಾಲ್ಪಮನ್ಯವಃ ।
ಪುರಾ ಧಿಗ್ದಂಡ ಏವಾಸೀದ್ವಾಗ್ದಂಡಸ್ತದನಂತರಮ್ ॥೧೯॥

ಆ ಪ್ರಾಚೀನ ಪ್ರಜೆಗಳು ಮೃದು ಸ್ವಭಾವದವರು, ಸತ್ಯನಿಷ್ಠರೂ, ಅಲ್ಪದ್ರೋಹಿಗಳು, ಅಕ್ರೋಧರು ಆಗಿದ್ದರು. ಆದ್ದರಿಂದ ನಿನ್ನ ನಡತೆಗೆ ಧಿಕ್ಕಾರ ಎಂಬ ಮಾತೇ ಅವರಿಗೆ ದೊಡ್ಡ ಶಿಕ್ಷೆಯಾಗುತ್ತಿತ್ತು. ಕಾಲವು ಕಳೆದಂತೆ ಧಿಕ್ಕಾರಕ್ಕೆ ಹೆದರುತ್ತಿರಲಿಲ್ಲ.

ಆಸೀದಾದಾನದಂಡೋಽಪಿ ವಧದಂಡೋಽದ್ಯ ವರ್ತತೇ ।
ವಧೇನಾಪಿ ನ ಶಕ್ಯಂತೇ ನಿಯಂತುಮಪರೇ ಜನಾಃ ॥೨೦॥

ವಾಗ್ದಂಡದ ಪರಿಣಾಮವು ಕಾಣದಿದ್ದಾಗ ಅಪರಾಧಿಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದಾನದಂಡವು ಆರಂಭವಾಯಿತು. ಕಾಲಕ್ರಮದಲ್ಲಿ ಅದಕ್ಕೂ ಬಗ್ಗದಿದ್ದಾಗ ಮರಣದಂಡನೆಯೇ ಚಾಲ್ತಿಗೆ ಬಂದಿತು. ಕೆಲವು ದಸ್ಯು (ಕಳ್ಳ) ಗಳನ್ನು ಮರಣದಂಡನೆ ನೀಡದೆ ನಿಯಂತ್ರಿಸಲಾಗುವುದಿಲ್ಲ.

ನೈವ ದಸ್ಯುರ್ಮನುಷ್ಯಾಣಾಂ ನ ದೇವಾನಾಮಿತಿ ಶ್ರುತಿಃ ।
ನ ಗಂಧರ್ವಪಿತೄಣಾಂ ಚ ಕಃ ಕಸ್ಯೇಹ ನ ಕಶ್ಚನ ॥೨೧॥

ದರೋಡೆಕೋರನು ಮನುಷ್ಯನಾಗಲಿ, ದೇವತೆಯಾಗಿರಲಿ, ಗಂಧರ್ವ-ಪಿತೃಗಳೇ ಆಗಿರಲಿ, ನಮ್ಮವರಲ್ಲ ಎಂದು ಭಾವಿಸಿ ಶಿಕ್ಷೆಗೆ ಒಳಪಡಿಸಬೇಕು.

ಪಕ್ವಂ ಶ್ಮಶಾನಾದಾದತ್ತೇ ಪಿಶಾಚಾಚ್ಚಾಪಿ ದೈವತಮ್ ।
ತೇಷು ಯಃ ಸಮಯಂ ಕುರ್ಯಾದಜ್ಞೇಷು ಹತಬುದ್ಧಿಷು ॥೨೨॥

ರಾಜದಂಡದಿಂದ ಹತನಾದ ಕಳ್ಳನು ಪಿಶಾಚಿಯಾದ ಬಳಿಕವೂ ಮರಣ ದಿನದಿಂದ ಆರಂಭಿಸಿ ಹತ್ತನೆಯ ದಿನದಲ್ಲಿ ದೇವತಾ ಸಂಬಂಧಿಯಾದ ಸಂಪತ್ತನ್ನು ಅರ್ಥಾತ್ ಬಲಭಾಗದಲ್ಲಿ ನೀಡಿದ ಯಮನ ದ್ರವ್ಯವನ್ನು, ಉತ್ತರ ಭಾಗದಲ್ಲಿ ನೀಡಿದ ರುದ್ರನ ಪಿಂಡವನ್ನು, ಮಧ್ಯಭಾಗದಲ್ಲಿ ಯಮನ ಪಿಂಡವನ್ನು ಸ್ಮಶಾನದಲ್ಲಿಯೂ ಕದ್ದು ತಿನ್ನುತ್ತಾನೆ. ಅಲ್ಲಿಗೆ ಆಗಮಿಸಿರುವ ಪ್ರಜೆಗಳನ್ನೂ ಪ್ರವೇಶಿಸಿ ಬಾಧಿಸುತ್ತಾನೆ. ಇಂತಹ ಬುದ್ಧಿಶೂನ್ಯರಾದ ದರೋಡೆಕೋರರ ವಿಷಯದಲ್ಲಿ ಯಾರು ತಾನೇ ವಿಶ್ವಾಸವನ್ನಿಡುತ್ತಾರೆ?

ಸತ್ಯವಾನ್

ತಾನ್ನ ಶಕ್ನೋಷಿ ಚೇತ್ ಸಾಧೂನ್ ಪರಿತ್ರಾತುಮಹಿಂಸಯಾ ।
ಕಸ್ಯಚಿದ್ಭೂತಭವ್ಯಸ್ಯ ಲಾಭೇನಾಂತಂ ತಥಾ ಕುರು ॥೨೩॥

ತಂದೆಯೇ, ನೀನು ದಸ್ಯುಗಳನ್ನು ಸಂಹರಿಸದೆ ಸತ್ಪುರುಷರನ್ನು ರಕ್ಷಿಸಲು ಅಸಮರ್ಥನಾದರೆ, ಹಿಂದೆ-ಮುಂದಿನ ಜಗತ್ತಿನ ರಕ್ಷಣೆಗಾಗಿ ದಸ್ಯುಗಳನ್ನು ಸಂಹರಿಸಿಬಿಡು.

ದ್ಯುಮತ್ಸೇನಃ

ರಾಜಾನೋ ಲೋಕಯಾತ್ರಾರ್ಥಂ ತಪ್ಯಂತೇ ಪರಮಂ ತಪಃ ।
ಅಪತ್ರಪಂತಿ ತಾದೃಗ್ಭ್ಯಸ್ತಥಾವೃತ್ತಾ ಭವಂತಿ ಚ ॥೨೪॥

ರಾಜರು ಪ್ರಜೆಗಳ ಜೀವನವು ಸುಖವಾಗಿರಲೆಂದು ತಪಸ್ಸನ್ನಾಚರಿಸುತ್ತಾರೆ. ಪ್ರಜೆಗಳಿಗೆ ದಸ್ಯುಗಳಿಂದ ದುಃಖ ಉಂಟಾದಲ್ಲಿ ಅವರೇ ನಾಚಿಕೆ ಪಡುತ್ತಾರೆ. ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾರೆ.

ವಿತ್ರಾಸ್ಯಮಾನಾಃ ಸುಕೃತೋ ನ ಕಾಮಾದ್ ಘ್ನಂತಿ ದುಷ್ಕೃತೀನ್ ।
ಸುಕೃತೇನೈವ ರಾಜಾನೋ ಭೂಯಿಷ್ಠಂ ಶಾಸತೇ ಪ್ರಜಾಃ ॥೨೫॥

ಶಿಕ್ಷೆಯ ಭಯದಿಂದಲೇ ಪ್ರಜೆಗಳು ಪುಣ್ಯಕರ್ಮಗಳನ್ನು ಮಾಡುತ್ತಾರೆ. ಪ್ರಜೆಗಳನ್ನು ಧರ್ಮನಿಷ್ಠರನ್ನಾಗಿ ಮಾಡುವುದೇ ಶಿಕ್ಷೆಯ ಉದ್ದೇಶವು. ಪ್ರಾಮಾಣಿಕ ರಾಜರು ದಸ್ಯುಗಳನ್ನು ಒಮ್ಮೆಲೆ ಕೊಲ್ಲುವುದಿಲ್ಲ. ಆದಷ್ಟು ಸತ್ಕರ್ಮ, ಸದ್ವ್ಯವಹಾರಗಳಿಂದ ಮುನ್ನಡೆಯುವಂತೆ ಶಾಸನ ಮಾಡುತ್ತಾರೆ.

ಶ್ರೇಯಸಃ ಶ್ರೇಯಸೀಮೇವಂ ವೃತ್ತಿಂ ಲೋಕೋಽನುವರ್ತತೇ ।
ಸದೈವ ಹಿ ಗುರೋರ್ವೃತ್ತಮನುವರ್ತಂತಿ ಮಾನವಾಃ ॥೨೬॥

ರಾಜನ ಸತ್ವವೃತ್ತಿಗಳೇ ಪ್ರಜೆಗಳಿಗೆ ಮಾರ್ಗದರ್ಶನವು. ಸಹಜವಾಗಿ ಮನುಷ್ಯರು ಉತ್ತಮ ಪುರುಷರ ಆಚರಣೆಗಳನ್ನೇ ಅನುಸರಿಸಿ ನಡೆಯುತ್ತಾರೆ.

ಆತ್ಮಾನಮಸಮಾಧಾಯ ಸಮಾಧಿತ್ಸತಿ ಯಃ ಪರಾನ್ ।
ವಿಷಯೇಷ್ವಿಂದ್ರಿಯವಶಂ ಮಾನವಾಃ ಪ್ರಹಸಂತಿ ತಮ್ ॥೨೭॥

ಯಾವ ರಾಜನು ತನ್ನ ಮನಸ್ಸನ್ನೇ ವಿಷಯಗಳಿಂದ ನಿಗ್ರಹಿಸಿಕೊಳ್ಳದೆ, ಇಂದ್ರಿಯಗಳ ಗುಲಾಮನಾಗಿದ್ದು, ಮತ್ತೊಬ್ಬರ ಮನಸ್ಸನ್ನು ನಿಯಂತ್ರಿಸಿಕೊಳ್ಳುವಂತೆ ಸದಾಚಾರಿಗಳಾಗಿರೆಂದು ಉಪದೇಶಿಸುತ್ತಾನೋ ಅವನನ್ನು ನೋಡಿ ಜನರು ಅಪಹಾಸ್ಯ ಮಾಡುತ್ತಾರೆ.

ಯೋ ರಾಜ್ಞೋ ದಂಭಮೋಹೇನ ಕಿಂಚಿತ್ಕುರ್ಯಾದಸಾಂಪ್ರತಮ್ ।
ಸರ್ವೋಪಾಯೈರ್ನಿಯಮ್ಯಃ ಸ ತಥಾ ಪಾಪಾನ್ನಿವರ್ತತೇ ॥೨೮॥

ರಾಜನ ವಿಷಯದಲ್ಲಿ ಯಾವ ದಸ್ಯುವು ಜಂಭ, ಮೋಹದಿಂದ ತಪ್ಪಾಗಿ ನಡೆದುಕೊಳ್ಳುತ್ತಾನೋ, ರಾಜನು ಅಂಥವನನ್ನು ಉಪಾಯದಿಂದ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು. ಇದರಿಂದ ಅವನು ಪಾಪಕರ್ಮದಿಂದ ನಿವೃತ್ತನಾಗುತ್ತಾನೆ.

ಆತ್ಮೈವಾದೌ ನಿಯಂತವ್ಯೋ ದುಷ್ಕೃತಂ ಸನ್ನಿಯಚ್ಛತಾ ।
ದಂಡಯೇಚ್ಚ ಮಹಾದಂಡೈರಪಿ ಬಂಧೂನನಂತರಾನ್ ॥೨೯॥

ದುಷ್ಕೃತ್ಯವನ್ನು ತಡೆಯುವ ಬಯಕೆಯುಳ್ಳ ರಾಜನು ಮೊದಲು ತನ್ನನ್ನು ನಿಯಂತ್ರಿಸಿಕೊಳ್ಳಬೇಕು. ಬಳಿಕ ಅಪರಾಧ ಮಾಡಿದ ತನ್ನ ಬಂಧು-ಜ್ಞಾತಿಗಳಿಗೂ ನಿಷ್ಪಕ್ಷಪಾತಿಯಾಗಿ ಶಿಕ್ಷಿಸಬೇಕು.

ಯತ್ರ ವೈ ಪಾಪಕೃತ್ ಕ್ಲೇಶ್ಯೋ ನ ಮಹದ್ದುಃಖಮರ್ಹತಿ ।
ವರ್ಧಂತೇ ತತ್ರ ಪಾಪಾನಿ ಧರ್ಮೋ ಹ್ರಸತಿ ಚ ಧ್ರುವಮ್ ।
ಇತಿ ಕಾರುಣ್ಯಶೀಲಸ್ತು ವಿದ್ವಾನ್ ವೈ ಬ್ರಾಹ್ಮಣೋನ್ವಶಾತ್ ॥೩೦॥

ಯಾವ ದೇಶದಲ್ಲಿ ಪಾಪಕರ್ಮಿಗಳು, ನೀಚರು ರಾಜನ ದಂಡನೆಯಿಂದ ದುಃಖವನ್ನು ಅನುಭವಿಸುವುದಿಲ್ಲವೋ ಆ ದೇಶದಲ್ಲಿ ಪಾಪಕರ್ಮಗಳು ಹೆಚ್ಚುತ್ತವೆ, ಧರ್ಮವು ಅಳಿಯುತ್ತದೆ. ಈ ರೀತಿ ಕರುಣಾಶೀಲನಾದ ಬ್ರಾಹ್ಮಣನೊಬ್ಬನು ನನಗೆ ಹೇಳಿದ್ದಾನೆ.

ಇತಿ ಚೈವಾನುಶಿಷ್ಟೋಽಸ್ಮಿ ಪೂರ್ವೈಸ್ತಾತ ಪಿತಾಮಹೈಃ ।
ಆಶ್ವಾಸಯದ್ಭಿಃ ಸುಭೃಶಮನುಕ್ರೋಶಾತ್ತಥೈವ ಚ ॥೩೧॥

ಸತ್ಯವಂತನೇ, ಹಿಂದಿನ ಪಿತಾಮಹರು ಕರುಣೆಯಿಂದ ನನ್ನನ್ನು ಸಮಾಧಾನ ಪಡಿಸುತ್ತಾ ಹೀಗೆ ಆದೇಶ ಮಾಡಿದ್ದಾರೆ.

ಏತತ್ ಪ್ರಥಮಕಲ್ಪೇನ ರಾಜಾ ಕೃತಯುಗೇಽಭಜತ್ ।
ಪಾದೋನೇನಾಪಿ ಧರ್ಮೇಣ ಗಚ್ಛೇತ್ ತ್ರೇತಾಯುಗೇ ತಥಾ ।
ದ್ವಾಪರೇ ತು ದ್ವಿಪಾದೇನ ಪಾದೇನ ತ್ವಪರೇ ಯುಗೇ ॥೩೨॥

ತ್ರೇತಾಯುಗವು ಆರಂಭವಾಗುತ್ತಲೇ ಒಂದು ಪಾದದಿಂದ ಹೀನವಾಗುತ್ತದೆ. ದ್ವಾಪರದಲ್ಲಿ ಧರ್ಮದ ಎರಡು ಪಾದಗಳು ಉಳಿದು ಎರಡು ಪಾದ ನಾಶ ಹೊಂದುತ್ತವೆ. ಕಲಿಯುಗದಲ್ಲಿ ಒಂದೇ ಪಾದ ಧರ್ಮವು ಉಳಿದಿದೆ.

ತಥಾ ಕಲಿಯುಗೇ ಪ್ರಾಪ್ತೇ ರಾಜ್ಞಾಂ ದುಶ್ಚರಿತೇನ ಹ ।
ಭವೇತ್ ಕಾಲವಿಶೇಷೇಣ ಕಲಾ ಧರ್ಮಸ್ಯ ಷೋಡಶೀ ॥೩೩॥

ಕಲಿಯುಗವು ಮುಂದುವರೆಯುತ್ತಿದ್ದಂತೆ ರಾಜರ ದುಷ್ಕರ್ಮಗಳ ಫಲದಿಂದ ಕಾಲಿಕವಾಗಿ ಧರ್ಮದ ಹದಿನಾರನೆಯ ಒಂದು ಭಾಗವು ಮಾತ್ರ ಉಳಿಯುತ್ತದೆ.

ಅಥ ಪ್ರಥಮಕಲ್ಪೇನ ಸತ್ಯವನ್ ಸಂಕರೋ ಭವೇತ್ ।
ಆಯುಃ ಶಕ್ತಿಂ ಚ ಕಾಲಂ ಚ ನಿರ್ದಿಶ್ಯ ತಪ ಆದಿಶೇತ್ ॥೩೪॥

ಸತ್ಯವಂತನೇ, ಧಿಕ್ಕಾರವೆಂಬ ದಂಡನೆಯಿಂದ ಧರ್ಮಕ್ಕೆ ಸಂಕರ ಉಂಟಾಗುತ್ತದೆ ಎಂದು ತೋರಿದ ಪಕ್ಷದಲ್ಲಿ, ಆಯುಸ್ಸನ್ನು, ಶಕ್ತಿಯನ್ನು, ಕುಲವನ್ನು ಪರಿಶೀಲಿಸಿ ಅವನಿಗೆ ಉಚಿತವಾದ ಶಿಕ್ಷೆಯನ್ನು ನೀಡಬೇಕು.

ಸತ್ಯಾಯ ಹಿ ಯಥಾ ನೇಹ ಜಹ್ಯಾದ್ಧರ್ಮಫಲಂ ಮಹತ್ ।
ಭೂತಾನಾಮನುಕಂಪಾರ್ಥಂ ಮನುಃ ಸ್ವಾಯಂಭುವೋಽಬ್ರವೀತ್ ॥

ಧರ್ಮಕ್ಕೆ ಪ್ರಧಾನ ಫಲವು ಸತ್ಯವೆಂಬ ಮೋಕ್ಷಸಾಧನೆಯೇ ಆಗಿದೆ. ಪ್ರಾಣಿಗಳ ಅನುಗ್ರಹಕ್ಕಾಗಿ ಈ ರೀತಿ ಸ್ವಾಯಂಭುವ ಮನುವೇ ಹೇಳಿರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ಯುಮತ್ಸೇನಸತ್ಯವತ್ಸಂವಾದೋ ನಾಮ
ದ್ವ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂರನೆಯ ಅಧ್ಯಾಯ

ಪಶುವಧೆಯನ್ನು ಮಾಡದೆ ಯಜ್ಞ ಮಾಡಬೇಕೆಂಬ ವಿಷಯದಲ್ಲಿ
ಕಪಿಲ ಮತ್ತು ಸ್ಯೂಮರಶ್ಮಿ ಇವರಿಗೆ ನಡೆದ ಸಂವಾದವು.

ಯುಧಿಷ್ಠಿರಃ

ಅವಿರೋಧೇನ ಭೂತಾನಾಂ ತ್ಯಾಗಃ ಪಾಡ್ಗುಣ್ಯಕಾರಕಃ ।
ಯಃ ಸ್ಯಾದುಭಯಭಾಗ್ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೧॥

ಪಿತಾಮಹನೇ, ಪ್ರಾಣಿಗಳಿಗೆ ಹಿಂಸೆಯಾಗದಂತೆ ರಾಜನಿಗೆ ಇರಬೇಕಾದ ಜ್ಞಾನ, ವೈರಾಗ್ಯ, ಐಶ್ವರ್ಯ, ಧರ್ಮ, ಕೀರ್ತಿ, ಶಾಂತಿ ಎಂಬ ಆರು ಗುಣಗಳನ್ನು ಕೊಡುಸುವಂತಹ ಐಹಿಕ, ಆಮುಷ್ಮಿಕ ಫಲಗಳಿಗೆ ಸಾಧನಭೂತವಾದ ಧರ್ಮವು ಯಾವುದು ಎಂದು ನನಗೆ ವಿವರಿಸು.

ಗಾರ್ಹಸ್ಥ್ಯಸ್ಯ ಚ ಧರ್ಮಸ್ಯ ತ್ಯಾಗಧರ್ಮಸ್ಯ ಚೋಭಯೋಃ ।
ಅದೂರಸಂಪ್ರಸ್ಥಿತಯೋಃ ಕಂ ಸ್ವಿಚ್ಛ್ರೇಯಃ ಪಿತಾಮಹ ॥೨॥

ಪಿತಾಮಹನೇ, ಗೃಹಸ್ಥಧರ್ಮಕ್ಕೂ ಸಂನ್ಯಾಸಧರ್ಮಕ್ಕೂ ಹೆಚ್ಚು ಅಂತರವಿರುವುದಿಲ್ಲ. ಎರಡರ ಉದ್ದೇಶವು ಒಂದೇ ಆಗಿರುವುದರಿಂದ ಈ ಎರಡರಲ್ಲಿ ಯಾವುದು ಶ್ರೇಷ್ಠವಾದುದು?

ಭೀಷ್ಮಃ

ಉಭೌ ಧರ್ಮೌ ಮಹಾಭಾಗಾವುಭೌ ಪರಮದುಶ್ಚರೌ ।
ಉಭೌ ಮಹಾಫಲೌ ತಾತ ಸದ್ಭಿರಾಚರಿತಾವುಭೌ ॥೩॥

ಯುಧಿಷ್ಠಿರನೇ, ಗಾರ್ಹಸ್ಥ್ಯಧರ್ಮ, ಯೋಗಧರ್ಮವೆಂಬ ಎರಡು ಧರ್ಮಗಳು ಶ್ರೇಯಸ್ಸನ್ನು ಉಂಟುಮಾಡುವ ಧರ್ಮಗಳೇ ಆಗಿವೆ. ಈ ಎರಡು ಧರ್ಮಗಳನ್ನು ಆಚರಿಸಲು ಬಹಳ ಕಷ್ಟವು. ಎರಡೂ ಧರ್ಮಗಳು ಉತ್ತಮ ಫಲಪ್ರದಗಳು. ಈ ಎರಡೂ ಧರ್ಮಗಳನ್ನು ಸತ್ಪುರುಷರು ನಿಯಮೇನ ಅನುಷ್ಠಾನ ಮಾಡಿರುತ್ತಾರೆ.

ಅತ್ರ ತೇ ವರ್ತಯಿಷ್ಯಾಮಿ ಪ್ರಾಮಾಣ್ಯಮುಭಯೋಸ್ತಯೋಃ ।
ಶೃಣುಷ್ವೈಕಮನಾಃ ಪಾರ್ಥ ಛಿನ್ನಧರ್ಮಾರ್ಥಸಂಶಯಮ್ ॥೪॥

ಯುಧಿಷ್ಠಿರನೇ, ಈ ಎರಡು ಧರ್ಮಗಳ ಪ್ರಾಮಾಣ್ಯವನ್ನೇ ನಿನಗೆ ಈಗ ಬೋಧಿಸುತ್ತೇನೆ. ಧರ್ಮಾರ್ಥಗಳ ಸಂಶಯಗಳನ್ನೆಲ್ಲ ಪರಿಹರಿಸಿಕೊಳ್ಳುವಂತೆ ಏಕಾಗ್ರತೆಯಿಂದ ಕೇಳಿಸಿಕೊ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಕಪಿಲಸ್ಯ ಗೋಶ್ಚ ಸಂವಾದಂ ತನ್ನಿಬೋಧ ಯುಧಿಷ್ಠಿರ ॥೫॥

ಇದೇ ವಿಷಯದಲ್ಲಿ ಕಪಿಲಮುನಿಗೂ ಗೋವಿಗೂ ನಡೆದ ಪುರಾತನವಾದ ಇತಿಹಾಸ ರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನು ವಿವರಿಸುತ್ತೇನೆ, ಕೇಳು.

ಆಮ್ನಾಯಮನುಪಶ್ಯನ್ ಹಿ ಪುರಾಣಂ ಶಾಶ್ವತಂ ಧ್ರುವಮ್ ।
ನಹುಷಃ ಪೂರ್ವಮಾಲೇಭೇ ತ್ವಷ್ಟುರ್ಗಾಮಿತಿ ನಃ ಶ್ರುತಮ್ ॥೬॥

ಹಿಂದೆ ನಹುಷರಾಜನು ವೇದಗಳ ಶಾಸನವನ್ನೇ ಪ್ರಾಚೀನವೆಂದೂ, ಸನಾತನವೂ, ನಿಶ್ಚಿತವಾದುದು ಎಂದು, ಅದರ ಗುರಿಯಾದ ಅರ್ಥವನ್ನು ಸರಿಯಾಗಿ ತಿಳಿಯದೆ ತನ್ನ ಮನೆಗೆ ಅತಿಥಿಯಾಗಿ ಬಂದ ಒಂದು ಗೋವನ್ನು ಕೊಲ್ಲುವುದಕ್ಕಾಗಿ ಯತ್ನಿಸುತ್ತಿದ್ದನಂತೆ.

ವ್ಯಾಖ್ಯಾನ ವಿಶೇಷ– 'ತ್ವಾಷ್ಟ್ರಂ ಬಹುರೂಪಂ ಆಲಭೇತ' ಎಂದು ಶ್ರುತಿಯಲ್ಲಿ ಹೇಳಿರುವಂತೆ ತ್ವಷ್ಟೃದೇವತೆಯನ್ನು ಒಲಿಸಿಕೊಳ್ಳಲು ಗವಾಲಂಬನ ಉದ್ಯುಕ್ತನಾದನು ಎಂದು ಕೇಳಿದ್ದೇವೆ.

ತಾಂ ನಿಯುಕ್ತಾಮದೀನಾತ್ಮಾ ಸತ್ತ್ವಸ್ಥಃ ಸಮಯೇ ರತಃ ।
ಜ್ಞಾನವಾನ್ನಿಯತಾಹಾರೋ ದದರ್ಶ ಕಪಿಲಸ್ತದಾ ॥೭॥

ಹೀಗೆ ಅವನು ಗೋವನ್ನು ಕೊಲ್ಲಲು ಪ್ರಯತ್ನಿಸುತ್ತಿರುವ ಸಮಯದಲ್ಲಿಯೇ ಸರಿಯಾಗಿ ಸಾತ್ವಿಕನೂ ಶುದ್ಧಮನಸ್ವಿಯೂ, ಜ್ಞಾನಿಯೂ, ಧ್ಯಾನನಿಷ್ಠನೂ, ನಿಯತಾಹಾರಿಯೂ ಆದ ಕಪಿಲಮುನಿಯು ಅಲ್ಲಿಗೆ ಆಗಮಿಸಿ, ನಹುಷನು ಪಶುವಧೆಯನ್ನು ಮಾಡುತ್ತಿರುವ ಸನ್ನಿವೇಶವನ್ನು ನೋಡಿದನು.

ಸ ಬುದ್ಧಿಮುತ್ತಮಾಂ ಪ್ರಾಪ್ತೋ ನೈಷ್ಕಿಕೀಮಕುತೋಭಯಾಮ್ ।
ಸ್ವರೇಣ ಶಿಥಿಲೋಽಸತ್ಯಾ ವೇದಾ ಇತ್ಯಬ್ರವೀತ್ ಸಕೃತ್ ॥೮॥

ಆ ಕಪಿಲಮುನಿಯು ಉತ್ತಮ ಜ್ಞಾನಿಯಾಗಿದ್ದನು. ಭಯರಹಿತನಾದವನಾಗಿದ್ದನು. ದೃಢಮನಸ್ಕನಾಗಿದ್ದನು. ಆದರೂ ಅಲ್ಲಿನ ಸ್ಥಿತಿಯನ್ನು ನೋಡಿ ಉಚ್ಚಸ್ವರದಿಂದ ಇದು ಅಧರ್ಮ ಎಂದು ಹೇಳಲು ಭಯಗೊಂಡವನಾಗಿ, ವೇದಗಳಲ್ಲಿ ದವಾಲಂಭನವನ್ನು ವಿಧಿ ಮಾಡಿರುವುದರಿಂದ ಗಟ್ಟಿಯಾಗಿ ಹೇಳಲು ಅಂಜಿಕೊಂಡು, ವೇದಗಳು ಅಸತ್ಯ ಎಂದು ಒಂದು ಬಾರಿ ಆ ಸಭೆಯಲ್ಲಿ ಮೆಲ್ಲನೆ ಹೇಳಿದನು.

ತಾಂ ಗಾಮೃಷಿಃ ಸ್ಯೂಮರಶ್ಮಿಃ ಪ್ರವಿಶ್ಯ ಯತಿಮಬ್ರವೀತ್ ।
ಅಂಹೋ ವೇದಾ ಯದಿ ಮತಾ ಧರ್ಮಾಃ ಕೇನಾಪರೇ ಮತಾಃ ॥೯॥

ಇದೇ ಸಮಯದಲ್ಲಿ ಸ್ಯೂಮರಶ್ಮಿ ಎಂಬ ಮಹರ್ಷಿಯು ಆ ಪಶುವಿನೊಳಗೆ ಸೇರಿಕೊಂಡು ಕಪಿಲನನ್ನು ಕುರಿತು, ಕಪಿಲನೇ, ವೇದಗಳೇ ಪಾಪಹೇತುಗಳು ಎನ್ನುವ ಪಕ್ಷದಲ್ಲಿ ಧರ್ಮಗಳು ಹೇಗೆ ತಾನೇ ಆದರಣೀಯಗಳಾಗುತ್ತವೆ?

ತಪಸ್ವಿನೋ ಧೃತಿಮತಃ ಶ್ರುತಿವಿಜ್ಞಾನಚಕ್ಷುಷಃ ।
ಸರ್ವಮಾರ್ಷಂ ಹಿ ಮನ್ಯಂತೇ ವ್ಯಾಹೃತಂ ವಿದಿತಾತ್ಮನಃ ॥೧೦॥

ಜ್ಞಾನಿಗಳು, ಜ್ಞಾನಚಕ್ಷುಸ್ಸುಗಳಾದ ಶ್ರುತಿವಿಜ್ಞಾನಿಗಳೂ ಆದ ಮಹರ್ಷಿಗಳು ಸಮಸ್ತ ವೇದಗಳನ್ನು ಸರ್ವಜ್ಞನಾದ ಭಗವಂತನ ವಚನಗಳೆಂದು, ಅವುಗಳನ್ನೇ ಋಷಿಗಳು ತಿಳಿದಿರುತ್ತಾರೆಂದು ಹೇಳುತ್ತಾರೆ.

ತಸ್ಯೈವಂ ಗತತೃಷ್ಣಸ್ಯ ವಿಜ್ವರಸ್ಯ ನಿರಾಶಿಷಃ ।
ಕಾ ವಿವಕ್ಷಾಸ್ತಿ ವೇದೇಷು ನಿರಾರಂಭಸ್ಯ ಸರ್ವಶಃ ॥೧೧॥

ಕಪಿಲಮುನಿಯಾದ ನೀನಾದರೂ ಯಾವುದೇ ಫಲಾಪೇಕ್ಷೆ ಇಲ್ಲದವನಾಗಿರುತ್ತಿ. ಇಚ್ಛಾ-ದ್ವೇಷಗಳಿಂದ ದೂರನಾಗಿರುವಿ. ಆಸೆಗಳಿಂದ ವಿದೂರನಾಗಿರುವಿ. ಯಜ್ಞ ಮೊದಲಾದ ಕರ್ಮಗಳಿಂದ ಯತಿರೂಪಿಯಾದ ನೀನು ದೂರನಾಗಿರುವಿ. ಆದ್ದರಿಂದ ವೇದಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ವೇದಗಳನ್ನು ನೀನು ನಿಂದಿಸುತ್ತಿರುವಿ.

ಕಪಿಲಃ

ನಾಹಂ ವೇದಾನ್ ವಿನಿಂದಾಮಿ ನ ವಿವಕ್ಷಾಮಿ ಕರ್ಹಿಚಿತ್ ।
ಪೃಥಗಾಶ್ರಮಿಣಾಂ ಕರ್ಮಾಣ್ಯೇಕಾರ್ಥಾನೀತಿ ನಃ ಶ್ರುತಮ್ ॥೧೨॥

ನಾನು ವೇದಗಳನ್ನು ನಿಂದಿಸುತ್ತಿಲ್ಲ. ವೇದವಿರುದ್ಧವಾದ ಅಭಿಪ್ರಾಯವನ್ನು ಹೇಳುತ್ತಿಲ್ಲ. ಪ್ರತ್ಯೇಕ, ಪ್ರತ್ಯೇಕವಾದ ಆಶ್ರಮಗಳಿಗೆ ಯಾವ ಯಾವ ಕರ್ಮಗಳಿವೆಯೋ ಪ್ರಯೋಜನಗಳಿವೆಯೋ ಅವೆಲ್ಲವೂ ಒಂದೇ ಉದ್ದೇಶದಿಂದ ಎಂದು ತಿಳಿದಿದ್ದೇನೆ. ಸ್ವರ್ಗವೆಂಬ ಫಲವನ್ನು ಹೊಂದುವುದಕ್ಕಾಗಿಯೇ ಆಶ್ರಮ, ಕರ್ಮ ಎಂಬ ವಿಭಜನೆ ಇರುತ್ತದೆ.

ಗಚ್ಛತ್ಯೇವ ಪರಿತ್ಯಾಗೀ ವಾನಪ್ರಸ್ಥಶ್ಚ ಗಚ್ಛತಿ ।
ಗೃಹಸ್ಥೋ ಬ್ರಹ್ಮಚಾರೀ ಚ ಉಭೌ ತಾವಪಿ ಗಚ್ಛತಃ ॥೧೩॥

ಸರ್ವಸಂಗವನ್ನು ತ್ಯಜಿಸಿದ ಸಂನ್ಯಾಸಿಯು ಪರಲೋಕವನ್ನು ಹೊಂದುತ್ತಾನೆ. ವಾನಪ್ರಸ್ಥಾಶ್ರಮಿಯು ಪರಲೋಕಕ್ಕೆ ಹೋಗುತ್ತಾನೆ. ಗೃಹಸ್ಥ-ಬ್ರಹ್ಮಚಾರಿಗಳು ಪರಮ ಪದವಿಗೆ ಸೇರುತ್ತಾರೆ.

ದೇವಯಾನಾ ಹಿ ಪಂಥಾನಶ್ಚತ್ವಾರಃ ಶಾಶ್ವತಾ ಮತಾಃ ।
ತೇಷಾಂ ಜ್ಯಾಯಃಕನೀಯಸ್ತ್ವಂ ಫಲೇಷೂಕ್ತಂ ಬಲಾಬಲಮ್ ॥೧೪॥

ನಾಲ್ಕು ಆಶ್ರಮಗಳು ಪರಮಪದ ಪ್ರಾಪ್ತಿಗೆ ದೇವಯಾನ ಎಂಬ ಹೆಸರಿನ ಶಾಶ್ವತವಾದ ನಾಲ್ಕು ಮಾರ್ಗಗಳಾಗಿವೆ. ಅವುಗಳಲ್ಲಿ ಶ್ರೇಷ್ಠತ್ವ, ಕನಿಷ್ಠತ್ವ, ಬಲಾಬಲಗಳು ಆಯಾ ಆಶ್ರಮಗಳ ಫಲಗಳನ್ನು ನಿಮಿತ್ತ ಮಾಡಿಕೊಂಡು ಹೇಳಲ್ಪಡುತ್ತಿವೆ.

ಏವಂ ವಿದಿತ್ವಾ ಸರ್ವಾರ್ಥಾನಾರಭೇದಿತಿ ವೈದಿಕಮ್ ।
ನಾರಭೇದಿತಿ ಚಾನ್ಯತ್ರ ನೈಷ್ಮಿಕೀ ಶ್ರೂಯತೇ ಶ್ರುತಿಃ ॥೧೫॥

ಹೀಗೆ ಕರ್ಮಗಳ ಫಲಗಳನ್ನು ತಿಳಿದುಕೊಂಡು, ಸ್ವರ್ಗಾದಿ ಫಲವನ್ನೀಯುವ ಯಜ್ಞಫಲವನ್ನು ಮಾಡಬೇಕು ಎಂದು ವೈದಿಕ ಮತವು. ಇವೇ ವೇದಗಳು ಮತ್ತೊಂದು ಕಡೆ ಕರ್ಮಗಳನ್ನು ಆರಂಭಿಸಲೇ ಬಾರದು ಎಂದು ಹೇಳುತ್ತವೆ.

ಅನಾರಂಭೇ ಹ್ಯದೋಷಃ ಸ್ಯಾದಾರಂಭೇ ದೋಷ ಉತ್ತಮಃ ।
ಏವಂ ಸ್ಥಿತಸ್ಯ ಶಾಸ್ತ್ರಸ್ಯ ದುರ್ವಿಜ್ಞೇಯಂ ಬಲಾಬಲಮ್ ॥೧೬॥

ಕರ್ಮವನ್ನು ಮಾಡದಿದ್ದರೆ ದೋಷ ಉಂಟಾಗುವುದಿಲ್ಲ. ಕರ್ಮಾರಂಭವನ್ನು ಮಾಡಿದರೆ ದೋಷವು ಉಂಟಾಗುತ್ತದೆ. ಈ ರೀತಿಯಾಗಿ ಶಾಸ್ತ್ರವು ಇರುವುದರಿಂದ ಶಾಸ್ತ್ರದಲ್ಲಿ ಹೇಳಿದ ಪುಣ್ಯ-ಪಾಪಗಳ ಬಲಾಬಲಗಳನ್ನು ತಿಳಿಯುವುದು ಕಷ್ಟಸಾಧ್ಯವು.

ಯದ್ಯತ್ರ ಕಿಂಚಿತ್ ಪ್ರತ್ಯಕ್ಷಮಹಿಂಸಾಯಾಃ ಪರಂ ಮತಮ್ ।
ಋತೇ ತ್ವಾಗಮಶಾಸ್ತ್ರೇಭ್ಯೋ ಬ್ರೂಹಿ ತದ್ ಯದಿ ಪಶ್ಯಸಿ ॥೧೭॥

ಅಹಿಂಸೆಯೇ ಶ್ರೇಷ್ಠವಾದ ಧರ್ಮ. ಅದಕ್ಕಿಂತಲೂ ಶ್ರೇಷ್ಠವಾದ ಯಾವ ಧರ್ಮವೂ ಇರುವುದಿಲ್ಲ. ಒಂದು ವೇಳೆ ಇದ್ದಲ್ಲಿ, ಅದಕ್ಕೆ ಸಂಬಂಧಿಸಿದ ಶ್ರುತಿಗಳು ನಿನಗೆ ಕಂಡುಬಂದಿದ್ದಲ್ಲಿ ಅದನ್ನು ನನಗೆ ತಿಳಿಸು. ಹಾಗೇನಾದರೂ ನಿನಗೆ ಆ ಶ್ರುತಿವಾಕ್ಯಗಳು ಕಂಡುಬಂದಿದ್ದಲ್ಲಿ ನೀನು ಮಾಡಿದ ಕರ್ಮವನ್ನು ತ್ಯಜಿಸಬೇಕಾಗಿರುವುದಿಲ್ಲ.

ಸ್ಯೂಮರಶ್ಮಿಃ

ಸ್ವರ್ಗಕಾಮೋ ಯಜೇತೇತಿ ಸತತಂ ಶ್ರೂಯತೇ ಶ್ರುತಿಃ ।
ಫಲಂ ಪ್ರಕಲ್ಪ್ಯ ಪೂರ್ವಂ ಹಿ ತತೋ ಯಜ್ಞಃ ಪ್ರತಾಯತೇ ॥೧೮॥

ಮಹರ್ಷಿಯೇ ಕೇಳು. 'ಸ್ವರ್ಗಕಾಮೋ ಯಜೇತ' ಸ್ವರ್ಗವನ್ನು ಉದ್ದೇಶಿಸಿ ಯಾಗ ಮಾಡಬೇಕು ಎಂಬ ಶ್ರುತಿವಾಕ್ಯವನ್ನು ನಾವೆಲ್ಲರೂ ತಿಳಿದಿರುತ್ತೇವೆ. ಹೀಗಿರುವುದರಿಂದ ಮನುಷ್ಯನು ಯಾವುದಾದರೂ ಫಲವನ್ನು ಉದ್ದೇಶಿಸಿಕೊಂಡೇ ನಂತರ ಯಜ್ಞದಲ್ಲಿ ಪ್ರವೃತ್ತಿಯನ್ನು ಮಾಡುತ್ತಾನೆ.

ಅಜಶ್ಚಾಶ್ವಶ್ಚ ಮೇಷಶ್ಚ ಗೌಶ್ಚ ಪಕ್ಷಿಗಣಾಶ್ಚ ಯೇ ।
ಗ್ರಾಮ್ಯಾರಣ್ಯಾ ಓಷಧಯಃ ಪ್ರಾಣಸ್ಯಾನ್ನಮಿತಿ ಶ್ರುತಿಃ ॥೧೯॥

ಮೇಕೆ, ಕುದುರೆ, ಕುರಿ, ಪಶು-ಪಕ್ಷಿಗಳು, ಗ್ರಾಮದಲ್ಲಿ ಬೆಳೆಯುವ ಓಷಧಿಗಳು, ಅರಣ್ಯದಲ್ಲಿ ಬೆಳೆಯುವ ಓಷದಿಗಳು, ಧಾನ್ಯಗಳು ಇವೆಲ್ಲ ಪ್ರಾಣಿಗಳಿಗೆ ಅನ್ನ ಎನಿಸುತ್ತವೆ.

ತಥೈವಾನ್ನಂ ಹ್ಯಹರಹಃ ಸಾಯಂ ಪ್ರಾತರ್ನಿರುಪ್ಯತೇ ।
ಪಶವಶ್ಚಾಥ ಧಾನ್ಯಂ ಚ ಯಜ್ಞಸ್ಯಾಂಗಮಿತಿ ಶ್ರುತಿಃ ॥೨೦॥

ಏತಾನಿ ಸಹ ಯಜ್ಞೇನ ಪ್ರಜಾಪತಿರಕಲ್ಪಯತ್ ।
ತೇನ ಪ್ರಜಾಪತಿರ್ದೇವಾನ್ಯಜ್ಞೇನಾಯಜತ ಪ್ರಭುಃ ॥೨೧॥

ಪ್ರತಿದಿವಸವು ಹಗಲು-ರಾತ್ರಿ ಪ್ರಾಣಿಗಳು ಅನ್ನಕ್ಕಾಗಿಯೇ ಹುಡುಕುತ್ತಿರುತ್ತವೆ. ಪಶುಗಳು ಮತ್ತು ಧಾನ್ಯಗಳು ಎರಡೂ ಯಜ್ಞಕ್ಕೆ ಅಂಗಗಳೆಂದು ವೇದಗಳು ವಿಧಿಸಿವೆ. ಬ್ರಹ್ಮನು ಇವುಗಳನ್ನು ಯಜ್ಞದ ಜೊತೆಗೆ ಸೃಷ್ಟಿ ಮಾಡಿದ್ದಾನೆ. ಇಷ್ಟೇ ಅಲ್ಲದೆ ಅವುಗಳನ್ನು ದೇವತೆಗಳಿಂದ ತ್ಯಜಿಸುವಂತೆಯೂ ನಿಯಮನ ಮಾಡಿರುತ್ತಾನೆ.

ತೇ ಸ್ಮಾನ್ಯೋನ್ಯಂಚರಾಃ ಸರ್ವೇ ಪ್ರಾಣಿನಃ ಸಪ್ತ ಸಪ್ತ ಚ ।
ಯಜ್ಞೇಷೂಪಾಕೃತಂ ವಿಶ್ವಂ ಪ್ರಾಹುರುತ್ತಮಸಂಜ್ಞಿತಮ್ ॥೨೨॥

ಏಳು ಅರಣ್ಯಜಂತುಗಳು, ಏಳು ಗ್ರಾಮಜಂತುಗಳು ಯಜ್ಞಕ್ಕೆ ವಿಹಿತವಾದವುಗಳೆಂದು ವೇದಗಳಲ್ಲಿ ನಿರೂಪಿಸಲ್ಪಟ್ಟಿವೆ. ಇವೆಲ್ಲವೂ ಯಜ್ಞಕ್ಕೆ ಸಾಧನಗಳೇ.

ವ್ಯಾಖ್ಯಾನ ವಿಶೇಷ– ಹಸು, ಕುರಿ, ಮನುಷ್ಯ, ಆಡು, ಹೇಸರಗತ್ತೆ, ಕತ್ತೆ – ಇವು ಏಳು ಗ್ರಾಮ್ಯ ಸಾಧು ಜಂತುಗಳು. ಹುಲಿ, ಸಿಂಹ, ಹಂದಿ, ಕಾಡೆಮ್ಮೆ, ಆನೆಗಳು, ಜಿಂಕೆ, ಮುಳ್ಳುಹಂದಿ ಇವು ಏಳು ಅರಣ್ಯಪಶುಗಳೆಂದು ಪ್ರಸಿದ್ಧವಾಗಿವೆ. ದೇವತೆಗಳನ್ನು ಉದ್ದೇಶಿಸಿ ಅಭಿಮಂತ್ರಿತವಾದ

ಈ ಪಶುಗಳನ್ನು ಆಲಂಭನ ಮಾಡುವುದರಲ್ಲಿ ಅಪರಾಧವೆನಿಸದು. ವೇದದಲ್ಲಿ ಪಶುವಧೆ ಮಾಡಬಾರದು, ಪಶುವಧೆ ಮಾಡಬೇಕು ಎಂದು ಎರಡು ವಿಧವಾದ ವಚನಗಳು ಪ್ರಾಮಾಣಿಕಗಳೇ ಆಗಿವೆ. ಫಲವನ್ನು ಬಯಸುವವನು ಪಶುವಧೆಯನ್ನು ಮಾಡಬಾರದು. ಫಲಕಾಮನಾ ರಹಿತನಾದ ವ್ಯಕ್ತಿಯು ಪಶುವಧೆಯನ್ನು ಮಾಡಬಹುದು ಎಂದು ಈ ವೇದದ ಅಭಿಪ್ರಾಯವಾಗಿದೆ. ಆದ್ದರಿಂದ ವೇದಗಳನ್ನು ಅಪ್ರಾಮಾಣಿಕವೆಂದು ಶಂಕಿಸಬಾರದು ಎಂದು ತಾತ್ಪರ್ಯ.

ಏತಚ್ಚೈವಾಭ್ಯನುಜ್ಞಾತಂ ಪೂರ್ವೈಃ ಪೂರ್ವತರೈಸ್ತಥಾ ।
ಕೋ ಜಾತು ನ ವಿಚಿನ್ವೀತ ವಿದ್ವಾನ್ಸ್ವಂ ಶಕ್ತಿಮಾತ್ಮನಃ ॥೨೩॥

ಏಳು ಗ್ರಾಮ್ಯ ಪಶುಗಳನ್ನು, ಏಳು ಆರಣ್ಯಪಶುಗಳನ್ನು ಯಜ್ಞದ ಅಂಗಗಳೆಂದು ಹಿಂದಿನವರು, ಅವರಿಗಿಂತಲೂ ಹಿಂದಿನವರು ಅಂಗೀಕರಿಸಿರುವರು. ಆದ್ದರಿಂದ ತನ್ನ ಶಕ್ತಿಯನ್ನು ಅರಿತ ಯಾವ ಮನುಷ್ಯನಾದರೂ ಒಮ್ಮೆಯಾದರೂ ವಿಹಿತವಾದ ಯಜ್ಞವನ್ನು ಮಾಡದೆ ಇರುವುದಿಲ್ಲ.

ಪಶವಶ್ಚ ಮನುಷ್ಯಾಶ್ಚ ದ್ರುಮಾಶ್ಚೌಷಧಿಭಿಃ ಸಹ ।
ಸ್ವರ್ಗಮೇವಾಭಿಕಾಂಕ್ಷಂತೇ ನ ಚ ಸ್ವರ್ಗಸ್ಯತೇ ಮಖಿಮ್ ॥೨೪॥

ಪಶುಗಳು, ಮನುಷ್ಯರು, ಓಷಧಿ-ಲತೆಗಳು, ವೃಕ್ಷಗಳು ಎಲ್ಲರೂ ಸ್ವರ್ಗಾಪೇಕ್ಷಿಗಳೇ ಆಗಿರುತ್ತಾರೆ. ಯಜ್ಞದ ಹೊರತಾಗಿ ಸ್ವರ್ಗವು ಪ್ರಾಪ್ತವಾಗುವುದಿಲ್ಲ.

ಓಷಧ್ಯಃ ಪಶವೋ ವೃಕ್ಷಾ ವೀರುದಾಜ್ಯಂ ಪಯೋ ದಧಿ ।
ಹವಿರ್ಭೂಮಿರ್ದಿಶಃ ಶ್ರದ್ಧಾ ಕಾಲಶ್ಚೈತಾನಿ ದ್ವಾದಶ ॥೨೫॥

ಓಷಧಿಗಳು, ಪಶುಗಳು, ವೃಕ್ಷಗಳು, ಬಳ್ಳಿಗಳು, ತುಪ್ಪ, ಹಾಲು, ಮೊಸರು, ಇತರ ಹವಿಸ್ಸುಗಳು, ಭೂಮಿ, ದಿಕ್ಕುಗಳು, ಶ್ರದ್ಧೆ ಮತ್ತು ಕಾಲ - ಈ ಹನ್ನೆರಡು ಯಜ್ಞದ ಅಂಗಗಳೆನಿಸಿವೆ.

ಋಚೋ ಯಜೂಂಷಿ ಸಾಮಾನಿ ಯಜಮಾನಶ್ಚ ಷೋಡಶಃ ।
ಅಗ್ನಿರ್ಜ್ಞೇಯೋ ಗೃಹಪತಿಃ ಸ ಸಪ್ತದಶ ಉಚ್ಯತೇ ।
ಅಂಗಾನ್ಯೇತಾನಿ ಯಜ್ಞಸ್ಯ ಯಜ್ಞೋ ಮೂಲಮಿತಿ ಶ್ರುತಿಃ ॥೨೬॥

ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಯಜಮಾನ ಇವುಗಳು ಸೇರಿದರೆ ಹದಿನಾರು ಯಜ್ಞಾಂಗಗಳಾಗುತ್ತವೆ. ಗಾರ್ಹಪತ್ಯ ಅಗ್ನಿಯು ಹದಿನೇಳನೆಯ

ಯಜ್ಞಾಂಗವಾಗಿದೆ. ಮೇಲೆ ಹೇಳಿದ ಹದಿನೇಳು ವಸ್ತುಗಳು ಯಜ್ಞಾಂಗಗಳು ಎಂದು ಶ್ರುತಿಯಲ್ಲಿ ಹೇಳಲ್ಪಟ್ಟಿವೆ.

ಆಜ್ಯೇನ ಪಯಸಾ ದಧ್ನಾ ಶಕೃತಾಮಿಕ್ಷಯಾ ತ್ವಚಾ ।
ವಾಲೈಃ ಶೃಂಗೇಣ ಪಾದೇನ ಸಂಭವತ್ಯೇವ ಗೌರ್ಮಖಮ್ ।
ಏವಂ ಪ್ರತ್ಯೇಕಶಃ ಸರ್ವಂ ಯದ್ಯದಸ್ಯ ವಿಧೀಯತೇ ॥೨೭॥

ತುಪ್ಪ, ಹಾಲು, ಮೊಸರು, ಸೆಗಣಿ, ಚರ್ಮ, ಬಾಲ, ಕೊಂಬು, ಕಾಲು ಇವೆಲ್ಲವನ್ನೂ ಯಜ್ಞಸಾಧನಗಳೇ ಎಂದು ವೇದಗಳು ಹೇಳಿವೆ. ಯಾವ ಯಜ್ಞಕ್ಕೆ ಇವುಗಳು ವಿಹಿತವಾಗಿವೆಯೋ ಆಯಾ ವಸ್ತುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸಂಗ್ರಹಿಸಲೇಬೇಕು.

ಯಜ್ಞಂ ವಹಂತಿ ಸಂಭೂಯ ಸಹರ್ತ್ವಿಗ್ಭಿಃ ಸದಕ್ಷಿಣೈಃ ।
ಸಂಹತ್ಯೈತಾನಿ ಸರ್ವಾಣಿ ಯಜ್ಞಂ ನಿರ್ವರ್ತಯಂತ್ಯುತ ॥೨೮॥

ಯಜ್ಞಾರ್ಥಾನಿ ಹಿ ಸೃಷ್ಟಾನಿ ಯಥಾ ವೈ ಶ್ರೂಯತೇ ಶ್ರುತಿಃ ।
ಏವಂ ಪೂರ್ವೇ ಪೂರ್ವತರಾಃ ಪ್ರವರ್ತಾಶ್ಚೈವ ಮಾನವಾಃ ॥೨೯॥

ಋತ್ವಿಜರು ಮತ್ತು ದಕ್ಷಿಣಾ ದ್ರವ್ಯಗಳು ಇದ್ದಾಗ ಯಜ್ಞಗಳನ್ನು ನಿರ್ವಹಿಸಬಹುದು. ಅವೆಲ್ಲವನ್ನೂ ಯಜ್ಞಕ್ಕಾಗಿಯೇ ಬ್ರಹ್ಮನು ಸೃಷ್ಟಿಸಿದ್ದಾನೆಂದು ಶ್ರುತಿಗಳು ಹೇಳುತ್ತಿವೆ. ಯಜಮಾನನು ಈ ಎಲ್ಲ ವಸ್ತುಗಳನ್ನು ಸಂಗ್ರಹಿಸಿ ಯಜ್ಞವನ್ನು ಮಾಡುತ್ತಾನೆ. ಈ ಶ್ರುತಿವಾಕ್ಯವನ್ನೇ ಅವಲಂಬಿಸಿ ನಮ್ಮ ಹಿಂದಿನ ಮನುಷ್ಯರೆಲ್ಲರೂ ಯಜ್ಞದಲ್ಲಿ ಯಾವಾಗಲೂ ಪ್ರವೃತ್ತಿಯನ್ನು ಹೊಂದುತ್ತಿದ್ದರು.

ನ ಹಿನಸ್ತಿ ಹ್ಯಾರಭತೇ ನಾಭಿದ್ರುಹ್ಯತಿ ಕಿಂಚನ ।
ಯಜ್ಞೋ ಯಷ್ಟವ್ಯ ಇತ್ಯೇವ ಯೋ ಯಜತ್ಯಫಲೇಪ್ಸಯಾ ॥೩೦॥

ಯಾವನು ಯಜ್ಞ ಮಾಡುವುದು ತನ್ನ ಕರ್ತವ್ಯವೆಂದು ಭಾವಿಸಿ ಯಾವ ವಿಧವಾದ ಫಲವನ್ನೂ ಬಯಸದೆ ನಿಷ್ಕಾಮನೆಯಿಂದಲೇ ಯಜ್ಞವನ್ನು ಆಚರಿಸುತ್ತಾನೋ ಅವನು ಪಶುಹಿಂಸಕನೆನಿಸುವುದಿಲ್ಲ, ದ್ರೋಹಿ ಎನಿಸುವುದಿಲ್ಲ. ಇವನು ಅಹಂಕಾರ ಪೂರ್ವಕವಾಗಿ ಯಾವ ಕರ್ಮವನ್ನೂ ಮಾಡಲಾರ. ಯಜ್ಞ ಮಾಡಬೇಕು ಎಂಬ ಸದುದ್ದೇಶದಿಂದಲೇ ಕರ್ಮವನ್ನು ಆಚರಿಸುತ್ತಾನೆ.

ಯಜ್ಞಾಂಗಾನ್ಯಪಿ ಚೈತಾನಿ ಯಥೋಕ್ತಾನಿ ನಸಂಶಯಃ ।
ವಿಧಿನಾ ವಿಧಿಯುಕ್ತಾನಿ ತಾರಯಂತಿ ಪರಸ್ಪರಮ್ ॥೩೧॥

ಶ್ರುತಿಯಲ್ಲಿ ಕ್ರಮವಾಗಿ ಹೇಳಲ್ಪಟ್ಟಿರುವ ಯಜ್ಞಸಾಮಗ್ರಿಗಳು ವಿಧಿವತ್ತಾಗಿ ಯಜ್ಞದಲ್ಲಿವಿನಿಯೋಗಿಸಲ್ಪಟ್ಟಾಗ ಯಜ್ಞ ಮತ್ತು ಯಜ್ಞಾಂಗ ಎರಡೂ ಪರಸ್ಪರ ಒಂದನ್ನು ಮತ್ತೊಂದು ಧಾರಣೆ ಮಾಡಿಕೊಂಡಿರುತ್ತವೆ.

ಆಮ್ನಾಯಮಾರ್ಷಂ ಪಶ್ಯಾಮಿ ಯಸ್ಮಿನ್ ವೇದಾಃ ಪ್ರತಿಷ್ಠಿತಾಃ ।
ತಂ ವಿದ್ವಾಂಸೋಽನುಪಶ್ಯಂತಿ ಬ್ರಾಹ್ಮಣಸ್ಯಾನುದರ್ಶನಾತ್ ॥೩೨॥

ಋಷಿಪ್ರೋಕ್ತವಾದ ವೇದಗಳನ್ನು ನಾನು ಬಲ್ಲವನಾಗಿದ್ದೇನೆ. ಆ ವೇದಗಳಲ್ಲಿಯೇ ಎಲ್ಲವೂ ನಿರೂಪಿಸಲ್ಪಟ್ಟಿದೆ. ಬ್ರಾಹ್ಮಣವಾಕ್ಯಗಳು, ಧರ್ಮಶಾಸ್ತ್ರಗಳು ಇವುಗಳನ್ನು ವಿದ್ವಾಂಸರು ಪರಿಶೀಲಿಸಿ ಅದನ್ನೇ ಪ್ರಾಮಾಣಿಕವೆಂದು ನಂಬಿರುತ್ತಾರೆ.

ಬ್ರಾಹ್ಮಣಪ್ರಭವೋ ಯಜ್ಞೋ ಬ್ರಾಹ್ಮಣಾರ್ಪಣ ಏವ ಚ ।
ಅನು ಯಜ್ಞಂ ಜಗತ್ ಸರ್ವಂ ಯಜ್ಞಶ್ಚಾನು ಜಗತ್ ಸದಾ ॥೩೩॥

ವೇದದ ಬ್ರಾಹ್ಮಣಭಾಗದಿಂದಲೇ ಯಜ್ಞವು ಪ್ರಕಟಗೊಂಡಿದೆ. ಇದು ಬ್ರಹ್ಮನಿಗೇ ಸಮರ್ಪಿಸಲ್ಪಡುತ್ತದೆ. ಜಗತ್ತೆಲ್ಲವೂ ಯಜ್ಞವನ್ನೇ ಅನುಸರಿಸಿದೆ. ಹಾಗೆ ಯಜ್ಞವೂ ಜಗತ್ತನ್ನೇ ಅನುಸರಿಸುತ್ತದೆ. ಹೀಗೆ ಜಗತ್ತು , ಯಜ್ಞ ಎರಡೂ ಪರಸ್ಪರ ಒಂದನ್ನೊಂದು ಅವಲಂಬಿಸಿವೆ.

ಓಮಿತಿ ಬ್ರಹ್ಮಣೋ ಯೋನಿರ್ನಮಃ ಸ್ವಾಹಾ ಸ್ವಧಾ ವಷಟ್ ।
ಯಸ್ಯೈತಾನಿ ಪ್ರಯುಜ್ಯಂತೇ ಯಥಾಶಕ್ತಿ ಕೃತಾನ್ಯಪಿ ॥೩೪॥

ಓಂ ಎಂಬುದು ವೇದದ ಮೂಲವೆನಿಸಿದೆ. ನಮಃ, ಸ್ವಾಹಾ, ಸ್ವಧಾ, ವಷಟ್ ಎಂಬ ಶಬ್ದಗಳು ಯಾವಾತನ ಯಜ್ಞದಲ್ಲಿ ಯಥಾಶಕ್ತಿ ಹೇಳಲ್ಪಡುತ್ತವೆಯೋ ಅವನ ಯಜ್ಞವು ಪೂರ್ಣವಾಗುತ್ತದೆ.

ನ ತಸ್ಯ ತ್ರಿಷು ಲೋಕೇಷು ಪರಲೋಕಭಯಂ ವಿದುಃ ।
ಇತಿ ವೇದಾ ವದಂತೀಹ ಸಿದ್ಧಾಶ್ಚ ಪರಮರ್ಷಯಃ ॥೩೫॥

ಇಂತಹ ಯಜ್ಞವನ್ನು ಮಾಡಿದವನಿಗೆ ಮೂರುಲೋಕದಲ್ಲಿ ಯಾವುದೇ

ಪ್ರಾಣಿಗಳಿಂದಾಗಲಿ ಭಯವಿರುವುದಿಲ್ಲ. ಹೀಗೆ ವೇದವೇ ಹೇಳಿದೆ. ಸಿದ್ಧರೂ, ಶ್ರೇಷ್ಠರೂ ಆದ ಋಷಿಗಳು ಇದನ್ನೇ ಹೇಳಿರುತ್ತಾರೆ.

ಋಚೋ ಯಜೂಂಷಿ ಸಾಮಾನಿ ಸ್ತೋಭಾಶ್ಚ ವಿಧಿಚೋದಿತಾಃ ।
ಯಸ್ಮಿನ್ನೇತಾನಿ ಸರ್ವಾಣಿ ಬಹಿರೇವ ಸ ವೈ ದ್ವಿಜಃ ॥೩೬॥

ಋಗ್ವೇದ, ಯಜುರ್ವೇದ, ಸಾಮವೇದ, ಸಾಮಕ್ಕೆ ಸಂಬಂಧಿಸಿದ ಹಾಹೂ ಎಂಬ ಸ್ತೋಭಗಳು ಯಾರಲ್ಲಿ ಇರುತ್ತವೆಯೋ ಅವನೇ ನಿಜವಾದ ಬ್ರಾಹ್ಮಣನು.

ಅಗ್ನ್ಯಾಧೇಯೇ ಯದ್ಭವತಿ ಯಚ್ಚ ಸೋಮೇ ಸುತೇ ದ್ವಿಜ ।
ಯಚ್ಚೇತರೈರ್ಮಹಾಯಜ್ಞೈರ್ವೇದ ತದ್ ಭಗವಾನ್ ಸ್ವತಃ ॥೩೭॥

ಅಗ್ನ್ಯಾಧಾನ, ಸೋಮಯಾಗ ಇವುಗಳನ್ನು ಮಾಡುವುದರಿಂದ ಯಾವ ಫಲವು ಲಭಿಸುತ್ತದೋ, ಇತರ ಯಜ್ಞಗಳಿಂದ ಯಾವ ಫಲವು ಲಭಿಸುತ್ತದೋ ಅದೆಲ್ಲವನ್ನೂ ಪೂಜ್ಯನಾದ ನೀನೇ ತಿಳಿದಿರುತ್ತಿ.

ತಸ್ಮಾದ್ ಬ್ರಹ್ಮನ್ ಯಜೇತೈವ ಯಾಜಯೇಚ್ಚಾವಿಚಾರಯನ್ ।
ಯಜತಃ ಸ್ವರ್ಗವಿಧಿನಾ ಪ್ರೇತ್ಯ ಸ್ವರ್ಗಫಲಂ ಮಹತ್ ॥೩೮॥

ಆದ್ದರಿಂದ ಪ್ರತಿಯೊಬ್ಬ ಬ್ರಾಹ್ಮಣನು ಯಾಗವನ್ನು ವಿಧಿಬದ್ಧವಾಗಿ ಮಾಡಲೇಬೇಕು. ಇತರರಿಂದ ಮಾಡಿಸಲೂ ಬೇಕು. ಜ್ಯೋತಿಷ್ಟೋಮಾದಿ ಯಾಗಗಳಿಂದ ಸತ್ತ ಬಳಿಕ ಉತ್ತಮ ಫಲವೆನಿಸಿದ ಸ್ವರ್ಗವು ದೊರೆಯುತ್ತದೆ.

ನಾಯಂ ಲೋಕೋಽಸ್ತ್ಯಯಜ್ಞಾನಾಂ ಪರಶ್ಚೇತಿ ವಿನಿಶ್ಚಯಃ ।
ವೇದವಾದವಿದಶ್ಚೈವ ಪ್ರಮಾಣಮುಭಯಂ ತದಾ ॥೩೯॥

ಯಜ್ಞವನ್ನು ಮಾಡದವನಿಗೆ ಇಹ-ಪರಗಳೆರಡೂ ಇರುವುದಿಲ್ಲ ಎಂಬುದು ನಿಶ್ಚಯವು. ಯಾವನು ವೇದದಲ್ಲಿ ಹೇಳಿರುವ ವಿಷಯಗಳನ್ನು ಚೆನ್ನಾಗಿ ಅರಿತಿರುತ್ತಾನೋ ಅವನು ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗಗಳನ್ನು ತಿಳಿದವನಾಗಿರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಗೋ-ಕಪಿಲಸಂವಾದೇ ತ್ರ್ಯಧಿಕಶತತಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಾಲ್ಕನೆಯ ಅಧ್ಯಾಯ

ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗಗಳ ವಿಷಯದಲ್ಲಿ ಗೋ-ಕಪಿಲರ ಸಂವಾದ.

ಕಪಿಲಃ

ಏತಾವದನುಪಶ್ಯಂತೋ ಯತಯೋ ಯಾಂತಿ ಮಾರ್ಗಗಾಃ ।
ನೈಷಾಂ ಸರ್ವೇಷು ಲೋಕೇಷು ಕಶ್ಚಿದಸ್ತಿ ವ್ಯತಿಕ್ರಮಃ ॥೧॥

ಯತಿಗಳು ಕರ್ಮಫಲಗಳೆಲ್ಲ ನಶ್ವರವೆಂದು, ಅನಿತ್ಯವೆಂದು ತಿಳಿದೇ ಜಿತೇಂದ್ರಿಯರಾಗಿ, ಶಾಂತಿಯನ್ನು ಅವಲಂಬಿಸಿ, ಕೇವಲ ಜ್ಞಾನಮಾರ್ಗದಿಂದ ಪರಬ್ರಹ್ಮನನ್ನು ಹೊಂದುತ್ತಾರೆ. ಅವರಿಗೆ ಯಾವ ಲೋಕದಲ್ಲಿಯೂ, ಯಾವ ತಡೆಯೂ ಇರುವುದಿಲ್ಲ.

ನಿರ್ದ್ವಂದ್ವಾ ನಿರ್ನಮಸ್ಕಾರಾ ನಿರಾಶೀರ್ಬಂಧನಾ ಬುಧಾಃ ।
ವಿಮುಕ್ತಾಃ ಸರ್ವಪಾಪೇಭ್ಯಶ್ಚರಂತಿ ಶುಚಯೋऽಮಲಾಃ ॥೨॥

ಅವರು ದ್ವಂದ್ವಗಳಿಂದ ಅತೀತರು, ಮತ್ತೊಬ್ಬರ ನಮಸ್ಕಾರಕ್ಕೆ ಎಂದೂ ಆಸೆಪಡದವರು, ಬಾಹ್ಯಸುಖದ ಅಪೇಕ್ಷಾರಹಿತರು, ಬಂಧನವಿಲ್ಲದವರು. ಸಮಸ್ತ ಪಾಪಗಳಿಂದ ಮುಕ್ತರು, ನಿರ್ಮಲರೂ, ಶುಚಿಗಳೂ ಆಗಿ ಸಂಚರಿಸುತ್ತಿರುತ್ತಾರೆ.

ಅಪವರ್ಗೇऽಥ ಸಂತ್ಯಾಗೇ ಬುದ್ಧೌ ಚ ಕೃತನಿಶ್ಚಯಾಃ ।
ಬ್ರಹ್ಮಿಷ್ಠಾ ಬ್ರಹ್ಮಭೂತಾಶ್ಚ ಬ್ರಹ್ಮಣ್ಯೇವ ಕೃತಾಲಯಾಃ ॥೩॥

ಮೋಕ್ಷವನ್ನು ಸಾಧಿಸುವ ವಿಷಯದಲ್ಲಿಯೂ, ಅದಕ್ಕಾಗಿಯೇ ಸಮಸ್ತವನ್ನೂ ತ್ಯಜಿಸುವ ವಿಷಯದಲ್ಲಿಯೂ ದೃಢವಾದ ನಿಶ್ಚಯವನ್ನು ಹೊಂದಿರುತ್ತಾರೆ. ಯಾವಾಗಲೂ ಬ್ರಹ್ಮೋಪಾಸನನಿರತರಾಗಿ, ಭಗವಂತನಲ್ಲಿಯೇ ನೆಲೆಗೊಂಡ ಮನಸ್ಸುಳ್ಳವರಾಗಿರುತ್ತಾರೆ.

ವಿಶೋಕಾ ನಷ್ಟರಜಸಸ್ತೇಷಾಂ ಲೋಕಾಃ ಸನಾತನಾಃ ।
ತೇಷಾಂ ಗತಿಂ ಪರಾಂ ಪ್ರಾಪ್ಯ ಗಾರ್ಹಸ್ಥ್ಯೇ ಕಿಂ ಪ್ರಯೋಜನಮ್ ॥೪॥

ಬ್ರಹ್ಮಜ್ಞಾನದಿಂದ ಶೋಕರಹಿತರೂ, ರಜೋಗುಣರಹಿತರೂ ಆಗಿರುವ ಆ ಯತಿಗಳಿಗೆ ಲಭಿಸುವ ಲೋಕಗಳು ಶಾಶ್ವತವಾದವುಗಳು. ಬ್ರಹ್ಮಜ್ಞಾನಿಗಳ ಉತ್ಕೃಷ್ಟ

ಗತಿಯನ್ನು ಹೊಂದುವ ಆ ಯತಿಗಳಿಗೆ ಗೃಹಸ್ಥಾಶ್ರಮದಿಂದಾಗಲಿ, ಅದಕ್ಕೆ ಸಂಬಂಧಿಸಿದ ಯಜ್ಞ-ಯಾಗಾದಿಗಳಿಂದಾಗಲಿ ಏನು ಪ್ರಯೋಜನವಿದೆ?

ಸ್ಯೂಮರಶ್ಮಿಃ

ಯದ್ಯೇಷಾ ಪರಮಾ ನಿಷ್ಠಾ ಯದ್ಯೇಷಾ ಪರಮಾ ಗತಿಃ ।
ಗೃಹಸ್ಥಾನವ್ಯಪಾಶ್ರಿತ್ಯ ನಾಶ್ರಮೋಽನ್ಯಃ ಪ್ರವರ್ತತೇ ॥೫॥

ಮಹರ್ಷಿಯೇ, ನೀನು ಹೇಳಿದುದು ವಾಸ್ತವವೇ ಆಗಿದೆ. ಆದರೆ ಅಂತಹ ತ್ಯಾಗವನ್ನು ಅಭ್ಯಾಸ ಮಾಡಿದವರ ನಿಷ್ಠೆಯೂ ಶ್ರೇಷ್ಠವಾದ ನಿಷ್ಠೆ ಎನಿಸಿದೆ. ಅವರು ಹೊಂದುವ ಗತಿಯು ಪರಮಗತಿಯೇ ಆಗಿದೆ. ಹೀಗಿದ್ದರೂ ಗೃಹಸ್ಥರನ್ನು ಆಶ್ರಯಿಸದೆ ಯಾವ ಆಶ್ರಮಧರ್ಮವೂ ನಡೆಯಲಾರದು.

ಯಥಾ ಮಾತರಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ ।
ಏವಂ ಗೃಹಸ್ಥಮಾಶ್ರಿತ್ಯ ವರ್ತಂತ ಇತರೇಽಽಶ್ರಮಾಃ ॥೬॥

ಗೃಹಸ್ಥ ಏವ ಯಜತೇ ಗೃಹಸ್ಥಸ್ತಪ್ಯತೇ ತಪಃ ।
ಗಾರ್ಹಸ್ಥ್ಯಮಸ್ಯ ಧರ್ಮಸ್ಯ ಮೂಲಂ ಯತ್ಕಿಂಚಿದೇಜತೇ ॥೭॥

ಪ್ರಾಣಿಗಳೆಲ್ಲವೂ ತಮ್ಮ ತಾಯಿಯನ್ನು ಆಶ್ರಯಿಸಿ ಹೇಗೆ ಬದುಕುತ್ತವೆಯೋ ಅದರಂತೆ ಎಲ್ಲ ಆಶ್ರಮಗಳು ಗೃಹಸ್ಥಧರ್ಮವನ್ನೇ ಆಶ್ರಯಿಸಿ ಬಂದಿವೆ. ಗೃಹಸ್ಥನೇ ಯಜ್ಞವನ್ನು ಮಾಡುತ್ತಾನೆ. ಗೃಹಸ್ಥನೇ ಕೃಚ್ಛ್ರಾದಿವ್ರತಗಳನ್ನು, ತಪಸ್ಸನ್ನು ಆಚರಿಸುತ್ತಾನೆ. ಯಾರಾದರೂ ಯಾವ ಕರ್ಮವನ್ನು ಮಾಡಿದರೂ ಅದಕ್ಕೆ ಮೂಲಕಾರಣವು ಗೃಹಸ್ಥ ಧರ್ಮವೇ ಆಗಿದೆ.

ಪ್ರಜನಾದ್ಧ್ಯಭಿನಿರ್ವೃತ್ತಾಃ ಸರ್ವೇ ಪ್ರಾಣಭೃತೋ ಮುನೇ ।
ಪ್ರಜನಂ ಚಾಪ್ಯುತಾನ್ಯತ್ರ ನ ಕಥಂಚನ ವಿದ್ಯತೇ ॥೮॥

ಪ್ರಾಣ ಧರಿಸಿರುವ ಸಮಸ್ತ ಜನರು ಸಂತಾನಾದಿ ಪ್ರಾಪ್ತಿಯಿಂದ ಸುಖಾನುಭೋಗವನ್ನು ಹೊಂದುತ್ತಾರೆ. ಆದರೆ ಸಂತಾನದ ಉತ್ಪತ್ತಿಯು ಗೃಹಸ್ಥಾಶ್ರಮದ ಹೊರತಾಗಿ ಬೇರೆ ಯಾವ ಆಶ್ರಮದಿಂದಲೂ ಸಾಧ್ಯವಾಗುವುದಿಲ್ಲ.

ಯಾಸ್ತಾಃ ಸ್ಯುರ್ಬಹಿರೋಷಧ್ಯೋ ಬಹ್ವರಣ್ಯಾಸ್ತಥಾ ದ್ವಿಜ ।
ಓಷಧಿಭ್ಯೋ ಬಹಿರ್ಯಸ್ಮಾತ್ ಪ್ರಾಣೇ ಕಶ್ಚಿನ್ನ ವಿದ್ಯತೇ ।
ಕಸ್ಯೈಷಾ ವಾಗ್ಭವೇತ್ ಸತ್ಯಾ ಮೋಕ್ಷೋ ನಾಸ್ತಿ ಗೃಹಾದಿತಿ ॥೯॥

ಹುಲ್ಲು, ಓಷಧಿ, ಬಯಲಿನಲ್ಲಿ ಪರ್ವತದಲ್ಲಿ ಹುಟ್ಟುವ ಎಲ್ಲ ಗಿಡ-ಬಳ್ಳಿಗಳು ಈ ಎಲ್ಲದಕ್ಕೂ ಮೂಲಾಧಾರವಾದುದು ಗೃಹಸ್ಥ ಧರ್ಮವೇ ಆಗಿದೆ. ಗೃಹಸ್ಥಾಶ್ರಮವನ್ನು ಪರಿಪಾಲಿಸುವುದರಿಂದ ಮೋಕ್ಷವು ಲಭಿಸುವುದಿಲ್ಲ ಎಂದು ಹೇಳುವವರ ಮಾತು ಹೇಗೆ ತಾನೆ ಸತ್ಯವಾದೀತು?

ಅಶ್ರದ್ದಧಾನೈರಪ್ರಾಜ್ಞೈಃ ಸೂಕ್ಷ್ಮದರ್ಶನವರ್ಜಿತೈಃ ।
ನಿರಾಶೈರಲಸೈಃ ಶ್ರಾಂತೈಸ್ತಪ್ಯಮಾನೈಃ ಸ್ವಕರ್ಮಭಿಃ ।
ಶ್ರಮಸ್ಯೋಪರಮೋ ದೃಷ್ಟಃ ಪ್ರವ್ರಜ್ಯಾ ನಾಮ ಪಂಡಿತೈಃ ॥೧೦॥

ಯಾರು ಶ್ರದ್ಧಾರಹಿತರೋ, ಮೂರ್ಖರೋ, ಸೂಕ್ಷ್ಮದೃಷ್ಟಿಯಿಂದ ವಂಚಿತರೋ, ಅಸ್ಥಿರ ಬುದ್ಧಿಯುಳ್ಳವರೋ, ಆಲಸಿಗಳೋ, ಆರ್ತರೋ, ಅವರು ಹಿಂದೆ ಮಾಡಿದ ದುಷ್ಕರ್ಮಗಳಿಂದ ಪರಿತಪಿಸುತ್ತಿರುವರೋ ಅಂತಹ ಅಜ್ಞಾನಿಗಳಾದ ಮನುಷ್ಯರು ಮಾತ್ರವೇ ಸಂನ್ಯಾಸಾಶ್ರಮವನ್ನು ಆಶ್ರಯಿಸಿ ಗೃಹಸ್ಥಾಶ್ರಮದಲ್ಲಿ ಶಾಂತಿ ಇಲ್ಲ ಎಂದು ತಿಳಿದಿರುತ್ತಾರೆ.

ತ್ರೈಲೋಕ್ಯಸ್ಯೈವ ಹೇತುರ್ಹಿ ಮರ್ಯಾದಾ ಶಾಶ್ವತೀ ಧ್ರುವಾ ।
ಬ್ರಾಹ್ಮಣೋ ನಾಮ ಭಗವಾನ್ ಜನ್ಮಪ್ರಭತಿ ಪೂಜ್ಯತೇ ॥೧೧॥

ವೇದದಲ್ಲಿ ನಿರ್ಣೀತವಾದ, ಶಾಶ್ವತ ಎನಿಸಿದ ಧರ್ಮಮರ್ಯಾದೆಗಳೇ ಮೂರು ಲೋಕಗಳಲ್ಲೂ ನೆಲೆಗೊಂಡಿವೆ. ಅಂತಹ ವೇದವನ್ನು ಬಲ್ಲ ಬ್ರಾಹ್ಮಣನು ಹುಟ್ಟಿನಿಂದಲೇ ಪೂಜ್ಯನೆನಿಸುತ್ತಾನೆ.

ಪ್ರಾಗ್ಗರ್ಭಾಧಾನಾನ್ಮಂತ್ರಾ ಹಿ ಪ್ರವರ್ತಂತೇ ದ್ವಿಜಾತಿಷು ।
ಅವಿಶ್ರಂಭೇಷು ವರ್ತಂತೇ ವಿಶ್ರಂಭೇಷ್ವಪ್ಯಸಂಶಯಮ್ ॥೧೨॥

ದಾಹಃ ಪುನಃ ಸಂಶ್ರಯಣೇ ಸಂಸ್ಥಿತೇ ಪಾತ್ರಭೋಜನಮ್ ।
ದಾನಂ ಗವಾಂ ಪಶೂನಾಂ ವಾ ಪಿಂಡಾನಾಂ ಚಾಪ್ಸು ಮಜ್ಜನಮ್ ॥

ಬ್ರಾಹ್ಮಣರಲ್ಲಿ ಗರ್ಭಾಧಾನಕ್ಕೆ ಮೊದಲೇ ವೇದಮಂತ್ರಗಳು ಉಚ್ಚರಿಸಲ್ಪಡುತ್ತವೆ. ಲೌಕಿಕವಾದ, ಪಾರಲೌಕಿಕವಾದ ಎಲ್ಲಾ ಕರ್ಮಗಳಲ್ಲಿಯೂ ವೇದಮಂತ್ರಗಳು ನಿಸ್ಸಂದೇಹವಾಗಿ ಉಚ್ಚರಿಸಲ್ಪಡುತ್ತವೆ. ಸತ್ತಮೇಲೆ ನಡೆಯುವ ದಹನ, ತರ್ಪಣ, ಶ್ರಾದ್ಧಾದಿಗಳು, ಸತ್ತವರಿಗೆ ಸ್ವರ್ಗವನ್ನು ಹೊಂದಿಸುವುದಕ್ಕಾಗಿ ನಡೆಸುವ ಗೋದಾನ, ವೃಷೋತ್ಸರ್ಗ, ಪಿಂಡತ್ಯಾಗ ಈ ಎಲ್ಲಾ ಕರ್ಮಗಳಿಗೂ ವೇದಮಂತ್ರಗಳು ಅವಶ್ಯವೆನಿಸುತ್ತವೆ.

ಅರ್ಚಿಷ್ಮಂತೋ ಬರ್ಹಿಷದಃ ಕ್ರವ್ಯಾದಾಃ ಪಿತರಃ ಸ್ಮೃತಾಃ ।
ಮೃತಸ್ಯಾಪ್ಯನುಮನ್ಯಂತೇ ಮಂತ್ರಾऽಮಂತ್ರಾಶ್ಚ ಕಾರಣಮ್ ॥೧೪॥

ಅರ್ಚಿಷ್ಮಂತರು, ಬರ್ಹಿಷದರು, ಕ್ರವ್ಯಾದರು ಎಂಬ ಪಿತೃದೇವತೆಗಳು ಮೃತನ ಸುಖ-ಶಾಂತಿ ಮತ್ತು ಪ್ರಸನ್ನತೆಗಾಗಿ ಮಂತ್ರಪಠಣಕ್ಕೆ ಅನುಮತಿಯನ್ನು ನೀಡುತ್ತಾರೆ. ಕೆಲವೊಂದು ಕರ್ಮಗಳನ್ನು ಮಂತ್ರಪಠನ ಪೂರ್ವಕವಾಗಿ ಆಚರಿಸಬೇಕು. ಕೆಲವೊಂದು ಕರ್ಮಗಳನ್ನು ಮೌನವಾಗಿ ಮಾಡಬೇಕು. ಕೆಲವೊಂದು ಕರ್ಮಗಳನ್ನು ಸವ್ಯದಿಂದಲೂ, ಕೆಲವೊಂದು ಕರ್ಮಗಳನ್ನು ಅಪಸವ್ಯದಿಂದಲೂ ಮಾಡಬೇಕು. ಇದಕ್ಕೆಲ್ಲ ಮೂಲವಾದುದು ವೇದಗಳೇ ಆಗಿವೆ.

ಏವಂ ಕ್ರೋಶತ್ಸು ವೇದೇಷು ಕುತೋ ಮೋಕ್ಷೋऽಸ್ತಿ ಕಸ್ಯಚಿತ್ ।
ಋಣವಂತೋ ಯದಾ ಮರ್ತ್ಯಾಃ ಪಿತೃದೇವದ್ವಿಜಾತಿಷು ॥೧೫॥

ಮನುಷ್ಯನು ದೇವತೆಗಳಿಗೂ, ಪಿತೃ-ಋಷಿಗಳಿಗೂ ಋಣಿಯಾಗಿಯೇ ಹುಟ್ಟುತ್ತಾನೆಂದು ವೇದಗಳು ಕೂಗಿ ಹೇಳುತ್ತಿರುವಾಗ, ಈ ಮೂರು ಋಣಗಳಿಂದ ಮುಕ್ತಿಯಾಗದಿರುವ ಮನುಷ್ಯನು ಮುಕ್ತಿಯನ್ನು ಹೊಂದಲು ಹೇಗೆ ಸಾಧ್ಯ ?

ಶ್ರಿಯಾ ವಿಹೀನೈರಲಸೈಃ ಪಂಡಿತೈಶ್ಚಪಲಾಯಿತಮ್ ।
ವೇದವಾದಾಪರಿಜ್ಞಾನಂ ಸತ್ಯಾಭಾಸಮಿವಾನೃತಮ್ ॥೧೬॥

ವೇದಗಳಲ್ಲಿ ತೋರುವ ವಾಸ್ತವ ಅರ್ಥಗಳನ್ನು ಬಿಟ್ಟು ವಿಪರೀತಾರ್ಥಗಳನ್ನು ಕಲ್ಪಿಸಿದವರು ಕೆಲವು ಅಯೋಗ್ಯಪಂಡಿತರು. ಕಳ್ಳರಿಂದ ಬ್ರಾಹ್ಮಣ ಹಿಂಸೆಯು ಮಾಡಲ್ಪಡುತ್ತಿರುವಾಗ ಸತ್ಯವನ್ನು ಹೇಳಬೇಕೆಂದು ದೃಷ್ಟಿ ಇಟ್ಟುಕೊಂಡು ಬ್ರಾಹ್ಮಣ

ಹಿಂಸೆಗೆ ಪ್ರೋತ್ಸಾಹವನ್ನು ನೀಡುವುದು ಎಷ್ಟು ಅಪರಾಧವೋ ಅದರಂತೆ ವೇದಗಳ ಸರಿಯಾದ ಪರಿಜ್ಞಾನವು ಇಲ್ಲದೆ ಮೇಲ್ನೋಟಕ್ಕೆ ಕಾಣುವ ಅರ್ಥವನ್ನು ಆಧರಿಸಿಕೊಂಡು ಸೋಮಾರಿಗಳಾದ, ದರಿದ್ರರಾದ ಕೆಲವು ಪಂಡಿತರು ವೇದಗಳಿಗೆ ವಿಪರೀತವಾದ ಅರ್ಥಗಳನ್ನು ಹೇಳುತ್ತಾರೆ.

ನ ವೈ ಪಾಪೈರ್ಹ್ರಿಯತೇ ಕೃಷ್ಯತೇ ವಾ
ಯೋ ಬ್ರಾಹ್ಮಣೋ ಯಜತೇ ವೇದಶಾಸ್ತ್ರೈಃ ।
ಊರ್ಧ್ವಂ ಯಜ್ಞಃ ಪಶುಭಿಃ ಸಾರ್ಧಮೇತಿ
ಸಂತರ್ಪಿತಸ್ತರ್ಪಯತೇ ಚ ಕಾಮ್ಯೈಃ ॥೧೭॥

ಯಾವ ಬ್ರಾಹ್ಮಣನು ವೇದಶಾಸ್ತ್ರಗಳಿಗೆ ಅನುಸಾರವಾಗಿ ಯಜ್ಞಾನುಷ್ಠಾನವನ್ನು ಮಾಡುತ್ತಾನೋ ಅವನು ಪಾಪದಿಂದ ಮುಕ್ತನಾಗುತ್ತಾನೆ. ಆ ಯಜ್ಞದ ಮೂಲಕ ತಾನು ಮಾತ್ರವಲ್ಲದೆ ತಾನು ವಧಿಸಿದ ಜಂತುಗಳನ್ನು ಉದ್ಧರಿಸಿ, ಅವುಗಳ ಜೊತೆ ಸೇರಿ ಉತ್ತಮವಾದ ಪುಣ್ಯಲೋಕಗಳನ್ನು ಹೊಂದುತ್ತಾನೆ.

ನ ವೇದಾನಾಂ ಪರಿಭವಾನ್ನ ಶಾಠ್ಯೇನ ನ ಮಾಯಯಾ ।
ಮಹತ್ ಪ್ರಾಪ್ನೋತಿ ಪುರುಷೋ ಬ್ರಾಹ್ಮಣೋ ಬ್ರಹ್ಮ ವಿಂದತಿ ॥೧೮॥

ವೇದಗಳನ್ನು ಅನಾದರಿಸುವುದರಿಂದಾಗಲಿ, ಉದ್ಧಟತನದಿಂದಾಗಲಿ, ಮೋಸದಿಂದಾಗಲಿ ಯಾವ ಮನುಷ್ಯನೂ ಪರಬ್ರಹ್ಮನನ್ನು ಹೊಂದಲು ಸಾಧ್ಯವಾಗುವುದಿಲ್ಲ. ಚೆನ್ನಾಗಿ ವೇದಗಳನ್ನು ಅರಿತು ಸತ್ಕರ್ಮಗಳನ್ನು ಆಚರಿಸುವವನೇ ಪರಬ್ರಹ್ಮನೆಂಬ ವಸ್ತುವನ್ನು ಹೊಂದುತ್ತಾನೆ.

ಕಪಿಲಃ

ದರ್ಶಂ ಚ ಪೌರ್ಣಮಾಸಂ ಚ ಅಗ್ನಿಹೋತ್ರಂ ಚ ಧೀಮತಾಮ್ ।
ಚಾತುರ್ಮಾಸ್ಯಾನಿ ಚೈವಾಸಂಸ್ತೇಷು ಯಜ್ಞಃ ಸನಾತನಃ ॥೧೯॥

ಬುದ್ಧಿವಂತನಾದ ಮನುಷ್ಯನಿಗೆ ದರ್ಶ, ಪೌರ್ಣಮಾಸ, ಅಗ್ನಿಹೋತ್ರ, ಚಾತುರ್ಮಾಸ್ಯ, ಇತ್ಯಾದಿ ಕರ್ಮಗಳು ಹೇಳಲ್ಪಟ್ಟಿವೆ. ಏಕೆಂದರೆ ಸನಾತನ ಧರ್ಮಗಳೆಲ್ಲವೂ ಈ ಕರ್ಮಗಳಲ್ಲಿಯೇ ಪ್ರತಿಷ್ಠಿತವಾಗಿವೆ.

ಅನಾರಂಭಾಃ ಸುಧೃತಯಃ ಶುಚಯೋ ಬ್ರಹ್ಮಸಂಶ್ರಿತಾಃ ।
ಬ್ರಹ್ಮಣ್ಯೇವ ಸ್ಮ ತೇ ದೇವಾಂಸ್ತರ್ಪಯಂತ್ಯಮೃತೈಷಿಣಃ ॥೨೦॥

ಯಾರು ತನ್ನ ಹೊಟ್ಟೆ ಹೊರೆಯಲು ಕರ್ಮಗಳನ್ನು ಮಾಡುವುದಿಲ್ಲವೋ, ದೃಢವಾದ ಬುದ್ಧಿಯುಳ್ಳವರಾಗಿದ್ದಾರೋ, ಶುಚಿಗಳು, ಭಗವಂತನನ್ನು ಆಶ್ರಯಿಸಿದವರೂ ಆಗಿದ್ದಾರೋ ಅವರು ಮೋಕ್ಷವನ್ನು ಬಯಸುವ ಅಭಿಪ್ರಾಯದಿಂದ ಭಗವನ್ನಿಷ್ಠವಾದ ಬುದ್ಧಿಯಲ್ಲಿಯೇ ದೇವತೆಗಳಿಗೆ ತರ್ಪಣವನ್ನು ನೀಡುತ್ತಾರೆ.

ವ್ಯಾಖ್ಯಾನ ವಿಶೇಷ– ಭಗವನ್ನಿಷ್ಠವಾದ ಬುದ್ಧಿಯುಳ್ಳವರು ದೇವತಾದಿ ಆರಾಧನೆಗಳನ್ನು ಅಂತರ್ಯಾಮಿಯ ಆರಾಧನೆ ಎಂದು, ಭಗವತ್ಪ್ರೀತಿಜನಕವಾಗಿಯೇ ಆಚರಿಸುತ್ತಾರೆ ಎಂದು ಭಾವ.

ಸರ್ವಭೂತಾತ್ಮಭೂತಸ್ಯ ಸರ್ವಭೂತಾನಿ ಪಶ್ಯತಃ ।
ದೇವಾಪಿ ಮಾರ್ಗೇ ಮುಹ್ಯಂತಿ ಅಪದಸ್ಯ ಪದೈಷಿಣಃ ॥೨೧॥

ಸಮಸ್ತ ಭೂತಾಂತರ್ಯಾಮಿಯಾದ ಭಗವಂತನನ್ನು, ಸಮಸ್ತ ಭೂತಗಳನ್ನು ತನ್ನೊಳಗೆ ಇರಿಸಿಕೊಂಡಿರುವ ಭಗವಂತನನ್ನು ಯಾರು ನೋಡುತ್ತಿರುತ್ತಾರೋ ಅಂತಹ ಮುಕ್ತಿಯನ್ನು ಬಯಸುವ ಸಾಧಕನ ಮಾರ್ಗಕ್ಕೆ ದೇವತೆಗಳೂ ಅಡ್ಡಿಪಡಿಸಲು ಅಸಮರ್ಥರಾಗುತ್ತಾರೆ.

ಚತುರ್ದ್ವಾರಂ ಪುರುಷಂ ಚತುರ್ಮುಖಂ
ಚತುರ್ಧಾ ಚೈನಮುಪಯಾತಿ ನಿಂದಾ ।
ಬಾಹುಭ್ಯಾಂ ವಾಚ ಉದರಾದುಪಸ್ಥಾ-
ತ್ತೇಷಾಂ ದ್ವಾರಂ ದ್ವಾರಪಾಲೋ ಬುಭೂಷೇತ್ ॥೨೨॥

ಮನುಷ್ಯನಿಗೆ ಕೈ-ಕಾಲುಗಳು, ಮಾತು, ಹೊಟ್ಟೆ, ಉಪಸ್ಥ ಎಂಬ ನಾಲ್ಕು ದ್ವಾರಗಳಿವೆ. ಇವುಗಳನ್ನು ಚೆನ್ನಾಗಿ ರಕ್ಷಿಸಬೇಕು. ಇವುಗಳ ನಿಯಂತ್ರಣವನ್ನು ಸಾಧಿಸಿಕೊಂಡಿರಬೇಕು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದವೆಂಬ ನಾಲ್ಕು ಮುಖಗಳನ್ನು ಹೊಂದಿರುವ ಪರಮಪುರುಷನನ್ನು ನಾಲ್ಕು ದ್ವಾರಗಳ ನಿಗ್ರಹದಿಂದ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ಅಷ್ಟಾಂಗ ಯೋಗಗಳಿಂದ ಹೊಂದಬೇಕು.

ನಾಕ್ಷೈರ್ದೇವ್ಯೇನಾದದೀತಾನ್ಯವಿತ್ತಂ
ನ ವಾऽಯೋನಿಜಸ್ಯ ಸುತಾಂ ಪ್ರಗೃಹ್ಣನ್ ।
ಕ್ರುದ್ಧೋ ನ ಚೈವ ಪ್ರಹರೇತ ಧೀಮಾಂ-
ಸ್ತಥಾಸ್ಯ ತತ್ ಪಾಣಿಪಾದಂ ಸುಗುಪ್ತಮ್ ॥೨೩॥

ಜಾಣನಾದ ವ್ಯಕ್ತಿಯು ಜೂಜಾಟವನ್ನು ಆಡಬಾರದು. ಪರರ ಸ್ವತ್ತನ್ನು ಅಪಹರಿಸಬಾರದು. ನೀಚರ ಅನ್ನವನ್ನು ಸ್ವೀಕರಿಸಬಾರದು. ಕೋಪದಿಂದ ಮತ್ತೊಬ್ಬರನ್ನು ಹಿಂಸಿಸಬಾರದು. ಹೀಗೆ ಇದ್ದಲ್ಲಿ ಅವನ ಕೈ-ಕಾಲುಗಳೆಂಬ ದ್ವಾರವು ಸುರಕ್ಷಿತವಾಗಿರುತ್ತವೆ. ಅಯೋನಿಜ ಮಗಳನ್ನು ಸ್ವೀಕರಿಸಬಾರದು. ಆ ಆಸೆಯ ನಿಮಿತ್ತದಿಂದ ಕೈ-ಕಾಲುಗಳಿಂದ ಹೊಡೆಯಬಾರದು ಎಂದು ಲಕ್ಷಾಲಂಕಾರ.

ನಾಕ್ರೋಶಮಚ್ಛೇನ್ನ ಮೃಷಾ ವದೇಚ್ಚ
ನ ಪೈಶುನಂ ಜನವಾದಂ ಚ ಕುರ್ಯಾತ್ ।
ಸತ್ಯವ್ರತೋ ಮಿತಭಾಷೋಪ್ರಮತ್ತ-
ಸ್ತಥಾಸ್ಯ ವಾಗ್ದ್ವಾರಮಥೋ ಸುಗುಪ್ತಮ್ ॥೨೪॥

ಯಾರ ಬಳಿಯೂ ಸಿಟ್ಟಿನಿಂದ ನಿಂದಿಸಬಾರದು. ವ್ಯರ್ಥವಾಗಿ ಮಾತನಾಡಬಾರದು. ಚಾಡಿ ಹೇಳಬಾರದು. ವ್ಯರ್ಥವಾದ ಆಪಾದನೆಯನ್ನು ಹೊರಿಸಬಾರದು. ಸತ್ಯನಿಷ್ಠನಾಗಿಯೂ, ಮಿತಭಾಷಿಯೂ, ಜಾಗರೂಕನಾಗಿಯೂ ಇದ್ದರೆ ಮಾತಿನ ದ್ವಾರವನ್ನು ರಕ್ಷಣೆ ಮಾಡಿದಂತಾಗುತ್ತದೆ.

ನಾನಾಶನಃ ಸ್ಯಾನ್ನ ಮಹಾಶನಃ ಸ್ಯಾ-
ದಲೋಲುಪಃ ಸಾಧುಭಿರಾಗತಃ ಸ್ಯಾತ್ ।
ಯಾತ್ರಾರ್ಥಮಾಹಾರಮಿಹಾದದೀತ
ತಥಾಸ್ಯ ಸ್ಯಾಜ್ಜಾಠರೀ ದ್ವಾರಗುಪ್ತಿಃ ॥೨೫॥

ಆಹಾರವನ್ನು ತಿನ್ನದೆಯೂ ಇರಬಾರದು. ಅತಿಯಾಗಿ ತಿನ್ನಲೂ ಬಾರದು. ಭಕ್ಷ್ಯ ಭೋಜ್ಯಗಳ ಲಾಲಸೆವುಳ್ಳವನಾಗಿರಬಾರದು. ಸಜ್ಜನರಿಗೆ ಆತಿಥ್ಯವನ್ನು ನೀಡಬೇಕು. ಜೀವನ ನಿರ್ವಹಣೆಗೆ ಬೇಕಾದಷ್ಟು ಆಹಾರವನ್ನು ಸ್ವೀಕರಿಸಬೇಕು. ಹೀಗೆ ಮಾಡಿದರೆ ಹೊಟ್ಟೆ ಎಂಬ ದ್ವಾರದ ರಕ್ಷಣೆಯಾಗುತ್ತದೆ.

ನ ವೀರಪತ್ನೀಂ ವಿಹರೇತ ನಾರೀಂ
ನ ಚಾಪಿ ನಾರೀಮನೃತಾವಾಹ್ವಯೀತ ।
ಭಾರ್ಯಾವ್ರತಂ ಹ್ಯಾತ್ಮನಿ ಧಾರಯೀತ
ತಥಾಸ್ಯೋಪಸ್ಥದ್ವಾರಗುಪ್ತಿರ್ಭವೇತ ॥೨೬॥

ವೀರನ ಪತ್ನಿಯಾದ ಹೆಂಗಸಿನ ಜೊತೆಗೆ ವಿಹರಿಸಬಾರದು. ತನ್ನ ಪತ್ನಿಯೇ ಆದರೂ ಋತುಸಮಯದಲ್ಲಿ ಅಲ್ಲದೆ ಬೇರೆ ಸಮಯದಲ್ಲಿ ಸಮಾಗಮ ಮಾಡಬಾರದು. ಭಾರ್ಯಾವ್ರತವನ್ನು ಅನುಷ್ಠಾನ ಮಾಡಿಕೊಂಡಿದ್ದಲ್ಲಿ ಉಪಸ್ಥದ ರಕ್ಷಣೆಯಾಗುತ್ತದೆ.

ದ್ವಾರಾಣಿ ಯಸ್ಯ ಸರ್ವಾಣಿ ಸುಗುಪ್ತಾನಿ ಮನೀಷಿಣಃ ।
ಉಪಸ್ಥಮುದರಂ ಬಾಹೂ ವಾಕ್ಚತುರ್ಥೀ ಸ ವೈ ದ್ವಿಜಃ ॥೨೭॥

ಬುದ್ಧಿವಂತನಾದ ಯಾವ ಮನುಷ್ಯನು ಉಪಸ್ಥ, ಉದರ, ಕೈ-ಕಾಲು, ಮಾತು ಈ ನಾಲ್ಕು ದ್ವಾರಗಳನ್ನು ಚೆನ್ನಾಗಿ ರಕ್ಷಿಸಿರುತ್ತಾನೋ ಅವನೇ ನಿಜವಾದ ಬ್ರಾಹ್ಮಣನು.

ಮೋಘಾನ್ಯಗುಪ್ತದ್ವಾರಸ್ಯ ಸರ್ವಾಣ್ಯೇವ ಭವಂತ್ಯುತ ।
ಕಿಂ ತಸ್ಯ ತಪಸಾ ಕಾರ್ಯಂ ಕಿಂ ಯಜ್ಞೇನ ಕಿಮಾತ್ಮನಾ ॥೨೮॥

ಈ ನಾಲ್ಕು ದ್ವಾರಗಳನ್ನು ರಕ್ಷಿಸಿಕೊಳ್ಳದೆ ಇರುವವನ ಸಮಸ್ತ ಶುಭಕರ್ಮಗಳು ವ್ಯರ್ಥವಾಗುತ್ತವೆ. ಫಲಪ್ರದವಾಗುವುದಿಲ್ಲ. ಕೈ-ಕಾಲು, ಹೊಟ್ಟೆ, ಉಪಸ್ಥ ಈ ನಾಲ್ಕರ ಹತೋಟಿಯನ್ನು ಇಟ್ಟುಕೊಳ್ಳದ ಮನುಷ್ಯನಿಗೆ ತಪಸ್ಸು, ಯಜ್ಞ, ಆತ್ಮಚಿಂತನ ಇವುಗಳಿಂದ ಯಾವ ಪ್ರಯೋಜನವೂ ಉಂಟಾಗದು. ಅವುಗಳನ್ನು ಆಚರಿಸಿದರೂ ಏನು ಪ್ರಯೋಜನ?

ಅನುತ್ತರೀಯವಸನಮನುಪಸ್ತೀರ್ಣಶಾಯಿನಮ್ ।
ಬಾಹೂಪಧಾನಂ ಶಾಮ್ಯಂತಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೯॥

ಹೊದೆಯಲು ಉತ್ತರೀಯವನ್ನು ಬಯಸದೆ ಕೇವಲ ನೆಲದ ಮೇಲೆ ತನ್ನ ತೋಳನ್ನೇ ದಿಂಬಾಗಿ ಮಾಡಿಕೊಂಡು, ಯಾವನು ಶಾಂತಚಿತ್ತನಾಗಿ ಜೀವನವನ್ನು ನಿರ್ವಹಿಸುತ್ತಿರುತ್ತಾನೋ ದೇವತೆಗಳು ಅವನನ್ನೇ ಬ್ರಾಹ್ಮಣನೆಂದು ಭಾವಿಸುತ್ತಾರೆ.

ದ್ವಂದ್ವಾರಾಮೇಷು ಸರ್ವೇಷು ಯ ಏಕೋ ರಮತೇ ಮುನಿಃ ।
ಪರೇಷಾಮನನುಧ್ಯಾಯಂಸ್ತಂ ದೇವಾ ಬ್ರಾಹ್ಮಣಂ ವಿದುಃ ॥೩೦॥

ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳು ಇದ್ದಾಗಲೂ ಯಾವಾತನು ಮುನಿಯಾಗಿ ಏಕಾಕಿಯಾಗಿ ವಿಹರಿಸುತ್ತಾನೋ, ಪತಿ-ಪತ್ನಿಯರಂತೆ ಸುಖಾನುಭವವನ್ನು ತನ್ನಲ್ಲೇ ಅನುಭವಿಸುತ್ತಾನೋ, ಇತರರ ಸುಖ-ದುಃಖಗಳಿಗೆ ಮನಸ್ಸನ್ನು ನೀಡನೋ ಇಂತಹ ಶಾಂತಾತ್ಮನನ್ನೇ ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ಯೇನ ಸರ್ವಮಿದಂ ಬುದ್ಧಂ ಪ್ರಕೃತಿರ್ವಿಕೃತಿಶ್ಚ ಯಾ ।
ಗತಿಜ್ಞಃ ಸರ್ವಭೂತಾನಾಂ ತಂ ದೇವಾ ಬ್ರಾಹ್ಮಣಂ ವಿದುಃ ॥೩೧॥

ಯಾವಾತನು ಪ್ರಕೃತಿಯನ್ನು, ಪ್ರಕೃತಿಯ ವಿಕಾರಗಳನ್ನು, ಸಮಸ್ತ ಭೂತಗಳ ಗತಿಯನ್ನು ತಿಳಿಯುತ್ತಾನೋ ಅವನನ್ನೇ ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ಅಭಯಂ ಸರ್ವಭೂತೇಭ್ಯಃ ಸರ್ವೇಷಾಮಭಯಂ ಯತಃ ।
ಸರ್ವಭೂತಾತ್ಮಭೂತೋ ಯಸ್ತಂ ದೇವಾ ಬ್ರಾಹ್ಮಣಂ ವಿದುಃ ॥೩೨॥

ಯಾವನಿಗೆ ಇತರ ಭೂತಗಳಿಂದ ಭಯವಿಲ್ಲವೋ, ಯಾವನಿಂದ ಇತರ ಭೂತಗಳಿಗೂ ಭಯವಿಲ್ಲವೋ ಸಮಸ್ತ ಭೂತಗಳಿಗೂ ಆತ್ಮಭೂತನಾದ ಅವನನ್ನೇ ದೇವತೆಗಳು ಬ್ರಾಹ್ಮಣನೆನ್ನುತ್ತಾರೆ.

ನಾಂತರೇಣಾನುಜಾನಂತಿ ವೇದಾನಾಂ ಯತ್ಕ್ರಿಯಾಫಲಮ್ ।
ಅನುಜ್ಞಾಯ ಚ ತತ್ ಸರ್ವಮನ್ಯದ್ರೋಚಯತೇಽಫಲಮ್ ॥೩೩॥

ಆದರೆ ಮೂರ್ಖರಾದವರು ಯಜ್ಞ-ದಾನಗಳಿಂದ ದೊರೆಯುವ ಸ್ವರ್ಗಾದಿ ಫಲಗಳನ್ನು ಬಿಟ್ಟು ಬೇರೆ ಯಾವುದನ್ನೂ ತಿಳಿದಿರುವುದಿಲ್ಲ. ಮೋಕ್ಷ, ಭಗವಂತನ ಸಾಕ್ಷಾತ್ಕಾರ, ಭಗವಂತನ ಪ್ರಾಪ್ತಿ ಇವುಗಳಲ್ಲಿ ತಿಳಿವಳಿಕೆ ಇಲ್ಲದೆ ಸ್ವರ್ಗಫಲದಲ್ಲಿಯೇ ಅಪೇಕ್ಷೆ ಉಳ್ಳವರಾಗಿರುತ್ತಾರೆ. ದಾನ-ಯಜ್ಞ-ಕ್ರಿಯಾಫಲಗಳಲ್ಲಿಯೇ ಆಸಕ್ತಿ ಉಳ್ಳವರಾಗಿರುತ್ತಾರೆ.

ಸ್ವಕರ್ಮಭಿಃ ಸಂಶ್ರಿತಾನಾಂ ತಪೋ ಘೋರತ್ವಮಾಗತಮ್ ।
ತಂ ಸದಾಚಾರಮಾಶ್ಚರ್ಯಂ ಪುರಾಣಂ ಶಾಶ್ವತಂ ಧ್ರುವಮ್ ॥೩೪॥

ಯಾರು ಶಾಶ್ವತವಾದ, ನಿಶ್ಚಿತವಾದ, ಪುರಾಣವೆನಿಸಿದ ಸದಾಚಾರವನ್ನು ಆಶ್ರಯಿಸಿಕೊಂಡು, ವಿಹಿತವಾದ ಕರ್ಮಗಳನ್ನು ಆಚರಿಸಿ, ಶ್ರೇಷ್ಠವಾದ ತಪಸ್ಸನ್ನು ಹೊಂದಿರುತ್ತಾರೋ ಅವರು ಸಂಸಾರವನ್ನು ಪರಿಹರಿಸಿಕೊಳ್ಳುತ್ತಾರೆ.

ಅಶಕ್ನುವದ್ಭಿಶ್ಚರಿತುಂ ಕಿಂಸ್ವಿದ್ಧರ್ಮೇಷು ಸೂಚಿತಮ್ ।
ಅನಾಪದ್ಧರ್ಮ ಆಚಾರೋ ಹ್ಯಪ್ರಮಾದೋ ಧ್ರುವಾಣಿ ಚ ॥೩೫॥

ಪ್ರವೃತ್ತಿ ಮಾರ್ಗದಲ್ಲಿ ರತರಾದ ಮನುಷ್ಯರು ಧರ್ಮವನ್ನು ಆಚರಿಸಲು ಅಸಮರ್ಥರಾಗಿರುತ್ತಾರೆ. ವೇದವಿಹಿತವಾದ ಸತ್ಕರ್ಮಗಳನ್ನು ಅನುಷ್ಠಾನ ಮಾಡಲು ಅಸಮರ್ಥರಾಗಿರುತ್ತಾರೆ. ಆಚಾರವು ಯಾವುದೇ ದೋಷರಹಿತವಾಗಿರುವಂತಹದು. ಪ್ರಮಾದರಹಿತವಾದುದು, ಪರಾಭವ ಹೊಂದದಿರುವುದು ಆಚಾರವೆನಿಸಿದೆ.

ಫಲವಂತಿ ಚ ಕರ್ಮಾಣಿ ವ್ಯುಷ್ಟಿಮಂತಿ ಧ್ರುವಾಣಿ ಚ ।
ವಿಗುಣಾನಿ ಚ ಪಶ್ಯಂತಿ ತಥಾನೈಕಾಂತಿಕಾನಿ ಚ ॥೩೫॥

ಯೋಗಶಾಸ್ತ್ರದಲ್ಲಿ ಹೇಳಿದ ಕರ್ಮಗಳು ಶ್ರೇಷ್ಠವಾದ, ಶಾಶ್ವತವಾದ ಫಲಗಳನ್ನು ನೀಡುತ್ತವೆ. ಸಾಧಕನನ್ನು ಉನ್ನತಿಗೆ ಕೊಂಡೊಯ್ಯುತ್ತವೆ. ಇದನ್ನರಿಯದ ಜನರು ಯೋಗಮಾರ್ಗವು ಗುಣರಹಿತವೆಂದೂ ನಿಯತಫಲಪ್ರದವಲ್ಲವೆಂದೂ ಭಾವಿಸುತ್ತಾರೆ.

ಗುಣಾಶ್ಚಾತ್ರ ಸುದುರ್ಜ್ಞೇಯಾ ಜ್ಞಾತಾಶ್ಚಾಪಿ ಸುದುಷ್ಕರಾಃ ।
ಅನುಷ್ಠಿತಾಶ್ಚಾಂತವಂತ ಇತಿ ತ್ವಮನುಪಶ್ಯಸಿ ॥೩೬॥

ಯಜ್ಞಗಳ ಗುಣಗಳು ತಿಳಿಯಲು ಸಾಧ್ಯವಾದವುಗಳು. ಒಂದು ವೇಳೆ ವಿಧಿ-ವಿಧಾನಗಳನ್ನು ತಿಳಿದರೋ, ಯಜ್ಞಾನುಷ್ಠಾನವು ದುಷ್ಕರವಾದುದು. ದುಷ್ಕರವಾದುದನ್ನು ಅನುಷ್ಠಾನ ಮಾಡಿದರೂ ಅವುಗಳು ಶಾಶ್ವತಫಲಪ್ರದವಾದುದವಲ್ಲ. ಇವುಗಳನ್ನು ನೀನೂ ತಿಳಿದಿರುತ್ತಿ.

ಸ್ಯೂಮರಶ್ಮಿಃ

ಯಥಾ ಚ ವೇದಪ್ರಾಮಾಣ್ಯಂ ತ್ಯಾಗಶ್ಚ ಸಫಲೋ ಯಥಾ ।
ತೌ ಪಂಥಾನಾವುಭೌ ವ್ಯಕ್ತೌ ಭಗವಂಸ್ತದ್ಬ್ರವೀಹಿ ಮೇ ॥೩೭॥

ಪೂಜ್ಯರೇ, ಕರ್ಮವನ್ನು ಮಾಡು, ಕರ್ಮವನ್ನು ಬಿಡು ಎಂಬ ವಿರುದ್ಧವಾದ ಮಾತುಗಳು ವೇದದಲ್ಲಿವೆ. ಇದರಿಂದ ವೇದವು ಹೇಗೆ ಪ್ರಮಾಣವಾಗುತ್ತದೆ? ನಿಷ್ಕಾಮ ಕರ್ಮ ಮಾಡಬೇಕು ಎಂಬ ಅಭಿಪ್ರಾಯವಿದ್ದರೆ ಫಲವನ್ನು ಹೊಂದುವುದು ಹೇಗೆ? ವೇದಪ್ರಾಮಾಣ್ಯವೂ ಸಿದ್ಧವಾಗಬೇಕು, ನಾವು ಮಾಡುವ ತ್ಯಾಗವೂ ಫಲಪ್ರದವಾಗಬೇಕು. ಇವೆರಡನ್ನೂ ಸಮನ್ವಯ ಮಾಡಿಕೊಳ್ಳುವ ಬಗೆ ಹೇಗೆ?

ಕಪಿಲಃ

ಪ್ರತ್ಯಕ್ಷಮಿಹ ಪಶ್ಯಂತಿ ಭವಂತಃ ಸತ್ಪಥೇ ಸ್ಥಿತಾಃ ।
ಪ್ರತ್ಯಕ್ಷಂ ತು ಕಿಮತ್ರಾಸ್ತಿ ಯದ್ಭವಂತ ಉಪಾಸತೇ ॥೩೮॥

ಸ್ಯೂಮರಶ್ಮಿಯೇ, ಸನ್ಮಾರ್ಗದಲ್ಲಿರುವ ನೀವು ಯೋಗಮಾರ್ಗದ ಫಲವನ್ನು ಪ್ರತ್ಯಕ್ಷವಾಗಿಯೇ ಕಾಣಬಹುದು. ಕರ್ಮಮಾರ್ಗದಲ್ಲಿ ಯಜ್ಞಾನುಷ್ಠಾನವನ್ನು ಮಾಡುವವರಿಗೆ ಪ್ರತ್ಯಕ್ಷ ಫಲವು ಕಾಣಿಸದು.

ಸ್ಯೂಮರಶ್ಮಿಃ

ಸ್ಯೂಮರಶ್ಮಿರಹಂ ಬ್ರಹ್ಮನ್ ಜಿಜ್ಞಾಸಾರ್ಥಮಿಹಾಗತಃ ।
ಶ್ರೇಯಸ್ಕಾಮಃ ಪ್ರತ್ಯವೋಚಮಾರ್ಜವಾನ್ನ ವಿವಕ್ಷಯಾ ।
ಇಮಂ ಚ ಸಂಶಯಂ ಘೋರಂ ಭಗವಾನ್ ಪ್ರಬ್ರವೀತು ಮೇ ॥೩೯॥

ಪ್ರತ್ಯಕ್ಷಮಿಹ ಪಶ್ಯಂತೋ ಭವಂತಃ ಸತ್ಪಥೇ ಸ್ಥಿತಾಃ ।
ಕಿಮತ್ರ ಪ್ರತ್ಯಕ್ಷತಮಂ ಭವಂತೋ ಯದುಪಾಸತೇ ।
ಅನ್ಯತ್ರ ತರ್ಕಶಾಸ್ತ್ರೇಭ್ಯ ಆಗಮಾಚ್ಚ ಯಥಾಗಮಮ್ ॥೪೦॥

ಸ್ಯೂಮರಶ್ಮಿ– ಬ್ರಾಹ್ಮಣೋತ್ತಮರೇ, ನಾನು ಸ್ಯೂಮರಶ್ಮಿ ಎಂಬ ಹೆಸರಿನ ಬ್ರಾಹ್ಮಣನು. ಜ್ಞಾನದ ವಿಷಯವಾಗಿ ತಿಳಿಯಬೇಕೆಂದೇ ಇಲ್ಲಿ ಆಗಮಿಸಿ ಹಸುವಿನಲ್ಲಿ ಸೇರಿರುತ್ತೇನೆ. ಶ್ರೇಯಸ್ಸನ್ನು ಬಯಸಿದ ನಾನು ಋಜುಬುದ್ಧಿಯಿಂದ ತಮ್ಮ ಬಳಿ ಮಾತನಾಡುತ್ತಿರುತ್ತೇನೆ. ಚರ್ಚಿಸಲು ನನಗೆ ಇಚ್ಛೆ ಇರುವುದಿಲ್ಲ. ನನ್ನ ಮನಸ್ಸಿನ ಭಯಾನಕ ಸಂಶಯಕ್ಕೆ ನೀವು ಸಮಾಧಾನವನ್ನು ಹೇಳಿ.

ಆಗಮೋ ವೇದವಾದಸ್ತು ತರ್ಕಶಾಸ್ತ್ರಾಣಿ ಚಾಗಮಃ ।
ಯಥಾಗಮಮುಪಾಸೀತ ಆಗಮಸ್ತತ್ರ ಸಿದ್ಧ್ಯತಿ ।
ಸಿದ್ಧಿಃ ಪ್ರತ್ಯಕ್ಷರೂಪಾ ಚ ದೃಶ್ಯತ್ಯಾಗಮನಿಶ್ಚಯಾತ್ ॥೪೧॥

ಬ್ರಹ್ಮಪ್ರಾಪ್ತಿಗೆ ಕಾರಣವಾದ ಯೋಗಮಾರ್ಗದಲ್ಲಿ ವರ್ತಿಸುವವರು ಅದರ ಫಲವನ್ನು ಪ್ರತ್ಯಕ್ಷವಾಗಿಯೇ ತಿಳಿದಿರುತ್ತಾರೆ ಎಂದು ನೀನು ಹೇಳಿರುತ್ತಿ. ನೀವು ಅನುಸರಿಸುವ ಯೋಗ ಯಾವುದು? ನಿಮಗೆ ಪ್ರತ್ಯಕ್ಷವಾಗಿ ಕಾಣುವ ಫಲ ಎಂತಹದ್ದು? ನಾನಾದರೂ ಕೇವಲ ತರ್ಕಶಾಸ್ತ್ರಗಳನ್ನಲ್ಲದೆ ಅವುಗಳ ಆಗಮಗಳನ್ನು, ಅವುಗಳ ಅರ್ಥವನ್ನು ಅಧ್ಯಯನ ಮಾಡಿದ್ದೇನೆ. ಆಗಮಾರ್ಥಗಳನ್ನು ತಿಳಿದುಕೊಂಡಿರುತ್ತೇನೆ.

ನೌರ್ನಾವೀವ ನಿಬದ್ಧಾ ಹಿ ಸ್ರೋತಸಾ ಸನಿಬಂಧನಾ ।
ಹ್ರಿಯಮಾಣಾ ಕಥಂ ವಿಪ್ರಾ ಕುಬುದ್ಧೀಂಸ್ತಾರಯಿಷ್ಯತಿ ।
ಏತದ್ಬ್ರವೀತು ಭಗವಾನುಪಪನ್ನೋಽಸ್ಮ್ಯಧೀಹಿ ಭೋಃ ॥೪೨॥

ಒಂದು ದೋಣಿಯು ಪ್ರವಾಹದಿಂದ ಹೊಡೆದುಕೊಂಡು ಹೋಗುವ ಇನ್ನೊಂದು ದೋಣಿಯ ಹಿಂದೆ ಕಟ್ಟಲ್ಪಟ್ಟಾಗ ಆ ದೋಣಿಯೂ ಪ್ರವಾಹದಲ್ಲಿ ಕೊಚ್ಚಿಹೋಗುವ ದೋಣಿಯ ಜೊತೆಗೆ ಸೆಳೆಯಲ್ಪಡುತ್ತದೆಯೇ ಹೊರತು ಉದ್ದಿಷ್ಟ ಸ್ಥಳವನ್ನು ಸೇರಲಾಗದು. ಅದರಂತೆ ಕುತ್ಸಿತ ಬುದ್ಧಿ ಎಂಬ ಪ್ರವಾಹದಿಂದ ಆಗಮ ನಿಶ್ಚಯ ನಾವೆಯು ಸೆಳೆಯಲ್ಪಡುವಾಗ ಕಾರ್ಯಸಿದ್ಧಿಯು ಹೇಗೆ ತಾನೆ ಸಾಧ್ಯವಾಗುತ್ತದೆ. ದುರ್ಬುದ್ಧಿಯುಳ್ಳವರನ್ನು ದಾಟಿಸಲು ದಡ ಸೇರಿಸಲು ಉಪಾಯವೇನು? ಸರ್ವಜ್ಞನಾದ ನೀನು ಇದರ ನಿಶ್ಚಯವನ್ನು ತಿಳಿಸಬೇಕು. ನನಗೆ ಉಪದೇಶಿಸಬೇಕು.

ನೈವ ತ್ಯಾಗೀ ನ ಸಂತುಷ್ಟೋ ನಾಶೋಕೋ ನ ನಿರಾಮಯಃ ।
ನ ನಿರ್ವಿವಿತ್ಸೋ ನಾವೃತ್ತೋ ನಾಪವೃತ್ತೋಽಸ್ತಿ ಕಶ್ಚನ ॥೪೩॥

ಜಗತ್ತಿನಲ್ಲಿ ಸಂಪೂರ್ಣ ತ್ಯಾಗಿಯೂ ಇಲ್ಲ, ಸಂಪೂರ್ಣ ಸಂತೋಷಿಯೂ ಇಲ್ಲ. ಶೋಕವಿಲ್ಲದವನೂ ಇಲ್ಲ, ರೋಗವಿಲ್ಲದವನೂ ಇಲ್ಲ. ತಿಳಿಯಬೇಕೆಂಬ ಶ್ರದ್ಧೆ ಇಲ್ಲದವನೂ ಇಲ್ಲ, ತನಗಾಗಿ ಕಾರ್ಯ ನಡೆಸುವ ಅಪೇಕ್ಷೆಗಳನ್ನು ಸಂಪೂರ್ಣ ಬಿಟ್ಟವನೂ ಇಲ್ಲ.

ಭವಂತೋಽಪಿ ಚ ಹೃಷ್ಯಂತಿ ಶೋಚಂತಿ ಚ ಯಥಾ ವಯಮ್ ।
ಇಂದ್ರಿಯಾರ್ಥಾಶ್ಚ ಭವತಾಂ ಸಮಾನಾಃ ಸರ್ವಜಂತುಷು ॥೪೪॥

ಏವಂ ಚತುರ್ಣಾಂ ವರ್ಣಾನಾಮಾಶ್ರಮಾಣಾಂ ಪ್ರವೃತ್ತಿಷು ।
ಏಕಮಾಲಂಬಮಾನಾನಾಂ ನಿರ್ಣಯೇ ಕಿಂ ನಿರಾಮಯಮ್ ॥೪೫॥

ನಿನ್ನಂತಹ ಮಹಾತ್ಮರು ನಮ್ಮಂತೆಯೇ ಹರ್ಷ-ಶೋಕಗಳನ್ನು ಹೊಂದುತ್ತಲೇ ಇದ್ದಾರೆ. ಸಮಸ್ತ ಜಂತುಗಳಿಗೂ ಇರುವಂತೆ ಇಂದ್ರಿಯ ವ್ಯಾಪಾರಗಳು, ಅದನ್ನು ಅನುಭವಿಸುವ ವಿಷಯಗಳು ಇವೆ. ಆದ್ದರಿಂದ ನಾಲ್ಕು ವರ್ಣಗಳಲ್ಲಿಯಾಗಲಿ, ನಾಲ್ಕು ಆಶ್ರಮಗಳಲ್ಲಿ ಆಗಲಿ, ಉತ್ತಮ ಪದವನ್ನು ಹೊಂದತಕ್ಕವರಿಗೆ ಕೊನೆಯಲ್ಲಿ ಎಂದೂ ನಾಶವಿಲ್ಲದ ಸುಖರೂಪವಾದ ಸ್ಥಾನವು ಯಾವುದು? ಅದನ್ನು ತಿಳಿಸಿರಿ.

ಕಪಿಲಃ

ಯದ್ಯದಾಚರತೇ ಶಾಸ್ತ್ರಮಥ ಸರ್ವಪ್ರವೃತ್ತಿಷು ।
ಯಸ್ಯ ಯತ್ರ ಹ್ಯನುಷ್ಠಾನಂ ತತ್ರ ತತ್ರ ನಿರಾಮಯಮ್ ॥೪೬॥

ಅನೇಕ ವಿಧವಾದ ಕಾರ್ಯಗಳಲ್ಲಿ ಶಾಸ್ತ್ರವು ಯಾವುದನ್ನು ವಿಧಾನ ಮಾಡುತ್ತದೆಯೋ, ಯೋಗವೆಂದು ಹೇಳುತ್ತದೆಯೋ ಅಂತಹ ಕಾರ್ಯವನ್ನು ಅನುಷ್ಠಾನ ಮಾಡಿದಾಗ ಅದು ನಿರುಪದ್ರವವೂ, ಅಕ್ಷಯ ಸುಖದಾಯಕವೂ ಆಗುತ್ತದೆ.

ಸರ್ವಂ ಪಾವಯತೇ ಜ್ಞಾನಂ ಯೋ ಜ್ಞಾನಂ ಹ್ಯನುವರ್ತತೇ ।
ಜ್ಞಾನಾದಪೇತ್ಯ ಯಾ ವೃತ್ತಿಃ ಸಾ ವಿನಾಶಯತಿ ಪ್ರಜಾಃ ॥೪೭॥

ಜ್ಞಾನವು ಎಲ್ಲವನ್ನೂ ಪವಿತ್ರೀಕರಿಸುತ್ತದೆ. ಯಾವಾತನು ಜ್ಞಾನವನ್ನೇ ಅನುಸರಿಸುತ್ತಾನೋ ಆ ಜ್ಞಾನದಿಂದಲೇ ಅವನು ಎಲ್ಲವನ್ನೂ ಹೊಂದುತ್ತಾನೆ. ಜ್ಞಾನವನ್ನು ಬಿಟ್ಟು ಜಡವಾದ ಕರ್ಮವನ್ನು ಆಶ್ರಯಿಸಿದವನು ಜನನ-ಮರಣಗಳೆಂಬ ಪ್ರವಾಹದಲ್ಲಿ ಸಿಲುಕಿ ನಾಶವನ್ನು ಹೊಂದುತ್ತಾನೆ.

ಭವಂತೋ ಜ್ಞಾನಿನೋ ನಿತ್ಯಂ ಸರ್ವತಶ್ಚ ನಿರಾಗಮಾಃ ।
ಐಕಾತ್ಮ್ಯಂ ನಾಮ ಯದಿದಂ ಕೇಚಿದ್ ಬ್ರೂಯುರನೈಪುಣಾಃ ॥೪೮॥

ನೀವೆಲ್ಲರೂ ಜ್ಞಾನಿಗಳೇ ಆಗಿರುತ್ತೀರಿ. ಇದು ಸ್ಪಷ್ಟವು. ಎಲ್ಲ ವಿಧವಾದ ಉಪದ್ರವಗಳಿಂದಲೂ ದೂರವಿರುವಿರಿ. ಆದರೆ ನಿಮಗೆ ಎಂದಿಗಾದರೂ ಜೀವ-ಬ್ರಹ್ಮರ ಐಕ್ಯವೆಂಬ ಭಾವವು ಉಂಟಾಗಿರುವುದೆ? ಇಂತಹ ಭಾವನೆ ಉಂಟಾಗಲು ಸಾಧ್ಯವಿರುವುದೇ? ಯೋಚಿಸಿರಿ. ಇದು ದಡ್ಡರ ಮಾತು.

ಯತಃ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋऽರ್ಥತಃ ।
ಕಥಮಸ್ಮಿ ಸ ಇತ್ಯೇವ ಸಂಬಂಧಃ ಸ್ಯಾದಸಂಹಿತಃ ॥೪೯॥

ಸ್ವರೂಪತಃ ಜೀವ-ಪರಮಾತ್ಮರು ಭಿನ್ನರಾಗಿದ್ದಾರೆ. ಮಹಾಪರಿಮಾಣವುಳ್ಳ ಪರಮಾತ್ಮನು ಅನುಪರಿಮಾಣವುಳ್ಳ ಜೀವನಿಗಿಂತ ಭಿನ್ನನಾಗಿದ್ದಾನೆ. ಪರಮಾತ್ಮ ಎಂಬ ಜಾತಿಯು ಆತ್ಮತ್ವ ಜಾತಿಯು ಭಿನ್ನವಾದವುಗಳು. ದ್ವಾಸುಪರ್ಣಾ ಎಂಬ ಶ್ರುತಿಯಲ್ಲಿ ಜೀವ-ಪರಮಾತ್ಮರಿಗೆ ಭೇದವನ್ನೇ ಹೇಳಿರುತ್ತಾರೆ. ಪರಮಾತ್ಮನಾದರೂ ಸಮಸ್ತ ಪುರುಷಾರ್ಥಗಳಿಂದ ಪೂರ್ಣನಾಗಿರುತ್ತಾನೆ. ಜೀವನಾದರೂ ಪುರುಷಾರ್ಥಗಳನ್ನು ಬಯಸುವವನಾಗಿದ್ದಾನೆ. ಆದ್ದರಿಂದ ಪರಮಾತ್ಮನೇ ನಾನು ಎಂಬ ಭಾವನೆಯು ಎಷ್ಟು ಪ್ರಾಮಾಣಿಕವು? ಯುಕ್ತಿ ಸಂಬಂಧ ವಿರುದ್ಧವಾದುದರಿಂದ ಜೀವ-ಪರಮಾತ್ಮರಿಗೆ ಹೇಗೆ ಐಕ್ಯವನ್ನು ಹೇಳಲು ಸಾಧ್ಯ ? ಆದ್ದರಿಂದ ಈ ಜೀವ-ಪರಮಾತ್ಮರಿಗೆ ಐಕಾತ್ಮ್ಯವಾದವು ಅಪ್ರಾಮಾಣಿಕವಾದುದೆಂಬುದೇ ನನ್ನ ಅಭಿಪ್ರಾಯ.

ಶಾಸ್ತ್ರಂ ಹ್ಯಬುದ್ಧ್ವಾ ತತ್ತ್ವೇನ ಕೇಚಿದ್ವಾದಬಲಾ ಜನಾಃ ।
ಕಾಮದ್ವೇಷಾಭಿಭೂತತ್ವಾದಹಂಕಾರವಶಂ ಗತಾಃ ॥೫೦॥

ಕೆಲವು ಜನರು ಶಾಸ್ತ್ರವನ್ನು ಯಥಾರ್ಥವಾಗಿ ತಿಳಿಯದೆ, ವಿತಂಡವಾದದ ಬಲದಿಂದ, ರಾಗ-ದ್ವೇಷದಿಂದ ಕೂಡಿದವರಾಗಿ ಅಹಂಕಾರಕ್ಕೆ ಅಧೀನರಾಗಿರುತ್ತಾರೆ.

ಯಾಥಾತಥ್ಯಮವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ ।
ಬ್ರಹ್ಮಸ್ತೇನಾ ನಿರಾರಂಭಾ ಅಪಕ್ವಮತಯೋऽಶಿವಾಃ ॥೫೧॥

ಶಾಸ್ತ್ರಗಳ ಯಥಾರ್ಥವನ್ನು ಅರಿಯದೆ, ಶಾಸ್ತ್ರಗಳ ವಾಕ್ಯವನ್ನು ಸ್ವಲ್ಪ ಸ್ವಲ್ಪ ಕದ್ದು ತಮ್ಮ ಮತವೇ ಹೆಚ್ಚೆಂದು ಪ್ರತಿಪಾದಿಸುವ ಪರಬ್ರಹ್ಮನ ಗುಣಗಳನ್ನೇ ಕದಿಯುವ ಕಳ್ಳರು ಕ್ಷಮ-ದಮಾದಿ ಸಾಧನಗಳನ್ನು ಅನುಷ್ಠಾನ ಮಾಡದೆ ಡಂಭ, ಮೋಹಗಳಿಗೆ ವಶರಾಗುತ್ತಾರೆ.

ವೈಗುಣ್ಯಮೇವ ಪಶ್ಯಂತಿ ನ ಗುಣಾನನುಯುಂಜತೇ ।
ತೇಷಾಂ ತಮಃಶರೀರಾಣಾಂ ತಮ ಏವ ಪರಾಯಣಮ್ ॥೫೨॥

ಅವರು ಶಮ-ದಮಾದಿ ಗುಣಗಳನ್ನೇ ನಿಷ್ಫಲವೆನ್ನುತ್ತಾರೆ. ಜ್ಞಾನೈಶ್ವರ್ಯಾದಿ ಗುಣಗಳನ್ನು ಚಿಂತಿಸುವುದಿಲ್ಲ. ತಮೋಗುಣವೇ ತುಂಬಿರುವ ಅಂತಹ ಮನುಷ್ಯರಿಗೆ ಅಂಧಂತಮಸ್ಸೇ ನಿತ್ಯವೂ ಆಶ್ರಯತಾಣವಾಗಿದೆ.

ಯೋ ಯಥಾಪ್ರಕೃತಿರ್ಜಂತುಃ ಪ್ರಕೃತೇಃ ಸ್ಯಾದ್ವಶಾನುಗಃ ।
ತಸ್ಯ ದ್ವೇಷಶ್ಚ ಕಾಮಶ್ಚ ಕ್ರೋಧೋ ದಂಭೋನೃತಂ ಮದಃ ।
ನಿತ್ಯಮೇವಾಭಿವರ್ತಂತೇ ಗುಣಾಃ ಪ್ರಕೃತಿಸಂಭವಾಃ ॥೫೩॥

ಯಾವ ಮನುಷ್ಯನಲ್ಲಿ ಯಾವ ವಿಧವಾದ ಸ್ವಭಾವವಿದೆಯೋ ಅವನು ಅದಕ್ಕನುಗುಣವಾಗಿ ವರ್ತಿಸುತ್ತಾನೆ. ತಾಮಸಶರೀರಿಗೆ, ತಮೋಗುಣಕ್ಕೆ ಅಧೀನನಾಗಿರುವವನಿಗೆ ಅದರಿಂದ ಜನ್ಯವಾದ ದ್ವೇಷ, ಕಾಮ, ಕ್ರೋಧ, ಡಂಭ, ಸುಳ್ಳು, ಮದ ಮುಂತಾದ ದುರ್ಗುಣಗಳು ಸ್ವರೂಪದಲ್ಲಿಯೇ ಇರುತ್ತವೆ.

ಏತದ್ ಬುದ್ಧ್ಯಾನುಪಶ್ಯಂತಃ ಸಂತ್ಯಜೇಯುಃ ಶುಭಾಶುಭಮ್ ।
ಪರಾಂ ಗತಿಮಭೀಪ್ಸಂತೋ ಯತಯಃ ಸಂಯಮೇ ರತಾಃ ॥೫೪॥

ಇದನ್ನು ಅರ್ಥೈಸಿಕೊಂಡಿರುವ ಜ್ಞಾನಿಗಳು ಕರ್ಮಗಳಲ್ಲಿರುವ ಶುಭಾಶುಭಗಳನ್ನು ಪ್ರತ್ಯಕ್ಷವಾಗಿ ಕಾಣುತ್ತಾ, ಪ್ರತಿಬಂಧಕವೆನಿಸಿದ ಪುಣ್ಯ-ಪಾಪ ಕರ್ಮಗಳನ್ನು ಪರಿತ್ಯಜಿಸುತ್ತಾ ಭಗವನ್ನಿಷ್ಠರಾಗಿ ಇರುತ್ತಾರೆ.

ಸ್ಯೂಮರಶ್ಮಿಃ

ಸರ್ವಮೇತನ್ಮಯಾ ಬ್ರಹ್ಮನ್ ಶಾಸ್ತ್ರತಃ ಪರಿಕೀರ್ತಿತಮ್ ।
ನ ಹ್ಯವಿಜ್ಞಾಯ ಶಾಸ್ತ್ರಾರ್ಥಂ ಪ್ರವರ್ತಂತೇ ಪ್ರವತ್ತಯಃ ॥೫೫॥

ಬ್ರಾಹ್ಮಣೋತ್ತಮನೇ, ಯಜ್ಞಾನುಷ್ಠಾನದ ವಿಷಯವಾಗಿ ಎಲ್ಲವನ್ನೂ ಶಾಸ್ತ್ರದಲ್ಲಿ ತಿಳಿಸಿದಂತೆ ಹೇಳಿದ್ದೇನೆ. ಶಾಸ್ತ್ರದ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳದೆ ಯಾವುದೇ ಕಾರ್ಯವು ಪ್ರವೃತ್ತಿಯನ್ನು ಹೊಂದವು.

ಯಃ ಕಶ್ಚಿನ್ನ್ಯಾಯ್ಯ ಆಚಾರಃ ಸರ್ವಂ ಶಾಸ್ತ್ರಮಿತಿ ಶ್ರುತಿಃ ।
ಯದನ್ಯಾಯ್ಯಮಶಾಸ್ತ್ರಂ ತದಿತ್ಯೇಷಾ ಶ್ರೂಯತೇ ಶ್ರುತಿಃ ॥೫೬॥

ಪ್ರಾಮಾಣಿಕವಾದ ಸದಾಚಾರವು ಯಾವುದಿದೆಯೋ ಆ ಆಚಾರವನ್ನೇ ಶಾಸ್ತ್ರವು ಎಂದು ವೇದವೇ ಒಪ್ಪಿದೆ. ಯುಕ್ತಿಬದ್ಧವಲ್ಲದ ಆಚಾರವು ಯಾವುದಿದೆಯೋ ಅದು ಅಶಾಸ್ತ್ರೀಯವೆಂದು ಶ್ರುತಿಯೇ ಸಾರಿದೆ.

ನ ಪ್ರವೃತ್ತಿರ್ಯತೇ ಶಾಸ್ತ್ರಾತ್ ಕಾಚಿದಸ್ತೀತಿ ನಿಶ್ಚಯಃ ।
ಯದನ್ಯದ್ ವೇದವಾದೇಭ್ಯಸ್ತದಶಾಸ್ತ್ರಮಿತಿ ಶ್ರುತಿಃ ॥೫೭॥

ಶಾಸ್ತ್ರವನ್ನು ಬಿಟ್ಟು ಯಾವುದೇ ವಿಧವಾದ ಪ್ರವೃತ್ತಿಯು ಕೂಡುವುದಿಲ್ಲ ಎಂಬುದು ನಿಶ್ಚಯ. ವೇದವಚನಕ್ಕೆ ವಿರುದ್ಧವಾಗಿ ಯಾವುದಿದೆಯೋ ಅದು ಅಶಾಸ್ತ್ರ ಎಂದು ಶ್ರುತಿಯೇ ನಿರೂಪಿಸಿದೆ.

ಶಾಸ್ತ್ರಾದಪೇತಂ ಪಶ್ಯಂತಿ ಬಹವೋ ವ್ಯಕ್ತಮಾನಿನಃ ।
ಶಾಸ್ತ್ರದೋಷಾನ್ನ ಪಶ್ಯಂತಿ ಇಹ ಚಾಮುತ್ರ ಚಾಪರೇ ।
ಅವಿಜ್ಞಾನಹತಪ್ರಜ್ಞಾ ಹೀನಪ್ರಜ್ಞಾಸ್ತಮೋವೃತಾಃ ॥೫೮॥

ಪ್ರತ್ಯಕ್ಷ ಫಲವನ್ನೇ ಬಯಸುವ ಅನೇಕರು ಕಣ್ಣಿಗೆ ಕಾಣದೆ ಇರುವ ಫಲವನ್ನು, ಯಜ್ಞಾದಿಗಳನ್ನು ಒಪ್ಪುವುದಿಲ್ಲ. ಶಾಸ್ತ್ರದಲ್ಲಿ ಹೇಳಿರುವ ದೋಷಗಳನ್ನು ಅವರು ಗಮನಿಸುವುದಿಲ್ಲ. ಆದ್ದರಿಂದ ಅವರೆಲ್ಲರೂ ನಮ್ಮಂತೆ ದುಃಖಕ್ಕೆ ಒಳಗಾಗುತ್ತಾರೆ. ಎಲ್ಲ ಜಂತುಗಳಿಗಿರುವ ಇಂದ್ರಿಯಗಳು, ಇಂದ್ರಿಯಾರ್ಥಗಳು ನಿಮಗೂ ಇರುತ್ತವೆ. ಆದರೆ ನಿಮಗಿರುವ ಬ್ರಹ್ಮಜ್ಞಾನದಿಂದಲೂ ಎಲ್ಲರಲ್ಲಿರುವ ಅಜ್ಞಾನವನ್ನು ತಾರತಮ್ಯದಿಂದ ಹೇಳಬಹುದು. ಶಾಸ್ತ್ರದಲ್ಲಿ ದೋಷವನ್ನು ನೋಡುವವರು ವಿಜ್ಞಾನವಿಲ್ಲದೆ ಇರುವ ಮೂರ್ಖರು, ಹೀನಪ್ರಜ್ಞರು, ಅಜ್ಞಾನದಿಂದಲೇ ಆವೃತರೂ ಆಗಿರುತ್ತಾರೆ.

ಶಕ್ಯಂ ತ್ವೇಕೇನ ಮುಕ್ತೇನ ಕೃತಕೃತ್ಯೇನ ಸರ್ವಶಃ ।
ಪಿಂಡಮಾತ್ರಂ ವ್ಯಪಾಶ್ರಿತ್ಯ ಚರಿತುಂ ಸರ್ವತೋದಿಶಮ್ ।
ವೇದವಾದಂ ವ್ಯಪಾಶ್ರಿತ್ಯ ಮೋಕ್ಷೋಸ್ತೀತಿ ಪ್ರಭಾಷಿತುಮ್ ॥೫೯॥

ಏಕಾಕಿಯಾಗಿರುವ, ಯೊಗಯುಕ್ತನಾದ, ಕೃತಕೃತ್ಯನಾದ, ಜಿತೇಂದ್ರಿಯನಾದ, ಪ್ರಾಣದಾನಕ್ಕೆ ಬೇಕಾಗಿರುವಷ್ಟು ಮಾತ್ರ ಆಹಾರವನ್ನು ಅವಲಂಬಿಸಿಕೊಂಡು ಬಾಹ್ಯ ಕರ್ಮಗಳನ್ನು ಪ್ರತಿಪಾದಿಸುವ, ಶಾಸ್ತ್ರಗಳನ್ನು ತ್ಯಜಿಸಿ ಸಮಸ್ತ ಲೋಕಗಳನ್ನೂ ಬಯಸುತ್ತಿರುವ ನಿನಗೆ ಮೋಕ್ಷವೆಂಬುದು ಇದೆ ಎಂದು ಹೇಳಲು ಸಾಧ್ಯವಿದೆ.

ಇದಂ ತು ದುಷ್ಕರಂ ಕರ್ಮ ಕುಟುಂಬಮಭಿಸಂಶ್ರಿತಮ್ ।
ದಾನಮಧ್ಯಯನಂ ಯಜ್ಞಃ ಪ್ರಜಾಸಂತಾನಮಾರ್ಜವಮ್ ॥೬೦॥

ಗೃಹಸ್ಥಾಶ್ರಮಕ್ಕೆ ಅನುಸಾರವಾಗಿ ಕುಟುಂಬದ ಭರಣ-ಪೋಷಣಾದಿ ಕಾರ್ಯಗಳು, ದಾನ, ಅಧ್ಯಯನ, ಸ್ವಾಧ್ಯಾಯ, ಯಜ್ಞ, ಸಂತಾನೋತ್ಪತ್ತಿ, ಸರಳತೆ ಇವೆಲ್ಲವೂ ಮನುಷ್ಯನಿಗೆ ಆಚರಿಸಲು ಅತ್ಯಂತ ದುಷ್ಕರವಾದವುಗಳು.

ಯದ್ಯೇತದೇವಂ ಕೃತ್ವಾಪಿ ನ ವಿಮೋಕ್ಷೋಽಸ್ತಿ ಕಸ್ಯಚಿತ್ ।
ಧಿಕ್ಕರ್ತಾರಂ ಚ ಕಾರ್ಯಂ ಚ ಶ್ರಮಶ್ಚಾಯಂ ನಿರರ್ಥಕಃ ॥೬೧॥

ಕಷ್ಟಪಟ್ಟು ವೇದವಿಹಿತವಾದ ಕರ್ಮಗಳನ್ನು ಮಾಡಿದರೂ ಒಬ್ಬನಿಗೆ ಮೋಕ್ಷವೇ ಇಲ್ಲವೆನ್ನುವುದಾದರೆ ಅಂತಹ ಕರ್ಮವನ್ನೇ ಮಾಡಬಾರದು. ಕಾಮ್ಯಕರ್ಮವನ್ನು ಮಾಡಿದಾಗ ಮೋಕ್ಷ ಉಂಟಾಗುವುದಿಲ್ಲ. ಕುಟುಂಬಭರಣಕ್ಕೋಸ್ಕರ ವೇದ ಪ್ರವಚನವನ್ನು ಮಾಡುವವರಿಗೆ ಮೋಕ್ಷ ಇರುವುದಿಲ್ಲ. ಆದ್ದರಿಂದ ವೇದವಿಹಿತವಾದ ಕರ್ಮಗಳು ಸ್ವಾರ್ಥಕ್ಕೆ ಉಪಯೋಗವಾದಲ್ಲಿ ಅದರ ಉಚ್ಚಿಷ್ಟವಾದ ಫಲವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ನಾಸ್ತಿಕ್ಯಮನಯಾ ಚ ಸ್ಯಾದ್ ವೇದಾನಾಂ ಪೃಷ್ಠತಃಕ್ರಿಯಾ ।
ಏತಸ್ಯಾನಂತ್ಯಮಿಚ್ಛಾಮಿ ಭಗವನ್ ಶ್ರೋತುಮಂಜಸಾ ॥೬೨॥

ಕ್ರಿಯೆಗಳನ್ನೇ ವಿಸ್ತಾರ ಮಾಡುವ ಈ ವೇದಗಳಿಂದ ವೇದಗಳಲ್ಲಿಯೇ ಅಪನಂಬಿಕೆಯು ಜನರಿಗೆ ಉಂಟಾಗುತ್ತದೆ. ಆದ್ದರಿಂದ ಪೂಜ್ಯನೇ, ಈ ವೇದಗಳ ಮೂಲಕ ಹೊಂದಬಹುದಾದ ಅನಂತವಾದ ಫಲವೇನೆಂಬುದನ್ನು ತಿಳಿಯಲು ನಾನು ಬಯಸುತ್ತೇನೆ.

ತಥ್ಯಂ ವದಸ್ವ ಮೇ ಬ್ರಹ್ಮನ್ನುಪಸನ್ನೋಽಸ್ಮ್ಯಧೀಹಿ ಭೋಃ ।
ಯಥಾ ತೇ ವಿದಿತೋ ಮೋಕ್ಷಸ್ತಥೇಚ್ಛಾಮ್ಯುಪಶಿಕ್ಷಿತುಮ್ ॥೬೩॥

ಬ್ರಾಹ್ಮಣೋತ್ತಮನೇ, ನನಗೆ ಯಥಾರ್ಥವನ್ನೇ ಬೋಧಿಸು. ನಾನು ನಿನಗೆ ಶಿಷ್ಯನಾಗಿದ್ದೇನೆ. ಮೋಕ್ಷವೆಂಬುದು ನಿನಗೆ ಹೇಗೆ ತಿಳಿದಿರುತ್ತದೋ ಅದರಂತೆ ನಾನು ಮೋಕ್ಷದ ವಿಷಯವನ್ನು ನಿನ್ನಿಂದ ತಿಳಿಯಲು ಬಯಸಿದ್ದೇನೆ. ನನಗೆ ಉಪದೇಶಿಸು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಗೋಕಪಿಲಸಂವಾದೋ ನಾಮ ಚತುರಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ಸ್ಯೂಮರಶ್ಮಿ-ಕಪಿಲರ ಸಂವಾದ.

ಕಪಿಲಃ

ವೇದಾಃ ಪ್ರಮಾಣಂ ಲೋಕಾನಾಂ ನ ವೇದಾಃ ಪೃಷ್ಠತಃ ಕೃತಾಃ ।
ದ್ವೇ ಬ್ರಹ್ಮಣೇ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥೧॥

ಸಮಸ್ತಲೋಕಗಳಿಗೂ ವೇದಗಳೇ ಪ್ರಮಾಣವಾದವುಗಳು. ವೇದಗಳನ್ನು ಯಾರೂ ತಿರಸ್ಕರಿಸಿಲ್ಲ. ಆದರೆ ಬ್ರಹ್ಮ ಎಂದು ಕರೆಸಿಕೊಳ್ಳುವ ಎರಡನ್ನೂ ತಿಳಿದುಕೊಳ್ಳಬೇಕು. ಒಂದು ಶಬ್ದಬ್ರಹ್ಮವೆನಿಸಿದ ವೇದಗಳು, ಮತ್ತೊಂದು ಪರಬ್ರಹ್ಮನೆನಿಸಿದ ಭಗವಂತ. ಯಾರು ಶಬ್ದಬ್ರಹ್ಮನಲ್ಲಿ ನಿಷ್ಣಾತರಾಗಿದ್ದಾರೋ ಅವರು ಪರಬ್ರಹ್ಮನನ್ನು ಹೊಂದುತ್ತಾರೆ.

ಶರೀರಮೇತತ್ ಕುರುತೇ ಯದ್ ವೇದೇ ಕುರುತೇ ತನುಮ್ ।
ಕೃತಶುದ್ಧಶರೀರೋ ಹಿ ಪಾತ್ರಂ ಭವತಿ ಬ್ರಾಹ್ಮಣಃ ॥೨॥

ವೇದೋಕ್ತವಾದ ವಿಧಿಗಳಿಂದ ತಂದೆಯು ಶರೀರದ ಜನ್ಮಕ್ಕೆ ಕಾರಣನಾಗುತ್ತಾನೆ. ಗರ್ಭಾಧಾನ ಮೊದಲಾದ ಸಂಸ್ಕಾರಗಳು ವೇದೋಕ್ತ ವಿಧಿಯಿಂದಲೇ ನಡೆಯಲ್ಪಡುತ್ತವೆ. ಈ ಸಂಸ್ಕಾರದಿಂದ ಪರಿಶುದ್ಧವಾದ ಶರೀರವು ಬ್ರಹ್ಮಜ್ಞಾನಕ್ಕೆ ಯೋಗ್ಯವಾಗುತ್ತದೆ.

ಏಕಾಕಿಯಾಗಿರುವ, ಯೊಗಯುಕ್ತನಾದ, ಕೃತಕೃತ್ಯನಾದ, ಜಿತೇಂದ್ರಿಯನಾದ, ಪ್ರಾಣದಾನಕ್ಕೆ ಬೇಕಾಗಿರುವಷ್ಟು ಮಾತ್ರ ಆಹಾರವನ್ನು ಅವಲಂಬಿಸಿಕೊಂಡು ಬಾಹ್ಯ ಕರ್ಮಗಳನ್ನು ಪ್ರತಿಪಾದಿಸುವ, ಶಾಸ್ತ್ರಗಳನ್ನು ತ್ಯಜಿಸಿ ಸಮಸ್ತ ಲೋಕಗಳನ್ನೂ ಬಯಸುತ್ತಿರುವ ನಿನಗೆ ಮೋಕ್ಷವೆಂಬುದು ಇದೆ ಎಂದು ಹೇಳಲು ಸಾಧ್ಯವಿದೆ.

ಇದಂ ತು ದುಷ್ಕರಂ ಕರ್ಮ ಕುಟುಂಬಮಭಿಸಂಶ್ರಿತಮ್ ।
ದಾನಮಧ್ಯಯನಂ ಯಜ್ಞಃ ಪ್ರಜಾಸಂತಾನಮಾರ್ಜವಮ್ ॥೬೦॥

ಗೃಹಸ್ಥಾಶ್ರಮಕ್ಕೆ ಅನುಸಾರವಾಗಿ ಕುಟುಂಬದ ಭರಣ-ಪೋಷಣಾದಿ ಕಾರ್ಯಗಳು, ದಾನ, ಅಧ್ಯಯನ, ಸ್ವಾಧ್ಯಾಯ, ಯಜ್ಞ, ಸಂತಾನೋತ್ಪತ್ತಿ, ಸರಳತೆ ಇವೆಲ್ಲವೂ ಮನುಷ್ಯನಿಗೆ ಆಚರಿಸಲು ಅತ್ಯಂತ ದುಷ್ಕರವಾದವುಗಳು.

ಯದ್ಯೇತದೇವಂ ಕೃತ್ವಾಪಿ ನ ವಿಮೋಕ್ಷೋಽಸ್ತಿ ಕಸ್ಯಚಿತ್ ।
ಧಿಕ್ಕರ್ತಾರಂ ಚ ಕಾರ್ಯಂ ಚ ಶ್ರಮಶ್ಚಾಯಂ ನಿರರ್ಥಕಃ ॥೬೧॥

ಕಷ್ಟಪಟ್ಟು ವೇದವಿಹಿತವಾದ ಕರ್ಮಗಳನ್ನು ಮಾಡಿದರೂ ಒಬ್ಬನಿಗೆ ಮೋಕ್ಷವೇ ಇಲ್ಲವೆನ್ನುವುದಾದರೆ ಅಂತಹ ಕರ್ಮವನ್ನೇ ಮಾಡಬಾರದು. ಕಾಮ್ಯಕರ್ಮವನ್ನು ಮಾಡಿದಾಗ ಮೋಕ್ಷ ಉಂಟಾಗುವುದಿಲ್ಲ. ಕುಟುಂಬಭರಣಕ್ಕೋಸ್ಕರ ವೇದ ಪ್ರವಚನವನ್ನು ಮಾಡುವವರಿಗೆ ಮೋಕ್ಷ ಇರುವುದಿಲ್ಲ. ಆದ್ದರಿಂದ ವೇದವಿಹಿತವಾದ ಕರ್ಮಗಳು ಸ್ವಾರ್ಥಕ್ಕೆ ಉಪಯೋಗವಾದಲ್ಲಿ ಅದರ ಉಚ್ಛಿಷ್ಟವಾದ ಫಲವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ನಾಸ್ತಿಕ್ಯಮನಯಾ ಚ ಸ್ಯಾದ್ ವೇದಾನಾಂ ಪೃಷ್ಠತಃಕ್ರಿಯಾ ।
ಏತಸ್ಯಾನಂತ್ಯಮಿಚ್ಛಾಮಿ ಭಗವನ್ ಶ್ರೋತುಮಂಜಸಾ ॥೬೨॥

ಕ್ರಿಯೆಗಳನ್ನೇ ವಿಸ್ತಾರ ಮಾಡುವ ಈ ವೇದಗಳಿಂದ ವೇದಗಳಲ್ಲಿಯೇ ಅಪನಂಬಿಕೆಯು ಜನರಿಗೆ ಉಂಟಾಗುತ್ತದೆ. ಆದ್ದರಿಂದ ಪೂಜ್ಯನೇ, ಈ ವೇದಗಳ ಮೂಲಕ ಹೊಂದಬಹುದಾದ ಅನಂತವಾದ ಫಲವೇನೆಂಬುದನ್ನು ತಿಳಿಯಲು ನಾನು ಬಯಸುತ್ತೇನೆ.

ತಥ್ಯಂ ವದಸ್ವ ಮೇ ಬ್ರಹ್ಮನ್ನುಪಸನ್ನೋಽಸ್ಮ್ಯಧೀಹಿ ಭೋಃ ।
ಯಥಾ ತೇ ವಿದಿತೋ ಮೋಕ್ಷಸ್ತಥೇಚ್ಛಾಮ್ಯುಪಶಿಕ್ಷಿತುಮ್ ॥೬೩॥

ಬ್ರಾಹ್ಮಣೋತ್ತಮನೇ, ನನಗೆ ಯಥಾರ್ಥವನ್ನೇ ಬೋಧಿಸು. ನಾನು ನಿನಗೆ ಶಿಷ್ಯನಾಗಿದ್ದೇನೆ. ಮೋಕ್ಷವೆಂಬುದು ನಿನಗೆ ಹೇಗೆ ತಿಳಿದಿರುತ್ತದೋ ಅದರಂತೆ ನಾನು ಮೋಕ್ಷದ ವಿಷಯವನ್ನು ನಿನ್ನಿಂದ ತಿಳಿಯಲು ಬಯಸಿದ್ದೇನೆ. ನನಗೆ ಉಪದೇಶಿಸು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಗೋಕಪಿಲಸಂವಾದೋ ನಾಮ ಚತುರಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ಸ್ಯೂಮರಶ್ಮಿ-ಕಪಿಲರ ಸಂವಾದ.

ಕಪಿಲಃ

ವೇದಾಃ ಪ್ರಮಾಣಂ ಲೋಕಾನಾಂ ನ ವೇದಾಃ ಪೃಷ್ಠತಃ ಕೃತಾಃ ।
ದ್ವೇ ಬ್ರಹ್ಮಣೇ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥೧॥

ಸಮಸ್ತಲೋಕಗಳಿಗೂ ವೇದಗಳೇ ಪ್ರಮಾಣವಾದವುಗಳು. ವೇದಗಳನ್ನು ಯಾರೂ ತಿರಸ್ಕರಿಸಿಲ್ಲ. ಆದರೆ ಬ್ರಹ್ಮ ಎಂದು ಕರೆಸಿಕೊಳ್ಳುವ ಎರಡನ್ನೂ ತಿಳಿದುಕೊಳ್ಳಬೇಕು. ಒಂದು ಶಬ್ದಬ್ರಹ್ಮವೆನಿಸಿದ ವೇದಗಳು, ಮತ್ತೊಂದು ಪರಬ್ರಹ್ಮನೆನಿಸಿದ ಭಗವಂತ. ಯಾರು ಶಬ್ದಬ್ರಹ್ಮನಲ್ಲಿ ನಿಷ್ಣಾತರಾಗಿದ್ದಾರೋ ಅವರು ಪರಬ್ರಹ್ಮನನ್ನು ಹೊಂದುತ್ತಾರೆ.

ಶರೀರಮೇತತ್ ಕುರುತೇ ಯದ್ ವೇದೇ ಕುರುತೇ ತನುಮ್ ।
ಕೃತಶುದ್ಧಶರೀರೋ ಹಿ ಪಾತ್ರಂ ಭವತಿ ಬ್ರಾಹ್ಮಣಃ ॥೨॥

ವೇದೋಕ್ತವಾದ ವಿಧಿಗಳಿಂದ ತಂದೆಯು ಶರೀರದ ಜನ್ಮಕ್ಕೆ ಕಾರಣನಾಗುತ್ತಾನೆ. ಗರ್ಭಾಧಾನ ಮೊದಲಾದ ಸಂಸ್ಕಾರಗಳು ವೇದೋಕ್ತ ವಿಧಿಯಿಂದಲೇ ನಡೆಯಲ್ಪಡುತ್ತವೆ. ಈ ಸಂಸ್ಕಾರದಿಂದ ಪರಿಶುದ್ಧವಾದ ಶರೀರವು ಬ್ರಹ್ಮಜ್ಞಾನಕ್ಕೆ ಯೋಗ್ಯವಾಗುತ್ತದೆ.

ಆನಂತ್ಯಮನುಯುಂಕ್ತೇ ಯಃ ಕರ್ಮಣಾ ತದ್ ಬ್ರವೀಮಿ ತೇ ।
ನಿರಾಗಮಮನೈತಿಹ್ಯಮ್ ಅತ್ಯಕ್ಷಂ ಲೋಕಸಾಕ್ಷಿಕಮ್ ॥೩॥

ಸ್ಯೂಮರಶ್ಮಿಯೇ, ಕರ್ಮಗಳಿಂದಲೂ ಅನಂತ ಫಲವೆನಿಸಿದ ಮೋಕ್ಷವನ್ನು ಹೇಗೆ ಹೊಂದಬಹುದು ಎಂಬುದನ್ನು ನಿನಗೆ ಹೇಳುತ್ತೇನೆ. ಯಾವ ವ್ಯಕ್ತಿಯು ಪ್ರವೃತ್ತಿ ಕರ್ಮವನ್ನು ಬೋಧಿಸುವ ವೇದಗಳಲ್ಲಿ ಆಸಕ್ತಿಯನ್ನು ತೊರೆದಿರುತ್ತಾನೋ, ಇಂತಹ ಕರ್ಮದಿಂದ ಇಂತಹ ಫಲವನ್ನು ಹೊಂದಬಹುದು ಎಂಬುದರಲ್ಲಿಯೂ ಆಸಕ್ತಿಯನ್ನು ತೊರೆದಿರುತ್ತಾನೋ, ಲೋಕ ಸಿದ್ಧವಾದ ಫಲಗಳನ್ನು ಬಯಸಲು ಹೋಗುವುದಿಲ್ಲವೋ ಇಂತಹ ನಿಷ್ಕಾಮ ಕರ್ಮಿಯು ಮೋಕ್ಷವೆಂಬ ಫಲವನ್ನು ಹೊಂದುತ್ತಾನೆ.

ಧರ್ಮ ಇತ್ಯೇವ ಯೇ ಯಜ್ಞಾನ್ ವಿತನ್ವಂತಿ ನಿರಾಶಿಷಃ ।
ಉತ್ಪನ್ನತ್ಯಾಗಿನೋಽಲುಬ್ಧಾಃ ಕೃಪಾಸೂಯಾವಿವರ್ಜಿತಾಃ ।
ಧನಾನಾಮೇಷ ವೈ ಪಂಥಾಸ್ತೀರ್ಥೇಷು ಪ್ರತಿಪಾದನಮ್ ॥೪॥

ಇದು ಧರ್ಮ ಎಂಬ ಭಾವನೆಯಿಂದ ಯಾರು ಯಜ್ಞಗಳನ್ನು ಕಾಮನೆಯನ್ನು ತೊರೆದು ಮಾಡುತ್ತಾರೋ, ಸ್ವಭಾವತಃ ತ್ಯಾಗಿಗಳಾಗಿರುವರೋ, ಲೋಭ, ಕೃಪಣತೆ, ಅಸೂಯೆಯನ್ನು ತ್ಯಜಿಸಿದ್ದಾರೋ, ಲಭಿಸಿದ ಧನವನ್ನು ತೀರ್ಥಕ್ಷೇತ್ರ ಸೇವನೆಯಲ್ಲಿ, ದಾನ-ತ್ಯಾಗಗಳಲ್ಲಿ ಸಮರ್ಪಿಸುತ್ತಾರೋ,

ಅನಾಶ್ರಿತಾಃ ಪಾಪಕೃತ್ಯಾಃ ಕದಾಚಿತ್ ಕರ್ಮಯೋನಿತಃ ।
ಮನಃಸಂಕಲ್ಪಸಂಸಿದ್ಧಾ ವಿಶುದ್ಧಜ್ಞಾನನಿಶ್ಚಯಾಃ ॥೫॥

ಯಾವುದೇ ಪಾಪಕರ್ಮವನ್ನು ಎಸಗುವುದಿಲ್ಲವೋ, ಕರ್ಮದಿಂದ ಪ್ರಾಪ್ತವಾದ ಜನ್ಮವನ್ನು ತಾಳಿದ್ದರೂ ಮನಸ್ಸಿನ ಸಂಕಲ್ಪವನ್ನು ಸಿದ್ಧಿಸುವುದರಲ್ಲಿ ಏಕಾಗ್ರತೆ ಉಳ್ಳವರೋ, ವಿಶುದ್ಧವಾದ ಭಗವದ್ ಜ್ಞಾನದಲ್ಲಿ ನಿಶ್ಚಯವುಳ್ಳವರಾಗಿರುವರೋ,

ಅಕ್ರುದ್ಧ್ಯಂತೋಽನಸೂಯಂತೋ ನಿರಹಂಕಾರಮತ್ಸರಾಃ ।
ಜ್ಞಾನನಿಷ್ಠಾಸ್ತ್ರಿಯುಕ್ತಾಶ್ಚ ಸರ್ವಭೂತಹಿತೇ ರತಾಃ ॥೬॥

ಯಾರ ಮೇಲೂ ಕೋಪಿಸಿಕೊಳ್ಳದೆ, ಯಾರ ವಿಷಯದಲ್ಲಿಯೂ ದೋಷವೆಣಿಸದೆ, ನಿರಹಂಕಾರಿಗಳಾಗಿ, ಮಾತ್ಸರ್ಯವಿಲ್ಲದವರಾಗಿ, ಪರಬ್ರಹ್ಮನ ಜ್ಞಾನದಲ್ಲಿಯೇ

ನಿಷ್ಠರಾಗಿ, ಮೂರು ವೇದಗಳ ಅಧ್ಯಯನದಲ್ಲಿಯೇ ಆಸಕ್ತರಾಗಿ, ಸಮಸ್ತ ಭೂತಗಳ ಹಿತದಲ್ಲಿಯೇ ರತರಾಗಿರುತ್ತಾರೆ.

ಆಸನ್ ಗೃಹಸ್ಥಾ ಭೂಯಿಷ್ಠಮವ್ಯತ್ಯಾಂತಾಃ ಸ್ವಕರ್ಮಸು ।
ರಾಜಾನಶ್ಚ ತಥಾ ಯುಕ್ತಾ ಬ್ರಾಹ್ಮಣಾಶ್ಚ ಯಥಾವಿಧಿ ॥೭॥

ಹಿಂದಿನ ಕಾಲದಲ್ಲಿ ಗೃಹಸ್ಥರಾದ ಅನೇಕ ಬ್ರಾಹ್ಮಣರು ಮತ್ತು ರಾಜರು ಗೃಹಸ್ಥಾಶ್ರಮೋಚಿತವಾದ ವೈದಿಕ ಧರ್ಮವನ್ನು ತ್ಯಾಗ ಮಾಡದೆ, ವೇದೋಕ್ತವಾದ ವಿಧಿಯಿಂದ, ನಿಷ್ಕಾಮಭಾವದಿಂದ ಕರ್ಮಗಳನ್ನು ಮಾಡುತ್ತಿದ್ದರು.

ಸಮಾ ಹ್ಯಾರ್ಜವಸಂಪನ್ನಾಃ ಸಂತುಷ್ಟಾ ಜ್ಞಾನನಿಶ್ಚಯಾಃ ।
ಪ್ರತ್ಯಕ್ಷಧರ್ಮಾಃ ಶುಚಯಃ ಶ್ರದ್ದಧಾನಾಃ ಪರಾವರೇ ॥೮॥

ಸಮಸ್ತ ಪ್ರಾಣಿಗಳಲ್ಲಿಯೂ ಸಮಾನ ದೃಷ್ಟಿಯುಳ್ಳವರಾಗಿ, ಸರಳತೆಯಿಂದ ಕೂಡಿದವರಾಗಿ, ಸರ್ವದಾ ಸಂತುಷ್ಟಚಿತ್ತರಾಗಿ, ಭಗವದ್‌ಜ್ಞಾನದಲ್ಲಿ ನಿಶ್ಚಯ ಉಳ್ಳವರಾಗಿ, ಚಿತ್ತಶುದ್ಧಿಯನ್ನುಂಟು ಮಾಡುವ ಧರ್ಮವನ್ನು ಅನುಷ್ಠಾನ ಮಾಡುವವರಾಗಿ, ಪರಿಶುದ್ಧರಾಗಿ, ಸರ್ವೋತ್ತಮನಾದ ಪರಬ್ರಹ್ಮನಲ್ಲಿಯೂ, ಜಗತ್ತಿನಲ್ಲಿಯೂ ಶ್ರದ್ಧೆಯುಳ್ಳವರಾಗಿ,

ಪುರಸ್ತಾದ್ಭಾವಿತಾತ್ಮಾನೋ ಯಥಾವಚ್ಚರಿತವ್ರತಾಃ ।
ಚರಂತಿ ಧರ್ಮಂ ಕೃಚ್ಛ್ರೇಽಪಿ ದುರ್ಗೇ ಚೈವಾಧಿಸಂಹತಾಃ ॥೯॥

ನಿಯಮಗಳನ್ನು ವಿಧಿಬದ್ಧವಾಗಿ ಮನಃಪೂರ್ವಕವಾಗಿ ಆಚರಿಸುತ್ತಾ, ಕಷ್ಟದ ಸಮಯದಲ್ಲಿಯೂ ಧರ್ಮಾಚರಣೆಯನ್ನು ಮಾಡುತ್ತಾ , ದುರ್ಗಮವಾದ ಸ್ಥಳದಲ್ಲಿಯೂ ಧರ್ಮವನ್ನು ಬಿಡದೆ ಒಟ್ಟಾಗಿ ಧರ್ಮವನ್ನು ಆಚರಿಸುತ್ತಿದ್ದರು.

ಸಂಹತ್ಯ ಧರ್ಮಂ ಚರತಾಂ ಪುರಾಸೀತ್ ಸುಖಮೇವ ತತ್ ।
ತೇಷಾಂ ನಾಸೀದ್ ವಿಧಾತವ್ಯಂ ಪ್ರಾಯಶ್ಚಿತ್ತಂ ಕದಾಚನ ॥೧೦॥

ಪರಸ್ಪರವಾಗಿ ಸೇರಿಕೊಂಡು ಧರ್ಮಾಚರಣೆಯನ್ನು ಮಾಡುತ್ತಿದ್ದರಿಂದ ಅವರಿಗೆ ಸುಖವೇ ಉಂಟಾಗುತ್ತಿತ್ತು. ಸಂಘಟನೆಯಿಂದ ವಿಚಾರ ಮಾಡಿ ಕರ್ಮಗಳನ್ನು

ಮಾಡುತ್ತಿದ್ದ ಅವರ ಕರ್ಮಗಳಲ್ಲಿ ಲೋಪವು ಉಂಟಾಗುತ್ತಿರಲಿಲ್ಲ. ಮಂತ್ರಲೋಪ, ಕ್ರಿಯಾಲೋಪಗಳಿಗಾಗಿ ಯಾವಾಗಲೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ಅವಶ್ಯಕತೆಯೂ ಇರಲಿಲ್ಲ.

ಸತ್ಯಂ ಹಿ ಧರ್ಮಮಾಸ್ಥಾಯ ದುರಾಧರ್ಷತಮಾ ಮತಾಃ ।
ನ ಮಾತ್ರಾಮನುರುದ್ಧ್ಯಂತೇ ನ ಧರ್ಮಚ್ಛಲಮಂತತಃ ॥೧೧॥

ಸತ್ಯವಾದ ಧರ್ಮವನ್ನು ಅನುಸರಿಸಿ ಹೋಗುವ ಅವರನ್ನು ಯಾರಿಂದಲೂ ಮೀರಿ ಹೋಗಲಾಗುತ್ತಿರಲಿಲ್ಲ. ಧರ್ಮದಿಂದ ಪ್ರಭುತ್ವವನ್ನು ಸಂಪಾದಿಸಿಕೊಂಡಿರುತ್ತಿದ್ದರು. ಪ್ರಾಪಂಚಿಕವಾದ ರೂಪ-ರಸಾದಿಗಳಲ್ಲಿ ಅನುರಕ್ತರಾಗುತ್ತಿರಲಿಲ್ಲ. ಎಂದಿಗೂ ಮೋಸದ ಧರ್ಮಾಚರಣೆಯನ್ನು ಮಾಡುತ್ತಿರಲಿಲ್ಲ.

ಯ ಏವ ಪ್ರಥಮಃ ಕಲ್ಪಸ್ತಮೇವಾಭ್ಯಾಚರನ್ ಸಹ ।
ಅಸ್ಯಾಂ ಸ್ಥಿತೌ ಸ್ಥಿತಾನಾಂ ಹಿ ಪ್ರಾಯಶ್ಚಿತ್ತಂ ನ ವಿದ್ಯತೇ ।
ದುರ್ಬಲಾತ್ಮನ ಉತ್ಪನ್ನಂ ಪ್ರಾಯಶ್ಚಿತ್ತಮಿತಿ ಶ್ರುತಿಃ ॥೧೨॥

ಯಾವುದು ಶ್ರೇಷ್ಠವಾದ ಧರ್ಮವೋ, ನಿಯತವಾದ ಧರ್ಮವೋ ಅದನ್ನೇ ಸಂಘಟನೆಯಿಂದ ಆಚರಿಸುತ್ತಿದ್ದರು. ಆದ್ದರಿಂದಲೇ ಮಂತ್ರಲೋಪ, ಕ್ರಿಯಾಲೋಪಗಳ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿರಲಿಲ್ಲ. ಯಾರು ಪರಸ್ಪರ ವಿಧಿ ನಿಷೇಧಗಳನ್ನು ಅರಿತು, ಸಹಕಾರದಿಂದ ಕರ್ಮವನ್ನು ಮಾಡುತ್ತಾರೋ ಅವರಿಗೆ ಪ್ರಾಯಶ್ಚಿತ್ತವು ಬೇಕಾಗುವುದಿಲ್ಲ. ಪ್ರಾಯಶ್ಚಿತ್ತವೆಂಬುದು ದುರ್ಬಲವಾದ ಮನಸ್ಸುಳ್ಳವರಿಗೆ, ಶರೀರವುಳ್ಳವರಿಗೆ ಮಾತ್ರ ಹುಟ್ಟಿಕೊಂಡಿರುತ್ತದೆ ಎಂದು ಶ್ರುತಿಯು ಹೇಳುತ್ತದೆ.

ಯತ ಏವಂವಿಧಾ ವಿಪ್ರಾಃ ಪುರಾಣಾ ಯಜ್ಞವಾಹನಾಃ ।
ತ್ರೈವಿದ್ಯವೃದ್ಧಾಃ ಶುಚಯೋ ವೃತ್ತವಂತೋ ಯಶಸ್ವಿನಃ ।
ಯಜಂತೋಽಹರಹರ್ಯಜ್ಞೈರ್ನಿರಾಶೀರ್ಬಂಧನಾ ಬುಧಾಃ ॥೧೩॥

ಹೀಗೆ ಅನೇಕ ಬ್ರಾಹ್ಮಣರು ನಿಷ್ಕಾಮನೆಯಿಂದ ಹಿಂದೆ ಯಜ್ಞಗಳನ್ನು ಮಾಡುತ್ತಿದ್ದರು. ಮೂರು ವೇದಗಳಲ್ಲಿಯೇ ವಿಶೇಷವಾದ ಪಾಂಡಿತ್ಯವನ್ನು ಹೊಂದಿದ್ದರು. ಅತ್ಯಂತ

ಶುಚಿಗಳೂ, ಶೀಲವಂತರೂ, ಯಶಸ್ವಿಗಳೂ ಆಗಿದ್ದರು. ಅಂತಹ ವಿದ್ವಾಂಸರು ಯಜ್ಞದ ಮೂಲಕ ವೇದೋಕ್ತವಾದ ಕರ್ಮಗಳನ್ನು ಸಂಪ್ರದಾಯಬದ್ಧವಾಗಿ ಆಚರಿಸುತ್ತಿದ್ದರು.

ತೇಷಾಂ ಯಜ್ಞಾಶ್ಚ ವೇದಾಶ್ಚ ಕರ್ಮಾಣಿ ಚ ಯಥಾಗಮಮ್ ।
ಆಗಮಾಶ್ಚ ಯಥಾಕಾಲಂ ಸಂಕಲ್ಪಾಶ್ಚ ಯಥಾವ್ರತಮ್ ॥೧೪॥

ಕಾಲಕ್ಕೆ ಅನುಗುಣವಾಗಿ ವೇದಗಳ ಜ್ಞಾನವನ್ನು ಹೊಂದುತ್ತಿದ್ದರು. ನಿಯಮ, ವ್ರತಗಳಿಗೆ ಅನುಗುಣವಾಗಿ ಸತ್ಸಂಕಲ್ಪಗಳನ್ನು ಹೊಂದುತ್ತಿದ್ದರು.

ಅಪೇತಕಾಮಕ್ರೋಧಾನಾಂ ಪ್ರಕೃತ್ಯಾ ಸಂಶಿತಾತ್ಮನಾಮ್ ।
ಋಜೂನಾಂ ಶಮನಿತ್ಯಾನಾಂ ಸ್ಥಿತಾನಾಂ ಸ್ವೇಷು ಕರ್ಮಸು ।
ಸರ್ವಮಾನಂತ್ಯಮೇವಾಸೀದಿತಿ ನಃ ಶಾಶ್ವತೀ ಶ್ರುತಿಃ ॥೧೫॥

ಕಾಮ-ಕ್ರೋಧಗಳಿಂದ ಮುಕ್ತರಾಗಿರುವ, ಸಹಜವಾಗಿಯೇ ಪರಿಶುದ್ಧ ಸ್ವಭಾವ ಉಳ್ಳವರಾದ, ಋಜುಸ್ವಭಾವದವರಾದ, ಭಗವನ್ನಿಷ್ಠವಾದ ಬುದ್ಧಿಯುಳ್ಳವರಾದ, ತಮ್ಮ ತಮ್ಮ ವಿಹಿತವಾದ ಧರ್ಮಗಳಲ್ಲಿ ಆಸಕ್ತರಾದ ವ್ಯಕ್ತಿಗಳಿಂದ ಮಾಡಲ್ಪಡುವ ಕರ್ಮಗಳು ಮೋಕ್ಷಕ್ಕೆ ಕಾರಣವಾಗುತ್ತವೆ ಎಂಬುದೇ ಶಾಸ್ತ್ರಗಳ ಅಭಿಪ್ರಾಯವಾಗಿದೆ.

ತೇಷಾಮದೀನಸತ್ತ್ವಾನಾಂ ದುಶ್ಚರಾಚಾರಕರ್ಮಣಾಮ್ ।
ಸ್ವಕರ್ಮಭಿಃ ಸಂವೃತಾನಾಂ ತಪೋ ಘೋರತ್ವಮಾಗತಮ್ ॥೧೬॥

ಹೀಗೆ ಉದಾರಚಿತ್ತರಾಗಿರುವ, ಇತರರಿಂದ ಮಾಡಲು ಅಸಾಧ್ಯವಾದ ಸದಾಚಾರಗಳನ್ನು ಆಚರಿಸುತ್ತಿದ್ದ, ತಮ್ಮ ಸತ್ಕರ್ಮಗಳಿಂದಲೇ ಸಮೃದ್ಧಿಯನ್ನು ಹೊಂದುತ್ತಿದ್ದ ನಿಷ್ಕಾಮಿ ಕರ್ಮಗಳ ತಪಸ್ಸು ತೀಕ್ಷ್ಣತೆಯನ್ನು ಹೊಂದಿತು.

ತಂ ಸದಾಚಾರಮಾಶ್ಚರ್ಯಂ ಪುರಾಣಂ ಶಾಶ್ವತಂ ಧ್ರುವಮ್ ।
ಅಶಕ್ನುವದ್ಭಿಶ್ಚರಿತುಂ ಕಿಂಚಿದ್ಧರ್ಮೇಷು ಸೂಚಿತಮ್ ॥೧೭॥

ಆಶ್ಚರ್ಯಕರವಾದ, ಸನಾತನವಾದ, ಶಾಶ್ವತವಾದ, ಅಂತಹ ಸದಾಚಾರವನ್ನು ಪರಿಪಾಲಿಸಲು ಅಶಕ್ತರಾದವರಿಂದ ಸ್ವಲ್ಪವಾದರೂ ಧರ್ಮವನ್ನು ಅನುಷ್ಠಾನ ಮಾಡಬೇಕೆಂದು ಸೂಚಿಸಲ್ಪಟ್ಟಿತು. ಸಮಸ್ತ ಧರ್ಮಗಳನ್ನು ಆಚರಿಸಲು ಸಾಮರ್ಥ್ಯ

ಇಲ್ಲದಿದ್ದಲ್ಲಿ ಯಥಾಶಕ್ತಿಯಾದರೂ ಧರ್ಮಾನುಷ್ಠಾನ ಮಾಡಬೇಕೆಂದು ಸೂಚಿಸಲ್ಪಟ್ಟಿತು ಎಂದು ಭಾವ.

ನಿರಾಪದ್ಧರ್ಮ ಆಚಾರಸ್ತ ಪ್ರಮಾದೋಽಪರಾಭವಃ ।
ಸರ್ವವರ್ಣೇಷು ಯತ್ತೇಷು ನಾಸೀತ್ ಕಶ್ಚಿದ್ ವ್ಯತಿಕ್ರಮಃ ॥೧೮॥

ವೇದೋಕ್ತವಾದ ಆಚಾರಗಳು ಆಪದ್ಧರ್ಮರಹಿತವಾಗಿದ್ದವು. ಕರ್ಮಗಳಲ್ಲಿ ತಪ್ಪುಗಳು ನಡೆಯುತ್ತಿರಲಿಲ್ಲ. ಕರ್ಮಗಳಿಂದ ಪರಾಭವವೂ ಉಂಟಾಗುತ್ತಿರಲಿಲ್ಲ. ಸಮಸ್ತ ವರ್ಣಗಳಲ್ಲಿಯೂ ಆಯಾ ಧರ್ಮಕಾರ್ಯಗಳು ನಡೆಯುತ್ತಿದ್ದರಿಂದ ಯಾವ ವಿಧವಾದ ವ್ಯತಿಕ್ರಮವೂ ಉಂಟಾಗುತ್ತಿರಲಿಲ್ಲ.

ಧರ್ಮಮೇಕಂ ಚತುಷ್ಪಾದಮಾಶ್ರಿತಾಸ್ತೇ ನರರ್ಷಭಾಃ ।
ತಂ ಸಂತೋ ವಿಧಿವತ್ ಪ್ರಾಪ್ಯ ಗಚ್ಛಂತಿ ಪರಮಾಂ ಗತಿಮ್ ॥೧೯॥

ನಾಲ್ಕು ಪಾದಗಳಿಂದ ಕೂಡಿದ ಒಂದು ಧರ್ಮವನ್ನೇ ಸಮಸ್ತ ಸತ್ಪುರುಷರು ಆಶ್ರಯಿಸಿರುತ್ತಾರೆ. ಆ ಧರ್ಮವನ್ನು ವಿಧಿಬದ್ಧವಾಗಿ ಹೊಂದಿ ಪರಮಗತಿಯನ್ನು ಸೇರುತ್ತಾರೆ.

ಗೃಹೇಭ್ಯ ಏವ ನಿಷ್ಕ್ರಮ್ಯ ವನಮನ್ಯೇ ಸಮಾಶ್ರಿತಾಃ ।
ಗೃಹಮೇವಾಭಿಸಂಶ್ರಿತ್ಯ ತತೋಽನ್ಯೇ ಬ್ರಹ್ಮಚಾರಿಣಃ ॥೨೦॥

ಕೆಲವರು ಮನೆಯನ್ನು ತೊರೆದು ಸಂನ್ಯಾಸಿಗಳಾಗಿ, ಕೆಲವರು ವಾನಪ್ರಸ್ಥರಾಗಿ, ಇನ್ನು ಕೆಲವರು ಗೃಹಸ್ಥಾಶ್ರಮದಲ್ಲೇ ಇದ್ದುಕೊಂಡು ಮತ್ತು ಕೆಲವರು ಬ್ರಹ್ಮಚಾರಿಗಳಾಗಿಯೇ ಇದ್ದುಕೊಂಡು ಈ ಧರ್ಮವನ್ನು ಪರಿಪಾಲಿಸುತ್ತಾರೆ.

ವ್ಯಸ್ತಮೇಕಂ ಚತುರ್ಧಾ ತು ಬ್ರಾಹ್ಮಣಾ ಆಶ್ರಮಂ ವಿದುಃ ।
ಸರ್ವೇ ಸರ್ವತ್ರ ತಿಷ್ಠಂತೋ ಗಚ್ಛಂತಿ ಪರಮಾಂ ಗತಿಮ್ ॥೨೧॥

ಮೊದಲು ಒಂದೇ ಆಶ್ರಮವು ವ್ಯಕ್ತವಾಗಿದ್ದು ಬಳಿಕ ನಾಲ್ಕು ಪ್ರಕಾರವಾಗಿ ವಿಂಗಡಿಸಲ್ಪಟ್ಟಿತೆಂದು ಬ್ರಾಹ್ಮಣರೆಲ್ಲರೂ ತಿಳಿದಿರುತ್ತಾರೆ. ಎಲ್ಲರೂ ಅವರಿಗೆ ವಿಹಿತವಾದ ಧರ್ಮಗಳನ್ನು ಅನುಷ್ಠಾನ ಮಾಡಿದಲ್ಲಿ ಪರಮಗತಿಯನ್ನು ಹೊಂದುತ್ತಾರೆ.

ಅತ ಏವಂವಿಧಾ ಪ್ರಾಹುಃ ಪುರಾಣಾ ಧರ್ಮಚಾರಿಣಃ ।
ತ ಏತೇ ದಿವಿ ದೃಶ್ಯಂತೇ ಜ್ಯೋತಿರ್ಭೂತಾ ದ್ವಿಜಾತಯಃ ॥೨೨॥

ಈ ರೀತಿಯಾಗಿ ಪ್ರಾಚೀನರಾದ ಧರ್ಮಾನುಷ್ಠಾನ ಮಾಡುವ ಬ್ರಾಹ್ಮಣರು ಜ್ಯೋತಿರೂಪರಾಗಿ ಆಕಾಶದಲ್ಲಿ ಪ್ರಕಾಶಿಸುತ್ತಿದ್ದಾರೆ. ಈ ದೃಶ್ಯವು ಇಂದಿಗೂ ಕಾಣುತ್ತದೆ.

ನಕ್ಷತ್ರಾಣೀವ ಧಿಷ್ಣ್ಯೇಷು ಬಹವಸ್ತಾರಕಾಗಣಾಃ ।
ಆನಂತ್ಯಮುಪಸಂಪ್ರಾಪ್ತಾಃ ಸಂತೋಷಾದಿತಿ ವೈದಿಕಮ್ ॥೨೩॥

ಅನೇಕ ಸಂಖ್ಯಾತವಾದ ನಕ್ಷತ್ರಗಳು, ಅವುಗಳ ಸ್ಥಾನದಲ್ಲಿ ಅಶ್ವಿನಿ ಮೊದಲಾದ ನಕ್ಷತ್ರಗಳಾಗಿ ಕಾಣಿಸಿಕೊಳ್ಳುವಂತೆ ಬ್ರಾಹ್ಮಣರು ಸತ್ಕರ್ಮಾಚರಣೆಯಿಂದ ಸಂತೋಷದಿಂದ ಪರಮಪದವಿಯನ್ನು ಹೊಂದಿ ಬೆಳಗುತ್ತಿದ್ದಾರೆ ಎಂಬುದು ವೈದಿಕ ಸಿದ್ಧಾಂತವಾಗಿದೆ.

ಯದ್ಯಾಗಚ್ಛಂತಿ ಸಂಸಾರಂ ಪುನರ್ಯೋನಿಷು ತಾದೃಶಾಃ ।
ನ ಲಿಪ್ಯಂತೇ ಪಾಪಕೃತ್ಯೈಃ ಕದಾಚಿತ್ ಕರ್ಮಯೋನಿತಃ ॥೨೪॥

ಒಂದು ವೇಳೆ ಜ್ಯೋತಿರ್ಭೂತರಾದ ಆ ಸಾಧಕರು ಪುನಃ ಸಂಸಾರವನ್ನು ಪ್ರವೇಶಿಸಿದರೂ ಎಂದಿಗೂ ಕರ್ಮಯೋನಿಯಲ್ಲಿ ಹುಟ್ಟಿದ ಪರಿಣಾಮದಿಂದ ಆಯಾ ಪಾಪಕೃತ್ಯಗಳಿಂದ ಲಿಪ್ತರಾಗುವುದಿಲ್ಲ.

ಏವಂ ಯುಕ್ತೋ ಬ್ರಾಹ್ಮಣಃ ಸ್ಯಾದನ್ಯೋ ಬ್ರಾಹ್ಮಣಕೋ ಭವೇತ್ ।
ಕರ್ಮೈವ ಪುರುಷಸ್ಯಾಹ ಶುಭಂ ವಾ ಯದಿ ವಾಶುಭಮ್ ॥೨೫॥

ಈ ರೀತಿಯಾಗಿ ಸದ್ಧರ್ಮಶೀಲನಾದ, ಯೋಗಯುಕ್ತನಾದ ಬ್ರಹ್ಮಚಾರಿಯು ಉತ್ತಮ ಬ್ರಾಹ್ಮಣನಾಗುತ್ತಾನೆ. ಹಾಗಿಲ್ಲದವನು ಹೆಸರಿಗೆ ಮಾತ್ರ ಬ್ರಾಹ್ಮಣನು. ಕುತ್ಸಿತ ಬ್ರಾಹ್ಮಣನಾಗುತ್ತಾನೆ. ಶುಭವಾಗಲಿ, ಅಶುಭವಾಗಲಿ ಮನುಷ್ಯನಿಗೆ ಕರ್ಮದಿಂದಲೇ ಸಿದ್ಧವಾಗುತ್ತದೆ.

ಏವಂ ಪಕ್ವಕಷಾಯಾಣಾಮಾನಂತ್ಯೇನ ಶ್ರುತೇನ ಚ ।
ಸರ್ವಮಾನಂತ್ಯಮೇವಾಸೀದೇವಂ ನಃ ಶಾಶ್ವತೀ ಶ್ರುತಿಃ ॥೨೬॥

ಇಲ್ಲದಿದ್ದಲ್ಲಿ ಯಥಾಶಕ್ತಿಯಾದರೂ ಧರ್ಮಾನುಷ್ಠಾನ ಮಾಡಬೇಕೆಂದು ಸೂಚಿಸಲ್ಪಟ್ಟಿತು ಎಂದು ಭಾವ.

ನಿರಾಪದ್ಧರ್ಮ ಆಚಾರಸ್ತ ಪ್ರಮಾದೋಽಪರಾಭವಃ ।
ಸರ್ವವರ್ಣೇಷು ಯತ್ತೇಷು ನಾಸೀತ್ ಕಶ್ಚಿದ್ ವ್ಯತಿಕ್ರಮಃ ॥೧೮॥

ವೇದೋಕ್ತವಾದ ಆಚಾರಗಳು ಆಪದ್ಧರ್ಮರಹಿತವಾಗಿದ್ದವು. ಕರ್ಮಗಳಲ್ಲಿ ತಪ್ಪುಗಳು ನಡೆಯುತ್ತಿರಲಿಲ್ಲ. ಕರ್ಮಗಳಿಂದ ಪರಾಭವವೂ ಉಂಟಾಗುತ್ತಿರಲಿಲ್ಲ. ಸಮಸ್ತ ವರ್ಣಗಳಲ್ಲಿಯೂ ಆಯಾ ಧರ್ಮಕಾರ್ಯಗಳು ನಡೆಯುತ್ತಿದ್ದರಿಂದ ಯಾವ ವಿಧವಾದ ವ್ಯತಿಕ್ರಮವೂ ಉಂಟಾಗುತ್ತಿರಲಿಲ್ಲ.

ಧರ್ಮಮೇಕಂ ಚತುಷ್ಪಾದಮಾಶ್ರಿತಾಸ್ತೇ ನರರ್ಷಭಾಃ ।
ತಂ ಸಂತೋ ವಿಧಿವತ್ ಪ್ರಾಪ್ಯ ಗಚ್ಛಂತಿ ಪರಮಾಂ ಗತಿಮ್ ॥೧೯॥

ನಾಲ್ಕು ಪಾದಗಳಿಂದ ಕೂಡಿದ ಒಂದು ಧರ್ಮವನ್ನೇ ಸಮಸ್ತ ಸತ್ಪುರುಷರು ಆಶ್ರಯಿಸಿರುತ್ತಾರೆ. ಆ ಧರ್ಮವನ್ನು ವಿಧಿಬದ್ಧವಾಗಿ ಹೊಂದಿ ಪರಮಗತಿಯನ್ನು ಸೇರುತ್ತಾರೆ.

ಗೃಹೇಭ್ಯ ಏವ ನಿಷ್ಕ್ರಮ್ಯ ವನಮನ್ಯೇ ಸಮಾಶ್ರಿತಾಃ ।
ಗೃಹಮೇವಾಭಿಸಂಶ್ರಿತ್ಯ ತತೋಽನ್ಯೇ ಬ್ರಹ್ಮಚಾರಿಣಃ ॥೨೦॥

ಕೆಲವರು ಮನೆಯನ್ನು ತೊರೆದು ಸಂನ್ಯಾಸಿಗಳಾಗಿ, ಕೆಲವರು ವಾನಪ್ರಸ್ಥರಾಗಿ, ಇನ್ನು ಕೆಲವರು ಗೃಹಸ್ಥಾಶ್ರಮದಲ್ಲೇ ಇದ್ದುಕೊಂಡು ಮತ್ತು ಕೆಲವರು ಬ್ರಹ್ಮಚಾರಿಗಳಾಗಿಯೇ ಇದ್ದುಕೊಂಡು ಈ ಧರ್ಮವನ್ನು ಪರಿಪಾಲಿಸುತ್ತಾರೆ.

ವ್ಯಸ್ತಮೇಕಂ ಚತುರ್ಧಾ ತು ಬ್ರಾಹ್ಮಣಾ ಆಶ್ರಮಂ ವಿದುಃ ।
ಸರ್ವೇ ಸರ್ವತ್ರ ತಿಷ್ಠಂತೋ ಗಚ್ಛಂತಿ ಪರಮಾಂ ಗತಿಮ್ ॥೨೧॥

ಮೊದಲು ಒಂದೇ ಆಶ್ರಮವು ವ್ಯಕ್ತವಾಗಿದ್ದು ಬಳಿಕ ನಾಲ್ಕು ಪ್ರಕಾರವಾಗಿ ವಿಂಗಡಿಸಲ್ಪಟ್ಟಿತೆಂದು ಬ್ರಾಹ್ಮಣರೆಲ್ಲರೂ ತಿಳಿದಿರುತ್ತಾರೆ. ಎಲ್ಲರೂ ಅವರಿಗೆ ವಿಹಿತವಾದ ಧರ್ಮಗಳನ್ನು ಅನುಷ್ಠಾನ ಮಾಡಿದಲ್ಲಿ ಪರಮಗತಿಯನ್ನು ಹೊಂದುತ್ತಾರೆ.

ಅತ ಏವಂವಿಧಾ ಪ್ರಾಹುಃ ಪುರಾಣಾ ಧರ್ಮಚಾರಿಣಃ ।
ತ ಏತೇ ದಿವಿ ದೃಶ್ಯಂತೇ ಜ್ಯೋತಿರ್ಭೂತಾ ದ್ವಿಜಾತಯಃ ॥೨೨॥

ಈ ರೀತಿಯಾಗಿ ಪ್ರಾಚೀನರಾದ ಧರ್ಮಾನುಷ್ಠಾನ ಮಾಡುವ ಬ್ರಾಹ್ಮಣರು ಜ್ಯೋತಿರೂಪರಾಗಿ ಆಕಾಶದಲ್ಲಿ ಪ್ರಕಾಶಿಸುತ್ತಿದ್ದಾರೆ. ಈ ದೃಶ್ಯವು ಇಂದಿಗೂ ಕಾಣುತ್ತದೆ.

ನಕ್ಷತ್ರಾಣೀವ ಧಿಷ್ಣ್ಯೇಷು ಬಹವಸ್ತಾರಕಾಗಣಾಃ ।
ಆನಂತ್ಯಮುಪಸಂಪ್ರಾಪ್ತಾಃ ಸಂತೋಷಾದಿತಿ ವೈದಿಕಮ್ ॥೨೩॥

ಅನೇಕ ಸಂಖ್ಯಾತವಾದ ನಕ್ಷತ್ರಗಳು, ಅವುಗಳ ಸ್ಥಾನದಲ್ಲಿ ಅಶ್ವಿನಿ ಮೊದಲಾದ ನಕ್ಷತ್ರಗಳಾಗಿ ಕಾಣಿಸಿಕೊಳ್ಳುವಂತೆ ಬ್ರಾಹ್ಮಣರು ಸತ್ಕರ್ಮಾಚರಣೆಯಿಂದ ಸಂತೋಷದಿಂದ ಪರಮಪದವಿಯನ್ನು ಹೊಂದಿ ಬೆಳಗುತ್ತಿದ್ದಾರೆ ಎಂಬುದು ವೈದಿಕ ಸಿದ್ಧಾಂತವಾಗಿದೆ.

ಯದ್ಯಾಗಚ್ಛಂತಿ ಸಂಸಾರಂ ಪುನರ್ಯೋನಿಷು ತಾದೃಶಾಃ ।
ನ ಲಿಪ್ಯಂತೇ ಪಾಪಕೃತ್ಯೈಃ ಕದಾಚಿತ್ ಕರ್ಮಯೋನಿತಃ ॥೨೪॥

ಒಂದು ವೇಳೆ ಜ್ಯೋತಿರ್ಭೂತರಾದ ಆ ಸಾಧಕರು ಪುನಃ ಸಂಸಾರವನ್ನು ಪ್ರವೇಶಿಸಿದರೂ ಎಂದಿಗೂ ಕರ್ಮಯೋನಿಯಲ್ಲಿ ಹುಟ್ಟಿದ ಪರಿಣಾಮದಿಂದ ಆಯಾ ಪಾಪಕೃತ್ಯಗಳಿಂದ ಲಿಪ್ತರಾಗುವುದಿಲ್ಲ.

ಏವಂ ಯುಕ್ತೋ ಬ್ರಾಹ್ಮಣಃ ಸ್ಯಾದನ್ಯೋ ಬ್ರಾಹ್ಮಣಕೋ ಭವೇತ್ ।
ಕರ್ಮೈವ ಪುರುಷಸ್ಯಾಹ ಶುಭಂ ವಾ ಯದಿ ವಾಶುಭಮ್ ॥೨೫॥

ಈ ರೀತಿಯಾಗಿ ಸದ್ಧರ್ಮಶೀಲನಾದ, ಯೋಗಯುಕ್ತನಾದ ಬ್ರಹ್ಮಚಾರಿಯು ಉತ್ತಮ ಬ್ರಾಹ್ಮಣನಾಗುತ್ತಾನೆ. ಹಾಗಿಲ್ಲದವನು ಹೆಸರಿಗೆ ಮಾತ್ರ ಬ್ರಾಹ್ಮಣನು. ಕುತ್ಸಿತ ಬ್ರಾಹ್ಮಣನಾಗುತ್ತಾನೆ. ಶುಭವಾಗಲಿ, ಅಶುಭವಾಗಲಿ ಮನುಷ್ಯನಿಗೆ ಕರ್ಮದಿಂದಲೇ ಸಿದ್ಧವಾಗುತ್ತದೆ.

ಏವಂ ಪಕ್ವಕಷಾಯಾಣಾಮಾನಂತ್ಯೇನ ಶ್ರುತೇನ ಚ ।
ಸರ್ವಮಾನಂತ್ಯಮೇವಾಸೀದೇವಂ ನಃ ಶಾಶ್ವತೀ ಶ್ರುತಿಃ ॥೨೬॥

ತೇಷಾಮಪೇತತೃಷ್ಣಾನಾಂ ನಿರ್ಮಿಕ್ತಾನಾಂ ಶುಭಾತ್ಮನಾಮ್ ।
ಚತುರ್ಥ ಔಪನಿಷದೋ ಧರ್ಮಃ ಸಾಧಾರಣಃ ಸ್ಮೃತಃ ॥೨೭॥

ಯಾರು ರಾಗ-ದ್ವೇಷಗಳ ಕಹಿಯನ್ನು ದಾಟಿರುತ್ತಾರೋ, ಆಸೆಗಳನ್ನು ತೊರೆದಿರುತ್ತಾರೋ, ತೊಳೆದುಕೊಂಡ ಪಾಪವುಳ್ಳವರಾಗಿರುತ್ತಾರೋ, ಶುದ್ಧಾತ್ಮರಾಗಿರುತ್ತಾರೋ ತತ್ತ್ವಜ್ಞಾನಿಗಳಾದ ಅವರಿಗೆ ಅನಂತವಾದ ಸುಖವೇ ದೊರೆಯುತ್ತದೆ. ಭಗವಂತನ ಅನುಗ್ರಹದಿಂದ ನಿತ್ಯ ಸುಖವನ್ನು ಹೊಂದುತ್ತಾರೆ. ಇಂತಹ ಮಾತನ್ನು ನಾವು ಸರ್ವಕಾಲದಲ್ಲಿಯೂ ಕೇಳುತ್ತಲೇ ಇರುತ್ತೇವೆ. ನಾಲ್ಕನೆಯ ಸಂನ್ಯಾಸಾಶ್ರಮಕ್ಕೆ ಸಂಬಂಧಿಸಿದಂತೆ ಇರುವ ಉಪನಿಷತ್ ಧರ್ಮವು ನಾಲ್ಕು ಆಶ್ರಮಗಳಿಗೂ ಸಾಧಾರಣವಾದುದು.

ಸ ಸಿದ್ಧೈಃ ಸಾಧ್ಯತೇ ನಿತ್ಯಂ ಬ್ರಾಹ್ಮಣೈರ್ನಿಯತಾತ್ಮಭಿಃ ।
ಸಂತೋಷಮೂಲಸ್ಯಾಗಾತ್ಮಾ ಜ್ಞಾನಾಧಿಷ್ಠಾನಮುಚ್ಯತೇ ॥೨೮॥

ಅಪವರ್ಗಗತಿರ್ನಿತ್ಯೋ ಯತಿಧರ್ಮಃ ಸನಾತನಃ ।
ಸಾಧಾರಣಃ ಕೇವಲೋ ವಾ ಯಥಾಬಲಮುಪಾಸ್ಯತೇ ॥೨೯॥

ಉಪನಿಷದ್ಧರ್ಮಗಳನ್ನು ಸಿದ್ಧಪುರುಷರಾದ ಬ್ರಾಹ್ಮಣರು ನಿತ್ಯವೂ ಜಿತೇಂದ್ರಿಯರಾಗಿ ಅನುಷ್ಠಾನ ಮಾಡುತ್ತಾರೆ. ಸನಾತನವಾದ ಯತಿಧರ್ಮವು ಸಂತೋಷವೇ ಮೂಲವಾಗಿ ಉಳ್ಳದ್ದು. ತ್ಯಾಗವು ಅದರ ಸ್ವರೂಪವು. ಜ್ಞಾನವು ಅದರ ಅನುಷ್ಠಾನವು. ನಿತ್ಯವೂ ಅಪವರ್ಗವೆಂಬ ಗತಿಯುಳ್ಳದ್ದು. ಸರ್ವಸಾಧಾರಣವಾದ ಇತರ ಆಶ್ರಮಗಳಲ್ಲಿಯೇ ಇರಲಿ, ಸಂನ್ಯಾಸಾಶ್ರಮದಲ್ಲಿಯೇ ಇರಲಿ, ಅವನಲ್ಲಿರುವ ವೈರಾಗ್ಯಬಲಕ್ಕೆ ಅನುಸಾರವಾಗಿ ಧರ್ಮವನ್ನು ಪುರುಷನು ಉಪಾಸನೆ ಮಾಡಬಲ್ಲನು.

ಗಚ್ಛತೋ ಗಚ್ಛತಃ ಕ್ಷೇಮಂ ದುರ್ಬಲೋಽತ್ರಾವಸೀದತಿ ।
ಬ್ರಹ್ಮಣಃ ಪದಮನ್ವಿಚ್ಛನ್ ಸಂಸಾರಾನ್ಮುಚ್ಯತೇ ಶುಚಿಃ ॥೩೦॥

ಈ ಧರ್ಮವನ್ನು ಅನುಷ್ಠಾನ ಮಾಡುತ್ತಾ ಮಾಡುತ್ತಾ ಸಾಗುತ್ತಿರುವವನು ಕ್ಷೇಮವನ್ನು ಹೊಂದುತ್ತಾನೆ. ಧರ್ಮಾನುಷ್ಠಾನವನ್ನು ಆಚರಿಸಲು ದುರ್ಬಲನಾದವನು ದುಃಖವನ್ನು ಹೊಂದುತ್ತಾನೆ. ಗುಣಪರಿಪೂರ್ಣನಾದ ಭಗವಂತನ ಸ್ಥಾನವನ್ನು

ಬಯಸುವವನು ಧರ್ಮವನ್ನು ಆಚರಿಸುತ್ತಾ ಇದ್ದಲ್ಲಿ ಶುಚಿಯಾದ ಆ ವ್ಯಕ್ತಿಯು ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಸ್ಯೂಮರಶ್ಮಿಃ

ಯೇ ಭುಂಜತೇ ಯೇ ದದತೇ ಯಜಂತೇಧೀಯತೇ ಚ ಯೇ ।
ಮಾತ್ರಾಭಿರ್ಧರ್ಮಲಬ್ಧಾಭಿರ್ಯೇ ವಾ ತ್ಯಾಗಂ ಸಮಾಶ್ರಿತಾಃ ॥೩೧॥

ಏತೇಷಾಂ ಪ್ರೇತ್ಯಭಾವೇ ತು ಕತಮಃ ಸ್ವರ್ಗಜಿತ್ತಮಃ ।
ಏತದಾಚಕ್ಷ್ವ ಮೇ ಬ್ರಹ್ಮನ್ಯಥಾತಥ್ಯೇನ ಪೃಚ್ಛತಃ ॥೩೨॥

ಬ್ರಹ್ಮಸ್ವರೂಪನೇ, ಯಾರು ತಮಗೆ ದೊರೆಯುವ ಐಶ್ವರ್ಯದಿಂದ ಭೋಗಗಳನ್ನು ಅನುಭವಿಸುತ್ತಾರೋ, ದಾನ ಮಾಡುತ್ತಾರೋ, ಯಜ್ಞ ಮಾಡುತ್ತಾರೋ, ಅಧ್ಯಯನ ಮಾಡುತ್ತಾರೋ, ತ್ಯಾಗವನ್ನೇ ಆಶ್ರಯಿಸುತ್ತಾರೋ ಇವರಲ್ಲಿ ಮರಣಾನಂತರ ಯಾರು ಸ್ವರ್ಗವನ್ನು ಜಯಿಸಿದವರಲ್ಲಿ ಶ್ರೇಷ್ಠರೆನಿಸಿಕೊಳ್ಳುತ್ತಾರೆ? ಪ್ರಶ್ನಿಸುತ್ತಿರುವ ನನಗೆ ಯಥಾರ್ಥವಾಗಿ ಇದನ್ನು ಬೋಧಿಸು.

ಕಪಿಲಃ

ಪರಿಗ್ರಹಾಃ ಶುಭಾಃ ಸರ್ವೇ ಗುಣತೋಽಭ್ಯುದಯಾಶ್ಚ ಯೇ ।
ನ ತು ತ್ಯಾಗಸುಖಂ ಪ್ರಾಪ್ತಾ ಏತತ್ತ್ವಮಪಿ ಪಶ್ಯಸಿ ॥೩೩॥

ಎಲ್ಲಾ ಪರಿಗ್ರಹಗಳಿಂದ ಕೂಡಿ ಗೃಹಸ್ಥವೃತ್ತಿಯಲ್ಲಿ ಇರುವವನೂ ಕೂಡ ಸಮಸ್ತ ಅಭ್ಯುದಯಗಳನ್ನು ಹೊಂದುತ್ತಾನಾದರೂ ಸಂನ್ಯಾಸದಿಂದ ಉಂಟಾಗುವ ಸುಖವನ್ನು ಹೊಂದಲಾರನು. ಇದನ್ನು ನೀನು ತಿಳಿಯಬಹುದು.

ಸ್ಯೂಮರಶ್ಮಿಃ

ಭವಂತೋ ಜ್ಞಾನನಿಷ್ಠಾ ವೈ ಗೃಹಸ್ಥಾಃ ಕರ್ಮನಿಶ್ಚಯಾಃ ।
ಆಶ್ರಮಾಣಾಂ ಚ ಸರ್ವೇಷಾಂ ನಿಷ್ಠಾಯಾಮೈಕ್ಯಮುಚ್ಯತೇ ॥೩೪॥

ಏಕತ್ವೇ ಚ ಪೃಥಕ್ತ್ವೇ ಚ ವಿಶೇಷೋ ನಾನ್ಯ ಉಚ್ಯತೇ ।
ತದ್ಯಥಾವದ್ಯಥಾನ್ಯಾಯಂ ಭಗವಾನ್ ಪ್ರಬ್ರವೀತು ಮೇ ॥೩೫॥

ನೀವು ಮುಕ್ತಿಗಾಗಿ ಜ್ಞಾನವನ್ನೇ ಉಪಾಯವಾಗಿ ಆಶ್ರಯಿಸಿದವರು. ಗೃಹಸ್ಥರೂ ಆಗಿರುತ್ತೀರಿ. ಕರ್ಮಗಳಲ್ಲಿ ನಿಮಗೆ ನಂಬಿಕೆಯಿದೆ. ಎಲ್ಲಾ ಆಶ್ರಮಗಳಿಗೂ ಸಮಾನವಾಗಿ ಮೋಕ್ಷವೇ ಕೊನೆಯ ಫಲವೆಂದು ಹೇಳುತ್ತಿದ್ದೀರಿ. ಹೀಗೆ ಫಲದಲ್ಲಿ ಏಕತ್ವವಿದೆ. ಆಚರಣೆಗಳಲ್ಲಿ ಭಿನ್ನತೆಗಳಿವೆ. ಅದರ ನಿಜವಾದ ಪರಸ್ಪರ ಭೇದವೇನೆಂಬುದನ್ನು ತಿಳಿಯದವನಾಗಿದ್ದೇನೆ. ಅದರ ವಾಸ್ತವಾಂಶವನ್ನು ತಿಳಿಸಬೇಕು.

ಕಪಿಲಃ

ಶರೀರಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ ।
ಪಕ್ವೇ ಕಷಾಯೇ ವಮನೈ ರಸಜ್ಞಾನೇನ ತಿಷ್ಠತಿ ॥೩೬॥

ಕರ್ಮಗಳು ಶರೀರವನ್ನು ಶುದ್ಧಿ ಮಾಡುತ್ತವೆ. ಜ್ಞಾನವೆಂಬುದೇ ಉತ್ತಮವಾದ ಗತಿ. ಅರ್ಥಾತ್ ಮೋಕ್ಷಸಾಧನವೆನಿಸಿದೆ. ಮನಸ್ಸು ಕಲ್ಮಶವನ್ನು ಪರಿಹರಿಸಿಕೊಂಡು ಪಕ್ವವಾದಾಗ ಜ್ಞಾನವು ಉಂಟಾಗುತ್ತದೆ.

ವ್ಯಾಖ್ಯಾನ ವಿಶೇಷ– ಕರ್ಮದ ಕಷಾಯವು ನೀಗುತ್ತಿರಲು 'ರಸಜ್ಞಾನೇನ ತಿಷ್ಠತಿ' ಎಂದರೆ ರಸನೆನಿಸಿದ ಭಗವಂತನಲ್ಲಿ ಬುದ್ಧಿಯು ನೆಲೆಗೊಳ್ಳುತ್ತದೆ ಎಂದು ವ್ಯಾಖ್ಯಾನಿಸಬಹುದು.

ಆನೃಶಂಸ್ಯಂ ಕ್ಷಮಾ ಶಾಂತಿರಹಿಂಸಾ ಸತ್ಯಮಾರ್ಜವಮ್ ।
ಅದ್ರೋಹೋ ನಾಭಿಮಾನಶ್ಚ ಹ್ರೀಸ್ತಿತಿಕ್ಷಾ ಶಮಸ್ತಥಾ ॥೩೭॥

ಪಂಥಾನೋ ಬ್ರಹ್ಮಣಸ್ತ್ವೇತೇ ಏತೈಃ ಪ್ರಾಪ್ನೋತಿ ಯತ್ ಪರಮ್ ।
ತದ್ ವಿದ್ವಾನನುಬುದ್ಧ್ಯೇತ ಮನಸಾ ಕರ್ಮನಿಶ್ಚಯಮ್ ॥೩೮॥

ದಯೆ, ಕ್ಷಮೆ, ಶಾಂತಿ, ಅಹಿಂಸೆ, ಸತ್ಯನಿಷ್ಠೆ, ಸರಳತೆ, ಅದ್ರೋಹ, ಅಭಿಮಾನಶೂನ್ಯತೆ, ಲಜ್ಜೆ, ಸಹನೆ, ಶಮ, ಇವುಗಳು ಪರಬ್ರಹ್ಮನ ಪ್ರಾಪ್ತಿಗೆ ಮಾರ್ಗಗಳಾಗಿವೆ. ಇವುಗಳ ಆಚರಣೆಯಿಂದ ಮನುಷ್ಯನು ಭಗವಂತನ ಪಾದವನ್ನು ಹೊಂದುತ್ತಾನೆ. ಕರ್ಮಾನುಷ್ಠಾನಗಳ ಪರಿಣಾಮವಾಗಿ ಈ ಗುಣಗಳು ತನ್ನಲ್ಲಿ ಮೈಗೂಡಿವೆಯೇ ಎಂಬುದನ್ನು ವಿದ್ವಾಂಸನು ಮನಸ್ಸಿನಿಂದ ನಿಶ್ಚಯ ಮಾಡಿಕೊಳ್ಳಬೇಕು.

ಯಾಂ ವಿಪ್ರಾಃ ಸರ್ವತಃ ಶಾಂತಾ ವಿಶುದ್ಧಾ ಜ್ಞಾನನಿಶ್ಚಯಾಃ ।
ಗತಿಂ ಗಚ್ಛಂತಿ ಸಂತುಷ್ಟಾಸ್ತಾಮಾಹುಃ ಪರಮಾಂ ಗತಿಮ್ ॥೩೯॥

ಸಮಸ್ತ ಪ್ರಕಾರದಿಂದಲೂ ಶಾಂತರಾಗಿ, ಶುದ್ಧರಾಗಿ, ಜ್ಞಾನನಿಷ್ಠರಾಗಿ ಇರುವ ವಿಪ್ರರು ಯಾವ ಗತಿಯನ್ನು ಹೊಂದುತ್ತಾರೋ ಅದನ್ನೇ ಪರಮಗತಿ ಎನ್ನುತ್ತಾರೆ.

ವೇದಾಂಶ್ಚ ವೇದಿತವ್ಯಂ ಚ ವಿದಿತ್ವಾ ಚ ಯಥಾಸ್ಥಿತಿ ।
ಏವಂ ವೇದವಿದಿತ್ಯಾಹುರತೋನ್ಯೋ ವಾತರೇಟಕಃ ॥೪೦॥

ವೇದಗಳನ್ನು, ವೇದಗಳಿಂದ ತಿಳಿಯುವ ಪರಬ್ರಹ್ಮ ವಸ್ತುವನ್ನು ಯಾವನು ಯಥಾರ್ಥವಾಗಿ ತಿಳಿದಿರುತ್ತಾನೋ ಅವನನ್ನು ವೇದವಿದನೆಂದು ಹೇಳುತ್ತಾರೆ. ಬ್ರಹ್ಮನನ್ನು ತಿಳಿಯದೆ ಇರುವ ವ್ಯಕ್ತಿಯು ತಿದಿಯಂತೆ ಕೇವಲ ಉಸಿರಾಟ ಮಾಡುವ ವ್ಯಕ್ತಿ ಎನಿಸಿದ್ದಾನೆ.

ಸರ್ವಂ ವಿದುರ್ವೇದವಿದೋ ವೇದೇ ಸರ್ವಂ ಪ್ರತಿಷ್ಠಿತಮ್ ।
ವೇದೇ ಹಿ ನಿಷ್ಠಾ ಸರ್ವಸ್ಯ ಯದ್ಯದಸ್ತಿ ಚ ನಾಸ್ತಿ ಚ ॥೪೧॥

ವೇದವನ್ನು ತಿಳಿದವರು ಎಲ್ಲವನ್ನೂ ತಿಳಿದಿರುತ್ತಾರೆ. ಕಾರಣ ವೇದದಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿದೆ. ವ್ಯಕ್ತಾವ್ಯಕ್ತ ಸಮಸ್ತವೂ ವೇದದಲ್ಲಿಯೇ ನಿರೂಪಿತವಾಗಿವೆ.

ಏಷೈವ ನಿಷ್ಠಾ ಸರ್ವಸ್ಯ ಯದ್ಯದಸ್ತಿ ಚ ನಾಸ್ತಿ ಚ ।
ಏತದಂತಂ ಚ ಮಧ್ಯಂ ಚ ಸಚ್ಚಾಸಚ್ಚ ವಿಜಾನತಃ ॥೪೨॥

ಯಾವ ವಸ್ತುವು ಸರ್ವಕಾಲದಲ್ಲಿಯೂ ಅಬಾಧಿತವಾಗಿ ಇದೆ, ಯಾವುದು ಇಲ್ಲ ಎಂಬುದನ್ನು ಪ್ರತಿಪಾದಿಸುವುದೇ ವೇದಗಳ ನಿಷ್ಠೆಯಾಗಿದೆ. ಜ್ಞಾನಿಗಳು ವೇದ ಪ್ರತಿಪಾದ್ಯನಾದ ಭಗವಂತನೇ ಜಗತ್ತಿನ ಆದಿ-ಮಧ್ಯಾಂತನೆಂದು ತಿಳಿದಿರುತ್ತಾರೆ.

ಸಮಸ್ತತ್ಯಾಗ ಇತ್ಯೇವ ಶಮ ಇತ್ಯೇವ ನಿಷ್ಠಿತಃ ।
ಸಂತೋಷ ಇತ್ಯತ್ರ ಶುಭಮಪವರ್ಗೇ ಪ್ರತಿಷ್ಠಿತಮ್ ॥೪೩॥

ಎಲ್ಲವನ್ನೂ ತ್ಯಜಿಸಿ ಭಗವಂತನಲ್ಲಿ ಬುದ್ಧಿಯನ್ನು ಹೊಂದುವುದೇ ಶಮ ಎನಿಸಿದೆ. ಶುಭ-ಸಂತೋಷ ಎಂಬುದು ಮೋಕ್ಷದಲ್ಲಿ ಪ್ರತಿಷ್ಠಿತವಾಗಿದೆ.

ಋತಂ ಸತ್ಯಂ ವಿದಿತಂ ವೇದಿತವ್ಯಂ
ಸರ್ವಸ್ಯಾತ್ಮಾ ಜಂಗಮಂ ಸ್ಥಾವರಂ ಚ ।

ಸರ್ವಂ ಸುಖಂ ಯಚ್ಛಿವಮುತ್ತಮಂ ಚ
ಬ್ರಹ್ಮಾವ್ಯಕ್ತಂ ಪ್ರಭವಶ್ಚಾವ್ಯಯಶ್ಚ ॥೪೪॥

ಪರಬ್ರಹ್ಮವಸ್ತುವು ಋತ, ಸತ್ಯ ಎನಿಸಿದೆ. ತಿಳಿಯಲು ಯೋಗ್ಯವಾಗಿದೆ, ತಿಳಿಯಲ್ಪಟ್ಟದ್ದೂ ಆಗಿದೆ. ಸಮಸ್ತ ಪ್ರಾಣಿಗಳಿಗೂ ಅಂತರ್ಯಾಮಿಯಾಗಿದೆ. ಸ್ಥಾವರ-ಜಂಗಮಗಳಲ್ಲಿ ನಿಯಾಮಕವಾಗಿದೆ. ಸಂಪೂರ್ಣ ಸುಖಸ್ವರೂಪವೂ ಎಲ್ಲರ ಉತ್ಪತ್ತಿಗೂ ಕಾರಣಭೂತವಾಗಿದೆ. ಅವಿನಾಶಿಯೂ ಆಗಿದೆ.

ತೇಜಃ ಕ್ಷಮಾ ಶಾಂತಿರನಾಮಯಂ ಶುಭಂ
ತಥಾವಿಧಂ ವ್ಯೋಮ ಸನಾತನಂ ಧ್ರುವಮ್ ।
ಏತೈಃ ಶಬ್ದೈರ್ಗಮ್ಯತೇ ಬುದ್ಧಿನೇತ್ರೈ-
ಸ್ತಸ್ಮೈ ನಮೋ ಬ್ರಹ್ಮಣೇ ಬ್ರಾಹ್ಮಣಾಯ ॥೪೫॥

ಆಕಾಶದಂತೆ ನಿಸ್ಸಂಗನಾಗಿರುವ, ಸನಾತನನಾದ, ಶಾಶ್ವತನಾದ ಪರಬ್ರಹ್ಮನನ್ನು ತೇಜಸ್ಸು, ಕ್ಷಮೆ, ಶಾಂತಿ, ಆರೋಗ್ಯ, ಶುಭಕಾಮನೆ ಇವೆಲ್ಲದರ ಮೂಲಕವಾಗಿ ಜ್ಞಾನದಲ್ಲೇ ಬುದ್ಧಿಯುಳ್ಳ ಪುರುಷರು ಹೊಂದುತ್ತಾರೆ. ಅಂತಹ ಪರಬ್ರಹ್ಮ ವಸ್ತುವಿಗೆ, ಆ ಪರಬ್ರಹ್ಮ ವಸ್ತುವನ್ನು ಕಂಡುಕೊಂಡ ಬ್ರಾಹ್ಮಣರಿಗೆ ನಮಸ್ಕಾರವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

॥ ಗೋಕಾಪಿಲೇಯಂ ಸಮಾಪ್ತಮ್ ॥

★ ★ ★ ★ ★

ನೂರ ಆರನೆಯ ಅಧ್ಯಾಯ

ಧರ್ಮಾರ್ಥಕಾಮಗಳಲ್ಲಿ ಧರ್ಮವೇ ಶ್ರೇಷ್ಠವೆಂದು ನಿರೂಪಿಸಲು ಭೀಷ್ಮರು ಯುಧಿಷ್ಠಿರನಿಗೆ ಕುಂಡಧಾರನೆಂಬ ಬ್ರಾಹ್ಮಣನ ಕಥೆಯನ್ನು ನಿರೂಪಿಸಿದುದು.

ಯುಧಿಷ್ಠಿರಃ

ಧರ್ಮಮರ್ಥಂ ಚ ಕಾಮಂ ಚ ವೇದಾಃ ಶಂಸಂತಿ ಭಾರತ ।
ಕಸ್ಯ ಲಾಭೋ ವಿಶಿಷ್ಟೋಽತ್ರ ತನ್ಮೇ ಬ್ರೂಹಿ ಪಿತಾಮಹ ॥೧॥

ಭಾರತನೇ, ಪಿತಾಮಹನೇ, ಧರ್ಮಾರ್ಥ ಕಾಮಗಳನ್ನು ವೇದಗಳು ಪ್ರಶಂಸಿಸುತ್ತಿವೆ. ಈ ಮೂರರಲ್ಲಿ ಯಾವುದನ್ನು ಹೊಂದುವುದು ಶ್ರೇಷ್ಠವಾದುದು? ನನಗೆ ಇದನ್ನು ತಿಳಿಸು.

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಇತಿಹಾಸಂ ಪುರಾತನಮ್ ।
ಕುಂಡಧಾರೇಣ ಯತ್ ಪ್ರೀತ್ಯಾ ಭಕ್ತಾಯೋಪಕೃತಂ ಪುರಾ ॥೨॥

ಈ ವಿಷಯದಲ್ಲಿ ಕುಂಡಧಾರ ಎಂಬ ವ್ಯಕ್ತಿಯು ತನ್ನ ಭಕ್ತನಿಗೆ ಹಿಂದೆ ಮಾಡಿದ ಉಪಕಾರವನ್ನು ನಿರ್ದೇಶಿಸುವ ಇತಿಹಾಸವೊಂದಿದೆ. ಇದನ್ನೇ ನಿನಗೆ ತಿಳಿಸುತ್ತೇನೆ.

ಅಧನೋ ಬ್ರಾಹ್ಮಣಃ ಕಶ್ಚಿತ್ ಕಾಮಾದ್ಧರ್ಮಮವೈಕ್ಷತ ।
ಯಜ್ಞಾರ್ಥಂ ಸ ತತೋಽರ್ಥಾರ್ಥೀ ತಪೋತಪ್ಯತ ದಾರುಣಮ್ ॥೩॥

ಹಿಂದೆ ದರಿದ್ರನಾದ ಬ್ರಾಹ್ಮಣನೊಬ್ಬನು ಅರ್ಥ-ಕಾಮಗಳಲ್ಲಿಯೇ ಆಸಕ್ತನಾಗಿದ್ದನು. ಅದಕ್ಕಾಗಿ ಯಜ್ಞಾದಿ ಕರ್ಮಗಳನ್ನು ಮಾಡುವುದಕ್ಕೂ, ಅದಕ್ಕಾಗಿ ಹಣವನ್ನು ಸಂಪಾದಿಸುವುದಕ್ಕೂ ತಪಸ್ಸನ್ನು ಮಾಡುತ್ತಿದ್ದನು.

ಸ ನಿಶ್ಚಯಮಥೋ ಕೃತ್ವಾ ಪೂಜಯಾಮಾಸ ದೇವತಾಃ ।
ಭಕ್ತ್ಯಾ ನ ಚೈವಾಧ್ಯಗಚ್ಛದ್ಧನಂ ಸಂಪೂಜ್ಯ ದೇವತಾಃ ॥೪॥

ಯಜ್ಞಾರ್ಥವಾಗಿ ಹಣವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿದ ಆ ಬ್ರಾಹ್ಮಣನು ಭಕ್ತಿಯಿಂದ ದೇವತೆಯನ್ನು ಪೂಜಿಸಿದನು. ಆದರೆ ಭಕ್ತಿಯಿಂದ ದೇವತೆಯನ್ನು ಪೂಜಿಸಿದರೂ ತಾನು ಅಪೇಕ್ಷಿಸಿದ ಧನವನ್ನು ಹೊಂದಲಿಲ್ಲ.

ತತಶ್ಚಿಂತಾಂ ಪುನಃ ಪ್ರಾಪ್ತಃ ಕತಮದ್ ದೈವತಂ ನು ತತ್ ।
ಯನ್ಮೇ ದ್ರುತಂ ಪ್ರಸೀದೇತ ಮಾನುಷೈರಜಡೀಕೃತಮ್ ॥೫॥

ಬಳಿಕ ತನ್ನೊಳಗೆ ತಾನು ಚಿಂತಾಕುಲನಾಗಿ 'ಅಯ್ಯೋ! ನಾನು ಇನ್ನು ಯಾವ ದೇವತೆಯನ್ನು ತಾನೇ ಪೂಜಿಸಲಿ? ಇದುವರೆಗೆ ಮನುಷ್ಯರಿಂದ ಪೀಡಿಸಲ್ಪಡದೆ ಇರುವ ನನ್ನಲ್ಲಿ ಬೇಗ ಪ್ರಸನ್ನವಾಗುವ ದೇವತೆ ಯಾರು? ಯಾರು ನನ್ನಲ್ಲಿ ಬೇಗ ಪ್ರಸನ್ನರಾಗುತ್ತಾರೆ?' ಎಂದು ಯೋಚಿಸುತ್ತಿದ್ದನು.

ಅಥ ಸೌಮ್ಯೇನ ವಪುಷಾ ದೇವಾನುಚರಮಂತಿಕೇ ।
ಪ್ರತ್ಯಪಶ್ಯಜ್ಜಲಧರಂ ಕುಂಡಧಾರಮವಸ್ಥಿತಮ್ ॥೬॥

ಹೀಗೆ ಅವನು ಯೋಚಿಸುತ್ತಿರುವಾಗಲೇ ಅವನ ಸಮೀಪದಲ್ಲಿ ದೇವತೆಗಳ ಅನುಚರನಾದ ಕುಂಡಧಾರನೆಂಬ ಮೇಘಪುರುಷನು ಕಾಣಿಸಿದನು.

ವ್ಯಾಖ್ಯಾನ ವಿಶೇಷ– ಕುಂಡಧಾರನು ಮೇಘಾಭಿಮಾನಿಯಾದ ಕುಬೇರನ ಅನುಚರನಾದ ಯಕ್ಷ ಅಥವಾ ಗಂಧರ್ವನೆಂದು ತಿಳಿಯಬೇಕು.

ದೃಷ್ಟ್ವೈವ ತಂ ಮಹಾತ್ಮಾನಂ ತಸ್ಯ ಭಕ್ತಿರಜಾಯತ ।
ಅಯಂ ಮೇ ದಾಸ್ಯತಿ ಶ್ರೇಯೋ ವಪುರೇತದ್ಧಿ ತಾದೃಶಮ್ ॥೭॥

ಆ ಮಹಾತ್ಮನಾದ, ಮಹಾಬಾಹುವಾದ ಮೇಘಪುರುಷನನ್ನು ಕಂಡ ಕೂಡಲೇ ಬ್ರಾಹ್ಮಣನಿಗೆ ಅವನಲ್ಲಿ ಭಕ್ತಿ ಹುಟ್ಟಿತು. ಇವನ ಶರೀರವನ್ನು ನೋಡಿದರೆ ಇವನು ನನಗೆ ಶ್ರೇಯಸ್ಸನ್ನು ಕೈಗೂಡಿಸಿಕೊಡುತ್ತಾನೆಂದು ತೋರುತ್ತಿದೆ ಎಂದು ಮನಸ್ಸಿನಲ್ಲಿ ಭಾವಿಸಿದನು.

ಸನ್ನಿಕೃಷ್ಟಶ್ಚ ದೇವಸ್ಯ ನ ಚಾನ್ಯೈರ್ಮಾನುಷೈರ್ವೃತಃ ।
ಏಷ ಮೇ ದಾಸ್ಯತಿ ಧನಂ ಪ್ರಭೂತಂ ಶೀಘ್ರಮೇವ ಚ ॥೮॥

ಇವನು ದೇವತೆಗಳ ಗುಂಪಿನವನೆಂದು ಕಾಣಿಸುತ್ತಿದೆ. ಇದುವರೆಗೆ ಮನುಷ್ಯರು ಯಾರೂ ಇವನನ್ನು ವರದಿಂದ ಪೀಡಿಸಿದಂತೆ ತೋರುವುದಿಲ್ಲ. ಇವನು ಶೀಘ್ರದಲ್ಲಿಯೇ ನನಗೆ ಅಪಾರವಾದ ಧನವನ್ನು ನೀಡಬಹುದು ಎಂದು ಭಾವಿಸಿದನು.

ತತೋ ಧೂಪೈಶ್ಚ ಗಂಧೈಶ್ಚ ಮಾಲ್ಯೈ ರುಚ್ಚಾವಚೈರಪಿ ।
ಬಲಿಭಿರ್ವಿವಿಧೈಶ್ಚಾಪಿ ಪೂಜಯಾಮಾಸ ತಂ ದ್ವಿಜಃ ॥೯॥

ಕೂಡಲೇ ಗಂಧ-ಧೂಪಾದಿಗಳನ್ನು, ನಾನಾ ವಿಧವಾದ ಬಲಿಗಳನ್ನು, ಮಾಲಾದಿಳನ್ನು ಅರ್ಪಿಸಿ ಅವನನ್ನು ಆ ಬ್ರಾಹ್ಮಣನು ಚೆನ್ನಾಗಿ ಪೂಜಿಸಿದನು.

ತತಃ ಸ್ವಲ್ಪೇನ ಕಾಲೇನ ತುಷ್ಟೋ ಜಲಧರಸ್ತದಾ ।
ತಸ್ಯೋಪಕಾರೇ ನಿಯತಾಮಿಮಾಂ ವಾಚಮುವಾಚ ಹ ॥೧೦॥

ಈ ಬ್ರಾಹ್ಮಣನ ಪೂಜೆಗೆ ಸ್ವಲ್ಪವೇ ಸಮಯದಲ್ಲಿ ಕುಂಡಧಾರನು ಸಂತುಷ್ಟನಾಗಿ ತನ್ನಲ್ಲಿ ತಾನು - 'ಇವನಿಗೆ ನಾನು ಪ್ರತ್ಯುಪಕಾರವನ್ನು ಮಾಡಲೇಬೇಕು' ಎಂಬ ಭಾವನೆಯಿಂದ ಈ ಮಾತುಗಳನ್ನು ಬ್ರಾಹ್ಮಣನನ್ನು ಕುರಿತು ಹೇಳಿದನು.

ಬ್ರಹ್ಮಘ್ನೇ ಚ ಸುರಾಪೇ ಚ ಚೋರೇ ಭಗ್ನವ್ರತೇ ತಥಾ ।
ನಿಷ್ಕೃತಿರ್ವಿಹಿತಾ ಸದ್ಭಿಃ ಕೃತಘ್ನೇ ನಾಸ್ತಿ ನಿಷ್ಕೃತಿಃ ॥೧೧॥

ಬ್ರಹ್ಮಹತ್ಯೆಯನ್ನು ಮಾಡಿದವನಿಗೆ, ಸುರಾಪಾನವನ್ನು ಮಾಡಿದವನಿಗೆ, ಕಳ್ಳತನ ಮಾಡಿದವನಿಗೆ, ವ್ರತಭಂಗವನ್ನು ಮಾಡಿದವನಿಗೆ ಸತ್ಪುರುಷರು ಪ್ರಾಯಶ್ಚಿತ್ತವನ್ನು ಹೇಳುತ್ತಾರೆ. ಆದರೆ ಕೃತಘ್ನನಿಗೆ ಪ್ರಾಯಶ್ಚಿತ್ತವೇ ಇರುವುದಿಲ್ಲ.

ವ್ಯಾಖ್ಯಾನ ವಿಶೇಷ– ಬ್ರಾಹ್ಮಣನೇ, ನೀನು ಮಾಡಿದ ಪೂಜೆಗೆ ನಾನು ಸ್ವಲ್ಪ ಉಪಕಾರವನ್ನು ಮಾಡಿದರೆ ನಾನು ಕೃತಘ್ನನೇ ಆಗುತ್ತೇನೆ. ಆದ್ದರಿಂದ ನಿನಗೆ ಮೋಕ್ಷವೆಂಬ ಮಹೋಪಕಾರವನ್ನು ಮಾಡುವ ಪ್ರಯತ್ನವನ್ನೇ ಮಾಡುತ್ತೇನೆ ಎಂದು ಭಾವ.

ಆಶಾಯಾಸ್ತನಯೋಽಧರ್ಮಃ ಕ್ರೋಧೋಽಸೂಯಾಸುತಃ ಸ್ಮೃತಃ ।
ಪುತ್ರೋ ಲೋಭೋ ನಿಕೃತ್ಯಾಸ್ತು ಕೃತಘ್ನೋ ನಾರ್ಹತಿ ಪ್ರಜಾಮ್ ॥೧೨॥

ಆಸೆಯೆಂಬ ಸ್ತ್ರೀಯಿಂದ ಹುಟ್ಟಿದ ಮಗನೇ ಅಧರ್ಮ. ಅಸೂಯೆಯೆಂಬ ಸ್ತ್ರೀಯಿಂದ ಹುಟ್ಟಿದ ಮಗನೇ ಕ್ರೋಧನು. ಶಾಠ್ಯದಿಂದ ಹುಟ್ಟಿದ ಮಗನೇ ಲೋಭಿಯು. ಆದರೆ ಕೃತಘ್ನನು ಸಂತಾನವನ್ನು ಪಡೆಯಲು ಅರ್ಹನೇ ಆಗಿರುವುದಿಲ್ಲ.

ತತಃ ಸ ಬ್ರಾಹ್ಮಣಃ ಸ್ವಪ್ನೇ ಕುಂಡಧಾರಸ್ಯ ತೇಜಸಾ ।
ಅಪಶ್ಯತ್ ಸರ್ವಭೂತಾನಿ ಕುಶೇಷು ಶಯಿತಸ್ತದಾ ॥೧೩॥

ಅನಂತರ ಕುಂಡಧಾರನು ತನ್ನ ತೇಜಸ್ಸಿನ ಪ್ರಭಾವದಿಂದ ಬ್ರಾಹ್ಮಣನನ್ನು ದರ್ಭೆಗಳ ಮೇಲೆ ಮಲಗುವಂತೆ ಮಾಡಿದನು. ನಂತರ ಮಲಗಿದ ಬ್ರಾಹ್ಮಣನು ತನ್ನ ಸ್ವಪ್ನದಲ್ಲಿ ಸಕಲ ಪ್ರಾಣಿಗಳನ್ನು ಕಂಡನು.

ಶಮೇನ ತಪಸಾ ಚೈವ ಭಕ್ತ್ಯಾ ಚ ನಿರುಪಸ್ಕೃತಃ ।
ಶುದ್ಧಾತ್ಮಾ ಬ್ರಾಹ್ಮಣೋ ರಾತ್ರೌ ನಿದರ್ಶನಮಪಶ್ಯತ ॥೧೪॥

ಶಮ, ದಮ, ತಪಸ್ಸು, ಭಕ್ತಿ ಇವುಗಳಿಂದ ಸಂಪನ್ನನಾಗಿದ್ದ, ಭೋಗಾದಿಗಳಿಂದ ರಹಿತನಾಗಿದ್ದ, ಶುದ್ಧಾತ್ಮನಾದ ಬ್ರಾಹ್ಮಣನು ಆ ರಾತ್ರಿಯಲ್ಲಿ ಕುಂಡಧಾರನು ಹೇಳಿದ ಮಾತಿಗೆ ನಿದರ್ಶನವಾದ ಒಂದು ದೃಶ್ಯವನ್ನು ನೋಡಿದನು.

ಮಣಿಭದ್ರಂ ಸ ತತ್ರಸ್ಥಂ ದೇವತಾನಾಂ ಮಹಾದ್ಯುತಿಮ್ ।
ಅಪಶ್ಯತ ಮಹಾತ್ಮಾನಂ ವ್ಯಾದಿಶಂತಂ ಯುಧಿಷ್ಠಿರ ॥೧೫॥

ಮಹಾತ್ಮನಾದ ಮಣಿಭದ್ರನು ಸ್ವಪ್ನದಲ್ಲಿ ಗೋಚರನಾಗಿದ್ದು, ಬೇಡುವವರ ಪ್ರಾರ್ಥನೆಗಳನ್ನು ದೇವತೆಗಳಿಗೆ ಸಲ್ಲಿಸುತ್ತಿರುವ ದೃಶ್ಯವನ್ನು, ದೇವತೆಗಳು ಯಾಚಕರಿಗೆ ಅನುಗ್ರಹಿಸುವ ಫಲಗಳನ್ನು, ಯಾಚಕರಿಗೆ ಸಮರ್ಪಿಸುತ್ತಿದ್ದುದನ್ನು ಬ್ರಾಹ್ಮಣನು ಕನಸಿನಲ್ಲಿ ಕಂಡನು.

ತತ್ರ ದೇವಾಃ ಪ್ರಯಚ್ಛಂತಿ ರಾಜ್ಯಾನಿ ಚ ಧನಾನಿ ಚ ।
ಶುಭೈಃ ಕರ್ಮಭಿರಾರಬ್ಧಾಃ ಪ್ರಚ್ಛಿದಂತ್ಯಶುಭೇಷು ಚ ॥೧೬॥

ಆ ಸ್ವಪ್ನದಲ್ಲಿ ದೇವತೆಗಳು ಯಾಚಕರಿಗೆ ರಾಜ್ಯಗಳನ್ನೂ, ಧನಗಳನ್ನೂ, ಅವರ ಕರ್ಮಫಲಕ್ಕನುಗುಣವಾಗಿ ನೀಡುತ್ತಿದ್ದರು. ಯಾಚಕರು ತಮ್ಮ ಅಶುಭಕರ್ಮಗಳ ಫಲಗಳನ್ನು ಅನುಭವಿಸಲು ಬಂದಾಗ ಆ ದೇವತೆಗಳು ತಾವು ನೀಡಿದ ರಾಜ್ಯ-ಧನಾದಿಗಳನ್ನು ಕಸಿದುಕೊಳ್ಳುತ್ತಿದ್ದರು.

ಪಶ್ಯತಾಮಥ ಯಕ್ಷಾಣಾಂ ಕುಂಡಧಾರೋ ಮಹಾದ್ಯುತಿಃ ।
ನಿಷ್ಪತ್ಯ ಪತಿತೋ ಭೂಮೌ ದೇವಾನಾಂ ಭರತರ್ಷಭ ॥೧೭॥

ಈ ರೀತಿಯಾಗಿ ಯಕ್ಷರೆಲ್ಲರೂ ನೋಡುತ್ತಿರುವಂತೆ ಮಹಾಕಾಂತಿಯುಕ್ತನಾದ ಕುಂಡಧಾರನು ದೇವತೆಗಳ ಮುಂದೆ ಭೂಮಿಯ ಮೇಲೆ ಬಿದ್ದನು.

ತತಸ್ತು ದೇವವಚನಾನ್ಮಣಿಭದ್ರೋ ಮಹಾಯಶಾಃ ।
ಉವಾಚ ಪತಿತಂ ಭೂಮೌ ಕುಂಡಧಾರ ಕಿಮಿಷ್ಯತೇ ॥೧೮॥

ಬಳಿಕ ದೇವತೆಗಳ ಮಾತಿನಂತೆ ಮಹಾತ್ಮನಾದ ಮಣಿಭದ್ರನು ಕುಂಡಧಾರನನ್ನು ಕುರಿತು ಭೂಮಿಯ ಮೇಲೆ ಬಿದ್ದಿರುವ ನನ್ನನ್ನು ಏನು ಅಪೇಕ್ಷಿಸುತ್ತಿದ್ದಿ? ಎಂದು ಕೇಳಿದನು.

ಕುಂಡಧಾರಃ

ಯದಿ ಪ್ರಸನ್ನಾ ದೇವಾ ಮೇ ಭಕ್ತೋಽಯಂ ಬ್ರಾಹ್ಮಣೋ ಮಮ ।
ಅಸ್ಯಾನುಗ್ರಹಮಿಚ್ಛಾಮಿ ಕೃತಂ ಕಿಂಚಿತ್ ಸುಖೋದಯಮ್ ॥೧೯॥

ದೇವತೆಗಳೇ ನೀವು ನನ್ನ ವಿಷಯದಲ್ಲಿ ಪ್ರಸನ್ನರಾಗಿದ್ದರೆ ನನ್ನ ಎದುರಿನಲ್ಲಿರುವ ಈ ಬ್ರಾಹ್ಮಣನು ನನ್ನ ಭಕ್ತನಾಗಿದ್ದಾನೆ. ಈ ಬ್ರಾಹ್ಮಣನಿಗೆ ಭವಿಷ್ಯದಲ್ಲಿ ಸುಖವಾಗುವಂತೆ ಅನುಗ್ರಹಿಸಬೇಕೆಂಬುದು ನನ್ನ ಪ್ರಾರ್ಥನೆಯಾಗಿದೆ.

ಭೀಷ್ಮಃ

ತತಸ್ತಂ ಮಣಿಭದ್ರಸ್ತು ಪುನರ್ವಚನಮಬ್ರವೀತ್ ।
ದೇವಾನಾಮೇವ ವಚನಾತ್ಕುಂಡಧಾರಂ ಮಹಾದ್ಯುತಿಮ್ ॥೨೦॥

ಯುಧಿಷ್ಠಿರನೇ, ಬಳಿಕ ದೇವತೆಗಳ ಮಾತಿನಂತೆಯೇ ಮಣಿಭದ್ರನು ಮಹಾಕಾಂತಿಸಂಪನ್ನನಾದ ಕುಂಡಧಾರನನ್ನು ಕುರಿತು ಹೀಗೆ ಹೇಳಿದನು.

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಕೃತಕಾರ್ಯಃ ಸುಖೀ ಭವ ।
ಯಾವದ್ಧನಂ ಪ್ರಾರ್ಥಯತೇ ಬ್ರಾಹ್ಮಣೋಽಯಂ ಸಖಾ ತವ ।
ದೇವಾನಾಂ ಶಾಸನಾತ್ತಾವದಸಂಖ್ಯೇಯಂ ದದಾಮ್ಯಹಮ್ ॥೨೧॥

ಕುಂಡಧಾರನೇ, ಏಳು ಎದ್ದೇಳು. ನಿನಗೆ ಮಂಗಳವಾಗಲಿ. ಕೃತಾರ್ಥನಾಗು. ಸುಖಿಯಾಗಿರು. ಈ ಬ್ರಾಹ್ಮಣನು ಎಷ್ಟು ಹಣವನ್ನು ಅಪೇಕ್ಷಿಸುತ್ತಾನೋ ಅವನಿಗೆ ಈ ಹಣವನ್ನು ಕೊಟ್ಟುಬಿಡು. ನಿನ್ನ ಸಖನಾದ ಬ್ರಾಹ್ಮಣನು ಎಷ್ಟು ಧನವನ್ನು ಪ್ರಾರ್ಥಿಸುತ್ತಾನೋ ಅಸಂಖ್ಯಾತವಾದ ಅಷ್ಟೂ ಧನವನ್ನು ದೇವತೆಗಳ ಆಜ್ಞೆಯಂತೆ ನಾನೇ ಕೊಡುತ್ತೇನೆ.

ವಿಚಾರ್ಯ ಕುಂಡಧಾರಸ್ತು ಮಾನುಷ್ಯಂ ಚಲಮಧ್ರುವಮ್ ।
ತಪಸೇ ಮತಿಮಾಧತ್ತ ಬ್ರಾಹ್ಮಣಸ್ಯ ಯಶಸ್ವಿನಃ ॥೨೨॥

ಮಣಿಭದ್ರನು ಹೀಗೆ ಹೇಳಿದ ಬಳಿಕ ಕುಂಡಧಾರನು ಬ್ರಾಹ್ಮಣನಿಗೆ ಧನವನ್ನು ಕೊಡುವ ವಿಷಯದಲ್ಲಿ ಯೋಚಿಸಿದನು. ಮನುಷ್ಯರ ಜೀವನವು ಚಂಚಲವೂ, ಅಶಾಶ್ವತವೂ ಆಗಿದೆ. ಬ್ರಾಹ್ಮಣನ ತಪಸ್ಸನ್ನು ಹೆಚ್ಚಿಸುವ ನಿಶ್ಚಯದಿಂದ ಮಣಿಭದ್ರನನ್ನು ಕುರಿತು ಕುಂಡಧಾರನು ಹೇಳಿದನು.

ಕುಂಡಧಾರಃ

ನಾಹಂ ಧನಾನಿ ಯಾಚಾಮಿ ಬ್ರಾಹ್ಮಣಾಯ ಧನಪ್ರದ ।
ಅನ್ಯಮೇವಾಹಮಿಚ್ಛಾಮಿ ಭಕ್ತಾಯಾನುಗ್ರಹಂ ಕೃತಮ್ ॥೨೩॥

ಧನಪ್ರದನೇ, ಈ ಬ್ರಾಹ್ಮಣನಿಗಾಗಿ ನಾನು ಹಣವನ್ನು ಯಾಚಿಸುವುದಿಲ್ಲ. ನಿನ್ನಿಂದ ಬೇರೆಯಾದ ಅನುಗ್ರಹವನ್ನೇ ನಾನು ಬಯಸುತ್ತಿದ್ದೇನೆ.

ಪೃಥಿವೀಂ ರತ್ನಪೂರ್ಣಾಂ ವಾ ಮಹದ್ವಾ ಧನಸಂಚಯಮ್ ।
ಭಕ್ತಾಯ ನಾಹಮಿಚ್ಛಾಮಿ ಭವೇದೇಷ ತು ಧಾರ್ಮಿಕಃ ॥೨೪॥

ಧರ್ಮೇऽಸ್ಯ ರಮತಾಂ ಬುದ್ಧಿರ್ಧರ್ಮಂ ಚೈವೋಪಜೀವತು ।
ಧರ್ಮಪ್ರಧಾನೋ ಭವತು ಮಮೈಷೋऽನುಗ್ರಹೋ ಮತಃ ॥೨೫॥

ರತ್ನಪೂರ್ಣವಾದ ಭೂಮಿಯನ್ನಾಗಲಿ, ಮಹತ್ತರವಾದ ಧನದ ಮೊತ್ತವನ್ನಾಗಲಿ, ಈ ಭಕ್ತನ ವಿಷಯದಲ್ಲಿ ನಾನು ಬಯಸುವುದಿಲ್ಲ. ಈ ಭಕ್ತನಾದರೂ ಪರಮ ಧಾರ್ಮಿಕನಾಗಿದ್ದಾನೆ. ಧರ್ಮವನ್ನೇ ಆಶ್ರಯಿಸಿ ಇವನು ಜೀವಿಸುವಂತಾಗಲಿ. ಇವನ ಧರ್ಮದ ಬುದ್ಧಿಯು ನಿಶ್ಚಿತವಾಗಿರಲಿ. ಧರ್ಮಪ್ರದಾನ ಜೀವನವುಳ್ಳವನು ನನ್ನ ಭಕ್ತನಾಗಲಿ ಎಂಬುದು ನನ್ನ ಅಭಿಮತವಾಗಿದೆ ಎಂದನು.

ಮಣಿಭದ್ರಃ

ಯದಾ ಧರ್ಮಫಲಂ ರಾಜ್ಯಂ ಸುಖಾನಿ ವಿವಿಧಾನಿ ಚ ।
ಫಲಾನ್ಯೇವಾಯಮಶ್ನಾತು ಕಾಯಕ್ಲೇಶವಿವರ್ಜಿತಃ ॥೨೬॥

ಕುಂಡಧಾರನೇ, ರಾಜ್ಯವು, ಬಗೆಬಗೆಯಾದ ಸುಖಗಳು ಎಲ್ಲವೂ ಧರ್ಮದ ಫಲದಿಂದ ದೊರೆಯುತ್ತವೆ. ಆದ್ದರಿಂದ ಬ್ರಾಹ್ಮಣನು ಕಾಯಕ್ಲೇಶಗಳಿಂದ ರಹಿತನಾಗಿ ಧರ್ಮದ ಫಲವನ್ನು ಅನುಭವಿಸುವಂತಾಗಲಿ.

ಭೀಷ್ಮಃ

ತತಸ್ತದೇವ ಬಹುಶಃ ಕುಂಡಧಾರೋ ಮಹಾಯಶಾಃ ।
ಅಭ್ಯಾಸಮಕರೋದ್ಧರ್ಮೇ ತತಸ್ತುಷ್ಟಾಸ್ಯ ದೇವತಾಃ ॥೨೭॥

ಯುಧಿಷ್ಠಿರನೇ, ಮಣಿಭದ್ರನು ಹೀಗೆ ಹೇಳಿದ ಬಳಿಕವೂ ಮಹಾಕೀರ್ತಿ ಸಂಪನ್ನನಾದ ಕುಂಡಧಾರನು ತನ್ನ ಭಕ್ತನಾದ ಬ್ರಾಹ್ಮಣನಿಗೆ ಧರ್ಮಬುದ್ಧಿಯೇ ಮತ್ತೆ ಮತ್ತೆ ಹುಟ್ಟುವಂತೆ ಬಾರಿ ಬಾರಿಗೂ ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸಿದನು. ಅದರಿಂದ ದೇವತೆಗಳು ಸುಪ್ರೀತರಾದರು.

ಮಣಿಭದ್ರಃ

ಪ್ರೀತಾಸ್ತೇ ದೇವತಾಃ ಸರ್ವಾ ದ್ವಿಜಸ್ಯಾಸ್ಯ ತಥೈವ ಚ ।
ಭವಿಷ್ಯತ್ಯೇಷ ಧರ್ಮಾತ್ಮಾ ಧರ್ಮೇ ಚಾಧಾಸ್ಯತೇ ಮತಿಃ ॥೨೮॥

ಕುಂಡಧಾರನೇ, ದೇವತೆಗಳು ನಿನ್ನ ಹಾಗೂ ಬ್ರಾಹ್ಮಣನ ವಿಷಯದಲ್ಲಿ ಪ್ರೀತರಾಗಿದ್ದಾರೆ. ದೇವತೆಗಳ ಅನುಗ್ರಹದಿಂದ ನಿನ್ನ ಭಕ್ತನೆನಿಸಿದ ಈ ಬ್ರಾಹ್ಮಣನು ಧರ್ಮಬುದ್ಧಿಯುಳ್ಳವನಾಗುತ್ತಾನೆ. ಇವನ ಬುದ್ಧಿಯು ಧರ್ಮದಲ್ಲಿಯೇ ಯಾವಾಗಲೂ ಸ್ಥಿರವಾಗಿರುತ್ತದೆ.

ಭೀಷ್ಮಃ

ತತಃ ಪ್ರೀತೋ ಜಲಧರಃ ಕೃತಕಾರ್ಯೋ ಯುಧಿಷ್ಠಿರ ।
ಈಪ್ಸಿತಂ ಮನಸೋ ಲಬ್ಧ್ವಾ ವರಮನ್ಯೈಃ ಸುದುರ್ಲಭಮ್ ॥೨೯॥

ಮಣಿಭದ್ರನ ಮಾತನ್ನು ಕೇಳಿ ಕೃತಕಾರ್ಯನಾದ ಕುಂಡಧಾರನು ಇತರರಿಂದ ಪಡೆಯಲು ಅಸಾಧ್ಯವಾದ, ಮನಸ್ಸಿಗೆ ಇಷ್ಟವಾದ ವರವನ್ನು ಪಡೆದು ಪರಮ ಪ್ರೀತನಾದನು.

ತತೋಽಪಶ್ಯತ ಚೀರಾಣಿ ಸೂಕ್ಷ್ಮಾಣಿ ದ್ವಿಜಸತ್ತಮಃ ।
ಪಾರ್ಶ್ವತೋಭ್ಯಾಗತೋ ನ್ಯಸ್ತಾನ್ಯಥ ನಿರ್ವೇದಮಾಗತಃ ॥೩೦॥

ನಂತರ ಬ್ರಾಹ್ಮಣನು ಸ್ವಪ್ನದಿಂದ ಎದ್ದ ಬಳಿಕ ವೈರಾಗ್ಯವನ್ನು ಹುಟ್ಟಿಸಲು ದೇವತೆಗಳು ಇಟ್ಟಿರುವಂತಹ ಹರಿದ, ಮಲಿನ ವಸ್ತ್ರಗಳನ್ನು ತನ್ನ ಬದಿಯಲ್ಲಿ ಕಂಡನು. ಒಡನೆಯೇ ಅವನಿಗೆ ದುಃಖವೂ, ವೈರಾಗ್ಯವೂ ಉಂಟಾಯಿತು.

ಬ್ರಾಹ್ಮಣಃ

ಅಯಂ ನ ಸುಕೃತಂ ವೇತ್ತಿ ಕೋ ನ್ವನ್ಯೋ ವೇತ್ಸ್ಯತೇ ಕೃತಮ್ ।
ಗಚ್ಛಾಮಿ ವನಮೇವಾಹಂ ವರಂ ಧರ್ಮೇಣ ಜೀವಿತುಮ್ ॥೩೧॥

ನನ್ನ ಪುಣ್ಯಮಯವಾದ ತಪಸ್ಸಿನ ಉದ್ದೇಶವನ್ನು ಕುಂಡಧಾರನೇ ತಿಳಿಯದ ಬಳಿಕ ಬೇರೆ ಯಾರು ತಾನೇ ತಿಳಿದುಕೊಳ್ಳಲು ಸಾಧ್ಯ? ಆದ್ದರಿಂದ ನಾನು ಅರಣ್ಯಕ್ಕೆ ಹೋಗುತ್ತೇನೆ. ಅರಣ್ಯದಲ್ಲಿದ್ದು ಧರ್ಮದಿಂದ ಜೀವನವನ್ನು ನಿರ್ವಹಿಸುತ್ತೇನೆ.

ವ್ಯಾಖ್ಯಾನ ವಿಶೇಷ– ವಾಸ್ತವಿಕವಾಗಿ ಸ್ವಪ್ನದಲ್ಲಿ ವೈರಾಗ್ಯವನ್ನು ಹುಟ್ಟಿಸಲು ಕುಂಡಧಾರನು ಬ್ರಾಹ್ಮಣನಿಗೆ ದೊಡ್ಡ ಉಪಕಾರವನ್ನೇ ಮಾಡಿದ್ದಾನೆಂದು ಬ್ರಾಹ್ಮಣನು ತಿಳಿದುಕೊಂಡಿದ್ದಾನೆ. ಹಾಗಿದ್ದರೂ ಮಣಿಭದ್ರನು ಕೊಡುತ್ತಿರುವ ಹಣವನ್ನು ನಿರಾಕರಿಸುತ್ತಾ ಧರ್ಮದ ಫಲವನ್ನೇ ಕುಂಡಧಾರನು ಕೇಳಿದ್ದರಿಂದ ತಾತ್ಕಾಲಿಕವಾದ ದುಃಖವನ್ನು ಹೊಂದಿದ ಬ್ರಾಹ್ಮಣನು ಕುಂಡಧಾರನು ನನ್ನ ಸುಖವನ್ನು ಬಯಸುತ್ತಿಲ್ಲ ಎಂದು ಹೇಳಿದ್ದನ್ನು ತಿಳಿಯಬೇಕು. ಕುಂಡಧಾರನಿಗೆ ಬ್ರಾಹ್ಮಣನಿಂದ ಪ್ರೀತಿಯೇ ಹುಟ್ಟಿದೆ ಎಂದು ತಿಳಿಯಬೇಕು.

ಭೀಷ್ಮಃ

ನಿರ್ವೇದಾದ್ ದೇವತಾನಾಂ ಚ ಪ್ರಸಾದಾತ್ ಸ ದ್ವಿಜೋತ್ತಮಃ ।
ವನಂ ಪ್ರವಿಶ್ಯ ಸುಮಹತ್ತಪ ಆರಬ್ಧವಾಂಸ್ತದಾ ॥೩೨॥

ದೇವತಾತಿಥಿಶೇಷೇಣ ಫಲಮೂಲಾಶನೋ ದ್ವಿಜಃ ।
ಧರ್ಮೇ ಚಾಪಿ ಮಹಾರಾಜ ರತಿರಸ್ಯಾಭ್ಯಜಾಯತ ॥೩೩॥

ಬ್ರಾಹ್ಮಣನು ವೈರಾಗ್ಯದಿಂದಲೇ, ದೇವತೆಗಳ ಅನುಗ್ರಹದಿಂದಲೂ ಅತ್ಯಂತ ಕಠಿಣವಾದ ತಪಸ್ಸನ್ನು ಆರಂಭಿಸಿದನು. ದೇವತೆಗಳಿಗೂ, ಅತಿಥಿಗಳಿಗೂ ಅರ್ಪಿಸಿದ

ತರುವಾಯ ಉಳಿದ ಕಂದಮೂಲಫಲಗಳನ್ನು ಆಹಾರವಾಗಿ ಸ್ವೀಕರಿಸುತ್ತಿದ್ದನು. ಇದರಿಂದ ಧರ್ಮದ ವಿಷಯದಲ್ಲಿ ಬ್ರಾಹ್ಮಣನಿಗೆ ದೃಢವಾದ ಬುದ್ಧಿಯುಂಟಾಯಿತು.

ತ್ಯಕ್ತ್ವಾ ಮೂಲಫಲಂ ಸರ್ವಂ ಪರ್ಣಾಹಾರೋಽಭವದ್ ದ್ವಿಜಃ ।
ಪರ್ಣಂ ತ್ಯಕ್ತ್ವಾ ಜಲಾಹಾರಸ್ತದಾಸೀದ್ ದ್ವಿಜಸತ್ತಮಃ ॥೩೪॥

ಸ್ವಲ್ಪ ದಿನದ ಬಳಿಕ ಬ್ರಾಹ್ಮಣನು ಗೆಡ್ಡೆ-ಗೆಣಸುಗಳನ್ನು, ಹಣ್ಣುಗಳನ್ನು ತ್ಯಜಿಸಿ ತರಗೆಲೆಗಳನ್ನೇ ಆಹಾರವಾಗಿ ಸ್ವೀಕರಿಸುತ್ತಿದ್ದನು. ಬಳಿಕ ಅದನ್ನೂ ತ್ಯಜಿಸಿ ನೀರನ್ನು ಮಾತ್ರ ಸ್ವೀಕರಿಸುತ್ತಿದ್ದನು.

ವಾಯುಭಕ್ಷಸ್ತತಃ ಪಶ್ಚಾದ್ ಬಹೂನ್ ವರ್ಷಗಣಾನಭೂತ್ ।
ನ ಚಾಸ್ಯ ಕ್ಷೀಯತೇ ಪ್ರಾಣಸ್ತದದ್ಭುತಮಿವಾಭವತ್ ॥೩೫॥

ಸ್ವಲ್ಪ ಸಮಯದ ಬಳಿಕ ನೀರನ್ನೂ ತ್ಯಜಿಸಿ ವಾಯುಭಕ್ಷನಾಗಿಯೇ ಅನೇಕ ವರ್ಷಗಳನ್ನು ಉಗ್ರವಾದ ತಪಸ್ಸಿನಲ್ಲಿ ಕಳೆದನು. ಆದರೂ ಅವನ ಪ್ರಾಣವು ಕ್ಷೀಣಿಸಲಿಲ್ಲ. ಎಲ್ಲರಿಗೂ ಇವನ ತಪಸ್ಸಿನ ಕ್ರಮವು ಅದ್ಭುತವೆನಿಸಿತು.

ಧರ್ಮೇ ಚ ಶ್ರದ್ದಧಾನಸ್ಯ ತಪಸ್ಯುಗ್ರೇ ಚ ವರ್ತತಃ ।
ಕಾಲೇನ ಮಹತಾ ತಸ್ಯ ದಿವ್ಯಾ ದೃಷ್ಟಿರಜಾಯತ ॥೩೬॥

ಧರ್ಮದಲ್ಲಿಯೇ ಶ್ರದ್ಧೆಯನ್ನು ಹೊಂದಿರುವ, ಉಗ್ರವಾದ ತಪಸ್ಸನ್ನಾಚರಿಸುತ್ತಿರುವ ಬ್ರಾಹ್ಮಣನಿಗೆ ಬಹಳ ಕಾಲದ ತರುವಾಯ ದಿವ್ಯದೃಷ್ಟಿಯುಂಟಾಯಿತು.

ತಸ್ಯ ಬುದ್ಧಿಃ ಪ್ರಾದುರಾಸೀದ್ ಯದಿ ದದ್ಯಾಂ ಮಹದ್ಧನಮ್ ।
ತುಷ್ಟಃ ಕಸ್ಮೈಚಿದೇವಾಹಂ ನ ಮಿಥ್ಯಾ ವಾಗ್ ಭವೇನ್ಮಮ ॥೩೭॥

ಆಗ ಅವನ ಬುದ್ಧಿಯಲ್ಲಿ ಈ ವಿಚಾರವು ಹೊಳೆಯಿತು. ಸಂತುಷ್ಟನಾಗಿ ನಾನು ಯಾರಿಗಾದರೂ ಹಣವನ್ನು ಕೊಡುತ್ತೇನೆಂದು ಹೇಳಿದರೆ ಆ ನನ್ನ ಮಾತು ಸುಳ್ಳಾಗಲಾರದು.

ತತಃ ಪ್ರಹಷ್ಟವದನೋ ಭೂಯ ಆರಬ್ಧವಾಂಸ್ತಪಃ ।
ಭೂಯಶ್ಚಾಚಿಂತಯತ್ ಸಿದ್ಧೋ ಯತ್ ಪರಂ ಸೋಽಭ್ಯಪದ್ಯತ ॥೩೮॥

ಈ ರೀತಿಯಾದ ಸಿದ್ಧಿಯು ತನ್ನಲ್ಲುಂಟಾಗಿದೆ ಎಂದು ಅರ್ಥೈಸಿಕೊಂಡ ಬ್ರಾಹ್ಮಣನು ಪುನಃ ತಪಸ್ಸನ್ನು ಆರಂಭಿಸಿದನು. ಸಿದ್ಧಗಣದಲ್ಲಿರುವ ಕುಂಡಧಾರನು ಪರಮ ಪುರುಷಾರ್ಥವೆನಿಸಿದ ಮೋಕ್ಷದ ಸಿದ್ಧಿಗಾಗಿ ತನಗೆ ಮಾಡಿದ ಅನುಗ್ರಹವನ್ನು ಮನಸ್ಸಿನಲ್ಲಿ ಚಿಂತಿಸಿದನು.

ಯದಿ ದದ್ಯಾಮಹಂ ರಾಜ್ಯಂ ತುಷ್ಟೋ ವೈ ಯಸ್ಯ ಕಸ್ಯಚಿತ್ ।
ಸ ಭವೇದಚಿರಾದ್ರಾಜಾ ನ ಮಿಥ್ಯಾ ವಾಗ್ಭವೇನ್ಮಮ ॥೩೯॥

ನಾನು ಮನಸ್ಸಿನಲ್ಲಿ ಸಂತುಷ್ಟನಾಗಿ ಯಾರಿಗಾದರೂ ರಾಜ್ಯವನ್ನು ಅನುಗ್ರಹಿಸಿದರೆ ಅವನು ಕೂಡಲೇ ರಾಜನಾಗುತ್ತಾನೆ. ನನ್ನ ಮಾತು ಸುಳ್ಳಾಗುವುದಿಲ್ಲ.

ವ್ಯಾಖ್ಯಾನ ವಿಶೇಷ– ನನ್ನ ಪ್ರಾರ್ಥನಾ ರೂಪವಾದ ಮಾತು ದೇವತೆಗಳಿಗೆ ತಲುಪುತ್ತದೆ. ನನ್ನ ಮಾತನ್ನು ದೇವತೆಗಳು ಸಫಲಗೊಳಿಸುತ್ತಾರೆ. ಫಲ ಲಭಿಸುವುದರಿಂದ ನನ್ನ ಮಾತು ವ್ಯರ್ಥವಾಗುವುದಿಲ್ಲ. ರಾಜ್ಯಾಧಿ ಲಾಭವು ದೊರೆತರೂ ಮಹಾಫಲವೆನಿಸಿದ ಮೋಕ್ಷವು ಯಾರಿಗೂ ದೊರೆಯುವುದಿಲ್ಲ ಎಂದು ತಾತ್ಪರ್ಯ. ಅದಕ್ಕಾಗಿ ಇನ್ನೂ ಪ್ರಯತ್ನ ಮಾಡಬೇಕು ಎಂಬುದು ಬ್ರಾಹ್ಮಣನ ಅಭಿಪ್ರಾಯವು.

ತಸ್ಯ ಸಾಕ್ಷಾತ್ ಕುಂಡಧಾರೋ ದರ್ಶಯಾಮಾಸ ಭಾರತ ।
ಬ್ರಾಹ್ಮಣಸ್ಯ ತಪೋಯೋಗಾತ್ ಸೌಹೃದೇನಾಭಿಚೋದಿತಃ ॥೪೦॥

ಹೀಗೆ ತಪಸ್ಸನ್ನು ಬ್ರಾಹ್ಮಣನು ಮುಂದುವರೆಸುತ್ತಿರುವಾಗ ಬ್ರಾಹ್ಮಣನ ಸೌಹಾರ್ದದಿಂದಲೂ ಪ್ರೇರಿತನಾದ ಕುಂಡಧಾರನು ಬ್ರಾಹ್ಮಣನಿಗೆ ಸಾಕ್ಷಾತ್ತಾಗಿ ಕಾಣಿಸಿಕೊಂಡನು.

ಸಮಾಗಮ್ಯ ಸ ತೇನಾಥ ಪೂಜಾಂ ಚಕ್ರೇ ಯಥಾವಿಧಿ ।
ಬ್ರಾಹ್ಮಣಃ ಕುಂಡಧಾರಸ್ಯ ವಿಸ್ಮಿತಶ್ಚಾಭವನ್ನೃಪ ॥೪೧॥

ಕುಂಡಧಾರನನ್ನು ನೋಡಿ ಬ್ರಾಹ್ಮಣನು ಆಶ್ಚರ್ಯಚಕಿತನಾಗಿ ಅವನನ್ನು ಯಥಾವಿಧಿಯಾಗಿ ಪೂಜಿಸಿದನು.

ತತೋಽಬ್ರವೀತ್ಕುಂಡಧಾರೋ ದಿವ್ಯಂ ತೇ ಚಕ್ಷುರುತ್ತಮಮ್ ।
ಪಶ್ಯ ರಾಜ್ಞಾಂ ಗತಿಂ ವಿಪ್ರಾ ಲೋಕಾಂಶ್ಚಾವೇಕ್ಷ ಚಕ್ಷುಷಾ ॥೪೨॥

ಬಳಿಕ ಕುಂಡಧಾರನು ಬ್ರಾಹ್ಮಣನಿಗೆ ಹೀಗೆ ಹೇಳಿದನು: ಬ್ರಾಹ್ಮಣೋತ್ತಮನೇ, ನಿನಗೆ ತಪಸ್ಸಿನ ಪ್ರಭಾವದಿಂದ ಶ್ರೇಷ್ಠವಾದ ದಿವ್ಯದೃಷ್ಟಿಯು ದೊರಕಿರುತ್ತದೆ. ಈ ದೃಷ್ಟಿಯಿಂದ ಹಿಂದಿನ ರಾಜರು ಯಾವ ಗತಿಯನ್ನು ಹೊಂದಿದ್ದಾರೆ, ಯಾವ ಲೋಕಗಳಿಗೆ ಹೋಗಿರುತ್ತಾರೆ ಎಂಬುದನ್ನು ನೀನು ನೋಡು.

ತತೋ ರಾಜ್ಞಾಂ ಸಹಸ್ರಾಣಿ ಮಗ್ನಾನಿ ನಿರಯೇ ತದಾ ।
ದೂರಾದಪಶ್ಯದ್ ವಿಪ್ರಾಃ ಸ ದಿವ್ಯಯುಕ್ತೇನ ಚಕ್ಷುಷಾ ॥೪೩॥

ನಂತರ ಕುಂಡಧಾರನ ಮಾತಿನಂತೆ ಬ್ರಾಹ್ಮಣನು ತನ್ನ ದಿವ್ಯದೃಷ್ಟಿಯಿಂದ ಸಹಸ್ರಾರು ರಾಜರು ನರಕದಲ್ಲಿ ಬಿದ್ದಿರುವ ದೃಶ್ಯವನ್ನು ದೂರದಿಂದಲೇ ನೋಡಿದನು. ಬಳಿಕ ಕುಂಡಧಾರನು ಬ್ರಾಹ್ಮಣನಿಗೆ ಹೇಳಿದನು.

ಕುಂಡಧಾರಃ

ಮಾಂ ಪೂಜಯಿತ್ವಾ ಭಾವೇನ ಯದಿ ತ್ವಂ ದುಃಖಮಾಪ್ನುಯಾಃ ।
ಕೃತಂ ಮಯಾ ಭವೇತ್ ಕಿಂ ತೇ ಕಶ್ಚ ತೇऽನುಗ್ರಹೋ ಭವೇತ್ ॥೪೪॥

ಬ್ರಾಹ್ಮಣನೇ, ನೀನು ಭಕ್ತಿಯಿಂದ ನನ್ನನ್ನು ಪೂಜಿಸಿದ ಬಳಿಕವೂ ನಾನು ಮಾಡಿದ ಅನುಗ್ರಹದಿಂದ ನೀನು ದುಃಖಕ್ಕೇ ತುತ್ತಾಗುತ್ತಿ ಎಂದಾದರೆ ನಾನು ನಿನಗೆ ಏನು ಅನುಗ್ರಹ ಮಾಡಿದಂತಾಯಿತು?

ಪಶ್ಯ ಪಶ್ಯ ಚ ಭೂಯಸ್ತ್ವಂ ಕಾಮಾನಿಚ್ಛೇತ್ ಕಥಂ ನರಃ ।
ಸ್ವರ್ಗದ್ವಾರಂ ಹಿ ಸಂರುದ್ಧಂ ಮಾನುಷೇಷು ವಿಶೇಷತಃ ॥೪೫॥

ಪುನಃ ಪುನಃ ರಾಜರಿಗೆ ಒದಗಿರುವ ಅವಸ್ಥೆಯನ್ನು ನೀನು ನೋಡು. ಅವರ ದುರವಸ್ಥೆಯನ್ನು ನೋಡಿದ ಮನುಷ್ಯನು ಪ್ರಪಂಚದ ಕಾಮನೆಗಳನ್ನು ಹೇಗೆ ತಾನೆ ಬಯಸುತ್ತಾನೆ? ಯಾವಾತನು ಧನವನ್ನೂ, ಕಾಮನೆಗಳನ್ನು ಅಪೇಕ್ಷಿಸುತ್ತಾನೋ ಅಂತಹ ಮನುಷ್ಯನಿಗೆ ಸ್ವರ್ಗದ ಬಾಗಿಲುಗಳು ಮುಚ್ಚಿಕೊಳ್ಳುತ್ತವೆ.

ಭೀಷ್ಮಃ

ತತೋऽಪಶ್ಯತ್ ಸ ಕಾಮಂ ಚ ಕ್ರೋಧಂ ಲೋಭಂ ಭಯಂ ಮದಮ್।
ನಿದ್ರಾಂ ತಂದ್ರೀಂ ತಥಾಲಸ್ಯಮಾವೃತ್ಯ ಪುರುಷಾನ್ ಸ್ಥಿತಾನ್ ॥೪೬॥

ಯುಧಿಷ್ಠಿರನೇ, ಕುಂಡಧಾರನು ಹೇಳಿದ ಬಳಿಕ ಬ್ರಾಹ್ಮಣನು ತನ್ನ ದಿವ್ಯದೃಷ್ಟಿಯಿಂದ ಭೋಗಿಗಳಾದ ಮನುಷ್ಯರನ್ನು ಕಾಮ, ಕ್ರೋಧ, ಲೋಭ, ಭಯ, ಮದ, ನಿದ್ರೆ, ತೂಕಡಿಕೆ, ಆಲಸ್ಯ ಇವೇ ಮೊದಲಾದ ಶತ್ರುಗಳು ಆಕ್ರಮಿಸಿಕೊಂಡಿರುವ ದೃಶ್ಯವನ್ನು ನೋಡಿದನು.

ಕುಂಡಧಾರಃ

ಏತೈರ್ಲೋಕಾಃ ಸುಸಂರುದ್ಧಾ ದೇವಾನಾಂ ಮಾನುಷಾದ್ ಭಯಮ್ ।
ತಥೈವ ದೇವವಚನಾದ್ ವಿಘ್ನಂ ಕುರ್ವಂತಿ ಸರ್ವಶಃ ॥೪೭॥

ಬ್ರಾಹ್ಮಣೋತ್ತಮನೇ, ಈ ಸಮಸ್ತ ಜಗತ್ತೆಲ್ಲವೂ ನೀನು ನೋಡುತ್ತಿರುವ ಕಾಮ-ಕ್ರೋಧಗಳಿಂದ ಬಂಧಿತವಾಗಿದೆ. ದೇವತೆಗಳಿಗೆ ಯಾವಾಗಲೂ ಮನುಷ್ಯಜನ್ಮದಿಂದ ಭಯವಿದೆ. ಆದ್ದರಿಂದ ದೇವತೆಗಳ ವಚನದಂತೆ ದೇವದೂತರು ಮನುಷ್ಯರಿಗೆ ಕಾಮ-ಕ್ರೋಧಗಳನ್ನು ನೀಡಿ ತಪಸ್ಸಿಗೆ ವಿಘ್ನವನ್ನುಂಟು ಮಾಡುತ್ತಾರೆ.

ನ ದೇವೈರನನುಜ್ಞಾತಃ ಕಶ್ಚಿದ್ ಭವತಿ ಧಾರ್ಮಿಕಃ ।
ಏಷ ಶಕ್ತೋಽಸಿ ತಪಸಾ ರಾಜ್ಯಂ ದಾತುಂ ಧನಾನಿ ಚ ॥೪೮॥

ದೇವತೆಗಳ ಅನುಜ್ಞೆಯನ್ನು ಪಡೆದುಕೊಳ್ಳದೆ ಯಾವನೇ ಆದರೂ ನಿರ್ವಿಘ್ನವಾಗಿ ಧರ್ಮಕಾರ್ಯವನ್ನು ಮಾಡಲಾರನು. ಧಾರ್ಮಿಕನಾಗಲಾರನು. ನಿನಗೆ ದೇವತೆಗಳ ಅಪ್ಪಣೆ ಸಿಕ್ಕಿದೆ. ನಿನ್ನ ಧರ್ಮಕಾರ್ಯವು, ತಪಸ್ಸು ಸಿದ್ಧಿಸಿದೆ. ಆದ್ದರಿಂದ ನೀನು ಬೇರೆ ಯಾಚಕರಿಗೆ ರಾಜ್ಯವನ್ನೂ, ಧನವನ್ನೂ ಕೊಡಲು ಸಮರ್ಥನಾಗಿರುವಿ.

ಭೀಷ್ಮಃ

ತತಃ ಪಪಾತ ಶಿರಸಾ ಬ್ರಾಹ್ಮಣಸ್ತೋಯಧಾರಿಣೇ ।
ಉವಾಚ ಚೈನಂ ಧರ್ಮಾತ್ಮಾ ಮಹಾನ್ ಮೇಽನುಗ್ರಹಃ ಕೃತಃ ॥೪೯॥

ಯುಧಿಷ್ಠಿರನೇ, ಕುಂಡಧಾರನು ಹೀಗೆ ಹೇಳಿದ ಬಳಿಕ ಧರ್ಮಾತ್ಮನಾದ ಬ್ರಾಹ್ಮಣನು ಕುಂಡಧಾರನಿಗೆ ತಲೆಬಾಗಿ ಸಾಷ್ಟಾಂಗ ನಮಸ್ಕರಿಸಿ ವಿನಯಪೂರ್ವಕವಾಗಿ ಹೀಗೆ ಹೇಳಿದನು.

ಕಾಮಲೋಭಾನುಬಂಧೇನ ಪುರಾ ತೇ ಯದಸೂಯಿತಮ್ ।
ಮಯಾ ಸ್ನೇಹಮವಿಜ್ಞಾಯ ತತ್ರ ಮೇ ಕ್ಷಂತುಮರ್ಹಸಿ ॥೫೦॥

ಕುಂಡಧಾರನೇ, ನೀನು ನನ್ನ ಮೇಲಿನ ಸ್ನೇಹಭಾವದಿಂದ ಅನುಗ್ರಹವನ್ನೇ ಮಾಡಿರುವೆ. ಇದನ್ನು ತಿಳಿಯದೆ ಕಾಮ-ಲೋಭಗಳಿಂದ ನಾನು ನನ್ನ ಧನಾಗಮವನ್ನು ತಪ್ಪಿಸಿದ ವ್ಯಕ್ತಿಯು ನೀನೆಂದು ತಿಳಿದು ನಿನಗೆ ದ್ವೇಷವನ್ನೇ ಬಗೆದಿದ್ದೇನೆ. ಇದಕ್ಕಾಗಿ ನನ್ನನ್ನು ಕ್ಷಮಿಸಲು ಅರ್ಹನಾಗಿರುವಿ.

ಕ್ಷಾಂತಮೇವ ಮಯೇತ್ಯುಕ್ತ್ವಾ ಕುಂಡಧಾರೋ ದ್ವಿಜರ್ಷಭಮ್ ।
ಸಂಪರಿಷ್ವಜ್ಯ ಬಾಹುಭ್ಯಾಂ ತತ್ರೈವಾಂತರಧೀಯತ ॥೫೧॥

ಕುಂಡಧಾರನು ಬ್ರಾಹ್ಮಣನನ್ನುಕುರಿತು- 'ನಾನು ಹಿಂದೆಯೇ ಅದನ್ನು ಕ್ಷಮಿಸಿದ್ದೇನೆ' ಎಂದು ಹೇಳಿ ಬ್ರಾಹ್ಮಣನನ್ನು ಆಲಿಂಗಿಸಿ ಸಂತೈಸಿ, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ತತಃ ಸರ್ವಾನಿಮಾಲ್ಲೋಕಾನ್ ಬ್ರಾಹ್ಮಣೋऽನುಚಚಾರ ಹ ।
ಕುಂಡಧಾರಪ್ರಸಾದೇನ ತಪಸಾ ಯೋಜಿತಃ ಪುರಾ ॥೫೨॥

ವಿಹಾಯಸಾ ಚ ಗಮನಂ ತಥಾ ಸಂಕಲ್ಪಿತಾರ್ಥತಾ ।
ಧರ್ಮಾಚ್ಛಕ್ತ್ಯಾ ತಥಾ ಯೋಗಾದ್ಯಾ ಚೈವ ಪರಮಾ ಗತಿಃ ॥೫೩॥

ಅನಂತರ ಕುಂಡಧಾರನ ಅನುಗ್ರಹದಿಂದ ತಪಸ್ಸಿದ್ಧಿಯನ್ನು ಪಡೆದ ಬ್ರಾಹ್ಮಣನು ಎಲ್ಲ ಲೋಕಗಳಲ್ಲಿಯೂ ಸಂಚರಿಸಿದನು. ತಪಸ್ಸಿನ ಸಿದ್ಧಿಯಿಂದ ಬ್ರಾಹ್ಮಣನಿಗೆ ಆಕಾಶಗಮನ ಸಾಮರ್ಥ್ಯ, ಸಂಕಲ್ಪಮಾತ್ರದಿಂದಲೇ ಇಷ್ಟಾರ್ಥಗಳನ್ನು ಪಡೆದುಕೊಳ್ಳುವ ಶಕ್ತಿಯೂ, ಧರ್ಮಶಕ್ತಿ, ಯೋಗಶಕ್ತಿಯಿಂದ ಎಲ್ಲವನ್ನೂ ಪಡೆಯುವ ಪರಮಗತಿ ಹೀಗೆ ಎಲ್ಲವೂ ಸಾಧ್ಯವಾಯಿತು.

ದೇವತಾ ಬ್ರಾಹ್ಮಣಾಃ ಸಂತೋ ಯಕ್ಷಾ ಮಾನುಷಚಾರಣಾಃ ।
ಧಾರ್ಮಿಕಾನ್ ಪೂಜಯಂತೀಹ ನ ಧನಾಢ್ಯಾನ್ನ ಕಾಮಿನಃ ॥೫೪॥

ದೇವತೆಗಳು, ಬ್ರಾಹ್ಮಣರು, ಸತ್ಪುರುಷರು, ಯಕ್ಷರು, ಮನುಷ್ಯರು, ಚಾರಣರು

ಇವರೆಲ್ಲರೂ ಜಗತ್ತಿನಲ್ಲಿ ಧಾರ್ಮಿಕರನ್ನು ಪೂಜಿಸುತ್ತಾರೆ. ಧನಿಕರನ್ನಾಗಲೀ, ಕಾಮೋಪಭೋಗಿಗಳನ್ನಾಗಲೀ ಪೂಜಿಸುವುದಿಲ್ಲ.

ಸುಪ್ರಸನ್ನಾ ಹಿ ತೇ ದೇವಾ ಯತ್ತೇ ಧರ್ಮೇ ರತಾ ಮತಿಃ ।
ಧನೇ ಸುಖಕಲಾ ಕಾಚಿದ್ಧರ್ಮೇ ತು ಪರಮಂ ಸುಖಮ್ ॥೫೫॥

ಯುಧಿಷ್ಠಿರನೇ, ನಿನ್ನ ಬುದ್ಧಿಯು ನಿತ್ಯವೂ ಧರ್ಮರತವಾಗಿರುವುದರಿಂದ ದೇವತೆಗಳು ನಿನ್ನಲ್ಲಿ ಪ್ರಸನ್ನರಾಗಿದ್ದಾರೆ. ಧನದಲ್ಲಿ ಸುಖವೆಂಬುದು ಸ್ವಲ್ಪ ಮಾತ್ರವು. ಧರ್ಮಾಚರಣೆಯಲ್ಲಿ ಪರಮಸುಖವೇ ಅಡಕವಾಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಕುಂಡಧಾರಾಖ್ಯಾನೇ ಷಡಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಏಳನೆಯ ಅಧ್ಯಾಯ

ಹಿಂಸೆಗೆ ಕಾರಣವಾದ ಯಜ್ಞವು ಪ್ರಶಸ್ತವಾದುದಲ್ಲ ಎಂದು ನಾರದರು ಉಂಛವೃತ್ತಿ ಬ್ರಾಹ್ಮಣನ ಕಥೆಯನ್ನು ದೃಷ್ಟಾಂತವನ್ನಾಗಿ ನೀಡಿ ಹೇಳಿದುದು.

ಯುಧಿಷ್ಠಿರಃ

ಬಹೂನಾಂ ಯಜ್ಞತಪಸಾಮೇಕಾರ್ಥಾನಾಂ ಪಿತಾಮಹ ।
ಧರ್ಮಾರ್ಥಂ ನ ಸುಖಾರ್ಥಾರ್ಥಂ ಕಥಂ ಯಜ್ಞಃ ಸಮಾಹಿತಃ ॥೧॥

ಪಿತಾಮಹನೇ, ಯಜ್ಞಗಳು ಲೋಕದಲ್ಲಿ ಅನೇಕವಿಧವಾಗಿವೆ. ತಪಸ್ಸುಗಳೂ ಅನೇಕ ವಿಧವಾಗಿವೆ. ಆದರೆ ಅವುಗಳೆಲ್ಲವುದರ ಉದ್ದೇಶ ಭಗವತ್ಪ್ರೀತಿಯೇ ಆಗಿದೆ. ಅಂತಹ ವಿವಿಧ ಯಜ್ಞಗಳಲ್ಲಿ ಸ್ವರ್ಗಕ್ಕೂ, ಧನಕ್ಕೂ ಕಾರಣವಾಗದೆ ಧರ್ಮಕ್ಕೆ ಮಾತ್ರ ನಿರ್ಣಯಿಸಲ್ಪಟ್ಟ ಯಜ್ಞವು ಯಾವುದು?

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ನಾರದೇನಾನುಕೀರ್ತಿತಮ್ ।
ಉಂಛವೃತ್ತೇಃ ಪುರಾವೃತ್ತಂ ಯಜ್ಞಾರ್ಥೇ ಬ್ರಾಹ್ಮಣಸ್ಯ ಹ ॥೨॥

ಯುಧಿಷ್ಠಿರನೇ, ಹಿಂದಿನ ಕಾಲದಲ್ಲಿ ಉಂಛವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಿದ್ದ ಒಬ್ಬ ಬ್ರಾಹ್ಮಣನು ಮಾಡಿದ ಯಜ್ಞದ ಬಗ್ಗೆ ನಾರದರು ನನ್ನ ಬಳಿ ಹೇಳಿದ ಒಂದು ಪ್ರಾಚೀನವಾದ ಇತಿಹಾಸವನ್ನು ಹೇಳುತ್ತೇನೆ, ಕೇಳು.

ರಾಷ್ಟ್ರೇ ಧರ್ಮೋತ್ತರೇ ಶ್ರೇಷ್ಠೇ ವಿದರ್ಭೇಷ್ವಭವದ್ ದ್ವಿಜಃ ।
ಉಂಛವೃತ್ತಿರ್ಮಹರ್ಷಿಃ ಕಶ್ಚಿದ್ ಯಜ್ಞೇ ಯಜ್ಞಂ ಸಮಾದಧೇ ॥೩॥

ಧರ್ಮವೇ ಪ್ರಧಾನವಾಗಿದ್ದ ವಿದರ್ಭದೇಶದಲ್ಲಿ ಉಂಛವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಿದ್ದ ಬ್ರಹ್ಮರ್ಷಿಯೊಬ್ಬನು ಇದ್ದನು. ಅವನು ಒಂದು ಯಜ್ಞವನ್ನು ಮಾಡಲು ಸಂಕಲ್ಪಿಸಿದನು.

ಶ್ಯಾಮಾಕಮಶನಂ ತತ್ರ ಸೂರ್ಯಪತ್ರೀ ಸುವರ್ಚಲಾ ।
ತಿಕ್ತಂ ಚ ವಿರಸಂ ಶಾಕಂ ತಪಸಾ ಸ್ವಾದುತಾಂ ಗತಮ್ ॥೪॥

ಅವನು ವಾಸಿಸುತ್ತಿದ್ದ ಸ್ಥಳದಲ್ಲಿ ಸಾಮೆಯ ಅಕ್ಕಿಯನ್ನೇ ತಿನ್ನಬೇಕಾಗಿತ್ತು. ಅರ್ಕಪತ್ರಿ ಅಥವಾ ಸುವರ್ಚಲಾ ಎಂಬ ಹೆಸರುಳ್ಳ ಕಾಡಿನಲ್ಲಿ ಬೆಳೆಯುವ ಶಾಕ ಲತೆಯನ್ನೇ ಉಪಯೋಗಿಸುತ್ತಿದ್ದನು. ಕಹಿಯಾದ ಮತ್ತು ರಸವಿಲ್ಲದ ಕಾಯಿಪಲ್ಯಗಳು ಸಿಕ್ಕುತ್ತಿದ್ದವು. ಆದರೆ ಆ ಬ್ರಾಹ್ಮಣನ ತಪಃಪ್ರಭಾವದಿಂದ ಸಾಧುವಲ್ಲದ ಆ ಪದಾರ್ಥಗಳೇ ರುಚಿಯಾಗಿರುತ್ತಿದ್ದವು.

ಉಪಗಮ್ಯ ವನೇ ಪೃಥ್ವೀಂ ಸರ್ವಭೂತವಿಹಿಂಸಯಾ ।
ಅಪಿ ಮೂಲಫಲೈರಿಜ್ಯೋ ಯಜ್ಞಃ ಸ್ವರ್ಗ್ಯಃ ಪರಂತಪ ॥೫॥

ಧರ್ಮಪುತ್ರನೇ, ಕಾಡಿಗೆ ಹೋಗಿ ಯಾವ ಭೂತಗಳಿಗೂ ಹಿಂಸೆ ಇಲ್ಲದಂತೆ ವಾನಪ್ರಸ್ಥಾಶ್ರಮಿಯಾಗಿದ್ದುಕೊಂಡು, ಫಲ-ಮೂಲಗಳಿಂದಲೇ ಯಜ್ಞವನ್ನು ನಡೆಸಿದರೂ ಆ ಯಜ್ಞವು ಸ್ವರ್ಗಫಲವನ್ನು ನೀಡುತ್ತದೆ.

ತಸ್ಯ ಭಾರ್ಯಾ ವ್ರತಕೃಶಾ ಶುಚಿಃ ಪುಷ್ಕರಚಾರಿಣೀ ।
ಯಜ್ಞಪತ್ನೀತ್ವಮಾನೀತಾ ಸತ್ಯೇನಾನುವಿಧೀಯತೇ ।
ಸಾ ತು ಶಾಪಪರಿತ್ರಸ್ತಾ ನ ಸ್ವಭಾವಾನುವರ್ತಿನೀ ॥೬॥

ಸತ್ಯನೆಂಬ ಹೆಸರುಳ್ಳ ಬ್ರಾಹ್ಮಣನು ಪುಷ್ಕರಚಾರಿಣಿ ಎಂಬ ತನ್ನ ಪತ್ನಿಯ ಜೊತೆಗೆ ಸೇರಿ ಶಾಕ ಯಜ್ಞವನ್ನೇ ಮಾಡತೊಡಗಿದನು. ಇದು ವಿಧ್ಯುಕ್ತವಲ್ಲವೆಂದು ತಿಳಿದಿದ್ದರೂ ಅವನ ಪತ್ನಿಯು ಪತಿಯನ್ನೇ ಅನುಸರಿಸುತ್ತಾ ಯಜ್ಞಕಾರ್ಯಕ್ಕಾಗಿ ತಾನು ಪತಿಯೊಡನೆ ಇರಬೇಕಾಗಿದುದ್ದರಿಂದ ಶಾಪಭೀತಿಯಿಂದಲೂ ಅವನ ಇಷ್ಟಕ್ಕನುಸಾರವಾಗಿ ಹೋಗುತ್ತಿದ್ದಳು.

ಮಯೂರಜೀರ್ಣಪರ್ಣಾನಾಂ ವಸ್ತ್ರಂ ತಸ್ಯಾಶ್ಚ ಪರ್ಣಾನಾಮ್ ।
ಅಕಾಮಾಯಾಃ ಕೃತಂ ತತ್ರ ಯಜ್ಞಹೋತ್ರಾನುಮಾರ್ಗತಃ ॥೭॥

ಶುಕಸ್ಯ ಪುನರಾಜಾತಿರವಧ್ಯಾನಾದಧರ್ಮವತ್ ।
ತಸ್ಮಿನ್ ವನೇ ಸಮೀಪಸ್ಥೋ ಮೃಗೋಽಭೂತ್ ಸಹಚಾರಿಕಃ ।
ವಚೋಭಿರಬ್ರವೀತ್ ಸತ್ಯಂ ತ್ವಯಾ ದುಷ್ಕೃತಕಂ ಕೃತಮ್ ॥೮॥

ಅವಳು ನವಿಲಿನಿಂದ ಜೀರ್ಣವಾಗಿ ಉದುರಿದ ನವಿಲಿನ ಗರಿಗಳನ್ನೇ ತೆಗೆದುಕೊಂಡು ಬಟ್ಟೆಯನ್ನು ಮಾಡಿಕೊಂಡು ಅದನ್ನೇ ಧರಿಸುತ್ತಿದ್ದಳು. ಯಜ್ಞವನ್ನಾಗಲಿ, ಯಜ್ಞದ ಫಲವನ್ನಾಗಲಿ ಇಚ್ಛಿಸದ ಪುಷ್ಕರಚಾರಿಣಿಯು ಹೋತೃವಿನ ಆಜ್ಞೆಯಂತೆ ಯಜ್ಞಕಾರ್ಯವನ್ನು ನಿರ್ವಹಿಸುತ್ತಿದ್ದಳು. ಗಂಡನ ಯಜ್ಞದ ಬಗ್ಗೆ ಸಮಾಧಾನವಿಲ್ಲದ ಪತ್ನಿಯು ಹೋಮ ನಡೆಯುವ ಪ್ರಸಂಗದಲ್ಲಿಯೇ ಪಕ್ಷಿಕುಲಕ್ಕೆ ಸೇರಿದ ಒಂದು ಹಕ್ಕಿಯನ್ನು ಯಜ್ಞಕ್ಕಾಗಿ ವಧಿಸಿದಳು. ಈ ಅಧರ್ಮದ ವಧೆಯನ್ನು ಕಂಡ ಆ ಪಕ್ಷಿ ಕುಲದ ಜೊತೆಗೆ ಸಂಚರಿಸುವ ಒಂದು ಜಿಂಕೆಯು ಆ ಆಶ್ರಮದ ಸಮೀಪದಲ್ಲೇ ವಾಸ ಮಾಡುತ್ತಿತ್ತು. ಇವರು ಮಾಡಿದ ಅಧರ್ಮದ ಕ್ರಿಯೆಯನ್ನು ಕಂಡು ಯಜ್ಞ ಮಂಟಪದ ಸಮೀಪಕ್ಕೆ ಬಂದು ಸತ್ಯನೆಂಬ ಬ್ರಾಹ್ಮಣನನ್ನು ಕುರಿತು ನೀನು ಅಸತ್ಕರ್ಮವನ್ನು ಮಾಡುತ್ತಿರುವಿ ಎಂದು ಹೇಳಿತು.

ಯದಿ ಮಂತ್ರಾಂಗಹೀನೋಽಯಂ ಯಜ್ಞೋ ಭವತಿ ವೈಕೃತಃ ।
ಮಾಂ ಭೋಃ ಪ್ರಕ್ಷಿಪ ಹೋತ್ರೇ ತ್ವಂ ಗಚ್ಛ ಸ್ವರ್ಗಮತಂದ್ರಿತಃ ॥೯॥

ಬ್ರಾಹ್ಮಣನೇ, ಈ ಯಜ್ಞವೇನಾದರೂ ಅಂಗಹೀನ, ಮಂತ್ರಹೀನವಾದರೆ ಯಜಮಾನನಿಗೆ ಅದು ದುಷ್ಕರ್ಮವಾಗಿ ಪರಿಣಾಮವಾಗಿ ಹೊಂದುತ್ತದೆ. ಆದ್ದರಿಂದ ನನ್ನನ್ನೇ ಹೊತೃವಿಗೆ ಒಪ್ಪಿಸಿ ಈ ಯಜ್ಞದಲ್ಲಿ ಸಮರ್ಪಿಸಿ ನಿಷ್ಕಳಂಕನಾಗಿ ಸ್ವರ್ಗಕ್ಕೆ ಹೋಗು.

ತತಸ್ತು ಯಜ್ಞೇ ಸಾವಿತ್ರೀ ಸಾಕ್ಷಾತ್ತಂ ಸನ್ನ್ಯಮಂತ್ರಯತ್ ।
ನಿಮಂತ್ರಯಂತೀ ಪ್ರತ್ಯುಕ್ತಾ ನ ಹನ್ಯಾಂ ಸಹವಾಸಿನಮ್ ॥೧೦॥

ಜಿಂಕೆಯು ಹೀಗೆ ಹೇಳಿದ ಬಳಿಕ ಆ ಯಜ್ಞವೇದಿಕೆಯಲ್ಲಿ ಸಾಕ್ಷಾತ್ ಸಾವಿತ್ರಿಯೇ ಕಾಣಿಸಿಕೊಂಡು ಸತ್ಯನಿಗೆ ಮೃಗವು ಹೇಳಿದಂತೆ ಮಾಡಲು ಸಲಹೆಯನ್ನು ನೀಡಿದಳು. ಆದರೆ ಬ್ರಾಹ್ಮಣನು ನನ್ನ ಆಶ್ರಮದಲ್ಲೇ ವಾಸಿಸುವ ಈ ಜಿಂಕೆಯನ್ನು ನಾನು ಕೊಲ್ಲುವುದಿಲ್ಲ ಎಂದು ಉತ್ತರಿಸಿದನು.

ಏವಮುಕ್ತಾ ನಿವೃತ್ತಾ ಸಾ ಪ್ರವಿಷ್ಟಾ ಯಜ್ಞಪಾವಕಮ್ ।
ಕಿಂ ನು ದುಶ್ಚರಿತಂ ಯಜ್ಞೇ ದಿದೃಕ್ಷುಃ ಸಾ ರಸಾತಲಮ್ ॥೧೧॥

ಹೀಗೆ ಹೇಳಿದ ಬಳಿಕ ಸಾವಿತ್ರಿಯು ಹಿಂದಿರುಗಿ ಯಜ್ಞಾಗ್ನಿಯನ್ನು ಪ್ರವೇಶಿಸಿದಳು. ಪಶುವಿಲ್ಲದ ಯಜ್ಞದಲ್ಲಿ ನಡೆಯಬಹುದಾದ ನ್ಯೂನತೆಯನ್ನು ನೋಡಲು ಇಚ್ಛಿಸಿ ಆಗಮಿಸಿದ ಸಾವಿತ್ರಿಯು ರಸಾತಲಕ್ಕೆ ಹೊರಟು ಹೋದಳು.

ಸಾ ತು ಬದ್ಧಾಂಜಲಿಃ ಸತ್ಯಮಯಾಚದ್ಧರಿಣಂ ಪುನಃ ।
ಸತ್ಯೇನ ಸಂಪರಿಷ್ವಜ್ಯ ಸಂದಿಷ್ಟೋ ಗಮ್ಯತಾಮಿತಿ ॥೧೨॥

ಜಿಂಕೆಯು ಸಾವಿತ್ರಿಯ ಎದುರಿನಲ್ಲಿ ಕೈಮುಗಿದು ನಿಂತಿರುವ ಸತ್ಯನೆಂಬ ಋಷಿಯನ್ನು ಕುರಿತು, ತನ್ನನ್ನು ಯಜ್ಞದ ಪಶುವನ್ನಾಗಿ ಉಪಯೋಗಿಸಿಕೊಳ್ಳುವಂತೆ ಪುನಃ ಪುನಃ ಪ್ರಾರ್ಥಿಸಿದನು. ಸತ್ಯನಾದರೂ ಜಿಂಕೆಯನ್ನು ತಬ್ಬಿಕೊಂಡು ಪ್ರೀತಿಯಿಂದ ನೀನು ಇಲ್ಲಿಂದ ಹೊರಟು ಹೋಗು ಎಂದು ಹೇಳಿದನು.

ತತಃ ಸ ಹರಿಣೋ ಗತ್ವಾ ಪದಾನ್ಯಷ್ಟೌ ನ್ಯವರ್ತತ ।
ಸಾಧು ಹಿಂಸಯ ಮಾಂ ಸತ್ಯ ಹತೋ ಯಾಸ್ಯಾಮಿ ಸದ್ಗತಿಮ್ ॥೧೩॥

ಸತ್ಯನ ಮಾತಿಗನುಗುಣವಾಗಿ ಎಂಟು ಹೆಜ್ಜೆಯನ್ನು ಮುಂದಿಟ್ಟ ಜಿಂಕೆಯು ಪುನಃ ತಿರುಗಿ ಬಂದು ವಿಧಿಪೂರ್ವಕವಾಗಿ ನನ್ನನ್ನು ಹಿಂಸಿಸು. ಯಜ್ಞಪಶುವಾಗಿ ಮರಣವನ್ನು ಹೊಂದುವ ನಾನು ಸದ್ಗತಿಯನ್ನು ಹೊಂದುತ್ತೇನೆ ಎಂದು ಹೇಳಿತು.

ಪಶ್ಯ ಹ್ಯಪ್ಸರಸೋ ದಿವ್ಯಾ ಮಯಾ ದತ್ತೇನ ಚಕ್ಷುಷಾ ।
ವಿಮಾನಾನಿ ವಿಚಿತ್ರಾಣಿ ಗಂಧರ್ವಾಣಾಂ ಮಹಾತ್ಮನಾಮ್ ॥೧೪॥

ಸತ್ಯ ಋಷಿಯೇ, ನಿನಗೆ ದಿವ್ಯದೃಷ್ಟಿಯನ್ನು ನೀಡುತ್ತೇನೆ. ಆಕಾಶದ ಕಡೆ ನೋಡು. ದಿವ್ಯರೂಪದ ಅಪ್ಸರೆಯರು, ಮಹಾತ್ಮರಾದ ಗಂಧರ್ವರು, ಅವರ ವಿಚಿತ್ರವಾದ ವಿಮಾನಗಳು ಆಕಾಶದಲ್ಲಿ ನಿನಗೆ ಕಾಣಿಸುತ್ತವೆ.

ತತಃ ಸುರುಚಿರಂ ದೃಷ್ಟ್ವಾ ಸ್ಪೃಹಾಲಗ್ನೇನ ಚಕ್ಷುಷಾ ।
ಮೃಗಮಾಲೋಕ್ಯ ಹಿಂಸಾಯಾಂ ಸ್ವರ್ಗವಾಸಂ ಸಮರ್ಥಯತ್ ॥೧೫॥

ಜಿಂಕೆಯು ಹೀಗೆ ಹೇಳಿದ ಬಳಿಕ ಆ ಮೃಗವು ನೀಡಿದ ದಿವ್ಯದೃಷ್ಟಿಯಿಂದ ಸತ್ಯ ಋಷಿಯು ಆಕಾಶದ ಕಡೆ ನೋಡಿದನು. ಆಸೆಯಿಂದ ಕೂಡಿದ ಕಣ್ಣುಗಳಿಂದ ಸುಂದರವಾದ ಸ್ವರ್ಗವಾಸದ ದೃಶ್ಯವನ್ನು ನೋಡುತ್ತಾ ಮೃಗಹಿಂಸೆಯಿಂದ ಸ್ವರ್ಗ ಸುಖವಿದೆ ಎಂದು ನಿಶ್ಚಯಿಸಿಕೊಂಡನು.

ಸ ತು ಧರ್ಮೋ ಮೃಗೋ ಭೂತ್ವಾ ಬಹುವರ್ಷೋಷಿತೋ ವನೇ ।
ತಸ್ಯ ನಿಷ್ಕೃತಿಮಾಧತ್ತ ನ ಹ್ಯಸೌ ಯಜ್ಞಸಂವಿಧಿಃ ॥೧೬॥

ಯಮಧರ್ಮನು ಜಿಂಕೆಯಾಗಿ ಅನೇಕ ವರ್ಷಗಳಿಂದ ಆ ಕಾಡಿನಲ್ಲಿ ವಾಸ ಮಾಡುತ್ತಿದ್ದನು. ಅವನು ಆ ಜಿಂಕೆಯ ರೂಪವನ್ನು ಕಳೆದುಕೊಂಡು ನಿಜರೂಪವನ್ನು ಹೊಂದಿದನು. ಸತ್ಯನು ಮಾಡುವ ಯಜ್ಞದ ವಿಧಿಯು ಸಮೀಚೀನವಾಗಿರುವುದಿಲ್ಲ. ಅವಿಧಿಯಿಂದ ಮಾಡಿದ ಯಜ್ಞವು ಪುಣ್ಯಹ್ರಾಸಕ್ಕೆ ಕಾರಣವಾಗಿದೆ. ಇವನು ಮಂತ್ರವೇ ಇಲ್ಲದೆ ಪತ್ನಿಯನ್ನು ಕೂಡಿಕೊಂಡು ಒಂದು ಪಕ್ಷಿಹೋಮವನ್ನು ಮಾಡಿದ್ದಾನೆ. ಹಿಂಸೆಯಲ್ಲಿ ಇವನ ಮನಸ್ಸು ಲಗ್ನವಾಗಿದೆ. ಇವನ ಯಜ್ಞವು ಸಾಧುವಾದದಲ್ಲ ಎಂದು ಜಿಂಕೆಯ ರೂಪದ ಯಮಧರ್ಮನು ಭಾವಿಸಿದನು.

ತಸ್ಯ ತೇನ ತು ಭಾವೇನ ಮೃಗಹಿಂಸಾತ್ಮನಸ್ತದಾ ।
ತಪೋ ಮಹತ್ ಸಮುಚ್ಛಿನ್ನಂ ತಸ್ಮಾದ್ಧಿಂಸಾ ನ ಯಜ್ಞಿಯಾ ॥೧೭॥

ಸತ್ಯ ಋಷಿಯು ಮೃಗಹಿಂಸೆಯು ಅಧರ್ಮ ಎಂಬ ಬುದ್ಧಿಯಿಂದ ತನ್ನ ಶ್ರೇಷ್ಠವಾದ ತಪಸ್ಸನ್ನು ಕಳೆದುಕೊಂಡನು. ಆದ್ದರಿಂದ ಯಾಜ್ಞಿಯ ಹಿಂಸಾ ಎನ್ನುವುದು ಧರ್ಮಸಾಧನವೇ ಆಗಿದೆ. ಧರ್ಮಸಾಧನವಾದ ಹಿಂಸೆಯನ್ನು ಹಿಂಸೆ ಎಂದು ತಿಳಿಯಬಾರದು. ಹಾಗೆ ತಿಳಿದ ಕಾರಣ ಸತ್ಯಋಷಿಯ ತಪಸ್ಸು ಕ್ಷಯ ಹೊಂದಿತು.

ತತಸ್ತಂ ಭಗವಾನ್ ಧರ್ಮೋ ಯಜ್ಞಂ ಯಾಜಯತ ಸ್ವಯಮ್ ।
ಸಮಾಧಾನಂ ಚ ಭಾರ್ಯಾಯಾ ಲೇಭೇ ಸ ತಪಸಾ ಪರಮ್ ॥೧೮॥

ಬಳಿಕ ಮೃಗರೂಪಿಯಾದ ಯಮಧರ್ಮನೇ ಪ್ರತ್ಯಕ್ಷನಾಗಿ ನಿಂತು ಸತ್ಯನಿಂದ ಯಾಜ್ಞೀಯ ಪಶು ಆಲಂಬನವನ್ನು ಮಾಡಿಸಿ ಯಜ್ಞವನ್ನು ಮಾಡಿಸಿದನು. ಸತ್ಯನು ತಪಶ್ಚರ್ಯದಿಂದಲೇ ಹೆಚ್ಚಿನ ಸಮಾಧಾನವನ್ನು ಪಡೆದನು. ಅವನ ಪತ್ನಿಯಾದ ಪುಷ್ಕರಚಾರಿಣಿಯು ಸಮಾಧಾನವನ್ನು ಹೊಂದಿದಳು.

ಅಹಿಂಸಾ ಸಕಲೋ ಧರ್ಮೋ ಹಿಂಸಾ ಯಜ್ಞೇ ಸಮಾಹಿತಾ ।
ಸತ್ಯಂ ತೇऽಹಂ ಪ್ರವಕ್ಷ್ಯಾಮಿ ಯೋ ಧರ್ಮಃ ಸತ್ಯವಾದಿನಾಮ್ ॥೧೯॥

ಅಹಿಂಸೆಯು ಎಲ್ಲರಿಗೂ ಸಂಬಂಧಿಸಿದ ಧರ್ಮವಾಗಿದೆ. ಆದರೆ ಯಜ್ಞದಲ್ಲಿ ಹಿಂಸೆಯು ಧರ್ಮವೇ ಆಗಿದೆ. ನಿನಗೆ ಸತ್ಯವಾದಿಗಳ ಧರ್ಮವು ಯಾವುದೋ ಅದನ್ನೇ ಸತ್ಯವಾಗಿ ಹೇಳಿದ್ದೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅವಿಧಿಕೃತಯಜ್ಞನಿಂದಾ ನಾಮ
ಸಪ್ತಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಭೀಷ್ಮರು ಧರ್ಮಜನಿಗೆ ಧರ್ಮಾಚರಣೆಯ ಮಹತ್ವವನ್ನು ಬೋಧಿಸಿದುದು.

ಯುಧಿಷ್ಠಿರಃ

ಕಥಂ ಭವತಿ ಪಾಪಾತ್ಮಾ ಕಥಂ ಧರ್ಮಂ ಕರೋತಿ ವಾ ।
ಕೇನ ನಿರ್ವೇದಮಾದತ್ತೇ ಮೋಕ್ಷಂ ವಾ ಕೇನ ಗಚ್ಛತಿ ॥೧॥

ಪಿತಾಮಹನೇ, ಮನುಷ್ಯನು ಪಾಪಿಷ್ಠನಾಗುವುದು ಹೇಗೆ? ಅವನ ಬುದ್ಧಿಯು ಧರ್ಮದಲ್ಲಿ ಪ್ರವೃತ್ತಿಯನ್ನು ಹೊಂದುವುದು ಹೇಗೆ? ಅವನಿಗೆ ವೈರಾಗ್ಯಕ್ಕೆ ಯಾವುದು ಕಾರಣ? ಮೋಕ್ಷಕ್ಕೆ ಹೇಗೆ ಹೋಗುತ್ತಾನೆ? ಇವುಗಳಿಗೆ ಉತ್ತರಿಸು.

ಭೀಷ್ಮಃ

ವಿದಿತಾಃ ಸರ್ವಧರ್ಮಾಸ್ತೇ ಸ್ಥಿತ್ಯರ್ಥಮನುಪೃಚ್ಛಸಿ ।
ಶೃಣು ಮೋಕ್ಷಂ ಸನಿರ್ವೇದಂ ಪಾಪಂ ಧರ್ಮಂ ಚ ಮೂಲತಃ ॥೨॥

ಕುಮಾರನೇ, ನಿನಗೆ ತಿಳಿಯದ ಧರ್ಮದ ನಿರ್ಣಯವಿಲ್ಲ. ಆದರೂ ನಿನ್ನ ಮನಸ್ಸಿನ ನಿಶ್ಚಯವನ್ನು ದೃಢೀಕರಿಸಿಕೊಳ್ಳಲು ನನ್ನನ್ನು ಕೇಳುತ್ತಿರುವಿ. ನೀನು ಕೇಳಿದ ನಾಲ್ಕು ವಿಷಯಗಳನ್ನು ವಿಸ್ತರಿಸುತ್ತೇನೆ, ಕೇಳು.

ವಿಜ್ಞಾನಾರ್ಥಂ ಹಿ ಪಂಚಾನಾಮಿಚ್ಛಾ ಪೂರ್ವಂ ಪ್ರವರ್ತತೇ ।
ಪ್ರಾಪ್ಯ ತಾನ್ ಜಾಯತೇ ಕಾಮೋ ದ್ವೇಷೋ ವಾ ಭರತರ್ಷಭ ॥೩॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದರಲ್ಲಿ ಯಾವುದು ಇಂದ್ರಿಯ ಗೋಚರವಾದರೂ ಕೂಡಲೇ ಆಸೆಯು ಅದರ ಬೆನ್ನಿನ ಹಿಂದೆ ಓಡುತ್ತದೆ. ಆಸೆ ಉಂಟಾದ ಮೇಲೆ ಅದರಲ್ಲಿ ಕಾಮವೋ ಅಥವಾ ದ್ವೇಷವೋ ಹುಟ್ಟುತ್ತದೆ.

ತತಸ್ತದರ್ಥಂ ಯತತೇ ಕರ್ಮ ಚಾರಭತೇ ಪುನಃ ।
ಇಷ್ಟಾನಾಂ ರೂಪಗಂಧಾನಾಮಭ್ಯಾಸಂ ಚ ಚಿಕೀರ್ಷತಿ ॥೪॥

ಅದರ ಮೇಲೆ ಹುಟ್ಟಿದ ಇಚ್ಛಾ-ದ್ವೇಷಗಳನ್ನು ತೀರಿಸಿಕೊಳ್ಳಲು ಮನುಷ್ಯನು ಕಷ್ಟದಿಂದ ಕರ್ಮಗಳನ್ನು ಆಚರಿಸುತ್ತಾನೆ. ರೂಪ-ರಸ-ಗಂಧಗಳನ್ನು ಅನುಭವಿಸಬೇಕೆಂದು ತವಕ ಪಡುತ್ತಾನೆ.

ತತೋ ರಾಗಃ ಪ್ರಭವತಿ ದ್ವೇಷಶ್ಚ ತದನಂತರಮ್ ।
ತತೋ ಲೋಭಃ ಪ್ರಭವತಿ ಮೋಹಶ್ಚ ತದನಂತರಮ್ ॥೫॥

ಇದರಿಂದ ರಾಗವು ಉತ್ಪನ್ನವಾಗುತ್ತದೆ. ನಂತರ ಕ್ರಮವಾಗಿ ದ್ವೇಷ, ಮೋಹ, ಲೋಭ ಒಂದರ ಬಳಿಕ ಒಂದು ತಲೆದೋರುತ್ತವೆ.

ಲೋಭಮೋಹಾಭಿಭೂತಸ್ಯ ರಾಗದ್ವೇಷಾನ್ವಿತಸ್ಯ ಚ ।
ನ ಧರ್ಮೇ ಜಾಯತೇ ಬುದ್ಧಿರ್ವ್ಯಾಜಾದ್ ಧರ್ಮಂ ಕರೋತಿ ಚ ॥೬॥

ಈ ದುರ್ಗುಣಗಳಿಗೆ ವಶನಾದವನ ಬುದ್ಧಿಯು ಧರ್ಮದಲ್ಲಿ ಪ್ರವೃತ್ತಿಯನ್ನು ಹೊಂದದು. ಲೋಭ-ಮೋಹ-ರಾಗ-ದ್ವೇಷಗಳಿಂದ ಕೂಡಿದವನು ಧರ್ಮಶೀಲನಾಗಲಾರನು.

ವ್ಯಾಜೇನ ಚರತೋ ಧರ್ಮಮರ್ಥವ್ಯಾಜೋಽಪಿ ರೋಚತೇ ।
ವ್ಯಾಜೇನ ಸಿದ್ಧ್ಯಮಾನೇಷು ಧನೇಷು ಕುರುನಂದನ ॥೭॥

ತತ್ರೈವ ಕುರುತೇ ಬುದ್ಧಿಂ ತತಃ ಪಾಪಂ ಚಿಕೀರ್ಷತಿ ।
ಸುಹೃದ್ವಿರ್ವಾರ್ಯಮಾಣೋಽಪಿ ಪಂಡಿತೈಶ್ಚಾಪಿ ಭಾರತ ॥೮॥

ಇಂತಹ ಬುದ್ಧಿಯಿಂದ ಕೂಡಿದವರು ಧರ್ಮಾಚರಣೆಯನ್ನು ಮಾಡಿದರೂ ಒಂದು ನೆಪವನ್ನಿಟ್ಟುಕೊಂಡೇ ಮಾಡುತ್ತಾರೆ. ಹೀಗೆ ಒಂದು ನಿಮಿತ್ತದಿಂದ ಧರ್ಮಾರ್ಥಗಳನ್ನು ಬಯಸುವವನ ಬುದ್ಧಿಯು ಪಾಪಕರ್ಮದಲ್ಲೇ ಆಸಕ್ತಿಯನ್ನು ಹೊಂದಿ ಪಾಪವನ್ನೇ ಮಾಡಿಸುತ್ತದೆ. ವಿದ್ವಾಂಸರು, ಸ್ನೇಹಿತರು ಬೇಡವೆಂದು ತಡೆದರೂ ಅವನು ಕೇಳುವುದಿಲ್ಲ.

ಉತ್ತರಂ ನ್ಯಾಯಸಂಬದ್ಧಂ ಬ್ರವೀತಿತಿ ವಿಚೋದಿತಃ ।
ಅಧರ್ಮಸ್ತ್ರಿವಿಧಸ್ತಸ್ಯ ವರ್ಧತೇ ರಾಗಮೋಹಜಃ ॥೯॥

ಯಾರಾದರೂ ಇಂತಹ ದುಷ್ಕರ್ಮವನ್ನು ಮಾಡಬೇಡ ಎಂದು ಹೇಳಿದರೆ ಮೇಲ್ನೋಟಕ್ಕೆ ನ್ಯಾಯವೆಂದು ತೋರುವಂಥ ಕುತರ್ಕನ್ಯಾಯಗಳಿಂದ ಕೂಡಿದ ಮಾತುಗಳನ್ನು ತನ್ನ ಶಾಸ್ತ್ರಕ್ಕೆ ಅನುಕೂಲವಾಗುವಂತೆ ಹೇಳಿ ಬಾಯಿ ಮುಚ್ಚಿಸುತ್ತಾನೆ. ಅವನ ಪಾಪ ಪ್ರವೃತ್ತಿಯು ರಾಗ-ಮೋಹಗಳಿಂದ ಮೂರು ಮಾರ್ಗಗಳಿಂದ ವೃದ್ಧಿಯನ್ನು ಹೊಂದುತ್ತಲೇ ಇರುತ್ತದೆ.

ಪಾಪಂ ಚಿಂತಯತೇ ಚೈವ ಪ್ರಬ್ರವೀತಿ ಕರೋತಿ ಚ ।
ತಸ್ಯಾಧರ್ಮಪ್ರವತ್ತಸ್ಯ ದೋಷಾನ್ ಪಶ್ಯಂತಿ ಸಾಧವಃ ॥೧೦॥

ಅವನ ಮನಸ್ಸು ಪಾಪವನ್ನೇ ಚಿಂತಿಸುತ್ತಿರುತ್ತದೆ. ಬಾಯಿಂದಲೂ ಪಾಪವನ್ನೇ ಆಡುತ್ತಾನೆ. ಕಾರ್ಯದಿಂದಲೂ ಪಾಪವನ್ನೇ ನಡೆಸುತ್ತಾನೆ. ಸಾಧುಗಳು ಅಂತಹವನ ದೋಷಗಳನ್ನು ಕಂಡುಕೊಂಡು ದೂರವಾಗುತ್ತಾರೆ.

ಏಕಶೀಲಾಶ್ಚ ಮಿತ್ರತ್ವಂ ಭಜಂತೇ ಪಾಪಕರ್ಮಿಣಃ ।
ಸ ನೇಹ ಸುಖಮಾಪ್ನೋತಿ ಕುತ ಏವ ಪರತ್ರ ವೈ ॥೧೧॥

ಅವನಿಗೆ ಸಮಾನಶೀಲರಾದ ಪಾಪಕರ್ಮಿಗಳು ಕೆಲವರು ಅವನ ಜೊತೆಗೆ ಮಿತ್ರತ್ವವನ್ನು ಹೊಂದಿ, ಅವನನ್ನು ಅದೇ ಮಾರ್ಗದಲ್ಲಿ ಪ್ರಚೋದಿಸುತ್ತಾರೆ. ಅವನಿಗೆ ಇಹಲೋಕದಲ್ಲೇ ಸುಖ ಸಿಗದು. ಇನ್ನು ಪರಲೋಕದಲ್ಲಿ ಸುಖವೆಲ್ಲಿಯದು?

ಏವಂ ಭವತಿ ಪಾಪಾತ್ಮಾ ಧರ್ಮಾತ್ಮಾನಂ ತು ಮೇ ಶೃಣು ।
ಯಥಾ ಕುಶಲಧರ್ಮಾ ಸ ಕುಶಲಂ ಪ್ರತಿಪದ್ಯತೇ ॥೧೨॥

ಈ ರೀತಿಯಾಗಿ ಪಾಪಾತ್ಮನ ಮಾರ್ಗವನ್ನು ತಿಳಿಸಿದ್ದೇನೆ. ಧರ್ಮಾತ್ಮನ ರೀತಿಯನ್ನು ತಿಳಿಸುತ್ತೇನೆ, ಕೇಳು. ಮತ್ತೊಬ್ಬರ ಕುಶಲವನ್ನು ಚಿಂತಿಸುವ ಧರ್ಮಾತ್ಮನು ತಾನೂ ಕ್ಷೇಮವನ್ನು ಹೊಂದುತ್ತಾನೆ.

ಯ ಏತಾನ್ ಪ್ರಜ್ಞಯಾ ದೋಷಾನ್ ಪೂರ್ವಮೇವಾನುಪಶ್ಯತಿ ।
ಕುಶಲಃ ಸುಖದುಃಖಾನಾಂ ಸಾಧೂಂಶ್ಚಾಪ್ಯುಪಸೇವತೇ ॥೧೩॥

ತಸ್ಯ ಸಾಧುಸಮಾಚಾರಾದಭ್ಯಾಸಾಚ್ಚೈವ ವರ್ಧತೇ ।
ಪ್ರಜ್ಞಾ ಧರ್ಮೇ ಚ ರಮತೇ ಧರ್ಮಂ ಚೈವೋಪಜೀವತಿ ॥೧೪॥

ಯಾವನು ತನ್ನ ಜಾಣತನದಿಂದ ಹಿಂದೆ ಹೇಳಿದ ದೋಷಗಳನ್ನು ಮೊದಲೇ ತಿಳಿದುಕೊಳ್ಳುತ್ತಾನೋ ಅವನು ಸುಖ-ದುಃಖಗಳನ್ನು ವಿಮರ್ಶಿಸಿದುದರಿಂದ, ಸಾಧುಗಳನ್ನು ಸೇವಿಸುವುದರಿಂದಲೂ ಧರ್ಮವು ಅಭಿವೃದ್ಧಿಯನ್ನು ಹೊಂದುತ್ತದೆ. ಅವನ ಬುದ್ಧಿಯು ಧರ್ಮದಲ್ಲಿಯೇ ನಿರತವಾಗಿರುತ್ತದೆ. ಧರ್ಮವನ್ನೇ ನಂಬಿ ಜೀವನವನ್ನು ನಡೆಸುತ್ತಾನೆ.

ಸೋಽಥ ಧರ್ಮಾದವಾಪ್ತೇಷು ಧನೇಷು ಕುರುತೇ ಮನಃ ।
ತಸ್ಯೈವ ಸಿಂಚತೇ ಮೂಲಂ ಗುಣಾನ್ ಪಶ್ಯತಿ ಯತ್ರ ವೈ ॥೧೫॥

ಅವನು ಧನವನ್ನು ಬಯಸಿದರೂ ಧರ್ಮಮಾರ್ಗದಿಂದ ಬರುವ ಧನವನ್ನೇ ಬಯಸುತ್ತಾನೆ. ಎಲ್ಲಿ ಗುಣಗಳು ಕಾಣುತ್ತವೋ ಆ ಗುಣಗಳನ್ನು ಧರ್ಮದ ಬುದ್ಧಿಯಿಂದ ಮತ್ತಷ್ಟು ಅಭಿವೃದ್ಧಿ ಪಡಿಸಿಕೊಳ್ಳುತ್ತಾನೆ.

ಧರ್ಮಾತ್ಮಾ ಭವತಿ ಹ್ಯೇವಂ ಮಿತ್ರಂ ಚ ಲಭತೇ ಶುಭಮ್ ।
ಸ ಮಿತ್ರಧನಲಾಭಾತ್ತು ಪ್ರೇತ್ಯ ಚೇಹ ಚ ನಂದತಿ ॥೧೬॥

ಧರ್ಮಾತ್ಮನಾದವನು ಒಳ್ಳೆಯ ಮಿತ್ರರನ್ನೇ ಹೊಂದುತ್ತಾನೆ. ಒಳ್ಳೆಯ ಮಿತ್ರರನ್ನು ಧರ್ಮಾರ್ಜಿತವಾದ ಧನವನ್ನು, ಸತ್ಸಂತಾನವನ್ನು ಪಡೆಯುವುದರಿಂದ ಇಹ-ಪರಲೋಕಗಳಲ್ಲಿಯೂ ಆನಂದವನ್ನು ಪಡೆಯುತ್ತಾನೆ.

ಶಬ್ದೇ ಸ್ಪರ್ಶೇ ತಥಾ ರೂಪೇ ರಸೇ ಗಂಧೇ ಚ ಭಾರತ ।
ಪ್ರಭುತ್ವಂ ಲಭತೇ ಜಂತುರ್ಧರ್ಮಸ್ಯೈತತ್ಫಲಂ ವಿದುಃ ॥೧೭॥

ಹಿಂದೆ ತಿಳಿಸಿದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳಲ್ಲಿ ಯಾವನು ಪ್ರಭುತ್ವವನ್ನು ಸಂಪಾದಿಸಿಕೊಂಡಿರುತ್ತಾನೋ ಅವನು ಧರ್ಮದ ಫಲವನ್ನು ಹೊಂದಿದ್ದಾನೆ ಎಂಬುದೇ ನಿಶ್ಚಯವು.

ಸ ಧರ್ಮಸ್ಯ ಫಲಂ ಲಬ್ಧ್ವಾ ನ ತೃಪ್ಯತಿ ಯುಧಿಷ್ಠಿರ ।
ಅತೃಪ್ಯಮಾಣೋ ನಿರ್ವೇದಮಾದತ್ತೇ ಜ್ಞಾನಚಕ್ಷುಷಾ ॥೧೮॥

ಅವನು ಧರ್ಮದ ಫಲವನ್ನು ಹೊಂದಿ ಶಬ್ದಾದಿ ವಿಷಯಗಳನ್ನು ಹೊಂದಿದರೂ ಅದಕ್ಕೆ ಮನಸೋಲುವುದಿಲ್ಲ. ಧರ್ಮದಿಂದ ತನಗುಂಟಾದ ಫಲಕ್ಕೆ ತೃಪ್ತಿಗೊಳ್ಳದೆ ಜ್ಞಾನದೃಷ್ಟಿಯಿಂದ ವೈರಾಗ್ಯವನ್ನೇ ಅನುಸರಿಸುತ್ತಾನೆ.

ಪ್ರಜ್ಞಾಚಕ್ಷುರ್ಯದಾ ಕಾಮೇ ದೋಷಮೇವಾನುಪಶ್ಯತಿ ।
ವಿರಜ್ಯತೇ ತದಾ ಕಾಮಾನ್ನ ಚ ಧರ್ಮಂ ವಿಮುಂಚತಿ ॥೧೯॥

ರಸ-ಗಂಧಾದಿಗಳಲ್ಲಿ ತೃಪ್ತಿಯನ್ನು ಹೊಂದದೆ ಅದರಲ್ಲಿ ದೋಷಗಳನ್ನೇ ಕಾಣುತ್ತಾ ಶಬ್ದಾದಿಗಳಲ್ಲಿ ವಿರಕ್ತನಾದುದರಿಂದ ಅವನು ಕಾಮನೆಗಳಿಂದಲೂ ಮುಕ್ತನಾಗುತ್ತಾನೆ. ಅವನು ಧರ್ಮಮಾರ್ಗದಿಂದ ವಂಚಿತನಾಗುವುದಿಲ್ಲ.

ಸರ್ವತ್ಯಾಗೇ ಚ ಯತತೇ ದೃಷ್ಟ್ವಾ ಲೋಕಂ ಕ್ಷಯಾತ್ಮಕಮ್ ।
ತತೋ ಮೋಕ್ಷಾಯ ಯತತೇ ನಾನುಪಾಯಾದುಪಾಯತಃ ॥೨೦॥

ಲೋಕವೆಲ್ಲವೂ ನಶಿಸುವ ಸ್ವಭಾವವುಳ್ಳದ್ದು ಎಂದು ತಿಳಿದ ಆ ಜ್ಞಾನಿಯು ಎಲ್ಲವನ್ನೂ ಬಿಡುವುದರಲ್ಲಿಯೇ ಪ್ರಯತ್ನವನ್ನು ಮಾಡುತ್ತಾನೆ. ಅವನು ಮೋಕ್ಷಕ್ಕೆ

ಯಾವುದು ಪ್ರತಿಬಂಧಕವೋ, ಉಪಾಯವಲ್ಲವೋ ಅದೆಲ್ಲವನ್ನೂ ಬಿಟ್ಟು ಮೋಕ್ಷೋಪಾಯವನ್ನು ಮಾತ್ರ ಹೊಂದಲು ಪ್ರಯತ್ನಿಸುತ್ತಾನೆ.

ಶನೈರ್ನಿರ್ವೇದಮಾದತ್ತೇ ಪಾಪಂ ಕರ್ಮ ಜಹಾತಿ ಚ ।
ಧರ್ಮಾತ್ಮಾ ಚೈವ ಭವತಿ ಮೋಕ್ಷಂ ಚ ಲಭತೇ ಪರಮ್ ॥೨೧॥

ಕ್ರಮವಾಗಿ ಮೊದಲು ಪಾಪಗಳನ್ನು ದೂರ ಮಾಡಿಕೊಂಡು ವಿರಕ್ತಿಯನ್ನು ಆಶ್ರಯಿಸಿ ಬಳಿಕ ಮೋಕ್ಷವನ್ನು ಹೊಂದುತ್ತಾನೆ.

ಏತತ್ತೇ ಕಥಿತಂ ತಾತ ಯನ್ಮಾಂ ತ್ವಂ ಪರಿಪೃಚ್ಛಸಿ ।
ಪಾಪಂ ಧರ್ಮಂ ತಥಾ ಮೋಕ್ಷಂ ನಿರ್ವೇದಂ ಚೈವ ಭಾರತ ॥೨೨॥

ಕುಮಾರನೇ, ನೀನು ಬಯಸಿದಂತೆ ಪಾಪವನ್ನು, ಧರ್ಮವನ್ನು, ವೈರಾಗ್ಯವನ್ನು, ಮೋಕ್ಷವನ್ನು ಹೊಂದುವ ಮಾರ್ಗಗಳನ್ನು ನಿನಗೆ ವಿವರಿಸಿದ್ದೇನೆ.

ತಸ್ಮಾದ್ಧರ್ಮೇ ಪ್ರವರ್ತೇಥಾಃ ಸರ್ವಾವಸ್ಥಂ ಯುಧಿಷ್ಠಿರ ।
ಧರ್ಮೇ ಸ್ಥಿತಾನಾಂ ಕೌಂತೇಯ ಸಿದ್ಧಿರ್ಭವತಿ ಶಾಶ್ವತೀ ॥೨೩॥

ಆದ್ದರಿಂದ ನೀನು ಸರ್ವಾವಸ್ಥೆಗಳಲ್ಲಿಯೂ ಪ್ರವೃತ್ತಿಯನ್ನು ಹೊಂದು. ಧರ್ಮ ಮಾರ್ಗದಲ್ಲಿ ನಡೆಯುವವರಿಗೆ ಶಾಶ್ವತವಾದ ಸಿದ್ಧಿಯು ಉಂಟಾಗುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂಬತ್ತನೆಯ ಅಧ್ಯಾಯ

ಮೋಕ್ಷೋಪಾಯಗಳನ್ನು ಧರ್ಮರಾಜನಿಗೆ ಭೀಷ್ಮರು ಉಪದೇಶಿಸಿದುದು.

ಯುಧಿಷ್ಠಿರಃ

ಮೋಕ್ಷಃ ಪಿತಾಮಹೇನೋಕ್ತ ನಾನುಪಾಯಾದುಪಾಯತಃ ।
ತಮುಪಾಯಂ ಯಥಾನ್ಯಾಯಂ ಶ್ರೋತುಮಿಚ್ಛಾಮಿ ಭಾರತ ॥೧॥

ಪಿತಾಮಹನೇ, ನೀನು ಮೋಕ್ಷೋಪಾಯಗಳನ್ನು ಉಪದೇಶಿಸಿರುತ್ತಿ. ಯಾವ ಉಪಾಯದಿಂದ ಮೋಕ್ಷಕ್ಕಾಗಿ ಪ್ರಯತ್ನವನ್ನು ಮಾಡುತ್ತಾನೆ? ಯಾವ ಉಪಾಯದಿಂದ ಪ್ರಾಮಾಣಿಕನು ಮೋಕ್ಷಕ್ಕೆ ಹೋಗುತ್ತಾನೆ ಎನ್ನುವುದನ್ನು ನಾನು ನಿನ್ನಿಂದ ಕೇಳಲು ಬಯಸುತ್ತೇನೆ.

ಭೀಷ್ಮಃ

ತ್ವಯ್ಯೇವೈತನ್ಮಹಾಪ್ರಾಜ್ಞ ಯುಕ್ತಂ ನಿಪುಣದರ್ಶನಮ್ ।
ಯದುಪಾಯೇನ ಸರ್ವಾರ್ಥಾನ್ನಿತ್ಯಂ ಮೃಗಯಸೇಽನಘ ॥೨॥

ಧರ್ಮಪುತ್ರನೇ, ನೀನು ಯಾವಾಗಲೂ ಉಪಾಯದಿಂದ ಸಮಸ್ತ ಪುರುಷಾರ್ಥಗಳನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಿಕೊಳ್ಳುವವನು. ಆದ್ದರಿಂದ ಇಂತಹ ಪ್ರಶ್ನೆಯು ನಿನ್ನಂಥವರಿಗೆ ಯೋಗ್ಯವೇ ಆಗಿದೆ.

ಕರಣೇ ಘಟಸ್ಯ ಯಾ ಬುದ್ಧಿರ್ಘಟೋತ್ಪತ್ತೌ ನ ಸಾನಘ ।
ಏವಂ ಧರ್ಮಾಭ್ಯುಪಾಯೇಷು ನಾನ್ಯದ್ಧರ್ಮೇಷು ಕಾರಣಮ್ ॥೩॥

ಯಾವ ವ್ಯಕ್ತಿಗೆ ಒಂದು ಮಡಿಕೆಯನ್ನು ಮಾಡುವ ಉದ್ದೇಶದಲ್ಲಿ ಯಾವ ಬುದ್ಧಿ ಇದೆಯೋ ಅರ್ಥಾತ್ ಮಡಿಕೆಯನ್ನು ಮಾಡಲು ದಂಡ, ಚಕ್ರ, ಮೃತ್ಪಿಂಡಗಳನ್ನು ಸಂಪಾದಿಸಲು ಯಾವ ಬುದ್ಧಿಯಿದೆಯೋ ಆ ಬುದ್ಧಿಯು ಘಟೋತ್ಪತ್ತಿಯಾದ ನಂತರ ಇರುವುದಿಲ್ಲ. ಘಟ ಹುಟ್ಟಿದ ಮೇಲೆ ಮತ್ತೆ ಆ ಘಟವನ್ನು ನಿರ್ಮಿಸಲು ಪ್ರಯತ್ನಿಸುವುದಿಲ್ಲ. ಹೊರತು ಇನ್ನೊಂದು ಘಟವನ್ನು ನಿರ್ಮಾಣ ಮಾಡಲು ಪ್ರಯತ್ನಿಸುತ್ತಾನೆ, ಪ್ರವೃತ್ತಿಯನ್ನು ಹೊಂದುತ್ತಾನೆ. ಇದರಂತೆ ಧರ್ಮಸಾಧನೆಗಳಲ್ಲಿ ಪ್ರಯತ್ನವನ್ನು ಮಾಡಬೇಕು. ಒಂದು ಧರ್ಮವನ್ನು ಸಿದ್ಧಿಸಿಕೊಂಡ ಬಳಿಕ ಇನ್ನೊಂದು ಧರ್ಮಕ್ಕೆ ಪ್ರಯತ್ನವನ್ನು ಮಾಡಬೇಕು.

ಪೂರ್ವೇ ಸಮುದ್ರೇ ಯಃ ಪಂಥಾ ನ ಸ ಗಚ್ಛತಿ ಪಶ್ಚಿಮಮ್ ।
ಏಕಃ ಪಂಥಾ ಹಿ ಮೋಕ್ಷಸ್ಯ ತನ್ಮೇ ವಿಸ್ತರತಃ ಶೃಣು ॥೪॥

ಪೂರ್ವಸಮುದ್ರಕ್ಕೆ ಹೋಗುವ ದಾರಿಯು ಪಶ್ಚಿಮ ಸಮುದ್ರಕ್ಕೆ ಮನುಷ್ಯನನ್ನು ಎಂದೂ ಕರೆದೊಯ್ಯದು. ಅದರಂತೆ ಮೋಕ್ಷಕ್ಕೆ ಸಾಗುವ ಮಾರ್ಗವು ಒಂದೇ ಇದೆ. ಅದನ್ನು ವಿಸ್ತಾರವಾಗಿ ಹೇಳುತ್ತೇನೆ, ಕೇಳು.

ಕ್ಷಮಯಾ ಕ್ರೋಧಮುಚ್ಛಿಂದ್ಯಾತ್ ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾದ್ಧೀರೋ ನಿದ್ರಾಮುಚ್ಛೇತ್ತುಮರ್ಹತಿ ॥೫॥

ಧೀರನು ಕ್ಷಮೆಯಿಂದ ಕೋಪವನ್ನು, ಸಂಕಲ್ಪವನ್ನು ಬಿಡುವುದರಿಂದ ಕಾಮವನ್ನು, ಸತ್ವಗುಣದ ಅಭ್ಯಾಸದಿಂದ ನಿದ್ರೆಯನ್ನು ಜಯಿಸಬೇಕು.

ಅಪ್ರಮಾದಾದ್ ಭಯಂ ರಕ್ಷೇಚ್ಛ್ವಾಸಂ ಕ್ಷೇತ್ರಜ್ಞಶೀಲನಾತ್ ।
ಇಚ್ಛಾಂ ದ್ವೇಷಂ ಚ ಕಾಮಂ ಚ ಧೈರ್ಯೇಣ ವಿನಿವರ್ತಯೇತ್ ॥೬॥

ಎಚ್ಚರದಿಂದ ಭಯವನ್ನು ಪರಿಹರಿಸಿಕೊಳ್ಳಬೇಕು. ಪರಮಾತ್ಮನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿಕೊಳ್ಳುವುದರಿಂದ ಶ್ವಾಸವನ್ನು ನಿಯಂತ್ರಿಸಿಕೊಳ್ಳಬೇಕು. ಅಸಂಪ್ರಜ್ಞಾತ ಸಮಾಧಿಯಿಂದ ಶ್ವಾಸೋಚ್ಛ್ವಾಸವನ್ನು ಗೆಲ್ಲಬೇಕು ಎಂದು ಭಾವ. ಇಚ್ಛಾ-ದ್ವೇಷಗಳನ್ನು ಧೈರ್ಯವೆಂಬ ಗುಣದಿಂದ ನಿಗ್ರಹಿಸಬೇಕು.

ಭ್ರಮಂ ಪ್ರಮೋಹಮಾವರ್ತಮಭ್ಯಾಸಾದ್ ವಿನಿವರ್ತಯೇತ್ ।
ನಿದ್ರಾಂ ಚಾಪ್ರತಿಭಾಂ ಚೈವ ಜ್ಞಾನಾಭ್ಯಾಸೇನ ತತ್ತ್ವವಿತ್ ॥೭॥

ತತ್ತ್ವಜ್ಞಾನದಿಂದ ಭ್ರಮೆ, ಮೋಹ, ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕು. ಜ್ಞಾನಾಭ್ಯಾಸದಿಂದ ನಿದ್ರೆಯನ್ನು, ಅಪ್ರತಿಭೆಯನ್ನು ದೂರೀಕರಿಸಬೇಕು.

ಉಪದ್ರವಾಂಸ್ತಥಾ ರೋಗಾನ್ ಹಿತಜೀರ್ಣಮಿತಾಶನಾತ್ ।
ಲೋಭಂ ಮೋಹಂ ಚ ಸಂತೋಷಾದ್ ವಿಷಯಾಂಸ್ತತ್ತ್ವದರ್ಶನಾತ್ ॥

ರೋಗಾದಿ ಉಪದ್ರವಗಳನ್ನು ಹಿತವಾದ ಆಹಾರ ಸೇವನೆಯಿಂದ ಹಿತವಾಗಿ ಜೀರ್ಣವಾಗುವ ಪದಾರ್ಥಗಳ ಸೇವನೆಯಿಂದ ಗೆಲ್ಲಬೇಕು. ಲೋಭ- ಮೋಹಗಳನ್ನು ಸಂತೋಷದಿಂದಲೂ, ವಿಷಯ ಪದಾರ್ಥಗಳನ್ನು ತತ್ತ್ವದರ್ಶನದಿಂದಲೂ ಗೆಲ್ಲಬೇಕು.

ಅನುಕ್ರೋಶಾದಧರ್ಮಂ ಚ ಜಯೇದ್ಧರ್ಮಮುಪೇಕ್ಷಯಾ ।
ಆಯತ್ಯಾ ಚ ಜಯೇದಾಶಾಮರ್ಥಂ ಸಂಗವಿವರ್ಜನಾತ್ ॥೯॥

ಕರುಣೆಯಿಂದ ಅಧರ್ಮವನ್ನು ಜಯಿಸಬೇಕು. ಫಲಾಪೇಕ್ಷೆಯನ್ನು ತೊರೆದು ಧರ್ಮವನ್ನು ಜಯಿಸಬೇಕು. ಅಪ್ರಯತ್ನವಾಗಿ ಆಸೆಯನ್ನು ಗೆಲ್ಲಬೇಕು. ಸಂಗವನ್ನು ಬಿಡುವುದರಿಂದ ಅರ್ಥದ ತೃಷ್ಣೆಯನ್ನು ಗೆಲ್ಲಬೇಕು.

ಅನಿತ್ಯತ್ವೇನ ಚ ಸ್ನೇಹಂ ಕ್ಷುಧಂ ಯೋಗೇನ ಪಂಡಿತಃ ।
ಕಾರುಣ್ಯೇನಾತ್ಮನೋ ಮಾನಂ ತೃಷ್ಣಾಂ ಚ ಪರಿತೋಷತಃ ॥೧೦॥

ಅನಿತ್ಯವೆಂದು ತಿಳಿಯುವುದರಿಂದ ಸ್ನೇಹವನ್ನೂ, ಯೋಗಬಲದಿಂದ ಹಸಿವನ್ನೂ, ಕಾರುಣ್ಯದಿಂದ ಅಹಂಕಾರವನ್ನೂ, ನಿತ್ಯ ತೃಪ್ತಿಯಿಂದ ಅಭಿಲಾಷೆಯನ್ನು ಪರಿಹರಿಸಿಕೊಳ್ಳಬೇಕು.

ಉತ್ಥಾನೇನ ಜಯೇತ್ತಂದ್ರೀಂ ವಿತರ್ಕಂ ನಿಶ್ಚಯಾಜ್ಜಯೇತ್ ।
ಮೌನೇನ ಬಹುಭಾಷ್ಯಂ ಚ ಶೌರ್ಯೇಣ ಚ ಭಯಂ ಜಯೇತ್ ॥೧೧॥

ಚಟುವಟಿಕೆಯ ಉತ್ಥಾನದಿಂದ ಸೋಮಾರಿತನವನ್ನೂ, ನಿಶ್ಚಯಜ್ಞಾನದಿಂದ ವಿತರ್ಕವನ್ನೂ, ಮೌನದಿಂದ ವಾಚಾಳಿತನವನ್ನೂ, ಶೌರ್ಯದಿಂದ ಭಯವನ್ನು ಜಯಿಸಬೇಕು.

ಯಚ್ಛೇದ್ ವಾಙ್ಮನಸೀ ಬುದ್ಧ್ಯಾ ತಾಂ ಯಚ್ಛೇಜ್ಜ್ಞಾನಚಕ್ಷುಷಾ ।
ಜ್ಞಾನಮಾತ್ಮಾ ಮಹಾನ್ ಯಚ್ಛೇತ್ತಂ ಯಚ್ಛೇತ್ ಜ್ಞಾನ ಆತ್ಮನಿ ॥೧೨॥

ಬುದ್ಧಿಯಿಂದ ಮಾತು-ಮನಸ್ಸನ್ನು ನಿಯಂತ್ರಿಸಬೇಕು. ಬುದ್ಧಿಯನ್ನು ಜ್ಞಾನ ದೃಷ್ಟಿಯಿಂದ ನಿಯಂತ್ರಿಸಿಕೊಳ್ಳಬೇಕು. ಚತುರ್ಮುಖ ಬ್ರಹ್ಮನು ಭಗವದ್‌ಜ್ಞಾನವನ್ನು ನೀಡುತ್ತಾನೆಂದು ಚಿಂತಿಸಬೇಕು. ಆ ಚತುರ್ಮುಖ ಬ್ರಹ್ಮನು ಜ್ಞಾನಸ್ವರೂಪಿಯಾದ ಪರಮಾತ್ಮನ ಅಧೀನನೆಂದು ಚಿಂತಿಸಬೇಕು.

ತದೇತದುಪಶಾಂತೇನ ಬೋದ್ಧವ್ಯಂ ಶುಚಿಕರ್ಮಣಾ ।
ಯೋಗದೋಷಾನ್ ಸಮುಚ್ಛಿದ್ಯ ಪಂಚ ಯಾನ್ ಕವಯೋ ವಿದುಃ ॥

ಕಾಮಂ ಕ್ರೋಧಂ ಚ ಲೋಭಂ ಚ ಭಯಂ ಸ್ವಪ್ನಂ ಚ ಪಂಚಮಮ್ ।
ಪರಿತ್ಯಜ್ಯ ನಿಷೇವೇತ ತಥೈಮಾನ್ ಯೋಗಸಾಧನಾನ್ ॥೧೪॥

ಶಾಂತನಾದವನು ಪರಮಾತ್ಮನ ಜಯವೆಂಬ ಕೊನೆಯ ಸ್ಥಿತಿಯನ್ನು ಸತ್ಕರ್ಮದಿಂದಲೇ ಹೊಂದುತ್ತಾನೆ. ವಿದ್ವಾಂಸರು ಹೇಳಿರುವ ಯೋಗಸಾಧನೆಯನ್ನು ಕಾಮ-ಕ್ರೋಧ-ಲೋಭ-ಭಯ-ಸ್ವಪ್ನಗಳೆಂಬ ಐದು ದೋಷಗಳನ್ನು ಅಡಗಿಸುವುದೇ

ಪರಬ್ರಹ್ಮನಲ್ಲಿ ಉಪಾಯವೆನಿಸಿದೆ. ಆ ದೋಷಗಳನ್ನು ಯೋಗಸಾಧನದಲ್ಲಿ ನಿರತನಾದವನು ತ್ಯಜಿಸಬೇಕು.

ಧ್ಯಾನಮಧ್ಯಯನಂ ದಾನಂ ಸತ್ಯಂ ಹ್ರೀರಾರ್ಜವಂ ಕ್ಷಮಾ ।
ಶೌಚಮಾಹಾರತಃ ಶುದ್ಧಿರಿಂದ್ರಿಯಾಣಾಂ ಚ ಸಂಯಮಃ ॥೧೫॥

ಏತೈರ್ವಿವರ್ಧತೇ ತೇಜಃ ಪಾಪ್ಮಾನಮಪಹಂತಿ ಚ ।
ಸಿದ್ಧ್ಯಂತಿ ಚಾಸ್ಯ ಸಂಕಲ್ಪಾ ವಿಜ್ಞಾನಂ ಚ ಪ್ರವರ್ತತೇ ॥೧೬॥

ಧ್ಯಾನ, ಅಧ್ಯಯನ, ದಾನ, ಸತ್ಯ, ಲಜ್ಜೆ, ಆರ್ಜವ, ಕ್ಷಮೆ, ಶೌಚ, ಆಹಾರ ಶುದ್ಧಿ, ಇಂದ್ರಿಯಗಳ ನಿಗ್ರಹ- ಇವುಗಳಿಂದ ಮನುಷ್ಯರಲ್ಲಿ ತೇಜಸ್ಸು ಅಭಿವೃದ್ಧಿಯನ್ನು ಹೊಂದುತ್ತದೆ. ಇವುಗಳು ಪಾಪವನ್ನೂ ಪರಿಹರಿಸುತ್ತವೆ. ಇವುಗಳಿಂದ ಮನುಷ್ಯನ ಸಂಕಲ್ಪಗಳೆಲ್ಲ ಸಿದ್ಧಿಸುತ್ತವೆ. ಭಗವದ್‌ಜ್ಞಾನವೂ ಅಭಿವೃದ್ಧಿಯನ್ನು ಹೊಂದುತ್ತದೆ.

ಧೂತಪಾಪಃ ಸ ತೇಜಸ್ವೀ ಲಘ್ವಾಹಾರೋ ಜಿತೇಂದ್ರಿಯಃ ।
ಕಾಮಕ್ರೋಧೌ ವಶೇ ಕೃತ್ವಾ ನಿನೀಷೇದ್ ಬ್ರಹ್ಮಣಃ ಪದಮ್ ॥೧೭॥

ಯಾವನು ಪಾಪಗಳನ್ನೆಲ್ಲ ಪರಿಹರಿಸಿಕೊಂಡು, ತೇಜಸ್ಸನ್ನು ಮಿತಿಗೊಳಿಸಿ, ಮಿತಾಹಾರದಿಂದ, ಇಂದ್ರಿಯನಿಗ್ರಹದಿಂದ ಕಾಮ-ಕ್ರೋಧಗಳನ್ನು ದೂರೀಕರಿಸಿದ್ದಾನೋ ಅವನಿಗೆ ಭಗವಂತನಲ್ಲಿ ದೃಢವಾದ ಬುದ್ಧಿಯು ಉಂಟಾಗುತ್ತದೆ.

ಅಮೂಢತ್ವಮಸಂಗತ್ವಂ ಕಾಮಕ್ರೋಧವಿವರ್ಜನಮ್ ।
ಅದೈನ್ಯಮನುದೀರ್ಣತ್ವಮನುದ್ವೇಗೋ ವ್ಯವಸ್ಥಿತಿಃ ॥೧೮॥

ಧರ್ಮಪುತ್ರನೇ, ಮೂರ್ಖತನ ಇಲ್ಲದಿರುವಿಕೆ, ದುಷ್ಟಸಂಗವಿಲ್ಲದಿರುವಿಕೆ, ಕಾಮ-ಕ್ರೋಧಗಳ ರಾಹಿತ್ಯ, ದೈನ್ಯವಿಲ್ಲದಿರುವಿಕೆ, ಗರ್ವವಿಲ್ಲದಿರುವಿಕೆ, ಉದ್ವೇಗ ಇಲ್ಲದಿರುವಿಕೆ, ನಿಶ್ಚಿಂತತೆ ಇವೆಲ್ಲವನ್ನೂ ಸಾಧಿಸಬೇಕು.

ಏಷ ಮಾರ್ಗೋ ಹಿ ಮೋಕ್ಷಸ್ಯ ಪ್ರಸನ್ನೋ ವಿಮಲಃ ಶುಚಿಃ ।
ತಥಾ ವಾಕ್ಕಾಯಮನಸಾಂ ನಿಯಮಃ ಕಾಮತೋನ್ಯಥಾ ॥೧೯॥

ಇವೇ ಮೋಕ್ಷಕ್ಕೆ ಮಾರ್ಗಗಳು. ಈ ಮಾರ್ಗವು ಶುದ್ಧವಾದುದು, ಪವಿತ್ರವಾದುದು. ಮನೋ-ವಾಕ್-ಕಾಯಗಳನ್ನು ಕಾಮನೆಗಳ ಕಡೆ ಹರಿಬಿಡದೆ ಸನ್ಮಾರ್ಗದ ಕಡೆ ನಡೆಸುವುದೇ ಮೋಕ್ಷಕ್ಕೆ ಪ್ರಧಾನವೆನಿಸಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ನವಾಧಿಕಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತನೆಯ ಅಧ್ಯಾಯ

ಭೂತಗಳ ಉತ್ಪತ್ತಿ ಮತ್ತು ವಿನಾಶಗಳ ಬಗ್ಗೆ ಅಸಿತದೇವಲನಿಗೂ ನಾರದರಿಗೂ ನಡೆದ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು.

ಭೀಷ್ಮಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಂ ದೇವಲಸ್ಯಾಸಿತಸ್ಯ ಚ ॥೧॥

ಧರ್ಮಪುತ್ರನೇ, ಭೂತಗಳ ಹುಟ್ಟು-ಸಾವುಗಳ ವಿಷಯದಲ್ಲಿ ಅಸಿತದೇವಲನಿಗೂ, ನಾರದರಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ಪ್ರಾಚೀನರು ಹೇಳುತ್ತಾರೆ.

ಆಸೀನಂ ದೇವಲಂ ವೃದ್ಧಂ ಬುದ್ವಾ ಬುದ್ಧಿಮತಾಂ ವರಃ ।
ನಾರದಃ ಪರಿಪಪ್ರಚ್ಛ ಭೂತಾನಾಂ ಪ್ರಭವಾಪ್ಯಯಮ್ ॥೨॥

ಒಮ್ಮೆ ವೃದ್ಧನಾದ ಅಸಿತದೇವಲನ ಬಳಿ ನಾರದರು ಸಾಗಿ, ಅವನು ಸುಖವಾಗಿ ಕುಳಿತಾಗ ಭೂತಗಳ ಉತ್ಪತ್ತಿ ನಾಶಗಳ ಬಗ್ಗೆ ಪ್ರಶ್ನೆ ಮಾಡಿದರು.

ಕುತಃ ಸೃಷ್ಟಮಿದಂ ವಿಶ್ವಂ ಬ್ರಹ್ಮಂ ಸ್ಥಾವರಜಂಗಮಮ್ ।
ಪ್ರಲಯೇ ಚ ಕಮಭ್ಯೇತಿ ತದ್ಭವಾನ್ ಪ್ರಬ್ರವೀತು ಮೇ ॥೩॥

ಮುನೀಂದ್ರನೇ, ಸ್ಥಾವರ-ಜಂಗಮಾತ್ಮಕವಾದ ಈ ಪ್ರಪಂಚವು ಯಾರ ದೆಸೆಯಿಂದ ಹುಟ್ಟನ್ನು ಪಡೆದಿದೆ? ಯಾರನ್ನು ಕುರಿತು ಲಯವನ್ನು ಹೊಂದುತ್ತದೆ? ಇದನ್ನು ನನಗೆ ತಿಳಿಸಬೇಕು ಎಂದು ಕೇಳಿದನು.

ಅಸಿತಃ

ಯೇಭ್ಯಃ ಸೃಜತಿ ಭೂತಾನಿ ಕಾಲೋ ಭಾವಪ್ರಚೋದಿತಃ ।
ಮಹಾಭೂತಾನಿ ಪಂಚೇತಿ ತಾನ್ಯಾಹುರ್ಭೂತಚಿಂತಕಾಃ ॥೪॥

ಕಾಲವು ಪ್ರಾಣಿಗಳ ಕರ್ಮಕ್ಕನುಗುಣವಾಗಿ ಪರಿಗಣನೆಯನ್ನು ಮಾಡಿ ಯಾವುದರ ಮೂಲಕ ಭೂತಗಳನ್ನು ಸೃಷ್ಟಿಸುತ್ತದೋ ಅವುಗಳನ್ನೇ ಪಂಚ ಮಹಾಭೂತಗಳೆಂದು ಭೂತಚಿಂತಕರು ಹೇಳುತ್ತಾರೆ.

ತೇಭ್ಯಃ ಸೃಜತಿ ಭೂತಾನಿ ಕಾಲ ಆತ್ಮಪ್ರಚೋದಿತಃ ।
ಏತೇಭ್ಯೋ ಯತ್ ಪರಂ ಬ್ರೂಯುರಸದ್ಬ್ರೂಯುರಸಂಶಯಮ್ ॥೫॥

ಆ ಪಂಚ ಮಹಾಭೂತಗಳು ಪರಮಾತ್ಮನಿಂದ ಪ್ರೇರಿತವಾಗಿಯೇ ಸಮಸ್ತ ಭೂತಗಳನ್ನು ಸೃಷ್ಟಿಸುತ್ತವೆ. ಆದ್ದರಿಂದ ಪರಮಾತ್ಮ, ಪಂಚಭೂತ, ಕಾಲ ಇವುಗಳಿಗಿಂತ ಬೇರೆಯಾದ ಅಜ್ಞಾನವು ಜಗತ್ತಿಗೆ ಕಾರಣ ಎಂದು ಯಾರು ಹೇಳುತ್ತಾರೋ ಅವರು ನಿಶ್ಚಿತವಾಗಿಯೂ ಸುಳ್ಳನ್ನೇ ಹೇಳುತ್ತಾರೆ.

ವಿದ್ಧಿ ನಾರದ ಪಂಚೈತಾನ್ ಶಾಶ್ವತಾನಚಲಾನ್ ಧ್ರುವಾನ್ ।
ಮಹತಸ್ತೇಜಸೋ ರಾಶೀನ್ ಕಾಲಷಷ್ಠಾನ್ ಸ್ವಭಾವತಃ ॥೬॥

ನಾರದನೇ, ಈ ಪಂಚಮಹಾಭೂತಗಳನ್ನು ಶಾಶ್ವತವೆಂದೂ, ನಿಶ್ಚಯವೆಂದೂ, ಅಚಲವೆಂದೂ ತಿಳಿದುಕೊ. ಮಹತ್ತತ್ತ್ವದಿಂದ ಉಂಟಾದವು ಈ ತೇಜೋರಾಶಿಗಳು. ಈ ಐದರೊಡನೆ ಸ್ವಾಭಾವಿಕವಾಗಿ ಸೇರಿದುದು ಆರನೆಯದ್ದಾದ ಕಾಲವೆಂದು ತಿಳಿ.

ಆಪಶ್ಚೈವಾಂತರಿಕ್ಷಂ ಚ ಪೃಥಿವೀ ವಾಯುಪಾವಕೌ ।
ಅಸಿದ್ಧಿಃ ಪರಮೇತೇಭ್ಯೋ ಭೂತೇಭ್ಯೋ ಮುಕ್ತಸಂಶಯಮ್ ॥೭॥

ಪೃಥಿವಿ, ಅಪ್, ತೇಜಸ್ಸು, ವಾಯು, ಆಕಾಶಗಳೆಂದು ಈ ಪಂಚಭೂತಗಳಿಗೆ ಹೆಸರು. ಈ ಐದಕ್ಕಿಂತಲೂ ಬೇರೆಯಾಗಿರುವುದನ್ನು ಯಾವ ಪ್ರಮಾಣದಿಂದಲೂ ನಿರ್ಧರಿಸಲಾಗದು. ಬೇರೆಯಾದ ತತ್ತ್ವವೂ ಇರುವುದಿಲ್ಲ. ಇದರಲ್ಲಿ ಯಾವ ಸಂದೇಹವೂ ಇಲ್ಲ.

ನೋಪಪತ್ತ್ಯಾ ನ ವಾ ಯುಕ್ತ್ಯಾ ತತ್ತ್ವದ್ಬ್ರೂಯಾದಸಂಶಯಮ್ ।
ವೇತ್ಥ ತಾನಭಿನಿರ್ವೃತ್ತಾನ್ ಷಡೇತೇ ಯೇಸ್ಯ ರಾಶಯಃ ॥೮॥

ಯಾವುದೇ ಯುಕ್ತಿಯಿಂದಲಾಗಲಿ, ಪ್ರಮಾಣದಿಂದಲಾಗಲಿ, ಕಾಲದಿಂದ ಸಹಿತವಾದ ಪಂಚಭೂತಗಳಿಗಿಂತ ಬೇರೆಯಾದ ತತ್ತ್ವವನ್ನು ಹೇಳಲು ಸಾಧ್ಯವಾಗದು. ಜಗತ್ತಿಗೆ ಈ ಆರೇ ಕಾರಣರಾಶಿ ಎಂದು ಕರೆಸಿಕೊಂಡಿವೆ. ಆದ್ದರಿಂದ ಜಗತ್ತೆಲ್ಲವೂ ಈ ಆರನ್ನೇ ವ್ಯಾಪಿಸಿಕೊಂಡಿವೆ ಎಂದು ತಿಳಿ.

ಪಂಚೈವ ತಾನಿ ಕಾಲಶ್ಚ ಭಾವಾಭಾವೌ ಚ ಕೇವಲೌ ।
ಅಷ್ಟೌ ಭೂತಾನಿ ಭೂತಾನಾಂ ಶಾಶ್ವತಾನಿ ಭವಾಪ್ಯಯೌ ॥೯॥

ಪಂಚಭೂತಗಳು, ಕಾಲ, ಭಾವಾತ್ಮಕ ಪ್ರಪಂಚ, ಸುಕೃತ-ದುಷ್ಕೃತವೆಂಬ ಕರ್ಮ, ಪ್ರಾಗಭಾವ ಎಂಬ ಅಭಾವ - ಈ ಎಂಟು ಜೀವರ ಹುಟ್ಟು-ನಾಶಗಳಿಗೆ ಕಾರಣವಾಗಿವೆ.

ಅಭಾವಭವಿತಾ ಏವ ತೇಭ್ಯಶ್ಚ ಪ್ರಭವಂತ್ಯಪಿ ।
ವಿನಷ್ಟೋಽಪಿ ಚ ತಾನ್ಯೇವ ಜಂತುರ್ಭವತಿ ಪಂಚಧಾ ॥೧೦॥

ಜಗತ್ತಿನ ಸಮಸ್ತ ಪದಾರ್ಥಗಳು ನಾಶದಿಂದ ಸಹಿತವಾಗಿಯೇ ಉತ್ಪತ್ತಿಯನ್ನು ಹೊಂದುತ್ತವೆ. ನಾಶವನ್ನು ಹೊಂದಿದ ಪ್ರಾಣಿಯ ದೇಹವು ಪುನಃ ಐದು ಭಾಗಗಳಾಗಿ ಆಯಾ ಭೂತಗಳಲ್ಲೇ ವಿಲೀನವಾಗುತ್ತದೆ.

ತಸ್ಯ ಭೂಮಿಮಯೋ ದೇಹಃ ಶ್ರೋತ್ರಮಾಕಾಶಸಂಭವಮ್ ।
ಸೂರ್ಯಶ್ಚಕ್ಷುರಸುರ್ವಾಯುರದ್ಭ್ಯಸ್ತು ಖಲು ಶೋಣಿತಮ್ ॥೧೧॥

ಪ್ರಾಣಿಯ ದೇಹವು ಪೃಥಿವೀಭೂತವಾಗಿರುತ್ತದೆ. ಪ್ರಾಣಿಯ ದೇಹವು ನಾಶವಾದ ಬಳಿಕ ಆ ಪಾರ್ಥಿವ ಭಾಗವು ಭೂಮಿಯಲ್ಲಿ ಲಯವನ್ನು ಹೊಂದುತ್ತದೆ. ಕಿವಿಗಳು ಆಕಾಶಭೂತದಿಂದ ಹುಟ್ಟಿರುತ್ತವೆ. ಸತ್ತ ಬಳಿಕ ಆಕಾಶದಲ್ಲಿಯೇ ಲಯವನ್ನು ಹೊಂದುತ್ತವೆ. ಕಣ್ಣುಗಳು ತೇಜೋಮಯನಾದ ಸೂರ್ಯನಿಂದ ಹುಟ್ಟಿರುತ್ತವೆ. ಬಳಿಕ ತೇಜಸ್ಸಿನಲ್ಲಿಯೇ ಲಯವನ್ನು ಹೊಂದುತ್ತವೆ. ಪ್ರಾಣವು ವಾಯುವಿನಿಂದ, ರಕ್ತವು

ನೀರಿನಿಂದ ಹುಟ್ಟನ್ನು ಪಡೆದು, ನಾಶವಾದ ಬಳಿಕ ವಾಯು-ನೀರಿನಲ್ಲೇ ಸೇರಿ ಹೋಗುತ್ತವೆ.

ಚಕ್ಷುಷೀ ನಾಸಿಕಾಕರ್ಣೌ ತ್ವಗ್ಜಿಹ್ವೇತಿ ಚ ಪಂಚಮೀ ।
ಇಂದ್ರಿಯಾಣೀಂದ್ರಿಯಾರ್ಥಾನಾಂ ಜ್ಞಾನಾನಿ ಕವಯೋ ವಿದುಃ ॥೧೨॥

ಕಣ್ಣು, ಮೂಗು, ಕಿವಿ, ಚರ್ಮ, ನಾಲಿಗೆ - ಈ ಐದಕ್ಕೆ ಜ್ಞಾನೇಂದ್ರಿಯಗಳೆಂದು, ವಿಷಯಗಳನ್ನು ಗ್ರಹಿಸುವ ಇಂದ್ರಿಯಗಳೆಂದು ಜ್ಞಾನಿಗಳು ಹೇಳುತ್ತಾರೆ. ಇವುಗಳನ್ನೇ ಜ್ಞಾನಕರಣಗಳು ಎಂದು ಜ್ಞಾನಿಗಳು ಹೇಳುತ್ತಾರೆ.

ದರ್ಶನಂ ಶ್ರವಣಂ ಘ್ರಾಣಂ ಸ್ಪರ್ಶನಂ ರಸನಂ ತಥಾ ।
ಉಪಪತ್ತ್ಯಾ ಗುಣಾನ್ ವಿದ್ಧಿ ಪಂಚ ಪಂಚಸು ಪಂಚಧಾ ॥೧೩॥

ಹೊರಗಿನ ಪದಾರ್ಥಗಳನ್ನು ನೋಡುವುದು, ಕೇಳುವುದು, ವಾಸನೆ ನೋಡುವುದು, ಸ್ಪರ್ಶಿಸುವುದು, ರುಚಿ ನೋಡುವುದು - ಇವುಗಳು ಕ್ರಮವಾಗಿ ಕಣ್ಣು, ಕಿವಿ, ಮೂಗು, ತ್ವಗಿಂದ್ರಿಯ, ನಾಲಿಗೆ - ಈ ಇಂದ್ರಿಯಗಳ ವ್ಯಾಪಾರಗಳಾಗಿವೆ. ಐದು ಇಂದ್ರಿಯಗಳಲ್ಲಿ, ಐದು ವಿಧವಾದ ವಿಷಯಗಳಲ್ಲಿ ಐದು ವ್ಯಾಪಾರಗಳು ನಡೆಯುತ್ತವೆ.

ರೂಪಂ ಗಂಧೋ ರಸಃ ಸ್ಪರ್ಶಃ ಶಬ್ದಶ್ಚೈವಾಥ ತದ್ಗುಣಾಃ ।
ಇಂದ್ರಿಯೈರುಪಲಭ್ಯಂತೇ ಪಂಚಧಾ ಪಂಚ ಪಂಚಭಿಃ ॥೧೪॥

ಪಂಚ ಜ್ಞಾನೇಂದ್ರಿಯಗಳ ಮೂಲಕ ರೂಪ, ಗಂಧ, ರಸ, ಸ್ಪರ್ಶ, ಶಬ್ದ - ಎಂಬ ಪಂಚಗುಣಗಳು ದರ್ಶನ, ಘ್ರಾಣನ, ಆಸ್ವಾದನ, ಸ್ಪರ್ಶನ, ಶ್ರವಣ ಎಂದು ಪ್ರಕಟವಾಗುತ್ತವೆ.

ರೂಪಂ ಗಂಧಂ ರಸಂ ಸ್ಪರ್ಶಂ ಶಬ್ದಂ ಚೈತಾಂಸ್ತು ತದ್ಗುಣಾನ್ ।
ಇಂದ್ರಿಯಾಣಿ ನ ಬುಧ್ಯಂತೇ ಕ್ಷೇತ್ರಜ್ಞಸ್ತೈಸ್ತು ಬುಧ್ಯತೇ ॥೧೫॥

ರೂಪ, ಗಂಧ, ರಸ, ಸ್ಪರ್ಶ, ಶಬ್ದಗಳೆಂಬ ಈ ಐದು ಇಂದ್ರಿಯಗುಣಗಳನ್ನು ಇಂದ್ರಿಯಗಳು ತಾವೇ ತಿಳಿಯಲಾರವು. ಈ ಇಂದ್ರಿಯಗಳ ಮೂಲಕ ಕ್ಷೇತ್ರಜ್ಞನಾದ

ಭಗವಂತನ ಪ್ರೇರಣೆಯಂತೆ ಜೀವಾತ್ಮನು ಈ ಇಂದ್ರಿಯಗಳಿಂದ ಪ್ರಕಟವಾಗುವ ಶಬ್ದಾದಿಗಳನ್ನು ತಿಳಿಯುತ್ತಾನೆ.

ಚಿತ್ತಮಿಂದ್ರಿಯಸಂಘಾತಾತ್ ಪರಂ ತಸ್ಮಾತ್ ಪರಂ ಮನಃ ।
ಮನಸಸ್ತು ಪರಾ ಬುದ್ಧಿಃ ಕ್ಷೇತ್ರಜ್ಞೋ ಬುದ್ಧಿತಃ ಪರಃ ॥೧೬॥

ಶರೀರ ಮತ್ತು ಇಂದ್ರಿಯಗಳ ಸಮುದಾಯಗಳಿಗಿಂತಲೂ ಚಿತ್ತವು ಶ್ರೇಷ್ಠವು. ಚಿತ್ತಕ್ಕಿಂತಲೂ ಮನಸ್ಸು, ಮನಸ್ಸಿಗಿಂತ ಬುದ್ಧಿ, ಬುದ್ಧಿಗಿಂತ ಕ್ಷೇತ್ರಜ್ಞನು ಶ್ರೇಷ್ಠನು.

ಪೂರ್ವಂ ಚೇತಯತೇ ಜಂತುರಿಂದ್ರಿಯೈರ್ವಿಷಯಾನ್ ಪೃಥಕ್ ।
ವಿಚಾರ್ಯ ಮನಸಾ ಪಶ್ಚಾದಥ ಬುದ್ಧ್ಯಾ ವ್ಯವಸ್ಯತಿ ।
ಇಂದ್ರಿಯೈರುಪಲಬ್ಧಾರ್ಥಾನ್ ಸರ್ವಾನ್ಯಸ್ತ್ವಧ್ಯವಸ್ಯತಿ ॥೧೭॥

ಜೀವನು ಇಂದ್ರಿಯಗಳ ಮೂಲಕ ವಿಷಯಗಳನ್ನು ಪೃಥಕ್ ಆಗಿ ಗ್ರಹಿಸುತ್ತಾನೆ. ಇಂದ್ರಿಯಗಳ ಮೂಲಕ ಜೀವನಿಗೆ ವಿಷಯಗಳನ್ನು ತಂದುಕೊಡುವ ಕೆಲಸವು ಚಿತ್ತದ ಕೆಲಸವಾಗಿರುತ್ತದೆ. ಮನಸ್ಸು ಇಂದ್ರಿಯಾರ್ಥಗಳ ವಿಷಯದಲ್ಲಿ ವಿಚಾರ ಮಾಡುತ್ತದೆ. ಬುದ್ಧಿ ನಿರ್ಣಯವನ್ನು ಮಾಡುತ್ತದೆ.

ಚಿತ್ತಮಿಂದ್ರಿಯಸಂಘಾತಂ ಮನೋ ಬುದ್ಧಿಂ ತಥಾಷ್ಟಮೀಮ್ ।
ಅಷ್ಟೌ ಜ್ಞಾನೇಂದ್ರಿಯಾಣ್ಯಾಹುರೇತಾನ್ಯಧ್ಯಾತ್ಮಚಿಂತಕಾಃ ॥೧೮॥

ತ್ವಕ್, ಚಕ್ಷುಸ್ಸು, ಘ್ರಾಣ, ಕರ್ಣ, ಜಿಹ್ವೆ ಎಂಬ ಜ್ಞಾನೇಂದ್ರಿಯಗಳನ್ನು, ಚಿತ್ತ, ಮನಸ್ಸು, ಬುದ್ಧಿ - ಈ ಎಂಟನ್ನು ಜ್ಞಾನಿಗಳು ಜ್ಞಾನೇಂದ್ರಿಯಗಳೆಂದೇ ಹೇಳುತ್ತಾರೆ.

ಪಾಣಿಪಾದಂ ಚ ಪಾಯುಶ್ಚ ಮೇಹನಂ ಪಂಚಮಂ ಮುಖಮ್ ।
ಇತಿ ಸಂಶಬ್ದ್ಯಮಾನಾನಿ ಶೃಣು ಕರ್ಮೇಂದ್ರಿಯಾಣ್ಯಪಿ ॥೧೯॥

ಕೈಗಳು, ಕಾಲುಗಳು, ಗುದ, ಉಪಸ್ಥ, ಮುಖ- ಈ ಐದನ್ನು ಕರ್ಮೇಂದ್ರಿಯಗಳೆಂದು ಹೇಳುತ್ತಾರೆ. ಇವುಗಳ ವಿವರಣೆಯನ್ನು ಹೇಳುತ್ತೇನೆ, ಕೇಳು.

ಜಲ್ಪನಾಭ್ಯವಹಾರಾರ್ಥಂ ಮುಖಮಿಂದ್ರಿಯಮುಚ್ಯತೇ ।
ಗಮನೇಂದ್ರಿಯಂ ತಥಾ ಪಾದೌ ಕರ್ಮಣಃ ಕರಣೇ ಕರೌ ॥೨೦॥

ಮಾತನಾಡಲು, ತಿನ್ನಲು ಉಪಯೋಗಿಸುವ ಮುಖವು ಕರ್ಮೇಂದ್ರಿಯ ಎನಿಸುತ್ತದೆ. ನಡೆಯಲು ಉಪಯೋಗಿಸುವ ಕಾಲು ಗಮನೇಂದ್ರಿಯ ಎನಿಸುತ್ತದೆ. ಕಾರ್ಯ ಮಾಡುವ ಕೈಗಳು ಕರಣೇಂದ್ರಿಯವೆನಿಸುತ್ತದೆ.

ಪಾಯೂಪಸ್ಥೌ ವಿಸರ್ಗಾರ್ಥಮಿಂದ್ರಿಯೇ ತುಲ್ಯಕರ್ಮಣೀ ।
ವಿಸರ್ಗೇ ಚ ಪುರೀಷಸ್ಯ ವಿಸರ್ಗೇ ಚಾಭಿಕಾಮಿಕೇ ॥೨೧॥

ಪಾಯು, ಉಪಸ್ಥಗಳು ಮಲ-ಮೂತ್ರಗಳನ್ನು ವಿಸರ್ಜಿಸುವ ಇಂದ್ರಿಯಗಳೆನಿಸಿವೆ. ಎರಡು ಇಂದ್ರಿಯಗಳು ತ್ಯಜಿಸುವುದರಿಂದ ಸಮಾನವಾಗಿವೆ. ಗುದವು ಮಲವನ್ನು ವಿಸರ್ಜಿಸಿದರೆ, ಜನನೇಂದ್ರಿಯವು ಮೂತ್ರದ ಜೊತೆ ಮೈಥುನ ಸಮಯದಲ್ಲಿ ವೀರ್ಯವನ್ನು ವಿಸರ್ಜಿಸುತ್ತದೆ.

ಬಲಂ ಷಷ್ಠಂ ಷಡೇತಾನಿ ವಾಚಾ ಸಮ್ಯಗ್ಯಥಾಗಮಮ್ ।
ಜ್ಞಾನಚೇಷ್ಟೇಂದ್ರಿಯಗುಣಾಃ ಸರ್ವೇ ಸಂಶಬ್ದಿತಾ ಮಯಾ ॥೨೨॥

ಇಂದ್ರಿಯಾಣಾಂ ಸ್ವಕರ್ಮಭ್ಯಃ ಶ್ರಮಾದುಪರಮೋ ಯದಾ ।
ಭವತೀಂದ್ರಿಯಸನ್ನ್ಯಾಸಾದಥ ಸ್ವಪಿತಿ ವೈ ನರಃ ॥೨೩॥

ಈ ಕರ್ಮೇಂದ್ರಿಯಗಳಲ್ಲದೆ ಪ್ರಾಣಸಮುದಾಯವೇ ಆರನೆಯ ಕರ್ಮೇಂದ್ರಿಯವೆನಿಸಿದೆ. ನನ್ನ ಮಾತಿನ ಮೂಲಕ ನಿನಗೆ ಎಲ್ಲ ವಿಧವಾದ ಇಂದ್ರಿಯಗಳನ್ನು, ಅವುಗಳ ಜ್ಞಾನ, ಕರ್ಮ, ಗುಣಗಳನ್ನು ವಿವರಿಸಿದ್ದೇನೆ. ತಮ್ಮ ತಮ್ಮ ಕಾರ್ಯಗಳನ್ನು ಇಂದ್ರಿಯಗಳು ಮಾಡುತ್ತಾ ಶ್ರಮವನ್ನು ಹೊಂದಿ ಯಾವಾಗ ಶಾಂತವಾಗುತ್ತವೋ ಆಗ ಜೀವಾತ್ಮನು ಇಂದ್ರಿಯಗಳನ್ನು ಬಿಟ್ಟು ನಿದ್ರಾವಶನಾಗುತ್ತಾನೆ.

ಇಂದ್ರಿಯಾಣಾಂ ವ್ಯುಪರಮೇ ಮನೋऽನುಪರತಂ ಯದಿ ।
ಸೇವತೇ ವಿಷಯಾನೇವ ತದ್ ವಿದ್ಯಾತ್ ಸ್ವಪ್ನದರ್ಶನಮ್ ॥೨೪॥

ಇಂದ್ರಿಯಗಳು ಉಪಶಮನ ಹೊಂದಿದಾಗಲೂ ಮನಸ್ಸು ಉಪಶಮನಗೊಳ್ಳದಿದ್ದರೆ ಸ್ವಪ್ನಾವಸ್ಥೆಯಲ್ಲಿ ಮನಸ್ಸು ವಿಷಯಗಳನ್ನು ಸೇವಿಸುತ್ತಲೇ ಇರುತ್ತದೆ. ಇದನ್ನೇ ಸ್ವಪ್ನ ದರ್ಶನ ಎನ್ನುತ್ತಾರೆ.

ಸಾತ್ತ್ವಿಕಾಶ್ಚೈವ ಯೇ ಭಾವಾಸ್ತಥಾ ರಾಜಸತಾಮಸಾಃ ।
ಕರ್ಮಯುಕ್ತಾನ್ ಪ್ರಶಂಸಂತಿ ಸಾತ್ತ್ವಿಕಾನಿತರಾಂಸ್ತಥಾ ॥೨೫॥

ಜಾಗೃತರಾಗಿರುವಾಗ ಸಾತ್ವಿಕ, ರಾಜಸ, ತಾಮಸ ಎಂಬ ಭಾವನೆಗಳಿಂದ ಕೂಡಿದ ಮನುಷ್ಯರು ಸಾತ್ವಿಕ, ರಾಜಸ, ತಾಮಸ ಎಂಬ ಭಾವನೆಗಳನ್ನೇ ಅವರ ಗುಣಗಳಿಗೆ ಅನುಗುಣವಾಗಿ ಕನಸ್ಸಿನಲ್ಲಿಯೂ ಪ್ರಶಂಸಿಸುತ್ತಾರೆ.

ಆನಂದಃ ಕರ್ಮಣಾಂ ಸಿದ್ಧಿಃ ಪ್ರತಿಪತ್ತಿಃ ಪರಾ ಗತಿಃ ।
ಸಾತ್ತ್ವಿಕಸ್ಯ ನಿಮಿತ್ತಾನಿ ಭಾವಾನ್ ಸಂಶ್ರಯತೇ ಸ್ಮೃತಿಃ ॥೨೬॥

ಆನಂದ, ಕಾರ್ಯಸಿದ್ಧಿ, ಕರ್ತವ್ಯಜ್ಞಾನ, ಉತ್ತಮ ಗತಿ - ಈ ನಾಲ್ಕು ಸತ್ತ್ವಗುಣದ ಭಾವಗಳು. ಈ ಭಾವಗಳು ಸಾತ್ವಿಕ ಸ್ವಭಾವಕ್ಕನುಗುಣವಾಗಿ ಉತ್ಪನ್ನವಾಗುತ್ತವೆ.

ಜಂತುಷ್ವೇಕತಮೇಷ್ವೇವಂ ಭಾವಾ ಯೇ ವಿಧಿಮಾಸ್ಥಿತಾಃ ।
ಭಾವಯೋರೀಪ್ಸಿತಂ ನಿತ್ಯಂ ಪ್ರತ್ಯಕ್ಷಗಮನಂ ದ್ವಯೋಃ ॥೨೭॥

ಸಮಸ್ತ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿರುವ, ನಿತ್ಯವೂ ಹೊಂದಲು ಯೋಗ್ಯನಾಗಿರುವ, ಅತ್ಯಂತ ಭಿನ್ನನಾಗಿರುವ ಪರಮಾತ್ಮನನ್ನು ಯಾರು ನಿರಂತರವೂ ಚಿಂತಿಸುತ್ತಾರೋ ಅವರು ಐಹಿಕ, ಪಾರತ್ರಿಕ ಎನಿಸಿದ ಪ್ರತ್ಯಕ್ಷ ಸುಖಗಳನ್ನು ಅನುಭವಿಸುತ್ತಾರೆ.

ಇಂದ್ರಿಯಾಣಿ ಚ ಭಾವಾಶ್ಚ ಗುಣಾಃ ಸಪ್ತದಶ ಸ್ಮೃತಾಃ ।
ತೇಷಾಮಷ್ಟಾದಶೋ ದೇಹೀ ಯಃ ಶರೀರೇ ಸ ಶಾಶ್ವತಃ ॥೨೮॥

ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಮನಸ್ಸು, ಪಂಚಗುಣಗಳು, ಆ ಗುಣಗಳ ಜ್ಞಾನ - ಹೀಗೆ ಹದಿನೇಳು ಗುಣಗಳು ಜೀವರನ್ನು ಆಶ್ರಯಿಸಿರುತ್ತವೆ.

ಅಥ ವಾ ಸಶರೀರಾಸ್ತೇ ಗುಣಾಃ ಸರ್ವೇ ಶರೀರಿಣಾಮ್ ।
ಸಂಶ್ರಿತಾಸ್ತದ್ವಿಯೋಗೇ ಹಿ ಸಶರೀರಾ ನ ಸಂತಿ ತೇ ॥೨೯॥

ಶರೀರವನ್ನು ಧರಿಸಿದ ಜೀವನನ್ನು ಆಶ್ರಯಿಸಿಕೊಂಡು ಆ ಗುಣಗಳು ಇರುತ್ತವೆ.

ಶರೀರವು ವಿಯೋಗವಾದಲ್ಲಿ ಶರೀರವೂ ನಾಶವಾಗುತ್ತದೆ, ಆ ಗುಣಗಳೂ ನಾಶವಾಗುತ್ತವೆ.

ಅಥ ವಾ ಸನ್ನಿಪಾತೋಯಂ ಶರೀರಂ ಪಾಂಚಭೌತಿಕಮ್ ।
ಏಕಂ ಚ ದಶ ಚಾಷ್ಟೌ ಚ ಗುಣಾಃ ಸಹ ಶರೀರಿಣಾಮ್ ।
ವರ್ಷ್ಮಣಾ ಸಹ ವಿಂಶೋ ವಾ ಸಂಘಾತಃ ಪಾಂಚಭೌತಿಕಃ ॥೩೦॥

ಅಥವಾ ತತ್ತ್ವಗಳ ಸಮುದಾಯವು ಪಾಂಚಭೌತಿಕವಾದ ಶರೀರವಾಗಿದೆ. ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಬುದ್ಧಿ, ಅಹಂಕಾರ, ಚಿತ್ತ ಎಂಬುದಾಗಿ ಜೀವರ ಅಪ್ರಧಾನಭೂತವಾದ ಗುಣಗಳು ದೇಹದ ಜೊತೆಗೆ ಸೇರಿದಾಗ ಇಪ್ಪತ್ತು ತತ್ತ್ವಗಳಾಗುತ್ತವೆ.

ಮಹಾನ್ ಸಂಧಾರಯತ್ಯೇತಚ್ಛರೀರಂ ವಾಯುನಾ ಸಹ ।
ತಸ್ಯಾಸ್ಯ ಭಾವಯುಕ್ತಸ್ಯ ನಿಮಿತ್ತಂ ದೇಹಭೇದನೇ ॥೩೧॥

ಮಹಾಪುರುಷನಾದ ನಾರಾಯಣನು ಚೇಷ್ಟೆಯಿಂದ ಕೂಡಿದ ಜೀವರಿಗೆ ಈ ಶರೀರವನ್ನು ಪ್ರಾಣವಾಯುವಿನ ಮೂಲಕ ಸಂಯೋಜಿಸುತ್ತಾನೆ. ಈ ದೇಹವನ್ನು ನೀಡಲು, ನಾಶಪಡಿಸಲು ನಿಮಿತ್ತನಾದವನು ಮಹಾಪುರುಷನಾದ ನಾರಾಯಣನೇ ಆಗಿದ್ದಾನೆ.

ಯಥೈವೋತ್ಪದ್ಯತೇ ಕಿಂಚಿತ್ ಪಂಚತ್ವಂ ಗಚ್ಛತೇ ತಥಾ ।
ಪುಣ್ಯಪಾಪವಿನಾಶಾಂತೇ ಪುಣ್ಯಪಾಪಸಮೀರಿತಮ್ ।
ದೇಹಂ ವಿಶತಿ ಕಾಲೇನ ತತೋಽಯಂ ಕರ್ಮಸಂಭವಮ್ ॥೩೨॥

ಹಿತ್ವಾ ಹಿತ್ವಾ ಹ್ಯಯಂ ಪ್ರೈತಿ ದೇಹಾದ್ ದೇಹಂ ಕೃತಾಶ್ರಯಃ ।
ಕಾಲಸಂಚೋದಿತಃ ಕ್ಷೇತ್ರೀ ವಿಶೀರ್ಣಾದ್ವಾ ಗೃಹಾದ್ ಗೃಹಮ್ ॥೩೩॥

ಜೀವನು ಹೇಗೆ ಉತ್ಪತ್ತಿಯನ್ನು ಹೊಂದುತ್ತಾನೋ, ಹಾಗೆ ಸಾವನ್ನೂ ಹೊಂದುತ್ತಾನೆ. ಹಿಂದಿನ ದೇಹಕ್ಕೆ ಕಾರಣವಾದ ಪುಣ್ಯಪಾಪಗಳು ನಾಶವಾದ ಬಳಿಕ ಮುಂದಿನ ದೇಹಕ್ಕೆ ಕಾರಣವಾದ ಪುಣ್ಯ-ಪಾಪಗಳು ಜೀವನನ್ನು ದೇಹಕ್ಕೆ ಪ್ರವೇಶ ಮಾಡುವಂತೆ

ಮಾಡುತ್ತದೆ. ಹೀಗೆ ಕರ್ಮದ ಸಂಬಂಧದಿಂದ ಕಾಲಿಕವಾಗಿ ಜೀವನು ದೇಹವನ್ನು ಪ್ರವೇಶಿಸುತ್ತಾನೆ. ಯಾವ ರೀತಿಯಲ್ಲಿ ಒಂದು ಮನೆಯಲ್ಲಿ ವಾಸ ಮಾಡುವ ಮನುಷ್ಯನು ಮನೆ ಶಿಥಿಲವಾದ ಬಳಿಕ ಬೇರೆ ಮನೆಯನ್ನು ಆಶ್ರಯಿಸುತ್ತಾನೋ, ಇದೇ ರೀತಿ ಕಾಲಪ್ರೇರಿತನಾದ ಜೀವನು ಶಿಥಿಲವಾದ ಒಂದು ಶರೀರವನ್ನು ಬಿಟ್ಟು ಕರ್ಮಾನುಸಾರವಾಗಿ ನಿರ್ಮಿತವಾದ ಮತ್ತೊಂದು ಶರೀರವನ್ನು ಆಶ್ರಯಿಸುತ್ತಾನೆ.

ತತ್ರ ನೈವಾನುತಪ್ಯಂತೇ ಪ್ರಾಜ್ಞಾ ನಿಶ್ಚಿತನಿಶ್ಚಯಾಃ ।
ಕೃಪಣಾಸ್ತ್ವನುತಪ್ಯಂತೇ ಜನಾಃ ಸಂಬಂಧಿಮಾನಿನಃ ॥೩೪॥

ವಿದ್ವಾಂಸರಾದವರು ಆತ್ಮನು ಶರೀರದಿಂದ ಅತ್ಯಂತ ಭಿನ್ನನಾಗಿದ್ದಾನೆ. ಅಸಂಗನೂ, ಅವಿನಾಶನೂ ಆಗಿದ್ದಾನೆ ಎಂದು ನಿಶ್ಚಯವನ್ನು ಹೊಂದಿರುವುದರಿಂದ ದೇಹಪತನಕ್ಕೆ ದುಃಖಿಗಳಾಗುವುದಿಲ್ಲ. ದೇಹಾತ್ಮ ಐಕ್ಯಚಿಂತನೆಯನ್ನು ಹೊಂದಿದ ಅಜ್ಞಾನಿಗಳು ಮರಣವನ್ನು ನೆನೆದು ದುಃಖಿಸುತ್ತಾರೆ.

ನ ಹ್ಯಯಂ ಕಸ್ಯಚಿತ್ ಕಶ್ಚಿನ್ನಾಸ್ಯ ಕಶ್ಚನ ವಿದ್ಯತೇ ।
ಭವತ್ಯೇಕೋ ಹ್ಯಯಂ ನಿತ್ಯಂ ಶರೀರೇ ಸುಖದುಃಖಭಾಕ್ ॥೩೫॥

ಜೀವನು ಯಾರಿಗೂ ಸಂಬಂಧಿಸಿದವನಲ್ಲ. ಅವನಿಗೆ ಯಾವ ಸಂಬಂಧವೂ ಇರುವುದಿಲ್ಲ. ಜೀವನು ನಿತ್ಯವೂ ಏಕಾಕಿಯಾಗಿರುವನು. ಆದರೂ ಶರೀರದಲ್ಲಿ ವಾಸಿಸುವ ಜೀವನು ಶರೀರವನ್ನು ತನ್ನದೆಂದು ಭ್ರಮಿಸಿಕೊಂಡಿರುವುದರಿಂದ ಕರ್ಮಾನುಗುಣವಾಗಿ ಸುಖ-ದುಃಖಗಳನ್ನು ಹೊಂದುತ್ತಾನೆ.

ನೈವ ಸಂಜಯತೇ ಜಂತುರ್ನ ಚ ಜಾತು ವಿಪದ್ಯತೇ ।
ಯಾತಿ ದೇಹಮಯಂ ಭುಕ್ತ್ವಾ ಕದಾಚಿತ್ ಪರಮಾಂ ಗತಿಮ್ ॥೩೬॥

ಜೀವನು ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಯಾವಾಗ ಈ ದೇಹಾಭಿಮಾನವನ್ನು ಬಿಡುತ್ತಾನೋ ಆಗ ಪರಮಗತಿಯನ್ನು ಹೊಂದುತ್ತಾನೆ.

ಪುಣ್ಯಪಾಪಮಯಂ ದೇಹಂ ಕ್ಷಪಯನ್ ಕರ್ಮಸಂಚಯಾತ್ ।
ಕ್ಷೀಣದೇಹಃ ಪುನರ್ದೇಹೀ ಬ್ರಹ್ಮತ್ವಮುಪಗಚ್ಛತಿ ॥೩೭॥

ಪುಣ್ಯ-ಪಾಪದಿಂದ ಪ್ರಾಪ್ತವಾಗುವ ದೇಹವನ್ನು ಜೀವನು ಕರ್ಮಗಳನ್ನು ಅನುಭವಿಸುತ್ತಾ ಕಳೆದುಕೊಳ್ಳುತ್ತಾನೆ. ಶರೀರವು ನಾಶವಾದ ಬಳಿಕ ಜೀವನು ತನ್ನ ಸ್ವರೂಪಕ್ಕೆ ಯೋಗ್ಯವಾದ ಪೂರ್ಣಸುಖವನ್ನು ಹೊಂದುತ್ತಾನೆ.

ಪುಣ್ಯಪಾಪಕ್ಷಯಾರ್ಥಂ ಚ ಸಾಂಖ್ಯಂ ಜ್ಞಾನಂ ವಿಧೀಯತೇ ।
ತತ್‌ಕ್ಷಯೇ ಹ್ಯಸ್ಯ ಪಶ್ಯಂತಿ ಬ್ರಹ್ಮಭಾವೇ ಪರಾಂ ಗತಿಮ್ ॥೩೮॥

ಈ ಪುಣ್ಯ-ಪಾಪಗಳ ಕ್ಷಯಕ್ಕೋಸ್ಕರ ಭಗವಂತನ ಯಥಾರ್ಥಜ್ಞಾನವು ವಿಧಿಸಲ್ಪಟ್ಟಿದೆ. ಈ ಪುಣ್ಯ-ಪಾಪಗಳ ಸಂಬಂಧವು ನಾಶವಾದ ಬಳಿಕ ಪರಬ್ರಹ್ಮನಿಗೆ ಸಂಬಂಧಿಸಿದ ತತ್ತ್ವಜ್ಞಾನವು ಉದಯವಾಗುತ್ತದೆ. ಬಳಿಕ ಪರಬ್ರಹ್ಮನನ್ನು ಕಂಡು ಮೋಕ್ಷವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ಆಸೆಯನ್ನು ತೊರೆಯುವುದೇ ಸುಖಸಾಧನ ಎಂಬುದಕ್ಕೆ ಜನಕ-ಮಾಂಡವ್ಯರ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು.

ಯುಧಿಷ್ಠಿರಃ

ಭ್ರಾತರಃ ಪಿತರಃ ಪುತ್ರಾ ಜ್ಞಾತಯಃ ಸುಹೃದಸ್ತಥಾ ।
ಅರ್ಥಹೇತೋರ್ಹತಾಃ ಕ್ರೂರೈರಸ್ಮಾಭಿಃ ಪಾಪಬುದ್ಧಿಭಿಃ ॥೧॥

ಪಿತಾಮಹನೇ, ಕ್ರೂರಿಗಳಾದ ನಾವು ಧನದ ಆಸೆಯಿಂದ ಪಾಪ ಬುದ್ಧಿಯುಳ್ಳವರಾಗಿ ಸಹೋದರರು, ಪಿತೃಗಳು, ಮಕ್ಕಳು, ಜ್ಞಾನಿಗಳು, ಸ್ನೇಹಿತರು ಎಂದು ಯಾರನ್ನೂ ಗಮನಿಸದೆ ಎಲ್ಲರನ್ನೂ ಯುದ್ಧದಲ್ಲಿ ಕೊಂದಿದ್ದೇವೆ.

ಯೇಯಮಧ್ಯೋದ್ಭವಾ ತೃಷ್ಣಾ ಕಥಮೇತಾಂ ಪಿತಾಮಹ ।
ನಿವರ್ತಯೇಮ ಪಾಪಂ ಹಿ ತೃಷ್ಣಯಾ ಕಾರಿತಾ ವಯಮ್ ॥೨॥

ಈ ಅರ್ಥದಿಂದ ಹುಟ್ಟುವಂತಹ ತೃಷ್ಣೆಯು ಮನುಷ್ಯನನ್ನು ಆಕ್ರಮಿಸಿದೆ. ಇದನ್ನು ತ್ಯಜಿಸುವ ಉಪಾಯವೇನು? ಈ ತೃಷ್ಣೆಯಿಂದಲೇ ನಾವು ಅನೇಕ ತಪ್ಪುಗಳನ್ನು ಮಾಡಿದ್ದೇವೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗೀತಂ ವಿದೇಹರಾಜೇನ ಮಾಂಡವ್ಯಾಯಾನುಪೃಚ್ಛತೇ ॥೩॥

ಧರ್ಮಪುತ್ರನೇ, ಇದೇ ವಿಷಯದಲ್ಲಿ ವಿದೇಹದ ರಾಜನಿಗೂ ಮಾಂಡವ್ಯನಿಗೂ ನಡೆದ ಸಂವಾದ ರೂಪವಾದ ಇತಿಹಾಸವೊಂದನ್ನು ಹೇಳುತ್ತಾರೆ. ಹಿಂದೆ ಒಮ್ಮೆ ಮಾಂಡವ್ಯನು ಇದೇ ವಿಷಯವಾಗಿ ಪ್ರಶ್ನಿಸಿದಾಗ ವಿದೇಹ ರಾಜನು ಹೇಳಿದ ಗೀತೆಯು ಹೀಗಿದೆ.

ಸುಸುಖಂ ಬತ ಜೀವಾಮಿ ಯಸ್ಯ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ ॥೪॥

ನಾನು ಸುಖವಾಗಿ ಜೀವಿಸುತ್ತಿದ್ದೇನೆ. ಆದರೆ ನನಗೆ ಸಂಬಂಧಿಸಿದ ಸ್ವತ್ತು ಯಾವುದೂ ಈ ಜನಕಪುರಿಯಲ್ಲಿ ಇರುವುದಿಲ್ಲ. ಮಿಥಿಲೆಯೆಲ್ಲವೂ ಪೂರ್ಣವಾಗಿ ಸುಟ್ಟುಹೋದರೂ ನನ್ನದೇನೂ ಸುಟ್ಟುಹೋಗುವುದಿಲ್ಲ.

ಅರ್ಥಾಃ ಖಲು ಸಮೃದ್ಧಾ ಹಿ ಬಾಢಂ ದುಃಖಂ ವಿಜಾನತಾಮ್ ।
ಅಸಮೃದ್ಧಾಸ್ತ್ವಪಿ ಸದಾ ಮೋಹಯಂತ್ಯವಿಚಕ್ಷಣಾನ್ ॥೫॥

ಸಂಪತ್ತು ಸಮೃದ್ಧವಾಗಿದ್ದಷ್ಟು ಹೆಚ್ಚು ದುಃಖವನ್ನುಂಟು ಮಾಡುತ್ತದೆ. ಅಲ್ಪ ಧನವಾದರೂ ಅದು ಅಜ್ಞರನ್ನು ಮೋಹಕ್ಕೆ ಗುರಿ ಮಾಡುತ್ತದೆ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥೬॥

ಈ ಲೋಕದ ಎಲ್ಲ ಕಾಮಸುಖಗಳಾಗಲಿ, ಅದಕ್ಕೂ ಮೇಲಾದ ದೇವಲೋಕದ ಸುಖವಾಗಲಿ ತೃಷ್ಣೆಯನ್ನು ಬಿಡುವುದರಿಂದ ಉಂಟಾಗುವ ಅಪಾರ ಸುಖಕ್ಕೆ ಕಲಾಮಾತ್ರವೂ ಸಾಟಿಯಾಗಲಾರದು.

ಪುಣ್ಯ-ಪಾಪದಿಂದ ಪ್ರಾಪ್ತವಾಗುವ ದೇಹವನ್ನು ಜೀವನು ಕರ್ಮಗಳನ್ನು ಅನುಭವಿಸುತ್ತಾ ಕಳೆದುಕೊಳ್ಳುತ್ತಾನೆ. ಶರೀರವು ನಾಶವಾದ ಬಳಿಕ ಜೀವನು ತನ್ನ ಸ್ವರೂಪಕ್ಕೆ ಯೋಗ್ಯವಾದ ಪೂರ್ಣಸುಖವನ್ನು ಹೊಂದುತ್ತಾನೆ.

ಪುಣ್ಯಪಾಪಕ್ಷಯಾರ್ಥಂ ಚ ಸಾಂಖ್ಯಂ ಜ್ಞಾನಂ ವಿಧೀಯತೇ ।
ತತ್‌ಕ್ಷಯೇ ಹ್ಯಸ್ಯ ಪಶ್ಯಂತಿ ಬ್ರಹ್ಮಭಾವೇ ಪರಾಂ ಗತಿಮ್ ॥೩೮॥

ಈ ಪುಣ್ಯ-ಪಾಪಗಳ ಕ್ಷಯಕ್ಕೋಸ್ಕರ ಭಗವಂತನ ಯಥಾರ್ಥಜ್ಞಾನವು ವಿಧಿಸಲ್ಪಟ್ಟಿದೆ. ಈ ಪುಣ್ಯ-ಪಾಪಗಳ ಸಂಬಂಧವು ನಾಶವಾದ ಬಳಿಕ ಪರಬ್ರಹ್ಮನಿಗೆ ಸಂಬಂಧಿಸಿದ ತತ್ತ್ವಜ್ಞಾನವು ಉದಯವಾಗುತ್ತದೆ. ಬಳಿಕ ಪರಬ್ರಹ್ಮನನ್ನು ಕಂಡು ಮೋಕ್ಷವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ಆಸೆಯನ್ನು ತೊರೆಯುವುದೇ ಸುಖಸಾಧನ ಎಂಬುದಕ್ಕೆ ಜನಕ-ಮಾಂಡವ್ಯರ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು.

ಯುಧಿಷ್ಠಿರಃ

ಭ್ರಾತರಃ ಪಿತರಃ ಪುತ್ರಾ ಜ್ಞಾತಯಃ ಸುಹೃದಸ್ತಥಾ ।
ಅರ್ಥಹೇತೋರ್ಹತಾಃ ಕ್ರೂರೈರಸ್ಮಾಭಿಃ ಪಾಪಬುದ್ಧಿಭಿಃ ॥೧॥

ಪಿತಾಮಹನೇ, ಕ್ರೂರಿಗಳಾದ ನಾವು ಧನದ ಆಸೆಯಿಂದ ಪಾಪ ಬುದ್ಧಿಯುಳ್ಳವರಾಗಿ ಸಹೋದರರು, ಪಿತೃಗಳು, ಮಕ್ಕಳು, ಜ್ಞಾನಿಗಳು, ಸ್ನೇಹಿತರು ಎಂದು ಯಾರನ್ನೂ ಗಮನಿಸದೆ ಎಲ್ಲರನ್ನೂ ಯುದ್ಧದಲ್ಲಿ ಕೊಂದಿದ್ದೇವೆ.

ಯೇಯಮಧ್ಯೋದ್ಭವಾ ತೃಷ್ಣಾ ಕಥಮೇತಾಂ ಪಿತಾಮಹ ।
ನಿವರ್ತಯೇಮ ಪಾಪಂ ಹಿ ತೃಷ್ಣಯಾ ಕಾರಿತಾ ವಯಮ್ ॥೨॥

ಈ ಅರ್ಥದಿಂದ ಹುಟ್ಟುವಂತಹ ತೃಷ್ಣೆಯು ಮನುಷ್ಯನನ್ನು ಆಕ್ರಮಿಸಿದೆ. ಇದನ್ನು ತ್ಯಜಿಸುವ ಉಪಾಯವೇನು? ಈ ತೃಷ್ಣೆಯಿಂದಲೇ ನಾವು ಅನೇಕ ತಪ್ಪುಗಳನ್ನು ಮಾಡಿದ್ದೇವೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗೀತಂ ವಿದೇಹರಾಜೇನ ಮಾಂಡವ್ಯಾಯಾನುಪೃಚ್ಛತೇ ॥೩॥

ಧರ್ಮಪುತ್ರನೇ, ಇದೇ ವಿಷಯದಲ್ಲಿ ವಿದೇಹದ ರಾಜನಿಗೂ ಮಾಂಡವ್ಯನಿಗೂ ನಡೆದ ಸಂವಾದ ರೂಪವಾದ ಇತಿಹಾಸವೊಂದನ್ನು ಹೇಳುತ್ತಾರೆ. ಹಿಂದೆ ಒಮ್ಮೆ ಮಾಂಡವ್ಯನು ಇದೇ ವಿಷಯವಾಗಿ ಪ್ರಶ್ನಿಸಿದಾಗ ವಿದೇಹ ರಾಜನು ಹೇಳಿದ ಗೀತೆಯು ಹೀಗಿದೆ.

ಸುಸುಖಂ ಬತ ಜೀವಾಮಿ ಯಸ್ಯ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ ॥೪॥

ನಾನು ಸುಖವಾಗಿ ಜೀವಿಸುತ್ತಿದ್ದೇನೆ. ಆದರೆ ನನಗೆ ಸಂಬಂಧಿಸಿದ ಸ್ವತ್ತು ಯಾವುದೂ ಈ ಜನಕಪುರಿಯಲ್ಲಿ ಇರುವುದಿಲ್ಲ. ಮಿಥಿಲೆಯೆಲ್ಲವೂ ಪೂರ್ಣವಾಗಿ ಸುಟ್ಟುಹೋದರೂ ನನ್ನದೇನೂ ಸುಟ್ಟುಹೋಗುವುದಿಲ್ಲ.

ಅರ್ಥಾಃ ಖಲು ಸಮೃದ್ಧಾ ಹಿ ಬಾಢಂ ದುಃಖಂ ವಿಜಾನತಾಮ್ ।
ಅಸಮೃದ್ಧಾಸ್ತ್ವಪಿ ಸದಾ ಮೋಹಯಂತ್ಯವಿಚಕ್ಷಣಾನ್ ॥೫॥

ಸಂಪತ್ತು ಸಮೃದ್ಧವಾಗಿದ್ದಷ್ಟು ಹೆಚ್ಚು ದುಃಖವನ್ನುಂಟು ಮಾಡುತ್ತದೆ. ಅಲ್ಪ ಧನವಾದರೂ ಅದು ಅಜ್ಞರನ್ನು ಮೋಹಕ್ಕೆ ಗುರಿ ಮಾಡುತ್ತದೆ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥೬॥

ಈ ಲೋಕದ ಎಲ್ಲ ಕಾಮಸುಖಗಳಾಗಲಿ, ಅದಕ್ಕೂ ಮೇಲಾದ ದೇವಲೋಕದ ಸುಖವಾಗಲಿ ತೃಷ್ಣೆಯನ್ನು ಬಿಡುವುದರಿಂದ ಉಂಟಾಗುವ ಅಪಾರ ಸುಖಕ್ಕೆ ಕಲಾಮಾತ್ರವೂ ಸಾಟಿಯಾಗಲಾರದು.

ಯಥೈವ ಶೃಂಗಂ ಗೋಃ ಕಾಲೇ ವರ್ಧಮಾನಸ್ಯ ವರ್ಧತೇ ।
ತಥೈವ ತೃಷ್ಣಾ ವಿತ್ತೇನ ವರ್ಧಮಾನೇನ ವರ್ಧತೇ ॥೭॥

ಬೆಳೆಯುವ ಗೋವತ್ಸದ ಕೊಂಬು ಆ ಕರುವು ಬೆಳೆಯುತ್ತಿದ್ದಂತೆ ಹೇಗೆ ವೃದ್ಧಿಯನ್ನು ಹೊಂದುತ್ತದೋ, ಇದರಂತೆ ಮನುಷ್ಯನಿಗೆ ಧನವು ಹೆಚ್ಚಿದಂತೆಲ್ಲ ಅದರ ತೃಷ್ಣೆಯು ಹೆಚ್ಚುತ್ತಲೇ ಇರುತ್ತದೆ.

ಕಿಂಚಿದೇವ ಮಮತ್ವೇನ ಯದಾ ಭವತಿ ಕಲ್ಪಿತಮ್ ।
ತದೇವ ಪರಿತಾಪಾಯ ನಾಶೇ ಸಂಪದ್ಯತೇ ಪುನಃ ॥೮॥

ನನ್ನದು ಎಂಬ ಅಭಿಮಾನಕ್ಕೆ ಅರ್ಹವಾದ ಅಲ್ಪಸ್ವತ್ತು ಕೈಬಿಟ್ಟುಹೋದಾಗ ಅಪಾರ ದುಃಖವನ್ನು ಉಂಟುಮಾಡುತ್ತದೆ.

ನ ಕಾಮಾನನುರುದ್ಧ್ಯೇತ ದುಃಖಂ ಕಾಮೇಷು ವೈ ರತಿಃ ।
ಪ್ರಾಪ್ಯಾರ್ಥಮುಪಯುಂಜೀತ ಧರ್ಮೇ ಕಾಮಂ ವಿವರ್ಜಯೇತ್ ॥೯॥

ಆದ್ದರಿಂದ ಯಾವುದರಲ್ಲಿಯೂ ನನ್ನದೆಂಬ ಮೋಹವನ್ನು ಇಟ್ಟುಕೊಳ್ಳಲೇ ಬಾರದು. ವಿಷಯದಲ್ಲಿ ಆಸಕ್ತರಾದಾಗ ದುಃಖವುಂಟಾಗುತ್ತದೆ. ಆದ್ದರಿಂದ ಅರ್ಥವು ದೊರೆತಾಗ ಅದರಿಂದ ಧರ್ಮಕಾರ್ಯವನ್ನೇ ಹೆಚ್ಚು ಆಚರಿಸಬೇಕು.

ವಿದ್ವಾನ್ ಸರ್ವೇಷು ಭೂತೇಷು ಆತ್ಮನಾ ಸೋಪಮೋ ಭವೇತ್ ।
ಕೃತಕೃತ್ಯೋ ವಿಶುದ್ಧಾತ್ಮಾ ಸರ್ವಂ ತ್ಯಜತಿ ವೈ ಸಹ ॥೧೦॥

ವಿದ್ವಾಂಸನಾದವನು ತನ್ನಲ್ಲಿ ಹೇಗೋ ಹಾಗೆ ಇತರ ಪ್ರಾಣಿಗಳಲ್ಲಿಯೂ ಪ್ರೀತಿಯಿಂದಲೇ ವರ್ತಿಸಬೇಕು. ಅದರಿಂದಲೇ ಅವನು ಕೃತಕೃತ್ಯನಾಗಿ, ಶುದ್ಧಚಿತ್ತನಾಗಿ ಸಮಸ್ತವಾದ ಕಾಮನೆಗಳನ್ನು ತ್ಯಾಗ ಮಾಡುತ್ತಾನೆ.

ಉಭೇ ಸತ್ಯಾನೃತೇ ತ್ಯಕ್ತ್ವಾ ಶೋಕಾನಂದೌ ಪ್ರಿಯಾಪ್ರಿಯೇ ।
ಭಯಾಭಯೇ ಚ ಸಂತ್ಯಜ್ಯ ಸಂಪ್ರಶಾಂತೋ ನಿರಾಮಯಃ ॥೧೧॥

ಅವನೇ ಸತ್ಯ-ಅನೃತಗಳನ್ನು, ಶೋಕ-ಆನಂದಗಳನ್ನು, ಪ್ರಿಯ-ಅಪ್ರಿಯಗಳನ್ನು, ಭಯ- ನಿರ್ಭಯಗಳನ್ನು ತ್ಯಜಿಸಿದವನಾಗಿ, ಪ್ರಶಾಂತನಾಗಿ ನಿರ್ವಿಕಾರನಾಗುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥

ದುರ್ಬುದ್ಧಿಯವರಿಂದ ಯಾವುದನ್ನು ಬಿಡಲು ಸಾಧ್ಯವಿಲ್ಲವೋ, ಶರೀರವು ಶಿಥಿಲವಾಗುತ್ತಿದ್ದರೂ ಯಾವುದು ಜೀರ್ಣವಾಗುವುದಿಲ್ಲವೋ, ಯಾವುದು ಪ್ರಾಣಾಂತಿಕವಾದ ರೋಗವೆನಿಸಿದೆಯೋ ಅಂತಹ ತೃಷ್ಣೆಯನ್ನು ತ್ಯಜಿಸಿದವನಿಗೆ ಸುಖವುಂಟಾಗುತ್ತದೆ.

ಚಾರಿತ್ರಮಾತ್ಮನಃ ಪಶ್ಯಂಶ್ಚಂದ್ರಶುದ್ಧಮನಾಮಯಮ್ ।
ಧರ್ಮಾತ್ಮಾ ಲಭತೇ ಕೀರ್ತಿಂ ಪ್ರೇತ್ಯ ಚೇಹ ಯಥಾಸುಖಮ್ ॥೧೩॥

ನಿಷ್ಕಳಂಕನಾದ ಚಂದ್ರನಂತೆ ಪರಿಶುದ್ಧನಾಗಿ ತನ್ನ ಚಾರಿತ್ರ್ಯವನ್ನು ಕಾಪಾಡಿಕೊಳ್ಳುತ್ತಾ ಇರುವ ಧರ್ಮಾತ್ಮನು ಈ ಲೋಕದಲ್ಲಿ ಕೀರ್ತಿಯನ್ನೂ, ಪರಲೋಕದಲ್ಲಿ ಉತ್ತಮವಾದ ಸುಖವನ್ನೂ ಹೊಂದುತ್ತಾನೆ.

ರಾಜ್ಞಸ್ತದ್ವಚನಂ ಶ್ರುತ್ವಾ ಪ್ರೀತಿಮಾನಭವದ್ ದ್ವಿಜಃ ।
ಪೂಜಯಿತ್ವಾ ಚ ತದ್ವಾಕ್ಯಂ ಮಾಂಡವ್ಯೋ ಮೋಕ್ಷಮಾಶ್ರಿತಃ ॥೧೪॥

ಯುಧಿಷ್ಠಿರನೇ, ವಿದೇಹ ರಾಜನು ಹೇಳಿದ ಈ ಮಾತನ್ನು ಕೇಳಿ ಮಾಂಡವ್ಯ ಮಹರ್ಷಿಯು ಪ್ರೀತನಾದನು. ರಾಜನ ಮಾತನ್ನು ಪ್ರಶಂಸೆ ಮಾಡುತ್ತಾ ಮಾಂಡವ್ಯನು ಮೋಕ್ಷಮಾರ್ಗವನ್ನು ಆಶ್ರಯಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಏಕಾದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೆರಡನೆಯ ಅಧ್ಯಾಯ

ಆಯಿತ ಮುನಿಯು ಹೇಳಿದ ಸಂನ್ಯಾಸಧರ್ಮ.

ಯುಧಿಷ್ಠಿರಃ

ಕಿಂಶೀಲಃ ಕಿಂಸಮಾಚಾರಃ ಕಿಂವಿದ್ಯಃ ಕಿಂಪರಾಯಣಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ ಪರಂ ಪ್ರಕೃತೇರ್ಧ್ರುವಮ್ ॥೧॥

ಪಿತಾಮಹನೇ, ಲೋಕದಲ್ಲಿ ಎಂತಹ ಸ್ವಭಾವವುಳ್ಳವರು, ಯಾವ ರೀತಿಯಾದ ಆಚಾರಶೀಲರು ಎಂತಹ ವಿದ್ಯೆಯಿಂದ, ಯಾವ ಆಶ್ರಮದಿಂದ ಪ್ರಕೃತಿಗಿಂತಲೂ ಶ್ರೇಷ್ಠವಾದ ಶಾಶ್ವತವೆನಿಸಿದ ಪರಬ್ರಹ್ಮನ ಸ್ಥಾನವನ್ನು ಹೊಂದುತ್ತಾರೆ?

ಭೀಷ್ಮಃ

ಮೋಕ್ಷಧರ್ಮೇಷು ನಿರತೋ ಲಘ್ವಾಹಾರೋ ಜಿತೇಂದ್ರಿಯಃ ।
ಪ್ರಾಪ್ನೋತಿ ಪರಮಂ ಸ್ಥಾನಂ ಯತ್ ಪರಂ ಪ್ರಕೃತೇರ್ಧ್ರುವಮ್ ॥೨॥

ಕುಮಾರನೇ, ಪರಬ್ರಹ್ಮನ ಪದವಿಯನ್ನು ಹೊಂದುವವರು ಮೋಕ್ಷಧರ್ಮದಲ್ಲೇ ನಿರತರಾಗಿರುತ್ತಾರೆ. ಮಿತಾಹಾರಿಗಳು, ಜಿತೇಂದ್ರಿಯರು ಆಗಿರುತ್ತಾರೆ. ಇಂತಹವರು ಆ ಉತ್ತಮ ಸ್ಥಾನವನ್ನು ಹೊಂದುತ್ತಾರೆ.

ಸ್ವಗೃಹಾದಭಿನಿಃಸೃತ್ಯ ಲಾಭಾಲಾಭೇ ಸಮೋ ಮುನಿಃ ।
ಸಮುಪೋಢೇಷು ಕಾಮೇಷು ನಿರಪೇಕ್ಷಃ ಪರಿವ್ರಜೇತ್ ॥೩॥

ಮೋಕ್ಷವನ್ನು ಬಯಸುವವನು ಲಾಭ-ನಷ್ಟಗಳನ್ನು ಸಮಾನವಾಗಿ ಕಂಡು, ಕಾಮೋಪಭೋಗಗಳು ಪ್ರಾಪ್ತವಾಗಿದ್ದರೂ ಅವುಗಳನ್ನು ಅಪೇಕ್ಷಿಸದೆ, ಮುನಿವೃತ್ತಿಯನ್ನೇ ಆಶ್ರಯಿಸಿ ಮನೆಯಿಂದ ಹೊರಟು ಹೋಗಬೇಕು.

ನ ಚಕ್ಷುಷಾ ನ ಮನಸಾ ನ ವಾಚಾ ದೂಷಯೇದಪಿ ।
ನ ಪ್ರತ್ಯಕ್ಷಂ ಪರೋಕ್ಷಂ ವಾ ದೂಷಣಂ ವ್ಯಾಹರೇತ್ ಕ್ವಚಿತ್ ॥೪॥

ಕಣ್ಣಿನಿಂದಾಗಲಿ, ಮನಸ್ಸಿನಿಂದಾಗಲಿ, ಮಾತಿನಿಂದಾಗಲಿ ಇತರರನ್ನು ದೂಷಿಸಬಾರದು. ಯಾವ ಭೂತಗಳಿಗೂ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ನಿಂದಿಸದೆ ಮೈತ್ರಿಯಿಂದಲೇ ವರ್ತಿಸಬೇಕು.

ನ ಹಿಂಸ್ಯಾತ್ ಸರ್ವಭೂತಾನಿ ಮೈತ್ರಾಯಣಗತಿಶ್ಚರೇತ್ ।
ನೇದಂ ಜೀವಿತಮಾಸಾದ್ಯ ವೈರಂ ಕುರ್ವೀತ ಕೇನಚಿತ್ ॥೫॥

ಯಾವುದೇ ಪ್ರಾಣಿಗಳನ್ನು ಹಿಂಸಿಸಬಾರದು. ಯಾರನ್ನೂ ಪೀಡಿಸಬಾರದು. ಎಲ್ಲರಲ್ಲಿಯೂ ಮೈತ್ರೀಭಾವದಿಂದಲೇ ವರ್ತಿಸಬೇಕು. ನಶ್ವರವಾದ ಜೀವನವನ್ನು ಹೊಂದಿರುವ ವ್ಯಕ್ತಿಯು ಯಾರ ಬಳಿಯೂ ದ್ವೇಷವನ್ನು ಕಟ್ಟಿಕೊಳ್ಳಬಾರದು.

ಅತಿವಾದಾಂಸ್ತಿತಿಕ್ಷೇತ ನಾಭಿಮನ್ಯೇತ್ ಕಥಂಚನ ।
ಕ್ರೋದ್ಧ್ಯಮಾನಃ ಪ್ರಿಯಂ ಬ್ರೂಯಾದಾಕ್ರುಷ್ಟಃ ಕುಶಲಂ ವದೇತ್ ॥೬॥

ಯಾರಾದರೂ ತನ್ನ ವಿಷಯದಲ್ಲಿ ಅಪ್ರಿಯವಾದ, ನಿಂದನಾರೂಪವಾದ ಮಾತುಗಳನ್ನು ಆಡಿದರೆ ಅದನ್ನು ಸಹಿಸಿಕೊಳ್ಳಬೇಕು. ಎಂದಿಗೂ ಅಹಂಕಾರ ಪಡಬಾರದು. ಯಾರಾದರೂ ಕೋಪಗೊಂಡರೆ ಪ್ರಿಯಮಾತುಗಳನ್ನೇ ಆಡಬೇಕು. ನಿಂದಿಸಿದಾಗಲೂ ಪ್ರತಿಯಾಗಿ ನಿಂದಿಸದೆ ನಿಂದಿಸಿದವನ ವಿಷಯದಲ್ಲಿ ಕುಶಲವಾದ ಮಾತುಗಳನ್ನೇ ಆಡಬೇಕು.

ಪ್ರದಕ್ಷಿಣಂ ಪ್ರಸವ್ಯಂ ಚ ಗ್ರಾಮಮಧ್ಯೇ ನ ಚಾಚರೇತ್ ।
ಭೈಕ್ಷಚರ್ಯಾಮನಾಪನ್ನೋ ನ ಗಚ್ಛೇತ್ ಪೂರ್ವಕೇತಿತಃ ॥೭॥

ಗ್ರಾಮದ ನಡುವೆ ಎಡಬದಿಯಿಂದಾಗಲಿ, ಬಲಬದಿಯಿಂದಾಗಲಿ ಸಂಚರಿಸಬಾರದು. ಮತ್ತೊಬ್ಬರಿಗೆ ಅನನುಕೂಲವಾಗುವಂತೆ ವರ್ತಿಸಬಾರದು. ಭಿಕ್ಷೆಗೆ ಹೋದರೂ ಎಲ್ಲ ಮನೆಗಳಿಗೂ ಹೋಗಿ ಭಿಕ್ಷೆಯನ್ನು ಬೇಡಬಾರದು. ತಿಳಿದ ಮನೆಗೆ ಹೋಗಿ ಊಟ ಮಾಡಬಾರದು.

ಅವಕೀರ್ಣಃ ಸುಗುಪ್ತಶ್ಚ ನ ವಾಚಾ ಹ್ಯಪ್ರಿಯಂ ವದೇತ್ ।
ಮೃದುಃ ಸ್ಯಾದಪ್ರತಿಕ್ರೂರೋ ವಿಸ್ರಬ್ಧಃ ಸ್ಯಾದರೋಷಣಃ ॥೮॥

ಅವಧೂತನಾಗಿರಬೇಕು. ತನ್ನನ್ನು ಅವಮಾನಿಸಿದರೂ ಮೃದುಧೋರಣೆಯನ್ನೇ ತಾಳಬೇಕು. ಮಾತಿನಿಂದ ಅಪ್ರಿಯವಾದುದನ್ನು ಹೇಳಬಾರದು. ಯಾರ ವಿಷಯದಲ್ಲಿಯೂ ಕ್ರೌರ್ಯವನ್ನು ತೋರಬಾರದು. ನಿಶ್ಚಿಂತನೂ, ವಿಶ್ವಾಸಿಯೂ ಆಗಿರಬೇಕು. ತನ್ನ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಬಾರದು.

ವಿಧೂಮೇ ನ್ಯಸ್ತಮುಸಲೇ ವ್ಯಂಗಾರೇ ಭುಕ್ತವಜ್ಜನೇ ।
ಅತೀತೇ ಪಾತ್ರಸಂಚಿರೇ ಭಿಕ್ಷಾಂ ಲಿಪ್ಸೇತ ವೈ ಮುನಿಃ ॥೯॥

ಸಂನ್ಯಾಸಿಯು ಭಿಕ್ಷೆಗೆ ಹೋಗುವಾಗ ಹೊಗೆ ಇಲ್ಲದ, ಭತ್ತ ಕುಟ್ಟುವ ಶಬ್ದ ಇಲ್ಲದ, ಒಲೆಯ ಬೆಂಕಿಯೂ ಆರಿಹೋಗಿರುವ, ಮನೆಯ ಜನರೆಲ್ಲರೂ ಊಟವನ್ನು ಮುಗಿಸಿಕೊಂಡು ಪಾತ್ರೆಗಳ ಶಬ್ದವು ನಿಂತ ಬಳಿಕ ಅಂತಹ ಗೃಹವನ್ನು, ವಿಚಾರ ಮಾಡಿ ಅಲ್ಲಿಗೆ ಹೋಗಿ ಭಿಕ್ಷೆಯನ್ನು ಯಾಚಿಸಬೇಕು.

ಅನುಯಾತ್ರಿಕಮರ್ಥಸ್ಯ ಮಾತ್ರಾಲಾಭೇಷ್ವನಾದೃತಃ ।
ಅಲಾಭೇ ನ ವಿಹನ್ಯೇತ ಲಾಭಶ್ಚೈನಂ ನ ಹರ್ಷಯೇತ್ ॥೧೦॥

ತನ್ನ ಜೀವನವು ನಿರ್ವಹಣೆಯಾಗುವಷ್ಟು ಮಾತ್ರ ಅನ್ನವನ್ನು ಭಿಕ್ಷಾರೂಪದಲ್ಲಿ ಹೊಂದಲು ಯತ್ನಿಸಬೇಕು. ಅತಿಯಾದ ಅನ್ನದಲ್ಲಿ ಆದರವನ್ನು ಹೊಂದಬಾರದು. ಒಂದು ವೇಳೆ ಅನ್ನ ಸಿಕ್ಕದೆ ಇದ್ದರೂ ಅದರಿಂದ ಮನಸ್ಸಿನಲ್ಲಿ ಅತೃಪ್ತಿಯನ್ನು ಹೊಂದಬಾರದು. ಸಿಕ್ಕಿದಾಗ ಅತಿಯಾದ ಸಂತೋಷವನ್ನೂ ಹೊಂದಬಾರದು.

ಲಾಭಂ ಸಾಧಾರಣಂ ನೇಚ್ಛೇನ್ನ ಭುಂಜೀತಾಭಿಪೂಜಿತಃ ।
ಅಭಿಪೂಜಿತಲಾಭಂ ಹಿ ಜುಗುಪ್ಸೇತೈವ ತಾದೃಶಃ ॥೧೧॥

ಲೌಕಿಕ ಲಾಭಗಳನ್ನು ಬಯಸಬಾರದು. ಆದರ-ಗೌರವಗಳಿರುವ ಕಡೆ ಊಟ ಮಾಡಬಾರದು. ಮುಕ್ತಿಯನ್ನು ಬಯಸುವ ವ್ಯಕ್ತಿಯು ಆದರ, ಸತ್ಕಾರ, ಲೌಕಿಕ ಲಾಭಗಳಲ್ಲಿ ಜುಗುಪ್ಸೆಯನ್ನೇ ಹೊಂದಬೇಕು.

ನ ಚಾನ್ನದೋಷಾನ್ನಿಂದೇತ ನ ಗುಣಾನಭಿಪೂಜಯೇತ್ ।
ಶಯ್ಯಾಸನೇ ವಿವಿಕ್ತೇ ಚ ನಿತ್ಯಮೇವಾಭಿಪೂಜಯೇತ್ ॥೧೨॥

ಸಂನ್ಯಾಸಿಯಾದವನು ಅನ್ನದಲ್ಲಿರುವ ದೋಷಗಳನ್ನು ನೋಡಿ ನಿಂದಿಸಬಾರದು. ಗುಣಗಳನ್ನು ನೋಡಿ ಪ್ರಶಂಸೆಯನ್ನೂ ಮಾಡಬಾರದು. ಏಕಾಂತಸ್ಥಳದಲ್ಲಿಯೇ ಕುಳಿತುಕೊಳ್ಳುವುದನ್ನು, ಮಲಗುವುದನ್ನು ಆದರಿಸಬೇಕು.

ಶೂನ್ಯಾಗಾರಂ ವೃಕ್ಷಮೂಲಮರಣ್ಯಮಥ ವಾ ಗುಹಾಮ್ ।
ಅಜ್ಞಾತಚರ್ಯಾಂ ಗತ್ವಾನ್ಯಾಂ ತತೋನ್ಯತ್ರೈವ ಸಂವಿಶೇತ್ ॥೧೩॥

ಜನರಿಲ್ಲದ ಹಾಳು ಮನೆಯಲ್ಲಾಗಲಿ, ವೃಕ್ಷದ ಬುಡದಲ್ಲಾಗಲಿ, ಅರಣ್ಯದಲ್ಲಾಗಲಿ, ಪರ್ವತದ ಗುಹೆಯಲ್ಲಾಗಲಿ ಅಥವಾ ಗುಪ್ತ ಸ್ಥಳದಲ್ಲೇ ಆಗಲಿ, ಮುಮುಕ್ಷುವು ಅಜ್ಞಾತವಾಗಿರುತ್ತಾ ಅಧ್ಯಾತ್ಮಚಿಂತನೆಯಲ್ಲಿ ಮಗ್ನನಾಗಿರಬೇಕು.

ಅನುರೋಧವಿರೋಧಾಭ್ಯಾಂ ಸಮಃ ಸ್ಯಾದಚಲೋ ಧ್ರುವಃ ।
ಸುಕೃತಂ ದುಷ್ಕೃತಂ ಚೋಭೇ ನಾನುರುದ್ಧ್ಯೇತ ಕರ್ಮಣಿ ॥೧೪॥

ಜನರ ಪ್ರೀತಿ-ವಿರೋಧಗಳನ್ನು ಸಮವಾಗಿ ಕಾಣುತ್ತಾ ಅಚಲನಾಗಿ, ಸ್ಥಿರಚಿತ್ತನಾಗಿ, ಸುಕೃತ-ದುಷ್ಕೃತಗಳನ್ನು ಚಿಂತಿಸದೆ ಭಗವತ್ಪ್ರೀತಿ ಎಂಬ ಕಾರಣದಿಂದ ಕರ್ಮಗಳನ್ನು ಆಚರಿಸಬೇಕು.

ವಾಚೋ ವೇಗಂ ಮನಸಃ ಕ್ರೋಧವೇಗಂ
ವಿವಿತ್ಸಾವೇಗಮುದರೋಪಸ್ಥವೇಗಮ್ ।
ಏತಾನ್ ವೇಗಾನ್ ವಿನಯೇದ್ವೈ ತಪಸ್ವೀ
ನಿಂದಾ ಚಾಸ್ಯ ಹೃದಯಂ ನೋಪಹನ್ಯಾತ್ ॥೧೫॥

ಸಂನ್ಯಾಸಿಯಾದವನು ಮಾತು, ಮನಸ್ಸು, ಕ್ರೋಧ, ಹಿಂಸೆ, ಹೊಟ್ಟೆ, ಉಪಸ್ಥ ಇವುಗಳ ವೇಗವನ್ನು ಸಹಿಸಿಕೊಳ್ಳಬೇಕು. ಅರ್ಥಾತ್ ಇವುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಬೇಕು. ಇತರರು ಮಾಡುವ ನಿಂದನೆಗಳಿಂದ ವಿಕಾರಕ್ಕೆ ತುತ್ತಾಗಬಾರದು.

ಮಧ್ಯಸ್ಥ ಏವ ತಿಷ್ಠೇತ ಪ್ರಶಂಸಾನಿಂದಯೋಃ ಸಮಃ ।
ಏತತ್ ಪವಿತ್ರಂ ಪರಮಂ ಪರಿವ್ರಾಜಕ ಆಶ್ರಮೇ ॥೧೬॥

ಪ್ರಶಂಸೆ ಮತ್ತು ನಿಂದನೆಗಳನ್ನು ಸಮಾನವಾಗಿ ಸ್ವೀಕರಿಸಬೇಕು. ಸಂನ್ಯಾಸಾಶ್ರಮದಲ್ಲಿ ಇಂತಹ ಆಚರಣೆಯು ಪವಿತ್ರವೆಂದು ಹೇಳಲ್ಪಟ್ಟಿದೆ.

ಮಹಾತ್ಮಾ ಸುವ್ರತೋ ದಾಂತಃ ಸರ್ವತ್ರೈವಾನಪಾಶ್ರಿತಃ ।
ಅಪೂರ್ವಚಾರಕಃ ಸೌಮ್ಯೋ ಅನಿಕೇತಃ ಸಮಾಹಿತಃ ॥೧೭॥

ಮಹಾತ್ಮನಾದ, ವ್ರತನಿಷ್ಠನಾದ, ಇಂದ್ರಿಯನಿಗ್ರಹವುಳ್ಳ, ಎಲ್ಲೆಡೆಯೂ ಅಸಂಗನಾಗಿರುವ ವ್ಯಕ್ತಿಯು ತನಗೆ ಪರಿಚಿತವಿರುವ ಸ್ಥಾನಗಳಲ್ಲಿ ಸಂಚರಿಸಬಾರದು.

ಸೌಮ್ಯನೂ, ಆಶ್ರಯವಿಲ್ಲದೆ ಇರುವವನೂ ಆಗಿದ್ದು, ಪರಮಾತ್ಮನಲ್ಲಿಯೇ ಏಕಾಗ್ರತೆಯನ್ನು ಸಂಪಾದಿಸಿಕೊಳ್ಳಬೇಕು.

ವಾನಪ್ರಸ್ಥಗೃಹಸ್ಥಾಭ್ಯಾಂ ನ ಸಂಸೃಜ್ಯೇತ ಕರ್ಹಿಚಿತ್ ।
ಅಜ್ಞಾತಲಿಪ್ಸಾಂ ಲಿಪ್ಸೇತ ನ ಚೈನಂ ಹರ್ಷ ಆವಿಶೇತ್ ॥೧೮॥

ವಾನಪ್ರಸ್ಥಾಶ್ರಮಿಗಳೊಡನೆ ಅಥವಾ ಗೃಹಸ್ಥಾಶ್ರಮಿಗಳೊಡನೆ ಸಂಬಂಧವನ್ನು ಇಟ್ಟುಕೊಳ್ಳಬಾರದು. ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸದೆ ಯಾವ ಪದಾರ್ಥವು ದೊರೆಯುವುದೋ ಅದನ್ನೇ ಸ್ವೀಕರಿಸಲು ಇಚ್ಛೆ ಹೊಂದಬೇಕು. ತನಗೆ ಬೇಕಾದ ಪದಾರ್ಥವು ದೊರಕಿದರೂ ಸಂತೋಷ ಪಡಬಾರದು.

ವಿಜಾನತಾಂ ಮೋಕ್ಷ ಏಷ ಶ್ರಮಃ ಸ್ಯಾದವಿಜಾನತಾಮ್ ।
ಮೋಕ್ಷಯಾನಮಿದಂ ಕೃತ್ಸ್ನಂ ವಿದುಷಾಂ ಹಾರಿತೋಽಬ್ರವೀತ್ ॥೧೯॥

ಸಂನ್ಯಾಸಾಶ್ರಮವು ಜ್ಞಾನಿಗಳಿಗೆ ಮೋಕ್ಷರೂಪವಾಗಿದೆ. ಅಜ್ಞಾನಿಗಳಿಗೆ ಶ್ರಮಸಾಧ್ಯವಾಗಿದೆ. ಹೀಗೆ ಹಾರಿತಮುನಿಯು ಅಜ್ಞಾನಿಗಳ ದೃಷ್ಟಿಯಿಂದ ಮೋಕ್ಷ ಮಾರ್ಗವನ್ನು ಉಪದೇಶಿಸಿದ್ದಾನೆ.

ಅಭಯಂ ಸರ್ವಭೂತೇಭ್ಯೋ ದತ್ತ್ವಾ ಯಃ ಪ್ರವ್ರಜೇದ್ ಗೃಹಾತ್ ।
ಲೋಕಾಸ್ತೇಜೋಮಯಾಸ್ತಸ್ಯ ತಥಾನಂತ್ಯಾಯ ಕಲ್ಪತೇ ॥೨೦॥

ಯಾವ ಪ್ರಾಣಿಗಳನ್ನೂ ಹಿಂಸಿಸುವುದಿಲ್ಲ ಎಂದು ಅಭಯದಾನ ಮಾಡಿ ಯಾವ ವ್ಯಕ್ತಿಯು ಮನೆಯನ್ನು ಬಿಟ್ಟು ಹೊರಡುತ್ತಾನೋ ಅವನಿಗೆ ತೇಜೋಮಯವಾದ ಲೋಕಗಳು ಲಭಿಸುತ್ತವೆ. ಅವನು ಅನಂತವಾದ ಪರಮಪದವನ್ನು ಹೊಂದಲು ಸಮರ್ಥನಾಗುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಾದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿಮೂರನೆಯ ಅಧ್ಯಾಯ

ಬ್ರಹ್ಮಪ್ರಾಪ್ತಿಗೆ ಉಪಾಯ. ಶುಕ್ರ-ವೃತ್ರರ ಸಂವಾದ.

ಯುಧಿಷ್ಠಿರಃ

ಧನ್ಯಾ ಧನ್ಯಾ ಇತಿ ಜನಾಃ ಸರ್ವೇಽಸ್ಮಾನ್ ಪ್ರವದಂತ್ಯುತ ।
ನ ದುಃಖಿತತರಃ ಕಶ್ಚಿತ್ ಪುಮಾನಸ್ಮಾಭಿರಸ್ತಿ ಹ ॥೧॥

ಜನರೆಲ್ಲರೂ ನಮ್ಮನ್ನು ಕುರಿತು ಧನ್ಯರೂ, ಧನ್ಯರೂ ಎಂದು ಹೇಳುತ್ತಾರೆ. ಆದರೆ ಕುಂತಿಮಕ್ಕಳಾದ ನಮಗಿಂತ ದುಃಖಿತರಾದವರು ಪ್ರಪಂಚದಲ್ಲಿ ಯಾರೂ ಇರುವುದಿಲ್ಲ.

ಲೋಕಸಂಭಾವಿತೈರ್ದುಃಖಂ ಯತ್ ಪ್ರಾಪ್ತಂ ಕುರುಸತ್ತಮ ।
ಪ್ರಾಪ್ಯ ಜಾತಿಂ ಮನುಷ್ಯೇಷು ದೇವೈರಪಿ ಪಿತಾಮಹ ॥೨॥

ದೇವತೆಗಳ ಮೂಲಕ ಮಾನವ ಲೋಕದಲ್ಲಿ ಹುಟ್ಟನ್ನು ಪಡೆದ, ಸಮಸ್ತ ಪ್ರಜೆಗಳಿಂದ ಸನ್ಮಾನಿತರಾದ ನಮಗೆ ಇಂತಹ ಮಹತ್ತರವಾದ ದುಃಖವು ಒದಗಿದೆ.

ಕದಾ ವಯಂ ಕರಿಷ್ಯಾಮಃ ಸಂನ್ಯಾಸಂ ದುಃಖಸಂಜ್ಞಕಮ್ ।
ದುಃಖಮೇತಚ್ಛರೀರಾಣಾಂ ಧಾರಣಂ ಕುರುಸತ್ತಮ ॥೩॥

ಸಂಸಾರಿಗಳಿಗೆ ದುಷ್ಕರವಾದ ಆಶ್ರಮವೆನಿಸಿದ ಸಂನ್ಯಾಸಾಶ್ರಮವನ್ನು ನಾವು ಯಾವಾಗ ಅವಲಂಬಿಸುತ್ತೇವೆ? ಈ ಶರೀರವನ್ನು ಧಾರಣೆ ಮಾಡಿಕೊಂಡಿರುವುದು ನಮಗೆ ತುಂಬಾ ದುಃಖವೆನಿಸಿದೆ.

ವಿಮುಕ್ತಾಃ ಸಪ್ತದಶಭಿರ್ಹೇತುಭೂತೈಶ್ಚ ಪಂಚಭಿಃ ।
ಇಂದ್ರಿಯಾರ್ಥೈರ್ಗುಣೈಶ್ಚೈವ ಅಷ್ಟಭಿಃ ಪ್ರಪಿತಾಮಹ ॥೪॥

ನ ಗಚ್ಛಂತಿ ಪುನರ್ಭಾವಂ ಮುನಯಃ ಸಂಶಿತವ್ರತಾಃ ।
ಕದಾ ವಯಂ ಭವಿಷ್ಯಾಮೋ ರಾಜ್ಯಂ ಹಿತ್ವಾ ಪರಂತಪ ॥೫॥

ಪಿತಾಮಹನೇ, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನಸ್ಸು, ಬುದ್ಧಿ, ಪಂಚಮಹಾಭೂತಗಳು - ಹೀಗೆ ಹದಿನೇಳು ತತ್ತ್ವಗಳಿಂದಲೂ, ಐದು ಇಂದ್ರಿಯಾರ್ಥಗಳೆನಿಸಿದ ರೂಪಾದಿ ಗುಣಗಳಿಂದಲೂ, ಧನಮದ, ಕುಲಮದ,

ವಿದ್ಯಾಮದ, ಯೌವನ ಮದ, ಪ್ರಭುತ್ವ ಮದ, ಪರಿಜನ ಮದ, ಧರ್ಮ ಮದ, ದಾನ ಮದ ಎಂಬ ಅಷ್ಟ ಮದಗಳಿಂದಲೂ ವಿಮುಕ್ತರಾದ ಮುನಿಗಳು ಕಠೋರ ವ್ರತನಿಷ್ಠರಾದುದರಿಂದಲೇ ಪುನಃ ಜನ್ಮವನ್ನು ಹೊಂದುವುದಿಲ್ಲ. ನಾವು ರಾಜ್ಯವನ್ನು ತ್ಯಜಿಸಿ ಅಂತಹ ಶ್ರೇಷ್ಠವಾದ ಸ್ಥಿತಿಯನ್ನು ಯಾವಾಗ ಹೊಂದುತ್ತೇವೆ?

ಭೀಷ್ಮಃ

ನಾಸ್ಯನಂತಂ ಮಹಾರಾಜ ಸರ್ವಂ ಸಂಖ್ಯಾನಗೋಚರಮ್ ।
ಪುನರ್ಭಾವೋಽಪಿ ಸಂಖ್ಯಾತೋ ನಾಸ್ತಿ ಕಿಂಚಿದಿಹಾಚಲಮ್ ॥೬॥

ಮಹಾರಾಜನೇ, ದುಃಖವು ಅನಂತವಾದುದಲ್ಲ. ಜಗತ್ತಿನ ಎಲ್ಲ ವಸ್ತುಗಳು ಅಳತೆಯ ಪರಿಮಿತಿಯಿಂದ ಕೂಡಿದವುಗಳಾಗಿವೆ. ಇದರಂತೆ ಪುನರ್ಜನ್ಮಗಳಿಗೂ ಇಷ್ಟೆಂಬ ಲೆಕ್ಕವಿದೆ. ಲೋಕದಲ್ಲಿ ಸ್ಥಿರವಾದುದು ಯಾವುದೂ ಇಲ್ಲ.

ನ ಚಾಪಿ ಗಮ್ಯತೇ ರಾಜನ್ನೈಷ ದೋಷಃ ಪ್ರಸಂಗತಃ ।
ಉದ್ಯೋಗಾದೇವ ಧರ್ಮಜ್ಞ ಕಾಲೇನೈವ ಗಮಿಷ್ಯಥ ॥೭॥

ರಾಜನೇ, ನೀನು ಸಂಪತ್ತನ್ನು ದೋಷವೆಂದು ತಿಳಿದಿರುವಿ. ಇದು ಪ್ರಾಪಂಚಿಕ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ. ಮೋಕ್ಷಮಾರ್ಗಕ್ಕೆ ಪ್ರತಿಬಂಧವಾಗಿದೆ ಎಂದು ತಿಳಿಯುವುದು ಸರಿಯಲ್ಲ. ಕಾರಣ, ಧರ್ಮಜ್ಞರಾದ ನೀವೆಲ್ಲರೂ ಕ್ಷಮ-ದಮಾದಿ ಮೋಕ್ಷಸಾಧನವನ್ನು ಸೇವಿಸುವುದರಿಂದಲೇ ಮುಕ್ತಿಯನ್ನು ಹೊಂದುತ್ತೀರಿ.

ನೇಶೋಽಯಂ ಸತತಂ ದೇಹೀ ನೃಪತೇ ಪುಣ್ಯಪಾಪಯೋಃ ।
ತತ ಏವ ಸಮುತ್ಥೇನ ತಮಸಾ ರುದ್ಧ್ಯತೇಽಪಿ ಚ ॥೮॥

ಮಹಾರಾಜನೇ, ಪುಣ್ಯ-ಪಾಪಗಳಿಗೆ ಜೀವನು ನಿಯಾಮಕನಾಗಿರುವುದಿಲ್ಲ. ಪುಣ್ಯ-ಪಾಪಗಳ ಸಂಬಂಧದಿಂದ ಅಜ್ಞಾನವಶನಾಗಿ ಕರ್ತವ್ಯಗಳಿಂದ ತಡೆಯಲ್ಪಡುತ್ತಾನೆ.

ಯಥಾಂಜನಮಯೋ ವಾಯುಃ ಪುನರ್ಮಾನಃಶಿಲಂ ರಜಃ ।
ಅನುಪ್ರವಿಶ್ಯ ತದ್ವರ್ಣೋ ದೃಶ್ಯತೇ ರಂಜಯನ್ ದಿಶಃ ॥೯॥

ತಥಾ ಕರ್ಮಫಲೈರ್ದೇಹೀ ರಂಜಿತಸ್ತಮಸಾವೃತಃ ।
ವಿವರ್ಣೋ ವರ್ಣಮಾಶ್ರಿತ್ಯ ದೇಹೇಷು ಪರಿವರ್ತತೇ ॥೧೦॥

ಹೊಗೆಯಿಂದ ಆವೃತವಾಗಿ ಕಾಡಿಗೆಯಂತೆ ಕಾಣುವ ಗಾಳಿಯು ರಕ್ತಧಾತು ಶಿಲೆಗೆ ಸಂಬಂಧಿಸಿದ ಧೂಳಿನ ಜೊತೆಗೆ ಬೆರೆತು ದಿಕ್ಕುಗಳನ್ನು ಕೆಂಪಾಗಿ ಮಾಡುವಂತೆ ಸ್ವಭಾವತಃ ನಿತ್ಯಶುದ್ಧನಾದ ಜೀವನು ಅಜ್ಞಾನಾವೃತನಾಗಿ, ಕರ್ಮಫಲದಿಂದ ಭಿನ್ನ ಭಿನ್ನವಾದ ದೇಹಗಳನ್ನು ಪಡೆಯುತ್ತಾ, ಜಾತಿಗಳನ್ನು ಸ್ವೀಕರಿಸುತ್ತಾ ಸಂಚರಿಸುತ್ತಾನೆ.

ಜ್ಞಾನೇನ ಹಿ ಯದಾ ಜಂತುರಜ್ಞಾನಪ್ರಭವಂ ತಮಃ ।
ವ್ಯಪೋಹತಿ ತದಾ ಬ್ರಹ್ಮ ಪ್ರಕಾಶೇತ ಸನಾತನಮ್ ॥೧೧॥

ಜೀವನು ಯಾವಾಗ ಬ್ರಹ್ಮಜ್ಞಾನದ ಮೂಲಕ ಅಜ್ಞಾನವನ್ನು ಪರಿಹರಿಸಿಕೊಳ್ಳುತ್ತಾನೋ ಆಗ ಸನಾತನವಾದ ಪರಬ್ರಹ್ಮನು ಅವನ ಹೃದಯದಲ್ಲಿಯೇ ಬೆಳಗುತ್ತಾನೆ.

ಅಯತ್ನಸಾಧ್ಯಂ ಮುನಯೋ ವದಂತಿ
ಯೇ ಚಾಪಿ ಮುಕ್ತಾಸ್ತ ಉಪಾಸಿತವ್ಯಾಃ ।
ತ್ವಯಾ ಚ ಲೋಕೇನ ಚ ಸಾಮರೇಣ
ತಸ್ಮಾನ್ನ ಶಾಮ್ಯಂತಿ ಮಹರ್ಷಿಸಂಘಾಃ ॥೧೨॥

ಬಾಹ್ಯ ಪ್ರಯತ್ನಗಳಿಂದ ಪರಬ್ರಹ್ಮನನ್ನು ಹೊಂದಲಾಗದು. ಉಪಾಸನೆಯಿಂದಲೇ ಹೊಂದಬೇಕು. ಆದ್ದರಿಂದ ಮಹರ್ಷಿಗಳು ಬ್ರಹ್ಮವಿದ್ಯೆಯನ್ನು ಎಂದಿಗೂ ಬಿಟ್ಟಿರಲಾರರು.

ಅಸ್ಮಿನ್ನರ್ಥೇ ಪುರಾ ಗೀತಂ ಶೃಣುಷ್ವೈಕಮನಾ ನೃಪ ।
ಯಥಾ ದೈತ್ಯೇನ ವೃತ್ರೇಣ ಭ್ರಷ್ಟೈಶ್ವರ್ಯೇಣ ಚೇಷ್ಟಿತಮ್ ॥೧೩॥

ಈ ಹಿಂದೆ ಇದೇ ವಿಷಯದಲ್ಲಿ ದೈತ್ಯರಾಜನಾದ ವೃತ್ರಾಸುರನು ಹಾಡಿದ ಗೀತೆಗಳನ್ನು ಹೀಗೆ ಉದಾಹರಿಸುತ್ತಾರೆ. ಐಶ್ವರ್ಯ ಭ್ರಷ್ಟನಾದಾಗ ಅವನು ಹೇಳಿದ ಗೀತೆಯನ್ನು ಕೇಳು.

ನಿರ್ಜಿತೇನಾಸಹಾಯೇನ ಹೃತರಾಜ್ಯೇನ ಭಾರತ ।
ಅಶೋಚತಾ ಶತ್ರುಮಧ್ಯೇ ಬುದ್ಧಿಮಾಸ್ಥಾಯ ಕೇವಲಾಮ್ ॥೧೪॥

ದೇವತೆಗಳಿಂದ ಸೋಲನ್ನುಂಡ ವೃತ್ರಾಸುರನು ಅಸಹಾಯಕನಾದನು. ರಾಜ್ಯವೂ ಕೈತಪ್ಪಿತು. ಆ ಸಮಯದಲ್ಲಿಯೂ ಶತ್ರುಗಳ ನಡುವೆ ಬ್ರಹ್ಮಬುದ್ಧಿಯನ್ನು ಹೊಂದಿ, ಧೈರ್ಯವನ್ನು ತಾಳಿ ಶಾಂತನಾಗಿದ್ದನು.

ಭ್ರಷ್ಟೈಶ್ವರ್ಯಂ ಪುರಾ ವೃತ್ರಮುಶನಾ ವಾಕ್ಯಮಬ್ರವೀತ್ ।
ಕಚ್ಚಿತ್ ಪರಾಜಿತಸ್ಯಾದ್ಯ ನ ವ್ಯಥಾ ತೇಽಸ್ತಿ ದಾನವ ॥೧೫॥

ದುಃಖಕ್ಕೀಡಾಗದೆ, ಐಶ್ವರ್ಯಭ್ರಷ್ಟನಾಗಿರುವ ವೃತ್ರನನ್ನು ಕಂಡು ಶುಕ್ರಾಚಾರ್ಯರು ಹೀಗೆ ಹೇಳಿದರು: ದಾನವೇಂದ್ರನೇ, ನೀನು ಸೋಲನ್ನು ಉಂಡಿರುವಾಗಲೂ ವ್ಯಥೆಗೆ ತುತ್ತಾಗಿರುವುದಿಲ್ಲ. ಇದು ಹೇಗೆ?

ವೃತ್ರಃ

ಸತ್ಯೇನ ತಪಸಾ ಚೈವ ವಿದಿತ್ವಾ ಸಂಕ್ಷಯಂ ಹ್ಯಹಮ್ ।
ನ ಶೋಚಾಮಿ ನ ಹೃಷ್ಯಾಮಿ ಭೂತಾನಾಮಾಗತಿಂ ಗತಿಮ್ ॥೧೬॥

ಆಚಾರ್ಯರೇ, ನಾನು ತಪಸ್ಸಿನಿಂದಲೂ, ಸತ್ಯದಿಂದಲೂ ಭೂತಗಳ ಹುಟ್ಟು-ಸಾವುಗಳನ್ನು ಚೆನ್ನಾಗಿ ಬಲ್ಲವನಾಗಿದ್ದೇನೆ. ಆದ್ದರಿಂದ ಜೀವರ ಹುಟ್ಟು-ಸಾವುಗಳಿಂದ ಶೋಕವನ್ನಾಗಲಿ, ಸುಖವನ್ನಾಗಲಿ ಹೊಂದಲಾರೆನು.

ಕಾಲಸಂಚೋದಿತಾ ಜೀವಾ ಮಜ್ಜಂತಿ ನರಕೇಽವಶಾಃ ।
ಪರಿದೃಷ್ಟಾನಿ ಸರ್ವಾಣಿ ದಿವ್ಯಾನ್ಯಾಹುರ್ಮನೀಷಿಣಃ ॥೧೭॥

ಕಾಲನಿಂದ ಪ್ರೇರಿತರಾದ ಪಾಪ ಮಾಡಿದ ಜೀವರು ತಮ್ಮ ಪಾಪದ ಫಲದಿಂದಲೇ ಸೆಳೆಯಲ್ಪಟ್ಟು ಅಸ್ವತಂತ್ರರಾಗಿ ನರಕದಲ್ಲಿ ಮುಳುಗುತ್ತಾರೆ. ಪುಣ್ಯಕರ್ಮಿಗಳು ಪುಣ್ಯ ಕರ್ಮದಿಂದ ಸ್ವರ್ಗಸುಖವನ್ನು ಅನುಭವಿಸುತ್ತಾರೆ ಎಂದು ವಿದ್ವಾಂಸರು ಹೇಳುತ್ತಾರೆ.

ಕ್ಷಪಯಿತ್ವಾ ತು ತಂ ಕಾಲಂ ಗಣಿತಂ ಕಾಲಚೋದಿತಾಃ ।
ಸಾವಶೇಷೇಣ ಕಾಲೇನ ಸಂಭವಂತಿ ಪುನಃ ಪುನಃ ॥೧೮॥

ಅವರವರು ಮಾಡಿದ ಪುಣ್ಯ-ಪಾಪಗಳ ಸಂಬಂಧದಿಂದ ನರಕದಲ್ಲಿಯೋ, ಸ್ವರ್ಗದಲ್ಲಿಯೋ ಸ್ವಲ್ಪಕಾಲವಿದ್ದು ಪುನಃ ಕರ್ಮಶೇಷದಿಂದ ಭೂಮಿಯಲ್ಲಿ ಜನ್ಮವನ್ನು ತಾಳುತ್ತಾರೆ.

ತಿರ್ಯಗ್ಯೋನಿಸಹಸ್ರಾಣಿ ಗತ್ವಾ ನರಕಮೇವ ಚ ।
ನಿರ್ಗಚ್ಛಂತ್ಯವಶಾ ಜೀವಾಃ ಕಾಲಬಂಧನಬಂಧನಾಃ ॥೧೯॥

ಕಾಮನ ಬಂಧನಗಳಿಂದ ಸಿಲುಕಿದವರಾಗಿ ಅಸ್ವತಂತ್ರರಾಗಿ ಸಾವಿರಾರು ಪ್ರಾಣಿಗಳು, ಪಕ್ಷಿಗಳು, ಕ್ರಿಮಿಗಳು, ಜಲಚರ ಮೊದಲಾದ ಯೋನಿಗಳಲ್ಲಿ ಹುಟ್ಟಿ ನರಕಕ್ಕೆ ಹೋಗಿ, ಪುನಃ ಅಲ್ಲಿಂದ ಪ್ರಕೃತಿ ಬಂಧನಕ್ಕೆ ತುತ್ತಾಗುತ್ತಾರೆ.

ಏವಂ ಸಂಸರಮಾಣಾನಿ ಜೀವಾನ್ಯಹಮದೃಷ್ಟವಾನ್ ।
ಯಥಾ ಕರ್ಮ ತಥಾ ಲಾಭ ಇತಿ ಶಾಸ್ತ್ರನಿದರ್ಶನಮ್ ॥೨೦॥

ಹೀಗೆ ಜನನ-ಮರಣ ಚಕ್ರದಲ್ಲಿ ನಿರಂತರ ತಿರುಗುತ್ತಿರುವ ಜೀವರನ್ನು ನಾನು ನೋಡುತ್ತಲೇ ಇದ್ದೇನೆ. ಕರ್ಮಕ್ಕೆ ತಕ್ಕಂತೆ ಫಲಲಾಭವು ಎಂಬುದು ಶಾಸ್ತ್ರಗಳ ಸಿದ್ಧಾಂತವಾಗಿದೆ.

ತಿರ್ಯಗ್ಗಚ್ಛಂತಿ ನರಕಂ ಮಾನುಷ್ಯಂ ದೈವಮೇವ ಚ ।
ಸುಖದುಃಖೇ ಪ್ರಿಯದ್ವೇಷ್ಯೇ ಚರಿತ್ವಾ ಪೂರ್ವಮೇವ ಚ ॥೨೧॥

ಜೀವರು ಸುಖ-ದುಃಖಗಳನ್ನು, ಇಷ್ಟಾನಿಷ್ಟಗಳನ್ನು ಅನುಭವಿಸಿ, ಆ ಜನ್ಮದಲ್ಲಿ ಮಾಡಿದ ಕರ್ಮಕ್ಕನುಗುಣವಾಗಿ ನರಕವನ್ನು ಹೊಂದುತ್ತಾರೆ. ಪ್ರಾಣಿಯೋನಿಗಳಲ್ಲಿ ಹುಟ್ಟುತ್ತಾರೆ. ಮನುಷ್ಯಯೋನಿಯಲ್ಲಿಯೂ, ದೇವಯೋನಿಯಲ್ಲಿಯೂ ಜನ್ಮ ತಾಳುತ್ತಾರೆ. ಇವೆಲ್ಲವೂ ಕರ್ಮಫಲವು.

ಕೃತಾಂತವಿಧಿಸಂಯುಕ್ತಂ ಸರ್ವಲೋಕಃ ಪ್ರಪದ್ಯತೇ ।
ಗತಂ ಗಚ್ಛಂತಿ ಚಾಧ್ವಾನಂ ಸರ್ವಭೂತಾನಿ ಸರ್ವದಾ ॥೨೨॥

ಸಮಸ್ತ ಜಗತ್ತು ಸೃಷ್ಟಿಕರ್ತನ ವಶವು. ಅವನ ಅಧೀನವಾಗಿ ಸುಖ-ದುಃಖಗಳು. ಎಲ್ಲ ಪ್ರಾಣಿಗಳು ಎಲ್ಲಾ ಕಾಲದಲ್ಲಿಯೂ ಎಲ್ಲರೂ ಸಂಚರಿಸುವ ದಾರಿಯನ್ನೇ ಹಿಡಿದು ಹೋಗುತ್ತಿವೆ.

ಭೀಷ್ಮಃ

ಕಾಲಸಂಖ್ಯಾನಸಂಖ್ಯಾತಂ ಸೃಷ್ಟಿಸ್ಥಿತಿಪರಾಯಣಮ್ ।
ತಂ ಭಾಷಮಾಣಂ ಭಗವಾನುಶನಾ ಪ್ರತ್ಯಭಾಷತ ।
ಭೀಮಾನ್ ದುಷ್ಟಪ್ರಲಾಪಾಂಸ್ತ್ವಂ ತಾತ ಕಸ್ಮಾತ್ ಪ್ರಭಾಷಸೇ ॥೨೩॥

ಹೀಗೆ ಸೃಷ್ಟಿ-ಸ್ಥಿತಿಗಳ ಕ್ರಮವನ್ನೂ, ಕಾಲದ ಪ್ರವೃತ್ತಿಯನ್ನೂ ಕುರಿತು ಮಾತನಾಡುತ್ತಿರುವ ವೃತ್ರಾಸುರನನ್ನು ನೋಡಿ ಶುಕ್ರಾಚಾರ್ಯರು-ವೃತ್ರನೇ, ಇದೇನು ನೀನು ಅಸಂಬದ್ಧವಾದ ಮಾತುಗಳನ್ನೇ ಆಡುತ್ತಿರುವೆ ಎಂದು ಕೇಳಿದನು.

ವೃತ್ರಃ

ಪ್ರತ್ಯಕ್ಷಮೇತದ್ಭವತಸ್ತಥಾನ್ಯೇಷಾಂ ಮನೀಷಿಣಾಮ್ ।
ಮಯಾ ಯಜ್ಞಯಲುಬ್ಧೇನ ಪುರಾ ತಪ್ತಂ ಮಹತ್ತಪಃ ॥೨೪॥

ಆಚಾರ್ಯರೇ, ನಾನು ಹೇಳಿದ್ದು ಎಂದಿಗೂ ಅಸಂಬದ್ಧವಲ್ಲ. ನಾನು ಜಯಕ್ಕಾಗಿ ಆಸೆಪಟ್ಟವನಲ್ಲ. ಅದಕ್ಕಾಗಿಯೂ ತಪಸ್ಸುಗಳನ್ನು ಆಚರಿಸಿದವನಲ್ಲ. ಈ ವಿಷಯವು ನಿನಗೂ, ಬೇರೆಯವರಿಗೂ ತಿಳಿದ ಸಂಗತಿಯೇ ಆಗಿದೆ.

ಗಂಧಾನಾದಾಯ ಭೂತಾನಾಂ ರಸಾಂಶ್ಚ ವಿವಿಧಾನಪಿ ।
ಅವರ್ಧಂ ತ್ರೀನ್ ಸಮಾಕ್ರಮ್ಯ ಲೋಕಾನ್ ವೈ ಸ್ವೇನ ತೇಜಸಾ ॥೨೫॥

ಹಿಂದೆ ನಾನು ಸಮಸ್ತ ಪ್ರಾಣಿಗಳೂ ಅನುಭವಿಸುತ್ತಿದ್ದ ಬಗೆ ಬಗೆಯ ರಸ-ಗಂಧಗಳನ್ನು ಬಲಾತ್ಕಾರದಿಂದ ಕಿತ್ತು ಅನುಭವಿಸುತ್ತಿದ್ದೆನು. ನನ್ನ ಪರಾಕ್ರಮದಿಂದ ಲೋಕಗಳನ್ನೆಲ್ಲ ಆಕ್ರಮಿಸಿದ್ದೆನು.

ಜ್ವಾಲಾಮಾಲಾಪರಿಕ್ಷಿಪ್ತೋ ವೈಹಾಯಸಚರಸ್ತಥಾ ।
ಅಜೇಯಃ ಸರ್ವಭೂತಾನಾಮಾಸಂ ನಿತ್ಯಮಪೇತಭೀಃ ॥೨೬॥

ದಿವ್ಯಜ್ಯೋತಿಯಿಂದ ಬೆಳಗುತ್ತಿದ್ದ ವಿಮಾನದಲ್ಲಿ ಕುಳಿತು, ಆಕಾಶ ಮಾರ್ಗದಲ್ಲಿ ವಿಹರಿಸುತ್ತಿದ್ದೆನು. ಯಾರಿಂದಲೂ ಜಯಿಸದವನಾಗಿ, ಭಯವಿಲ್ಲದವನಾಗಿ ಎಲ್ಲ ಕಾಲದಲ್ಲಿಯೂ ಉಲ್ಲಾಸದಿಂದ, ಉತ್ಸಾಹದಿಂದ ಇರುತ್ತಿದ್ದೆನು.

ಐಶ್ವರ್ಯಂ ತಪಸಾ ಪ್ರಾಪ್ತಂ ಭ್ರಷ್ಟಂ ತಚ್ಚ ಸ್ವಕರ್ಮಭಿಃ ।
ಧೃತಿಮಾಸ್ಥಾಯ ಭಗವನ್ನ ಶೋಚಾಮಿ ತತಸ್ತ್ವಹಮ್ ॥೨೭॥

ತಪಸ್ಸಿನಿಂದ ದೊಡ್ಡ ಐಶ್ವರ್ಯವನ್ನು ಗಳಿಸಿದೆನು. ಆದರೆ ನನ್ನ ಕರ್ಮದಿಂದ ಅವೆಲ್ಲವನ್ನೂ ಕಳೆದುಕೊಂಡಿದ್ದೇನೆ. ಇದಕ್ಕಾಗಿ ದುಃಖಿಸಬೇಕಾದ ಕಾರಣವೇನಿದೆ? ನಾನು ಧೈರ್ಯವನ್ನು ಅವಲಂಬಿಸಿದ್ದೇನೆ. ಇಂತಹ ಸ್ಥಿತಿಗೆ ನಾನು ದುಃಖಿಸುವುದಿಲ್ಲ.

ಯುಯುತ್ಸತಾ ಮಹೇಂದ್ರೇಣ ಪುರಾ ಸಾರ್ಧಂ ಮಹಾತ್ಮನಾ ।
ತತೋ ಮೇ ಭಗವಾಂದೃಷ್ಟೋ ಹರಿರ್ನಾರಾಯಣಃ ಪ್ರಭುಃ ॥೨೮॥

ಹಿಂದೆ ಮಹಾತ್ಮನಾದ ಇಂದ್ರನ ಜೊತೆ ಯುದ್ಧಕ್ಕೆ ಸಿದ್ಧನಾಗಿ ನಿಂತಾಗ ಲೋಕೇಶ್ವರನೂ, ಸನಾತನನೂ, ಭಗವಂತನೂ ಆದ ವಿಷ್ಣುವನ್ನು ನೋಡುವ ಭಾಗ್ಯವು ನನಗೆ ಲಭಿಸಿತು. ಹರಿನಾರಾಯಣನನ್ನು ನಾನು ಕಂಡೆನು.

ವೈಕುಂಠಃ ಪುರುಷೋ ವಿಷ್ಣುಃ ಶುಕ್ಲೋಽನಂತಃ ಸನಾತನಃ ।
ಮುಂಜಕೇಶೋ ಹರಿಶ್ಮಶ್ರುಃ ಸರ್ವಭೂತಪಿತಾಮಹಃ ॥೨೯॥

ನೂನಂ ತು ತಸ್ಯ ತಪಸಃ ಸಾವಶೇಷಂ ಮಮಾಸ್ತಿ ವೈ ।
ಯದಹಂ ಪ್ರಷ್ಟುಮಿಚ್ಛಾಮಿ ಭವಂತಂ ಕರ್ಮಣಃ ಫಲಮ್ ॥೩೦॥

ವೈಕುಂಠ, ಪುರುಷ, ವಿಷ್ಣು, ಶುಕ್ಲ, ಅನಂತ, ಸನಾತನ, ಮುಂಜಕೇಶ, ಹರಿಶ್ಮಶ್ರು, ಸರ್ವಭೂತಪಿತಾಮಹ ಮುಂತಾದ ನಾಮಗಳಿಂದ ಕರೆಸಿಕೊಳ್ಳುವ ನಾರಾಯಣನ ಪ್ರತ್ಯಕ್ಷ ದರ್ಶನವು ಲಭಿಸಿತು. ನನ್ನ ತಪಸ್ಸು ಫಲಿಸಿತೆಂದು ನಾನು ಭಾವಿಸಿದೆ. ಆ ಪುಣ್ಯಶೇಷವು ಇನ್ನೂ ಸ್ವಲ್ಪ ಉಳಿದಿರುವುದರಿಂದಲೇ ನಿನ್ನಲ್ಲಿ ಕರ್ಮಫಲಗಳನ್ನು ತಿಳಿಯಲು ಬಯಸುತ್ತಿದ್ದೇನೆ.

ಐಶ್ವರ್ಯಂ ವೈ ಮಹದ್ ಬ್ರಹ್ಮನ್ ಕಸ್ಮಿನ್ ವರ್ಣೇ ಪ್ರತಿಷ್ಠಿತಮ್ ।
ನಿವರ್ತತೇ ಚಾಪಿ ಪುನಃ ಕಥಮೈಶ್ವರ್ಯಮುತ್ತಮಮ್ ॥೩೧॥

ಬ್ರಾಹ್ಮಣನೇ, ಮಹತ್ತಾದ ಐಶ್ವರ್ಯವು ಯಾವ ವರ್ಣದವರಲ್ಲಿ ಸ್ಥಿತಿ ಹೊಂದಿದೆ? ಆ ಐಶ್ವರ್ಯವು ಬಿಟ್ಟುಹೋಗಲು ಕಾರಣವೇನು?

ಕಸ್ಮಾದ್ ಭೂತಾನಿ ಜೀವಂತಿ ಪ್ರವರ್ತಂತೇऽಥ ವಾ ಪುನಃ ।
ಕಿಂ ವಾ ಫಲಂ ಪರಂ ಪ್ರಾಪ್ಯ ಜೀವಸ್ತಿಷ್ಠತಿ ಶಾಶ್ವತಃ ॥೩೨॥

ಯಾರ ದೆಸೆಯಿಂದ ಜೀವರೆಲ್ಲರೂ ಬದುಕುತ್ತಾರೆ? ಯಾರ ದೆಸೆಯಿಂದ ಜೀವರಲ್ಲೆರೂ ಪ್ರವೃತ್ತಿಯನ್ನು ಹೊಂದುತ್ತಾರೆ? ಯಾವ ಫಲವನ್ನು ಹೊಂದಿದ ಜೀವನು ಶಾಶ್ವತವಾದ ತನ್ನ ಸ್ವರೂಪವನ್ನು ಹೊಂದುತ್ತಾನೆ?

ಕೇನ ವಾ ಕರ್ಮಣಾ ಶಕ್ಯಮಥ ಜ್ಞಾನೇನ ಕೇನ ವಾ ।
ಬ್ರಹ್ಮರ್ಷೇ ತತ್ಫಲಂ ಪ್ರಾಪ್ತುಂ ತನ್ಮೇ ವ್ಯಾಖ್ಯಾತುಮರ್ಹಸಿ ॥೩೩॥

ಯಾವ ಕರ್ಮದಿಂದ ಅಥವಾ ಯಾವ ಜ್ಞಾನದಿಂದ ನಿತ್ಯಫಲವು ದೊರೆಯುತ್ತದೆ? ಬ್ರಹ್ಮರ್ಷಿಯೇ, ಆ ಫಲವನ್ನು ಹೊಂದುವ ಬಯಕೆಯುಳ್ಳ ನನಗೆ ಇವೆಲ್ಲವನ್ನೂ ವಿಸ್ತರಿಸಿ ಹೇಳು.

ಇತೀದಮುಕ್ತಃ ಸ ಮುನಿಸ್ತದಾನೀಂ
ಪ್ರತ್ಯಾಹ ಯತ್ತಚ್ಛೃಣು ರಾಜಸಿಂಹ ।
ಮಯೋಚ್ಯಮಾನಂ ಪುರುಷರ್ಷಭ ತ್ವ-
ಮನನ್ಯಚಿತ್ತಃ ಸಹ ಸೋದರೀಯೈಃ ॥೩೪॥

ಧರ್ಮಪುತ್ರನೇ, ಅದಕ್ಕೆ ಮಹರ್ಷಿಯು ಹೇಳಿದ ಉತ್ತರವನ್ನೇ ನಿನಗೆ ಹೇಳುತ್ತೇನೆ. ನೀನು ನಿನ್ನ ಸಹೋದರರೊಡನೆ ಸಾವಧಾನವಾಗಿ ಅದನ್ನು ಕೇಳಬೇಕು ಎಂದು ಭೀಷ್ಮರು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಯೋದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾಲ್ಕನೆಯ ಅಧ್ಯಾಯ

ಯುಧಿಷ್ಠಿರನ ಸಂಶಯವನ್ನು ಪರಿಹರಿಸಲು ಭೀಷ್ಮರು ವೃತ್ರಾಸುರನಿಗೆ ಸನತ್ಕುಮಾರರು ಮಾಡಿದ ಉಪದೇಶವನ್ನು ತಿಳಿಸಿದುದು.

ಉಶನಾಃ

ನಮಸ್ತಸ್ಮೈ ಭಗವತೇ ದೇವಾಯ ಪ್ರಭವಿಷ್ಣವೇ ।
ಯಸ್ಯ ಪೃಥ್ವೀತಲಂ ತಾತ ಸಾಕಾಶಂ ಬಾಹುಗೋಚರಮ್ ॥೧॥

ಈ ಭೂಮಂಡಲವು ಆಕಾಶ ಸಹಿತವಾಗಿ ಯಾವ ಶ್ರೀಹರಿಯ ಪರಾಕ್ರಮದಿಂದ ನೆಲೆಗೊಂಡಿದೆಯೋ ಸರ್ವಸಮರ್ಥನಾದ, ಷಡ್ಗುಣೈಶ್ವರ್ಯ ಸಂಪನ್ನನಾದ ಅಂತಹ ವಿಷ್ಣುವಿಗೆ ನಮಸ್ಕರಿಸುತ್ತೇನೆ.

ಮೂರ್ಧಾ ಯಸ್ಯ ತ್ವನಂತಂ ಚ ಸ್ಥಾನಂ ದಾನವಸತ್ತಮ ।
ತಸ್ಯಾಹಂ ತೇ ಪ್ರವಕ್ಷ್ಯಾಮಿ ವಿಷ್ಣೋರ್ಮಾಹಾತ್ಮ್ಯಮುತ್ತಮಮ್ ॥೨॥

ದಾನವಶ್ರೇಷ್ಠನೇ, ಯಾವ ಶ್ರೀಹರಿಯ ಶಿರಸ್ಸು ಅನಂತವೆನಿಸಿದೆಯೋ ಅಂತಹ ಮಹಾವಿಷ್ಣುವಿನ ಶ್ರೇಷ್ಠವಾದ ಮಾಹಾತ್ಮ್ಯವನ್ನು ಹೇಳುತ್ತೇನೆ.

ಭೀಷ್ಮಃ

ತಯೋಃ ಸಂವದತೋರೇವಮಾಜಗಾಮ ಮಹಾಮುನಿಃ ।
ಸನತ್ಕುಮಾರೋ ಧರ್ಮಾತ್ಮಾ ಸಂಶಯಚ್ಛೇದನಾಯ ವೈ ॥೩॥

ಯುಧಿಷ್ಠಿರನೇ, ವೃತ್ರ, ಶುಕ್ರರು ಇಬ್ಬರು ಹೀಗೆ ಸಂವಾದ ನಡೆಸುತ್ತಿರುವಾಗ ಅವರ ಸಂಶಯವನ್ನು ಪರಿಹರಿಸಲು ಧರ್ಮಾತ್ಮನಾದ, ಪೂಜ್ಯನಾದ ಸನತ್ಕುಮಾರನು ಅಲ್ಲಿಗೆ ಆಗಮಿಸಿದನು.

ಸ ಪೂಜಿತೋಸುರೇಂದ್ರೇಣ ಮುನಿನೋಶನಸಾ ತಥಾ ।
ನಿಷಸಾದಾಸನೇ ರಾಜನ್ಮಹಾರ್ಹೇ ಮುನಿಪುಂಗವಃ ॥೪॥

ಅಸುರೇಂದ್ರನಾದ ವೃತ್ರಾಸುರನಿಂದ ಮತ್ತು ಶುಕ್ರಾಚಾರ್ಯನಿಂದ ಪೂಜಿತನಾದ, ಶ್ರೇಷ್ಠ ಮುನಿ ಎನಿಸಿದ ಸನತ್ಕುಮಾರನು ಆಸನದಲ್ಲಿ ಉಪವಿಷ್ಟನಾದನು.

ತಮಾಸೀನಂ ಮಹಾಪ್ರಾಜ್ಞಮುಶನಾ ವಾಕ್ಯಮಬ್ರವೀತ್ ।
ಬ್ರೂಹ್ಯಸ್ಮೈ ದಾನವೇಂದ್ರಾಯ ವಿಷ್ಣೋರ್ಮಾಹಾತ್ಮ್ಯಮುತ್ತಮಮ್ ॥೫॥

ಮಹಾಪ್ರಾಜ್ಞನಾದ ಸನತ್ಕುಮಾರನು ಕುಳಿತುಕೊಂಡ ಬಳಿಕ ಶುಕ್ರಾಚಾರ್ಯರು ಪ್ರಶ್ನಿಸಿದರು: ಸನತ್ಕುಮಾರನೇ, ವೃತ್ರಾಸುರನಿಗೆ ವಿಷ್ಣುವಿನ ಶ್ರೇಷ್ಠವಾದ ಮಾಹಾತ್ಮ್ಯವನ್ನು ತಿಳಿಸು.

ಸನತ್ಕುಮಾರಸ್ತು ತತಃ ಶ್ರುತ್ವಾ ಪ್ರಾಹ ವಚೋಽರ್ಥವತ್ ।
ವಿಷ್ಣೋರ್ಮಾಹಾತ್ಮ್ಯಸಂಯುಕ್ತಂ ದಾನವೇಂದ್ರಾಯ ಧೀಮತೇ ॥೬॥

ಶುಕ್ರಾಚಾರ್ಯರ ಮಾತನ್ನು ಕೇಳಿಸಿಕೊಂಡ ಸನತ್ಕುಮಾರರು ಜಾಣನಾದ ವೃತ್ರನಿಗೆ ವಿಷ್ಣುವಿನ ಮಹಿಮೆಯನ್ನು ತಿಳಿಸುವ, ಅರ್ಥಯುಕ್ತವಾದ ಮಾತುಗಳನ್ನು ಹೇಳಲು ಆರಂಭಿಸಿದರು.

ಶೃಣು ಸರ್ವಮಿದಂ ದೈತ್ಯ ವಿಷ್ಣೋರ್ಮಾಹಾತ್ಮ್ಯಮುತ್ತಮಮ್ ।
ವಿಷ್ಣೌ ಜಗತ್ಪ್ರತಿಷ್ಠಿತಂ ಸರ್ವಮಿತಿ ವಿದ್ಧಿ ಪರಂತಪ ॥೭॥

ದೈತ್ಯೇಶ್ವರನೇ, ಪರಂತಪನೇ, ಷಡ್ಗುಣೈಶ್ವರ್ಯ ಸಂಪನ್ನನಾದ ವಿಷ್ಣುವಿನ ಸಮಗ್ರವಾದ, ಶ್ರೇಷ್ಠವಾದ ಮಹಿಮೆಯನ್ನು ಕೇಳು. ಜಗತ್ತೆಲ್ಲವೂ ವಿಷ್ಣುವಿನಲ್ಲಿಯೇ ಪ್ರತಿಷ್ಠಿತವಾಗಿದೆ ಎಂದು ತಿಳಿದುಕೊ.

ಸೃಜತ್ಯೇಷ ಮಹಾಬಾಹೋ ಭೂತಗ್ರಾಮಂ ಚರಾಚರಮ್ ।
ಏಷ ಚಾಕ್ಷಿಪತೇ ಕಾಲೇ ಕಾಲೇ ವಿಸೃಜತೇ ಪುನಃ ।
ಅಸ್ಮಿನ್ ಗಚ್ಛಂತಿ ವಿಲಯಮಸ್ಮಾಚ್ಚ ಪ್ರಭವಂತ್ಯುತ ॥೮॥

ಮಹಾಬಾಹುವೇ, ಚರಾಚರ ಪ್ರಾಣಿಪ್ರಪಂಚವನ್ನು ಭಗವಂತನೇ ಸೃಷ್ಟಿಸುತ್ತಾನೆ. ಕಾಲವು ಪ್ರಾಪ್ತವಾದಾಗ ಅವನೇ ಸಂಹರಿಸುತ್ತಾನೆ. ಪುನಃ ಅವನೇ ಸೃಷ್ಟಿಯನ್ನು ಮಾಡುತ್ತಾನೆ. ಸಮಗ್ರ ಪ್ರಾಣಿ ಪ್ರಪಂಚವು ವಿಷ್ಣುವಿನಲ್ಲೇ ಲಯವನ್ನು ಹೊಂದಿ ಪುನಃ ಅವನಿಂದಲೇ ಪ್ರಾದುರ್ಭೂತವಾಗುತ್ತದೆ.

ನೈಷ ದಾನವತಾ ಶಕ್ಯಸ್ತಪಸಾ ನೈವ ಚೇಜ್ಯಯಾ ।
ಸಂಪ್ರಾಪ್ತುಮಿಂದ್ರಿಯಾಣಾಂ ತು ಸಂಯಮೇನೈವ ಶಕ್ಯತೇ ॥೯॥

ಭಗವಂತನನ್ನು ಶಾಸ್ತ್ರಜ್ಞಾನದಿಂದಲಾಗಲಿ, ತಪಸ್ಸಿನಿಂದಲಾಗಲಿ, ಯಜ್ಞ-ಕರ್ಮಗಳಿಂದಲಾಗಲಿ ಹೊಂದಲಾಗದು. ಜಿತೇಂದ್ರಿಯನಾಗಿ ಇದ್ದವ್ಯಕ್ತಿಯು ಅವನನ್ನು ಹೊಂದಬಹುದು.

ಬಾಹ್ಯೇ ಚಾಭ್ಯಂತರೇ ಚೈವ ಕರ್ಮಣಾ ಮನಸಿ ಸ್ಥಿತಃ ।
ನಿರ್ಮಲೀಕುರುತೇ ಬುದ್ಧ್ಯಾ ಸೋಽಮುತ್ರಾನಂತ್ಯಮಶ್ನುತೇ ॥೧೦॥

ಯಾವನು ಬಾಹ್ಯಾಭ್ಯಂತರ ಶುದ್ಧಿಯನ್ನು ಹೊಂದಿರುತ್ತಾನೋ, ಬುದ್ಧಿಯಿಂದ ದೈಹಿಕವಾಗಿ ಮೃತ್-ಜಲಗಳಿಂದ ಶುದ್ಧಿಯನ್ನು ಮಾಡಿಕೊಂಡು, ಮಾನಸಿಕವಾಗಿ ಧ್ಯಾನದಿಂದ ಶುದ್ಧಿಯನ್ನು ಮಾಡಿಕೊಂಡಿರುತ್ತಾನೋ ಅವನು ಮಹತ್ತರವಾದ ಮೋಕ್ಷವನ್ನು ಹೊಂದುತ್ತಾನೆ.

ಯಥಾ ಹಿರಣ್ಯಕರ್ತಾ ವೈ ರೂಪ್ಯಮಗ್ನೌ ವಿಶೋಧಯೇತ್ ।
ಬಹುಶೋಽತಿಪ್ರಯತ್ನೇನ ಮಹತಾತ್ಮಕೃತೇನ ಹ ॥೧೧॥

ಯಾವ ರೀತಿ ಅಕ್ಕಸಾಲಿಗನು ಬೆಳ್ಳಿಯನ್ನು ಬೆಂಕಿಯಲ್ಲಿ ಹಾಕಿ ಪ್ರಯತ್ನ ಪೂರ್ವಕವಾಗಿ ಅದನ್ನು ಶುದ್ಧಿಗೊಳಿಸುತ್ತಾನೋ ಅದರಂತೆ ನೂರಾರು ಜನ್ಮಗಳ ನಂತರ ಮನಸ್ಸನ್ನು ಸಾತ್ವಿಕ ಜೀವರಿಂದ ಮುಕ್ತಿಗೊಳಿಸುತ್ತಾನೆ.

ತದ್ವಜ್ಜಾತಿಶತೈರ್ಜೀವಃ ಶುದ್ಧ್ಯತೇಽಲ್ಪೇನ ಕರ್ಮಣಾ ।
ಯತ್ನೇನ ಮಹತಾ ಚೈವಾಪ್ಯೇಕಜಾತೌ ವಿಶುದ್ಧ್ಯತೇ ॥೧೨॥

ಆದರೆ ಯಜ್ಞ, ಶಮ, ದಮಗಳ ಮೂಲಕ ಮಹಾಪ್ರಯತ್ನವನ್ನು ಸಾಧಿಸಿದಲ್ಲಿ ಒಂದೇ ಜನ್ಮದಲ್ಲಿಯೇ ಶುದ್ಧಿಯನ್ನು ಹೊಂದಬಲ್ಲನು.

ಲೀಲಯಾಲ್ಪಂ ಯಥಾ ಗಾತ್ರಾತ್ ಪ್ರಮಜ್ಯಾದಾತ್ಮನೋ ರಜಃ ।
ಬಹು ಯತ್ನೇನ ಮಹತಾ ದೋಷನಿರ್ಹರಣಂ ತಥಾ ॥೧೩॥

ಮನುಷ್ಯನು ಶರೀರದಲ್ಲಿ ಸೇರಿಕೊಂಡಿರುವ ಧೂಳನ್ನು ಹೇಗೆ ಕೊಡವಿಕೊಂಡು ಪರಿಹರಿಸಿಕೊಳ್ಳುತ್ತಾನೋ ಅದರಂತೆ ಹೃದಯದಲ್ಲಿ ಅಡಕವಾಗಿರುವ ರಾಗ-ದ್ವೇಷಗಳನ್ನು ಮಹಾಪ್ರಯತ್ನದಿಂದ ಪರಿಹರಿಸಿಕೊಳ್ಳಬಹುದು.

ಯಥಾ ಚಾಲ್ವೇನ ಮಾಲ್ಯೇನ ವಾಸಿತಂ ತಿಲಸರ್ಷಪಮ್ ।
ನ ಮುಂಚತಿ ಸ್ವಕಂ ಗಂಧಂ ತದ್ವತ್ ಸೂಕ್ಷ್ಮಸ್ಯ ದರ್ಶನಮ್ ॥೧೪॥

ಸಣ್ಣ ಹೂವಿನ ಮಾಲೆಯನ್ನು ಎಳ್ಳು ಅಥವಾ ಸಾಸಿವೆಯ ಎಣ್ಣೆಯಲ್ಲಿ ಮುಳುಗಿಸಿಟ್ಟಾಗ ಎಳ್ಳು-ಸಾಸಿವೆಗಳು ತಮ್ಮ ಗಂಧವನ್ನು ಹೇಗೆ ಆ ಮಾಲೆಯ ಪರಿಮಳವಿದ್ದಾಗಲೂ ಬಿಟ್ಟುಕೊಡುವುದಿಲ್ಲವೋ ಅದರಂತೆ ಅನೇಕ ಜನ್ಮಗಳಿಂದ ಬಂದ ಕಾಮಕ್ರೋಧಾದಿ ವಾಸನೆಗಳು ಬಹುಪ್ರಯತ್ನವಿಲ್ಲದೆ ಸ್ವಲ್ಪಪ್ರಯತ್ನದಿಂದ ಜೀವರನ್ನು ಬಿಟ್ಟುಹೋಗುವುದಿಲ್ಲ.

ತದೇವ ಬಹುಭಿರ್ಮಾಲ್ಯೈರ್ವಾಸ್ಯಮಾನಂ ಪುನಃ ಪುನಃ ।
ವಿಮುಂಚತಿ ಸ್ವಕಂ ಗಂಧಂ ಮಾಲ್ಯಗಂಧೇऽವತಿಷ್ಠತಿ ॥೧೫॥

ಏವಂ ಜಾತಿಶತೈರ್ಯುಕ್ತೋ ಗುಣೈರೇವ ಪ್ರಸಂಗಿಷು ।
ಬುದ್ಧ್ಯಾ ನಿವರ್ತತೇ ದೋಷೋ ಯತ್ನೇನಾಭ್ಯಾಸಜೇನ ವೈ ॥೧೬॥

ಆದರೆ ಅದೇ ಎಳ್ಳಿನ ಅಥವಾ ಸಾಸಿವೆ ಎಣ್ಣೆಯಲ್ಲಿ ಹತ್ತಾರು ಪರಿಮಳ ಭರಿತವಾದ ಮಾಲೆಯನ್ನು ನೆನೆಸಿಟ್ಟರೆ ಆ ಹೆಚ್ಚಾದ ಹೂವಿನ ಪರಿಮಳದಿಂದ ಎಣ್ಣೆಯ ಸ್ವಾಭಾವಿಕವಾದ ವಾಸನೆಯನ್ನು ಪುಷ್ಪದ ಗಂಧವೇ ಎಣ್ಣೆಯಲ್ಲಿಯೂ ತೋರುತ್ತದೋ ಅದರಂತೆ ನೂರಾರು ಜನ್ಮಗಳ ಸತ್ತ್ವ-ರಜೋಗುಣಗಳ ಸಂಸ್ಕಾರದಿಂದ ಉಂಟಾದ ಕಾಮ-ಕ್ರೋಧಾದಿಗಳೆಂಬ ವಾಸನೆಯು ನಿರಂತರ ಜೀವನು ಮಾಡುವ ಸಜ್ಜನರ ಸಹವಾಸ, ಭಗವಂತನ ಗುಣಗಳ ಚಿಂತನೆ ಮುಂತಾದ ಮಹಾಪ್ರಯತ್ನಗಳಿಂದ ಪರಿಹರಿಸಿಕೊಳ್ಳಬಲ್ಲನು.

ಕರ್ಮಣಾ ಸ್ನೇನ ರಕ್ತಾನಿ ವಿರಕ್ತಾನಿ ಚ ದಾನವ ।
ಯಥಾ ಕರ್ಮವಿಶೇಷಾಂಶ್ಚ ಪ್ರಾಪ್ನುವಂತಿ ತಥಾ ಶೃಣು ॥೧೭॥

ಧನುಪುತ್ರನೇ, ಬಾಹ್ಯಕರ್ಮಗಳಲ್ಲಿಯೇ ಆಸಕ್ತರಾದ ಜೀವರು ಮತ್ತು ಕರ್ಮದಲ್ಲಿ ಆಸಕ್ತಿಯನ್ನು ಹೊಂದದ ಜೀವರು ರಾಗ-ದ್ವೇಷಗಳಿಗೂ, ವೈರಾಗ್ಯಕ್ಕೂ ಕಾರಣವಾದ ಬೇರೆ ಬೇರೆ ಕರ್ಮಗಳನ್ನು ಹೇಗೆ ಹೊಂದುತ್ತಾರೆ ಎಂಬುದನ್ನು ಹೇಳುತ್ತೇನೆ, ಕೇಳು.

ಯಥಾ ಚ ಸಂಪ್ರವರ್ತಂತೇ ಯಸ್ಮಿಂಸ್ತಿಷ್ಠಂತಿ ವಾ ವಿಭೋ ।
ತತ್ತೇಽನುಪೂರ್ವ್ಯಾ ವ್ಯಾಖ್ಯಾಸ್ಯೇ ತದಿಹೈಕಮನಾಃ ಶೃಣು ॥೧೮॥

ಪ್ರಾಣಿಗಳು ಕರ್ಮದಲ್ಲಿ ಹೇಗೆ ಪ್ರವೃತ್ತಿಯನ್ನು ಹೊಂದುತ್ತಾರೆ, ಅದರಿಂದ ಅವರ ಸ್ಥಿತಿಯು ಹೇಗೆ ಮುಂದುವರೆಯುತ್ತದೆ, ಯಾವ ಅವಸ್ಥೆಯಲ್ಲಿ ಕರ್ಮದ ನಿವೃತ್ತಿ ಉಂಟಾಗುತ್ತದೆ ಎಲ್ಲವನ್ನೂ ಕ್ರಮವಾಗಿ ತಿಳಿಸುತ್ತೇನೆ, ಏಕಾಗ್ರತೆಯಿಂದ ಕೇಳಿಸಿಕೊ.

ಅನಾದಿನಿಧನಃ ಶ್ರೀಮಾನ್ ಹರಿರ್ನಾರಾಯಣಃ ಪ್ರಭುಃ ।
ಸ ವೈ ಸೃಜತಿ ಭೂತಾನಿ ಸ್ಥಾವರಾಣಿ ಚರಾಣಿ ಚ ॥೧೯॥

ಶ್ರೀಮಾನ್ ಸರ್ವಸಮರ್ಥನಾದ ಹರಿನಾರಾಯಣನು ಆದ್ಯಂತರಹಿತನು. ಅವನೇ ಚರಾಚರ ಪ್ರಾಣಿಗಳನ್ನು ಸೃಷ್ಟಿಸುತ್ತಾನೆ.

ಏಷ ಸರ್ವೇಷು ಭೂತೇಷು ಕ್ಷರಶ್ಚಾಕ್ಷರ ಏವ ಚ ।
ಏಕಾದಶವಿಕಾರಾತ್ಮಾ ಜಗತ್ ಪಿಬತಿ ರಶ್ಮಿಭಿಃ ॥೨೦॥

ಈ ನಾರಾಯಣನೇ ಸಮಸ್ತ ಕ್ಷರಾಕ್ಷರಪ್ರಾಣಿಗಳಿಗೆ ನಿಯಾಮಕನಾಗಿ, ಅಂತರ್ಯಾಮಿಯಾಗಿ ಇದ್ದಾನೆ. ಹನ್ನೊಂದು ವಿಕಾರಗಳನ್ನು ಹೊಂದಿರುವ ಜಗತ್ತನ್ನು ಸೂರ್ಯನಾರಾಯಣನು ತನ್ನ ರಶ್ಮಿಗಳಿಂದಲೇ ವ್ಯಾಪಿಸಿಕೊಂಡಿದ್ದಾನೆ. ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಮನಸ್ಸು - ಇವೇ ಜೀವನ ಕರ್ಮವಿಕಾರಗಳೆನಿಸಿವೆ.

ಪಾದೌ ತಸ್ಯ ಮಹೀಂ ವಿದ್ಧಿ ಮೂರ್ಧಾನಂ ದಿವಮೇವ ಚ ।
ಬಾಹವಸ್ತು ದಿಶೋ ದೈತ್ಯ ಶ್ರೋತ್ರಮಾಕಾಶಮೇವ ಚ ॥೨೧॥

ತಸ್ಯ ತೇಜೋಮಯಃ ಸೂರ್ಯೋ ಮನಶ್ಚಂದ್ರಮಸಿ ಸ್ಥಿತಮ್ ।
ಬುದ್ಧಿರ್ಜ್ಞಾನಗತಾ ನಿತ್ಯಂ ರಸಸ್ತ್ವಪ್ಸು ಪ್ರವರ್ತತೇ ॥೨೨॥

ವಿಷ್ಣುವಿನ ಎರಡು ಪಾದಗಳೇ ಪೃಥಿವಿ ಲೋಕವು. ಸ್ವರ್ಗಲೋಕವು ಅವನ ತಲೆ ಎನಿಸಿದೆ. ನಾಲ್ಕು ದಿಕ್ಕುಗಳು ಅವನ ನಾಲ್ಕು ತೋಳುಗಳೆನಿಸಿವೆ. ಆಕಾಶವೇ ಅವನ ಕಿವಿ. ತೇಜೋಮಯನಾದ ಸೂರ್ಯನೇ ಅವನ ಚಕ್ಷುಸ್ಸು. ಚಂದ್ರನೇ ಅವನ ಮನಸ್ಸು.

ಅವನ ಬುದ್ಧಿಯು ಮಹತ್ತತ್ತ್ವವೆನಿಸಿದೆ. ರಸವು ನೀರಿನಲ್ಲಿ ಪ್ರತಿಷ್ಠಿತವಾಗಿದೆ. ನೀರು ವಿಷ್ಣುವಿನ ರಸನೇಂದ್ರಿಯವೆನಿಸಿದೆ.

ಭ್ರುವೋರನಂತರಾಸ್ತಸ್ಯ ಗ್ರಹಾ ದಾನವಸತ್ತಮ ।
ನಕ್ಷತ್ರಚಕ್ರಂ ನೇತ್ರಾಭ್ಯಾಂ ಪಾದಯೋರ್ಭೂಶ್ಚ ದಾನವ ॥೨೩॥

ಸಮಸ್ತ ಗ್ರಹಗಳು ವಿಷ್ಣುವಿನ ಎರಡು ಹುಬ್ಬುಗಳ ನಡುವೆ ಇವೆ. ಅವನ ಕಣ್ಣಿನಿಂದ ನಕ್ಷತ್ರ ಮಂಡಲವು ಸೃಷ್ಟಿಗೊಂಡಿದೆ. ಈ ಭೂಮಂಡಲವು ಅವನ ಪಾದದಲ್ಲಿ ಪ್ರತಿಷ್ಠಿತವಾಗಿದೆ.

ರಜಸ್ತಮಶ್ಚ ಸತ್ತ್ವಂ ಚ ವಿದ್ಧಿ ನಾರಾಯಣಾತ್ಮಕಮ್ ।
ಸೋಽऽಶ್ರಮಾಣಾಂ ಮುಖಂ ತಾತ ಕರ್ಮಣಸ್ತತ್ಫಲಂ ವಿದುಃ ॥೨೪॥

ಸತ್ತ್ವ-ರಜಸ್-ತಮೋಗುಣಗಳು ನಾರಾಯಣನಿಂದ ವ್ಯಾಪಿಸಲ್ಪಟ್ಟಿವೆ. ಎಲ್ಲ ಆಶ್ರಮಗಳ ಫಲಗಳನ್ನು ನೀಡುವವನು ಅವನೇ ಆಗಿದ್ದಾನೆ. ಸತ್ಕರ್ಮಗಳಿಗೆ ಫಲವನ್ನು ನೀಡುವವನು ಅವನೇ ಎಂದು ವಿದ್ವಾಂಸರು ಹೇಳುತ್ತಾರೆ.

ಅಕರ್ಮಣಃ ಫಲಂ ಚೈವ ಸ ಏವ ಪರಮವ್ಯಯಃ ।
ಛಂದಾಂಸಿ ತಸ್ಯ ರೋಮಾಣಿ ಅಕ್ಷರಂ ಚ ಸರಸ್ವತೀ ॥೨೫॥

ನಿಷ್ಕಾಮ ಕರ್ಮಕ್ಕೂ ಫಲವನ್ನು ನೀಡುವವನು ಅವಿನಾಶಿಯಾದ ಶ್ರೀಹರಿಯೇ ಆಗಿದ್ದಾನೆ. ಅವನ ರೋಮಕೋಟಿಗಳು ವೇದಮಂತ್ರವೆನಿಸಿದೆ. ಪ್ರಣವ ಮಂತ್ರವು ಅವನ ವಾಣಿಯಾಗಿದೆ.

ಬಹ್ವಾಶ್ರಯೋ ಬಹುಮುಖೋ ಧರ್ಮೋ ಹೃದಿ ಸಮಾಶ್ರಿತಃ ।
ಸ ಬ್ರಹ್ಮಪರಮೋ ಧರ್ಮಸ್ತಪಶ್ಚ ಸದಸಚ್ಚ ಸಃ ॥೨೬॥

ಅನೇಕರಿಗೆ ಆಶ್ರಯದಾತನಾದ, ಬಹುಮುಖನಾದ ಭಗವಂತನು ಎಲ್ಲರ ಹೃದಯದಲ್ಲಿ ವಾಸವಾಗಿದ್ದಾನೆ. ಆ ಗುಣಪರಿಪೂರ್ಣನಾದ ಬ್ರಹ್ಮನೇ ಸರ್ವೋತ್ತಮನು. ತಪಸ್ಸು, ಕಾರ್ಯ-ಕಾರಣರೂಪ, ಧರ್ಮ ಎಂಬ ಹೆಸರಿನಿಂದ ಅಂತರ್ಯಾಮಿಯಾಗಿದ್ದಾನೆ.

ಶ್ರುತಿಶಾಸ್ತ್ರಗ್ರಹೋಪೇತಃ ಷೋಡಶರ್ತ್ವಿಕ್ಕತುಶ್ಚ ಸಃ ।
ಪಿತಾಮಹಶ್ಚ ವಿಷ್ಣುಶ್ಚ ಸೋಽಶ್ವಿನೌ ಸ ಪುರಂದರಃ ॥೨೭॥

ಮಿತ್ರಶ್ಚ ವರುಣಶ್ಚೈವ ಯಮೋಽಥ ಧನದಸ್ತಥಾ ।
ತೇ ಪೃಥಗ್ದರ್ಶನಾಸ್ತಸ್ಯ ಸಂವಿದಂತಿ ತಥೈಕತಾಮ್ ।
ಏಕಸ್ಯ ವಿದ್ಧಿ ದೇವಸ್ಯ ಸರ್ವಂ ಜಗದಿದಂ ವಶೇ ॥೨೮॥

ವೇದ-ಶಾಸ್ತ್ರ, ಸೋಮಪಾತ್ರೆಯಿಂದ ಸಹಿತನಾದ, ಹದಿನಾರು ಋತ್ವಿಜರಿಂದ ಕೂಡಿದ ಯಜ್ಞವು ನಾರಾಯಣನೇ ಆಗಿದ್ದಾನೆ. ಚತುರ್ಮುಖ ಬ್ರಹ್ಮನು, ವಿಷ್ಣುವು, ಅಶ್ವಿನಿ ಕುಮಾರರು, ಇಂದ್ರ, ಮಿತ್ರ, ವರುಣ, ಯಮ, ಕುಬೇರ ಇವರೆಲ್ಲರ ಅಂತರ್ಯಾಮಿಯು ನಾರಾಯಣನೇ ಆಗಿದ್ದಾನೆ. ದೇವತೆಗಳೆಲ್ಲರೂ ವಿಷ್ಣುವಿನ ಈ ಎಲ್ಲ ನಾಮಗಳನ್ನೇ ತಾವು ಅವನಿಂದ ಪಡೆದು ಧರಿಸಿರುತ್ತಾರೆ. ಈ ದೇವತೆಗಳಿಗೂ, ಭಗವಂತನಿಗೂ ಭೇದವೇ ಇದೆ. ಒಟ್ಟಿನಲ್ಲಿ ಸರ್ವೋತ್ತಮನಾದ ನಾರಾಯಣನ ಅಧೀನವಾಗಿ ಈ ಸಮರ್ಥ ಜಗತ್ತು ಇದೆ ಎಂಬುದನ್ನು ತಿಳಿದುಕೊ.

ವ್ಯಾಖ್ಯಾನ ವಿಶೇಷ– ಬ್ರಹ್ಮಾ, ಬ್ರಾಹ್ಮಣಾಚ್ಛಂಸಿ ಆಗ್ನೀಧ, ಪೋತಾ ಹೋತಾ ಮೈತ್ರಾವರುಣ, ಆಚ್ಛಾವಾಕ, ಗ್ರಾವಸ್ತೋತಾ, ಅಧ್ವರ್ಯು, ಪ್ರತಿಪ್ರಸ್ಥಾತಾ, ನೇಷ್ಟ, ಉನ್ನೇತಾ, ಉದ್ಗಾತಾ, ಪ್ರಸ್ತೋತಾ, ಪ್ರತಿಹರ್ತಾ, ಸುಬ್ರಹ್ಮಣ್ಯ – ಎಂಬ ಹದಿನಾರು ಋತ್ವಿಕ್ ನಾಲ್ಕು ನಾಲ್ಕರಂತೆ ನಾಲ್ಕು ವೇದಗಳಿಗೆ ಸಂಬಂಧಿಸಿದವರಾಗಿದ್ದಾರೆ.

ನಾನಾಭೂತಸ್ಯ ದೈತ್ಯೇಂದ್ರ ತಸ್ಯೈಕತ್ವಂ ವದತ್ಯಯಮ್ ।
ಜಂತುಃ ಪಶ್ಯತಿ ಜ್ಞಾನೇನ ತತಃ ಸತ್ತ್ವಂ ಪ್ರಕಾಶತೇ ॥೨೯॥

ದೈತೇಂದ್ರನೇ, ಅನೇಕ ಜೀವರಲ್ಲಿ ಅಂತರ್ಯಾಮಿಯಾಗಿರುವಂತಹ ಪರಮಾತ್ಮನಲ್ಲಿ ಭೇದ ಇರುವುದಿಲ್ಲ. ಸ್ಥಾನಭೇದದಿಂದ ಪರಮಾತ್ಮನಲ್ಲಿ ಭೇದವನ್ನು ಚಿಂತಿಸಬಾರದು. ಮನುಷ್ಯನು ಭಗವದ್ಜ್ಞಾನದಿಂದ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುತ್ತಾನೆ.

ಸಂಹಾರವಿಕ್ಷೇಪಸಹಸ್ರಕೋಟೀ
ಸ್ತಿಷ್ಠಂತಿ ಜೀವಾಃ ಪ್ರಚರಂತಿ ಚಾನ್ಯೇ ।

ಪ್ರಜಾವಿಸರ್ಗಸ್ಯ ಚ ಪಾರಿಮಾಣ್ಯಂ
ವಾಪೀಸಹಸ್ರಾಣಿ ಬಹೂನಿ ದೈತ್ಯ ॥೩೦॥

ಭಗವಂತನ ದೆಸೆಯಿಂದ ಸಾವಿರಾರು ಕೋಟಿ ಮರಣಗಳನ್ನು ಹೊಂದಿ, ದೇವರ ಉದರವನ್ನು ಹೊಕ್ಕು, ಪುನಃ ಸೃಷ್ಟಿಯನ್ನು ಹೊಂದಿರುವ ಅನೇಕ ಜೀವರು ಇನ್ನೂ ಸಂಸಾರದಲ್ಲೇ ಇದ್ದಾರೆ. ಇನ್ನು ಕೆಲವು ಜೀವರು ಶ್ರೇಷ್ಠವಾದ ಜೀವನವನ್ನು ಆಚರಿಸುತ್ತಿದ್ದಾರೆ. ಹೀಗೆ ಅನಂತಕೋಟಿ ಜೀವರು ಪರಮಾತ್ಮನಿಂದ ಸೃಷ್ಟಿಯನ್ನು ಪಡೆದು, ಅವನ ಉದರವನ್ನು ಪ್ರವೇಶಿಸಿ, ಭಿನ್ನಭಿನ್ನ ಕರ್ಮಗಳನ್ನು ಆಚರಿಸುತ್ತಲೇ ಇದ್ದಾರೆ. ಅನೇಕ ಸಾವಿರಾರು ಬಾವಿಗಳಲ್ಲಿ ತುಂಬಿರುವ ಅಪರಿಮಿತವಾದ ಜಲದ ಕಣಗಳು ಎಷ್ಟಿವೆಯೋ ಹಾಗೆ ಪರಮಾಣು ಪ್ರದೇಶದಲ್ಲಿಯೂ ಅನಂತ ಜೀವರಾಶಿಗಳು ನೆಲೆಗೊಂಡಿರುತ್ತವೆ. ಈ ಎಲ್ಲ ಭಿನ್ನ ಭಿನ್ನ ಜೀವರಿಗೂ ಭಗವಂತನೇ ನಿಯಾಮಕನಾಗಿರುತ್ತಾನೆ.

ವಾಪ್ಯಃ ಪುನರ್ಯೋಜನವಿಸ್ತೃತಾಸ್ತಾಃ
ಕ್ರೋಶಂ ಚ ಗಂಭೀರತಯಾವಗಾಢಾಃ ।
ಆಯಾಮತಃ ಪಂಚಶತಾಶ್ಚ ಸರ್ವಾಃ
ಪ್ರತ್ಯೇಕಶೋ ಯೋಜನತಃ ಪ್ರವೃದ್ಧಾಃ ॥೩೧॥

ವಾಪ್ಯಾ ಜಲಂ ಕ್ಷಿಪ್ಯತಿ ವಾಲಕೋಟ್ಯಾ
ತೃಷ್ಣಾ ಸಕೃಚ್ಚಾಪ್ಯಥ ನ ದ್ವಿತೀಯಮ್ ।
ತಾಸಾಂ ಕ್ಷಯೇ ವಿದ್ಧಿ ಕೃತಂ ವಿಸರ್ಗಂ
ಸಂಹಾರಮೇಕಂ ಚ ತಥಾ ಪ್ರಜಾನಾಮ್ ॥೩೨॥

ಪ್ರತಿಯೊಂದು ಬಾವಿಯೂ ಐದುನೂರು ಯೋಜನಗಳಷ್ಟು ಉದ್ದವೂ, ಐದು ನೂರು ಯೋಜನಗಳಷ್ಟು ಅಗಲವೂ ಇವೆ. ಒಂದೊಂದು ಕ್ರೋಶದಷ್ಟು ಆಳವಾಗಿವೆ. ಅಂತಹ ಸಹಸ್ರಾರು ನೀರಿನಿಂದ ತುಂಬಿದ ಬಾವಿಗಳಲ್ಲಿ ತುಂಬಿರುವ ನೀರಿನ ಕಣಗಳು ಅನಂತಾನಂತ ಎಂದು ಊಹಿಸಬಹುದು. ಇದರಂತೆ ಅನಂತಾನಂತ ಜೀವ-ರಾಶಿಗಳಿಂದ ತುಂಬಿದ ಈ ಸಂಸಾರವೆಂಬ ಬಾವಿಯಲ್ಲಿ ಶಿಂಶುಮಾರ ನಾಮಕನಾದ ಭಗವಂತನು ತನ್ನ ಬಾಲದ ತುದಿಯಿಂದ ನೀರನ್ನು ಸೆಳೆಯುವಂತೆ ಜೀವರಾಶಿಗಳನ್ನು

ಸೆಳೆದುಕೊಂಡು, ಜ್ಯೋತಿಶ್ಚಕ್ರದಲ್ಲಿ ನಿಂತು ಪುನಃ ಪುನಃ ಸೃಷ್ಟಿಯನ್ನು ಮಾಡುತ್ತಲೇ ಇರುತ್ತಾನೆ. ಒಂದು ಬಾರಿ ಪ್ರಳಯವಾದಾಗ ಒಂದು ಸೃಷ್ಟಿಯು ಮುಗಿದಿದೆ ಎಂದು ಅರ್ಥ. ಪುನಃ ಇನ್ನೊಂದು ಸೃಷ್ಟಿಯನ್ನು ಮಾಡುತ್ತಾನೆ. ಹೀಗೆ ಸಹಸ್ರಾರು ಬಾವಿಗಳಲ್ಲಿ ತುಂಬಿದ ನೀರಿನ ಕಣಗಳು ಹೇಗೆ ಬರಿದಾಗುವುದಿಲ್ಲವೋ ಅದರಂತೆ ಈ ಸಂಸಾರ ಸಮುದ್ರದಲ್ಲಿ ತುಂಬಿದ ಜೀವರಾಶಿಗಳೂ ಬರಿದಾಗುವುದಿಲ್ಲ. ಶಿಂಶುಮಾರನು ಅನಂತ ಕಾಲದಲ್ಲಿಯೂ ಈ ಜೀವರಾಶಿಗಳ ಸೃಷ್ಟಿ-ಲಯಗಳನ್ನು ಮಾಡುತ್ತಲೇ ಇರುತ್ತಾನೆ.

ಷಡ್‌ಜೀವವರ್ಣಾಃ ಪರಮಂ ಪ್ರಮಾಣಂ
ಕೃಷ್ಣೋ ಧೂಮ್ರೋ ನೀಲಮಥಾಸ್ಯ ಮಧ್ಯಮ್ ।
ರಕ್ತಂ ಪುನಃ ಸಹ್ಯತರಂ ಸುಖಂ ತು
ಹಾರಿದ್ರವರ್ಣಂ ಸುಸುಖಂ ಚ ಶುಕ್ಲಮ್ ॥೩೩॥

ಜೀವರಲ್ಲಿ ಸ್ವಲ್ಪ ತಾಮಸ ಜೀವರು, ಅತಿತಾಮಸ ಜೀವರು, ಸ್ವಲ್ಪ ರಾಜಸ ಜೀವರು, ಅತಿ ರಾಜಸ ಜೀವರು, ಸ್ವಲ್ಪ ಸಾತ್ತ್ವಿಕ ಜೀವರು, ಅತಿ ಸಾತ್ತ್ವಿಕ ಜೀವರು ಎಂದು ಆರು ವಿಭಾಗಗಳಿವೆ. ಈ ಜೀವರ ಪ್ರಾಕೃತ ದೇಹದ ಬಣ್ಣಗಳು ಕಪ್ಪು, ಬೂದು, ನೀಲಿ ಬಣ್ಣ. ಈ ಮೂರು ವರ್ಣಗಳು ತಮೋಗುಣ ಪ್ರಚುರವಾದವುಗಳು. ಆದ್ದರಿಂದ ತಾಮಸ ಜೀವರು ದುಃಖದಾಯಕವಾದ ಈ ಮೂರು ವರ್ಣಗಳನ್ನು ಪ್ರತಿನಿಧಿಸುತ್ತಾರೆ. ತಮೋಗುಣ ಪ್ರಚುರರಾದುದರಿಂದ ಬಹುದುಃಖವನ್ನು ಅನುಭವಿಸುತ್ತಾರೆ. ಮಧ್ಯಮ ಜೀವರೆನಿಸಿದ ರಾಜಸರ ಕೆಂಪು-ಹಳದಿ-ಬಿಳಿ ಬಣ್ಣಗಳು ಸುಖ-ದುಃಖಗಳನ್ನು ಸೂಚಿಸುವ ಮಧ್ಯಮ ಜೀವರ ಬಣ್ಣಗಳೆನಿಸಿವೆ.

ಪರಂ ತು ಶುಕ್ಲಂ ವಿಮಲಂ ವಿಶೋಕಂ
ಗತಕ್ಲಮಂ ಸಿದ್ಧ್ಯತಿ ದಾನವೇಂದ್ರ ।
ಗತ್ವಾ ತು ಯೋನಿಪ್ರಭವಾನಿ ದೈತ್ಯ
ಸಹಸ್ರಶಃ ಸಿದ್ಧಿಮುಪೈತಿ ಜೀವಃ ॥೩೪॥

ಸತ್ತ್ವಗುಣ ಪ್ರಚುರವಾದ ಬಿಳಿ ಬಣ್ಣವು ಸುಖವನ್ನೇ ಸೂಚಿಸುತ್ತದೆ. ಇದು ನಿರ್ಮಲವಾದುದು, ಶೋಕರಹಿತವಾದುದು. ಪ್ರವೃತ್ತಿ ಮಾರ್ಗದ ದುಃಖಗಳು ಇಲ್ಲದಿರುವ ಕಾರಣ ಮೋಕ್ಷ ಸಿದ್ಧಿಕಾರಕವೂ ಆಗಿದೆ. ಜೀವನು ಸಹಸ್ರಾರು

ಯೋನಿಗಳಲ್ಲಿ ಹುಟ್ಟಿದ ಬಳಿಕ ಮನುಷ್ಯ ಯೋನಿಯಲ್ಲಿ ಹುಟ್ಟಿ ಈ ಶುಕ್ಲವರ್ಣದ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ.

ಗತಿಂ ಚ ಯನ್ ದರ್ಶನಮಾಹ ದೇವೋ
ಗತ್ವಾ ಶುಭಂ ದರ್ಶನಮೇವ ಚಾಹ ।
ಗತಿಃ ಪುನರ್ವರ್ಣಕೃತಾ ಪ್ರಜಾನಾಂ
ವರ್ಣಸ್ತಥಾ ಕಾಲಕೃತೋಽಸುರೇಂದ್ರ ॥೩೫॥

ಮೋಕ್ಷದ ಗತಿಯನ್ನು ಹೊಂದುವ ಸಾತ್ವಿಕ ಜೀವನು ಸಜ್ಜನರ ದರ್ಶನವನ್ನು ಈ ಸಂಸಾರದಲ್ಲಿ ಹೊಂದುತ್ತಾನೆ. ವೈಷ್ಣವ ಸಿದ್ಧಾಂತವನ್ನು ಅಧ್ಯಯನ ಮಾಡುತ್ತಾನೆ. ಶುಕ್ಲ ವರ್ಣದ ಪ್ರಭಾವದಿಂದಾಗಿ ಕಾಲಿಕವಾಗಿ ಪರಮ ಗತಿಯನ್ನೇ ಹೊಂದುತ್ತಾನೆ. ಈ ಎಲ್ಲ ಸ್ಥಿತಿಗಳು ಸಾಧನೆಗನುಗುಣವಾಗಿ ಒದಗಿ ಬರುತ್ತವೆ.

ಶತಂ ಸಹಸ್ರಾಣಿ ಚತುರ್ದಶೇಹ
ಪರಾ ಗತಿರ್ದೇವಗುಣಸ್ಯ ದೈತ್ಯ ।
ಆರೋಹಣಂ ತತ್ಕೃತಮೇವ ವಿದ್ಧಿ
ಸ್ಥಾನಂ ತಥಾ ನಿಃಸರಣಂ ಚ ತೇಷಾಮ್ ॥೩೬॥

ಮನುಷ್ಯರಿಗೆ ನೂರು ವರ್ಷ ಆಯುಷ್ಯದ ಗತಿಯು. ಋಷಿಗಳಿಗೆ ಸಾವಿರ ವರ್ಷಗಳು. ಗೋವು ಮೊದಲಾದವುಗಳಿಗೆ ಹದಿನಾಲ್ಕು ವರ್ಷದ ಆಯುಷ್ಯ ಗತಿಯು. ಈ ರೀತಿಯಾಗಿ ಆಯುಷ್ಯದ ಸ್ಥಿತಿಯನ್ನು ಪಡೆದು ಪುನಃ ಆಯಾ ಜೀವರು ಮರಣವನ್ನು ಹೊಂದುತ್ತಾರೆ.

ಕೃಷ್ಣಸ್ಯ ವರ್ಣಸ್ಯ ಗತಿರ್ನಿಕೃಷ್ಟಾ
ಸ ಮಜ್ಜತೇ ನರಕೇ ಪಚ್ಯಮಾನಃ ।
ಸ್ಥಾನಂ ತಥಾ ದುರ್ಗತಿಭಿಸ್ತು ತಸ್ಯ
ಪ್ರಜಾವಿಸರ್ಗಾನ್ ಸುಬಹೂನ್ ವದಂತಿ ॥೩೭॥

ಕೃಷ್ಣ ವರ್ಣದವರ ಗತಿಯು ಅಧಮವಾದುದು. ಕೃಷ್ಣವರ್ಣವು ನರಕವನ್ನು ಹೊಂದಿಸುತ್ತದೆ. ನಿಷಿದ್ಧ ಕೆಲಸಗಳಲ್ಲಿ ಆಸಕ್ತಿಯನ್ನುಂಟು ಮಾಡುತ್ತದೆ. ಇವರು

ದುಷ್ಕರ್ಮದ ಫಲವಾಗಿ ನರಕದ ಬೆಂಕಿಯಲ್ಲಿ ಬೇಯುತ್ತಾರೆ. ದುರ್ಗತಿಯನ್ನೇ ಹೊಂದುತ್ತಾರೆ. ಅನೇಕ ಯೋನಿಗಳಲ್ಲಿ ಹುಟ್ಟನ್ನು ಪಡೆದು ದುಃಖಿತರಾಗುತ್ತಾರೆ.

ಶತಂ ಸಹಸ್ರಾಣಿ ತತಶ್ಚರಿತ್ವಾ
ಪ್ರಾಪ್ನೋತಿ ವರ್ಣಂ ಹರಿತಂ ತು ಪಶ್ಚಾತ್ ।
ಸ ಚೈವ ತಸ್ಮಿನ್ನಿವಸತ್ಯನೀಶೋ
ಯುಗಕ್ಷಯೇ ತಮಸಾ ಸಂವೃತಾತ್ಮಾ ॥೩೮॥

ಲಕ್ಷ ವರ್ಷಗಳ ತನಕ ನರಕದಲ್ಲಿಯೇ ಬಳಲಿ, ಬಳಿಕ ಧೂಮ್ರವರ್ಣವನ್ನು ಹೊಂದಿ, ಪಶು-ಪಕ್ಷಿಗಳೇ ಮೊದಲಾದ ತಿರ್ಯಕ್‌ಜಂತುಗಳ ಯೋನಿಗಳಲ್ಲಿ ಹುಟ್ಟನ್ನು ಪಡೆಯುತ್ತಾರೆ. ಅಲ್ಲಿಯೂ ಅಸ್ವತಂತ್ರರಾಗಿದ್ದು, ಅನೇಕ ದುಃಖಗಳನ್ನು ಅನುಭವಿಸಿ, ಕಾಲಿಕವಾಗಿ ಅಂಧಂತಮಸ್ಸನ್ನೇ ಹೊಂದುತ್ತಾರೆ.

ಸ ವೈ ಯದಾ ಸತ್ತ್ವಗುಣೇನ ಯುಕ್ತ-
ಸ್ತಮೋ ವ್ಯಪೋಹನ್ ಘಟತೇ ಸ್ವಬುದ್ಧ್ಯಾ ।
ಸ ಲೋಹಿತಂ ವರ್ಣಮುಪೈತಿ ನೀಲೋ
ಮನುಷ್ಯಲೋಕೇ ಪರಿವರ್ತತೇ ಚ ॥೩೯॥

ಜೀವನು ಸತ್ತ್ವಗುಣದಿಂದ ಕೂಡಿದಾಗ ಜ್ಞಾನದಿಂದ ತಮೋಗುಣವನ್ನು ಪರಿಹರಿಸಿಕೊಂಡು, ನೀಲವರ್ಣವನ್ನು ಬಿಟ್ಟು ರಕ್ತವರ್ಣವನ್ನು ಹೊಂದುತ್ತಾನೆ. ಇಂತಹ ಜೀವನು ಮನುಷ್ಯಲೋಕದಲ್ಲಿ ಸಂಚರಿಸುತ್ತಾನೆ.

ಸ ತತ್ರ ಸಂಹಾರವಿಸರ್ಗಮೇವ
ಸ್ವಕರ್ಮಜೈರ್ಬಂಧನೈಃ ಕ್ಲಿಶ್ಯಮಾನಃ ।
ತತಃ ಸ ಹಾರಿದ್ರಮುಪೈತಿ ವರ್ಣಂ
ಸಂಹಾರವಿಕ್ಷೇಪಶತೇ ವ್ಯತೀತೇ ॥೪೦॥

ಆ ಸಂಸಾರದಲ್ಲಿ ಜೀವನು ಹುಟ್ಟು-ಸಾವುಗಳನ್ನು, ತನ್ನ ಕರ್ಮಗಳಿಗನುಸಾರವಾಗಿ ಕ್ಲೇಶಗಳನ್ನು ಅನುಭವಿಸುತ್ತಾ ಸ್ವಲ್ಪ ಸಮಯದ ಬಳಿಕ ಹಳದಿ ಬಣ್ಣವನ್ನು ಹೊಂದಿ ನೂರಾರು ಕಲ್ಪಗಳನ್ನು ಕಳೆದು, ದೇವತಾಪುಣ್ಯವು ಕ್ಷಯಿಸಿದ ಬಳಿಕ ಮನುಷ್ಯ ಯೋನಿಯಲ್ಲಿ ಹುಟ್ಟುತ್ತಾನೆ.

ಹಾರಿದ್ರವರ್ಣಸ್ತು ಪ್ರಜಾವಿಸರ್ಗಾನ್
ಸಹಸ್ರಶಸ್ತಿಷ್ಠತಿ ಸಂಚರನ್ವೈ ।
ಅವಿಪ್ರಮುಕ್ತೋ ನಿರಯೇ ಚ ದೈತ್ಯ
ತತಃ ಸಹಸ್ರಾಣಿ ದಶಾಪರಾಣಿ ॥೪೧॥

ಹಳದಿ ಬಣ್ಣವನ್ನು ಹೊಂದಿದ ಮಧ್ಯಮ ಜೀವನು ಸಾವಿರಾರು ಕಲ್ಪಕಾಲದವರೆಗೆ ಬಳಲಿದರೂ ವಿಷಯ ಸಂಬಂಧದಿಂದ ಮುಕ್ತನಾಗದೆ ಸಂಸಾರದಲ್ಲಿ ಅನೇಕ ಸಹಸ್ರ ಯೋನಿಗಳಲ್ಲಿ ಹುಟ್ಟನ್ನು ಪಡೆಯುತ್ತಾನೆ.

ಗತೀಃ ಸಹಸ್ರಾಣಿ ಚ ಪಂಚ ತಸ್ಯ
ಚತ್ವಾರಿ ಸಂವರ್ತಕೃತಾನಿ ಚೈವ ।
ವಿಮುಕ್ತಮೇನಂ ನಿರಯಾಚ್ಚ ವಿದ್ಧಿ
ಸರ್ವೇಷು ಚಾನ್ಯೇಷು ಚ ಸಂಭವೇಷು ॥೪೨॥

ಅತ್ಯಂತ ಪಾಪವನ್ನು ಮಾಡಿದ ಜೀವನು ಮಹಾಪ್ರಳಯದ ಕಾಲ ನಾಲ್ಕು ಕಲ್ಪ ಪರಿಮಿತ ವರ್ಷಗಳ ಕಾಲ ತನ್ನ ಯೋಗ್ಯತಾನುಸಾರವಾಗಿ ದುಃಖವನ್ನು ಅನುಭವಿಸುತ್ತಾ ನರಕದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಮನುಷ್ಯಯೋನಿಯನ್ನು ಬಿಟ್ಟು ಎಲ್ಲ ಯೋನಿಗಳು ಸುಖ-ದುಃಖಗಳಿಗೆ ಅರ್ಹವಾದ ಯೋನಿಗಳೇ ಆಗಿವೆ.

ವ್ಯಾಖ್ಯಾನ ವಿಶೇಷ– ಮೂರು ವಿಧ ಜೀವರಾಶಿಗಳ ವರ್ಣನೆಯನ್ನು ಸನತ್ಕುಮಾರರು ಇಲ್ಲಿ ಮಾಡಿರುತ್ತಾರೆ. ಹಿಂದೆ ಹೇಳಿದಂತೆ ಆಯಾ ಬಣ್ಣಗಳು ಆಯಾ ಜೀವರ ಅರ್ಹತೆಯನ್ನು ಸೂಚಿಸುತ್ತವೆ. ತಮೋಯೋಗ್ಯ ಜೀವರಿಗೆ ಕಪ್ಪು, ಮಧ್ಯಮ ಜೀವರಿಗೆ ಕೆಂಪು, ಮುಕ್ತಿ ಯೋಗ್ಯ ಜೀವರಿಗೆ ಬಿಳಿ ಎಂಬ ಬಣ್ಣಗಳನ್ನು ನಿರ್ದೇಶಿಸಿದ್ದಾರೆ. ನರಕಗಳ ದುಃಖದ ಕಾಲವು ಸಾವಿರ ಎಂಬ ಸಂಖ್ಯೆಯಲ್ಲಿ ವರ್ಣಿಸಿದ್ದಾರೆ. ಅವರವರ ಪಾಪಕರ್ಮಕ್ಕೆ ಅನುಗುಣವಾಗಿ ವರ್ಷಗಳ ಸಂಖ್ಯೆಯು ವ್ಯತ್ಯಾಸವನ್ನು ಹೊಂದುತ್ತದೆ. ಅಧಿಕ ಪಾಪಕರ್ಮವನ್ನು ಮಾಡಿದವರು ಅಧಿಕ ವರ್ಷ ಸಂಖ್ಯೆಯ ಕಾಲ ನರಕವಾಸಿಗಳಾಗಿರುತ್ತಾರೆ. ಕಡಿಮೆ ಪಾಪ ಮಾಡಿದವರು ಕಡಿಮೆ ವರ್ಷ ಸಂಖ್ಯೆಯ ಕಾಲ ನರಕವಾಸಿಗಳಾಗಿರುತ್ತಾರೆ. ಆದ್ದರಿಂದ ಇಲ್ಲಿ ಹೇಳಿದ ವರ್ಷದ ಸಂಖ್ಯೆಗೂ ಅಧಿಕ ವರ್ಷ ಸಂಖ್ಯೆ ನರಕವಾಸಕ್ಕೂ ಅವಕಾಶವಿದೆ, ಇಲ್ಲಿ ಹೇಳಿದ ಸಂಖ್ಯೆಗಿಂತಲೂ ಹೆಚ್ಚಿನ ಅವಧಿಯ ನರಕವಾಸಕ್ಕೂ ಅವಕಾಶವಿದೆ ಎಂದು ತಿಳಿಯಬೇಕು ಎಂಬುದಾಗಿ ವಾದಿರಾಜ ಗುರುಸಾರ್ವಭೌಮರು ಲಕ್ಷಾಲಂಕಾರದಲ್ಲಿ ತಿಳಿಸಿರುತ್ತಾರೆ. ಶೃಂಗಗ್ರಾಹಕ ಪ್ರಮಾಣದಂತೆ ಈ ವಿಷಯವು ಇಲ್ಲಿ ನಿರೂಪಿಸಲ್ಪಟ್ಟಿದೆ ಎಂದು ತಿಳಿಯಬೇಕು ಎಂಬುದು ಗುರುರಾಜರ ಅಭಿಪ್ರಾಯ.

ಸ ದೇವಲೋಕೇ ವಿಹರತ್ಯಭೀಕ್ಷ್ಣಂ
ತತಶ್ಚ್ಯುತೋ ಮಾನುಷತಾಮುಪೈತಿ ।
ಸಂಹಾರವಿಕ್ಷೇಪಶತಾನಿ ಚಾಷ್ಟೌ
ಮರ್ತ್ಯೇಷು ತಿಷ್ಠನ್ನಮೃತತ್ವಮೇತಿ ॥೪೩॥

ಜೀವನು ದೇವಲೋಕದಲ್ಲಿ ವಿಹರಿಸಿದ ಬಳಿಕ ಪುಣ್ಯಕ್ಷಯವಾದ ಕೂಡಲೇ ಸ್ವರ್ಗದಿಂದ ಚ್ಯುತನಾಗಿ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ. ಮನುಷ್ಯಲೋಕದಲ್ಲಿ ಎಂಟುನೂರು ಕಲ್ಪದ ತನಕ ಹುಟ್ಟು-ಸಾವುಗಳ ಪರಿಭ್ರಮಣದಲ್ಲಿ ಸಿಲುಕಿ, ಅಷ್ಟರಲ್ಲಿ ಶುಭಕರ್ಮಫಲವನ್ನು ಸಂಗ್ರಹಿಸಿಕೊಂಡು, ಸಾತ್ವಿಕನಾದಲ್ಲಿ ಅಮೃತತ್ವವನ್ನು ಹೊಂದುತ್ತಾನೆ.

ಸೋಽಸ್ಮಾದಥ ಭ್ರಶ್ಯತಿ ಕಾಲಯೋಗಾತ್
ಕೃಷ್ಣೇ ತಲೇ ತಿಷ್ಠತಿ ಸರ್ವಕಷ್ಟೇ ।
ಯಥಾ ತ್ವಯಂ ಸಿದ್ಧ್ಯತಿ ಜೀವಲೋಕ-
ಸ್ತತ್ತೇಽಭಿಧಾಸ್ಯಾಮ್ಯಸುರಪ್ರವೀರ ॥೪೪॥

ಅಯೋಗ್ಯ ಜೀವನು ಕಾಲಯೋಗದಿಂದ ಈ ಮನುಷ್ಯಯೋನಿಯಿಂದಲೂ ಅಧಃಪತನವನ್ನು ಹೊಂದುತ್ತಾನೆ. ಅತ್ಯಂತ ಕಷ್ಟಕರವೆನಿಸಿದ ಅಂಧಂತಮಸ್ಸಿನಲ್ಲಿ ನೂಕಲ್ಪಡುತ್ತಾನೆ. ಇನ್ನು ಸಿದ್ಧಿಯನ್ನು ಹೊಂದುವ ಜೀವನ ಅರ್ಹತೆಗಳು ಯಾವುವು ಎನ್ನುವುದರ ಬಗ್ಗೆ ಅಸುರಪ್ರವೀರನೇ ನಾನು ತಿಳಿಸುತ್ತೇನೆ, ಕೇಳು.

ದೈವ್ಯಾನಿ ಸ ವ್ಯೂಹಶತಾನಿ ಸಪ್ತ
ರಕ್ತೋ ಹರಿದ್ರೋಽಥ ತಥೈವ ಶುಕ್ಲಃ ।
ಸಂಶ್ರಿತ್ಯ ಸಂಧಾವತಿ ಶುಕ್ಲಮೇತ-
ಮಷ್ಟಾವರಾನರ್ಚ್ಯತಮಾನ್ ಸ ಲೋಕಾನ್ ॥೪೫॥

ಅಷ್ಟೌ ಚ ಷಷ್ಟಿಂ ಚ ಶತಾನಿ ಯಾನಿ
ತೃಷ್ಣಾವಿರುದ್ಧಾನಿ ಮಹಾದ್ಯುತೀನಾಮ್ ।
ಶುಕ್ಲಸ್ಯ ವರ್ಣಸ್ಯ ಪರಾ ಗತಿರ್ಯಾ
ತ್ರೀಣ್ಯೇವ ರುದ್ಧಾನಿ ಮಹಾನುಭಾವ ॥೪೬॥

ಸಾತ್ವಿಕ ಜೀವನು ನೂರು ವ್ಯೂಹ ವರ್ಷಗಳ ಕಾಲ ಅಥವಾ ಏಳು ನೂರು ವರ್ಷಗಳ ಕಾಲ ಶುಕ್ಲ ವರ್ಣವನ್ನು ಆಶ್ರಯಿಸಿ, ಮಹಾಕಾಂತಿಯಿಂದ ಕೂಡಿದ ದೇವತೆಗಳ ಲೋಕಗಳನ್ನು ಎಂಟಕ್ಕಿಂತ ಕಡಿಮೆ ಎನಿಸಿದ ಸಪ್ತರ್ಷಿ ಲೋಕಗಳನ್ನು ಅಥವಾ ಸಪ್ತ ಪಿತೃಲೋಕಗಳನ್ನು ಅಥವಾ ಅಷ್ಟವಸುಲೋಕಗಳನ್ನು ಒಂದು ಕಡಿಮೆಯಾದ, ಐವತ್ತು ಮರುದ್ದೇವತೆಗಳ ಲೋಕವನ್ನು ಅರ್ಥಾತ್ ನಲವತ್ತೊಂಬತ್ತು ಮರುದ್ಗಣಗಳಿರುವ ಲೋಕಗಳನ್ನು, ಏಕಾದಶ ರುದ್ರರ ಲೋಕಗಳನ್ನು, ಶತಗಣಸ್ಥರೆನಿಸಿದ ದೇವತೆಗಳ ಲೋಕಗಳನ್ನು ಅಂತ್ಯಕಾಲದಲ್ಲಿ ಮನಸ್ಸಿನಲ್ಲಿ ಯಾವುದನ್ನು ಧ್ಯಾನಿಸುತ್ತಾನೋ ಅಂತಹ ಲೋಕಗಳನ್ನು ಸಾತ್ವಿಕನಾದ ಜೀವನು ಹೊಂದುತ್ತಾನೆ. ಆ ಲೋಕಗಳಾದರೂ ತೃಷ್ಣೆಗೆ ವಿರುದ್ಧವಾದವುಗಳಲ್ಲ. ಆಕಾಂಕ್ಷೆಗಳನ್ನು ನೀಡುವಂತಹ ಸಕಲ ಸ್ವರ್ಗಫಲಗಳು ಎನಿಸಿವೆ. ಶುಕ್ಲವರ್ಣದ ಗತಿಯು ಮೂರು ಗುಣಗಳನ್ನು ವಿರೋಧಿಸುವುದರಿಂದ ದೊರೆಯುತ್ತದೆ.

ಸಂಹಾರವಿಕ್ಷೇಪಮನಿಷ್ಟಮೇಕಂ
ಚತ್ವಾರಿ ಚಾನ್ಯಾನಿ ವಸತ್ಯನೀಶಃ ।
ಷಷ್ಠಸ್ಯ ವರ್ಣಸ್ಯ ಪರಾ ಗತಿರ್ಯಾ
ಸಿದ್ಧಾ ವಿಶುದ್ಧಸ್ಯ ಗತಕ್ಲಮಸ್ಯ ॥೪೭॥

ಮಧ್ಯಮ ಜೀವನು ನಿತ್ಯಸಂಸಾರದಲ್ಲಿ ಇರುವಿಕೆ, ಸೃಷ್ಟಿ, ಲಿಂಗದೇಹ, ಅವಿದ್ಯಾ, ಪರಮಮೋಕ್ಷಾಭಾವ ಎಂಬ ಐದು ಅನಿಷ್ಟಗಳನ್ನು ಯಾವಾಗಲೂ ಅನುಭವಿಸುತ್ತಾನೆ. ಉತ್ತಮನೆನಿಸಿದ ಜೀವನು ಆರನೆಯ ವರ್ಣವೆನಿಸಿದ ಶುಕ್ಲ ವರ್ಣದ ಜೀವನು ಋಷ್ಯಾದಿಗಳು ಹೊಂದುವಂಥ ಶ್ರೇಷ್ಠವಾದ ಆಯಾಸವಿಲ್ಲದ ಲೋಕವನ್ನು ಹೊಂದುತ್ತಾನೆ.

ಸಪ್ತೋತ್ತರಂ ತೇಷು ವಸತ್ಯನೀಶಃ
ಸಂಹಾರವಿಕ್ಷೇಪಶತಂ ಸಶೇಷಮ್ ।
ತಸ್ಮಾದುಪಾವೃತ್ಯ ಮನುಷ್ಯಲೋಕೇ
ತತೋ ಮಹಾನ್ ಮಾನುಷತಾಮುಪೈತಿ ॥೪೮॥

ಚೆನ್ನಾಗಿ ಯೋಗಸಾಧನೆ ಮಾಡಲು ಅಸಮರ್ಥನಾಗಿರುವ, ಯೋಗ ಭ್ರಷ್ಟನಾಗಿರುವ ಶುಕ್ಲವರ್ಣದವನು ನೂರುಕಲ್ಪದವರೆಗೆ ಪಾತಾಳಾದಿ ಏಳು

ಲೋಕಗಳಿಗಿಂತ ಉತ್ತಮ ಲೋಕದಲ್ಲಿ ವಾಸ ಮಾಡುತ್ತಾ, ಪುನಃ ಕರ್ಮಸಂಸ್ಕಾರವನ್ನು ಹೊಂದಿ ಮಹಾಸಂಪನ್ನನಾಗಿ ಮನುಷ್ಯಶರೀರವನ್ನು ಪಡೆದು ಭೂಲೋಕದಲ್ಲಿ ಜನ್ಮ ತಾಳುತ್ತಾನೆ.

ತಸ್ಮಾದುಪಾವೃತ್ಯ ತತಃ ಕ್ರಮೇಣ
ಸೋಽಗ್ರೇ ಸ್ಮ ಸಂತಿಷ್ಠತಿ ಭೂತಸರ್ಗಮ್ ।
ಸ ಸಪ್ತಕೃತ್ವಶ್ಚ ಪರೈತಿ ಲೋಕಾನ್
ಸಂಹಾರವಿಕ್ಷೇಪಕೃತಪ್ರವಾಸಃ ॥೪೯॥

ನಂತರ ಮನುಷ್ಯಯೋನಿಯಿಂದ ಬಿಡುಗಡೆಯನ್ನು ಹೊಂದಿ, ಮುಂದಿನ ದೇವಾದಿ ಯೋನಿಗಳಲ್ಲಿ ಪುನಃ ಹುಟ್ಟುತ್ತಾ, ಅನೇಕ ಬಾರಿ ಹುಟ್ಟನ್ನು ಪಡೆದ ಬಳಿಕ ಹುಟ್ಟು-ಸಾವುಗಳ ಚಕ್ರದಿಂದ ಆಯಾಸವನ್ನು ಪರಿಹರಿಸಿಕೊಳ್ಳುವ ಉತ್ತಮ ಲೋಕವನ್ನು ಹೊಂದುತ್ತಾನೆ.

ಸಪ್ತೈವ ಸಂಹಾರಮುಪಪ್ಲವಾನಿ
ಸಂಭಾವ್ಯ ಸಂತಿಷ್ಠತಿ ಸಿದ್ಧಲೋಕೇ ।
ತತೋಽವ್ಯಯಂ ಸ್ಥಾನಮನಂತಮೇತಿ
ದೇವಸ್ಯ ವಿಷ್ಣೋರಥ ಬ್ರಹ್ಮಣಶ್ಚ ।
ಶೇಷಸ್ಯ ಚೈವಾಥ ನರಸ್ಯ ಚೈವ
ದೇವಸ್ಯ ವಿಷ್ಣೋಃ ಪರಮಸ್ಯ ಚೈವ ॥೫೦॥

ಜನ್ಮ, ಕಾಮ-ಕ್ರೋಧಾದಿ ಆರು ವೈರಿಗಳು ಹೀಗೆ ಏಳರ ಬಗ್ಗೆ ಎಚ್ಚರವನ್ನು ಹೊಂದಿ ಸಿದ್ಧಲೋಕವನ್ನು ಹೊಂದುತ್ತಾನೆ. ನಂತರ ನಾಶರಹಿತವಾದ ವಿಷ್ಣುವಿನ ಸ್ವರ್ಗದಲ್ಲಿರುವ ವಾಮನ ರೂಪವನ್ನು ಹೊಂದುತ್ತಾನೆ ಅಥವಾ ಋಷಿ ಎನಿಸಿದ ನರ-ನಾರಾಯಣರ ಪಾದವನ್ನು ಸೇರುತ್ತಾನೆ.

ಸಂಹಾರಕಾಲೇ ಪರಿದಗ್ಧಕಾಯಾ
ಬ್ರಹ್ಮಾಣಮಾಯಾಂತಿ ಸದಾ ಪ್ರಜಾ ಹಿ ।
ಚೇಷ್ಟಾತ್ಮನೋ ದೇವಗಣಾಶ್ಚ ಸರ್ವೇ
ಯೇ ಬ್ರಹ್ಮಲೋಕಾದಮರಾಃ ಸ್ಮ ತೇಽಪಿ ॥೫೧॥

ಜೀವರು ಪ್ರಳಯಕಾಲದಲ್ಲಿ ಲಿಂಗದೇಹವನ್ನು ಭಗವಂತನ ಅನುಗ್ರಹದಿಂದ ಪರಿಹರಿಸಿಕೊಂಡು ಪರಬ್ರಹ್ಮನನ್ನೇ ಹೊಂದುತ್ತಾರೆ. ಸಮಸ್ತ ತತ್ತ್ವಾಭಿಮಾನಿ ದೇವತೆಗಳು ಪ್ರಳಯ ಕಾಲದಲ್ಲಿ ಆ ಶ್ರೀಹರಿಯನ್ನೇ ಹೊಂದುತ್ತಾರೆ.

ಪ್ರಜಾವಿಸರ್ಗೇ ತು ಸಶೇಷಕಾಲಾಃ
ಸ್ಥಾನಾನಿ ಸ್ವಾನ್ಯೇವ ಸರಂತಿ ಜೀವಾಃ ।
ನಿಃಶೇಷಾಣಾಂ ತತ್ ಪದಂ ಯಾಂತಿ ಚಾಂತೇ
ಸರ್ವೇ ದೇವಾ ಯೇ ಸದೃಶಾ ಮನುಷ್ಯಾಃ ॥೫೨॥

ಸಂಸಾರವನ್ನು ಅನುಭವಿಸುವ ಕಾಲವನ್ನು ಉಳಿಸಿಕೊಂಡಿರುವ ಎಲ್ಲ ಜೀವರು ಬ್ರಹ್ಮನ ಪರಾಂತಕಾಲವೆನಿಸಿದ ಮಹಾಪ್ರಳಯ ಕಾಲದಲ್ಲಿ ಪರಬ್ರಹ್ಮನನ್ನೇ ಸೇರುತ್ತಾರೆ. ಉತ್ತಮ ಜೀವರು ಅಪರೋಕ್ಷಜ್ಞಾನವನ್ನು ಪಡೆದು ಭಗವಂತನ ಉದರವನ್ನು ಪ್ರವೇಶಿಸುವುದರಿಂದ ದೇವತೆಗಳಿಗೆ ಸದೃಶರಾಗಿರುತ್ತಾರೆ. ದೇವಾನುದೇವತೆಗಳು, ಮನುಷ್ಯೋತ್ತಮರು ಭಗವಂತನ ಪಾದವನ್ನೇ ಹೊಂದುತ್ತಾರೆ.

ಯೇ ತು ಚ್ಯುತಾಃ ಸಿದ್ಧಲೋಕಾತ್ ಕ್ರಮೇಣ
ತೇಷಾಂ ಗತಿಂ ಯಾಂತಿ ತಥಾನುಪೂರ್ವ್ಯಾ ।
ಜೀವಾಃ ಪರೇ ತದ್ ಬಲವೇಷರೂಪಾ
ವಿಧಿಂ ಸ್ವಕಂ ಯಾಂತಿ ವಿಪರ್ಯಯೇಣ ॥೫೩॥

ಕರ್ಮಫಲವು ಮುಗಿದ ಬಳಿಕ ಸಿದ್ಧಲೋಕದಿಂದ ಚ್ಯುತರಾಗಿ ಮರ್ತ್ಯಲೋಕದಲ್ಲಿ ಹುಟ್ಟುವ ಯೋಗಿಗಳ ಸ್ಥಾನವನ್ನು, ಬಲವನ್ನು, ತೇಜಸ್ಸನ್ನು ಇತರ ಜೀವರು ಹೊಂದುತ್ತಾರೆ. ಹೀಗೆ ಜೀವರು ಫಲಾನುಭವದ ವ್ಯತ್ಯಾಸದಿಂದ ತಮ್ಮ ತಮ್ಮ ಅದೃಷ್ಟ ಸ್ಥಾನಗಳನ್ನು ಹೊಂದುತ್ತಾರೆ.

ಸ ಯಾವದೇವಾಸ್ತಿ ಸಶೇಷಭುಕ್ತಿಃ
ಪ್ರಜಾಶ್ಚ ದಿವ್ಯಾಶ್ಚ ತಥೈವ ಶುಕ್ಲೇ ।
ತಾವತ್ತದಾ ತೇಷು ವಿಶುದ್ಧಭಾವಃ
ಸಂಯಮ್ಯ ಪಂಚೇಂದ್ರಿಯರೂಪಮೇತತ್ ॥೫೪॥

ಸಾತ್ವಿಕ ಜೀವನು ಪಂಚೇಂದ್ರಿಯಗಳನ್ನು ನಿಯಮಿಸಿಕೊಂಡು, ಪ್ರಾರಬ್ಧಕರ್ಮ ಮುಗಿಯುವ ತನಕವೂ ಶುದ್ಧವಾದ ಕುಲದಲ್ಲಿ ಯೋಗ್ಯ ಪ್ರಜಾಸಂತಾನಗಳನ್ನು ನೀಡುತ್ತಾ ಭಗವತ್ತತ್ತ್ವೆಯಲ್ಲೇ ದೃಢಪಡಿಸಿಕೊಂಡು ಕರ್ತವ್ಯಗಳನ್ನು ಮಾಡುತ್ತಿರಬೇಕು.

ಶುದ್ಧಾಂ ಗತಿಂ ತಾಂ ಪರಮಾಂ ಪರೈತಿ
ಶುದ್ಧೇನ ನಿತ್ಯಂ ಮನಸಾ ವಿಚಿನ್ವನ್ ।
ತತೋಽವ್ಯಯಂ ಸ್ಥಾನಮುಪೈತಿ ಬ್ರಹ್ಮ
ದುಷ್ಪ್ರಾಪಮಭ್ಯೇತಿ ಸ ಶಾಶ್ವತಂ ವೈ ।
ಇತ್ಯೇತದಾಖ್ಯಾತಮಹೀನಸತ್ತ್ವ
ನಾರಾಯಣಸ್ಯೇಹ ಬಲಂ ಮಯಾ ತೇ ॥೫೫॥

ಯಾವ ಸಾಧಕನು ನಿರಂತರ ಶುದ್ಧ ಮನಸ್ಸಿನಿಂದ ವಿಶುದ್ಧವಾದ ಭಗವತ್ತತ್ತ್ವವನ್ನು ಅನುಸಂಧಾನ ಮಾಡುತ್ತಿರುವನೋ ಅಂತಹ ಸಾಧಕನು ನಿಶ್ಚಿತವಾಗಿಯೂ ಪರಮ ಗತಿಯನ್ನು ಹೊಂದುತ್ತಾನೆ. ಯಾರಿಂದಲೂ ಸುಲಭವಾಗಿ ಹೊಂದಲಾರದ ಶಾಶ್ವತವಾದ ಸ್ಥಾನವನ್ನು ಹೊಂದುತ್ತಾನೆ. ಈ ರೀತಿಯಾಗಿ ನಾರಾಯಣನ ಬಲವನ್ನು, ಪ್ರಭಾವವನ್ನು ಮಹಾಸತ್ರನಾದ ವೃತ್ರದೈತ್ಯನೇ, ನಿನಗೆ ತಿಳಿಸಿದ್ದೇನೆ.

ವೃತ್ರಃ

ಏವಂ ಗತೇ ಮೇ ನ ವಿಷಾದೋಽಸ್ತಿ ಕಶ್ಚಿತ್
ಸಮ್ಯಕ್ಚ ಪಶ್ಯಾಮಿ ವಚಸ್ತವೈತತ್ ।
ಶ್ರುತ್ವಾ ಚ ತೇ ವಾಚಮದೀನಸತ್ತ್ವ
ವಿಕಲ್ಮಷೋಽಸ್ಮ್ಯದ್ಯ ತಥಾ ವಿಪಾಪ್ಮಾ ॥೫೬॥

ಸನತ್ಕುಮಾರನೇ, ಈ ಭಗವತ್ತತ್ತ್ವವಿಚಾರವು ಹೀಗಿರುವುದಾದಲ್ಲಿ ನನಗೆ ಉಂಟಾಗಿರುವ ದುಃಸ್ಥಿತಿಯಿಂದ ಸ್ವಲ್ಪವೂ ದುಃಖಿಸುವುದಿಲ್ಲ. ನೀನು ಹೇಳಿದ ಮಾತುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತೇನೆ. ಈ ಮಾತುಗಳ ಸತ್ಯತೆಯನ್ನು ಮನನ ಮಾಡಿದ್ದೇನೆ. ನಿನ್ನ ಮಾತುಗಳನ್ನು ಕೇಳಿಸಿಕೊಂಡು ಪಾಪರಹಿತನೂ, ಕಲ್ಮಶ ರಹಿತನೂ ಆಗಿದ್ದೇನೆ.

ಜೀವರು ಪ್ರಳಯಕಾಲದಲ್ಲಿ ಲಿಂಗದೇಹವನ್ನು ಭಗವಂತನ ಅನುಗ್ರಹದಿಂದ ಪರಿಹರಿಸಿಕೊಂಡು ಪರಬ್ರಹ್ಮನನ್ನೇ ಹೊಂದುತ್ತಾರೆ. ಸಮಸ್ತ ತತ್ತಾ ಭಿಮಾನಿ ದೇವತೆಗಳು ಪ್ರಳಯ ಕಾಲದಲ್ಲಿ ಆ ಶ್ರೀಹರಿಯನ್ನೇ ಹೊಂದುತ್ತಾರೆ.

ಪ್ರಜಾವಿಸರ್ಗೇ ತು ಸಶೇಷಕಾಲಾಃ
ಸ್ಥಾನಾನಿ ಸ್ವಾನ್ಯೇವ ಸರಂತಿ ಜೀವಾಃ ।
ನಿಃಶೇಷಾಣಾಂ ತತ್ ಪದಂ ಯಾಂತಿ ಚಾಂತೇ
ಸರ್ವೇ ದೇವಾ ಯೇ ಸದೃಶಾ ಮನುಷ್ಯಾಃ ॥೫೨॥

ಸಂಸಾರವನ್ನು ಅನುಭವಿಸುವ ಕಾಲವನ್ನು ಉಳಿಸಿಕೊಂಡಿರುವ ಎಲ್ಲ ಜೀವರು ಬ್ರಹ್ಮನ ಪರಾಂತಕಾಲವೆನಿಸಿದ ಮಹಾಪ್ರಳಯ ಕಾಲದಲ್ಲಿ ಪರಬ್ರಹ್ಮನನ್ನೇ ಸೇರುತ್ತಾರೆ. ಉತ್ತಮ ಜೀವರು ಅಪರೋಕ್ಷಜ್ಞಾನವನ್ನು ಪಡೆದು ಭಗವಂತನ ಉದರವನ್ನು ಪ್ರವೇಶಿಸುವುದರಿಂದ ದೇವತೆಗಳಿಗೆ ಸದೃಶರಾಗಿರುತ್ತಾರೆ. ದೇವಾನುದೇವತೆಗಳು, ಮನುಷ್ಯೋತ್ತಮರು ಭಗವಂತನ ಪಾದವನ್ನೇ ಹೊಂದುತ್ತಾರೆ.

ಯೇ ತು ಚ್ಯುತಾಃ ಸಿದ್ಧಲೋಕಾತ್ ಕ್ರಮೇಣ
ತೇಷಾಂ ಗತಿಂ ಯಾಂತಿ ತಥಾನುಪೂರ್ವ್ಯಾ ।
ಜೀವಾಃ ಪರೇ ತದ್ ಬಲವೇಷರೂಪಾ
ವಿಧಿಂ ಸ್ವಕಂ ಯಾಂತಿ ವಿಪರ್ಯಯೇಣ ॥೫೩॥

ಕರ್ಮಫಲವು ಮುಗಿದ ಬಳಿಕ ಸಿದ್ಧಲೋಕದಿಂದ ಚ್ಯುತರಾಗಿ ಮರ್ತ್ಯಲೋಕದಲ್ಲಿ ಹುಟ್ಟುವ ಯೋಗಿಗಳ ಸ್ಥಾನವನ್ನು, ಬಲವನ್ನು, ತೇಜಸ್ಸನ್ನು ಇತರ ಜೀವರು ಹೊಂದುತ್ತಾರೆ. ಹೀಗೆ ಜೀವರು ಫಲಾನುಭವದ ವ್ಯತ್ಯಾಸದಿಂದ ತಮ್ಮ ತಮ್ಮ ಅದೃಷ್ಟ ಸ್ಥಾನಗಳನ್ನು ಹೊಂದುತ್ತಾರೆ.

ಸ ಯಾವದೇವಾಸ್ತಿ ಸಶೇಷಭುಕ್ತಿಃ
ಪ್ರಜಾಶ್ಚ ದಿವ್ಯಾಶ್ಚ ತಥೈವ ಶುಕ್ಲೇ ।
ತಾವತ್ತದಾ ತೇಷು ವಿಶುದ್ಧಭಾವಃ
ಸಂಯಮ್ಯ ಪಂಚೇಂದ್ರಿಯರೂಪಮೇತತ್ ॥೫೪॥

ಸಾತ್ವಿಕ ಜೀವನು ಪಂಚೇಂದ್ರಿಯಗಳನ್ನು ನಿಯಮಿಸಿಕೊಂಡು, ಪ್ರಾರಬ್ಧಕರ್ಮ ಮುಗಿಯುವ ತನಕವೂ ಶುದ್ಧವಾದ ಕುಲದಲ್ಲಿ ಯೋಗ್ಯ ಪ್ರಜಾಸಂತಾನಗಳನ್ನು ನೀಡುತ್ತಾ ಭಗವತ್ತತ್ತ್ವಜ್ಞೆಯಲ್ಲೇ ದೃಢಪಡಿಸಿಕೊಂಡು ಕರ್ತವ್ಯಗಳನ್ನು ಮಾಡುತ್ತಿರಬೇಕು.

ಶುದ್ಧಾಂ ಗತಿಂ ತಾಂ ಪರಮಾಂ ಪರೈತಿ
ಶುದ್ಧೇನ ನಿತ್ಯಂ ಮನಸಾ ವಿಚಿನ್ವನ್ ।
ತತೋಽವ್ಯಯಂ ಸ್ಥಾನಮುಪೈತಿ ಬ್ರಹ್ಮ
ದುಷ್ಪ್ರಾಪಮಭ್ಯೇತಿ ಸ ಶಾಶ್ವತಂ ವೈ ।
ಇತ್ಯೇತದಾಖ್ಯಾತಮಹೀನಸತ್ತ್ವ
ನಾರಾಯಣಸ್ಯೇಹ ಬಲಂ ಮಯಾ ತೇ ॥೫೫॥

ಯಾವ ಸಾಧಕನು ನಿರಂತರ ಶುದ್ಧ ಮನಸ್ಸಿನಿಂದ ವಿಶುದ್ಧವಾದ ಭಗವತ್ತತ್ತ್ವವನ್ನು ಅನುಸಂಧಾನ ಮಾಡುತ್ತಿರುವನೋ ಅಂತಹ ಸಾಧಕನು ನಿಶ್ಚಿತವಾಗಿಯೂ ಪರಮ ಗತಿಯನ್ನು ಹೊಂದುತ್ತಾನೆ. ಯಾರಿಂದಲೂ ಸುಲಭವಾಗಿ ಹೊಂದಲಾರದ ಶಾಶ್ವತವಾದ ಸ್ಥಾನವನ್ನು ಹೊಂದುತ್ತಾನೆ. ಈ ರೀತಿಯಾಗಿ ನಾರಾಯಣನ ಬಲವನ್ನು, ಪ್ರಭಾವವನ್ನು ಮಹಾಸತ್ರನಾದ ವೃತ್ರದೈತ್ಯನೇ, ನಿನಗೆ ತಿಳಿಸಿದ್ದೇನೆ.

ವೃತ್ರಃ

ಏವಂ ಗತೇ ಮೇ ನ ವಿಷಾದೋಽಸ್ತಿ ಕಶ್ಚಿತ್
ಸಮ್ಯಕ್ಚ ಪಶ್ಯಾಮಿ ವಚಸ್ತವೈತತ್ ।
ಶ್ರುತ್ವಾ ಚ ತೇ ವಾಚಮದೀನಸತ್ತ್ವ
ವಿಕಲ್ಮಷೋಽಸ್ಮ್ಯದ್ಯ ತಥಾ ವಿಪಾಪ್ಮಾ ॥೫೬॥

ಸನತ್ಕುಮಾರನೇ, ಈ ಭಗವತ್ತತ್ತ್ವವಿಚಾರವು ಹೀಗಿರುವುದಾದಲ್ಲಿ ನನಗೆ ಉಂಟಾಗಿರುವ ದುಃಸ್ಥಿತಿಯಿಂದ ಸ್ವಲ್ಪವೂ ದುಃಖಿಸುವುದಿಲ್ಲ. ನೀನು ಹೇಳಿದ ಮಾತುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತೇನೆ. ಈ ಮಾತುಗಳ ಸತ್ಯತೆಯನ್ನು ಮನನ ಮಾಡಿದ್ದೇನೆ. ನಿನ್ನ ಮಾತುಗಳನ್ನು ಕೇಳಿಸಿಕೊಂಡು ಪಾಪರಹಿತನೂ, ಕಲ್ಮಶ ರಹಿತನೂ ಆಗಿದ್ದೇನೆ.

ಪ್ರವೃತ್ತಮೇತದ್ ಭಗವನ್ ಮಹರ್ಷೇ
ಮಹಾದ್ಯುತೇಶ್ಚಕ್ರಮನಂತವೀರ್ಯಮ್ ।
ವಿಷ್ಣೋರನಂತಸ್ಯ ಸನಾತನಂ ತತ್
ಸ್ಥಾನಂ ಸರ್ಗಾ ಯತ್ರ ಸರ್ವೇ ಪ್ರವೃತ್ತಾಃ ।
ಸ ವೈ ಮಹಾತ್ಮಾ ಪುರುಷೋತ್ತಮೋ ವೈ
ತಸ್ಮಿನ್ ಜಗತ್ ಸರ್ವಮಿದಂ ಪ್ರತಿಷ್ಠಿತಮ್ ॥೫೭॥

ಮಹರ್ಷಿಯೇ, ಮಹಾಸತ್ತ್ವಸಂಪನ್ನನಾದ, ಅನಂತನಾದ, ವ್ಯಾಪ್ತನಾದ ಭಗವಂತನ ಅಮಿತ ಶಕ್ತಿಯಿಂದ ಕೂಡಿರುವ ಈ ಜಗಚ್ಚಕ್ರವು ನಿರಂತರ ಪರಿಭ್ರಮಣ ಹೊಂದುತ್ತಿದೆ. ಸಮಸ್ತ ಜಗತ್ತು ಯಾರಿಂದ ಹುಟ್ಟನ್ನು ಪಡೆಯುತ್ತದೋ ಅದು ಮಹಾವಿಷ್ಣುವಿನ ಅನುಗ್ರಹವನ್ನೇ ಹೊಂದಿದೆ. ಮಹಾವಿಷ್ಣುವೇ ಪುರುಷೋತ್ತಮನು. ಅವನಲ್ಲಿಯೇ ಸಮಗ್ರ ಜಗತ್ತು ಪ್ರತಿಷ್ಠಿತವಾಗಿವೆ.

ಭೀಷ್ಮಃ

ಏವಮುಕ್ತ್ವಾ ಸ ಕೌಂತೇಯ ವೃತ್ರಃ ಪ್ರಾಣಾನವಾಸೃಜತ್ ।
ಯೋಜಯಿತ್ವಾ ತಥಾತ್ಮಾನಂ ಪರಂ ಸ್ಥಾನಮವಾಪ್ತವಾನ್ ॥೫೮॥

ಭೀಷ್ಮ– ಯುಧಿಷ್ಠಿರನೇ, ವೃತ್ರಾಸುರನು ಹೀಗೆ ಹೇಳಿ ಪ್ರಾಣಗಳನ್ನು ತೊರೆದನು. ಆ ಸಮಯದಲ್ಲಿ ತನ್ನ ಮನಸ್ಸಿನಲ್ಲಿ ಪರಮಾತ್ಮನನ್ನೇ ಧ್ಯಾನಿಸುತ್ತಾ ಪರಂಧಾಮವನ್ನು ಹೊಂದಿದನು.

ಯುಧಿಷ್ಠಿರಃ

ಅಯಂ ಸ ಭಗವಾನ್ ದೇವಃ ಪಿತಾಮಹ ಜನಾರ್ದನಃ ।
ಸನತ್ಕುಮಾರೋ ವೃತ್ರಾಯ ಯತ್ತದಾಖ್ಯಾತವಾನ್ ಪುರಾ ॥೫೯॥

ಯುಧಿಷ್ಠಿರ– ಪಿತಾಮಹನೇ, ಮಹಾತ್ಮನಾದ ಸನತ್ಕುಮಾರನು ವೃತ್ರಾಸುರನಿಗೆ ಯಾವ ಸ್ವರೂಪವನ್ನು ವರ್ಣಿಸಿ ಹೇಳಿದನೋ ಆ ವಿಷ್ಣುವೇ ಜನಾರ್ದನನೆನಿಸಿದ ಕೃಷ್ಣನಲ್ಲವೆ!

ಭೀಷ್ಮಃ

ಮೂಲಸ್ಥಾಯೀ ಸ ಭಗವಾನ್ ಸ್ವೇನಾನಂತೇನ ತೇಜಸಾ ।
ತತ್ಸ್ಥಃ ಸೃಜತಿ ತಾನ್ ಭಾವಾನ್ನಾನಾರೂಪಾನ್ ಮಹಾತಪಾಃ ॥೬೦॥

ಭೀಷ್ಮ– ಮೂಲರೂಪಿಯಾದ ಭಗವಾನ್ ನಾರಾಯಣನು ತನ್ನ ಅನಂತವಾದ ತೇಜಸ್ಸಿನಿಂದ ಅನಂತ ರೂಪಗಳನ್ನು ತಾಳಿ ಆ ಮೂಲರೂಪದಿಂದಲೇ ಸಮಸ್ತ ಪದಾರ್ಥ ರೂಪಗಳನ್ನು ಸೃಷ್ಟಿಸುತ್ತಾನೆ.

ತುರೀಯಾಂಶೇನ ತಸ್ಯೇಮಂ ವಿದ್ಧಿ ಕೇಶವಮಚ್ಯುತಮ್ ।
ತುರೀಯಾಂಶೇನ ಬ್ರಹ್ಮಾಣಂ ತ್ರೀನ್ ಭಾವಯತ್ಯೇಷ ಬುದ್ಧಿಮಾನ್ ॥

ತನ್ನ ನಾಲ್ಕನೆಯ ಅಂಶದಿಂದ ಹುಟ್ಟಿದ ಗುಣಪರಿಪೂರ್ಣನಾದ ಪರಬ್ರಹ್ಮನೇ ಕೃಷ್ಣನು, ಕೇಶವನು, ಅಚ್ಯುತನು. ಬುದ್ಧಿವಂತನಾದವನು ಕೃಷ್ಣನನ್ನೇ ಶ್ರೀಮನ್ನಾರಾಯಣನೆಂದು ತಿಳಿಯಬೇಕು. ಈ ಭಗವಂತನೇ ಮೂರು ಲೋಕಗಳನ್ನು ಸೃಷ್ಟಿಸುತ್ತಾನೆ.

ಅರ್ವಾಕ್ಸ್ಥಿತಸ್ತು ಯಃ ಸ್ಥಾಯೀ ಕಲ್ಪಾಂತೇ ಪರಿವರ್ತತೇ ।
ಸ ಶೇತೇ ಭಗವಾನಪ್ಸು ಯೋಽಸಾವತಿಬಲಃ ಪ್ರಭುಃ ।
ತಾನ್ ವಿಧಾತಾ ಪ್ರಸನ್ನಾತ್ಮಾ ಲೋಕಾಂಶ್ಚರತಿ ಶಾಶ್ವತಾನ್ ॥೬೨॥

ಈ ಜಗತ್ತೆಲ್ಲವೂ ಕಲ್ಪಾಂತದಲ್ಲಿ ಪುನಃ ಅವನಲ್ಲಿ ಲಯ ಹೊಂದುತ್ತದೆ. ಆ ಸಮಯದಲ್ಲಿ ಮೂಲಪುರುಷನಾದ ಭಗವಂತನು ಜಲಶಾಯಿಯಾಗಿದ್ದು ಮುಂದಿನ ಸೃಷ್ಟಿಗೆ ತಾನೇ ಬೀಜರೂಪಿಯಾಗಿರುತ್ತಾನೆ. ಪ್ರಸನ್ನಾತ್ಮನಾದ ಆ ಭಗವಂತನೇ ಸಮಸ್ತ ಲೋಕಗಳನ್ನು ವ್ಯಾಪಿಸಿರುತ್ತಾನೆ.

ಸರ್ವಾಣ್ಯಶೂನ್ಯಾನಿ ಕರೋತ್ಯನಂತಃ
ಸನಾತನಃ ಸಂಚರತೇ ಚ ಲೋಕಾನ್ ।
ಸ ಚಾನಿರುದ್ಧಃ ಸೃಜತೇ ಮಹಾತ್ಮಾ
ತತ್ಸ್ಥಂ ಜಗತ್ ಸರ್ವಮಿದಂ ವಿಚಿತ್ರಮ್ ॥೬೩॥

ಆ ಭಗವಂತನು ಸಮಸ್ತ ಪ್ರಪಂಚವನ್ನು ಲಯಗೊಳಿಸುತ್ತಾನೆ. ಲೀಲಾ ಶರೀರಗಳನ್ನು ಧರಿಸಿದ ಸನಾತನನಾದ ಭಗವಂತನು ಎಲ್ಲ ಲೋಕಗಳಲ್ಲಿ ಸಂಚರಿಸುತ್ತಾನೆ. ಅವನ ಗತಿಯನ್ನು ಯಾರಿಂದಲೂ ತಡೆಯಲಾಗದು. ಅವನೇ ಜಗತ್ತಿನ ಸೃಷ್ಟಿಕರ್ತ. ವಿಚಿತ್ರವಾದ ಜಗತ್ತೆಲ್ಲವೂ ಅವನಿಂದಲೇ ಪ್ರತಿಷ್ಠಿತವಾಗಿದೆ.

ಯುಧಿಷ್ಠಿರಃ

ವೃತ್ರೇಣ ಪರಮಾರ್ಥಜ್ಞ ದೃಷ್ಟಾ ಮನ್ಯೇऽऽತ್ಮನೋ ಗತಿಃ ।
ಶುಭಾ ತಸ್ಮಾತ್ಸ ಸುಖಿತೋ ನ ಶೋಚತಿ ಪಿತಾಮಹ ॥೬೪॥

ಯುಧಿಷ್ಠಿರ– ಪಿತಾಮಹನೇ, ವೃತ್ರಾಸುರನು ಪರಮಾತ್ಮನ ಯಥಾರ್ಥ ಸ್ವರೂಪವನ್ನು ಕಂಡುಕೊಂಡನು. ಆದ್ದರಿಂದಲೇ ಅವನು ಪರಮಸುಖಿಯಾದನು. ತನಗೆ ಬಂದ ಪರಾಭವಕ್ಕೆ ದುಃಖಿಸಲಿಲ್ಲ. ಹೀಗೆಂದು ನಾನು ಚಿಂತಿಸುತ್ತೇನೆ.

ಶುಕ್ಲಃ ಶುಕ್ಲಾಭಿಜಾತೀಯಃ ಸಾಧ್ಯೋ ನಾವರ್ತತೇऽನಘ ।
ತಿರ್ಯಗ್ಗತೇಶ್ಚ ನಿರ್ಮುಕ್ತೋ ನಿರಯಾಚ್ಚ ಪಿತಾಮಹ ॥೬೫॥

ಪಿತಾಮಹನೇ, ವೃತ್ರಾಸುರನು ಶುದ್ಧಕುಲದಲ್ಲಿ ಹುಟ್ಟಿದವನು. ಸ್ವಭಾವದಿಂದಲೂ ಪರಿಶುದ್ಧನು. ಸಾಧ್ಯ ಎಂಬ ದೇವತೆಯು. ಅವನು ಪಶು-ಪಕ್ಷಿಗಳ ಯೋನಿಯಿಂದಲೂ ನರಕದಿಂದಲೂ ಮುಕ್ತನಾಗಿ ಪುನಃ ಈ ಪ್ರಪಂಚಕ್ಕೆ ಆಗಮಿಸಲಿಲ್ಲ.

ಹಾರಿದ್ರವರ್ಣೇ ರಕ್ತೇ ವಾ ವರ್ತಮಾನಸ್ತು ಪಾರ್ಥಿವ ।
ತಿರ್ಯಗೇವಾನುಪಶ್ಯೇತ ಕರ್ಮಭಿಸ್ತಾಮಸೈರ್ವೃತಃ ॥೬೬॥

ಹಳದಿಬಣ್ಣದವನು, ರಕ್ತ ವರ್ಣದವನು ಕೆಲವು ಬಾರಿ ತಾಮಸವಾದ ಕರ್ಮಗಳಿಂದ ಆವೃತನಾಗಿ ತಿರ್ಯಗ್ಯೋನಿಗಳನ್ನು ಕಾಣಬೇಕಾಗುತ್ತದೆ. ಅರ್ಥಾತ್ ರಾಜಸರು ಪ್ರಾಣಿಗಳಾಗಿ ಹುಟ್ಟಬೇಕಾಗುತ್ತದೆ.

ವಯಂ ತು ಭೃಶಮಾಪನ್ನಾ ರಕ್ತಾಃ ಕಷ್ಟಮುಖೇऽಸುಖೇ ।
ಕಾಂ ಗತಿಂ ಪ್ರತಿಪತ್ಸ್ಯಾಮೋ ನೀಲಾಂ ಕೃಷ್ಣಾಧಮಾಮಥ ॥೬೭॥

ನಾವಾದರೂ ತುಂಬಾ ಆಪತ್ತಿಗೆ ತುತ್ತಾಗಿದ್ದೇವೆ. ಸುಖಕ್ಕಿಂತ ಅಧಿಕವಾದ ದುಃಖದಲ್ಲೇ ಮಗ್ನರಾಗಿದ್ದೇವೆ. ಇಂತಹ ನಾವು ನೀಲವರ್ಣದ ಮನುಷ್ಯ

ಯೋನಿಯಲ್ಲಿ ಹುಟ್ಟುತ್ತೇವೋ, ಕೃಷ್ಣವರ್ಣದ ಅಧಮ ಯೋನಿಗಳಲ್ಲೇ ಹುಟ್ಟುತ್ತೇವೋ ತಿಳಿಯದಾಗಿದೆ.

ಭೀಷ್ಮಃ

ಶುದ್ಧಾಭಿಜನಸಂಪನ್ನಾಃ ಪಾಂಡವಾಃ ಸಂಶಿತವ್ರತಾಃ ।
ವಿಹೃತ್ಯ ದೇವಲೋಕೇಷು ಪುನರ್ಮಾನುಷ್ಯಮೇಷ್ಯಥ ॥೬೮॥

ಭೀಷ್ಮ– ಯುಧಿಷ್ಠಿರನೇ, ಪಾಂಡುಸುತರಾದ ನೀವು ವಿಶುದ್ಧವಾದ ಕುಲದಲ್ಲಿ ಹುಟ್ಟಿದ್ದೀರಿ. ಕಠೋರ ವ್ರತನಿಷ್ಠರಾಗಿದ್ದೀರಿ. ಆದ್ದರಿಂದ ಅವಸಾನದ ಬಳಿಕ ದೇವಲೋಕದಲ್ಲಿ ವಿಹರಿಸಿ, ಪುನಃ ಉತ್ತಮ ಮನುಷ್ಯಜನ್ಮವನ್ನೇ ತಾಳುತ್ತೀರಿ.

ಪ್ರಜಾವಿಸರ್ಗಂ ಚ ಸುಖೇನ ಕಾಲೇ
ಪ್ರತ್ಯೇತ್ಯ ದೇವೇಷು ಸುಖಾನಿ ಭುಕ್ತ್ವಾ ।
ಸುಖೇನ ಸಂಯಾಸ್ಯಥ ಸಿದ್ಧಸಂಖ್ಯಾಂ
ಮಾ ವೋ ಭಯಂ ಭೂದ್ ವಿಮಲಾಃ ಸ್ಥ ಸರ್ವೇ ॥೬೯॥

ನೀವು ಸ್ವಲ್ಪ ಕಾಲದ ಬಳಿಕ ಸುಖವಾಗಿ ಮನುಷ್ಯಲೋಕದಲ್ಲಿ ವಾಸ ಮಾಡಿದ್ದು ಬಳಿಕ ದೇವಲೋಕಕ್ಕೆ ಹೋಗಿ ಬಹುಬಗೆಯಾದ ಸುಖವನ್ನು ಅನುಭವಿಸುತ್ತೀರಿ. ಪುನಃ ಸುಖದಿಂದಲೇ ಸಿದ್ಧಿಯನ್ನು ಹೊಂದಿ ಸಿದ್ಧರೆಂದೇ ಕರೆಸಿಕೊಳ್ಳುತ್ತೀರಿ. ದುರ್ಗತಿ ಲಭಿಸುವುದೆಂದು ಆತಂಕಪಡಬೇಕಾಗಿಲ್ಲ. ನಿರ್ಮಲ ನಿಷ್ಪಾಪರಾಗಿದ್ದೀರಿ. ಆದ್ದರಿಂದ ನಿಮಗೆಂದೂ ದುರ್ಗತಿಯು ಒದಗದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತುರ್ದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

॥ ವೃತ್ರಗೀತಾ ಸಮಾಪ್ತಾ ॥

★ ★ ★ ★ ★

ನೂರ ಹದಿನೈದನೆಯ ಅಧ್ಯಾಯ

ಇಂದ್ರ-ವೃತ್ರರ ಯುದ್ಧದ ವರ್ಣನೆ.

ಯುಧಿಷ್ಠಿರಃ

ಅಹೋ ಧರ್ಮಿಷ್ಠತಾ ತಾತ ವೃತ್ರಸ್ಯಾಮಿತತೇಜಸಃ ।
ಯಸ್ಯ ವಿಜ್ಞಾನಮತುಲಂ ವಿಷ್ಣೋರ್ಭಕ್ತಿಶ್ಚ ತಾದೃಶೀ ॥೧॥

ಯುಧಿಷ್ಠಿರ– ಪಿತಾಮಹನೇ, ವೃತ್ರಾಸುರನ ಧರ್ಮಾಸಕ್ತಿಯು ಆಶ್ಚರ್ಯಕರವಾದುದು. ಅವನಲ್ಲಿರುವ ಬ್ರಹ್ಮಜ್ಞಾನವು, ದೃಢವಾದ ವಿಷ್ಣುಭಕ್ತಿಯು, ನಿಷ್ಠೆಯು ಅಸದೃಶವಾದುದು.

ದುರ್ವಿಜ್ಞೇಯಮಿದಂ ತಾತ ವಿಷ್ಣೋರಮಿತತೇಜಸಃ ।
ಕಥಂ ವಾ ರಾಜಶಾರ್ದೂಲ ಪದಂ ತಜ್ಜ್ಞಾತವಾನಸೌ ॥೨॥

ಅಮಿತವಾದ ತೇಜಸ್ಸುಳ್ಳ ವಿಷ್ಣುವಿನ ಮಹಿಮೆಯನ್ನು ತಿಳಿಯುವುದೇ ಮಹಾಕಷ್ಟಕರವಾದುದು. ಹೀಗಿರುವಾಗ ದೈತ್ಯನಾದ ವೃತ್ರಾಸುರನು ಆ ವಿಷ್ಣುವಿನ ಮಹಿಮೆಯನ್ನು ಹೇಗೆ ತಿಳಿದನು?

ಭವತಾ ಕಥಿತಂ ಹ್ಯೇತಚ್ಛ್ರದ್ದಧೇ ಚಾಹಮಚ್ಯುತ ।
ಭೂಯಸ್ತು ಮೇ ಸಮುತ್ಪನ್ನಾ ಬುದ್ಧಿರವ್ಯಕ್ತದರ್ಶನಾತ್ ॥೩॥

ವೃತ್ರಾಸುರನ ಅದ್ಭುತ ಕಾರ್ಯವನ್ನೆಲ್ಲ ನೀನು ತಿಳಿಸಿರುವಿ. ಅದನ್ನೂ ನಾನು ವಿಶ್ವಾಸದಿಂದ ತಿಳಿದುಕೊಂಡಿದ್ದೇನೆ. ಆದರೆ ನೀನು ಹೇಳಿದ ವಿಷಯದಲ್ಲಿ ನನಗೆ ಒಂದು ಸಂದೇಹ ಉಂಟಾಗಿದೆ.

ಕಥಂ ವಿನಿಹತೋ ವೃತ್ರಃ ಶಕ್ರೇಣ ಭರತರ್ಷಭ ।
ಧರ್ಮಿಷ್ಠೋ ವಿಷ್ಣುಭಕ್ತಶ್ಚ ತತ್ತ್ವಜ್ಞಶ್ಚ ಪದಾನ್ವಯೇ ॥೪॥

ಮಹಾತ್ಮನಾದ ವೃತ್ರಾಸುರನನ್ನು ಇಂದ್ರನು ಏಕೆ ಕೊಂದನು? ವೃತ್ರಾಸುರನು ಧಾರ್ಮಿಕನಾಗಿಯೂ, ವಿಷ್ಣುಭಕ್ತನಾಗಿಯೂ, ತತ್ತ್ವಜ್ಞನೂ ಆದ ಬಳಿಕ ಇಂದ್ರನು ಕೊಲ್ಲುವುದು ಎಷ್ಟು ಉಚಿತ?

ಏತನ್ಮೇ ಸಂಶಯಂ ಬ್ರೂಹಿ ಪೃಚ್ಛತೋ ಭರತರ್ಷಭ ।
ವೃತ್ರಸ್ತು ರಾಜಶಾರ್ದೂಲ ಯಥಾ ಶಕ್ರೇಣ ನಿರ್ಜಿತಃ ॥೫॥

ನನ್ನ ಈ ಸಂಶಯವನ್ನು ನೀನು ಪರಿಹರಿಸಬೇಕು. ಇಂದ್ರ-ವೃತ್ರರಿಗೆ ನಡೆದ ಯುದ್ಧದ ವಿಷಯವನ್ನು ತಿಳಿಯಬೇಕೆಂದು ನನಗೆ ಕುತೂಹಲವುಂಟಾಗಿದೆ.

ಯಥಾ ಚೈವಾಭವದ್ ಯುದ್ಧಂ ತಚ್ಚಾಚಕ್ಷ್ವ ಪಿತಾಮಹ ।
ವಿಸ್ತರೇಣ ಮಹಾಬಾಹೋ ಪರಂ ಕೌತೂಹಲಂ ಹಿ ಮೇ ॥೬॥

ಅವರೀರ್ವರಿಗೆ ಯುದ್ಧವು ಹೇಗೆ ನಡೆಯಿತು ಎಂಬುದನ್ನು ತಾತನೇ, ನನಗೆ ತಿಳಿಸು. ಈ ವಿಷಯದಲ್ಲಿ ನನಗೆ ಬಹಳವಾದ ಕುತೂಹಲವುಂಟಾಗಿದೆ. ಮಹಾಬಾಹುವೇ, ಕಥೆಯನ್ನು ವಿಸ್ತರಿಸು.

ಭೀಷ್ಮಃ

ರಥೇನೇಂದ್ರಃ ಪ್ರಯಾತೋ ವೈ ಸಾರ್ಧಂ ಸುರಗಣೈಃ ಪುರಾ ।
ದದರ್ಶಾಥಾಗ್ರತೋ ವೃತ್ರಂ ವಿಷ್ಠಿತಂ ಪರ್ವತೋಪಮಮ್ ॥೭॥

ಭೀಷ್ಮ- ಧರ್ಮಪುತ್ರನೇ, ಇಂದ್ರನು ತನ್ನ ಸೇನೆಯೊಂದಿಗೆ ಸೇರಿಕೊಂಡು, ರಥವನ್ನೇರಿ ವೃತ್ರಾಸುರನ ಮೇಲೆ ಯುದ್ಧಕ್ಕೆ ಹೋದಾಗ ಇಂದ್ರನು ಪರ್ವತದಂತೆ ಎತ್ತರವುಳ್ಳಂತಹ ವೃತ್ರಾಸುರನನ್ನು ತನ್ನ ಎದುರಿನಲ್ಲಿ ಕಂಡನು.

ಯೋಜನಾನಾಂ ಶತಾನ್ಯೂರ್ಧ್ವಂ ಪಂಚೋಚ್ಛ್ರಿತಮರಿಂದಮ ।
ಶತಾನಿ ವಿಸ್ತರೇಣಾಥ ತ್ರೀಣ್ಯೇವಾಭ್ಯಧಿಕಾನಿ ತು ॥೮॥

ವೃತ್ರಾಸುರನಾದರೂ ಐದುನೂರು ಯೋಜನಗಳ ಎತ್ತರ, ಮುನ್ನೂರು ಯೋಜನಗಳ ವಿಸ್ತಾರವಾಗಿ ಬೆಳೆದು ನಿಂತಿದ್ದನು.

ತತ್ ಪ್ರೇಕ್ಷ್ಯ ತಾದೃಶಂ ರೂಪಂ ತ್ರೈಲೋಕ್ಯೇನಾಪಿ ದುರ್ಜಯಮ್ ।
ವೃತ್ರಸ್ಯ ದೇವಾಃ ಸಂತ್ರಸ್ತಾ ನ ಶಾಂತಿಮುಪಲೇಭಿರೇ ॥೯॥

ಇಂತಹ ಪರ್ವತಾಕಾರದ ದೈತ್ಯನನ್ನು ಕಂಡ ಕೂಡಲೇ ದೇವತಾ ಸೈನ್ಯವೆಲ್ಲವೂ ಮೂರು ಲೋಕದಿಂದಲೂ ಇವನನ್ನು ಜಯಿಸಲಾರೆವೆಂದು ತಿಳಿದು ಭಯದಿಂದ ನಡುಗಿ ಹೋಯಿತು. ಶಾಂತಿಯನ್ನು ಕಳೆದುಕೊಂಡಿತು.

ಶಕ್ರಸ್ಯ ತು ತದಾ ರಾಜನೂರುಸ್ತಂಭೋ ವ್ಯಜಾಯತ ।
ಭಯಾದ್‌ವೃತ್ರಸ್ಯ ಸಹಸಾ ದೃಷ್ಟ್ವಾ ತದ್ರೂಪಮುತ್ತಮಮ್ ॥೧೦॥

ಇಂದ್ರನಿಗೂ ಆ ವೃತ್ರಾಸುರನ ರೂಪವನ್ನು ಕಂಡು ಭಯದಿಂದ ಅವನ ತೊಡೆಗಳೆರಡು ಮರಗಟ್ಟಿದವು. ಹಾಗಿದ್ದರೂ ದೇವಸೈನ್ಯವನ್ನು ಹಿಡಿದು ಧೈರ್ಯದಿಂದ ಯುದ್ಧಕ್ಕೆ ಮುಂದಾದನು.

ತತೋ ನಾದಃ ಸಮಭವದ್ ವಾದಿತ್ರಾಣಾಂ ಚ ನಿಸ್ವನಃ ।
ದೇವಾಸುರಾಣಾಂ ಸರ್ವೇಷಾಂ ತಸ್ಮಿನ್ ಯುದ್ಧ ಉಪಸ್ಥಿತೇ ॥೧೧॥

ರಣವಾದ್ಯಗಳು ಮೊಳಗಿದವು. ಯುದ್ಧದ ಗದ್ದಲವು ಹೆಚ್ಚಾಯಿತು. ಇಂದ್ರನು ಅಸುರರ ಜೊತೆಗೆ ಯುದ್ಧಕ್ಕಾಗಿ ನಿಲ್ಲಲು ಗದ್ದಲವು ಮುಗಿಲು ಮುಟ್ಟಿತ್ತು.

ಅಥ ವೃತ್ರಸ್ಯ ಕೌರವ್ಯ ದೃಷ್ಟ್ವಾ ಶಕ್ರಮುಪಸ್ಥಿತಮ್ ।
ನ ಸಂಭ್ರಮೋ ನ ಭೀಃ ಕಾಚಿದಾಸ್ಥಾ ವಾ ಸಮಜಾಯತ ॥೧೨॥

ಇಂದ್ರನು ಮಹತ್ತಾದ ಸೈನ್ಯವನ್ನು ಹೊಂದಿ ಬಂದಿರುವ ದೃಶ್ಯವನ್ನು ಕಂಡು ವೃತ್ರನಿಗೆ ಭಯವಾಗಲಿ, ಕಳವಳವಾಗಲಿ, ಯುದ್ಧ ಮಾಡಬೇಕೆಂಬ ಆತುರವಾಗಲಿ ಉಂಟಾಗಲಿಲ್ಲ, ಅಲಕ್ಷಿಸಿದನು.

ತತಃ ಸಮಭವದ್ ಯುದ್ಧಂ ತ್ರೈಲೋಕ್ಯಸ್ಯ ಭಯಂಕರಮ್ ।
ಶಕ್ರಸ್ಯ ಚ ಸುರೇಂದ್ರಸ್ಯ ವೃತ್ರಸ್ಯ ಚ ಮಹಾತ್ಮನಃ ॥೧೩॥

ಅವರೀರ್ವರಿಗೂ ಭಯಂಕರವಾದ ಯುದ್ಧವು ಉಂಟಾಯಿತು. ತ್ರಿಲೋಕ ಭಯಂಕರವೆನಿಸಿದ ಯುದ್ಧವು ವೃತ್ರ-ಇಂದ್ರರ ನಡುವೆ ಉಂಟಾಯಿತು.

ಅಸಿಭಿಃ ಪಟ್ಟಿಶೈಃ ಶೂಲೈಃ ಶಕ್ತಿತೋಮರಮುದ್ಗರೈಃ ।
ಶಿಲಾಭಿರ್ವಿವಿಧಾಭಿಶ್ಚ ಕಾರ್ಮುಕೈಶ್ಚ ಮಹಾಸ್ವನೈಃ ॥೧೪॥

ಅಸುರರು ಕತ್ತಿ, ಪಟ್ಟಸ, ಶೂಲ, ಶಕ್ತಿ, ತೋಮರ, ಮುದ್ಗರ ಮುಂತಾದ ಆಯುಧಗಳನ್ನೂ, ಕಲ್ಲುಗಳನ್ನೂ, ಬಾಣಗಳನ್ನೂ ಶಬ್ದಮಾಡುತ್ತಾ ದೇವಸೈನ್ಯದ ಮೇಲೆ ಎಸೆದರು.

ಅಸ್ತ್ರೈಶ್ಚ ವಿವಿಧೈರ್ದಿವ್ಯೈಃ ಪಾವಕೋಲ್ಕಾಭಿರೇವ ಚ ।
ದೇವಾಸುರೈಸ್ತತಃ ಸೈನ್ಯೈಃ ಸರ್ವಮಾಸೀತ್ ಸಮಾಕುಲಮ್ ॥೧೫॥

ನಾನಾ ವಿಧವಾದ ದಿವ್ಯವಾದ ಅಸ್ತ್ರಗಳಿಂದ, ಬೆಂಕಿಯನ್ನುಗುಳುವ ಬಾಣಗಳಿಂದ ದೇವಾಸುರರ ಸೈನ್ಯದಲ್ಲಿ ಭಯಂಕರವಾದ ಯುದ್ಧವು ಏರ್ಪಟ್ಟಿತು.

ಪಿತಾಮಹಪುರೋಗಾಶ್ಚ ಸರ್ವೇ ದೇವಗಣಾಸ್ತಥಾ ।
ಋಷಯಶ್ಚ ಮಹಾಭಾಗಾಸ್ತದ್ಯುದ್ಧಂ ದ್ರಷ್ಟುಮಾಗಮನ್ ॥೧೬॥

ಬ್ರಹ್ಮಾದಿ ದೇವತೆಗಳು, ದೇವರ್ಷಿಗಳು ವಿಮಾನದಲ್ಲಿ ಕುಳಿತು ಯುದ್ಧವನ್ನು ನೋಡಲು ಆಗಮಿಸಿದರು.

ವಿಮಾನಾಗ್ರ್ಯೈರ್ಮಹಾರಾಜ ಸಿದ್ಧಾಶ್ಚ ಭರತರ್ಷಭ ।
ಗಂಧರ್ವಾಶ್ಚ ವಿಮಾನಾಗ್ರ್ಯೈರಪ್ಸರೋಭಿಃ ಸಮಾಗಮನ್ ॥೧೭॥

ಇದರಂತೆ ಶ್ರೇಷ್ಠವಾದ ವಿಮಾನಗಳಲ್ಲಿ ಸಿದ್ಧರು, ಗಂಧರ್ವರು ಅಪ್ಸರೆಯರಿಂದ ಸಹಿತರಾಗಿ ಯುದ್ಧವನ್ನು ನೋಡಲು ಕುತೂಹಲದಿಂದ ಆಗಮಿಸಿದರು.

ತತೋಽಂತರಿಕ್ಷಮಾವೃತ್ಯ ವೃತ್ರೋ ಧರ್ಮಭೃತಾಂ ವರಃ ।
ಅಶ್ಮವರ್ಷೇಣ ದೇವೇಂದ್ರಂ ಪರ್ವತಾತ್ ಸಮವಾಕಿರತ್ ॥೧೮॥

ಬಳಿಕ ವೃತ್ರನು ಅಂತರಿಕ್ಷವನ್ನು ಆವರಿಸಿ ಇಂದ್ರನ ಸುತ್ತಲು ಕಲ್ಲಿನ ಮಳೆಯನ್ನು ಸುರಿಸಿ ಇಂದ್ರನನ್ನು ಮುಚ್ಚಿದನು.

ತತೋ ದೇವಗಣಾಃ ಕ್ರುದ್ಧಾಃ ಸರ್ವತಃ ಶಸ್ತ್ರವೃಷ್ಟಿಭಿಃ ।
ಅಶ್ಮವರ್ಷಮಪೋಹಂತ ವೃತ್ರಪ್ರೇರಿತಮಾಹವೇ ॥೧೯॥

ದೇವತಾಸಮುದಾಯವು ಸಿಟ್ಟಾಗಿ ಅನೇಕ ಶಸ್ತ್ರದ ಮಳೆಗಳನ್ನು ಸುರಿಸಿ, ಅವನು ಸುರಿಸಿದ ಕಲ್ಲಿನ ಮಳೆಯ ರಾಶಿಯನ್ನು ಮುರಿದು ಕೆಡವಿದರು.

ವೃತ್ರಶ್ಚ ಕುರುಶಾರ್ದೂಲ ಮಹಾಮಾಯೋ ಮಹಾಬಲಃ ।
ಮೋಹಯಾಮಾಸ ದೇವೇಂದ್ರಂ ಮಾಯಾಯುದ್ಧೇನ ಸರ್ವತಃ ॥೨೦॥

ಬಳಿಕ ಮಾಯಾವಿಯಾದ ವೃತ್ರನು ಮಾಯಾಯುದ್ಧವನ್ನು ಆರಂಭಿಸಿದನು. ಇದರಿಂದ ದೇವೇಂದ್ರನು ದಿಗ್ಭ್ರಮೆ ಹೊಂದಿದನು.

ತಸ್ಯ ವೃತ್ರಾರ್ದಿತಸ್ಯಾಥ ಮೋಹ ಆಸೀಚ್ಛತಕ್ರತೋಃ ।
ರಥಂತರೇಣ ತಂ ತತ್ರ ವಸಿಷ್ಠಃ ಸಮಬೋಧಯತ್ ॥೨೧॥

ಕೂಡಲೇ ವಸಿಷ್ಠನು ಸಾಮಮಂತ್ರಗಳಿಂದ ದಿಗ್ಭ್ರಾಂತನಾಗಿ ಮೂರ್ಛೆಗೊಂಡಿರುವ ಇಂದ್ರನನ್ನು ಎಚ್ಚರಗೊಳಿಸಿ ಯುದ್ಧಕ್ಕೆ ಪ್ರೋತ್ಸಾಹವನ್ನು ನೀಡಿದನು.

ವ್ಯಾಖ್ಯಾನ ವಿಶೇಷ– ರಥಂತರ ಎಂಬ ಸಾಮಮಂತ್ರವು ಮೂರ್ಛೆಯಿಂದ ಎಚ್ಚರಗೊಳಿಸುವ ಮಂತ್ರವೆನಿಸಿದೆ.

ವಸಿಷ್ಠಃ

ದೇವಶ್ರೇಷ್ಠೋಽಸಿ ದೇವೇಂದ್ರ ಸುರಾರಿವಿನಿಬರ್ಹಣ ।
ತ್ರೈಲೋಕ್ಯಬಲಸಂಯುಕ್ತಃ ಕಸ್ಮಾಚ್ಛಕ್ರ ವಿಷೀದಸಿ ॥೨೨॥

ವಸಿಷ್ಠ– ಮಹೇಂದ್ರನೇ, ನೀನು ದೇವತೆಗಳಿಗೆಲ್ಲ ನಾಯಕನಾಗಿರುವಿ. ದೈತ್ಯರನ್ನು, ರಾಕ್ಷಸರನ್ನು ಸಂಹರಿಸಲು ನೀನೊಬ್ಬನೇ ಸಮರ್ಥನು. ಮೂರುಲೋಕದ ಸಮಸ್ತರ ಶೌರ್ಯವು ನಿನ್ನಲ್ಲಿ ನೆಲೆಗೊಂಡಿದೆ. ನೀನೇಕೆ ದುಃಖ ಪಡುತ್ತಿದ್ದಿ?

ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಶ್ಚೈವ ಜಗತ್ಪ್ರಭುಃ ।
ಸೋಮಶ್ಚ ಭಗವಾನ್‌ದೇವಃ ಸರ್ವೇ ಚ ಪರಮರ್ಷಯಃ ॥೨೩॥

ಅಲ್ಲಿ ನೋಡು, ಬ್ರಹ್ಮ-ವಿಷ್ಣು-ಶಿವ-ಪೂಜ್ಯನಾದ ಸೋಮ, ಮಹರ್ಷಿಗಳು, ದೇವತೆಗಳು ಎಲ್ಲರೂ ನಿನ್ನ ಹಿತಚಿಂತಕರಾಗಿದ್ದಾರೆ.

ಮಾ ಕಾರ್ಷೀಃ ಕಶ್ಮಲಂ ಶಕ್ರ ಕಶ್ಚಿದೇವೇತರೋ ಯಥಾ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ಜಹಿ ಶತ್ರುಂ ಸುರೇಶ್ವರ ॥೨೪॥

ಹೃದಯದಲ್ಲಿ ದುಃಖದ ಕಶ್ಮಲವನ್ನು ಹೊಂದಬೇಡ. ಮನುಷ್ಯರಂತೆ ಎದೆಗುಂದುವುದು ನಿನಗೆ ತರವಲ್ಲ. ಧೀರನಾಗಿ ನಿಂತು ಯುದ್ಧದಲ್ಲಿ ಶತ್ರುವನ್ನು ನಿಗ್ರಹಿಸು.

ಏಷ ಲೋಕಗುರುಸ್ತ್ರ್ಯಕ್ಷಃ ಸರ್ವಲೋಕನಮಸ್ಕೃತಃ ।
ನಿರೀಕ್ಷತೇ ತ್ವಾಂ ಭಗವಾಂಸ್ತ್ಯಜ ಮೋಹಂ ಸುರೇಶ್ವರ ॥೨೫॥

ಅಲ್ಲಿ ನೋಡು. ಲೋಕಗುರುವಾದ ತ್ರಿನೇತ್ರನು ನಿನ್ನನ್ನು ಕರುಣಾದೃಷ್ಟಿಯಿಂದ ನೋಡುತ್ತಿದ್ದಾನೆ. ಸರ್ವಲೋಕ ನಮಸ್ಕೃತನಾದ ಅವನನ್ನು ಕಂಡು, ಮೋಹವನ್ನು ತ್ಯಜಿಸಿ ನೀನು ಯುದ್ಧವನ್ನು ಮಾಡುವುದನ್ನು ನಿನ್ನ ಗುರುವು ನಿರೀಕ್ಷಿಸುತ್ತಿದ್ದಾನೆ.

ಏತೇ ಬ್ರಹ್ಮರ್ಷಯಶ್ಚೈವ ಬೃಹಸ್ಪತಿಪುರೋಗಮಾಃ ।
ಸ್ತವೇನ ಶಕ್ರ ದಿವ್ಯೇನ ಸ್ತುವಂತಿ ತ್ವಾಂ ಜಯಾಯ ವೈ ॥೨೬॥

ಬೃಹಸ್ಪತಿಯೇ ಮೊದಲಾದ ಬ್ರಹ್ಮರ್ಷಿಗಳು ನಿನಗೆ ಜಯವನ್ನು ಬಯಸಿ ಸ್ತೋತ್ರ ಮಾಡುತ್ತಿದ್ದಾರೆ ಎಂದು ವಸಿಷ್ಠರು ಹೇಳಿದರು.

ಭೀಷ್ಮಃ

ಏವಂ ಸಂಬೋದ್ಧ್ಯಮಾನಸ್ಯ ವಸಿಷ್ಠೇನ ಮಹಾತ್ಮನಾ ।
ಅತೀವ ವಾಸವಸ್ಯಾಸೀದ್ ಬಲಮುತ್ತಮತೇಜಸಃ ॥೨೭॥

ಭೀಷ್ಮ– ಈ ರೀತಿಯಾಗಿ ಮಹಾತ್ಮರಾದ ವಸಿಷ್ಠರು ಇಂದ್ರನನ್ನು ಸಂಬೋಧಿಸಿ ಪ್ರೋತ್ಸಾಹಿಸಿದಾಗ ಇಂದ್ರನಿಗೆ ಹೊಸ ವೀರ್ಯ-ಉತ್ಸಾಹಗಳು ಉಂಟಾದಂತಾದವು.

ತತೋ ಬುದ್ಧಿಮುಪಾಗಮ್ಯ ಭಗವಾನ್ ಪಾಕಶಾಸನಃ ।
ಯೋಗೇನ ಮಹತಾ ಯುಕ್ತಸ್ತಾಂ ಮಾಯಾಂ ವ್ಯಪಕರ್ಷತ ॥೨೮॥

ಕೂಡಲೇ ತನ್ನ ಬುದ್ಧಿಯೋಗವನ್ನಾಶ್ರಯಿಸಿ, ಜಾಣತನದಿಂದ, ಶ್ರೇಷ್ಠವಾದ ಉಪಾಯದಿಂದ ವೃತ್ರಾಸುರನ ಮಾಯೆಯನ್ನು ಪರಿಹರಿಸಿದನು.

ತತೋಽಂಗಿರಃಸುತಃ ಶ್ರೀಮಾಂಸ್ತೇ ಚೈವ ಪರಮರ್ಷಯಃ ।
ದೃಷ್ಟ್ವಾ ವೃತ್ರಸ್ಯ ವಿಕ್ರಾಂತಮುಪಗಮ್ಯ ಮಹೇಶ್ವರಮ್ ।
ಊಚುರ್ವೃತ್ರವಿನಾಶಾರ್ಥಂ ಲೋಕಾನಾಂ ಹಿತಕಾಮ್ಯಯಾ ॥೨೯॥

ಈ ಮಧ್ಯೆ ಬೃಹಸ್ಪತಿಯು ಮತ್ತು ಕೆಲವು ಮಹರ್ಷಿಗಳು ರುದ್ರನ ಬಳಿಗೆ ಹೋಗಿ ಲೋಕಹಿತಕ್ಕಾಗಿ ಈಗಲೇ ವೃತ್ರನನ್ನು ಸಂಹರಿಸಬೇಕೆಂದು ಪ್ರಾರ್ಥಿಸಿದರು.

ತತೋ ಭಗವತಸ್ತೇಜೋ ಜ್ವರೋ ಭೂತ್ವಾ ಜಗತ್ಪತೇಃ ।
ಸಮಾವಿಶನ್ ಮಹಾರೌದ್ರಂ ವೃತ್ರಂ ದೈತ್ಯವರಂ ತದಾ ॥೩೦॥

ಕೂಡಲೇ ಪೂಜ್ಯನಾದ ರುದ್ರದೇವರ ತೇಜಸ್ಸು ಜ್ವರದ ರೂಪವನ್ನು ತಾಳಿ ವೃತ್ರನ ದೇಹದಲ್ಲಿ ಪ್ರವೇಶ ಹೊಂದಿತು.

ವಿಷ್ಣುಶ್ಚ ಭಗವಾನ್ ದೇವಃ ಸರ್ವಲೋಕಾಭಿಪೂಜಿತಃ ।
ಐಂದ್ರಂ ಸಮಾವಿಶದ್ ವಜ್ರಂ ಲೋಕಸಂರಕ್ಷಣೇ ರತಃ ॥೩೧॥

ಇದೇ ಪ್ರಸಂಗದಲ್ಲಿ ವಿಷ್ಣುವು ಲೋಕದ ಹಿತದ ದೃಷ್ಟಿಯಿಂದ ಇಂದ್ರನ ವಜ್ರಾಯುಧದಲ್ಲಿ ತಾನೇ ಪ್ರವೇಶವನ್ನು ಹೊಂದಿದನು.

ತತೋ ಬೃಹಸ್ಪತಿರ್ಧೀಮಾನುಪಾಗಮ್ಯ ಶತಕ್ರತುಮ್ ।
ವಸಿಷ್ಠಶ್ಚ ಮಹಾತೇಜಾಃ ಸರ್ವೇ ಚ ಪರಮರ್ಷಯಃ ॥೩೨॥

ನಂತರ ಬೃಹಸ್ಪತಿಯು, ವಸಿಷ್ಠನು, ಇತರ ಮಹರ್ಷಿಗಳು ಇಂದ್ರನ ಬಳಿ ಬಂದು ಒಂದೇ ಅಭಿಪ್ರಾಯದಿಂದ ಹೀಗೆ ಹೇಳಿದರು.

ತೇ ಸಮಾಸಾದ್ಯ ವರದಂ ವಾಸವಂ ಲೋಕಪೂಜಿತಮ್ ।
ಊಚುರೇಕಾಗ್ರಮನಸೋ ಜಹಿ ವೃತ್ರಮಿತಿ ಪ್ರಭೋ ॥೩೩॥

ಲೋಕಪೂಜಿತನಾದ, ವರದನಾದ ವಾಸವನ ಬಳಿ ಅವರೆಲ್ಲರೂ ಬಂದು ಇಂದ್ರನೇ, ವೃತ್ರಾಸುರನನ್ನು ಕೊಲ್ಲು ಎಂದು ಹೇಳಿದರು.

ಮಹೇಶ್ವರಃ

ಏಷ ವೃತ್ರೋ ಮಹಾನ್ ಶಕ್ರ ಬಲೇನ ಮಹತಾ ವೃತಃ ।
ವಿಶ್ವಾತ್ಮಾ ಸರ್ವಗಶ್ಚೈವ ಬಹುಮಾಯಶ್ಚ ವಿಶ್ರುತಃ ॥೩೪॥

ಮಹೇಶ್ವರ– ಇಂದ್ರನೇ, ಮಹಾಪ್ರಬಲನಾದ ವೃತ್ರಾಸುರನು ಮಹತ್ತರವಾದ ಸೇನಾಬಲದಿಂದ ಕೂಡಿದ್ದಾನೆ. ಅಲ್ಲದೆ ಅವನು ಕಾಮರೂಪಿಯಾಗಿದ್ದಾನೆ. ಕಾಮಚಾರಿಯಾಗಿದ್ದಾನೆ. ಅನೇಕ ಮಾಯೆಗಳನ್ನು ಬಲ್ಲವನಾಗಿದ್ದಾನೆ.

ತದೇನಮಸುರಶ್ರೇಷ್ಠಂ ತ್ರೈಲೋಕ್ಯೇನಾಪಿ ದುರ್ಜಯಮ್ ।
ಜಹಿ ತ್ವಂ ಯೋಗಮಾಸ್ಥಾಯ ಮಾವಮಂಸ್ಥಾಃ ಸುರೇಶ್ವರ ॥೩೫॥

ಮೂರುಲೋಕಗಳೂ ಒಟ್ಟಾದರೂ ಅವನನ್ನು ಮಣಿಸಲು ಸಾಧ್ಯವಿಲ್ಲ. ಆದ್ದರಿಂದ ಇನ್ನು ತಡಮಾಡದೆ, ಅಲಕ್ಷಿಸದೆ, ಯೋಗಶಕ್ತಿಯನ್ನಾಶ್ರಯಿಸಿ ಅವನನ್ನು ಸದೆಬಡಿ.

ಅನೇನ ಹಿ ತಪಸ್ತಪ್ತಂ ಬಲಾರ್ಥಮಮರಾಧಿಪ ।
ಷಷ್ಟಿಂ ವರ್ಷಸಹಸ್ರಾಣಿ ಬ್ರಹ್ಮಾ ಚಾಸ್ಮೈ ವರಂ ದದೌ ॥೩೬॥

ದೇವೇಂದ್ರನೇ, ಇವನು ಮಹಾಬಲವನ್ನು ಪಡೆಯಲು ಅರವತ್ತು ಸಾವಿರ ವರ್ಷಗಳ ತನಕ ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡಿರುವನು. ಬ್ರಹ್ಮನಾದರೂ ಅವನಿಗೆ ಮಹತ್ತರವಾದ ಯೋಗಬಲದ ಶಕ್ತಿ , ವರಗಳನ್ನು ನೀಡಿರುತ್ತಾನೆ.

ಮಹತ್ತ್ವಂ ಯೋಗಿನಾಂ ಚೈವ ಮಹಾಮಾಯತ್ವಮೇವ ಚ ।
ಮಹಾಬಲತ್ವಂ ಚ ತಥಾ ತೇಜಶ್ಚಾಗ್ರ್ಯಂ ಸುರೇಶ್ವರ ॥೩೭॥

ಇಂದ್ರನೇ, ಮಹಾಯೋಗ ಸಾಮರ್ಥ್ಯವನ್ನೂ , ಮಹಾಮಾಯಾ ಸಾಮರ್ಥ್ಯವನ್ನೂ, ಮಹಾಬಲವನ್ನೂ ಅವನು ಹೊಂದಿರುತ್ತಾನೆ.

ಏತದ್ವೈ ಮಾಮಕಂ ತೇಜಃ ಸಮಾವಿಶತಿ ವಾಸವ ।
ವೃತ್ರಮೇನಂ ತ್ವಮಪ್ಯೇವಂ ಜಹಿ ವಜ್ರೇಣ ದಾನವಮ್ ॥೩೮॥

ಆದರೂ ಇಂದ್ರನೇ, ನನ್ನ ತೇಜಸ್ಸು ನಿನ್ನಲ್ಲಿ ಪ್ರವೇಶ ಹೊಂದಿದೆ. ದಾನವನಾದ ವೃತ್ರಾಸುರನನ್ನು ವಜ್ರಾಯುಧದಿಂದ ಕೊಂದು ಹಾಕು.

ಶಕ್ರಃ

ಭಗವಂಸ್ತ್ವತ್ಪ್ರಸಾದೇನ ದಿತಿಜಂ ಸುದುರಾಸದಮ್ ।
ವಜ್ರೇಣ ನಿಹನಿಷ್ಯಾಮಿ ಪಶ್ಯತಸ್ತೇ ಸುರರ್ಷಭ ॥೩೯॥

ಶಕ್ರ– ಪೂಜ್ಯನೇ, ನಿನ್ನ ಅನುಗ್ರಹದಿಂದ ಯಾರಿಂದಲೂ ಗೆಲ್ಲಲಾಗದ ದೈತ್ಯನನ್ನು ಎಲ್ಲರೂ ನೋಡುತ್ತಿರುವಂತೆ ವಜ್ರಾಯುಧದಿಂದ ಕೊಂದು ಹಾಕುತ್ತೇನೆ.

ಭೀಷ್ಮಃ

ಆವಿಶ್ಯಮಾನೇ ದೈತ್ಯೇ ತು ಜ್ವರೇಣಾಥ ಮಹಾಸುರೇ ।
ದೇವತಾನಾಮೃಷೀಣಾಂ ಚ ಹರ್ಷಾನ್ನಾದೋ ಮಹಾನಭೂತ್ ॥೪೦॥

ಭೀಷ್ಮ– ಇದೇ ಸಮಯಕ್ಕೆ ಸರಿಯಾಗಿ ರುದ್ರದೇವನಿಂದ ಪ್ರೇರಿತವಾದ ಜ್ವರವು ವೃತ್ರನನ್ನು ಬಂದು ಹಿಡಿಯಿತು. ಇದನ್ನು ತಿಳಿದ ದೇವತೆಗಳು, ಋಷಿಗಳು ಸಂತೋಷದಿಂದ ದೊಡ್ಡ ನಾದವನ್ನು ಮಾಡಿದರು.

ತತೋ ದುಂದುಭಯಶ್ಚೈವ ಶಂಖಾಶ್ಚ ಸುಮಹಾಸ್ವನಾಃ ।
ಮುರಜಾ ಡಿಂಡಿಮಾಶ್ಚೈವ ಪ್ರಾವಾದ್ಯಂತ ಸಹಸ್ರಶಃ ॥೪೧॥

ಅನೇಕ ಕಡೆಗಳಿಂದ ಶಂಖ-ದುಂದುಭಿ-ಮುರಜ-ಡಿಂಡಿಮಾದಿ ನಾದಗಳು ಸಾವಿರ ಸಂಖ್ಯೆಯಲ್ಲಿ ಮೊಳಗುತ್ತಿದ್ದವು.

ಅಸುರಾಣಾಂ ತು ಸರ್ವೇಷಾಂ ಸ್ಮೃತಿಲೋಪೋऽಭವನ್ಮಹಾನ್ ।
ಪ್ರಜ್ಞಾನಾಶಶ್ಚ ಬಲವಾನ್ ಕ್ಷಣೇನ ಸಮಪದ್ಯತ ॥೪೨॥

ಎಲ್ಲಾ ದೈತ್ಯರಿಗೂ ಇದರಿಂದ ನೆಲೆ ತಪ್ಪಿದಂತಾಯಿತು. ವೃತ್ರನ ಮಾಯೆ ಎಲ್ಲವೂ ಅಡಗಿಹೋಗಲು ಆರಂಭಿಸಿತು. ಕೂಡಲೇ ಅವನ ಪ್ರಜ್ಞಾನಾಶವು ದೊಡ್ಡ ಪ್ರಮಾಣದಲ್ಲಿ ಉಂಟಾಯಿತು.

ತಮಾವಿಷ್ಟಮಥೋ ಜ್ಞಾತ್ವಾ ಋಷಯೋ ದೇವತಾಸ್ತಥಾ ।
ಸ್ತುವಂತಃ ಶಕ್ರಮೀಶಾನಂ ತಥಾ ಪ್ರಾಚೋದಯನ್ನಪಿ ॥೪೩॥

ದೇವತೆಗಳು, ಋಷಿಗಳೆಲ್ಲರೂ ವೃತ್ರಾಸುರನಲ್ಲಿ ರುದ್ರಜ್ವರವು ಪ್ರವೇಶ ಮಾಡಿದೆ ಎಂಬುದನ್ನು ತಿಳಿದು ಇಂದ್ರನನ್ನು ಹುರಿದುಂಬಿಸುತ್ತಾ, ವೃತ್ರವಧೆಗಾಗಿ ಪ್ರಚೋದಿಸುತ್ತಿದ್ದರು.

ರಥಸ್ಥಸ್ಯ ಹಿ ಶಕ್ರಸ್ಯ ಯುದ್ಧಕಾಲೇ ಮಹಾತ್ಮನಃ ।
ಋಷಿಭಿಃ ಸ್ತೂಯಮಾನಸ್ಯ ರೂಪಮಾಸೀತ್ ಸುದುರ್ದೃಶಮ್ ॥೪೪॥

ಯುದ್ಧಕಾಲದಲ್ಲಿ ಮಹಾತ್ಮನಾದ, ರಥದಲ್ಲಿ ಕುಳಿತಿರುವ ಇಂದ್ರನ ರೂಪವು ಭಯಂಕರವೂ, ಋಷಿಗಳಿಂದ ಸ್ತೋತ್ರ ಮಾಡಲು ಯೋಗ್ಯವೂ ಆದುದಾಗಿತ್ತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾರನೆಯ ಅಧ್ಯಾಯ

ವೃತ್ರಾಸುರನ ವಧೆ. ಬ್ರಹ್ಮಹತ್ಯಾ ವಿಭಾಗ.

ಭೀಷ್ಮಃ

ವೃತ್ರಸ್ಯ ತು ಮಹಾರಾಜ ಜ್ವರಾವಿಷ್ಟಸ್ಯ ಸರ್ವಶಃ ।
ಅಭವನ್ಯಾನಿ ಲಿಂಗಾನಿ ಶರೀರೇ ತಾನಿ ಮೇ ಶೃಣು ॥೧॥

ಭೀಷ್ಮ– ಮಹಾರಾಜನೇ, ಜ್ವರಾವಿಷ್ಟನಾದ ವೃತ್ರಾಸುರನ ಶರೀರದಲ್ಲಿ ಯಾವ ಚಿಹ್ನೆಗಳು ಉಂಟಾದವೆಂಬುದನ್ನು ಹೇಳುತ್ತೇನೆ, ಅದನ್ನು ಕೇಳು.

ಜ್ವಲಿತಾಸ್ಯೋಭವದ್ಘೋರೋ ವೈವರ್ಣ್ಯಂ ಚಾಗಮತ್ ಪರಮ್ ।
ಗಾತ್ರಕಂಪಶ್ಚ ಸುಮಹಾನ್ ಶ್ವಾಸಶ್ಚಾಪ್ಯಭವನ್ಮಹಾನ್ ।
ರೋಮಹರ್ಷಶ್ಚ ತೀವ್ರೋऽಭೂನ್ನಿಃಶ್ವಾಸಶ್ಚ ಮಹಾನ್ನೃಪ ॥೨॥

ಜ್ವರದಿಂದಾಗಿ ವೃತ್ರನ ಮುಖವು ಸುಡಲಾರಂಭಿಸಿತು. ಘೋರರೂಪದಿಂದ ಅವನ ದೇಹದ ಬಣ್ಣವೇ ವಿಕಾರ ಹೊಂದಲು ಆರಂಭಿಸಿತು. ಶರೀರವು ನಡುಗತೊಡಗಿತು. ಶ್ವಾಸೋಚ್ಛ್ವಾಸಗಳು ವೇಗವಾಗಿ ಆಡತೊಡಗಿದವು. ಭಯಂಕರವಾಗಿ ರೋಮಗಳೆಲ್ಲವೂ ನಿಮಿರಿ ನಿಲ್ಲುತ್ತಿದ್ದವು. ತೀವ್ರವಾದ ನಿಃಶ್ವಾಸವನ್ನು ಬಿಡುತ್ತಿದ್ದನು.

ಶಿವಾ ಚಾಶಿವಸಂಕಾಶಾ ತಸ್ಯ ವಕ್ತ್ರಾತ್ ಸುದಾರುಣಾ ।
ನಿಷ್ಪಪಾತ ಮಹಾಘೋರಾ ಸ್ಮೃತಿಃ ಸಾ ತಸ್ಯ ಭಾರತ ।
ಉಲ್ಕಾಶ್ಚ ಜ್ವಲಿತಾಸ್ತಸ್ಯ ದೀಪ್ತಾಃ ಪಾರ್ಶ್ವೇ ಪ್ರಪೇದಿರೇ ॥೩॥

ವೃತ್ರಾಸುರನ ಮುಖದಿಂದ ಅತ್ಯಂತ ಭಯಂಕರವಾದ, ಮಂಗಳ-ಅಮಂಗಳಕರ ರೂಪವಾದ ಶಬ್ದಗಳು ಹೊರಬರುತ್ತಿದ್ದವು. ಅವನ ಮುಖದಿಂದ ಭಯಂಕರವಾದ ಶಬ್ದವು ಹೊರಹೊಮ್ಮುತ್ತಿತ್ತು. ಅವನ ಎರಡೂ ಪಾರ್ಶ್ವಗಳಲ್ಲಿ ಜ್ವಲಿಸುವಂಥ ಪ್ರಕಾಶಮಾನವಾದ ಉಲ್ಕೆಗಳು ಬೀಳತೊಡಗಿದವು.

ಗೃಧ್ರಕಂಕವಡಾಶ್ಚೈವ ವಾಚೋಮುಂಚನ್ ಸುದಾರುಣಾಃ ।
ವೃತ್ರಸ್ಯೋಪರಿ ಸಂಹೃಷ್ಟಾಶ್ಚಕ್ರವತ್ ಪರಿಬಭ್ರಮುಃ ॥೪॥

ರಣಹದ್ದುಗಳು, ಕಾಗೆಗಳು, ಬಕಪಕ್ಷಿಗಳು ಮೊದಲಾದ ಹಕ್ಕಿಗಳು ಭಯಂಕರವಾಗಿ ಕರ್ಕಶವಾಗಿ ಕೂಗುತ್ತಿದ್ದವು. ವೃತ್ರಾಸುರನ ಮೇಲ್ಭಾಗದಲ್ಲಿ ಚಕ್ರದಂತೆ ಆ ಭಯಂಕರ ಹಕ್ಕಿಗಳೆಲ್ಲ ಸುತ್ತಲಾರಂಭಿಸಿದವು.

ತತಸ್ತಂ ರಥಮಾಸ್ಥಾಯ ದೇವಾಪ್ಯಾಯಿತಮಾಹವೇ ।
ವಜ್ರೋದ್ಯತಕರಃ ಶಕ್ರಸ್ತಂ ದೈತ್ಯಂ ಪ್ರತ್ಯವೈಕ್ಷತ ॥೫॥

ಬಳಿಕ ಇಂದ್ರನು ದೇವತೆಗಳಿಂದ ಅಭಿನಂದಿಸಲ್ಪಟ್ಟು ರಣಾಂಗಣದಲ್ಲಿ ರಥದಲ್ಲಿ ಕುಳಿತು, ವಜ್ರಾಯುಧವನ್ನು ಹಿಡಿದು ವೃತ್ರಾಸುರನ ಕಡೆ ನುಗ್ಗಿದನು.

ಅಮಾನುಷಮಥೋ ನಾದಂ ಸ ಮುಮೋಚ ಮಹಾಸುರಃ ।
ವ್ಯಜೃಂಭತ ಚ ರಾಜೇಂದ್ರ ತೀವ್ರಜ್ವರಸಮನ್ವಿತಃ ।
ಅಥಾಸ್ಯ ಜೃಂಭತಃ ಶಕ್ರಸ್ತತೋ ವಜ್ರಮವಾಸೃಜತ್ ॥೬॥

ಬಳಿಕ ಮಹಾಸುರನಾದ ವೃತ್ರನು ಮನುಷ್ಯರಿಂದ ಊಹಿಸಲು ಅಸಾಧ್ಯವಾದ ಶಬ್ದವನ್ನು ಮಾಡಿದನು. ಅವನಲ್ಲಿ ಪ್ರವೇಶಿಸಿದ ತೀವ್ರವಾದ ಜ್ವರವು ಗರಿಗೆದರಿತು. ಇದರಿಂದ ಪುನಃ ಪುನಃ ಆಕಳಿಸುತ್ತಿದ್ದನು. ಹೀಗೆ ಆಕಳಿಸುತ್ತಿದ್ದ ವೃತ್ರಾಸುರನ ಮೇಲೆ ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಿದನು.

ಸ ವಜ್ರಃ ಸುಮಹಾತೇಜಾಃ ಕಾಲಾಗ್ನಿಸದೃಶೋಪಮಃ ।
ಕ್ಷಿಪ್ರಮೇವ ಮಹಾಕಾಯಂ ವೃತ್ರಂ ದೈತ್ಯಮಪಾತಯತ್ ॥೭॥

ಇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧವು ಮಹಾತೇಜಸ್ಸಿನಿಂದ,

ಕೂಡಿಕೊಂಡು ಕಾಲಾಗ್ನಿಗೆ ಸಮಾನವಾಗಿ ಬೆಳಗುತ್ತಿತ್ತು. ಒಡನೆಯೇ ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧವು ದೈತ್ಯನಾದ ವೃತ್ರಾಸುರನನ್ನು ಕೆಳಕ್ಕೆ ಕೆಡವಿತು.

ತತೋ ನಾದಃ ಸಮಭವತ್ ಪುನರೇವ ಸಮಂತತಃ ।
ವೃತ್ರಂ ವಿನಿಹತಂ ದೃಷ್ಟ್ವಾ ದೇವಾನಾಂ ಭರತರ್ಷಭ ॥೮॥

ವೃತ್ರಾಸುರನು ಹತನಾಗಿ ಬೀಳುತ್ತಿರುವುದನ್ನು ಕಂಡ ದೇವತೆಗಳು ನಾಲ್ಕು ದಿಕ್ಕುಗಳನ್ನು ತುಂಬುವಂತೆ ಸಿಂಹನಾದವನ್ನು ಮಾಡುತ್ತಿದ್ದರು.

ವೃತ್ರಂ ತು ಹತ್ವಾ ಭಗವಾಂದಾನವಾರಿರ್ಮಹಾಯಶಾಃ ।
ವಜ್ರೇಣ ವಿಷ್ಣುಯುಕ್ತೇನ ದಿವಮೇವ ಸಮಾವಿಶತ್ ॥೯॥

ದಾನವಶತ್ರುವಾದ, ಯಶೋವಂತನಾದ ಇಂದ್ರನು ವಿಷ್ಣುವಿನ ತೇಜಸ್ಸಿನಿಂದ ಆವಿಷ್ಟವಾಗಿದ್ದ ವಜ್ರಾಯುಧದಿಂದ ವೃತ್ರನನ್ನು ಸಂಹರಿಸಿ ದೇವಲೋಕವನ್ನು ಪ್ರವೇಶಿಸಿದನು.

ಅಥ ವೃತ್ರಸ್ಯ ಕೌರವ್ಯ ಶರೀರಾದಭಿನಿಃಸೃತಾ ।
ಬ್ರಹ್ಮಹತ್ಯಾ ಮಹಾಘೋರಾ ರೌದ್ರಾ ಲೋಕಭಯಾವಹಾ ॥೧೦॥

ನಂತರ ವೃತ್ರಾಸುರನ ಮೃತ ಶರೀರದಿಂದ ಜಗತ್ತೆಲ್ಲವೂ ಭಯ ಹೊಂದುವಂತೆ ಮಹಾಘೋರವಾದ, ಕ್ರೂರವಾದ ಪಾಪರೂಪದ ಬ್ರಹ್ಮಹತ್ಯೆಯು ಪ್ರಕಟಗೊಂಡಿತು.

ಕರಾಲದಶನಾ ಭೀಮಾ ವಿಕೃತಾ ಕೃಷ್ಣಪಿಂಗಲಾ ।
ಪ್ರಕೀರ್ಣಮೂರ್ಧಜಾ ಚೈವ ಘೋರನೇತ್ರಾ ಚ ಭಾರತ ॥೧೧॥

ಭಯಂಕರ ವಿಕಾರವಾದ ಹಲ್ಲುಗಳಿಂದ ಕೂಡಿರುವ, ಕಪ್ಪಾಗಿಯೂ, ಕಂದು ಮಿಶ್ರಿತ ಹಳದಿಯಾಗಿಯೂ, ಭಯಂಕರವಾಗಿಯೂ ಇರುವ ಆಕಾರವುಳ್ಳ, ಕೆದರಿಕೊಂಡಿರುವ ತಲೆಕೂದಲುಗಳುಳ್ಳ, ಘೋರವಾದ ಕಣ್ಣುಗಳಿಂದ ಕೂಡಿದ ಬ್ರಹ್ಮಹತ್ಯೆಯು ಪ್ರಕಟವಾಯಿತು.

ಕಪಾಲಮಾಲಿನೀ ಚೈವ ಕೃಶಾ ಚ ಭರತರ್ಷಭ ।
ರುಧಿರಾರ್ದ್ರಾ ಚ ಧರ್ಮಜ್ಞ ಚೀರವಸ್ತ್ರನಿವಾಸಿನೀ ॥೧೨॥

ಆ ಬ್ರಹ್ಮಹತ್ಯೆಯು ಕಪಾಲಗಳ ಮಾಲೆಯನ್ನು ಕುತ್ತಿಗೆಗೆ ಧರಿಸಿತ್ತು, ಕೃಶವಾಗಿ ಕಾಣುತ್ತಿತ್ತು, ರಕ್ತದಿಂದ ಒದ್ದೆಯಾಗಿತ್ತು, ಹರಿದ ನಾರು ಬಟ್ಟೆಗಳನ್ನು ಧರಿಸಿತ್ತು.

ಸಾಭಿನಿಷ್ಕಮ್ಯ ರಾಜೇಂದ್ರ ತಾದೃಗ್ರೂಪಾ ಭಯಾವಹಾ ।
ವಜ್ರಿಣಂ ಮೃಗಯಾಮಾಸ ತದಾ ಭರತಸತ್ತಮ ॥೧೩॥

ಅಂತಹ ಭಯಂಕರ ರೂಪವನ್ನು ತಾಳಿದ ಬ್ರಹ್ಮಹತ್ಯೆಯು ವೃತ್ರಾಸುರನ ಶರೀರದಿಂದ ಹೊರಟು ದೇವೇಂದ್ರನನ್ನು ಹುಡುಕಲಾರಂಭಿಸಿತು.

ಕಸ್ಯಚಿತ್ತ್ವಥ ಕಾಲಸ್ಯ ವೃತ್ರಹಾ ಕುರುನಂದನ ।
ಸ್ವರ್ಗಾಯಾಭಿಮುಖಃ ಪ್ರಾಯಾಲ್ಲೋಕಾನಾಂ ಹಿತಕಾಮ್ಯಯಾ ॥೧೪॥

ಆ ಸಮಯದಲ್ಲಿ ವೃತ್ರಹಂತಕನಾದ ಇಂದ್ರನು ಲೋಕಗಳ ಹಿತಕ್ಕಾಗಿ ಸ್ವರ್ಗಕ್ಕೆ ಅಭಿಮುಖನಾಗಿ ಹೋಗುತ್ತಿದ್ದನು.

ಬಿಸಾನ್ನಿಃಸರಮಾಣಂ ತು ದೃಷ್ಟ್ವಾ ಶಕ್ರಂ ಮಹೌಜಸಮ್ ।
ಕಂಠೇ ಜಗ್ರಾಹ ದೇವೇಂದ್ರಂ ಸುಲಗ್ನಾ ಚಾಭವತ್ತದಾ ॥೧೫॥

ಹೀಗೆ ಸ್ವರ್ಗಾಭಿಮುಖವಾಗಿ ಹೋಗುತ್ತಿರುವ, ಮಹಾತೇಜಸ್ವಿಯಾದ ಇಂದ್ರನನ್ನು ಕಂಡ ಬ್ರಹ್ಮಹತ್ಯೆಯು ಅವನನ್ನು ಹಿಡಿದು ಮರುಕ್ಷಣದಲ್ಲಿಯೇ ಅವನ ಒಳಗಡೆ ಸೇರಿಕೊಂಡಿತು.

ಸ ಹಿ ತಸ್ಮಿನ್ ಸಮುತ್ಪನ್ನೇ ಬ್ರಹ್ಮಹತ್ಯಾಕೃತೇ ಭಯೇ ।
ನಲಿನ್ಯಾಂ ಬಿಸಮಧ್ಯಸ್ಥೋ ಬಭೂವಾಬ್ದಗಣಾನ್ ಬಹೂನ್ ॥೧೬॥

ಇಂದ್ರನಿಗೆ ಈ ಬ್ರಹ್ಮಹತ್ಯೆಯಿಂದ ಭಯವುಂಟಾಗಲು ಇಂದ್ರನು ಕಮಲದ ನಾಳದಲ್ಲಿ ಸೇರಿಕೊಂಡು ಅಲ್ಲಿಯೇ ಅನೇಕ ವರ್ಷಗಳ ಕಾಲ ತಪಸ್ಸನ್ನು ಮಾಡಲು ಆರಂಭಿಸಿದನು.

ವ್ಯಾಖ್ಯಾನ ವಿಶೇಷ– ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ ವೃತ್ರಹತ್ಯೆಯಿಂದ ಇಂದ್ರನಿಗೆ ಕೀರ್ತಿಯೇ ಅಧಿಕವಾಯಿತು. ಬ್ರಹ್ಮಹತ್ಯೆಯು ಬರಲಿಲ್ಲ. ಮಹಾಭಾರತದ ಈ ವಚನಕ್ಕೆ ಇಂದ್ರನ ಪ್ರಾರಬ್ಧ ಸೂಚನೆ ಎಂದು ಭಾವಿಸಬೇಕೇ ವಿನಾ ಬ್ರಹ್ಮಹತ್ಯೆ ಬಂದಿದೆ ಎಂದು ಚಿಂತಿಸಬಾರದು ಎಂದು ಹೇಳಿದ್ದಾರೆ.

ಅನುಸೃತ್ಯ ತು ಯತ್ನಾತ್ಸ ತಯಾ ವೈ ಬ್ರಹ್ಮಹತ್ಯಯಾ ।
ತದಾ ಗೃಹೀತಃ ಕೌರವ್ಯ ನಿಶ್ಚೇಷ್ಟಃ ಸಮಪದ್ಯತ ॥೧೭॥

ಇಂದ್ರನು ತನ್ನನ್ನೇ ಅನುಸರಿಸಿಕೊಂಡು ಬರುತ್ತಿದ್ದ ಬ್ರಹ್ಮಹತ್ಯೆಯಿಂದ ಆಕ್ರಮಿಸಲ್ಪಟ್ಟು ಕ್ಷಣಮಾತ್ರದಲ್ಲಿಯೇ ನಿಶ್ಚೇಷ್ಟನಾದನು, ತೇಜಸ್ಸನ್ನು ಕಳೆದುಕೊಂಡನು.

ತಸ್ಯಾ ವ್ಯಪೋಹನೇ ಶಕ್ರಃ ಪರಂ ಯತ್ನಂ ಚಕಾರ ಹ ।
ನ ಚಾಶಕತ್ತಾಂ ದೇವೇಂದ್ರೋ ಬ್ರಹ್ಮಹತ್ಯಾಂ ವ್ಯಪೋಹಿತುಮ್ ॥೧೮॥

ಈ ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳಲು ಮಹಾಪ್ರಯತ್ನವನ್ನು ಮಾಡಲು ಆರಂಭಿಸಿದನು. ಆದರೆ ಎಷ್ಟೇ ಪ್ರಯತ್ನಿಸಿದರೂ ತನ್ನಲ್ಲಿ ಸೇರಿಕೊಂಡಿರುವ ಬ್ರಹ್ಮಹತ್ಯೆಯನ್ನು ಪರಿಹರಿಸಿಕೊಳ್ಳಲು ಇಂದ್ರನಿಂದ ಸಾಧ್ಯವಾಗಲಿಲ್ಲ.

ಗೃಹೀತ ಏವ ತು ತಯಾ ದೇವೇಂದ್ರೋ ಭರತರ್ಷಭ ।
ಪಿತಾಮಹಮುಪಾಗಮ್ಯ ಶಿರಸಾ ಪ್ರತ್ಯಪೂಜಯತ್ ॥೧೯॥

ಬ್ರಹ್ಮಹತ್ಯೆಯಿಂದ ಗೃಹೀತನಾದ ಇಂದ್ರನು ಹಾಗೇ ಬ್ರಹ್ಮನ ಬಳಿ ಹೋಗಿ ನಮಸ್ಕರಿಸಿ ಪೂಜಿಸಿದನು.

ಜ್ಞಾತ್ವಾ ಗೃಹೀತಂ ಶಕ್ರಂ ತು ದ್ವಿಜಪ್ರವರಹತ್ಯಯಾ ।
ಬ್ರಹ್ಮಾ ಸಂಚಿಂತಯಾಮಾಸ ತದಾ ಭರತಸತ್ತಮ ॥೨೦॥

ಚತುರ್ಮುಖ ಬ್ರಹ್ಮನಾದರೂ ಬ್ರಹ್ಮಜ್ಞಾನಿಯಾದ ವೃತ್ರಾಸುರನನ್ನು ಇಂದ್ರನು ಕೊಂದಿರುವ ಕಾರಣ ಬ್ರಹ್ಮಹತ್ಯೆಯು ಇವನನ್ನು ಹಿಡಿದುಕೊಂಡಿದೆ ಎಂದು ಆ ಪ್ರಸಂಗದಲ್ಲಿ ಅದರ ಮೋಚನೆಗೆ ಯೋಚಿಸಿದನು.

ತಾಮುವಾಚ ಮಹಾಬಾಹೋ ಬ್ರಹ್ಮಹತ್ಯಾಂ ಪಿತಾಮಹಃ ।
ಸ್ವರೇಣ ಮಧುರೇಣಾಥ ಸಾಂತ್ವಯನ್ನಿವ ಭಾರತ ॥೨೧॥

ಸ್ವಲ್ಪಕಾಲದ ಬಳಿಕ ಪಿತಾಮಹನು ಮಧುರವಾದ ಮಾತಿನಿಂದ ಬ್ರಹ್ಮಹತ್ಯೆಯನ್ನು ಸಮಾಧಾನಗೊಳಿಸುತ್ತಾ ಹೀಗೆ ಹೇಳಿದನು.

ಮುಚ್ಯತಾಂ ತ್ರಿದಶೇಂದ್ರೋಽಯಂ ಮತ್ಕೃತಂ ಕುರು ಭಾಮಿನಿ ।
ಬ್ರೂಹಿ ಕಿಂ ತೇ ಕರೋಮ್ಯದ್ಯ ಕಾಮಂ ಕಂ ತ್ವಮಿಹೇಚ್ಛಸಿ ॥೨೨॥

ಭಾಮಿನಿಯೇ, ತ್ರಿಲೋಕಾಧಿಪತಿಯಾದ ಇಂದ್ರನನ್ನು ಬಿಟ್ಟು ಬಿಡು. ನನಗೆ ಇಷ್ಟವಾದ ಕಾರ್ಯವನ್ನು ನೀನು ಮಾಡು. ಇದಕ್ಕೆ ಪ್ರತಿಯಾಗಿ ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲಿ? ಹೇಳು. ನಿನ್ನ ಇಚ್ಛೆಯನ್ನು ಪೂರೈಸುತ್ತೇನೆ ಎಂದು ಹೇಳಿದನು.

ಬ್ರಹ್ಮಹತ್ಯಾ

ತ್ರಿಲೋಕಪೂಜಿತೇ ದೇವೇ ಪ್ರೀತೇ ತ್ರೈಲೋಕ್ಯಕರ್ತರಿ ।
ಕೃತಮೇವೇಹ ಮನ್ಯೇಽಹಂ ನಿವಾಸಂ ತು ವಿಧತ್ಸ್ವ ಮೇ ॥೨೩॥

ಬ್ರಹ್ಮಹತ್ಯಾ– ಬ್ರಹ್ಮದೇವನೇ, ಮೂರುಲೋಕದ ಜನರಿಂದಲೂ ಪೂಜಿಸಲ್ಪಡುವ, ಮೂರು ಲೋಕಗಳನ್ನೂ ಸೃಷ್ಟಿಸಿರುವ ನೀನು ನನ್ನ ವಿಷಯದಲ್ಲಿ ಪ್ರೀತನಾಗಿ ಇಷ್ಟಾರ್ಥಗಳನ್ನು ಕೊಡುತ್ತೇನೆ ಎಂದು ಹೇಳಿದ ಬಳಿಕ ನನ್ನ ಬಯಕೆಗಳೆಲ್ಲವೂ ಪೂರ್ಣವಾಗಿವೆ ಎಂದೇ ನಂಬುತ್ತೇನೆ. ನನಗೆ ವಾಸಸ್ಥಾನ ಉಂಟುಮಾಡು.

ತ್ವಯಾ ಕೃತೇಯಂ ಮರ್ಯಾದಾ ಲೋಕಸಂರಕ್ಷಣಾರ್ಥಿನಾ ।
ಸ್ಥಾಪನಾ ವೈ ಸುಮಹತೀ ತ್ವಯಾ ದೇವ ಪ್ರವರ್ತಿತಾ ॥೨೪॥

ಬ್ರಹ್ಮನೇ, ಸಮಸ್ತ ಜಗತ್ತಿನ ರಕ್ಷಣೆಗಾಗಿ ಲೋಕದ ಮರ್ಯಾದೆಯನ್ನು ಸ್ಥಾಪಿಸಿರುವಿ. ಅಂತಹ ನೀನು ಧರ್ಮವನ್ನು ಆಚರಣೆಗೆ ತಂದಿರುವಿ.

ಪ್ರೀತೇ ತು ತ್ವಯಿ ಧರ್ಮಜ್ಞ ಸರ್ವಲೋಕೇಶ್ವರೇ ಪ್ರಭೋ ।
ಶಕ್ರಾದಪಗಮಿಷ್ಯಾಮಿ ನಿವಾಸಂ ತು ವಿಧತ್ಸ್ವ ಮೇ ॥೨೫॥

ನನ್ನ ವಿಷಯದಲ್ಲಿ ನೀನು ಪ್ರೀತಿ ಹೊಂದಿರುವುದೇ ಆಗಿದ್ದಲ್ಲಿ ನಾನು ಇಂದ್ರನನ್ನೂ ಬಿಟ್ಟು ಹೊರಡುತ್ತೇನೆ. ಆದರೆ ನನಗೆ ವಾಸಿಸಲು ಸ್ಥಾನವನ್ನು ಕಲ್ಪಿಸಿಕೊಡು.

ಭೀಷ್ಮಃ

ತಥೇತಿ ತಾಂ ಪ್ರಾಹ ತದಾ ಬ್ರಹ್ಮಹತ್ಯಾಂ ಪಿತಾಮಹಃ ।
ಉಪಾಯತಃ ಸ ಶಕ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತ ॥೨೬॥

ಭೀಷ್ಮ– ಯುಧಿಷ್ಠಿರನೇ, ಬ್ರಹ್ಮಹತ್ಯೆಯ ಮಾತನ್ನು ಕೇಳಿಸಿಕೊಂಡ ಚತುರ್ಮುಖನು ಆಗಲಿ, ನಿನಗೆ ಸ್ಥಾನವನ್ನು ಕಲ್ಪಿಸಿಕೊಡುತ್ತೇನೆ ಎಂದು ಹೇಳಿ ಉಪಾಯದಿಂದ ಇಂದ್ರನಲ್ಲಿ ಹೊಕ್ಕಿರುವ ಬ್ರಹ್ಮಹತ್ಯೆಯನ್ನು ಹೊರ ಕಳುಹಿಸಿದನು.

ತತಃ ಸ್ವಯಂಭುವಾ ಧ್ಯಾತಸ್ತತ್ರ ವಹ್ನಿರ್ಮಹಾತ್ಮನಾ ।
ಬ್ರಹ್ಮಾಣಮುಪಸಂಗಮ್ಯ ತತೋ ವಚನಮಬ್ರವೀತ್ ॥೨೭॥

ಬಳಿಕ ಬ್ರಹ್ಮನು ಅಲ್ಲಿಯೇ ಅಗ್ನಿಯನ್ನು ಧ್ಯಾನಿಸಿದನು. ಕೂಡಲೇ ಅಗ್ನಿಯು ಬ್ರಹ್ಮನ ಬಳಿ ಬಂದು ಹೀಗೆ ಹೇಳಿದನು.

ಪ್ರಾಪ್ತೋಽಸ್ಮಿ ಭಗವನ್ ದೇವ ತ್ವತ್ಸಕಾಶಮರಿಂದಮ ।
ಯತ್ ಕರ್ತವ್ಯಂ ಮಯಾ ದೇವ ತದ್ಭವಾನ್ವಕ್ತುಮರ್ಹತಿ ॥೨೮॥

ಭಗವನ್, ಇಗೋ ನಾನು ಆಗಮಿಸಿದ್ದೇನೆ. ನಾನು ಮಾಡಬೇಕಾದ ಕಾರ್ಯವೇನೆಂಬುದನ್ನು ಕೃಪೆಯಿಂದ ತಿಳಿಸು.

ಬ್ರಹ್ಮಾ

ಬಹುಧಾ ವಿಭಜಿಷ್ಯಾಮಿ ಬ್ರಹ್ಮಹತ್ಯಾಮಿಮಾಮಹಮ್ ।
ಶಕ್ರಸ್ಯಾದ್ಯ ವಿಮೋಕ್ಷಾರ್ಥಂ ಚತುರ್ಭಾಗಂ ಪ್ರತೀಚ್ಛ ಮೇ ॥೨೯॥

ಬ್ರಹ್ಮಾ– ಅಗ್ನಿದೇವನೇ, ನಾನು ಇಂದ್ರನನ್ನು ಬ್ರಹ್ಮಹತ್ಯೆಯಿಂದ ಮುಕ್ತನಾಗಿಸಲು ಬ್ರಹ್ಮಹತ್ಯೆಯನ್ನು ನಾಲ್ಕು ಭಾಗಗಳನ್ನಾಗಿ ಮಾಡಲು ಇಚ್ಛಿಸುತ್ತೇನೆ. ಇದರಲ್ಲಿ ಒಂದು ಭಾಗವನ್ನು ನೀನು ಸ್ವೀಕರಿಸು.

ಅಗ್ನಿಃ

ಮಮ ಮೋಕ್ಷಸ್ಯ ಕೋಽಂತೋ ವೈ ಬ್ರಹ್ಮನ್ ಧ್ಯಾಯಸ್ವ ವೈ ಪ್ರಭೋ ।
ಏತದಿಚ್ಛಾಮಿ ವಿಜ್ಞಾತುಂ ತತ್ತ್ವತೋ ಲೋಕಪೂಜಿತ ॥೩೦॥

ಅಗ್ನಿ– ಲೋಕಪೂಜಿತನಾದ ಪ್ರಭುವೇ, ಬ್ರಹ್ಮನ್, ನಿನ್ನ ಆಜ್ಞೆಯನ್ನು ಮಾನ್ಯ ಮಾಡುತ್ತೇನೆ. ಆದರೆ ಈ ಬ್ರಹ್ಮಹತ್ಯಾ ದೋಷದಿಂದ ನಾನು ಹೇಗೆ ಪಾರಾಗಬೇಕು? ಇದನ್ನು ತಿಳಿಯಲು ಬಯಸುತ್ತೇನೆ.

ಬ್ರಹ್ಮಾ

ಯಸ್ತಾ ತ್ವಂ ಜ್ವಲಂತಮಾಸಾದ್ಯ ಸ್ವಯಂ ವೈ ಮಾನವಃ ಕ್ವಚಿತ್ ।
ಬೀಜೌಷಧಿರಸೈರ್ವಹ್ನೇ ನ ಯಕ್ಷ್ಯತಿ ತಮೋವೃತಃ ॥೩೧॥

ತಮೇಷಾ ಯಾಸ್ಯತಿ ಕ್ಷಿಪ್ರಾಂ ತತ್ರೈವ ಚ ನಿವತ್ಸ್ಯತಿ ।
ಬ್ರಹ್ಮಹತ್ಯಾ ಹವ್ಯವಾಹ ವ್ಯೇತು ತೇ ಮಾನಸೋ ಜ್ವರಃ ॥೩೨॥

ಬ್ರಹ್ಮಾ– ಅಗ್ನಿದೇವನೇ, ಯಾವ ಮನುಷ್ಯನು ಪ್ರಜ್ವಲಿಸುತ್ತಿರುವ ನಿನ್ನ ಹತ್ತಿರ ಬಂದಾಗ ಅಜ್ಞಾನದಿಂದ ಕೂಡಿದವನಾಗಿ ಬೀಜ, ಓಷಧಿ, ರಸಗಳಿಂದ ಹೋಮವನ್ನು ಮಾಡುವುದಿಲ್ಲವೋ ಅವನಿಗೆ ನಿನ್ನಲ್ಲಿರುವ ಬ್ರಹ್ಮಹತ್ಯೆಯು ಹೋಗಿ ಸೇರಿಕೊಳ್ಳಲಿ. ನನ್ನ ಆಶ್ವಾಸನೆಯಿಂದ ನಿನ್ನ ಮನಸ್ಸಿನ ಆತಂಕವು ಪರಿಹಾರವಾಗಲಿ.

ಭೀಷ್ಮಃ

ಇತ್ಯುಕ್ತಃ ಪ್ರತಿಜಗ್ರಾಹ ತದ್ವಚೋ ಹವ್ಯಕವ್ಯಭುಕ್ ।
ಪಿತಾಮಹಸ್ಯ ಭಗವಾಂಸ್ತಥಾ ಚ ತದಭೂತ್ ಪ್ರಭೋ ॥೩೩॥

ಭೀಷ್ಮ– ಯುಧಿಷ್ಠಿರನೇ, ಬ್ರಹ್ಮನು ಹೀಗೆ ಹೇಳಿದ ಬಳಿಕ ಹವ್ಯ-ಕವ್ಯಗಳನ್ನು ಸ್ವೀಕರಿಸುವ ಅಗ್ನಿದೇವನು ಚತುರ್ಮುಖನ ಮಾತನ್ನು ಸ್ವೀಕರಿಸಿದನು. ಕೂಡಲೇ ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗವು ಅಗ್ನಿಯಲ್ಲಿ ಸೇರಿಕೊಂಡಿತು.

ತತೋ ವೃಕ್ಷೌಷಧಿತೃಣಂ ಸಮಾಹೂಯ ಪಿತಾಮಹಃ ।
ಇಮಮರ್ಥಂ ಮಹಾರಾಜ ವಕ್ತುಂ ಸಮುಪಚಕ್ರಮೇ ॥೩೪॥

ಬಳಿಕ ಚತುರ್ಮುಖನು ವೃಕ್ಷ, ತೃಣ, ಓಷಧಿಗಳ ದೇವತೆಗಳನ್ನು ಆಹ್ವಾನಿಸಿ ಬ್ರಹ್ಮಹತ್ಯೆಯನ್ನು ಸ್ವೀಕರಿಸುವಂತೆ ಅವರಿಗೆ ಆದೇಶಿಸಿದನು.

ತತೋ ವೃಕ್ಷೌಷಧಿತೃಣಂ ತಥೈವೋಕ್ತಂ ಯಥಾತಥಮ್ ।
ವ್ಯಥಿತಂ ವಹ್ನಿವದ್ರಾಜನ್ ಬ್ರಹ್ಮಾಣಮಿದಮಬ್ರವೀತ್ ॥೩೫॥

ಬ್ರಹ್ಮನು ವೃಕ್ಷ, ಓಷಧಿ, ತೃಣಗಳಿಗೆ ಅಗ್ನಿದೇವನಿಗೆ ತಿಳಿಸಿದಂತೆಯೇ ಹೇಳಿದಾಗ ಅಗ್ನಿದೇವನಂತೆಯೇ ವೃಕ್ಷ-ಓಷಧಿ-ತೃಣಗಳು ತಮ್ಮಲ್ಲಿ ಸೇರಿದ ಬ್ರಹ್ಮಹತ್ಯೆಯನ್ನು ಪರಿಹರಿಸಿಕೊಳ್ಳಲು ಉಪಾಯವೇನೆಂದು ಕೇಳಿದರು.

ಅಸ್ಮಾಕಂ ಬ್ರಹ್ಮಹತ್ಯಾತೋ ಕೋಽಂತೋ ಲೋಕಪಿತಾಮಹ ।
ಸ್ವಭಾವನಿಹತಾನಸ್ಮಾನ್ನ ಪುನರ್ಹಂತುಮರ್ಹಸಿ ॥೩೬॥

ಪಿತಾಮಹನೇ, ಬ್ರಹ್ಮಹತ್ಯಾ ದೋಷದಿಂದ ನಾವು ಮುಕ್ತರಾಗುವ ಬಗೆ ಹೇಗೆ? ನಾವು ಈಗಾಗಲೇ ದೈವದಿಂದ ಚ್ಯುತರಾಗಿ ಸ್ಥಾವರಯೋನಿಗಳಲ್ಲಿ ಹುಟ್ಟಿದ್ದೆವು. ಪುನಃ ನಮ್ಮಲ್ಲಿ ಬ್ರಹ್ಮಹತ್ಯೆಯನ್ನು ಸೇರಿಸುವುದು ಉಚಿತವೆನಿಸುವುದಿಲ್ಲ.

ವಯಮಗ್ನಿಂ ತಥಾ ಶೀತಂ ವರ್ಷಂ ಚ ಪವನೇರಿತಮ್ ।
ಸಹಾಮಃ ಸತತಂ ದೇವ ತಥಾ ಛೇದನಭೇದನಮ್ ॥೩೭॥

ತ್ರಿಲೋಕೇಶನೇ, ದೇವದೇವನೇ, ಅಗ್ನಿ, ವಾಯು, ಶೀತ, ಮಳೆ, ಛೇದನ, ಭೇದನ ಹೀಗೆ ಅನೇಕ ವಿಧವಾದ ಉಪದ್ರವಗಳನ್ನು ಸಹಿಸಿಕೊಂಡೇ ಬದುಕುತ್ತಿದ್ದೇವೆ.

ಬ್ರಹ್ಮಹತ್ಯಾಮಿಮಾಮದ್ಯ ಭವತಃ ಶಾಸನಾದ್ವಯಮ್ ।
ಗ್ರಹೀಷ್ಯಾಮಸ್ತ್ರಿಲೋಕೇಶ ಮೋಕ್ಷಂ ಚಿಂತಯತಾಂ ಭವಾನ್ ॥೩೮॥

ನಿನ್ನ ಆದೇಶದಂತೆ ಬ್ರಹ್ಮಹತ್ಯೆಯ ನಾಲ್ಕನೆಯ ಒಂದಂಶವನ್ನು ಸ್ವೀಕರಿಸುತ್ತೇವೆ. ಆದರೆ ಇದರ ಮೋಕ್ಷವು ಹೇಗೆ ಎಂಬುದನ್ನು ಯೋಚಿಸಿ ತಿಳಿಸು.

ಬ್ರಹ್ಮಾ

ಪರ್ವಕಾಲೇ ತು ಸಂಪ್ರಾಪ್ತೇ ಯೋ ವೈ ಛೇದನಭೇದನಮ್ ।
ಕರಿಷ್ಯತಿ ನರೋ ಮೋಹಾತ್ತಮೇಷಾನುಗಮಿಷ್ಯತಿ ॥೩೯॥

ಬ್ರಹ್ಮಾ– ಸಂಕ್ರಾಂತಿ, ಗ್ರಹಣ, ಹುಣ್ಣಿಮೆ, ಅಮಾವಾಸ್ಯೆ ಮೊದಲಾದ ಪರ್ವ ಕಾಲಗಳಲ್ಲಿ ಯಾವ ಮನುಷ್ಯರು ಮೋಹಗೊಂಡು, ಅಜ್ಞಾನದಿಂದ ನಿಮ್ಮನ್ನು ಕತ್ತರಿಸುತ್ತಾರೋ, ಮುರಿದು ಹಾಕುತ್ತಾರೋ ಅವರಲ್ಲಿ ನಿಮ್ಮಲ್ಲಿರುವ ಬ್ರಹ್ಮಹತ್ಯಾ ದೋಷವು ಬಂದು ಸೇರಿಕೊಳ್ಳಲಿ. ನಿಮ್ಮಿಂದ ಆ ಬ್ರಹ್ಮಹತ್ಯೆಯು ದೂರಹೋಗಲಿ.

ಭೀಷ್ಮಃ

ತತೋ ವೃಕ್ಷೌಷಧಿತೃಣಮೇವಮುಕ್ತಂ ಮಹಾತ್ಮನಾ ।
ಬ್ರಹ್ಮಾಣಮಭಿಸಂಪೂಜ್ಯ ಜಗಾಮಾಶು ಯಥಾಗತಮ್ ॥೪೦॥

ಭೀಷ್ಮ– ಕುಮಾರನೇ, ಪೂಜ್ಯನಾದ ಚತುರ್ಮುಖನು ಹೀಗೆ ಹೇಳಿದ ಬಳಿಕ ವೃಕ್ಷ-ಓಷಧಿ-ತೃಣದೇವತೆಗಳು ಬ್ರಹ್ಮನ ಆದೇಶವನ್ನು ಒಪ್ಪಿ, ಬ್ರಹ್ಮನನ್ನು ಪೂಜಿಸಿ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು.

ಆಹೂಯಾಪ್ಸರಸೋ ದೇವಸ್ತತೋ ಲೋಕಪಿತಾಮಹಃ ।
ವಾಚಾ ಮಧುರಯಾ ಪ್ರಾಹ ಸಾಂತ್ವಯನ್ನಿವ ಭಾರತ ॥೪೧॥

ಬಳಿಕ ಲೋಕಪಿತಾಮಹನಾದ, ದೇವದೇವನಾದ ಬ್ರಹ್ಮನು ಅಪ್ಸರೆಯರನ್ನು ಆಹ್ವಾನಿಸಿ ಮಧುರವಾದ ಮಾತುಗಳಿಂದ ಅವರನ್ನು ಸಂತೈಸುತ್ತಾ ಹೀಗೆ ಹೇಳಿದನು.

ಇಯಮಿಂದ್ರಾದನುಪ್ರಾಪ್ತಾ ಬ್ರಹ್ಮಹತ್ಯಾ ವರಾಂಗನಾಃ ।
ಚತುರ್ಥಮಸ್ಯಾ ಭಾಗಂ ಹಿ ಮಯೋಕ್ತಾಃ ಸಂಪ್ರತೀಚ್ಛತ ॥೪೨॥

ವರಾಂಗನೆಯರೇ, ಬ್ರಹ್ಮಹತ್ಯಾ ಪಾಪವು ಇಂದ್ರನಿಂದ ಬಂದಿದೆ. ನನ್ನ ಆಜ್ಞೆಯಂತೆ ನೀವೂ ಇದರಲ್ಲಿ ನಾಲ್ಕನೆಯ ಒಂದಂಶವನ್ನು ಸ್ವೀಕರಿಸಿರಿ.

ಅಪ್ಸರಸಃ

ಗ್ರಹಣೇ ಕೃತಬುದ್ಧೀನಾಂ ದೇವೇಶ ತವ ಶಾಸನಾತ್ ।
ಮೋಕ್ಷಂ ಸಮಯತೋಽಸ್ಮಾಕಂ ಚಿಂತಯಸ್ವ ಪಿತಾಮಹ ॥೪೩॥

ಅಪ್ಸರೆಯರು– ದೇವೇಶನೇ, ನಿನ್ನ ಆಜ್ಞೆಯಂತೆ ನಾವು ಬ್ರಹ್ಮಹತ್ಯೆಯ ನಾಲ್ಕನೆಯ ಒಂದಂಶವನ್ನು ಸ್ವೀಕರಿಸಲು ತಯಾರಾಗಿದ್ದೇವೆ. ಆದರೆ ಇದರಿಂದ ನಮ್ಮ ಮುಕ್ತಿಯು ಯಾವಾಗ ಎಂಬುದನ್ನು ಯೋಚಿಸಿ ತಿಳಿಸಿರಿ.

ಬ್ರಹ್ಮಾ

ರಜಸ್ವಲಾಸು ನಾರೀಷು ಯೋ ವೈ ಮೈಥುನಮಾಚರೇತ್ ।
ತಮೇಷಾ ಯಾಸ್ಯತಿ ಕ್ಷಿಪ್ರಾಂ ವ್ಯೇತು ವೋ ಮಾನಸೋ ಜ್ವರಃ ॥೪೪॥

ಬ್ರಹ್ಮಾ– ಯಾವ ಮನುಷ್ಯನು ಸ್ತ್ರೀಯರು ರಜಸ್ವಲೆಯರಾದಾಗ ಅವರಲ್ಲಿ ಸಮಾಗಮ ಮಾಡುತ್ತಾನೋ ಅಂತಹ ಮನುಷ್ಯನಲ್ಲಿ ನಿಮ್ಮಲ್ಲಿರುವ ಬ್ರಹ್ಮಹತ್ಯೆಯ ಅಂಶವು ಸೇರಿಕೊಳ್ಳಲಿ. ನಿಮ್ಮ ಮನಸ್ಸಿನಲ್ಲಿರುವ ಆತಂಕವು ದೂರವಾಗಲಿ.

ಭೀಷ್ಮಃ

ತಥೇತಿ ಹೃಷ್ಟಮನಸ ಉಕ್ತ್ವಾಥಾಪ್ಸರಸಾಂ ಗಣಾಃ ।
ಸ್ವಾನಿ ಸ್ಥಾನಾನಿ ಸಂಪ್ರಾಪ್ಯ ರೇಮಿರೇ ಭರತರ್ಷಭ ॥೪೫॥

ಭೀಷ್ಮ– ಯುಧಿಷ್ಠಿರನೇ, ಬ್ರಹ್ಮನ ಮಾತನ್ನು ಕೇಳಿ ಸಂತುಷ್ಟರಾದ ಅಪ್ಸರಾ ಸ್ತ್ರೀಯರು ಬ್ರಹ್ಮನಲ್ಲಿ ಹಾಗೆಯೇ ಆಗಲಿ ಎಂದು ಹೇಳಿ ತಮ್ಮ ಸ್ಥಾನಕ್ಕೆ ವಿಹರಿಸಲು ತೆರಳಿದರು.

ತತಸ್ತ್ರಿಲೋಕಕೃದ್ ದೇವಃ ಪುನರೇವ ಮಹಾತಪಾಃ ।
ಆಪಃ ಸಂಚಿಂತಯಾಮಾಸ ಧ್ಯಾತಾಸ್ತಾಶ್ಚಾಪ್ಯಥಾಗಮನ್ ॥೪೬॥

ಪುನಃ ಮೂರುಲೋಕಗಳ ಸೃಷ್ಟಿಕರ್ತನಾದ, ಮಹಾತಪಸ್ವಿಯಾದ, ದೇವದೇವನಾದ ಪ್ರಜಾಪತಿಯು ನೀರಿನ ಅಭಿಮಾನಿದೇವತೆಗಳನ್ನೂ ಕುರಿತು ಯೋಚಿಸಿದನು. ಅವನ ಸ್ಮರಣೆಗೆ ಅನುಗುಣವಾಗಿ ನೀರಿನ ಅಭಿಮಾನಿ ದೇವತೆಗಳು ಆಗಮಿಸಿದರು.

ತಾಸ್ತು ಸರ್ವಾಃ ಸಮಾಗಮ್ಯ ಬ್ರಹ್ಮಾಣಮಮಿತೌಜಸಮ್ ।
ಇದಮೂಚುರ್ವಚೋ ರಾಜನ್ ಪ್ರಣಿಪತ್ಯ ಪಿತಾಮಹಮ್ ॥೪೭॥

ಆ ದೇವತೆಗಳೆಲ್ಲರೂ ಬಂದು ಅಮಿತಪರಾಕ್ರಮಿಯಾದ ಬ್ರಹ್ಮನಿಗೆ ಸಾಷ್ಟಾಂಗ ನಮಿಸಿ ಹೀಗೆ ಹೇಳಿದರು.

ಇಮಾಃ ಸ್ಮ ದೇವ ಸಂಪ್ರಾಪ್ತಾಸ್ತ್ವತ್ಸಕಾಶಮರಿಂದಮ ।
ಶಾಸನಾತ್ತವ ದೇವೇಶ ಸಮಾಜ್ಞಾಪಯ ನೋ ವಿಭೋ ॥೪೮॥

ಲೋಕೇಶನೇ, ಅರಿಂದಮನೇ, ನಿನ್ನ ಆದೇಶದಂತೆ ಜಲಾಭಿಮಾನಿಗಳಾದ ನಾವೆಲ್ಲರೂ ನಿನ್ನ ಸನಿಹಕ್ಕೆ ಬಂದಿರುತ್ತೇವೆ. ನಿನ್ನ ಪ್ರೀತಿಗಾಗಿ ನಿನ್ನ ಆದೇಶದಂತೆ ಏನು ಮಾಡಬೇಕೆಂಬುದನ್ನು ಆಜ್ಞಾಪಿಸು.

ಬ್ರಹ್ಮಾ

ಇಯಂ ವೃತ್ರಾದನುಪ್ರಾಪ್ತಾ ಪುರುಹೂತಂ ಮಹಾಭಯಾ ।
ಬ್ರಹ್ಮಹತ್ಯಾ ಚತುರ್ಥಾಂಶಮಸ್ಯಾ ಯೂಯಂ ಪ್ರತೀಚ್ಛತ ॥೪೯॥

ಬ್ರಹ್ಮಾ– ದೇವತೆಗಳೇ, ವೃತ್ರಾಸುರನನ್ನು ಸಂಹರಿಸಿದ ಭಯಂಕರವಾದ ಬ್ರಹ್ಮಹತ್ಯೆಯು ಇಂದ್ರನನ್ನು ಸೇರಿದೆ. ಆದರೆ ಅದು ಇಂದ್ರನಿಂದ ಈಗ ಹೊರ ಬಂದಿದೆ. ಬ್ರಹ್ಮಹತ್ಯೆಯ ನಾಲ್ಕನೆಯ ಒಂದಂಶವನ್ನು ನೀವೂ ಸ್ವೀಕರಿಸಿರಿ.

ಆಪಃ

ಏವಂ ಭವತು ಲೋಕೇಶ ಯಥಾ ವದಸಿ ನಃ ಪ್ರಭೋ ।
ಮೋಕ್ಷಂ ಸಮಯತೋಽಸ್ಮಾಕಂ ಸಂಚಿಂತಯಿತುಮರ್ಹಸಿ ॥೫೦॥

ನೀರಿನ ಅಭಿಮಾನಿಗಳು– ದೇವೇಶನೇ, ನೀನು ಹೇಳಿದಂತೆಯೇ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ಬ್ರಹ್ಮಹತ್ಯೆಯಿಂದ ಯಾವಾಗ ಮುಕ್ತರಾಗುತ್ತೇವೆ? ಇದನ್ನು ಯೋಚಿಸಿ ಹೇಳು.

ತ್ವಂ ಹಿ ದೇವೇಶ ಸರ್ವಸ್ಯ ಜಗತಃ ಪರಮೋ ಗುರುಃ ।
ಕೋಽನ್ಯಃ ಪ್ರಸಾದೋ ಹಿ ಭವೇದ್ಯಃ ಕೃಚ್ಛ್ರಾನ್ನಃ ಸಮುದ್ಧರೇತ್ ॥೫೧॥

ಭಗವಂತನೇ, ನೀನೇ ಜಗತ್ತಿಗೆ ಆಶ್ರಯನಾಗಿರುವಿ. ಕಷ್ಟದಿಂದ ಎಲ್ಲರನ್ನು ಉದ್ಧರಿಸುವ ನಿನ್ನ ಅನುಗ್ರಹವನ್ನು ನಾವು ಯಾವಾಗಲೂ ಬಯಸುತ್ತೇವೆ.

ಬ್ರಹ್ಮಾ

ಅಲ್ಪಾ ಇತಿ ಮತಿಂ ಕೃತ್ವಾ ಯೋ ನರೋ ಬುದ್ಧಿಮೋಹಿತಃ ।
ಶ್ಲೇಷ್ಮಮೂತ್ರಪುರೀಷಾಣಿ ಯುಷ್ಮಾಸು ಪ್ರತಿಮೋಕ್ಷ್ಯತಿ ॥೫೨॥

ತಮೇಷಾ ಯಾಸ್ಯತಿ ಕ್ಷಿಪ್ರಾಂ ತತ್ರೈವ ಚ ನಿವತ್ಸ್ಯತಿ ।
ತಥಾ ವೋ ಭವಿತಾ ಮೋಕ್ಷ ಇತಿ ಸತ್ಯಂ ಬ್ರವೀಮಿ ವಃ ॥೫೩॥

ಬ್ರಹ್ಮಾ– ಯಾವ ಮನುಷ್ಯರು ಮೋಹದ ಬುದ್ಧಿಯಿಂದ ನಿಮ್ಮನ್ನು ಅಲ್ಪರೆಂದು, ಏನೂ ಮಾಡಲು ಆಗದೆಂದು ತಿಳಿದು ನಿಮ್ಮಲ್ಲಿ ಶ್ಲೇಷ್ಮ, ಮೂತ್ರವನ್ನು ವಿಸರ್ಜಿಸುತ್ತಾರೋ ಅಂತಹವರಿಗೆ ನಿಮ್ಮಲ್ಲಿರುವ ಬ್ರಹ್ಮಹತ್ಯೆಯು ಸೇರಿಕೊಳ್ಳಲಿ. ಅಂದು ನೀವು ಬ್ರಹ್ಮಹತ್ಯೆಯಿಂದ ಬಿಡುಗಡೆಯನ್ನು ಹೊಂದುತ್ತೀರಿ. ನಾನು ಸತ್ಯವಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ.

ಭೀಷ್ಮಃ

ತತೋ ವಿಮುಚ್ಯ ದೇವೇಂದ್ರಂ ಬ್ರಹ್ಮಹತ್ಯಾ ಯುಧಿಷ್ಠಿರ ।
ಯಥಾನಿಸೃಷ್ಟಂ ತಂ ದೇಶಮಗಚ್ಛದ್ದೇವಶಾಸನಾತ್ ॥೫೪॥

ಭೀಷ್ಮ– ಯುಧಿಷ್ಠಿರನೇ, ಬ್ರಹ್ಮಹತ್ಯೆಯು ದೇವರಾಜನಾದ ಇಂದ್ರನನ್ನು ಬಿಟ್ಟು ಬ್ರಹ್ಮನ ಆಜ್ಞೆಯಂತೆ ಅಗ್ನಿಯಲ್ಲಿ, ವೃಕ್ಷ-ಓಷಧಿ-ತೃಣಗಳಲ್ಲಿ, ಅಪ್ಸರೆಯರಲ್ಲಿ, ನೀರಿನಲ್ಲಿ ನಾಲ್ಕು ವಿಭಾಗವಾಗಿ ಸೇರಿಕೊಂಡಿತು.

ಏವಂ ಶಕ್ರೇಣ ಸಂಪ್ರಾಪ್ತಾ ಬ್ರಹ್ಮಹತ್ಯಾ ಜನಾಧಿಪ ।
ಪಿತಾಮಹಮನುಜ್ಞಾಪ್ಯ ಸೋಽಶ್ವಮೇಧಮಕಲ್ಪಯತ್ ॥೫೫॥

ಹೀಗೆ ವೃತ್ರ ವಧೆಯಿಂದ ಇಂದ್ರನಿಗೆ ಬ್ರಹ್ಮಹತ್ಯಾ ಪಾಪವು ಒದಗಿತು. ಇಂದ್ರನು ಬ್ರಹ್ಮನ ಅಪ್ಪಣೆಯನ್ನು ಸ್ವೀಕರಿಸಿ ಅಶ್ವಮೇಧ ಯಾಗವನ್ನು ಮಾಡಿದನು.

ಶ್ರೂಯತೇ ಹಿ ಮಹಾರಾಜ ಸಂಪ್ರಾಪ್ತಾ ವಾಸವೇನ ವೈ ।
ಬ್ರಹ್ಮಹತ್ಯಾ ತತಃ ಶುದ್ಧಿಂ ಹಯಮೇಧೇನ ಲಬ್ಧವಾನ್ ॥೫೬॥

ಪ್ರಾಜ್ಞನೇ, ಇಂದ್ರನಿಗೆ ವೃತ್ರಹತ್ಯೆಯ ಪಾಪವು ಪ್ರಾಪ್ತವಾಯಿತೆಂದು, ಅಶ್ವಮೇಧ ಯಾಗ ಮಾಡಿ ಶುದ್ಧಿಯನ್ನು ಹೊಂದಿದನೆಂದು ನಾವು ಕೇಳಿದ್ದೇವೆ.

ಸಮವಾಪ್ಯ ಶ್ರಿಯಂ ದೇವೋ ಹತ್ವಾರೀಂಶ್ಚ ಸಹಸ್ರಶಃ ।
ಪ್ರಹರ್ಷಮತುಲಂ ಲೇಭೇ ವಾಸವಃ ಪೃಥಿವೀಪತೇ ॥೫೭॥

ಇಂದ್ರನು ಸಾವಿರಾರು ಸಂಖ್ಯೆಯ ಶತ್ರುಗಳನ್ನು ಸಂಹಾರ ಮಾಡಿ, ಭ್ರಷ್ಟವಾದ ರಾಜ್ಯಲಕ್ಷ್ಮಿಯನ್ನು ಪುನಃ ಪಡೆದು ತುಲನೆಯಿಲ್ಲದ ಆನಂದವನ್ನು ಹೊಂದಿದನು.

ವೃತ್ರಸ್ಯ ರುಧಿರಾಚ್ಚೈವ ಖುಖುಂಡಾಃ ಪಾರ್ಥ ಜಜ್ಞಿರೇ ।
ದ್ವಿಜಾತಿಭಿರಭಕ್ಷ್ಯಾಸ್ತೇ ದೀಕ್ಷಿತೈಶ್ಚ ತಪೋಧನೈಃ ॥೫೮॥

ವೃತ್ರಾಸುರನ ರಕ್ತದಿಂದ ತಲೆಯಲ್ಲಿ ಕುಚ್ಚುಗಳಿರುವ ನವಿಲುಗಳೇ ಮೊದಲಾದ ಅನೇಕ ಜಾತಿಯ ಪಕ್ಷಿಗಳು ಹುಟ್ಟಿದವು. ಆದ್ದರಿಂದ ದ್ವಿಜರಿಂದ, ಯಜ್ಞ ದೀಕ್ಷಿತರಿಂದ, ತಪಸ್ವಿಗಳಿಂದ ಆ ಪಕ್ಷಿಗಳು ಅಭಕ್ಷ್ಯ ಎಂದು ಹೇಳಲ್ಪಟ್ಟಿವೆ.

ಸರ್ವಾವಸ್ಥಂ ತ್ವಮಪ್ಯೇಷಾಂ ದ್ವಿಜಾತೀನಾಂ ಪ್ರಿಯಂ ಕುರು ।
ಇಮೇ ಹಿ ಭೂತಲೇ ದೇವಾಃ ಪ್ರಥಿತಾಃ ಕುರುನಂದನ ॥೫೯॥

ಕುರುನಂದನನೇ, ನೀನು ಬ್ರಾಹ್ಮಣರಿಗೆ ಎಲ್ಲ ಅವಸ್ಥೆಗಳಲ್ಲಿಯೂ ಸಂತೋಷವನ್ನು ಉಂಟುಮಾಡು. ಭೂಲೋಕದಲ್ಲಿ ಬ್ರಾಹ್ಮಣರೇ ದೇವತೆಗಳೆಂದು ಪ್ರಸಿದ್ಧರಾಗಿರುತ್ತಾರೆ.

ಏವಂ ಶಕ್ರೇಣ ಕೌರವ್ಯ ಬುದ್ಧಿಸೌಕ್ಷ್ಮ್ಯಾನ್ಮಹಾಸುರಃ ।
ಉಪಾಯಪೂರ್ವಂ ನಿಹತೋ ವೃತ್ರೋಽಥಾಮಿತತೇಜಸಾ ॥೬೦॥

ಹೀಗೆ ಅಮಿತ ತೇಜಸ್ವಿಯಾದ ಇಂದ್ರನು ಸೂಕ್ಷ್ಮ ಬುದ್ಧಿಯನ್ನು ಆಶ್ರಯಿಸಿ ಉಪಾಯದಿಂದ ಮಹಾ ಅಸುರನಾದ ವೃತ್ರನನ್ನು ಸಂಹಾರ ಮಾಡಿದನು.

ಏವಂ ತ್ವಮಪಿ ಕೌರವ್ಯ ಪೃಥಿವ್ಯಾಮಪರಾಜಿತಃ ।
ಭವಿಷ್ಯಸಿ ಯಥಾ ದೇವಃ ಶತಕ್ರತುರಮಿತ್ರಹಾ ॥೬೧॥

ಅವನು ಹೇಗೆ ಉಪಾಯದಿಂದ ಶತ್ರುಗಳನ್ನು ಗೆದ್ದನೋ ಅದೇ ರೀತಿ ನೀನೂ ಕೂಡ ಭೂಮಂಡಲದಲ್ಲಿ ಯಾರಿಂದಲೂ ಸೋಲುಣ್ಣದವನಾಗುತ್ತಿ.

ಯೇ ತು ಶಕ್ರಕಥಾಂ ದಿವ್ಯಾಮಿಮಾಂ ಪರ್ವಸು ಪರ್ವಸು ।
ವಿಪ್ರಮಧ್ಯೇ ಪಠಿಷ್ಯಂತಿ ನ ತೇ ಪ್ರಾಪ್ಸ್ಯಂತಿ ಕಿಲ್ಬಿಷಮ್ ॥೬೨॥

ಪರ್ವ ಪರ್ವಗಳಲ್ಲಿಯೂ ಯಾರು ಈ ಶಕ್ರನ ದಿವ್ಯವಾದ ಕಥೆಯನ್ನು ಬ್ರಾಹ್ಮಣರ ಮಧ್ಯದಲ್ಲಿ ಕೇಳುತ್ತಾರೋ ಅವರು ಯಾವಾಗಲೂ ಪಾಪಗಳನ್ನು ಹೊಂದುವುದಿಲ್ಲ.

ಇತ್ಯೇತದ್ ವೃತ್ರಮಾಶ್ರಿತ್ಯ ಶಕ್ರಸ್ಯಾತ್ಯದ್ಭುತಂ ಮಹತ್ ।
ಕಥಿತಂ ಕರ್ಮ ತೇ ತಾತ ಕಿಂ ಭೂಯಃ ಶ್ರೋತುಮಿಚ್ಛಸಿ ॥೬೩॥

ಧರ್ಮಜನೇ, ನಿನಗೆ ವೃತ್ರಾಸುರನ ಕಥೆಯ ಪ್ರಸಂಗದಲ್ಲಿ ಅದ್ಭುತವಾದ ಇಂದ್ರನ ಕಾರ್ಯದ ಚರಿತ್ರೆಯನ್ನು ಹೇಳಿದ್ದೇನೆ. ನೀನು ನನ್ನಿಂದ ಇನ್ನೇನು ಕೇಳಲು ಬಯಸಿರುವಿ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷೋಡಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೇಳನೆಯ ಅಧ್ಯಾಯ

ರುದ್ರನಿಂದ ದಕ್ಷಯಜ್ಞದ ಧ್ವಂಸ. ಶಿವನ ಕ್ರೋಧದಿಂದ ಜ್ವರದ ಉತ್ಪತ್ತಿ. ಜ್ವರದ ವಿವಿಧ ರೂಪಗಳು.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಅಸ್ತಿ ವೃತ್ರವಧಾದೇವ ವಿವಕ್ಷಾ ಮಮ ಜಾಯತೇ ॥೧॥

ಯುಧಿಷ್ಠಿರ– ಮಹಾಪ್ರಾಜ್ಞನಾದ, ಸರ್ವಶಾಸ್ತ್ರವಿಶಾರದನಾದ ಪಿತಾಮಹನೇ, ವೃತ್ರಾಸುರನ ವಧೆಯ ಪ್ರಸಂಗವನ್ನು ಕೇಳುವಾಗ ಅನೇಕ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಬಯಕೆ ಉಂಟಾಗಿದೆ.

ಜ್ವರೇಣ ಮೋಹಿತೋ ವೃತ್ರಃ ಕಥಿತಸ್ತೇ ಜನಾಧಿಪ ।
ನಿಹತೋ ವಾಸವೇನೇಹ ವಜ್ರೇಣೇತಿ ಮಮಾನಘ ॥೨॥

ರುದ್ರನ ಜ್ವರದಿಂದ ವೃತ್ರಾಸುರನು ಮೋಹಿತನಾದ ಎಂದು ನೀನು ತಿಳಿಸಿರುವೆ. ವಾಸವನು ವಜ್ರಾಯುಧದಿಂದ ಅವನನ್ನು ಸಂಹರಿಸಿದನೆಂದು ನನಗೆ ಹೇಳಿರುವೆ.

ಕಥಮೇಷ ಮಹಾಪ್ರಾಜ್ಞ ಜ್ವರಃ ಪ್ರಾದುರಭೂತ್ ಕುತಃ ।
ಜ್ವರೋತ್ಪತ್ತಿಂ ನಿಪುಣತಃ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥೩॥

ಮಹಾಪ್ರಾಜ್ಞನೇ, ವೃತ್ರನನ್ನೂ ಮೋಹಗೊಳಿಸುವ ಆ ಜ್ವರವು ಹೇಗೆ ಹುಟ್ಟಿತು? ಎಲ್ಲಿಂದ ಹುಟ್ಟಿತು? ಜ್ಞಾನಿಯಾದ ನಿನ್ನಿಂದ ಈ ವಿಷಯವನ್ನು ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಶೃಣು ರಾಜನ್ ಜ್ವರಸ್ಯೇಹ ಸಂಭವಂ ಲೋಕವಿಶ್ರುತಮ್ ।
ವಿಸ್ತರಂ ಚಾಸ್ಯ ವಕ್ಷ್ಯಾಮಿ ಯಾದೃಶಂ ಚೈವ ಭಾರತ ॥೪॥

ಭೀಷ್ಮ– ಯುಧಿಷ್ಠಿರನೇ, ಲೋಕಪ್ರಸಿದ್ಧವಾದ ಜ್ವರದ ಉತ್ಪತ್ತಿಯ ಕಥೆಯನ್ನು ಕೇಳು. ಈ ಪ್ರಸಂಗವು ಹೇಗೆ ನಡೆಯಿತೋ ಅದನ್ನು ವಿಸ್ತಾರವಾಗಿ ಹಾಗೆ ಹೇಳುತ್ತೇನೆ.

ಪುರಾ ಮೇರೋರ್ಮಹಾರಾಜ ಶೃಂಗಂ ತ್ರೈಲೋಕ್ಯವಿಶ್ರುತಮ್ ।
ಜ್ಯೋತಿಷ್ಕಂ ನಾಮ ಸಾವಿತ್ರಂ ಸರ್ವರತ್ನವಿಭೂಷಿತಮ್ ।
ಅಪ್ರಮೇಯಮನಾಧೃಷ್ಯಂ ಸರ್ವಲೋಕೇಷು ಭಾರತ ॥೫॥

ಹಿಂದೆ ಮೂರುಲೋಕಗಳನ್ನು ಪ್ರಸಿದ್ಧನಾದ, ಸೂರ್ಯನಿಗೆ ಸಂಬಂಧಿಸಿದ ಸಮಸ್ತ ರತ್ನಗಳಿಂದ ಅಲಂಕೃತವಾಗಿದ್ದ, ಅಪ್ರಮೇಯವಾದ, ಸರ್ವಲೋಕದವರಿಗೂ ಅಗಮ್ಯವಾದ ಜ್ಯೋತಿಷ್ಕ ಎಂಬ ಮೇರುಪರ್ವತದ ಶಿಖರವಿತ್ತು.

ತತ್ರ ದೇವೋ ಗಿರಿತಟೇ ಹೇಮಧಾತುವಿಭೂಷಿತೇ ।
ಪರ್ಯಂಕ ಇವ ವಿಭ್ರಾಜನ್ನುಪವಿಷ್ಟೋ ಬಭೂವ ಹ ॥೬॥

ಬಂಗಾರದ ಧಾತುಗಳಿಂದ ಅಲಂಕೃತವಾದ ಆ ಗಿರಿತಟದಲ್ಲಿ ದೇವದೇವನಾದ ಪರಶಿವನು ಪರ್ಯಂಕದಲ್ಲಿ ಕುಳಿತಿರುವಂತೆಯೇ ವಿರಾಜಿಸುತ್ತಿದ್ದನು.

ಶೈಲರಾಜಸುತಾ ಚಾಸ್ಯ ನಿತ್ಯಂ ಪಾರ್ಶ್ವೇ ಸ್ಥಿತಾ ಬಭೌ ।
ತಥಾ ದೇವಾ ಮಹಾತ್ಮಾನೋ ವಸವಶ್ಚ ಮಹೌಜಸಃ ॥೭॥

ಹಿಮವದ್ ಪರ್ವತನ ಮಗಳಾದ ಪಾರ್ವತಿಯು ಪರಶಿವನ ಎಡಬದಿಯಲ್ಲಿ ಕುಳಿತು ಶೋಭಿಸುತ್ತಿದ್ದಳು. ಅದರಂತೆ ಮಹಾತ್ಮರಾದ ಅನೇಕ ದೇವತೆಗಳು, ತೇಜಸ್ವಿಗಳಾದ ವಸುಗಳು ಅವನ ಬಳಿ ನೆಲೆಸಿದ್ದರು.

ತಥೈವ ಚ ಮಹಾತ್ಮಾನಾವಶ್ವಿನೌ ಭಿಷಜಾಂ ವರೌ ।
ತಥಾ ವೈಶ್ರವಣೋ ರಾಜಾ ಗುಹ್ಯಕೈರಭಿಸಂವೃತಃ ॥೮॥

ಯಕ್ಷಾಣಾಮಧಿಪಃ ಶ್ರೀಮಾನ್ ಕೈಲಾಸನಿಲಯಃ ಪ್ರಭುಃ ।
ಅಂಗಿರಃಪ್ರಮುಖಾಶ್ಚೈವ ತಥಾ ದೇವರ್ಷಯೋऽಪರೇ ॥೯॥

ವಿಶ್ವಾವಸುಶ್ಚ ಗಂಧರ್ವಸ್ತಥಾ ನಾರದಪರ್ವತೌ ।
ಅಪ್ಸರೋಗಣಸಂಘಾಶ್ಚ ಸಮಾಜಗ್ಮುರನೇಕಶಃ ॥೧೦॥

ಹಾಗೆಯೇ ವೈದ್ಯಶ್ರೇಷ್ಠರಾದ, ಮಹಾತ್ಮರಾದ ಅಶ್ವಿನಿದೇವತೆಗಳು, ಅದರಂತೆ ಯಕ್ಷೇಶ್ವರನಾದ ಪ್ರಭುವಾದ, ಶ್ರೀಮಂತನಾದ, ಗುಹ್ಯಕರಿಂದ ಅಲಂಕೃತನಾದ ಕೈಲಾಸವಾಸಿಯಾದ ಕುಬೇರನು, ಅಂಗಿರಸನೇ ಮೊದಲಾದ ದೇವರ್ಷಿಗಳು,

ಗಂಧರ್ವರಾಜನಾದ ವಿಶ್ವಾವಸು, ನಾರದ ಮತ್ತು ಪರ್ವತರು, ಅಪ್ಸರೆಯರ ಸಮುದಾಯಗಳು ಇವರೆಲ್ಲರೂ ಆ ಪರ್ವತದ ತಪ್ಪಲಿಗೆ ಆಗಮಿಸಿದರು.

ವವೌ ಶಿವಃ ಸುಖೋ ವಾಯುರ್ನಾನಾಗಂಧವಹಃ ಶುಚಿಃ ।
ಸರ್ವರ್ತುಕುಸುಮೋಪೇತಾಃ ಪುಷ್ಪವಂತೋ ಮಹಾದ್ರುಮಾಃ ॥೧೧॥

ಆ ಪರಿಸರದಲ್ಲಿ ಸುಮಂತವನ್ನು ಹೊತ್ತಿರುವ ಪವಿತ್ರವಾದ, ಸುಖದಾಯಕವಾದ, ಮಂಗಳಮಯವಾದ ವಾಯುವು ಮೆಲ್ಲನೆ ಬೀಸುತ್ತಿತ್ತು. ಎಲ್ಲ ಋತುಗಳ ಕುಸುಮಗಳನ್ನು ಧರಿಸಿದ ಮಹಾದ್ರುಮಗಳು ಕಂಗೊಳಿಸುತ್ತಿದ್ದವು.

ತಥಾ ವಿದ್ಯಾಧರಾಶ್ಚೈವ ಸಿದ್ಧಾಶ್ಚೈವ ತಪೋಧನಾಃ ।
ಮಹಾದೇವಂ ಪಶುಪತಿಂ ಪರ್ಯುಪಾಸಂತ ಭಾರತ ॥೧೨॥

ವಿದ್ಯಾಧರರು, ತಪೋಧನರಾದ ಸಿದ್ಧರು ಪಶುಪತಿಯಾದ ಮಹಾರುದ್ರನನ್ನು ಸೇವಿಸುತ್ತಿದ್ದರು.

ಭೂತಾನಿ ಚ ಮಹಾರಾಜ ನಾನಾರೂಪಧರಾಣ್ಯಥ ।
ರಾಕ್ಷಸಾಶ್ಚ ಮಹಾರೌದ್ರಾಃ ಪಿಶಾಚಾಶ್ಚ ಮಹಾಬಲಾಃ ॥೧೩॥

ಬಹುರೂಪಧರಾ ಹೃಷ್ಟಾ ನಾನಾಪ್ರಹರಣೋದ್ಯತಾಃ ।
ದೇವಸ್ಯಾನುಚರಾಸ್ತತ್ರ ತಸ್ಥಿರೇ ಚಾನಲೋಪಮಾಃ ॥೧೪॥

ಮಹಾದೇವನ ಕಿಂಕರರಾದ, ಅಗ್ನಿಗೆ ಸಮವಾಗಿ ಹೋಗಿರುವ, ಅನೇಕ ರೂಪಗಳನ್ನು ಧರಿಸಿರುವ ಭೂತಗಳು, ರಾಕ್ಷಸರು, ಪಿಶಾಚಿಗಳು ಅನೇಕ ಆಯುಧಗಳನ್ನೆತ್ತಿಕೊಂಡು ಪರಮತುಷ್ಟರಾಗಿ ಮಹಾದೇವನ ಸಮೀಪದಲ್ಲಿ ಕಂಗೊಳಿಸುವ ಬೆಂಕಿಯಂತೆ ರುದ್ರನಿಗೆ ಅನುಚರರಾಗಿ ನಿಂತಿದ್ದರು.

ನಂದೀ ಚ ಭಗವಾಂಸ್ತತ್ರ ದೇವಸ್ಯಾನುಮತೇ ಸ್ಥಿತಃ ।
ಪ್ರಗೃಹ್ಯ ಜ್ವಲಿತಂ ಶೂಲಂ ದೀಪ್ಯಮಾನಂ ಸ್ವತೇಜಸಾ ॥೧೫॥

ರುದ್ರನ ಅನುಮತಿಯಂತೆ ಪೂಜ್ಯನಾದ ನಂದಿಯು ಪ್ರಜ್ವಲಿಸುವ ದೇದೀಪ್ಯಮಾನವಾದ ಶೂಲವನ್ನು ಧರಿಸಿ ತನ್ನ ತೇಜಸ್ಸಿನಿಂದ ಮಹಾರುದ್ರನ ಬಳಿ ನಿಂತಿದ್ದನು.

ಗಂಗಾ ಚ ಸರಿತಾಂ ಶ್ರೇಷ್ಠಾ ಸರ್ವತೀರ್ಥಜಲೋದ್ಭವಾ ।
ಪರ್ಯುಪಾಸತ ತಂ ದೇವಂ ರೂಪಿಣೀ ಕುರುನಂದನ ॥೧೬॥

ತೀರ್ಥಗಳಲ್ಲಿಯೇ ಶ್ರೇಷ್ಠಳೆನಿಸಿದ, ಸರ್ವತೀರ್ಥಗಳಲ್ಲಿ ಉದ್ಭವಳಾಗುವ ಗಂಗಾದೇವಿಯು ದಿವ್ಯರೂಪವನ್ನು ಧರಿಸಿ ಮಹರುದ್ರನನ್ನು ಉಪಾಸನೆ ಮಾಡುತ್ತಿದ್ದಳು.

ಏವಂ ಸ ಭಗವಾಂಸ್ತತ್ರ ಪೂಜ್ಯಮಾನಃ ಸುರರ್ಷಿಭಿಃ ।
ದೇವೈಶ್ಚ ಸುಮಹಾಭಾಗೈರ್ಮಹಾದೇವೋ ವ್ಯತಿಷ್ಠತ ॥೧೭॥

ಹೀಗೆ ದೇವರ್ಷಿಗಳಿಂದಲೂ, ದೇವತೆಗಳಿಂದಲೂ ಪೂಜೆಗೊಳ್ಳುತ್ತಿರುವ ಮಹಾತೇಜಸ್ವಿಯಾದ ಭಗವಾನ್ ಮಹರುದ್ರನು ಜ್ಯೋತಿಶ್ರವೆಂಬ ಮೇರುಪರ್ವತದ ಶಿಖರದ ತಪ್ಪಲಿನಲ್ಲಿ ವಿರಾಜಿಸುತ್ತಿದ್ದನು.

ಕಸ್ಯಚಿತ್ತ್ವಥ ಕಾಲಸ್ಯ ದಕ್ಷೋ ನಾಮ ಪ್ರಜಾಪತಿಃ ।
ಪೂರ್ವೋಕ್ತೇನ ವಿಧಾನೇನ ಯಕ್ಷ್ಯಮಾಣೋऽನ್ವಪದ್ಯತ ॥೧೮॥

ಸ್ವಲ್ಪ ಕಾಲದ ಬಳಿಕ ದಕ್ಷ ಎಂಬ ಪ್ರಜಾಪತಿಯು ಶಾಸ್ತ್ರೀಯ ವಿಧಾನದಂತೆ ಯಜ್ಞವನ್ನು ಮಾಡಲು ಸಂಕಲ್ಪಿಸಿ ಅದಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದನು.

ತತಸ್ತಸ್ಯ ಮಖಂ ದೇವಾಃ ಸರ್ವೇ ಶಕ್ರಪುರೋಗಮಾಃ ।
ಗಮನಾಯ ಸಮಾಗಮ್ಯ ಬುದ್ಧಿಮಾಪೇದಿರೇ ತದಾ ॥೧೯॥

ಅದೇ ಸಮಯದಲ್ಲಿ ಇಂದ್ರನೇ ಮೊದಲಾದ ದೇವತೆಗಳು ಪರಸ್ಪರ ಯೋಚನೆ ಮಾಡಿ ದಕ್ಷಪ್ರಜಾಪತಿಯ ಯಜ್ಞಕ್ಕೆ ಹೋಗಲು ನಿಶ್ಚಯಿಸಿದರು.

ತೇ ವಿಮಾನೈರ್ಮಹಾತ್ಮಾನೋ ಜ್ವಲಿತೈರ್ಜ್ವಲನಪ್ರಭಾಃ ।
ದೇವಸ್ಯಾನುಮತೇऽಗಚ್ಛನ್ ಗಂಗಾದ್ವಾರಮಿತಿ ಶ್ರುತಿಃ ॥೨೦॥

ಆ ಮಹಾತ್ಮರಾದ ಇಂದ್ರಾದಿ ದೇವತೆಗಳು ರುದ್ರನ ಅನುಮತಿಯನ್ನು ಪಡೆದು, ಅಗ್ನಿಸೂರ್ಯನ ಪ್ರಭೆಯಂತೆ ಹೊಳೆಯುವ ವಿಮಾನಗಳ ಮೂಲಕ ಗಂಗಾದ್ವಾರಕ್ಕೆ ಅರ್ಥಾತ್ ಹರಿದ್ವಾರಕ್ಕೆ ಆಗಮಿಸಿದರು.

ಪ್ರಸ್ಥಿತಾ ದೇವತಾ ದೃಷ್ಟ್ವಾ ಶೈಲರಾಜಸುತಾ ತದಾ ।
ಉವಾಚ ವಚನಂ ಸಾಧ್ವೀ ದೇವಂ ಪಶುಪತಿಂ ಪತಿಮ್ ॥೨೧॥

ದೇವತೆಗಳೆಲ್ಲರೂ ದಕ್ಷ ಯಜ್ಞಕ್ಕೆ ಹೊರಟಿದ್ದನ್ನು ಕಂಡ ಸಾಧ್ವಿಯಾದ, ಶೈಲರಾಜನ ಸುತೆಯಾದ ಸತಿ ದೇವಿಯು ಪಶುಪತಿಯನ್ನು ಕುರಿತು ಹೀಗೆ ಹೇಳಿದಳು.

ಭಗವನ್ ಕ್ವ ನು ಯಾಂತ್ಯೇತೇ ದೇವಾಃ ಶಕ್ರಪುರೋಗಮಾಃ ।
ಬ್ರೂಹಿ ತತ್ತ್ವೇನ ತತ್ತ್ವಜ್ಞ ಸಂಶಯೋ ಮೇ ಮಹಾನಯಮ್ ॥೨೨॥

ಪೂಜ್ಯನೇ, ಇಂದ್ರಾದಿ ದೇವತೆಗಳೆಲ್ಲ ಎಲ್ಲಿಗೆ ಹೋಗುತ್ತಿದ್ದಾರೆ? ತತ್ತ್ವಜ್ಞನೇ, ಯಥಾರ್ಥವಾಗಿ ಈ ವಿಷಯವನ್ನು ಹೇಳು. ನನ್ನ ಮನಸ್ಸಿನಲ್ಲಿ ದೊಡ್ಡ ಸಂಶಯ ಉಂಟಾಗಿದೆ.

ಮಹೇಶ್ವರಃ

ದಕ್ಷೋ ನಾಮ ಮಹಾಭಾಗೇ ಪ್ರಜಾನಾಂ ಪತಿರುತ್ತಮಃ ।
ಹಯಮೇಧೇನ ಯಜತೇ ತತ್ರ ಯಾಂತಿ ದಿವೌಕಸಃ ॥೨೩॥

ಮಹೇಶ್ವರ– ಮಹಾಭಾಗಳೇ, ಪ್ರಜಾಪತಿ ಶ್ರೇಷ್ಠನಾದ ದಕ್ಷ ಪ್ರಜಾಪತಿಯು ಅಶ್ವಮೇಧ ಯಜ್ಞವನ್ನು ಮಾಡುತ್ತಿದ್ದಾನೆ. ದೇವತೆಗಳೆಲ್ಲರೂ ಅಲ್ಲಿಗೆ ತೆರಳುತ್ತಿದ್ದಾರೆ.

ಉಮಾಃ

ಯಜ್ಞಮೇತಂ ಮಹಾಭಾಗ ಕಿಮರ್ಥಂ ನಾಭಿಗಚ್ಛಸಿ ।
ಕೇನ ವಾ ಪ್ರತಿಷೇಧೇನ ಗಮನಂ ತೇ ನ ವಿದ್ಯತೇ ॥೨೪॥

ಉಮಾ– ಮಹಾದೇವನೇ, ದಕ್ಷ ಪ್ರಜಾಪತಿಯ ಯಾಗಕ್ಕೆ ನೀನೇಕೆ ಹೋಗುವುದಿಲ್ಲ? ಯಾವ ತಡೆಯಾದ ಕಾರಣದಿಂದ ನೀನು ಅಲ್ಲಿಗೆ ಹೋಗದಂತಾಗಿದೆ?

ಮಹೇಶ್ವರಃ

ಸುರೈರೇವ ಮಹಾಭಾಗೇ ಸರ್ವಮೇತದನುಷ್ಠಿತಮ್ ।
ಯಜ್ಞೇಷು ಸರ್ವೇಷು ಮಮ ನ ಭಾಗ ಉಪಕಲ್ಪಿತಃ ॥೨೫॥

ಮಹೇಶ್ವರ– ಭಾಗ್ಯಶಾಲಿನಿಯೇ, ಆ ಯಜ್ಞದಲ್ಲಿ ನನಗೆ ಹವಿರ್ಭಾವವು ಇರುವುದಿಲ್ಲ. ಈ ಪದ್ಧತಿಯನ್ನು ದೇವತೆಗಳೇ ಹಿಂದೆ ಅನುಷ್ಠಾನಕ್ಕೆ ತಂದಿದ್ದಾರೆ.

ಪೂರ್ವೋಪಾಯೋಪಪನ್ನೇನ ಮಾರ್ಗೇಣ ವರವರ್ಣಿನಿ ।
ನ ಮೇ ಸುರಾಃ ಪ್ರಯಚ್ಛಂತಿ ಭಾಗಂ ಯಜ್ಞಸ್ಯ ಧರ್ಮತಃ ॥೨೬॥

ಹಿಂದೆಯೇ ನಿರ್ಣಯವಾದ ನಿಯಮಕ್ಕೆ ಅನುಗುಣವಾಗಿ ಧರ್ಮಾನುಸಾರವಾಗಿ ದೇವತೆಗಳು ಯಜ್ಞದಲ್ಲಿ ನನಗೆ ಹವಿರ್ಭಾಗವನ್ನು ನೀಡುವುದಿಲ್ಲ.

ಉಮಾಃ

ಭಗವನ್ ಸರ್ವಭೂತೇಷು ಪ್ರಭಾವಾಭ್ಯಧಿಕೋ ಗುಣೈಃ ।
ಅಜೇಯಶ್ಚಾಪ್ರಧೃಷ್ಯಶ್ಚ ತೇಜಸಾ ಯಶಸಾ ಶ್ರಿಯಾ ॥೨೭॥

ಉಮಾ– ಭಗವನ್, ನೀನು ವಿಶ್ವದಲ್ಲೇ ಸಮಸ್ತ ಪ್ರಾಣಿಗಳಲ್ಲಿ ಎಲ್ಲರಿಗಿಂತ ಶ್ರೇಷ್ಠನಾಗಿರುವಿ, ಗುಣದಲ್ಲಿ ಅಧಿಕನಾಗಿರುವಿ, ಅಜೇಯನಾಗಿರುವಿ, ಯಾರಿಂದಲೂ ಬಲಾತ್ಕರಿಸಲು ಅಸಾಧ್ಯನಾಗಿರುವಿ. ತೇಜಸ್ಸು, ಯಶಸ್ಸು, ಸಂಪತ್ತಿನಿಂದ ಕೂಡಿರುವಿ.

ಅನೇನ ತೇ ಮಹಾಭಾಗ ಪ್ರತಿಷೇಧೇನ ಭಾಗತಃ ।
ಅತೀವ ದುಃಖಮುತ್ಪನ್ನಂ ವೇಪಥುಶ್ಚ ಮಮಾನಘ ॥೨೮॥

ಇಂತಹ ಮಹಾಭಾಗ್ಯವಂತನಾದ ನಿನಗೆ ಹವಿರ್ದಾನದ ನಿಷೇಧವು ಯಾವ ಕಾರಣದಿಂದ ಉಂಟಾಯಿತು? ನನ್ನ ಶರೀರವು ಕಂಪಿಸುತ್ತಿದೆ. ಅನಘನೇ, ನನಗೆ ಬಹಳ ದುಃಖವಾಗುತ್ತಿದೆ.

ಭೀಷ್ಮಃ

ಏವಮುಕ್ತ್ವಾ ತು ಸಾ ದೇವೀ ದೇವಂ ಪಶುಪತಿಂ ಪತಿಮ್ ।
ತೂಷ್ಣೀಂಭೂತಾಭವದ್ ರಾಜನ್ ದಹ್ಯಮಾನೇನ ಚೇತಸಾ ॥೨೯॥

ಭೀಷ್ಮ– ಯುಧಿಷ್ಠಿರನೇ, ಪತಿಯಾದ ಪಶುಪತಿಯು ಸತಿಯ ಬಳಿ ನಿಶ್ಚಿತ ಮತಿಯಿಂದ ಹೀಗೆ ಹೇಳುತ್ತಿರಲು ದಹಿಸುತ್ತಿರುವ ಹೃದಯದಿಂದ ಕೂಡಿದ ಪಾರ್ವತಿ ದೇವಿಯು ಮೌನವನ್ನು ಹೊಂದಿದಳು.

ಅಥ ದೇವ್ಯಾ ಮತಂ ಜ್ಞಾತ್ವಾ ಹೃದ್ಗತಂ ಯಚ್ಚಿಕೀರ್ಷಿತಮ್ ।
ಸ ಸಮಾಜ್ಞಾಪಯಾಮಾಸ ತಿಷ್ಠ ತ್ವಮಿತಿ ನಂದಿನಮ್ ॥೩೦॥

ಪಾರ್ವತಿ ದೇವಿಯ ಮನೋಭಿಪ್ರಾಯವನ್ನು ಅರಿತ, ಮುಂದೆ ಅವಳು ಮಾಡುವ ಕಾರ್ಯವೇನೆಂದು ತಿಳಿದ ಮಹಾದೇವನು ಅಲ್ಲಿಯೇ ನಿಂತಿರುವಂತೆ ನಂದಿಗೆ ಆಜ್ಞಾಪಿಸಿದನು.

ತತೋ ಯೋಗಬಲಂ ಕೃತ್ವಾ ಸರ್ವಯೋಗೇಶ್ವರೇಶ್ವರಃ ।
ತಂ ಯಜ್ಞಂ ಸುಮಹಾತೇಜಾ ಭೀಮೈರನುಚರೈಸ್ತದಾ ।
ಸಹಸಾ ಘಾತಯಾಮಾಸ ದೇವದೇವಃ ಪಿನಾಕಧೃಕ್ ॥೩೧॥

ಬಳಿಕ ಸಮಸ್ತ ಯೋಗೇಶ್ವರರಿಗೂ ಒಡೆಯನಾದ, ದೇವದೇವನಾದ, ಪಿನಾಕ ಪಾಣಿಯಾದ ಮಹಾದೇವನು ಯೋಗಬಲದಿಂದ ಭಯಂಕರರಾದ ತನ್ನ ಅನುಚರರ ಜೊತೆಗೆ ತೆರಳಿ ದಕ್ಷನು ಮಾಡುತ್ತಿದ್ದ ಆ ಅಶ್ವಮೇಧಯಾಗವನ್ನು ನಾಶಗೊಳಿಸಿದನು.

ಕೇಚಿನ್ನಾದಾನಮುಂಚಂತ ಕೇಚಿದ್ಧಾಸಾಂಶ್ಚ ಚಕ್ರಿರೇ ।
ರುಧಿರೇಣಾಪರೇ ರಾಜಂಸ್ತತ್ರಾಗ್ನಿಂ ಸಮವಾಕಿರನ್ ॥೩೨॥

ರುದ್ರನ ಅನುಚರರಲ್ಲಿ ಕೆಲವು ಅನುಚರರು ಯಜ್ಞವೇದಿಕೆಯ ಬಳಿ ನಿಂತು ಭಯಂಕರ ಸಿಂಹನಾದಗಳನ್ನು ಮಾಡುತ್ತಿದ್ದರು. ಕೆಲವರು ಅಟ್ಟಹಾಸದಿಂದ ನಗುತ್ತಿದ್ದರು. ಕೆಲವರು ಅಗ್ನಿದೇವನಲ್ಲಿ ರಕ್ತದ ಮಳೆಯನ್ನು ಸುರಿಸಿದರು.

ಕೇಚಿದ್ ಯೂಪಾನ್ ಸಮುತ್ಪಾಟ್ಯ ಬಭ್ರಮುರ್ವಿಕೃತಾನನಾಃ ।
ಆಸ್ಯೈರನ್ಯೇ ಚಾಗ್ರಸಂತ ತಥೈವ ಪರಿಚಾರಕಾನ್ ॥೩೩॥

ಕೆಲವರು ಯಜ್ಞದ ಯೂಪಗಳನ್ನು (ಬಲಿಗಂಬ) ಕಿತ್ತುಹಾಕಿದರು. ಯಜ್ಞಮಂಟಪದ ಸುತ್ತಲೂ ಘೋರವಾದ ಆಕಾರದಿಂದ ತಿರುಗುತ್ತಿದ್ದರು. ಕೆಲವು ಪಿಶಾಚಿಗಳು ಯಜ್ಞದ ಪರಿಚಾರಕರನ್ನು ಬಾಯಿಂದ ನುಂಗಿ ಹಾಕುತ್ತಿದ್ದರು.

ತತಃ ಸ ಯಜ್ಞೋ ನೃಪತೇ ವಧ್ಯಮಾನಃ ಸಮಂತತಃ ।
ಆಸ್ಥಾಯ ಮೃಗರೂಪಂ ವೈ ಖಮೇವಾಭ್ಯಪತತ್ತದಾ ॥೩೪॥

ಈ ಆ ಯಜ್ಞವು ಎಲ್ಲ ದಿಕ್ಕುಗಳಲ್ಲಿಯೂ ಎಲ್ಲಾ ಪ್ರಕಾರಗಳಿಂದಲೂ ನಾಶವಾಗುತ್ತಿರಲು ಭಯಗೊಂಡ ಯಜ್ಞ ಪುರುಷನು ಜಿಂಕೆಯ ರೂಪವನ್ನು ತಾಳಿ ಆಕಾಶದ ಕಡೆ ಓಡಿಹೋದನು.

ತಂ ತು ಯಜ್ಞಂ ತಥಾರೂಪಂ ಗಚ್ಛಂತಮುಪಲಭ್ಯ ಸಃ ।
ಧನುರಾದಾಯ ಬಾಣಂ ಚ ತದಾನ್ವಸರತ ಪ್ರಭುಃ ॥೩೫॥

ಯಜ್ಞ ಪುರುಷನು ಮೃಗರೂಪವನ್ನು ತಾಳಿ ಓಡಿಹೋಗುತ್ತಿರುವುದನ್ನು ನೋಡಿದ ಮಹರುದ್ರನು ಧನುಸ್ಸಿಗೆ ಬಾಣವನ್ನು ಸೇರಿಸಿ ಮೃಗವನ್ನೇ ಅನುಸರಿಸಿ ಓಡಿದನು.

ತತಸ್ತಸ್ಯ ಸುರೇಶಸ್ಯ ಕ್ರೋಧಾದಮಿತತೇಜಸಃ ।
ಲಲಾಟಾತ್ ಪ್ರಸೃತೋ ಘೋರಃ ಸ್ವೇದಬಿಂದುರ್ಬಭೂವ ಹ ॥೩೬॥

ಮಹರುದ್ರನು ಮೃಗವನ್ನು ಅಟ್ಟಿಸಿಕೊಂಡು ಹೋಗಲು ಕೋಪದಿಂದ ಸಾಗುತ್ತಿರುವ ಮಹರುದ್ರನ ಹಣೆಯಿಂದ ಭಯಂಕರವಾದ ಬೆವರಿನ ಬಿಂದು ಒಂದು ಹೊರಚಿಮ್ಮಿತು.

ತಸ್ಮಿನ್ ಪತಿತಮಾತ್ರೇ ತು ಸ್ವೇದಬಿಂದೌ ತಥಾ ಭುವಿ ।
ಪ್ರಾದುರ್ಬಭೂವ ಸುಮಹಾನಗ್ನಿಃ ಕಾಲಾನಲೋಪಮಃ ॥೩೭॥

ಆ ಬೆವರಿನ ಹನಿಯು ಭೂಮಿಯಲ್ಲಿ ಬಿದ್ದ ಕೂಡಲೇ ಕಾಲಾಗ್ನಿಸದೃಶವಾದ, ಭಯಂಕರವಾದ ಅಗ್ನಿಯು ಹುಟ್ಟಿಕೊಂಡಿತು.

ತತ್ರ ಚಾಜಾಯತ ತದಾ ಪುರುಷಃ ಪುರುಷರ್ಷಭ ।
ಹ್ರಸ್ವೋऽತಿಮಾತ್ರರಕ್ತಾಕ್ಷೋ ಹರಿಶ್ಮಶ್ರುರ್ವಿಭೀಷಣಃ ॥೩೮॥

ಆ ಅಗ್ನಿಯಿಂದ ಅತ್ಯಂತ ಕುಳ್ಳಗಿರುವ, ಕೆಂಪಾದ ಕಣ್ಣುಗಳಿರುವ, ಕಂದು ಬಣ್ಣದ ದಾಡೆ ಮೀಸೆಗಳನ್ನು ಹೊಂದಿರುವ ಮಹಾಭಯಂಕರ ಪುರುಷನು ಹುಟ್ಟಿಕೊಂಡನು.

ಊರ್ಧ್ವಕೇಶೋऽತಿಲೋಮಾಂಗಃ ಶ್ಯೇನೋಲೂಕಸ್ತಥೈವ ಚ ।
ಕರಾಲಃ ಕೃಷ್ಣವರ್ಣಶ್ಚ ರಕ್ತವಾಸಾಸ್ತಥೈವ ಚ ॥೩೯॥

ಆ ಪುರುಷನ ತಲೆ ಕೂದಲುಗಳು ಮೇಲ್ಮುಖವಾಗಿ ನಿಮಿರಿ ನಿಂತಿದ್ದವು. ಅಂಗಾಂಗಗಳೆಲ್ಲವೂ ಗಿಡುಗ-ಗೂಬೆಗಳಿಗಿರುವ ದಟ್ಟವಾದ ಕೂದಲಿನಂತೆ ಮುಚ್ಚಿ

ಹೋಗಿದ್ದವು. ಶರೀರವು ವಿಕಾರವಾಗಿತ್ತು. ಕಪ್ಪು ಬಣ್ಣದವನಾಗಿದ್ದನು, ಕೆಂಪು ವಸ್ತ್ರವನ್ನು ಧರಿಸಿದ್ದನು.

ತಂ ಯಜ್ಞಂ ಸ ಮಹಾಸತ್ತ್ವೋ ದಹತ್ ಕಕ್ಷಮಿವಾನಲಃ ।
ದೇವಾಶ್ಚಾಪ್ಯದ್ರವನ್ ಸರ್ವೇ ತತೋ ಭೀತಾ ದಿಶೋ ದಶ ॥೪೦॥

ಮಹಾಸತ್ವನಾದ ಆ ಪುರುಷನು ಬೆಂಕಿಯು ಹೇಗೆ ಹುಲ್ಲಿನ ಮೆದೆಯನ್ನು ಸುಟ್ಟು ಹಾಕುತ್ತದೋ ಅದರಂತೆ ದಕ್ಷನ ಯಜ್ಞವನ್ನು ಪೂರ್ಣವಾಗಿ ಭಸ್ಮ ಮಾಡಿದನು. ಆ ಪ್ರಸಂಗದಲ್ಲಿ ಯಜ್ಞಮಂಟಪದಲ್ಲಿ ಸಂಚರಿಸುತ್ತಿರುವ ದೇವತೆಗಳು, ಋಷಿಗಳು ದಿಕ್ಕು ತೋರದೆ ಓಡಿ ಹೋದರು.

ತೇನ ತಸ್ಮಿನ್ ವಿಚರತಾ ಪುರುಷೇಣ ವಿಶಾಂ ಪತೇ ।
ಪೃಥಿವೀ ವ್ಯಚಲದ್ರಾಜನ್ನತೀವ ಭರತರ್ಷಭ ॥೪೧॥

ಆ ರುದ್ರನಿಂದ ಉತ್ಪನ್ನನಾದ ಪುರುಷನು ಅಲ್ಲಿಯೇ ಸಂಚರಿಸುವಾಗ ಭೂಮಿಯೇ ಬಹಳವಾಗಿ ಕಂಪಿಸಿತು.

ಹಾಹಾಭೂತೇ ಪ್ರವತ್ತೇ ತು ನಾದೇ ಲೋಕಭಯಂಕರೇ ।
ಪಿತಾಮಹೋ ಮಹಾದೇವಂ ದರ್ಶಯನ್ ಪ್ರತ್ಯಭಾಷತ ॥೪೨॥

ಪ್ರಪಂಚವೆಲ್ಲವೂ ಹಾಹಾಕಾರದಿಂದ ಭಯಗೊಂಡಿರುವುದನ್ನು ಕಂಡು ಪ್ರಭುವಾದ ಚತುರ್ಮುಖ ಬ್ರಹ್ಮನು ಮಹದೇವನನ್ನು ಕಂಡು ಅವನಿಗೆ ಹೀಗೆ ಹೇಳಿದನು.

ಭವತೋಽಪಿ ಸುರಾಃ ಸರ್ವೇ ಭಾಗಂ ದಾಸ್ಯಂತಿ ವೈ ಪ್ರಭೋ ।
ಕ್ರಿಯತಾಂ ಪ್ರತಿಸಂಹಾರಃ ಸರ್ವದೇವೇಶ್ವರ ತ್ವಯಾ ॥೪೩॥

ಸರ್ವದೇವೇಶ್ವರನೇ, ಪ್ರಭುವೇ, ಎಲ್ಲ ದೇವತೆಗಳು ನಿನಗೂ ಯಜ್ಞದಲ್ಲಿ ಹವಿರ್ಭಾಗವನ್ನು ನೀಡುತ್ತಾರೆ. ನೀನು ಕ್ರೋಧರೂಪನಾದ ಅಗ್ನಿಯನ್ನು ಶಾಂತಗೊಳಿಸು.

ಇಮಾ ಹಿ ದೇವತಾಃ ಸರ್ವಾ ಋಷಯಶ್ಚ ಪರಂತಪ ।
ತವ ಕ್ರೋಧಾನ್ಮಹಾದೇವ ನ ಶಾಂತಿಮುಪಲೇಭಿರೇ ॥೪೪॥

ಈ ದೇವತೆಗಳು, ಋಷಿಗಳು ನಿನ್ನ ಕ್ರೋಧದಿಂದ ಶಾಂತಿಯನ್ನು ಕಳೆದುಕೊಂಡಿದ್ದಾರೆ. ಮಹದೇವನೇ, ಪರಂತಪನೇ, ಶೋಕವನ್ನು ತ್ಯಜಿಸು.

ಯಶ್ಚೈಷ ಪುರುಷೋ ಜಾತಃ ಸ್ವೇದಾತ್ತೇ ವಿಬುಧೋತ್ತಮ ।
ಜ್ವರೋ ನಾಮೈಷ ಧರ್ಮಜ್ಞ ಲೋಕೇಷು ಪ್ರಚರಿಷ್ಯತಿ ॥೪೫॥

ವಿಬುಧಶ್ರೇಷ್ಠನೇ, ನಿನ್ನ ದೇಹದ ಬೆವರಿನಿಂದ ಹುಟ್ಟಿರುವ ಪುರುಷನು ಜ್ವರ ಎಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದುತ್ತಾನೆ.

ಏಕೀಭೂತಸ್ಯ ನ ಹ್ಯಸ್ಯ ಧಾರಣೇ ತೇಜಸಃ ಪ್ರಭೋ ।
ಸಮರ್ಥಾ ಸಕಲಾ ಪೃಥ್ವೀ ಬಹುಧಾ ಸೃಜ್ಯತಾಮಯಮ್ ॥೪೬॥

ನಿನ್ನ ತೇಜೋರೂಪನಾದ ಜ್ವರಪುರುಷನು ಎಲ್ಲಿಯವರೆಗೆ ಒಂದೇ ರೂಪದಲ್ಲಿರುತ್ತಾನೋ ಅಲ್ಲಿಯ ತನಕ ಸಮಗ್ರ ಜಗತ್ತಿನಿಂದಲೂ ಜ್ವರ ಪುರುಷನನ್ನು ಧರಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಜ್ವರವನ್ನು ಅನೇಕ ಪ್ರಕಾರವಾಗಿ ವಿಭಾಗ ಮಾಡು.

ಇತ್ಯುಕ್ತೋ ಬ್ರಹ್ಮಣಾ ದೇವೋ ಭಾಗೇ ಚಾಪಿ ಪ್ರಕಲ್ಪಿತೇ ।
ಭಗವಂತಂ ತಥೇತ್ಯಾಹ ಬ್ರಹ್ಮಾಣಮಮಿತೌಜಸಮ್ ॥೪೭॥

ಬ್ರಹ್ಮನು ಹೀಗೆ ಹೇಳಿದ ಬಳಿಕ ಮಹರುದ್ರನು ಯಜ್ಞದಲ್ಲಿ ಹವಿರ್ಭಾವವು ದೊರೆಯುತ್ತದೆಂದು ತಿಳಿದು ತೇಜಸ್ವಿಯಾದ ಚತುರ್ಮುಖನೊಡನೆ ಸಂಧಾನ ಮಾಡಿಕೊಂಡು ಹಾಗೆಯೇ ಆಗಲೆಂದನು.

ಪರಾಂ ಚ ಪ್ರೀತಿಮಗಮದುತ್ಸ್ಮಯಂಶ್ಚ ಪಿನಾಕಧೃಕ್ ।
ಅವಾಪ ಚ ತದಾ ಭಾಗಂ ಯಥೋಕ್ತಂ ಬ್ರಹ್ಮಣಾ ಭವಃ ॥೪೮॥

ಚತುರ್ಮುಖನ ಮಾತಿನಂತೆ ಪಿನಾಕಪಾಣಿಯಾದ ಮಹರುದ್ರನು ಅತ್ಯಂತ ಪ್ರಸನ್ನನಾಗಿ ಮಂದಹಾಸವನ್ನು ಬೀರಿದನು. ಬ್ರಹ್ಮನು ಹೇಳಿದಂತೆ ಯಜ್ಞದಲ್ಲಿ ಹವಿರ್ಭಾಗವನ್ನು ಪಡೆದುಕೊಂಡನು.

ಜ್ವರಂ ಚ ಸರ್ವಧರ್ಮಜ್ಞೋ ಬಹುಧಾ ವ್ಯಸೃಜತ್ತದಾ ।
ಶಾಂತ್ಯರ್ಥಂ ಸರ್ವಭೂತಾನಾಂ ಶೃಣು ತಚ್ಚಾಪಿ ಪುತ್ರಕ ॥೪೯॥

ಎಲ್ಲ ಧರ್ಮಗಳನ್ನು ತಿಳಿದಿರುವ ಮಹರುದ್ರನು ಬ್ರಹ್ಮನ ಆದೇಶದಂತೆ ಎಲ್ಲ ಪ್ರಾಣಿಗಳ ಶಾಂತಿಗಾಗಿ ಜ್ವರವನ್ನು ಅನೇಕ ಪ್ರಕಾರವಾಗಿ ವಿಂಗಡಿಸಿದನು. ಯಾವ ಯಾವ ರೂಪದಲ್ಲಿ ಜ್ವರವನ್ನು ಮಹದೇವನು ವಿಂಗಡಿಸಿದ್ದಾನೆಂದು ಹೇಳುತ್ತೇನೆ, ಕೇಳು.

ಶೀರ್ಷಾಭಿತಾಪೋ ನಾಗಾನಾಂ ಪರ್ವತಾನಾಂ ಶಿಖಾಜತು ।
ಅಪಾಂ ತು ನೀಲಿಕಾಂ ವಿದ್ಯಾನ್ನಿರ್ಮೋಕಂ ಭುಜಗೇಷು ಚ ॥೫೦॥

ಅನೇಕರ ತಲೆಯಲ್ಲಿರುವ ತಾಪ ಅಥವಾ ಪೀಡೆ ಏನಿದೆಯೋ ಅರ್ಥಾತ್ ತಲೆನೋವು ಶಿವನು ಇಟ್ಟಿರುವ ಜ್ವರವೆನಿಸಿದೆ. ಪರ್ವತದಲ್ಲಿ ಇರುವಂತಹ ಲಾಕ್ಷ (ಅರಗು) ಎಂಬ ರಸವು ಜ್ವರದ ವಿಭಾಗವಾಗಿದೆ. ನೀರಿನಲ್ಲಿ ಬೆಳೆಯುವ ಕರಿಯ ಲಕ್ಕಿ ಗಿಡವೇ ನೀರಿನ ಜ್ವರವಾಗಿದೆ. ಸರ್ಪಗಳಲ್ಲಿ ಪೊರೆಯು ಜ್ವರರೂಪವಾಗಿದೆ.

ಕ್ಷೌರಕಂ ಸೌರಭೇಯೀಣಾಮೂಷರಂ ಪೃಥಿವೀತಲೇ ।
ಪಶೂನಾಮಪಿ ಧರ್ಮಜ್ಞ ದೃಷ್ಟಿಪ್ರತ್ಯವರೋಧನಮ್ ॥೫೧॥

ನಾಯಿಗಳಲ್ಲಿ ಗರಗಸದಂತಿರುವ ಜಿಹ್ವಾಕ್ರೌರ್ಯವೇ ರುದ್ರನ ಜ್ವರವೆನಿಸಿದೆ. ಚೋರುಮಣ್ಣಿನ ಪ್ರದೇಶವೇ ಪೃಥಿವಿಯ ಜ್ವರವೆನಿಸಿದೆ. ದೃಷ್ಟಿ ಶಕ್ತಿಯು ನಾಶವಾಗುವುದೇ ಪ್ರಾಣಿಗಳಿಗೆ ಜ್ವರವೆನಿಸಿದೆ.

ರಂಧ್ರೋದ್ಭವಶ್ಚ ಮತ್ಸ್ಯಾನಾಂ ಶಿಖೋದ್ಭೇದಶ್ಚ ಬರ್ಹಿಣಾಮ್ ।
ನೇತ್ರರೋಗಃ ಕೋಕಿಲಾನಾಂ ಜ್ವರಃ ಪ್ರೋಕ್ತೋ ಮಹಾತ್ಮನಾ ॥೫೨॥

ಮೀನುಗಳಿಗೆ ಮೂಗಿನಲ್ಲಿ ರಂಧ್ರವು ಉಂಟಾಗುವುದೇ ಜ್ವರವೆನಿಸಿದೆ. ನವಿಲುಗಳಿಗೆ ತಲೆಯ ಮೇಲೆ ಹೊರಬಂದಿರುವ ಶಿಖೆಯೇ ಜ್ವರವೆನಿಸಿದೆ. ಕೋಕಿಲೆಗೆ ನೇತ್ರರೋಗವೇ ಜ್ವರವಾಗಿರುತ್ತದೆ. ಮಹಾತ್ಮನಾದ ಶಿವನು ಈ ರೀತಿ ಜ್ವರವಿರುವ ಪ್ರದೇಶಗಳನ್ನು ಹೇಳಿದನು.

ಅವೀನಾಂ ಪಿತ್ತಭೇದಶ್ಚ ಸರ್ವೇಷಾಮಿತಿ ನಃ ಶ್ರುತಮ್ ।
ಶುಕಾನಾಮಪಿ ಸರ್ವೇಷಾಂ ಹಿಕ್ಕಿಕಾ ಪ್ರೋಚ್ಯತೇ ಜ್ವರಃ ॥೫೩॥

ಕುರಿಗಳಿಗೆ ಪಿತ್ತದ ಉಲ್ಬಣವೇ ಜ್ವರವೆಂದು ಕೇಳಿದ್ದೇವೆ. ಗಿಳಿಗಳಿಗೆ ಕ್ಷಣ ಕ್ಷಣದಲ್ಲಿಯೂ ಮಲವನ್ನು ತ್ಯಜಿಸುವುದೇ ಜ್ವರವೆನಿಸಿದೆ.

ಶಾರ್ದೂಲೇಷ್ವಥ ಧರ್ಮಜ್ಞ ಶ್ರಮೋ ಜ್ವರ ಇಹೋಚ್ಯತೇ ।
ಮಾನುಷೇಷು ತು ಧರ್ಮಜ್ಞ ಜ್ವರೋ ನಾಮೈಷ ವಿಶ್ರುತಃ ।
ಮರಣೇ ಜನ್ಮನಿ ತಥಾ ಮಧ್ಯೇ ಚಾವಿಶತೇ ನರಮ್ ॥೫೪॥

ಬಳಲುವಿಕೆಯೇ ಹುಲಿಗಳಿಗೆ ಜ್ವರವೆನಿಸಿದೆ. ಮನುಷ್ಯರಲ್ಲಿ ಜ್ವರ ಎಂಬ ರೋಗವೇ ಪ್ರಸಿದ್ಧವಾಗಿದೆ. ಮನುಷ್ಯರಿಗೆ ಮರಣದಲ್ಲಿ, ಹುಟ್ಟಿನಲ್ಲಿ ಈ ಜ್ವರವು ಪ್ರವೇಶ ಮಾಡುತ್ತದೆ.

ಏತನ್ಮಾಹೇಶ್ವರಂ ತೇಜೋ ಜ್ವರೋ ನಾಮ ಸುದಾರುಣಃ ।
ನಮಸ್ಯಶ್ಚೈವ ಮಾನ್ಯಶ್ಚ ಸರ್ವಪ್ರಾಣಿಭಿರೀಶ್ವರಃ ॥೫೫॥

ಮಹೇಶ್ವರನ ತೇಜೋರೂಪವಾದ ಜ್ವರವು ಅತ್ಯಂತ ಭಯಂಕರವಾದುದು. ಜ್ವರವು ಎಲ್ಲ ಪ್ರಾಣಿಗಳಿಗೂ ಮಾನ್ಯವೂ, ವಂದನೀಯವೂ ಆಗಿದೆ.

ಅನೇನ ಹಿ ಸಮಾವಿಷ್ಟೋ ವೃತ್ರೋ ಧರ್ಮಭೃತಾಂ ವರಃ ।
ವ್ಯಜೃಂಭತ ತತಃ ಶಕ್ರಸ್ತಸ್ಮೈ ವಜ್ರಮವಾಸೃಜತ್ ॥೫೬॥

ವೃತ್ರನು ಈ ಎಲ್ಲದರಿಂದ ಕೂಡಿದ ಜ್ವರದಿಂದಲೇ ಸಮಾಕ್ರಾಂತನಾದನು. ಈ ಜ್ವರ ಬಂದಿರುವ ಕಾರಣದಿಂದಲೇ ವೃತ್ರನು ಆಕಳಿಸುತ್ತಿದ್ದನು. ಅದೇ ಸಮಯದಲ್ಲಿ ಇಂದ್ರನು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು.

ಪ್ರವಿಶ್ಯ ವಜ್ರೋ ವೃತ್ರಂ ತು ದಾರಯಾಮಾಸ ಭಾರತ ।
ದಾರಿತಶ್ಚ ಸ ವಜ್ರೇಣ ಮಹಾಯೋಗೀ ಮಹಾಸುರಃ ।
ಜಗಾಮ ಪರಮಂ ಸ್ಥಾನಂ ವಿಷ್ಣೋರಮಿತತೇಜಸಃ ॥೫೭॥

ಆಕಳಿಸುತ್ತಿದ್ದ ವೃತ್ರನ ಬಾಯಿಯ ಮೂಲಕ ಇಂದ್ರನ ವಜ್ರಾಯುಧವು ಒಳಹೊಕ್ಕು ವೃತ್ರನನ್ನು ಸೀಳಿತು. ವಜ್ರಾಯುಧದಿಂದ ಸೀಳಲ್ಪಟ್ಟ ಮಹಾಯೋಗಿಯಾದ ಅಸುರನು ತೇಜಸ್ವಿಯಾದ ವಿಷ್ಣುವಿನ ಶ್ರೇಷ್ಠವಾದ ಸ್ಥಾನವನ್ನು ಹೊಂದಿದನು.

ವಿಷ್ಣುಭಕ್ತ್ಯಾ ಹಿ ತೇನೇದಂ ಜಗದ್ವ್ಯಾಪ್ತಮಭೂತ್ ಪುರಾ ।
ತಸ್ಮಾಚ್ಚ ನಿಹತೋ ಯುದ್ಧೇ ವಿಷ್ಣೋಃ ಸ್ಥಾನಮವಾಪ್ತವಾನ್ ॥೫೮॥

ವಿಷ್ಣುಭಕ್ತಿಯ ಪ್ರಭಾವದಿಂದ ವೃತ್ರಾಸುರನ ಮೂಲಕ ಜಗತ್ತು ವ್ಯಾಪ್ತವಾಯಿತು. ವಿಷ್ಣುವಿನ ತೇಜಸ್ಸಿನಿಂದ ಕೂಡಿದ ವಜ್ರಾಯುಧದಿಂದ ಯುದ್ಧದಲ್ಲಿ ಅಸುನೀಗಿದ ಅಸುರನು ವಿಷ್ಣುವಿನ ಸ್ಥಾನವನ್ನೇ ಹೊಂದಿದನು.

ಇತ್ಯೇಷ ವೃತ್ರಮಾಶ್ರಿತ್ಯ ಜ್ವರಸ್ಯ ಮಹತೋ ಮಯಾ ।
ವಿಸ್ತರಃ ಕಥಿತಃ ಪುತ್ರ ಕಿಮನ್ಯತ್ ಪ್ರಬ್ರವೀಮಿ ತೇ ॥೫೯॥

ಹೀಗೆ ವೃತ್ರಾಸುರನ ವಧೆಯ ಪ್ರಸಂಗದಲ್ಲಿ ವೃತ್ರನ ಮಹಾಜ್ವರವು ಹುಟ್ಟಿದ ವೃತ್ತಾಂತವನ್ನು ವಿಸ್ತಾರವಾಗಿ ಹೇಳಿದ್ದೇನೆ. ನಿನಗೆ ಬೇರೆ ಯಾವ ವಿಷಯವನ್ನು ಹೇಳಲಿ?

ಇಮಾಂ ಜ್ವರೋತ್ಪತ್ತಿಮದೀನಮಾನಸಃ
ಪಠೇತ್ ಸದಾ ಯಃ ಸುಸಮಾಹಿತೋ ನರಃ ।
ವಿಮುಕ್ತರೋಗಃ ಸ ಸುಖೀ ಮುದಾ ಯುತೋ
ಲಭೇತ ಕಾಮಾನ್ ಸ ಯಥಾಮನೀಷಿತಾನ್ ॥೬೦॥

ಯಾವಾತನು ಉದಾರ ಹೃದಯದಿಂದ, ಏಕಾಗ್ರತೆಯಿಂದ ಜ್ವರದ ಉತ್ಪತ್ತಿಗೆ ಸಂಬಂಧಿಸಿದ ಈ ಉಪಾಖ್ಯಾನವನ್ನು ಎಲ್ಲ ಕಾಲಗಳಲ್ಲಿಯೂ ಓದುತ್ತಾನೋ ಅವನು ರೋಗಗಳಿಂದ ವಿಮುಕ್ತನಾಗಿ, ಸುಖಿಯಾಗಿ, ಸಂತೋಷಯುಕ್ತನಾಗಿ ಮನಸ್ಸಿನಲ್ಲಿ ಬಯಸಿದ ಕಾಮನೆಗಳನ್ನೆಲ್ಲ ಪಡೆದುಕೊಳ್ಳುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

ಶಿವನ ಪ್ರೇರಣೆಯಂತೆ ವೀರಭದ್ರನು ದಕ್ಷಯಾಗವನ್ನು ನಾಶಪಡಿಸಿದುದು. ದಕ್ಷನು ಮಾಡಿದ ಸ್ತೋತ್ರದಿಂದ ರುದ್ರನು ಸುಪ್ರೀತನಾಗಿ ಅವನಿಗೆ ವರವನ್ನು ಕೊಟ್ಟಿದುದು. ಶಿವಸ್ತೋತ್ರದ ಮಹಿಮೆ.

ಜನಮೇಜಯಃ

ಪ್ರಾಚೇತಸಸ್ಯ ದಕ್ಷಸ್ಯ ಕಥಂ ವೈವಸ್ವತೇಂತರೇ ।
ವಿನಾಶಮಗಮದ್ ಬ್ರಹ್ಮನ್ ಹಯಮೇಧಃ ಪ್ರಜಾಪತೇಃ ।
ಕಥಂ ಸ ಚಾಭವದ್ ಬ್ರಹ್ಮನ್ ಹಯಮೇಧಃ ಪ್ರಜಾಪತೇಃ ॥೧॥

ಜನಮೇಜಯ– ವೈಶಂಪಾಯನರೇ, ವೈವಸ್ವತ ಮನ್ವಂತರದಲ್ಲಿ ಪ್ರಚೇತಸ್ಸಿನ ಕುಲದಲ್ಲಿ ಹುಟ್ಟಿದ ದಕ್ಷ ಪ್ರಜಾಪತಿಯು ಮಾಡಿದ ಅಶ್ವಮೇಧ ಯಾಗವು ಹೇಗೆ ನಾಶವನ್ನು ಹೊಂದಿತು?

ದೇವ್ಯಾ ಮನ್ಯುಕೃತಂ ಮತ್ವಾ ಕ್ರುದ್ಧಃ ಸರ್ವಾತ್ಮಕಃ ಪ್ರಭುಃ ।
ಪ್ರಸಾದಾತ್ ತಸ್ಯ ದಕ್ಷೇಣ ಸ ಯಜ್ಞಃ ಸಂಧಿತಃ ಕಥಮ್ ।
ಏತದ್ ವೇದಿತುಮಿಚ್ಛೇಯಂ ತನ್ಮೇ ಬ್ರೂಹಿ ಯಥಾತಥಮ್ ॥೨॥

ಅಶ್ವಮೇಧ ಯಾಗವನ್ನು ದಕ್ಷನು ಹೇಗೆ ನಡೆಸಿದನು? ಸರ್ವಾತ್ಮಕನಾದ ಪ್ರಭುವಾದ ಪರಶಿವನು ತನ್ನ ಪತ್ನಿಯ ದುಃಖವನ್ನು ನೋಡಿಯೇ ಅಲ್ಲವೆ ಸಿಟ್ಟುಗೊಂಡು ಆ ಕಾರ್ಯವನ್ನು ಮಾಡಿದನು! ಯಜ್ಞವು ನಾಶವಾದ ಬಳಿಕ ಪುನಃ ರುದ್ರ ಪ್ರಸಾದದಿಂದ ಯಜ್ಞವು ಹೇಗೆ ಸಂಪನ್ನವಾಯಿತು? ಇದನ್ನು ಕೇಳುವ ಇಚ್ಛೆಯಿಂದ ಕೂಡಿದ್ದೇನೆ. ವಿಷದವಾಗಿ ಉತ್ತರಿಸಿರಿ.

ವೈಶಂಪಾಯನಃ

ಪುರಾ ಹಿಮವತಃ ಪೃಷ್ಠೇ ದಕ್ಷೋ ವೈ ಯಜ್ಞಮಾಹರತ್ ।
ಗಂಗಾದ್ವಾರೇ ಶುಭೇ ದೇಶೇ ಋಷಿಸಿದ್ಧನಿಷೇವಿತೇ ॥೩॥

ವೈಶಂಪಾಯನ– ಜನಮೇಜಯನೇ, ಹಿಂದೆ ಹಿಮವದ್ ಪರ್ವತದ ತಪ್ಪಲಿನಲ್ಲಿ ಋಷಿಗಳಿಂದಲೂ, ಸಿದ್ಧರಿಂದಲೂ ಸೇವಿಸಲ್ಪಡುವ ಗಂಗಾದ್ವಾರವೆಂಬ

ಮಂಗಳಮಯವಾದ ಪ್ರದೇಶದಲ್ಲಿ ದಕ್ಷಪ್ರಜಾಪತಿಯು ಅಶ್ವಮೇಧ ಯಜ್ಞವನ್ನು ಮಾಡಲು ಆರಂಭಿಸಿದನು.

ಗಂಧರ್ವಾಪ್ಸರಸಾಕೀರ್ಣೇ ನಾನಾದ್ರುಮಲತಾವೃತೇ ।
ಋಷಿಸಂಘೈಃ ಪರಿವೃತಂ ದಕ್ಷಂ ಧರ್ಮಭೃತಾಂ ವರಮ್ ॥೪॥

ಪೃಥಿವ್ಯಾಮಂತರಿಕ್ಷೇ ಚ ಯೇ ಚ ಸ್ವರ್ಲೋಕವಾಸಿನಃ ।
ಸರ್ವೇ ಪ್ರಾಂಜಲಯೋ ಭೂತ್ವಾ ಉಪತಸ್ಥುಃ ಪ್ರಜಾಪತಿಮ್ ॥೫॥

ಗಂಧರ್ವ, ಅಪ್ಸರೆಯರಿಂದ ಕೂಡಿರುವ, ಅನೇಕ ವಿಧವಾದ ಮರಗಳಿಂದಲೂ ಬಳ್ಳಿಗಳಿಂದಲೂ ವ್ಯಾಪಿಸಿರುವ ಆ ಪ್ರದೇಶದಲ್ಲಿ ಋಷಿಗಳ ಸಮೂಹದಿಂದ ಕೂಡಿಕೊಂಡಿರುವ, ಧರ್ಮಾತ್ಮರಲ್ಲಿಯೇ ಶ್ರೇಷ್ಠನಾದ ದಕ್ಷಪ್ರಜಾಪತಿಯನ್ನು ಪೃಥಿವಿ, ಅಂತರಿಕ್ಷ, ಸ್ವರ್ಗಲೋಕ- ಹೀಗೆ ಎಲ್ಲ ಕಡೆ ವಾಸಿಸುತ್ತಿರುವ ಜನರೆಲ್ಲರೂ ಕೈಮುಗಿದುಕೊಂಡು ಬಂದು ಚೆನ್ನಾಗಿ ಸೇವಿಸುತ್ತಿದ್ದರು.

ದೇವದಾನವಗಂಧರ್ವಾಃ ಪಿಶಾಚೋರಗರಾಕ್ಷಸಾಃ ।
ಹಾಹಾ ಹೂಹೂಶ್ಚ ಗಂಧರ್ವೌ ತುಂಬುರುರ್ನಾರದಸ್ತಥಾ ॥೬॥

ವಿಶ್ವಾವಸುರ್ವಿಶ್ವಸೇನೋ ಗಂಧರ್ವಾಪ್ಸರಸಸ್ತಥಾ ।
ಆದಿತ್ಯಾ ವಸವೋ ರುದ್ರಾಃ ಸಾಧ್ಯಾಃ ಸಹ ಮರುದ್ಗಣೈಃ ॥೭॥

ದೇವ-ದಾನವ-ಗಂಧರ್ವರು, ಪಿಶಾಚರು, ಸರ್ಪಗಳು, ರಾಕ್ಷಸರು, ಹಾಹಾ ಹೂಹೂ ಎಂಬ ಗಂಧರ್ವರು, ತುಂಬುರು-ನಾರದರು, ವಿಶ್ವಾವಸು, ವಿಶ್ವಸೇನ, ಗಂಧರ್ವ-ಅಪ್ಸರೆಯರು, ಆದಿತ್ಯರು, ವಸುಗಳು, ರುದ್ರರು, ಸಾಧ್ಯರು, ಮರುದ್ಗಣಗಳ ಸಹಿತರಾಗಿ ಅವನ ಯಜ್ಞವನ್ನು ಸೇವಿಸಲು ಬಂದರು.

ಇಂದ್ರೇಣ ಸಹಿತಾಃ ಸರ್ವೇ ಆಗತಾ ಯಜ್ಞಭಾಗಿನಃ ।
ಊಷ್ಮಪಾಃ ಸೋಮಪಾಶ್ಚೈವ ಧೂಮಪಾ ಆಜ್ಯಪಾಸ್ತಥಾ ॥೮॥

ಋಷಯಃ ಪಿತರಶ್ಚೈವ ಆಗತಾ ಬ್ರಹ್ಮಣಾ ಸಹ ।
ಏತೇ ಚಾನ್ಯೇ ಚ ಬಹವೋ ಭೂತಗ್ರಾಮಾಶ್ಚತುರ್ವಿಧಾಃ ॥೯॥

ಜರಾಯುಜಾಂಡಜಾಶ್ಚೈವ ಸಹಸಾ ಸ್ವೇದಜೋದ್ಭಿಜ್ಜೈಃ ।
ಆಹೂತಾ ಮಂತ್ರಿತಾಃ ಸರ್ವೇ ದೇವಾಶ್ಚ ಸಹ ಪತ್ನಿಭಿಃ ॥೧೦॥

ವಿರಾಜಂತೇ ವಿಮಾನಸ್ಥಾ ದೀಪ್ಯಮಾನಾ ಇವಾಗ್ನಯಃ ।
ತಾನ್ ದೃಷ್ಟ್ವಾ ಮನ್ಯುನಾವಿಷ್ಟೋ ದಧೀಚಿರ್ವಾಕ್ಯಮಬ್ರವೀತ್ ॥೧೧॥

ದೇವತೆಗಳು ಇಂದ್ರನ ಜೊತೆಗೆ ಸೇರಿಕೊಂಡು ದಕ್ಷಪ್ರಜಾಪತಿಯ ಯಜ್ಞಮಂಟಪಕ್ಕೆ ಆಗಮಿಸಿದರು. ಊಷ್ಮಪರು, ಸೋಮಪರು, ಧೂಮಪರು, ಆಜ್ಯಪರು, ಋಷಿಗಳು, ಪಿತೃಗಳು ಚತುರ್ಮುಖನ ಜೊತೆಗೆ ಸೇರಿ ಎಲ್ಲರೂ ಆಗಮಿಸಿದರು. ಇವರಲ್ಲದೆ ನಾಲ್ಕು ವಿಧವಾದ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜಗಳೆಂಬ ಪ್ರಾಣಿಗಳು ಆಗಮಿಸಿದವು. ಆಹ್ವಾನಿತರಾದ ದೇವತೆಗಳೆಲ್ಲರೂ ತಮ್ಮ ಪತ್ನಿಯರಿಂದ ಕೂಡಿಕೊಂಡು ವಿಮಾನದಲ್ಲಿ ಕುಳಿತು, ಪ್ರಜ್ವಲಿಸುತ್ತಿರುವ ಬೆಂಕಿಗೆ ಸಮಾನರಾಗಿ ಬೆಳಗುತ್ತಿದ್ದರು. ಅವರೆಲ್ಲರನ್ನೂ ಕಂಡು ಅವನ ಸಮೂಹದಲ್ಲಿ ರುದ್ರನನ್ನು ಮಾತ್ರ ಕಾಣದೆ ಸಿಟ್ಟುಗೊಂಡಿರುವ ದಧೀಚಿ ಮಹರ್ಷಿಯು ಯಜ್ಞಮಂಟಪದಲ್ಲಿ ಹೀಗೆ ಹೇಳಿದರು.

ನಾಯಂ ಯಜ್ಞೋ ನ ವಾ ಧರ್ಮೋ ಯತ್ರ ರುದ್ರೋ ನ ಇಜ್ಯತೇ ।
ವಧಬಂಧಂ ಪ್ರಪನ್ನಾ ವೈ ಕಿಂನು ಕಾಲಸ್ಯ ಪರ್ಯಯಃ ॥೧೨॥

ಸಜ್ಜನರೇ, ಯಾವ ಯಜ್ಞದಲ್ಲಿ ಮಹರುದ್ರನ ಆರಾಧನೆಯಿಲ್ಲವೋ ಅದು ಯಜ್ಞವಲ್ಲ. ನಾವು ಮಾಡುವ ಧರ್ಮವೂ ಅಲ್ಲ. ರುದ್ರನ ಚಿಂತನೆಯಿಲ್ಲದ ಧರ್ಮವು ಧರ್ಮವೂ ಅಲ್ಲ. ಇಂತಹ ಅಧರ್ಮಯುಕ್ತವಾದ ಯಜ್ಞವನ್ನು ನಿಯೋಜಿಸಿರುವ ವ್ಯಕ್ತಿಯು ವಧಬಂಧನವೆಂಬ ದುರ್ದೆಶೆಗೆ ತುತ್ತಾಗುತ್ತಾನೆ. ಈಶ್ವರನನ್ನು ಆಹ್ವಾನಿಸದೆ ಯಜ್ಞವನ್ನು ಆರಂಭಿಸುವುದು ಕಾಲದ ವೈಪರೀತ್ಯವೇ ಎನಿಸಿದೆ.

ಕಿಂನು ಮೋಹಾನ್ನ ಪಶ್ಯಂತಿ ವಿನಾಶಂ ಪರ್ಯುಪಸ್ಥಿತಮ್ ।
ಉಪಸ್ಥಿತಂ ಭಯಂ ಘೋರಂ ನ ಬುಧ್ಯಂತಿ ಮಹಾಧ್ವರೇ ॥೧೩॥

ಈ ನ್ಯೂನತೆಯನ್ನು ಮೋಹವಶರಾದುದರಿಂದ ನೀವ್ಯಾರೂ ನೋಡುತ್ತಿಲ್ಲ. ಎದುರಾಗುತ್ತಿರುವ ವಿನಾಶದ ಬಗ್ಗೆ ಎಚ್ಚರವಿಲ್ಲದೆ ಇದ್ದೀರಿ. ಈ ಅಧ್ವರದಲ್ಲಿ ಉಂಟಾಗುವ ಘೋರವಾದ ಭಯವನ್ನು ನೀವ್ಯಾರೂ ತಿಳಿಯುತ್ತಿಲ್ಲ.

ಇತ್ಯುಕ್ತ್ವಾ ಸ ಮಹಾಯೋಗೀ ಪಶ್ಯತಿ ಧ್ಯಾನಚಕ್ಷುಷಾ ।
ಸ ಪಶ್ಯತಿ ಮಹಾದೇವಂ ದೇವೀಂ ಚ ವರದಾಂ ಶುಭಾಮ್ ॥೧೪॥

ನಾರದಂ ಚ ಮಹಾತ್ಮಾನಂ ತಸ್ಯಾ ದೇವ್ಯಾಃ ಸಮೀಪತಃ ।
ಸಂತೋಷಂ ಪರಮಂ ಲೇಭೇ ಇತಿ ನಿಶ್ಚಿತ್ಯ ಯೋಗವಿತ್ ॥೧೫॥

ಜನಮೇಜಯನೇ, ಮಹಾಯೋಗಿಯಾದ ದಧೀಚಿಯು ಧ್ಯಾನದ ಕಣ್ಣಿನಿಂದ ಎಲ್ಲವನ್ನೂ ನೋಡಿದನು. ಜ್ಞಾನದ ಕಣ್ಣಿನಿಂದಲೇ ಮಹರುದ್ರನನ್ನು, ವರಪ್ರದಳಾದ ಮಂಗಳಸ್ವರೂಪಳಾದ ಪಾರ್ವತೀದೇವಿಯನ್ನೂ, ಮಹಾತ್ಮರಾದ ನಾರದರು ಪಾರ್ವತಿಯ ಸಮೀಪದಲ್ಲಿ ಇರುವುದನ್ನು ನೋಡಿದನು. ಆ ದರ್ಶನದಿಂದ ಅತ್ಯಂತ ಸಂತೋಷವನ್ನು ದಧೀಚಿಯು ಹೊಂದಿದನು. ಯೋಗಜ್ಞನಾದ ದಧೀಚಿಯು ಮುಂದೆ ನಡೆಯುವ ಘಟನೆಗಳನ್ನು ನಿಶ್ಚಯಿಸಿಕೊಂಡಿದ್ದನು.

ಏಕಮಂತ್ರಾಸ್ತು ತೇ ಸರ್ವೇ ಯೇನೇಶೋ ನ ನಿಮಂತ್ರಿತಃ ।
ತಸ್ಮಾದ್ ದೇಶಾದಪಕ್ರಮ್ಯ ದಧೀಚಿರ್ವಾಕ್ಯಮಬ್ರವೀತ್ ॥೧೬॥

ಈಶ್ವರನನ್ನು ಯಜ್ಞಕ್ಕೆ ಆಹ್ವಾನ ಮಾಡದೆ ಇರುವುದರಲ್ಲಿ ದೇವತೆಗಳ ಅಭಿಪ್ರಾಯವೆಲ್ಲವೂ ಒಂದೇ ಆಗಿತ್ತು. ಆದ್ದರಿಂದಲೇ ದಕ್ಷಪ್ರಜಾಪತಿಯು ಈಶ್ವರನನ್ನು ಆಹ್ವಾನಿಸಿರಲಿಲ್ಲ. ಇದನ್ನು ಅರಿತ ದಧೀಚಿ ಮಹರ್ಷಿಯು ಆ ಯಜ್ಞಶಾಲೆಯಿಂದ ದೂರಕ್ಕೆ ಹೋಗಿ ಈ ಮಾತನ್ನು ಹೇಳಿದನು.

ಅಪೂಜ್ಯಪೂಜನಾಚ್ಚೈವ ಪೂಜ್ಯಾನಾಂ ಚಾಪ್ಯಪೂಜನಾತ್ ।
ನೃಘಾತಕಸಮಂ ಪಾಪಂ ಶಶ್ವತ್ ಪ್ರಾಪ್ನೋತಿ ಮಾನವಃ ॥೧೭॥

ಪೂಜೆಗೆ ಅರ್ಹರಲ್ಲದವರನ್ನು ಪೂಜಿಸುವುದು, ಪೂಜೆಗೆ ಯೋಗ್ಯರಾದವರನ್ನು ಪೂಜಿಸದಿರುವುದು- ಇದರಿಂದ ಮನುಷ್ಯನು ನರಹತ್ಯೆಯನ್ನು ಮಾಡಿದಾಗ ಹೊಂದಬಹುದಾದ ಪಾಪವನ್ನು ನಿಶ್ಚಿತವಾಗಿ ಹೊಂದುತ್ತಾನೆ.

ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ ।
ದೇವತಾನಾಮೃಷೀಣಾಂ ಚ ಮಧ್ಯೇ ಸತ್ಯಂ ಬ್ರವೀಮ್ಯಹಮ್ ॥೧೮॥

ಹಿಂದೆ ಎಂದೂ ನಾನು ಸುಳ್ಳು ಹೇಳಿದವನಲ್ಲ. ಮುಂದೆ ಸುಳ್ಳನ್ನು ಹೇಳುವುದೂ ಇಲ್ಲ. ದೇವರ್ಷಿಗಳ ಮಧ್ಯದಲ್ಲಿ ಸತ್ಯವಾದ ಮಾತನ್ನೇ ಹೇಳುತ್ತಿದ್ದೇನೆ.

ಆಗತಂ ಪಶುಭರ್ತಾರಂ ಸ್ರಷ್ಟಾರಂ ಜಗತಃ ಪತಿಮ್ ।
ಅಧ್ವರೇ ಹ್ಯಗ್ರಭೋಕ್ತಾರಂ ಸರ್ವೇಷಾಂ ಪಶ್ಯತ ಪ್ರಭುಮ್ ॥೧೯॥

ಜಗತ್ತಿನ ಸೃಷ್ಟಿಕರ್ತನಾದ, ಎಲ್ಲ ಜೀವರಿಗೂ ರಕ್ಷಕನಾದ, ಸ್ವಾಮಿಯಾದ, ಸರ್ವರಿಗೂ ಪ್ರಭುವಾದ ಈಶ್ವರನು ಇಲ್ಲಿಗೆ ಬರುವಂತೆ ಆಹ್ವಾನಿಸಿರಿ. ಈ ಎಲ್ಲ ದೇವತೆಗಳಿಗಿಂತ ಮೊದಲು ಅವನು ಹವಿಸ್ಸನ್ನು ಸ್ವೀಕರಿಸುವುದು ನಿಮಗೆ ಕ್ಷೇಮವಾಗಿದೆ.

ವ್ಯಾಖ್ಯಾನ ವಿಶೇಷ– ದಧೀಚಿಗಳು ಅಗ್ರಪೂಜೆಗೆ ಅರ್ಹ ಎಂದು, ಜಗತ್ತಿಗೆ ಸೃಷ್ಟಿಕರ್ತ ಎಂದು ಹೇಳಿದ್ದಾರೆ. 'ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ' ಎಂಬ ವಿಷ್ಣು ಸರ್ವೋತ್ತಮತ್ವಕ್ಕೆ ಈ ವಚನವು ವಿರುದ್ಧವೆನಿಸಿದರೂ ಅಂತರ್ಯಾಮಿಯನ್ನು ವಿವಕ್ಷಿಸಿದಾಗ ಸರಿಯೇ ಆಗುತ್ತದೆ. 'ಬ್ರಹ್ಮಣಿ ಬ್ರಹ್ಮರೂಪೋಸೌ ಶಿವೇ ಶಿವೇ ಸ್ಥಿತಃ' ಎಂಬ ಪ್ರಮಾಣದಂತೆ ರುದ್ರನಲ್ಲಿ ವಿಷ್ಣುವು ಶಿವ ಎಂಬ ನಾಮದಿಂದ ಇದ್ದಾನೆ. ಅಂತರ್ಯಾಮಿಯ ಆರಾಧನೆಯೇ ದಧೀಚಿಗೆ ಮುಖ್ಯವೆನಿಸಿದೆ. ನಾರಾಯಣವರ್ಮದ ಸಿದ್ಧಿಯನ್ನು ಪಡೆದು, ದೇವತೆಗಳಿಗೆಲ್ಲ ಹಿತವನ್ನು ಬಯಸಿದ ದಧೀಚಿಮಹರ್ಷಿಯ ಅಂತರ್ಯಾಮಿಯ ಸ್ಮರಣೆಯನ್ನು ಅಲ್ಲಗಳೆಯುವಂತಿಲ್ಲ.

ದಕ್ಷಃ

ಸಂತಿ ನೋ ಬಹವೋ ರುದ್ರಾಃ ಶೂಲಹಸ್ತಾಃ ಕಪರ್ದಿನಃ ।
ಏಕಾದಶಸ್ಥಾನಗತಾ ನಾಹಂ ವೇದ್ಮಿ ಮಹೇಶ್ವರಮ್ ॥೨೦॥

ದಕ್ಷ– ನಮ್ಮ ಬಳಿ ಶೂಲವನ್ನು ಧರಿಸಿರುವ, ಜಟೆಯನ್ನು ಧರಿಸಿರುವ ಅನೇಕ ರುದ್ರರು ಇದ್ದಾರೆ. ಹನ್ನೊಂದು ಸಂಖ್ಯೆಯಲ್ಲಿ ಇದ್ದಾರೆ. ಇವರನ್ನು ಬಿಟ್ಟು ಮಹೇಶ್ವರನಾದ ರುದ್ರನು ಯಾರು ಎಂದು ನನಗೆ ತಿಳಿಯದು.

ದಧೀಚಿಃ

ಸರ್ವೇಷಾಮೇವ ಮಂತ್ರೋಯಂ ಯೇನಾಸೌ ನ ನಿಮಂತ್ರಿತಃ ।
ಯಥಾಽಹಂ ಶಂಕರಾದೂರ್ಧ್ವಂ ನಾನ್ಯಂ ಪಶ್ಯಾಮಿ ದೈವತಮ್ ।
ತಥಾ ದಕ್ಷಸ್ಯ ವಿಪುಲೋ ಯಜ್ಞೋಽಯಂ ನ ಭವಿಷ್ಯತಿ ॥೨೧॥

ದಧೀಚಿ– ಮಹೇಶ್ವರನನ್ನು ಆಮಂತ್ರಣ ಮಾಡದಿರುವದು ಇಲ್ಲಿ ನೆರೆದಿರುವ ಎಲ್ಲ ವ್ಯಕ್ತಿಗಳ ಏಕಾಭಿಪ್ರಾಯವಾಗಿದೆ. ಆದ್ದರಿಂದಲೇ ಅವನನ್ನು ಆಹ್ವಾನಿಸಿಲ್ಲ. ಶಂಕರನಿಗಿಂತ ಬೇರೆ ಉತ್ತಮನಾದ ದೇವತೆಯನ್ನು ನಾನು ಕಂಡಿರುವುದಿಲ್ಲ. ಆದ್ದರಿಂದ ದಕ್ಷನ ವೈಭವ ಪೂರ್ಣವಾದ ಈ ಯಜ್ಞವು ಪೂರ್ಣತೆಯನ್ನು ಹೊಂದುವುದಿಲ್ಲ.

ದಕ್ಷಃ

ಏತನ್ಮಖೇಶಾಯ ಸುವರ್ಣಪಾತ್ರೇ
ಹವಿಃ ಸಮಸ್ತಂ ವಿಧಿಮಂತ್ರಪೂತಮ್ ।
ವಿಷ್ಣೋರ್ನಯಾಮ್ಯಪ್ರತಿಮಸ್ಯ ಭಾಗಂ
ಪ್ರಭುರ್ವಿಭುರ್ಬ್ರಾಹ್ಮಣಶಾಹವನೀಯ ಏಷಃ ॥೨೨॥

ದಕ್ಷ– ಮಹರ್ಷಿಯೇ, ವಿಧಿಬದ್ಧವಾಗಿ ಮಂತ್ರದಿಂದ ಶುದ್ಧಗೊಳಿಸಿರುವ ಎಲ್ಲ ವಿಧವಾದ ಹವಿಷ್ಯವನ್ನು ಬಂಗಾರದ ಭಾಜನದಲ್ಲಿ ಯಜ್ಞೇಶನಾದ ವಿಷ್ಣುವಿಗಾಗಿ ಮೀಸಲಾಗಿ ಇಟ್ಟಿದ್ದೇನೆ. ಅಪ್ರತಿಮನಾದ ವಿಷ್ಣುವಿಗೆ ಈ ಹವಿಸ್ಸಿನ ಭಾಗವನ್ನು ಸಮರ್ಪಿಸುತ್ತೇನೆ. ಮಹಾವಿಷ್ಣುವೇ ಪ್ರಭುವು ಆಗಿದ್ದಾನೆ, ವಿಭುವು ಆಗಿದ್ದಾನೆ. ಆಹವನೀಯಾಗ್ನಿಯೂ ಆಗಿದ್ದಾನೆ.

ದೇವೀ

ಕಿಂ ನಾಮ ದಾನಂ ನಿಯಮಂ ತಪೋ ವಾ
ಕುರ್ಯಾಮಹಂ ಯೇನ ಪತಿರ್ಮಮಾದ್ಯ ।
ಲಭೇತ ಭಾಗಂ ಚ ತಥೈವ ಸರ್ವಂ
ಪ್ರಭುರ್ವಿಭುರ್ಬ್ರಾಹ್ಮಣಶಾಹವನೀಯ ಏಷಃ ।
ಲಭೇತ ಭಾಗಂ ಭಗವಾನಚಿಂತ್ಯೋ
ಹ್ಯರ್ಧಂ ತಥಾ ಭಾಗಮಥೋ ತೃತೀಯಮ್ ॥೨೩॥

ಪಾರ್ವತೀದೇವಿ– ನನ್ನ ಪತಿಯಾದ ಮಹಾದೇವನು ಯಜ್ಞದ ಹವಿಸ್ಸಿನಲ್ಲಿ ಅರ್ಧ ಭಾಗವನ್ನಾಗಲಿ ಅಥವಾ ಮೂರನೆಯ ಒಂದಂಶವನ್ನಾಗಲಿ ಪಡೆಯುವಂತಾಗಲು ನಾನು ಯಾವ ದಾನವನ್ನು ಮಾಡಲಿ? ಯಾವ ನಿಯಮವನ್ನು ಪರಿಪಾಲಿಸಲಿ? ಯಾವ ತಪಸ್ಸನ್ನು ಮಾಡಲಿ? ಪ್ರಭುವೂ, ವಿಭುವೂ, ಆಹವನೀಯಾಗ್ನಿಯೂ ಆಗಿರುವ ರುದ್ರನಿಗೆ ಈ ಆಹುತಿಗಳು ದೊರೆಯುವುದು ಹೇಗೆ?

ಏವಂ ಬ್ರುವಾಣಾಂ ಭಗವಾನ್ ಸ್ವಪತ್ನೀಂ
ಪ್ರಹೃಷ್ಟರೂಪಃ ಕ್ಷುಭಿತಾಮುವಾಚ ।
ನ ವೇತ್ಸಿ ಮಾಂ ದೇವಿ ಕೃಶೋದರಾಂಗಿ
ಕಿಂ ನಾಮ ಯುಕ್ತಂ ವಚನಂ ಮಖೇಶೇ ॥೨೪॥

ದುಃಖದಿಂದ ಕ್ಷೋಭೆಗೊಂಡು ಈ ರೀತಿಯಾಗಿ ಹೇಳುತ್ತಿರುವ ಪಾರ್ವತಿಯನ್ನು ಕುರಿತು ಪೂಜ್ಯನಾದ ಮಹೇಶ್ವರನು ಸಂತೋಷದಿಂದ ಹೀಗೆ ಹೇಳಿದನು: ಕೃಶವಾದ ಉದರವೆಂಬ ಅವಯವವುಳ್ಳವಳೇ, ನಾನು ಯಾರು ಎಂಬುದನ್ನು ನೀನು ಅರಿತಿಲ್ಲ. ಯಜ್ಞೇಶನಾದ ನನ್ನ ವಿಷಯದಲ್ಲಿ ಈ ರೀತಿ ನೀನು ಹೇಳುವುದು ಉಚಿತವಲ್ಲ.

ಅಹಂ ವಿಜಾನಾಮಿ ವಿಶಾಲನೇತ್ರೇ
ಧ್ಯಾನೇನ ಹೀನಾ ನ ವಿದಂತ್ಯಸಂತಃ ।
ತವಾದ್ಯ ಮೋಹೇನ ಚ ಸೇಂದ್ರದೇವಾ
ಲೋಕಾಸ್ತ್ರಯಃ ಸರ್ವತ ಏವ ಮೂಢಾಃ ॥೨೫॥

ವಿಶಾಲನೇತ್ರಳೇ, ಈ ದೇವತೆಗಳ ಅಭಿಪ್ರಾಯವೆಲ್ಲವನ್ನೂ ನಾನು ತಿಳಿದಿದ್ದೇನೆ. ಧ್ಯಾನಹೀನರಾದ ಮೂರ್ಖನು ನನ್ನನ್ನು ತಿಳಿದವರಾಗಿಲ್ಲ. ನಿನ್ನ ಈ ರೀತಿಯ ಪತಿ ಮೋಹದಿಂದ ಇಂದ್ರಾದಿ ದೇವತೆಗಳು, ಪ್ರಜೆಗಳು ಎಲ್ಲರೂ ಏನು ಮಾಡಬೇಕೆಂದು ತಿಳಿಯದೆ ಮೂಢರಾಗಿರುತ್ತಾರೆ.

ಮಾಮಧ್ವರೇ ಶಂಸಿತಾರಃ ಸ್ತುವಂತಿ
ರಥಂತರಂ ಸಾಮಗಾಶ್ಚೋಪಗಾಂತಿ ।
ಮಾಂ ಬ್ರಾಹ್ಮಣಾ ಬ್ರಹ್ಮವಿದೋ ಯಜಂತೇ
ಮಮಾಧ್ವರ್ಯವಃ ಕಲ್ಪಯಂತೇ ಚ ಭಾಗಮ್ ॥೨೬॥

ಯಜ್ಞದಲ್ಲಿ ಹೋತೃಗಳು ನನ್ನನ್ನು ಋಗ್ಮಂತ್ರದಿಂದ ಸ್ತೋತ್ರ ಮಾಡುತ್ತಾರೆ. ಸಾಮವೇದಿಗಳು ರಥಂತರ ಸಾಮದ ಮೂಲಕ ನನ್ನ ಮಹಿಮೆಯನ್ನು ಗಾನ ಮಾಡುತ್ತಾರೆ. ವೇದಜ್ಞರಾದ ಬ್ರಾಹ್ಮಣರು ನನ್ನನ್ನೇ ಉದ್ದೇಶಿಸಿ ಯಜ್ಞ ಮಾಡುತ್ತಾರೆ. ಅಧ್ವರ್ಯುಗಳು ನನಗಾಗಿ ಆಹುತಿಯನ್ನು ನೀಡುತ್ತಾರೆ.

ದೇವೀ

ಸುಪ್ರಾಕೃತೋಽಪಿ ಪುರುಷಃ ಸರ್ವಃ ಸ್ತ್ರೀಜನಸಂಸದಿ ।
ಸ್ತೌತಿ ಗರ್ವಾಯತೇ ಚಾಪಿ ಸ್ವಮಾತ್ಮಾನಂ ನ ಸಂಶಯಃ ॥೨೭॥

ದೇವೀ– ಪತಿದೇವನೇ, ಸಾಮಾನ್ಯ ವ್ಯಕ್ತಿಯಾದರೂ ಹೆಂಗಸರಿರುವ ಸಭೆಯಲ್ಲಿ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಾನೆ. ತನಗಿರುವ ಗರ್ವವನ್ನು ತೋರಿಸುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀಭಗವಾನ್

ನಾತ್ಮಾನಂ ಸ್ತೌಮಿ ದೇವೇಶಿ ಪಶ್ಯ ಮೇ ತನುಮಧ್ಯಮೇ ।
ಯಂ ಸ್ರಕ್ಷ್ಯಾಮಿ ವರಾರೋಹೇ ಯಾಗಾರ್ಥೇ ವರವರ್ಣಿನಿ ॥೨೮॥

ಶ್ರೀಭಗವಾನ್– ಪರಮೇಶ್ವರಿಯೇ, ನಾನು ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿಲ್ಲ. ಕೃಶನಡುವುಳ್ಳವಳೇ, ವರವರ್ಣಿನಿಯೇ, ನಿನ್ನ ದುಃಖಕ್ಕೆ ಕಾರಣವಾಗುವ, ದಕ್ಷಯಜ್ಞ ವಿನಾಶಕನಾದ ಅತುಲ ಪರಾಕ್ರಮಿಯನ್ನು ಸೃಷ್ಟಿಸುತ್ತೇನೆ, ನೋಡು.

ಇತ್ಯುಕ್ತ್ವಾ ಭಗವಾನ್ ಪತ್ನೀಮುಮಾಂ ಪ್ರಾಣೈರಪಿ ಪ್ರಿಯಾಮ್ ।
ಸೋಽಸೃಜದ್ ಭಗವಾನ್ ವಕ್ತ್ರಾದ್ ಭೂತಂ ಘೋರಂ ಪ್ರಹರ್ಷಣಮ್ ॥

ಮಹರುದ್ರನು ಈ ರೀತಿಯಾಗಿ ಪಾರ್ವತಿಯನ್ನು ಕುರಿತು ಹೇಳಿ ಬಳಿಕ ತನ್ನ ಮುಖದಿಂದ ಅಟ್ಟಹಾಸವನ್ನು ಮಾಡುತ್ತಿರುವ, ಘೋರ ರೂಪಿಯಾದ ಪುರುಷನನ್ನು ಸೃಷ್ಟಿಸಿದನು.

ತಮುವಾಚಾಕ್ಷಿಪ ಮಖಂ ದಕ್ಷಸ್ಯೇತಿ ಮಹೇಶ್ವರಃ ।
ತತೋ ವಕ್ತ್ರಾದ್ ವಿಮುಕ್ತೇನ ಸಿಂಹೇನೈಕೇನ ಲೀಲಯಾ ॥೩೦॥

ದೇವ್ಯಾ ಮನ್ಯುವ್ಯಪೋಹಾರ್ಥಂ ಹತೋ ದಕ್ಷಸ್ಯ ವೈ ಕ್ರತುಃ ।
ಮನ್ಯುನಾ ಚ ಮಹಾಭೀಮಾ ಮಹಾಕಾಳೀ ಮಹೇಶ್ವರೀ ॥೩೧॥

ಹುಟ್ಟಿದ ಕೂಡಲೇ ವಿನೀತನಾಗಿ ನಿಂತಿರುವ ವೀರಭದ್ರನಿಗೆ ಮಹರುದ್ರನು ದಕ್ಷಯಜ್ಞವನ್ನು ಧ್ವಂಸಗೊಳಿಸುವಂತೆ ಆದೇಶಿಸಿದನು. ಆಗ ಸಿಂಹದಂತೆ ಕ್ರೂರವಾದ ಆ

ಭೂತವು ಪಾರ್ವತಿಯ ಕೋಪವನ್ನು ಶಾಂತಗೊಳಿಸಲು ದಕ್ಷನ ಯಾಗವನ್ನೆಲ್ಲ ಧ್ವಂಸ ಮಾಡತೊಡಗಿತು. ಅದೇ ಸಮಯದಲ್ಲಿ ಪಾರ್ವತಿಯ ಕೋಪದಿಂದ ಮಹಾ ಭಯಂಕರ ಸ್ವರೂಪವುಳ್ಳ ಮಹಾಕಾಳಿ ಅಥವಾ ಭದ್ರಕಾಳಿ ಎಂಬ ಶಕ್ತಿಯೊಂದು ಉತ್ಪನ್ನವಾಯಿತು.

ಆತ್ಮನಃ ಕರ್ಮಸಾಕ್ಷಿತ್ವೇ ತೇನ ಸಾರ್ಧಂ ಸಹಾನುಗಾ ।
ದೇವಸ್ಯಾನುಮತಂ ಮತ್ವಾ ಪ್ರಣಮ್ಯ ಶಿರಸಾ ತತಃ ॥೩೨॥

ಆತ್ಮನಃ ಸದೃಶಃ ಶೌರ್ಯಾದ್ ಬಲರೂಪಸಮನ್ವಿತಃ ।
ಸ ಏವ ಭಗವಾನ್ ಕ್ರೋಧಃ ಪ್ರತಿರೂಪಸಮನ್ವಿತಃ ॥೩೩॥

ಅನಂತಬಲವೀರ್ಯಶ್ಚ ಅನಂತಬಲಪೌರುಷಃ ।
ವೀರಭದ್ರ ಇತಿ ಖ್ಯಾತೋ ದೇವ್ಯಾ ಮನ್ಯುಪ್ರಮಾರ್ಜಕಃ ॥೩೪॥

ಸೋಽಸೃಜದ್ ರೋಮಕೂಪೇಭ್ಯೋ ರೌಮ್ಯಾನ್ನಾಮ ಗಣೇಶ್ವರಾನ್ ।
ರುದ್ರತುಲ್ಯಾ ಗಣಾ ರೌದ್ರಾ ರುದ್ರವೀರ್ಯಪರಾಕ್ರಮಾಃ ॥೩೫॥

ತನ್ನಂತೆ ರೂಪವುಳ್ಳ ವೀರಭದ್ರನ ಅರ್ಥಾತ್ ಈಶ್ವರನ ಕರ್ಮಕ್ಕೆ ಸಾಕ್ಷಿಯಾಗಿ ಭದ್ರಕಾಳಿ ರೂಪಳಾದ ತಾನೂ ಅವಳನ್ನು ಹಿಂಬಾಲಿಸಿದಳು. ಶೌರ್ಯದಲ್ಲಿ ರುದ್ರನಿಗೆ ಸಮಾನನೂ, ಅವನಂತೆಯೇ ಬಲ-ರೂಪವುಳ್ಳವನೂ, ಅವನ ಪ್ರತಿಬಿಂಬರೂಪನೂ, ಎಣೆಯಿಲ್ಲದ ಬಲ-ಪೌರುಷ ಉಳ್ಳವನೂ, ವೀರಭದ್ರನೆಂದು ಖ್ಯಾತನಾದವನೂ, ರುದ್ರನ ಕೋಪರೂಪನೂ ಆದ ವೀರಭದ್ರನು ಪಾರ್ವತಿದೇವಿಯ ದುಃಖವನ್ನು ಪರಿಹರಿಸಲು ರುದ್ರನ ಅಭಿಪ್ರಾಯವನ್ನು ತಿಳಿದು, ರುದ್ರನಿಗೆ ತಲೆಬಾಗಿ ನಮಸ್ಕರಿಸಿ ತನ್ನ ರೋಮಕೂಪಗಳಿಂದ ಅನೇಕ ಗಣಗಳನ್ನು ಸೃಷ್ಟಿಸಿದನು. ಆ ಗಣಗಳೆಲ್ಲವೂ ಆಕಾರದಲ್ಲಿ, ಬಲ-ಪರಾಕ್ರಮದಲ್ಲಿ ರುದ್ರನಿಗೆ ಸಮಾನವಾಗಿದ್ದವು.

ವ್ಯಾಖ್ಯಾನ ವಿಶೇಷ– ಶ್ರೀಮದಾಚಾರ್ಯರು ವೀರಭದ್ರನನ್ನು ರುದ್ರದೇವರ ಅವತಾರವೆಂದೇ ಚತುರ್ಥಸ್ಕಂದದ ತಾತ್ಪರ್ಯನಿರ್ಣಯದಲ್ಲಿ ಹೇಳಿರುತ್ತಾರೆ. ಇದರಂತೆ ಭದ್ರಕಾಳಿಯನ್ನು ಪಾರ್ವತಿಯ ಅವತಾರವೆಂದೇ ಚಿಂತಿಸಬೇಕು. ದುಷ್ಟಸಂಹಾರಕ ರೂಪಗಳೆಂದು ಚಿಂತಿಸಬೇಕು.

ತೇ ನಿಪೇತುಸ್ತತಸ್ತೂರ್ಣಂ ದಕ್ಷಯಜ್ಞವಿಹಿಂಸಯಾ ।
ಭೀಮರೂಪಾ ಮಹಾಕಾಯಾಃ ಶತಶೋಽಥ ಸಹಸ್ರಶಃ ॥೩೬॥

ಆ ಗಣಗಳೆಲ್ಲವೂ ಮಹಾವೇಗದಿಂದ ನೂರಾರು, ಸಾವಿರಾರು ಸಂಖ್ಯೆಯಲ್ಲಿ ದಕ್ಷನ ಯಜ್ಞವನ್ನು ನಾಶಮಾಡಲು ಮೇಲೆ ಬಿದ್ದು ಹೊಡೆಯಲಾರಂಭಿಸಿದವು. ಮಹಾದೇಹದಿಂದಲೂ ಭಯಂಕರ ರೂಪದಿಂದಲೂ ಕೂಡಿದ್ದವು.

ತತಃ ಕಿಲಕಿಲಾಶಬ್ದೈರಾಕಾಶಂ ಪೂರಯಂತಿ ಚ ।
ತೇನ ಶಬ್ದೇನ ಮಹತಾ ತ್ರಸ್ತಾಸ್ತತ್ರ ದಿವೌಕಸಃ ॥೩೭॥

ಆ ಯಜ್ಞಶಾಲೆಯಲ್ಲಿ ಆಕಾಶವೆಲ್ಲ ತುಂಬುವಂತೆ ಭಯಾನಕವಾದ ಕಿಲಕಿಲ ಧ್ವನಿಯಿಂದ ಗರ್ಜಿಸುತ್ತಿದ್ದವು. ಆ ಶಬ್ದವನ್ನು ಕೇಳಿ ದೇವತೆಗಳೆಲ್ಲರೂ ಹೆದರಿದರು.

ಪರ್ವತಾಶ್ಚ ವ್ಯಶೀರ್ಯಂತ ಚಕಂಪೇ ಚ ವಸುಂಧರಾ ।
ಮಾರುತಾಶ್ಚೈವ ಘೂರ್ಣಂತೇ ಚುಕ್ಷುಭೇ ವರುಣಾಲಯಃ ॥೩೮॥

ಪರ್ವತಗಳು ಭೇದಿಸಿದವು, ಭೂಮಿಯು ನಡುಗಿತು, ಗಾಳಿಯಲ್ಲಿ ಸುಳಿ ಎದ್ದಿತು, ಸಮುದ್ರವು ಕಲಕಿ ಹೋಯಿತು.

ಅಗ್ನಯೋ ನೈವ ದೀಪ್ಯಂತೇ ನೈವ ದೀಪ್ಯತಿ ಭಾಸ್ಕರಃ ।
ಗ್ರಹಾ ಚೈವ ಪ್ರಕಾಶಂತೇ ನಕ್ಷತ್ರಾಣಿ ನ ಚಂದ್ರಮಾಃ ॥೩೯॥

ಇದರಿಂದ ಅಗ್ನಿಗಳು ಶಾಂತವಾದವು, ಸೂರ್ಯನು ಪ್ರಕಾಶಹೀನನಾದನು, ಗ್ರಹ-ನಕ್ಷತ್ರ -ಚಂದ್ರ ಎಲ್ಲರೂ ಕಾಂತಿಹೀನರಾದರು.

ಋಷಯೋ ನ ಪ್ರಕಾಶಂತೇ ನ ದೇವಾ ನ ಚ ಮಾನುಷಾಃ ।
ಏವಂ ತು ತಿಮಿರೀಭೂತೇ ನಿರ್ದಹಂತ್ಯಪಮಾನಿತಾಃ ॥೪೦॥

ಋಷಿಗಳು, ದೇವತೆಗಳು, ಮನುಷ್ಯರು ಯಾರೂ ಕಣ್ಣಿಗೆ ಕಾಣದಂತೆ ಎಲ್ಲೆಡೆಯೂ ಕತ್ತಲು ಆವರಿಸಿತು. ಇಂತಹ ಭಯಾನಕ ಕತ್ತಲೆಯಲ್ಲಿಯೇ ರುದ್ರಗಣಗಳು ಮಹಾಗರ್ವದಿಂದ ಎಲ್ಲವನ್ನೂ ಸುಡುತ್ತಾ ಬಂದವು.

ಪ್ರಹರಂತ್ಯಪರೇ ಘೋರಾ ಯೂಪಾನುತ್ಪಾಟಯಂತಿ ಚ ।
ಪ್ರಮರ್ದಂತಿ ತಥಾ ಚಾನ್ಯೇ ವಿಮರ್ದಂತಿ ತಥಾऽಪರೇ ॥೪೧॥

ಗಣದಲ್ಲಿ ಕೆಲವರು ಕಂಡವರನ್ನು ಹಿಡಿದು ಹೊಡೆಯುತ್ತಿದ್ದರು. ಕೆಲವರು ಯೂಪ ಸ್ತಂಭಗಳನ್ನು ಕಿತ್ತೊಗೆದರು. ಸಿಕ್ಕಿದವರನ್ನು ಬಡಿದು ತಿಕ್ಕಿದರು, ಗುದ್ದಿದರು.

ಆಧಾವಂತಿ ಪ್ರಧಾವಂತಿ ವಾಯುವೇಗಾ ಮನೋಜವಾಃ ।
ಚೂರ್ಣ್ಯಂತೇ ಯಜ್ಞಪಾತ್ರಾಣಿ ದಿವ್ಯಾನ್ಯಾಭರಣಾನಿ ಚ ॥೪೨॥

ಅನೇಕರು ಮನೋವೇಗ, ವಾಯುವೇಗದಿಂದ ಅತ್ತಿತ್ತ ಓಡಾಡುತ್ತಾ ಯಜ್ಞ ಪಾತ್ರೆಗಳನ್ನು ಕುಟ್ಟಿ ಪುಡಿ ಮಾಡಿದರು. ದಿವ್ಯಾಭರಣಗಳನ್ನೆಲ್ಲ ಕಿತ್ತೊಗೆದರು.

ವಿಶೀರ್ಯಮಾಣಾ ದೃಶ್ಯಂತೇ ತಾರಾ ಇವ ನಭಸ್ತಳೇ ।
ದಿವ್ಯಾನ್ನಪಾನಭಕ್ಷ್ಯಾಣಾಂ ರಾಶಯಃ ಪರ್ವತೋಪಮಾಃ ॥೪೩॥

ಅವರು ಕಿತ್ತೆಸೆದ ಆಭರಣಗಳು ಆಕಾಶದಲ್ಲಿನ ನಕ್ಷತ್ರಗಳಂತೆ ಕಾಣುತ್ತಿದ್ದವು. ದೇವಯೋಗ್ಯವಾದ ಅನ್ನ, ಪಾಯಸ, ಭಕ್ಷ್ಯಗಳೆಲ್ಲ ಪರ್ವತಗಳಂತೆ ರಾಶಿ-ರಾಶಿಯಾಗಿ ಚೆಲ್ಲಿ ಹೋಗಿದ್ದವು.

ಕ್ಷೀರನದ್ಯೋಽಥ ದೃಶ್ಯಂತೇ ಘೃತಪಾಯಸಕರ್ದಮಾಃ ।
ದಧಿಮಂಡೋದಕಾ ದಿವ್ಯಾಃ ಖಂಡಶರ್ಕರವಾಲುಕಾಃ ॥೪೪॥

ತುಪ್ಪದ ಪಾಯಸದ ಕೆಸರುಗಳಿಂದಲೂ, ಹಾಲಿನ ನದಿಗಳಿಂದಲೂ, ಮೊಸರು ಬೆಣ್ಣೆಗಳೆಂಬ ಸಮುದಾಯದಿಂದಲೂ, ಕಲ್ಲು ಸಕ್ಕರೆ ಎಂಬ ಮರಳಿನಿಂದಲೂ ಆ ಯಜ್ಞವಾಟವು ತುಂಬಿಹೋಗಿತ್ತು.

ಷಡ್ರಸಾ ನಿವಹಂತ್ಯೇತಾ ಗುಡಕುಲ್ಯಾ ಮನೋರಮಾಃ ।
ಉಚ್ಚಾವಚಾನಿ ಮಾಂಸಾನಿ ಭಕ್ಷ್ಯಾಣಿ ವಿವಿಧಾನಿ ಚ ॥೪೫॥

ಆರು ರಸಗಳ ಪ್ರವಾಹಗಳು, ಬೆಲ್ಲದ ನೀರಿನ ಕಾಲುವೆಗಳು ಮನೋಹರವಾಗಿ ಕಾಣುತ್ತಿದ್ದವು. ಅಲ್ಲಲ್ಲಿ ತಾರತಮ್ಯದಿಂದ ಕೂಡಿದ ಮಾಂಸಗಳು, ಬಗೆ ಬಗೆಯ ಭಕ್ಷ್ಯಗಳು ಕಾಣುತ್ತಿದ್ದವು.

ಪಾನಕಾನಿ ಚ ದಿವ್ಯಾನಿ ಲೇಹ್ಯಚೋಷ್ಯಾಣಿ ಯಾನಿ ಚ ।
ಭೃಂಜತೇ ವಿವಿಧೈರ್ವಕ್ತ್ರೈರ್ವಿಲುಂಪಂತ್ಯಾಕ್ಷಿಪಂತಿ ಚ ॥೪೬॥

ಶ್ರೇಷ್ಠವಾದ ಪಾನಕಗಳು, ಲೇಹ್ಯ, ಚೋಷ್ಯ ಮುಂತಾದ ಪದಾರ್ಥಗಳು ಇವುಗಳನ್ನೆಲ್ಲ ಬೇರೆ ಬೇರೆ ಮುಖಗಳಿಂದ ಕೂಡಿದ ಭೂತಗಣಗಳು ನೆಕ್ಕುತ್ತಿದ್ದವು. ಸವಿದು ಕುಡಿಯುತ್ತಾ ಬಿಸಾಡುತ್ತಿದ್ದವು.

ರುದ್ರಕೋಪಾನ್ಮಹಾಕಾಯಾಃ ಕಾಲಾಗ್ನಿಸದೃಶೋಪಮಾಃ ।
ಕ್ಷೋಭಯನ್ ಸುರಸೈನ್ಯಾನಿ ಭೀಷಯಂತಃ ಸಮಂತತಃ ॥೪೭॥

ರುದ್ರನ ಕೋಪದಿಂದ ಹುಟ್ಟಿರುವಂತಹ ಮಹತ್ತಾದ ಶರೀರವುಳ್ಳ, ಪ್ರಳಯ ಕಾಲಾಗ್ನಿಗೆ ಸಮಾನರಾದ ಗಣಾಧಿಪತಿಗಳು ಅಲ್ಲಲ್ಲಿ ಯಜ್ಞಕ್ಕಾಗಿ ಸೇರಿದ ದೇವ ಸೈನ್ಯಗಳನ್ನೆಲ್ಲ ಹೆದರಿಸಿ ಓಡಿಸಿದರು.

ಕ್ರೀಡಂತಿ ವಿವಿಧಾಕಾರಾಶ್ಚಿಕ್ಷಿಪುಃ ಸುರಯೋಷಿತಃ ।
ರುದ್ರಕ್ರೋಧಾತ್ ಪ್ರಯತ್ನೇನ ಸರ್ವದೇವೈಃ ಸುರಕ್ಷಿತಮ್ ॥೪೮॥

ಭಯ ಹುಟ್ಟುವ ರೀತಿಯಲ್ಲಿ ಆಟದಂತೆ ದುಷ್ಕರ್ಮಗಳನ್ನು ಎಸಗುತ್ತಿರುವ ಭೂತಗಣಗಳು ದೇವಸ್ತ್ರೀಯರನ್ನು ಹಿಡಿದು ಎಸೆದಾಡುತ್ತಿದ್ದರು. ದೇವತೆಗಳಿಂದ ರಕ್ಷಿಸಲ್ಪಟ್ಟ ಆ ಯಜ್ಞವು ವೀರಭದ್ರನಿಂದ ಪ್ರಯತ್ನಪೂರ್ವಕವಾಗಿ ನಾಶ ಮಾಡಲ್ಪಟ್ಟಿತು.

ತಂ ಯಜ್ಞಮದಹಚ್ಚೀಘ್ರಂ ರುದ್ರಕರ್ಮಾ ಸಮಂತತಃ ।
ಚಕಾರ ಭೈರವಂ ನಾದಂ ಸರ್ವಭೂತಭಯಂಕರಮ್ ॥೪೯॥

ಭಯಂಕರ ವ್ಯಾಪಾರವುಳ್ಳ ವೀರಭದ್ರನು ಆ ಯಜ್ಞವನ್ನು ಎಲ್ಲ ರೀತಿಯಿಂದಲೂ ನಾಶಗೊಳಿಸಿದನು. ಸರ್ವಭೂತಗಳಿಗೆ ಭಯವನ್ನು ಹುಟ್ಟಿಸುವ ಭೈರವ ನಾದವನ್ನೂ ಮಾಡಿದನು.

ಛಿತ್ತ್ವಾ ಶಿರೋ ವೈ ಯಜ್ಞಸ್ಯ ನನಾದ ಚ ಮುಮೋದ ಚ ।
ತತೋ ಬ್ರಹ್ಮಾದಯೋ ದೇವಾ ದಕ್ಷಶ್ಚೈವ ಪ್ರಜಾಪತಿಃ ॥೫೦॥

ವೀರಭದ್ರನು ಯಜ್ಞದ ಶಿರಸ್ಸನ್ನು ಕಡಿದು ನಾದ ಮಾಡಿದನು. ಸಂತೋಷಗೊಂಡನು. ಬಳಿಕ ಬ್ರಹ್ಮಾದಿ ದೇವತೆಗಳು, ದಕ್ಷಪ್ರಜಾಪತಿಯು ಪ್ರಾಂಜಲಿ ಬದ್ಧರಾಗಿ ನೀನ್ಯಾರೆಂದು ಹೇಳು ಎಂದು ಕೇಳಿದರು.

ವೀರಭದ್ರಃ

ಊಚುಃ ಪ್ರಾಂಜಲಯಃ ಸರ್ವೇ ಕಥ್ಯತಾಂ ಕೋ ಭವಾನಿತಿ ।
ನಾಹಂ ರುದ್ರೋ ನ ವಾ ದೇವೀ ನೈವ ಭೋಕ್ತುಮಿಹಾಗತಃ ॥೫೧॥

ದೇವ್ಯಾ ಮನ್ಯುಕೃತಂ ಮತ್ವಾ ಕ್ರುದ್ಧಃ ಸರ್ವಾತ್ಮಕಃ ಪ್ರಭುಃ ।
ದ್ರಷ್ಟುಂ ವಾ ನೈವ ವಿಪ್ರೇಂದ್ರಾನ್ನೈವ ಕೌತೂಹಲೇನ ವಾ ॥೫೨॥

ನಾನು ರುದ್ರನೂ ಅಲ್ಲ, ದೇವಿಯಾದ ಪಾರ್ವತಿಯೂ ಅಲ್ಲ. ಇಲ್ಲಿಗೆ ಊಟಕ್ಕೆ ಬಂದವನೂ ಅಲ್ಲ. ದೇವಿಯಾದ ಪಾರ್ವತಿಗೆ ನೀವೆಲ್ಲರು ಉಂಟುಮಾಡಿದ ದುಃಖಕ್ಕೆ ಕಾರಣನಾದ, ಸರ್ವಾತ್ಮಕನಾದ, ಪ್ರಭುವಾದ ರುದ್ರನು ಕೋಪಗೊಂಡು ಸೃಷ್ಟಿಸಿದ ವ್ಯಕ್ತಿಯು ನಾನು. ಈ ಯಜ್ಞವನ್ನು ಕುತೂಹಲದಿಂದ ನೋಡಲೂ ಬಂದವನಲ್ಲ ಎಂದು ವಿಪ್ರೇಂದ್ರರೇ, ನೀವೆಲ್ಲರೂ ತಿಳಿಯಿರಿ.

ತವ ಯಜ್ಞವಿಘಾತಾರ್ಥಂ ಸಂಪ್ರಾಪ್ತಂ ವಿದ್ಧಿ ಮಾಮಿಹ ।
ವೀರಭದ್ರ ಇತಿ ಖ್ಯಾತೋ ರುದ್ರಕೋಪಾದ್ ವಿನಿಃಸೃತಃ ॥೫೩॥

ಈ ಯಜ್ಞವನ್ನು ನಾಶಮಾಡುವುದಕ್ಕಾಗಿಯೇ ನಾನು ಬಂದವನೆಂದು ತಿಳಿಯಿರಿ. ರುದ್ರಕೋಪದಿಂದ ಸೃಷ್ಟಿಸಲ್ಪಟ್ಟ ವೀರಭದ್ರ ಎಂಬ ಖ್ಯಾತಿಯುಳ್ಳವನು ನಾನು.

ಭದ್ರಕಾಳೀತಿ ವಿಖ್ಯಾತಾ ದೇವ್ಯಾಃ ಕೋಪಾದ್ ವಿನಿಃಸೃತಾ ।
ಪ್ರೇಷಿತೌ ದೇವದೇವೇನ ಯಜ್ಞಾಂತಿಕಮಿಹಾಗತೌ ॥೫೪॥

ದೇವಿಯ ಕೋಪದಿಂದ ಹುಟ್ಟಿನನ್ನನ್ನು ಹಿಂಬಾಲಿಸುತ್ತಿರುವ ಈ ಸ್ತ್ರೀಗೆ ಭದ್ರಕಾಳಿ ಎಂದು ಹೆಸರು. ದೇವದೇವನಾದ ಶಿವನಿಂದ ಪ್ರೇರಿತರಾಗಿ ಯಜ್ಞವನ್ನು ಧ್ವಂಸ ಮಾಡುವ ಕಾರಣದಿಂದ ನಾವಿಲ್ಲಿಗೆ ಬಂದಿರುತ್ತೇವೆ.

ಶರಣಂ ಗಚ್ಛ ವಿಪ್ರೇಂದ್ರ ದೇವದೇವಮುಮಾಪತಿಮ್ ।
ವರಂ ಕ್ರೋಧೋಽಪಿ ದೇವಸ್ಯ ವರದಾನಂ ನ ಚಾನ್ಯತಃ ॥೫೫॥

ವಿಪ್ರೇಂದ್ರನೇ, ಈಗಲಾದರೂ ನಮ್ಮ ಪ್ರಭುವಾದ ರುದ್ರನಲ್ಲಿ ಶರಣಾಗತನಾಗಿ ಪ್ರಾರ್ಥಿಸು. ಇತರ ದೇವತೆಗಳಿಂದ ಪಡೆಯುವ ವರಗಳಿಗಿಂತಲೂ ಮಹಾದೇವನ ಕೋಪವೇ ಪ್ರಬಲವೆಂದು ತಿಳಿ ಎಂದನು.

ವೀರಭದ್ರವಚಃ ಶ್ರುತ್ವಾ ದಕ್ಷೋ ಧರ್ಮಭೃತಾಂ ವರಃ ।
ತೋಷಯಾಮಾಸ ಸ್ತೋತ್ರೇಣ ಪ್ರಣಿಪತ್ಯ ಮಹೇಶ್ವರಮ್ ॥೫೬॥

ಧರ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ದಕ್ಷಪ್ರಜಾಪತಿಯು ವೀರಭದ್ರನ ಮಾತನ್ನು ಕೇಳಿಸಿಕೊಂಡು ಮಹೇಶ್ವರನನ್ನು ನಮಸ್ಕರಿಸಿ ಸ್ತೋತ್ರದಿಂದ ಸಂತೋಷಗೊಳಿಸಿದನು.

ಪ್ರಪದ್ಯೇ ದೇವಮೀಶಾನಂ ಶಾಶ್ವತಂ ಧ್ರುವಮವ್ಯಯಮ್ ।
ಮಹಾದೇವಂ ಮಹಾತ್ಮಾನಂ ವಿಶ್ವಸ್ಯ ಜಗತಃ ಪತಿಮ್ ॥೫೭॥

ದೇವದೇವನೂ, ಶಾಶ್ವತನೂ, ಧ್ಯೇಯನೂ, ಅವ್ಯಯನೂ, ಮಹಾತ್ಮನೂ, ಸರ್ವಲೋಕಕ್ಕೆ ಒಡೆಯನೂ ಆದ ಪರಮಶಿವನೇ ನನಗೆ ರಕ್ಷಕನು. ಅವನನ್ನೇ ನಾನು ಮೊರೆಹೋಗುತ್ತೇನೆ.

ದಕ್ಷಪ್ರಜಾಪತೇರ್ಯಜ್ಞೇ ದ್ರವ್ಯೈಸ್ತೈಃ ಸುಸಮಾಹಿತೈಃ ।
ಆಹೂತಾ ದೇವತಾಃ ಸರ್ವಾ ಋಷಯಶ್ಚ ತಪೋಧನಾಃ ॥೫೮॥

ಜನಮೇಜಯನೇ, ದಕ್ಷನು ಆರಂಭಿಸಿದ ಯಜ್ಞಕ್ಕೆ ಆಗಮಿಸಿದ ದೇವತೆಗಳು, ಮಹರ್ಷಿಗಳು ಎಲ್ಲರೂ ಕರೆಯಲ್ಪಟ್ಟರು. ಸಮಸ್ತ ದ್ರವ್ಯಗಳು ಯಜ್ಞಕ್ಕಾಗಿ ಸಿದ್ಧವಾಗಿದ್ದವು.

ದೇವೋ ನಾಹೂಯತೇ ತತ್ರ ವಿಶ್ವಕರ್ಮಾ ಮಹೇಶ್ವರಃ ।
ತತ್ರ ಕ್ರುದ್ಧಾ ಮಹಾದೇವೀ ಗಣಾಂಸ್ತತ್ರ ವ್ಯಸರ್ಜಯತ್ ॥೫೯॥

ಮಹೇಶ್ವರನೊಬ್ಬನನ್ನು ಕರೆದಿರಲಿಲ್ಲ. ವಿಶ್ವಕರ್ಮನಾದ ಮಹೇಶ್ವರನನ್ನು ಕರೆದಿಲ್ಲವೆಂಬ ಕಾರಣದಿಂದ ಕ್ರುದ್ಧಳಾದ ಮಹಾದೇವಿಯು ಯಜ್ಞನಾಶಕ್ಕಾಗಿ ಗಣಗಳನ್ನು ಪ್ರೇರಿಸಿದಳು.

ಪ್ರದೀಪ್ತೇ ಯಜ್ಞವಾಟೇ ತು ವಿದ್ರುತೇಷು ದ್ವಿಜಾತಿಷು ।
ತಾರಾಗಣಮನುಪ್ರಾಪ್ತೇ ರೌದ್ರೇ ದೀಪ್ತೇ ಮಹಾತ್ಮನಿ ॥೬೦॥

ಯಜ್ಞಶಾಲೆಯು ಅವರಿಂದ ಸುಟ್ಟುಹೋಗಲು, ಯಜ್ಞದಲ್ಲಿ ಸಂಬಂಧಿಸಿದ ಬ್ರಾಹ್ಮಣರೆಲ್ಲ ಭಯದಿಂದ ಓಡುತ್ತಿರಲು ವೀರಭದ್ರನು ಭಯಂಕರ ರೂಪದಿಂದ ನಕ್ಷತ್ರ ಮಂಡಲದ ತನಕ ಬೆಳೆದು ನಿಂತನು.

ವೀರಭದ್ರಃ

ಊಚುಃ ಪ್ರಾಂಜಲಯಃ ಸರ್ವೇ ಕಥ್ಯತಾಂ ಕೋ ಭವಾನಿತಿ ।
ನಾಹಂ ರುದ್ರೋ ನ ವಾ ದೇವೀ ನೈವ ಭೋಕ್ತುಮಿಹಾಗತಃ ॥೫೧॥

ದೇವ್ಯಾ ಮನ್ಯುಕೃತಂ ಮತ್ವಾ ಕ್ರುದ್ಧಃ ಸರ್ವಾತ್ಮಕಃ ಪ್ರಭುಃ ।
ದ್ರಷ್ಟುಂ ವಾ ನೈವ ವಿಪ್ರೇಂದ್ರಾನ್ನೈವ ಕೌತೂಹಲೇನ ವಾ ॥೫೨॥

ನಾನು ರುದ್ರನೂ ಅಲ್ಲ, ದೇವಿಯಾದ ಪಾರ್ವತಿಯೂ ಅಲ್ಲ. ಇಲ್ಲಿಗೆ ಊಟಕ್ಕೆ ಬಂದವನೂ ಅಲ್ಲ. ದೇವಿಯಾದ ಪಾರ್ವತಿಗೆ ನೀವೆಲ್ಲರು ಉಂಟುಮಾಡಿದ ದುಃಖಕ್ಕೆ ಕಾರಣನಾದ, ಸರ್ವಾತ್ಮಕನಾದ, ಪ್ರಭುವಾದ ರುದ್ರನು ಕೋಪಗೊಂಡು ಸೃಷ್ಟಿಸಿದ ವ್ಯಕ್ತಿಯು ನಾನು. ಈ ಯಜ್ಞವನ್ನು ಕುತೂಹಲದಿಂದ ನೋಡಲೂ ಬಂದವನಲ್ಲ ಎಂದು ವಿಪ್ರೇಂದ್ರರೇ, ನೀವೆಲ್ಲರೂ ತಿಳಿಯಿರಿ.

ತವ ಯಜ್ಞವಿಘಾತಾರ್ಥಂ ಸಂಪ್ರಾಪ್ತಂ ವಿದ್ಧಿ ಮಾಮಿಹ ।
ವೀರಭದ್ರ ಇತಿ ಖ್ಯಾತೋ ರುದ್ರಕೋಪಾದ್ ವಿನಿಃಸೃತಃ ॥೫೩॥

ಈ ಯಜ್ಞವನ್ನು ನಾಶಮಾಡುವುದಕ್ಕಾಗಿಯೇ ನಾನು ಬಂದವನೆಂದು ತಿಳಿಯಿರಿ. ರುದ್ರಕೋಪದಿಂದ ಸೃಷ್ಟಿಸಲ್ಪಟ್ಟ ವೀರಭದ್ರ ಎಂಬ ಖ್ಯಾತಿಯುಳ್ಳವನು ನಾನು.

ಭದ್ರಕಾಳೀತಿ ವಿಖ್ಯಾತಾ ದೇವ್ಯಾಃ ಕೋಪಾದ್ ವಿನಿಃಸೃತಾ ।
ಪ್ರೇಷಿತೌ ದೇವದೇವೇನ ಯಜ್ಞಾಂತಿಕಮಿಹಾಗತೌ ॥೫೪॥

ದೇವಿಯ ಕೋಪದಿಂದ ಹುಟ್ಟಿನನ್ನನ್ನು ಹಿಂಬಾಲಿಸುತ್ತಿರುವ ಈ ಸ್ತ್ರೀಗೆ ಭದ್ರಕಾಳಿ ಎಂದು ಹೆಸರು. ದೇವದೇವನಾದ ಶಿವನಿಂದ ಪ್ರೇರಿತರಾಗಿ ಯಜ್ಞವನ್ನು ಧ್ವಂಸ ಮಾಡುವ ಕಾರಣದಿಂದ ನಾವಿಲ್ಲಿಗೆ ಬಂದಿರುತ್ತೇವೆ.

ಶರಣಂ ಗಚ್ಛ ವಿಪ್ರೇಂದ್ರ ದೇವದೇವಮುಮಾಪತಿಮ್ ।
ವರಂ ಕ್ರೋಧೋಽಪಿ ದೇವಸ್ಯ ವರದಾನಂ ನ ಚಾನ್ಯತಃ ॥೫೫॥

ವಿಪ್ರೇಂದ್ರನೇ, ಈಗಲಾದರೂ ನಮ್ಮ ಪ್ರಭುವಾದ ರುದ್ರನಲ್ಲಿ ಶರಣಾಗತನಾಗಿ ಪ್ರಾರ್ಥಿಸು. ಇತರ ದೇವತೆಗಳಿಂದ ಪಡೆಯುವ ವರಗಳಿಗಿಂತಲೂ ಮಹಾದೇವನ ಕೋಪವೇ ಪ್ರಬಲವೆಂದು ತಿಳಿ ಎಂದನು.

ವೀರಭದ್ರವಚಃ ಶ್ರುತ್ವಾ ದಕ್ಷೋ ಧರ್ಮಭೃತಾಂ ವರಃ ।
ತೋಷಯಾಮಾಸ ಸ್ತೋತ್ರೇಣ ಪ್ರಣಿಪತ್ಯ ಮಹೇಶ್ವರಮ್ ॥೫೬॥

ಧರ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ದಕ್ಷಪ್ರಜಾಪತಿಯು ವೀರಭದ್ರನ ಮಾತನ್ನು ಕೇಳಿಸಿಕೊಂಡು ಮಹೇಶ್ವರನನ್ನು ನಮಸ್ಕರಿಸಿ ಸ್ತೋತ್ರದಿಂದ ಸಂತೋಷಗೊಳಿಸಿದನು.

ಪ್ರಪದ್ಯೇ ದೇವಮೀಶಾನಂ ಶಾಶ್ವತಂ ಧ್ರುವಮವ್ಯಯಮ್ ।
ಮಹಾದೇವಂ ಮಹಾತ್ಮಾನಂ ವಿಶ್ವಸ್ಯ ಜಗತಃ ಪತಿಮ್ ॥೫೭॥

ದೇವದೇವನೂ, ಶಾಶ್ವತನೂ, ಧ್ಯೇಯನೂ, ಅವ್ಯಯನೂ, ಮಹಾತ್ಮನೂ, ಸರ್ವಲೋಕಕ್ಕೆ ಒಡೆಯನೂ ಆದ ಪರಮಶಿವನೇ ನನಗೆ ರಕ್ಷಕನು. ಅವನನ್ನೇ ನಾನು ಮೊರೆಹೋಗುತ್ತೇನೆ.

ದಕ್ಷಪ್ರಜಾಪತೇರ್ಯಜ್ಞೇ ದ್ರವ್ಯೈಸ್ತೈಃ ಸುಸಮಾಹಿತೈಃ ।
ಆಹೂತಾ ದೇವತಾಃ ಸರ್ವಾ ಋಷಯಶ್ಚ ತಪೋಧನಾಃ ॥೫೮॥

ಜನಮೇಜಯನೇ, ದಕ್ಷನು ಆರಂಭಿಸಿದ ಯಜ್ಞಕ್ಕೆ ಆಗಮಿಸಿದ ದೇವತೆಗಳು, ಮಹರ್ಷಿಗಳು ಎಲ್ಲರೂ ಕರೆಯಲ್ಪಟ್ಟರು. ಸಮಸ್ತ ದ್ರವ್ಯಗಳು ಯಜ್ಞಕ್ಕಾಗಿ ಸಿದ್ಧವಾಗಿದ್ದವು.

ದೇವೋ ನಾಹೂಯತೇ ತತ್ರ ವಿಶ್ವಕರ್ಮಾ ಮಹೇಶ್ವರಃ ।
ತತ್ರ ಕ್ರುದ್ಧಾ ಮಹಾದೇವೀ ಗಣಾಂಸ್ತತ್ರ ವ್ಯಸರ್ಜಯತ್ ॥೫೯॥

ಮಹೇಶ್ವರನೊಬ್ಬನನ್ನು ಕರೆದಿರಲಿಲ್ಲ. ವಿಶ್ವಕರ್ಮನಾದ ಮಹೇಶ್ವರನನ್ನು ಕರೆದಿಲ್ಲವೆಂಬ ಕಾರಣದಿಂದ ಕ್ರುದ್ಧಳಾದ ಮಹಾದೇವಿಯು ಯಜ್ಞನಾಶಕ್ಕಾಗಿ ಗಣಗಳನ್ನು ಪ್ರೇರಿಸಿದಳು.

ಪ್ರದೀಪ್ತೇ ಯಜ್ಞವಾಟೇ ತು ವಿದ್ರುತೇಷು ದ್ವಿಜಾತಿಷು ।
ತಾರಾಗಣಮನುಪ್ರಾಪ್ತೇ ರೌದ್ರೇ ದೀಪ್ತೇ ಮಹಾತ್ಮನಿ ॥೬೦॥

ಯಜ್ಞಶಾಲೆಯು ಅವರಿಂದ ಸುಟ್ಟುಹೋಗಲು, ಯಜ್ಞದಲ್ಲಿ ಸಂಬಂಧಿಸಿದ ಬ್ರಾಹ್ಮಣರೆಲ್ಲ ಭಯದಿಂದ ಓಡುತ್ತಿರಲು ವೀರಭದ್ರನು ಭಯಂಕರ ರೂಪದಿಂದ ನಕ್ಷತ್ರ ಮಂಡಲದ ತನಕ ಬೆಳೆದು ನಿಂತನು.

ಶೂಲನಿರ್ಭಿನ್ನಹೃದಯೈಃ ಕೂಜದ್ಭಿಃ ಪರಿಚಾರಕೈಃ ।
ನಿಖಾತೋತ್ಪಾಟಿತೈರ್ಯೂಪೈರಪವಿದ್ಧೈರಿತಸ್ತತಃ ॥೬೧॥

ರುದ್ರಗಣಗಳು ಅಲ್ಲಿಯ ಪರಿಚಾರಕರನ್ನು ಶೂಲದಿಂದ ತಿವಿಯುತ್ತಿದ್ದವು. ಭಯಂಕರ ಧ್ವನಿಗಳಿಂದ ಕೂಗುತ್ತಿದ್ದವು. ಕೆಲವರು ಯೂಪಗಳನ್ನು ಕಿತ್ತು ಮುರಿದು ಎಸೆದಾಡುತ್ತಿದ್ದರು.

ಉತ್ಪತದ್ಭಿಃ ಪತದ್ಭಿಶ್ಚ ಗೃಧ್ರೈರಾಮಿಷಗೃದ್ಧಿಭಿಃ ।
ಪಕ್ಷವಾತವಿನಿರ್ಧೂತೈಃ ಶಿವಾಶತನಿನಾದಿತೈಃ ॥೬೨॥

ಅಲ್ಲಿ ಸತ್ತವರ ಮಾಂಸದ ಆಸೆಗೆ ಹದ್ದುಗಳು ಕೆಳಕ್ಕೂ ಮೇಲಕ್ಕೂ ಹಾರಾಡುತ್ತಿದ್ದವು. ರಣಹದ್ದುಗಳ ರೆಕ್ಕೆಯ ಗಾಳಿಗೆ ಹೆದರಿದ ನೂರಾರು ನರಿಗಳು ಊಳಿಡುತ್ತಿದ್ದವು.

ಯಕ್ಷಗಂಧರ್ವಸಂಘೈಶ್ಚ ಪಿಶಾಚೋರಗರಾಕ್ಷಸೈಃ ।
ಪ್ರಾಣಾಪಾನೌ ಸಂನಿರುಧ್ಯ ವಕ್ರಸ್ಥಾನೇನ ಯತ್ನತಃ ॥೬೩॥

ಯಕ್ಷರು, ಗಂಧರ್ವರು, ಪಿಶಾಚರು, ರಾಕ್ಷಸರು, ಉರಗಗಳು ಇವರೆಲ್ಲರೂ ಅಲ್ಲಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದರು. ಇವರಿಗೆ ಹಾನಿಯಾಗಬಾರದೆಂದು ತನ್ನ ಪ್ರಾಣಾಪಾನ ವಾಯುಗಳನ್ನು ವೀರಭದ್ರನು ಯತ್ನದಿಂದ ನಿಗ್ರಹಿಸಿದನು.

ವಿಚಾರ್ಯ ಸರ್ವತೋ ದೃಷ್ಟಿಂ ಬಹುದೃಷ್ಟಿರಮಿತ್ರಜಿತ್ ।
ಸಹಸಾ ದೇವದೇವೇಶೋ ಹ್ಯಗ್ನಿಕುಂಡಾತ್ ಸಮುತ್ಥಿತಃ ॥೬೪॥

ಎಲ್ಲೆಡೆಯೂ ದೃಷ್ಟಿಯನ್ನು ಪಸರಿಸಿ, ಅಗ್ನಿಕುಂಡದ ಮಧ್ಯಭಾಗದಿಂದ ದೇವದೇವೇಶನಾದ, ಶತ್ರುಗಳಿಂದ ಗೆಲ್ಲಲು ಅಸಾಧ್ಯನಾದ ಮಹರುದ್ರನು ಕೂಡಲೇ ಮೇಲೆದ್ದನು.

ಬಿಭ್ರತ್ ಸೂರ್ಯಸಹಸ್ರಸ್ಯ ತೇಜಃ ಸಂವರ್ತಕೋಪಮಃ ।
ಸ್ಮಿತಂ ಕೃತ್ವಾಽಬ್ರವೀದ್ ವಾಕ್ಯಂ ಬ್ರೂಹಿ ಕಿಂ ಕರವಾಣಿ ತೇ ॥೬೫॥

ಸಹಸ್ರ ಸೂರ್ಯರ ತೇಜಸ್ಸಿನಂತೆ ಕೂಡಿರುವ, ಯಮನಂತೆ ಭಯಂಕರನಾದ ಮಹರುದ್ರನು ದಕ್ಷನನ್ನು ನೋಡಿ ಮಂದಹಾಸವನ್ನು ಬೀರಿ, ನಾನು ಏನು ಮಾಡಲಿ? ನನ್ನಿಂದೇನಾಗಬೇಕು? ಹೇಳು ಎಂದು ಕೇಳಿದನು.

ಶ್ರಾವಿತೇ ಚ ಮಖಾಧ್ಯಾಯೇ ದೇವಾನಾಂ ಗುರುಣಾ ತತಃ ।
ತಮುವಾಚಾಂಜಲಿಂ ಕೃತ್ವಾ ದಕ್ಷೋ ದೇವಂ ಪ್ರಜಾಪತಿಃ ॥೬೬॥

ಈ ಸಮಯದಲ್ಲಿ ದೇವಗುರುವಾದ ಬೃಹಸ್ಪತಿಯು ಹೇಳಿದ ಯಾಗ-ಅಧ್ಯಾಯದ ಕ್ರಮದಂತೆ ದಕ್ಷ ಪ್ರಜಾಪತಿಯು ವೇದವಚನಗಳಿಂದ ಮಹರುದ್ರನನ್ನು ಪ್ರಾಂಜಲಿಯಾಗಿ ಸ್ತುತಿಸಿದನು.

ಭೀತಶಂಕಿತವಿತ್ರಸ್ತಃ ಸಬಾಷ್ಪವದನೇಕ್ಷಣಃ ।
ಯದಿ ಪ್ರಸನ್ನೋ ಭಗವಾನ್ ಯದಿ ಚಾಹಂ ಭವತ್ಪ್ರಿಯಃ ॥೬೭॥

ಯದಿ ವಾऽಹಮನುಗ್ರಾಹ್ಯೋ ಯದಿ ವಾ ವರದೋ ಮಮ ।
ಯದ್ದಗ್ಧಂ ಭಕ್ಷಿತಂ ಪೀತಮಶಿತಂ ಯಚ್ಚ ನಾಶಿತಮ್ ॥೬೮॥

ಚೂರ್ಣೀಕೃತಾಪವಿದ್ಧಂ ಚ ಯಜ್ಞಸಂಭಾರಮೀದೃಶಮ್ ।
ದೀರ್ಘಕಾಲೇನ ಮಹತಾ ಪ್ರಯತ್ನೇನ ಸುಸಂಚಿತಮ್ ।
ತನ್ನ ಮಿಥ್ಯಾ ಭವೇನ್ಮಹ್ಯಂ ವರಮೇತಮಹಂ ವೃಣೇ ॥೬೯॥

ಆ ಸಮಯದಲ್ಲಿ ಹೆದರಿದ್ದನು, ಶಂಕಿತನಾಗಿದ್ದನು, ನಡುಗುತ್ತಿದ್ದನು, ಕಣ್ಣಿನಿಂದ ನೀರನ್ನು ಸುರಿಸುತ್ತಿದ್ದನು. ಮಹರುದ್ರನೇ, ನಾನು ಒಂದು ವೇಳೆ ಭಗವಂತನಿಗೆ ಪ್ರಿಯನಾಗಿದ್ದಲ್ಲಿ, ಪೂಜ್ಯನಾದ ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿದ್ದಲ್ಲಿ, ನಿನ್ನಿಂದ ಅನುಗ್ರಹವನ್ನು ಹೊಂದಲು ನಾನು ಅರ್ಹತೆಯನ್ನು ಪಡೆದಿದ್ದಲ್ಲಿ, ನೀನು ವರದನಾಗಿದ್ದಲ್ಲಿ, ಯಾವ ಯಜ್ಞವನ್ನು ನೀನು ಸುಟ್ಟಿದ್ದೀಯೋ, ತಿಂದು-ಕುಡಿದು-ನುಂಗಿ ನಾಶಪಡಿಸಿದ, ಪುಡಿಮಾಡಲ್ಪಟ್ಟ ಸಮಸ್ತ ಯಜ್ಞ ಸಾಮಗ್ರಿಗಳು ಯಜ್ಞಕ್ಕೆ ಉಪಯೋಗಕ್ಕೆ ಬರಬೇಕು. ಬಹಳ ಕಾಲದ ಮಹಾಪ್ರಯತ್ನದಿಂದ ಈ ಯಜ್ಞ ಸಾಮಗ್ರಿಗಳನ್ನು ಸಂಗ್ರಹಿಸಿರುತ್ತೇನೆ. ಆ ಪದಾರ್ಥಗಳು ಭಗವತ್ಪ್ರೀತಿಗೆ ಸಮರ್ಪಿತವಾಗಿಲ್ಲ, ಆ ಪದಾರ್ಥಗಳು ವ್ಯರ್ಥವಾಗದಂತೆ ನಿನ್ನಿಂದ ವರವನ್ನು ಬಯಸುತ್ತೇನೆ.

ತಥಾऽಸ್ತ್ವಿತ್ಯಾಹ ಭಗವಾನ್ ಭಗನೇತ್ರಹರೋ ಹರಃ ।
ಧರ್ಮಾಧ್ಯಕ್ಷೋ ವಿರೂಪಾಕ್ಷಸ್ತ್ರ್ಯಕ್ಷೋ ದೇವಃ ಪ್ರಜಾಪತಿಃ ॥೭೦॥

ಹೀಗೆ ಹೇಳಿದ ಕೂಡಲೇ ಭಗನ ಕಣ್ಣುಗಳನ್ನು ಕೆರಳಿಸಿದ ರುದ್ರನು ತಾಳ್ಮೆಯನ್ನು ವಹಿಸಿ ಹಾಗೆಯೇ ಆಗಲಿ ಎಂದನು. ಧರ್ಮಾಧ್ಯಕ್ಷನೂ, ವಿರೂಪಾಕ್ಷನೂ, ತ್ರ್ಯಕ್ಷನೂ, ಪ್ರಜಾಪತಿಯೂ ಆದ ಮಹಾದೇವನು ದಕ್ಷನಿಗೆ ವರವನ್ನು ಕೊಟ್ಟನು.

ಜಾನುಭ್ಯಾಮವನೀಂ ಗತ್ವಾ ದಕ್ಷೋ ಲಬ್ಧ್ವಾ ಭವಾದ್ ವರಮ್ ।
ನಾಮ್ನಾಮಷ್ಟಸಹಸ್ರೇಣ ಸ್ತುತವಾನ್ ವೃಷಭಧ್ವಜಮ್ ॥೭೧॥

ಇದರಿಂದ ಸಂತುಷ್ಟನಾದ ದಕ್ಷನು ಭೂಮಿಯಲ್ಲಿ ಮಹರುದ್ರನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಸಾವಿರದೆಂಟು ನಾಮಗಳಿಂದ ವೃಷಭಧ್ವಜನಾದ ಮಹರುದ್ರನನ್ನು ಸ್ತುತಿಸಿದನು.

ಯುಧಿಷ್ಠಿರಃ

ಯೈರ್ನಾಮಧೇಯೈಃ ಸ್ತುತವಾನ್ ದಕ್ಷೋ ದೇವಂ ಪ್ರಜಾಪತಿಃ ।
ವಕ್ತುಮರ್ಹಸಿ ಮೇ ತಾತ ಶ್ರೋತುಂ ಶ್ರದ್ಧಾ ಮಮಾನಘ ॥೭೨॥

ಯುಧಿಷ್ಠಿರ– ಪಿತಾಮಹನೇ, ದಕ್ಷನು ಯಾವ ಯಾವ ನಾಮಗಳಿಂದ ಈಶ್ವರನನ್ನು ಸ್ತುತಿಸಿದನು? ಅದನ್ನು ಕೇಳಬೇಕೆಂದು ನನಗೆ ಕುತೂಹಲವಿದೆ. ಅದೆಲ್ಲವನ್ನೂ ಶ್ರದ್ಧೆಯುಳ್ಳ ನನಗೆ ಹೇಳಲು ಯೋಗ್ಯನಾಗಿರುವಿ.

ಭೀಷ್ಮಃ

ಶ್ರೂಯತಾಂ ದೇವದೇವಸ್ಯ ನಾಮಾನ್ಯದ್ಭುತಕರ್ಮಣಃ।
ಗೂಢವ್ರತಸ್ಯ ಗುಹ್ಯಾನಿ ಪ್ರಕಾಶಾನಿ ಚ ಭಾರತ ॥೭೩॥

ಭೀಷ್ಮ– ಯುಧಿಷ್ಠಿರನೇ, ಅದ್ಭುತಕರ್ಮಿಯೂ, ಗೂಢವಾದ ವ್ರತವುಳ್ಳವನೂ ಆದ ಪರಮೇಶ್ವರನ ರಹಸ್ಯವೂ, ಪ್ರಕಾಶಕವೂ ಆದ ನಾಮಗಳನ್ನು ಹೇಳುತ್ತೇನೆ, ಕೇಳು.

ನಮಸ್ತೇ ದೇವದೇವೇಶ ದೇವಾರಿಬಲಸೂದನ ।
ದೇವೇಂದ್ರಬಲವಿಷ್ಟಂಭ ದೇವದಾನವಪೂಜಿತ ॥೭೪॥

ದೇವದೇವನೇ ನಿನಗೆ ನಮಸ್ಕಾರವು. ದೇವಶತ್ರುಗಳ ಸೈನ್ಯವನ್ನು ನಾಶ ಮಾಡತಕ್ಕವನೇ, ದೇವ-ದಾನವರಿಂದ ಪೂಜಿತನಾಗಿ ದೇವೇಂದ್ರನ ಬಲವನ್ನು ತಡೆಗಟ್ಟಿದ ಮಹರುದ್ರನೇ ನಿನಗೆ ನಮಸ್ಕಾರವು.

ಸಹಸ್ರಾಕ್ಷ ವಿರೂಪಾಕ್ಷ ತ್ರ್ಯಕ್ಷ ಯಕ್ಷಾಧಿಪಪ್ರಿಯ ।
ಸರ್ವತಃ ಪಾಣಿಪಾದಾಂತ ಸರ್ವತೋಕ್ಷಿಶಿರೋಮುಖ ॥೭೫॥

ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠಸಿ ।
ಶಂಕುಕರ್ಣ ಮಹಾಕರ್ಣ ಕುಂಭಕರ್ಣಾರ್ಣವಾಲಯ ॥೭೬॥

ಗಜೇಂದ್ರಕರ್ಣ ಗೋಕರ್ಣ ಪಾಣಿಕರ್ಣ ನಮೋಸ್ತು ತೇ ।
ಶತೋದರ ಶತಾವರ್ತ ಶತಜಿಹ್ವ ನಮೋಸ್ತು ತೇ ॥೭೭॥

ಸಹಸ್ರಾಕ್ಷನೇ, ವಿರೂಪಾಕ್ಷನೇ, ತ್ರ್ಯಕ್ಷನೇ, ಯಕ್ಷಾಧಿಪತಿಯಾದ ಕುಬೇರನಿಗೆ ಪ್ರಿಯನಾದವನೇ ನಿನಗೆ ನಮಸ್ಕಾರವು. ಎಲ್ಲ ಕಡೆಯೂ ವ್ಯಾಪಿಸಿದ ಕೈಗಳುಳ್ಳವನೇ, ವ್ಯಾಪ್ತವಾದ ಕಣ್ಣು-ತಲೆ-ಪಾದವುಳ್ಳವನೇ, ಎಲ್ಲೆಡೆಯೂ ವ್ಯಾಪ್ತವಾದ ಕಿವಿಗಳುಳ್ಳವನೇ, ಎಲ್ಲವನ್ನೂ ಆವರಿಸಿರುವೆ. ಶಂಕುಕರ್ಣನೇ, ಮಹಾಕರ್ಣನೇ, ಕುಂಭಕರ್ಣನೇ, ಸಮುದ್ರವೇ ಮನೆಯಾಗಿ ಉಳ್ಳವನೇ, ಗಜೇಂದ್ರಕರ್ಣನೇ, ಗೋಕರ್ಣನೇ, ಪಾಣಿಕರ್ಣನೇ ನಿನಗೆ ನಮಸ್ಕಾರವು. ನೂರು ಹೊಟ್ಟೆಯುಳ್ಳವನೇ, ನೂರು ನಾಭಿ ಉಳ್ಳವನೇ, ನೂರು ನಾಲಿಗೆಯುಳ್ಳವನೇ ನಿನಗೆ ನಮಸ್ಕಾರವು.

ಗಾಯಂತಿ ತ್ವಾ ಗಾಯತ್ರಿಣೋಽರ್ಚಂತ್ಯರ್ಕಮರ್ಕಿಣಃ ।
ಬ್ರಹ್ಮಾಣಂ ತ್ವಾ ಶತಕ್ರತುಮೂರ್ದ್ಧಂ ಖಮಿವ ಮೇನಿರೇ ॥೭೮॥

ಗಾಯತ್ರಿಮಂತ್ರವನ್ನು ಜಪಮಾಡುವ ವ್ಯಕ್ತಿಗಳು ನಿನ್ನ ಮಹಿಮೆಯನ್ನು ಗಾನ ಮಾಡುತ್ತಾರೆ. ಸೂರ್ಯೋಪಾಸಕರು ಸೂರ್ಯಸದೃಶನಾದ ನಿನ್ನನ್ನು ಆರಾಧಿಸುತ್ತಾರೆ. ಋಷಿಗಳು ನಿನ್ನನ್ನೇ ಬ್ರಹ್ಮನೆಂದೂ, ಶತಕ್ರತುವೆಂದು ತಿಳಿಯುತ್ತಾರೆ. ಆಕಾಶದಂತೆ ಅಸಂಗನೆಂದು ನಿನ್ನನ್ನು ತಿಳಿಯುತ್ತಾರೆ.

ಮೂರ್ತೌ ಹಿ ತೇ ಮಹಾಮೂರ್ತೇ ಸಮುದ್ರಾಂಬರಸನ್ನಿಭ ।
ಸರ್ವಾ ವೈ ದೇವತಾ ಹ್ಯಸ್ಮಿನ್ ಗಾವೋ ಗೋಷ್ಠ ಇವಾಸತೇ ॥೭೯॥

ನಿನ್ನ ಮೂರ್ತಿಯಲ್ಲಿ ಮಹಾಮೂರ್ತಿಯು ಅಡಕವಾಗಿದೆ. ಸಮುದ್ರ-ಆಕಾಶಗಳಿಗೆ ಸಮಾನನಾದವನು, ಸಮಸ್ತ ದೇವತೆಗಳು ಗೋಶಾಲೆಯಲ್ಲಿ ಗೋವುಗಳು ನಿವಾಸ ಮಾಡುವಂತೆ ನಿನ್ನಲ್ಲಿ ನಿವಾಸ ಮಾಡುತ್ತಿದ್ದಾರೆ.

ಭವಚ್ಛರೀರೇ ಪಶ್ಯಾಮಿ ಸೋಮಮಗ್ನಿಂ ಜಲೇಶ್ವರಮ್ ।
ಆದಿತ್ಯಮಥ ವೈ ವಿಷ್ಣುಂ ಬ್ರಹ್ಮಾಣಂ ಚ ಬೃಹಸ್ಪತಿಮ್ ॥೮೦॥

ನಿನ್ನ ಶರೀರದಲ್ಲಿ ಸೋಮನನ್ನು (ಚಂದ್ರ), ಅಗ್ನಿಯನ್ನು, ವರುಣನನ್ನು, ಸೂರ್ಯನನ್ನು, ವಿಷ್ಣುವನ್ನು, ದೇವಗುರುವಾದ ಬೃಹಸ್ಪತಿಯನ್ನು ಕಾಣುತ್ತಿದ್ದೇನೆ.

ಭಗವಾನ್ ಕಾರಣಂ ಕಾರ್ಯಂ ಕ್ರಿಯಾ ಕರಣಮೇವ ಚ ।
ಅಸತಶ್ಚ ಸತಶ್ಚೈವ ತಥೈವ ಪ್ರಭವಾಪ್ಯಯೌ ॥೮೧॥

ನೀನು ಕಾರಣ, ಕಾರ್ಯ, ಕ್ರಿಯಾ, ಕರಣ, ಪೂಜ್ಯ ಎಲ್ಲವೂ ಆಗಿರುವಿ. ಮೂರ್ತಾಮೂರ್ತ ಪ್ರಪಂಚದ ಉತ್ಪತ್ತಿಗೂ, ಲಯಕ್ಕೂ ನೀನೇ ಕಾರಣನಾಗಿರುವಿ.

ನಮೋ ಭವಾಯ ಶರ್ವಾಯ ರುದ್ರಾಯ ವರದಾಯ ಚ ।
ಪಶೂನಾಂ ಪತಯೇ ನಿತ್ಯಂ ನಮೋಸ್ತ್ವಂಧಕಘಾತಿನೇ ॥೮೨॥

ಎಲ್ಲರ ಉತ್ಪತ್ತಿಗೂ ಕಾರಣನಾದ, ಸಂಹಾರಕ್ಕೆ ಕಾರಣನಾದ, ಭಕ್ತರ ಪಾಪವನ್ನು ಪರಿಹರಿಸುವ, ಭಕ್ತವರದನಾದ, ಪಶುಪತಿಯಾದ, ಅಂಧಕಾಸುರನನ್ನು ಸಂಹಾರ ಮಾಡಿದ ನಿನಗೆ ನಮಸ್ಕಾರವು.

ತ್ರಿಜಟಾಯ ತ್ರಿಶೀರ್ಷಾಯ ತ್ರಿಶೂಲವರಪಾಣಿನೇ ।
ತ್ರ್ಯಂಬಕಾಯ ತ್ರಿನೇತ್ರಾಯ ತ್ರಿಪುರಘ್ನಾಯ ವೈ ನಮಃ ॥೮೩॥

ಮೂರು ಜಟೆಗಳುಳ್ಳವನೇ, ಮೂರು ಶಿರಸ್ಸು ಧರಿಸಿದವನೇ, ತ್ರಿಶೂಲಧಾರಿಯೇ, ತ್ರ್ಯಂಬಕನೇ, ತ್ರಿನೇತ್ರನೇ, ತ್ರಿಪುರಾಸುರನನ್ನು ಹಾನಿಗೈದವನೇ ನಿನಗೆ ನಮಸ್ಕಾರವು.

ನಮಶ್ಚಂಡಾಯ ಕುಂಡಾಯ ಅಂಡಾಯಾಂಡಧರಾಯ ಚ ।
ದಂಡಿನೇ ಸಮಕರ್ಣಾಯ ದಂಡಿಮುಂಡಾಯ ವೈ ನಮಃ ॥೮೪॥

ದುಷ್ಟರ ವಿಷಯದಲ್ಲಿ ಕೋಪಗೊಳ್ಳುವ, ಕುಂಡಾಯ= ಸಂಪೂರ್ಣ ಜಗತ್ತನ್ನು ಉದರದಲ್ಲಿ ಧರಿಸಿರುವ, ಅಂಡಾಯ= ಬ್ರಹ್ಮಾಂಡದಂತೆ ರೂಪವುಳ್ಳ, ಬ್ರಹ್ಮಾಂಡಧಾರಿಯಾದ, ದುಷ್ಟರನ್ನು ಶಿಕ್ಷಿಸುವ, ಎಲ್ಲವನ್ನು ವಿಮರ್ಶಿಸಿ ತಿಳಿಸಿಕೊಳ್ಳುವ, ದಂಡವನ್ನು ಧರಿಸಿರುವ ನಿನಗೆ ನಮಸ್ಕಾರವು.

ನಮೋರ್ಧ್ವದಂಷ್ಟ್ರಕೇಶಾಯ ಶುಕ್ಲಾಯಾವತತಾಯ ಚ ।
ವಿಲೋಹಿತಾಯ ಧೂಮ್ರಾಯ ನೀಲಗ್ರೀವಾಯ ವೈ ನಮಃ ॥೮೫॥

ಊರ್ಧ್ವಮುಖವಾದ ಹಲ್ಲುಗಳು, ಕೇಶಗಳು ಇವುಗಳಿಂದ ಕೂಡಿರುವ ಶುದ್ಧನಾದ, ವ್ಯಾಪ್ತನಾದ, ರಜೋಗುಣದಿಂದ, ತಮೋಗುಣದಿಂದ ದೂರನಾಗಿರುವ ನೀಲಗ್ರೀವನೇ ನಿನಗೆ ನಮಸ್ಕಾರವು.

ನಮೋಸ್ತ್ವಪ್ರತಿರೂಪಾಯ ವಿರೂಪಾಯ ಶಿವಾಯ ಚ ।
ಸೂರ್ಯಾಯ ಸೂರ್ಯಮಾಲಾಯ ಸೂರ್ಯಧ್ವಜಪತಾಕಿನೇ ॥೮೬॥

ಅಸದೃಶವಾದ ರೂಪವುಳ್ಳ, ವಿವಿಧ ರೂಪಗಳನ್ನು ಧರಿಸಿರುವ ಮಂಗಳನಾದ ಸೂರ್ಯನು, ಸೂರ್ಯಮಂಡಲ ಶೋಭಿತನೂ, ಸೂರ್ಯಧ್ವಜನೂ, ಪತಾಕಿಯೂ ಆಗಿರುವ ನಿನಗೆ ನಮಸ್ಕಾರವು.

ನಮಃ ಪ್ರಮಥನಾಥಾಯ ವೃಷಸ್ಕಂಧಾಯ ಧನ್ವಿನೇ ।
ಶತ್ರುಂದಮಾಯ ದಂಡಾಯ ಪರ್ಣಚೀರಪಟಾಯ ಚ ॥೮೭॥

ಪ್ರಮಥಗಣಗಳಿಗೆ ನಾಥನಾದ, ಎತ್ತಿನ ಹೆಗಲುಗಳಿಗೆ ಸಮಾನವಾದ ಹೆಗಲನ್ನು ಹೊಂದಿರುವ, ಪಿನಾಕ ಧನುಸ್ಸನ್ನು ಧರಿಸಿರುವ, ಶತ್ರುಹಂತಕನಾದ, ದಂಡಧಾರಿಯಾದ, ಭೂರ್ಜಪತ್ರ ಮತ್ತು ನಾರುಮಡಿಯ ಬಟ್ಟೆಯನ್ನು ಧರಿಸಿರುವ ನಿನಗೆ ನಮಸ್ಕಾರವು.

ನಮೋ ಹಿರಣ್ಯಗರ್ಭಾಯ ಹಿರಣ್ಯಕವಚಾಯ ಚ ।
ಹಿರಣ್ಯಕೃತಚೂಡಾಯ ಹಿರಣ್ಯಪತಯೇ ನಮಃ ॥೮೮॥

ಹಿರಣ್ಯಗರ್ಭನೇ, ಹಿರಣ್ಯಕವಚನೇ, ಹಿರಣ್ಯದಿಂದ ಮಾಡಲ್ಪಟ್ಟ ಮುಕುಟ ಉಳ್ಳವನೇ, ಹಿರಣ್ಯಪತಿಯೇ ನಿನಗೆ ನಮಸ್ಕಾರ.

ನಮಃ ಸ್ತುತಾಯ ಸ್ತುತ್ಯಾಯ ಸ್ತೂಯಮಾನಾಯ ವೈ ನಮಃ ।
ಸರ್ವಾಯ ಸರ್ವಭಕ್ಷಾಯ ಸರ್ವಭೂತಾಂತರಾತ್ಮನೇ ॥೮೯॥

ಸ್ತುತಿ ಮಾಡಲ್ಪಟ್ಟ, ಸ್ತುತಿಗೆ ಯೋಗ್ಯನಾದ, ಸ್ತುತಿ ಮಾಡಲ್ಪಡುತ್ತಿರುವ, ಸರ್ವ ಸ್ವರೂಪನಾದ, ಸರ್ವಭಕ್ಷಕನಾದ, ಸರ್ವಭೂತಾಂತರಾತ್ಮನಾದ ನಿನಗೆ ನಮಸ್ಕಾರ.

ನಮೋ ಹೋತ್ರೇಽಥ ಮಂತ್ರಾಯ ಶುಕ್ಲಧ್ವಜಪತಾಕಿನೇ ।
ನಮೋ ನಾಭಾಯ ನಾಭ್ಯಾಯ ನಮಃ ಕಟಕಟಾಯ ಚ ॥೯೦॥

ಹೋತೃಸ್ವರೂಪನಾದ, ಮಂತ್ರಸ್ವರೂಪನಾದ, ಶುಕ್ಲಧ್ವಜ ಪತಾಕೆ ಉಳ್ಳವನಾದ, ನಾಭಿಯಲ್ಲಿ ಜಗತ್ತನ್ನು ಧರಿಸಿರುವ, ನಾಭಿಸ್ಥಾನೀಯನಾದ, ಕಟಕಟ ಎಂಬ ರೂಪದಿಂದ ಕಂಗೊಳಿಸುವ ನಿನಗೆ ನಮೋನಮಃ.

ನಮೋಸ್ತು ಕೃಶನಾಸಾಯ ಕೃಶಾಂಗಾಯ ಕೃಶಾಯ ಚ ।
ಸಂಹೃಷ್ಟಾಯ ವಿಹೃಷ್ಟಾಯ ನಮಃ ಕಿಲಕಿಲಾಯ ಚ ॥೯೧॥

ತೆಳ್ಳಗಿರುವ ಮೂಗುಳ್ಳ, ಕೃಶಾಂಗನಾದ, ಕೃಶವಾದ ದೇಹವನ್ನು ಹೊಂದಿರುವ, ಹರ್ಷೋಲ್ಲಾಸಗಳಿಂದ ಕೂಡಿರುವ, ವಿಶೇಷವಾಗಿ ಸುಖಿಯಾದ, ಕಿಲಕಿಲನೆ ನಗುವಿನಿಂದ ಕೂಡಿರುವ ನಿನಗೆ ನಮಸ್ಕಾರ.

ನಮೋಸ್ತು ಶಯಮಾನಾಯ ಶಯಿತಾಯೋತ್ಥಿತಾಯ ಚ ।
ಸ್ಥಿತಾಯ ಧಾವಮಾನಾಯ ಮುಂಡಾಯ ಜಟಿಲಾಯ ಚ ॥೯೨॥

ಸರ್ವಪ್ರಾಣಿಗಳ ಹೃದಯಗುಹೆಯಲ್ಲಿ ವಾಸಿಸುವ, ಯೋಗನಿದ್ರೆಯಿಂದ ಎಚ್ಚೆತ್ತಿರುವ, ಎಲ್ಲ ಜೀವರನ್ನು ಮಲಗಿಸುವ, ಎಬ್ಬಿಸುವ, ಎಲ್ಲೆಡೆಯೂ ಇರುವ, ಓಡುತ್ತಿರುವ, ಸಂನ್ಯಾಸಿಯು ಜಟಾಧಾರಿಯೂ ಆದ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ– ಮಹರುದ್ರದೇವರು ಕಾಲನಿಯಾಮಕರಾಗಿ ಎಲ್ಲ ಜೀವರನ್ನು ಕಾಲಕ್ಕನುಗುಣವಾಗಿ ಮಲಗಿಸುತ್ತಾರೆ, ಎಬ್ಬಿಸುತ್ತಾರೆ. ತ್ರಿಕಾಲದಲ್ಲಿಯೂ ಸಂಚರಿಸುತ್ತಾ ಜೀವರಿಗೆ ಯೋಗ್ಯವಾದ ಜ್ಞಾನ-ಅಜ್ಞಾನವನ್ನು ಕೊಡುವ ವ್ಯಕ್ತಿತ್ವ ಮಹರುದ್ರದೇವರದ್ದು ಎಂಬ ಅಭಿಪ್ರಾಯದಲ್ಲಿ ಶಯಿತಾಯ ಶಯಮಾನಾಯ ಎನ್ನುವ ನಾಮಗಳನ್ನು ಹೇಳಲಾಗಿದೆ.

ನಮೋ ನರ್ತನಶೀಲಾಯ ಮುಖವಾದಿತ್ರವಾದಿನೇ ।
ನಾದ್ಯೋಪಹಾರಲುಬ್ಧಾಯ ಗೀತವಾದಿತ್ರಶಾಲಿನೇ ॥೯೩॥

ತಾಂಡವ ನೃತ್ಯಶೀಲನಾದ, ಬಾಯಿಯಲ್ಲಿ ನುಡಿಸುವ ವಾದ್ಯಗಳನ್ನು ನುಡಿಸುವುದರಲ್ಲಿ ಕುಶಲನಾದ, ನದಿಯಲ್ಲಿ ಹುಟ್ಟಿದ ಕಮಲ ಪುಷ್ಪಗಳನ್ನು ಸ್ವೀಕರಿಸುವುದರಲ್ಲಿ ಉತ್ಸುಕನಾಗಿರುವ, ಗಾನ-ವಾದನ ಕಲೆಗಳಲ್ಲಿ ತತ್ಪರನಾಗಿರುವ ನಿನಗೆ ನಮಸ್ಕಾರ.

ನಮೋ ಜ್ಯೇಷ್ಠಾಯ ಶ್ರೇಷ್ಠಾಯ ಬಲಪ್ರಮಥನಾಯ ಚ ।
ಕಾಲನಾಥಾಯ ಕಲ್ಯಾಯ ಕ್ಷಯಾಯೋಪಕ್ಷಯಾಯ ಚ ॥೯೪॥

ಎಲ್ಲರಿಗೂ ಜ್ಯೇಷ್ಠನಾದ, ಶ್ರೇಷ್ಠನಾದ, ಬಲ ಎಂಬ ರಾಕ್ಷಸನನ್ನು ಸಂಹರಿಸಿದವನಾದ, ಕಾಲಸ್ವಾಮಿಯಾದ, ಮಹಾಪ್ರಳಯ-ಅವಾಂತರ ಪ್ರಳಯಗಳಿಗೆ ನಿಯಾಮಕನಾದ, ಸಮರ್ಥನಾದ ನಿನಗೆ ನಮಸ್ಕಾರ.

ಭೀಮದುಂದುಭಿಹಾಸಾಯ ಭೀಮವ್ರತಧರಾಯ ಚ ।
ಉಗ್ರಾಯ ಚ ನಮೋ ನಿತ್ಯಂ ನಮೋಸ್ತು ದಶಬಾಹವೇ ॥೯೫॥

ಭಯಂಕರವಾದ ದುಂದುಭಿಯ ನಾದದಂತೆ ಅಟ್ಟಹಾಸವುಳ್ಳವನೇ, ಭಯಂಕರವಾದ ರಥವನ್ನು ಧರಿಸುವ ಶಕ್ತಿಯುಳ್ಳವನೇ, ಉಗ್ರನೇ, ದಶಭುಜನೇ ನಿನಗೆ ನಿತ್ಯವೂ ನಮೋನಮಃ.

ನಮಃ ಕಪಾಲಹಸ್ತಾಯ ಚಿತಿಭಸ್ಮಪ್ರಿಯಾಯ ಚ ।
ವಿಭೀಷಣಾಯ ಭೀಷ್ಮಾಯ ಭೀಮವ್ರತಧರಾಯ ಚ ॥೯೬॥

ಕೈಯಲ್ಲಿ ಕಪಾಲವನ್ನು ಧರಿಸಿರುವ, ಚಿತಾಭಸ್ಮಪ್ರಿಯನಾದ, ಎಲ್ಲರಿಗೂ ಭಯವನ್ನುಂಟು ಮಾಡುವವನಾದ, ನಿರ್ಭಯನಾದ, ಭಯಂಕರ ವ್ರತಧಾರಿಯಾದ ಭೀಷ್ಮನೇ ನಿನಗೆ ನಮಸ್ಕಾರ.

ನಮೋ ವಿಕೃತವಕ್ತ್ರಾಯ ಖಜಿಹ್ವಾಯ ಚ ದಂಷ್ಟ್ರಿಣೇ ।
ಪಕ್ವಾಮಮಾಂಸಲುಬ್ಧಾಯ ತುಂಬೀವೀಣಾಪ್ರಿಯಾಯ ಚ ॥೯೭॥

ವಿಕಾರವಾದ ಮುಖವುಳ್ಳವನೇ, ಖಡ್ಗಕ್ಕೆ ಸಮಾನವಾದ ನಾಲಿಗೆಯುಳ್ಳವನೇ, ಪಕ್ವವಾದ ಅಪಕ್ವವಾದ ಮಾಂಸವನ್ನು ಬಯಸುವವನೇ, ಸೋರೆ ಬುರುಡೆಯ ನಾದನವನ್ನು, ವೀಣಾವಾದನವನ್ನು ಕೇಳುವುದರಲ್ಲಿ ಆಸಕ್ತನೇ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ– ವೈಕಾರಿಕ, ತೈಜಸ, ತಾಮಸ ಅಹಂಕಾರಗಳಿಗೆ ನಿಯಾಮಕನಾದ ರುದ್ರದೇವನಿಗೆ ಸತ್ತ್ವರೂಪ, ರಜೋರೂಪ, ತಮೋರೂಪಗಳು ಇವೆ. ಆಯಾ ಜೀವರಿಗೆ ಯೋಗ್ಯವಾದ ರೂಪಗಳನ್ನು ಧರಿಸುವ ವಿಚಿತ್ರವಾದ ವ್ಯಕ್ತಿತ್ವ ಮಹರುದ್ರನದ್ದು. ಈ ಎಲ್ಲ ರೂಪಗಳನ್ನು ಮೇಲನ ಮಾಡಿ ದಕ್ಷಪ್ರಜಾಪತಿಯು ಸ್ತುತಿಸುತ್ತಿದ್ದಾನೆಂದು ತಿಳಿಯಬೇಕು.

ನಮೋ ವೃಷಾಯ ವೃಷ್ಯಾಯ ಗೋವೃಷಾಯ ವೃಷಾಯ ಚ ।
ಕಟಂಕಟಾಯ ದಂಡಾಯ ನಮಃ ಪಚಪಚಾಯ ಚ ॥೯೮॥

ಧರ್ಮಶ್ರೇಷ್ಠನೇ, ಧರ್ಮವನ್ನು ವೃದ್ಧಿಗೊಳಿಸುವವನೇ, ಎತ್ತಿನ ರೂಪದಲ್ಲಿರುವ ನಂದಿಯ ಅಂತರ್ಯಾಮಿಯಾಗಿರುವ, ಕಾಲವೆಂಬ ಅಗ್ನಿಯಲ್ಲಿ ದಹಿಸಲು ಸಮರ್ಥನಾದ, ದಂಡಧಾರಿಯಾದ, ಶಾಸಕನಾದ, ಗತಿಶೀಲನಾದ ನಿನಗೆ ನಮಸ್ಕಾರ.

ನಮಃ ಸರ್ವವರಿಷ್ಠಾಯ ವರಾಯ ವರದಾಯ ಚ ।
ವರಮಾಲ್ಯಗಂಧವಸ್ತ್ರಾಯ ವರಾತಿವರದೇ ನಮಃ ॥೯೯॥

ಎಲ್ಲರಿಗಿಂತಲೂ ಶ್ರೇಷ್ಠನಾದ, ವರನೆನಿಸಿದ, ವರದನಾದ, ಉತ್ತಮವಾದ ಮಾಲ್ಯ ಗಂಧ-ವಸ್ತ್ರಗಳನ್ನು ಧರಿಸಿದ, ಕೇಳಿದ ವರಕ್ಕಿಂತ ಅತಿಶಯವಾದ ವರವನ್ನು ನೀಡುವ ನಿನಗೆ ನಮಸ್ಕಾರ.

ನಮೋ ರಕ್ತವಿರಕ್ತಾಯ ಭಾವನಾಯಾಕ್ಷಮಾಲಿನೇ ।
ಸಂಭಿನ್ನಾಯ ವಿಭಿನ್ನಾಯ ಚ್ಛಾಯಾಯಾತಪನಾಯ ಚ ॥೧೦೦॥

ಆಸಕ್ತನೂ, ವಿರಕ್ತನೂ ಆದ, ಭಕ್ತಿಯಿಂದ ಕೂಡಿರುವ, ಅಕ್ಷಮಾಲೆಯನ್ನು ಧರಿಸಿರುವ, ಜಗತ್ತಿನಲ್ಲಿ ಮೇಲ್ಮೆ ಹೊಂದಿರುವ, ಅದಕ್ಕಿಂತ ವಿಲಕ್ಷಣನಾಗಿರುವ, ನೆರಳು-ಬಿಸಿಲುಗಳ ತಾಪನವನ್ನು ಉಂಟುಮಾಡುವ, ಸುಖ-ದುಃಖದಾಯಕನಾದ ನಿನಗೆ ನಮಸ್ಕಾರವು. ರುದ್ರದೇವರು ಪದ್ಮಾಕ್ಷಮಾಲೆಯನ್ನು, ತುಳಸಿ ಮಣಿಯನ್ನು ಧರಿಸಿರುತ್ತಾರೆ.

ವ್ಯಾಖ್ಯಾನ ವಿಶೇಷ– ಪದ್ಮಾಕ್ಷ ತುಳಸೀಮಾಲಾ ವಿದ್ಯೋತಿತ ಶಿರೋಧರಂ (ಸರಸಭಾರತಿ ವಿಲಾಸ).

ಅಘೋರಘೋರರೂಪಾಯ ಘೋರಘೋರತರಾಯ ಚ ।
ನಮಃ ಶಿವಾಯ ಶಾಂತಾಯ ನಮಃ ಶಾಂತತಮಾಯ ಚ ॥೧೦೧॥

ಶಾಂತ ಸ್ವರೂಪನೂ, ಘೋರರೂಪನೂ, ಭಯಂಕರನೂ, ಅತ್ಯಂತ ಭಯಂಕರನೂ, ಮಂಗಳನೂ, ಅತ್ಯಂತ ಶಾಂತಮೂರ್ತಿಯೂ ಆದ ನಿನಗೆ ನಮಸ್ಕಾರ.

ಏಕಪಾದ್ ಬಹುನೇತ್ರಾಯ ಏಕಶೀರ್ಷ್ಣೇ ನಮೋಸ್ತು ತೇ ।
ರುದ್ರಾಯ ಕ್ಷುದ್ರಲುಬ್ಧಾಯ ಸಂವಿಭಾಗಪ್ರಿಯಾಯ ಚ ॥೧೦೨॥

ಏಕಪಾದನಾದ, ಬಹುನೇತ್ರನಾದ, ಏಕಶೀರ್ಷ್ಣನಾದ ರುದ್ರನೇ, ಭಕ್ತರು ಕೊಡುವ ಅಲ್ಪ ಪದಾರ್ಥವನ್ನು ಸ್ವೀಕರಿಸುವ, ಆ ಕರ್ಮಗಳಿಗೆ ಅನುಗುಣವಾಗಿ ಫಲವನ್ನು ವಿಭಾಗ ಮಾಡಲು ಆಸಕ್ತಿಯುಳ್ಳ ನಿನಗೆ ನಮಸ್ಕರಿಸುತ್ತೇನೆ.

ಪಂಚಾಲಾಯ ಸಿತಾಂಗಾಯ ನಮಃ ಶಮಶಮಾಯ ಚ ।
ನಮಶ್ಚಂಡಿಕಘಂಟಾಯ ಘಂಟಾಯಾಘಂಟಘಂಟಿನೇ ॥೧೦೩॥

ಪಂಚಾಲನೆನಿಸಿದ ವಿಶ್ವಕರ್ಮನಲ್ಲಿ ಅಂತರ್ಯಾಮಿಯಾಗಿರುವ, ಬಿಳಿಯಾದ ದೇಹದಿಂದ ಕೂಡಿರುವ, ಅತ್ಯಂತ ಭಗವನ್ನಿಷ್ಠನಾಗಿರುವ, ಭಯವನ್ನುಂಟು ಮಾಡುವ ಘಂಟೆಯನ್ನು ಧರಿಸಿರುವ, ಘಂಟಾಸುರನಾದ, ಅಘಂಟಘಂಟಿ ಎನಿಸಿದ ನಿನಗೆ ನಮಸ್ಕಾರ.

ಸಹಸ್ರಾಧ್ಮಾತಘಂಟಾಯ ಘಂಟಾಮಾಲಾಪ್ರಿಯಾಯ ಚ ।
ಪ್ರಾಣಘಂಟಾಯ ಗಂಧಾಯ ನಮಃ ಕಲಕಲಾಯ ಚ ॥೧೦೪॥

ಸಾವಿರಾರು ಜೀವರ ಅಧ್ಯಾತ್ಮವೆಂಬ ಘಂಟೆಗೆ ಜ್ಞಾನಪ್ರದನಾಗಿ ನಿಯಾಮಕನಾಗಿರುವ, ಘಂಟಾಮಾಲಾಪ್ರಿಯನಾಗಿರುವ, ಪ್ರಾಣಾದಿ ಶಬ್ದಗಳ ಘಂಟೆಯನ್ನು ಧರಿಸಿರುವ, ಶ್ರೇಷ್ಠವಾದ ಗಂಧವುಳ್ಳ, ಕೋಲಾಹಲ ರೂಪಿಯಾದ ನಿನಗೆ ನಮಸ್ಕಾರ.

ಹೂಂಹೂಂಹೂಂಕಾರಪಾರಾಯ ಹೂಂಹೂಂಕಾರಪ್ರಿಯಾಯ ಚ ।
ನಮಃ ಶಮಶಮೇ ನಿತ್ಯಂ ಗಿರಿವೃಕ್ಷಾಲಯಾಯ ಚ ॥೧೦೫॥

ಹೂಂಹೂಂ ಎಂಬ ಹೂಂಕಾರಕ್ಕೆ ದಡದಂತಿರುವ, ಹೂಂಹೂಂಕಾರರಿಗೆ ಪ್ರಿಯನಾದ (ತರ್ಜನ ಮಾಡುವವರಲ್ಲಿ ರುದ್ರದೇವರು ಹೂಂಕಾರದಿಂದ ಇದ್ದಾರೆ), ನಿತ್ಯವೂ ಶಾಂತರಾಗಿರಿ, ಶಾಂತರಾಗಿರಿ ಎಂದು ಹೇಳುವ, ಪರ್ವತ-ಮರ ಮೊದಲಾದವುಗಳೇ ಮನೆಯಾಗಿ ಉಳ್ಳ ನಿನಗೆ ನಮಸ್ಕಾರ.

ಗರ್ಭಮಾಂಸಸೃಗಾಲಾಯ ತಾರಕಾಯ ತರಾಯ ಚ ।
ನಮೋ ಯಜ್ಞಾಯ ಯಜಿನೇ ಹುತಾಯ ಪ್ರಹುತಾಯ ಚ ॥೧೦೬॥

ವಪೆಯಲ್ಲಿ ಆಸಕ್ತನಾಗಿರುವ, ಎಲ್ಲರನ್ನೂ ಸಂಸಾರ ಸಮುದ್ರದಿಂದ ಜ್ಞಾನಪ್ರದಾನದಿಂದ ದಾಟಿಸುವ, ಸ್ವಯಂ ದಾಟಿರುವ, ಯಜ್ಞರೂಪನೂ, ಯಜ್ಞ ಮಾಡಿಸುವವನೂ, ಹೋಮಿಸುವ ದ್ರವ್ಯನೂ, ಹೋಮಿಸುವವನೂ ಆದ ನಿನಗೆ ನಮಸ್ಕಾರ.

ಯಜ್ಞವಾಹಾಯ ದಾಂತಾಯ ತಪ್ಯಾಯಾತಪನಾಯ ಚ ।
ನಮಸ್ತಟಾಯ ತಟ್ಯಾಯ ತಟಾನಾಂ ಪತಯೇ ನಮಃ ॥೧೦೭॥

ಯಜ್ಞದ ನಿರ್ವಾಹಕನಾಗಿರುವ, ಜಿತೇಂದ್ರಿಯನಾಗಿರುವ, ಸ್ವಯಂ ಜಪಾದಿಗಳಿಂದ ತಪನ ಹೊಂದಿರುವ, ಅಯೋಗ್ಯರನ್ನು ತಪನಗೊಳಿಸುವ, ನದಿಗಳ ದಡರೂಪದಲ್ಲಿರುವ, ದಡವನ್ನು ಹೊಂದಿಸುವವನಾದ, ತಟಿಗಳಿಗೂ ಪತಿ ಎನಿಸಿದ ಪಶುಪತಿಯೇ ನಿನಗೆ ನಮಸ್ಕಾರ.

ಅನ್ನದಾಯಾನ್ನಪತಯೇ ನಮಸ್ತ್ವನ್ನಭುಜೇ ತಥಾ ।
ನಮಃ ಸಹಸ್ರಶೀರ್ಷಾಯ ಸಹಸ್ರಚರಣಾಯ ಚ ॥೧೦೮॥

ಅನ್ನವನ್ನು ನೀಡುವವನಾದ, ಅನ್ನಪತಿಯಾದ, ಅನ್ನಭೋಕ್ತನಾದ, ಸಾವಿರ ತಲೆಗಳಿಂದ ಮತ್ತು ಸಾವಿರ ಕಾಲುಗಳಿಂದ ಕೂಡಿರುವ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ– ಇಲ್ಲಿ ಸಹಸ್ರ ಶಬ್ದಕ್ಕೆ ಅನಂತ ಎಂದು ಅರ್ಥ. ಅನಂತ ಜೀವರ ಶಿರಃಪಾಣಿಗಳಿಗೆ ಮನೋನಿಯಾಮಕರಾದ ರುದ್ರದೇವರು ನಿಯಾಮಕರಾಗಿರುವುದರಿಂದ ಈ ರೀತಿಯಾಗಿ ಸ್ತುತಿಸಿರುತ್ತಾನೆ.

ಸಹಸ್ರೋದ್ಯತಶೂಲಾಯ ಸಹಸ್ರನಯನಾಯ ಚ ।
ನಮೋ ಬಾಲಾರ್ಕವರ್ಣಾಯ ಬಾಲರೂಪಧರಾಯ ಚ ॥೧೦೯॥

ಸಾವಿರಾರು ಶೂಲಗಳನ್ನು ಎತ್ತಿಹಿಡಿದಿರುವ, ಸಾವಿರಾರು ಕಣ್ಣುಗಳಿಂದ ಕೂಡಿರುವ, ಉದಿಸುವ ಸೂರ್ಯನಂತೆ ತಿಳಿಯಾದ ಬಣ್ಣದಿಂದ ಕೂಡಿರುವ, ಬಾಲಕ ರೂಪವನ್ನು ಧರಿಸಿರುವ ನಿನಗೆ ನಮಸ್ಕಾರ.

ಬಾಲಾನುಚರಗೋಪ್ತಾಯ ಬಾಲಕ್ರೀಡನಕಾಯ ಚ ।
ನಮೋ ವೃದ್ಧಾಯ ಲುಬ್ಧಾಯ ಕ್ಷುಬ್ಧಾಯ ಕ್ಷೋಭಣಾಯ ಚ ॥೧೧೦॥

ಬಾಲಕರ ಅನುಚರರನ್ನು ರಕ್ಷಿಸುವ, ಬಾಲಕರೊಡನೆ ಆಟವಾಡುವ, ಎಲ್ಲರಿಗಿಂತಲೂ ವೃದ್ಧನಾಗಿರುವ, ಭಕ್ತಿ-ಪ್ರೀತಿಗಳನ್ನು ಬಯಸುವ, ದುಷ್ಟರ ಪಾಪ ಕಾರ್ಯವನ್ನು ನೋಡಿ ಕ್ಷೋಭೆಗೊಳ್ಳುವ, ದುರಾಚಾರಿಗಳನ್ನು ಕ್ಷೋಭೆಗೊಳಿಸುವ ನಿನಗೆ ನಮಸ್ಕಾರ.

ತರಂಗಾಂಕಿತಕೇಶಾಯ ಮುಂಜಕೇಶಾಯ ವೈ ನಮಃ ।
ನಮಃ ಷಟ್‌ಕರ್ಮತುಷ್ಟಾಯ ತ್ರಿಕರ್ಮನಿರತಾಯ ಚ ॥೧೧೧॥

ಗಂಗೆಯ ತರಂಗಗಳಂತೆ ಚಿಹ್ನೆಯನ್ನು ಹೊಂದಿರುವ, ಕೇಶರಾಶಿಯನ್ನು ಹೊಂದಿರುವ, ಮುಂಜ ಎನ್ನುವ ಹುಲ್ಲಿಗೆ ಸಮಾನವಾದ ಕೇಶವನ್ನು ಹೊಂದಿರುವ, ಯಜನ-ಯಾಜನ-ಅಧ್ಯಯನ-ಅಧ್ಯಾಪನ-ದಾನ-ಪ್ರತಿಗ್ರಹ ಎಂಬ ಷಟ್ಕರ್ಮಗಳಿಂದ ಸಂತುಷ್ಟನಾಗುವ, ಮಾತು-ಮನಸ್ಸು-ಕೃತಿಗಳಲ್ಲಿ ಭಗವನ್ನಿಷ್ಠವಾದ ಕರ್ಮಗಳನ್ನು ಮಾಡಲು ಆಸಕ್ತನಾಗಿರುವ ನಿನಗೆ ನಮಸ್ಕಾರ.

ವರ್ಣಾಶ್ರಮಾಣಾಂ ವಿಧಿವತ್ ಪೃಥಕ್ಕರ್ಮನಿವರ್ತಿನೇ ।
ನಮೋ ಘುಷ್ಯಾಯ ಘೋಷಾಯ ನಮಃ ಕಲಕಲಾಯ ಚ ॥೧೧೨॥

ವರ್ಣ ಮತ್ತು ಆಶ್ರಮಗಳ ಕರ್ಮಗಳನ್ನು ವಿಧಿವತ್ತಾಗಿ ವಿಭಾಗಿಸುವ, ಜಪಿಸುವ ಮಂತ್ರರೂಪನಾದ, ಘೋಷರೂಪನಾದ, ಕೋಲಾಹಲ ಶಬ್ದಗಳಿಗೆ ನಿಯಾಮಕನಾದ ನಿನಗೆ ನಮಸ್ಕಾರ.

ಶ್ವೇತಪಿಂಗಲನೇತ್ರಾಯ ಕೃಷ್ಣರಕ್ತೇಕ್ಷಣಾಯ ಚ ।
ಪ್ರಾಣಭಗ್ನಾಯ ದಂಡಾಯ ಸ್ಫೋಟನಾಯ ಕೃಶಾಯ ಚ ॥೧೧೩॥

ಶ್ವೇತ ಮತ್ತು ಪಿಂಗಲ ಕಣ್ಣುಗಳಿಂದ ಕೂಡಿರುವ, ಅತ್ಯಂತ ಕೆಂಪಾದ ಕಣ್ಣುಗಳಿಂದ ಕೂಡಿರುವ, ಪ್ರಾಣವಾಯುವನ್ನು ಜಯಿಸಿರುವ, ಆಯುಧ ರೂಪನಾದ, ಸಂಹಾರಕನಾದ, ಕೃಶಕಾಯನಾದ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ- ಶ್ವೇತ-ಪಿಂಗಲ-ರಕ್ತ-ಕೃಷ್ಣ ಎಂಬ ರೂಪಗಳ ಕಣ್ಣನ್ನು ಇಲ್ಲಿ ವರ್ಣಿಸಿದ್ದಾರೆ. ವಾದಿರಾಜರು ಸರಸಭಾರತಿ ವಿಲಾಸದಲ್ಲಿ- **'ತ್ರಿನೇತ್ರ ಪಂಕ್ತ್ಯಾ ಲಸಿತಂ ಪಂಚವಕ್ತ್ರ ಶುಚಿಸ್ಮಿತಮ್। ಪೀತಶ್ವೇತಾರುಣಹರಿತ್ ಶ್ಯಾಮಾನನ ಸರೋರುಹಮ್'** ಎಂದು ಇದೇ ರೂಪಗಳನ್ನು ಬಣ್ಣಿಸಿರುತ್ತಾರೆ.

ಧರ್ಮಕಾಮಾರ್ಥಮೋಕ್ಷಾಣಾಂ ಕಥನೀಯಕಥಾಯ ಚ ।
ಸಾಂಖ್ಯಾಯ ಸಾಂಖ್ಯಮುಖ್ಯಾಯ ಸಾಂಖ್ಯಯೋಗಪ್ರವರ್ತಿನೇ ॥೧೧೪॥

ಭಕ್ತರಿಗೆ ಚತುರ್ವಿಧ ಪುರುಷಾರ್ಥಗಳನ್ನು ದಯಪಾಲಿಸುವ ವಿಷಯದಲ್ಲಿ ಪ್ರಸಿದ್ಧವಾದ ಕೀರ್ತಿಯನ್ನು ಹೊಂದಿರುವ, ಸಾಂಖ್ಯನಾದ, ಯಥಾರ್ಥಜ್ಞಾನಕ್ಕೆ ನಿಯಾಮಕನಾದ, ಸಾಂಖ್ಯ ಎನಿಸಿದ ಭಗವತ್ತತ್ತ್ವಯೋಗಕ್ಕೆ ಪ್ರವರ್ತಕನಾದ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ- 'ಸಾಂಖ್ಯಂ ಯಥಾರ್ಥವಿಜ್ಞಾನಂ'

ನಮೋ ರಥ್ಯವಿರಥ್ಯಾಯ ಚತುಷ್ಪಥರಥಾಯ ಚ ।
ಕೃಷ್ಣಾಜಿನೋತ್ತರೀಯಾಯ ವ್ಯಾಲಯಜ್ಞೋಪವೀತಿನೇ ॥೧೧೫॥

ರಥದಲ್ಲಿ ಸಂಚರಿಸುವ, ರಥವಿಲ್ಲದೆಯೂ ಸಂಚರಿಸುವ, ಜಲ-ಅಗ್ನಿ-ವಾಯು-ಆಕಾಶವೆಂಬ ನಾಲ್ಕು ಮಾರ್ಗದಲ್ಲಿಯೂ ಸಂಚರಿಸುವ ರಥವುಳ್ಳ, ಕೃಷ್ಣಾಜಿನವನ್ನೇ ಉತ್ತರೀಯವಾಗಿ ಧರಿಸಿರುವ, ಸರ್ಪವನ್ನೇ ಯಜ್ಞೋಪವೀತವನ್ನಾಗಿ ಧರಿಸಿರುವ ನಿನಗೆ ನಮಸ್ಕಾರ.

ಈಶಾನವಜ್ರಸಂಘಾತಹರಿಕೇಶ ನಮೋಸ್ತು ತೇ ।
ತ್ರ್ಯಂಬಕಾಂಬಿಕನಾಥಾಯ ವ್ಯಕ್ತಾವ್ಯಕ್ತ ನಮೋಸ್ತು ತೇ ॥೧೧೬॥

ಈಶಾನಮೂರ್ತಿಯೇ, ವಜ್ರ ಸಮಾನ ಶರೀರವುಳ್ಳವನೇ, ಹರಿಕೇಶನೇ ನಿನಗೆ ನಮಸ್ಕಾರ. ತ್ರ್ಯಂಬಕನೇ, ಅಂಬಿಕಾನಾಥನೇ, ವ್ಯಕ್ತಾವ್ಯಕ್ತ ಸ್ವರೂಪನೇ ನಿನಗೆ ನಮಸ್ಕಾರ.

ಕಾಮ ಕಾಮದ ಕಾಮಘ್ನ ತೃಪ್ತಾತೃಪ್ತವಿಚಾರಿಣೇ ।
ಸರ್ವ ಸರ್ವದ ಸರ್ವಘ್ನ ಸಂಧ್ಯಾರಾಗ ನಮೋಸ್ತು ತೇ ॥೧೧೭॥

ಕಾಮರೂಪನೇ, ಕಾಮ ನೀಡುವವನೇ, ಕಾಮಜ್ಞನೇ, ತೃಪ್ತರನ್ನು ಅತೃಪ್ತರನ್ನು ವಿಮರ್ಶಿಸುವವನೇ, ಯಾವಾಗಲೂ ಎಲ್ಲವನ್ನೂ ನೀಡುವವನೇ, ಎಲ್ಲರನ್ನೂ ಸಂಹರಿಸುವವನೇ, ಸಂಧ್ಯಾರಾಗದಂತೆ ಕಾಂತಿಯುಳ್ಳವನೇ ನಿನಗೆ ನಮಸ್ಕಾರ.

ಮಹಾಬಲ ಮಹಾಬಾಹೋ ಮಹಾಸತ್ವ ಮಹಾದ್ಯುತೇ ।
ಮಹಾಮೇಘಚಯಪ್ರಖ್ಯ ಮಹಾಕಾಲ ನಮೋಸ್ತು ತೇ ।
ಸ್ಥೂಲಜೀರ್ಣಾಂಗಜಟಿನೇ ವಲ್ಕಲಾಜಿನಧಾರಿಣೇ ॥೧೧೮॥

ಮಹಾಬಲನೇ, ಮಹಾಬಾಹುವೇ, ಮಹಾಸತ್ವನೇ, ಮಹಾದ್ಯುತಿಯೇ, ಮಹಾ ಮೇಘಕ್ಕೆ ಸಮನಾದ ಕಾಂತಿಯುಳ್ಳವನೇ, ಮಹಾಕಾಲನೇ ನಿನಗೆ ನಮಸ್ಕಾರ. ಸ್ಥೂಲ ಸ್ವರೂಪನೇ, ಜೀರ್ಣವಾದ ಅಂಗವುಳ್ಳವನೇ, ಜಟಾಧಾರಿಯೇ, ನಾರುಮಡಿಯನ್ನು ಮೃಗಚರ್ಮವನ್ನು ಧರಿಸಿದವನೇ ನಿನಗೆ ನಮಸ್ಕಾರ.

ದೀಪ್ತಸೂರ್ಯಾಗ್ನಿಜಟಿನೇ ವಲ್ಕಲಾಜಿನವಾಸಸೇ ।
ಸಹಸ್ರಸೂರ್ಯಪ್ರತಿಮ ತಪೋನಿತ್ಯ ನಮೋಸ್ತು ತೇ ॥೧೧೯॥

ಸೂರ್ಯಾಗ್ನಿಗಳ ಪ್ರಭೆಗೆ ಸಮಾನವಾದ ಜಟೆಯನ್ನು ಧರಿಸಿರುವವನೇ, ನಾರು ಮಡಿಯನ್ನು ಗಜಚರ್ಮವನ್ನು ವಸ್ತ್ರವನ್ನಾಗಿ ಧರಿಸಿರುವವನೇ, ಸಹಸ್ರಸೂರ್ಯರಿಗೆ ಸದೃಶವಾದ ಕಾಂತಿಯಿಂದ ಬೆಳಗುವವನೇ, ನಿತ್ಯವೂ ತಪೋನಿರತನೇ ನಿನಗೆ ನಮಸ್ಕಾರ.

ಉನ್ಮಾದನಶತಾವರ್ತ ಗಂಗಾತೋಯಾರ್ದ್ರಮೂರ್ಧಜ ।
ಚಂದ್ರವರ್ತ ಯುಗಾವರ್ತ ಮೇಘಾವರ್ತ ನಮೋಸ್ತು ತೇ ॥೧೨೦॥

ಜಗತ್ತನ್ನು ಮೋಹಗೊಳಿಸುವ ನೂರಾರು ಸುಳಿಯುಳ್ಳವನೇ, ಗಂಗೆಯ ನೀರಿನಿಂದ ತೊಯ್ದ ಕೂದಲಿನಿಂದ ಕೂಡಿದವನೇ, ಚಂದ್ರನ ಕ್ಷಯ-ವೃದ್ಧಿಗಳಿಗೆ ಕಾರಣನಾದವನೇ, ಮೇಘಗಳ ಪ್ರವರ್ತಕನೇ (ಮೇಘವೆಂಬ ಸುಳಿಯುಳ್ಳವನೇ) ನಿನಗೆ ನಮಸ್ಕಾರ.

ತ್ವಮನ್ನಮತ್ತಾ ಭೋಕ್ತಾ ಚ ಅನ್ನದೋऽನ್ನಭುಗೇವ ಚ ।
ಅನ್ನಸ್ರಷ್ಟಾ ಚ ಪಕ್ತಾ ಚ ಪಕ್ವಭುಕ್ಪವನೋऽನಲಃ ॥೧೨೧॥

ನೀನು ಅನ್ನಸ್ವರೂಪನೂ, ಅನ್ನಭೋಕ್ತೃವೂ, ಅನ್ನದಾತೃವೂ, ಅನ್ನರಕ್ಷಕನೂ, ಅನ್ನಸೃಷ್ಟ್ರವೂ, ಅನ್ನವನ್ನು ಬೇಯಿಸುವವನು, ಪಕ್ವವಾದ ಅನ್ನವನ್ನು ತಿನ್ನುವವನು, ಜಠರಾಗ್ನಿಸ್ವರೂಪನೂ ಆಗಿರುವೆ. ನಿನಗೆ ನಮಸ್ಕಾರ.

ಜರಾಯುಜಾಂಡಜಾಶ್ಚೈವ ಸ್ವೇದಜಾಶ್ಚ ತಥೋದ್ಭಿಜಾಃ ।
ತ್ವಮೇವ ದೇವದೇವೇಶ ಭೂತಗ್ರಾಮಶ್ಚತುರ್ವಿಧಃ ॥೧೨೨॥

ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ ಎಂಬ ನಾಲ್ಕು ಪ್ರಕಾರ ಪ್ರಾಣಿಗಳಿಗೆ ನಿಯಾಮಕನಾಗಿರುವ ದೇವದೇವೇಶನೇ, ನಿನಗೆ ನಮಸ್ಕಾರ.

ಚರಾಚರಸ್ಯ ಸ್ರಷ್ಟಾ ತ್ವಂ ಪ್ರತಿಹರ್ತಾ ತಥೈವ ಚ ।
ತ್ವಾಮಾಹುರ್ಬ್ರಹ್ಮವಿದುಷೋ ಬ್ರಹ್ಮ ಬ್ರಹ್ಮವಿದಾಂವರ ॥೧೨೩॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದವನೇ, ಚರಾಚರ ಜಗತ್ತನ್ನು ಸೃಷ್ಟಿ ಮಾಡುವವನು ಸಂಹಾರ ಮಾಡುವವನು ಆಗಿರುವಿ. ಬ್ರಹ್ಮಜ್ಞಾನಿಗಳು ನಿನ್ನನ್ನು ಬ್ರಹ್ಮ ಎನ್ನುತ್ತಾರೆ.

ಮನಸಃ ಪರಮಾ ಯೋನಿಃ ಖಂ ವಾಯುರ್ಜ್ಯೋತಿಷಾಂ ನಿಧಿಃ ।
ಋಕ್ಸಾಮಾನಿ ತಥೋಂಕಾರಮಾಹುಸ್ತಾ ತ್ವಂ ಬ್ರಹ್ಮವಾದಿನಃ ॥೧೨೪॥

ಬ್ರಹ್ಮವಿದರಾದ ವಿದ್ವಾಂಸರು ಮನಸ್ಸಿಗೆ ನೀನೇ ಕಾರಣನೆಂದು, ಆಕಾಶ ವಾಯುಗಳ ನಿಯಾಮಕನೆಂದೂ, ಜ್ಯೋತಿಸ್ವರೂಪನೆಂದೂ, ಋಕ್ಸಾಮ ವೇದಗಳ ಓಂಕಾರಗಳ ಅರ್ಥವನ್ನು ಉಪದೇಶಿಸುವವನೆಂದು ಬ್ರಹ್ಮವಾದಿಗಳು ಹೇಳುತ್ತಾರೆ.

ಹಾಯಿಹಾಯಿ ಹುವಾಹಾಯಿ ಹಾವುಹಾಯಿ ತಥಾऽಸಕೃತ್ ।
ಗಾಯಂತಿ ತ್ವಾಂ ಸುರಶ್ರೇಷ್ಠ ಸಾಮಗಾ ಬ್ರಹ್ಮವಾದಿನಃ ॥೧೨೫॥

ಸಾಮಗಾನವನ್ನು ಮಾಡುವ ವೇದಾಧ್ಯಾಯಿಗಳು ಹಾಯಿಹಾಯಿ ಹುವಾಹಾಯಿ ಹಾವುಹಾಯಿ ಎಂದು ನಿನ್ನ ಮಹಿಮೆಯನ್ನೇ ಅನೇಕ ಬಾರಿ ಸಾಮಗಾನವನ್ನು ಮಾಡುತ್ತಾರೆ.

ಯಜುರ್ಮಯೋ ಋಙ್ಮಯಶ್ಚ ತ್ವಮಾಹುತಿಮಯಸ್ತಥಾ ।
ಪಠ್ಯಸೇ ಸ್ತುತಿಭಿಶ್ಚೈವ ವೇದೋಪನಿಷದಾಂ ಗಣೈಃ ॥೧೨೬॥

ನೀನು ಯಜುರ್ವೇದ, ಋಗ್ವೇದಗಳಿಗೆ ನಿಯಾಮಕನಾಗಿರುವಿ. ನಿನ್ನನ್ನು ಆಹುತಿಮಯನೆಂದು ಹೇಳುತ್ತಾರೆ. ವೇದ-ಉಪನಿಷತ್ತು-ಮಂತ್ರಗಳ ಮೂಲಕ ನಿನ್ನ ಮಹಿಮೆಯನ್ನು ಸ್ತುತಿಸುತ್ತಾರೆ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ವರ್ಣಾವರಾಶ್ಚ ಯೇ ।
ತ್ವಮೇವ ಮೇಘಸಂಘಾಶ್ಚ ವಿದ್ಯುತ್ ಸ್ತನಿತಗರ್ಜಿತಃ ॥೧೨೭॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ವರ್ಣಬಾಹ್ಯರೂ ಎಲ್ಲರೂ ನಿನ್ನನ್ನೇ ಅಂತರ್ಯಾಮಿಯಾಗಿ ಹೊಂದಿರುತ್ತಾರೆ. ಮೇಘಗಳ ಸಮೂಹ, ಮಿಂಚು, ಗುಡುಗು, ಸಿಡಿಲು ಇವೆಲ್ಲವೂ ನೀನೇ ಆಗಿರುತ್ತಿ .

ವ್ಯಾಖ್ಯಾನ ವಿಶೇಷ– 'ಮಹರುದ್ರನು ಮನೋನಿಯಾಮಕನಾಗಿರುವುದರಿಂದ ಅದಕ್ಕಿಂತಲೂ ಅವರವಾದ ಪಂಚಭೂತಗಳಿಗೂ ನಿಯಾಮಕನಾಗಿದ್ದಾನೆ. ಹಾಗಾಗಿ ಪಂಚಭೂತಗಳ ಅಂತರ್ಯಾಮಿಯಾಗಿಯೂ, ಪಂಚಭೂತಗಳ ಅಭಿಮಾನಿ ದೇವತೆಗಳಿಗೆ ನಿಯಾಮಕನಾಗಿಯೂ ಇರುವುದರಿಂದ ಪ್ರಧಾನ ನಿಯಾಮಕತ್ವವನ್ನು ಚಿಂತಿಸಿ ಅವೇ ವಸ್ತುಗಳೇ ರುದ್ರನೆಂದು ಇಲ್ಲಿ ಹೇಳಲಾಗಿದೆ. ಅಂತರ್ಯಾಮಿ ಎಂದು ವಿವಕ್ಷಿಸಿಕೊಂಡು ಹೇಳಬೇಕು. ಮುಖ್ಯನಿಯಾಮಕನು ಭಗವಂತನೇ ಆಗಿದ್ದಾನೆಂದು ಮರೆಯಬಾರದು.

ಸಂವತ್ಸರಸ್ತ್ವಮೃತವೋ ಮಾಸೋ ಮಾಸಾರ್ಧಮೇವ ಚ ।
ಯುಗಂ ನಿಮೇಷಾಃ ಕಾಷ್ಠಾಸ್ತ್ವಂ ನಕ್ಷತ್ರಾಣಿ ಗ್ರಹಾಃ ಕಲಾಃ ॥೧೨೮॥

ಸಂವತ್ಸರ, ಋತು, ಮಾಸ, ಪಕ್ಷ, ಯುಗ, ನಿಮೇಷ, ಕಾಷ್ಠ, ನಕ್ಷತ್ರ , ಗ್ರಹ, ಕಲಾ- ಇವೆಲ್ಲವೂ ನೀನೇ ಆಗಿರುವಿ.

ವೃಕ್ಷಾಣಾಂ ಕಕುದೋಸಿ ತ್ವಂ ಗಿರೀಣಾಂ ಶಿಖರಾಣಿ ಚ ।
ವ್ಯಾಘ್ರೋ ಮೃಗಾಣಾಂ ಪತತಾಂ ತಾರ್ಕ್ಷ್ಯೋಽನಂತಶ್ಚ ಭೋಗಿನಾಮ್ ॥

ವೃಕ್ಷಗಳಲ್ಲಿ ಶ್ರೇಷ್ಠವಾದ ಅಶ್ವತ್ಥವೃಕ್ಷನು ನೀನೇ. ಶಿಖರಗಳಲ್ಲಿ ಶ್ರೇಷ್ಠನು ನೀನೇ, ಮೃಗಗಳಲ್ಲಿ ವ್ಯಾಘ್ರ , ಪಕ್ಷಿಗಳಲ್ಲಿ ಗರುಡ, ಸರ್ಪಗಳಲ್ಲಿ ಅನಂತನಾಗಿರುವಿ.

ಕ್ಷೀರಾದೋ ಹ್ಯುದಧೀನಾಂ ಚ ಯಂತ್ರಾಣಾಂ ಧನುರೇವ ಚ ।
ವಜ್ರಃ ಪ್ರಹರಣಾನಾಂ ಚ ವ್ರತಾನಾಂ ಸತ್ಯಮೇವ ಚ ॥೧೩೦॥

ಸಮುದ್ರಗಳಲ್ಲಿ ಕ್ಷೀರಸಮುದ್ರನಾಗಿರುವಿ. ಯಂತ್ರಗಳಲ್ಲಿ ಧನುಸ್ಸಾಗಿರುವಿ. ಪ್ರಹರಿಸುವ ಆಯುಧಗಳಲ್ಲಿ ವಜ್ರಾಯುಧನಾಗಿರುವಿ. ವ್ರತಗಳಲ್ಲಿ ಸತ್ಯವ್ರತನಾಗಿರುವಿ.

ತ್ವಮೇವ ದ್ವೇಷ ಇಚ್ಛಾ ಚ ರಾಗೋ ಮೋಹಃ ಕ್ಷಮಾಕ್ಷಮೇ ।
ವ್ಯವಸಾಯೋ ಧೃತಿರ್ಲೋಭಃ ಕಾಮಕ್ರೋಧೌ ಜಯಾಜಯೌ ॥೧೩೧೧॥

ಇಚ್ಛಾ, ದ್ವೇಷ, ರಾಗ, ಮೋಹ, ಕ್ಷಮ, ಅಕ್ಷಮ, ವ್ಯವಸಾಯ, ಧೃತಿ, ಕಾಮ, ಕ್ರೋಧ, ಲೋಭ, ಜಯ, ಪರಾಜಯ ಇವೆಲ್ಲವೂ ನೀನೇ ಆಗಿರುವಿ.

ತ್ವಂ ಗದೀ ತ್ವಂ ಶರೀ ಚಾಪೀ ಖಟ್ವಾಂಗೀ ಋರ್ಷ್ಟಿರೀ ತಥಾ ।
ಛೇತ್ತಾ ಛೇತ್ತಾ ಪ್ರಹರ್ತಾ ತ್ವಂ ನೇತಾ ಮಂತಾ ಪಿತಾ ಮತಃ ॥೧೩೨॥

ಗದೆಯುಳ್ಳವನು, ಬಾಣವುಳ್ಳವನು, ಧನುಸ್ಸುಳ್ಳವನು, ತ್ರಿಶೂಲವುಳ್ಳವನು, ಋರ್ಷ್ಟಿರ ಎಂಬ ಹೆಸರಿನ ಅಸ್ತ್ರವುಳ್ಳವನು, ಛೇದಕ-ಭೇದಕ-ಪ್ರಹಾರಕ-ಸತ್ವದಾಯಕ ಎಲ್ಲವೂ ನೀನಾಗಿರುವಿ. ಶುಭವನ್ನು ಮನನ ಮಾಡುವವನು, ತಂದೆಯೂ ನೀನೇ ಆಗಿರುವಿ.

ದಶಲಕ್ಷಣಸಂಯುಕ್ತೋ ಧರ್ಮೋಽರ್ಥಃ ಕಾಮ ಏವ ಚ ।
ಗಂಗಾ ಸಮುದ್ರಾಃ ಸರಿತಃ ಪಲ್ವಲಾನಿ ಸಂರಾಸಿ ಚ ॥೧೩೩॥

ಹತ್ತು ಲಕ್ಷಣದಿಂದ ಕೂಡಿರುವ ಧರ್ಮ-ಅರ್ಥ-ಕಾಮ ಇವುಗಳು ನೀನೇ ಆಗಿರುವಿ. ಗಂಗೆ, ಸಮುದ್ರ, ನದಿಗಳು, ಸಣ್ಣಕೊಳಗಳು ಎಲ್ಲವೂ ನೀನೇ ಆಗಿರುವಿ.

ಲತಾ ವಲ್ಲ್ಯಸ್ತೃಣೌಷಧ್ಯಃ ಪಶವೋ ಮೃಗಪಕ್ಷಿಣಃ ।
ದ್ರವ್ಯಕರ್ಮಸಮಾರಂಭಃ ಕಾಲಃ ಪುಷ್ಪಫಲಪ್ರದಃ ॥೧೩೪॥

ಲತೆಗಳು, ಬಳ್ಳಿಗಳು, ತೃಣ, ಓಷಧಿ, ಪಶು, ಮೃಗ, ಪಕ್ಷಿ, ದ್ರವ್ಯಯುಕ್ತವಾದ ಕರ್ಮಾರಂಭಗಳು, ಪುಷ್ಪ-ಫಲಗಳನ್ನು ಕೊಡುವ ಕಾಲ- ಎಲ್ಲವೂ ನೀನೇ ಆಗಿರುವಿ.

ಆದಿಶ್ಚಾಂತಶ್ಚ ದೇವಾನಾಂ ಗಾಯತ್ರ್ಯೋಂಕಾರ ಏವ ಚ ।
ಹರಿತೋ ರೋಹಿತೋ ನೀಲಃ ಕೃಷ್ಣೋ ರಕ್ತಸ್ತಥಾಽರುಣಃ ।
ಕದ್ರುಶ್ಚ ಕಪಿಲಶ್ಚೈವ ಕಪೋತೋ ಮೇಚಕಸ್ತಥಾ ॥೧೩೫॥

ದೇವತೆಗಳಿಗೆ ಆದಿಯೂ ಅಂತ್ಯನೂ ನೀನೇ. ಗಾಯತ್ರಿ-ಓಂಕಾರವೂ ನೀನೇ. ಹರಿತ-ರೋಹಿತ-ನೀಲ-ಕೃಷ್ಣ-ರಕ್ತ-ಅರುಣ-ಕದ್ರು-ಕಪಿಲ-ಕಪೋತ-ಮೇಚಕ ಎಂಬ ಹತ್ತು ಬಣ್ಣದವನು ನೀನೇ ಆಗಿರುವಿ.

ಅವರ್ಣಶ್ಚ ಸುವರ್ಣಶ್ಚ ವರ್ಣಕಾರೋ ಘನೋಪಮಃ ।
ಸುವರ್ಣನಾಮಾ ಚ ತಥಾ ಸುವರ್ಣಪ್ರಿಯ ಏವ ಚ ॥೧೩೬॥

ದುಷ್ಟವರ್ಣರಹಿತನು, ಒಳ್ಳೆಯ ವರ್ಣ ಸಹಿತನು, ವರ್ಣಗಳನ್ನು ಸೃಷ್ಟಿಸುವವನು, ಮೇಘಕ್ಕೆ ಸಮಾನನಾಗಿರುವವನು, ಸುವರ್ಣನಾಮಕನು, ಸುವರ್ಣಪ್ರಿಯನು ನೀನೇ ಆಗಿರುವಿ.

ತ್ವಮಿಂದ್ರಶ್ಚ ಯಮಶ್ಚೈವ ವರುಣೋ ಧನದೋಽನಲಃ ।
ಉಪಪ್ಲವಶ್ಚಿತ್ರಭಾನುಃ ಸ್ವರ್ಭಾನುರ್ಭಾನುರೇವ ಚ ॥೧೩೭॥

ನೀನು ಇಂದ್ರ, ಯಮ, ವರುಣ, ಅಗ್ನಿ, ಕುಬೇರ, ಚಂದ್ರ, ಗ್ರಹಣಗಳು, ರಾಹು, ಭಾನು ಎಲ್ಲರ ಅಂತರ್ಯಾಮಿಯಾಗಿರುವಿ.

ಹೋತ್ರಂ ಹೋತಾ ಚ ಹೋಮ್ಯಂ ಚ ಹುತಂ ಚೈವ ತಥಾ ಪ್ರಭುಃ ।
ತ್ರಿಸೌಪರ್ಣಂ ತಥಾ ಬ್ರಹ್ಮ ಯಜುಷಾಂ ಶತರುದ್ರಿಯಮ್ ॥೧೩೮॥

ಹೋತ್ರ, ಹೋತಾ, ಹೋಮಮಾಡುವ ಪದಾರ್ಥ, ಹವನ ಕ್ರಿಯೆ ಇವುಗಳಿಗೆ ಫಲಪ್ರದನು, ಪ್ರಭುವು ನೀನೇ ಆಗಿರುವಿ. ಯಜುರ್ವೇದದ ತ್ರಿಸುಪರ್ಣದ ಶತರುದ್ರೀಯ ಪ್ರಕರಣದಲ್ಲಿ ಇರುವ ವೈದಿಕ ನಾಮಗಳು ನಿನ್ನಲ್ಲಿ ಬಳಕೆಯಾಗಿವೆ.

ಪವಿತ್ರಂ ಚ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಮ್ ।
ಗಿರಿಕೋ ಹಿಂಡುಕೋ ವೃಕ್ಷೋ ಜೀವಃ ಪುದ್ಗಲ ಏವ ಚ ॥೧೩೯॥

ಪವಿತ್ರಗಳಲ್ಲಿ ಪವಿತ್ರನು, ಮಂಗಳಗಳಲ್ಲಿ ಮಂಗಳನು, ಗಿರಿಕನು, ಹಿಂಡುಕನು, ವೃಕ್ಷನು, ಜೀವನು, ಪುದ್ಗಲನು ನೀನೇ ಆಗಿರುವಿ.

ವ್ಯಾಖ್ಯಾನ ವಿಶೇಷ– ಗಿರಿಕ, ಹಿಂಡುಕ, ವೃಕ್ಷ, ಜೀವ, ಪುದ್ಗಲ– ಇವೆಲ್ಲವೂ ಆಯಾ ಪ್ರಾಣಿ ಸಸ್ಯ ಪ್ರಪಂಚದ ಮೂಲ ಉತ್ಪತ್ತಿಗೆ ಕಾರಣವಾದ ಶಬ್ದಗಳು ಎಂದು ತಿಳಿಯಬೇಕು.

ಪ್ರಾಣಃ ಸತ್ತ್ವಂ ರಜಶ್ಚೈವ ತಮಶ್ಚಾಪ್ರಮದಸ್ತಥಾ ।
ಪ್ರಾಣೋಪಾನಃ ಸಮಾನಶ್ಚ ಉದಾನೋ ವ್ಯಾನ ಏವ ಚ ॥೧೪೦॥

ಜೀವ, ಶರೀರ, ಪ್ರಾಣ, ಸತ್ತ್ವ, ರಜಸ್ಸು, ತಮಸ್ಸು, ಅಪ್ರಮಾದ, ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ ಎಲ್ಲವೂ ನೀನೇ ಆಗಿರುವಿ.

ಉನ್ಮೇಷಶ್ಚ ನಿಮೇಷಶ್ಚ ಕ್ಷುತಂ ಜೃಂಭಿತಮೇವ ಚ ।
ಲೋಹಿತಾಂತರ್ಗತಾ ದೃಷ್ಟಿರ್ಮಹಾವಕ್ತ್ರೋ ಮಹೋದರಃ ॥೧೪೧॥

ಉನ್ಮೇಷ, ನಿಮೇಷ, ಸೀನುವುದು, ಆಕಳಿಸುವುದು, ಎಲ್ಲ ಚೇಷ್ಟೆಗಳಿಗೂ ನೀನೇ ನಿಯಾಮಕ. ನಿನ್ನ ಅಗ್ನಿರೂಪವಾದ ಕೆಂಪಾದ ದೃಷ್ಟಿಯು ಅಂತರ್ಮುಖ ಹೊಂದಿದೆ. ಮಹಾಮುಖನೂ, ಮಹೋದರನೂ ಆಗಿರುವಿ.

ಸೂಚೀರೋಮಾ ಹರಿಶ್ಮಶ್ರುರೂರ್ಧ್ವಕೇಶಶ್ಚರಾಚರಃ ।
ಗೀತವಾದಿತ್ರತತ್ತ್ವಜ್ಞೋ ಗೀತವಾದನಕಪ್ರಿಯಃ ॥೧೪೨॥

ಸೂಜಿಯಂತಹ ಕೂದಲುಳ್ಳವನು, ಕಂದುಬಣ್ಣದ ಮೀಸೆ-ದಾಡಿಯುಳ್ಳವನು, ಊರ್ಧ್ವಕೇಶನು, ಚರಾಚರನು, ಗೀತವಾದ್ಯಗಳ ತತ್ತ್ವಜ್ಞನೂ, ಗೀತವಾದನ ಪ್ರಿಯನೂ ಆಗಿರುವ ನಿನಗೆ ನಮಸ್ಕಾರ.

ಮತ್ಸ್ಯೋ ಜಲಚರೋ ಜಾಲ್ಯೋಽಕಲಃ ಕೇಲಿಕಲಃ ಕಲಿಃ।
ಅಕಾಲಶ್ಚಾತಿಕಾಲಶ್ಚ ದುಷ್ಕಾಲಃ ಕಾಲ ಏವ ಚ ॥೧೪೩॥

ಮತ್ಸ್ಯನು, ಜಲಚರನು, ಮೊಸಳೆ ರೂಪನು, ಅವಯವಗಳಿಲ್ಲದೆ ಇರುವವನು, ಆಟದ ಕಲೆಯಲ್ಲಿ ನಿಷ್ಣಾತನು, ಕಲಹರೂಪನು, ಅಕಾಲನು, ಅತಿಕಾಲನು, ದುಷ್ಕಾಲನು, ಕಾಲನು ಆಗಿರುವಿ.

ಮೃತ್ಯುಃ ಕ್ಷುರಶ್ಚ ಕೃತ್ಯಶ್ಚ ಪಕ್ಷೋಽಪಕ್ಷಕ್ಷಯಂಕರಃ ।
ಮೇಘಕಾಲೋ ಮಹಾದಂಷ್ಟ್ರಃ ಸಂವರ್ತಕಬಲಾಹಕಃ ॥೧೪೪॥

ಮೃತ್ಯುವೂ ಆಗಿರುವಿ, ಶಸ್ತ್ರವೂ ಆಗಿರುವಿ, ಕೃತ್ಯನಾಗಿರುವಿ, ಸತ್ಪುರುಷರನ್ನು ರಕ್ಷಿಸುವವನಾಗಿರುವಿ, ಶತ್ರುಪಕ್ಷದವರಿಗೆ ಕಂಟಕನಾಗಿರುವಿ. ಮೇಘವರ್ಣದಂತಹ ಕಾಲನಾಗಿರುವಿ, ಮಹಾದಂಷ್ಟ್ರನಾದ ನಿನಗೆ ನಮಸ್ಕಾರವು.

ಘಂಟೋಘಂಟೋ ಘಟೀ ಘಂಟೀ ಚರುಚೇಲೀ ಮಿಲೀಮಿಲೀ ।
ಬ್ರಹ್ಮಕಾಯಿಕಮಗ್ನೀನಾಂ ದಂಡೀ ಮುಂಡಸ್ತ್ರಿದಂಡಧೃಕ್ ॥೧೪೫॥

ಘಂಟ ಎಂದರೆ ಪ್ರಕಾಶ ಎಂದು ಅರ್ಥ ಪ್ರಕಾಶನು, ಅಪ್ರಕಾಶನು, ಸಂಘಟಕನು, ಘಂಟೆಯುಳ್ಳವನು, ಜೀವರೊಡನೆ ಕ್ರೀಡಿಸುವವನು, ಮಿಲೀಮಿಲೀ= ಅತ್ಯಂತ ಅಣು ಎಂದರ್ಥ. ಬ್ರಹ್ಮಾಗ್ನಿ ಸ್ವರೂಪನು, ದಂಡಧಾರಿಯು, ತ್ರಿದಂಡಿಯೂ, ಸಂನ್ಯಾಸಿಯೂ ಆದ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ– 'ಓಂ ರುದ್ರ ಚಿಲೀಚಿಲಿ ಮಿಲೀಮಿಲೀ ಓಂ ಸ್ವಾಹಾ' ಎಂಬ ಹದಿನೆಂಟು ಅಕ್ಷರಾತ್ಮಕವಾದ ರುದ್ರಮಂತ್ರವು ಇದೆ. ಅದರ ಸೂಚನೆಯನ್ನು ಇಲ್ಲಿ ಮಾಡಲಾಗಿದೆ ಎಂದು ನೀಲಕಂಠ ವ್ಯಾಖ್ಯಾನ.

ಚತುರ್ಯುಗಶ್ಚತುರ್ವೇದಶ್ಚಾತುಹೋರ್ತ್ರಪ್ರವರ್ತಕಃ ।
ಚಾತುರಾಶ್ರಮ್ಯವೇತಾ ಚ ಚಾತುರ್ವರ್ಣ್ಯಕರಶ್ಚ ಯಃ ॥೧೪೬॥

ಚತುರ್ಯುಗಗಳು ನಿನ್ನ ಸ್ವರೂಪಗಳೇ, ಚತುರ್ವೇದಗಳು ನಿನ್ನ ಸ್ವರೂಪವೇ. ನಾಲ್ಕು ವೇದಗಳ ಹೋತ್ರಗಳ ಪ್ರವರ್ತಕನಾಗಿರುವಿ. ನಾಲ್ಕು ಆಶ್ರಮದವರಿಗೆ ನಿಯಾಮಕನೂ, ಚಾತುರ್ವರ್ಣ್ಯ ಸೃಷ್ಟಿಕರ್ತನು ನೀನೇ ಆಗಿರುವಿ. ನಿನಗೆ ನಮಸ್ಕಾರ.

ಸದಾ ಚಾಕ್ಷಪ್ರಿಯೋ ಧೂರ್ತೋ ಗಣಾಧ್ಯಕ್ಷೋ ಗಣಾಧಿಪಃ ।
ರಕ್ತಮಾಲ್ಯಾಂಬರಧರೋ ಗಿರಿಶೋ ಗಿರಿಕಪ್ರಿಯಃ ॥೧೪೭॥

ಪಗಡೆಯಾಟದಲ್ಲಿ ಪ್ರಿಯನಾದ, ಧೂರ್ತರಿಗೂ ನಿಯಾಮಕನಾದ, ಗಣಾಧ್ಯಕ್ಷನಾದ, ಗಣಾಧಿಪತಿಯಾದ, ಕೆಂಪಾದ ಮಾಲೆಯನ್ನು ಧರಿಸಿರುವ, ದ್ಯೂತಪ್ರಿಯನಾದ, ಗಿರೀಶನಾದ ನಿನಗೆ ನಮಸ್ಕಾರ.

ಶಿಲ್ಪಿಕಃ ಶಿಲ್ಪಿನಾಂ ಶ್ರೇಷ್ಠಃ ಸರ್ವಶಿಲ್ಪಪ್ರವರ್ತಕಃ ।
ಭಗನೇತ್ರಾಂಕುಶಶ್ಚಂಡಃ ಪೂಷ್ಣೋ ದಂತವಿನಾಶನಃ ॥೧೪೮॥

ಶಿಲ್ಪಿಯಾದ, ಶಿಲ್ಪಿಶ್ರೇಷ್ಠನಾದ, ಸಕಲ ವಿಧ ಶಿಲ್ಪಕಲೆಗಳಿಗೂ ಪ್ರವರ್ತಕನಾದ, ಭಗದೇವತೆಯ ನೇತ್ರವನ್ನು ಕಿತ್ತುವುದರಲ್ಲಿ ಅಂಕುಶಪ್ರಾಯನಾದ (ಪೂಷ, ಭಗ ಎಂಬ

ಋತ್ವಿಜರ ಹಲ್ಲು-ಕಣ್ಣುಗಳನ್ನು ಕಿತ್ತಿದ ವೀರಭದ್ರನ ರೂಪವನ್ನು ಇಲ್ಲಿ ಸ್ಮರಿಸಲಾಗಿದೆ), ಪೂಷದೇವತೆಯ ಹಲ್ಲುಗಳ ವಿನಾಶಕನಾದ ನಿನಗೆ ನಮಸ್ಕಾರ.

ಸ್ವಾಹಾಸ್ವಧಾವಷಟ್ಕಾರೋ ನಮಸ್ಕಾರೋ ನಮೋ ನಮಃ ।
ಗೂಢವ್ರತೋ ಗುಹ್ಯತಪಾಸ್ತಾರಕಸ್ತಾರಕಾಮಯಃ ॥೧೪೯॥

ಸ್ವಾಹಾ, ಸ್ವಧಾ, ವಷಟ್ಕಾರ ರೂಪನಾದ ನಿನಗೆ ನಮಸ್ಕಾರ. ಗೂಢವ್ರತನಾದ, ಗುಹ್ಯ ತಪಸ್ವಿಯಾದ, ತಾರಕಮಯನಾದ ನಿನಗೆ ನಮಸ್ಕಾರ. ನಕ್ಷತ್ರಗಳಿಗೆ ನಿಯಾಮಕನಾದ ನಿನಗೆ ನಮಸ್ಕಾರ.

ಧಾತಾ ವಿಧಾತಾ ಸಂಧಾತಾ ವಿಧಾತಾ ಧಾರಣೋ ಧರಃ ।
ಬ್ರಹ್ಮಾ ತಪಶ್ಚ ಸತ್ಯಂ ಚ ಬ್ರಹ್ಮಚರ್ಯಮಥಾರ್ಜವಮ್ ॥೧೫೦॥

ಧರಿಸುವವನು, ಸೃಷ್ಟಿಸುವವನು, ಜೋಡಿಸುವವನು, ಅದೃಷ್ಟರೂಪನು, ಆಶ್ರಯಭೂತನು, ಶುದ್ಧಾತ್ಮನೂ ಆದ ನಿನಗೆ ನಮಸ್ಕಾರ. ಬ್ರಹ್ಮ, ತಪಸ್ಸು, ಸತ್ಯ, ಬ್ರಹ್ಮಚರ್ಯ, ಋಜುತ್ವ (ಸರಳತೆ) ಎಲ್ಲವೂ ನೀನೇ ಆಗಿರುವಿ.

ಭೂತಾತ್ಮಾ ಭೂತಕೃದ್ ಭೂತೋ ಭೂತಭವ್ಯಭವೋದ್ಭವಃ ।
ಭೂರ್ಭುವಃ ಸ್ವರಿತಶ್ಚೈವ ಧ್ರುವೋ ದಾಂತೋ ಮಹೇಶ್ವರಃ ॥೧೫೧॥

ಭೂತಾತ್ಮನೂ, ಭೂತಗಳನ್ನು ಸೃಷ್ಟಿಸುವವನು, ಭೂತನು, ಭೂತ-ಭವಿಷ್ಯತ್-ವರ್ತಮಾನಗಳಿಗೆ ನಿಯಾಮಕನು, ಭೂಲೋಕ, ಭುವರ್ಲೋಕ, ಸ್ವರ್ಗಲೋಕಗಳಿಗೆ ನಿಯಾಮಕನು, ಧ್ರುವನು, ಜಿತೇಂದ್ರಿಯನು, ಮಹೇಶ್ವರನೂ ಆಗಿರುವಿ.

ದೀಕ್ಷಿತೋऽದೀಕ್ಷಿತಃ ಕ್ಷಾಂತೋ ದುರ್ದಾಂತೋऽದಾಂತನಾಶನಃ ।
ಚಂದ್ರಾವರ್ತಯುಗಾವರ್ತಃ ಸಂವರ್ತಃ ಸಂಪ್ರವರ್ತಕಃ ॥೧೫೨॥

ಯಜ್ಞದೀಕ್ಷಿತನೂ ಅದೀಕ್ಷಿತನೂ, ಕ್ಷಮಾವಂತನು ದುರ್ದಾಂತನು, ಅದಾಂತರನ್ನು ನಾಶಗೊಳಿಸುವವನು, ಚಂದ್ರನ ವೃದ್ಧಿ-ಕ್ಷಯಗಳಿಗೆ ಕಾರಣನಾದವನು, ಯುಗಗಳಿಗೆ ಪ್ರವರ್ತಕನು, ಜಗತ್ತನ್ನು ಸೃಷ್ಟಿಸುವವನು ಆದ ನಿನಗೆ ನಮಸ್ಕಾರಗಳು.

ಕಾಮೋ ಬಿಂದುರಣುಃ ಸ್ಥೂಲಃ ಕರ್ಣಿಕಾರಸ್ರಜಪ್ರಿಯಃ ।
ನಂದೀಮುಖೋ ಭೀಮಮುಖಃ ಸುಮುಖೋ ದುರ್ಮುಖೋऽಮುಖಃ ॥

ಚತುರ್ಮುಖೋ ಬಹುಮುಖೋ ರಣೇಷ್ವಗ್ನಿಮುಖಸ್ತಥಾ ।
ಹಿರಣ್ಯಗರ್ಭಃ ಶಕುನಿರ್ಮಹೋರಗಪತಿರ್ವಿರಾಟ್ ॥೧೫೪॥

ನೀನು ಕಾಮನು, ಬಿಂದುವು, ಅಣುವು, ಸ್ಥೂಲ, ಕರ್ಣಿಕಾರ ಮಾಲಾಪ್ರಿಯ, ನಂದಿಮುಖನು, ಭೀಮಮುಖನು, ಸುಮುಖನು, ದುರ್ಮುಖನು, ಅಮುಖನು, ಚತುರ್ಮುಖನು, ಬಹುಮುಖನು, ಯುದ್ಧದಲ್ಲಿ ಅಗ್ನಿಮುಖನು, ಹಿರಣ್ಯಗರ್ಭನು, ಪಕ್ಷಿಸ್ವರೂಪನು, ಮಹಾಸರ್ಪಗಳ ಸ್ವಾಮಿಯು, ವಿರಾಟ್‌ಸ್ವರೂಪನು ಆದಂತಹ ನಿನಗೆ ನಮಸ್ಕಾರ.

ಅಧರ್ಮಹಾ ಮಹಾಪಾರ್ಶ್ವಶ್ಚಂಡಧಾರೋ ಗಣಾಧಿಪಃ ।
ಗೋನರ್ದೋ ಗೋಪ್ರತಾರಶ್ಚ ಗೋವೃಷೇಶ್ವರವಾಹನಃ ॥೧೫೫॥

ಅಧರ್ಮವಿನಾಶಕನು, ಮಹಾಪಾರ್ಶ್ವನು, ಚಂಡಧಾರನು, ಗಣಾಧಿಪನು, ಗೋನರ್ದ= ಸಾರಸಪಕ್ಷಿಯಂತರ್ಯಾಮಿಯು, ಗೋಪ್ರತಾರ= ಗೋವುಗಳ ಆಪತ್ತನ್ನು ಪರಿಹರಿಸುವವನು, ನಂದಿಯನ್ನೇ ವಾಹನವನ್ನಾಗಿ ಹೊಂದಿರುವವನು.

ತ್ರೈಲೋಕ್ಯಗೋಪ್ತಾ ಗೋವಿಂದೋ ಗೋಮಾರ್ಗೋಮಾರ್ಗ ಏವ ಚ ।
ಶ್ರೇಷ್ಠಃ ಸ್ಥಿರಶ್ಚ ಸ್ಥಾಣುಶ್ಚ ನಿಷ್ಕಂಪಃ ಕಂಪ ಏವ ಚ ॥೧೫೬॥

ಮೂರು ಲೋಕಗಳನ್ನು ರಕ್ಷಿಸುವವನು, ಗೋವುಗಳನ್ನು ರಕ್ಷಿಸುವವನು, ಗೋಮಾರ್ಗನು, ವೇದಮಾರ್ಗನು, ಅಮಾರ್ಗನು, ದುರ್ಮಾರ್ಗದಲ್ಲಿ ಸಾಗದೆ ಇರುವವನು, ಶ್ರೇಷ್ಠನು, ಸ್ಥಾಣುವು, ಸ್ಥಿರನು, ಹೆದರದವನು, ಹೆದರಿಸುವವನು ನೀನೇ ಆಗಿರುವಿ.

ದುರ್ವಾರಣೋ ದುರ್ವಿಷಹೋ ದುಃಸಹೋ ದುರತಿಕ್ರಮಃ ।
ದುರ್ಧರ್ಷೋ ದುಷ್ಪ್ರಕಂಪಶ್ಚ ದುರ್ವಿಷೋ ದುರ್ಜಯೋ ಜಯಃ ॥

ತಡೆಯಲು ಅಸಾಧ್ಯನು, ಸಹಿಸಲು ಅಸಾಧ್ಯವಾದ ವೇಗವುಳ್ಳವನು, ದುಸ್ಸಹನು, ಅತಿಕ್ರಮಿಸಲು ಅಸಾಧ್ಯನು, ಬಲಾತ್ಕರಿಸಲು ಅಸಾಧ್ಯನು, ಅಲ್ಲಾಡಿಸಲು ಅಸಾಧ್ಯನು, ದುರ್ವಿಷನು, ದುರ್ಜಯನು, ಜಯನು ಆದ ನಿನಗೆ ನಮಸ್ಕಾರ.

ಶಶಃ ಶಶಾಂಕಃ ಶಮನಃ ಶೀತೋಷ್ಣಕ್ಷುಜ್ಜ್ವರಾಧಿಕೃತ್ ।
ಆಧಯೋ ವ್ಯಾಧಯಶ್ಚೈವ ವ್ಯಾಧಿಹಾ ವ್ಯಾಧಿರೇವ ಚ ॥೧೫೮॥

ಶೀಘ್ರಗಾಮಿಯು, ಚಂದ್ರನಿಯಾಮಕನು, ಶಮಬುದ್ಧಿಯುಳ್ಳವನು, ಶೀತ-ಉಷ್ಣ-ಹಸಿವು-ಜ್ವರ-ಮಾನಸಿಕ ಚಿಂತೆ ಇವುಗಳನ್ನು ಉಂಟುಮಾಡುವವನು, ವ್ಯಾಧಿಗಳನ್ನು ಆಧಿಗಳನ್ನು ಪರಿಹರಿಸುವವನಾದ್ದರಿಂದ ವ್ಯಾಧಿ ಎನಿಸಿದ್ದಾನೆ.

ವ್ಯಾಖ್ಯಾನ ವಿಶೇಷ– ವಿಘ್ನಗಳನ್ನು ಕೊಡುವವನು ಪರಿಹರಿಸುವವನು ಆದ್ದರಿಂದ ವಿಘ್ನೇಶ ಎಂದು ಹೇಗೆ ಕರೆಸಿಕೊಳ್ಳುತ್ತಾನೋ ಹಾಗೆ ವ್ಯಾಧಿಗಳನ್ನು ಕೊಡುವವನು, ಪರಿಹರಿಸುವವನು ಆದ್ದರಿಂದ ವ್ಯಾಧಿ ಎಂದು ಕರೆಸಿಕೊಳ್ಳುತ್ತಾನೆ. ವ್ಯಾಧಿ ನಿಯಾಮಕ ಎಂಬರ್ಥದಲ್ಲಿ ವ್ಯಾಧಿ ಎಂದು ಹೇಳಲಾಗಿದೆ. ಅನೇಕ ನಾಮಗಳು ಈ ರೀತಿಯಲ್ಲೇ ಹೇಳಲ್ಪಟ್ಟಿರುತ್ತವೆ.

ಮಮ ಯಜ್ಞಮೃಗವ್ಯಾಧೋ ವ್ಯಾಧೀನಾಮಾಗಮೋ ಗಮಃ ।
ಶಿಖಂಡೀ ಪುಂಡರೀಕಾಕ್ಷಃ ಪುಂಡರೀಕವನಾಲಯಃ ॥೧೫೯॥

ನನ್ನ ಯಜ್ಞವೆಂಬ ಜಿಂಕೆಗೆ ವ್ಯಾಧನಾಗಿರುವವನೇ, ವ್ಯಾಧಿಗಳನ್ನು ಭರಿಸುವವನು ಹೋಗಲಾಡಿಸುವವನು ಆಗಿರುವವನೇ, ನವಿಲುಗರಿಯನ್ನು ಧರಿಸಿರುವುದರಿಂದ ಶಿಖಂಡೀ ಎಂದು ಕರೆಯಲ್ಪಡುವವನೇ, ಪುಂಡರೀಕಾಕ್ಷನೇ, ಪುಂಡರೀಕ ವನವೇ ಮನೆಯಾಗಿ ಉಳ್ಳವನೇ ನಿನಗೆ ನಮಸ್ಕಾರ.

ದಂಡಧಾರಸ್ತ್ರ್ಯಂಬಕಶ್ಚ ಉಗ್ರದಂಡೋಽಂಡನಾಶನಃ ।
ವಿಷಾಗ್ನಿಪಾಃ ಸುರಶ್ರೇಷ್ಠಃ ಸೋಮಪಾಸ್ತ್ವಂ ಮರುತ್ಪತಿಃ ॥೧೬೦॥

ದಂಡಧಾರನೆಂದು ಕರೆಯಲ್ಪಡುವವನೇ, ತ್ರ್ಯಂಬಕನೇ, ಉಗ್ರದಂಡನೇ, ಬ್ರಹ್ಮಾಂಡ ನಾಶಕನೇ, ವಿಷವನ್ನು ಅಗ್ನಿಯನ್ನು ಪಾನ ಮಾಡುವವನೇ, ಸುರಶ್ರೇಷ್ಠನೇ, ಸೋಮರಸವನ್ನು ಪಾನ ಮಾಡುವವನೇ, ಮರುದ್ಗಣ ಸ್ವಾಮಿಯೇ ನಿನಗೆ ನಮಸ್ಕಾರ.

ಅಮೃತಪಾಸ್ತ್ವಂ ಜಗನ್ನಾಥ ದೇವದೇವ ಗಣೇಶ್ವರಃ ।
ವಿಷಾಗ್ನಿಪಾ ಮೃತ್ಯುಪಾಶ್ಚ ಕ್ಷೀರಪಾಃ ಸೋಮಪಾಸ್ತಥಾ ।
ಮಧುಶ್ಚ್ಯುತಾನಾಮಗ್ರಪಾಸ್ತ್ವಂ ತ್ವಮೇವ ತುಷಿತಾದ್ಯಪಾಃ ॥೧೬೧॥

ನೀನು ದೇವದೇವನೇ, ಗಣೇಶ್ವರನೇ, ಅಮೃತವನ್ನು ಪಾನ ಮಾಡುವವನು. ಜಲವನ್ನು ಪಾನ ಮಾಡುವವನು, ಮೃತ್ಯುವಿನಿಂದ ರಕ್ಷಿಸುವವನು, ಪಯಃ ಪಾನಿಯು, ಸೋಮಪಾನಿಯು, ಸುಖಭ್ರಷ್ಟರಾದವರಿಗೆ ಪ್ರಧಾನ ರಕ್ಷಕನು, ತುಷಿತರೆಂಬ ದೇವತೆಗಳಿಗೆ ಕಾರಣನು, ವೇದರಕ್ಷಕನು ಆಗಿರುವಿ.

ಹಿರಣ್ಯರೇತಾಃ ಪುರುಷಸ್ತ್ವಮೇವ
ತ್ವಂ ಸ್ತ್ರೀ ಪುಮಾಂಸ್ತ್ವಂ ಚ ನಪುಂಸಕಂ ಚ ।
ಬಾಲೋ ಯುವಾ ಸ್ಥವಿರೋ ಜೀರ್ಣದಂಷ್ಟ್ರಸ್ತ್ವಂ
ನಾಗೇಂದ್ರ ಶಕ್ರಸ್ತ್ವಂ ವಿಶ್ವಕೃದ್ ವಿಶ್ವಕರ್ತಾ ॥೧೬೨॥

ಹಿರಣ್ಯ ರೇತಸ್ಸುಳ್ಳ ಪುರುಷನು ನೀನೇ ಆಗಿರುವಿ. ಸ್ತ್ರೀಯು, ಪುಮಾನ್, ನಪುಂಸಕನು, ಬಾಲಕನು, ಮಧುಕನು, ಜೀರ್ಣದಂಷ್ಟ್ರನು, ನಾಗೇಂದ್ರನು, ಶಕ್ರನು, ವಿಶ್ವಕೃದ್, ವಿಶ್ವಕರ್ತ ಎಲ್ಲವೂ ನೀನೇ ಆಗಿರುವಿ.

ವಿಶ್ವಕೃದ್ ವಿಶ್ವಕೃತಾಂ ವರೇಣ್ಯಸ್ತ್ವಂ ವಿಶ್ವಬಾಹೋ
ವಿಶ್ವರೂಪಸ್ತೇಜಸ್ವೀ ವಿಶ್ವತೋಮುಖಃ ।
ಚಂದ್ರಾದಿತ್ಯೌ ಚಕ್ಷುಷೀ ತೇ ಹೃದಯಂ ಚ ಪಿತಾಮಹಃ ॥೧೬೩॥

ನೀನು ವಿಶ್ವಕೃದ್, ವಿಶ್ವವನ್ನು ನಿರ್ಮಿಸುವವರಲ್ಲಿ ಶ್ರೇಷ್ಠನು, ವಿಶ್ವಬಾಹುವು, ವಿಶ್ವರೂಪಿಯು, ತೇಜಸ್ವಿಯು, ವಿಶ್ವತೋಮುಖನು ಆಗಿರುವಿ. ಚಂದ್ರಾದಿತ್ಯರು ನಿನ್ನ ಕಣ್ಣುಗಳು, ಚತುರ್ಮುಖನು ನಿನ್ನ ಹೃದಯವು.

ಮಹೋದಧಿಃ ಸರಸ್ವತೀ ವಾಗ್ಬಲಮನಲೋಽ-
ನಿಲಃ ಅಹೋರಾತ್ರಂ ನಿಮೇಷೋನ್ಮೇಷಕರ್ಮಾ ॥೧೬೪॥

ಮಹೋದಧಿಯು ನೀನೇ. ಸರಸ್ವತಿಯು ನಿನ್ನ ವಾಣಿಯಾಗಿದ್ದಾಳೆ. ಅಗ್ನಿ-ವಾಯುಗಳು ನಿನ್ನ ಬಲವಾಗಿದ್ದಾರೆ. ನಿನ್ನ ಕಣ್ಣಿನ ಮುಚ್ಚುವಿಕೆ ತೆಗೆಯುವಿಕೆಯೇ ಅಹೋರಾತ್ರಗಳೆನಿಸಿವೆ.

ನ ಬ್ರಹ್ಮಾ ನ ಚ ಗೋವಿಂದಃ ಪೌರಾಣಾ ಋಷಯೋ ನ ತೇ ।
ಮಾಹಾತ್ಮ್ಯಂ ವೇದಿತುಂ ಶಕ್ತಾ ಯಾಥಾತಥ್ಯೇನ ತೇ ಶಿವ ॥೧೬೫॥

ಚತುರ್ಮುಖ ಬ್ರಹ್ಮನಾಗಲಿ, ಗೋವಿಂದನೇ ಆಗಲಿ, ಪುರಾಣವನ್ನು ತಿಳಿದಿರುವ ಋಷಿಗಳೇ ಆಗಿರಲಿ, ಶಿವನೇ ಯಥಾರ್ಥವಾಗಿ ನಿನ್ನ ಮಹಿಮೆಯನ್ನು ತಿಳಿಯಲು ಅವರು ಶಕ್ತರಾಗುವುದಿಲ್ಲ.

ವ್ಯಾಖ್ಯಾನ ವಿಶೇಷ– ಇದನ್ನು ಮೋಹಕವೆಂದು ಚಿಂತಿಸಬೇಕು. ಬ್ರಹ್ಮ-ರುದ್ರರಿಗೆ ನಿಯಾಮಕನಾದ ಗೋವಿಂದನು ಶಿವನ ಮಹಿಮೆಯನ್ನು ತಿಳಿಯುವುದಿಲ್ಲ ಎಂಬುದು ಹೊಂದಾಣಿಕೆಯಾಗುವುದಿಲ್ಲ. ಅಥವಾ ಭಗವಂತನ ಗುಣಗಳು ಭಗವಂತನಿಗೇ ಹೇಗೆ ಅಪಾರವೋ, ಹೇಗೆ ಅನಂತವೋ ಅದರಂತೆ ರುದ್ರಾಂತರ್ಯಾಮಿಯಾದ ಶಿವನೆಂಬ ಭಗವಂತನ ಗುಣಗಳು ಅಪಾರವಾದುದರಿಂದ ಹೇಳಲಾಗುವುದಿಲ್ಲ ಎಂದೂ ತಾತ್ಪರ್ಯ.

ಯಾ ಮೂರ್ತಯಃ ಸುಸೂಕ್ಷ್ಮಾಸ್ತೇ ನ ಮಹ್ಯಂ ಯಾಂತಿ ದರ್ಶನಮ್ ।
ತ್ರಾಹಿ ಮಾಂ ಸತತಂ ರಕ್ಷ ಪಿತಾ ಪುತ್ರಮಿವೌರಸಮ್ ॥೧೬೬॥

ನಿನ್ನ ಅತ್ಯಂತ ಸೂಕ್ಷ್ಮವಾದ ಯಾವ ಮೂರ್ತಿಗಳಿವೆಯೋ ಅದು ನಮಗೆ ಗೋಚರವಾಗುವುದಿಲ್ಲ. ಪರಮೇಶ್ವರನೇ ನನ್ನನ್ನು ಕಾಪಾಡು. ತಂದೆಯಾದವನು ಔರಸ ಪುತ್ರನನ್ನು ರಕ್ಷಿಸುವಂತೆ ನನ್ನನ್ನು ರಕ್ಷಿಸು.

ರಕ್ಷ ಮಾಂ ರಕ್ಷಣೀಯೋಹಂ ತವಾನಘ ನಮೋಸ್ತು ತೇ ।
ಭಕ್ತಾನುಕಂಪೀ ಭಗವಾನ್ ಭಕ್ತಶ್ಚಾಹಂ ಸದಾ ತ್ವಯಿ ॥೧೬೭॥

ಅನಘನೇ, ನಿನ್ನಿಂದ ರಕ್ಷಿಸಲು ನಾನು ಯೋಗ್ಯನಾಗಿದ್ದೇನೆ. ಆದ್ದರಿಂದ ರಕ್ಷಿಸು. ನಿನ್ನನ್ನು ನಮಸ್ಕರಿಸುತ್ತೇನೆ. ನೀನು ಭಕ್ತಾನುಕಂಪಿಯಾದ ಪೂಜ್ಯನು. ನಾನು ನಿನ್ನಲ್ಲಿ ಭಕ್ತಿಯಿಂದ ನಮಸ್ಕರಿಸುತ್ತೇನೆ.

ಯಃ ಸಹಸ್ರಾಣ್ಯನೇಕಾಪಿ ಪುಂಸಾಮಾವೃತ್ಯ ದುರ್ದೃಶಃ ।
ತಿಷ್ಠತ್ಯೇಕಃ ಸಮುದ್ರಾಂತೇ ಸ ಮೇ ಗೋಪ್ತಾಽಸ್ತು ನಿತ್ಯಶಃ ॥೧೬೮॥

ಯಾರು ಸಹಸ್ರಾರು ಮನುಜರ ಮೇಲೆ ಮಾಯಾಜಾಲವನ್ನು ಬೀಸಿ ಮಾಯಾ ಮೋಹಿತರಿಂದ ನೋಡಲು ಅಸಾಧ್ಯನಾಗಿದ್ದಾನೋ ಅಂತಹ ಸಮುದ್ರದ ದಡದಲ್ಲಿ ಪ್ರಕಾಶಮಾನನಾಗಿರುವ ಪರಮೇಶ್ವರನು ನಿತ್ಯವೂ ನನ್ನನ್ನು ರಕ್ಷಿಸಲಿ.

ಯಂ ವಿನಿದ್ರಾ ಜಿತಶ್ವಾಸಾಃ ಸತ್ವಸ್ಥಾಃ ಸಂಯತೇಂದ್ರಿಯಾಃ ।
ಜ್ಯೋತಿಃ ಪಶ್ಯಂತಿ ಯುಂಜಾನಾಸ್ತಸ್ಮೈ ಯೋಗಾತ್ಮನೇ ನಮಃ ॥೧೬೯॥

ನಿದ್ರೆಯನ್ನು ಗೆದ್ದಿರುವ ಯೋಗಿಗಳು ಪ್ರಾಣಗಳನ್ನು ಜಯಿಸಿ, ಸತ್ವಗುಣದಲ್ಲಿಯೇ ನೆಲೆನಿಂತು, ಪರಮಾತ್ಮನಲ್ಲಿ ಮನಸ್ಸನ್ನು ಲಯಗೊಳಿಸಿ, ರುದ್ರಾಂತರ್ಯಾಮಿಯಾದ ಯಾವ ಪರಮಾತ್ಮನನ್ನು ನೋಡುತ್ತಾರೋ ಅಂತಹ ಭಗವಂತನೇ ನಿನಗೆ ನಮಸ್ಕಾರ.

ವ್ಯಾಖ್ಯಾನ ವಿಶೇಷ– ಯಾವ ವ್ಯಕ್ತಿಯನ್ನು ಸ್ತುತಿಸಿದರೂ ಅವರು ಸಂತುಷ್ಟರಾಗಲು ಸ್ವತಂತ್ರರಾಗಿರುವುದಿಲ್ಲ. ಭಗವಂತನೊಬ್ಬನೇ ಸ್ವತಂತ್ರನಾಗಿರುತ್ತಾನೆ. ಹಾಗಾಗಿ ಅಂತರ್ಯಾಮಿಯಾದ ಭಗವಂತನನ್ನು ಸಂತೋಷಗೊಳಿಸಿದರೆ ಆ ವ್ಯಕ್ತಿಯು ನಮ್ಮ ವಿಷಯದಲ್ಲಿ ಸಂತುಷ್ಟನಾಗುತ್ತಾನೆ. ಆದ್ದರಿಂದ ಇಲ್ಲಿ ದಕ್ಷಪ್ರಜಾಪತಿಯು ರುದ್ರಾಂತರ್ಯಾಮಿಯಾದ ಭಗವಂತನನ್ನೇ ಸ್ತುತಿಸುವ ಮೂಲಕ ರುದ್ರನ ಸಂತೋಷಕ್ಕೆ ಪಾತ್ರನಾಗಿದ್ದಾನೆ ಎಂದು ತಿಳಿಯಬೇಕು.

ಜಟಿನೇ ದಂಡಿನೇ ನಿತ್ಯಂ ಲಂಬೋದರಶರೀರಿಣೇ ।
ಕಮಂಡಲುನಿಷಂಗಾಯ ತಸ್ಮೈ ಬ್ರಹ್ಮಾತ್ಮನೇ ನಮಃ ॥೧೭೦॥

ಯಾವ ಮಹರುದ್ರನು ಜಟೆಯನ್ನು, ದಂಡವನ್ನು ಯಾವಾಗಲೂ ಧರಿಸಿರುವನೋ, ಯಾವನ ಉದರ-ಶರೀರಗಳು ವಿಶಾಲವಾಗಿರುವವೋ, ಕಮಂಡಲು ಬತ್ತಳಿಕೆಯಂತಿರುವುದೋ, ಶುದ್ಧಸ್ವರೂಪಿಯಾಗಿದ್ದಾನೋ ಅಂತಹ ಪರಮೇಶ್ವರನಿಗೆ ನಮಸ್ಕಾರ.

ಯಸ್ಯ ಕೇಶೇಷು ಜೀಮೂತಾ ನದ್ಯಃ ಸರ್ವಾಂಗಸಂಧಿಷು ।
ಕುಕ್ಷೌ ಸಮುದ್ರಾಶ್ಚತ್ವಾರಸ್ತಸ್ಮೈ ತೋಯಾತ್ಮನೇ ನಮಃ ॥೧೭೧॥

ಯಾವ ರುದ್ರನ ಕೇಶಗಳಲ್ಲಿ ಮೇಘಗಳು ಸಂಚರಿಸುತ್ತವೋ, ಅಂಗಾಂಗಗಳ ಸನ್ನಿಧಿಯಲ್ಲಿ ನದಿಗಳು ಹರಿಯುತ್ತವೋ, ಹೊಟ್ಟೆಯಲ್ಲಿ ನಾಲ್ಕು ಸಮುದ್ರಗಳಿವೆಯೋ ಅಂತಹ ತೋಯಾತ್ಮಕನಾದ ಶಂಕರನಿಗೆ ನಮಸ್ಕಾರವು.

ವ್ಯಾಖ್ಯಾನ ವಿಶೇಷ– ಭಗವಂತನ ಪಾದದ ಧೂಳನ್ನು ಧರಿಸಬೇಕೆಂದು ಮಹರುದ್ರನು ಆಕಾಶಮಂಡಲದಲ್ಲಿ ತನ್ನ ಜಟೆಯನ್ನು ಚೆಲ್ಲಿರುತ್ತಾನೆ. ವ್ಯೋಮಕೇಶನಾಗಿರುವುದರಿಂದ ಮೇಘಗಳು ಅವನ ಶಿಖೆಯಲ್ಲಿ ಸಂಚರಿಸುತ್ತವೆ ಎಂದು ತಿಳಿಯಬೇಕು. ವಾರಣ–ಅಸಿ ಎಂಬ ಬಿಂದುಮಾಧವನ ಪಾದೋದ್ಭವೆಯಾದ ಗಂಗೆಯಲ್ಲಿ ಕಾಶಿ ಕ್ಷೇತ್ರದಲ್ಲಿ ಮುಳುಗಿರುವುದರಿಂದ ಅಂಗಾಂಗಗಳಲ್ಲಿ ಗಂಗಾನದಿ ಇದೆ ಎಂದು ತಿಳಿಯಬೇಕು. ಊರ್ಧ್ವರೇತಸ್ಕನಾಗಿ 'ದಶಕಲ್ಪತಪಶ್ಚೀರ್ಣಂ ರುದ್ರೇಣ ಲವಣಾಂಭಸಿ' ಎಂಬ ಪ್ರಮಾಣದ ಆಧಾರದಂತೆ ಹತ್ತು ಕಲ್ಪಗಳ ಕಾಲ ಸಮುದ್ರದ ಒಳಗಡೆ ನಿಂತು ತಪಸ್ಸನ್ನು ಆಚರಿಸುವುದರಿಂದ ಸಮುದ್ರಗಳು ಅವನ ಹೊಟ್ಟೆಯಲ್ಲಿವೆ ಎಂದು ಚಿಂತಿಸಲಾಗಿದೆ.

ಸಂಭಕ್ಷ್ಯ ಸರ್ವಭೂತಾನಿ ಯುಗಾಂತೇ ಪರ್ಯುಪಸ್ಥಿತೇ ।
ಯಃ ಶೇತೇ ಜಲಮಧ್ಯಸ್ಥಂ ಪ್ರಪದ್ಯೇಽಂಬುಶಾಯಿನಮ್ ॥೧೭೨॥

ಯುಗಾಂತವು ಸನ್ನಿಹಿತವಾದಾಗ ಎಲ್ಲ ಪ್ರಾಣಿಗಳನ್ನು ಸಂಹರಿಸಿ ಜಲದ ಮಧ್ಯದಲ್ಲಿ ಪವಡಿಸುತ್ತಾನೋ ಅಂತಹ ಜಲಶಾಯಿಯಾದ ಈಶ್ವರನನ್ನು ನಮಸ್ಕರಿಸುತ್ತೇನೆ.

ವ್ಯಾಖ್ಯಾನ ವಿಶೇಷ– ಸಂಹಾರಕನು ಭಗವಂತನೇ ಆಗಿದ್ದಾನೆ. ಶಿವನಲ್ಲಿ ನಿಂತು ವಟಪತ್ರಶಾಯಿಯಾದವನು ಶ್ರೀಹರಿಯೇ ಆಗಿದ್ದಾನೆ. ಈ ಅಂತರ್ಯಾಮಿ ರೂಪವನ್ನೇ ಇಲ್ಲಿಯೂ ಸ್ತುತಿಸಲಾಗಿದೆ.

ಪ್ರವಿಶ್ಯ ವದನಂ ರಾಹೋರ್ಯಃ ಸೋಮಂ ಪಿಬತೇ ನಿಶಿ ।
ಗ್ರಸತ್ಯರ್ಕಂ ಚ ಸ್ವರ್ಭಾನುರ್ಭೂತ್ವಾ ಮಾಂ ಸೋಽಭಿರಕ್ಷತು ॥೧೭೩॥

ಯಾವನು ರಾತ್ರಿಯಲ್ಲಿ ರಾಹುವಿನ ಮುಖವನ್ನು ಪ್ರವೇಶಿಸಿ ಚಂದ್ರನಲ್ಲಿರುವ ಅಮೃತವನ್ನು ಪಾನ ಮಾಡುತ್ತಾನೋ, ರಾಹುವಿನ ಅಂತರ್ಯಾಮಿಯಾಗಿ ಸೂರ್ಯನನ್ನು ನುಂಗುತ್ತಾನೋ ಅಂತಹ ಪರಮೇಶ್ವರನು ನನ್ನನ್ನು ರಕ್ಷಿಸಲಿ.

ಯೇ ಚಾನುಪತಿತಾ ಗರ್ಭಾ ಯಥಾ ಭಾಗಾನುಪಾಸತೇ ।
ನಮಸ್ತೇಭ್ಯಃ ಸ್ವಧಾ ಸ್ವಾಹಾ ಪ್ರಾಪ್ನುವಂತು ಮುದಂ ತು ತೇ ॥೧೭೪॥

ದೇವತೆಗಳು, ಪಿತೃಗಳು ಬಾಲಕರಂತೆ ಯಜ್ಞದಲ್ಲಿ ಯಾರ ಅನುಗ್ರಹದಿಂದ ಹವಿರ್ಭಾಗಗಳನ್ನು ಸ್ವೀಕರಿಸುತ್ತಾರೋ ಅಂತಹ ಸ್ವಾಹಾ, ಸ್ವಧಾಕಾರ ಮೂಲಕ ಹವಿಸ್ಸನ್ನು ಹೊಂದುವ ವ್ಯಕ್ತಿಗಳಿಗೆ ಹವಿಷ್ಯ ಪದಾರ್ಥಗಳು ದೊರೆತು ಸಂತೋಷಗೊಳ್ಳಲಿ.

ಯೇಽಂಗುಷ್ಠಮಾತ್ರಾಃ ಪುರುಷಾ ದೇಹಸ್ಥಾಃ ಸರ್ವದೇಹಿನಾಮ್ ।
ರಕ್ಷಂತು ತೇ ಹಿ ಮಾಂ ನಿತ್ಯಂ ನಿತ್ಯಂ ಚಾಪ್ಯಾಯಯಂತು ಮಾಮ್ ॥

ಸರ್ವಪ್ರಾಣಿಗಳ ದೇಹದಲ್ಲಿ ಅಂಗುಷ್ಠ ಪ್ರಮಾಣದ ಯಾವ ಪುರುಷರಿದ್ದಾರೋ ಅವರು ನಿತ್ಯವೂ ನನ್ನನ್ನು ರಕ್ಷಿಸಲಿ, ವೃದ್ಧಿಗೊಳಿಸಲಿ.

ಯೇನ ರೋದಂತಿ ದೇಹಸ್ಥಾ ದೇಹಿನೋ ರೋದಯಂತಿ ಚ ।
ಹರ್ಷಯಂತಿ ನ ಹೃಷ್ಯಂತಿ ನಮಸ್ತೇಭ್ಯೋಽಸ್ತು ನಿತ್ಯಶಃ ॥೧೭೬॥

ಯಾರು ದೇಹದಲ್ಲಿದ್ದು ರೋದನ ಮಾಡದೆ ಮತ್ತೊಬ್ಬರನ್ನು ರೋದಿಸುವಂತೆ ಮಾಡುತ್ತಾರೋ, ತಾವು ಸಂತೋಷಗೊಳ್ಳದೆ ಮತ್ತೊಬ್ಬರನ್ನು ಸಂತೋಷ ಪಡಿಸುತ್ತಾರೋ ಅಂತಹ ರುದ್ರರೂಪಗಳಿಗೆ ನಮಸ್ಕಾರ.

ಯೇ ನದೀಷು ಸಮುದ್ರೇಷು ಪರ್ವತೇಷು ಗುಹಾಸು ಚ ।
ವೃಕ್ಷಮೂಲೇಷು ಗೋಷ್ಠೇಷು ಕಾಂತಾರೇ ಗಹನೇಷು ಚ ॥೧೭೭॥

ಚತುಷ್ಪಥೇಷು ರಥ್ಯಾಸು ಚತ್ವರೇಷು ತಟೇಷು ಚ ।
ಹಸ್ತ್ಯಶ್ವರಥಶಾಲಾಸು ಜೀರ್ಣೋದ್ಯಾನಾಲಯೇಷು ಚ ॥೧೭೮॥

ಯೇಷು ಪಂಚಸು ಭೂತೇಷು ದಿಶಾಸು ವಿದಿಶಾಸು ಚ ।
ಚಂದ್ರಾರ್ಕಯೋರ್ಮಧ್ಯಗತಾ ಯೇ ಚ ಚಂದ್ರಾರ್ಕರಶ್ಮಿಷು ॥೧೭೯॥

ರಸಾತಲಗತಾ ಯೇ ಚ ಯೇ ಚ ತಸ್ಯೈ ಪರಂ ಗತಾಃ ।
ನಮಸ್ತೇಭ್ಯೋ ನಮಸ್ತೇಭ್ಯೋ ನಮಸ್ತೇಭ್ಯೋಽಸ್ತು ನಿತ್ಯಶಃ ॥೧೮೦॥

ನದಿಗಳು, ಸಮುದ್ರಗಳು, ಪರ್ವತಗಳು, ಗುಹೆಗಳು, ವೃಕ್ಷಮೂಲಗಳು, ಗೋಶಾಲೆಗಳು, ದುರ್ಗಮ ಮಾರ್ಗಗಳು, ಅರಣ್ಯಗಳು, ನಾಲ್ಕು ಬೀದಿ ಸೇರುವ ಚೌಕ ಮೂಲೆಗಳು, ಬೀದಿಗಳು, ಮನೆ ಮುಂಭಾಗದ ಅಂಗಳಗಳು, ತೀರಗಳು, ಗಜಶಾಲೆ, ಅಶ್ವಶಾಲೆ, ರಥಶಾಲೆ, ಪುರಾತನ ತೋಟ, ಜೀರ್ಣವಾದ ಗೃಹ, ಪಂಚಭೂತ, ದಿಕ್ಕು, ಉಪದಿಕ್ಕು, ಸೂರ್ಯ-ಚಂದ್ರರ ಮಧ್ಯದಲ್ಲಿರುವ ಪದಾರ್ಥಗಳು, ಸೂರ್ಯ-ಚಂದ್ರರ ಕಿರಣಗಳು, ರಸಾತಲ ಮತ್ತು ಅಚೆಯ ಪ್ರದೇಶಗಳು, ಇವುಗಳಲ್ಲಿರುವ ದೇವತೆಗಳು, ಈ ರೀತಿ ಎಲ್ಲ ಕಡೆ ವ್ಯಾಪಿಸಿರುವ, ಇವುಗಳ ಅಂತರ್ಯಾಮಿಯಾದ ರುದ್ರರೂಪಗಳಿಗೆ ನಮಸ್ಕರಿಸುತ್ತೇನೆ. ಪ್ರತಿದಿನವೂ ಅವರೆಲ್ಲರನ್ನೂ ನಮಸ್ಕರಿಸುತ್ತೇನೆ.

ಯೇಷಾಂ ನ ವಿದ್ಯತೇ ಸಂಖ್ಯಾ ಪ್ರಮಾಣಂ ರೂಪಮೇವ ಚ ।
ಅಸಂಖ್ಯೇಯಗುಣಾ ರುದ್ರಾ ನಮಸ್ತೇಭ್ಯೋಽಸ್ತು ನಿತ್ಯಶಃ ॥೧೮೧॥

ಯಾರ ಸಂಖ್ಯೆ, ಪ್ರಮಾಣ, ರೂಪಗಳಿಗೆ ಕೊನೆಯೇ ಇಲ್ಲವೋ, ಯಾರ ಗುಣಗಳನ್ನು ಎಣಿಸಲಾಗುವುದಿಲ್ಲವೋ ಅಂತಹ ರುದ್ರರಿಗೆ ನಿತ್ಯವೂ ನಮಸ್ಕಾರವಿರಲಿ.

ಸರ್ವಭೂತಕರೋ ಯಸ್ಮಾತ್ ಸರ್ವಭೂತಪತಿರ್ಹರಃ ।
ಸರ್ವಭೂತಾಂತರಾತ್ಮಾ ಚ ತೇನ ತ್ವಂ ನ ನಿಮಂತ್ರಿತಃ ॥೧೮೨॥

ಮಹದೇವನೇ, ನೀನು ಎಲ್ಲ ಪ್ರಾಣಿಗಳಿಗೂ ಜನ್ಮದಾತೃವು, ಎಲ್ಲ ಪ್ರಾಣಿಗಳ ಪಾಲಕನು, ಸಂಹಾರಕನು, ಅಂತರಾತ್ಮನು. ಆದುದರಿಂದಲೇ ನಿನಗೆ ಪ್ರತ್ಯೇಕವಾಗಿ ಆಮಂತ್ರಣ ಕೊಡಲಿಲ್ಲ.

ವ್ಯಾಖ್ಯಾನ ವಿಶೇಷ– ಇಷ್ಟೆಲ್ಲ ಚೇತನರು ಯಜ್ಞಕ್ಕೆ ಆಗಮಿಸಿರುವಾಗ ಅಂತರ್ಯಾಮಿಯಾದ ನೀನೂ ಬಂದಿರುವಿ ಎಂದು ಪ್ರತ್ಯೇಕವಾಗಿ ನಿನ್ನನ್ನು ಕರೆದರೆ ಅಂತರ್ಯಾಮಿ ಚಿಂತನೆಯಿಲ್ಲವೆಂಬ ಅಪಾರ್ಥವು ಬರುತ್ತದೆಂದು ನಿನ್ನನ್ನು ಕರೆಯಲಿಲ್ಲ ಎನ್ನುತ್ತಾನೆ. ಈ ದಕ್ಷ ಪ್ರಜಾಪತಿಯ ಅನುಸಂಧಾನವು ಬಹಳ ಮೌಲ್ಯಭರಿತವಾಗಿವೆ. ಸಮಸ್ತ ದೇವತೆಯನ್ನು ಅಂತರ್ಯಾಮಿ ಪೂಜೆಯಿಂದಲೇ ಆಹ್ವಾನಿಸಿರುತ್ತಾನೆ. ಹಿಂದೆ ತಾತ್ಕಾಲಿಕವಾಗಿ ರುದ್ರನಿಗೆ ಆಹ್ವಾನ ನೀಡದೆ ಅಪರಾಧ ಮಾಡಿದ್ದರೂ ದಕ್ಷಪ್ರಜಾಪತಿಯು ಅಂತರ್ಯಾಮಿ ಚಿಂತನೆಯಿಂದಲೇ ಸತ್ಕರ್ಮವನ್ನು ಆಚರಿಸುತ್ತಿದ್ದಾನೆ ಎನ್ನಲು ಈ ಮಾತು ಸ್ಪಷ್ಟ ದೃಷ್ಟಾಂತವಾಗಿದೆ.

ತ್ವಮೇವ ಹೀಜ್ಯಸೇ ಯಸ್ಮಾದ್ ಯಜ್ಞೈರ್ವಿವಿಧದಕ್ಷಿಣೈಃ ।
ತ್ವಮೇವ ಕರ್ತಾ ಸರ್ವಸ್ಯ ತೇನ ತ್ವಂ ನ ನಿಮಂತ್ರಿತಃ ॥೧೮೩॥

ಅನೇಕ ದಕ್ಷಿಣೆಗಳಿಂದ ಕೂಡಿಕೊಂಡು ನಿನ್ನನ್ನು ಉದ್ದೇಶವಾಗಿಯೇ ಎಲ್ಲರೂ ಯಾಗ ಮಾಡುತ್ತಾರೆ. ನೀನೇ ಯಾಗದ ಯಜಮಾನನು. ಆದ್ದರಿಂದ ನಿನ್ನನ್ನು ಪ್ರತ್ಯೇಕವಾಗಿ ಆಹ್ವಾನಿಸಲಿಲ್ಲ.

ಅಥವಾ ಮಾಯಯಾ ದೇವ ಸೂಕ್ಷ್ಮಯಾ ತವ ಮೋಹಿತಃ ।
ಏತಸ್ಮಾತ್ ಕಾರಣಾದ್ ವಾಽಪಿ ತೇನ ತ್ವಂ ನ ನಿಮಂತ್ರಿತಃ ॥೧೮೪॥

ಅಥವಾ ನಿನ್ನ ಮಾಯೆಯಿಂದ ಮೋಹಿತನಾದ ನಾನು ಅಸ್ವತಂತ್ರನಾದುದರಿಂದ ನಿನ್ನನ್ನು ಆಹ್ವಾನಿಸಲಿಲ್ಲ.

ಪ್ರಸೀದ ಮಮ ಭದ್ರಂ ತೇ ಭವ ಭಾವಗತಸ್ಯ ಮೇ ।
ತ್ವಯಿ ಮೇ ಹೃದಯಂ ದೇವ ತ್ವಯಿ ಬುದ್ಧಿರ್ಮನಸ್ತ್ವಯಿ ॥೧೮೫॥

ಪರಮೇಶ್ವರನೇ, ಮಂಗಳವಾಗಲಿ. ಭಕ್ತಿಯಿಂದ ನಿನ್ನನ್ನು ಶರಣು ಹೊಂದಿದ್ದೇನೆ.

ನನ್ನಲ್ಲಿ ನೀನು ಪ್ರಸನ್ನನಾಗು. ನನ್ನ ಮಾತು, ಮನಸ್ಸು, ಕೃತಿ, ಬುದ್ಧಿ ಎಲ್ಲವೂ ನಿನಗೆ ಅರ್ಪಿತವಾಗಿವೆ.

ಸ್ತುತ್ವೈವಂ ಸ ಮಹಾದೇವಂ ವಿರರಾಮ ಪ್ರಜಾಪತಿಃ ।
ಭಗವಾನಪಿ ಸುಪ್ರೀತಃ ಪುನರ್ದಕ್ಷಮಭಾಷತ ॥೧೮೬॥

ಹೀಗೆ ದಕ್ಷಪ್ರಜಾಪತಿಯು ಮಹರುದ್ರನನ್ನು ಬಗೆ ಬಗೆಯಾಗಿ ಸ್ತುತಿಸಿ ವಿರಮಿಸಿದನು. ಶಂಕರನು ಸುಪ್ರೀತನಾಗಿ ದಕ್ಷನಿಗೆ ಹೀಗೆ ಹೇಳಿದನು.

ಪರಿತುಷ್ಟೋಽಸ್ಮಿ ತೇ ದಕ್ಷ ಸ್ತವೇನಾನೇನ ಸುವ್ರತ ।
ಬಹುನಾತ್ರ ಕಿಮುಕ್ತೇನ ಮತ್ಸಮೀಪೇ ಭವಿಷ್ಯಸಿ ॥೧೮೭॥

ದಕ್ಷನೇ ನೀನು ಮಾಡಿದ ಸ್ತೋತ್ರದಿಂದ ನಾನು ಸುಪ್ರೀತನಾಗಿದ್ದೇನೆ. ಹೆಚ್ಚೇನು ಹೇಳಲಿ? ನೀನು ನನ್ನ ಮುಂಭಾಗದಲ್ಲೇ ಯಾವಾಗಲೂ ಇರುವಿ.

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಪ್ರಜಾಪತೇ ಮತ್ಪ್ರಸಾದಾತ್ ಫಲಭಾಗೀ ಭವಿಷ್ಯಸಿ ॥೧೮೮॥

ಪ್ರಜಾಪತಿಯೇ, ನನ್ನ ಅನುಗ್ರಹದಿಂದ ಸಾವಿರ ಅಶ್ವಮೇಧಯಾಗಗಳ, ನೂರು ವಾಜಪೇಯ ಯಜ್ಞಗಳ ಫಲಕ್ಕೆ ನೀನು ಭಾಗಿಯಾಗಿರುವೆ.

ಅಥೈನಮಬ್ರವೀದ್ ವಾಕ್ಯಂ ಲೋಕಸ್ಯಾಧಿಪತಿರ್ಭವಃ ।
ಆಶ್ವಾಸನಕರಂ ವಾಕ್ಯಂ ವಾಕ್ಯವಿದ್ ವಾಕ್ಯಸಮ್ಮಿತಮ್ ॥೧೮೯॥

ಹೀಗೆ ಹೇಳಿದ ಬಳಿಕ ವಾಕ್ಯ ಕೋವಿದನಾದ, ಲೋಕನಾಥನಾದ ಭಗವಾನ್ ಶಿವನು ಪುನಃ ದಕ್ಷನಿಗೆ ವಿಶ್ವಾಸ ಹುಟ್ಟುವಂತೆ ಯುಕ್ತಿಯುಕ್ತವಾದ ಸಮಂಜಸ ಮಾತುಗಳನ್ನು ಹೇಳಿದನು.

ದಕ್ಷ ದಕ್ಷ ನ ಕರ್ತವ್ಯೋ ಮನ್ಯುರ್ವಿಘ್ನಮಿಮಂ ಪ್ರತಿ ।
ಅಹಂ ಯಜ್ಞಹರಸ್ತುಭ್ಯಂ ದೃಷ್ಟಮೇತತ್ ಪುರಾತನಮ್ ॥೧೯೦॥

ದಕ್ಷನೇ, ನಿನ್ನ ಯಜ್ಞಕ್ಕೆ ವಿಘ್ನವುಂಟಾಯಿತೆಂದು ನೀನು ದುಃಖಿಸಬೇಕಿಲ್ಲ. ಹಿಂದಿನ ಕಲ್ಪದಲ್ಲಿ ನೀನು ಮಾಡಿದ ಯಜ್ಞವನ್ನು ನಾನೇ ಧ್ವಂಸಗೊಳಿಸಿದ್ದೆ. ಇಂದಿನ ಘಟನೆಯು ಹಿಂದಿನಂತೆಯೇ ನಡೆದಿದೆ.

ಭೂಯಶ್ಚ ತೇ ವರಂ ದದ್ಮಿ ತಂ ತ್ವಂ ಗೃಹ್ಣೀಷ್ವ ಸುವ್ರತ ।
ಪ್ರಸನ್ನವದನೋ ಭೂತ್ವಾ ತದಿಹೈಕಮನಾಃ ಶೃಣು ॥೧೯೧॥

ವ್ರತನಿಷ್ಠನೇ, ನಾನು ನಿನಗೆ ಪುನಃ ವರವನ್ನು ನೀಡುತ್ತೇನೆ. ನಾನು ನೀಡಲಿರುವ ವರವನ್ನು ಸ್ವೀಕರಿಸು. ಯಾವ ವರವನ್ನು ಕೊಡುತ್ತೇನೆಂದು ಕೇಳಿಸಿಕೊ.

ವೇದಾತ್ ಷಡಂಗಾದುದ್ಧೃತ್ಯ ಸಾಂಖ್ಯಯೋಗಾಚ್ಚ ಯುಕ್ತಿತಃ ।
ತಪಃ ಸುತಪ್ತಂ ವಿಪುಲಂ ದುಶ್ಚರಂ ದೇವದಾನವೈಃ ॥೧೯೨॥

ಹಿಂದೆ ಷಡಂಗದಿಂದ ಕೂಡಿದ ವೇದಗಳು, ಸಾಂಖ್ಯಯೋಗ, ತರ್ಕ ಇವುಗಳನ್ನು ಆಶ್ರಯಿಸಿ ಮಹಾತಪಸ್ಸನ್ನು ಯಾರು ಆಚರಿಸುತ್ತಿದ್ದರೋ ಅಂತಹ ತಪಸ್ಸನ್ನು ಬಹು ದೀರ್ಘಕಾಲ ದೇವ-ದಾನವರು ಶ್ರದ್ಧೆಯಿಂದ ಆಚರಿಸಿದರು. ಅದಕ್ಕಿಂತಲೂ ಶ್ರೇಷ್ಠವಾದ ತಪಸ್ಸನ್ನು ನಿನಗೆ ತಿಳಿಸುತ್ತೇನೆ.

ಅಪೂರ್ವಂ ಸರ್ವತೋಭದ್ರಂ ಸರ್ವತೋಮುಖಮವ್ಯಯಮ್ ।
ಅಬ್ರೈರ್ದಶಾಹಸಂಯುಕ್ತಂ ಗೂಢಮಪ್ರಾಜ್ಞನಿಂದಿತಮ್ ॥೧೯೩॥

ವರ್ಣಾಶ್ರಮಕೃತೈರ್ಧರ್ಮೈರ್ವಿಪರೀತಂ ಕ್ವಚಿತ್ ಸಮಮ್ ।
ಗತಾಂತೈರಧ್ಯವಸಿತಮತ್ಯಾಶ್ರಮಮಿದಂ ವ್ರತಮ್ ॥೧೯೪॥

ಹಿಂದೆ ಪಾಶುಪತವೆಂಬ ಶುಭಕರವಾದ ವ್ರತವನ್ನು ಆಚರಿಸಿದೆ. ಇದು ಅಪೂರ್ವವಾದ ವ್ರತವು. ಎಲ್ಲ ರೀತಿಯಿಂದಲೂ ಮಂಗಳಕರವಾದುದು. ಮೋಕ್ಷ ಸಾಧಕರಿಗೆ ಅವಿನಾಶಿಯಾದುದು. ಅನೇಕ ವರ್ಷಗಳ ಪ್ರಯತ್ನದಿಂದ ಸಾಧಿಸಲ್ಪಡುವ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಯಮಗಳಿಂದ ಕೂಡಿದ ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಭಕ್ತಿ ಎಂಬ ನಿಯಮಗಳಿಂದ ಕೂಡಿದ ಪ್ರಾಜ್ಞರಲ್ಲದ ಮೂಢರಿಂದ ನಿಂದಿಸಲ್ಪಡುವ, ಪ್ರಾಜ್ಞರಿಂದ ನಿಂದಿಸಲು ಅರ್ಹವಲ್ಲದ, ವರ್ಣಾಶ್ರಮ ಧರ್ಮಗಳಿಂದ ವಿಪರೀತವೆನಿಸಿದರೂ ಸರಿಯಾಗಿರುವ, ಅಧ್ಯಾತ್ಮ ಸಾಧಕರಿಂದ ಶುಭವಾದ ಪಾಶುಪತವೆಂಬ ಧರ್ಮವು ನನ್ನಿಂದ ಹೇಳಲ್ಪಟ್ಟಿದೆ. ಅದರ ಅನುಷ್ಠಾನದಿಂದ ವಿಪುಲವಾದ ಫಲವು ದೊರೆಯುತ್ತದೆ.

ಮಯಾ ಪಾಶುಪತಂ ದಕ್ಷ ಶುಭಮುತ್ಪಾದಿತಂ ಪುರಾ ।
ತಸ್ಯ ಚೀರ್ಣಸ್ಯ ತತ್ಸಮ್ಯಕ್ಫಲಂ ಭವತಿ ಪುಷ್ಕಲಮ್ ॥೧೯೫॥

ಅಂತಹ ಪಾಶುಪತ ವ್ರತದಲ್ಲಿ ಯಾವ ಫಲವು ಹೇಳಲ್ಪಟ್ಟಿದೆಯೋ ಅಂತಹ ಪುಷ್ಕಲವಾದ ಫಲವು ನಿನಗೆ ಉಂಟಾಗಲಿ.

ತಚ್ಚಾಸ್ತು ತೇ ಮಹಾಭಾಗ ತ್ಯಜ್ಯತಾಂ ಮಾನಸೋ ಜ್ವರಃ ।
ಏವಮುಕ್ತ್ವಾ ಮಹಾದೇವಃ ಸಪತ್ನೀಕಃ ಸಹಾನುಗಃ ।
ಅದರ್ಶನಮನುಪ್ರಾಪ್ತೋ ದಕ್ಷಸ್ಯಾಮಿತವಿಕ್ರಮಃ ॥೧೯೬॥

ಮಹಾಭಾಗನೇ, ನಿನ್ನ ಮಾನಸಿಕವಾದ ಚಿಂತೆಯನ್ನು ಬಿಟ್ಟುಬಿಡು. ಈ ರೀತಿಯಾಗಿ ಅಮಿತ ಪರಾಕ್ರಮಿಯಾದ ಮಹಾದೇವನು ದಕ್ಷನಿಗೆ ತಿಳಿಸಿ, ಪತ್ನಿಯಾದ ಪಾರ್ವತಿಯ ಜೊತೆಗೆ, ಅನುಚರರ ಜೊತೆಗೆ ಅದೃಶ್ಯನಾದನು.

ದಕ್ಷಪ್ರೋಕ್ತಂ ಸ್ತವಮಿಮಂ ಕೀರ್ತಯೇದ್ ಯಃ ಶೃಣೋತಿ ವಾ ।
ನಾಶುಭಂ ಪ್ರಾಪ್ನುಯಾತ್ ಕಿಂಚಿದ್ ದೀರ್ಘಮಾಯುರವಾಪ್ನುಯಾತ್ ॥

ದಕ್ಷನು ಹೇಳಿದ ಈ ಸ್ತೋತ್ರವನ್ನು ಯಾವನು ಅನುದಿನವೂ ಪಠಿಸುತ್ತಾನೋ, ಕೇಳುತ್ತಾನೋ ಅವನು ಎಂದಿಗೂ ಸ್ವಲ್ಪ ಪ್ರಮಾಣದ ಅಮಂಗಳವನ್ನು ಹೊಂದುವುದಿಲ್ಲ, ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಯಥಾ ಸರ್ವೇಷು ದೇವೇಷು ವರಿಷ್ಠೋ ಭಗವಾನ್ ಶಿವಃ ।
ತಥಾ ಸ್ತವೋ ವರಿಷ್ಠೋಽಯಂ ಸ್ತವಾನಾಂ ಬ್ರಹ್ಮಸಮ್ಮಿತಃ ॥೧೯೮॥

ಹೇಗೆ ಸಮಸ್ತ ವೇದಗಳಲ್ಲಿ ಷಡ್ಗುಣೈಶ್ವರ್ಯ ಸಂಪನ್ನನಾದ ಶಿವನು ಶ್ರೇಷ್ಠನೋ ಅದೇ ರೀತಿ ಈ ಸ್ತೋತ್ರವು ಎಲ್ಲ ಸ್ತೋತ್ರಗಳಿಗಿಂತಲೂ ಶ್ರೇಷ್ಠವಾದುದು, ವೇದಕ್ಕೆ ಸಮಾನವಾದುದು.

ವ್ಯಾಖ್ಯಾನ ವಿಶೇಷ– ಸ್ತೋತ್ರದ ಆರಂಭದಿಂದಲೇ ವೇದವು ಹೇಳಲ್ಪಟ್ಟಿದೆ. 'ಗಾಯಂತಿ ಗಾಯತ್ರಿಣೋ ಅರ್ಚಂತ್ಯರ್ಕಮರ್ಕಿಣಃ' ಮುಂತಾಗಿ ಹೇಳಲ್ಪಟ್ಟಿದೆ. ಆದ್ದರಿಂದ ವೇದದ ವ್ಯಾಖ್ಯಾನವೇ ಈ ಸ್ತುತಿ ಎನಿಸಿದೆ. ಶಿವನಲ್ಲಿರುವ ಭಗವಂತನ ಅಂತರ್ಯಾಮಿ ರೂಪವನ್ನೇ ಈ ಸ್ತೋತ್ರವು ಸ್ತುತಿಸುವುದರಿಂದ ದೇವರನ್ನೇ ಸ್ತುತಿಸಿದ ಫಲಕ್ಕೆ ಭಾಗಿಯಾಗುತ್ತಾನೆ ಎಂದು ಅರ್ಥ.

ಯಶೋರಾಜ್ಯಸುಖೈಶ್ವರ್ಯಕಾಮಾರ್ಥಧನಕಾಂಕ್ಷಿಭಿಃ ।
ಶ್ರೋತವ್ಯೋ ಭಕ್ತಿಮಾಸ್ಥಾಯ ವಿದ್ಯಾಕಾಮೈಶ್ಚ ಯತ್ನತಃ ॥೧೯೯॥

ಯಶಸ್ಸು, ರಾಜ್ಯ, ಸುಖ, ಐಶ್ವರ್ಯ, ಕಾಮ, ಅರ್ಥ, ಧನ, ವಿದ್ಯೆ ಇವುಗಳನ್ನು ಬಯಸುವವರು ಭಕ್ತಿಯಿಂದ ಈ ಸ್ತೋತ್ರವನ್ನು ಪ್ರಯತ್ನ ಪೂರ್ವಕವಾಗಿ ಕೇಳಿಸಿಕೊಳ್ಳಬೇಕು.

ವ್ಯಾಧಿತೋ ದುಃಖಿತೋ ದೀನಶ್ಚೋರಗ್ರಸ್ತೋ ಭಯಾರ್ದಿತಃ ।
ರಾಜಕಾರ್ಯಾಭಿಯುಕ್ತೋ ವಾ ಮುಚ್ಯತೇ ಮಹತೋ ಭಯಾತ್ ॥

ರೋಗಗ್ರಸ್ತನಾದವನು, ದುಃಖಿತನು, ಭೀತನೂ, ಚೋರಗ್ರಸ್ತನು, ಭಯ ಪೀಡಿತನು, ರಾಜಕಾರ್ಯದಲ್ಲಿ ನಿಯುಕ್ತನಾದವನು ಈ ಸ್ತೋತ್ರವನ್ನು ಭಕ್ತಿಯಿಂದ ಪಠಿಸಿದಲ್ಲಿ, ಕೇಳಿದಲ್ಲಿ ಮಹಾಭಯದಿಂದ ವಿಮುಕ್ತನಾಗುತ್ತಾನೆ.

ಅನೇನೈವ ತು ದೇಹೇನ ಗಣಾನಾಂ ಸಮತಾಂ ವ್ರಜೇತ್ ।
ತೇಜಸಾ ಯಶಸಾ ಚೈವ ಯುಕ್ತೋ ಭವತಿ ನಿರ್ಮಲಃ ॥೨೦೧॥

ಇದೇ ದೇಹದಲ್ಲಿಯೇ ಶಿವಗಣಗಳಿಗೆ ಸಮಾನನಾಗುತ್ತಾನೆ. ತೇಜಸ್ಸಿನಿಂದ, ಯಶಸ್ಸಿನಿಂದ ಯುಕ್ತನಾಗಿ ನಿರ್ಮಲನಾಗುತ್ತಾನೆ.

ನ ರಾಕ್ಷಸಾಃ ಪಿಶಾಚಾ ವಾ ನ ಭೂತಾ ನ ವಿನಾಯಕಾಃ ।
ವಿಘ್ನಂ ಕುರ್ಯುರ್ಗೃಹೇ ತಸ್ಯ ಯತ್ರಾಯಂ ಪಠ್ಯತೇ ಸ್ತವಃ ॥೨೦೨॥

ಯಾವನು ಈ ಸ್ತೋತ್ರವನ್ನು ಮನೆಯಲ್ಲಿ ಪಠಿಸುತ್ತಾನೋ ಅವನ ಕಾರ್ಯದಲ್ಲಿ ರಾಕ್ಷಸರು, ಪಿಶಾಚಿಗಳು, ಭೂತಗಳು, ವಿನಾಯಕರು ವಿಘ್ನವನ್ನುಂಟು ಮಾಡರು.

ಶೃಣುಯಾಚ್ಚೈವ ಯಾ ನಾರೀ ತದ್ಭಕ್ತಾ ಬ್ರಹ್ಮಚಾರಿಣೀ ।
ಪಿತೃಪಕ್ಷೇ ಮಾತೃಪಕ್ಷೇ ಪೂಜ್ಯಾ ಭವತಿ ದೇವವತ್ ॥೨೦೩॥

ಸ್ತ್ರೀಯು ಭಗವಾನ್ ಶಂಕರನಲ್ಲಿ ಭಕ್ತಿಯಿಂದ ಬ್ರಹ್ಮಚಾರಿಣಿಯಾಗಿ ಸ್ತೋತ್ರವನ್ನು ಕೇಳುವ ಅವಳು ತಂದೆಯ ಕಡೆಯವರಿಗೂ, ಪತಿಯ ಸಂಬಂಧಿಗಳಿಗೂ ದೇವತೆಯಂತೆ ಆದರಣೀಯಳಾಗುತ್ತಾಳೆ.

ಶೃಣುಯಾದ್ ಯಃ ಸ್ತವಂ ಕೃತ್ಸ್ನಂ ಕೀರ್ತಯೇದ್ ವಾ ಸಮಾಹಿತಃ ।
ತಸ್ಯ ಸರ್ವಾಣಿ ಕರ್ಮಾಣಿ ಸಿದ್ಧಿಂ ಗಚ್ಛಂತ್ಯಭೀಕ್ಷ್ಣಶಃ ॥೨೦೪॥

ಯಾರು ಏಕಾಗ್ರಚಿತ್ತರಾಗಿ ಈ ಸ್ತೋತ್ರವನ್ನು ಸಮಗ್ರವಾಗಿ ಪಠಿಸುತ್ತಾರೋ, ಹೇಳುತ್ತಾರೋ ಅವರ ಎಲ್ಲ ಕಾರ್ಯಗಳು ಸಿದ್ಧಿಸುತ್ತಲೇ ಇರುತ್ತವೆ.

ಮನಸಾ ಚಿಂತಿತಂ ಯಚ್ಚ ಯಚ್ಚ ವಾಚಾऽನುಕೀರ್ತಿತಮ್ ।
ಸರ್ವಂ ಸಂಪದ್ಯತೇ ತಸ್ಯ ಸ್ತವಸ್ಯಾಸ್ಯಾನುಕೀರ್ತನಾಮ್ ॥೨೦೫॥

ಯಾರು ಈ ಸ್ತೋತ್ರವನ್ನು ನಿರಂತರ ಪಠನ ಮಾಡುತ್ತಾರೋ ಅಂತಹ ವ್ಯಕ್ತಿಗೆ ಮನಸ್ಸಿನಲ್ಲಿ ಚಿಂತಿಸಿದ, ಮಾತಿನಿಂದ ಹೇಳಿದ ಎಲ್ಲ ಕಾರ್ಯಗಳು ಸಿದ್ಧಿಸುತ್ತವೆ.

ದೇವಸ್ಯ ಚ ಗುಹಸ್ಯಾಪಿ ದೇವ್ಯಾ ನಂದೀಶ್ವರಸ್ಯ ಚ ।
ಬಲಿಂ ಸುವಿಹಿತಂ ಕೃತ್ವಾ ದಮೇನ ನಿಯಮೇನ ಚ ॥೨೦೬॥

ತತಸ್ತು ಯುಕ್ತೋ ಗೃಹ್ಣೀಯಾನ್ನಾಮಾನ್ಯಾಶು ಯಥಾಕ್ರಮಮ್ ।
ಈಪ್ಸಿತಾಲ್ಲಭತೇ ಸೋರ್ಥಾನ್ ಭೋಗಾನ್ ಕಾಮಾಂಶ್ಚ ಮಾನವಃ ॥

ಯಾವನು ಇಂದ್ರಿಯನಿಗ್ರಹದಿಂದ ಯಮನಿಯಮಗಳನ್ನು ಪಾಲಿಸಿ ಮಹಾದೇವ, ಕಾರ್ತಿಕೇಯ, ಪಾರ್ವತಿದೇವಿ, ನಂದೀಶ್ವರ ಇವರನ್ನು ವಿಧಿಪೂರ್ವಕವಾಗಿ ಅಂತರ್ಯಾಮಿಭಾವದಿಂದ ಪೂಜಿಸುತ್ತಾನೋ, ಈ ಸ್ತೋತ್ರದಲ್ಲಿ ಹೇಳಿದ ನಾಮಗಳನ್ನು ಮನಸ್ಸಿನಲ್ಲಿ ಗ್ರಹಿಸಿ ಪಾರಾಯಣ ಮಾಡುತ್ತಾನೋ ಅವನು ಹಿಂದೆ ಹೇಳಿದ ಮನೋವಾಂಛಿತಗಳನ್ನು, ಸುಖಭೋಗಗಳನ್ನು, ಕಾಮನೆಗಳನ್ನು ಹೊಂದುತ್ತಾನೆ.

ಮೃತಶ್ಚ ಸ್ವರ್ಗಮಾಪ್ನೋತಿ ತಿರ್ಯಕ್ಷು ಚ ನ ಜಾಯತೇ ।
ಇತ್ಯಾಹ ಭಗವಾನ್ ವ್ಯಾಸಃ ಪರಾಶರಸುತಃ ಪ್ರಭುಃ ॥೨೦೮॥

ಮರಣವನ್ನು ಹೊಂದಿದ ಬಳಿಕ ಸ್ವರ್ಗವನ್ನು ಹೊಂದುತ್ತಾನೆ. ಪಶು-ಪಕ್ಷಿಗಳೇ ಮೊದಲಾದ ಯೋನಿಗಳಲ್ಲಿ ಜನ್ಮವನ್ನು ತಾಳುವುದಿಲ್ಲ. ಸಮರ್ಥರಾದ ಪರಾಶರರ ಮಕ್ಕಳಾದ ವ್ಯಾಸರೇ ಈ ಕ್ರಮದಲ್ಲಿ ಬೋಧಿಸಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನಿಗೆ ಭೀಷ್ಮರು, ಜ್ಞಾನವೇ ದುಃಖ ನೀಗಲು ಮಾರ್ಗವೆಂದು ತಿಳಿಸಲು ಸಮಂಗನಿಗೂ ನಾರದರಿಗೂ ನಡೆದ ಸಂವಾದವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಶೋಕಾದ್ ದುಃಖಾಚ್ಚ ಮೃತ್ಯೋಶ್ಚ ತ್ರಸ್ಯಂತಿ ಪ್ರಾಣಿನಃ ಸದಾ ।
ಉಭಯಂ ಮೇ ಯಥಾ ನ ಸ್ಯಾತ್ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ಲೋಕದಲ್ಲಿ ಪ್ರಾಣಿಗಳು ಯಾವಾಗಲೂ ಕಷ್ಟಕ್ಕೂ ದುಃಖಕ್ಕೂ, ಮರಣಕ್ಕೂ ಹೆದರುತ್ತಲೇ ಇರುತ್ತಾರೆ. ದುಃಖ-ಮೃತ್ಯುಗಳ ಭಯ ಉಂಟಾಗದಿರಲು ಏನು ಮಾಡಬೇಕೆಂದು ನನಗೆ ತಿಳಿಸು.

ಭೀಷ್ಮಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಂ ಸಮಂಗಸ್ಯ ಚ ಭಾರತ ॥೨॥

ಭೀಷ್ಮ– ಕುಮಾರನೇ, ಇದೇ ವಿಷಯದಲ್ಲಿ ಹಿಂದೆ ನಾರದರಿಗೂ ಸಮಂಗನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ನಿರೂಪಿಸುತ್ತಾರೆ. ಅದನ್ನು ಹೇಳುತ್ತೇನೆ, ಕೇಳು.

ನಾರದಃ

ಉರಸೇವ ಪ್ರಣಮಸೇ ಬಾಹುಭ್ಯಾಂ ತರಸೀವ ಚ ।
ಸಂಪ್ರಹಷ್ಟಮನಾ ನಿತ್ಯಂ ವಿಶೋಕ ಇವ ಲಕ್ಷ್ಯಸೇ ॥೩॥

ನಾರದ– ಒಮ್ಮೆ ನಾರದರು ಸಮಂಗನನ್ನು ಕಂಡು ಪ್ರಶ್ನಿಸಿದರು: ಪೂಜ್ಯರೇ, ಎಲ್ಲರೂ ತಮ್ಮ ತಲೆಯನ್ನು ಬಗ್ಗಿಸಿ ನಮಸ್ಕಾರ ಮಾಡುತ್ತಾರೆ. ನೀನು ನಿನ್ನ ಎದೆಯನ್ನು ನೆಲಕ್ಕೆ ಮುಟ್ಟಿಸುತ್ತಾ ದೀರ್ಘ ದಂಡ ನಮಸ್ಕಾರ ಮಾಡುತ್ತಿರುವಿ. ಯಾರ ಸಹಾಯವೂ ಇಲ್ಲದೆ ತೋಳುಗಳಿಂದಲೇ ಭವಸಾಗರವನ್ನು ಈಜಿಕೊಂಡು ದಾಟುವಂತೆ ಕಾಣುತ್ತಿರುವಿ. ಸಂತೋಷದ ಮನಸ್ಸಿನಿಂದ ದುಃಖವೇ ಇಲ್ಲದಿರುವವನಂತೆ ಕಾಣಿಸುತ್ತಿರುವಿ.

ಉದ್ವೇಗಂ ನೇಹ ತೇ ಕಿಂಚಿತ್ ಸುಸೂಕ್ಷ್ಮಮಪಿ ಲಕ್ಷಯೇ ।
ನಿತ್ಯತೃಪ್ತ ಇವ ಸ್ವಸ್ಥೋ ಬಾಲವಚ್ಚ ವಿಚೇಷ್ಟಸೇ ॥೪॥

ನಿನ್ನ ಮನಸ್ಸಿನಲ್ಲಿ ಸ್ವಲ್ಪವಾದ ಉದ್ವೇಗವನ್ನು ನಾನು ಸೂಕ್ಷ್ಮವಾಗಿ ಗಮನಿಸಿದರೂ ಕಾಣುತ್ತಿಲ್ಲ. ನಿತ್ಯತೃಪ್ತನಂತೆ ಸ್ವಸ್ಥನಾಗಿರುವಿ. ಬಾಲಕನಂತೆ ಸಂತೋಷವಾಗಿರುವಿ. ಇದು ಹೇಗೆ ಸಾಧ್ಯ ?

ಸಮಂಗಃ

ಭೂತಂ ಭವ್ಯಂ ಭವಿಷ್ಯಚ್ಚ ಸರ್ವಂ ಸತ್ತ್ವೇಷು ಮಾನದ ।
ತೇಷಾಂ ತತ್ತ್ವಾನಿ ಜಾನಾಮಿ ತತೋ ನ ವಿಮನಾ ಹ್ಯಹಮ್ ॥೫॥

ಸಮಂಗ– ನಾನು ಭೂತ-ಭವಿಷ್ಯತ್-ವರ್ತಮಾನಗಳ ಸ್ವರೂಪವನ್ನೂ, ಅವುಗಳ ಯಥಾರ್ಥವನ್ನು ತಿಳಿದಿರುತ್ತೇನೆ. ಇದರಿಂದಲೇ ನನ್ನ ಮನಸ್ಸಿನಲ್ಲಿ ಯಾವಾಗಲೂ ಉದ್ವೇಗವು ಉಂಟಾಗುವುದಿಲ್ಲ.

ಉಪಕ್ರಮಾನಹಂ ವೇದ ಪುನರೇವ ಫಲೋದಯಾನ್ ।
ಲೋಕೇ ಫಲಾನಿ ಚಿತ್ರಾಣಿ ತತೋ ನ ವಿಮನಾ ಹ್ಯಹಮ್ ॥೬॥

ನಾನು ಕರ್ಮಗಳ ಆರಂಭಗಳನ್ನು, ಅವುಗಳ ಫಲದ ಉದಯಕಾಲವನ್ನು ತಿಳಿದಿದ್ದೇನೆ. ಈ ಲೋಕದಲ್ಲಿ ಬಗೆ ಬಗೆಯ ವಿಚಿತ್ರಕರ್ಮಗಳು ಒದಗಿ ಬರುತ್ತವೆ ಎಂದು ತಿಳಿದಿದ್ದೇನೆ. ಈ ಕಾರಣದಿಂದಲೇ ಖಿನ್ನ ಮನಸ್ಕನಾಗಿಲ್ಲ.

ಅಗಾಧಾಶ್ಚಾಪ್ರತಿಷ್ಠಾಶ್ಚ ಗತಿಮಂತಶ್ಚ ನಾರದ ।
ಅಂಧಾ ಜಡಾಶ್ಚ ಜೀವಂತಿ ಪಶ್ಯಾಸ್ಮಾನಪಿ ಜೀವತಃ ॥೭॥

ನಾರದರೇ, ಜೀವನದ ಆಳ-ಅಗಲವನ್ನು ಕಾಣದ ಮೂರ್ಖರು, ಅದನ್ನು ಕಂಡಿರುವ ಜ್ಞಾನಿಗಳು, ಗಮನಶಕ್ತಿಯುಳ್ಳ ಜಂಗಮ ಪ್ರಾಣಿಗಳು, ಕುರುಡರು, ಜಡರು ಎಲ್ಲರೂ ಇಲ್ಲಿ ಜೀವಿಸುತ್ತಿದ್ದಾರೆ. ನಾವೂ ಇಲ್ಲಿ ಜೀವಿಸುತ್ತಿದ್ದೇವೆ.

ವಿಹಿತೇನೈವ ಜೀವಂತಿ ಅರೋಗಾಂಗಾ ದಿವೌಕಸಃ ।
ಬಲವಂತೋऽಬಲಾಶ್ಚೈವ ತದ್ವದಸ್ಮಾನ್ ಸಭಾಜಯ ॥೮॥

ರೋಗ ಇಲ್ಲದ ಶರೀರವುಳ್ಳ ದೇವತೆಗಳು, ಬಲಿಷ್ಠರು, ದುರ್ಬಲರು ಎಲ್ಲರೂ ಅವರವರ ಪ್ರಾರಬ್ಧ ಕರ್ಮಕ್ಕನುಗುಣವಾಗಿ ಜೀವಿಸುತ್ತಾರೆ. ಅವರವರ ಕರ್ಮ ಗತಿಗಳಿಗೆ ಅನುಗುಣವಾಗಿ ಹೇಗೆ ಎಲ್ಲರೂ ಜೀವಿಸುತ್ತಾರೋ ಅದರಂತೆ ನನ್ನನ್ನು ಭಾವಿಸು.

ಸಹಸ್ರಿಣಶ್ಚ ಜೀವಂತಿ ಜೀವಂತಿ ಶತಿನಸ್ತಥಾ ।
ಶಾಕೇನ ಚಾನ್ಯೇ ಜೀವಂತಿ ಪಶ್ಯಾಸ್ಮಾನಪಿ ಜೀವತಃ ॥೯॥

ನಾರದರೇ, ನೂರಿದ್ದವರು ಬದುಕುತ್ತಾರೆ, ಸಾವಿರವಿದ್ದವರೂ ಬದುಕುತ್ತಾರೆ. ಕೇವಲ ಶಾಕಗಳಿಂದಲೂ ಬದುಕುತ್ತಾರೆ. ಇದರಂತೆ ನಾವೂ ಹೀಗೆ ಬದುಕುತ್ತಿದ್ದೇವೆ ಎಂಬುದನ್ನು ನೋಡು.

ಯದಾ ನ ಶೋಚೇಮಹಿ ಕಿಂ ನು
ನ ಸ್ಯಾದ್ಧರ್ಮೇಣ ವಾ ನಾರದ ಕರ್ಮಣಾ ವಾ ।
ಕೃತಾಂತವಶ್ಯಾನಿ ಯದಾ ಸುಖಾನಿ
ದುಃಖಾನಿ ವಾ ಯನ್ನ ವಿಧರ್ಷಯಂತಿ ॥೧೦॥

ನಾರದರೇ, ನಾವು ದುಃಖಕ್ಕೆ ವಶರಾಗದಿದ್ದಲ್ಲಿ ನಮಗೆ ಧರ್ಮದಿಂದಲಾಗಲಿ, ಕರ್ಮದಿಂದಲಾಗಲಿ ಆಗಬೇಕಾದುದೇನು? ಸುಖ-ದುಃಖಗಳೆರಡು ಅಂತಹ ಸ್ವಭಾವವುಳ್ಳವುಗಳೇ ಆಗಿವೆ. ಅವೆರಡು ಕಾಲಾಧೀನವಾಗಿರುವಾಗ ಅವುಗಳ ವಿಷಯದಲ್ಲಿ ಕ್ಷಣಭಂಗುರದ ರಹಸ್ಯವನ್ನು ಅರಿತ ಬಳಿಕ ಜ್ಞಾನಿಯಾದವನು ದುಃಖಭಾಗಿಯಾಗಲಾರ.

ಯಸ್ಮೈ ಪ್ರಜ್ಞಾಂ ಕಥಯಂತೇ ಮನುಷ್ಯಾಃ
ಪ್ರಜ್ಞಾಮೂಲೋ ಹೀಂದ್ರಿಯಾಣಾಂ ಪ್ರಸಾದಃ ।
ಮುಹ್ಯಂತಿ ಶೋಚಂತಿ ಯದೇಂದ್ರಿಯಾಣಿ
ಪ್ರಜ್ಞಾಲಾಭೋ ನಾಸ್ತಿ ಮೂಢೇಂದ್ರಿಯಸ್ಯ ॥೧೧॥

ಪ್ರಾಜ್ಞರಾದ ಮನುಷ್ಯರು ಯಾವುದನ್ನು ಪ್ರಜ್ಞೆ ಎಂದು ಹೇಳುತ್ತಾರೋ ಆ ಪ್ರಜ್ಞೆಯೇ ಇಂದ್ರಿಯಗಳ ಪ್ರಸನ್ನತೆಗೆ ಮೂಲಕಾರಣವಾಗಿದೆ. ಪ್ರಜ್ಞೆಯಿಂದಲೇ ಶೋಕ,

ಮೋಹಗಳನ್ನು ಕಳೆದುಕೊಂಡು ಇಂದ್ರಿಯಸುಖವನ್ನು ಹೊಂದುತ್ತಾನೆ. ಪ್ರಜ್ಞೆ ಇಲ್ಲದ ಪಕ್ಷದಲ್ಲಿ ಇಂದ್ರಿಯಗಳು ಮೋಹಕ್ಕೆ ತುತ್ತಾಗಿ ದುಃಖಿಸುತ್ತವೆ. ಮೂರ್ಖನಿಗೆ ಪ್ರಜ್ಞಾಲಾಭವು ಆಗುವುದಿಲ್ಲ.

ಮೂಢಸ್ಯ ದರ್ಪಃ ಸ ಪುನರ್ಮೋಹ ಏವ
ಮೂಢಸ್ಯ ನಾಯಂ ನ ಪರೋಸ್ತಿ ಲೋಕಃ ।
ನ ಹ್ಯೇವ ದುಃಖಾನಿ ಸದಾ ಭವಂತಿ
ಸುಖಸ್ಯ ವಾ ನಿತ್ಯಶೋ ಲಾಭ ಏವ ॥೧೨॥

ಮೂರ್ಖನಾದ ಮನುಷ್ಯನಿಗೆ ದರ್ಪವೂ, ಅದರಿಂದ ಮೋಹವೂ ಉಂಟಾಗುತ್ತದೆ. ಅವನಿಗೆ ಈ ಲೋಕದಲ್ಲಿ ಸುಖವಿಲ್ಲ, ಪರಲೋಕದಲ್ಲಿಯೂ ಸುಖವಿಲ್ಲ. ನಿರಂತರ ಯಾವ ಪುರುಷನಿಗೂ ದುಃಖವಾಗಲಿ, ಸುಖವಾಗಲಿ ಇರುವುದಿಲ್ಲ.

ಭಾವಾತ್ಮಕಂ ಸಂಪರಿವರ್ತಮಾನಂ
ನ ಮಾದೃಶಃ ಸಂಜ್ವರಂ ಜಾತು ಕುರ್ಯಾತ್ ।
ಇಷ್ಟಾನ್ ಭೋಗಾನ್ನಾನುರುದ್ಧ್ಯೇತ್ ಸುಖಂ ವಾ
ನ ಚಿಂತಯೇದ್ ದುಃಖಮಭ್ಯಾಗತಂ ವಾ ॥೧೩॥

ಸಂಸಾರವೆಂಬುದು ಕ್ಷಣಕ್ಷಣಕ್ಕೂ ಪರಿವರ್ತನೆಯನ್ನು ಹೊಂದುತ್ತಿರುತ್ತದೆ. ಇದನ್ನು ಕಾಣುತ್ತಿರುವ ನನ್ನಂತಹ ಮನುಷ್ಯನು ಸುಖ-ದುಃಖದ ವಿಷಯದಲ್ಲಿ ಎಂದಿಗೂ ದುಃಖ ಪಡುವುದಿಲ್ಲ. ಇಷ್ಟಭೋಗಗಳನ್ನಾಗಲಿ, ಸುಖವನ್ನಾಗಲಿ ಅನುಸರಿಸಿಕೊಂಡು ಹೋಗುವುದಿಲ್ಲ. ದುಃಖ ಬಂದರೂ ಚಿಂತಿಸುವುದಿಲ್ಲ.

ಸಮಾಹಿತೋ ನ ಸ್ಪೃಹಯೇತ್ ಪರೇಷಾಂ
ನಾನಾಗತಂ ನಾಭಿನಂದೇತ ಲಾಭಮ್ ।
ನ ಚಾಪಿ ಹೃಷ್ಯೇದ್ ವಿಪುಲೇರ್ಥಲಾಭೇ
ತಥಾರ್ಥನಾಶೇ ಚ ನ ವೈ ವಿಷೀದೇತ್ ॥೧೪॥

ಮನೋನಿಗ್ರಹಿಯು ಇತರರ ಸ್ಥಿತಿಗೆ ಆಸೆಪಡಬಾರದು. ಮುಂದೆ ಒದಗುವಂತಹ

ಅರ್ಥಲಾಭಕ್ಕಾಗಿ ಸಂತಸ ಪಡಬಾರದು. ಸಂಪತ್ತಿನ ಲಾಭದಿಂದ ಸುಖ, ನಷ್ಟದಿಂದ ವಿಷಾದ, ಎರಡನ್ನೂ ಹೊಂದಬಾರದು.

ನ ಬಾಂಧವಾ ನ ಚ ವಿತ್ತಂ ನ ಕೌಲೀ
ನ ಚ ಶ್ರುತಂ ನ ಚ ಮಂತ್ರಾ ನ ವೀರ್ಯಮ್ ।
ದುಃಖಾತ್ ತ್ರಾತುಂ ಸರ್ವ ಏವೋತ್ಸಹಂತೇ
ಪರತ್ರ ಶೀಲೇ ನ ತು ಯಾಂತಿ ಶಾಂತಿಮ್ ॥೧೫॥

ಬಂಧು-ಬಾಂಧವರು, ಉತ್ತಮ ಕುಲ, ಶಾಸ್ತ್ರಾಧ್ಯಯನ, ಮಂತ್ರ, ಪರಾಕ್ರಮ ಇವುಗಳು ಒಟ್ಟಾದರೂ ಮನುಷ್ಯನನ್ನು ದುಃಖದಿಂದ ಪಾರು ಮಾಡಲು ಸಮರ್ಥವಾಗುವುದಿಲ್ಲ. ಸಚ್ಚಾರಿತ್ರ್ಯದಿಂದ ಮನುಷ್ಯನು ದುಃಖವನ್ನು ಜಯಿಸಿ ಪರಲೋಕದಲ್ಲೂ ಸುಖವನ್ನು ಹೊಂದುತ್ತಾನೆ.

ನಾಸ್ತಿ ಬುದ್ಧಿರಯುಕ್ತಸ್ಯ ನಾಯೋಗಾದ್ ವಿದ್ಯತೇ ಸುಖಮ್ ।
ಧೃತಿಶ್ಚ ದುಃಖತ್ಯಾಗಶ್ಚಾಪ್ಯುಭಯಂ ನಃ ಸುಖೋದಯಮ್ ॥೧೬॥

ಯಾವನ ಬುದ್ಧಿಯು ಯೋಗೋಪಾಯವನ್ನು ಹೊಂದಿರುವುದಿಲ್ಲವೋ ಅವನಿಗೆ ಸುಖ-ದುಃಖಗಳಲ್ಲಿ ಸಮತ್ವ ಬುದ್ಧಿಯು ಉಂಟಾಗುವುದಿಲ್ಲ. ಜ್ಞಾನಯೋಗವಿಲ್ಲದೆ ಸುಖವಿಲ್ಲ. ಧೈರ್ಯ-ದುಃಖತ್ಯಾಗ ಈ ಎರಡು ಶಾಶ್ವತ ಸುಖಕ್ಕೆ ಕಾರಣವಾಗುತ್ತವೆ.

ಪ್ರಿಯಂ ಹಿ ಹರ್ಷಜನನಂ ಹರ್ಷ ಉತ್ಸೇಕವರ್ಧನಃ ।
ಉತ್ಸೇಕೋ ನರಕಾಯೈವ ತಸ್ಮಾತ್ತಂ ಸಂತ್ಯಜಾಮ್ಯಹಮ್ ॥೧೭॥

ಪ್ರಿಯವಸ್ತುವಿನ ಲಾಭದಿಂದ ಸುಖ ಉಂಟಾಗುತ್ತದೆ. ಅದರಿಂದ ಅಭಿಮಾನ, ಅಭಿಮಾನದಿಂದ ನರಕ. ಇದನ್ನು ಅರಿತು ಇವೆಲ್ಲವನ್ನೂ ಪರಿತ್ಯಜಿಸಿದ್ದೇನೆ.

ಏತಾನ್ ಶೋಕಭಯೋತ್ಸೇಕಾನ್ಮೋಹನಾನ್ ಸುಖದುಃಖಯೋಃ ।
ಪಶ್ಯಾಮಿ ಸಾಕ್ಷಿವಲ್ಲೋಕೇ ದೇಹಸ್ಯಾಸ್ಯ ವಿಚೇಷ್ಟನಾತ್ ॥೧೮॥

ಶೋಕ, ಭಯ, ಅಭಿಮಾನಗಳು ಜೀವರನ್ನು ಸುಖ-ದುಃಖಗಳಲ್ಲಿ ಬಂಧಿಸಿ ಮೋಹಗೊಳಿಸುತ್ತವೆ. ಆದ್ದರಿಂದ ದೇಹದ ಚೇಷ್ಟೆ ಇರುವ ತನಕ ಈ ಪ್ರಪಂಚದ ವ್ಯಾಪಾರಗಳನ್ನು ಸಾಕ್ಷಿಯಾಗಿ ನೋಡುತ್ತಿರುತ್ತೇನೆ.

ಅರ್ಥಕಾಮೌ ಪರಿತ್ಯಜ್ಯ ವಿಶೋಕೋ ವಿಗತಜ್ವರಃ ।
ತೃಷ್ಣಾಮೋಹೌ ತು ಸಂತ್ಯಜ್ಯ ಚರಾಮಿ ಪೃಥಿವೀಮಿಮಾಮ್ ॥೧೯॥

ಅರ್ಥ-ಕಾಮಗಳನ್ನು ತ್ಯಜಿಸಿ, ಅತಿಯಾದ ಆಸೆ-ಮೋಹಗಳನ್ನು ಬಿಟ್ಟು, ಶೋಕ ಸಂತಾಪಗಳಿಂದ ಮುಕ್ತನಾಗಿ ಜಗತ್ತಿನಲ್ಲಿ ಸಂಚರಿಸುತ್ತೇನೆ.

ನ ಮೃತ್ಯುತೋ ನ ಚಾಧರ್ಮಾನ್ನ ಲೋಭಾನ್ನ ಕುತಶ್ಚನ ।
ಪೀತಾಮೃತಸ್ಯೇವಾತ್ಯಂತಮಿಹ ಚಾಮುತ್ರ ವಾ ಭಯಮ್ ॥೨೦॥

ಹೇಗೆ ಅಮೃತ ಕುಡಿದವನಿಗೆ ಮರಣ ಭಯವಿಲ್ಲವೋ ಅದರಂತೆ ನಾನು ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ, ಮೃತ್ಯುವಿಗಾಗಲೀ, ಲೋಕಗಳಿಗಾಗಲೀ, ಅಧರ್ಮಕ್ಕಾಗಲೀ ಎಂದೂ ಭಯಪಡುವುದಿಲ್ಲ.

ಏತದ್ಬ್ರಹ್ಮನ್ ವಿಜಾನಾಮಿ ಮಹತ್ಕೃತ್ವಾ ತಪೋಽವ್ಯಯಮ್ ।
ತೇನ ನಾರದ ಸಂಪ್ರಾಪ್ತೋ ನ ಮಾಂ ಶೋಕಃ ಪ್ರಬಾಧತೇ ॥೨೧॥

ಬ್ರಾಹ್ಮಣೋತ್ತಮರೇ, ಅಕ್ಷಯವಾದ ತಪಸ್ಸನ್ನು ಮಾಡಿ ಈ ಮಹಾಜ್ಞಾನವನ್ನು ಸಂಪಾದಿಸಿರುತ್ತೇನೆ. ಅದರಿಂದ ಶೋಕವು ಒದಗಿದರೂ ಅದು ನನ್ನನ್ನು ಬಾಧಿಸದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನವಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತನೆಯ ಅಧ್ಯಾಯ

ನಾರದ-ಗಾಲವರ ಸಂವಾದ.

ಯುಧಿಷ್ಠಿರಃ

ಅತತ್ತ್ವಜ್ಞಸ್ಯ ಶಾಸ್ತ್ರಾಣಾಂ ಸತತಂ ಸಂಶಯಾತ್ಮನಃ ।
ಅಕೃತವ್ಯವಸಾಯಸ್ಯ ಶ್ರೇಯೋ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ಶಾಸ್ತ್ರಾರ್ಥವನ್ನು ಅರಿಯದವನಿಗೆ, ಎಲ್ಲೆಡೆಯೂ

ಸಂಶಯಬುದ್ಧಿಯುಳ್ಳವನಿಗೆ, ಪರಲೋಕ ಸಾಧನೆಗಾಗಿ ಪ್ರಯತ್ನವನ್ನೇ ಮಾಡದವನಿಗೆ ಶ್ರೇಯಸ್ಸು ಹೇಗೆ ಉಂಟಾಗುತ್ತದೆ? ತಿಳಿಸು.

ಭೀಷ್ಮಃ

ಗುರುಪೂಜಾ ಚ ಸತತಂ ವೃದ್ಧಾನಾಂ ಪರ್ಯುಪಾಸನಮ್ ।
ಶ್ರವಣಂ ಚೈವ ವಿದ್ಯಾನಾಂ ಕೂಟಸ್ಥಂ ಶ್ರೇಯ ಉಚ್ಯತೇ ॥೨॥

ಭೀಷ್ಮ– ಯುಧಿಷ್ಠಿರನೇ, ಯಾವಾಗಲೂ ಹಿರಿಯರ ಪೂಜೆ, ವೃದ್ಧರ ಸೇವೆ, ಶಾಸ್ತ್ರ ಶ್ರವಣ - ಮೂರು ಶ್ರೇಯಸ್ಸಿಗೆ ಪರಮ ಸಾಧನವೆಂದು ಹೇಳಲ್ಪಟ್ಟಿದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗಾಲವಸ್ಯ ಚ ಸಂವಾದಂ ದೇವರ್ಷೇರ್ನಾರದಸ್ಯ ಚ ॥೩॥

ಈ ವಿಷಯದಲ್ಲಿ ದೇವರ್ಷಿಗಳಾದ ನಾರದರಿಗೂ ಗಾಲವರಿಗೂ ನಡೆದ ಪುರಾತನವಾದ ಇತಿಹಾಸ ರೂಪ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ವೀತಮೋಹಕ್ಲಮಂ ವಿಪ್ರಂ ಜ್ಞಾನತೃಪ್ತಂ ಜಿತೇಂದ್ರಿಯಮ್ ।
ಶ್ರೇಯಸ್ಕಾಮಂ ಜಿತಾತ್ಮಾನಂ ನಾರದಂ ಗಾಲವೋಽಬ್ರವೀತ್ ॥೪॥

ಒಮ್ಮೆ ಜಿತೇಂದ್ರಿಯರಾದ, ಶ್ರೇಯಸ್ಕಾಮರಾದ ಗಾಲವರು ದೇವತಾ ವರ್ಚಸ್ಸಿನಿಂದ ಬೆಳಗುತ್ತಿರುವ, ಮೋಹದ ಆಯಾಸವನ್ನು ಗೆದ್ದಿರುವ, ಜ್ಞಾನತೃಪ್ತರಾದ, ಜಿತೇಂದ್ರಿಯರಾದ ನಾರದರನ್ನು ಕಂಡು ಹೀಗೆ ಹೇಳಿದರು.

ಯೈಃ ಕೈಶ್ಚಿತ್ ಸಮ್ಮತೋ ಲೋಕೇ ಗುಣೈಸ್ತು ಪುರುಷೋ ನೃಪು ।
ಭವತ್ಯನಪಗಾನ್ ಸರ್ವಾಂಸ್ತಾನ್ ಗುಣಾಲ್ಲಕ್ಷಯಾಮ್ಯಹಮ್ ॥೫॥

ಮುನಿಶ್ರೇಷ್ಠರೇ, ಒಬ್ಬ ಮನುಷ್ಯನು ಪ್ರಪಂಚದಲ್ಲಿ ಯಾವ ಗುಣಗಳಿಂದ ಸನ್ಮಾನವನ್ನು ಹೊಂದುತ್ತಾನೋ ಅಂತಹ ಗುಣಗಳೆಲ್ಲವೂ ನಿಮ್ಮಲ್ಲಿ ಸ್ಥಿರವಾಗಿರುವುದನ್ನು ನಾನು ನೋಡುತ್ತಿದ್ದೇನೆ.

ಭವಾನೇವಂವಿಧೋಸ್ಮಾಕಂ ಸಂಶಯಂ ಛೇತ್ತುಮರ್ಹತಿ ।
ಅಮೂಢಶ್ಚಿರಮೂಢಾನಾಂ ಲೋಕತತ್ತ್ವಮಜಾನತಾಮ್ ॥೬॥

ಇಂತಹ ಗುಣಪೂರ್ಣರಾದ, ಜ್ಞಾನಿಗಳಾದ ನೀವು, ಸರಿಯಾಗಿ ತತ್ತ್ವಾರ್ಥವನ್ನು ಅರಿಯದ, ಬಹಳ ಕಾಲದಿಂದ ಮೂರ್ಖರಾಗಿರುವ, ಲೋಕತತ್ತ್ವವನ್ನು ಅರಿಯದಿರುವ ನಮ್ಮಂತಹವರ ಸಂಶಯವನ್ನು ಪರಿಹರಿಸಲು ಸಮರ್ಥರಾಗಿರುವಿರಿ.

ಜ್ಞಾನೇ ಹ್ಯೇವಂ ಪ್ರವೃತ್ತಿಃ ಸ್ಯಾತ್ ಕಾರ್ಯಾಕಾರ್ಯೇ ವಿಜಾನತಃ ।
ಯತ್ ಕಾರ್ಯಂ ನ ವ್ಯವಸ್ಯಾಮಸ್ತದ್ಭವಾನ್ ವಕ್ತುಮರ್ಹತಿ ॥೭॥

ನಾರದರೇ, ಶಾಸ್ತ್ರಗಳಲ್ಲಿ ಅನೇಕ ವಿಧವಾದ ಮಾಡಬೇಕಾದ ಕರ್ಮಗಳು ನಿರೂಪಿಸಲ್ಪಟ್ಟಿವೆ. ಆದರೆ ಆ ಕರ್ಮಗಳಲ್ಲಿ ಈ ಕರ್ಮವನ್ನು ಮಾಡಿದರೆ ಜ್ಞಾನ ಮಾರ್ಗದಲ್ಲಿ ಪ್ರವೃತ್ತಿ ಉಂಟಾಗುತ್ತದೆ ಎಂಬುದನ್ನು ನಿಶ್ಚಯಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಯಾವ ಕಾರ್ಯದಿಂದ ಜ್ಞಾನಮಾರ್ಗವನ್ನು ಅವಲಂಬಿಸಲು ಸಾಧ್ಯವಾಗುತ್ತದೆ ಎಂಬುದನ್ನು, ಯಾವ ಕಾರ್ಯವನ್ನು ಮಾಡಬಾರದೆಂಬುದನ್ನು ನೀವೇ ನಿರ್ಣಯಿಸಿರಿ.

ಭಗವನ್ನಾಶ್ರಮಾಃ ಸರ್ವೇ ಪೃಥಗಾಚಾರದರ್ಶಿನಃ ।
ಇದಂ ಶ್ರೇಯ ಇದಂ ಶ್ರೇಯ ಇತಿ ನಾನಾಪ್ರಧಾವಿತಾಃ ॥೮॥

ಪೂಜ್ಯರೇ, ಎಲ್ಲ ಆಶ್ರಮಗಳು ಪ್ರತ್ಯೇಕ ಪ್ರತ್ಯೇಕವಾಗಿ ಬೇರೆ ಬೇರೆ ಸದಾಚಾರಗಳನ್ನೇ ಸೂಚಿಸುತ್ತಿವೆ. ಇದು ಶ್ರೇಯಸ್ಸು, ಇದು ಶ್ರೇಯಸ್ಸು ಎಂಬುದಾಗಿ ಅನೇಕ ಪ್ರಕಾರವಾಗಿ ಕವಲೊಡೆದಿವೆ.

ತಾಂಸ್ತು ವಿಪ್ರಸ್ಥಿತಾಂದಷ್ಟ್ವಾ ಶಾಸ್ತ್ರೈಃ ಶಾಸ್ತ್ರಾಭಿನಂದಿನಃ ।
ಸ್ವಶಾಸ್ತ್ರೈಃ ಪರಿತುಷ್ಟಾಂಶ್ಚ ಶ್ರೇಯೋ ನೋಪಲಭಾಮಹೇ ॥೯॥

ಶಾಸ್ತ್ರದಿಂದ ಪ್ರಚೋದಿತರಾದ ಅನೇಕರು ಅನೇಕ ಮಾರ್ಗಗಳನ್ನು ಹಿಡಿದು ತಾವು ಅನುಸರಿಸುವ ಮಾರ್ಗವೇ ಶ್ರೇಯೋಮಾರ್ಗವೆಂದು ಪ್ರಶಂಸಿಸುತ್ತಾರೆ. ಇನ್ನೊಬ್ಬರಿಗೂ ಅದರಲ್ಲಿಯೇ ಪ್ರಚೋದನೆ ಮಾಡಿ ತೃಪ್ತರಾಗುತ್ತಾರೆ. ಆದರೆ ಶ್ರೇಯಸ್ಸಿನ ಮಾರ್ಗ ಇದು ಎಂಬುದನ್ನು ನಾವು ನಿಶ್ಚಿತವಾಗಿ ತಿಳಿಯುತ್ತಿಲ್ಲ.

ಶಾಸ್ತ್ರಂ ಯದಿ ಭವೇದೇಕಂ ವ್ಯಕ್ತಂ ಶ್ರೇಯೋ ಭವೇತ್ ತದಾ ।
ಶಾಸ್ತ್ರೈಶ್ಚ ಬಹುಭಿರ್ಗೂಯಃ ಶ್ರೇಯೋ ಗುಹ್ಯಂ ಪ್ರವೇಶಿತಮ್ ॥೧೦॥

ಶಾಸ್ತ್ರವು ಒಂದೇ ಆಗಿದ್ದಲ್ಲಿ ಶ್ರೇಯಸ್ಸಿನ ಉಪಾಯವು ಒಂದೇ ಆಗಬೇಕಲ್ಲವೆ? ಶಾಸ್ತ್ರಗಳು ಬಹಳವಾಗಿದ್ದು ಶ್ರೇಯಸ್ಸಾಧನೆಯ ಮಾರ್ಗವು ರಹಸ್ಯವಾಗಿಯೇ ಮುಚ್ಚಿಡಲ್ಪಟ್ಟಿದೆ.

ಏತಸ್ಮಾತ್ ಕಾರಣಾಚ್ಛ್ರೇಯಃ ಕಲಿಲಂ ಪ್ರತಿಭಾತಿ ಮಾಮ್ ।
ಬ್ರವೀತು ಭಗವಾಂಸ್ತನ್ಮೇ ಉಪಸನ್ನೋಽಸ್ಮ್ಯಧೀಹಿ ಭೋಃ ॥೧೧॥

ಶಾಸ್ತ್ರಗಳಲ್ಲಿಯೇ ಸಾತ್ವಿಕ, ರಾಜಸ, ತಾಮಸ ಭೇದಗಳಿಂದ, ಷಡ್ದರ್ಶನ ಭೇದಗಳಿಂದ ಬಹುತ್ವ ಇರುವುದರಿಂದಲೇ ಶ್ರೇಯಸ್ಸಿನ ಮಾರ್ಗವು ಮುಚ್ಚಿಹೋಗಿದೆ ಎಂದು ನನಗೆ ತೋರುತ್ತಿದೆ. ಆದ್ದರಿಂದ ನಾನು ನಿಮ್ಮ ಶಿಷ್ಯನಾಗಿದ್ದೇನೆ. ಪೂಜ್ಯರಾದ ನೀವು ಶ್ರೇಯೋಮಾರ್ಗವನ್ನು ನನಗೆ ಉಪದೇಶಿಸಿ.

ನಾರದಃ

ಆಶ್ರಮಾಸ್ತಾತ ಚತ್ವಾರೋ ಯಥಾಸಂಕಲ್ಪಿತಾಃ ಪೃಥಕ್ ।
ತಾನ್ ಸರ್ವಾನನುಪಶ್ಯ ತ್ವಂ ಸಮಾಶ್ರಿತ್ಯೈವ ಗಾಲವ ॥೧೨॥

ನಾರದ– ಗಾಲವರೇ, ನಾಲ್ಕು ಆಶ್ರಮಗಳಿವೆ. ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಧರ್ಮದ ವ್ಯವಸ್ಥೆಯೂ ಇದೆ. ನೀನು ಜ್ಞಾನವನ್ನು ಆಶ್ರಯಿಸಿ ಆಶ್ರಮ ತತ್ತ್ವಗಳನ್ನು ಚೆನ್ನಾಗಿ ಪರಿಶೀಲಿಸು.

ತೇಷಾಂ ತೇಷಾಂ ತಥಾ ಹಿ ತ್ವಮಾಶ್ರಮಾಣಾಂ ತತಸ್ತತಃ ।
ನಾನಾರೂಪಗುಣೋದ್ದೇಶಂ ಪಶ್ಯ ವಿಪ್ರಸ್ಥಿತಂ ಪೃಥಕ್ ।
ನಯಂತಿ ಚೈವ ತೇ ಸಮ್ಯಗಭಿಪ್ರೇತಮಸಂಶಯಮ್ ॥೧೩॥

ವಿಪ್ರಶ್ರೇಷ್ಠನೇ, ಯಾವ ಯಾವ ಆಶ್ರಮಗಳಿಗೆ ಗುಣವೆನಿಸಿದ ಯಾವ ಯಾವ ಧರ್ಮಗಳು ಹೇಳಿವೆಯೋ ಆ ಎಲ್ಲ ಧರ್ಮಗಳಿಗೂ ಪ್ರತ್ಯೇಕವಾದ ಅಸ್ತಿತ್ವವಿದೆ. ಇದನ್ನು ನೀನು ಅರ್ಥೈಸಿಕೊ. ಚೆನ್ನಾಗಿ ವಿಮರ್ಶಿಸಿದಾಗ ಆ ಧರ್ಮಗಳೇ ನಿನ್ನನ್ನು ಉನ್ನತಿಗೆ ಕರೆದುಕೊಂಡು ಹೋಗುತ್ತವೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಋಜು ಪಶ್ಯಂಸ್ತಥಾ ಸಮ್ಯಗಾಶ್ರಮಾಣಾಂ ಪರಾಂ ಗತಿಮ್ ।
ಯತ್ತು ನಿಃಶ್ರೇಯಸಂ ಸಮ್ಯಕ್ ತಚ್ಚೈವಾಸಂಶಯಾತ್ಮಕಮ್ ॥೧೪॥

ಆಶ್ರಮಗಳ ಶ್ರೇಷ್ಠವಾದ ಗತಿಯನ್ನು ಸರಿಯಾದ ಮಾರ್ಗದಲ್ಲಿ ಕಂಡವನಿಗೆ ಕಲ್ಯಾಣಕರವಾದ ಶ್ರೇಯಸ್ಸಿನ ಸಾಧನಾಮಾರ್ಗವು ನಿಶ್ಚಿತವಾಗಿಯೂ ದೊರೆಯುತ್ತದೆ.

ಅನುಗ್ರಹಂ ಚ ಮಿತ್ರಾಣಾಮಮಿತ್ರಾಣಾಂ ಚ ನಿಗ್ರಹಮ್ ।
ಸಂಗ್ರಹಂ ಚ ತ್ರಿವರ್ಗಸ್ಯ ಶ್ರೇಯ ಆಹುರ್ಮನೀಷಿಣಃ ॥೧೫॥

ಮಿತ್ರರಾದವರಿಗೆ ಉಪಕರಿಸುವುದು, ಶತ್ರುಗಳನ್ನು ನಿಗ್ರಹಿಸುವುದು, ಧರ್ಮ ಅರ್ಥ-ಕಾಮಗಳನ್ನು ಸಂಗ್ರಹಿಸುವುದು ಶ್ರೇಯೋಮಾರ್ಗಗಳೆಂದು ಜ್ಞಾನಿಗಳು ಹೇಳುತ್ತಾರೆ.

ನಿವೃತ್ತಿಃ ಕರ್ಮಣಃ ಪಾಪಾತ್ ಸತತಂ ಪುಣ್ಯಶೀಲತಾ ।
ಸದ್ಭಿಶ್ಚ ಸಮುದಾಚಾರಃ ಶ್ರೇಯ ಏತದಸಂಶಯಮ್ ॥೧೬॥

ಪಾಪಕರ್ಮದಿಂದ ದೂರವಿರಬೇಕು, ಪುಣ್ಯಕರ್ಮಗಳನ್ನು ಆಚರಿಸುತ್ತಿರಬೇಕು, ಸಜ್ಜನರ ಸಹವಾಸವಿರಬೇಕು, ಸದಾಚಾರಿಗಳಾಗಿರಬೇಕು- ಇವೆಲ್ಲವೂ ಶ್ರೇಯೋ ಮಾರ್ಗಗಳೆಂಬುದೇ ನಿಶ್ಚಯವು.

ಮಾರ್ದವಂ ಸರ್ವಭೂತೇಷು ವ್ಯವಹಾರೇಷು ಚಾರ್ಜವಮ್ ।
ವಾಕ್ಚೈವ ಮಧುರಾ ಪ್ರೋಕ್ತಾ ಶ್ರೇಯ ಏತದಸಂಶಯಮ್ ॥೧೭॥

ಎಲ್ಲ ಜೀವರೊಡನೆ ಮೃದುತ್ವದಿಂದ ವ್ಯವಹರಿಸಬೇಕು, ವ್ಯವಹಾರದಲ್ಲಿ ಸರಳತೆ, ಮಾತಿನಲ್ಲಿ ಮಧುರತೆ - ಇವುಗಳೇ ಶ್ರೇಯಸ್ಸಾಧನ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ದೇವತಾಭ್ಯಃ ಪಿತೃಭ್ಯಶ್ಚ ಸಂವಿಭಾಗೋಽತಿಥಿಷ್ವಪಿ ।
ಅಸಂತ್ಯಾಗಶ್ಚ ಭೃತ್ಯಾನಾಂ ಶ್ರೇಯ ಏತದಸಂಶಯಮ್ ॥೧೮॥

ದೇವತೆಗಳಿಗೆ, ಪಿತೃಗಳಿಗೆ, ಅತಿಥಿಗಳಿಗೆ ಸಲ್ಲಿಸಬೇಕಾದ ಬಲಿ-ತರ್ಪಣ-ಭೋಜನಗಳನ್ನು ಕಾಲ ಕಾಲಕ್ಕೆ ಸಲ್ಲಿಸಬೇಕು, ಭೃತ್ಯರನ್ನು ಪೋಷಿಸಬೇಕು. ಹೀಗೆ ಮಾಡುವುದೇ ಶ್ರೇಯಸ್ಸಿಗೆ ಸಾಧನವಾಗುತ್ತದೆ.

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯದ್ಭೂತಹಿತಮತ್ಯಂತಮೇತತ್ ಸತ್ಯಂ ಬ್ರವೀಮ್ಯಹಮ್ ॥೧೯॥

ಸತ್ಯವನ್ನು ಹೇಳುವುದು ಶ್ರೇಯಸ್ಕರವಾದುದು, ಆದರೆ ಸತ್ಯವೇನೆಂದು ತಿಳಿಯುವುದು ಬಹಳ ಕಷ್ಟವಾದುದು. ಎಲ್ಲ ಪ್ರಾಣಿಗಳಿಗೆ ಯಾವುದು ಅತ್ಯಂತ ಹಿತವೋ ಅದನ್ನೇ ಸತ್ಯವೆಂದು ಹೇಳುತ್ತೇನೆ.

ಅಹಂಕಾರಸ್ಯ ಚ ತ್ಯಾಗಃ ಪ್ರಣಯಸ್ಯ ಚ ನಿಗ್ರಹಃ ।
ಸಂತೋಷಶ್ಚೈಕಚರ್ಯಾ ಚ ಕೂಟಸ್ಥಂ ಶ್ರೇಯ ಉಚ್ಯತೇ ॥೨೦॥

ಅಹಂಕಾರವನ್ನು ತ್ಯಜಿಸುವುದು, ತಪ್ಪುಗಳನ್ನು ಮಾಡದಂತೆ ಮನಸ್ಸನ್ನು ನಿಗ್ರಹಿಸುವುದು, ಸಂತೋಷದಿಂದ ವರ್ತಿಸುವುದು, ಏಕಾಂತ ಸ್ಥಳದಲ್ಲಿ ಹರಿಧ್ಯಾನ ರತನಾಗಿರುವುದು- ಇವು ನಿಶ್ಚಿತವಾದ ಶ್ರೇಯೋಮಾರ್ಗಗಳು ಎಂದು ಹೇಳಲ್ಪಟ್ಟಿವೆ.

ಧರ್ಮೇಣ ವೇದಾಧ್ಯಯನಂ ವೇದಾಂಗಾನಾಂ ತಥೈವ ಚ ।
ವಿದ್ಯಾರ್ಥಾನಾಂ ಚ ಜಿಜ್ಞಾಸಾ ಶ್ರೇಯ ಏತದಸಂಶಯಮ್ ॥೨೧॥

ಧರ್ಮದಿಂದ ವೇದಾಧ್ಯಯನ ಮಾಡಿ, ವೇದಾಂತಗಳನ್ನು ಓದಿಕೊಂಡು, ಭಗವದ್ ಜ್ಞಾನದ ವಿಷಯದಲ್ಲಿ ಜಿಜ್ಞಾಸೆಯನ್ನು ಮಾಡುವುದು ಶ್ರೇಯಸ್ಸಾಧನವು. ಇದರಲ್ಲಿ ಸಂಶಯವಿಲ್ಲ.

ಶಬ್ದರೂಪರಸಸ್ಪರ್ಶಾನ್ ಸಹ ಗಂಧೇನ ಕೇವಲಾನ್ ।
ನಾತ್ಯರ್ಥಮುಪಸೇವೇತ ಶ್ರೇಯಸೋऽರ್ಥೀ ಪರಂತಪ ॥೨೨॥

ಶಬ್ದ-ರೂಪ-ರಸ-ಸ್ಪರ್ಶ-ಗಂಧಗಳನ್ನು ಶ್ರೇಯಸ್ಸನ್ನು ಬಯಸುವವನು ಅತಿಯಾಗಿ ಸೇವಿಸಬಾರದು.

ನಕ್ತಂಚರ್ಯಾ ದಿವಾಸ್ವಪ್ನಮಾಲಸ್ಯಂ ಪೈಶುನಂ ಮದಮ್ ।
ಅತಿಯೋಗಮಯೋಗಂ ಚ ಶ್ರೇಯಸೋऽರ್ಥೀ ಪರಿತ್ಯಜೇತ್ ॥೨೩॥

ರಾತ್ರಿ ಸಂಚಾರ, ಹಗಲು ನಿದ್ರೆ , ಸೋಮಾರಿತನ, ಚಾಡಿಕೋರತನ, ಮಾದಕ ಪದಾರ್ಥ ಸೇವನೆ, ಅಧಿಕ ಆಹಾರ ಸೇವನೆ, ನಿರಾಹಾರಿತ್ವ ಇವುಗಳನ್ನು ಶ್ರೇಯಸ್ಸನ್ನು ಬಯಸುವವನು ಬಿಡಬೇಕು.

ಕರ್ಮೋತ್ಕರ್ಷಂ ನ ಮಾರ್ಗೇತ ಪರೇಷಾಂ ಪರಿನಿಂದಯಾ ।
ಸ್ವಗುಣೈರೇವ ಮಾರ್ಗೇತ ವಿಪ್ರಕರ್ಷಂ ಪೃಥಗ್ಜನಾತ್ ॥೨೪॥

ಇನ್ನೊಬ್ಬರನ್ನು ನಿಂದಿಸುವುದರಿಂದ ತನ್ನ ಕರ್ಮದಲ್ಲಿ ಸಿದ್ಧಿಯನ್ನು ಹೊಂದುತ್ತೇನೆಂದು ತಿಳಿಯಬಾರದು. ಗುಣದಿಂದಲೇ ಉತ್ಕೃಷ್ಟತೆಯನ್ನು ಹೊಂದಬೇಕು. ಸಾಧಾರಣ ಮನುಷ್ಯರಿಗಿಂತಲೂ ಶ್ರೇಷ್ಠತೆಯು ಗುಣದಿಂದಲೇ ಎಂಬುದು ನಿರ್ಣಯವಾಗಿದೆ.

ನಿರ್ಗುಣಾಸ್ತ್ವೇವ ಭೂಯಿಷ್ಠಮಾತ್ಮಸಂಭಾವಿನೋ ನರಾಃ ।
ದೋಷೈರನ್ಯಾನ್ ಗುಣವತಃ ಕ್ಷಿಪಂತ್ಯಾತ್ಮಗುಣಕ್ಷಯಾತ್ ॥೨೫॥

ಗುಣ ಇಲ್ಲದವರು ತಮ್ಮನ್ನು ಪ್ರಶಂಸಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಗುಣವಂತರನ್ನು ದೋಷಾರೋಪಣೆ ಮಾಡಿ ತಿರಸ್ಕರಿಸುತ್ತಾರೆ. ಇದಕ್ಕೆ ಕಾರಣ ತನ್ನಲ್ಲಿರುವ ಗುಣಗಳ ಕೊರತೆ.

ಅನೂಚ್ಯಮಾನಾಶ್ಚ ಪುನಸ್ತೇ ಮನ್ಯಂತೇ ಮಹಾಜನಾತ್ ।
ಗುಣವತ್ತರಮಾತ್ಮಾನಂ ಸ್ವೇನ ಮಾನೇನ ದರ್ಪಿತಾಃ ॥೨೬॥

ಅಬ್ರುವನ್ ಕಸ್ಯಚಿನ್ನಿಂದಾಮಾತ್ಮಪೂಜಾಮವರ್ಣಯನ್ ।
ವಿಪಶ್ಚಿದ್ ಗುಣಸಂಪನ್ನಃ ಪ್ರಾಪ್ನೋತ್ಯೇವ ಮಹದ್ ಯಶಃ ॥೨೭॥

ಎಲ್ಲರೂ ಅನುಕೂಲವಾದ ಮಾತುಗಳನ್ನು ಹೇಳುತ್ತಿರಲು, ಪ್ರಶಂಸೆ ಮಾಡುತ್ತಿರಲು ತಮ್ಮನ್ನು ಅಧಿಕರೆಂದೇ ಭಾವಿಸುತ್ತಾರೆ. ಮಾನದಿಂದ ದರ್ಪಿತರಾದ ಅವರು ಗುಣವಂತರಿಗಿಂತಲೂ ಶ್ರೇಷ್ಠರೆಂದು ಭಾವಿಸಿಕೊಳ್ಳುತ್ತಾರೆ. ಆದರೆ ಯಾರ ನಿಂದನೆಯನ್ನೂ ಮಾಡದೆ, ಆತ್ಮಪ್ರಶಂಸೆಯನ್ನೂ ಮಾಡಿಕೊಳ್ಳದೆ ಉತ್ತಮ ಗುಣವನ್ನು ಸಂಪಾದನೆ ಮಾಡುವುದರಲ್ಲೇ ಆಸಕ್ತನಾಗಿರುತ್ತಾನೋ ಅಂತಹ ವಿದ್ವಾಂಸನು ವಿಪುಲವಾದ ಕೀರ್ತಿಯನ್ನು ನಿಶ್ಚಿತವಾಗಿಯೂ ಹೊಂದುತ್ತಾನೆ.

ಅಬ್ರುವನ್ ವಾತಿ ಸುರಭಿರ್ಗಂಧಃ ಸುಮನಸಾಂ ಶುಚಿಃ ।
ತಥೈವಾವ್ಯಾಹರನ್ ಭಾತಿ ವಿಮಲೋ ಭಾನುರಂಬರೇ ॥೨೮॥

ಮನೋಹರವಾದ, ಪವಿತ್ರವಾದ, ಸುಗಂಧಭರಿತವಾದ ಹೂಗಳು ಯಾವ ಮಾತನ್ನೂ ಆಡದೆ ತಮ್ಮ ಪರಿಮಳದಿಂದಲೇ ಖ್ಯಾತಿಯನ್ನು ಹೊಂದಿವೆ. ನಿರ್ಮಲನಾದ ಸೂರ್ಯನು ಪ್ರಶಂಸೆಯನ್ನು ಮಾಡಿಕೊಳ್ಳದೆ ನಿರಂತರ ಆಕಾಶದಲ್ಲಿ ಬೆಳಗುತ್ತಿರುತ್ತಾನೆ.

ಏವಮಾದೀನಿ ಚಾನ್ಯಾನಿ ಪರಿತ್ಯಕ್ತಾನಿ ಮೇಧಯಾ ।
ಜ್ವಲಂತಿ ಯಶಸಾ ಲೋಕೇ ಯಾನಿ ನ ವ್ಯಾಹರಂತಿ ಚ ॥೨೯॥

ಇನ್ನು ಬುದ್ಧಿ ಇಲ್ಲದ ಅನೇಕ ವಸ್ತುಗಳು ಏನೂ ಮಾತನಾಡದೆ ಕೀರ್ತಿಯಿಂದ ಪ್ರಜ್ವಲಿಸುತ್ತಿವೆ. ತಮ್ಮಲ್ಲಿರುವ ಗುಣಗಳನ್ನು ಎಂದಿಗೂ ಹೇಳಿಕೊಳ್ಳುವುದಿಲ್ಲ.

ನ ಲೋಕೇ ದೀಪ್ಯತೇ ಮೂರ್ಖಃ ಕೇವಲಾತ್ಮಪ್ರಶಂಸಯಾ ।
ಅಪಿ ಚಾಪಿಹಿತಃ ಶಭ್ರೇ ಕೃತವಿದ್ಯಃ ಪ್ರಕಾಶತೇ ॥೩೦॥

ಮೂರ್ಖನು ಕೇವಲ ತನ್ನ ಆತ್ಮಪ್ರಶಂಸೆಯನ್ನು ಎಷ್ಟು ಮಾಡಿಕೊಂಡರೂ ಲೋಕದಲ್ಲಿ ಪ್ರಕಾಶಮಾನನಾಗುವುದಿಲ್ಲ. ವಿದ್ವಾಂಸನು ಗುಹೆಯಲ್ಲಿ ಮುಚ್ಚಿಟ್ಟಿದ್ದರೂ ಲೋಕವಿಖ್ಯಾತನಾಗುತ್ತಾನೆ.

ಅಸದುಚ್ಚೈರಪಿ ಪ್ರೋಕ್ತಃ ಶಬ್ದಃ ಸಮುಪಶಾಮ್ಯತಿ ।
ದೀಪ್ಯತೇ ತ್ವೇವ ಲೋಕೇಷು ಶನೈರಪಿ ಸುಭಾಷಿತಮ್ ॥೩೧॥

ಅಯೋಗ್ಯನು ಎಷ್ಟು ಗಟ್ಟಿಯಾಗಿ ಶಬ್ದಗಳನ್ನು ಹೇಳಿದರೂ ಅದು ನಿರರ್ಥಕವಾಗಿರುತ್ತದೆ. ಒಳ್ಳೆಯ ಮಾತನ್ನು ಮೆಲ್ಲನೆ ಹೇಳಿದರೂ ಎಲ್ಲರಿಂದಲೂ ಅದು ಆದರಿಸಲ್ಪಡುತ್ತದೆ.

ಮೂಢಾನಾಮವಲಿಪ್ತಾನಾಮಸಾರಂ ಭಾಷಿತಂ ಬಹು ।
ದರ್ಶಯತ್ಯಂತರಾತ್ಮಾನಂ ದಿವಾ ರೂಪಮಿವಾಂಶುಮಾನ್ ॥೩೨॥

ಮೂರ್ಖರಾದ, ದೋಷಗಳಿಂದ ಕೂಡಿರುವ ಅನೇಕರು ಆಡುವ ಅಸಾರವಾದ ಮಾತುಗಳು ಸೂರ್ಯನು ತನ್ನ ಮಣಿಯ ಮೂಲಕ ಧಾತು ಶಕ್ತಿಯನ್ನು ಪ್ರಕಟ ಪಡಿಸುವಂತೆ ಅವರ ಮನೋಧರ್ಮವನ್ನು ಪ್ರಕಟಪಡಿಸುತ್ತವೆ.

ಏತಸ್ಮಾತ್ ಕಾರಣಾತ್ ಪ್ರಜ್ಞಾಂ ಮೃಗಯಂತೇ ಪೃಥಗ್ವಿಧಾಮ್ ।
ಪ್ರಜ್ಞಾಲಾಭೋ ಹಿ ಭೂತಾನಾಮುತ್ತಮಃ ಪ್ರತಿಭಾತಿ ಮಾಮ್ ॥೩೩॥

ಈ ಕಾರಣದಿಂದ ಶ್ರೇಯಸ್ಸನ್ನು ಬಯಸುವ ಸಜ್ಜನರು ಅನೇಕ ಶಾಸ್ತ್ರಗಳ ಅಧ್ಯಯನದಿಂದ ಬಗೆಬಗೆಯ ಜ್ಞಾನಮಾರ್ಗಗಳನ್ನು ಅನ್ವೇಷಣೆ ಮಾಡುತ್ತಾರೆ. ಪ್ರಾಣಿಗಳಿಗೆ ಪ್ರಜ್ಞಾಲಾಭವು ಶ್ರೇಷ್ಠವಾದ ಲಾಭವೆಂದು ನನಗನಿಸುತ್ತದೆ.

ನಾಪೃಷ್ಟಃ ಕಸ್ಯಚಿದ್ಬ್ರೂಯಾನ್ನ ಚಾನ್ಯಾಯೇನ ಪೃಚ್ಛತಃ ।
ಜ್ಞಾನವಾನಪಿ ಮೇಧಾವೀ ಜಡವಲ್ಲೋಕಮಾಚರೇತ್ ॥೩೪॥

ಪ್ರಾಜ್ಞನಾದವನು ಪ್ರಶ್ನೆ ಮಾಡದೆ ಯಾರಿಗೂ ಉಪದೇಶಿಸಬಾರದು. ಅಧರ್ಮದ ರೀತಿಯಲ್ಲಿ ಅಪಹಾಸ್ಯಕ್ಕೆ ಪ್ರಶ್ನಿಸಿದರೂ ಉತ್ತರ ಕೊಡಬಾರದು. ಜ್ಞಾನಿಯಂತೆ ಸುಮ್ಮನೆ ಕುಳಿತುಕೊಳ್ಳಬೇಕು.

ತತೋ ವಾಸಂ ಪರೀಕ್ಷೇತ ಧರ್ಮನಿತ್ಯೇಷು ಸಾಧುಷು ।
ಮನುಷ್ಯೇಷು ವದಾನ್ಯೇಷು ಸ್ವಧರ್ಮನಿರತೇಷು ಚ ॥೩೫॥

ಮನುಷ್ಯನು ಯಾವಾಗಲೂ ಧರ್ಮನಿಷ್ಠರಾದ ಸಜ್ಜನರಲ್ಲಿ, ಸ್ವಧರ್ಮ ನಿರತರಾದ ಸತ್ಪುರುಷರ ಸಹವಾಸ ಹೊಂದುವ ಇಚ್ಛೆಯುಳ್ಳವನಾಗಿರಬೇಕು.

ಚತುರ್ಣಾಂ ಯತ್ರ ವರ್ಣಾನಾಂ ಧರ್ಮವ್ಯತಿಕರೋ ಭವೇತ್ ।
ನ ತತ್ರ ವಾಸಂ ಕುರ್ವೀತ ಶ್ರೇಯೋಽರ್ಥೀ ವೈ ಕಥಂಚನ ॥೩೬॥

ಶ್ರೇಯಸ್ಸನ್ನು ಬಯಸುವವನು ನಾಲ್ಕು ವರ್ಣದವರಲ್ಲಿ ಧರ್ಮಸಾಂಕರ್ಯ-ವಾಗುವ ಸ್ಥಳದಲ್ಲಿ ಯಾವುದೇ ಕಾರಣದಿಂದ ವಾಸ ಮಾಡಬಾರದು.

ನಿರಾರಂಭೋಽಪ್ಯಯಮಿಹ ಯಥಾಲಬ್ಧೋಪಜೀವನಃ ।
ಪುಣ್ಯಂ ಪುಣ್ಯೇಷು ವಿಮಲಂ ಪಾಪಂ ಪಾಪೇಷು ಚಾಪ್ನುಯಾತ್ ॥೩೭॥

ಎಂದಿಗೂ ಕಾಮ್ಯಕರ್ಮಗಳನ್ನು ಮಾಡಲು ಹೋಗಬಾರದು. ಸಿಕ್ಕಿದ್ದರಲ್ಲಿ ತೃಪ್ತರಾಗಿರಬೇಕು. ಪುಣ್ಯಪುರುಷರ ಸಂಗ ಮಾಡುತ್ತಿದ್ದರೆ ಪುಣ್ಯವನ್ನೇ ಹೊಂದುತ್ತಾರೆ. ಪಾಪಿಷ್ಠರ ಜೊತೆ ಸಂಗ ಮಾಡಿದರೆ ಪಾಪವನ್ನೇ ಹೊಂದುತ್ತಾರೆ.

ಅಪಾಮಗ್ನೇಸ್ತಥೇನ್ದ್ವೋಶ್ಚ ಸ್ಪರ್ಶಂ ವೇದಯತೇ ಯಥಾ ।
ತಥಾ ಪಶ್ಯಾಮಹೇ ಸ್ಪರ್ಶಮುಭಯೋಃ ಪಾಪಪುಣ್ಯಯೋಃ ॥೩೮॥

ಹೇಗೆ ನೀರಿನಲ್ಲಿ ಮುಳುಗಿದಾಗ ಶೈತ್ಯವು, ಅಗ್ನಿಯಲ್ಲಿ ಮುಟ್ಟಿದಾಗ ಔಷ್ಣ್ಯವು, ಚಂದ್ರನ ಕಿರಣಗಳಿಂದ ಸುಖಾನುಭವವು ಉಂಟಾಗುತ್ತದೋ - ಈ ರೀತಿ ಪುಣ್ಯವಂತರ ಸಂಸರ್ಗದಿಂದ ಪುಣ್ಯ, ಪಾಪಿಷ್ಠರ ಸಂಸರ್ಗದಿಂದ ಪಾಪವು ಪ್ರತ್ಯಕ್ಷದಿಂದಲೇ ಸಿದ್ಧವಾಗುತ್ತದೆ.

ಅಪಶ್ಯಂತೋನವಿಷಯಂ ಭುಂಜತೇ ವಿಘಸಾಶಿನಃ ।
ಭುಂಜಾನಂ ಚಾನ್ನವಿಷಯಾನ್ ವಿಷಯಂ ವಿದ್ಧಿ ಕರ್ಮಣಾಮ್ ॥೩೯॥

ಅನ್ನವನ್ನು ಭುಂಜಿಸುವ ಸಾಧಕರು ಯಜ್ಞಶೇಷವೆಂದು ನಿರ್ದಿಷ್ಟವಾಗಿಯೇ ಸೇವಿಸುತ್ತಾರೆ. ತಮಗಾಗಿ ತಿನ್ನುವಂತಹ ವಿಷಯ ಲೋಲುಪರು ಅವರು ಕರ್ಮಗಳಿಗೆ ಗುರಿಯಾಗುತ್ತಾರೆ. ಸಾಧಕರಾದವರು ವಿಷಯ ವಿರೋಧಿ ಅರ್ಥಾತ್ ಕೆಟ್ಟ ವಿಷಯಗಳನ್ನು ಎಂದಿಗೂ ಸ್ವೀಕರಿಸರು.

ಯತ್ರಾಗಮಯಮಾನಾನಾಮಸತ್ಕಾರೇಣ ಪೃಚ್ಛತಾಮ್ ।
ಪ್ರಬೂಯಾದ್ ಬ್ರಹ್ಮಣೋ ಧರ್ಮಂ ತ್ಯಜೇತ್ತಂ ದೇಶಮಾತ್ಮವಾನ್ ॥

ಯಾವ ಸ್ಥಳದಲ್ಲಿ ಜ್ಞಾನಿಗೆ ಮಹತ್ವವನ್ನು ನೀಡುವುದಿಲ್ಲವೋ, ಸತ್ಕರಿಸದೆ ಧರ್ಮದ ಪ್ರಶ್ನೆಗಳನ್ನು ಮಾಡುತ್ತಾರೋ ಬುದ್ಧಿವಂತನಾದ ಬ್ರಾಹ್ಮಣನು ಅಂತಹ ದೇಶವನ್ನು ಕೂಡಲೇ ಪರಿತ್ಯಜಿಸಬೇಕು.

ಶಿಷ್ಯೋಪಾಧ್ಯಾಯಿಕಾ ವೃತ್ತಿರ್ಯತ್ರ ಸ್ಯಾತ್ ಸುಸಮಾಹಿತಾ ।
ಯಥಾವಚ್ಚಾಸ್ತ್ರಸಂಪನ್ನಾ ಕಸ್ತಂ ದೇಶಂ ಪರಿತ್ಯಜೇತ್ ॥೪೧॥

ಎಲ್ಲಿ ಗುರು-ಶಿಷ್ಯರ ವ್ಯವಹಾರವು ಸರಿಯಾಗಿ ವ್ಯವಸ್ಥಿತವಾಗಿ ನಡೆಯುತ್ತಿರುತ್ತದೋ, ಶಾಸ್ತ್ರಸಮ್ಮತವಾಗಿರುತ್ತದೋ ಅಂತಹ ಸ್ಥಳವನ್ನು ಯಾವನು ತಾನೆ ಬಿಡುತ್ತಾನೆ?

ಆಕಾಶಸ್ಥಾ ಧ್ರುವಂ ಯತ್ರ ದೋಷಂ ಬ್ರೂಯುರ್ವಿಪಶ್ಚಿತಾಮ್ ।
ಆತ್ಮಪೂಜಾಭಿಕಾಮಾ ವೈ ಕೋ ವಸೇತ್ತತ್ರ ಪಂಡಿತಃ ॥೪೨॥

ಎಲ್ಲಿ ಜನರು ಯಾವ ಆಧಾರವೂ ಇಲ್ಲದೆ ವಿದ್ವಾಂಸರ ಮೇಲೆ ದೋಷಾರೋಪಣೆಯನ್ನು ಮಾಡುತ್ತಾರೋ ಅಂತಹ ದೇಶದಲ್ಲಿ ಆತ್ಮಗೌರವವನ್ನು ಹೊಂದಲು ಬಯಸುವ ಯಾವ ಪಂಡಿತನು ತಾನೇ ವಾಸ ಮಾಡುತ್ತಾನೆ?

ಯತ್ರ ಸಂಲೋಡಿತಾ ಲುಬ್ಧೈಃ ಪ್ರಾಯಶೋ ಧರ್ಮಸೇತವಃ ।
ಪ್ರದೀಪ್ತಮಿವ ಶೈಲಾಂತಂ ಕಸ್ತಂ ದೇಶಂ ನ ಸಂತ್ಯಜೇತ್ ॥೪೩॥

ಯಾವ ದೇಶದಲ್ಲಿ ಜಿಪುಣರಾದ ವ್ಯಕ್ತಿಗಳು ಪ್ರಾಯಶಃ ಧರ್ಮದ ಕಟ್ಟುಪಾಡನ್ನೆಲ್ಲ ನಾಶಮಾಡಿರುತ್ತಾರೋ ಅಂತಹ ದೇಶವನ್ನು ಉಟ್ಟಿರುವ ವಸ್ತ್ರಕ್ಕೆ ಬೆಂಕಿ ಬಿದ್ದಾಗ ಕಿತ್ತು ಬಿಸುಡುವಂತೆ ಪರಿತ್ಯಜಿಸದೆ ಇರಬಾರದು, ಬಿಟ್ಟು ಹೋಗಬೇಕು.

ಯತ್ರ ಧರ್ಮಮನಾಶಂಕಾಶ್ಚರೇಯುರ್ವಿತಮತ್ಸರಾಃ ।
ಚರೇತ್ತತ್ರ ವಸೇಚ್ಚೈವ ಪುಣ್ಯಶೀಲೇಷು ಸಾಧುಷು ॥೪೪॥

ಯಾವ ಪ್ರದೇಶದಲ್ಲಿ ಜನರು ಮಾತ್ಸರ್ಯರಹಿತರಾಗಿ, ಸಂಶಯ ರಹಿತರಾಗಿ ಧರ್ಮವನ್ನು ಆಚರಿಸುತ್ತಿರುತ್ತಾರೋ ಅಂತಹ ಪುಣ್ಯಶೀಲರಾದ ಸಜ್ಜನರಿರುವ ಸ್ಥಳದಲ್ಲಿ ಅವಶ್ಯವಾಗಿ ವಾಸ ಮಾಡಿಕೊಂಡಿರಬೇಕು.

ಧರ್ಮಮರ್ಥನಿಮಿತ್ತಂ ತು ಚರೇಯುರ್ಯತ್ರ ಮಾನವಾಃ ।
ನ ತಾನನುವಸೇಜ್ಜಾತು ತೇ ಹಿ ಪಾಪಕೃತೋ ಜನಾಃ ॥೪೫॥

ಎಲ್ಲಿ ಜನರು ಹಣಕ್ಕಾಗಿ ಧರ್ಮಾಚರಣೆಯನ್ನು ಮಾಡುತ್ತಾರೋ ಅಂತಹ ವ್ಯಕ್ತಿಗಳ ಸಮೀಪದಲ್ಲಿ ಯಾವುದೇ ಕಾರಣದಿಂದ ವಾಸ ಮಾಡಬಾರದು. ಕಾರಣ ಹಣಕ್ಕಾಗಿ ಧರ್ಮವನ್ನು ಮಾಡುವವರು ಪಾಪಕರ್ಮಿಗಳೇ ಆಗಿರುತ್ತಾರೆ.

ಕರ್ಮಣಾ ಯತ್ರ ಪಾಪೇನ ವರ್ತಂತೇ ಜೀವಿತೇಚ್ಛವಃ ।
ವ್ಯವಧಾವೇತ್ತತಸ್ತೂರ್ಣಂ ಸಸರ್ಪಾಚ್ಛರಣಾದಿವ ॥೪೬॥

ಯಾವ ಸ್ಥಳದಲ್ಲಿ ಜೀವನಕ್ಕಾಗಿ ಪಾಪಕರ್ಮವನ್ನೇ ಮಾಡುತ್ತಿರುತ್ತಾರೋ ಅಂತಹ ಸ್ಥಳದಿಂದ ಹಾವು ಹೊಕ್ಕಿರುವ ಮನೆಯನ್ನು ಬಿಟ್ಟು ಹೋಗುವಂತೆ ಬೇಗ ದೂರ ಸರಿಯಬೇಕು.

ಯೇನ ಖಡ್ಗಂ ಸಮಾರೂಢಂ ಕರ್ಮಣಾನುಶಯೀ ಭವೇತ್ ।
ಆದಿತಸ್ತನ್ನ ಕರ್ತವ್ಯಮಿಚ್ಛತಾ ಭವಮಾತ್ಮನಃ ॥೪೭॥

ಯಾರಿಗೆ ಖಡ್ಗದಂತೆ ಇರುವ ವೈರವು ಮನಸ್ಸಿನಲ್ಲಿ ಮತ್ತೊಬ್ಬರ ಬಗ್ಗೆ ಇದೆಯೋ ಅಂತಹ ಗೂಢವಾದ ವೈರವನ್ನಿಟ್ಟುಕೊಂಡು ಸತ್ಕರ್ಮವನ್ನು ಮಾಡಲು ಬಯಸಬಾರದು. ಹೃದಯದಲ್ಲಿ ವೈರ ತುಂಬಿ ಕರ್ಮವನ್ನು ಮಾಡುವವನು ಸಂಸಾರದ ದುಃಖವನ್ನು ಪರಿಹರಿಸಿಕೊಳ್ಳನು.

ಯತ್ರ ರಾಜಾ ಚ ರಾಜ್ಞಶ್ಚ ಪುರುಷಾಃ ಪ್ರತ್ಯನಂತರಾಃ ।
ಕುಟುಂಬಿನಾಮಗ್ರಭುಜಸ್ಯಜೇತ್ತದ್ರಾಷ್ಟ್ರಮಾತ್ಮವಾನ್ ॥೪೮॥

ಯಾವ ದೇಶದಲ್ಲಿ ರಾಜನು, ರಾಜಪುರುಷರು, ಕುಟುಂಬದ ಜನರು ಹೀಗೆ ವ್ಯತ್ಯಾಸವನ್ನು ನೋಡುವುದಿಲ್ಲವೋ, ಕಷ್ಟದಿಂದ ಜೀವನ ನಿರ್ವಹಿಸುವ ಸಂಸಾರಿಗಳು ಊಟ ಮಾಡುವುದಕ್ಕಿಂತ ಮೊದಲೇ ರಾಜನು ಸ್ವಾರ್ಥಿಯಾಗಿ ಊಟ ಮಾಡುತ್ತಾನೋ ಅಂತಹ ರಾಷ್ಟ್ರವನ್ನು ಧರ್ಮಜ್ಞನು ತ್ಯಜಿಸಬೇಕು.

ಶ್ರೋತ್ರಿಯಾಸ್ತ ಗ್ರಭೋಕ್ತಾರೋ ಧರ್ಮನಿತ್ಯಾಃ ಸನಾತನಾಃ ।
ಯಾಜನಾಧ್ಯಾಪನೇ ಯುಕ್ತಾ ಯತ್ರ ತದ್ ರಾಷ್ಟ್ರಮಾವಸೇತ್ ॥೪೯॥

ಯಾವ ದೇಶದಲ್ಲಿ ಶ್ರೋತ್ರಿಯರು, ಧರ್ಮಾನುಷ್ಠಾನ ಮಾಡುವವರು, ಯಜನ-ಅಧ್ಯಾಪನದಲ್ಲಿ ನಿರತರಾಗಿರುವವರು ಎಲ್ಲರಿಗಿಂತಲೂ ಮೊದಲು ಊಟ ಮಾಡುತ್ತಾರೋ ಅಂತಹ ದೇಶದಲ್ಲಿ ಅವಶ್ಯವಾಗಿ ವಾಸ ಮಾಡಬೇಕು.

ಸ್ವಾಹಾಸ್ವಧಾವಷಟ್ಕಾರಾ ಯತ್ರ ಸಮ್ಯಗನುಷ್ಠಿತಾಃ ।
ಅಜಸ್ರಂ ಚೈವ ವರ್ತಂತೇ ವಸೇತ್ತತ್ರಾವಿಚಾರಯನ್ ॥೫೦॥

ಯಾವ ದೇಶದಲ್ಲಿ ಸ್ವಾಹಾ, ಸ್ವಧಾ, ವಷಟ್ ಎಂಬ ಯಜ್ಞಕರ್ಮಗಳು ಚೆನ್ನಾಗಿ ನಡೆಯುತ್ತಿರುತ್ತವೆಯೋ ಅಂತಹ ದೇಶದಲ್ಲಿ ವಿಚಾರ ಮಾಡದೆ ವಾಸ ಮಾಡಬೇಕು.

ಅಶುಚೀನ್ ಯತ್ರ ಪಶ್ಯೇತ ಬ್ರಾಹ್ಮಣಾನ್ ವೃತ್ತಿಕರ್ಶಿತಾನ್ ।
ತ್ಯಜೇತ್ತದ್ರಾಷ್ಟ್ರಮಾಸನ್ನಮುಪಸೃಷ್ಟಮಿವಾಮಿಷಮ್ ॥೫೧॥

ಯಾವ ದೇಶದಲ್ಲಿ ಬ್ರಾಹ್ಮಣರು ಬದುಕಿಗಾಗಿ ಕಷ್ಟಪಡುತ್ತಾ ಅವ್ಯವಸ್ಥೆಯ ಜೀವನದಲ್ಲಿ ಇರುವುದನ್ನು ನೋಡುತ್ತಾರೋ ಆ ದೇಶವನ್ನು ವಿಷಯುಕ್ತವಾದ ಪದಾರ್ಥವನ್ನು ತ್ಯಜಿಸುವಂತೆ ಬಿಟ್ಟುಹೋಗಬೇಕು.

ಪ್ರೀಯಮಾಣಾ ನರಾ ಯತ್ರ ಪ್ರಯಚ್ಛೇಯುರಯಾಚಿತಾಃ ।
ಸ್ವಸ್ಥಚಿತ್ತೋ ವಸೇತ್ತತ್ರ ಕೃತಕೃತ್ಯ ಇವಾತ್ಮವಾನ್ ॥೫೨॥

ಯಾವ ದೇಶದಲ್ಲಿ ಪ್ರಸನ್ನ ಮನಸ್ಕರಾದ ಮನುಷ್ಯರು ಬೇಡದಿದ್ದರೂ ಸಜ್ಜನರನ್ನು

ಕರೆದು, ಆದರದಿಂದ ಅನ್ನವನ್ನು ನೀಡುತ್ತಾರೋ ಅಂತಹ ದೇಶದಲ್ಲಿ ಜಿತೇಂದ್ರಿಯನಾದ ಸಾಧಕನು ಕೃತಕೃತ್ಯನೆಂದು ಭಾವಿಸಿ ಸ್ವಸ್ಥಚಿತ್ತನಾಗಿ ವಾಸಿಸಬೇಕು.

ದಂಡೋ ಯತ್ರಾವಿನೀತೇಷು ಸತ್ಕಾರಶ್ಚ ಕೃತಾತ್ಮಸು ।
ಚರೇತ್ತತ್ರ ವಸೇಚ್ಚೈವ ಪುಣ್ಯಶೀಲೇಷು ಸಾಧುಷು ॥೫೩॥

ಯಾವ ದೇಶದಲ್ಲಿ ಉದ್ಧಟರು ಶಿಕ್ಷಿಸಲ್ಪಡುತ್ತಾರೋ, ಸಜ್ಜನರು ಸತ್ಕಾರ ಹೊಂದುತ್ತಾರೋ ಅಂತಹ ದೇಶದಲ್ಲಿ ಸಜ್ಜನರ ಮಧ್ಯದಲ್ಲಿ ಸಂಚರಿಸುತ್ತಾ ವಾಸಿಸಬೇಕು.

ಉಪಸೃಷ್ಟೇಷ್ವದಾಂತೇಷು ದುರಾಚಾರೇಷ್ವಸಾಧುಷು ।
ಅವಿನೀತೇಷು ಲುಬ್ಧೇಷು ಸುಮಹದ್ದಂಡಧಾರಣಮ್ ॥೫೪॥

ಯಾರು ಜಿತೇಂದ್ರಿಯರಾದ ಸಜ್ಜನರ ವಿಷಯದಲ್ಲಿ ಕೋಪ ಹೊಂದುತ್ತಾರೋ, ಸಜ್ಜನರ ವಿಷಯದಲ್ಲಿ ಧೂರ್ತರಾಗಿ ವರ್ತಿಸುತ್ತಾರೋ, ಉದ್ಧಟರಾಗಿರುತ್ತಾರೋ, ಲೋಭವನ್ನು ತೋರುತ್ತಾರೋ ಅಂತಹವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕು.

ಯತ್ರ ರಾಜಾ ಧರ್ಮನಿತ್ಯೋ ರಾಜ್ಯಂ ವೈ ಪರ್ಯುಪಾಸಿತಾ ।
ಅಪಾಸ್ಯ ಕಾಮಾನ್ಕಾಮೇಶೋ ವಸೇತ್ತತ್ರಾವಿಚಾರಯನ್ ॥೫೫॥

ಯಾವ ದೇಶದಲ್ಲಿ ರಾಜನು ಧರ್ಮಪರಾಯಣನಾಗಿರುತ್ತಾನೋ, ಧರ್ಮಾನುಸಾರವಾಗಿ ರಾಜ್ಯವನ್ನು ಪರಿಪಾಲಿಸುತ್ತಾನೋ, ಸಮಸ್ತ ಕಾಮನೆಗಳನ್ನು ಹೊಂದಿದ್ದರೂ ವಿಷಯ ಭೋಗದಿಂದ ವಿರಕ್ತನಾಗಿರುತ್ತಾನೋ ಅಂತಹ ದೇಶದಲ್ಲಿ ವಿಚಾರ ಮಾಡದೆ ವಾಸಿಸಬೇಕು.

ತಥಾಶೀಲಾ ಹಿ ರಾಜಾನಃ ಸರ್ವಾನ್ ವಿಷಯವಾಸಿನಃ ।
ಶ್ರೇಯಸಾ ಯೋಜಯಂತ್ಯಾಶು ಶ್ರೇಯಸಿ ಪ್ರತ್ಯುಪಸ್ಥಿತೇ ॥೫೬॥

ರಾಜನ ಶೀಲ-ಸ್ವಭಾವಗಳಂತೆ ಪ್ರಜೆಗಳ ಶೀಲ-ಸ್ವಭಾವಗಳಿರುತ್ತವೆ. ರಾಜನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುವುದರಲ್ಲಿ ತಾನು ಶ್ರೇಯಸ್ಸಿಗೆ ಭಾಗಿಯಾಗುವ ಜೊತೆಗೆ ಪ್ರಜೆಗಳನ್ನೂ ಶ್ರೇಯೋಭಾಗಿಗಳನ್ನಾಗಿಸುತ್ತಾನೆ.

ಪೃಚ್ಛತಸ್ತೇ ಮಯಾ ತಾತ ಶ್ರೇಯ ಏತದುದಾಹೃತಮ್ ।
ನ ಹಿ ಶಕ್ಯಂ ಪ್ರಧಾನೇನ ಶ್ರೇಯಃ ಸಂಖ್ಯಾತುಮಾತ್ಮನಃ ॥೫೭॥

ಗಾಲವನೇ, ನಿನ್ನ ಪ್ರಶ್ನೆಗನುಸಾರವಾಗಿ ಶ್ರೇಯೋಮಾರ್ಗವನ್ನು ಹೇಳಿರುತ್ತೇನೆ. ತನ್ನ ಶ್ರೇಯಸ್ಸನ್ನೇ ಮುಖ್ಯವಾಗಿಟ್ಟುಕೊಂಡು ಎಲ್ಲವನ್ನು ವರ್ಣಿಸಲು ಸಾಧ್ಯವಾಗುವುದಿಲ್ಲ. ಶ್ರೇಯೋಮಾರ್ಗಗಳು ಅಸಂಖ್ಯವಾಗಿವೆ.

ಏವಂ ಪ್ರವರ್ತಮಾನಸ್ಯ ವೃತ್ತಿಂ ಪ್ರಣಿಹಿತಾತ್ಮನಃ ।
ತಪಸ್ಯೇವೇಹ ಬಹುಲಂ ಶ್ರೇಯೋ ವ್ಯಕ್ತಂ ಭವಿಷ್ಯತಿ ॥೫೮॥

ಹೀಗೆ ವಿಹಿತವೃತ್ತಿಯಿಂದ ಜೀವನ ನಡೆಸುತ್ತಾ, ಭೂತಹಿತ ಚಿಂತಕನಾಗಿರುವ ಮನುಷ್ಯನಿಗೆ ತಪೋನುಷ್ಠಾನದಿಂದ ಶ್ರೇಷ್ಠವಾದ ಶ್ರೇಯಸ್ಸು ಪ್ರತ್ಯಕ್ಷವಾಗಿಯೇ ದೊರೆಯುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂದನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಮೋಕ್ಷದ ವಿಷಯದ ಬಗ್ಗೆ ಅರಿಷ್ಟನೇಮಿ ಹಾಗೂ ಸಗರನಿಗೆ ನಡೆದ ಸಂವಾದವನ್ನು ಉಪದೇಶಿಸಿದುದು.

ಯುಧಿಷ್ಠಿರಃ

ಕಥಂ ನು ಮುಕ್ತಃ ಪೃಥಿವೀಂ ಚರೇದಸ್ಮದ್ವಿಧೋ ನೃಪಃ ।
ನಿತ್ಯಂ ಕೈಶ್ಚ ಗುಣೈರ್ಯುಕ್ತಃ ಸಂಗಪಾಶಾದ್ ವಿಮುಚ್ಯತೇ ॥೧॥

ಪಿತಾಮಹನೇ, ನನ್ನಂತಹ ರಾಜನು ವಿಷಯಸಂಬಂಧವನ್ನು ತ್ಯಜಿಸಿ ಹೇಗೆ ಭೂಮಿಯಲ್ಲಿ ಸಂಚರಿಸಬೇಕು? ಯಾವ ಗುಣದಿಂದ ಕೂಡಿದಲ್ಲಿ ಈ ಸಂಗ ಪಾಶದಿಂದ ನಿತ್ಯವೂ ಮುಕ್ತನಾಗುತ್ತಾನೆ?

ಭೀಷ್ಮಃ

ಅತ್ರ ತೇ ವರ್ಣಯಿಷ್ಯಾಮಿ ಇತಿಹಾಸಂ ಪುರಾತನಮ್ ।
ಅರಿಷ್ಟನೇಮಿನಾ ಪ್ರೋಕ್ತಂ ಸಗರಾಯಾನುಪೃಚ್ಛತೇ ॥೨॥

ಭೀಷ್ಮ– ಯುಧಿಷ್ಠಿರನೇ, ನೀನು ಕೇಳಿದ ವಿಷಯದಲ್ಲಿ ಸಗರನಿಗೆ ಗರುಡನು ಹೇಳಿದ ಪುರಾತನವಾದ, ಇತಿಹಾಸ ರೂಪವಾದ ಉತ್ತರವನ್ನು ಹೇಳುತ್ತೇನೆ.

ವ್ಯಾಖ್ಯಾನ ವಿಶೇಷ– 'ಅರಿಷ್ಟನೇಮಿಂ ಪೃತನಾಜಮಾಶುಂ ಸ್ವಸ್ತಯೇ ತಾರ್ಕ್ಷ್ಯಮಿವಾಹುವೇಮ' ಎಂಬ ವೇದಮಂತ್ರದಲ್ಲಿ ಅರಿಷ್ಟನೇಮಿ ಎಂಬ ಶಬ್ದವು ಗರುಡನಿಗೆ ಬಳಕೆಯಾಗಿದೆ. ಈ ಪ್ರಮಾಣಾನುಸಾರವಾಗಿ ಅರಿಷ್ಟನೇಮಿ ಎಂದರೆ ಗರುಡ ಎಂದು ಅರ್ಥೈಸಿಕೊಳ್ಳಬೇಕು – ಲಕ್ಷಾಲಂಕಾರ.

ಸಗರಃ

ಕಿಂ ಶ್ರೇಯಃ ಪರಮಂ ಬ್ರಹ್ಮನ್ಕೃತ್ವೇಹ ಸುಖಮಶ್ನುತೇ ।
ಕಥಂ ನ ಶೋಚೇನ್ನ ಕ್ಷುಭ್ಯೇದೇತದಿಚ್ಛಾಮಿ ವೇದಿತುಮ್ ॥೩॥

ಸಗರ– ಬ್ರಾಹ್ಮಣಶ್ರೇಷ್ಠನೇ, ಯಾವುದು ಶ್ರೇಯೋಮಾರ್ಗವು? ಯಾವ ಕರ್ಮದಿಂದ ಮಾನವನು ಸುಖ ಹೊಂದುತ್ತಾನೆ? ಮನುಷ್ಯನು ದುಃಖ ಹೊಂದದಿರಲು ಹೇಗೆ ಸಾಧ್ಯವಾಗುತ್ತದೆ? ಇದನ್ನು ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಏವಮುಕ್ತಸ್ತದಾ ತಾರ್ಕ್ಷ್ಯಃ ಸರ್ವಶಾಸ್ತ್ರವಿಶಾರದಃ ।
ವಿಬುದ್ಧ್ಯ ಸಂಪದಂ ಚಾಗ್ರ್ಯಾಂ ಸದಾರ್ಚ್ಯಮಿದಮಬ್ರವೀತ್ ॥೪॥

ಭೀಷ್ಮ– ಈ ರೀತಿಯಾಗಿ ಸಗರ ಚಕ್ರವರ್ತಿಯಿಂದ ಪ್ರಶ್ನಿಸಲ್ಪಟ್ಟ ಸರ್ವಜ್ಞನಾದ ಗರುಡನು ಉತ್ಕೃಷ್ಟವಾದ ದೈವೀಸಂಪತ್ತನ್ನು ಸಗರನು ಹೊಂದಿದ್ದಾನೆಂದು ತಿಳಿದು ಈ ಮಾತನ್ನು ಹೇಳಿದನು.

ಸುಖಂ ಮೋಕ್ಷಸುಖಂ ಲೋಕೇ ನ ಚ ಲೋಕೋऽವಗಚ್ಛತಿ ।
ಪ್ರಸಕ್ತಃ ಪುತ್ರಪಶುಷು ಧನಧಾನ್ಯಸಮಾಕುಲಃ ॥೫॥

ಸಗರನೇ, ಲೋಕದಲ್ಲಿ ಮೋಕ್ಷಸುಖವೇ ಸುಖವು. ಧನ-ಧಾನ್ಯ ಸಂಗ್ರಹದಲ್ಲಿ ಮಗ್ನನಾಗಿರುವ, ಪಶು-ಪುತ್ರರಲ್ಲಿ ಆಸಕ್ತನಾದ ಮೂರ್ಖನಿಗೆ ಯಥಾರ್ಥಜ್ಞಾನವು ದೊರೆಯದು.

ಸಕ್ತಬುದ್ಧಿರಶಾಂತಾತ್ಮಾ ನ ಸ ಶಕ್ಯಶ್ಚಿಕಿತ್ಸಿತುಮ್ ।
ಸ್ನೇಹಪಾಶಸಿತೋ ಮೂಢೋ ನ ಸ ಮೋಕ್ಷಾಯ ಕಲ್ಪತೇ ॥೬॥

ಯಾವನು ವಿಷಯದಲ್ಲಿ ಆಸಕ್ತವಾದ ಬುದ್ಧಿಯುಳ್ಳವನೋ, ಅಶಾಂತಾತ್ಮನೋ ಅವನಿಗೆ ಚಿಕಿತ್ಸೆಯನ್ನು ನೀಡಲು ಆಗುವುದಿಲ್ಲ. ಸ್ನೇಹಪಾಶದಿಂದ ಬಂಧಿತನಾದವನು ಮೋಕ್ಷವನ್ನು ಹೊಂದಲಾಗುವುದಿಲ್ಲ.

ಸ್ನೇಹಜಾನಿಹ ತೇ ಪಾಶಾನ್ ವಕ್ಷ್ಯಾಮಿ ಶೃಣು ತಾನ್ ಮಮ ।
ಸಕರ್ಣಕೇನ ಶಿರಸಾ ಶಕ್ಯಃ ಶ್ರೋತುಂ ವಿಜಾನತಾ ॥೭॥

ಸಗರನೇ, ಸ್ನೇಹದಿಂದ ಹುಟ್ಟುವ ಪಾಶಗಳ್ಯಾವುವೆಂದು ಹೇಳುತ್ತೇನೆ, ಕೇಳಿಸಿಕೊ. ಬುದ್ಧಿವಂತನು ಕಿವಿಗೊಟ್ಟು ನನ್ನ ಮಾತುಗಳನ್ನು ಕೇಳಲು ಸಮರ್ಥನಾಗುತ್ತಾನೆ.

ಸಂಭಾವ್ಯ ಪುತ್ರಾನ್ ಕಾಲೇನ ಯೌವನಸ್ಥಾನ್ನಿವೇಶ್ಯ ಚ ।
ಸಮರ್ಥಾನ್ ಜೀವನೇ ಜ್ಞಾತ್ವಾ ಮುಕ್ತಶ್ಚರ ಯಥಾಸುಖಮ್ ॥೮॥

ಕಾಲಾನುಸಾರವಾಗಿ ಮಕ್ಕಳನ್ನು ಪಡೆದುಕೊಂಡು ಅವರು ಯುವಕರಾದ ಕೂಡಲೇ ವಿವಾಹ ಮಾಡಿ ಸ್ವತಂತ್ರವಾಗಿ ಜೀವಿಸುತ್ತಾರೆ ಎಂದು ತಿಳಿದ ಕೂಡಲೇ ಸ್ನೇಹ ಪಾಶದಿಂದ ಮುಕ್ತನಾಗಿ ತೀರ್ಥಕ್ಷೇತ್ರ ಭೂಮಿಯಲ್ಲಿ ಸಂಚರಿಸು.

ಭಾರ್ಯಾಂ ಪುತ್ರವತೀಂ ವೃದ್ಧಾಂ ಲಾಲಿತಾಂ ಪುತ್ರವತ್ಸಲಾಮ್ ।
ಜ್ಞಾತ್ವಾ ಪ್ರಜಹಿ ಕಾಲೇ ತ್ವಂ ಪರಾರ್ಥಮನುದೃಶ್ಯ ಚ ॥೯॥

ಪುತ್ರವತಿಯಾದ, ವೃದ್ಧೆಯಾದ, ಪುತ್ರರಿಂದ ಚೆನ್ನಾಗಿ ಪೋಷಿಸಲ್ಪಡುವ ನಿನ್ನ ಹೆಂಡತಿಯು ಮಕ್ಕಳಲ್ಲಿ ಪ್ರೀತಿಯುಳ್ಳವಳಾಗಿದ್ದಾಳೆ ಎಂಬುದನ್ನು ಅರಿತು, ಮೋಕ್ಷವನ್ನೇ ಪುರುಷಾರ್ಥವೆಂದು ಅರಿತ ನೀನು ಯೋಗ್ಯಸಮಯದಲ್ಲಿ ಅವಳನ್ನು ಪರಿತ್ಯಜಿಸು.

ಸಾಪತ್ಯೋ ನಿರಪತ್ಯೋ ವಾ ಮುಕ್ತಶ್ಚರ ಯಥಾಸುಖಮ್ ।
ಇಂದ್ರಿಯೈರಿಂದ್ರಿಯಾರ್ಥಾಂಸ್ತ್ವಮನುಭೂಯ ಯಥಾವಿಧಿ ॥೧೦॥

ಪುತ್ರವಂತನಾಗಿರು, ಅಪುತ್ರವಂತನಾಗಿರು, ಹೇಗಿದ್ದರೂ ಯೋಗ್ಯ ಸಮಯದಲ್ಲಿ ಸಂಸಾರಬಂಧನದಿಂದ ಮುಕ್ತನಾಗಿ ಸುಖದಿಂದ ಭೂಮಿಯಲ್ಲಿ ಸಂಚರಿಸು.

ಕೃತಕೌತೂಹಲಸ್ತೇಷು ಮುಕ್ತಶ್ಚರ ಯಥಾಸುಖಮ್ ।
ಉಪಪತ್ತ್ಯೋಪಲಬ್ಧೇಷು ಲಾಭೇಷು ಚ ಸಮೋ ಭವ ॥೧೧॥

ವಿಷಯ ಪದಾರ್ಥದಲ್ಲಿ ಕುತೂಹಲವನ್ನು ತಾಳಿ, ಸುಖ ಅನುಭವಿಸಬೇಕೆಂಬ ಆಸೆಯನ್ನು ತೊರೆದು ಮುಕ್ತನಾಗಿ ಸುಖದಿಂದ ಸಂಚರಿಸು. ದೈವೇಚ್ಛೆಯಿಂದ ಲಭಿಸಿದ ಪದಾರ್ಥದ ವಿಷಯದಲ್ಲಿ ಲಾಭ-ನಷ್ಟಗಳಲ್ಲಿಯೂ ಸಮನಾಗಿರು.

ಏಷ ತಾವತ್ ಸಮಾಸೇನ ತವ ಸಂಕೀರ್ತಿತೋ ಮಯಾ ।
ಮೋಕ್ಷಾರ್ಥೋ ವಿಸ್ತರೇಣಾಪಿ ಭೂಯೋ ವಕ್ಷ್ಯಾಮಿ ತಚ್ಛೃಣು ॥೧೨॥

ಮೋಕ್ಷದ ವಿಷಯದಲ್ಲಿ ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ. ಇದೇ ವಿಷಯದಲ್ಲಿ ವಿಸ್ತಾರವಾಗಿ ಹೇಳುತ್ತೇನೆ, ಅದನ್ನು ಕೇಳು.

ಮುಕ್ತಾ ವೀತಭಯಾ ಲೋಕೇ ಚರಂತಿ ಸುಖಿನೋ ನರಾಃ ।
ಸಕ್ತಭಾವಾ ವಿನಶ್ಯಂತಿ ನರಾಸ್ತತ್ರ ನ ಸಂಶಯಃ ॥೧೩॥

ಸಂಸಾರಬಂಧನದಿಂದ ಮುಕ್ತರಾದ ಪುರುಷರು ಸುಖಿಗಳಾಗಿರುತ್ತಾರೆ. ಭಯಮುಕ್ತರಾಗಿ ಜಗತ್ತಿನಲ್ಲಿ ಸಂಚರಿಸುತ್ತಾರೆ. ವಿಷಯಗಳಲ್ಲಿ ಆಸಕ್ತಿ ಹೊಂದಿದವರು ನಾಶವನ್ನು ಹೊಂದುತ್ತಾರೆ.

ಆಹಾರಸಂಚಯಾಶ್ಚೈವ ತಥಾ ಕೀಟಪಿಪೀಲಿಕಾಃ ।
ಅಸಕ್ತಾಃ ಸುಖಿನೋ ಲೋಕೇ ಸಕ್ತಾಶ್ಚೈವ ವಿನಾಶಿನಃ ॥೧೪॥

ಆಹಾರವನ್ನು ಸಂಗ್ರಹಿಸುತ್ತಿರುವ ಕ್ರಿಮಿ-ಕೀಟಗಳು ನಾಶವನ್ನು ಹೊಂದುವಂತೆ ವಿಷಯಾಸಕ್ತರು ನಾಶ ಹೊಂದುತ್ತಾರೆ. ವಿಷಯದಿಂದ ಮುಕ್ತರಾದವರು ಸುಖಿಗಳಾಗಿರುತ್ತಾರೆ.

ಸ್ವಜನೇ ನ ಚ ತೇ ಚಿಂತಾ ಕರ್ತವ್ಯಾ ಮೋಕ್ಷಬುದ್ಧಿನಾ ।
ಇಮೇ ಮಯಾ ವಿನಾಭೂತಾ ಭವಿಷ್ಯಂತಿ ಕಥಂ ತ್ವಿತಿ ॥೧೫॥

ಮೋಕ್ಷ ಬಯಕೆಯುಳ್ಳ ನೀನು ನಾನಿಲ್ಲದೆ ಇವರು ಹೇಗೆ ಬದುಕುತ್ತಾರೆ ಎಂದು ಬಂಧುಜನರ ವಿಷಯದಲ್ಲಿ ಚಿಂತಿಸಲು ಹೋಗಬೇಡ.

ಸ್ವಯಮುತ್ಪದ್ಯತೇ ಜಂತುಃ ಸ್ವಯಮೇವ ವಿವರ್ಧತೇ ।
ಸುಖದುಃಖೇ ತಥಾ ಮೃತ್ಯುಂ ಸ್ವಯಮೇವಾಧಿಗಚ್ಛತಿ ॥೧೬॥

ಜೀವನು ಯಾರ ಅನುಗ್ರಹವೂ ಇಲ್ಲದೆ ಹುಟ್ಟುತ್ತಾನೆ. ಈ ಬಂಧುಜನರ ನೆರವಿಲ್ಲದೆಯೂ ಮೃತ್ಯುವನ್ನು ಹೊಂದುತ್ತಾನೆ. ಅದರಂತೆಯೇ ಮರಣವು ತಾನಾಗಿ ಒದಗಿ ಬರುತ್ತದೆ.

ಭೋಜನಾಚ್ಛಾದನೇ ಚೈವ ಮಾತ್ರಾ ಪಿತ್ರಾ ಚ ಸಂಗ್ರಹಮ್ ।
ಸ್ವಕೃತೇನಾಧಿಗಚ್ಛಂತಿ ಲೋಕೇ ನಾಸ್ತ್ಯಕೃತಂ ಪುರಾ ॥೧೭॥

ಮನುಷ್ಯನು ತನ್ನ ಹಿಂದಿನ ಪುಣ್ಯ ಫಲಕ್ಕನುಗುಣವಾಗಿ ಊಟ, ವಸ್ತ್ರ, ತಂದೆ, ತಾಯಿ, ಐಶ್ವರ್ಯಗಳನ್ನು ಹೊಂದುತ್ತಾನೆ. ಪೂರ್ವಜನ್ಮದ ಫಲವಿಲ್ಲದೆ ಯಾವ ಪದಾರ್ಥವೂ ದೊರೆಯುವುದಿಲ್ಲ.

ಧಾತ್ರಾ ವಿಹಿತಭಕ್ಷ್ಯಾಣಿ ಸರ್ವಭೂತಾನಿ ಮೇದಿನೀಮ್ ।
ಲೋಕೇ ವಿಪರಿಧಾವಂತಿ ರಕ್ಷಿತಾನಿ ಸ್ವಕರ್ಮಭಿಃ ॥೧೮॥

ತಾವು ಮಾಡಿದ ಕರ್ಮದ ಫಲದಿಂದಲೇ ಆಯಾ ಕಾಲಕ್ಕೆ ಬ್ರಹ್ಮನು ಸಂಕಲ್ಪಿಸಿದ ಆಹಾರವನ್ನು ಭೂಮಿಯಲ್ಲಿ ತಿನ್ನುತ್ತಾ ಸಂಚರಿಸುತ್ತಾರೆ. ತಮ್ಮ ಕರ್ಮಕ್ಕನುಗುಣವಾಗಿ ರಕ್ಷಣೆ ಹೊಂದಿರುತ್ತಾರೆ.

ಸ್ವಯಂ ಮೃತ್ಪಿಂಡಭೂತಸ್ಯ ಪರತಂತ್ರಸ್ಯ ಸರ್ವದಾ ।
ಕೋ ಹೇತುಃ ಸ್ವಜನಂ ಪೋಷ್ಟುಂ ರಕ್ಷಿತುಂ ವಾ ದೃಢಾತ್ಮನಃ ॥೧೯॥

ಪ್ರತಿಯೊಬ್ಬ ಮನುಷ್ಯನು ಜಡವಾದ ಶರೀರವನ್ನು ಪಡೆದು ಮೃತ್ಪಿಂಡದಂತೆ ಯಾವಾಗಲೂ ಅಸ್ವತಂತ್ರನೇ ಆಗಿರುತ್ತಾನೆ. ಅಂತಹವನು ಮಡದಿ, ಮಕ್ಕಳನ್ನು ರಕ್ಷಿಸಲು ಹೇಗೆ ಸಮರ್ಥನಾದಾನು? ತಾನೇ ಅಸ್ವತಂತ್ರನಾಗಿರಲು ಇನ್ನೊಬ್ಬರನ್ನು ಹೇಗೆ ರಕ್ಷಿಸಿಯಾನು?

ಸ್ವಜನಂ ಹಿ ಯದಾ ಮೃತ್ಯುರ್ಹಂತ್ಯೇವ ತವ ಪಶ್ಯತಃ ।
ಕೃತೇಽಪಿ ಯತ್ನೇ ಮಹತಿ ತತ್ರ ಬೋದ್ಧವ್ಯಮಾತ್ಮನಾ ॥೨೦॥

ನೀನು ಯಾರನ್ನು ಪ್ರೀತಿಯಿಂದ ಪಾಲಿಸಿ, ಪೋಷಿಸುತ್ತೀಯೋ ಆ ಸ್ವಜನರು ನೀನು ನೋಡುತ್ತಿದ್ದಂತೆ ಮೃತ್ಯುವಶರಾಗುತ್ತಾರೆ. ನಿನ್ನ ಪ್ರಯತ್ನದಿಂದ ಪ್ರೀತಿಯ ಬಂಧುಗಳನ್ನು ಮೃತ್ಯು ಮುಖದಿಂದ ಬಿಡಿಸಲಾಗದು. ಇದನ್ನು ವಿಚಾರ ಮಾಡಿ ನಿನ್ನ ಸಾಮರ್ಥ್ಯವನ್ನರಿತು ನಡೆ.

ಜೀವಂತಮಪಿ ಚೈವೈನಂ ಭರಣೇ ರಕ್ಷಣೇ ತಥಾ ।
ಅಸಮಾಪ್ತೇ ಪರಿತ್ಯಜ್ಯ ಪಶ್ಚಾದಪಿ ಮರಿಷ್ಯಸಿ ॥೨೧॥

ಕೆಲವೊಮ್ಮೆ ಬಂಧುಜನರು ಬದುಕಿರುವಾಗಲೇ ಅವರನ್ನು ರಕ್ಷಿಸಬೇಕಾದ ನೀನೇ ಮರಣವನ್ನು ಹೊಂದುತ್ತಿ. (ನೀನು ಮೃತನಾದರೂ ಅವರ ಬದುಕು ನಡೆಯುತ್ತದೆ ಎಂದು ತಾತ್ಪರ್ಯ).

ಯದಾ ಮೃತಶ್ಚ ಸ್ವಜನಂ ನ ಜ್ಞಾಸ್ಯಸಿ ಕಥಂಚನ ।
ಸುಖಿತಂ ದುಃಖಿತಂ ವಾಪಿ ನನು ಬೋದ್ಧವ್ಯಮಾತ್ಮನಾ ॥೨೨॥

ಒಂದು ವೇಳೆ ಅತ್ಯಂತ ಪ್ರೀತಿಪಾತ್ರರಾದ ಬಂಧುಜನರೇ ಮರಣ ಹೊಂದಿದಲ್ಲಿ ಅವನು ಸತ್ತ ಬಳಿಕ ಸುಖಿಯಾಗಿದ್ದಾನೋ, ದುಃಖಿಯಾಗಿದ್ದಾನೋ ಎಂದು ನಿನಗೆ ತಿಳಿಯುವುದಿಲ್ಲ. ಹೀಗಿರುವಾಗ ಅವನಿಗೂ ನಿನಗೂ ಇರುವ ಸಂಬಂಧವೆಷ್ಟು ಎಂದು ಏಕೆ ಯೋಚಿಸುವುದಿಲ್ಲ?

ಮೃತೇ ವಾ ತ್ವಯಿ ಜೀವೇ ವಾ ಯದಿ ಭೋಕ್ಷ್ಯತಿ ವೈ ಜನಃ ।
ಸ್ವಕೃತಂ ನನು ಬುದ್ಧ್ಯೈವಂ ಕರ್ತವ್ಯಂ ಹಿತಮಾತ್ಮನಃ ॥೨೩॥

ನೀನು ಜೀವಂತನಾಗಿರು, ಮೃತನಾಗಿರು. ನಿನ್ನ ಬಂಧುಜನರು ತಾವು ಮಾಡಿದ ಕರ್ಮಫಲವನ್ನು ಅನುಭವಿಸಿಯೇ ತೀರುತ್ತಾರೆ. ಆದ್ದರಿಂದ ಅವರ ರಕ್ಷಕನು ನಾನು ಎಂಬ ಅಭಿಮಾನ ಬೇಡ. ಅಭಿಮಾನವನ್ನು ತೊಡೆದು ನಿನ್ನ ಹಿತಸಾಧನೆಯಲ್ಲಿ ತೊಡಗುವುದು ಕರ್ತವ್ಯವಾಗಿದೆ.

ಏವಂ ವಿಜಾನಲ್ಲೋಕೇಽಸ್ಮಿನ್ ಕಃ ಕಸ್ಯೇತ್ಯಭಿನಿಶ್ಚಿತಃ ।
ಮೋಕ್ಷೇ ನಿವೇಶಯ ಮನೋ ಭೂಯಶ್ಚಾಪ್ಯುಪಧಾರಯ ॥೨೪॥

ಹೀಗೆ ಈ ವಿಷಯವನ್ನು ಚೆನ್ನಾಗಿ ಮಥಿಸಿ ತಿಳಿದುಕೊಂಡ ವ್ಯಕ್ತಿ ನಾನು ಯಾರು, ಯಾರಿಗೆ ಸಂಬಂಧಿಸಿದವನು ಎಂಬ ನಿಶ್ಚಯ ಜ್ಞಾನವನ್ನು ಹೊಂದಬೇಕು. ಕರ್ಮಾನುಸಾರವಾಗಿ ಯಾರಿಗೂ ಸಂಬಂಧ ಇಲ್ಲದ ಜೀವರು ಎಲ್ಲಿಯೋ ಹುಟ್ಟಿ ಎಲ್ಲಿಯೋ ಮರಣ ಹೊಂದುತ್ತಾರೆ ಎಂದು ನಿಶ್ಚಯಿಸಿಕೊಂಡು, ಮೋಕ್ಷಮಾರ್ಗದಲ್ಲಿ ಸಾಗಬೇಕು. ನಾನು ಹೇಳಿದ ವಿಚಾರವನ್ನು ಮನನ ಮಾಡುತ್ತಲೇ ಇರು.

ಕ್ಷುತ್ಪಿಪಾಸಾದಯೋ ಭಾವಾ ಜಿತಾ ಯಸ್ಯೇಹ ದೇಹಿನಃ ।
ಕ್ರೋಧೋ ಲೋಭಸ್ತಥಾ ಮೋಹಃ ಸತ್ತ್ವವಾನ್ ಮುಕ್ತ ಏವ ಸಃ ॥೨೫॥

ಹಸಿವು, ಬಾಯಾರಿಕೆ, ಕ್ರೋಧ, ಲೋಭ, ಮೋಹ ಇವುಗಳನ್ನು ಯಾವನು ಜಯಿಸಿದ್ದಾನೋ ಅಂತಹ ಸತ್ತ್ವಸಂಪನ್ನನಾದ ಮನುಷ್ಯನು ಮುಕ್ತನಾದಂತೆಯೇ ಸರಿ.

ದ್ಯೂತೇ ಪಾನೇ ತಥಾ ಸ್ತ್ರೀಷು ಮೃಗಯಾಯಾಂ ಚ ಯೋ ನರಃ ।
ನ ಪ್ರಮಾದ್ಯತಿ ಸಮ್ಮೋಹಾತ್ ಸತತಂ ಮುಕ್ತ ಏವ ಸಃ ॥೨೬॥

ಯಾವನು ಮೋಹದಿಂದ ಜೂಜು, ಪರಸ್ತ್ರೀ ಸಂಗ, ಬೇಟೆ - ಈ ಚಟಗಳಲ್ಲಿ ಆಸಕ್ತನಾಗಿ ಎಚ್ಚರ ತಪ್ಪುವುದಿಲ್ಲವೋ ಅವನು ಮುಕ್ತನಾದಂತೆ ಸರಿ.

ದಿವಸೇ ದಿವಸೇ ನಾಮ ರಾತ್ರೌ ರಾತ್ರೌ ಸದಾ ಸದಾ ।
ಭೋಕ್ತವ್ಯಮಿತಿ ಯಃ ಖಿನ್ನೋ ದೋಷಬುದ್ಧಿಃ ಸ ಉಚ್ಯತೇ ॥೨೭॥

ಯಾವನು ಹಗಲಾದರೆ ರಾತ್ರಿಯಾದರೆ ಭೋಜನಾದಿ ವಿಷಯಸುಖಕ್ಕಾಗಿ ಯೋಚಿಸುವನೋ ಅವನನ್ನು ದೋಷ ಬುದ್ಧಿಯವನೆಂದು ಹೇಳುತ್ತಾರೆ.

ಆತ್ಮಭಾವಂ ತಥಾ ಸ್ತ್ರೀಷು ಮುಕ್ತಮೇವ ಪುನಃ ಪುನಃ ।
ಯಃ ಪಶ್ಯತಿ ಸದಾ ಯುಕ್ತೋ ಯಥಾವನ್ಮುಕ್ತ ಏವ ಸಃ ॥೨೮॥

ಯೋಗಯುಕ್ತನಾದವನು, ಸ್ತ್ರೀಯರಲ್ಲಿ ಅತಿಯಾದ ಸಂಗ ಇಲ್ಲದವನು ತಾನು ಎಂದು ಯಾವಾಗ ಮನಗಾಣುತ್ತಾನೋ ಅವನು ಮುಕ್ತನಾದಂತೆಯೇ ಸರಿ.

ಸಂಭವಂ ಚ ವಿನಾಶಂ ಚ ಭೂತಾನಾಂ ಚೇಪ್ಸಿತಂ ತಥಾ ।
ಯಸ್ತತ್ತ್ವತೋ ವಿಜಾನಾತಿ ಲೋಕೇಽಸ್ಮಿನ್ ಮುಕ್ತ ಏವ ಸಃ ॥೨೯॥

ಯಾವನು ಲೋಕದಲ್ಲಿನ ಸಮಸ್ತ ಜೀವರ ಹುಟ್ಟು-ಸಾವುಗಳನ್ನು, ಅವುಗಳ ಕ್ಷಣಿಕವಾದ ಜೀವನ ವ್ಯಾಪಾರವನ್ನು ಯಥಾರ್ಥವಾಗಿ ತಿಳಿದಿರುತ್ತಾನೋ ಅವನು ಮುಕ್ತನಾದಂತೆ ಸರಿ.

ಪ್ರಸ್ಥಂ ವಾಹಸಹಸ್ರೇಷು ವಸ್ತ್ರಾರ್ಥಂ ಚೈವ ಕೋಟಿಷು ।
ಪ್ರಾಸಾದೇ ಮಂಚಕಸ್ಥಾನಂ ಯಃ ಪಶ್ಯತಿ ಸ ಮುಚ್ಯತೇ ॥೩೦॥

ಯಾವಾತನು ಧಾನ್ಯವನ್ನು ಹೊತ್ತಿರುವ ವಾಹನಗಳಿಂದ ಜಾರಿ ಬಿದ್ದ ಮುಷ್ಟಿ ಧಾನ್ಯವೇ ತನ್ನ ಬದುಕಿಗೆ ಸಾಕು ಎಂದು ಯೋಚಿಸುತ್ತಾನೋ, ಹರಿದ ನೂರಾರು ವಸ್ತ್ರಗಳನ್ನು ಕಂಡು ತನ್ನ ಮಾನ ಸಂರಕ್ಷಣೆಗೆ ತುಂಡು ಬಟ್ಟೆ ಸಾಕೆಂದು ಯೋಚಿಸುತ್ತಾನೋ, ದೇವತಾಗೋಪುರಾದಿಗಳನ್ನು ಕಂಡವನು ತಾನು ಮಲಗಲು ದೇವಸ್ಥಾನದ ಜಗುಲಿಯು ಸಾಕು ಎಂದು ಯೋಚಿಸುತ್ತಾನೋ ಅವನು ಮುಕ್ತನಾದಂತೆ ಸರಿ.

ಮೃತ್ಯುನಾಭ್ಯಾಹತಂ ಲೋಕಂ ವ್ಯಾಧಿಭಿಶ್ಚೋಪಪೀಡಿತಮ್ ।
ಅವೃತ್ತಿಕರ್ಶಿತಂ ಚೈವ ಯಃ ಪಶ್ಯತಿ ಸ ಮುಚ್ಯತೇ ॥೩೧॥

ಯಃ ಪಶ್ಯತಿ ಸುಖೀ ತುಷ್ಟೋ ನ ಪಶ್ಯತಿ ವಿಹನ್ಯತೇ ।
ಯಶ್ಚಾಪ್ಯಲ್ಪೇನ ಸಂತುಷ್ಟೋ ಲೋಕೇಽಸ್ಮಿನ್ ಮುಕ್ತ ಏವ ಸಃ ॥೩೨॥

ಯಾವನು ಲೋಕವು ಮೃತ್ಯುವಿನಿಂದ ಅಪ್ಪಳಿಸಲ್ಪಟ್ಟಿದೆ ಎಂಬುದನ್ನು, ಆಧಿ-ವ್ಯಾಧಿಗಳಿಂದ ಬಾಧಿತವಾಗಿದೆ ಎಂಬುದನ್ನು, ವೃತ್ತಿಯಿಲ್ಲದೆ ಕೃಶವಾಗಿದೆ ಎಂಬುದನ್ನು ಸ್ಪಷ್ಟವಾಗಿ ಕಾಣುತ್ತಾನೋ ಅವನು ಬಂಧನದಿಂದ ಮುಕ್ತನಾಗುತ್ತಾನೆ. ಯಾವನು ತಾನು ಸಂತುಷ್ಟನಲ್ಲವೆಂದು ತಿಳಿಯುವುದಿಲ್ಲವೋ ಅವನು ದುಃಖಕ್ಕೆ ಭಾಗಿಯಾಗುವುದಿಲ್ಲ.

ಅಗ್ನೀಷೋಮಾವಿದಂ ಸರ್ವಮಿತಿ ಯಶ್ಚಾನುಪಶ್ಯತಿ ।
ನ ಚ ಸಂಸ್ಪೃಶ್ಯತೇ ಭಾವೈರದುಃಖೈರ್ಮುಕ್ತ ಏವ ಸಃ ॥೩೩॥

ಅಗ್ನೀಷೋಮರಿಗೆ ಹೇಗೆ ಯಾವುದರಲ್ಲಿಯೂ ಆಸಕ್ತಿ ಇಲ್ಲವೋ ಅವರ ಮಾರ್ಗವನ್ನೇ ಅನುಸರಿಸಿ ಯಾವನು ನಿರ್ಲಿಪ್ತನಾಗಿರುತ್ತಾನೋ, ಯಾವುದೇ ಅದ್ಭುತವಾದ ಪದಾರ್ಥಗಳ ಮೋಹಕ್ಕೆ ತುತ್ತಾಗುವುದಿಲ್ಲವೋ ಅವನು ಮುಕ್ತನಾದಂತೆಯೇ ಸರಿ.

ಪರ್ಯಂಕಶಯ್ಯಾ ಭೂಮಿಶ್ಚ ಸಮಾನೇ ಯಸ್ಯ ದೇಹಿನಃ ।
ಶಾಲಯಶ್ಚ ಕದನ್ನಂ ಚ ಯಸ್ಯ ಸ್ಯಾನ್ಮುಕ್ತ ಏವ ಸಃ ॥೩೪॥

ಯಾವ ಮನುಷ್ಯನಿಗೆ ಮೆತ್ತನೆಯ ಹಾಸಿಗೆಯು ಭೂಮಿಗೆ ಸಮಾನವೋ, ಶಾಲ್ಯನ್ನವೂ ಹಳಸಿದ ಅನ್ನಕ್ಕೆ ಸಮಾನವೋ ಅವನು ಮುಕ್ತನಾದಂತೆಯೇ ಸರಿ.

ಕ್ಷೌಮಂ ಚ ಕುಶಚೀರಂ ಚ ಕೌಶೇಯಂ ವಲ್ಕಲಾನಿ ಚ ।
ಅವಿಕಂ ಚರ್ಮ ಚ ಸಮಂ ಯಸ್ಯ ಸ್ಯಾನ್ಮುಕ್ತ ಏವ ಸಃ ॥೩೫॥

ಯಾವನಿಗೆ ಸುವರ್ಣ ಝರಿಯಿಂದ ಕೂಡಿರುವ ಪಟ್ಟೆ ವಸ್ತ್ರವು ದರ್ಭೆವಸ್ತ್ರಕ್ಕೆ ಸಮಾನವೋ, ರೇಷ್ಮೆವಸ್ತ್ರವು ನಾರುಮಡಿಯ ಸಮಾನವೋ, ಉಣ್ಣೆಬಟ್ಟೆಯು ಮೃಗಚರ್ಮಕ್ಕೆ ಸಮಾನವೋ ಅವನು ಮುಕ್ತನಾದಂತೆಯೇ ಸರಿ.

ಪಂಚಭೂತಸಮುದ್ಭೂತಂ ಲೋಕಂ ಯಶ್ಚಾನುಪಶ್ಯತಿ ।
ತಥಾ ಚ ವರ್ತತೇ ದೃಷ್ಟ್ವಾ ಲೋಕೇಽಸ್ಮಿನ್ ಮುಕ್ತ ಏವ ಸಃ ॥೩೬॥

ಯಾವನು ಲೋಕವನ್ನೆಲ್ಲ ಪಂಚಭೂತಗಳಿಂದ ಹುಟ್ಟಿದೆ ಎಂದು ತಿಳಿದು, ಎಲ್ಲ ಪ್ರಾಣಿಗಳು ಹುಟ್ಟು-ನಾಶವುಳ್ಳವುಗಳು ಎಂದು ಸಮವಾಗಿ ಕಾಣುತ್ತಾನೋ ಅವನು ಮುಕ್ತನಾದಂತೆಯೇ ಸರಿ.

ಸುಖದುಃಖೇ ಸಮೇ ಯಸ್ಯ ಲಾಭಾಲಾಭೌ ಜಯಾಜಯೌ ।
ಇಚ್ಛಾದ್ವೇಷೌ ಭಯೋದ್ವೇಗೌ ಸರ್ವಥಾ ಮುಕ್ತ ಏವ ಸಃ ॥೩೭॥

ಯಾರಿಗೆ ಸುಖ-ದುಃಖಗಳು, ಲಾಭ-ನಷ್ಟಗಳು, ಜಯ-ಪರಾಜಯಗಳು ಸಮಾನವೋ, ಇಚ್ಛೆ-ದ್ವೇಷ-ಭಯ-ಉದ್ವೇಗಗಳು ನಾಶ ಹೊಂದಿವೆಯೋ ಅವನು ಮುಕ್ತನಾದಂತೆ ಸರಿ.

ರಕ್ತಮೂತ್ರಪುರೀಷಾಣಾಂ ದೋಷಾಣಾಂ ಸಂಚಯಂ ತಥಾ ।
ಶರೀರಂ ದೋಷಬಹುಲಂ ದೃಷ್ಟ್ವಾ ಚೇದಂ ವಿಮುಚ್ಯತೇ ॥೩೮॥

ಈ ಶರೀರವು ರಕ್ತ, ಮೂತ್ರ, ಅಮೇಧ್ಯ ಇವುಗಳ ಆವಾಸಸ್ಥಾನವಾಗಿದೆ. ವಾತ-ಪಿತ್ತ-ಕಫಗಳೆಂಬ ದೋಷಗಳಿಂದ ಕೂಡಿದೆ. ಇನ್ನೂ ಅನೇಕ ದೋಷಗಳಿಂದ ಕೂಡಿದ ಶರೀರವನ್ನು ಯಾವನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾನೋ ಅವನು ಮುಕ್ತನಾಗುತ್ತಾನೆ.

ವಲೀಪಲಿತಸಂಯೋಗಂ ಕಾರ್ಶ್ಯಂ ವೈವರ್ಣ್ಯಮೇವ ಚ ।
ಕುಬ್ಜಭಾವಂ ಚ ಜರಯಾ ಯಃ ಪಶ್ಯತಿ ಸ ಮುಚ್ಯತೇ ॥೩೯॥

ಮುಪ್ಪು ಆವರಿಸಿದ ಕೂಡಲೇ ಚರ್ಮವು ಸುಕ್ಕುಗಟ್ಟುತ್ತದೆ, ತಲೆಕೂದಲು ನರೆಯುತ್ತದೆ, ದೇಹವು ಕೃಶವಾಗುತ್ತದೆ, ಸೊರಗುತ್ತದೆ. ಈ ರೀತಿಯಾದ ವಿಕಾರಗಳನ್ನು ಮನಗಂಡವನು ದೇಹಾಭಿಮಾನವನ್ನು ತೊರೆದು ಮುಕ್ತನಾಗುತ್ತಾನೆ.

ಪುಂಸ್ತ್ವೋಪಘಾತಂ ಕಾಲೇನ ದರ್ಶನೋಪರಮಂ ತಥಾ ।
ಬಾಧಿರ್ಯಂ ಪ್ರಾಣಮಂದತ್ವಂ ಯಃ ಪಶ್ಯತಿ ಸ ಮುಚ್ಯತೇ ॥೪೦॥

ವೃದ್ಧಾಪ್ಯದಲ್ಲಿ ಪುಂಸ್ತ್ವವು ನಾಶವಾಗುತ್ತದೆ, ದೃಷ್ಟಿಯು ಮಂದವಾಗುತ್ತದೆ, ಕಿವಿ ಕೇಳದು, ಪ್ರಾಣಶಕ್ತಿಯು ಕ್ಷೀಣಿಸುತ್ತದೆ. ಇದನ್ನು ಮೊದಲೇ ಮನಗಂಡವನು ಮುಕ್ತನಾಗುತ್ತಾನೆ.

ಗತಾನೃಷೀಂಸ್ತಥಾ ದೇವಾನಸುರಾಂಶ್ಚ ತಥಾ ಗತಾನ್ ।
ಲೋಕಾದಸ್ಮಾತ್ ಪರಂ ಲೋಕಂ ಯಃ ಪಶ್ಯತಿ ಸ ಮುಚ್ಯತೇ ॥೪೧॥

ಹಿಂದೆ ಆಗಿಹೋದ ಋಷಿಗಳನ್ನು, ದೇವತೆಗಳನ್ನು, ಅಸುರರನ್ನು ನೋಡುತ್ತಾ ಹುಟ್ಟಿದವನಿಗೆ ಮರಣವು ಜೊತೆಯಲ್ಲಿದೆ ಎಂಬುದನ್ನು ಯಾವನು ಸೂಕ್ಷ್ಮ ಬುದ್ಧಿಯಿಂದ ಕಂಡುಕೊಳ್ಳುತ್ತಾನೋ ಅವನು ಮುಕ್ತನಾಗುತ್ತಾನೆ.

ಪ್ರಭಾವೈರನ್ವಿತಾಸ್ತೈಸ್ತೈಃ ಪಾರ್ಥಿವೇಂದ್ರಾಃ ಸಹಸ್ರಶಃ ।
ಯೇ ಗತಾಃ ಪೃಥಿವೀಂ ತ್ಯಕ್ತ್ವಾ ಇತಿ ಜ್ಞಾತ್ವಾ ವಿಮುಚ್ಯತೇ ॥೪೨॥

ಆಯಾ ಪ್ರಭಾವಗಳಿಂದ ಕೂಡಿರುವ ಸಾವಿರಾರು ರಾಜರು ಕಾಲವು ಸನ್ನಿಹಿತವಾದೊಡನೆ ಈ ಭೂಮಿಯನ್ನು ತೊರೆದು ಹೋಗಿದ್ದಾರೆ. ಯಾರೂ ಈ ಭೂಮಿಯಲ್ಲಿ ಶಾಶ್ವತರಲ್ಲ ಎಂದು ತಿಳಿದವನು ಮುಕ್ತನಾಗುತ್ತಾನೆ.

ಅರ್ಥಾಂಶ್ಚ ದುರ್ಲಭಾಲ್ಲೋಕೇ ಕ್ಲೇಶಾಂಶ್ಚ ಸುಲಭಾಂಸ್ತಥಾ ।
ದುಃಖಂ ಚೈವ ಕುಟುಂಬಾರ್ಥೇ ಯಃ ಪಶ್ಯತಿ ಸ ಮುಚ್ಯತೇ ॥೪೩॥

ಅರ್ಥಪ್ರಾಪ್ತಿಯು ಈ ಲೋಕದಲ್ಲಿ ದುರ್ಲಭವಾದುದು. ದುಃಖಗಳು ಸುಲಭವಾದವು. ಕೌಟುಂಬಿಕವಾದ ದುಃಖಗಳು ನಿರಂತರವಾಗಿ ಒದಗಿ ಬರುತ್ತವೆ ಎಂಬುದನ್ನು ಯಾವನು ಮೊದಲೇ ಮನಗಾಣುತ್ತಾನೋ ಅವನು ಮುಕ್ತನಾಗುತ್ತಾನೆ.

ಅಪತ್ಯಾನಾಂ ಚ ವೈಗುಣ್ಯಂ ಜನಂ ವಿಗುಣಮೇವ ಚ ।
ಪಶ್ಯನ್ ಭೂಯಿಷ್ಠಶೋ ಲೋಕೇ ಕೋ ಮೋಕ್ಷಂ ನಾಭಿಪೂಜಯೇತ್ ॥

ಮಕ್ಕಳಲ್ಲಿರುವ ಗುಣಗಳ ಕೊರತೆ, ಬಂಧುಗಳಲ್ಲಿರುವ ವಿಪರೀತ ಗುಣಗಳು ಇದನ್ನು ಅಧಿಕವಾಗಿ ಜಗತ್ತಿನಲ್ಲಿ ನೋಡುತ್ತಿದ್ದರೆ ಯಾವನು ತಾನೇ ಮೋಕ್ಷವನ್ನು ಬಯಸುವುದಿಲ್ಲ?

ಶಾಸ್ತ್ರಾಲ್ಲೋಕಾಚ್ಚ ಯೋ ಬುದ್ಧಃ ಸರ್ವಂ ಪಶ್ಯತಿ ಮಾನವಃ ।
ಅಸಾರಮಿವ ಮಾನುಷ್ಯಂ ಸರ್ವಥಾ ಮುಕ್ತ ಏವ ಸಃ ॥೪೫॥

ಯಾವನು ಶಾಸ್ತ್ರಾಧ್ಯಯನ, ಲೋಕಾನುಭವಗಳಿಂದ ಜ್ಞಾನವನ್ನು ಪಡೆದು, ಜೀವನವು ನಿಸ್ಸಾರವೆಂದು ಅರಿತುಕೊಳ್ಳುತ್ತಾನೋ ಅವನು ಮುಕ್ತನಾದಂತೆ ಸರಿ.

ಏತಚ್ಛ್ರುತ್ವಾ ಮಮ ವಚೋ ಭವಾಂಶ್ಚರತು ಮುಕ್ತವತ್ ।
ಗಾರ್ಹಸ್ಥ್ಯೇ ಯದಿ ತೇ ಮೋಕ್ಷೇ ಕೃತಾ ಬುದ್ಧಿರವಿಕ್ಲವಾ ॥೪೬॥

ಸಗರನೇ, ನನ್ನ ಮಾತನ್ನು ಕೇಳಿದ ಬಳಿಕ ನಿನ್ನ ಬುದ್ಧಿಯ ಕಳವಳವನ್ನು ಪರಿಹರಿಸಿಕೊಂಡು ಗೃಹಸ್ಥಾಶ್ರಮದಲ್ಲೇ ಆಗಲಿ, ಸಂನ್ಯಾಸದಲ್ಲೇ ಆಗಲಿ ಇದ್ದುಕೊಂಡು ಮುಕ್ತನಂತೆ ವ್ಯವಹರಿಸು.

ತತ್ತಸ್ಯ ವಚನಂ ಶ್ರುತ್ವಾ ಸಮ್ಯಕ್ಸ ಪೃಥಿವೀಪತಿಃ ।
ಮೋಕ್ಷಜೈಶ್ಚ ಗುಣೈರ್ಯುಕ್ತಃ ಪಾಲಯಾಮಾಸ ಚ ಪ್ರಜಾಃ ॥೪೭॥

ಸಗರನು ಗರುಡನ ಉಪದೇಶವನ್ನು ಶ್ರದ್ಧೆಯಿಂದ ಕೇಳಿಸಿಕೊಂಡು, ಮೋಕ್ಷಕ್ಕೆ ಅನುಕೂಲವಾದ ಗುಣಗಳನ್ನು ಪಡೆದುಕೊಂಡು ಪ್ರಜೆಗಳನ್ನು ಪಾಲಿಸುತ್ತಿದ್ದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

॥ ಸಗರಾರಿಷ್ಟನೇಮಿಸಂವಾದಃ ಸಮಾಪ್ತಃ ॥

★ ★ ★ ★ ★

ನೂರ ಇಪ್ಪತ್ತೆರಡನೆಯ ಅಧ್ಯಾಯ

ಭೃಗುವಿನ ಮಗನಾದ ಉಷನಸನ ಚರಿತ್ರೆ.

ಯುಧಿಷ್ಠಿರಃ

ತಿಷ್ಠತೇ ಮೇ ಸದಾ ತಾತ ಕೌತೂಹಲಮಿದಂ ಹೃದಿ ।
ತದಹಂ ಶ್ರೋತುಮಿಚ್ಛಾಮಿ ತತ್ತಃ ಕುರುಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ನನ್ನ ಮನಸ್ಸಿನಲ್ಲಿ ಬಹಳ ಕಾಲದಿಂದ ಕುತೂಹಲ ಒಂದು ಉಳಿದಿದೆ. ನಿನ್ನಿಂದ ಸಮಾಧಾನವನ್ನು ಕೇಳಬಯಸುತ್ತೇನೆ.

ಕಥಂ ದೇವರ್ಷಿರುಶನಾ ಸದಾ ಕಾವ್ಯೋ ಮಹಾಮತಿಃ ।
ಅಸುರಾಣಾಂ ಪ್ರಿಯಕರಃ ಸುರಾಣಾಮಪ್ರಿಯೇ ರತಃ ॥೨॥

ಮಹಾಮತಿಯಾದ ಶುಕ್ರಾಚಾರ್ಯನು ದೇವರ್ಷಿಯು, ಉಷನಸನು ಅನಿಸಿದ ಅಸುರರಿಗೆ ಪ್ರಿಯನೂ, ಸುರರಿಗೆ ಅಪ್ರಿಯನು ಹೇಗಾದನು.

ವರ್ಧಯಾಮಾಸ ತೇಜಶ್ಚ ಕಿಮರ್ಥಮಮಿತೌಜಸಾಮ್ ।
ನಿತ್ಯಂ ವೈರನಿಬದ್ಧಾಶ್ಚ ದಾನವಾಃ ಸುರಸತ್ತಮೈಃ ॥೩॥

ಶುಕ್ರಾಚಾರ್ಯನು ದೇವತೆಗಳಿಗೆ ತೊಂದರೆಯಾಗುವ ರೀತಿಯಲ್ಲಿ ಅಸುರರನ್ನು ಏಕೆ ಬೆಳೆಸಿದನು? ದಾನವರು ದೇವತೆಗಳ ಜೊತೆಗೆ ನಿತ್ಯವೂ ವೈರದ ಸಂಬಂಧವನ್ನು ಉಳ್ಳವರು. ಇವರನ್ನು ಏಕೆ ಬೆಳೆಸಿದನು?

ಕಥಂ ಚಾಪ್ಯುಶನಾ ಪ್ರಾಪ ಶುಕ್ರತ್ವಮಮರದ್ಯುತಿಃ ।
ಋದ್ಧಿಂ ಚ ಸ ಕಥಂ ಪ್ರಾಪ್ತಃ ಸರ್ವಮೇತದ್ ಬ್ರವೀಹಿ ಮೇ ॥೪॥

ದೇವತೆಗಳಂತೆ ತೇಜಸ್ವಿಯಾದ ಉಶನಸನು ಶುಕ್ರ ಎಂಬ ಹೆಸರನ್ನು ಹೇಗೆ ಪಡೆದುಕೊಂಡನು? ವೃದ್ಧಿಯನ್ನು ಹೇಗೆ ಹೊಂದಿದನು? ಇವೆಲ್ಲವನ್ನೂ ನನಗೆ ಹೇಳಿ.

ನ ಯಾತಿ ಚ ಸ ತೇಜಸ್ವೀ ಮಧ್ಯೇನ ನಭಸಃ ಕಥಮ್ ।
ಏತದಿಚ್ಛಾಮಿ ವಿಜ್ಞಾತುಂ ನಿಖಿಲೇನ ಪಿತಾಮಹ ॥೫॥

ಪಿತಾಮಹನೇ, ಉಶನಸನು ಮಹಾತೇಜಸ್ವಿಯಾಗಿದ್ದರೂ ಆಕಾಶದ ಮಧ್ಯಭಾಗದಲ್ಲಿ ಪ್ರಯಾಣ ಮಾಡುವುದಿಲ್ಲವೇಕೆ? ಉಶನಸನ ಚರಿತ್ರೆಯನ್ನು ಸಮಗ್ರವಾಗಿ ಕೇಳಬೇಕೆಂಬ ಬಯಕೆ ಉಂಟಾಗಿದೆ.

ಭೀಷ್ಮಃ

ಶೃಣು ರಾಜನ್ನವಹಿತಃ ಸರ್ವಮೇತದ್ಯಥಾತಥಮ್ ।
ಯಥಾಮತಿ ಯಥಾ ಚೈತಚ್ಛ್ರುತಪೂರ್ವಂ ಮಯಾನಘ ॥೬॥

ಭೀಷ್ಮ– ದೋಷದೂರನೇ, ರಾಜನೇ, ಈ ಹಿಂದೆ ಉಶನಸನ ವಿಷಯವಾಗಿ ನಾನೂ ಸ್ವಲ್ಪ ಕೇಳಿಸಿಕೊಂಡು ಗ್ರಹಿಸಿಕೊಂಡಿದ್ದೇನೆ. ನನಗೆ ತಿಳಿದಷ್ಟು ವಿಷಯಗಳನ್ನು ನಿನಗೆ ತಿಳಿಸುತ್ತೇನೆ.

ಏಷ ಭಾರ್ಗವದಾಯಾದೋ ಮುನಿಃ ಸತ್ಯೋ ದೃಢವ್ರತಃ ।
ಅಸುರಾಣಾಂ ಪ್ರಿಯಕರೋ ನಿಮಿತ್ತೇ ಕರುಣಾತ್ಮಕೇ ॥೭॥

ಭೃಗುವಿನ ಮಗನಾದ, ಋಷಿಶ್ರೇಷ್ಠನಾದ, ಸರ್ವಮಾನ್ಯನಾದ, ದೃಢವಾದ ವ್ರತವುಳ್ಳ ಉಶನಸನು ಒಂದು ಪ್ರಬಲವಾದ ಕಾರಣದಿಂದ ದೇವತೆಗಳಿಗೆ ವಿರೋಧಿ ಎನಿಸಿದನು.

ಇಂದ್ರೋಽಥ ಧನದೋ ರಾಜಾ ಯಕ್ಷರಕ್ಷೋಧಿಪಃ ಸ ಚ ।
ಪ್ರಭವಿಷ್ಣುಶ್ಚ ಕೋಶಸ್ಯ ಜಗತಶ್ಚ ತಥಾ ಪ್ರಭುಃ ॥೮॥

ಯಕ್ಷ-ರಾಕ್ಷಸರಿಗೆ ರಾಜನಾದ, ಐಶ್ವರ್ಯವಂತನಾದ ಕುಬೇರನು ಜಗತ್ತಿನ ಸಂಪತ್ತಿಗೆ ಅಧ್ಯಕ್ಷನಾಗಿದ್ದನು. ಅವನಲ್ಲಿ ಒಡೆತನವಿತ್ತು.

ತಸ್ಯಾತ್ಮಾನಮಥಾವಿಶ್ಯ ಯೋಗಸಿದ್ಧೋ ಮಹಾಮುನಿಃ ।
ರುದ್ಧ್ವಾ ಧನಪತಿಂ ದೇವಂ ಯೋಗೇನ ಹೃತವಾನ್ವಸು ॥೯॥

ಮಹಾಮುನಿಯಾದ ಉಶನಸನು ತನ್ನ ಯೋಗಬಲದಿಂದ ಕುಬೇರನಲ್ಲಿ ಪ್ರವೇಶ ಮಾಡಿ, ಧನಪತಿಯನ್ನು ತಡೆದು ಅವನಲ್ಲಿರುವ ಸಂಪತ್ತೆಲ್ಲವನ್ನೂ ಅಪಹರಿಸಿದನು.

ಹೃತೇ ಧನೇ ತತಃ ಶರ್ಮ ನ ಲೇಭೇ ಧನದಸ್ತಥಾ ।
ಆಪನ್ನಮನ್ಯುಃ ಸಂವಿಗ್ನಃ ಸೋಽಭ್ಯಗಾತ್ ಸುರಸತ್ತಮಮ್ ॥೧೦॥

ಕುಬೇರನು ಉಶನಸನು ತನ್ನ ಸಂಪತ್ತೆಲ್ಲವನ್ನೂ ಅಪಹರಿಸಲು ಸಮಾಧಾನವನ್ನು ಹೊಂದಲಿಲ್ಲ. ಸಿಟ್ಟಿನಿಂದ ಕೂಡಿಕೊಂಡ ಕುಬೇರನು ಮಹಾದೇವನನ್ನು ಶರಣು ಹೊಂದಿದನು.

ನಿವೇದಯಾಮಾಸ ತದಾ ಶಿವಾಯಾಮಿತತೇಜಸೇ ।
ದೇವಶ್ರೇಷ್ಠಾಯ ರುದ್ರಾಯ ಸೌಮ್ಯಾಯ ಬಹುರೂಪಿಣೇ ॥೧೧॥

ಅಮಿತ ತೇಜಸ್ವಿಯಾದ ಶಿವನ ಬಳಿ ತನ್ನ ಗೋಳನ್ನು ಹೇಳಿಕೊಂಡನು. ಬಹುರೂಪಿಯಾದ, ಸೌಮ್ಯನಾದ, ದೇವಶ್ರೇಷ್ಠನಾದ ರುದ್ರನಿಗೆ ತನ್ನ ಕಷ್ಟವನ್ನು ತಿಳಿಸಿದನು.

ಕುಬೇರಃ

ಯೋಗಾತ್ಮಕೇನೋಶನಸಾ ರುದ್ಧ್ವಾ ಮಮ ಹೃತಂ ವಸು ।
ಯೋಗೇನಾತ್ಮಗತಿಂ ಕೃತ್ವಾ ನಿಃಸೃತಶ್ಚ ಮಹಾತಪಾಃ ॥೧೨॥

ಕುಬೇರ– ಪ್ರಭುವೇ, ಯೋಗಬಲದಿಂದ ಉಶನಸನು ನನ್ನಲ್ಲಿ ಪ್ರವೇಶಿಸಿ ನನ್ನನ್ನು ತಡೆದು ಐಶ್ವರ್ಯವನ್ನೆಲ್ಲ ಅಪಹರಿಸಿದ್ದಾನೆ. ಯೋಗಬಲದಿಂದ ಅಪಹರಿಸಿಕೊಂಡು ನನ್ನನ್ನು ಬಿಟ್ಟು ಹೋಗಿದ್ದಾನೆ.

ಭೀಷ್ಮಃ

ಏತಚ್ಛ್ರುತ್ವಾ ತತಃ ಕ್ರುದ್ಧೋ ಮಹಾಯೋಗೀ ಮಹೇಶ್ವರಃ ।
ಸಂರಕ್ತನಯನೋ ರಾಜನ್ ಶೂಲಮಾದಾಯ ತಸ್ಥಿವಾನ್ ॥೧೩॥

ಭೀಷ್ಮ– ಮಹಾರುದ್ರನು ಕುಬೇರನ ಈ ಮಾತನ್ನು ಕೇಳಿದ ಕೂಡಲೇ ಅತ್ಯಂತ ಕ್ರುದ್ಧನಾಗಿ, ಕೆಂಗಣ್ಣಿನಿಂದ ಕೂಡಿದವನಾಗಿ ತ್ರಿಶೂಲವನ್ನು ಹಿಡಿದು ನಿಂತನು.

ಕ್ವಾಸೌ ಕ್ವಾಸಾವಿತಿ ಪ್ರಾಹ ಗೃಹೀತ್ವಾ ಪರಮಾಯುಧಮ್ ।
ಉಶನಾ ದೂರತಸ್ತಸ್ಯ ಬಭೌ ಜ್ಞಾತ್ವಾ ಚಿಕೀರ್ಷಿತಮ್ ॥೧೪॥

ಶ್ರೇಷ್ಠವಾದ ಆಯುಧವನ್ನು ಹಿಡಿದು ಅವನು ಎಲ್ಲಿ? ಅವನು ಎಲ್ಲಿ? ಎಂದು ಗರ್ಜಿಸಿದನು. ಮಹಾದೇವನು ಏನು ಮಾಡಲು ಬಯಸಿದ್ದಾನೆ ಎಂಬುದನ್ನು ಯೋಗದೃಷ್ಟಿಯಿಂದಲೇ ತಿಳಿದುಕೊಂಡು ಉಶನಸನು ದೂರದಲ್ಲಿ ನಿಂತನು.

ಸ ಮಹಾಯೋಗಿನೋ ಬುದ್ಧ್ವಾ ತಂ ರೋಷಂ ವೈ ಮಹಾತ್ಮನಃ ।
ಗತಿಮಾಗಮನಂ ವೇತ್ತಿ ಸ್ಥಾನಂ ವೇತ್ತಿ ತತಃ ಪ್ರಭುಃ ॥೧೫॥

ಮಹಾಯೋಗಿಯಾದ, ಮಹಾತ್ಮನಾದ ರುದ್ರನ ಸಿಟ್ಟನ್ನು ತಿಳಿದ ಉಶನಸನು ದೂರಕ್ಕೆ ಹೊರಟು ಹೋದನು. ಯೋಗಸಿದ್ಧನಾದ ಆತನು ಯೋಗದಿಂದ ಹೋಗುವುದನ್ನು, ಬರುವುದನ್ನು, ನಿಲ್ಲುವುದನ್ನು ತಿಳಿದುಕೊಳ್ಳುತ್ತಿದ್ದನು.

ಸಂಚಿಂತ್ಯೋಗ್ರೇಣ ತಪಸಾ ಮಹಾತ್ಮಾನಂ ಮಹೇಶ್ವರಮ್ ।
ಉಶನಾ ಯೋಗಸಿದ್ಧಾತ್ಮಾ ಶೂಲಾಗ್ರೇ ಪ್ರತ್ಯದೃಶ್ಯತ ॥೧೬॥

ಯೋಗಸಿದ್ಧಿಯನ್ನು ಹೊಂದಿದ ಭಾರ್ಗವನು ತನ್ನ ತಪಸ್ಸಿನಿಂದ ಪರಶಿವನನ್ನು ಧ್ಯಾನಿಸಿ ತ್ರಿಶೂಲದ ತುದಿಯಲ್ಲಿಯೇ ಕಾಣಿಸಿಕೊಂಡನು.

ವಿಜ್ಞಾತರೂಪಃ ಸ ತದಾ ತಪಃಸಿದ್ಧೇನ ಧನ್ವಿನಾ ।
ಜ್ಞಾತ್ವಾ ಶೂಲಂ ಚ ದೇವೇಶಃ ಪಾಣಿನಾ ಸಮನಾಮಯತ್ ॥೧೭॥

ಧನುಸ್ಸನ್ನು ಧರಿಸಿದ ದೇವೇಶನು ಉಶನಸನು ತಪಸ್ಸಿದ್ಧನಾಗಿದ್ದಾನೆಂದು ತಿಳಿದುಕೊಂಡನು. ತನ್ನ ಶೂಲದ ಮೇಲೆಯೇ ಕುಳಿತುಕೊಂಡದ್ದನ್ನು ತಿಳಿದ ಶಿವನು ಧನುಸ್ಸಿದ್ದ ಕೈಯಿಂದ ಶೂಲವನ್ನು ಬಗ್ಗಿಸಿದನು.

ಆನತೇನಾಥ ಶೂಲೇನ ಪಾಣಿನಾಮಿತತೇಜಸಾ ।
ಪಿನಾಕಮಿತಿ ಚೋವಾಚ ಶೂಲಮುಗ್ರಾಯುಧಃ ಪ್ರಭುಃ ॥೧೮॥

ರುದ್ರನಿಂದ ಬಗ್ಗಿಸಲ್ಪಟ್ಟ ಅಮಿತ ತೇಜಸ್ವಿಯಾದ ಶೂಲವು ಶಿವನ ಕೈಯಲ್ಲಿ ಧನುಸ್ಸಿನ ರೂಪವನ್ನು ತಾಳಿತು. ಶಿವನು, ಶೂಲವು ಧನುಸ್ಸಿನಂತೆ ಬಗ್ಗಿದ ಕಾರಣದಿಂದ ಶೂಲವನ್ನು ಪಿನಾಕವೆಂದು ಕರೆದನು. ಅದು ಪಿನಾಕ ಧನುಸ್ಸೆಂದು ಖ್ಯಾತವಾಯಿತು.

ಪಾಣಿಮಧ್ಯಗತಂ ದೃಷ್ಟ್ವಾ ಭಾರ್ಗವಂ ತಮುಮಾಪತಿಃ ।
ಆಸ್ಯಂ ವಿವೃತ್ಯ ಕಕುದೀ ಪಾಣಿಂ ಸಂಪ್ರಾಕ್ಷಿಪಚ್ಚನೈಃ ॥೧೯॥

ತ್ರಿಶೂಲವನ್ನು ಬಗ್ಗಿಸುತ್ತಿರುವಂತೆ ಉಶನಸನು ರುದ್ರನ ಅಂಗೈಯಲ್ಲಿ ಸಿಕ್ಕಿದನು. ದೇವಾಧಿಪತಿಯಾದ ಪಶುಪತಿಯು ಭಾರ್ಗವನು ತನ್ನ ಕೈಯಲ್ಲಿರುವುದನ್ನು ಕಂಡು ಬಾಯನ್ನು ತೆರೆದು ಕೈಯಲ್ಲಿರುವ ಭಾರ್ಗವನನ್ನು ಬಾಯಿಗೆ ಹಾಕಿಕೊಂಡನು.

ಸ ತು ಪ್ರವಿಷ್ಟ ಉಶನಾ ಕೋಷ್ಠಂ ಮಾಹೇಶ್ವರಂ ಪ್ರಭುಃ ।
ವ್ಯಚರಚ್ಚಾಪಿ ತತ್ರಾಸೌ ಮಹಾತ್ಮಾ ಭೃಗುನಂದನಃ ॥೨೦॥

ಮಹೇಶ್ವರನ ಬಾಯಿಯ ಮೂಲಕ ಹೊಟ್ಟೆಯನ್ನು ಪ್ರವೇಶಿಸಿದ ಪ್ರಭುವಾದ, ಮಹಾತ್ಮನಾದ ಭೃಗುನಂದನನು ಅಲ್ಲಿಯೂ ಸಂಚರಿಸ ತೊಡಗಿದನು.

ಯುಧಿಷ್ಠಿರಃ

ಕಿಮರ್ಥಂ ವ್ಯಚರದ್ರಾಜನ್ನುಶನಾ ತಸ್ಯ ಧೀಮತಃ ।
ಜಠರೇ ದೇವದೇವಸ್ಯ ಕಿಂ ಚಾಕಾರ್ಷೀನ್ಮಹಾದ್ಯುತಿಃ ॥೨೧॥

ಯುಧಿಷ್ಠಿರ– ಪಿತಾಮಹನೇ, ದೇವದೇವನಾದ ಉಮಾಪತಿಯ ಜಠರದಲ್ಲಿ ತೇಜಸ್ವಿಯಾದ ಉಶನಸನು ಏಕೆ ಸಂಚರಿಸಿದನು? ಅಲ್ಲಿ ಅವನು ಏನು ಮಾಡಿದನು?

ಭೀಷ್ಮಃ

ಪುರಾ ಸೋಽಂತರ್ಜಲಗತಃ ಸ್ಥಾಣುಭೂತೋ ಮಹಾವ್ರತಃ ।
ವರ್ಷಾಣಾಮಭವದ್ ರಾಜನ್ ಪ್ರಯುತಾನ್ಯರ್ಬುದಾನಿ ಚ ॥೨೨॥

ಭೀಷ್ಮ– ನರೇಶ್ವರನೇ, ಬಳಿಕ ಮಹಾವ್ರತನಾದ ಮಹಾದೇವನು ನೀರಿನ ಮಧ್ಯದಲ್ಲಿ

ಪ್ರವೇಶಿಸಿ, ಮೋಟು ಮರದಂತೆ ಲಕ್ಷಕೋಟಿ ವರ್ಷಗಳ ತನಕ ತಪಸ್ಸನ್ನು ಮಾಡುತ್ತಿದ್ದನು.

ಉದತಿಷ್ಠತ್ತಪಸ್ತಪ್ತ್ವಾ ದುಶ್ಚರಂ ಸ ಮಹಾಹ್ರದಾತ್ ।
ತತೋ ದೇವಾತಿದೇವಸ್ತಂ ಬ್ರಹ್ಮಾ ಸಮುಪಸರ್ಪತ ॥೨೩॥

ದುಶ್ಚರವಾದ ತಪಸ್ಸನ್ನು ಮುಗಿಸಿದ ಬಳಿಕ ಮಹಾದೇವನು ಸರಸ್ಸಿನಿಂದ ಹೊರಬಂದಾಗ, ದೇವದೇವನಾದ ಬ್ರಹ್ಮನು ಶಿವನ ಬಳಿಗೆ ಹೋದನು.

ತಪೋವೃದ್ಧಿಮಪೃಚ್ಛಚ್ಚ ಕುಶಲಂ ಚೈನಮವ್ಯಯಮ್ ।
ತಪಃ ಸುಚೀರ್ಣಮಿತಿ ಚ ಪ್ರೋವಾಚ ವೃಷಭಧ್ವಜಃ ॥೨೪॥

ಚತುರ್ಮುಖ ಬ್ರಹ್ಮನು ಶಿವನ ತಪೋವೃದ್ಧಿಗೆ ಸಂಬಂಧಿಸಿದ ಕುಶಲ ಪ್ರಶ್ನೆಯನ್ನು ಕೇಳಿದನು. ವೃಷಭಧ್ವಜನು ತಪಸ್ಸು ಚೆನ್ನಾಗಿ ಅನುಷ್ಠಾನಿಸಲ್ಪಟ್ಟಿದೆ ಎಂದನು.

ತತ್ಸಂಯೋಗೇನ ವೃದ್ಧಿಂ ಚಾಪ್ಯಪಶ್ಯತ್ ಸ ತು ಶಂಕರಃ ।
ಮಹಾಮತಿರಚಿಂತ್ಯಾತ್ಮಾ ಸತ್ಯಧರ್ಮರತಃ ಸದಾ ॥೨೫॥

ಬಳಿಕ ಮಹಾಮತಿಯಾದ, ಅಚಿಂತ್ಯರೂಪನಾದ, ಸತ್ಯಧರ್ಮರತನಾದ ಶಂಕರನು ತಾನು ನೀರಿನಲ್ಲಿನಿಂತು ತಪಸ್ಸು ಮಾಡುತ್ತಿದ್ದಾಗ ತನ್ನ ಉದರದಲ್ಲಿಯೇ ಸಂಪರ್ಕವನ್ನು ಹೊಂದಿರುವ ಕಾರಣ ಉಶನಸನು ತಪಸ್ಸಿನಿಂದ ವೃದ್ಧಿಯನ್ನು ಹೊಂದಿರುವುದನ್ನು ಅಂತರ್ದೃಷ್ಟಿಯಿಂದಲೇ ಕಂಡುಕೊಂಡನು.

ಸ ತೇನಾಢ್ಯೋ ಮಹಾಯೋಗೀ ತಪಸಾ ಚ ಧನೇನ ಚ ।
ವ್ಯರಾಜತ ಮಹಾರಾಜ ತ್ರಿಷು ಲೋಕೇಷು ವೀರ್ಯವಾನ್ ॥೨೬॥

ಅದೇ ಕಾರಣದಿಂದ ಮಹಾಯೋಗಿಯಾದ ಉಶನಸನು ತಪಸ್ಸಿನಿಂದ ಮೂರು ಲೋಕದಲ್ಲಿ ವೀರ್ಯವಂತನಾಗಿ ಕಂಗೊಳಿಸಿದನು.

ತತಃ ಪಿನಾಕೀ ಯೋಗಾತ್ಮಾ ಧ್ಯಾನಯೋಗಂ ಸಮಾವಿಶತ್ ।
ಉಶನಾ ತು ಸಮುದ್ವಿಗ್ನೋ ನಿಲಿಲ್ಯೇ ಜಠರೇ ತತಃ ॥೨೭॥

ಬಳಿಕ ಯೋಗಾತ್ಮನಾದ ಪಿನಾಕಿಯು ಧ್ಯಾನಯೋಗವನ್ನು ಪ್ರವೇಶಿಸಿದನು. ಉಶನಸನಾದರೂ ಕಳವಳಗೊಂಡವನಾಗಿ ಶಿವನ ಹೊಟ್ಟೆಯಲ್ಲಿಯೇ ಉಳಿದುಕೊಂಡನು.

ತುಷ್ಟಾವ ಚ ಮಹಾಯೋಗೀ ದೇವಂ ತತ್ರಸ್ಥ ಏವ ಚ ।
ನಿಃಸಾರಂ ಕಾಂಕ್ಷಮಾಣಸ್ತು ತೇಜಸಾ ಪ್ರತ್ಯಹನ್ಯತ ॥೨೮॥

ಮಹಾಯೋಗಿಯಾದ ಉಶನಸನು ಅಲ್ಲಿಯೇ ಇದ್ದು ಸದಾಶಿವನನ್ನು ಸಂತೋಷಗೊಳಿಸಿದನು. ಶಿವನ ಹೊಟ್ಟೆಯಿಂದ ಹೊರಬರುವ ಮಾರ್ಗವನ್ನು ಅನ್ವೇಷಿಸುತ್ತಿದ್ದನು. ಮಹಾದೇವನು ತನ್ನ ತೇಜಸ್ಸಿನಿಂದ ಹೊರಹೋಗಲು ಬಯಸುವ ಅವನನ್ನು ತಡೆಯುತ್ತಿದ್ದನು.

ಉಶನಾ ತು ತದೋವಾಚ ಜಠರಸ್ಥೋ ಮಹಾಮುನಿಃ ।
ಪ್ರಸಾದಂ ಮೇ ಕುರುಷ್ವೇತಿ ಪುನಃ ಪುನರರಿಂದಮ ॥೨೯॥

ಮಹಾಮುನಿಯಾದ ಉಶನಸನು ಜಠರದಲ್ಲಿದ್ದುಕೊಂಡೇ ಮಹಾದೇವನನ್ನು ಕುರಿತು- 'ಮಹಾದೇವನೇ, ನನ್ನನ್ನು ಅನುಗ್ರಹಿಸು' ಎಂದು ಪುನಃ ಪುನಃ ಪ್ರಾರ್ಥಿಸುತ್ತಿದ್ದನು.

ತಮುವಾಚ ಮಹಾದೇವೋ ಗಚ್ಛ ಶಿಶ್ನೇನ ಮೋಕ್ಷಣಮ್ ।
ಇತಿ ಸ್ರೋತಾಂಸಿ ಸರ್ವಾಣಿ ರುದ್ಧ್ವಾ ತ್ರಿದಶಪುಂಗವಃ ॥೩೦॥

ಉಶನಸನನ್ನು ಕುರಿತು, ಮಹಾದೇವನು ನನ್ನ ಜನನಮಾರ್ಗದಿಂದಲೇ ಬಿಡುಗಡೆಯನ್ನು ಹೊಂದುವಿ. ಆದ್ದರಿಂದ ಆ ಮಾರ್ಗದಿಂದಲೇ ಹೊರಕ್ಕೆ ಹೋಗು ಎಂದು ಹೇಳುತ್ತಾ ಉಳಿದ ಮಾರ್ಗಗಳನ್ನು ತಡೆಹಿಡಿದನು.

ಅಪಶ್ಯಮಾನಃ ಸ ದ್ವಾರಂ ಸರ್ವತಃಪಿಹಿತೋ ಮುನಿಃ ।
ಪರ್ಯಕ್ರಾಮದ್ ದಹ್ಯಮಾನ ಇತಶ್ಚೇತಶ್ಚ ತೇಜಸಾ ॥೩೧॥

ಮಹಾರುದ್ರನ ಎಲ್ಲ ದ್ವಾರಗಳು ಮುಚ್ಚಿರುವುದನ್ನು ಕಂಡ ಮುನಿಯು ಅವನ ತೇಜಸ್ಸಿನಿಂದ ದಹಿಸಲ್ಪಡುತ್ತಾ, ಚಡಪಡಿಸುತ್ತಾ, ಶಂಕರನ ಹೊಟ್ಟೆಯಲ್ಲಿಯೇ ಅತ್ತಿಂದಿತ್ತ ಸಂಚರಿಸುತ್ತಿದ್ದನು.

ಸ ವಿನಿಷ್ಕ್ರಮ್ಯ ಶಿಶ್ನೇನ ಶುಕ್ರತ್ವಮಭಿಪೇದಿವಾನ್ ।
ಕಾರ್ಯೇಣ ತೇನ ನಭಸೋ ನಾಗಚ್ಛತ ಚ ಮಧ್ಯತಃ ॥೩೨॥

ಕೊನೆಗೆ ಸದಾಶಿವನ ಜನನೇಂದ್ರಿಯದಿಂದ ವೀರ್ಯರೂಪದಿಂದ ಹೊರಬಂದು ಶುಕ್ರ ಎಂಬ ಅನ್ವರ್ಥನಾಮವನ್ನೇ ಪಡೆದುಕೊಂಡನು. ಈ ಕಾರಣದಿಂದಲೇ ಉಶನಸನು ಆಕಾಶದ ಮಧ್ಯಭಾಗದಲ್ಲಿ ಸಂಚರಿಸಲು ಅವಕಾಶವನ್ನು ಹೊಂದಲಿಲ್ಲ.

ನಿಷ್ಕ್ರಾಂತಮಥ ತಂ ದೃಷ್ಟ್ವಾ ಜ್ವಲಂತಮಿವ ತೇಜಸಾ ।
ಭವೋ ರೋಷಸಮಾವಿಷ್ಟಃ ಶೂಲೋದ್ಯತಕರಃ ಸ್ಥಿತಃ ॥೩೩॥

ತನ್ನಿಂದ ಹೊರಬಂದ ಉಶನಸನು ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವುದನ್ನು ಕಂಡು ಮಹರುದ್ರನು ಸಿಟ್ಟುಗೊಂಡವನಾಗಿ, ಶೂಲಪಾಣಿಯಾಗಿ ಕೈಯನ್ನು ಮೇಲೆತ್ತಿ ನಿಂತುಕೊಂಡನು.

ನ್ಯವಾರಯತ ತಂ ದೇವೀ ಕ್ರುದ್ಧಂ ಪಶುಪತಿಂ ಪತಿಮ್ ।
ಪುತ್ರತ್ವಮಗಮದ್ದೇವ್ಯಾ ವಾರಿತೇ ಶಂಕರೇ ಚ ಸಃ ॥೩೪॥

ಈ ಸಮಯದಲ್ಲಿ ಪಾರ್ವತಿಯು ಸಿಟ್ಟಾಗಿರುವ ತನ್ನ ಪತಿಯನ್ನು ತಡೆಹಿಡಿದಳು. ಆದ್ದರಿಂದಲೇ ಶುಕ್ರನು ಪಾರ್ವತಿಗೆ ಪುತ್ರನಂತಾದನು.

ದೇವೀ

ಹಿಂಸನೀಯಸ್ತ್ವಯಾ ನೈಷ ಮಮ ಪುತ್ರತ್ವಮಾಗತಃ ।
ನ ಹಿ ದೇವೋದರಾತ್ ಕಶ್ಚಿನ್ನಿಃಸೃತೋ ನಾಶಮರ್ಹತಿ ॥೩೫॥

ದೇವಿ– ಪತಿದೇವನೇ, ಉಶನಸನು ನಿನ್ನ ಮಗನಂತಾಗಿದ್ದಾನೆ. ಅವನನ್ನು ಸಂಹರಿಸಬಾರದು. ನಿನ್ನ ಹೊಟ್ಟೆಯಿಂದ ಹೊರಬಂದವನು ಯಾವಾತನೇ ಆಗಿದ್ದರೂ ಅವನು ವಿನಾಶವನ್ನು ಹೊಂದಬಾರದು.

ಭೀಷ್ಮಃ

ತತಃ ಪ್ರೀತೋಽಭವದ್ದೇವ್ಯಾಃ ಪ್ರಹಸಂಶ್ಚೇದಮಬ್ರವೀತ್ ।
ಗಚ್ಛತ್ವೇಷ ಯಥಾಕಾಮಮಿತಿ ರಾಜನ್ ಪುನಃ ಪುನಃ ॥೩೬॥

ಭೀಷ್ಮ– ದೇವಿಯ ಮಾತಿನಿಂದ ಪ್ರಸನ್ನನಾದ ಶಿವನು ನಗುತ್ತಾ, ಇವನು ತನ್ನ ಇಚ್ಛೆ ಬಂದ ಕಡೆ ಹೊರಟು ಹೋಗಲಿ ಎಂದು ಹೇಳಿದನು.

ತತಃ ಪ್ರಣಮ್ಯ ವರದಂ ದೇವಂ ದೇವೀಮುಮಾಂ ತಥಾ ।
ಉಶನಾ ಪ್ರಾಪ ತದ್ದೀಮಾನ್ ಗತಿಮಿಷ್ಟಾಂ ಮಹಾಮುನಿಃ ॥೩೭॥

ವರದನಾದ ರುದ್ರನಿಗೂ, ಪಾರ್ವತಿಗೂ ಪುನಃ ಪುನಃ ಶುಕ್ರನು ನಮಿಸಿ ತನಗೆ ಇಷ್ಟವಾದ ಸ್ಥಾನವನ್ನು ಹೊಂದಿದನು.

ಏತತ್ತೇ ಕಥಿತಂ ತಾತ ಭಾರ್ಗವಸ್ಯ ಮಹಾತ್ಮನಃ ।
ಚರಿತಂ ಭರತಶ್ರೇಷ್ಠ ಯನ್ಮಾಂ ತ್ವಂ ಪರಿಪೃಚ್ಛಸಿ ॥೩೮॥

ಯುಧಿಷ್ಠಿರನೇ, ಉಶನಸನ ಬಗ್ಗೆ ಕೇಳಿದ ಪ್ರಶ್ನೆಗೆ ಆ ಭಾರ್ಗವನ ಚರಿತ್ರೆಯನ್ನು ವಿಸ್ತಾರವಾಗಿ ನಿನಗೆ ಹೇಳಿದ್ದೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಾವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ಮೂರನೆಯ ಅಧ್ಯಾಯ

ಧರ್ಮರಾಜನಿಗೆ ಭೀಷ್ಮರು ಪರಾಶರಗೀತೆಯನ್ನು ಉಪದೇಶಿಸಿದುದು.

ಯುಧಿಷ್ಠಿರಃ

ಅತಃ ಪರಂ ಮಹಾಬಾಹೋ ಯಚ್ಛ್ರೇಯಸ್ತದ್ ವದಸ್ವ ಮೇ ।
ನ ತೃಪ್ಯಾಮ್ಯಮೃತಸ್ಯೇವ ವಚಸಸ್ತೇ ಪಿತಾಮಹ ॥೧॥

ಯುಧಿಷ್ಠಿರ– ಮಹಾಬಾಹುವೇ, ಪಿತಾಮಹನೇ, ನನ್ನ ಶ್ರೇಯಸ್ಸಿಗೆ ಯೋಗ್ಯವಾದ ಉಪಾಯ ಯಾವುದೋ ಅದನ್ನು ಹೇಳು. ನಿನ್ನ ಅಮೃತ ಸಮಾನವಾದ ಮಾತನ್ನು ಕೇಳುತ್ತಿದ್ದಂತೆ ಇನ್ನೂ ಕೇಳಬೇಕೆಂಬ ತವಕವು ನನ್ನಲ್ಲುಂಟಾಗಿದೆ. ನನಗೆ ತೃಪ್ತಿ ಇಲ್ಲ.

ಕಿಂ ಕರ್ಮ ಪುರುಷಃ ಕೃತ್ವಾ ಶುಭಂ ಪುರುಷಸತ್ತಮ ।
ಶ್ರೇಯಃ ಪರಮವಾಪ್ನೋತಿ ಪ್ರೇತ್ಯ ಚೇಹ ಚ ತದ್ವದ ॥೨॥

ಪುರುಷಸತ್ತಮನೇ, ಯಾವ ಶುಭಕರ್ಮವನ್ನು ಮಾಡಿದ ಪುರುಷನು ಇಹ-ಪರ ಲೋಕಗಳಲ್ಲಿ ಶ್ರೇಯಸ್ಸನ್ನು ಹೊಂದುತ್ತಾನೆ? ಈ ವಿಷಯವನ್ನು ಹೇಳುವ ಕೃಪೆತೋರು.

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಯಥಾ ಪೂರ್ವಂ ಮಹಾಯಶಾಃ ।
ಪರಾಶರಂ ಮಹಾತ್ಮಾನಂ ಪಪ್ರಚ್ಛ ಜನಕೋ ನೃಪಃ ॥೩॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಹಿಂದೆ ಮಹಾಯಶೋವಂತನಾದ ಜನಕರಾಜನು ಯಾವ ರೀತಿಯಲ್ಲಿ ಮಹಾತ್ಮರಾದ ಪರಾಶರರನ್ನು ಪ್ರಶ್ನಿಸಿದನೋ ಅದನ್ನು ಹೇಳುತ್ತೇನೆ.

ಕಿಂ ಶ್ರೇಯಃ ಸರ್ವಭೂತಾನಾಮಸ್ಮಿಲ್ಲೋಕೇ ಪರತ್ರ ಚ ।
ಯದ್ ಭವೇತ್ ಪ್ರತಿಪತ್ತವ್ಯಂ ತದ್ ಭವಾನ್ ಪ್ರಬ್ರವೀತು ಮೇ ॥೪॥

ಪೂಜ್ಯರೇ, ಇಹ-ಪರಲೋಕದಲ್ಲಿ ಸಕಲ ಪ್ರಾಣಿಗಳಿಗೆ ಶ್ರೇಯೋಮಾರ್ಗವು ಯಾವುದು? ಯಾವ ಮಾರ್ಗ ಹೊಂದಲು ಯೋಗ್ಯವು? ಈ ವಿಷಯವನ್ನು ಕರುಣೆಯಿಂದ ತಿಳಿಸಿರಿ.

ತತಃ ಸ ತಪಸಾ ಯುಕ್ತಃ ಸರ್ವಧರ್ಮವಿಧಾನವಿತ್ ।
ನೃಪಾಯಾನುಗ್ರಹಮನಾ ಮುನಿರ್ವಾಕ್ಯಮಥಾಬ್ರವೀತ್ ॥೫॥

ಯುಧಿಷ್ಠಿರನೇ, ಹೀಗೆ ಪ್ರಶ್ನಿಸಲ್ಪಟ್ಟ ಜನಕನಿಗೆ, ಸಮಸ್ತ ಧರ್ಮಗಳ ವಿಧಾನವನ್ನು ತಿಳಿದಿದ್ದ, ತಪಸ್ಸಿನಿಂದ ಕೂಡಿರುವ ಪರಾಶರರು ರಾಜನನ್ನು ಅನುಗ್ರಹಿಸಲು ಹೀಗೆ ಹೇಳಿದರು.

ಧರ್ಮ ಏವ ಕೃತಃ ಶ್ರೇಯಾನಿಹ ಲೋಕೇ ಪರತ್ರ ಚ ।
ತಸ್ಮಾದ್ಧಿ ಪರಮಂ ನಾಸ್ತಿ ಯಥಾ ಪ್ರಾಹುರ್ಮನೀಷಿಣಃ ॥೬॥

ಜನಕನೇ, ಧರ್ಮಾನುಷ್ಠಾನವನ್ನು ಮಾಡುವುದರಿಂದಲೇ ಇಹ-ಪರಲೋಕಗಳಲ್ಲಿ ಶ್ರೇಯಸ್ಸಾಗುತ್ತದೆ. ಶ್ರೇಯಸ್ಸಾಧನಕ್ಕೆ ಧರ್ಮಾಚರಣೆಗಿಂತ ಉತ್ತಮವಾದ ಮಾರ್ಗವಿಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ.

ಪ್ರತಿಪದ್ಯ ನರೋ ಧರ್ಮಂ ಸ್ವರ್ಗಲೋಕೇ ಮಹೀಯತೇ ।
ಧರ್ಮಾತ್ಮಕಃ ಕರ್ಮವಿಧಿರ್ದೇಹಿನಾಂ ನೃಪಸತ್ತಮ ।
ತಸ್ಮಿನ್ನಾಶ್ರಮಿಣಃ ಸಂತಃ ಸ್ವಕರ್ಮಾಣೀಹ ಕುರ್ವತೇ ॥೭॥

ಪುರುಷನು ಧರ್ಮವನ್ನು ಆಶ್ರಯಿಸಿ ಸ್ವರ್ಗಲೋಕದಲ್ಲಿಯೂ ಮಾನಿತನಾಗುತ್ತಾನೆ. ವೇದಗಳಲ್ಲಿ ಯಾವ ಧರ್ಮ-ಕರ್ಮಗಳು ಹೇಳಲ್ಪಟ್ಟಿವೆಯೋ ಅವುಗಳೇ ಧರ್ಮದ ಲಕ್ಷಣವೆನಿಸಿವೆ. ಎಲ್ಲ ಆಶ್ರಮಿಗಳು ವೇದೋಕ್ತ ಕರ್ಮವಿಧಿಗಳನ್ನೇ ಅನುಷ್ಠಾನ ಮಾಡುತ್ತಾರೆ.

ಚತುರ್ವಿಧಾ ಹಿ ಲೋಕಸ್ಯ ಯಾತ್ರಾ ತಾತ ವಿಧೀಯತೇ ।
ಮರ್ತ್ಯಾ ಯತ್ರಾವತಿಷ್ಠಂತೇ ಸಾ ಚ ಕಾಮಾತ್ ಪ್ರವರ್ತತೇ ॥೮॥

ಈ ಜಗತ್ತಿನಲ್ಲಿ ಬದುಕಿನ ವಿಧಾನವು ನಾಲ್ಕು ರೀತಿಯಲ್ಲಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಜೀವಿಕೆಯ ಕ್ರಮಗಳನ್ನು ಬೇರೆ ಬೇರೆ ರೀತಿ ಹೇಳಿದ್ದಾರೆ. ಇವೆಲ್ಲವೂ ದೈವೇಚ್ಛೆಯಿಂದಲೇ ಒದಗುವಂತಹವು.

ಸುಕೃತಾಸುಕೃತಂ ಕರ್ಮ ನಿಷೇವ್ಯ ವಿವಿಧೈಃ ಕ್ರಮೈಃ ।
ದಶಾರ್ಧಪ್ರವಿಭಕ್ತಾನಾಂ ಭೂತಾನಾಂ ಬಹುಧಾ ಗತಿಃ ॥೯॥

ಪುಣ್ಯ-ಪಾಪಗಳಿಂದ ಕೂಡಿದ ಕರ್ಮಗಳನ್ನು ನಾನಾ ವಿಧ ಕ್ರಮದಿಂದ ಅನುಷ್ಠಾನ ಮಾಡಿದ ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯರಿಗೆ ಅನೇಕ ವಿಧವಾದ ಗತಿಗಳುಂಟಾಗುತ್ತವೆ.

ಸೌವರ್ಣಂ ರಾಜತಂ ವಾಪಿ ಯಥಾ ಭಾಂಡಂ ನಿಷಿಚ್ಯತೇ ।
ತಥಾ ನಿಷಿಚ್ಯತೇ ಜಂತುಃ ಪೂರ್ವಕರ್ಮವಶಾನುಗಃ ॥೧೦॥

ಬಂಗಾರದ ಪಾತ್ರೆಯನ್ನಾಗಲಿ, ಬೆಳ್ಳಿಯ ಪಾತ್ರೆಯನ್ನಾಗಲಿ ಅಗ್ನಿಯಲ್ಲಿ ಕರಗಿಸಿ ಪುನಃ ಅದನ್ನು ನೀರಿನಲ್ಲಿ ಮುಳುಗಿಸುತ್ತಾರೆ. ಅದರಂತೆ ಜೀವನು ತನ್ನ ಕರ್ಮವಶದಿಂದ ಈ ಸಂಸಾರದಲ್ಲಿ ಮುಳುಗಿಸಲ್ಪಡುತ್ತಾನೆ.

ನಾಬೀಜಾಜ್ಜಾಯತೇ ಕಿಂಚಿನ್ನಾಕೃತ್ವಾ ಸುಖಮೇಧತೇ ।
ಸುಕೃತೀ ವಿಂದತಿ ಸುಖಂ ಪ್ರಾಪ್ಯ ದೇಹಕ್ಷಯಂ ನರಃ ॥೧೧॥

ಬೀಜವಿಲ್ಲದೆ ಅಂಕುರ ಮೊಳೆಯುವುದಿಲ್ಲ. ಅದರಂತೆ ಪುಣ್ಯಕರ್ಮವಿಲ್ಲದೆ ಮನುಷ್ಯನು ಸುಖವನ್ನು ಹೊಂದಲಾರ. ದೇಹಕ್ಷಯವಾದ ಬಳಿಕ ಸುಕೃತದಿಂದಲೇ ಪುಣ್ಯಲೋಕದ ಸುಖವನ್ನು ಮನುಷ್ಯನು ಹೊಂದುತ್ತಾನೆ.

ದೈವಂ ತಾತ ನ ಪಶ್ಯಾಮಿ ನಾಸ್ತಿ ದೈವಸ್ಯ ಸಾಧನಮ್ ।
ಸ್ವಭಾವತೋ ಹಿ ಸಂಸಿದ್ಧಾ ದೇವಗಂಧರ್ವದಾನವಾಃ ॥೧೨॥

ಜನಕರಾಜನೇ, ಈ ವಿಷಯದಲ್ಲಿ ಸ್ವಭಾವವನ್ನು ಅತಿಕ್ರಮಿಸಿ ದೈವವು ಫಲದಾಯಕವೆಂಬುದನ್ನು ನಾನು ತಿಳಿದಿರುವುದಿಲ್ಲ. ದೈವವು ಸ್ವಭಾವವನ್ನು ಅವಲಂಬಿಸಿಕೊಂಡೇ ಅನುಗ್ರಹಿಸುತ್ತದೆ. ದೇವ-ಗಂಧರ್ವ-ದಾನವರೆಲ್ಲರೂ ಸ್ವಭಾವದಿಂದಲೇ ಸಿದ್ಧಿಯನ್ನು ಹೊಂದಿದವರು.

ಪ್ರೇತ್ಯ ಜಾತಿಕೃತಂ ಕರ್ಮ ನ ಸ್ಮರಂತಿ ಸದಾ ಜನಾಃ ।
ತೇ ವೈ ತಸ್ಯ ಫಲಪ್ರಾಪ್ತೌ ಕರ್ಮ ಚಾಪಿ ಚತುರ್ವಿಧಮ್ ॥೧೩॥

ಜನರು ಯಾವಾಗಲೂ ಸತ್ತ ಬಳಿಕ ಜಾತಿಯಿಂದ ಮಾಡಲ್ಪಟ್ಟ ಕರ್ಮವನ್ನು ಸ್ಮರಿಸರು. ಪುಣ್ಯ-ಪಾಪ ರೂಪ ಫಲಪ್ರಾಪ್ತಿಗೆ ಕರ್ಮವೇ ಕಾರಣ. ಕರ್ಮವಾದರೂ ನಾಲ್ಕು ವಿಧವಾದುದು. ಮಾತು-ಮನಸ್ಸು-ಕಣ್ಣು-ಕರ್ಮ ಇವುಗಳಿಂದ ನಡೆಯುವ ಕರ್ಮವು ನಾಲ್ಕು ವಿಧ.

ಲೋಕಯಾತ್ರಾಶ್ರಯಶ್ಚೈವ ಶಬ್ದೋ ವೇದಾಶ್ರಯಃ ಕೃತಃ ।
ಶಾಂತ್ಯರ್ಥಂ ಮನಸಸ್ತಾತ ನೈತದ್ವೃದ್ಧಾನುಶಾಸನಮ್ ॥೧೪॥

ವೇದಗಳೆಲ್ಲವೂ ಬದುಕಿಗಾಗಿ ಹೇಳಲ್ಪಟ್ಟಿವೆ. ಮನಸ್ಸಿನ ಶಾಂತಿಗಾಗಿ ಈ ವೇದಗಳು ಎಂಬ ಮಾತೇನಿದೆಯೋ ಇದು ಪ್ರಾಚೀನ ವೃದ್ಧರ ಮಾತುಗಳಾಗಿರುವುದಿಲ್ಲ. ನಾಸ್ತಿಕರ ವಾದವಾಗಿದೆ ಎಂದು ಭಾವ.

ಚಕ್ಷುಷಾ ಮನಸಾ ವಾಚಾ ಕರ್ಮಣಾ ಚ ಚತುರ್ವಿಧಮ್ ।
ಕುರುತೇ ಯಾದೃಶಂ ಕರ್ಮ ತಾದೃಶಂ ಪ್ರತಿಪದ್ಯತೇ ॥೧೫॥

ಕಣ್ಣಿನಿಂದ, ಮನಸ್ಸಿನಿಂದ, ಮಾತಿನಿಂದ, ಕ್ರಿಯೆಗಳಿಂದ ಮನುಷ್ಯನು ಯಾವ ರೀತಿಯಾದ ಕರ್ಮವನ್ನು ಮಾಡುತ್ತಾನೋ ಅದಕ್ಕೆ ತಕ್ಕಂತೆ ಫಲವನ್ನು ಹೊಂದುತ್ತಾನೆ.

ನಿರಂತರಂ ಚ ಮಿಶ್ರಂ ಚ ಫಲತೇ ಕರ್ಮ ಪಾರ್ಥಿವ ।
ಕಲ್ಯಾಣಂ ಯದಿ ವಾ ಪಾಪಂ ನ ತು ನಾಶೋಽಸ್ಯ ವಿದ್ಯತೇ ॥೧೬॥

ಮನುಷ್ಯನು ಯಾವಾಗಲೂ ಸುಖ-ದುಃಖಗಳನ್ನು, ಅದಕ್ಕೆ ಸಂಬಂಧಪಟ್ಟ ಕರ್ಮಗಳನ್ನು ಹೊಂದುತ್ತಾನೆ. ಪುಣ್ಯವಾಗಲಿ, ಪಾಪಫಲವಾಗಲಿ ಅನುಭವಿಸದೆ ಅದು ನಾಶ ಹೊಂದದು.

ಕದಾಚಿತ್ ಸುಕೃತಂ ತಾತ ಕೂಟಸ್ಥಮಿವ ತಿಷ್ಠತಿ ।
ಮಜ್ಜಮಾನಸ್ಯ ಸಂಸಾರೇ ಯಾವದ್ ದುಃಖಾದ್ ವಿಮುಚ್ಯತೇ ॥೧೭॥

ಕೆಲವೊಮ್ಮೆ ಸಂಸಾರದಲ್ಲಿ ಮನುಷ್ಯನ ಸುಕೃತವು ನಿರ್ವಿಕಾರವಾಗಿರುತ್ತದೆ. ಯಾವಾಗ ಸಂಸಾರದಲ್ಲಿ ಮುಳುಗಿದವನ ದುಃಖವು ಬಿಡುಗಡೆಯಾಗುತ್ತದೋ ಆಗ ಪುಣ್ಯವು ಫಲಪ್ರದವಾಗುತ್ತದೆ.

ತತೋ ದುಃಖಕ್ಷಯಂ ಕೃತ್ವಾ ಸುಕೃತಂ ಕರ್ಮ ಸೇವತೇ ।
ಸುಕೃತಕ್ಷಯಾದ್ ದುಷ್ಕೃತಂ ಚ ತದ್ ವಿದ್ಧಿ ಮನುಜಾಧಿಪ ॥೧೮॥

ಬಳಿಕ ದುಃಖದ ನಾಶವನ್ನು ಹೊಂದಿ ಸುಕೃತ ಕರ್ಮವನ್ನು ಸೇವಿಸುತ್ತಾನೆ. ಸುಕೃತ ನಾಶವಾದ ಬಳಿಕ ದುಷ್ಕೃತವನ್ನು, ದುಷ್ಕೃತ ಜನ್ಯ ಕರ್ಮಫಲವನ್ನು ಅನುಭವಿಸುತ್ತಾನೆ ಎಂದು ತಿಳಿ.

ದಮಃ ಕ್ಷಮಾ ಧೃತಿಸ್ತೇಜಃ ಸಂತೋಷಃ ಸತ್ಯವಾದಿತಾ ।
ಹ್ರೀರಹಿಂಸಾವ್ಯಸನಿತಾ ದಾಕ್ಷ್ಯಂ ಚೇತಿ ಸುಖಾವಹಾಃ ॥೧೯॥

ಇಂದ್ರಿಯನಿಗ್ರಹ, ಕ್ಷಮೆ, ಧೈರ್ಯ, ತೇಜಸ್ಸು, ಸಂತೋಷ, ಸತ್ಯಮಾತು, ಲಜ್ಜೆ, ಅಹಿಂಸೆ, ದುರ್ವ್ಯಸನದ, ಅಭಾವ, ದಕ್ಷತೆ ಇವೆಲ್ಲವೂ ಸುಖವನ್ನು ಒದಗಿಸುತ್ತವೆ.

ದುಷ್ಕೃತೇ ಸುಕೃತೇ ವಾಪಿ ನ ಜಂತುರಯತೋ ಭವೇತ್ ।
ನಿತ್ಯಂ ಮನಃಸಮಾಧಾನೇ ಪ್ರಯತೇತ ವಿಚಕ್ಷಣಃ ॥೨೦॥

ಜೀವನ ಪರ್ಯಂತ ಪುಣ್ಯ-ಪಾಪಗಳಲ್ಲಿಯೇ ಆಸಕ್ತನಾಗಿರದೆ ತನ್ನ ಮನಸ್ಸನ್ನು ಭಗವಂತನ ಧ್ಯಾನದಲ್ಲಿ ತೊಡಗಿಸಲು ಪ್ರಯತ್ನಿಸಬೇಕು.

ನಾಯಂ ಪರಸ್ಯ ಸುಕೃತಂ ದುಷ್ಕೃತಂ ವಾಪಿ ಸೇವತೇ ।
ಕರೋತಿ ಯಾದೃಶಂ ಕರ್ಮ ತಾದೃಶಂ ಪ್ರತಿಪದ್ಯತೇ ॥೨೧॥

ಮನುಷ್ಯನು ಇತರರು ಮಾಡಿದ ದುಷ್ಕರ್ಮ-ಸತ್ಕರ್ಮದ ಫಲಗಳನ್ನು ಅನುಭವಿಸುವುದಿಲ್ಲ. ಎಂತಹ ಕರ್ಮಗಳನ್ನು ಮಾಡಿರುತ್ತಾನೋ ಆ ಕರ್ಮಕ್ಕನುಗುಣವಾದ ಫಲಗಳನ್ನು ಹೊಂದುತ್ತಾನೆ.

ಸುಖದುಃಖೇ ಸಮಾಧಾಯ ಪುಮಾನನ್ಯೇನ ಗಚ್ಛತಿ ।
ಅನ್ಯೇನೈವ ಜನಃ ಸರ್ವಃ ಸಂಗತೋ ಯಶ್ಚ ಪಾರ್ಥಿವ ॥೨೨॥

ವಿವೇಕಿಯಾದ ಪುರುಷನು ಸುಖ-ದುಃಖ ನೀಡುವ ಪುಣ್ಯ-ಪಾಪಗಳೆರಡನ್ನೂ ತೊರೆದು ಮೋಕ್ಷಮಾರ್ಗದಿಂದ ಸಾಗಿದವನಾಗಿ ಸದ್ಗತಿಯನ್ನು ಹೊಂದುತ್ತಾನೆ.

ಪರೇಷಾಂ ಯದಸೂಯೇತ ನ ತತ್ಕುರ್ಯಾತ್ಸ್ವಯಂ ನರಃ ।
ಯೋ ಹ್ಯಸೂಯುಸ್ತಥಾಯುಕ್ತಃ ಸೋಪಹಾಸಂ ನಿಯಚ್ಛತಿ ॥೨೩॥

ದುಷ್ಕರ್ಮ ಮಾಡುತ್ತಾನೆಂದು ಪರರನ್ನು ನಿಂದಿಸುವ ಪುರುಷನು ಆ ದುಷ್ಕರ್ಮಗಳನ್ನು ಮಾಡಬಾರದು. ಯಾವಾತನು ಇನ್ನೊಬ್ಬರನ್ನು ನಿಂದಿಸಿ ಆ ದುಷ್ಕರ್ಮವನ್ನು ಎಸಗುತ್ತಾನೋ ಅವನು ಅಪಹಾಸ್ಯಕ್ಕೆ ತುತ್ತಾಗುತ್ತಾನೆ.

ಭೀರೂ ರಾಜನ್ಯೋ ಬ್ರಾಹ್ಮಣಃ ಸರ್ವಭಕ್ಷೋ
ವೈಶ್ಯೋನೀಹಾರಾನ್ಹೀನವರ್ಣೋSಲಸಶ್ಚ ।
ವಿದ್ವಾಂಶ್ಚಾಶೀಲೋ ವೃತ್ತಹೀನಃ ಕುಲೀನಃ
ಸತ್ಯಾದ್ ಭ್ರಷ್ಟೋ ಬ್ರಾಹ್ಮಣಃ ಸ್ತ್ರೀ ಚ ದುಷ್ಟಾ ॥೨೪॥

ಹೇಡಿಯಾದ ಕ್ಷತ್ರಿಯನು ಎಲ್ಲವನ್ನೂ, ವಿಚಾರ ಮಾಡದೆ ತಿನ್ನುವ ಬ್ರಾಹ್ಮಣನು, ಕ್ರಯ-ವಿಕ್ರಯಗಳಲ್ಲಿ ಇನ್ನೊಬ್ಬರ ದ್ರವ್ಯವನ್ನು ಅಪಹರಿಸುವ ವೈಶ್ಯನು, ಸೇವೆಯನ್ನು ಮಾಡಲು ಆಲಸಿಯಾದ ಶೂದ್ರನು, ಸಚ್ಚಾರಿತ್ರ್ಯವಿಲ್ಲದ ವಿದ್ವಾಂಸನು, ಚಾರಿತ್ರವಿಲ್ಲದ ಕುಲೀನನು, ಸತ್ಯಭ್ರಷ್ಟನಾದ ಬ್ರಾಹ್ಮಣನು, ವಿಷಯಾಸಕ್ತಳಾದ ದುಷ್ಟಳಾದ ಸ್ತ್ರೀಯು,

ರಾಗೀ ಯುಕ್ತಃ ಪಚಮಾನೋSSತ್ಮಹೇತೋ-
ರ್ಮೂಖೋ೯ ವಕ್ತಾ ನೃಪಹೀನಂ ಚ ರಾಷ್ಟ್ರಮ್ ।

ಏತೇ ಸರ್ವೇ ಶೋಚ್ಯತಾಂ ಯಾಂತಿ ರಾಜನ್
ಯಶ್ಚಾಯುಕ್ತಃ ಸ್ನೇಹಹೀನಃ ಪ್ರಜಾಸು ॥೨೫॥

ವಿಷಯಾಸಕ್ತನಾದ ಯೋಗಿಯು, ತನ್ನೊಬ್ಬನಿಗಾಗಿ ಅಡುಗೆ ಮಾಡಿಕೊಳ್ಳುವ ಗೃಹಸ್ಥನು, ಮೂರ್ಖನಾದ ವಾಗ್ಮಿಯು, ರಾಜರಹಿತವಾದ ರಾಷ್ಟ್ರವು, ಸ್ನೇಹವಿಲ್ಲದ ಅಜಿತೇಂದ್ರಿಯನಾದ ರಾಜನು- ಇವರೆಲ್ಲರೂ ಕೊನೆಯಲ್ಲಿ ಶೋಚನೀಯರಾಗುತ್ತಾರೆ. ದುಃಖಕ್ಕೆ ಭಾಜನರಾಗುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಯೋವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ಪರಾಶರ ಗೀತೆ. ಶ್ರೇಯಸ್ಸಾಧನ ವಿಚಾರ.

ಪರಾಶರಃ

ಮನೋರಥರಥಂ ಪ್ರಾಪ್ಯ ಇಂದ್ರಿಯಾರ್ಥಹಯಂ ನರಃ ।
ರಶ್ಮಿಭಿರ್ಜ್ಞಾನಸಂಭೂತೈರ್ಯೋ ಗಚ್ಛತಿ ಸ ಬುದ್ಧಿಮಾನ್ ॥೧॥

ಪರಾಶರ– ಜನಕನೇ, ಮನೋರಥವೆಂಬ ರಥವನ್ನು ಹೊಂದಿ, ಆ ರಥಕ್ಕೆ ಇಂದ್ರಿಯಗಳೆಂಬ ಕುದುರೆಗಳನ್ನು ಕಟ್ಟಿ, ಆ ಕುದುರೆಗಳಿಗೆ ಜ್ಞಾನವೆಂಬ ಹಗ್ಗಗಳನ್ನು ಬಿಗಿದು, ಅದನ್ನು ನಡೆಸಿಕೊಂಡು ಹೋಗುವ ಮನುಷ್ಯನೇ ಬುದ್ಧಿವಂತನು.

ಸೇವಾಶ್ರಿತೇನ ಮನಸಾ ವೃತ್ತಿಹೀನಸ್ಯ ಶಸ್ಯತೇ ।
ದ್ವಿಜಾತಿಹಸ್ತಾನ್ನಿರ್ವೃತ್ತಾ ನ ತು ತುಲ್ಯಾತ್ ಪರಸ್ಪರಮ್ ॥೨॥

ಜೀವನಕ್ಕಿಲ್ಲದೆ ಬೇರೆಯವರ ಸೇವೆಯನ್ನು ಮಾಡಿ ಬದುಕಲು ಮನಸ್ಸುಳ್ಳ ವ್ಯಕ್ತಿಯು ಉತ್ತಮ ಜಾತಿಯ ಬ್ರಾಹ್ಮಣನ ಕೈಯಿಂದ ದೊರೆಯುವ ವೃತ್ತಿಯನ್ನು ಶ್ರೇಷ್ಠವೆಂದು ಅವಲಂಬಿಸಬೇಕು. ಇದನ್ನು ಬಿಟ್ಟು ತನಗೆ ಸಮಾನರಾದವರಲ್ಲಿ ಪರಸ್ಪರ ಸೇವೆ ಮಾಡುವುದು ಪ್ರಶಸ್ತವಾದುದಲ್ಲ.

ನಾಯಂ ಪರಸ್ಯ ಸುಕೃತಂ ದುಷ್ಕೃತಂ ವಾಪಿ ಸೇವತೇ ।
ಕರೋತಿ ಯಾದೃಶಂ ಕರ್ಮ ತಾದೃಶಂ ಪ್ರತಿಪದ್ಯತೇ ॥೨೧॥

ಮನುಷ್ಯನು ಇತರರು ಮಾಡಿದ ದುಷ್ಕರ್ಮ-ಸತ್ಕರ್ಮದ ಫಲಗಳನ್ನು ಅನುಭವಿಸುವುದಿಲ್ಲ. ಎಂತಹ ಕರ್ಮಗಳನ್ನು ಮಾಡಿರುತ್ತಾನೋ ಆ ಕರ್ಮಕ್ಕನುಗುಣವಾದ ಫಲಗಳನ್ನು ಹೊಂದುತ್ತಾನೆ.

ಸುಖದುಃಖೇ ಸಮಾಧಾಯ ಪುಮಾನನ್ಯೇನ ಗಚ್ಛತಿ ।
ಅನ್ಯೇನೈವ ಜನಃ ಸರ್ವಃ ಸಂಗತೋ ಯಶ್ಚ ಪಾರ್ಥಿವ ॥೨೨॥

ವಿವೇಕಿಯಾದ ಪುರುಷನು ಸುಖ-ದುಃಖ ನೀಡುವ ಪುಣ್ಯ-ಪಾಪಗಳೆರಡನ್ನೂ ತೊರೆದು ಮೋಕ್ಷಮಾರ್ಗದಿಂದ ಸಾಗಿದವನಾಗಿ ಸದ್ಗತಿಯನ್ನು ಹೊಂದುತ್ತಾನೆ.

ಪರೇಷಾಂ ಯದಸೂಯೇತ ನ ತತ್ಕುರ್ಯಾತ್ಸ್ವಯಂ ನರಃ ।
ಯೋ ಹ್ಯಸೂಯುಸ್ತಥಾಯುಕ್ತಃ ಸೋಪಹಾಸಂ ನಿಯಚ್ಛತಿ ॥೨೩॥

ದುಷ್ಕರ್ಮ ಮಾಡುತ್ತಾನೆಂದು ಪರರನ್ನು ನಿಂದಿಸುವ ಪುರುಷನು ಆ ದುಷ್ಕರ್ಮಗಳನ್ನು ಮಾಡಬಾರದು. ಯಾವಾತನು ಇನ್ನೊಬ್ಬರನ್ನು ನಿಂದಿಸಿ ಆ ದುಷ್ಕರ್ಮವನ್ನು ಎಸಗುತ್ತಾನೋ ಅವನು ಅಪಹಾಸ್ಯಕ್ಕೆ ತುತ್ತಾಗುತ್ತಾನೆ.

ಭೀರೂ ರಾಜನ್ಯೋ ಬ್ರಾಹ್ಮಣಃ ಸರ್ವಭಕ್ಷೋ
ವೈಶ್ಯೋನೀಹಾರಾನ್ಹೀನವರ್ಣೋ ಽಲಸಶ್ಚ ।
ವಿದ್ವಾಂಶ್ಚಾಶೀಲೋ ವೃತ್ತಹೀನಃ ಕುಲೀನಃ
ಸತ್ಯಾದ್ ಭ್ರಷ್ಟೋ ಬ್ರಾಹ್ಮಣಃ ಸ್ತ್ರೀ ಚ ದುಷ್ಟಾ ॥೨೪॥

ಹೇಡಿಯಾದ ಕ್ಷತ್ರಿಯನು ಎಲ್ಲವನ್ನೂ, ವಿಚಾರ ಮಾಡದೆ ತಿನ್ನುವ ಬ್ರಾಹ್ಮಣನು, ಕ್ರಯ-ವಿಕ್ರಯಗಳಲ್ಲಿ ಇನ್ನೊಬ್ಬರ ದ್ರವ್ಯವನ್ನು ಅಪಹರಿಸುವ ವೈಶ್ಯನು, ಸೇವೆಯನ್ನು ಮಾಡಲು ಆಲಸಿಯಾದ ಶೂದ್ರನು, ಸಚ್ಚಾರಿತ್ರ್ಯವಿಲ್ಲದ ವಿದ್ವಾಂಸನು, ಚಾರಿತ್ರವಿಲ್ಲದ ಕುಲೀನನು, ಸತ್ಯಭ್ರಷ್ಟನಾದ ಬ್ರಾಹ್ಮಣನು, ವಿಷಯಾಸಕ್ತಳಾದ ದುಷ್ಟಳಾದ ಸ್ತ್ರೀಯು,

ರಾಗೀ ಯುಕ್ತಃ ಪಚಮಾನೋ ಽಽತ್ಮಹೇತೋ-
ರ್ಮೂರ್ಖೋ ವಕ್ತಾ ನೃಪಹೀನಂ ಚ ರಾಷ್ಟ್ರಮ್ ।

ಏತೇ ಸರ್ವೇ ಶೋಚ್ಯತಾಂ ಯಾಂತಿ ರಾಜನ್
ಯಶ್ಚಾಯುಕ್ತಃ ಸ್ನೇಹಹೀನಃ ಪ್ರಜಾಸು ॥೨೫॥

ವಿಷಯಾಸಕ್ತನಾದ ಯೋಗಿಯು, ತನ್ನೊಬ್ಬನಿಗಾಗಿ ಅಡುಗೆ ಮಾಡಿಕೊಳ್ಳುವ ಗೃಹಸ್ಥನು, ಮೂರ್ಖನಾದ ವಾಗ್ಮಿಯು, ರಾಜರಹಿತವಾದ ರಾಷ್ಟ್ರವು, ಸ್ನೇಹವಿಲ್ಲದ ಅಜಿತೇಂದ್ರಿಯನಾದ ರಾಜನು- ಇವರೆಲ್ಲರೂ ಕೊನೆಯಲ್ಲಿ ಶೋಚನೀಯರಾಗುತ್ತಾರೆ. ದುಃಖಕ್ಕೆ ಭಾಜನರಾಗುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಯೋವಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ಪರಾಶರ ಗೀತೆ. ಶ್ರೇಯಸ್ಸಾಧನ ವಿಚಾರ.

ಪರಾಶರಃ

ಮನೋರಥರಥಂ ಪ್ರಾಪ್ಯ ಇಂದ್ರಿಯಾರ್ಥಹಯಂ ನರಃ ।
ರಶ್ಮಿಭಿರ್ಜ್ಞಾನಸಂಭೂತೈರ್ಯೋ ಗಚ್ಛತಿ ಸ ಬುದ್ಧಿಮಾನ್ ॥೧॥

ಪರಾಶರ– ಜನಕನೇ, ಮನೋರಥವೆಂಬ ರಥವನ್ನು ಹೊಂದಿ, ಆ ರಥಕ್ಕೆ ಇಂದ್ರಿಯಗಳೆಂಬ ಕುದುರೆಗಳನ್ನು ಕಟ್ಟಿ, ಆ ಕುದುರೆಗಳಿಗೆ ಜ್ಞಾನವೆಂಬ ಹಗ್ಗಗಳನ್ನು ಬಿಗಿದು, ಅದನ್ನು ನಡೆಸಿಕೊಂಡು ಹೋಗುವ ಮನುಷ್ಯನೇ ಬುದ್ಧಿವಂತನು.

ಸೇವಾಶ್ರಿತೇನ ಮನಸಾ ವೃತ್ತಿಹೀನಸ್ಯ ಶಸ್ಯತೇ ।
ದ್ವಿಜಾತಿಹಸ್ತಾನ್ನಿರ್ವೃತ್ತಾ ನ ತು ತುಲ್ಯಾತ್ ಪರಸ್ಪರಮ್ ॥೨॥

ಜೀವನಕ್ಕಿಲ್ಲದೆ ಬೇರೆಯವರ ಸೇವೆಯನ್ನು ಮಾಡಿ ಬದುಕಲು ಮನಸ್ಸುಳ್ಳ ವ್ಯಕ್ತಿಯು ಉತ್ತಮ ಜಾತಿಯ ಬ್ರಾಹ್ಮಣನ ಕೈಯಿಂದ ದೊರೆಯುವ ವೃತ್ತಿಯನ್ನು ಶ್ರೇಷ್ಠವೆಂದು ಅವಲಂಬಿಸಬೇಕು. ಇದನ್ನು ಬಿಟ್ಟು ತನಗೆ ಸಮಾನರಾದವರಲ್ಲಿ ಪರಸ್ಪರ ಸೇವೆ ಮಾಡುವುದು ಪ್ರಶಸ್ತವಾದುದಲ್ಲ.

ಆಯುರ್ನಾಸುಲಭಂ ಲಬ್ಧ್ವಾ ನಾವಕರ್ಷೇದ್ ವಿಶಾಂ ಪತೇ ।
ಉತ್ಕರ್ಷಾರ್ಥಂ ಪ್ರಯತತೇ ನರಃ ಪುಣ್ಯೇನ ಕರ್ಮಣಾ ॥೩॥

ದುರ್ಲಭವಾದ ಮನುಷ್ಯ ಜನ್ಮವನ್ನು, ಆಯುಷ್ಯವನ್ನು ಪಡೆದವನು ಇಂದ್ರಿಯ ಲೋಲುಪನಾಗಿ ಆಯುಷ್ಯವನ್ನು ವ್ಯರ್ಥವಾಗಿ ಕಳೆದುಕೊಳ್ಳಬಾರದು. ಪುಣ್ಯ ಕರ್ಮಗಳಿಂದ ಉತ್ಕರ್ಷವನ್ನು ಹೊಂದಲು ಪ್ರಯತ್ನಿಸಬೇಕು.

ವರ್ಣೇಭ್ಯೋಽಪಿ ಪರಿಭ್ರಷ್ಟಃ ಸ ವೈ ಸಮ್ಮಾನಮರ್ಹತಿ ।
ನ ತು ಯಃ ಸತ್ಕ್ರಿಯಾಂ ಪ್ರಾಪ್ಯ ರಾಜಸಂ ಕರ್ಮ ಸೇವತೇ ॥೪॥

ಉತ್ತಮ ವರ್ಣದಲ್ಲಿ ಹುಟ್ಟಿದವನು ವರ್ಣಕ್ಕೆ ಅತಿರಿಕ್ತವಾದ ಕರ್ಮವನ್ನು ಆಚರಿಸಿ ಭ್ರಷ್ಟನಾದಲ್ಲಿ ಸಮ್ಮಾನಕ್ಕೆ ಯೋಗ್ಯನಾಗುವುದಿಲ್ಲ. ಆದ್ದರಿಂದ ಸತ್ಕರ್ಮವನ್ನು ನಡೆಸುವ ಅರ್ಹತೆಯನ್ನು ಹೊಂದಿದವನು ರಾಜಸ ಕರ್ಮಗಳನ್ನು ಎಂದಿಗೂ ಸೇವಿಸಬಾರದು.

ವರ್ಣೋತ್ಕರ್ಷಮವಾಪ್ನೋತಿ ನರಃ ಪುಣ್ಯೇನ ಕರ್ಮಣಾ ।
ದುರ್ಲಭಂ ತಮಲಬ್ಧ್ವಾ ಹಿ ಹನ್ಯಾತ್ ಪಾಪೇನ ಕರ್ಮಣಾ ॥೫॥

ಮನುಷ್ಯನು ಪುಣ್ಯಕರ್ಮಗಳಿಂದ ಶ್ರೇಷ್ಠವಾದ ವರ್ಣದಲ್ಲಿ ಹುಟ್ಟುತ್ತಾನೆ. ಅಂತಹ ದುರ್ಲಭವಾದ ವರ್ಣವು ಲಭಿಸಿದಾಗಲೂ ಪಾಪಕರ್ಮ ನಿರತನಾದರೆ ಅವನು ಪಾಪದಿಂದಲೇ ತನ್ನನ್ನು ಕೊಂದುಕೊಳ್ಳುತ್ತಾನೆ.

ಅಜ್ಞಾನಾದ್ಧಿ ಕೃತಂ ಪಾಪಂ ತಪಸೈವಾಭಿನಿರ್ಹರೇತ್ ।
ಪಾಪಂ ಹಿ ಕರ್ಮ ಫಲತಿ ಪಾಪಮೇವ ಸ್ವಯಂ ಕೃತಮ್ ।
ತಸ್ಮಾತ್ ಪಾಪಂ ನ ಸೇವೇತ ಕರ್ಮ ದುಃಖಫಲೋದಯಮ್ ॥೬॥

ಅಜ್ಞಾನದಿಂದ ನಡೆಸಿದ ಪಾಪಗಳನ್ನು ತಪಸ್ಸಿನಿಂದ ಪರಿಹರಿಸಿಕೊಳ್ಳಬೇಕು. ತಿಳಿದು ತಿಳಿದು ಪಾಪವನ್ನು ಎಸಗಿದರೆ ಮಹಾದುಃಖವನ್ನು ಆ ಪಾಪಕರ್ಮವು ತಂದೊಡ್ಡುತ್ತದೆ. ಬುದ್ಧಿಪೂರ್ವಕವಾಗಿ ಅಂತಹ ಪಾಪಕರ್ಮಗಳನ್ನು ಮಾಡದೆ, ದುಃಖವನ್ನು ಹೊಂದದೆ ಇರಬೇಕು.

ಪಾಪಾನುಬಂಧಂ ಯತ್ ಕರ್ಮ ಯದ್ಯಪಿ ಸ್ಯಾನ್ಮಹಾಫಲಮ್ ।
ನ ತತ್ ಸೇವೇತ ಮೇಧಾವೀ ಶುಚಿಃ ಕುಸಲಿಲಂ ಯಥಾ ॥೭॥

ಪಾಪದ ಸಂಬಂಧವುಳ್ಳ ಕಾರ್ಯವು ಎಷ್ಟೇ ದೊಡ್ಡ ಫಲವನ್ನು ಕೊಡಲು ಸಮರ್ಥವಾಗಿದ್ದರೂ ಮೇಧಾವಿಯಾದವನು ಅಂತಹ ಪಾಪಕರ್ಮವನ್ನು ಮಾಡಲು ಹೋಗಬಾರದು. ಶುಚಿಯಾದ ಬ್ರಾಹ್ಮಣನು ಚಂಡಾಲನನ್ನು ಸೇವಿಸಿದಂತಾಗುತ್ತದೆ. ಪರಿಶುದ್ಧವ್ಯಕ್ತಿಯ ಕಲ್ಮಷ ನೀರನ್ನು ಸೇವಿಸಿದಂತೆ ಆಗುತ್ತದೆ.

ಕಿಂ ಕಷ್ಟಮನುಪಶ್ಯಾಮಿ ಫಲಂ ಪಾಪಸ್ಯ ಕರ್ಮಣಃ ।
ಪ್ರತ್ಯಾಪನ್ನಸ್ಯ ಹಿ ಸತೋ ನಾತ್ಮಾ ತಾವದ್ ವಿರೋಚತೇ ॥೮॥

ಪಾಪಕರ್ಮಕ್ಕೆ ಒಳ್ಳೆಯ ಫಲವನ್ನು ನೋಡೆನು, ಹೊರತು ಕಷ್ಟಫಲಗಳನ್ನೇ ನೋಡುತ್ತಿದ್ದೇನೆ. ಜ್ಞಾನಿಯಾದವನು ಪಾಪಕರ್ಮಗಳನ್ನು ಮಾಡಿದರೆ ಅವನ ಮನಸ್ಸಿಗೆ ಯಾವುದೂ ಹೊಳೆಯುವುದೇ ಇಲ್ಲ.

ಪ್ರತ್ಯಾಪತ್ತಿಶ್ಚ ಯಸ್ಯೇಹ ಬಾಲಿಶಸ್ಯ ನ ಜಾಯತೇ ।
ತಸ್ಯಾಪಿ ಸುಮಹಾಂಸ್ತಾಪಃ ಪ್ರಸ್ಥಿತಸ್ಯೋಪಜಾಯತೇ ॥೯॥

ಈ ಜಗತ್ತಿನಲ್ಲಿ ಯಾವನಿಗೆ ವೈರಾಗ್ಯವು ಉಂಟಾಗುವುದಿಲ್ಲವೋ ಅವನು ಮೂರ್ಖನೆನಿಸುತ್ತಾನೆ, ಬಾಲಿಶನೆನಿಸುತ್ತಾನೆ. ಅವನು ಪರಲೋಕಕ್ಕೆ ಹೋದರೂ ಅವನ ಪಾಲಿಗೆ ಮಹಾಸಂತಾಪವೇ ಉಂಟಾಗುತ್ತದೆ.

ವಿರಕ್ತಂ ಶೋದ್ಧ್ಯತೇ ವಸ್ತ್ರಂ ನ ತು ಕೃಷ್ಣೋಪಸಂಹಿತಮ್ ।
ಪ್ರಯತ್ನೇನ ಮನುಷ್ಯೇಂದ್ರ ಪಾಪಮೇವಂ ನಿಬೋಧ ಮೇ ॥೧೦॥

ಬಟ್ಟೆಗೆ ಧೂಳು ಅಂಟಿದ್ದರೆ ನೀರು ಆ ಧೂಳನ್ನು ತೊಳೆಯುತ್ತದೆ. ಆದರೆ ಕಪ್ಪು ಬಟ್ಟೆಯನ್ನು ನೀರಿನಿಂದ ಬಿಳಿ ಮಾಡಲಾಗುವುದಿಲ್ಲ. ಮನುಷ್ಯೇಂದ್ರನೇ, ಇದರಂತೆ ಪಾಪ ಕರ್ಮನಿರತರನ್ನು ಯಾವ ಪ್ರಯತ್ನದಿಂದಲೂ ಶುದ್ಧರನ್ನಾಗಿ ಮಾಡಲಾಗದು.

ಸ್ವಯಂ ಕೃತ್ವಾ ತು ಯಃ ಪಾಪಂ ಶುಭಮೇವಾನುತಿಷ್ಠತಿ ।
ಪ್ರಾಯಶ್ಚಿತ್ತಂ ನರಃ ಕರ್ತುಮುಭಯಂ ಸೋಽಶ್ನುತೇ ಪೃಥಕ್ ॥೧೧॥

ಯಾವಾತನು ತಿಳಿದು ತಿಳಿದು ಪಾಪವನ್ನು ಮಾಡಿ ಬಳಿಕ ಪಾಪಕರ್ಮಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಉದ್ದೇಶದಿಂದ ಪುಣ್ಯಕರ್ಮವನ್ನು ಮಾಡಿಕೊಳ್ಳುತ್ತಾನೋ

ಅವನು ಆ ಶುಭಕರ್ಮದಿಂದ ಪಾಪವನ್ನು ತೊಳೆದುಕೊಳ್ಳಲಾರ. ಪ್ರತ್ಯೇಕವಾಗಿ ಎರಡೂ ಕರ್ಮದ ಫಲವನ್ನು ಅನುಭವಿಸುತ್ತಾನೆ.

ಅಜ್ಞಾನಾತ್ತು ಕೃತಾಂ ಹಿಂಸಾಮಹಿಂಸಾ ವ್ಯಪಕರ್ಷತಿ ।
ಬ್ರಾಹ್ಮಣಾಃ ಶಾಸ್ತ್ರನಿರ್ದೇಶಾದಿತ್ಯಾಹುರ್ಬ್ರಹ್ಮವಾದಿನಃ ॥೧೨॥

ಅಜ್ಞಾನದಿಂದ ಮಾಡಿದ ಹಿಂಸೆಯಿಂದ ಅನುಭವಿಸಿದ ಪಾಪವನ್ನು ಅಹಿಂಸಾ ವ್ರತವು ಪರಿಹರಿಸುತ್ತದೆಂದು ಶಾಸ್ತ್ರದ ಆಧಾರದಲ್ಲಿ ಬ್ರಾಹ್ಮಣರು ಹೇಳಿರುತ್ತಾರೆ.

ತಥಾ ಕಾಮಕೃತಾ ಚಾಸ್ಯ ವಿಹಿಂಸೈವಾಪಕರ್ಷತಿ ।
ಇತ್ಯಾಹುರ್ಧರ್ಮಶಾಸ್ತ್ರಜ್ಞಾ ಬ್ರಾಹ್ಮಣಾ ವೇದಪಾರಗಾಃ ॥೧೩॥

ಆದರೆ ಉದ್ದೇಶಪೂರ್ವಕವಾಗಿ ಮಾಡಿದ ಪಾಪಕರ್ಮವು ಅಹಿಂಸಾ ವ್ರತವನ್ನೇ ತೊಡೆದುಹಾಕುತ್ತದೆ. ಹೀಗೆ ವೇದಪಾರಂಗತರಾದ, ಧರ್ಮಶಾಸ್ತ್ರಜ್ಞರಾದ ಬ್ರಾಹ್ಮಣರು ಹೇಳಿರುತ್ತಾರೆ.

ಅಹಂ ತು ತಾವತ್ ಪಶ್ಯಾಮಿ ಕರ್ಮ ಯದ್ವರ್ತತೇ ಕೃತಮ್ ।
ಗುಣಯುಕ್ತಂ ಪ್ರಕಾಶಂ ಚ ಪಾಪೇನಾನುಪಸಂಹಿತಮ್ ॥೧೪॥

ನಾನಾದರೂ ಈ ಪಾಪ-ಪುಣ್ಯಗಳ ವಿಷಯವನ್ನು ಸ್ಪಷ್ಟವಾಗಿ ಕಾಣುತ್ತಿದ್ದೇನೆ. ಮಾಡಿದ ಕರ್ಮವು ಪಾಪದಿಂದ ಕೂಡಿರಲಿ, ಪುಣ್ಯದಿಂದ ಕೂಡಿರಲಿ, ಬಹಿರಂಗವಾಗಿ ಮಾಡಿರಲಿ, ಅಂತರಂಗದಲ್ಲಿ ಮಾಡಿರಲಿ, ತಿಳಿದು ಮಾಡಿರಲಿ, ತಿಳಿಯದೆ ಮಾಡಿರಲಿ, ಅದಕ್ಕೆ ಅರ್ಹವಾದ ಫಲವನ್ನು ಕೊಟ್ಟೇ ತೀರುತ್ತದೆ.

ಯಥಾ ಸೂಕ್ಷ್ಮಾಣಿ ಕರ್ಮಾಣಿ ಫಲಂತೀಹ ಯಥಾತಥಮ್ ।
ಬುದ್ಧಿಯುಕ್ತಾನಿ ತಾನೀಹ ಕೃತಾನಿ ಮನಸಾ ಸಹ ॥೧೫॥

ಧರ್ಮಜ್ಞನೇ, ಬುದ್ಧಿಯಿಂದ ಸೂಕ್ಷ್ಮವಾಗಿ ವಿಚಾರ ಮಾಡಲಾಗಿ ಮನಃಪೂರ್ವಕವಾಗಿ ಮಾಡಿದ ಸ್ಥೂಲ ಅಥವಾ ಸೂಕ್ಷ್ಮ ಕರ್ಮಗಳಿಗೆ ಯೋಗ್ಯವಾದ ಫಲವು ಸಿಕ್ಕೇ ತೀರುತ್ತದೆ.

ಭವತ್ಯಲ್ಪಫಲಂ ಕರ್ಮ ಸೇವಿತಂ ನಿತ್ಯಮುಲ್ಬಣಮ್ ।
ಅಬುದ್ಧಿಪೂರ್ವಂ ಧರ್ಮಜ್ಞ ಕೃತಮುಗ್ರೇಣ ಕರ್ಮಣಾ ॥೧೬॥

ಹಿಂಸೆ ಮೊದಲಾದ ಉಗ್ರಕರ್ಮಗಳನ್ನು ತಿಳಿಯದೆ ಮಾಡುತ್ತಿದ್ದರೂ ಅದಕ್ಕೆ ಭಯಂಕರವಾದ ಪಾಪ ಫಲವು ದೊರಕಿಯೇ ತೀರುತ್ತದೆ. ಆದರೆ ಬುದ್ಧಿ ಪೂರ್ವಕವಾಗಿ ಮಾಡಿದ ಕರ್ಮಕ್ಕಿಂತ ತಿಳಿಯದೇ ಮಾಡಿದ ಕರ್ಮಕ್ಕೆ ಸ್ವಲ್ಪಫಲವು. ಇವುಗಳಲ್ಲಿ ಈ ವ್ಯತ್ಯಾಸವನ್ನು ಹೇಳಬಹುದು.

ಕೃತಾನಿ ಯಾನಿ ಕರ್ಮಾಣಿ ದೈವತೈರ್ಮುನಿಭಿಸ್ತಥಾ ।
ನಾಚರೇತ್ತಾನಿ ಧರ್ಮಾತ್ಮಾ ಶ್ರುತ್ವಾ ಚಾಪಿ ನ ಕುತ್ಸಯೇತ್ ॥೧೭॥

ದೇವತೆಗಳಿಂದಾಗಲಿ, ಮುನಿಗಳಿಂದಾಗಲಿ ನಿಷಿದ್ಧ ಕರ್ಮವು ಮಾಡಲ್ಪಟ್ಟರೆ ಧರ್ಮವನ್ನು ತಿಳಿದ ಪುರುಷನು ತಾನೂ ಅವರನ್ನನುಸರಿಸಿ ಅಂತಹ ಕರ್ಮಗಳನ್ನು ಮಾಡಲು ಹೋಗಬಾರದು. ದೇವ-ಮುನಿಗಳು ಮಾಡಿದ್ದಾರೆಂದು ಕೇಳಿದಾಗ ಅವರನ್ನು ನಿಂದಿಸಬಾರದು.

ಸಂಚಿಂತ್ಯ ಮನಸಾ ರಾಜನ್ ವಿದಿತ್ವಾ ಶಕ್ತಿಮಾತ್ಮನಃ ।
ಕರೋತಿ ಯಃ ಶುಭಂ ಕರ್ಮ ಸ ವೈ ಭದ್ರಾಣಿ ಪಶ್ಯತಿ ॥೧೮॥

ಮಾನವನು ಮನಸ್ಸಿನಿಂದ ಸರಿಯಾಗಿ ವಿಮರ್ಶೆ ಮಾಡಿ, ನನಗೆ ಈ ಕರ್ಮ ಮಾಡಲು ಸಾಧ್ಯವಿದೆ ಎಂದು ತಿಳಿದು ಶುಭಕರ್ಮವನ್ನು ಮಾಡುತ್ತಾನೋ ಅವನು ಶುಭಫಲವನ್ನೇ ಹೊಂದುತ್ತಾನೆ.

ನವೇ ಕಪಾಲೇ ಸಲಿಲಂ ಸಂನ್ಯಸ್ತಂ ಹೀಯತೇ ಯಥಾ ।
ನವೇತರೇ ತಥಾಭಾವಂ ಪ್ರಾಪ್ನೋತಿ ಸುಖಭಾವಿತಮ್ ॥೧೯॥

ಬೆಂಕಿಯಲ್ಲಿ ಸುಡದೇ ಇರುವ ಮಡಿಕೆಯಲ್ಲಿಟ್ಟ ನೀರು ಬೇಗ ಹೇಗೆ ನಾಶವನ್ನು ಹೊಂದುತ್ತದೋ, ಬೆಂದಿರುವ ಕಪಾಲದಲ್ಲಿಟ್ಟ ನೀರು ಸ್ಥಿರವಾಗಿ ನಿಲ್ಲುತ್ತದೋ ಹೀಗೆ ಅಪಕ್ವ ಮನಸ್ಸಿನಿಂದ ಮಾಡಿದ ಕರ್ಮವು ಕಷ್ಟಕ್ಕೂ, ಪಕ್ವ ಮನಸ್ಸಿನಿಂದ ಮಾಡಿದ ಕರ್ಮವು ಸುಖಕ್ಕೂ ಕಾರಣವಾಗುತ್ತದೆ.

ಸತೋಯೇಽನ್ಯತ್ತು ಯತ್ತೋಯಂ ತಸ್ಮಿನ್ನೇವ ಪ್ರಸಿಚ್ಯತೇ ।
ವೃದ್ಧೇ ವೃದ್ಧಿಮವಾಪ್ನೋತಿ ಸಲಿಲೇ ಸಲಿಲಂ ಯಥಾ ॥೨೦॥

ಸರಿಯಾಗಿ ನೀರು ನಿಂತಿರುವ ಮಡಿಕೆಯಲ್ಲಿ ಮತ್ತಷ್ಟು ನೀರನ್ನು ಹಾಕಿದರೆ ಪೂರ್ಣತೆಯನ್ನೇ ಹೊಂದುತ್ತದೆ. ನೀರಿಗೆ ನೀರು ಬೆರೆತಾಗ ಹೇಗೆ ಪೂರ್ಣತೆಯನ್ನು ಹೊಂದುತ್ತದೋ ಹಾಗೆ ಪುಣ್ಯಕರ್ಮಗಳನ್ನು ನಿರಂತರ ಮಾಡುತ್ತಾ ವೃದ್ಧಿಯನ್ನು ಹೊಂದುತ್ತಾನೆ.

ಏವಂ ಕರ್ಮಾಣಿ ಯಾನೀಹ ಬುದ್ಧಿಯುಕ್ತಾನಿ ಭೂಪತೇ ।
ನಸಮಾನೀಹ ಹೀನಾನಿ ತಾನಿ ಪುಣ್ಯತಮಾನ್ಯಪಿ ॥೨೧॥

ಹೀಗೆ ಪುಣ್ಯಕರ್ಮಗಳನ್ನು ಬುದ್ಧಿಯುಕ್ತವಾಗಿ ಮಾಡುತ್ತಿರಬೇಕು. ಪುಣ್ಯಕರ್ಮಗಳು ಎಂದಿಗೂ ನಾಶವನ್ನು ಹೊಂದದೆ ಮತ್ತೂ ಅಧಿಕ ಪುಣ್ಯವಾಗಿ ಅಭಿವೃದ್ಧವಾಗುತ್ತವೆ.

ರಾಜ್ಞಾ ಜೇತವ್ಯಾಃ ಸಾಯುಧಾಶ್ಚೋನ್ನತಾಶ್ಚ
ಸಮ್ಯಕ್ಕರ್ತವ್ಯಂ ಪಾಲನಂ ಚ ಪ್ರಜಾನಾಮ್ ।
ಅಗ್ನಿಶ್ಚೇಯೋ ಬಹುಭಿಶ್ಚಾಪಿ ಯಜ್ಞೈ-
ರಂತೇ ಮಧ್ಯೇ ವಾ ವನಮಾಶ್ರಿತ್ಯ ಸ್ಥೇಯಮ್ ॥೨೨॥

ರಾಜನಾದವನು ಬೆಳೆಯುವಂತಹ ಶತ್ರುಗಳನ್ನು ಸಾಮ, ದಾನಾದಿ ಉಪಾಯಗಳಿಂದ ಜಯಿಸಬೇಕು. ನ್ಯಾಯಮಾರ್ಗದಲ್ಲಿ ಪ್ರಜಾ ಪರಿಪಾಲನೆಯನ್ನು ಮಾಡಬೇಕು. ಅನೇಕ ಯಜ್ಞಗಳಿಂದ ಅಗ್ನಿದೇವನನ್ನು ತೃಪ್ತಿಪಡಿಸಬೇಕು. ವೈರಾಗ್ಯ ಹುಟ್ಟಿದ ಬಳಿಕ ಮಧ್ಯವಯಸ್ಸಿನಲ್ಲಿಯೋ, ಕೊನೆಯಲ್ಲಿಯೋ ಅರಣ್ಯದಲ್ಲಿ ವಾಸ ಮಾಡಬೇಕು.

ದಮಾನ್ವಿತಃ ಪುರುಷೋ ಧರ್ಮಶೀಲೋ
ಭೂತಾನಿ ಚಾತ್ಮಾನಮಿವಾನುಪಶ್ಯೇತ್ ।
ಗರೀಯಸಃ ಪೂಜಯೇದಾತ್ಮಶಕ್ತ್ಯಾ
ಸತ್ಯೇನ ಶೀಲೇನ ಸುಖಂ ನರೇಂದ್ರ ॥೨೩॥

ಮನುಷ್ಯನು ಜಿತೇಂದ್ರಿಯನಾಗಿ, ಧರ್ಮಶೀಲನಾಗಿ ಸಮಸ್ತ ಪ್ರಾಣಿಗಳನ್ನು ತನ್ನಂತೆ ಕಾಣಬೇಕು. ವಿದ್ಯೆ, ತಪಸ್ಸುಗಳಿಂದ ಉತ್ತಮರಾದ ಗುರುಜನರನ್ನು ಶಕ್ತಿ ಇದ್ದಷ್ಟು ಸಮ್ಮಾನಿಸಬೇಕು. ಸತ್ಯಭಾಷಣ, ಒಳ್ಳೆಯ ನಡತೆಗಳಿಂದ ಸುಖವು ಉಂಟಾಗುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತುರ್ವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೈದನೆಯ ಅಧ್ಯಾಯ

ಪರಾಶರ ಗೀತಾ.

ಪರಾಶರಃ

ಕಃ ಕಸ್ಯ ಚೋಪಕುರುತೇ ಕಶ್ಚ ಕಸ್ಮೈ ಪ್ರಯಚ್ಛತಿ ।
ಪ್ರಾಣೀ ಕರೋತ್ಯಯಂ ಕರ್ಮ ಸರ್ವಮಾತ್ಮಾರ್ಥಮಾತ್ಮನಾ ॥೧॥

ಪರಾಶರ– ಜನಕರಾಜನೇ, ಯಾರು ಯಾರಿಗೆ ಉಪಕಾರ ಮಾಡುತ್ತಾರೆ? ಯಾರು ಯಾರಿಗೆ ಏನನ್ನು ಕೊಡುತ್ತಾರೆ? ಈ ರೀತಿಯಾದ ಮಾತುಗಳಿಗೆ ಅರ್ಥವೇ ಇರುವುದಿಲ್ಲ. ಪ್ರತಿಯೊಬ್ಬ ಮನುಷ್ಯನೂ ಸ್ವಾರ್ಥಕ್ಕಾಗಿಯೇ ಎಲ್ಲವನ್ನೂ ಮಾಡುತ್ತಾನೆಂದು ತಿಳಿ. ಮನುಷ್ಯನಿಗೆ ಪರೋಪಕಾರ, ದಾನ-ಧರ್ಮಗಳನ್ನು ಮಾಡುವುದರಲ್ಲಿ ತನ್ನ ಸ್ವಪ್ರಯೋಜನವೇ ಅಧಿಕವಾಗಿದೆ ಎಂದು ಭಾವ.

ಗೌರವೇಣ ಪರಿತ್ಯಕ್ತಂ ನಿಃಸ್ನೇಹಂ ಪರಿವರ್ಜಯೇತ್ ।
ಸೋದರ್ಯಂ ಭ್ರಾತರಮಪಿ ಕಿಮುತಾನ್ಯಂ ಪೃಥಗ್ಜನಮ್ ॥೨॥

ಒಬ್ಬ ಮನುಷ್ಯನು ಇನ್ನೊಬ್ಬನು ತನ್ನನ್ನು ಪ್ರೀತಿಸುವ ತನಕ ಅವನನ್ನು ಆದರಿಸುತ್ತಾನೆ. ಹೆತ್ತ ತಂದೆ-ತಾಯಿಗಳಾಗಲಿ, ಒಡಹುಟ್ಟಿದ ಸಹೋದರರೇ ಆಗಲಿ, ಅವರು ತನ್ನಲ್ಲಿ ಪ್ರೀತಿಯನ್ನು ತೋರಿಸುವ ತನಕ ಆದರಿಸುತ್ತಾರೆ. ಹೀಗಿರಲು ಮನುಷ್ಯ ಸಂಬಂಧದಲ್ಲಿ ಹೇಳುವುದೇನು? ಪ್ರೀತಿಯು ಕಡಿಮೆಯಾದರೆ ಆದರವೂ ಕಡಿಮೆಯಾಗುತ್ತದೆ.

ವಿಶಿಷ್ಟಸ್ಯ ವಿಶಿಷ್ಟಾಚ್ಚ ತುಲ್ಯೌ ದಾನಪ್ರತಿಗ್ರಹೌ ।
ತಯೋಃ ಪುಣ್ಯತರಂ ಧಾನಂ ತದ್ದ್ವಿಜಸ್ಯ ಪ್ರಯಚ್ಛತಃ ॥೩॥

ಉತ್ತಮನಿಗೆ ದಾನ ಮಾಡುವುದು, ಉತ್ತಮರಿಂದ ದಾನವನ್ನು ಸ್ವೀಕರಿಸುವುದು ಸಮಾನವಾಗಿಯೇ ಇದೆ. ಹೀಗಿದ್ದರೂ ದಾನ-ಪ್ರತಿಗ್ರಹಗಳಲ್ಲಿ ದಾನವು ಶ್ರೇಷ್ಠವೆನಿಸುತ್ತದೆ.

ನ್ಯಾಯಾಗತಂ ಧನಂ ವರ್ಧ್ಯೆನ್ನ್ಯಾಯೇನೈವ ವಿವರ್ಧಿತಮ್ ।
ಸಂರಕ್ಷ್ಯಂ ಯತ್ನಮಾಸ್ಥಾಯ ಧರ್ಮಾರ್ಥಮಿತಿ ನಿಶ್ಚಯಃ ॥೪॥

ನ್ಯಾಯದಿಂದ ಸಂಪಾದಿಸಿದ ಧನವನ್ನು ನ್ಯಾಯದಿಂದ ವೃದ್ಧಿಗೊಳಿಸಿ ಧರ್ಮಕಾರ್ಯಕ್ಕಾಗಿ ಆ ಧನವನ್ನು ರಕ್ಷಣೆ ಮಾಡಬೇಕು. ಧನಕ್ಕೆ ಧರ್ಮ ಕಾರ್ಯದಲ್ಲಿ ವಿನಿಯೋಗವೇ ಮುಖ್ಯವೆನಿಸಿದೆ.

ನ ಧರ್ಮಾರ್ಥೀ ನೃಶಂಸೇನ ಕರ್ಮಣಾ ಧನಮರ್ಜಯೇತ್ ।
ಶಕ್ತಿತಃ ಸರ್ವಕಾರ್ಯಾಣಿ ಕುರ್ಯಾನ್ನರ್ದ್ಧಿಮನುಸ್ಮರೇತ್ ॥೫॥

ಧರ್ಮವನ್ನು ಬಯಸುವವನು ನಿಂದ್ಯವಾದ ವೃತ್ತಿಯನ್ನು ಆಶ್ರಯಿಸಿ ಹಣವನ್ನು ಸಂಪಾದಿಸಬಾರದು. ಧನ ಸಂಪಾದನೆಯನ್ನೇ ಪ್ರಧಾನವಾಗಿಟ್ಟುಕೊಳ್ಳದೆ ಎಲ್ಲ ರೀತಿಯಾದ ಸತ್ಕರ್ಮಗಳನ್ನು ಶಕ್ತಿಗನುಗುಣವಾಗಿ ನಡೆಸುತ್ತಿರಬೇಕು. ಹಣ ಸಂಪಾದನೆಯಲ್ಲಿಯೇ ಯಾವಾಗಲೂ ಗೀಳಿರಬಾರದು.

ಅಪೋ ಹಿ ಪ್ರಯತಃ ಶೀತಾಸ್ತಾಪಿತಾ ಜ್ವಲನೇನ ವಾ ।
ಶಕ್ತಿತೋಽತಿಥಯೇ ದತ್ತಾ ಕ್ಷುಧಾರ್ತಾಯಾಶ್ನುತೇ ಫಲಮ್ ॥೬॥

ಹಸಿವೆಯಿಂದ ಕಂಗೆಟ್ಟ ಅತಿಥಿಗೆ ತಂಪುನೀರನ್ನು, ಬಿಸಿನೀರನ್ನು ವಿನೀತನಾಗಿ ತನ್ನ ಶಕ್ತಿಗನುಗುಣವಾಗಿ ಶುದ್ಧಭಾವದಿಂದ ನೀಡುವವನು ಉತ್ತಮವಾದ ಫಲವನ್ನು ಹೊಂದುತ್ತಾನೆ.

ರಂತಿದೇವೇನ ಲೋಕೇಷ್ವಾ ಸಿದ್ಧಿಃ ಪ್ರಾಪ್ತಾ ಮಹಾತ್ಮನಾ ।
ಫಲಪತ್ಕೈರಥೋ ಮೂಲೈರ್ಮುನೀನರ್ಚಿತವಾನಸೌ ॥೭॥

ಮಹಾತ್ಮನಾದ ರಂತಿದೇವನು ಹಣ್ಣುಗಳಿಂದ, ಗೆಡ್ಡೆ-ಗೆಣಸುಗಳಿಂದ, ಪತ್ರೆಗಳಿಂದ ಋಷಿಜನರನ್ನು ಸತ್ಕರಿಸುತ್ತಿದ್ದನು. ಇದರಿಂದಲೇ ಮಹಾತ್ಮರಾದ ರಂತಿದೇವನಿಗೆ ಪ್ರಪಂಚದಲ್ಲಿ ತಾನು ಇಷ್ಟಪಡುವ ಎಲ್ಲ ಇಷ್ಟಾರ್ಥಗಳ ಸಿದ್ಧಿಯು ಉಂಟಾಯಿತು.

ತೈರೇವ ಫಲಪತ್ರೈಶ್ಚ ಸ ಮಾತರಮತೋಷಯತ್ ।
ತಸ್ಮಾಲ್ಲೇಭೇ ಪರಂ ಸ್ಥಾನಂ ಶೈಬ್ಯೋಽಪಿ ಪೃಥಿವೀಪತಿಃ ॥೮॥

ಭೂಪಾಲನೆನಿಸಿದ ಶೈಬ್ಯನು ಇದೇ ಫಲ-ಮೂಲ-ಪತ್ರಗಳಿಂದ ಮಾತರ ಎಂಬ ಋಷಿಯನ್ನು ಸಂತೋಷಗೊಳಿಸಿ ಅದಕ್ಕಾಗಿ ಉತ್ತಮ ಫಲವನ್ನು ಹೊಂದಿದನು.

ದೇವತಾತಿಥಿಭೃತ್ಯೇಭ್ಯಃ ಪಿತೃಭ್ಯೋಽಥಾತ್ಮನಸ್ತಥಾ ।
ಋಣವಾಂಜಯತೇ ಮರ್ತ್ಯಸ್ತಸ್ಮಾದನೃಣತಾಂ ವ್ರಜೇತ್ ॥೯॥

ಮನುಷ್ಯನು ಹುಟ್ಟನ್ನು ಪಡೆಯುವಾಗ ದೇವ, ಅತಿಥಿ, ಭೃತ್ಯ, ಪಿತೃ ಮತ್ತು ತನ್ನದ್ದೇ ಆದ ಈ ಋಣಗಳನ್ನು ಹೊತ್ತು ಹುಟ್ಟುತ್ತಾನೆ. ತನ್ನ ಜೀವಿತದಲ್ಲಿ ಈ ಎಲ್ಲ ಋಣಗಳನ್ನು ವಿಧಿಬದ್ಧವಾಗಿ ಪೂರೈಸಿಕೊಂಡು ಋಣಮುಕ್ತನಾಗಬೇಕು.

ಸ್ವಾಧ್ಯಾಯೇನ ಮಹರ್ಷಿಭ್ಯೋ ದೇವೇಭ್ಯೋ ಯಜ್ಞಕರ್ಮಣಾ ।
ಪಿತೃಭ್ಯಃ ಶ್ರಾದ್ಧದಾನೇನ ನೃಣಾಮಭ್ಯರ್ಚನೇನ ಚ ॥೧೦॥

ವೇದ-ಶಾಸ್ತ್ರಗಳ ಅಧ್ಯಯನದಿಂದ ಋಷಿಗಳ ಋಣವನ್ನೂ, ಯಜ್ಞ ಕರ್ಮದಿಂದ ದೇವತಾ ಋಣವನ್ನೂ, ಶ್ರಾದ್ಧದಾನದಿಂದ ಪಿತೃ ಋಣವನ್ನೂ, ಸ್ವಾಗತ-ಸತ್ಕಾರ-ಸೇವನೆಗಳಿಂದ ಮನುಷ್ಯ ಋಣವನ್ನು ಪರಿಹರಿಸಿಕೊಳ್ಳಬೇಕು.

ವಾಚಃ ಶೇಷಾವಹಾರ್ಯೇಣ ಪಾಲನೇನಾತ್ಮನೋಽಪಿ ಚ ।
ಯಥಾವದ್ಭೃತ್ಯವರ್ಗಸ್ಯ ಚಿಕೀರ್ಷೇದ್ಧರ್ಮಮಾದಿತಃ ॥೧೧॥

ಇದರಂತೆ ವೇದಗಳ ಅಧ್ಯಯನ, ಮನನದಿಂದಲೂ, ಯಜ್ಞಶೇಷವನ್ನು ಭುಂಜಿಸುವುದರಿಂದಲೂ, ತನ್ನನ್ನು ರಕ್ಷಿಸಿಕೊಳ್ಳುವುದರಿಂದಲೂ ಆತ್ಮ ಋಣದಿಂದ ಮನುಷ್ಯನು ಬಿಡುಗಡೆಯನ್ನು ಹೊಂದುತ್ತಾನೆ. ರಕ್ಷಣೆಗೆ ಅರ್ಹರಾದ ಹೆಂಡತಿ- ಮಕ್ಕಳ ಪಾಲನೆ ಪೋಷಣೆಗಳನ್ನು ಮಾಡಿ ರಕ್ಷಿಸುವುದರಿಂದ ಭೃತ್ಯಋಣದಿಂದಲೂ ಮುಕ್ತನಾಗುತ್ತಾನೆ.

ಪ್ರಯತ್ನೇನ ಚ ಸಂಸಿದ್ಧಾ ಧನೈರಪಿ ವಿವರ್ಜಿತಾಃ ।
ಸಮ್ಯಗ್ಹುತ್ವಾ ಹುತವಹಂ ಮುನಯಃ ಸಿದ್ಧಿಮಾಗತಾಃ ॥೧೨॥

ಐಶ್ವರ್ಯದಿಂದ ರಹಿತರಾದ ತಪಸ್ವಿ ಜನರು ತಮ್ಮ ಉತ್ತಮ ಪ್ರಯತ್ನದಿಂದ ಸಿದ್ಧಿಯನ್ನು ಹೊಂದುತ್ತಾರೆ. ತಪಸ್ವಿ ಜನರು ವಿಧಿಬದ್ಧವಾಗಿ ಅಗ್ನಿಹೋತ್ರವನ್ನು ಶ್ರದ್ಧೆಯಿಂದ ಆಶ್ರಯಿಸಿ ಸಿದ್ಧಿಯನ್ನು ಹೊಂದುತ್ತಾರೆ.

ವಿಶ್ವಾಮಿತ್ರಸ್ಯ ಪುತ್ರತ್ವಮೃಚೀಕತನಯೋಽಗಮತ್ ।
ಋಗ್ಭಿಃ ಸ್ತುತ್ವಾ ಮಹಾಭಾಗೋ ದೇವಾನ್ ವೈ ಯಜ್ಞಭಾಗಿನಃ ॥೧೩॥

ಮಹಾಬಾಹುವೇ, ಋಚೀಕರ ಮಗನಾದ ಶುನಶ್ಶೇಪನು ದೇವತೆಗಳನ್ನು ಒಂದು ಯಜ್ಞದಲ್ಲಿ ವೇದಮಂತ್ರಗಳಿಂದ ಸ್ತೋತ್ರ ಮಾಡಿ ವಿಶ್ವಾಮಿತ್ರನ ಮಗನೇ ಆದನು.

ಗತಃ ಶುಕ್ರತ್ವಮುಶನಾ ದೇವದೇವಪ್ರಸಾದನಾತ್ ।
ದೇವೀಂ ಸ್ತುತ್ವಾ ತು ಗಗನೇ ಮೋದತೇ ತೇಜಸಾ ವೃತಃ ॥೧೪॥

ಉಶನಸ್ ಎಂಬ ಋಷಿಯು ದೇವದೇವನಾದ ಮಹಾರುದ್ರನ ಅನುಗ್ರಹವನ್ನು ಬಯಸಿ ಶುಕ್ರತ್ವವನ್ನು ಪಡೆದು, ಶುಕ್ರನೆಂಬ ಹೆಸರಿನಿಂದಲೇ ಪ್ರಸಿದ್ಧನಾದನು. ಪಾರ್ವತಿಯ ಅನುಗ್ರಹದಿಂದ ಆಕಾಶದಲ್ಲಿ ಗ್ರಹಸ್ಥಾನವನ್ನು ಪಡೆದು ಕೀರ್ತಿಯಿಂದ ಶುಚಿಯಾಗಿದ್ದಾನೆ.

ಅಸಿತೋ ದೇವಲಶ್ಚೈವ ತಥಾ ನಾರದಪರ್ವತೌ ।
ಕಕ್ಷೀವಾಂಜಮದಗ್ನ್ಯಶ್ಚ ರಾಮಸ್ತಾಂಡ್ಯಸ್ತಥಾಂಶುಮಾನ್ ॥೧೫॥

ವಸಿಷ್ಠೋ ಜಮದಗ್ನಿಶ್ಚ ವಿಶ್ವಾಮಿತ್ರೋಽತ್ರಿರೇವ ಚ ।
ಭರದ್ವಾಜೋ ಹರಿಶ್ಮಶ್ರುಃ ಕುಂಡಧಾರಃ ಶ್ರುತಶ್ರವಾಃ ॥೧೬॥

ಏತೇ ಮಹರ್ಷಯಃ ಸ್ತುತ್ವಾ ವಿಷ್ಣುಮೃಗ್ಭಿಃ ಸಮಾಹಿತಾಃ ।
ಲೇಭಿರೇ ತಪಸಾ ಸಿದ್ಧಿಂ ಪ್ರಸಾದಾತ್ತಸ್ಯ ಧೀಮತಃ ॥೧೭॥

ಅಸಿತ, ದೇವಲ, ನಾರದ, ಪರ್ವತ, ಕಕ್ಷೀವಾನ್, ಜಮದಗ್ನಿಯ ಮಗನಾದ ಪರಶುರಾಮ, ಜಿತೇಂದ್ರಿಯನಾದ ತಾಂಡ್ಯ, ಅಂಶುಮಾನ್, ವಸಿಷ್ಠ, ಜಮದಗ್ನಿ,

ವಿಶ್ವಾಮಿತ್ರ, ಅತ್ರಿ, ಭರದ್ವಾಜ, ಹರಿಶ್ಮಶ್ರು, ಕುಂಡಧಾರ, ಶ್ರುತಶ್ರವಸ್ - ಈ ಎಲ್ಲ ಋಷಿಗಳು ಏಕಾಗ್ರತೆಯಿಂದ, ವೇದಮಂತ್ರಗಳಿಂದ ಭಗವಂತನಾದ ಶ್ರೀಹರಿಯನ್ನು ಸ್ತೋತ್ರ ಮಾಡಿ, ಮಹಾನುಭಾವನಾದ ಶ್ರೀಹರಿಯ ಕರುಣೆಗೆ ಪಾತ್ರರಾಗಿ ಸಿದ್ಧಿಯನ್ನು ಹೊಂದಿರುವರು.

ಅನರ್ಹಾಶ್ಚಾರ್ಹತಾಂ ಪ್ರಾಪ್ತಾಃ ಸಂತಃ ಸ್ತುತ್ವಾ ತಮೇವ ಹ ।
ನ ತು ವೃದ್ಧಿಮಿಹಾನ್ವಿಚ್ಛೇತ್ ಕರ್ಮ ಕೃತ್ವಾ ಜುಗುಪ್ಸಿತಮ್ ॥೧೮॥

ಗೌರವಿಸಲು ಯೋಗ್ಯರಾದ ಉತ್ತಮ ಪುರುಷರು ಶ್ರೀಹರಿಯನ್ನೇ ವಿಶೇಷವಾಗಿ ಸ್ತೋತ್ರ ಮಾಡಿ ಸಂತರೂ, ಪೂಜನೀಯರೂ ಆಗಿದ್ದಾರೆ. ಜುಗುಪ್ಸಿತವಾದ ಪಾಪ ಕರ್ಮಗಳನ್ನು ಮಾಡಿ ಯಾರೂ ಉನ್ನತಿಯನ್ನು ಹೊಂದಲು ಬಯಸಬಾರದು.

ಯೇಽರ್ಥಾ ಧರ್ಮೇಣ ತೇ ಸತ್ಯಾ ಯೇಽಧರ್ಮೇಣ ಧಿಗಸ್ತು ತಾನ್ ।
ಧರ್ಮಂ ವೈ ಶಾಶ್ವತಂ ಲೋಕೇ ನ ಜಹ್ಯಾದ್ಧನಕಾಂಕ್ಷಯಾ ॥೧೯॥

ಧರ್ಮಮಾರ್ಗದಿಂದ ದೊರೆಯುವ ಸಂಪತ್ತೇ ನಿಜವಾದ ಸಂಪತ್ತು. ಅಧರ್ಮದಿಂದ ದೊರೆಯುವ ಸಂಪತ್ತಿಗೆ ಧಿಕ್ಕಾರವು. ಧರ್ಮವೇ ಶಾಶ್ವತವಾದುದು. ಆದ್ದರಿಂದ ಧನವನ್ನು ಬಯಸುವ ವ್ಯಕ್ತಿಯು ಧರ್ಮವನ್ನು ತ್ಯಜಿಸಿ ಧನ ಸಂಗ್ರಹಿಸಬಾರದು.

ಆಹಿತಾಗ್ನಿರ್ಹಿ ಧರ್ಮಾತ್ಮಾ ಯಃ ಸ ಪುಣ್ಯಕೃದುತ್ತಮಃ ।
ವೇದಾ ಹಿ ಸರ್ವೇ ರಾಜೇಂದ್ರ ಸ್ಥಿತಾಸ್ತ್ರಿಷ್ವಗ್ನಿಷು ಪ್ರಭೋ ॥೨೦॥

ಯಾರು ಪ್ರತಿದಿನವೂ ಅಗ್ನಿಹೋತ್ರವನ್ನು ಮಾಡುತ್ತಾರೋ ಅವರೇ ಧರ್ಮಾತ್ಮರು. ಪುಣ್ಯಕರ್ಮಗಳಲ್ಲಿ ಶ್ರೇಷ್ಠರಾದವರು. ಸಂಪೂರ್ಣ ವೇದಗಳು ಆಹಿತಾಗ್ನಿಯು ಆರಾಧನೆ ಮಾಡುವ ದಕ್ಷಿಣಾಗ್ನಿ, ಗಾರ್ಹಪತ್ಯ, ಆವಹನೀಯ ಎಂಬ ಮೂರು ಅಗ್ನಿಗಳಲ್ಲಿಯೇ ಪ್ರತಿಷ್ಠಿತವಾಗಿವೆ.

ಸ ಚಾಪ್ಯಗ್ನ್ಯಾಹಿತೋ ವಿಪ್ರಾಃ ಕ್ರಿಯಾ ಯಸ್ಯ ನ ಹೀಯತೇ ।
ಶ್ರೇಯೋ ಹ್ಯನಾಹಿತಾಗ್ನಿತ್ವಮಗ್ನಿಹೋತ್ರಂ ನ ನಿಷ್ಕ್ರಿಯಮ್ ॥೨೧॥

ಯಾರು ಸತ್ಕರ್ಮ-ಸದಾಚಾರಗಳಿಂದ ವಿಮುಖರಾಗುವುದಿಲ್ಲವೋ ಅವರೇ ಅಗ್ನಿಹೋತ್ರಿಗಳಾಗಲು ಅರ್ಹರಾಗುತ್ತಾರೆ. ಸದಾಚಾರದಿಂದ ಸತ್ಕರ್ಮಶೀಲನಾದವನು ಅಗ್ನಿಹೋತ್ರಿಯಾಗದಿದ್ದರೂ ಶ್ರೇಯೋಭಾಗಿಯಾಗುತ್ತಾನೆ. ಸದಾಚಾರ, ಸತ್ಕರ್ಮ ಹೀನನಾದವನು ಅಗ್ನಿಹೋತ್ರಿಯಾದರೂ ಕರ್ಮವು ನಿಷ್ಫಲವಾಗುತ್ತದೆ.

ಅಗ್ನಿರಾತ್ಮಾ ಚ ಮಾತಾ ಚ ಪಿತಾ ಜನಯಿತಾ ತಥಾ ।
ಗುರುಶ್ಚ ನರಶಾರ್ದೂಲ ಪರಿಚರ್ಯಾ ಯಥಾತಥಮ್ ॥೨೨॥

ಪುರುಷಸಿಂಹನೇ, ಅಗ್ನಿ, ಪರಮಾತ್ಮ, ತಾಯಿ, ಜನ್ಮದಾತೃವಾದ ತಂದೆ, ಗುರು ಇವೆಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಬೇಕು.

ಮಾನಂ ತ್ಯಕ್ತ್ವಾ ಯೋ ನರೋ ವೃದ್ಧಸೇವೀ
ವಿದ್ವಾನ್ ಕ್ಲೀಬಃ ಪಶ್ಯತಿ ಪ್ರೀತಿಯೋಗಾತ್ ।
ದಾಕ್ಷ್ಯೇಣ ಹೀನೋ ಧರ್ಮಯುಕ್ತೋ ನದಾಂತೋ
ಲೋಕೇಽಸ್ಮಿನ್ ವೈ ಪೂಜ್ಯತೇ ಸದ್ಭಿರಾರ್ಯಃ ॥೨೩॥

ಯಾವನು ಆತ್ಮಾಭಿಮಾನವನ್ನು ಬಿಟ್ಟು ವೃದ್ಧರ ಸೇವೆಯಲ್ಲಿ ರತನಾಗಿರುತ್ತಾನೋ, ವಿದ್ಯಾವಂತನಾಗಿಯೂ, ಕಾಮಭೋಗ ಆಸಕ್ತಿಯನ್ನು ತೊರೆದು ಎಲ್ಲರಲ್ಲಿಯೂ ಪ್ರೀತಿಯನ್ನು ಹೊಂದಿದವನಾಗಿರುತ್ತಾನೋ, ತನ್ನ ಸಾಮರ್ಥ್ಯವನ್ನು ತೋರಿಸಿಕೊಳ್ಳದೆ ಧರ್ಮದಲ್ಲಿ ಆಸಕ್ತನಾಗಿರುತ್ತಾನೋ, ಅಜಿತೇಂದ್ರಿಯನಾಗಿರುವುದಿಲ್ಲವೋ ಅಂತಹ ಪೂಜ್ಯನು ಲೋಕದಲ್ಲಿ ಸತ್ಪುರುಷರಿಂದ ಪೂಜಿಸಲು ಅರ್ಹತೆಯನ್ನು ಹೊಂದಿರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚವಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತಾರನೆಯ ಅಧ್ಯಾಯ

ಪರಾಶರ ಗೀತಾ. ಶೂದ್ರನಿಗೆ ಸೇವಾ ವೃತ್ತಿಯೇ ಪ್ರಧಾನವು ಎನ್ನಲು ಸತ್ಸಂಗದ ಮಹಿಮೆಯನ್ನು, ವರ್ಣಾಶ್ರಮದ ಮಹಿಮೆಯನ್ನು, ವರ್ಣಾಶ್ರಮದ ಧರ್ಮಪಾಲನೆಯ ಮಹತ್ವವನ್ನು ತಿಳಿಸಿದುದು.

ಪರಾಶರಃ

ವೃತ್ತಿಃ ಸಕಾಶಾದ್ ವರ್ಣೇಭ್ಯೋ ನಿತ್ಯಂ ಹೀನಸ್ಯ ಶೋಭನಾ ।
ಪ್ರೀತ್ಯೋಪನೀತಾ ನಿರ್ದಿಷ್ಟಾ ಧರ್ಮಿಷ್ಠಾನ್ ಕುರುತೇ ಸದಾ ॥೧॥

ಪರಾಶರ– ಜನಕನೇ, ಶೂದ್ರನು ಮೂರು ವರ್ಣದವರ ಸೇವೆಯಲ್ಲಿ ದರಿದ್ರನಾದ ಬ್ರಾಹ್ಮಣನನ್ನು ಸೇವಿಸುವುದು ತುಂಬಾ ಶ್ರೇಷ್ಠವಾದ ಧರ್ಮವೆನಿಸಿದೆ. ಬ್ರಾಹ್ಮಣರನ್ನು ಸೇವಾವೃತ್ತಿಯಿಂದ, ಪ್ರೀತಿಪೂರ್ವಕವಾಗಿ ಪಾಲಿಸಿದರೆ ಆ ಸೇವೆಯ ಧರ್ಮವೇ ಅವರನ್ನು ಧರ್ಮಿಷ್ಠರನ್ನಾಗಿ ಮಾಡುತ್ತದೆ.

ವೃತ್ತಿಶ್ಚೈನಾಸ್ತಿ ಶೂದ್ರಸ್ಯ ಪಿತೃಪೈತಾಮಹೀ ಧ್ರುವಾ ।
ನ ವೃತ್ತಿಂ ಪರತೋ ಮಾರ್ಗೇಚ್ಛುಶ್ರೂಷಾಂ ತು ಪ್ರಯೋಜಯೇತ್ ॥೨॥

ಶೂದ್ರನಾದವನಿಗೆ ತಂದೆ, ತಾತ ಇವರ ಕಾಲದಿಂದ ನಿರ್ದಿಷ್ಟವಾದ ಒಂದು ವೃತ್ತಿ ನಿಶ್ಚಿತವಾಗದಿದ್ದಲ್ಲಿ ಅವನು ಬೇರೆ ಯಾವ ವೃತ್ತಿಯನ್ನೂ ಆಶ್ರಯಿಸಬಾರದು. ಮೂರು ವರ್ಣದವರ ಸೇವೆಯನ್ನು, ವಿಶೇಷವಾಗಿ ಬ್ರಾಹ್ಮಣರ ಸೇವೆಯನ್ನು ಮಾಡಿ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು.

ಸದ್ಭಿಸ್ತು ಸಹ ಸಂಸರ್ಗಃ ಶೋಭತೇ ಧರ್ಮದರ್ಶಿಭಿಃ ।
ನಿತ್ಯಂ ಸರ್ವಾಸ್ವವಸ್ಥಾಸು ನಾಸದ್ಭಿರಿತಿ ಮೇ ಮತಿಃ ॥೩॥

ಸಜ್ಜನರ ಸಹವಾಸವೇ ಶೂದ್ರನಿಗೆ ಶುಭದಾಯಕವಾದ ವೃತ್ತಿ ಎನಿಸಿದೆ. ಯಾವುದೇ ಕಷ್ಟದ ಸ್ಥಿತಿಯಲ್ಲಿಯೂ ಶೂದ್ರನಾದವನು ಅಸಜ್ಜನರ ಸಂಗವನ್ನು ಮಾಡಲೇ ಬಾರದೆಂಬುದು ನನ್ನ ಅಭಿಪ್ರಾಯವಾಗಿದೆ.

ಯಥೋದಯಗಿರೌ ದ್ರವ್ಯಂ ಸನ್ನಿಕರ್ಷೇಣ ದೀಪ್ಯತೇ ।
ತಥಾ ಸತ್ಸನ್ನಿಕರ್ಷೇಣ ಹೀನವರ್ಣೋಽಪಿ ದೀಪ್ಯತೇ ॥೪॥

ಯಾವ ರೀತಿಯಾಗಿ ಉದಯ ಪರ್ವತದಲ್ಲಿರುವ ಸ್ಫಟಿಕವೇ ಮೊದಲಾದ ದ್ರವ್ಯವು ಸೂರ್ಯಾದಿ ಸನ್ನಿಕರ್ಷದಿಂದ ವಿಶೇಷವಾಗಿ ಶೋಭೆಯನ್ನು ಹೊಂದುವುದೋ ಅದೇ ರೀತಿ ಸತ್ಪುರುಷರ ಸನ್ನಿಧಾನದಲ್ಲಿರುವುದರಿಂದ ಹೀನವರ್ಣದವನು ಸದ್ಗುಣಗಳಿಂದ ಶೋಭಿಸುತ್ತಾನೆ.

ಯಾದೃಶೇನ ಹಿ ವರ್ಣೇನ ಭಾವ್ಯತೇ ಶುಕ್ಲಮಂಬರಮ್ ।
ತಾದೃಶಂ ಕುರುತೇ ರೂಪಮೇತದೇವಮವೈಹಿ ಮೇ ॥೫॥

ಬಿಳಿಯಾದ ಬಟ್ಟೆಗೆ ಯಾವ ಬಣ್ಣವನ್ನು ಹಾಕಿದರೂ ಹೊಂದಿಕೆ ಮಾಡಿಕೊಳ್ಳುವಂತೆ ಸತ್ಪುರುಷರ ಸಹವಾಸವನ್ನು ಮಾಡಿದರೆ ಸದ್ಗುಣವನ್ನೇ ಹೊಂದುತ್ತಾನೆ. ದುಷ್ಟರ ಸಹವಾಸವನ್ನು ಮಾಡಿದರೆ ದುರ್ಗುಣಿಯಾಗುತ್ತಾನೆ. ಬಿಳಿಯಾದ ಬಟ್ಟೆಯಂತೆ ಶೂದ್ರನ ಸ್ಥಿತಿ ಎಂದು ಭಾವ.

ತಸ್ಮಾದ್ ಗುಣೇಷು ರಜ್ಯೇಥಾ ಮಾ ದೋಷೇಷು ಕದಾಚನ ।
ಅನಿತ್ಯಮಿಹ ಮರ್ತ್ಯಾನಾಂ ಜೀವಿತಂ ಹಿ ಚಲಾಚಲಮ್ ॥೬॥

ಆದ್ದರಿಂದ ಸದ್ಗುಣಗಳಲ್ಲಿ ಅಥವಾ ಸದ್ಗುಣವುಳ್ಳವರಲ್ಲಿ ಪ್ರೀತಿಯನ್ನು ಹೊಂದಬೇಕು. ದುಷ್ಟರಲ್ಲಿ ಅಥವಾ ದೋಷಗಳಲ್ಲಿ ಅನುರಾಗವನ್ನು ಹೊಂದಬಾರದು. ಶರೀರವು ಚಂಚಲವಾಗಿದೆ. ಆತ್ಮನೊಬ್ಬನೇ ನಿತ್ಯನಾಗಿದ್ದಾನೆ. ಆತ್ಮನಿಗೆ ಬೇಕಾದ ಗುಣಗಳನ್ನು ಹೊಂದಬೇಕು.

ಸುಖೇ ವಾ ಯದಿ ವಾ ದುಃಖೇ ವರ್ತಮಾನೋ ವಿಚಕ್ಷಣಃ ।
ಯಶ್ಚಿನೋತಿ ಶುಭಾನ್ಯೇವ ಸ ಭದ್ರಾಣೀಹ ಪಶ್ಯತಿ ॥೭॥

ವಿದ್ವಾಂಸನು ಸುಖದಲ್ಲಿರಲಿ, ದುಃಖದಲ್ಲಿರಲಿ, ಶುಭಕರ್ಮಗಳನ್ನೇ ಅನುಷ್ಠಾನ ಮಾಡುತ್ತಿದ್ದರೆ ಅವನು ನಿಜವಾದ ಶಾಸ್ತ್ರಜ್ಞನಾಗುತ್ತಾನೆ.

ಧರ್ಮಾದಪೇತಂ ಯತ್ ಕರ್ಮ ಯದ್ಯಪಿ ಸ್ಯಾನ್ಮಹಾಫಲಮ್ ।
ನ ತತ್ ಸೇವೇತ ಮೇಧಾವೀ ನ ತದ್ಧಿತಮಿಹೋಚ್ಯತೇ ॥೮॥

ಧರ್ಮಕ್ಕಿಂತ ವಿರುದ್ಧವಾದ, ಮಹಾಫಲಪ್ರದವಾದ ಕರ್ಮವನ್ನು ಒಮ್ಮೆಯೂ ಮೇಧಾವಿಯಾದವನು ಆಚರಿಸಲು ಹೋಗಬಾರದು. ಧರ್ಮಕ್ಕೆ ವಿರುದ್ಧವಾದ

ಮಹಾಫಲಪ್ರದವಾದ ಕರ್ಮವನ್ನು ಮಾಡುವುದು ಹಿತವಾದುದಲ್ಲ ಎಂಬುದೇ ಸಜ್ಜನರ ಅಭಿಪ್ರಾಯ.

ಯೋ ಹತ್ವಾ ಗೋಸಹಸ್ರಾಣಿ ನೃಪೋ ದದ್ಯಾದರಕ್ಷಿತಾ ।
ಸ ಶಬ್ದಮಾತ್ರಫಲಭಾಗ್ರಾಜಾ ಭವತಿ ತಸ್ಕರಃ ॥೯॥

ಯಾವನು ಪ್ರಜೆಗಳನ್ನು ಪೀಡಿಸುತ್ತಾ ಸಾವಿರ ಗೋವುಗಳನ್ನು ಬೇರೆಯವರಿಗೆ ದಾನ ಮಾಡುತ್ತಾನೋ ಹೀಗೆ ಪ್ರಜೆಗಳನ್ನು ರಕ್ಷಿಸದೆ ಮಾಡಿದ ದಾನವು ಯಾವ ಫಲವನ್ನೂ ನೀಡುವುದಿಲ್ಲ. ಆ ರಾಜನು ಕಳ್ಳನೆಂದೇ ಕರೆಸಿಕೊಳ್ಳುತ್ತಾನೆ.

ಸ್ವಯಂಭೂರಸೃಜಚ್ಚಾಗ್ರೇ ಧಾತಾರಂ ಲೋಕಪೂಜಿತಮ್ ।
ಧಾತಾಸೃಜತ್ ಪುತ್ರಮೇಕಂ ಪ್ರಜಾನಾಂ ಧಾರಣೇ ರತಮ್ ॥೧೦॥

ಶ್ರೀಮನ್ನಾರಾಯಣನು ಮೊದಲು ಪರ್ಜನ್ಯ ಅಥವಾ ಧರ್ಮ ಎಂಬ ಮಗನನ್ನು ಸೃಷ್ಟಿ ಮಾಡಿದನು. ಸಕಲ ಲೋಕಗಳನ್ನು ಧರಿಸುವುದರಲ್ಲಿ ಸಾಮರ್ಥ್ಯವುಳ್ಳಂತಹ ಮಕ್ಕಳು ಇವರಾದರು.

ತಮರ್ಚಯಿತ್ವಾ ವೈಶ್ಯಸ್ತು ಕುರ್ಯಾದತ್ಯರ್ಥಮೃದ್ಧಿಮತ್ ।
ರಕ್ಷಿತವ್ಯಂ ತು ರಾಜನ್ಯೈರುಪಯೋಜ್ಯಂ ದ್ವಿಜಾತಿಭಿಃ ॥೧೧॥

ವೈಶ್ಯರು ಪರ್ಜನ್ಯನನ್ನು ಆರಾಧನೆ ಮಾಡಿ ಕೃಷಿ ಹಾಗು ಪಶುಪಾಲನೆ ಧರ್ಮಗಳಿಂದ ಐಶ್ವರ್ಯಸಮೃದ್ಧಿಯನ್ನು ಹೊಂದಬೇಕು. ರಾಜರು ಅವರಲ್ಲಿರುವ ಐಶ್ವರ್ಯವನ್ನು ರಕ್ಷಿಸಬೇಕು.

ಅಜಿಹ್ಮೈರಶಠಕ್ರೋಧೈರ್ಹವ್ಯಕವ್ಯಪ್ರಯೋಕ್ತೃಭಿಃ ।
ಶೂದ್ರೈರ್ನಿರ್ಮಾರ್ಜನಂ ಕಾರ್ಯಮೇವಂ ಧರ್ಮೋ ನ ನಶ್ಯತಿ ॥೧೨॥

ಪ್ರಾಮಾಣಿಕರಾದ, ಶಠರಲ್ಲದಿರುವ, ಕ್ರೋಧವನ್ನು ತ್ಯಾಗ ಮಾಡಿರುವ, ಹವ್ಯ-ಕವ್ಯಗಳನ್ನು ಮಾಡಿಸುವ ಬ್ರಾಹ್ಮಣರು ವೈಶ್ಯರ ಐಶ್ವರ್ಯಗಳನ್ನು ಯಜ್ಞಗಳಿಗೆ ಲೋಕ ಹಿತಕ್ಕಾಗಿ ವಿನಿಯೋಗಿಸಬೇಕು. ಆ ಯಜ್ಞದಲ್ಲಿ ಪೂರ್ವವೇದಿಕೆಗಳನ್ನು ಅರ್ಥಾತ್ ಯಜ್ಞಮಂಟಪ ಮೊದಲಾದವುಗಳನ್ನು ಶೂದ್ರರು ಶುದ್ಧಿಗೊಳಿಸಬೇಕು. ಹೀಗೆ ಮಾಡುವುದರಿಂದ ಧರ್ಮವು ನಾಶ ಹೊಂದುವುದಿಲ್ಲ.

ಅಪ್ರಣಷ್ಟೇ ತತೋ ಧರ್ಮೇ ಭವಂತಿ ಸುಖಿತಾಃ ಪ್ರಜಾಃ ।
ಸುಖೇನ ತಾಸಾಂ ರಾಜೇಂದ್ರ ಮೋದಂತೇ ದಿವಿ ದೇವತಾಃ ॥೧೩॥

ಧರ್ಮವು ಸ್ಥಿರವಾಗಿ ನಿಂತು ಪರಿಪಾಲಿಸಲ್ಪಡುತ್ತಿದ್ದಲ್ಲಿ ಪ್ರಜೆಗಳೂ ಸುಖದಿಂದ ವಾಸಿಸುತ್ತಾರೆ. ಪ್ರಜೆಗಳು ಸುಖವಾಗಿದ್ದಲ್ಲಿ ಸ್ವರ್ಗದಲ್ಲಿರುವ ದೇವತೆಗಳು ಆನಂದ ಹೊಂದುತ್ತಾರೆ.

ತಸ್ಮಾದ್ ಯೋ ರಕ್ಷತಿ ನೃಪಃ ಸ ಧರ್ಮೇಣಾಭಿಪೂಜ್ಯತೇ ।
ಅಧೀತೇ ಚಾಪಿ ಯೋ ವಿಪ್ರೋ ವೈಶ್ಯೋ ಯಶ್ಚಾರ್ಜನೇ ರತಃ ॥೧೪॥

ಆದ್ದರಿಂದ ಯಾವ ರಾಜನು ಧರ್ಮದಿಂದ ಪ್ರಜೆಗಳನ್ನು ರಕ್ಷಿಸುತ್ತಿದ್ದಾನೋ ಅವನು ಧರ್ಮದ ಕಾರಣದಿಂದ ಲೋಕದಲ್ಲಿ ಪೂಜ್ಯನಾಗುತ್ತಾನೆ. ಇದರಂತೆ ಧರ್ಮ ಮಾರ್ಗವನ್ನು ಅನುಸರಿಸಿ ವೇದಾಧ್ಯಯನವನ್ನು ಮಾಡುವ ಬ್ರಾಹ್ಮಣ, ಧರ್ಮಾನುಸಾರವಾಗಿ ಧನ ಸಂಪಾದಿಸುವ ವೈಶ್ಯ ಇವರೂ ಪೂಜ್ಯರೇ ಆಗುತ್ತಾರೆ.

ಯಶ್ಚ ಶುಶ್ರೂಷತೇ ಶೂದ್ರಃ ಸತತಂ ನಿಯತೇಂದ್ರಿಯಃ ।
ಅತೋಽನ್ಯಥಾ ಮನುಷ್ಯೇಂದ್ರ ಸ್ವಧರ್ಮಾತ್ ಪರಿಹೀಯತೇ ॥೧೫॥

ಯಾವ ಶೂದ್ರನು ಜಿತೇಂದ್ರಿಯನಾಗಿದ್ದು ಬ್ರಾಹ್ಮಣರ ಸೇವೆಯಲ್ಲಿ ನಿರತನಾಗಿರುತ್ತಾನೋ, ಹೀಗೆ ತಮ್ಮ ಧರ್ಮದಲ್ಲಿ ಆಸಕ್ತರಾಗಿರುವ ವ್ಯಕ್ತಿಗಳು ಸಮ್ಮಾನಿತರಾಗುತ್ತಾರೆ. ತಮ್ಮ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಂಡಲ್ಲಿ ಪ್ರಜೆಗಳೆಲ್ಲ ತಮ್ಮ ತಮ್ಮ ಧರ್ಮಗಳಿಂದ ಭ್ರಷ್ಟರಾಗುತ್ತಾರೆ.

ಪ್ರಾಣಸಂತಾಪನಿರ್ದಿಷ್ಟಾಃ ಕಾಕಿಣ್ಯೋಽಪಿ ಮಹಾಫಲಾಃ ।
ನ್ಯಾಯೇನೋಪಾರ್ಜಿತಾ ದತ್ತಾಃ ಕಿಮುತಾನ್ಯಾಃ ಸಹಸ್ರಶಃ ॥೧೬॥

ಒಬ್ಬ ವ್ಯಕ್ತಿಗೆ ಪ್ರಾಣ ಹೋಗುವ ಪ್ರಸಂಗದಲ್ಲಿ ನೀಡುವ ಕವಡೆ ಕಾಸಿನ ಕ್ಷುದ್ರ ಧಾನ್ಯ ಕಣಗಳು ಮಹಾಫಲವಾಗುತ್ತವೆ, ಎಂದು ಧರ್ಮವು. ಹೀಗಿರಲು ನ್ಯಾಯದಿಂದ ಸಂಪಾದನೆ ಮಾಡಿ ಸಾವಿರ ಸಂಖ್ಯೆಯಲ್ಲಿ ದಾನ ಮಾಡಿದ ದ್ರವ್ಯವು ಅನಂತ ಫಲದಾಯಕ ಎಂದು ಹೇಳಬೇಕೇನು?

ಸತ್ಕೃತ್ಯ ತು ದ್ವಿಜಾತಿಭ್ಯೋ ಯೋ ದದಾತಿ ನರಾಧಿಪ ।
ಯಾದೃಶಂ ತಾದೃಶಂ ನಿತ್ಯಮಶ್ನಾತಿ ಫಲಮೂರ್ಜಿತಮ್ ॥೧೭॥

ಯಾವ ರಾಜನು ಬ್ರಾಹ್ಮಣರನ್ನು ಆದರಿಸಿ, ಅವರಿಗೆ ಎಷ್ಟೆಷ್ಟು ದಾನವನ್ನು ಮಾಡುತ್ತಾನೋ ಅದಕ್ಕನುಗುಣವಾಗಿ ಉತ್ತಮ ಫಲಗಳನ್ನು ಅವನು ಯಾವತ್ತಿಗೂ ಹೊಂದುತ್ತಾನೆ.

ಅಭಿಗಮ್ಯ ದತ್ತಂ ತುಷ್ಟ್ಯಾ ಯದ್ದನ್ಯಮಾಹುರಭಿಷ್ಟುತಮ್ ।
ಯಾಚಿತೇನ ತು ಯದ್ದತ್ತಂ ತದಾಹುರ್ಮಧ್ಯಮಂ ಬುಧಾಃ ॥೧೮॥

ಸತ್ಪಾತ್ರನಾದ ಬ್ರಾಹ್ಮಣನ ಬಳಿ ರಾಜನು ತಾನಾಗಿ ಹೋಗಿ ಅವನನ್ನು ಸತ್ಕರಿಸಿ, ಸಂತೋಷಪಡಿಸಿ, ಯಾವ ದಾನವನ್ನು ಮಾಡುತ್ತಾನೋ ಆ ದಾನವನ್ನು ಪ್ರಶಂಸಾರ್ಹವಾದ ದಾನ ಎನ್ನುತ್ತಾರೆ. ಒಬ್ಬನು ಕೇಳುವ ಬಳಿಕ ನೀಡುವ ದಾನಕ್ಕೆ ಮಧ್ಯಮ ಶ್ರೇಣಿಯ ದಾನವೆಂದು ವಿದ್ವಾಂಸರು ಹೇಳುತ್ತಾರೆ.

ಅವಜ್ಞಯಾ ದೀಯತೇ ಯತ್ತಥೈವಾಶ್ರದ್ಧಯಾಪಿ ಚ ।
ತದಾಹುರಧಮಂ ದಾನಂ ಮುನಯಃ ಸತ್ಯವಾದಿನಃ ॥೧೯॥

ಅನಾದರಣೆಯಿಂದ, ಅಶ್ರದ್ಧೆಯಿಂದ ಮಾಡುವ ದಾನವನ್ನು ಸತ್ಯವಾದಿ ಮುನಿಗಳು ಅಧರ್ಮಶ್ರೇಣಿಯ ದಾನ ಎಂದು ಹೇಳುತ್ತಾರೆ.

ಅತಿಕ್ರಾಮೇನ್ಮಜ್ಜಮಾನೋ ವಿವಿಧೇನ ನರಃ ಸದಾ ।
ತಥಾ ಪ್ರಯತ್ನಂ ಕುರ್ವೀತ ಯಥಾ ಮುಚ್ಯೇತ ಸಂಶ್ರಯಾತ್ ॥೨೦॥

ಯಾವ ರೀತಿಯಾಗಿ ನಾನಾ ದುಃಖಗಳಲ್ಲಿ ಮುಳುಗಿದ ವ್ಯಕ್ತಿಯು ಆ ಕಷ್ಟಗಳಿಂದ ಬಿಡುಗಡೆಯನ್ನು ಹೊಂದಲು ಅನೇಕ ವಿಧವಾಗಿ ಪ್ರಯತ್ನಗಳನ್ನು ಮಾಡಿ, ದುಃಖದಿಂದ ಹೊರಗೆ ಬರುತ್ತಾನೋ ಈ ರೀತಿಯಾಗಿ ಅನಾದಿ ಕಾಲದಿಂದ ಅಂಟಿ ಕೊಂಡಿರುವ ಭವ ಸಮುದ್ರವೆಂಬ ದುಃಖದಿಂದ ಮೇಲೇಳಲು ಮನುಷ್ಯನು ನಿರಂತರವೂ ಪ್ರಯತ್ನಶೀಲನಾಗಿರಬೇಕು.

ದಮೇನ ಶೋಭತೇ ವಿಪ್ರಾಃ ಕ್ಷತ್ರಿಯೋ ವಿಜಯೇನ ತು ।
ಧನೇನ ವೈಶ್ಯಃ ಶೂದ್ರಸ್ತು ನಿತ್ಯಂ ದಾಕ್ಷ್ಯೇಣ ಶೋಭತೇ ॥೨೧॥

ಇಂದ್ರಿಯನಿಗ್ರಹದಿಂದ ಬ್ರಾಹ್ಮಣನು ಶೋಭಿಸುತ್ತಾನೆ. ಯುದ್ಧದಲ್ಲಿ ಜಯ ಸಂಪಾದನೆಯಿಂದ ಕ್ಷತ್ರಿಯನು ಶೋಭೆ ಹೊಂದುತ್ತಾನೆ. ಸಂಪತ್ತಿನ ಸಂಗ್ರಹದಿಂದ ವೈಶ್ಯನೂ, ಸೇವಾ ಕುಶಲತೆಯಿಂದ ಶೂದ್ರರು ಶೋಭೆಯನ್ನು ಹೊಂದುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಟ್‌ವಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೇಳನೆಯ ಅಧ್ಯಾಯ

ಪರಾಶರರ ಉಪದೇಶ ಮುಂದುವರೆದುದು.

ಪರಾಶರಃ

ಪ್ರತಿಗ್ರಹಾಗತಾ ವಿಪ್ರೇ ಕ್ಷತ್ರಿಯೇ ಶಸ್ತ್ರನಿರ್ಜಿತಾಃ ।
ವೈಶ್ಯೇ ನ್ಯಾಯಾರ್ಜಿತಾಶ್ಚೈವ ಶೂದ್ರೇ ಶುಶ್ರೂಷಯಾರ್ಜಿತಾಃ ।
ಸ್ವಲ್ಪಾಪ್ಯರ್ಥಾಃ ಪ್ರಶಂಸ್ಯಂತೇ ಧರ್ಮಸ್ಯಾರ್ಥೇ ಮಹಾಫಲಾಃ ॥೧॥

ಜನಕರಾಜನೇ, ಬ್ರಾಹ್ಮಣನಲ್ಲಿ ಪ್ರತಿಗ್ರಹದಿಂದ ಸಂಗ್ರಹಿಸಿದ ಐಶ್ವರ್ಯವು, ಕ್ಷತ್ರಿಯನಲ್ಲಿ ಶಸ್ತ್ರದಿಂದ ಗೆದ್ದು ಸಂಗ್ರಹಿಸಿದ ಐಶ್ವರ್ಯವು, ವೈಶ್ಯನಲ್ಲಿ ನ್ಯಾಯದಿಂದ ಆರ್ಜಿತವಾದ ಐಶ್ವರ್ಯವು, ಶೂದ್ರನಲ್ಲಿ ಶುಶ್ರೂಷೆಯಿಂದ ಸಂಗ್ರಹಿಸಿದ ಐಶ್ವರ್ಯವು ಸ್ವಲ್ಪವೇ ಆದರೂ ಪ್ರಶಂಸನೀಯವಾಗಿರುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಉಪಯೋಗಿಸಿದ್ದಲ್ಲಿ ಮಹಾಫಲಪ್ರದವಾಗಿರುತ್ತದೆ.

ನಿತ್ಯಂ ತ್ರಯಾಣಾಂ ವರ್ಣಾನಾಂ ಶೂದ್ರಃ ಶುಶ್ರೂಷುರುಚ್ಯತೇ ।
ಕ್ಷತ್ರಧರ್ಮಾ ವೈಶ್ಯಧರ್ಮಾ ನಾವೃತ್ತಿಃ ಪತತಿ ದ್ವಿಜಃ ।
ಶೂದ್ರಕರ್ಮಾ ಯದಾ ತು ಸ್ಯಾತ್ತದಾ ಪತತಿ ವೈ ದ್ವಿಜಃ ॥೨॥

ಶೂದ್ರನು ಮೂರು ವರ್ಣದವರನ್ನು ನಿತ್ಯ ಸೇವೆ ಮಾಡುವುದರಿಂದ ಶೂದ್ರನೆಂದು ಕರೆಸಿಕೊಳ್ಳಲ್ಪಡುತ್ತಾನೆ. ಒಂದು ವೇಳೆ ಬ್ರಾಹ್ಮಣನು ತನ್ನ ಧರ್ಮದಲ್ಲಿ ಬದುಕನ್ನು ಕಟ್ಟಿಕೊಳ್ಳಲಾಗದಿದ್ದಲ್ಲಿ ಕ್ಷತ್ರಿಯಧರ್ಮವನ್ನಾಗಲಿ, ವೈಶ್ಯ ಧರ್ಮವನ್ನಾಗಲಿ

ಅವಲಂಬಿಸಿದಲ್ಲಿ ಅವನು ಪತಿತನಾಗುವುದಿಲ್ಲ. ಆದರೆ ಬ್ರಾಹ್ಮಣನು ಜೀವಿಕೆಗಾಗಿ ಶೂದ್ರಧರ್ಮವನ್ನು ಅರ್ಥಾತ್ ಹೀನಧರ್ಮದವರ ಸೇವೆಯನ್ನು ಯಾವಾಗ ಮಾಡುತ್ತಾನೋ ಆಗ ಪತಿತನಾಗುತ್ತಾನೆ.

ವಾಣಿಜ್ಯಂ ಪಾಶುಪಾಲ್ಯಂ ಚ ತಥಾ ಶಿಲ್ಪೋಪಜೀವನಮ್ ।
ಶೂದ್ರಸ್ಯಾಪಿ ವಿಧೀಯಂತೇ ಯದಾ ವೃತ್ತಿರ್ನ ಜಾಯತೇ ॥೩॥

ಶೂದ್ರನಾದವನಿಗೆ ಸೇವಾ ವೃತ್ತಿಯಿಂದ ಜೀವನ ನಡೆಸಲು ಸಾಧ್ಯವಾಗದಿದ್ದಲ್ಲಿ ವ್ಯಾಪಾರವನ್ನಾಗಲಿ, ಪಶುಪಾಲನೆಯನ್ನಾಗಲಿ, ಶಿಲ್ಪಕಲೆಗಳಿಂದ ಜೀವನವನ್ನು ನಡೆಸಬಹುದೆಂದು ಶಾಸ್ತ್ರಗಳು ವಿಧಿಸುತ್ತವೆ.

ರಂಗಾವತರಣಂ ಚೈವ ತಥಾ ರೂಪೋಪಜೀವನಮ್ ।
ಮದ್ಯಮಾಂಸೋಪಜೀವ್ಯಂ ಚ ವಿಕ್ರಯೋ ಲೋಹಚರ್ಮಣೋಃ ॥೪॥

ಅಪೂರ್ವಿಣಾ ನ ಕರ್ತವ್ಯಂ ಕರ್ಮ ಲೋಕೇ ವಿಗರ್ಹಿತಮ್ ।
ಕೃತಪೂರ್ವಿಣಸ್ತು ತ್ಯಜತೋ ಮಹಾಂಧರ್ಮ ಇತಿ ಶ್ರುತಿಃ ॥೫॥

ವೇಷವನ್ನು ಧರಿಸಿ ರಂಗಮಂಟಪದಲ್ಲಿ ನರ್ತಿಸುವುದು, ವಸ್ತ್ರಸಮುದಾಯಗಳಿಂದ ರಂಗ ವೇದಿಕೆಯನ್ನು ಸಜ್ಜುಗೊಳಿಸುವುದು, ಮದ್ಯ-ಮಾಂಸಗಳಿಂದ ಜೀವನವನ್ನು ನಡೆಸುವುದು, ಲೋಹ ಮತ್ತು ಚರ್ಮಗಳನ್ನು ಕ್ರಯ-ವಿಕ್ರಯ ಮಾಡುವುದು ಇಂತಹ ಕರ್ಮಗಳು ಹಿಂದಿನಿಂದ ಯಾರೂ ಮಾಡಿಲ್ಲದಿದ್ದರೆ, ಅವನು ಹಿಂದೆ ಈ ಕರ್ಮವನ್ನು ಮಾಡದಿದ್ದಲ್ಲಿ ಹೊಸದಾಗಿ ಈ ಕರ್ಮದಲ್ಲಿ ಆಸಕ್ತನಾಗಬಾರದು. ಇವುಗಳು ನಿಂದನೀಯವಾದವು ಎನಿಸಿವೆ. ಒಂದು ವೇಳೆ ಈ ವೃತ್ತಿಗಳು ಹಿಂದಿನಿಂದ ನಡೆದು ಬಂದಿದ್ದರೂ ಅವುಗಳನ್ನು ತಾನು ತ್ಯಜಿಸಿದರೆ ಮಹಾಧರ್ಮವೇ ಆಗುತ್ತದೆ ಎಂದು ಶ್ರುತಿಗಳು ಹೇಳುತ್ತವೆ.

ಸಂಸಿದ್ಧಃ ಪುರುಷೋ ಲೋಕೇ ಯದಾಚರತಿ ಪಾಪಕಮ್ ।
ಮದೇನಾಭಿಪ್ಲುತಮನಾಸ್ತಚ್ಚ ನಗ್ರಾಹ್ಯಮುಚ್ಯತೇ ॥೬॥

ಲೋಕ ಪ್ರಸಿದ್ಧನಾದ ಒಬ್ಬ ಪುರುಷನು ಮದದಿಂದಲೂ, ಲೋಭದ ಮನಸ್ಸಿನಿಂದಲೂ ಪಾಪಕರ್ಮವನ್ನು ಮಾಡಿದರೆ ಆ ಪಾಪಕರ್ಮವನ್ನು ಇತರರು ಅನುಷ್ಠಾನ ಮಾಡಬಾರದೆಂದು ಶಾಸ್ತ್ರವು ಹೇಳುತ್ತದೆ.

ಶ್ರೂಯಂತೇ ಹಿ ಪುರಾಣೇ ವೈ ಪ್ರಜಾ ಧಿಗ್ದಂಡಶಾಸನಾಃ ।
ದಾಂತಾ ಧರ್ಮಪ್ರಧಾನಾಶ್ಚ ನ್ಯಾಯಧರ್ಮಾನುವರ್ತಕಾಃ ॥೭॥

ಧರ್ಮ ಏವ ಸದಾ ನ್ಯಾಮಿಹ ರಾಜನ್ ಪ್ರಶಂಸ್ಯತೇ ।
ಧರ್ಮವೃದ್ಧಾ ಗುಣಾನೇವ ಸೇವಂತೇ ಹಿ ನರಾ ಭುವಿ ॥೮॥

ಹಿಂದಿನ ಕಾಲದಲ್ಲಿ ಪ್ರಜೆಗಳಲ್ಲಿ ಧಿಕ್ಕಾರ ದಂಡದಿಂದ ಶಾಸನವನ್ನು ಮಾಡುತ್ತಿದ್ದರು. ಜಿತೇಂದ್ರಿಯರೂ, ಧರ್ಮಪ್ರಧಾನರೂ, ನ್ಯಾಯೋಚಿತವಾದ ಆಚರಣೆಗಳನ್ನು ಅನುಸರಿಸುವವರೂ ಆಗಿದ್ದರು. ಲೋಕಗಳಲ್ಲಿ ಮನುಷ್ಯರಿಗೆ ಎಲ್ಲಾ ಕಾಲದಲ್ಲಿಯೂ ಧರ್ಮಮಾರ್ಗವೇ ಪ್ರಶಸ್ತವಾದುದು. ಧರ್ಮವೃದ್ಧರಾದ ಮಾನವರು ಯಾವಾಗಲೂ ಈ ಲೋಕದಲ್ಲಿ ಸದ್ಗುಣಗಳನ್ನೇ ಆಶ್ರಯಿಸಿರುತ್ತಾರೆ.

ತಂ ಧರ್ಮಮಸುರಾಸ್ತಾತ ನಾಮೃಷ್ಯಂತ ಜನಾಧಿಪ ।
ವಿವರ್ಧಮಾನಾಃ ಕ್ರಮಶಸ್ತತ್ರ ತೇऽನ್ವಾವಿಶನ್ ಪ್ರಜಾಃ ॥೯॥

ರಾಜನೇ, ಅಂತಹ ಧರ್ಮವನ್ನು ಅಸುರರು ಸಹಿಸಲಿಲ್ಲ. ಅಧರ್ಮಿಗಳಾದ ಅಸುರರು ಕ್ರಮವಾಗಿ ವೃದ್ಧಿಯನ್ನು ಹೊಂದಿ ಪ್ರಜೆಗಳ ಶರೀರದಲ್ಲೇ ಸೇರಿಕೊಂಡರು.

ತೇಷಾಂ ದರ್ಪಃ ಸಮಭವತ್ ಪ್ರಜಾನಾಂ ಧರ್ಮನಾಶನಃ ।
ದರ್ಪಾತ್ಮನಾಂ ತತಃ ಕ್ರೋಧಃ ಪುನಸ್ತೇಷಾಮಜಾಯತ ॥೧೦॥

ಬಳಿಕ ಪ್ರಜೆಗಳಲ್ಲಿಯೂ ಧರ್ಮವನ್ನು ನಾಶ ಮಾಡುವ ದರ್ಪವು ಉತ್ಪನ್ನವಾಯಿತು. ಅಸುರರ ಹುಟ್ಟಿನಿಂದಾಗಿ ಪ್ರಜೆಗಳಲ್ಲಿ ದರ್ಪ ಉಂಟಾದ ಬಳಿಕ ದರ್ಪಾತ್ಮರಾದ ಅವರಲ್ಲಿ ಕ್ರೋಧವು ಹುಟ್ಟಿತು.

ತತಃ ಕ್ರೋಧಾಭಿಭೂತಾನಾಂ ವೃತ್ತಂ ಲಜ್ಜಾಸಮನ್ವಿತಮ್ ।
ಹ್ರೀಶ್ಚೈವಾಪ್ಯನಶದ್ ರಾಜಂಸ್ತತೋ ಮೋಹೋ ವ್ಯಜಾಯತ ॥೧೧॥

ಪ್ರಜೆಗಳು ಕೋಪದಿಂದ ತಮ್ಮ ಸ್ವರೂಪವನ್ನು ಮುಚ್ಚಿಕೊಂಡ ಬಳಿಕ ಲಜ್ಜೆಯಿಂದ ಕೂಡಿದ ಸದಾಚಾರವು ಲುಪ್ತವಾಯಿತು. ಆದ್ದರಿಂದಲೇ ಆಸುರಿಗುಣದಿಂದ ಕೂಡಿದ ಆ ವ್ಯಕ್ತಿಗಳಿಗೆ ಧರ್ಮವನ್ನು ಮಾಡುವುದರಲ್ಲಿ ಸಂಕೋಚವೂ ನಾಶವಾಯಿತು. ಬಳಿಕ ಪ್ರಜೆಗಳಲ್ಲಿ ಮೋಹದ ಉತ್ಪತ್ತಿಯು ಆಯಿತು.

ತತೋ ಮೋಹಪರೀತಾಸ್ತೇ ನಾಪಶ್ಯಂತ ಯಥಾ ಪುರಾ ।
ಪರಸ್ಪರಾವಮರ್ದೇನ ವರ್ತಯಂತಿ ಯಥಾಸುಖಮ್ ॥೧೨॥

ಮೋಹವಶರಾದ ಅವರೆಲ್ಲರೂ ಮೊದಲಿನ ವಿವೇಕವನ್ನು ಹೊಂದಿದವವರು ಆಗಿರಲಿಲ್ಲ. ಆದ್ದರಿಂದ ಒಬ್ಬರು ಮತ್ತೊಬ್ಬರನ್ನು ದ್ವೇಷಿಸುವ ಸ್ವಭಾವದವರಾಗಿ ಮತ್ತೊಬ್ಬರನ್ನು ಸಂಹರಿಸುವುದರಲ್ಲಿಯೂ, ತಮ್ಮ ಸ್ವಾರ್ಥಕ್ಕಾಗಿ ಸುಖಗಳನ್ನು ಹೊಂದುವುದರಲ್ಲಿಯೂ ಆಸಕ್ತರಾದರು.

ತಾಃ ಪ್ರಾಪ್ಯ ತು ಸ ಧಿಗ್ದಂಡೋ ನಕಾರಣಮತೋಽಭವತ್ ।
ತತೋಽಭ್ಯಗಚ್ಛನ್ ದೇವಾಂಶ್ಚ ಬ್ರಾಹ್ಮಣಾಂಶ್ಚಾವಮನ್ಯ ಹ ॥೧೩॥

ಆ ಪ್ರಜೆಗಳನ್ನುಕುರಿತು ಧಿಕ್ಕಾರವೆಂಬ ರಾಜರ ದಂಡವು ಸನ್ಮಾರ್ಗದಲ್ಲಿ ಕರೆತರಲು ಸಮರ್ಥವಾಗಲಿಲ್ಲ. ಕಾರಣವಿಲ್ಲದೆ ಪ್ರಜೆಗಳು ದೇವ-ಬ್ರಾಹ್ಮಣರನ್ನು ಅಪಮಾನಗೊಳಿಸುತ್ತಾ ಸ್ವಚ್ಛಂದದಿಂದ ವರ್ತಿಸತೊಡಗಿದರು.

ಏತಸ್ಮಿನ್ನೇವ ಕಾಲೇ ತು ದೇವಾ ದೇವವರಂ ಶಿವಮ್ ।
ಅಗಚ್ಛನ್ ಶರಣಂ ವೀರಂ ಬಹುರೂಪಂ ಗಣಾಧಿಪಮ್ ॥೧೪॥

ತೇನ ಸ್ಮ ತೇ ಗಗನಗಾಃ ಸಪುರಾಃ ಪಾತಿತಾಃ ಕ್ಷಿತೌ ।
ತಿಸ್ರೋಽಪ್ಯೇಕೇನ ಬಾಣೇನ ದೇವಾಪ್ಯಾಯಿತತೇಜಸಾ ॥೧೫॥

ಇಂತಹ ದುಃಸ್ಥಿತಿಯು ಒದಗಿಬಂದ ಆ ಸಮಯದಲ್ಲಿ ದೇವತೆಗಳು ದೇವಶ್ರೇಷ್ಠನಾದ, ಬಹುರೂಪನಾದ, ಅಧಿಕಗುಣನಾದ, ಧೀರನಾದ ಶಿವನನ್ನು ಶರಣು ಹೊಂದಿದರು. ದೇವತೆಗಳ ಮೂಲಕ ವೃದ್ಧಿಯನ್ನು ಹೊಂದಿರುವ ಶಿವನು ತೇಜಸ್ಸಿನಿಂದ ಕೂಡಿದ ಒಂದೇ ಬಾಣದಿಂದ ಮೂರು ನಗರಗಳಿಂದ ಕೂಡಿರುವಂತಹ ಆಕಾಶದಲ್ಲಿರುವ ಅಸುರರನ್ನೆಲ್ಲ ಸಂಹರಿಸಿ ನೆಲದ ಮೇಲೆ ಕೆಡವಿದನು.

ತೇಷಾಮಧಿಪತಿಸ್ತ್ವಾಸೀದ್ ಭೀಮೋ ಭೀಮಪರಾಕ್ರಮಃ ।
ದೇವತಾನಾಂ ಭಯಕರಃ ಸ ಹತಃ ಶೂಲಪಾಣಿನಾ ॥೧೬॥

ಆ ಅಸುರರ ಅಧಿಪತಿಯಾದ ದರ್ಪನು ದೇವತೆಗಳಿಗೆಲ್ಲ ಭಯವನ್ನು ಹುಟ್ಟಿಸುತ್ತಿದ್ದನು. ಭಯಂಕರನಾಗಿದ್ದನು. ಇಂತಹ ಭಯಂಕರನಾದ ದರ್ಪನನ್ನು ಶೂಲಪಾಣಿಯಾದ ಶಿವನು ಕೊಂದನು.

ತಸ್ಮಿನ್ ಹತೇऽಥ ಸ್ವಂ ಭಾವಂ ಪ್ರತ್ಯಪದ್ಯಂತ ಮಾನವಾಃ ।
ಪ್ರಾವರ್ತಂತ ಚ ವೇದಾ ವೈ ಶಾಸ್ತ್ರಾಣಿ ಚ ಯಥಾ ಪುರಾ ॥೧೭॥

ದರ್ಪನು ಹತನಾದ ಬಳಿಕ ಪ್ರಜೆಗಳು ತಮ್ಮ ಪೂರ್ವ ಸ್ವಭಾವವನ್ನು ಹೊಂದಿದರು. ಹಿಂದಿನಂತೆ ವೇದ-ಶಾಸ್ತ್ರಗಳ ಜ್ಞಾನವನ್ನು ಹೊಂದಿದರು.

ತತೋऽಭ್ಯಷಿಂಚನ್ ರಾಜ್ಯೇನ ದೇವಾನಾಂ ದಿವಿ ವಾಸವಮ್ ।
ಸಪ್ತರ್ಷಯಶ್ಚಾನ್ವಯುಂಜನ್ನರಾಣಾಂ ದಂಡಧಾರಣೇ ॥೧೮॥

ಬಳಿಕ ಸಪ್ತರ್ಷಿಗಳ ಸ್ವರ್ಗಲೋಕದಲ್ಲಿ ಇಂದ್ರನನ್ನು ದೇವತೆಗಳ ರಾಜನೆಂದು ಪಟ್ಟಾಭಿಷೇಕ ಮಾಡಿದರು. ಭೂಲೋಕದಲ್ಲಿ ಪ್ರಜೆಗಳ ಶಾಸನವನ್ನು ತಾವೇ ಮಾಡಲಾರಂಭಿಸಿದರು.

ಸಪ್ತರ್ಷೀಣಾಮಥೋರ್ದ್ಧಂ ಚ ವಿಪೃಥುರ್ನಾಮ ಪಾರ್ಥಿವಃ ।
ರಾಜಾನಃ ಕ್ಷತ್ರಿಯಾಶ್ಚೈವ ಮಂಡಲೇಷು ಪೃಥಕ್‌ಪೃಥಕ್ ॥೧೯॥

ಸಪ್ತರ್ಷಿಗಳು ಭೂಮಿಯನ್ನು ಆಳುತ್ತಿರುವ ಪ್ರಸಂಗದಲ್ಲಿ ವಿಪೃಥು ಎಂಬ ರಾಜನು ಭೂಮಿಯಿಂದ ಹಿಡಿದು ಊರ್ದ್ಧಲೋಕದ ತನಕ ತಾನೇ ರಾಜನಾದನು. ಆ ಸಮಯದಲ್ಲಿ ಬೇರೆ ಬೇರೆ ಸ್ಥಾನಗಳಿಗೆ ಅನೇಕ ಕ್ಷತ್ರಿಯರು ರಾಜರಾದರು.

ಮಹಾಕುಲೇಷು ಯೇ ಜಾತಾ ವೃತ್ತಾಃ ಪೂರ್ವತರಾಶ್ಚ ಯೇ ।
ತೇಷಾಮಥಾಸುರೋ ಭಾವೋ ಹೃದಯಾನ್ನಾಪಸರ್ಪತಿ ॥೨೦॥

ಆ ಸಮಯದಲ್ಲಿ ಒಳ್ಳೆಯ ಕುಲದಲ್ಲಿ ಹುಟ್ಟಿದ ಅನೇಕ ರಾಜರಿದ್ದರು. ಹಿಂದಿನ ಕಾಲದ ಸಂಪ್ರದಾಯವನ್ನು ಅನುಷ್ಠಾನ ಮಾಡುವ ವೃದ್ಧ ಪುರುಷರೂ ಇದ್ದರು. ಹೀಗಿದ್ದರೂ ಅವರ ಹೃದಯದಿಂದ ಆಸುರೀ ಗುಣವೆಂಬ ದರ್ಪವು ಸಂಪೂರ್ಣ ತೊಲಗಿರಲಿಲ್ಲ.

ತಸ್ಮಾತ್ತೇನೈವ ಭಾವೇನ ಸಾನುಷಂಗೇನ ಪಾರ್ಥಿವಾಃ ।
ಆಸುರಾಣ್ಯೇವ ಕರ್ಮಾಣಿ ನ್ಯಷೇವನ್ ಭೀಮವಿಕ್ರಮಾಃ ॥೨೧॥

ಆದ್ದರಿಂದ ಭಯಂಕರ ಪರಾಕ್ರಮಿಗಳಾದ ಆ ರಾಜರು ಹೃದಯದಲ್ಲಿ ತುಂಬಿದ ಅಸುರ ಭಾವದಲ್ಲಿಯೇ ಅನೇಕ ಆಸುರೀ ಕರ್ಮಗಳನ್ನು ಆಚರಿಸುತ್ತಿದ್ದರು.

ಪ್ರತ್ಯತಿಷ್ಠಂಶ್ಚ ತೇಷ್ವೇವ ತಾನ್ಯೇವ ಸ್ಥಾಪಯಂತಿ ಚ ।
ಭಜಂತೇ ತಾನಿ ಚಾದ್ಯಾಪಿ ಯೇ ಬಾಲಿಶತಮಾ ನರಾಃ ॥೨೨॥

ಈಗಲೂ ಅಂತಹ ಅಸುರಗುಣವನ್ನು ಹೊಂದಿರುವ ಮೂರ್ಖರಾದ ಜನರು ಈ ಭೂಮಿಯಲ್ಲಿ ನೆಲೆಸಿದ್ದಾರೆ. ತಮ್ಮ ಬುದ್ಧಿಯನ್ನು ಮತ್ತೊಬ್ಬರಲ್ಲಿ ಸ್ಥಾಪನೆಗೊಳಿಸುತ್ತಿದ್ದಾರೆ. ಎಲ್ಲರೂ ಈಗಲೂ ಸರ್ವಪ್ರಕಾರದಿಂದ ಬಾಲಿಶವಾದ ಅಸುರ ಭಾವವನ್ನೇ ಸೇವಿಸುತ್ತಿದ್ದಾರೆ.

ತಸ್ಮಾದಹಂ ಬ್ರವೀಮಿ ತ್ವಾಂ ರಾಜನ್ ಸಂಚಿಂತ್ಯ ಶಾಸ್ತ್ರತಃ ।
ಸಂಸಿದ್ಧಾಧಿಗಮಂ ಕುರ್ಯಾತ್ ಕರ್ಮ ಹಿಂಸಾತ್ಮಕಂ ತ್ಯಜೇತ್ ॥೨೩॥

ಮಹಾರಾಜನೇ, ಆದ್ದರಿಂದ ನಾನು ಶಾಸ್ತ್ರದ ಮರ್ಯಾದೆಯನ್ನು ಯೋಚಿಸಿ ನಿನಗೆ ಹೇಳುತ್ತಿದ್ದೇನೆ. ಮನುಷ್ಯನು ಸಿದ್ಧಿಯನ್ನುಂಟು ಮಾಡುವ ಕರ್ಮವನ್ನೇ ಮಾಡಬೇಕು. ಹಿಂಸಾತ್ಮಕವಾದ ಕರ್ಮಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು.

ನ ಸಂಕರೇಣ ದ್ರವಿಣಂ ವಿಚಿನ್ವೀತ ವಿಚಕ್ಷಣಃ ।
ಧರ್ಮಾರ್ಥಂ ನ್ಯಾಯಮುತ್ಸೃಜ್ಯ ನ ತತ್ ಕಲ್ಯಾಣಮುಚ್ಯತೇ ॥೨೪॥

ಧರ್ಮನಿರತನಾದ ಮನುಷ್ಯನು ನ್ಯಾಯಮಾರ್ಗವನ್ನು ಬಿಟ್ಟು, ಪಾಪ ಸೇರಿದ ಮಾರ್ಗದಲ್ಲಿ ಧನವನ್ನು ಸಂಗ್ರಹಿಸಬಾರದು. ಹಾಗೆ ಸಂಪಾದಿಸಿದ ಧನವು ಕಲ್ಯಾಣಕರವಾದುದೆಂದು ತಿಳಿದವರು ಹೇಳುವುದಿಲ್ಲ.

ಸ ತ್ವಮೇವಂವಿಧೋ ದಾಂತಃ ಕ್ಷತ್ರಿಯಃ ಪ್ರಿಯಬಾಂಧವಃ ।
ಪ್ರಜಾ ಭೃತ್ಯಾಂಶ್ಚ ಪುತ್ರಾಂಶ್ಚ ಸ್ವಧರ್ಮೇಣಾನುಪಾಲಯ ॥೨೫॥

ಜನಕನೇ, ನೀನೂ ನ್ಯಾಯಮಾರ್ಗದಲ್ಲಿ ಧನವನ್ನು ಸಂಗ್ರಹಿಸುತ್ತಾ, ಜಿತೇಂದ್ರಿಯನಾದ ಕ್ಷತ್ರಿಯನಾಗಿ ಬಾಂಧವಪ್ರಿಯನಾಗಿ ಪ್ರಜೆಗಳನ್ನೂ, ಭೃತ್ಯರನ್ನೂ, ನಿನ್ನ ಮಕ್ಕಳನ್ನೂ ಧರ್ಮದಿಂದ ರಕ್ಷಿಸು.

ಇಷ್ಟಾನಿಷ್ಟಸಮಾಯೋಗೋ ವೈರಂ ಸೌಹಾರ್ದಮೇವ ಚ ।
ಅಥ ಜಾತಿಸಹಸ್ರಾಣಿ ಬಹೂನಿ ಪರಿವರ್ತತೇ ॥೨೬॥

ಇಷ್ಟ-ಅನಿಷ್ಟಗಳ ಹೊಂದುವಿಕೆ, ವೈರ-ಪ್ರೀತಿ ಇವೆಲ್ಲವನ್ನೂ ಅನುಭವಕ್ಕೆ ತಂದುಕೊಂಡು ಪ್ರತಿಯೊಂದು ಜೀವವು ಅನೇಕ ಜನ್ಮಗಳನ್ನು ಕಳೆದಿವೆ. ಸಂಸಾರದಲ್ಲಿ ಸುತ್ತುತ್ತಿದ್ದಾರೆ.

ತಸ್ಮಾದ್ ಗುಣೇಷು ರಜ್ಯೇಥಾ ಮಾ ದೋಷೇಷು ಕದಾಚನ ।
ನಿರ್ಗುಣೋಽಪಿ ಹಿ ದುರ್ಬುದ್ಧಿರಾತ್ಮನಃ ಸೋಽತಿರುಚ್ಯತೇ ॥೨೭॥

ಆದ್ದರಿಂದ ನಿನಗೆ ಸದ್ಗುಣಗಳಲ್ಲಿಯೇ ಆಸಕ್ತಿಯುಂಟಾಗಲಿ. ದುರ್ಗುಣಗಳಲ್ಲಿ ಅನುರಾಗ ಹುಟ್ಟುವುದು ಬೇಡ. ಯಾವನು ದುರ್ಬುದ್ಧಿಯವನಾಗಿದ್ದಾನೋ ಅವನು ಪರಮಾತ್ಮನಿಗಿಂತ ದೊಡ್ಡವನೆಂದು ಮೂರ್ಖತನದಲ್ಲಿ ಮಾತನಾಡುತ್ತಾನೆ.

ಮಾನುಷೇಷು ಮಹಾರಾಜ ಧರ್ಮಾಧರ್ಮೌ ಪ್ರವರ್ತತಃ ।
ನ ತಥಾನ್ಯೇಷು ಭೂತೇಷು ಮನುಷ್ಯರಹಿತೇಷ್ವಿಹ ॥೨೮॥

ಮಹಾರಾಜನೇ, ಧರ್ಮಾಧರ್ಮಗಳು ಮನುಷ್ಯರಲ್ಲಿ ಮಾತ್ರ ಹೊಂದಲು ಸಾಧ್ಯ. ಮನುಷ್ಯರಿಗಿಂತ ಭಿನ್ನರಾದ ಪ್ರಾಣಿಗಳಲ್ಲಿ ಧರ್ಮಾಧರ್ಮಗಳನ್ನು ನೋಡಲಾಗದು.

ಧರ್ಮಶೀಲೋ ನರೋ ವಿದ್ವಾನೀಹಕೋಽನೀಹಕೋಽಪಿ ವಾ ।
ಆತ್ಮಭೂತಃ ಸದಾ ಲೋಕೇ ಚರೇದ್ ಭೂತಾನ್ಯಹಿಂಸಯನ್ ॥೨೯॥

ಧರ್ಮಶೀಲನಾದ ವಿದ್ವಾಂಸನು ಪ್ರಾಪಂಚಿಕ ಸುಖದ ಅಪೇಕ್ಷೆಯುಳ್ಳವನಾಗಿರಲಿ, ಅಪೇಕ್ಷೆಯನ್ನು ತೊರೆದಿರಲಿ, ಪ್ರಪಂಚದ ಎಲ್ಲಾ ಪ್ರಾಣಿಗಳಲ್ಲೂ ಪರಮಾತ್ಮನಿದ್ದಾನೆಂದು ಕಾಣುತ್ತಾ ಯಾರನ್ನೂ ಹಿಂಸಿಸದೆ ಜೀವನವನ್ನು ನಡೆಸಬೇಕು.

ಯದಾ ವ್ಯಪೇತಹೃಲ್ಲೇಖಂ ಮನೋ ಭವತಿ ತಸ್ಯ ವೈ ।
ನಾನೃತಂ ಚೈವ ಭವತಿ ತದಾ ಕಲ್ಯಾಣಮೃಚ್ಛತಿ ॥೩೦॥

ಯಾವಾಗ ಮನುಷ್ಯನ ಮನಸ್ಸು ಕಾಮನೆಗಳಿಂದ, ಪೂರ್ವಜನ್ಮದ ಸಂಸ್ಕಾರಗಳಿಂದ ರಹಿತವಾಗುತ್ತದೋ, ಮಿಥ್ಯಾಜ್ಞಾನದಿಂದ, ಅಹಂಕಾರದಿಂದ ದೂರವಾಗುತ್ತಾನೋ,

ಅನಾದಿ ಅಜ್ಞಾನ ಕಾಮ ಕರ್ಮದಿಂದ ಮುಕ್ತನಾದ ಅವನು ಪರಮ ಕಲ್ಯಾಣವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆಂಟನೆಯ ಅಧ್ಯಾಯ

ಪರಾಶರ ಗೀತಾ ಮುಂದುವರೆದುದು.

ಪರಾಶರಃ

ಏಷ ಧರ್ಮವಿಧಿಸ್ತಾತ ಗೃಹಸ್ಥಸ್ಯ ಪ್ರಕೀರ್ತಿತಃ ।
ತಪೋವಿಧಿಂ ತು ವಕ್ಷ್ಯಾಮಿ ತನ್ಮೇ ನಿಗದತಃ ಶೃಣು ॥೧॥

ಪರಾಶರ– ಜನಕನೇ, ಗೃಹಸ್ಥನಿಗೆ ಸಂಬಂಧಿಸಿದ ವಿಧಿ-ನಿಯಮಗಳನ್ನು ನಾನು ನಿನ್ನ ಮುಂದೆ ಹೇಳಿರುತ್ತೇನೆ. ಇನ್ನು ಮುಂದೆ ತಪಸ್ಸಿನ ವಿಧಿ-ನಿಯಮಗಳ ಬಗ್ಗೆ ತಿಳಿಸುತ್ತೇನೆ, ಕೇಳು.

ಪ್ರಾಯೇಣ ಹಿ ಗೃಹಸ್ಥಸ್ಯ ಮಮತ್ವಂ ನಾಮ ಜಾಯತೇ ।
ಸಂಗಾಗತಂ ನರಶ್ರೇಷ್ಠ ಭಾವೈಸ್ತಾಮಸರಾಜಸೈಃ ॥೨॥

ಪ್ರಾಯಃ ಗೃಹಸ್ಥನಿಗೆ ರಾಜಸ-ತಾಮಸ ಭಾವಗಳ ಸಂಬಂಧದಿಂದ ವಸ್ತುಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಮಮತೆಯುಂಟಾಗುತ್ತದೆ.

ಗೃಹಾನ್ಸಾಶ್ರಿತ್ಯ ಗಾವಶ್ಚ ಕ್ಷೇತ್ರಾಣಿ ಚ ಧನಾನಿ ಚ ।
ದಾರಾಃ ಪುತ್ರಾಶ್ಚ ಭೃತ್ಯಾಶ್ಚ ಭವಂತೀಹ ನರಸ್ಯ ವೈ ॥೩॥

ಗೃಹಸ್ಥಾಶ್ರಮವನ್ನು ಆಶ್ರಯಿಸಿರುವ ಪುರುಷನನ್ನು ಹಸು, ತೋಟ, ಧನ, ಕನಕ, ಪತ್ನಿ, ಪುತ್ರರು, ಭೃತ್ಯರು- ಹೀಗೆ ಎಲ್ಲರೂ ಆಶ್ರಯವನ್ನು ಹೊಂದಿರುತ್ತಾರೆ.

ಏವಂ ತಸ್ಯ ಪ್ರವತ್ತಸ್ಯ ನಿತ್ಯಮೇವಾನುಪಶ್ಯತಃ ।
ರಾಗದ್ವೇಷೌ ಏವರ್ಧೇತೇ ಹ್ಯನಿತ್ಯತ್ವಮಪಶ್ಯತಃ ॥೪॥

ಇವುಗಳಲ್ಲಿಯೇ ಆಸಕ್ತನಾದ ಗೃಹಸ್ಥನಿಗೆ ಪ್ರತಿದಿನವೂ ತನಗೆ ಸಂಬಂಧಿಸಿದ ವ್ಯಕ್ತಿ ಮತ್ತು ವಸ್ತುಗಳ ಯೋಗಕ್ಷೇಮದಲ್ಲಿಯೇ ಕಾಲವು ಸಾಗುವುದರಿಂದ ವಸ್ತುಗಳ ಅನಿತ್ಯತ್ವವನ್ನು ಕಾಣದೆ ಅವುಗಳ ಬಗ್ಗೆ ಅವನ ಮನಸ್ಸಿನಲ್ಲಿ ರಾಗ-ದ್ವೇಷಗಳು ವೃದ್ಧಿ ಹೊಂದುತ್ತಿರುತ್ತವೆ.

ರಾಗದ್ವೇಷಾಭಿಭೂತಂ ಚ ನರಂ ದ್ರವ್ಯವಶಾನುಗಮ್ ।
ಮೋಹಜಾತಾ ರತಿರ್ನಾಮ ಸಮುಪೈತಿ ನರಾಧಿಪ ॥೫॥

ರಾಜನೇ, ಮನುಷ್ಯನು ಯಾವಾಗ ರಾಗ-ದ್ವೇಷಗಳಿಗೆ ವಶನಾಗಿ, ಧನದಲ್ಲಿ ಆಸಕ್ತನಾಗುವನೋ ಆಗ ಮೋಹದಿಂದಾಗಿ ಹುಟ್ಟಿದ ಅನುರಾಗ ಎಂಬ ಕನ್ಯೆಯು ಅವನ ಬಳಿಯೇ ಬರುತ್ತಾಳೆ.

ಕೃತಾರ್ಥೋ ಭೋಗತೋ ಭೂತ್ವಾ ಸ ವೈ ರತಿಪರಾಯಣಃ ।
ಲಾಭಂ ಗ್ರಾಮ್ಯಸುಖಾದನ್ಯಂ ರತಿತೋ ನಾನುಪಶ್ಯತಿ ॥೬॥

ಬಾಹ್ಯ ಸುಖದಲ್ಲಿಯೇ ಆಸಕ್ತರಾದ ಜನರೆಲ್ಲರೂ ಭೋಗಸುಖಗಳಲ್ಲಿಯೇ ಪೂರ್ಣತೆಯನ್ನು ಹೊಂದಿದವರೆಂದು ಭಾವಿಸಿ, ಯಾವ ಸುಖಗಳನ್ನು ಗ್ರಾಮ್ಯ ಸುಖವೆಂದು ವಿದ್ವಾಂಸರು ತ್ಯಜಿಸಿದ್ದಾರೋ ಅಂತಹ ಸುಖವನ್ನು ತೊರೆದು ಅದಕ್ಕಿಂತ ಉತ್ತಮವಾದ ಲಾಭವಿದೆ ಎಂಬುದನ್ನು ತಮ್ಮ ಜೀವನದಲ್ಲಿ ನೋಡಲಾರರು.

ತತೋ ಲೋಭಾಭಿಭೂತಾತ್ಮಾ ಸಂಗಾದ್ವರ್ಧಯತೇ ಜನಮ್ ।
ಪುಷ್ಟ್ಯರ್ಥಂ ಚೇಹ ದೇಹಸ್ಯ ಜನಸ್ಯಾರ್ಥಂ ಚಿಕೀರ್ಷತಿ ॥೭॥

ಲೋಭದಿಂದಲೇ ತಿರಸ್ಕೃತವಾದ ತನ್ನ ಸ್ವರೂಪವುಳ್ಳ ಮನುಷ್ಯನು ವಿಷಯ ಸುಖಗಳಲ್ಲಿಯೇ ಆಸಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ನಂತರ ತನ್ನ ಬಂಧುವರ್ಗದ ಪಾಲನೆ-ಪೋಷಣೆಗಳಿಗಾಗಿ ಅಧಿಕವಾದ ಧನವನ್ನು ಸಂಗ್ರಹಿಸಲು ಬಯಸುತ್ತಾನೆ.

ಸ ಜಾನನ್ನಪಿ ಚಾಕಾರ್ಯಮರ್ಥಾರ್ಥಂ ಸೇವತೇ ನರಃ ।
ಬಾಲಸ್ನೇಹಪರೀತಾತ್ಮಾ ತತ್ಕ್ಷಯಾಚ್ಚಾನುತಪ್ಯತೇ ॥೮॥

ತಾನು ಮಾಡುತ್ತಿರುವ ಕಾರ್ಯವು ಯೋಗ್ಯವಾದುದಲ್ಲ ಎಂದು ತಿಳಿದಿದ್ದರೂ

ಧನಕ್ಕಾಗಿ ಪುನಃ ಅಕಾರ್ಯವನ್ನು ಮಾಡುತ್ತಾನೆ. ಮಕ್ಕಳ ಪ್ರೀತಿಯಲ್ಲಿ ಆಸಕ್ತನಾದ ಆತನು ಆ ಪ್ರೀತಿಯು ನಷ್ಟವಾದಾಗ ದುಃಖಕ್ಕೆ ಭಾಗಿಯಾಗುತ್ತಾನೆ.

ತತೋ ಮಾನೇನ ಸಂಪನ್ನೋ ರಕ್ಷನ್ನಾತ್ಮಪರಾಜಯಮ್ ।
ಕರೋತಿ ಯೇನ ಭೋಗೀ ಸ್ಯಾಮಿತಿ ತಸ್ಮಾದ್ ವಿನಶ್ಯತಿ ॥೯॥

ಅಧಿಕವಾದ ಅಭಿಮಾನದಲ್ಲಿ ಕೂಡಿರುವ ಜೀವನು ತನ್ನ ಪರಾಜಯವನ್ನು ರಕ್ಷಿಸಿಕೊಳ್ಳಲು ನಾನು ಸಮಸ್ತ ಸುಖಭೋಗಗಳನ್ನು ಹೊಂದಬೇಕು ಎಂದು ಚಿಂತಿಸುತ್ತಾ ಆಕಾಂಕ್ಷೆಗಳು ಪೂರ್ಣವಾಗದಿರುವಾಗಲೇ ಮರಣವನ್ನಪ್ಪುತ್ತಾನೆ.

ತಪೋ ಹಿ ಬುದ್ಧಿಯುಕ್ತಾನಾಂ ಶಾಶ್ವತಂ ಬ್ರಹ್ಮದರ್ಶನಮ್ ।
ಅನಿಚ್ಛತಾಂ ಶುಭಂ ಕರ್ಮ ನರಾಣಾಂ ತ್ಯಜತಾಂ ಸುಖಮ್ ॥೧೦॥

ರಾಜನೇ, ಸಮತ್ವ ಬುದ್ಧಿಯಿಂದ ಕೂಡಿರುವ ಪುರುಷರಿಗೆ ಬ್ರಹ್ಮದರ್ಶನವೆಂಬ ತಪಸ್ಸೇ ಶಾಶ್ವತವಾದುದು. ಯಾರು ಅನಿತ್ಯವಾದ ಪ್ರಾಪಂಚಿಕ ಸುಖವನ್ನು ತ್ಯಜಿಸುತ್ತಾರೋ ಅವರಿಗೆ ಶಾಶ್ವತವಾದ ಸುಖವು ದೊರೆಯುತ್ತದೆ. ಶುಭಕರ್ಮವನ್ನು ಬಯಸುವವರು ನಶ್ವರ ಸುಖವನ್ನು ತ್ಯಜಿಸಬೇಕು.

ಸ್ನೇಹಾಯತನನಾಶಾಚ್ಚ ಧನನಾಶಾಚ್ಚ ಪಾರ್ಥಿವ ।
ಆಧಿವ್ಯಾಧಿಪ್ರತಾಪಾಚ್ಚ ನಿರ್ವೇದಮುಪಗಚ್ಛತಿ ॥೧೧॥

ರಾಜನೇ, ಸಂಸಾರಜೀವರು ತಮ್ಮ ಸ್ನೇಹ-ಪ್ರೀತಿಗಳಿಗೆ ಆಧಾರವೆನಿಸಿದ ಹೆಂಡತಿ-ಮಕ್ಕಳ, ಸಂಪತ್ತಿನ ನಾಶದಿಂದಾಗಿ, ಆಧಿ-ವ್ಯಾಧಿಗಳ ಸಮಾಗಮದಿಂದಾಗಿ ವೈರಾಗ್ಯವನ್ನು ತಾಳುತ್ತಾರೆ.

ನಿರ್ವೇದಾದಾತ್ಮಸಂಬೋಧಃ ಸಂಬೋಧಾಚ್ಚಾಸ್ತ್ರದರ್ಶನಮ್ ।
ಶಾಸ್ತ್ರಾರ್ಥದರ್ಶನಾದ್ರಾಜಂಸ್ತಪ ಏವಾನುಪಶ್ಯತಿ ॥೧೨॥

ವೈರಾಗ್ಯಲಾಭದಿಂದ ಮನುಷ್ಯನಿಗೆ ಪರಮಾತ್ಮ ತತ್ತ್ವದಲ್ಲಿ ಜಿಜ್ಞಾಸೆ ಉಂಟಾಗಿ, ಶಾಸ್ತ್ರಾಧ್ಯಯನದಲ್ಲೂ ಆಸಕ್ತಿಯುಂಟಾಗುತ್ತದೆ. ಶಾಸ್ತ್ರಗಳ ಅಧ್ಯಯನದಿಂದ ಶ್ರೇಯಸ್ಸಿಗೆ ಮುಖ್ಯಸಾಧನವಾದುದು ತಪಸ್ಸು ಎಂಬ ಯಥಾರ್ಥ ಜ್ಞಾನವು ಉಂಟಾಗುತ್ತದೆ.

ದುರ್ಲಭೋ ಹಿ ಮನುಷ್ಯೇಂದ್ರ ನರಃ ಪ್ರತ್ಯವಮರ್ಶವಾನ್ ।
ಯೋ ವೈ ಪ್ರಿಯಸುಖೇ ಕ್ಷೀಣೇ ತಪಃ ಕರ್ತುಂ ವ್ಯವಸ್ಯತಿ ॥೧೩॥

ರಾಜನೇ, ಪ್ರಪಂಚದಲ್ಲಿ ಪ್ರಿಯರೆನಿಸಿದ ಹೆಂಡತಿ-ಮಕ್ಕಳು-ಸಂಬಂಧಿಗಳು ಅವರ ಸಂಬಂಧದಿಂದ ಲಭಿಸುತ್ತಿದ್ದ ಸುಖವು ಕ್ಷೀಣಿಸಿದ ಬಳಿಕವಾದರೂ ಭಗವಂತನ ಪ್ರಜ್ಞೆಯನ್ನು ಹೊಂದಬೇಕು, ಜಗತ್ತೆಲ್ಲವೂ ಅಸಾರವಾದುದು, ಭಗವಂತನೇ ಸಾರನು ಎಂದು ತಿಳಿದು ತಪಸ್ಸನ್ನು ಮಾಡಲು ನಿಶ್ಚಯಿಸುವ ಮನುಷ್ಯನು ದುರ್ಲಭನೇ ಆಗಿದ್ದಾನೆ.

ತಪಃ ಸರ್ವಗತಂ ತಾತ ಹೀನಸ್ಯಾಪಿ ವಿಧೀಯತೇ ।
ಜಿತೇಂದ್ರಿಯಸ್ಯ ದಾಂತಸ್ಯ ಸ್ವರ್ಗಮಾರ್ಗಪ್ರದೇಶಕಮ್ ॥೧೪॥

ತಪಸ್ಸನ್ನು ಮಾಡಲು ಎಲ್ಲರಿಗೂ ಅಧಿಕಾರವಿದೆ. ಮನೋನಿಗ್ರಹವನ್ನು ಸಂಪಾದಿಸಿಕೊಂಡ ಅಧಮವ್ಯಕ್ತಿಯು ತಪಸ್ಸನ್ನು ಮಾಡಬಹುದು. ಸ್ವರ್ಗಮಾರ್ಗಕ್ಕೆ ಕರೆದುಕೊಂಡು ಹೋಗುವ ಸಾಮರ್ಥ್ಯ ತಪಸ್ಸಿಗಿದೆ.

ಪ್ರಜಾಪತಿಃ ಪ್ರಜಾಃ ಪೂರ್ವಮಸೃಜತ್ತಪಸಾ ವಿಭುಃ ।
ಕ್ವಚಿತ್ಕ್ವಚಿದ್ವ್ರತಪರೋ ವ್ರತಾನ್ಯಾಸ್ಥಾಯ ಪಾರ್ಥಿವ ॥೧೫॥

ಹಿಂದೆ ವಿಭು ಎನಿಸಿದ ಪ್ರಜಾಪತಿಯು ಭಗವಂತನಲ್ಲಿಯೇ ಆಸಕ್ತನಾಗಿ ವ್ರತಾನುಷ್ಠಾನಗಳನ್ನು ಆಚರಿಸುತ್ತಾ ತಪಶ್ಚರ್ಯದಿಂದಲೇ ಪ್ರಜೆಗಳನ್ನೆಲ್ಲ ಸೃಷ್ಟಿಸಿದನು.

ಆದಿತ್ಯಾ ವಸವೋ ರುದ್ರಾಸ್ತಥೈವಾಗ್ನ್ಯಶ್ವಿಮಾರುತಾಃ ।
ವಿಶ್ವೇದೇವಾಸ್ತಥಾ ಸಾಧ್ಯಾಃ ಪಿತರೋಽಥ ಮರುದ್ಗಣಾಃ ॥೧೬॥

ಯಕ್ಷರಾಕ್ಷಸಗಂಧರ್ವಾಃ ಸಿದ್ಧಾಶ್ಚಾನ್ಯೇ ದಿವೌಕಸಃ ।
ಸಂಸಿದ್ಧಾಸ್ತಪಸಾ ತಾತ ಯೇ ಚಾನ್ಯೇ ಸ್ವರ್ಗವಾಸಿನಃ ॥೧೭॥

ಆದಿತ್ಯರು, ವಸುಗಳು, ರುದ್ರರು, ಅಗ್ನಿ, ಅಶ್ವಿನಿದೇವತೆಗಳು, ವಾಯುಗಳು, ವಿಶ್ವೇದೇವತೆಗಳು, ಸಾಧ್ಯರು, ಪಿತೃಗಳು, ಮರುದ್ಗಣಗಳು, ಯಕ್ಷರು, ರಾಕ್ಷಸರು, ಗಂಧರ್ವರು, ಸಿದ್ಧರು, ಸ್ವರ್ಗವಾಸಿಗಳಾದ ಇತರ ದೇವತೆಗಳು ಇವರೆಲ್ಲರೂ ತಪಸ್ಸಿನಿಂದಲೇ ಸಿದ್ಧಿಯನ್ನು ಹೊಂದಿರುತ್ತಾರೆ.

ಯೇ ಚಾದೌ ಬ್ರಹ್ಮಣಾ ಸೃಷ್ಟಾ ಬ್ರಾಹ್ಮಣಾಸ್ತಪಸಾ ಪುರಾ ।
ತೇ ಭಾವಯಂತಃ ಪೃಥಿವೀಂ ವಿಚರಂತಿ ದಿವಂ ತಥಾ ॥೧೮॥

ಚತುರ್ಮುಖ ಬ್ರಹ್ಮನು ತನ್ನ ತಪಸ್ಸಿನಿಂದ ಮರೀಚಿ ಮೊದಲಾದ ಯಾವ ಬ್ರಾಹ್ಮಣರನ್ನು ಸೃಷ್ಟಿಮಾಡಿದನೋ ಅವರೆಲ್ಲರೂ ತಪಸ್ಸಿನಿಂದಲೇ ಪೃಥಿವಿ, ಸ್ವರ್ಗಗಳನ್ನು ಪವಿತ್ರಗೊಳಿಸುತ್ತಾ ಸಂಚರಿಸುತ್ತಿದ್ದಾರೆ.

ಮರ್ತ್ಯಲೋಕೇ ಚ ರಾಜಾನೋ ಯೇ ಚಾನ್ಯೇ ಗೃಹಮೇಧಿನಃ ।
ಮಹಾಕುಲೇಷು ದೃಶ್ಯಂತೇ ತತ್ ಸರ್ವಂ ತಪಸಃ ಫಲಮ್ ॥೧೯॥

ಮನುಷ್ಯಲೋಕದಲ್ಲಿ ಮಹಾಕುಲಗಳಲ್ಲಿ ಹುಟ್ಟಿರುವ ಯಾವ ರಾಜರಿದ್ದಾರೋ, ಯಾವ ಗೃಹಸ್ಥರಿದ್ದಾರೋ ಅವರು ಮಹಾಕುಲಗಳಲ್ಲಿ ಹುಟ್ಟಲು ಹಿಂದಿನ ಜನ್ಮದಲ್ಲಿ ಮಾಡಿದ ತಪಸ್ಸಿನ ಫಲವೇ ಕಾರಣವಾಗಿದೆ.

ಕೌಶಿಕಾನಿ ಚ ವಸ್ತ್ರಾಣಿ ಶುಭಾನ್ಯಾಭರಣಾನಿ ಚ ।
ವಾಹನಾಸನಯಾನಾನಿ ಸರ್ವಂ ತತ್ತಪಸಃ ಫಲಮ್ ॥೨೦॥

ರೇಷ್ಮೆ ವಸ್ತ್ರಗಳು, ಸುಂದರವಾದ ರತ್ನಾಭರಣಗಳು, ವಾಹನಗಳು, ಉತ್ತಮ ಪಾನೀಯಗಳು ಇವೆಲ್ಲವೂ ತಪಸ್ಸಿನ ಫಲದಿಂದ ಲಭಿಸುವವುಗಳಾಗಿವೆ.

ಮನೋನುಕೂಲಾಃ ಪ್ರಮದಾ ರೂಪವತ್ಯಃ ಸಹಸ್ರಶಃ ।
ವಾಸಃ ಪ್ರಾಸಾದಪೃಷ್ಠೇ ಚ ತತ್ ಸರ್ವಂ ತಪಸಃ ಫಲಮ್ ॥೨೧॥

ಮನಸ್ಸಿಗೆ ಅನುಕೂಲವಾಗಿ ನಡೆಯುವ, ರೂಪವತಿಯರಾದ ಸಾವಿರಾರು ಯುವತಿಯರನ್ನು ಹೊಂದುವುದು, ವಿಸ್ತಾರವಾದ ಮಹಡಿಯಿಂದ ಕೂಡಿದ ಮನೆಗಳಲ್ಲಿ ವಾಸಿಸುವುದು ಇವೆಲ್ಲವೂ ತಪಸ್ಸಿನಿಂದ ಲಭಿಸುವ ಫಲಗಳೆನಿಸಿವೆ.

ಶಯನಾನಿ ಚ ಮುಖ್ಯಾನಿ ಭೋಜ್ಯಾನಿ ವಿವಿಧಾನಿ ಚ ।
ಅಭಿಪ್ರೇತಾನಿ ಸರ್ವಾಣಿ ಭವಂತಿ ಕೃತಕರ್ಮಣಾಮ್ ॥೨೨॥

ಶುಭಕರ್ಮವನ್ನು ಆಚರಿಸಿದ ವ್ಯಕ್ತಿಗಳಿಗೆ ಉತ್ತಮ ಹಾಸಿಗೆ, ವಿವಿಧ ಭೋಜ್ಯ ಪದಾರ್ಥ, ಮನಸ್ಸಿಗೆ ಬಯಸಿದ ಪದಾರ್ಥಗಳೆಲ್ಲವೂ ದೊರೆಯುತ್ತವೆ.

ನಾಪ್ರಾಪ್ಯಂ ತಪಸಾ ಕಿಂಚಿತ್ ತ್ರೈಲೋಕ್ಯೇऽಸ್ಮಿನ್ ಪರಂತಪ ।
ಉಪಭೋಗಪರಿತ್ಯಾಗಃ ಫಲಾನ್ಯಕೃತಕರ್ಮಣಾಮ್ ॥೨೩॥

ಶ್ರೇಷ್ಠ ತಪಸ್ವೀ ಪುರುಷನೇ, ತ್ರಿಲೋಕದಲ್ಲಿಯೂ ತಪಸ್ಸಿನಿಂದ ಲಭಿಸದ ಪದಾರ್ಥ ಯಾವುದೂ ಇರುವುದಿಲ್ಲ. ತಪಸ್ಸನ್ನು ಆಚರಿಸದವರಿಗೆ ಹಿಂದೆ ಹೇಳಿದ ಸುಖ ಭೋಗಗಳು ದೂರವಾಗುತ್ತವೆ.

ಸುಖಿತೋ ದುಃಖಿತೋ ವಾಪಿ ನರೋ ಲೋಭಂ ಪರಿತ್ಯಜೇತ್ ।
ಅವೇಕ್ಷ್ಯ ಮನಸಾ ಶಾಸ್ತ್ರಂ ಬುದ್ಧ್ಯಾ ಚ ನೃಪಸತ್ತಮ ॥೨೪॥

ರಾಜಶ್ರೇಷ್ಠನೇ, ಮನುಷ್ಯನು ಸುಖ-ದುಃಖಗಳಲ್ಲಿದ್ದಾಗಲೂ ಲೋಭವೆಂಬ ದುರ್ಗುಣವನ್ನು ತ್ಯಜಿಸಬೇಕು. ಮನಸ್ಸು-ಬುದ್ಧಿಗಳಿಂದ ಶಾಸ್ತ್ರವನ್ನು ಚೆನ್ನಾಗಿ ಪರಿಶೀಲಿಸಿ ಈ ದುರ್ಗುಣವನ್ನು ತ್ಯಜಿಸಬೇಕು.

ಅಸಂತೋಷೋऽಸುಖಾಯೈವ ಲೋಭಾದಿಂದ್ರಿಯವಿಭ್ರಮಃ ।
ತತೋऽಸ್ಯ ನಶ್ಯತಿ ಪ್ರಜ್ಞಾ ವಿದ್ಯೇವಾಭ್ಯಾಸವರ್ಜಿತಾ ॥೨೫॥

ದುಃಖಕ್ಕೆ ಕಾರಣವಾದುದು ಅತೃಪ್ತಿಯು. ಲೋಭದಿಂದ ಮನಸ್ಸು ಮತ್ತು ಇಂದ್ರಿಯಗಳಲ್ಲಿ ಚಂಚಲತೆಯು ಏರ್ಪಡುತ್ತದೆ. ಮನಸ್ಸಿನ ಚಾಂಚಲ್ಯದಿಂದ ಶಾಸ್ತ್ರಗಳನ್ನು ಏಕಾಗ್ರತೆಯಿಂದ ಅಭ್ಯಾಸ ಮಾಡದಿರುವ ಫಲವಾಗಿ ವಿದ್ಯೆಯು ನಾಶ ಹೊಂದುತ್ತದೆ. ಇದರಿಂದ ಮನುಷ್ಯನು ಪ್ರಜ್ಞಾಹೀನನಾಗುತ್ತಾನೆ.

ನಷ್ಟಪ್ರಜ್ಞೋ ಯದಾ ಭವತಿ ತದಾ ನ್ಯಾಯಂ ನ ಪಶ್ಯತಿ ।
ತಸ್ಮಾತ್ ಸುಖಕ್ಷಯೇ ಪ್ರಾಪ್ತೇ ಪುಮಾನುಗ್ರಂ ತಪಶ್ಚರೇತ್ ॥೨೬॥

ಮನುಷ್ಯನು ಯಥಾರ್ಥ ಜ್ಞಾನವನ್ನು ಕಳೆದುಕೊಂಡರೆ ಕರ್ತವ್ಯಾಕರ್ತವ್ಯಗಳನ್ನು ಸರಿಯಾಗಿ ತಿಳಿಯನು. ಇದರಿಂದ ಸುಖವು ನಾಶವಾಗಿ ದುಃಖವೇ ಆಗಮಿಸುತ್ತಿರಲು ಪುರುಷನು ಪುನಃ ಉಗ್ರವಾದ ತಪಸ್ಸನ್ನು ಆಚರಿಸಬೇಕು.

ಯದಿಷ್ಟಂ ತತ್ ಸುಖಂ ಪ್ರಾಹುರ್ದ್ವೇಷ್ಯಂ ದುಃಖಮಿಹೋಚ್ಯತೇ ।
ಕೃತಾಕೃತಸ್ಯ ತಪಸಃ ಫಲಂ ಪಶ್ಯಸ್ವ ಯಾದೃಶಮ್ ॥೨೭॥

ಮನಸ್ಸಿಗೆ ಇಷ್ಟವಾದುದೇ ಸುಖವು. ಪ್ರತಿಕೂಲವಾದುದು ದುಃಖವು. ಪುಣ್ಯ ಪಾಪಗಳಿಗೆ ತಪಸ್ಸೇ ಮುಖ್ಯಫಲವಾದುದೆಂದು ತಿಳಿದುಕೊ.

ನಿತ್ಯಂ ಭದ್ರಾಣಿ ಪಶ್ಯಂತಿ ವಿಷಯಾಂಶ್ಚೋಪಭುಂಜತೇ ।
ಪ್ರಾಕಾಶ್ಯಂ ಚೈವ ಗಚ್ಛಂತಿ ಕೃತ್ವಾ ನಿಷ್ಕಲ್ಮಷಂ ತಪಃ ॥೨೮॥

ಯಾವ ಮನುಷ್ಯನು ದೋಷರಹಿತವಾದ ತಪಸ್ಸನ್ನಾಚರಿಸುತ್ತಾನೋ ಅವನು ನಿತ್ಯವೂ ಮಂಗಳ ಬದುಕನ್ನೇ ಕಾಣುತ್ತಾನೆ. ಅನಿಷಿದ್ಧವಾದ ವಿಷಯಭೋಗಗಳನ್ನು ಅನುಭವಿಸುತ್ತಾನೆ. ಪ್ರಪಂಚದಲ್ಲಿ ಕೀರ್ತಿಯನ್ನೂ ಸಂಪಾದಿಸುತ್ತಾನೆ.

ಅಪ್ರಿಯಾಣ್ಯವಮಾನಾಂಶ್ಚ ದುಃಖಂ ಬಹುವಿಧಾತ್ಮಕಮ್ ।
ಫಲಾರ್ಥೀ ಸತ್ಪಥತ್ಯಕ್ತಃ ಪ್ರಾಪ್ನೋತಿ ವಿಷಯಾತ್ಮಕಮ್ ॥೨೯॥

ಯಾವನು ನಿಷ್ಕಲ್ಮಶವಾದ ತಪಸ್ಸನ್ನಾಚರಿಸುವುದಿಲ್ಲವೋ ಅವನು ಅಪ್ರಿಯವಾದ ಫಲಗಳನ್ನೂ, ಅವಮಾನಗಳನ್ನೂ, ಅನೇಕ ವಿಧವಾದ ದುಃಖಗಳನ್ನೂ ಅನುಭವಿಸುತ್ತಾನೆ. ಲೌಕಿಕ ಫಲಗಳನ್ನೇ ಬಯಸುತ್ತಾ ಸನ್ಮಾರ್ಗದಿಂದ ದೂರವಿರುವ ಅವನು ಕೇವಲ ವಿಷಯಸುಖವನ್ನು ಮಾತ್ರ ಹೊಂದಿ ದುಃಖಕ್ಕೆ ಭಾಗಿಯಾಗುತ್ತಾನೆ.

ಧರ್ಮೇ ತಪಸಿ ದಾನೇ ಚ ವಿಚಿಕಿತ್ಸಾಸ್ಯ ಜಾಯತೇ ।
ಸ ಕೃತ್ವಾ ಪಾಪಕಾನ್ಯೇವ ನಿರಯಂ ಪ್ರತಿಪದ್ಯತೇ ॥೩೦॥

ಇಂತಹ ವ್ಯಕ್ತಿಗೆ ಧರ್ಮ, ತಪಸ್ಸು, ದಾನಗಳಲ್ಲಿ ಸಂಶಯವುಂಟಾಗುತ್ತದೆ. ಇದರಿಂದ ಧರ್ಮದಿಂದ ವಿಮುಖನಾದ ಅವನು ಅನೇಕ ಪಾಪಗಳನ್ನು ಮಾಡುತ್ತಾ ನರಕವನ್ನೇ ಹೊಂದುತ್ತಾನೆ.

ಸುಖೇ ತು ವರ್ತಮಾನೋ ವೈ ದುಃಖೇ ವಾಪಿ ನರೋತ್ತಮ ।
ಸ್ವವೃತ್ತಾದ್ಯೋ ನ ಚಲತಿ ಶಾಸ್ತ್ರಚಕ್ಷುಃ ಸ ಮಾನವಃ ॥೩೧॥

ನರೋತ್ತಮನೇ, ಸುಖದಲ್ಲೇ ಇರಲಿ, ಕಷ್ಟದಲ್ಲಿಯೇ ಇರಲಿ, ತನ್ನ ವಿಹಿತವಾದ ವೃತ್ತಿಯಿಂದ ಯಾವ ವ್ಯಕ್ತಿಯು ವಿಚಲಿತನಾಗುವುದಿಲ್ಲವೋ ಅವನೇ ನಿಜವಾದ ಶಾಸ್ತ್ರಚಕ್ಷುಸ್ಸು ಉಳ್ಳವನು.

ಇಷುಪ್ರಪಾತಮಾತ್ರಂ ಹಿ ಸ್ಪರ್ಶಯೋಗೇ ರತಿಃ ಸ್ಮೃತಾ ।
ರಸನೇ ದರ್ಶನೇ ಘ್ರಾಣೇ ಶ್ರವಣೇ ಚ ವಿಶಾಂ ಪತೇ ॥೩೨॥

ಧನುಸ್ಸಿನಿಂದ ಹೊರಟ ಬಾಣವು ಎಲ್ಲಿಯ ತನಕ ಆಕಾಶದಲ್ಲಿ ಸಾಗುತ್ತಿರುತ್ತದೋ ಅಷ್ಟು ಅಲ್ಪಕಾಲ ಮಾತ್ರ ವಿಷಯ ಸುಖವನ್ನು ಹೊಂದುವ ಜೀವನು ಸ್ಪರ್ಶೇಂದ್ರಿಯ, ನಾಲಿಗೆ, ಕಣ್ಣು, ಮೂಗು, ಕಿವಿಗಳ ಮೂಲಕ ಸುಖಗಳನ್ನು ಅನುಭವಿಸುತ್ತಾನೆ. ಸುಂದರ ಸ್ತ್ರೀ ದೇಹವನ್ನು ಮುಟ್ಟುತ್ತೇನೆ, ರುಚಿಯಾದ ರಸವನ್ನು ಆಸ್ವಾದಿಸುತ್ತೇನೆ, ಈ ಸುಂದರವಾದ ಚಿತ್ರವನ್ನು ನೋಡುತ್ತೇನೆ, ಈ ಪರಿಮಳವನ್ನು ಆಘ್ರಾಣಿಸುತ್ತೇನೆ, ಈ ಶಬ್ದವನ್ನು ಕೇಳಿಸಿಕೊಳ್ಳುತ್ತೇನೆ ಎಂಬ ಆಸೆಯು ಹುಟ್ಟುತ್ತದೆ. ಆದರೆ ಆಕಾಶದಲ್ಲಿ ಸಾಗುವ ಬಾಣವು ಎಷ್ಟು ವೇಗವಾಗಿ ಅಧಃಪತನವನ್ನು ಹೊಂದುತ್ತದೋ ಅದರಂತೆ ವಿಷಯಸುಖಗಳು ಅಷ್ಟೇ ಕ್ಷಣಿಕವಾದವುಗಳು ಎಂದು ಭಾವ.

ತತೋಽಸ್ಯ ಜಾಯತೇ ತೀವ್ರಾ ವೇದನಾ ತತ್ಕ್ಷಯಾತ್ ಪುನಃ ।
ಬುಧಾ ಯೇನ ಪ್ರಶಂಸಂತಿ ಮೋಕ್ಷಂ ಸುಖಮನುತ್ತಮಮ್ ॥೩೩॥

ವಿಷಯ ಸುಖವು ತಪ್ಪಿದ ಕೂಡಲೇ ಪುನಃ ಆ ಸುಖವನ್ನು ಪಡೆದುಕೊಳ್ಳುವುದರಲ್ಲಿ ಮನಸ್ಸು ತೀವ್ರವಾದ ವೇದನೆಯನ್ನು ಹೊಂದುತ್ತದೆ. ಪುನಃ ಅದರಲ್ಲಿ ಪ್ರಯತ್ನವನ್ನು ಪಟ್ಟು ಅದನ್ನು ಪಡೆದರೂ ಅದರಿಂದ ಮನಸ್ಸು ತೃಪ್ತಿಯನ್ನು ಹೊಂದುವುದಿಲ್ಲ. ಈ ಸುಖದ ಅಪೇಕ್ಷೆಯು ವೃದ್ಧಿಸುತ್ತದೆ. ಸುಖವೂ ಕ್ಷಯಿಸುತ್ತದೆ. ಈ ಕಾರಣದಿಂದಲೇ ಜ್ಞಾನಿಗಳಾದವರು ವಿಷಯ ಸುಖವನ್ನು ನಿಂದಿಸಿ ಅನುತ್ತಮವಾದ ಮೋಕ್ಷ ಸುಖವನ್ನೇ ಪ್ರಶಂಸಿಸುತ್ತಾರೆ.

ತಪಃಫಲಾರ್ಥಂ ಚರತಿ ಭವಂತಿ ಜ್ಯಾಯಸೋ ಗುಣಾಃ ।
ಧರ್ಮವೃತ್ತ್ಯಾ ಚ ಸತತಂ ಕಾಮಾರ್ಥಾಭ್ಯಾಂ ನ ಹೀಯತೇ ॥೩೪॥

ಯಾವ ಮನುಷ್ಯನು ತಪಸ್ಸಿನ ಫಲಕ್ಕಾಗಿ ಆಸಕ್ತಿಯನ್ನು ಹೊಂದುತ್ತಾನೋ ಅಂತಹ ಉತ್ತಮ ಪುರುಷನಿಗೆ ವೈರಾಗ್ಯಾದಿ ಗುಣಗಳು ಉಂಟಾಗುತ್ತವೆ. ಅವನು ಧರ್ಮಮಾರ್ಗದಲ್ಲಿಯೇ ಸಾಗುವುದರಿಂದ ಯಾವಾಗಲೂ ಧರ್ಮ-ಅರ್ಥಗಳಿಂದ ಅವನು ಹಾನಿಯನ್ನು ಹೊಂದುವುದಿಲ್ಲ.

ಅಪ್ರಯತ್ನಾಗತಾಃ ಸೇವ್ಯಾ ಗೃಹಸ್ಥೈರ್ವಿಷಯಾಃ ಸದಾ ।
ಪ್ರಯತ್ನೇನೋಪಗಮ್ಯಶ್ಚ ಸ್ವಧರ್ಮ ಇತಿ ಮೇ ಮತಿಃ ॥೩೫॥

ಆದ್ದರಿಂದ ಗೃಹಸ್ಥಾನದವನು ಮಹಾಪ್ರಯತ್ನವಿಲ್ಲದೆ ತಾನಾಗಿ ಒದಗಿ ಬಂದ ವಿಷಯಗಳನ್ನು ಅನುಭವಿಸಬೆಕು. ಪ್ರಯತ್ನ ಪೂರ್ವಕವಾಗಿ ತನ್ನ ಧರ್ಮವನ್ನು ಅನುಷ್ಠಾನ ಮಾಡಬೇಕು ಎಂಬುದು ಇದೇ ಸ್ವಧರ್ಮ ಎಂದು ನನ್ನ ಬುದ್ಧಿಯು.

ಮಾನಿನಾಂ ಕುಲಜಾತಾನಾಂ ನಿತ್ಯಂ ಶಾಸ್ತ್ರಾರ್ಥಚಕ್ಷುಷಾಮ್ ।
ಧರ್ಮಕ್ರಿಯಾವಿಯುಕ್ತಾನಾಮಸತ್ಯಂ ಸಂವೃತಾತ್ಮನಾಮ್ ॥೩೬॥

ಕ್ರಿಯಮಾಣಂ ಯದಾ ಕರ್ಮ ನಾಶಂ ಗಚ್ಛತಿ ಮಾನುಷಮ್ ।
ತೇಷಾಂ ನಾನ್ಯದೃತೇ ಲೋಕೇ ತಪಸಃ ಕರ್ಮ ವಿದ್ಯತೇ ॥೩೭॥

ಉತ್ತಮ ಕುಲದಲ್ಲಿ ಹುಟ್ಟಿ ಮಾನವಂತರಾಗಿರುವ, ಶಾಸ್ತ್ರಾರ್ಥಗಳನ್ನು ಚೆನ್ನಾಗಿ ತಿಳಿದಿರುವ, ಅಶಕ್ತಿಯಿಂದ ಧರ್ಮ-ಸತ್ಕರ್ಮಗಳಿಂದ ವಿಯುಕ್ತರಾಗಿರುವ, ವಶ ಮಾಡಿಕೊಂಡಿರುವ ಮನಸ್ಸುಳ್ಳ, ಅರ್ಥಾತ್ ಮಾನುಷ ಕರ್ಮವೆನಿಸಿದ ಪುತ್ರ-ಮಿತ್ರ-ಕಳತ್ರ ಪೋಷಣಾದಿ ಕರ್ಮಗಳೆಲ್ಲವೂ ಕ್ಷಣಿಕವಾದವುಗಳು ಎಂಬುದನ್ನು ತಿಳಿದಿರುವ ವಿದ್ವಾಂಸರ ಕೊರತೆ ಇರುವುದರಿಂದ ವ್ಯಕ್ತಿಗಳು ತಪಸ್ಸಿನಿಂದ ವಿಮುಖರಾಗಿರುತ್ತಾರೆ. ತಪಸ್ಸಿಗಿಂತಲೂ ಶ್ರೇಷ್ಠವಾದ ಕರ್ಮವು ಇಲ್ಲ ಎಂದು ನಿಶ್ಚಯವನ್ನು ಪಡೆದ ಬಳಿಕ ಸತ್ಕರ್ಮದಲ್ಲಿ ಆಸಕ್ತಿಯು ಉಂಟಾಗುತ್ತದೆ.

ಸರ್ವಾತ್ಮನಾ ತು ಕುರ್ವೀತ ಗೃಹಸ್ಥಃ ಕರ್ಮನಿಶ್ಚಯಮ್ ।
ದಾಕ್ಷ್ಯೇಣ ಹವ್ಯಕವ್ಯಾರ್ಥಂ ಸ್ವಧರ್ಮಂ ವಿಚರೇನ್ನೃಪ ॥೩೮॥

ರಾಜನೇ, ಗೃಹಸ್ಥನು ಎಲ್ಲ ವಿಧದಿಂದಲೂ ತನ್ನ ಕರ್ತವ್ಯಗಳನ್ನು ನಿಶ್ಚಯಿಸಿ, ಸ್ವಧರ್ಮವನ್ನು ಪಾಲಿಸುತ್ತಾ ಜಾಣತನದಿಂದ ಯಜ್ಞಗಳನ್ನು, ಶ್ರಾದ್ಧಾದಿ ಕರ್ಮಗಳನ್ನು ಸ್ವಧರ್ಮವೆಂದು ಮಾಡುತ್ತಿರಬೇಕು.

ಯಥಾ ನದೀನದಾಃ ಸರ್ವೇ ಸಾಗರೇ ಯಾಂತಿ ಸಂಸ್ಥಿತಿಮ್ ।
ಏವಮಾಶ್ರಮಿಣಃ ಸರ್ವೇ ಗೃಹಸ್ಥೇ ಯಾಂತಿ ಸಂಸ್ಥಿತಿಮ್ ॥೩೯॥

ಹೇಗೆ ನದಿಗಳು, ನದಗಳು ಸಾಗರವನ್ನೇ ಆಶ್ರಯಿಸುತ್ತವೋ ಅದರಂತೆ ಎಲ್ಲ ಆಶ್ರಮಿಗಳು ಗೃಹಸ್ಥನಲ್ಲಿಯೇ ಆಶ್ರಯವನ್ನು ಹೊಂದುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಾವಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಪರಾಶರ ಗೀತಾ.

ಜನಕಃ

ವರ್ಣೋ ವಿಶೇಷವರ್ಣಾನಾಂ ಮಹರ್ಷೇ ಕೇನ ಜಾಯತೇ ।
ಏತದಿಚ್ಛಾಮ್ಯಹಂ ಶ್ರೋತುಂ ತದ್ ಬ್ರೂಹಿ ವದತಾಂ ವರ ॥೧॥

ಜನಕ– ಪ್ರವಚನ ಮಾಡುವವರಲ್ಲಿ ಅಗ್ರಗಣ್ಯನಾದವನೇ, ಪರಾಶರ ಮುನಿಯೇ, ವಿಶೇಷ ವರ್ಣ ಎನಿಸಿದ ಬ್ರಾಹ್ಮಣರಿಂದ ಮತ್ತೊಂದು ವರ್ಣವು ಹೇಗೆ ಹುಟ್ಟುತ್ತದೆ? ಇದನ್ನು ತಿಳಿಯಲು ಬಯಸುತ್ತೇನೆ.

ಯದೇತಜ್ಜಾಯತೇಽಪತ್ಯಂ ಸ ಏವಾಯಮಿತಿ ಶ್ರುತಿಃ ।
ಕಥಂ ಬ್ರಾಹ್ಮಣತೋ ಜಾತೋ ವಿಶೇಷಗ್ರಹಣಂ ಗತಃ ॥೨॥

ಮನುಷ್ಯನಿಂದ ಯಾವ ಸಂತತಿಯು ಹುಟ್ಟುತ್ತದೆಯೋ ಆ ಸಂತಾನವೇ ಮಗನ ಸ್ವರೂಪವೆಂದು ಶ್ರುತಿಯು ಹೇಳುತ್ತಿದೆ. ಬ್ರಾಹ್ಮಣನಿಂದ ಹುಟ್ಟಿದ ಮಗನು ಬ್ರಾಹ್ಮಣನೇ ಆಗಬೇಕು. ಕ್ಷತ್ರಿಯನು ಕ್ಷತ್ರಿ ಎಂಬ ಜಾತಿಯನ್ನು ಹೇಗೆ ಪಡೆಯುತ್ತಾನೆ?

ಪರಾಶರಃ

ಏವಮೇತನ್ಮಹಾರಾಜ ಯೇನ ಜಾತಃ ಸ ಏವ ಸಃ ।
ತಪಸಸ್ತ್ವಪಕರ್ಷೇಣ ಜಾತಿಗ್ರಹಣತಾಂ ಗತಃ ॥೩॥

ಪರಾಶರ– ಮಹಾರಾಜನೇ, ನೀನು ಹೇಳಿದಂತೆ ಯಾವನು ಯಾವನಿಂದ ಹುಟ್ಟುತ್ತಾನೋ ಅವನು ಅವನೇ ಆಗುತ್ತಾನೆ. ಆದರೆ ತಪಸ್ಸಿನ ನ್ಯೂನತೆಯ ಕಾರಣದಿಂದ ಬ್ರಾಹ್ಮಣನಿಂದ ಕ್ಷತ್ರಿಯ ಜಾತಿಯ ವ್ಯಕ್ತಿಯು ಹುಟ್ಟುತ್ತಾನೆ.

ಸುಕ್ಷೇತ್ರಾಚ್ಚ ಸುಬೀಜಾಚ್ಚ ಪುಣ್ಯೋ ಭವತಿ ಸಂಭವಃ ।
ಅತೋಽನ್ಯತರತೋ ಹೀನಾದವರೋ ನಾಮ ಜಾಯತೇ ॥೪॥

ಕ್ಷೇತ್ರವು ಉತ್ತಮವಾಗಿದ್ದು, ಉತ್ತಮ ಬೀಜವಾಗಿದ್ದಲ್ಲಿ ಹುಟ್ಟುವ ಚೇತನವು ಪುಣ್ಯ ಪುರುಷನಾಗಿರುತ್ತಾನೆ. ಕ್ಷೇತ್ರ-ಬೀಜಗಳೆರಡರಲ್ಲಿ ಒಂದು ಹೀನವಾಗಿದ್ದರೂ ಅಧಮ ಸಂತಾನವು ಹುಟ್ಟುತ್ತದೆ.

ವಕ್ತ್ರಾದ್ ಭುಜಾಭ್ಯಾಮೂರುಭ್ಯಾಂ ಪದ್ಭ್ಯಾಂ ಚೈವಾಥ ಜಜ್ಞಿರೇ ।
ಸೃಜತಃ ಪ್ರಜಾಪತೇರ್ಲೋಕಾನಿತಿ ಧರ್ಮವಿದೋ ವಿದುಃ ॥೫॥

ಪ್ರಜಾಪತಿ ಬ್ರಹ್ಮನು ಮನುಷ್ಯ ಜಗತ್ತನ್ನು ಸೃಷ್ಟಿ ಮಾಡುವ ಸಂದರ್ಭದಲ್ಲಿ ಮುಖ, ಬಾಹು, ತೊಡೆ, ಪಾದಗಳಿಂದ ಮನುಷ್ಯರನ್ನು ಸೃಷ್ಟಿಸಿದನೆಂದು ಧರ್ಮಜ್ಞಾನಿಗಳು ಹೇಳುತ್ತಾರೆ.

ಮುಖಜಾ ಬ್ರಾಹ್ಮಣಾಸ್ತಾತ ಬಾಹುಜಾಃ ಕ್ಷತ್ರಬಂಧವಃ ।
ಊರುಜಾ ಧನಿನೋ ರಾಜನ್ ಪಾದಜಾಃ ಪರಿಚಾರಕಾಃ ॥೬॥

ಚತುರ್ಮುಖ ಬ್ರಹ್ಮನ ಮುಖದಿಂದ ಹುಟ್ಟಿದವರು ಬ್ರಾಹ್ಮಣರು, ತೋಳಿನಿಂದ ಹುಟ್ಟಿದವರು ಕ್ಷತ್ರಿಯರು, ತೊಡೆಯಿಂದ ಹುಟ್ಟಿದವರು ಧನಿಗಳಾದ ವೈಶ್ಯರು, ಪಾದಗಳಿಂದ ಹುಟ್ಟಿದವರು ಪರಿಚಾರಕರಾದ ಶೂದ್ರರು.

ಚತುರ್ಣಾಮೇವ ವರ್ಣಾನಾಮಾಗಮಃ ಪುರುಷರ್ಷಭ ।
ಅತೋಽನ್ಯೇ ತ್ವತಿರಿಕ್ತಾ ಯೇ ತೇ ವೈ ಸಂಕರಜಾಃ ಸ್ಮೃತಾಃ ॥೭॥

ಚತುರ್ಮುಖ ಬ್ರಹ್ಮನ ನಾಲ್ಕು ಅಂಗಗಳಿಂದ ನಾಲ್ಕು ವರ್ಣದವರು ಮಾತ್ರ ಹುಟ್ಟಿದ್ದಾರೆ. ಈ ನಾಲ್ಕು ವರ್ಣದವರಿಗಿಂತ ಯಾರು ಅತಿರಿಕ್ತರಾಗಿದ್ದಾರೋ ಅವರೆಲ್ಲ ಸಾಂಕರ್ಯದಿಂದ ಹುಟ್ಟಿದವರು ಎಂದು ಹೇಳಲ್ಪಟ್ಟಿದೆ.

ಕ್ಷತ್ರಜಾತಿರಥಾಂಬಷ್ಠಾ ಉಗ್ರಾ ವೈದೇಹಕಾಸ್ತಥಾ ।
ಶ್ವಪಾಕಾಃ ಪುಲ್ಕಸಾಃ ಸ್ತೇನಾ ನಿಷಾದಾಃ ಸೂತಮಾಗಧಾಃ ॥೮॥

ಆಯೋಗಾಃ ಕರಣಾ ವ್ರಾತ್ಯಾಶ್ಚಂಡಾಲಾಶ್ಚ ನರಾಧಿಪ ।
ಏತೇ ಚತುರ್ಭ್ಯೋ ವರ್ಣೇಭ್ಯೋ ಜಾಯಂತೇ ವೈ ಪರಸ್ಪರಮ್ ॥೯॥

ರಾಜನೇ, ಕ್ಷತ್ರಿಯ, ಅತಿರಥ, ಅಂಬಷ್ಠ, ಉಗ್ರ, ವೈದೇಹ, ಶ್ವಪಾಕ, ಪುಲ್ಕಸ, ಸ್ತೇನ, ನಿಷಾದ, ಸೂತ, ಮಾಗಧ, ಆಯೋಗ, ಕರಣ, ವ್ರಾತ್ಯ, ಚಂಡಾಲ ಇವರೆಲ್ಲರೂ ಬ್ರಾಹ್ಮಣಾದಿ ನಾಲ್ಕು ವರ್ಣಗಳಲ್ಲಿ ಅನುಲೋಮ, ವಿಲೋಮ ವರ್ಣಗಳ ಸ್ತ್ರೀ ಪುರುಷರ ಸಂಯೋಗದಿಂದ ಹುಟ್ಟಿದವರು.

ಜನಕಃ

ಬ್ರಹ್ಮಣ್ಯೈಕೇನ ಜಾತಾನಾಂ ನಾನಾತ್ವಂ ಗೋತ್ರತಃ ಕಥಮ್ ।
ಬಹೂನೀಹ ಹಿ ಲೋಕೇ ವೈ ಗೋತ್ರಾಣಿ ಮುನಿಸತ್ತಮ ॥೧೦॥

ಜನಕ– ಚತುರ್ಮುಖ ಬ್ರಹ್ಮನಿಂದಲೇ ಹುಟ್ಟನ್ನು ಪಡೆದ ಇವರು ಗೋತ್ರಗಳಿಂದ ಬೇರೆ ಬೇರೆ ಹೇಗಾದರು? ಅನೇಕ ಗೋತ್ರಗಳು ಈ ಲೋಕದಲ್ಲಿ ಹೇಗೆ ಉಂಟಾದವು ಎಂಬುದನ್ನು ತಿಳಿಸಿ.

ಯತ್ರ ತತ್ರ ಕಥಂ ಜಾತಾಃ ಸ್ವಯೋನಿಂ ಮುನಯೋ ಗತಾಃ ।
ಶೂದ್ರಯೋನೌ ಸಮುತ್ಪನ್ನಾ ವಿಯೋನೌ ಚ ತಥಾಪರೇ ॥೧೧॥

ಮುನಿಗಳು ಎಲ್ಲೆಲ್ಲಿ, ಹೇಗೆ ಜನ್ಮವನ್ನು ತಾಳಿದ್ದಾರೆ? ಶೂದ್ರಯೋನಿಯಲ್ಲಿ ಉತ್ಪನ್ನರಾದವರು ಯಾರು? ವಿಪರೀತವಾದ ಯೋನಿಗಳಲ್ಲಿ ಉತ್ಪತ್ತಿಯನ್ನು ಪಡೆದ ವ್ಯಕ್ತಿಗಳು ಯಾರು ಎಂಬುದನ್ನು ತಿಳಿಸಿ.

ಪರಾಶರಃ

ರಾಜನ್ನೈತದ್ ಭವೇದ್ ಗ್ರಾಹ್ಯಮಪಕೃಷ್ಟೇನ ಜನ್ಮನಾ ।
ಮಹಾತ್ಮನಾಂ ಸಮುತ್ಪತ್ತಿಸ್ತಪಸಾ ಭಾವಿತಾತ್ಮನಾಮ್ ॥೧೨॥

ಪರಾಶರ– ಮಹಾರಾಜನೇ, ತಪಸ್ಸಿನಿಂದ ಪವಿತ್ರಾತ್ಮರಾಗಿರುವ ಮಹಾತ್ಮರ ಜನ್ಮವು ನಿಕೃಷ್ಟವಾದ ಕ್ಷೇತ್ರದಲ್ಲಿ ಆಗಿದ್ದರೂ ಆ ಜನ್ಮವು ಗ್ರಾಹ್ಯವೇ ಆಗಿದೆ.

ಉತ್ಪಾದ್ಯ ಪುತ್ರಾನ್ಮುನಯೋ ನೃಪತೇ ಯತ್ರ ತತ್ರ ಹ ।
ಸ್ವೇನೈವ ತಪಸಾ ತೇಷಾಮೃಷಿತ್ವಂ ವಿದಧುಃ ಪುನಃ ॥೧೩॥

ಯೋಗ್ಯತೆಯನ್ನು ಸಂಪಾದಿಸಿಕೊಂಡು ಹುಟ್ಟನ್ನು ಪಡೆದಿರುವ ಮುನಿಗಳು ಎಲ್ಲೆಲ್ಲಿ

ತಮ್ಮ ಸಂತಾನವನ್ನು ಪಡೆದುಕೊಂಡರೋ ತಮ್ಮ ತಪಸ್ಸಿನ ಪ್ರಭಾವದಿಂದ ತಮ್ಮ ಮಕ್ಕಳಿಗೆ ಋಷಿತ್ವವನ್ನೂ ಕೂಡ ಸಾಧಿಸಿಕೊಟ್ಟರು.

ಪಿತಾಮಹಶ್ಚ ಮೇ ಪೂರ್ವಮೃಶ್ಯಶೃಂಗಶ್ಚ ಕಾಶ್ಯಪಃ ।
ವಟಸ್ತಾಂಡ್ಯಃ ಕೃಪಶ್ಚೈವ ಕಕ್ಷೀವಾನ್ ಕಮಠಾದಯಃ ॥೧೪॥

ಯವಕ್ರೀತಶ್ಚ ನೃಪತೇ ದ್ರೋಣಶ್ಚ ವದತಾಂ ವರಃ ।
ಆಯುರ್ಮತಂಗೋ ದತ್ತಶ್ಚ ದ್ರುಪದೋ ಮತ್ಸ್ಯ ಏವ ಚ ॥೧೫॥

ಏತೇ ಸ್ವಾಂ ಪ್ರಕೃತಿಂ ಪ್ರಾಪ್ತಾ ವೈದೇಹ ತಪಸೋಽಽಶ್ರಯಾತ್ ।
ಪ್ರತಿಷ್ಠಿತಾ ವೇದವಿದೋ ದಮೇ ತಪಸಿ ಚೈವ ಹಿ ॥೧೬॥

ಜನಕನೇ, ನನ್ನ ಪಿತಾಮಹನಾದ ವಸಿಷ್ಠ, ಕಶ್ಯಪ ಗೋತ್ರಜನಾದ ಋಷ್ಯಶೃಂಗ, ವಟ, ತಾಂಡ್ಯ, ಕೃಪ, ಕಕ್ಷೀವಾನ್, ಕಮಠನೇ ಮೊದಲಾದವರು, ಯವಕ್ರೀತ, ವಾಗ್ಮಿಗಳಲ್ಲಿ ಶ್ರೇಷ್ಠನಾದ ದ್ರೋಣ, ಆಯು, ಮತಂಗ, ದತ್ತ, ದ್ರುಪದ, ಇವರಂತೆ ಮತ್ಸ್ಯ, ಇವರೆಲ್ಲರೂ ತಪಸ್ಸನ್ನು ಆಶ್ರಯಿಸಿ ಶ್ರೇಷ್ಠವಾದ ಪ್ರಕೃತಿಯನ್ನು ಅರ್ಥಾತ್ ಸ್ವಭಾವವನ್ನು ಹೊಂದಿದ್ದಾರೆ. ಇಂದ್ರಿಯಗಳ ಸಂಯಮ, ತಪಸ್ಸು ಇವುಗಳಿಂದ ವೇದ ವಿದ್ವಾಂಸರಾಗಿ ಉತ್ತಮ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಮೂಲಗೋತ್ರಾಣಿ ಚತ್ವಾರಿ ಸಮುತ್ಪನ್ನಾನಿ ಪಾರ್ಥಿವ ।
ಅಂಗಿರಾಃ ಕಶ್ಯಪಶ್ಚೈವ ವಸಿಷ್ಠೋ ಭೃಗುರೇವ ಚ ॥೧೭॥

ಜನಕರಾಜನೇ, ಆರಂಭದಲ್ಲಿ ಮೂಲಗೋತ್ರಗಳೆಂದು ನಾಲ್ಕು ಉತ್ಪತ್ತಿಯನ್ನು ಹೊಂದಿರುತ್ತವೆ. ಅಂಗಿರಸ, ಕಶ್ಯಪ, ವಸಿಷ್ಠ, ಭೃಗು ಎಂದು ನಾಲ್ಕು ಮೂಲ ಗೋತ್ರಗಳು.

ಕರ್ಮತೋಽನ್ಯಾನಿ ಗೋತ್ರಾಣಿ ಸಮುತ್ಪನ್ನಾನಿ ಪಾರ್ಥಿವ ।
ನಾಮಧೇಯಾನಿ ತಪಸಾ ತಾನಿ ಚ ಗ್ರಹಣಂ ಸತಾಮ್ ॥೧೮॥

ಉಳಿದ ಗೋತ್ರಗಳೆಲ್ಲವೂ ಕರ್ಮಕ್ಕನುಗುಣವಾಗಿ ಉತ್ಪತ್ತಿಯನ್ನು ಪಡೆದ ಗೋತ್ರಗಳೆಂದು ತಿಳಿಯಬೇಕು. ಆ ಗೋತ್ರಗಳ ಹೆಸರುಗಳು ಗೋತ್ರಗಳ ಪ್ರವರ್ತಕರಾದ ಋಷಿಗಳ ಹೆಸರಿನ ಕಾರಣದಿಂದ ಅಂಗೀಕರಿಸಲ್ಪಟ್ಟವು.

ಜನಕಃ

ವಿಶೇಷಧರ್ಮಾನ್ ವರ್ಣಾನಾಂ ಪ್ರಬ್ರೂಹಿ ಭಗವನ್ಮಮ ।
ತಥಾ ಸಾಮಾನ್ಯಧರ್ಮಾಂಶ್ಚ ಸರ್ವತ್ರ ಕುಶಲೋ ಹ್ಯಸಿ ॥೧೯॥

ಜನಕ– ಪೂಜ್ಯರೇ, ನೀವು ಪ್ರತಿಯೊಂದು ವರ್ಣದಲ್ಲಿರುವ ವಿಶೇಷ ಧರ್ಮಗಳನ್ನು, ಸಾಮಾನ್ಯ ಧರ್ಮಗಳನ್ನು ತಿಳಿಸಿಕೊಡಿರಿ. ನೀವು ಎಲ್ಲಾ ವಿಷಯದಲ್ಲಿಯೂ ಜ್ಞಾನಿಗಳಾಗಿರುತ್ತೀರಿ.

ಪರಾಶರಃ

ಪ್ರತಿಗ್ರಹೋ ಯಾಜನಂ ಚ ತಥೈವಾಧ್ಯಾಪನಂ ನೃಪ ।
ವಿಶೇಷಧರ್ಮೋ ವಿಪ್ರಾಣಾಂ ರಕ್ಷಾ ಕ್ಷತ್ರಸ್ಯ ಶೋಭನಾ ॥೨೦॥

ಪರಾಶರ– ಜನಕನೇ, ದಾನ ಸ್ವೀಕರಿಸುವುದು, ಯಜ್ಞ ಮಾಡಿಸುವುದು, ವೇದ ಶಾಸ್ತ್ರಗಳನ್ನು ಪಾಠ ಹೇಳುವುದು ಇವುಗಳು ಬ್ರಾಹ್ಮಣರಿಗೆ ವಿಶೇಷ ಧರ್ಮಗಳಾಗಿವೆ. ಪ್ರಜೆಗಳನ್ನು ರಕ್ಷಿಸುವುದು ರಾಜರ ವಿಶೇಷ ಧರ್ಮವೆನಿಸಿದೆ.

ಕೃಷಿಶ್ಚ ಪಾಶುಪಾಲ್ಯಂ ಚ ವಾಣಿಜ್ಯಂ ಚ ವಿಶಾಮಪಿ ।
ದ್ವಿಜಾನಾಂ ಪರಿಚರ್ಯಾ ಚ ಶೂದ್ರಕರ್ಮ ನರಾಧಿಪ ॥೨೧॥

ಕೃಷಿ, ಪಶುಪಾಲನೆ, ವ್ಯಾಪಾರ ಇವುಗಳು ವೈಶ್ಯರ ವಿಶೇಷ ಧರ್ಮಗಳಾಗಿವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಸೇವಿಸುವುದು ಶೂದ್ರರ ವಿಶೇಷ ಧರ್ಮವೆನಿಸಿದೆ.

ವಿಶೇಷಧರ್ಮಾ ನೃಪತೇ ವರ್ಣಾನಾಂ ಪರಿಕೀರ್ತಿತಾಃ ।
ಧರ್ಮಾನ್ ಸಾಧಾರಣಾಂಸ್ತಾತ ವಿಸ್ತರೇಣ ಶೃಣುಷ್ವ ಮೇ ॥೨೨॥

ರಾಜನೇ, ಪ್ರತಿಯೊಂದು ವರ್ಣದವರ ವಿಶೇಷ ಧರ್ಮಗಳನ್ನು ತಿಳಿಸಿದ್ದೇನೆ. ನಾಲ್ಕು ವರ್ಣದವರಿಗೂ ಇರುವ ಸಾಧಾರಣ ಧರ್ಮಗಳನ್ನು ವಿಸ್ತಾರವಾಗಿ ಹೇಳುತ್ತೇನೆ, ಕೇಳು.

ಆನೃಶಂಸ್ಯಮಹಿಂಸಾ ಚಾಪ್ರಮಾದಃ ಸಂವಿಭಾಗಿತಾ ।
ಶ್ರಾದ್ಧಕರ್ಮಾತಿಥೇಯಂ ಚ ಸತ್ಯಮಕ್ರೋಧ ಏವ ಚ ॥೨೩॥

ಸ್ವೇಷು ದಾರೇಷು ಸಂತೋಷಃ ಶೌಚಂ ನಿತ್ಯಾನಸೂಯತಾ ।
ಆತ್ಮಜ್ಞಾನಂ ತಿತಿಕ್ಷಾ ಚ ಧರ್ಮಾಃ ಸಾಧಾರಣಾ ನೃಪ ॥೨೪॥

ದಯಾ ಬುದ್ಧಿ, ಅಹಿಂಸೆ, ಪ್ರಮಾದರಾಹಿತ್ಯ, ಐಶ್ವರ್ಯವನ್ನು ಯಥಾಯೋಗ್ಯವಾಗಿ ವಿಭಾಗ ಮಾಡಿಕೊಡುವುದು, ಶ್ರಾದ್ಧಕರ್ಮ, ಅತಿಥಿ ಸತ್ಕಾರ, ಸತ್ಯ, ಅಕ್ರೋಧ, ತಮ್ಮ ಪತ್ನಿಯರಲ್ಲಿಯೇ ಸಂತೋಷವನ್ನು ಹೊಂದಿರುವುದು, ಪಾವಿತ್ರ್ಯ, ಇತರರಲ್ಲಿ ದ್ವೇಷ ಮಾಡದಿರುವುದು, ಪರಮಾತ್ಮನ ಜ್ಞಾನ, ಸಹನೆ- ಈ ಎಲ್ಲಾ ಧರ್ಮಗಳು ಎಲ್ಲರಲ್ಲಿಯೂ ಇರಬೇಕಾದ ಸಾಧಾರಣ ಧರ್ಮಗಳು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತ್ರಯೋ ವರ್ಣಾ ದ್ವಿಜಾತಯಃ ।
ಅತ್ರ ತೇಷಾಮಧೀಕಾರೋ ಧರ್ಮೇಷು ದ್ವಿಪದಾಂ ವರ ॥೨೫॥

ರಾಜಶ್ರೇಷ್ಠನೇ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಯವರನ್ನು ದ್ವಿಜಾತಿಗಳು ಎನ್ನುತ್ತಾರೆ. ಈ ಹಿಂದೆ ಹೇಳಿದ ಗುಣಗಳಲ್ಲಿ ಈ ಜಾತಿಯವರೇ ಮುಖ್ಯ ಅಧಿಕಾರಿಗಳಾಗಿರುತ್ತಾರೆ.

ವಿಕರ್ಮಾವಸ್ಥಿತಾ ವರ್ಣಾಃ ಪತಂತಿ ನೃಪತೇ ತ್ರಯಃ ।
ಉನ್ನಮಂತಿ ಯಥಾಸಂತಮಾಶ್ರಿತ್ಯೇಹ ಸ್ವಕರ್ಮಸು ॥೨೬॥

ರಾಜನೇ, ಮೂರು ವರ್ಣದವರೂ ಹಿಂದೆ ಹೇಳಿದ ಧರ್ಮಗಳಿಗೆ ವಿರುದ್ಧವಾಗಿ ಕರ್ಮಗಳನ್ನು ಮಾಡಿದರೆ ಪಾತಿತ್ಯವನ್ನು ಹೊಂದುತ್ತಾರೆ. ಶಾಸ್ತ್ರೋಕ್ತ ವಿಧಿಯಲ್ಲಿಯೇ ಧರ್ಮನಿಷ್ಠರಾಗಿದ್ದಲ್ಲಿ ಉನ್ನತಿಯನ್ನು ಹೊಂದುತ್ತಾರೆ.

ನ ಚಾಪಿ ಶೂದ್ರಃ ಪತತೀತಿ ನಿಶ್ಚಯೋ
ನ ಚಾಪಿ ಸಂಸ್ಕಾರಮಿಹಾರ್ಹತೀತಿ ವಾ ।
ಶ್ರುತಿಪ್ರವತ್ತಂ ನ ಚ ಧರ್ಮಮಾಪ್ನುತೇ
ನ ಚಾಸ್ಯ ಧರ್ಮೇ ಪ್ರತಿಷೇಧನಂ ಕೃತಮ್ ॥೨೭॥

ಶೂದ್ರನಾದವನು ಗರ್ಭಾಧಾನದಿಂದ ಯಾವ ಸಂಸ್ಕಾರಗಳನ್ನು ಹೊಂದದಿದ್ದಲ್ಲಿಯೂ ಪಾತಿತ್ಯವನ್ನು ಹೊಂದುವುದಿಲ್ಲ, ಇದು ನಿಶ್ಚಯ. ಶ್ರುತ್ಯುಕ್ತವಾದ

ಯಾವುದೇ ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುವ ಅಧಿಕಾರವು ಶೂದ್ರನಿಗೆ ಇರುವುದಿಲ್ಲ. ಈ ಶೂದ್ರನಿಗೆ ಯೋಗ್ಯ ಬ್ರಾಹ್ಮಣ ಸೇವಾ ರೂಪ ಧರ್ಮದಲ್ಲಿ ಯಾವುದೇ ನಿಷೇಧವು ಇರುವುದಿಲ್ಲ. (ಇದೇ ಶೂದ್ರನಿಗೆ ಮುಖ್ಯವಾದ ಧರ್ಮ ಎನಿಸುತ್ತದೆ ಎಂದು ಭಾವ).

ವೈದೇಹಕಂ ಶೂದ್ರಮುದಾಹರಂತಿ
ದ್ವಿಜಾ ಮಹಾರಾಜ ಶ್ರುತೋಪಪನ್ನಾಃ ।
ಅಹಂ ಹಿ ಪಶ್ಯಾಮಿ ನರೇಂದ್ರ ದೇವಂ
ವಿಶ್ವಸ್ಯ ವಿಷ್ಣುಂ ಜಗತಃ ಪ್ರಧಾನಮ್ ॥೨೮॥

ವಿದೇಹರಾಜನೇ, ಬ್ರಾಹ್ಮಣ ಸ್ತ್ರೀಯಲ್ಲಿ ವೈಶ್ಯ ಪುರುಷರಲ್ಲಿ ಹುಟ್ಟಿದ ಮಗನನ್ನು ಶೂದ್ರನೆಂದು ಹೇಳುತ್ತಾರೆ. ನರೇಂದ್ರನೇ, ನಾನು ಸಮಸ್ತ ಜಗತ್ತಿಗೆ ಪ್ರಧಾನ ಪುರುಷನಾಗಿ ವಿಷ್ಣುವನ್ನೇ ನೋಡುತ್ತೇನೆ. ಬ್ರಾಹ್ಮಣ-ಕ್ಷತ್ರಿಯರೆಲ್ಲರಿಗೂ ನಿಯಾಮಕನಾದವನು ಮಹಾವಿಷ್ಣುವೇ ಆಗಿದ್ದಾನೆ.

ಸತಾಂ ವೃತ್ತಮನುಷ್ಠಾಯ ನಿಹೀನಾ ಉಜ್ಜಿಹೀರ್ಷವಃ ।
ಮಂತ್ರವರ್ಜಂ ನ ದುಷ್ಯಂತಿ ಕುರ್ವಾಣಾಃ ಪೌಷ್ಟಿಕೀಃ ಕ್ರಿಯಾಃ ॥೨೯॥

ಆತ್ಮೋದ್ಧಾರವನ್ನು ಬಯಸುವ ಶೂದ್ರರು ಸಜ್ಜನರು ಅನುಷ್ಠಾನ ಮಾಡುವ ಸದಾಚಾರಗಳನ್ನು ತಾವೂ ಪರಿಪಾಲಿಸುತ್ತಾ ಮಂತ್ರಗಳಿಲ್ಲದೆ ಇರುವ ತಮ್ಮ ಉನ್ನತಿಗೆ ಕಾರಣವಾದ ಕರ್ಮಗಳನ್ನು ಆಚರಿಸಬೇಕು. ಹೀಗೆ ಕರ್ಮಗಳನ್ನು ಮಾಡುವುದರಿಂದ ಶೂದ್ರರೂ ಮಹತ್ವವನ್ನು ಹೊಂದುತ್ತಾರೆ.

ಯಥಾ ಯಥಾ ಹಿ ಸದ್ವೃತ್ತಮಾಲಂಬಂತೀತರೇ ಜನಾಃ ।
ತಥಾ ತಥಾ ಸುಖಂ ಪ್ರಾಪ್ಯ ಪ್ರೇತ್ಯ ಚೇಹ ಚ ಶೇರತೇ ॥೩೦॥

ಬೇರೆ ಜಾತಿಯವರು ಯಾವ ಯಾವ ಸದಾಚಾರಗಳನ್ನು ಆಚರಿಸುತ್ತಾರೋ ಅದಕ್ಕನುಗುಣವಾದ, ತನಗೆ ಯೋಗ್ಯವಾದ ಸದಾಚಾರಗಳನ್ನು ಶೂದ್ರನು ಆಚರಿಸಿದಲ್ಲಿ ಇಹಲೋಕದಲ್ಲಿ ಆನಂದವನ್ನು ಅನುಭವಿಸುತ್ತಾನೆ.

ಜನಕಃ

ಕಿಂ ಕರ್ಮ ದೂಷಯತ್ಯೇನಮಥ ಜಾತಿರ್ಮಹಾಮುನೇ ।
ಸಂದೇಹೋ ಮೇ ಸಮುತ್ಪನ್ನಸ್ತನ್ಮೇ ವ್ಯಾಖ್ಯಾತುಮರ್ಹಸಿ ॥೩೧॥

ಜನಕ– ಮಹಾಮುನಿಯೇ, ಒಬ್ಬ ಮನುಷ್ಯನನ್ನು ದೂಷಿತ ಎಂದು ಹೇಳುವುದು ಕರ್ಮಪ್ರಯುಕ್ತವೋ ಅಥವಾ ಜಾತಿಯಿಂದಲೋ? ಈ ಸಂದೇಹವು ನನಗೆ ಉಂಟಾಗಿದೆ. ಈ ವಿಷಯವನ್ನು ವಿಷದಪಡಿಸಿರಿ.

ಪರಾಶರಃ

ಅಸಂಶಯಂ ಮಹಾರಾಜ ಉಭಯಂ ದೋಷಕಾರಕಮ್ ।
ಕರ್ಮ ಚೈವ ಹಿ ಜಾತಿಶ್ಚ ವಿಶೇಷಂ ತು ನಿಶಾಮಯ ॥೩೨॥

ಪರಾಶರ– ಮಹಾರಾಜನೇ, ಮನುಷ್ಯನನ್ನು ದೂಷಿತ ಎಂದು ಕರೆಯಲು ಕರ್ಮ, ಜಾತಿ ಎರಡೂ ಕಾರಣಗಳಾಗಿವೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಇವುಗಳಲ್ಲಿರುವಂತಹ ವಿಶೇಷವನ್ನು ತಿಳಿದುಕೊ.

ಜಾತ್ಯಾ ಚ ಕರ್ಮಣಾ ಚೈವ ದುಷ್ಟಂ ಕರ್ಮ ನಿಷೇವತೇ ।
ಜಾತ್ಯಾ ದುಷ್ಟಶ್ಚ ಯಃ ಪಾಪಂ ನ ಕರೋತಿ ಸ ಪೂರುಷಃ ॥೩೩॥

ಜಾತಿಯಿಂದಲೂ ಕರ್ಮದಿಂದಲೂ ಉತ್ತಮತ್ವವನ್ನು ಸಂಪಾದಿಸಿಕೊಂಡಿರುವ, ದುಷ್ಕರ್ಮ ಮಾಡದಿರುವ ವ್ಯಕ್ತಿಯನ್ನು ಉತ್ತಮ ಪುರುಷನೆನ್ನುತ್ತಾರೆ. ಹಾಗೆ ಜಾತಿಯಿಂದ ದುಷ್ಟನಾಗಿದ್ದರೂ ಪಾಪಕರ್ಮಗಳನ್ನು ಮಾಡದಿದ್ದಲ್ಲಿ ಅವನನ್ನೂ ಉತ್ತಮ ಪುರುಷನೆಂದೇ ಕರೆಯುತ್ತಾರೆ.

ಜಾತ್ಯಾ ಪ್ರಧಾನಂ ಪುರುಷಂ ಕುರ್ವಾಣಂ ಕರ್ಮ ಧಿಕ್ಕೃತಮ್ ।
ಕರ್ಮ ತದ್ ದೂಷಯತ್ಯೇನಂ ತಸ್ಮಾತ್ ಕರ್ಮ ನ ಶೋಭನಮ್ ॥

ಜಾತಿಯಿಂದ ಶ್ರೇಷ್ಠತ್ವವನ್ನು ಪಡೆದಿದ್ದರೂ ನಿಂದಿತ ಕರ್ಮದಲ್ಲಿ ಆಸಕ್ತನಾಗಿದ್ದರೆ ಉತ್ತಮ ಜಾತಿಯನ್ನು ಹೊಂದಿದ ಆ ವ್ಯಕ್ತಿಯನ್ನು ದುಷ್ಕರ್ಮಗಳು ಪತಿತನನ್ನಾಗಿ ಮಾಡುತ್ತವೆ. ಆದ್ದರಿಂದ ದೂಷಿತವಾದ ಕರ್ಮಗಳನ್ನು ಆಚರಿಸುವುದು ಎಂದೂ ಮಂಗಳಕರವಾದುದಲ್ಲ.

ಜನಕಃ

ಕಾನಿ ಕರ್ಮಾಣಿ ಧರ್ಮ್ಯಾಣಿ ಲೋಕೇऽಸ್ಮಿನ್ ದ್ವಿಜಸತ್ತಮ ।
ನ ಹಿಂಸಂತೀಹ ಭೂತಾನಿ ಕ್ರಿಯಮಾಣಾನಿ ಸರ್ವದಾ ॥೩೫॥

ಜನಕ– ಬ್ರಾಹ್ಮಣಶ್ರೇಷ್ಠರೇ, ಸಮಸ್ತ ಕಾಲಗಳಲ್ಲಿಯೂ ಆಚರಿಸಲು ಯೋಗ್ಯವಾದ, ಧರ್ಮಯುಕ್ತವಾದ ಕರ್ಮಗಳು ಯಾವುವು? ಯಾವ ಪ್ರಾಣಿಗಳಿಗೂ ಹಿಂಸೆಯಾಗದಿರುವಂತೆ ಯಾವ ಧರ್ಮಕಾರ್ಯಗಳನ್ನು ಯಾವಾಗಲೂ ಆಚರಿಸಬೇಕು?

ಪರಾಶರಃ

ಶೃಣು ಮೇऽತ್ರ ಮಹಾರಾಜ ಯನ್ಮಾಂ ತ್ವಂ ಪರಿಪೃಚ್ಛಸಿ ।
ಯಾನಿ ಕರ್ಮಾಣ್ಯಹಿಂಸ್ರಾಣಿ ನರಂ ತ್ರಾಯಂತಿ ಸರ್ವದಾ ॥೩೬॥

ಪರಾಶರ– ಮಹಾರಾಜನೇ, ನೀನು ಯಾವ ಧರ್ಮಕಾರ್ಯಗಳ ವಿಷಯದಲ್ಲಿ ಪ್ರಶ್ನೆ ಮಾಡಿರುತ್ತೀಯೋ ಅದನ್ನು ಹೇಳುತ್ತೇನೆ. ಯಾವ ಕರ್ಮಗಳು ಅಹಿಂಸಾ ಕರ್ಮಗಳಾಗಿವೆ, ರಕ್ಷಕ ಕರ್ಮಗಳ್ಯಾವುವು ಎಂಬುದನ್ನು ಕ್ರಮವಾಗಿ ತಿಳಿಸುತ್ತೇನೆ.

ಸಂನ್ಯಸ್ಯಾಗ್ನೀನುಪಾಸೀನಾಃ ಪಶ್ಯಂತಿ ವಿಗತಜ್ವರಾಃ ।
ನೈಃಶ್ರೇಯಸಂ ಧರ್ಮಪಥಂ ಸಮಾರುಹ್ಯ ಯಥಾಕ್ರಮಮ್ ॥೩೭॥

ಪ್ರಶ್ರಿತಾ ವಿನಯೋಪೇತಾ ದಮನಿತ್ಯಾಃ ಸುಸಂಶಿತಾಃ ।
ಪ್ರಯಾಂತಿ ಸ್ಥಾನಮಜರಂ ಸರ್ವಕರ್ಮವಿವರ್ಜಿತಾಃ ॥೩೮॥

ಯಾರು ಅಗ್ನಿಯನ್ನು ಆತ್ಮಾರೋಪಣೆ ಮಾಡಿಕೊಂಡು ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿ ಜಗತ್ತೆಲ್ಲವನ್ನೂ ಸ್ಥಿತಪ್ರಜ್ಞರಾಗಿ ಕಾಣುತ್ತಾರೋ, ಎಲ್ಲವಿಧವಾದ ಚಿಂತೆಯಿಂದ ರಹಿತರಾಗಿ ಶಾಸ್ತ್ರವಿಹಿತವಾದ ಇಂದ್ರಿಯನಿಗ್ರಹ ಮೊದಲಾದ ಗುಣಗಳಿಂದ ಮುಕ್ತಿಯೋಗ್ಯವಾದ ಕರ್ಮಗಳನ್ನು ಮಾಡುತ್ತಿರುತ್ತಾರೋ ಅವರು ಸರ್ವಕರ್ಮಗಳಿಂದಲೂ ಬಂಧಿತರಾಗದೆ ಎಂದೂ ನಾಶವಿಲ್ಲದೆ ಇರುವ ನಿತ್ಯವಾದ ಸ್ಥಾನವನ್ನು ಹೊಂದುತ್ತಾರೆ.

ಸರ್ವೇ ವರ್ಣಾ ಧರ್ಮಕಾರ್ಯಾಣಿ ಸಮ್ಯಕ್
ಕೃತ್ವಾ ರಾಜನ್ ಸತ್ಯವಾಕ್ಯಾನಿ ಚೋಕ್ತ್ವಾ ।

ತ್ಯಕ್ತ್ವಾ ಧರ್ಮಂ ದಾರುಣಂ ಜೀವಲೋಕೇ
ಯಾಂತಿ ಸ್ವರ್ಗಂ ನಾತ್ರ ಕಾರ್ಯೋ ವಿಚಾರಃ ॥೩೯॥

ಜನಕರಾಜನೇ, ಈ ಜಗತ್ತಿನಲ್ಲಿ ಸಮಸ್ತ ವರ್ಣದವರೂ ಭಯಾನಕ ಪಾಪ ಕರ್ಮಗಳನ್ನು ಸಂಪೂರ್ಣವಾಗಿ ತ್ಯಜಿಸಿ ಸ್ವವರ್ಣೋಚಿತವಾದ ಧರ್ಮ ಕಾರ್ಯಗಳನ್ನು ಮಾಡುತ್ತಾ ಸತ್ಯನಿಷ್ಠರಾಗಿದ್ದರೆ ಅವರು ಸತ್ತ ಬಳಿಕ ಸ್ವರ್ಗವನ್ನೇ ಸೇರುತ್ತಾರೆ. ಇದರಲ್ಲಿ ವಿಚಾರ ಮಾಡುವ ಅಂಶವು ಇರುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಾವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತನೆಯ ಅಧ್ಯಾಯ

ಪರಾಶರ ಗೀತಾ.

ಪರಾಶರಃ

ಪಿತಾ ಸಖಾಯೋ ಗುರವಃ ಸ್ತ್ರಿಯಶ್ಚ
ನ ನಿರ್ಗುಣಾ ನಾಮ ಭವಂತಿ ಲೋಕೇ ।
ಅನನ್ಯಭಕ್ತಾಃ ಪ್ರಿಯವಾದಿನಶ್ಚ
ಹಿತಾಶ್ಚ ವಶ್ಯಾಶ್ಚ ತಥೈವ ರಾಜನ್ ॥೧॥

ಪರಾಶರ– ಜನಕರಾಜನೇ, ಯಾರು ಗುಣಗಳಿಂದ ಹೀನರಾಗಿರುತ್ತಾರೋ ಅವರ ಪಾಲಿಗೆ ತಂದೆ, ಸ್ನೇಹಿತರು, ಗುರುಗಳು, ಸ್ತ್ರೀಯರು ಯಾರೂ ಹಿತಚಿಂತಕರಾಗಿರುವುದಿಲ್ಲ. ಯಾರು ಇವರ ವಿಷಯದಲ್ಲಿ ಸನ್ನಡತೆಯುಳ್ಳವರಾಗಿ, ಪ್ರಿಯವಾದ ಮಾತುಗಳನ್ನಾಡುವವರಾಗಿ ಭಗವಂತನಲ್ಲಿ ಅನನ್ಯ ಭಕ್ತಿಯುಳ್ಳವರಾಗಿರುತ್ತಾರೋ ಅವರಿಗೆ ತಂದೆ, ಸ್ನೇಹಿತ, ಗುರುಗಳು, ಸ್ತ್ರೀಯರು ಎಲ್ಲರೂ ಅಧೀನರಾಗಿಯೂ ಹಿತಕಾರಿಗಳಾಗಿಯೂ ಇರುತ್ತಾರೆ.

ಪಿತಾ ಪರಂ ದೈವತಂ ಮಾನವಾನಾಂ
ಮಾತುರ್ವಿಶಿಷ್ಟಂ ಪಿತರಂ ವದಂತಿ ।

ಜ್ಞಾನಸ್ಯ ಲಾಭಂ ಪರಮಂ ವದಂತಿ
ಜಿತೇಂದ್ರಿಯಾರ್ಥಾಃ ಪರಮಾಪ್ನುವಂತಿ ॥೨॥

ಮಾನವರಿಗೆಲ್ಲ ತಂದೆಯೇ ಪರದೈವತೆ ಎನಿಸಿದ್ದಾನೆ. ತಾಯಿಗಿಂತಲೂ ಅಧಿಕವಾದ ಮಹತ್ವವುಳ್ಳವನು ತಂದೆಯು. ಕಾರಣ ತತ್ತ್ವಜ್ಞಾನವನ್ನು ನೀಡುವ ಅರ್ಹತೆಯುಳ್ಳವನು ತಂದೆಯಾಗಿರುತ್ತಾನೆ. ನಿಜವಾದ ಲಾಭವು ಜ್ಞಾನಲಾಭವೇ ಎನಿಸಿದೆ. ಈ ಜ್ಞಾನಲಾಭದಿಂದ ಜಿತೇಂದ್ರಿಯರಾಗಿ ಪದಾರ್ಥಗಳನ್ನು ಅಧೀನ ಪಡಿಸಿಕೊಂಡು ಸರ್ವೋತ್ತಮನಾದ ಭಗವಂತನನ್ನೇ ಹೊಂದುತ್ತಾರೆ.

ರಣಾಜಿರೇ ಯತ್ರ ಶರಾಗ್ನಿಸಂಸ್ತರೇ
ನೃಪಾತ್ಮಜೋ ಘಾತಮವಾಪ್ಯ ದಹ್ಯತೇ ।
ಪ್ರಯಾತಿ ಲೋಕಾನಮರೈಃ ಸುದುರ್ಲಭಾನ್
ನಿಷೇವತೇ ಸ್ವರ್ಗಫಲಂ ಯಥಾಸುಖಮ್ ॥೩॥

ರಣರಂಗದಲ್ಲಿ ಘಾಸಿಗೊಂಡು ಬಾಣರೂಪವಾದ ಚಿತಾಗ್ನಿಯಲ್ಲಿ ದಗ್ಧನಾಗುವ ಕ್ಷತ್ರಿಯನ ಮಗನು ದೇವತೆಗಳಿಂದಲೂ ಹೊಂದಲು ದುಸ್ಸಾಧ್ಯವಾದ ಪುಣ್ಯ ಲೋಕಗಳಿಗೆ ಹೋಗುತ್ತಾನೆ. ಆ ಸ್ವರ್ಗದಲ್ಲಿ ಇರುವ ಸುಖ ಫಲಗಳನ್ನು ಸಂತೋಷದಿಂದ ಅನುಭವಿಸುತ್ತಾನೆ.

ಶ್ರಾಂತಂ ಭೀತಂ ಭ್ರಷ್ಟಶಸ್ತ್ರಂ ರುದಂತಂ
ಪರಾಙ್ಮುಖಂ ಪರಿಬರ್ಹ್ಯೇಶ್ಚ ಹೀನಮ್ ।
ಅನುದ್ಯತಂ ರೋಗಿಣಂ ಯಾಚಮಾನಂ
ನ ವೈ ಹಿಂಸ್ಯಾದ್ ಬಾಲವೃದ್ಧೌ ಚ ರಾಜನ್ ॥೪॥

ಯಾರು ತುಂಬಾ ಬಳಲಿದ್ದಾರೋ, ಹೆದರಿದ್ದಾರೋ, ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡಿದ್ದಾರೋ, ರೋದಿಸುತ್ತಿದ್ದಾರೋ, ಯುದ್ಧಭೂಮಿಯಿಂದ ಹಿಮ್ಮೆಟ್ಟಿ ಓಡುತ್ತಿದ್ದಾರೋ, ಯುದ್ಧ ಸಾಮಗ್ರಿಗಳಿಂದ ಮತ್ತು ಸೇವಕರಿಂದ ಹೀನರಾಗಿದ್ದಾರೋ, ಯುದ್ಧ ಪ್ರಯತ್ನದಲ್ಲಿ ನಿರತರಾಗಿರುವುದಿಲ್ಲವೋ, ರೋಗಿಗಳಾಗಿದ್ದಾರೋ, ಪ್ರಾಣ ಭಿಕ್ಷೆಯನ್ನು ಬೇಡುತ್ತಿದ್ದಾರೋ ಅಥವಾ ಬಾಲಕ ಹಾಗೂ ವೃದ್ಧರಾಗಿದ್ದಾರೋ ಇವರನ್ನು ರಾಜನೇ, ಎಂದಿಗೂ ಹಿಂಸಿಸಬಾರದು.

ಪರಿಬರ್ಹೈಃ ಸುಸಂಪನ್ನಮುದ್ಯತಂ ತುಲ್ಯತಾಂ ಗತಮ್ ।
ಅತಿಕ್ರಮೇತ ನೃಪತಿಃ ಸಂಗ್ರಾಮೇ ಕ್ಷತ್ರಿಯಾತ್ಮಜಮ್ ॥೫॥

ಯುದ್ಧದ ಸಾಮಗ್ರಿಗಳು, ಸೇವಕರು, ಅನುಚರರಿಂದ ಕೂಡಿರುವ, ಯುದ್ಧ ಮಾಡಲು ಸಿದ್ಧರಾಗಿರುವ, ತನಗೆ ಸಮಾನರಾಗಿರುವ ಕ್ಷತ್ರಿಯ ಪುತ್ರನನ್ನೇ ರಾಜನಾದವನು ಎದುರಿಸಬೇಕು.

ತುಲ್ಯಾದಿಹ ವಧಃ ಶ್ರೇಯಾನ್ ವಿಶಿಷ್ಟಾಚ್ಚೇತಿ ನಿಶ್ಚಯಃ ।
ನಿಹೀನಾತ್ ಕಾತರಾಚ್ಚೈವ ನೃಪಾಣಾಂ ಗರ್ಹಿತೋ ವಧಃ ॥೬॥

ತನಗೆ ಸಮಾನನಾದ ವ್ಯಕ್ತಿಯಿಂದ ಅಥವಾ ತನಗಿಂತಲೂ ಬಲಿಷ್ಠನಾದವನಿಂದ ಯಾವನು ಸಾವನ್ನಪ್ಪುತ್ತಾನೋ ಅವನಿಗೆ ಶ್ರೇಯಸ್ಸು ದೊರೆಯುತ್ತದೆ. ತನಗಿಂತ ಹೀನನಾದವನಿಂದ, ಹೇಡಿಯಿಂದ, ಕೃಪಣನಿಂದ ವಧ್ಯನಾದವನು ನಿಂದ್ಯನಾಗುತ್ತಾನೆ.

ಪಾಪಾತ್ ಪಾಪಸಮಾಚಾರಾನ್ನಿಹೀನಾಚ್ಚ ನರಾಧಿಪ ।
ಪಾಪ ಏವ ವಧಃ ಪ್ರೋಕ್ತೋ ನರಕಾಯೇತಿ ನಿಶ್ಚಯಃ ॥೭॥

ಪಾಪಿಷ್ಠರಿಂದಲೂ, ಪಾಪಾಚಾರಗಳಿಂದ ಕೂಡಿದವರಿಂದಲೂ, ನೀಚ ಪುರುಷನಿಂದಲೂ ವಧೆಗೀಡಾಗುವವನು ಪಾಪಕ್ಕೇ ತುತ್ತಾಗುತ್ತಾನೆ. ಅಂತಹವರಿಂದ ಮರಣವನ್ನು ಹೊಂದುವವರು ನರಕಕ್ಕೇ ಹೋಗುತ್ತಾರೆಂಬುದು ನಿಶ್ಚಯವು.

ನ ಕಶ್ಚಿತ್ ತ್ರಾತಿ ವೈ ರಾಜನ್ ದಿಷ್ಟಾಂತವಶಮಾಗತಮ್ ।
ಸಾವಶೇಷಾಯುಷಂ ಚಾಪಿ ಕಶ್ಚಿದೇವಾಪಕರ್ಷತಿ ॥೮॥

ಜನಕರಾಜನೇ, ಮೃತ್ಯುವಿಗೆ ವಶರಾಗಿರುವ ಮನುಷ್ಯನನ್ನು ಯಾರೇ ಆದರೂ ಉದ್ಧರಿಸಲು ಸಾಧ್ಯವಿಲ್ಲ. ಅದರಂತೆ ಆಯುಷ್ಯದ ಶೇಷವು ಇನ್ನೂ ಉಳಿದಿರುವವರನ್ನು ಯಾರಿಂದಲೂ ಸಂಹರಿಸಲೂ ಸಾಧ್ಯವಿಲ್ಲ.

ಸ್ನಿಗ್ಧೈಶ್ಚ ಕ್ರಿಯಮಾಣಾನಿ ಕರ್ಮಾಣೀಹ ನಿವರ್ತಯೇತ್ ।
ಹಿಂಸಾತ್ಮಕಾನಿ ಕರ್ಮಾಣಿ ನಾಯುರಿಚ್ಛೇತ್ ಪರಾಯುಷಾ ॥೯॥

ತನ್ನ ಪ್ರೀತಿಪಾತ್ರರಾದ ಜನರೇ ಹಿಂಸಾಕಾರ್ಯಗಳಲ್ಲಿ ತಮ್ಮನ್ನು

ತೊಡಗಿಸಿಕೊಂಡಿದ್ದರೆ ಅವರನ್ನು ಆ ಕಾರ್ಯಗಳಿಂದ ತಡೆಯಬೇಕು. ಇನ್ನೊಬ್ಬರ ಆಯುಷ್ಯವನ್ನು ನಾಶಪಡಿಸಿ ತಾನು ಬದುಕಲು ಎಂದೂ ಇಚ್ಛಿಸಬಾರದು.

ಗೃಹಸ್ಥಾನಾಂ ತು ಸರ್ವೇಷಾಂ ವಿನಾಶಮಭಿಕಾಂಕ್ಷತಾಮ್ ।
ನಿಧನಂ ಶೋಭನಂ ತಾತ ಪುಳಿನೇಷು ಕ್ರಿಯಾವತಾಮ್ ॥೧೦॥

ನಿತ್ಯ ಕರ್ಮಗಳನ್ನು ಮಾಡಲು ಸಾಮರ್ಥ್ಯವಿಲ್ಲದೆ ಮರಣವನ್ನು ಬಯಸುವಂತಹ ಗೃಹಸ್ಥರಿಗೆ ನದಿತೀರಗಳಲ್ಲಿ ಹೋಗಿ ಶುಭಕರ್ಮಗಳನ್ನು ಆಚರಿಸುತ್ತಿರುವಾಗಲೇ ಮರಣವನ್ನು ಹೊಂದುವುದು ಶ್ರೇಯಸ್ಕರವಾದುದು.

ಆಯುಷಿ ಕ್ಷಯಮಾಪನ್ನೇ ಪಂಚತ್ವಮುಪಗಚ್ಛತಿ ।
ನಾಕಾರಣಾತ್ತದ್ಭವತಿ ಕಾರಣೈರುಪಪಾದಿತಮ್ ॥೧೧॥

ಆಯುಷ್ಯವು ಮುಗಿದ ಕೂಡಲೇ ಮನುಷ್ಯನು ಮರಣವನ್ನು ಹೊಂದುತ್ತಾನೆ. ಕೆಲವೊಮ್ಮೆ ಯಾವ ಕಾರಣವೂ ಇಲ್ಲದೆಯೇ ಮರಣವು ಸಂಭವಿಸುವಂತೆ ರೋಗಾದಿ ಕಾರಣದಿಂದಲೂ ಮರಣವು ಸಂಭವಿಸುತ್ತದೆ.

ತಥಾ ಶರೀರಂ ಭವತಿ ದೇಹಾದ್ಯೇನೋಪಪಾದಿತಮ್ ।
ಅಧ್ವಾನಂ ಗತಕಶ್ಚಾಯಂ ಪ್ರಾಪ್ತಶ್ಚಾಯಂ ಗೃಹಾದ್ ಗೃಹಮ್ ॥೧೨॥

ಮನುಷ್ಯನಿಂದ ಪ್ರಯತ್ನಪೂರ್ವಕವಾಗಿಯೇ ಶರೀರದ ತ್ಯಾಗವು ಮಾಡಿಕೊಂಡಲ್ಲಿ ಅವನು ಕರ್ಮಕ್ಕೆ ಅನುಗುಣವಾದ ಗತಿಯನ್ನು ಹೊಂದದೆ ಇನ್ನೊಂದು ದೇಹವನ್ನು ಮಧ್ಯದಲ್ಲಿಯೇ ಹೊಂದುತ್ತಾನೆ. ಸರಿಯಾದ ಸದ್ಗತಿಯನ್ನು ಪಡೆಯದೆ ಮತ್ತೊಬ್ಬರ ದೇಹವನ್ನು ಪ್ರವೇಶಿಸುತ್ತಾನೆ ಎಂದು ಭಾವ. ಮತ್ತೊಂದು ದೇಹದಿಂದ ಇನ್ನೊಂದು ದೇಹಕ್ಕೆ ಹೋಗುತ್ತಿರುತ್ತಾನೆ.

ದ್ವಿತೀಯಂ ಕಾರಣಂ ತತ್ರ ನಾನ್ಯತ್ ಕಿಂಚನ ವಿದ್ಯತೇ ।
ತದ್ದೇಹಂ ದೇಹಿನಾಂ ಯುಕ್ತಂ ಮೋಕ್ಷಭೂತೇಷು ವರ್ತತೇ ॥೧೩॥

ಬೇರೆ ದೇಹವನ್ನು ಹೊಂದಲು ದೇಹವನ್ನು ತ್ಯಾಗ ಮಾಡಿಕೊಂಡಿರುವ ದೋಷವೇ ಕಾರಣವಾಗಿದೆ. ಬೇರೆ ಯಾವ ಕಾರಣವೂ ಇರುವುದಿಲ್ಲ. ಆಯುಸ್ಸಿನ ಶೇಷವನ್ನು

ಹೊಂದುವಂತಹ ಹೊಸ ದೇಹವು ಭೂತಗಳಿಗೂ ಪಿಶಾಚಿಗಳಿಗೂ ಸಂಬಂಧಿಸಿರುವಂತಹದ್ದು.

ಸಿರಾಸ್ನಾಯ್ವಸ್ಥಿಸಂಘಾತಂ ಬೀಭತ್ಸಾಮೇಧ್ಯಸಂಕುಲಮ್ ।
ಭೂತಾನಾಮಿಂದ್ರಿಯಾಣಾಂ ಚ ಗುಣಾನಾಂ ಚ ಸಮಾಗಮಮ್ ॥೧೪॥

ನಮ್ಮ ಶರೀರವನ್ನು ಅಧ್ಯಾತ್ಮ ಚಿಂತಕರಾದ ವಿದ್ವಾಂಸರು ಅಸ್ಥಿ-ಮಾಂಸ-ನರ ಇವುಗಳ ಸಂಘಾತವೆಂದು, ಜುಗುಪ್ಸೆಗೆ ಕಾರಣವಾದ ಅಶುದ್ಧ ಪದಾರ್ಥಗಳ ಮಿಶ್ರಣವೆಂದು, ಪಂಚಭೂತಗಳ, ಇಂದ್ರಿಯಗಳ ಮತ್ತು ಸತ್ತಾ ತ್ವದಿಗಳ ಸಮುದಾಯವೆಂದು ಹೇಳುತ್ತಾರೆ.

ತ್ವಗಂತಂ ದೇಹಮಿತ್ಯಾಹುರ್ವಿದ್ವಾಂಸೋಽಧ್ಯಾತ್ಮಚಿಂತಕಾಃ ।
ಗುಣೈರಪಿ ಪರಿಕ್ಷೀಣಂ ಶರೀರಂ ಮರ್ತ್ಯತಾಂ ಗತಮ್ ॥೧೫॥

ಈ ಎಲ್ಲದರ ಮೇಲೆ ಚರ್ಮಗಳ ಹೊದಿಕೆಯಿಂದ ಈ ಶರೀರವು ಮುಚ್ಚಲ್ಪಟ್ಟಿದೆ ಎಂದು ಹೇಳುತ್ತಾರೆ. ವಾಸ್ತವಿಕವಾಗಿ ಯಾವ ಗುಣಗಳಾಗಲಿ, ಸೌಂದರ್ಯವಾಗಲಿ ಇಲ್ಲದಿರುವಂತೆ ಜೋಡಣೆಯನ್ನು ಹೊಂದಿರುವಂತಹ ಶರೀರವು ಪೂರ್ವಜನ್ಮದ ಪರಿಪಾಕದಿಂದ ಮನುಷ್ಯಜನ್ಮವನ್ನು ಹೊಂದಿರುತ್ತದೆ.

ಶರೀರಿಣಾ ಪರಿತ್ಯಕ್ತಂ ನಿಶ್ಚೇಷ್ಟಂ ಗತಚೇತನಮ್ ।
ಭೂತೈಃ ಪ್ರಕೃತಿಮಾಪನ್ನೈಸ್ತತೋ ಭೂಮೌ ನಿಮಜ್ಜತಿ ॥೧೬॥

ಜೀವನು ಆ ಶರೀರವನ್ನು ತೊರೆದಾಗ ಅದು ಚೈತನ್ಯವಿಲ್ಲದೆ ನಿಶ್ಚೇಷ್ಟಿತವಾಗಿರುತ್ತದೆ. ಪಂಚಭೂತಗಳು ತಮ್ಮ ಮೂಲ ಕಾರಣಗಳಲ್ಲಿ ಲಯ ಹೊಂದಿದಾಗ ದೇಹವೂ ಭೂಮಿಯಲ್ಲಿ ಮಣ್ಣಾಗಿ ಹೋಗುತ್ತದೆ.

ಭಾವಿತಂ ಕರ್ಮಯೋಗೇನ ಜಾಯತೇ ತತ್ರ ತತ್ರ ಹ ।
ಇದಂ ಶರೀರಂ ವೈದೇಹ ಮ್ರಿಯತೇ ಯತ್ರ ತತ್ರ ಹ ।
ತತ್ಸ್ವಭಾವೋಽಪರೋ ದೃಷ್ಟೋ ವಿಸರ್ಗಃ ಕರ್ಮಣಸ್ತಥಾ ॥೧೭॥

ನ ಜಾಯತೇ ತು ನೃಪತೇ ಕಂಚಿತ್ ಕಾಲಮಯಂ ಪುನಃ ।
ಪರಿಭ್ರಮತಿ ಭೂತಾತ್ಮಾ ದ್ಯಾಮಿವಾಂಬುಧರೋ ಮಹಾನ್ ॥೧೮॥

ಈ ಶರೀರವು ಯಾವ ಯಾವ ಸ್ಥಿತಿಯಲ್ಲಿ ಮರಣವನ್ನು ಹೊಂದುತ್ತದೋ ಆಯಾ ಕರ್ಮಕ್ಕೆ ಅನುಗುಣವಾದ ದೇಹದ ಜೊತೆಗೆ ಪುನಃ ಹುಟ್ಟನ್ನು ಹೊಂದುತ್ತದೆ. ಆ ದೇಹದಲ್ಲಿ ತಾನು ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳ ಫಲವನ್ನು ಅನುಭವಿಸುತ್ತದೆ. ಜೀವನು ತನ್ನ ಹಿಂದಿನ ದೇಹವನ್ನು ಬಿಟ್ಟ ಕೂಡಲೇ ಇನ್ನೊಂದು ದೇಹದಿಂದ ಉತ್ಪತ್ತಿಯನ್ನು ಹೊಂದುವುದಿಲ್ಲ. ಸ್ವಲ್ಪ ಕಾಲದ ತನಕ ಆಕಾಶದಲ್ಲಿ ಸಂಚರಿಸುತ್ತಿರುವ ಮೇಘದ ಜಲದಂತೆ ಸುತ್ತುತ್ತಿರುತ್ತಾನೆ.

ಸ ಪುನರ್ಜಾಯತೇ ರಾಜನ್ ಪ್ರಾಪ್ಯೇಹಾಯತನಂ ನೃಪ ।
ಮನಸಃ ಪರಮೋ ಹ್ಯಾತ್ಮಾ ಇಂದ್ರಿಯೇಭ್ಯಃ ಪರಂ ಮನಃ ॥೧೯॥

ಪುನಃ ಒಂದು ಸ್ಥಾನವನ್ನು ಆಶ್ರಯಿಸಿ ಆ ಜೀವನು ಜನ್ಮ ಹೊಂದುತ್ತಾನೆ. ಆತ್ಮವು ಮನಸ್ಸಿಗಿಂತ ಮಿಗಿಲಾದುದು. ಮನಸ್ಸು ಇಂದ್ರಿಯಗಳಿಗಿಂತಲೂ ಮಿಗಿಲಾದುದು.

ದ್ವಿವಿಧಾನಾಂ ಚ ಭೂತಾನಾಂ ಜಂಗಮಾಃ ಪರಮಾ ನೃಪ ।
ಜಂಗಮಾನಾಮಪಿ ತಥಾ ದ್ವಿಪದಾಃ ಪರಮಾ ಮತಾಃ ।
ದ್ವಿಪದಾನಾಮಪಿ ತಥಾ ದ್ವಿಜಾ ವೈ ಪರಮಾಃ ಸ್ಮೃತಾಃ ॥೨೦॥

ಜಗತ್ತಿನಲ್ಲಿರುವ ಸ್ಥಾವರ-ಜಂಗಮ ಪ್ರಾಣಿಗಳಲ್ಲಿ ಸ್ಥಾವರಗಳು, ವೃಕ್ಷವೇ ಮೊದಲಾದ ಪ್ರಾಣಿಗಳಿಗಿಂತಲೂ ಚಲಿಸುವ ಪ್ರಾಣಿಗಳು ಶ್ರೇಷ್ಠವಾದವುಗಳು. ಅವುಗಳಲ್ಲಿಯೂ ಎರಡು ಕಾಲುಗಳಿರುವ ಪ್ರಾಣಿಗಳು ಶ್ರೇಷ್ಠವೆಂದು ಹೇಳುತ್ತಾರೆ. ಎರಡು ಕಾಲುಗಳಿರುವ ಮನುಷ್ಯರಲ್ಲಿಯೂ ದ್ವಿಜರು ಶ್ರೇಷ್ಠರೆಂಬುದು ಪ್ರಸಿದ್ಧವಾದುದು.

ದ್ವಿಜಾನಾಮಪಿ ರಾಜೇಂದ್ರ ಪ್ರಜ್ಞಾವಂತಃ ಪರಾ ಮತಾಃ ।
ಪ್ರಾಜ್ಞಾನಾಮಾತ್ಮಸಂಬುದ್ಧಾಃ ಸಂಬುದ್ಧಾನಾಮಮಾನಿನಃ ॥೨೧॥

ರಾಜನೇ, ಆ ದ್ವಿಜರಲ್ಲಿಯೂ ಪ್ರಜ್ಞಾವಂತರು ಶ್ರೇಷ್ಠರು. ಪ್ರಜ್ಞಾವಂತರಲ್ಲಿಯೂ ಆತ್ಮಜ್ಞಾನಿಗಳು ಶ್ರೇಷ್ಠರು. ಆತ್ಮಜ್ಞಾನಿಗಳಲ್ಲಿಯೂ ನಿರಂಹಕಾರಿಗಳು ಪರಮಶ್ರೇಷ್ಠರು.

ಜಾತಮನ್ವೇತಿ ಮರಣಂ ನೃಣಾಮಿತಿ ವಿನಿಶ್ಚಯಃ ।
ಅಂತವಂತಿ ಹಿ ಕರ್ಮಾಣಿ ಸೇವಂತೇ ಗುಣತಃ ಪ್ರಜಾಃ ॥೨೨॥

ಮನುಷ್ಯನಾಗಿ ಹುಟ್ಟಿದ ಕೂಡಲೇ ಮರಣವು ಅವನನ್ನು ಹಿಂಬಾಲಿಸುತ್ತದೆ ಎಂಬುದು ದೃಢವಾದ ನಿಶ್ಚಯವು. ಸಮಸ್ತ ಪ್ರಜೆಗಳು ಸತ್ವಾದಿಗುಣಗಳಿಂದ ಪ್ರೇರಿತರಾಗಿ ಅಶಾಶ್ವತವಾದ ಫಲಗಳನ್ನು ನೀಡುವ ಕರ್ಮಗಳನ್ನು ಆಚರಿಸುತ್ತಿರುತ್ತಾರೆ.

ಆಪನ್ನೇ ತೂತ್ತರಾಂ ಕಾಷ್ಠಾಂ ಸೂರ್ಯೇ ಯೋ ನಿಧನಂ ವ್ರಜೇತ್ ।
ನಕ್ಷತ್ರೇ ಚ ಮುಹೂರ್ತೇ ಚ ಪುಣ್ಯೇ ರಾಜನ್ ಸ ಪುಣ್ಯಕೃತ್ ॥೨೩॥

ಅಯೋಜಯಿತ್ವಾ ಕ್ಲೇಶೇನ ಜನಂ ಪ್ಲಾವ್ಯ ಚ ದುಷ್ಕೃತಮ್ ।
ಮೃತ್ಯುನಾ ಪ್ರಾಕೃತೇನೇಹ ಕರ್ಮ ಕೃತ್ವಾತ್ಮಶಕ್ತಿತಃ ॥೨೪॥

ಸೂರ್ಯನು ಉತ್ತರ ದಿಕ್ಕಿನ ಕಡೆ ತಿರುಗಿದ ಬಳಿಕ ಉತ್ತರಾಯಣದಲ್ಲಿ ಉತ್ತಮ ನಕ್ಷತ್ರದಲ್ಲಿ, ಉತ್ತಮ ಮುಹೂರ್ತದಲ್ಲಿ ಮರಣವನ್ನಪ್ಪುವವನು ಪುಣ್ಯಾತ್ಮನೆನಿಸಿದ್ದಾನೆ. ಯಾರಿಗೂ ಕಷ್ಟವನ್ನು ನೀಡದೆ ಪ್ರಾಯಶ್ಚಿತ್ತಗಳ ಮೂಲಕ ತನ್ನ ಪಾಪಗಳನ್ನು ಪರಿಹರಿಸಿಕೊಂಡು, ಪುಣ್ಯಕರ್ಮಗಳನ್ನಾಚರಿಸಿ, ಪೂರ್ವಕರ್ಮ ಸ್ವಭಾವಕ್ಕನುಗುಣವಾಗಿ ಯಾವನು ಮರಣವನ್ನಪ್ಪುತ್ತಾನೋ ಅವನು ಪುಣ್ಯಪುರುಷನೆಂದು ತಿಳಿಯಬೇಕು.

ವಿಷಮುದ್‌ಬಂಧನಂ ದಾಹೋ ದಸ್ಯುಹಸ್ತಾತ್ ತಥಾ ವಧಃ ।
ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಪ್ರಾಕೃತೋ ವಧ ಉಚ್ಯತೇ ॥೨೫॥

ವಿಷವನ್ನು ಸ್ವೀಕರಿಸಿ ಪ್ರಾಣ ಬಿಡುವುದು, ನೇಣುಹಾಕಿಕೊಂಡು ಸಾಯುವುದು, ಬೆಂಕಿಯಲ್ಲಿ ಬಿದ್ದು ಸಾಯುವುದು, ದರೋಡೆಕೋರರಿಂದ ಮರಣವನ್ನಪ್ಪುವುದು, ಕೋರೆ ಹಲ್ಲುಗಳನ್ನು ಹೊಂದಿರುವ ಹುಲಿ-ಸಿಂಹ ಇತ್ಯಾದಿ ದುಷ್ಟ ಪ್ರಾಣಿಗಳಿಂದ ಪ್ರಾಣ ಬಿಡುವುದು ಇವೆಲ್ಲವನ್ನು ಅಧಮ ಮರಣವೆನ್ನುತ್ತಾರೆ.

ನ ಚೈಭಿಃ ಪುಣ್ಯಕರ್ಮಾಣೋ ಯುಜ್ಯಂತೇ ನಾಭಿಸಂಧಿಜೈಃ ।
ಏವಂವಿಧೈಶ್ಚ ಬಹುಭಿರಪರೈಃ ಪ್ರಾಕೃತೈರಪಿ ॥೨೬॥

ಪುಣ್ಯಕರ್ಮವನ್ನು ಹೊಂದಿರುವ ಮನುಷ್ಯರು ಈ ವಿಧವಾದ ಉಪಾಯಗಳಿಂದಲೂ, ಇದೇ ವಿಧವಾದ ಅನೇಕ ಅಧಮ ಉಪಾಯಗಳಿಂದಲೂ ಪ್ರಾಣವನ್ನು ತ್ಯಜಿಸಲು ಇಚ್ಛಿಸುವುದಿಲ್ಲ.

ಈ ಶರೀರವು ಯಾವ ಯಾವ ಸ್ಥಿತಿಯಲ್ಲಿ ಮರಣವನ್ನು ಹೊಂದುತ್ತದೋ ಆಯಾ ಕರ್ಮಕ್ಕೆ ಅನುಗುಣವಾದ ದೇಹದ ಜೊತೆಗೆ ಪುನಃ ಹುಟ್ಟನ್ನು ಹೊಂದುತ್ತದೆ. ಆ ದೇಹದಲ್ಲಿ ತಾನು ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳ ಫಲವನ್ನು ಅನುಭವಿಸುತ್ತದೆ. ಜೀವನು ತನ್ನ ಹಿಂದಿನ ದೇಹವನ್ನು ಬಿಟ್ಟ ಕೂಡಲೇ ಇನ್ನೊಂದು ದೇಹದಿಂದ ಉತ್ಪತ್ತಿಯನ್ನು ಹೊಂದುವುದಿಲ್ಲ. ಸ್ವಲ್ಪ ಕಾಲದ ತನಕ ಆಕಾಶದಲ್ಲಿ ಸಂಚರಿಸುತ್ತಿರುವ ಮೇಘದ ಜಲದಂತೆ ಸುತ್ತುತ್ತಿರುತ್ತಾನೆ.

ಸ ಪುನರ್ಜಾಯತೇ ರಾಜನ್ ಪ್ರಾಪ್ಯೇಹಾಯತನಂ ನೃಪ ।
ಮನಸಃ ಪರಮೋ ಹ್ಯಾತ್ಮಾ ಇಂದ್ರಿಯೇಭ್ಯಃ ಪರಂ ಮನಃ ॥೧೯॥

ಪುನಃ ಒಂದು ಸ್ಥಾನವನ್ನು ಆಶ್ರಯಿಸಿ ಆ ಜೀವನು ಜನ್ಮ ಹೊಂದುತ್ತಾನೆ. ಆತ್ಮವು ಮನಸ್ಸಿಗಿಂತ ಮಿಗಿಲಾದುದು. ಮನಸ್ಸು ಇಂದ್ರಿಯಗಳಿಗಿಂತಲೂ ಮಿಗಿಲಾದುದು.

ದ್ವಿವಿಧಾನಾಂ ಚ ಭೂತಾನಾಂ ಜಂಗಮಾಃ ಪರಮಾ ನೃಪ ।
ಜಂಗಮಾನಾಮಪಿ ತಥಾ ದ್ವಿಪದಾಃ ಪರಮಾ ಮತಾಃ ।
ದ್ವಿಪದಾನಾಮಪಿ ತಥಾ ದ್ವಿಜಾ ವೈ ಪರಮಾಃ ಸ್ಮೃತಾಃ ॥೨೦॥

ಜಗತ್ತಿನಲ್ಲಿರುವ ಸ್ಥಾವರ-ಜಂಗಮ ಪ್ರಾಣಿಗಳಲ್ಲಿ ಸ್ಥಾವರಗಳು, ವೃಕ್ಷವೇ ಮೊದಲಾದ ಪ್ರಾಣಿಗಳಿಗಿಂತಲೂ ಚಲಿಸುವ ಪ್ರಾಣಿಗಳು ಶ್ರೇಷ್ಠವಾದವುಗಳು. ಅವುಗಳಲ್ಲಿಯೂ ಎರಡು ಕಾಲುಗಳಿರುವ ಪ್ರಾಣಿಗಳು ಶ್ರೇಷ್ಠವೆಂದು ಹೇಳುತ್ತಾರೆ. ಎರಡು ಕಾಲುಗಳಿರುವ ಮನುಷ್ಯರಲ್ಲಿಯೂ ದ್ವಿಜರು ಶ್ರೇಷ್ಠರೆಂಬುದು ಪ್ರಸಿದ್ಧವಾದುದು.

ದ್ವಿಜಾನಾಮಪಿ ರಾಜೇಂದ್ರ ಪ್ರಜ್ಞಾವಂತಃ ಪರಾ ಮತಾಃ ।
ಪ್ರಾಜ್ಞಾನಾಮಾತ್ಮಸಂಬುದ್ಧಾಃ ಸಂಬುದ್ಧಾನಾಮಮಾನಿನಃ ॥೨೧॥

ರಾಜನೇ, ಆ ದ್ವಿಜರಲ್ಲಿಯೂ ಪ್ರಜ್ಞಾವಂತರು ಶ್ರೇಷ್ಠರು. ಪ್ರಜ್ಞಾವಂತರಲ್ಲಿಯೂ ಆತ್ಮಜ್ಞಾನಿಗಳು ಶ್ರೇಷ್ಠರು. ಆತ್ಮಜ್ಞಾನಿಗಳಲ್ಲಿಯೂ ನಿರಂಹಕಾರಿಗಳು ಪರಮಶ್ರೇಷ್ಠರು.

ಜಾತಮನ್ವೇತಿ ಮರಣಂ ನೃಣಾಮಿತಿ ವಿನಿಶ್ಚಯಃ ।
ಅಂತವಂತಿ ಹಿ ಕರ್ಮಾಣಿ ಸೇವಂತೇ ಗುಣತಃ ಪ್ರಜಾಃ ॥೨೨॥

ಮನುಷ್ಯನಾಗಿ ಹುಟ್ಟಿದ ಕೂಡಲೇ ಮರಣವು ಅವನನ್ನು ಹಿಂಬಾಲಿಸುತ್ತದೆ ಎಂಬುದು ದೃಢವಾದ ನಿಶ್ಚಯವು. ಸಮಸ್ತ ಪ್ರಜೆಗಳು ಸತ್ವಾದಿಗುಣಗಳಿಂದ ಪ್ರೇರಿತರಾಗಿ ಅಶಾಶ್ವತವಾದ ಫಲಗಳನ್ನು ನೀಡುವ ಕರ್ಮಗಳನ್ನು ಆಚರಿಸುತ್ತಿರುತ್ತಾರೆ.

ಆಪನ್ನೇ ತೂತ್ತರಾಂ ಕಾಷ್ಠಾಂ ಸೂರ್ಯೇ ಯೋ ನಿಧನಂ ವ್ರಜೇತ್ ।
ನಕ್ಷತ್ರೇ ಚ ಮುಹೂರ್ತೇ ಚ ಪುಣ್ಯೇ ರಾಜನ್ ಸ ಪುಣ್ಯಕೃತ್ ॥೨೩॥

ಅಯೋಜಯಿತ್ವಾ ಕ್ಲೇಶೇನ ಜನಂ ಪ್ಲಾವ್ಯ ಚ ದುಷ್ಕೃತಮ್ ।
ಮೃತ್ಯುನಾ ಪ್ರಾಕೃತೇನೇಹ ಕರ್ಮ ಕೃತ್ವಾತ್ಮಶಕ್ತಿತಃ ॥೨೪॥

ಸೂರ್ಯನು ಉತ್ತರ ದಿಕ್ಕಿನ ಕಡೆ ತಿರುಗಿದ ಬಳಿಕ ಉತ್ತರಾಯಣದಲ್ಲಿ ಉತ್ತಮ ನಕ್ಷತ್ರದಲ್ಲಿ, ಉತ್ತಮ ಮುಹೂರ್ತದಲ್ಲಿ ಮರಣವನ್ನಪ್ಪುವವನು ಪುಣ್ಯಾತ್ಮನೆನಿಸಿದ್ದಾನೆ. ಯಾರಿಗೂ ಕಷ್ಟವನ್ನು ನೀಡದೆ ಪ್ರಾಯಶ್ಚಿತ್ತಗಳ ಮೂಲಕ ತನ್ನ ಪಾಪಗಳನ್ನು ಪರಿಹರಿಸಿಕೊಂಡು, ಪುಣ್ಯಕರ್ಮಗಳನ್ನಾಚರಿಸಿ, ಪೂರ್ವಕರ್ಮ ಸ್ವಭಾವಕ್ಕನುಗುಣವಾಗಿ ಯಾವನು ಮರಣವನ್ನಪ್ಪುತ್ತಾನೋ ಅವನ್ನು ಪುಣ್ಯಪುರುಷನೆಂದು ತಿಳಿಯಬೇಕು.

ವಿಷಮುದ್‌ಬಂಧನಂ ದಾಹೋ ದಸ್ಯುಹಸ್ತಾತ್ ತಥಾ ವಧಃ ।
ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಪ್ರಾಕೃತೋ ವಧ ಉಚ್ಯತೇ ॥೨೫॥

ವಿಷವನ್ನು ಸ್ವೀಕರಿಸಿ ಪ್ರಾಣ ಬಿಡುವುದು, ನೇಣುಹಾಕಿಕೊಂಡು ಸಾಯುವುದು, ಬೆಂಕಿಯಲ್ಲಿ ಬಿದ್ದು ಸಾಯುವುದು, ದರೋಡೆಕೋರರಿಂದ ಮರಣವನ್ನಪ್ಪುವುದು, ಕೋರೆ ಹಲ್ಲುಗಳನ್ನು ಹೊಂದಿರುವ ಹುಲಿ-ಸಿಂಹ ಇತ್ಯಾದಿ ದುಷ್ಟ ಪ್ರಾಣಿಗಳಿಂದ ಪ್ರಾಣ ಬಿಡುವುದು ಇವೆಲ್ಲವನ್ನು ಅಧಮ ಮರಣವೆನ್ನುತ್ತಾರೆ.

ನ ಚೈಭಿಃ ಪುಣ್ಯಕರ್ಮಾಣೋ ಯುಜ್ಯಂತೇ ನಾಭಿಸಂಧಿಜೈಃ ।
ಏವಂವಿಧೈಶ್ಚ ಬಹುಭಿರಪರೈಃ ಪ್ರಾಕೃತೈರಪಿ ॥೨೬॥

ಪುಣ್ಯಕರ್ಮವನ್ನು ಹೊಂದಿರುವ ಮನುಷ್ಯರು ಈ ವಿಧವಾದ ಉಪಾಯಗಳಿಂದಲೂ, ಇದೇ ವಿಧವಾದ ಅನೇಕ ಅಧಮ ಉಪಾಯಗಳಿಂದಲೂ ಪ್ರಾಣವನ್ನು ತ್ಯಜಿಸಲು ಇಚ್ಛಿಸುವುದಿಲ್ಲ.

ಊರ್ಧ್ವಂ ಹಿತ್ವಾ ಪ್ರತಿಷ್ಠಂತೇ ಪ್ರಾಣಾಃ ಪುಣ್ಯಕೃತಾಂ ನೃಪ ।
ಮಧ್ಯತೋ ಮಧ್ಯಪುಣ್ಯಾನಾಮಧೋ ದುಷ್ಕೃತಕರ್ಮಣಾಮ್ ॥೨೭॥

ಪುಣ್ಯಾತ್ಮರಾದ ಪುರುಷರ ಪ್ರಾಣವು ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ಹೋಗುತ್ತದೆ. ಪುಣ್ಯ-ಪಾಪಗಳನ್ನು ಸಮಾನವಾಗಿ ಆಚರಿಸಿರುವ ವ್ಯಕ್ತಿಗಳ ಪ್ರಾಣವು ಕಣ್ಣು, ಮುಖ, ಮೂಗು, ಕಿವಿಗಳ ಮೂಲಕ ಹೋಗುತ್ತದೆ. ಕೆಟ್ಟ ಕರ್ಮಗಳನ್ನೇ ಮಾಡಿರುವ ಪಾಪಿಷ್ಠರ ಪ್ರಾಣವು ಗುದ-ಉಪಸ್ಥಗಳ ದ್ವಾರಾ ಹೊರಹೋಗುತ್ತದೆ.

ಏಕಃ ಶತ್ರುರ್ನ ದ್ವಿತೀಯೋಽಸ್ತಿ ಶತ್ರು-
ರಜ್ಞಾನತುಲ್ಯಃ ಪುರುಷಸ್ಯ ರಾಜನ್ ।
ಯೇನಾವೃತಃ ಕುರುತೇ ಸಂಪ್ರಯುಕ್ತೋ
ಘೋರಾಣಿ ಕರ್ಮಾಣಿ ಸುದಾರುಣಾನಿ ॥೨೮॥

ಜನಕರಾಜನೇ, ಮನುಷ್ಯರಿಗೆ ತುಂಬಾ ಪ್ರಬಲವಾದ ಶತ್ರು ಅಜ್ಞಾನವೇ ಆಗಿದೆ. ಅಜ್ಞಾನಕ್ಕೆ ಸಮಾನವಾದ ಎರಡನೆಯ ಶತ್ರುವೇ ಮನುಷ್ಯನಿಗಿರುವುದಿಲ್ಲ. ಅಜ್ಞಾನದಿಂದ ಆವರಿಸಲ್ಪಟ್ಟ, ಅಜ್ಞಾನದ ಪ್ರೇರಣೆಗೆ ತುತ್ತಾದ ಮನುಷ್ಯನು ಅತ್ಯಂತ ಭಯಂಕರವಾದ ಕರ್ಮಗಳನ್ನು ಆಚರಿಸುತ್ತಾನೆ.

ಪ್ರಬೋಧನಾರ್ಥಂ ಶ್ರುತಿಧರ್ಮಯುಕ್ತಂ
ವೃದ್ಧಾನುಪಾಸ್ಯಂ ಚ ಭವೇತ ಯಸ್ಯ ।
ಪ್ರಯತ್ನಸಾಧ್ಯೋ ಹಿ ಸ ರಾಜಪುತ್ರ
ಪ್ರಜ್ಞಾ ಶರೇಣೋನ್ಮಥಿತಃ ಪರೈತಿ ॥೨೯॥

ರಾಜಪುತ್ರನೇ, ಶ್ರುತಿಧರ್ಮಗಳಿಂದ ಕೂಡಿರುವಂತಹ ವೃದ್ಧರನ್ನು ತತ್ತ್ವಜ್ಞಾನಕ್ಕೋಸ್ಕರ ಸೇವಿಸಬೇಕು. ಯಾರು ಜ್ಞಾನದ ದೃಷ್ಟಿಯಿಂದ ಉತ್ತಮರನ್ನು ಸೇವಿಸುತ್ತಾರೋ ಮಹಾಪ್ರಯತ್ನದಿಂದ ಅವರಿಗೆ ಸಂಬಂಧಿಸಿದ ಅಜ್ಞಾನವನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಜ್ಞೆ ಎಂಬ ಬಾಣದಿಂದ ಪೀಡಿತವಾಗಿರುವ ಅಜ್ಞಾನವು ದೂರ ಸರಿಯುತ್ತದೆ.

ಅಧೀತ್ಯ ವೇದಾಂಸ್ತಪಸಾ ಬ್ರಹ್ಮಚಾರೀ
ಯಜ್ಞಾನ್ ಶಕ್ತ್ಯಾ ಸನ್ನಿಸೃಜ್ಯೇಹ ಪಂಚ ।
ವನಂ ಗಚ್ಛೇತ್ ಪುರುಷೋ ಧರ್ಮಕಾಮಃ
ಶ್ರೇಯಶ್ಚಿತ್ತ್ವಾ ಸ್ಥಾಪಯಿತ್ವಾ ಸ್ವವಂಶಮ್ ॥೩೦॥

ಬ್ರಹ್ಮಚಾರಿ ವಟುವು ವೇದಗಳನ್ನು ಅಧ್ಯಯನ ಮಾಡಿ, ತನ್ನ ಶಕ್ತಿಗೆ ಅನುಗುಣವಾಗಿ ಯಜ್ಞಕರ್ಮಗಳನ್ನು ಗ್ರಹಸ್ಥಾಶ್ರಮಿಯಾಗಿ ಆಚರಿಸಬೇಕು. ವಂಶವೃದ್ಧಿಗಾಗಿ ಸಂತಾನವನ್ನು ಹೊಂದಬೇಕು. ಬಳಿಕ ಜಿತೇಂದ್ರಿಯನಾಗಿ ಮೋಕ್ಷೋದ್ದೇಶದಿಂದ ವನಕ್ಕೆ ತೆರಳಬೇಕು.

ಉಪಭೋಗೈರಪಿ ತ್ಯಕ್ತಂ ನಾತ್ಮಾನಮವಸಾದಯೇತ್ ।
ಚಂಡಾಲತ್ವೇऽಪಿ ಮಾನುಷ್ಯಂ ಸರ್ವಥಾ ತಾತ ದುರ್ಲಭಮ್ ॥೩೧॥

ಮನುಷ್ಯನು ಸಕಲ ಭೋಗಗಳನ್ನೆಲ್ಲ ತ್ಯಜಿಸಿದರೂ ತನ್ನ ದೇಹವನ್ನು ಬಹಳವಾಗಿ ಶಿಕ್ಷಿಸಬಾರದು. ಎಲ್ಲ ಜನ್ಮಗಳಲ್ಲಿ ಮನುಷ್ಯ ದೇಹವೆಂಬುದು ಚಂಡಾಲ ಜನ್ಮವಾಗಿದ್ದರೂ ಶ್ರೇಷ್ಠವೆಂದೇ ಪರಿಗಣಿತವಾಗಿದೆ.

ಇಯಂ ಹಿ ಯೋನಿಃ ಪ್ರಥಮಾ ಯಾಂ ಪ್ರಾಪ್ಯ ಜಗತೀಪತೇ ।
ಆತ್ಮಾ ವೈ ಶಕ್ಯತೇ ತ್ರಾತುಂ ಕರ್ಮಭಿಃ ಶುಭಲಕ್ಷಣೈಃ ॥೩೨॥

ಮನುಷ್ಯಯೋನಿಯು ಅತ್ಯಂತ ಶ್ರೇಷ್ಠವಾದುದು. ಇಂತಹ ಮನುಷ್ಯ ಯೋನಿಯನ್ನು ಪಡೆದು ಶುಭಲಕ್ಷಣಗಳಿಂದ ಕೂಡಿದ ಕರ್ಮಗಳಿಂದ ಆತ್ಮೋದ್ಧಾರವನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಕಥಂ ನ ವಿಪ್ರಣಶ್ಯೇಮ ಯೋನಿತೋऽಸ್ಯಾ ಇತಿ ಪ್ರಭೋ ।
ಕುರ್ವಂತಿ ಧರ್ಮಂ ಮನುಜಾಃ ಶ್ರುತಿಪ್ರಾಮಾಣ್ಯದರ್ಶನಾತ್ ॥೩೩॥

ರಾಜನೇ, ಮನುಷ್ಯಯೋನಿಯಿಂದ ಭ್ರಷ್ಟರಾಗಿ ಅಧಮ ಯೋನಿಗಳನ್ನು ಪಡೆಯದಿರಲು ಹೇಗೆ ಸಾಧ್ಯವಾಗುತ್ತದೆ? ಎಂದು ಯೋಚಿಸಿ ಮನುಷ್ಯರು ಶ್ರುತಿ ಪ್ರಾಮಾಣ್ಯದ ಪರಿಶೀಲನೆಯಿಂದ ಧರ್ಮಕಾರ್ಯಗಳನ್ನು ಮಾಡುತ್ತಿರುತ್ತಾರೆ.

ಯೋ ದುರ್ಲಭತರಂ ಪ್ರಾಪ್ಯ ಮಾನುಷ್ಯಮಿಹ ವೈ ನರಃ ।
ಧರ್ಮಾವಮಂತಾ ಕಾಮಾತ್ಮಾ ಭವೇತ್ಸ ಖಲು ವಂಚ್ಯತೇ ॥೩೪॥

ಯಾವನು ಪ್ರಾರಬ್ಧಕರ್ಮಕ್ಕನುಸಾರವಾಗಿ ಅತ್ಯಂತ ದುರ್ಲಭವಾದ ಮನುಷ್ಯ ಶರೀರವನ್ನು ಪಡೆದಿದ್ದರೂ ಇತರರನ್ನು ದ್ವೇಷಿಸುತ್ತಾ, ಧರ್ಮವನ್ನು ನಿಂದಿಸುತ್ತಾ ಕಾಮಾಭಿಹೋತನಾಗಿರುತ್ತಾನೋ ಅಂತಹ ಮನುಷ್ಯನು ಮುಂದಿನ ಜನ್ಮದಲ್ಲಿ ಮನುಷ್ಯ ಜನ್ಮದಿಂದ ವಂಚಿತನಾಗುತ್ತಾನೆ.

ಯಸ್ತು ಪ್ರೀತಿಪುರೋಗೇಣ ಚಕ್ಷುಷಾ ತಾತ ಪಶ್ಯತಿ ।
ದೀಪೋಪಮಾನಿ ಭೂತಾನಿ ಯಾವದರ್ಚಿರ್ನ ನಶ್ಯತಿ ॥೩೫॥

ಯಾವನು ಪ್ರೀತಿಪುರಸ್ಸರವಾದ ದೃಷ್ಟಿಯಿಂದ ಸಮಸ್ತ ಪ್ರಾಣಿಗಳನ್ನು ದೀಪವನ್ನು ರಕ್ಷಿಸುವಂತೆ ಪ್ರೀತಿಯಿಂದ ನೋಡುತ್ತಾನೋ, ವಿಷಯ ಪದಾರ್ಥಗಳ ಕಡೆ ಅತಿಯಾದ ಆಸೆಯನ್ನು ಹೊಂದುವುದಿಲ್ಲವೋ ಅವನು ಪರಲೋಕದಲ್ಲಿಯೂ ಸಮ್ಮಾನಿತನಾಗುತ್ತಾನೆ.

ಸಾನ್ತ್ವೇನಾನುಪ್ರದಾನೇನ ಪ್ರಿಯವಾದೇನ ಚಾಪ್ಯುತ ।
ಸಮದುಃಖಸುಖೋ ಭೂತ್ವಾ ಸ ಪರತ್ರ ಮಹೀಯತೇ ॥೩೬॥

ಕಷ್ಟದಲ್ಲಿರುವ ವ್ಯಕ್ತಿಗಳನ್ನು ಸಂತೈಸುವುದರಿಂದ, ಅತಿಥಿಗಳಿಗೆ ಊಟ ಹಾಕುವುದರಿಂದ, ಎಲ್ಲರ ಜೊತೆಗೆ ಪ್ರಿಯವಾದ ಮಾತುಗಳನ್ನಾಡುವುದರಿಂದ, ಸುಖ-ದುಃಖಗಳನ್ನು ಸಮಾನವಾಗಿ ಕಾಣುವುದರಿಂದ ಮನುಷ್ಯನು ಪರಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ದಾನಂ ತ್ಯಾಗಃ ಶೋಭನಾ ಮೂರ್ತಿರದ್ಧ್ಯೋ
ಭೂಯಃ ಪ್ಲಾವ್ಯಂ ತಪಸಾ ವೈ ಶರೀರಮ್ ।
ಸರಸ್ವತೀನೈಮಿಷಪುಷ್ಕರೇಷು
ಯೇ ಚಾಪ್ಯನ್ಯೇ ಪುಣ್ಯದೇಶಾಃ ಪೃಥಿವ್ಯಾಮ್ ॥೩೭॥

ದಾನ ಮಾಡುವುದು, ವಿಷಯ ಭೋಗಗಳನ್ನು ತ್ಯಜಿಸುವುದು ಶ್ರೇಯಸ್ಕರವಾದುದು. ಪುಣ್ಯತೀರ್ಥಗಳಿಂದ ಈ ಶರೀರವನ್ನು ಪವಿತ್ರೀಕರಿಸಿ-

ಕೊಳ್ಳಬೇಕು. ತಪಸ್ಸಿನಿಂದ ಈ ಶರೀರವನ್ನು ಕೃಶಗೊಳಿಸಿಕೊಳ್ಳಬೇಕು. ಸರಸ್ವತೀ ನದಿ, ನೈಮಿಷಾರಣ್ಯ, ಪುಷ್ಕರ ಕ್ಷೇತ್ರ, ಪೃಥಿವಿಯಲ್ಲಿರುವ ಇನ್ನೂ ಪುಣ್ಯಕ್ಷೇತ್ರಗಳಲ್ಲಿ ಸ್ನಾನವನ್ನಾಚರಿಸಬೇಕು.

ಗೃಹೇಷು ಯೇಷಾಮಸವಃ ಪತಂತಿ
ತೇಷಾಮಥೋ ನಿರ್ಹರಣಂ ಪ್ರಶಸ್ತಮ್ ।
ಯಾನೇನ ವೈ ಪ್ರಾಪಣಂ ಚ ಶ್ಮಶಾನೇ
ಶೌಚೇನ ನೂನಂ ವಿಧಿನಾ ಚೈವ ದಾಹಃ ॥೩೮॥

ಯಾರು ಮನೆಯಲ್ಲಿ ಪ್ರಾಣವನ್ನು ಬಿಡುತ್ತಾರೋ ಅವರನ್ನು ಶೀಘ್ರವಾಗಿ ಮನೆಯಿಂದ ಹೊರಗೆ ಇಡುವುದು ಪ್ರಶಸ್ತವಾದುದು. ವಾಹನದಲ್ಲಿ ಸತ್ತ ವ್ಯಕ್ತಿಯನ್ನು ಸ್ಮಶಾನಕ್ಕೆ ಸಾಗಿಸಬೇಕು. ಪರಿಶುದ್ಧ ಹೃದಯದಿಂದ ಶಾಸ್ತ್ರವಿಧಿಗನುಗುಣವಾಗಿ ಸತ್ತವರಿಗೆ ದಹನ ಸಂಸ್ಕಾರವನ್ನು ಮಾಡುವುದು ಮುಖ್ಯ ಕರ್ತವ್ಯವೆನಿಸಿದೆ.

ಇಷ್ಟಿಃ ಪುಷ್ಟಿರ್ಯಜನಂ ಯಾಜನಂ ಚ
ದಾನಂ ಪುಣ್ಯಾನಾಂ ಕರ್ಮಣಾಂ ಚ ಪ್ರಯೋಗಃ ।
ಶಕ್ತ್ಯಾ ಪಿತ್ರ್ಯಂ ಯಚ್ಚ ಕಿಂಚಿತ್ ಪ್ರಶಂಸ್ತಂ
ಸರ್ವಾಣ್ಯಾತ್ಮಾರ್ಥೇ ಮಾನವೋ ಯಃ ಕರೋತಿ ॥೩೯॥

ಮನುಷ್ಯನು ತನ್ನ ಶಕ್ತಿಗನುಗುಣವಾಗಿ ಯಾಗಗಳನ್ನು, ಶಾಂತಿಕರ್ಮಗಳನ್ನು, ಯಜನ-ಯಾಜನ, ದಾನ, ಪುಣ್ಯಾಚರಣೆ, ಯಥಾಶಕ್ತಿ ಶ್ರಾದ್ಧ-ತರ್ಪಣಾದಿಗಳನ್ನು ಪ್ರಶಸ್ತವಾದ ಇನ್ನೂ ಅನೇಕ ಕರ್ಮಗಳನ್ನು ಮಾಡಬೇಕು. ಈ ಎಲ್ಲ ಕರ್ಮಗಳನ್ನು ಮನುಷ್ಯನು ಆತ್ಮೋದ್ಧಾರಕ್ಕಾಗಿಯೇ ಮಾಡಿಕೊಳ್ಳುತ್ತಾನೆ.

ಧರ್ಮಶಾಸ್ತ್ರಾಣಿ ವೇದಾಶ್ಚ ಷಡಂಗಾನಿ ನರಾಧಿಪ ।
ಶ್ರೇಯಸೋಽರ್ಥೇ ವಿಧೀಯಂತೇ ನರಸ್ಯಾಕ್ಲಿಷ್ಟಕರ್ಮಣಃ ॥೪೦॥

ಧರ್ಮಶಾಸ್ತ್ರಗಳು, ಷಡಂಗಯುಕ್ತವಾದ ವೇದಗಳು ಇವೆಲ್ಲವೂ ಕ್ಲೇಶವಿಲ್ಲದೆ ಕರ್ಮಗಳನ್ನು ಮಾಡುವ ಮನುಷ್ಯನ ಶ್ರೇಯಸ್ಸಿಗಾಗಿಯೇ ವಿಹಿತವಾಗಿವೆ.

ಭೀಷ್ಮಃ

ಏತದ್ ವೈ ಸರ್ವಮಾಖ್ಯಾತಂ ಮುನಿನಾ ಸುಮಹಾತ್ಮನಾ ।
ವಿದೇಹರಾಜಾಯ ಪುರಾ ಶ್ರೇಯಸೋರ್ಥೇ ನರಾಧಿಪ ॥೪೧॥

ಭೀಷ್ಮ– ಮಹಾತ್ಮರಾದ ಪರಾಶರರು ಈ ಎಲ್ಲ ವಿಷಯಗಳನ್ನು ವಿದೇಹರಾಜನಾದ ಜನಕರಾಜನ ಶ್ರೇಯಸ್ಸನ್ನುದ್ದೇಶಿಸಿ ಉಪದೇಶಿಸಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೊಂದನೆಯ ಅಧ್ಯಾಯ

ಜನಕನ ಅನೇಕ ಪ್ರಶ್ನೆಗಳಿಗೆ ಪರಾಶರರು ಉಪದೇಶಿಸುತ್ತಾ
ಉಪದೇಶವನ್ನು ಉಪಸಂಹರಿಸಿದುದು.

ಭೀಷ್ಮಃ

ಪುನರೇವ ತು ಪಪ್ರಚ್ಛ ಜನಕೋ ಮಿಥಿಲಾಧಿಪಃ ।
ಪರಾಶರಂ ಮಹಾತ್ಮಾನಂ ಧರ್ಮೇ ಪರಮನಿಶ್ಚಯಮ್ ॥೧॥

ಭೀಷ್ಮ– ಯುಧಿಷ್ಠಿರನೇ, ನಗರದ ರಾಜನಾದ ಜನಕನು ಧರ್ಮದ ನಿಶ್ಚಯ ಜ್ಞಾನವನ್ನು ಹೊಂದಿದ್ದ, ಮಹಾತ್ಮರಾದ ಪರಾಶರ ಮುನಿಗಳನ್ನು ಕುರಿತು ಪುನಃ ಪ್ರಶ್ನಿಸಿದನು.

ಕಿಂ ಶ್ರೇಯಃ ಕಾ ಗತಿರ್ಬ್ರಹ್ಮನ್ ಕಿಂ ಕೃತಂ ನ ವಿನಶ್ಯತಿ ।
ಕ್ವ ಗತೋ ನ ನಿವರ್ತೇತ ತನ್ಮೇ ಬ್ರೂಹಿ ಮಹಾಮುನೇ ॥೨॥

ಮಹಾಮತಿಗಳೇ, ಬ್ರಾಹ್ಮಣಶ್ರೇಷ್ಠರೇ, ಶ್ರೇಯಸ್ಸಿಗೆ ಸಾಧನೆ ಯಾವುದು? ಉತ್ತಮವಾದ ಗತಿ ಯಾವುದು? ಯಾವ ವಿಧ ಕರ್ಮವು ನಾಶವನ್ನು ಹೊಂದುವುದಿಲ್ಲ? ಎಲ್ಲಿಗೆ ಹೋದ ಜೀವರು ಪುನಃ ಸಂಸಾರಕ್ಕೆ ಮರಳಿ ಬರುವುದಿಲ್ಲ? ಈ ವಿಷಯಗಳನ್ನು ನನಗೆ ತಿಳಿಸಿರಿ.

ಪರಾಶರಃ

ಅಸಂಗಃ ಶ್ರೇಯಸೋ ಮೂಲಂ ಜ್ಞಾನಂ ಜ್ಞಾನಗತಿಃ ಪರಾ ।
ಚೀರ್ಣಂ ತಪೋ ನ ಪ್ರಣಶ್ಯೇದ್ವಾಪಃ ಕ್ಷೇತ್ರೇ ನ ನಶ್ಯತಿ ॥೩॥

ಪರಾಶರ– ರಾಜನೇ, ವಿಷಯ ಪದಾರ್ಥಗಳ ಅಸಂಗವೇ ಶ್ರೇಯಸ್ಸಿಗೆ ಮೂಲ ಸಾಧನವಾಗಿದೆ. ಭಗವಂತನ ವಿಷಯಕವಾದ ಜ್ಞಾನದ ಪ್ರವೃತ್ತಿಯೇ ನಿಜವಾದ ಜ್ಞಾನವೆನಿಸಿದೆ. ಶ್ರದ್ಧೆಯಿಂದ ಮಾಡಲ್ಪಟ್ಟ ತಪಸ್ಸು ಎಂದೂ ನಾಶವನ್ನು ಹೊಂದುವುದಿಲ್ಲ. ಉತ್ತಮ ಕ್ಷೇತ್ರದಲ್ಲಿ ಬಿತ್ತಿದ ಬೀಜವು ವ್ಯರ್ಥವಾಗುವುದಿಲ್ಲ.

ಛಿತ್ತ್ವಾ ಧರ್ಮಮಯಂ ಪಾಶಂ ಯದಾ ಧರ್ಮೇऽಭಿರಜ್ಯತೇ ।
ದತ್ತ್ವಾ ऽಭಯಂಕೃತಂ ದಾನಂ ತದಾ ಸಿದ್ಧಿಮವಾಪ್ನುಯಾತ್ ॥೪॥

ಜೀವನು ಅಧರ್ಮವೆಂಬ ಹಗ್ಗವನ್ನು ಕತ್ತರಿಸಿ, ಧರ್ಮದಲ್ಲಿಯೇ ಅನುರಕ್ತನಾಗಿರುತ್ತಾನೋ, ಸಮಸ್ತ ಪ್ರಾಣಿಗಳಿಗೂ ಅಭಯವೆಂಬ ದಾನವನ್ನು ಮಾಡಿರುತ್ತಾನೋ ಅವನು ಸಿದ್ಧಿಯನ್ನು ಹೊಂದುತ್ತಾನೆ.

ಯೋ ದದಾತಿ ಸಹಸ್ರಾಣಿ ಗವಾಮಶ್ವಶತಾನಿ ಚ ।
ಅಭಯಂ ಸರ್ವಭೂತೇಭ್ಯಸ್ತದ್ದಾನಮತಿವರ್ತತೇ ॥೫॥

ಯಾವನು ಸಾವಿರಾರು ಹಸುಗಳನ್ನು, ನೂರಾರು ಕುದುರೆಗಳನ್ನು ದಾನ ಮಾಡುತ್ತಾನೋ, ಮತ್ತೊಬ್ಬನು ಸಮಸ್ತ ಭೂತಗಳಿಗೆ ಅಭಯವನ್ನು ದಾನ ಮಾಡುತ್ತಾನೋ, ಅಭಯವನ್ನು ದಾನ ಮಾಡಿದ ವ್ಯಕ್ತಿಯು ಸಹಸ್ರ ಗೋವುಗಳು, ನೂರು ಕುದುರೆಗಳು ಇವುಗಳನ್ನು ದಾನ ಮಾಡಿದ ವ್ಯಕ್ತಿಗಿಂತಲೂ ಶ್ರೇಷ್ಠನೆನಿಸುತ್ತಾನೆ.

ವಸನ್ ವಿಷಯಮಧ್ಯೇऽಪಿ ನ ವಸತ್ಯೇವ ಬುದ್ಧಿಮಾನ್ ।
ಸಂವಸತ್ಯೇವ ದುರ್ಬುದ್ಧಿರಸತ್ಸು ವಿಷಯೇಷ್ವಪಿ ॥೬॥

ವಿಷಯ ಸುಖಗಳ ಮಧ್ಯದಲ್ಲಿಯೇ ಇದ್ದರೂ ಬುದ್ಧಿವಂತನಾದವನು ಅವುಗಳ ಸಂಬಂಧವನ್ನು ಹೊಂದದೆ ನಿಸ್ಸಂಗನಾಗಿರುತ್ತಾನೆ. ದುರ್ಬುದ್ಧಿಯಾದವನು ವಿಷಯಗಳ ಮಧ್ಯದಲ್ಲಿ ಇಲ್ಲದಿದ್ದರೂ ಅವುಗಳನ್ನೇ ನೆನೆಯುತ್ತಾ, ಅವುಗಳ ಮಧ್ಯದಲ್ಲೇ ಬದುಕನ್ನು ಕಟ್ಟಿಕೊಂಡವನಂತೆ ಇರುತ್ತಾನೆ.

ನಾಧರ್ಮಃ ಶ್ಲಿಷ್ಯತೇ ಪ್ರಾಜ್ಞಮಾಪಃ ಪುಷ್ಕರಪರ್ಣವತ್ ।
ಅಪ್ರಾಜ್ಞಮಧಿಕಂ ಪಾಪಂ ಶ್ಲಿಷ್ಯತೇ ಜತುಕಾಷ್ಠವತ್ ॥೭॥

ಹೇಗೆ ಕಮಲದ ಎಲೆಗೆ ನೀರು ಅಂಟಿಕೊಳ್ಳುವುದಿಲ್ಲವೋ ಅದರಂತೆ ಪಾಪವು ಪ್ರಾಜ್ಞನನ್ನು ಲೇಪಿಸುವುದಿಲ್ಲ. ಮುಳ್ಳಿನ ಅಗಸೆ ಗಿಡವು ಬಟ್ಟೆಯನ್ನು ಬಿಗಿಯಾಗಿ ಹಿಡಿದು ಹರಿಯುವಂತೆ ಪಾಪಿಷ್ಠರಾದ ಮೂರ್ಖರನ್ನು ಅಧರ್ಮವು ಹಿಡಿದು ಅನರ್ಥಕ್ಕೆ ದೂಡುತ್ತದೆ.

ನಾಧರ್ಮಃ ಕಾರಣಾಪೇಕ್ಷೀ ಕರ್ತಾರಮಭಿಮುಂಚತಿ ।
ಕರ್ತಾ ಖಲು ಯಥಾಕಾಲಂ ತತ್ ಸರ್ವಮಭಿಪದ್ಯತೇ ।
ನ ಭಿದ್ಯಂತೇ ಕೃತಾತ್ಮಾನ ಆತ್ಮಪ್ರತ್ಯಯದರ್ಶಿನಃ ॥೮॥

ಅಧರ್ಮವು ಅಧರ್ಮವನ್ಆಚರಿಸುವ ವ್ಯಕ್ತಿಗಳಿಗೆ ಅಧರ್ಮದ ಫಲವನ್ನು ನೀಡಲು ಕಾಲವನ್ನು ನಿರೀಕ್ಷಿಸುತ್ತಲೇ ಇರುತ್ತದೆ. ಆದ್ದರಿಂದ ಅಧರ್ಮ ಪ್ರೇರಣೆಗನುಗುಣವಾಗಿ ಕಾರ್ಯನಿರತರಾದ ವ್ಯಕ್ತಿಗಳನ್ನು ಅಧರ್ಮವು ಬಿಟ್ಟುಹೋಗುವುದಿಲ್ಲ. ಯಾವನು ಅಧರ್ಮ ಕಾರ್ಯವನ್ನು ಮಾಡುತ್ತಾನೋ ಅವನು ಅದರ ಫಲವನ್ನು ಕಾಲಿಕವಾಗಿ ನಿಶ್ಚಿತವಾಗಿಯೂ ಅನುಭವಿಸುತ್ತಾನೆ. ಪವಿತ್ರವಾದ ಅಂತಃಕರಣವುಳ್ಳ ಜ್ಞಾನಿಗಳು ಈ ಶುಭಾಶುಭ ಫಲಗಳಿಂದ ವಿಚಲಿತರಾಗುವುದಿಲ್ಲ. ಭಗವಂತನ ದರ್ಶನದಲ್ಲಿಯೇ ಏಕಾಗ್ರತೆಯುಳ್ಳವರಾಗಿರುತ್ತಾರೆ.

ಬುದ್ಧಿಕರ್ಮೇಂದ್ರಿಯಾಣಾಂ ಹಿ ಪ್ರಮತ್ತೋ ಯೋ ನ ಬುದ್ಧ್ಯತೇ ।
ಶುಭಾಶುಭೇಷು ಸಕ್ತಾತ್ಮಾ ಪ್ರಾಪ್ನೋತಿ ಸುಮಹದ್ಭಯಮ್ ॥೯॥

ಯಾವಾತನು ಎಚ್ಚರವಿಲ್ಲದೆ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ಮೂಲಕ ಆಗುವ ಪಾಪಗಳಿಗೆ ಗಮನವನ್ನು ಕೊಡದೆ, ಶುಭಾಶುಭಗಳಲ್ಲೇ ಆಸಕ್ತರಾಗಿರುತ್ತಾನೋ ಅವನು ಮಹಾಭಯವನ್ನು ಹೊಂದುತ್ತಾನೆ.

ವೀತರಾಗೋ ಜಿತಕ್ರೋಧಃ ಸಮ್ಯಗ್ಭವತಿ ಯಃ ಸದಾ ।
ವಿಷಯೇ ವರ್ತಮಾನೋऽಪಿ ನ ಸ ಪಾಪೇನ ಯುಜ್ಯತೇ ॥೧೦॥

ಯಾವನು ವಿಷಯಗಳಿಂದ ದೂರನಾಗಿ, ಕ್ರೋಧವನ್ನು ಗೆದ್ದು, ಯಾವಾಗಲೂ ಸದಾಚಾರ ಸಂಪನ್ನನಾಗಿರುತ್ತಾನೋ ಅವನು ವಿಷಯ ಸುಖಗಳ ಮಧ್ಯದಲ್ಲಿಯೇ ಇದ್ದರೂ ಪಾಪದಿಂದ ಲಿಪ್ತನಾಗುವುದಿಲ್ಲ.

ಮರ್ಯಾದಾಯಾಂ ಧರ್ಮಸೇತುರ್ನಿಬದ್ಧೋ ನೈವ ಸೀದತಿ ।
ಪುಷ್ಪಸ್ರೋತ ಇವಾಯತ್ತಃ ಸ್ಫೀತೋ ಭವತಿ ಸಂಚಯಃ ॥೧೧॥

ನದಿಯ ನಡುವೆ ಕ್ರಮಬದ್ಧವಾಗಿ ಕಟ್ಟಿದ ಸೇತುವೆಯು ಯಾವ ಕಾರಣದಿಂದಲೂ ನಾಶ ಹೊಂದದು. ಅಂತಹ ಅಣೆಕಟ್ಟು ನೀರಿನಿಂದ ಸಮೃದ್ಧವಾಗಿರುತ್ತದೆ. ಇದರಂತೆ ಶಿಷ್ಟಾಚಾರದ ಮೂಲಕ ಬದುಕನ್ನು ಧರ್ಮದ ಸೇತುವೆಯಿಂದ ಕಟ್ಟಿಕೊಂಡ ಪುರುಷನು ಎಂದೂ ನಾಶ ಹೊಂದುವುದಿಲ್ಲ. ಅಣೆಕಟ್ಟಿನಲ್ಲಿ ನೀರು ಅಭಿವೃದ್ಧಿಯನ್ನು ಹೊಂದುವಂತೆ ಧರ್ಮವೆಂಬ ಅಣೆಕಟ್ಟಿನ ಸಹಾಯದಿಂದ ಹೆಜ್ಜೆ ಹೆಜ್ಜೆಗೂ ಪುಣ್ಯವು ವೃದ್ಧಿಸುತ್ತಲೇ ಇರುತ್ತದೆ.

ಯಥಾ ಭಾನುಗತಂ ತೇಜೋ ಮಣಿಃ ಶುದ್ಧಃ ಸಮಾಧಿನಾ ।
ಆದತ್ತೇ ರಾಜಶಾರ್ದೂಲ ತಥಾ ಯೋಗಃ ಪ್ರವರ್ತತೇ ॥೧೨॥

ಹೇಗೆ ಶುದ್ಧವಾದ ಸೂರ್ಯಕಾಂತಮಣಿಯು ಸೂರ್ಯನ ತೇಜಸ್ಸನ್ನು ಗ್ರಹಿಸುತ್ತದೋ ಹಾಗೆ ಸಾಧಕನು ಯೋಗಶಕ್ತಿಯಿಂದ ಧ್ಯಾನದ ಮೂಲಕ ಪರಬ್ರಹ್ಮನನ್ನು ಹೃದಯದಲ್ಲಿ ಗ್ರಹಿಸುತ್ತಾನೆ.

ಯಥಾ ತಿಲಾನಾಮಿಹ ಪುಷ್ಪಸಂಶ್ರಯಾತ್
ಪೃಥಕ್ ಪೃಥಗ್ ಯಾತಿ ಗುಣೋऽಪಿಸಾಮ್ಯತಾಮ್ ।
ತಥಾ ನರಾಣಾಂ ಭುವಿ ಭಾವಿತಾತ್ಮನಾಂ
ಯಥಾಶ್ರಯಂ ಸತ್ತ್ವಗುಣಃ ಪ್ರವರ್ತತೇ ॥೧೩॥

ಹೇಗೆ ಎಣ್ಣೆಯು ಅನೇಕ ವಿಧ ಪರಿಮಳ ಪುಷ್ಪಗಳ ಸಂಯೋಗದಿಂದ ಬೇರೆ ಬೇರೆ ರೀತಿಯಾದ ಪರಿಮಳವನ್ನು ಹೊಂದುತ್ತದೋ ಅದರಂತೆ ಪರಿಶುದ್ಧರಾದ ಜೀವರು ತಮ್ಮ ಮನಸ್ಸಿನಲ್ಲಿ ಉತ್ತಮವಾದ ಭಗವಂತನ ಗುಣಗಳನ್ನು ಬೇರೆ ಬೇರೆ ಕ್ರಮದಿಂದ ಅನುಸಂಧಾನ ಮಾಡುತ್ತಾ ಸತ್ತ್ವಗುಣದ ಅಭಿವೃದ್ಧಿಯನ್ನು ಹೊಂದುತ್ತಿರುತ್ತಾರೆ.

ಜಹಾತಿ ದಾರಾನಿಹತೇ ನ ಸಂಪದಃ
ಸದಶ್ವಯಾನಂ ವಿವಿಧಾಶ್ಚ ಯಾಃ ಕ್ರಿಯಾಃ ।
ತ್ರಿವಿಷ್ಟಪೇ ಜಾತಮತಿರ್ಯದಾ ನರ-
ಸ್ತದಾಸ್ಯ ಬುದ್ಧಿರ್ವಿಷಯೇಷು ಭಿದ್ಯತೇ ॥೧೪॥

ಯಾವಾಗ ಮನುಷ್ಯನು ಸದ್ಗತಿಯನ್ನು ಹೊಂದುವುದರಲ್ಲಿ ಆಸಕ್ತಿಯನ್ನು ವಹಿಸುತ್ತಾನೋ ಆಗ ಅವನು ಹೆಂಡತಿಯನ್ನು, ಬಗೆ ಬಗೆಯಾದ ಸಂಪತ್ತನ್ನು, ಧನವನ್ನು, ಪದವಿಯನ್ನು, ವಾಹನಗಳನ್ನು, ಹಲವು ಬಗೆಯ ಫಲಪ್ರದವಾದ ಕರ್ಮಗಳನ್ನು ದೂರೀಕರಿಸುತ್ತಾನೆ.

ಪ್ರಸಕ್ತಬುದ್ಧಿರ್ವಿಷಯೇಷು ಯೋ ನರೋ
ಯೋ ಬುದ್ಧ್ಯತೇ ಹ್ಯಾತ್ಮಹಿತಂ ಕದಾಚನ ।
ಸ ಸರ್ವಭಾವಾನುಗತೇನ ಚೇತಸಾ
ನೃಪಾಮಿಷೇಣೇವ ಝಷೋ ವಿಕೃಷ್ಯತೇ ॥೧೫॥

ಮಹಾರಾಜನೇ, ವಿಷಯ ಸುಖಗಳಲ್ಲಿಯೇ ಆಸಕ್ತನಾದ ಮನುಷ್ಯನು ತನಗೆ ಹಿತವಾಗುವ ಕರ್ಮ ಯಾವುದೆಂಬುದನ್ನು ಪ್ರಯತ್ನಪೂರ್ವಕವಾಗಿಯೂ ತಿಳಿದುಕೊಳ್ಳುವುದಿಲ್ಲ. ನೀರಿನಲ್ಲಿ ಸಂಚರಿಸುವ ಮೀನು ಗಾಳದಲ್ಲಿರುವ ಮಾಂಸದ ಪ್ರಲೋಭನೆಗೆ ತುತ್ತಾಗಿ ದುಃಖಕ್ಕೆ ಈಡಾಗುವಂತೆ ವಿಷಯಸುಖಗಳನ್ನೇ ಅನುಭವಿಸಿಕೊಂಡು ಹೋಗುವ ಬುದ್ಧಿಯುಳ್ಳವನು ವಿಷಯಗಳಿಂದ ಆಸಕ್ತನಾಗಿ ಅಪಾರ ದುಃಖಕ್ಕೆ ಭಾಗಿಯಾಗುತ್ತಾನೆ.

ಸಂಘಾತವಾನ್ ಮರ್ತ್ಯಲೋಕಃ ಪರಸ್ಪರಮಪಾಶ್ರಿತಃ ।
ಕದಲೀಗರ್ಭನಿಃಸಾರೋ ನೌರಿವಾಪ್ಸು ನಿಮಜ್ಜತಿ ॥೧೬॥

ಯಾವನು ಜೀವನದಲ್ಲಿ ಸ್ತ್ರೀ, ಪುತ್ರ, ಮಿತ್ರ ಮೊದಲಾದ ಸಮುದಾಯವನ್ನು ಹೊಂದಿರುತ್ತಾನೋ, ಅನ್ಯೋನ್ಯವಾಗಿ ಅವರ ಸಂಬಂಧವನ್ನೇ ಹೊಂದಿಕೊಂಡಿರುತ್ತಾನೋ ಅವನ ಈ ಸಂಸಾರವು ಬಾಳೆಯ ಕಂದಿನ ಮಧ್ಯಭಾಗದಲ್ಲಿರುವ ದಿಂಡಿನಂತೆ ನಿಸ್ಸಾರವಾಗಿದೆ. ಪ್ರವಾಹದಲ್ಲಿ ಸಿಕ್ಕಿಬಿದ್ದಿರುವ ನೌಕೆಯಂತೆ ಕಾಲಕ್ರಮದಲ್ಲಿ ಬದುಕೇ ಮುಳುಗಿ ಹೋಗುತ್ತದೆ.

ನ ಧರ್ಮಕಾಲಃ ಪುರುಷಸ್ಯ ನಿಶ್ಚಿತೋ
ನ ಚಾಪಿ ಮೃತ್ಯುಃ ಪುರುಷಂ ಪ್ರತೀಕ್ಷತೇ ।
ಕ್ರಿಯಾ ಹಿ ಧರ್ಮಸ್ಯ ಸದೈವ ಶೋಭನಾ
ಯದಾ ನರೋ ಮೃತ್ಯುಮುಖೇಽಭಿವರ್ತತೇ ॥೧೭॥

ಧರ್ಮಕಾರ್ಯವನ್ನು ಇಂತಹ ಕಾಲದಲ್ಲಿಯೇ ಮಾಡಬೇಕೆಂದು ಯಾರೂ ನಿಶ್ಚಯಿಸಿರುವುದಿಲ್ಲ. ಮನುಷ್ಯನು ಧರ್ಮವನ್ನು ಆಚರಿಸಲೆಂದು ಮೃತ್ಯುವೂ ನಿರೀಕ್ಷಿಸುತ್ತಾ ಕುಳಿತುಕೊಳ್ಳುವುದಿಲ್ಲ. ಮನುಷ್ಯನು ಯಾವಾಗಲೂ ಮೃತ್ಯುಮುಖನಾಗಿಯೇ ಇರುತ್ತಾನೆ. ಆದ್ದರಿಂದ ಸದಾಕಾಲವೂ ಧರ್ಮಕಾರ್ಯವನ್ನು ಮಾಡುತ್ತಿರುವುದೇ ಶ್ರೇಯಸ್ಕರವಾದುದು.

ಯಥಾಂಧಃ ಸ್ವಗೃಹೇ ಯುಕ್ತೋ ಹ್ಯಭ್ಯಾಸಾದೇವ ಗಚ್ಛತಿ ।
ತಥಾ ಯುಕ್ತೇನ ಮನಸಾ ಪ್ರಾಜ್ಞೋ ಗಚ್ಛತಿ ತಾಂ ಗತಿಮ್ ॥೧೮॥

ಹೇಗೆ ಕುರುಡನಾದವನು ಅಭ್ಯಾಸ ಬಲದಿಂದ ತನ್ನ ಮನೆಯಲ್ಲಿ ನಿರಾತಂಕವಾಗಿ ತಿರುಗಾಡುತ್ತಾನೋ ಅದೇ ರೀತಿ ಪ್ರಾಜ್ಞನಾದವನು ಯೋಗಯುಕ್ತವಾದ ಮನಸ್ಸಿನಿಂದ ಕೂಡಿದವನಾಗಿ ಈ ಲೋಕದಲ್ಲಿ ಸಂಚರಿಸುತ್ತಾ ಪರಮಗತಿಯನ್ನು ಹೊಂದುತ್ತಾನೆ.

ಮರಣಂ ಜನ್ಮನಿ ಪ್ರೋಕ್ತಂ ಜನ್ಮ ವೈ ಮರಣಾಶ್ರಿತಮ್ ।
ಅವಿದ್ವಾನ್ ಮೋಕ್ಷಧರ್ಮೇಷು ಬದ್ಧೋ ಭ್ರಮತಿ ಚಕ್ರವತ್ ॥೧೯॥

ಹುಟ್ಟಿನಲ್ಲಿ ಮರಣವು ಸೇರಿಕೊಂಡಿರುತ್ತದೆ ಎಂದು ಹೇಳುತ್ತಾರೆ. ಹುಟ್ಟು ಮರಣವನ್ನಾಶ್ರಯಿಸಿದೆ. ಮೋಕ್ಷಧರ್ಮಗಳನ್ನು ತಿಳಿಯದೆ ಇರುವ ವ್ಯಕ್ತಿಯು ಜನನ ಮರಣಗಳ ಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುತ್ತಿರುತ್ತಾನೆ. ಆದರೆ ಮೋಕ್ಷಧರ್ಮವನ್ನು ತಿಳಿದ, ಜ್ಞಾನಮಾರ್ಗವನ್ನು ಆಶ್ರಯಿಸಿರುವ ವ್ಯಕ್ತಿಗೆ ಇಹ-ಪರಗಳಲ್ಲಿ ಸುಖವು ನಿಶ್ಚಿತವು.

ಯಥಾ ಮೃಣಾಲೋಽನುಗತಮಾಶು ಮುಂಚತಿ ಕರ್ದಮಮ್ ।
ತಥಾತ್ಮಾ ಪುರುಷಸ್ಯೇಹ ಮನಸಾ ಪರಿಮುಚ್ಯತೇ ।
ಮನಃ ಪ್ರಣಯತೇಽಽತ್ಮಾನಂ ಸ ಏನಮಭಿಯುಂಜತಿ ॥೨೦॥

ಹೇಗೆ ಕೆಸರಿನಲ್ಲಿ ಇರುವ ಕಮಲ ಪುಷ್ಪವನ್ನು ದಂಟಿನ ಸಹಿತವಾಗಿ ನೀರಿನಿಂದ ಹೊರಗೆ ತೆಗೆದಾಗ ತಾವರೆಯ ದಂಟು ಕೆಸರನ್ನು ಬಿಟ್ಟು ಬರುತ್ತದೋ ಅದೇ ರೀತಿ ಆತ್ಮನು ಕಲುಷಿತವಾದ ಮನಸ್ಸನ್ನು ಬಿಟ್ಟುಬಿಡುತ್ತಾನೆ. ಮನಸ್ಸೇ ಮೊದಲು ಆತ್ಮವನ್ನು ಸೆಳೆಯುತ್ತದೆ. ಆತ್ಮವು ಮನಸ್ಸಿನೊಡನೆ ಸೇರಿಕೊಳ್ಳುತ್ತದೆ. ಆತ್ಮವು ಯೋಗದಲ್ಲಿ ಸಿದ್ಧಿಯನ್ನು, ಪರಮಾತ್ಮನನ್ನು ಏಕಾಗ್ರತೆಯಿಂದ ನೋಡುತ್ತದೆ.

ಪರಾರ್ಥೇ ವರ್ತಮಾನಸ್ತು ಸ್ವಕಾರ್ಯಂ ಯೋಽಭಿಮನ್ಯತೇ ।
ಇಂದ್ರಿಯಾರ್ಥೇಷು ಸಕ್ತಃ ಸನ್ ಸ್ವಕಾರ್ಯಾತ್ ಪರಿಹೀಯತೇ ॥೨೧॥

ಇಂದ್ರಿಯವಶನಾದ ಜೀವನು ಪರಮಾತ್ಮನಿಗೆ ಸಂಬಂಧಿಸದ ಕಾರ್ಯಗಳಲ್ಲಿ ಆಸಕ್ತನಾಗಿರುತ್ತಾನೋ, ತನಗೆ ಸಂಬಂಧಿಸದ ಕಾರ್ಯಗಳನ್ನು ತನ್ನ ಕಾರ್ಯಗಳೆಂದು ಭಾವಿಸುತ್ತಾನೋ ಅವನು ತಾನು ಮಾಡಬೇಕಾದ ನಿಜವಾದ ಕರ್ಮದಿಂದ ವಂಚಿತನಾಗಿರುತ್ತಾನೆ, ತಿರಸ್ಕೃತನಾಗಿರುತ್ತಾನೆ.

ಅಧಸ್ತಿರ್ಯಗ್ಗತಿಂ ಚೈವ ಸ್ವರ್ಗೇ ಚೈವ ಪರಾಂ ಗತಿಮ್ ।
ಪ್ರಾಪ್ನೋತಿ ಸ್ವಕೃತೈರಾತ್ಮಾ ಪ್ರಾಜ್ಞಸ್ಯೇಹೇತರಸ್ಯ ಚ ॥೨೨॥

ಪ್ರಾಜ್ಞನಾದ ಆತ್ಮನು ತಾನು ಮಾಡಿದ ಪುಣ್ಯಕರ್ಮಗಳಿಂದ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ದಡ್ಡನಾದ ಚೇತನನು ತಾನು ಮಾಡಿದ ಪಾಪಕರ್ಮಗಳಿಂದ ಅಧೋಗತಿಯನ್ನು, ಪಶುಪಕ್ಷ್ಯಾದಿ ತಿರ್ಯಗ್ಯೋನಿಯನ್ನು ಹೊಂದುತ್ತಾನೆ.

ಮೃನ್ಮಯೇ ಭಾಜನೇ ಪಕ್ವೇ ಯಥಾ ವೈ ನ್ಯಸ್ಯತೇ ದ್ರವಃ ।
ತಥಾ ಶರೀರಂ ತಪಸಾ ತಪ್ತಂ ವಿಷಯಮಶ್ನುತೇ ॥೨೩॥

ಚೆನ್ನಾಗಿ ಸುಡದಿರುವ ಮಣ್ಣಿನ ಮಡಿಕೆಯಲ್ಲಿ ಇಟ್ಟ ನೀರು ಮಣ್ಣಿನ ಜೊತೆಗೇ ಇಂಗಿ ಹೋಗುತ್ತದೆ. ಚೆನ್ನಾಗಿ ಬೆಂದ ಮಣ್ಣಿನ ಮಡಿಕೆಯಲ್ಲಿ ಹಾಕಿದ ನೀರು ದೃಢವಾಗಿ, ಸ್ಥಿರವಾಗಿ ಇರುತ್ತದೆ. ಇದರಂತೆ ತಪಸ್ಸಿನಿಂದ ಬಳಲಿದ ಶರೀರವು ವಿಷಯ ಪದಾರ್ಥಗಳನ್ನು ತಡೆಗಟ್ಟಿ ಧರ್ಮದ ಫಲವನ್ನು ಉಳಿಸುತ್ತದೆ. ಯಾರ ಶರೀರವು ತಪಸ್ಸಿನ ಬಲದಿಂದ ಪಕ್ವಗೊಂಡಿಲ್ಲವೋ ಆ ಶರೀರದಲ್ಲಿ ವಿಷಯ ಪದಾರ್ಥಗಳ ಜೊತೆಗೆ ಆತ್ಮನಿಗೆ ಅಧಃಪತನ ಉಂಟಾಗುತ್ತದೆ.

ವಿಷಯಾನಶ್ನುತೇ ಯಸ್ತು ನ ಸ ಭೋಕ್ಷ್ಯತ್ಯಸಂಶಯಮ್ ।
ಯಸ್ತು ಭೋಗಾಂಸ್ಯಜೇದಾತ್ಮಾ ಸ ವೈ ಭೋಕ್ತುಂ ವ್ಯವಸ್ಯತಿ ॥೨೪॥

ಯಾವ ಜೀವನು ವಿಷಯ ಸುಖಗಳನ್ನೇ ಅನುಭವಿಸುತ್ತಾನೋ ಅವನು ತನ್ನ ರಕ್ಷಣೆಯನ್ನು ಮಾಡಿಕೊಳ್ಳಲು ಅಸಮರ್ಥನಾಗುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಯಾವ ಜೀವನು ಭೋಗಗಳನ್ನು ಅನುಭವಿಸುವುದಿಲ್ಲವೋ ಅವನು ಆತ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ವಿಷಯಸುಖಗಳನ್ನು ಬಯಸುವ ವ್ಯಕ್ತಿಗೆ ಪರಲೋಕದ ಭೋಗಗಳು ನಾಶವಾಗುತ್ತದೆ ಎಂದು ಭಾವ.

ನೀಹಾರೇಣ ಹಿ ಸಂವೀತಃ ಶಿಶ್ನೋದರಪರಾಯಣಃ ।
ಜಾತ್ಯಂಧ ಇವ ಪಂಥಾನಮಾವೃತಾತ್ಮಾ ನ ಬುದ್ಧ್ಯತೇ ॥೨೫॥

ಮಂಜಿನಂತಿರುವ ಮಾಯೆಯಿಂದ ಆವೃತನಾದ ಜೀವನು ಶಿಶ್ನೋದರ ಪರಾಯಣನಾಗಿ ಹುಟ್ಟುಕುರುಡನಂತೆ ಸನ್ಮಾರ್ಗದಿಂದ ಭ್ರಷ್ಟನಾಗುತ್ತಾನೆ. ವಿಷಯ ಪದಾರ್ಥಗಳಿಂದ ಆವರಿಸಲ್ಪಟ್ಟ ಚಕ್ಷುಸ್ಸುಳ್ಳ ಆ ಜೀವನು ತನ್ನ ಶ್ರೇಯೋಮಾರ್ಗವನ್ನು ಎಂದೂ ತಿಳಿಯುವುದಿಲ್ಲ.

ವಣಿಗ್ ಯಥಾ ಸಮುದ್ರಾದ್ ವೈ ಯಥಾರ್ಥಂ ಲಭತೇ ಧನಮ್ ।
ತಥಾ ಮರ್ತ್ಯಾರ್ಣವೇ ಜಂತೋಃ ಕರ್ಮವಿಜ್ಞಾನತೋ ಗತಿಃ ॥೨೬॥

ಹೇಗೆ ವೈಶ್ಯನೊಬ್ಬನು ಸಮುದ್ರ ಪ್ರಯಾಣವನ್ನು ಮಾಡಿ ಹೊರದೇಶಕ್ಕೆ ಹೋಗಿ ತಾನು ವಿನಿಯೋಗ ಮಾಡಿರುವ ಮೂಲಧನಕ್ಕಿಂತ ಅಧಿಕ ಲಾಭವನ್ನು ಸಂಪಾದಿಸಿಕೊಂಡು ಹಿಂದಿರುಗುತ್ತಾನೋ, ಇದೇ ರೀತಿ ಸಂಸಾರವೆಂಬ ಸಾಗರದಲ್ಲಿ ವ್ಯಾಪಾರಕ್ಕಾಗಿ ಆಗಮಿಸಿರುವ ಜೀವನಿಗೆ ಅವನು ವಿನಿಯೋಗಿಸಿದ ಕರ್ಮ ಜ್ಞಾನಗಳಿಗೆ ಅನುಗುಣವಾದ ಲಾಭವು ನಿಶ್ಚಿತವಾಗಿಯೂ ದೊರೆಯುತ್ತದೆ. ಉತ್ತಮ ಕರ್ಮಗಳನ್ನು ಅನುಷ್ಠಾನ ಮಾಡಿದಲ್ಲಿ ಉತ್ತಮ ಫಲಗಳನ್ನು, ಅಧಮ ಕರ್ಮಗಳನ್ನು ಆಚರಿಸಿದಲ್ಲಿ ಅಧಮ ಫಲವನ್ನು ಹೊಂದುತ್ತಾನೆ.

ಅಹೋರಾತ್ರಮಯೇ ಲೋಕೇ ಜರಾರೂಪೇಣ ಸಂಚರನ್ ।
ಮೃತ್ಯುರ್ಗ್ರಸತಿ ಭೂತಾನಿ ಪವನಂ ಪನ್ನಗೋ ಯಥಾ ॥೨೭॥

ಹಗಲು ಮತ್ತು ರಾತ್ರಿಗಳಂತಿರುವ ಈ ಲೋಕದಲ್ಲಿ ಮುಪ್ಪೆಂಬ ರೂಪವನ್ನು ಧರಿಸಿ ಸಂಚರಿಸುತ್ತಿರುವ ಮೃತ್ಯುವು ಸರ್ಪವು ಗಾಳಿಯನ್ನು ನುಂಗುವಂತೆ ಸಮಸ್ತ ಪ್ರಾಣಿಗಳನ್ನು ನುಂಗಿ ಹಾಕುತ್ತದೆ.

ಸ್ವಯಂ ಕೃತಾನಿ ಕರ್ಮಾಣಿ ಜಾತೋ ಜಂತುಃ ಪ್ರಪದ್ಯತೇ ।
ನಾಕೃತಂ ಲಭತೇ ಕಶ್ಚಿತ್ ಕಿಂಚಿದತ್ರ ಪ್ರಿಯಾಪ್ರಿಯಮ್ ॥೨೮॥

ಈ ಲೋಕದಲ್ಲಿ ಜೀವನು ಜನ್ಮವನ್ನು ತಾಳಿ ತಾನೇ ಮಾಡಿದ ಕರ್ಮ ಫಲಗಳನ್ನು ಅನುಭವಿಸುತ್ತಾನೆ. ತಾನು ಪುಣ್ಯ-ಪಾಪಗಳನ್ನು ಆಚರಿಸದೆ ಪ್ರಿಯಾಪ್ರಿಯಗಳನ್ನು ಹೊಂದಲು ಸಾಧ್ಯವಿಲ್ಲ.

ಶಯಾನಂ ಯಾಂತಮಾಸೀನಂ ಪ್ರವತ್ತಂ ವಿಷಯೇಷು ಚ ।
ಶುಭಾಶುಭಾನಿ ಕರ್ಮಾಣಿ ಪ್ರಪದ್ಯಂತೇ ನರಂ ಸದಾ ॥೨೯॥

ಮಲಗಿರುವ, ಸಂಚರಿಸುತ್ತಿರುವ, ಕುಳಿತಿರುವ ವ್ಯಕ್ತಿಯನ್ನು ಶುಭಾಶುಭ ಕರ್ಮಗಳು ಅನುಸರಿಸಿ ಹೋಗುತ್ತಲೇ ಇರುತ್ತವೆ.

ನ ಹ್ಯನ್ಯತೀರಮಾಸಾದ್ಯ ಪುನಸ್ತರ್ತುಂ ವ್ಯವಸ್ಯತಿ ।
ದುರ್ಲಭೋ ದೃಶ್ಯತೇ ಹ್ಯಸ್ಯ ವಿನಿಪಾತೋ ಮಹಾರ್ಣವೇ ॥೩೦॥

ಕಷ್ಟಪ್ರದೇಶದಿಂದ ಸಮುದ್ರವನ್ನು ದಾಟಿ ಸುಖವಾದ ದೇಶಕ್ಕೆ ಹೋದ ಮನುಷ್ಯನು ಪುನಃ ಆ ಕಷ್ಟಪ್ರದೇಶಕ್ಕೆ ಬರಲು ಬಯಸುವುದಿಲ್ಲ. ಅದರಂತೆ ಸಂಸಾರವೆಂಬ ಕಷ್ಟ ಸಮುದ್ರವನ್ನು ದಾಟಿರುವವನು ಪುನಃ ಅದೇ ಸಂಸಾರಕ್ಕೆ ಬಂದು ದುಃಖಕ್ಕೆ ಭಾಜನನಾಗುವುದಿಲ್ಲ.

ಯಥಾ ಭಾರಾವಸಕ್ತಾ ಹಿ ನೌರ್ಮಹಾಂಭಸಿ ತಂತುನಾ ।
ತಥಾ ಮನೋಽಭಿಯೋಗಾದ್ವೈ ಶರೀರಂ ಪ್ರತಿಕರ್ಷತಿ ॥೩೧॥

ಹೇಗೆ ದೊಡ್ಡ ಸಮುದ್ರದಲ್ಲಿರುವ ನೌಕೆಯು ಹಗ್ಗದಿಂದ ಎಳೆಯಲ್ಪಟ್ಟು ನಾವಿಕನ ಭಾವನೆಗೆ ಅನುಗುಣವಾಗಿ ಪ್ರಯಾಣ ಮಾಡುತ್ತದೋ ಅದೇ ರೀತಿ ಜೀವನು ಶರೀರವೆಂಬ ನೌಕೆಯನ್ನು ತನ್ನ ಮನಸ್ಸಿಗೆ ಅನುಗುಣವಾಗಿ ನಡೆಸುತ್ತಿರುತ್ತಾನೆ.

ಯಥಾ ಸಮುದ್ರಮಭಿತಃ ಸಂಸ್ಯೂತಾಃ ಸರಿತೋಽಪರಾಃ ।
ತಥಾದ್ಯಾ ಪ್ರಕೃತಿರ್ಯೋಗಾದಭಿಸಂಸ್ಯೂಯತೇ ಸದಾ ॥೩೨॥

ಹೇಗೆ ನದಿಗಳು ಎಲ್ಲ ಭಾಗಗಳಿಂದಲೂ ಹರಿದುಬಂದು ಸಮುದ್ರವನ್ನೇ ಸೇರುತ್ತವೋ ಅದೇ ರೀತಿ ಎಲ್ಲ ಭೂತಗಳು ಮೂಲ ಪ್ರಕೃತಿಗಿಂತ ಭಿನ್ನವಾದ ಶರೀರ ರೂಪ ಪ್ರಕೃತಿಯನ್ನೇ ಸೇರುತ್ತವೆ.

ಸ್ನೇಹಪಾಶೈರ್ಬಹುವಿಧೈರಾಸಕ್ತಮನಸೋ ನರಾಃ ।
ಪ್ರಕೃತಿಸ್ಥಾ ವಿಷೀದಂತಿ ಜಲೇ ಸೈಕತವೇಶ್ಮವತ್ ॥೩೩॥

ನಾನಾ ವಿಧವಾದ ಸ್ನೇಹಪಾಶಗಳಿಂದ ಬಂಧಿಸಲ್ಪಟ್ಟಿರುವ ಮನಸ್ಸುಳ್ಳ ಪ್ರಾಕೃತ ಪುರುಷರು ನೀರಿನಲ್ಲಿ ಕಟ್ಟಿದ ಮರಳಿನ ಮನೆಯಂತೆ ವಿನಾಶವನ್ನು ಹೊಂದುತ್ತಾರೆ.

ಶರೀರಗೃಹಸಂಸ್ಥಸ್ಯ ಶೌಚತೀರ್ಥಸ್ಯ ದೇಹಿನಃ ।
ಬುದ್ಧಿಮಾರ್ಗಪ್ರಯಾಂತಸ್ಯ ಸುಖಂ ತ್ವಿಹ ಪರತ್ರ ಚ ॥೩೪॥

ಶೌಚ-ತೀರ್ಥ ಕ್ಷೇತ್ರದಂತಿರುವ, ಶರೀರವೆಂಬ ಮನೆಯನ್ನು ಹೊಂದಿರುವ, ಜ್ಞಾನ ಮಾರ್ಗದಲ್ಲಿಯೇ ಸಾಗುವ ಪುರುಷನಿಗೆ ಈ ಲೋಕದಲ್ಲಿಯೂ ಸುಖವಿದೆ, ಪರಲೋಕದಲ್ಲಿಯೂ ಸುಖವಿದೆ.

ವಿಸ್ತರಾಃ ಕ್ಲೇಶಸಂಯುಕ್ತಾಃ ಸಂಕ್ಷೇಪಾಸ್ತು ಸುಖಾವಹಾಃ ।
ಪರಾರ್ಥಂ ವಿಸ್ತರಾಃ ಸರ್ವೇ ತ್ಯಾಗಮಾತ್ಮಹಿತಂ ವಿದುಃ ॥೩೫॥

ಜಗತ್ತಿನ ಅನೇಕ ಲೌಕಿಕ ವ್ಯಾಪಾರಗಳು ಕ್ಲೇಶದಿಂದ ಕೂಡಿವೆ. ಲೌಕಿಕ ವ್ಯಾಪಾರಗಳಿಂದ ಮುಕ್ತರಾಗುವುದೇ ಸುಖಕ್ಕೆ ಕಾರಣವು. ಆತ್ಮಹಿತವನ್ನು ತಿಳಿದ ಜ್ಞಾನಿಗಳು ಭಗವಂತನಿಗೋಸ್ಕರ ಮಾಡುವ ನೂರಾರು ಕ್ರಿಯೆಗಳೇ ಶ್ರೇಯಸ್ಕರವೆಂದು ತಿಳಿದಿದ್ದಾರೆ.

ಸಂಕಲ್ಪಜೋ ಮಿತ್ರವರ್ಗೋ ಜ್ಞಾತಯಃ ಕಾರಣಾತ್ಮಕಾಃ ।
ಭಾರ್ಯಾ ದಾಸಾಶ್ಚ ಪುತ್ರಾಶ್ಚ ಸ್ವಮರ್ಥಮನುಯುಂಜತೇ ॥೩೬॥

ಯಾವುದಾದರೊಂದು ಮನೋಭಿಲಾಷೆಯನ್ನು ಪೂರೈಸಿಕೊಳ್ಳಲು ಮಿತ್ರವರ್ಗವು ಸೃಷ್ಟಿಯಾಗುತ್ತದೆ. ಜ್ಞಾತಿಗಳು ಯಾವುದೋ ಕಾರಣದಿಂದ ಬಂಧುತ್ವವನ್ನು

ಅವಲಂಬಿಸಿರುತ್ತಾರೆ. ಭಾರ್ಯೆ, ಪುತ್ರ, ಸೇವಕರು ಎಲ್ಲರೂ ಸ್ವಾರ್ಥಕ್ಕಾಗಿಯೇ ದೃಷ್ಟಿ ಇಟ್ಟಿರುತ್ತಾರೆ.

ನ ಮಾತಾ ನ ಪಿತಾ ಕಿಂಚಿತ್ ಕಸ್ಯಚಿತ್ ಪ್ರತಿಪದ್ಯತೇ ।
ದಾನಪಥ್ಯೋದನೋ ಜಂತುಃ ಸ್ವಕರ್ಮಫಲಮಶ್ನುತೇ ॥೩೭॥

ತಂದೆಯೇ ಆಗಲಿ, ತಾಯಿಯೇ ಆಗಲಿ, ಪರಲೋಕದ ಸಾಧನೆಗೆ ಸಹಾಯರಾಗರು. ಮನುಷ್ಯನು ಯಾವಾಗಲೂ ದಾನವನ್ನೂ, ತ್ಯಾಗವನ್ನೂ ಮಾಡುತ್ತಾ ಪರಲೋಕದ ಬುತ್ತಿಯನ್ನು ಪಡೆದುಕೊಳ್ಳಬೇಕು. ಪ್ರತಿಯೊಬ್ಬ ಮನುಷ್ಯನು ತಾನು ಮಾಡಿದ ಕರ್ಮದ ಫಲವನ್ನು ತಾನೇ ಅನುಭವಿಸುತ್ತಾನೆ.

ಮಾತಾ ಪುತ್ರಃ ಪಿತಾ ಭ್ರಾತಾ ಭಾರ್ಯಾ ಮಿತ್ರಜನಸ್ತಥಾ ।
ಅಷ್ಟಾಪದಪದಸ್ಥಾನೇ ತಕ್ಷಮುದ್ರೇವ ನ್ಯಸ್ಯತೇ ॥೩೮॥

ತಾಯಿ, ಮಗ, ತಂದೆ, ಸಹೋದರ, ಪತ್ನಿ, ಮಿತ್ರಜನರು-ಚಿನ್ನದ ಸಂಪುಷ್ಟದ ಮೇಲೆ ರಕ್ಷಣೆಯ ದೃಷ್ಟಿಯಿಂದ ಒತ್ತಿರುವ ಅರಗಿನ ಮುದ್ರೆಯಂತೆ ಇರುತ್ತಾರೆ.

ಸರ್ವಾಣಿ ಕರ್ಮಾಣಿ ಪುರಾ ಕೃತಾನಿ
ಶುಭಾಶುಭಾನ್ಯಾತ್ಮನೋ ಯಾಂತಿ ಜಂತೋಃ ।
ಉಪಸ್ಥಿತಂ ಕರ್ಮಫಲಂ ವಿದಿತ್ವಾ
ಬುದ್ಧಿಂ ತಥಾ ಚೋದಯತೇऽಂತರಾತ್ಮಾ ॥೩೯॥

ಹಿಂದಿನ ಜನ್ಮದಲ್ಲಿ ಮಾಡಿರುವ ಜೀವನ ಶುಭಾಶುಭ ಫಲಗಳು ಪ್ರಾಣಿಯನ್ನೇ ಅನುಸರಿಸಿ ಬರುತ್ತವೆ. ತನಗೆ ಒದಗಿ ಬರುವ ಸುಖವನ್ನು, ಕಷ್ಟವನ್ನು ಕರ್ಮದ ಫಲವೆಂದು ತಿಳಿದಿರುವ ಜೀವನು ಪರಮಾತ್ಮನ ಕಡೆ ತನ್ನ ಬುದ್ಧಿಯನ್ನು ಪ್ರಚೋದಿಸುತ್ತಾನೆ.

ವ್ಯವಸಾಯಂ ಸಮಾಶ್ರಿತ್ಯ ಸಹಾಯಾನ್ಯೋऽಧಿಗಚ್ಛತಿ ।
ನ ತಸ್ಯ ಕಶ್ಚಿದಾರಂಭಃ ಕದಾಚಿದವಸೀದತಿ ॥೪೦॥

ಯಾವನು ಪ್ರಯತ್ನಪೂರ್ವಕವಾಗಿ ತನ್ನ ಕ್ರಿಯೆಗಳಿಗನುಗುಣವಾದ ಸಹಾಯವನ್ನು ಮತ್ತೊಬ್ಬರಿಂದ ಹೊಂದುತ್ತಾನೋ ಅವನು ಆರಂಭಿಸುವ ಯಾವುದೇ ಕಾರ್ಯವು ಯಾವಾಗಲೂ ವಿನಾಶವನ್ನು ಹೊಂದದು.

ಅದ್ವೈಧಮನಸಂ ಯುಕ್ತಂ ಶೂರಂ ಧೀರಂ ವಿಪಶ್ಚಿತಮ್ ।
ನ ಶ್ರೀಃ ಸಂತ್ಯಜತೇ ನಿತ್ಯಮಾದಿತ್ಯಮಿವ ರಶ್ಮಯಃ ॥೪೧॥

ಸಂಶಯವಿಲ್ಲದೆ ಇರುವಂತಹ ಮನಸ್ಸುಳ್ಳ ಶೂರನನ್ನೂ, ಧೀರನನ್ನೂ, ಜ್ಞಾನಿಯನ್ನೂ ಎಂದಿಗೂ ಸಂಪತ್ತು ತ್ಯಜಿಸುವುದಿಲ್ಲ. ಸೂರ್ಯನನ್ನು ರಶ್ಮಿಗಳು ಹೇಗೆ ಬಿಡವೋ ಅದರಂತೆ.

ಆಸ್ತಿಕ್ಯವ್ಯವಸಾಯಾಭ್ಯಾಮುಪಾಯಾದ್ ವಿಸ್ಮಯಾದ್ಧಿಯಾ ।
ಯಮಾರಭತ್ಯನಿಂದ್ಯಾತ್ಮಾ ನ ಸೋಽರ್ಥಃ ಪರಿಸೀದತಿ ॥೪೨॥

ದೋಷರಹಿತವಾದ ಮನಸ್ಸುಳ್ಳ ಮನುಷ್ಯನು ಆಸ್ತಿಕ್ಯ ಬುದ್ಧಿಯಿಂದ, ಸತ್ಕರ್ಮ ಪ್ರಯತ್ನದಿಂದ, ಯೋಗೋಪಾಯದಿಂದ, ಗರ್ವರಾಹಿತ್ಯದಿಂದ, ಉತ್ತಮ ಬುದ್ಧಿಯಿಂದ ಕೂಡಿದವನಾಗಿ ಕಾರ್ಯಗಳನ್ನು ಪ್ರಾರಂಭಿಸುತ್ತಾನೋ ಆ ಕಾರ್ಯಗಳು ಎಂದಿಗೂ ನಿಷ್ಫಲಗಳಾಗುವುದಿಲ್ಲ.

ಸರ್ವಃ ಸ್ವಾನಿ ಶುಭಾಶುಭಾನಿ ನಿಯತಂ ಕರ್ಮಾಣಿ ಜಂತುಃ ಸ್ವಯಂ
ಗರ್ಭಾತ್ ಸಂಪ್ರತಿಪದ್ಯತೇ ತದುಭಯಂ ಯತ್ತೇನ ಪೂರ್ವಂ ಕೃತಮ್ ।
ಮೃತ್ಯುಶ್ಚಾಪರಿಹಾರವಾನ್ ಸಮಗತಿಃ ಕಾಲೇನ ವಿಚ್ಛೇದಿತಾ ।
ದಾರೋಶ್ಚೂನಮಿವಾಶ್ಮಸಾರವಿಹಿತಂ ಕರ್ಮಾಂತಿಕಂ ಪ್ರಾಪಯೇತ್ ॥

ಎಲ್ಲ ಪ್ರಾಣಿಗಳು ಪೂರ್ವಜನ್ಮದಲ್ಲಿ ತಾವು ಮಾಡಿದ ಶುಭಾಶುಭ ಕರ್ಮಗಳ ಫಲಗಳನ್ನು ತಾಯಿಯ ಗರ್ಭವನ್ನು ಪ್ರವೇಶಿಸಿದ ಬಳಿಕ ನಿಯಮೇನ ಪಡೆದುಕೊಂಡು ಅನುಭವಿಸುತ್ತಾರೆ. ಮರವನ್ನು ಕುಯ್ಯುವಾಗ ಗರಗಸದಿಂದ ಉದುರುವ ಮರದ ಹೊಟ್ಟನ್ನು ಗಾಳಿಯು ಯಾವ ರೀತಿಯಲ್ಲಿ ಹಾರಿಸಿಕೊಂಡು ಹೋಗುತ್ತದೋ, ಅದೇ ರೀತಿ ಜಿಗಣಿಯ ದ್ವಿಮುಖಾಕಾರದಂತೆ ಮರದಲ್ಲಿ ಮಾಡಲ್ಪಟ್ಟ ಫಲಕದಲ್ಲಿ ಕಬ್ಬಿಣದಿಂದ ಜೋಡಿಸಿದ ಯಂತ್ರಕ್ಕೆ ಮತ್ಸ್ಯಗಳು ಹೇಗೆ ವಶವಾಗುತ್ತವೋ ಅದರಂತೆ ಮನುಷ್ಯನನ್ನು ಕರ್ಮದ ಜೊತೆಗೆ ಕಾಲವು ಸೇರಿಸುತ್ತದೆ.

ಸ್ವರೂಪತಾಮಾತ್ಮಕೃತಂ ಚ ವಿಸ್ತರಂ
ಕುಲಾನ್ವಯಂ ದ್ರವ್ಯಸಮೃದ್ಧಿಸಂಚಯಮ್ ।

ನರೋ ಹಿ ಸರ್ವೋ ಲಭತೇ ಯಥಾಕೃತಂ
ಶುಭಾಶುಭೇನಾತ್ಮಕೃತೇನ ಕರ್ಮಣಾ ॥೪೪॥

ಎಲ್ಲ ಜನರು ತಾವು ಮಾಡಿದ ಶುಭಾಶುಭ ಕರ್ಮದ ಫಲವಾಗಿಯೇ ತನ್ನ ಯೋಗ್ಯತೆಗನುಗುಣವಾಗಿ ಭಾಗ್ಯವಿಸ್ತಾರಗಳನ್ನು, ದಾರಿದ್ರ್ಯಗಳನ್ನು, ಸತ್ಕುಲ ಸಂಬಂಧವನ್ನು, ದುಷ್ಕುಲ ಸಂಬಂಧವನ್ನು, ದ್ರವ್ಯ ಸಮೃದ್ಧಿಯನ್ನು, ದಾರಿದ್ರ್ಯವನ್ನು ಹೊಂದುತ್ತಾರೆ.

ಭೀಷ್ಮಃ

ಇತ್ಯುಕ್ತೋ ಜನಕೋ ರಾಜನ್ಯಥಾತಥ್ಯಂ ಮನೀಷಿಣಾ ।
ಶ್ರುತ್ವಾ ಧರ್ಮವಿದಾಂ ಶ್ರೇಷ್ಠಃ ಪರಾಂ ಮುದಮವಾಪ ಹ ॥೪೫॥

ಭೀಷ್ಮ– ಯುಧಿಷ್ಠಿರನೇ, ಜ್ಞಾನಿಯಾದ ಪರಾಶರ ಮುನಿಯು ಜನಕನಿಗೆ ಯಥಾರ್ಥವಾದ ವಿಷಯಗಳನ್ನು ಹೀಗೆ ಹೇಳಿದ ಬಳಿಕ ಉತ್ತಮೋತ್ತಮವಾದ ಪ್ರವಚನವನ್ನು ಕೇಳಿಸಿಕೊಂಡ, ಧರ್ಮಾತ್ಮರಲ್ಲಿಯೇ ಶ್ರೇಷ್ಠನಾದ ಜನಕನು ಅತ್ಯಂತ ಸಂತೋಷವನ್ನು ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಏಕತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

॥ ಪರಾಶರಗೀತಾ ಸಮಾಪ್ತಾ ॥

★ ★ ★ ★ ★

ನೂರ ಮೂವತ್ತೆರಡನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಮೋಕ್ಷ ಸಾಧನವನ್ನು ತಿಳಿಸುವ ಹಂಸಗೀತೆಯನ್ನು ಉಪದೇಶಿಸಿದುದು.

ಯುಧಿಷ್ಠಿರಃ

ಸತ್ಯಂ ಕ್ಷಮಾಂ ದಮಂ ಪ್ರಜ್ಞಾಂ ಪ್ರಶಂಸಂತಿ ಪಿತಾಮಹ ।
ವಿದ್ವಾಂಸೋ ಮನುಜಾ ಲೋಕೇ ಕಥಮೇತನ್ಮತಂ ತವ ॥೧॥

ಯುಧಿಷ್ಠಿರ– ಪಿತಾಮಹನೇ, ಲೋಕದಲ್ಲಿ ವಿದ್ವಾಂಸರು ಸತ್ಯ , ಇಂದ್ರಿಯನಿಗ್ರಹ, ಕ್ಷಮೆ, ಪ್ರಜ್ಞೆ ಇವುಗಳನ್ನು ಬಹಳವಾಗಿ ಪ್ರಶಂಸಿಸುತ್ತಾರೆ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?

ಭೀಷ್ಮಃ

ಅತ್ರ ತೇ ವರ್ತಯಿಷ್ಯೇಽಹಮಿತಿಹಾಸಂ ಪುರಾತನಮ್ ।
ಸಾಧ್ಯಾನಾಮಿಹ ಸಂವಾದಂ ಹಂಸಸ್ಯ ಚ ಯುಧಿಷ್ಠಿರ ॥೨॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಸಾಧ್ಯರಿಗೂ ಮತ್ತು ಹಂಸ ಪಕ್ಷಿಗಳಿಗೂ ನಡೆದ ಪುರಾತನ ಇತಿಹಾಸ ರೂಪವಾದ ಸಂವಾದವನ್ನು ಹೇಳುತ್ತೇನೆ.

ಹಂಸೋ ಭೂತ್ವಾಥ ಸೌವರ್ಣಸ್ತ್ವಜೋ ನಿತ್ಯಃ ಪ್ರಜಾಪತಿಃ ।
ಸ ವೈ ಪರ್ಯೇತಿ ಲೋಕಾಂಸ್ತ್ರೀನಥ ಸಾಧ್ಯಾನುಪಾಗಮತ್ ॥೩॥

ಒಂದು ಕಾಲದಲ್ಲಿ ಬ್ರಹ್ಮನು ಸುವರ್ಣ ಹಂಸರೂಪವನ್ನು ಧರಿಸಿ ಪ್ರತಿದಿನವೂ ಲೋಕಸಂಚಾರವನ್ನು ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದನು. ಹೀಗೆ ಸಂಚರಿಸುತ್ತಾ ಒಂದು ಬಾರಿ ಸಾಧ್ಯರ ಬಳಿಗೆ ಹೋದನು. ಸಾಧ್ಯರು ಹಂಸಪಕ್ಷಿಯನ್ನು ಪ್ರಶ್ನಿಸಿದರು.

ಸಾಧ್ಯಾಃ

ಶಕುನೇ ವಯಂ ಸ್ಮ ದೇವಾ ವೈ ಸಾಧ್ಯಾಸ್ತಾ ತ್ವಮನುಯುಜ್ಮಹೇ ।
ಪೃಚ್ಛಾಮಸ್ತಾ ತ್ವಂ ಮೋಕ್ಷಧರ್ಮಂ ಭವಾಂಶ್ಚ ಕಿಲ ಮೋಕ್ಷವಿತ್ ॥೪॥

ಸಾಧ್ಯರು– ನಾವು ಸಾಧ್ಯರೆಂಬ ದೇವತೆಗಳು. ನಾವು ನಿನ್ನಲ್ಲಿ ಒಂದು ವಿಷಯವನ್ನು ಕೇಳಬೇಕಾಗಿದೆ. ಕಾರಣ ನೀನು ಮೋಕ್ಷಧರ್ಮವನ್ನು ಚೆನ್ನಾಗಿ ಅರಿತವನು.

ಶ್ರುತೋಽಸಿ ನಃ ಪಂಡಿತೋ ಧೀರವಾದೀ
ಸಾಧುಶಬ್ದಃ ಪತತೇ ತೇ ಪತತ್ರಿನ್ ।
ಕಿಂ ಮನ್ಯಸೇ ಶ್ರೇಷ್ಠತಮಂ ದ್ವಿಜ ತ್ವಂ
ಕಸ್ಮಿನ್ಮನಸ್ತೇ ರಮತೇ ಮಹಾತ್ಮನ್ ॥೫॥

ಎಲೈ ಪಂಡಿತಧೀರನೇ, ಹಂಸಪಕ್ಷಿಯೇ, ನೀನು ಉತ್ತಮ ವಾದಿಯಾಗಿರುವಿ. ನೀನು ಹಾರುತ್ತಿರುವಾಗ ಉತ್ತಮವಾದ ವೈದಿಕ ಶಬ್ದಗಳೇ ಕೇಳಿಬರುತ್ತವೆ.

ಹಂಸಪಕ್ಷಿಯೇ, ನೀನು ಯಾವುದನ್ನು ಸಮಸ್ತ ವಸ್ತುಗಳಿಗಿಂತ ಶ್ರೇಷ್ಠವಾದುದು ಎಂದು ಹೇಳುತ್ತಿ ? ನಿನ್ನ ಮನಸ್ಸು ಯಾವುದರಲ್ಲಿ ಸಂತೋಷವನ್ನು ಹೊಂದಿದೆ?

ತನ್ನಃ ಕಾರ್ಯಂ ಪಕ್ಷಿವರ ಪ್ರಶಾಧಿ ಯತ್
ಕಾರ್ಯಾಣಾಂ ಮನ್ಯಸೇ ಶ್ರೇಷ್ಠಮೇಕಮ್ ।
ಯತ್ಕೃತ್ವಾ ವೈ ಪುರುಷಃ ಸರ್ವಬಂಧೈ-
ರ್ವಿಮುಚ್ಯತೇ ವಿಹಗೇಂದ್ರೇಹ ಶೀಘ್ರಮ್ ॥೬॥

ವಿಹಗೇಂದ್ರನೇ, ಯಾವ ಒಂದು ಕಾರ್ಯವನ್ನು ನೀನು ಸಮಸ್ತ ಕಾರ್ಯಗಳಿಗಿಂತಲೂ ಶ್ರೇಷ್ಠವಾದುದು ಎಂದು ಭಾವಿಸುತ್ತೀಯೋ, ಯಾವ ಕಾರ್ಯವನ್ನು ಮಾಡಿದ ಪುರುಷನು ಸರ್ವಬಂಧನದಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ ಎಂದು ಹೇಳುತ್ತೀಯೋ ಅಂತಹ ಕಾರ್ಯವನ್ನು ಮಾಡಲು ನಮಗೆ ತಿಳಿಸು.

ಹಂಸಃ

ಇದಂ ಕಾರ್ಯಮಮೃತಾಶಾಃ ಶೃಣೋಮಿ
ತಪೋ ದಮಃ ಸತ್ಯಮಾತ್ಮಾಭಿಗುಪ್ತಿಃ ।
ಗ್ರಂಥೀನ್ ವಿಮುಚ್ಯ ಹೃದಯಸ್ಯ ಸರ್ವಾನ್
ಪ್ರಿಯಾಪ್ರಿಯೇ ಸ್ವಂ ವಶಮಾನಯೀತ ॥೭॥

ಹಂಸ– ಅಮೃತವನ್ನು ಪಾನ ಮಾಡುವ ದೇವತೆಗಳೇ, ತಪಸ್ಸು, ದಮ, ಸತ್ಯ, ಆತ್ಮನಿಗ್ರಹ ಎಂಬ ಇವುಗಳೇ ಮನುಷ್ಯರು ಅನುಸರಿಸಲು ಯೋಗ್ಯವಾದ ಗುಣಗಳೆಂದು ಕೇಳಿದ್ದೇನೆ. ಮನುಷ್ಯನು ತನ್ನ ಹೃದಯದಲ್ಲಿರುವ ಅಧ್ಯಾತ್ಮ ಪ್ರತಿಬಂಧಕಗಳೆನಿಸಿದ ರಾಗ-ದ್ವೇಷಗಳನ್ನು ತೊಡೆದುಹಾಕಿ, ಪ್ರಿಯಾಪ್ರಿಯಗಳೆರಡನ್ನೂ ತನ್ನ ವಶಕ್ಕೆ ತೆಗೆದುಕೊಳ್ಳಬೇಕು. ಪ್ರಿಯದಿಂದ ಸಂತಸ, ಅಪ್ರಿಯದಿಂದ ದುಃಖ ಈ ಎರಡಕ್ಕೂ ತುತ್ತಾಗಬಾರದು.

ನಾರುಂತುದಃ ಸ್ಯಾನ್ನ ನೃಶಂಸವಾದೀ
ನ ಹೀನತಃ ಪರಮಭ್ಯಾದದೀತ ।

ಯಯಾಸ್ಯ ವಾಚಾ ಪರ ಉದ್ವಿಜೇತ
ನ ತಾಂ ವದೇದ್ ರುಶತೀಂ ಪಾಪಲೋಕ್ಯಾಮ್ ॥೮॥

ಯಾರ ವಿಷಯದಲ್ಲಿಯೂ ಮಾತಿನಿಂದಾಗಲಿ, ಕೃತಿಯಿಂದಾಗಲಿ ಅವರಿಗೆ ದುಃಖವನ್ನುಂಟು ಮಾಡುವ ಕಾರ್ಯವನ್ನು ಮಾಡಬಾರದು. ನಿಷ್ಠುರ ಮಾತುಗಳನ್ನು ವರ್ಜಿಸಬೇಕು. ಅಧಮ ಮನುಷ್ಯನಿಂದ ಶಾಸ್ತ್ರವಿದ್ಯೆಯವನ್ನು ಉಪದೇಶ ಪಡೆಯಬಾರದು. ಮತ್ತೊಬ್ಬರನ್ನು ನೋಯಿಸುವ, ನರಕಕ್ಕೆ ಕಾರಣವಾಗುವಂತಹ ಅಮಂಗಳ ಮಾತುಗಳನ್ನು ಎಂದಿಗೂ ಆಡಬಾರದು.

ವಾಕ್ಸಾಯಕಾ ವದನಾನ್ನಿಷ್ಪತಂತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ನಾಮರ್ಮಸು ತೇ ಪತಂತಿ
ತಾನ್ ಪಂಡಿತೋ ನಾವಸೃಜೇತ್ ಪರೇಷು ॥೯॥

ಮಾತೆಂಬುದು ಬಾಯಿಂದ ಹೊರಡುವಂತಹ ತೀವ್ರ ಬಾಣವೆಂದೇ ತಿಳಿಯಿರಿ. ಕಠೋರವಾದ ವಾಗ್ಬಾಣಗಳು ಯಾವನಿಗೆ ತಾಗಿರುತ್ತವೋ ಅವನು ಹಗಲು-ರಾತ್ರಿ ದುಃಖಿಸುತ್ತಿರುತ್ತಾನೆ. ಕಾರಣ ಮರ್ಮಸ್ಥಾನವನ್ನೇ ಘಾಸಿಪಡಿಸುವಂತಹ ಶಕ್ತಿ ವಾಗ್ಬಾಣಗಳಿಗಿದೆ. ಆದ್ದರಿಂದ ವಿದ್ವಾಂಸನಾದವನು ಅಂತಹ ಕಠಿಣವಾದ ವಾಗ್ಬಾಣಗಳನ್ನು ಇತರರ ಮೇಲೆ ಪ್ರಯೋಗಿಸಬಾರದು.

ಪರಶ್ಚೇದೇನಮತಿವಾದಬಾಣೈ-
ರ್ಭೃಶಂ ವಿಧ್ಯೇಚ್ಚಮ ಏವೇಹ ಕಾರ್ಯಃ ।
ಸಂರೋಷ್ಯಮಾಣಃ ಪ್ರತಿಮೃಷ್ಯತೇ ಯಃ
ಸ ಆದತ್ತೇ ಸುಕೃತಂ ವೈ ಪರಸ್ಯ ॥೧೦॥

ಬೇರೆಯವರು ವಿದ್ವಾಂಸನನ್ನು ನಿಂದಾರೂಪವಾದ ವಾಗ್ಬಾಣಗಳಿಂದ ಬಲವಾಗಿ ಪ್ರಹರಿಸಿದರೆ ವಿದ್ವಾಂಸನು ಪ್ರತಿಯಾಗಿ ಅವನನ್ನು ವಾಗ್ಬಾಣದಿಂದ ಪ್ರಹರಿಸದೆ ಶಾಂತನಾಗಿಯೇ ಇರಬೇಕು. ಯಾವನು ತನ್ನ ಮೇಲೆ ಕೋಪಗೊಂಡರೂ ಪ್ರಸನ್ನನಾಗಿಯೇ ಇರುತ್ತಾನೋ ಅವನು ಕೋಪದಲ್ಲಿರುವ ಪುಣ್ಯವನ್ನು ತನ್ನ ವಶಕ್ಕೆ ಪಡೆದುಕೊಳ್ಳುತ್ತಾನೆ.

ಕ್ಷೇಪಾಭಿಮಾನಾದಭಿಷಂಗವ್ಯಲೀಕಂ
ನಿಗೃಹ್ಣಾತಿ ಜ್ವಲಿತಂ ಯಶ್ಚ ಮನ್ಯುಮ್ ।
ಅದುಷ್ಟಚೇತಾ ಮುದಿತೋಽನಸೂಯುಃ
ಸ ಆದತ್ತೇ ಸುಕೃತಂ ವೈ ಪರೇಷಾಮ್ ॥೧೧॥

ನಿರ್ದೋಷಿಯು, ಹೊಟ್ಟೆಕಿಚ್ಚಿನಿಂದ ದೂರನಾದವನು, ಸಂತೋಷ ಮನಸ್ಕನೂ ಆದ ವ್ಯಕ್ತಿಯು ತನ್ನನ್ನು ಪ್ರಚೋದಿಸುವ, ತನಗೆ ನಿಜವಾದ ಶತ್ರುವಾದ ಕೋಪವೆಂಬ ಅಗ್ನಿಜ್ವಾಲೆಯನ್ನು ತನ್ನಲ್ಲಿಯೇ ತನ್ನ ಪ್ರಯತ್ನದಿಂದ ಶಾಂತಗೊಳಿಸುತ್ತಾನೋ ಅವನು ತನ್ನ ವಿರೋಧಿಗಳ ಪುಣ್ಯಗಳೆಲ್ಲವನ್ನೂ ಸೆಳೆದುಕೊಳ್ಳಲು ಸಮರ್ಥನಾಗುತ್ತಾನೆ.

ಆಕ್ರುಶ್ಯಮಾನೋ ನ ವದಾಮಿ ಕಿಂಚಿತ್
ಕ್ಷಮಾಮ್ಯಹಂ ತಾಡ್ಯಮಾನಶ್ಚ ನಿತ್ಯಮ್ ।
ಶ್ರೇಷ್ಠಂ ಹ್ಯೇತತ್ ಕ್ಷಮಮಪ್ಯಾಹುರಾರ್ಯಾಃ
ಸತ್ಯಂ ತಥೈವಾರ್ಜವಮಾನೃಶಂಸ್ಯಮ್ ॥೧೨॥

ಸಾಧ್ಯರೇ, ನನ್ನನ್ನು ನೋಡಿರಿ. ಮತ್ತೊಬ್ಬ ವ್ಯಕ್ತಿಯು ನನ್ನನ್ನು ನಿಂದಿಸುತ್ತಿದ್ದರೂ ಅವರಿಗೆ ನಾನು ಪ್ರತಿಯಾಗಿ ಎದುರು ಮಾತನ್ನು ಆಡುವುದಿಲ್ಲ. ಇತರರು ನನ್ನನ್ನು ಹೊಡೆಯುತ್ತಿದ್ದರೂ ನಾನು ಸಹಿಸಿಕೊಳ್ಳುತ್ತೇನೆ. ಇಂತಹ ಕ್ಷಮಾಗುಣವೇ ಬಹಳ ಶ್ರೇಷ್ಠವಾದ ಗುಣವೆಂದು ಪೂಜ್ಯರು ಹೇಳುತ್ತಾರೆ. ಕ್ಷಮೆ, ಸತ್ಯ , ಋಜುತ್ವ, ಅಕ್ರೌರ್ಯ ಈ ಗುಣಗಳನ್ನೇ ಶ್ರೇಷ್ಠವಾದ ಗುಣಗಳೆಂದು ಹೇಳುತ್ತಾರೆ.

ವೇದಸ್ಯೋಪನಿಷತ್ ಸತ್ಯಂ ಸತ್ಯಸ್ಯೋಪನಿಷದ್ ದಮಃ ।
ದಮಸ್ಯೋಪನಿಷನ್ಮೋಕ್ಷ ಏತತ್ ಸರ್ವಾನುಶಾಸನಮ್ ॥೧೩॥

ವೇದಗಳ ರಹಸ್ಯ ತತ್ತ್ವವು ಸತ್ಯನಿಷ್ಠೆಯೇ ಆಗಿದೆ. ಸತ್ಯನಿಷ್ಠೆಯ ರಹಸ್ಯವು ಇಂದ್ರಿಯನಿಗ್ರಹವೇ ಆಗಿದೆ. ಇಂದ್ರಿಯನಿಗ್ರಹದ ರಹಸ್ಯಫಲವು ಮೋಕ್ಷವೇ ಆಗಿದೆ. ಸಮಸ್ತ ಶಾಸ್ತ್ರಗಳ ಸಾರಭೂತವಾದ ಇತಿಹಾಸವೇ ಇದು.

ವಾಚೋ ವೇಗಂ ಮನಸಃ ಕ್ರೋಧವೇಗಂ
ವಿವಿತ್ಸಾವೇಗಮುದರೋಪಸ್ಥವೇಗಮ್ ।

ಏತಾನ್ ವೇಗಾನ್ ಯೋ ವಿಷಹತ್ಯುದೀರ್ಣಾಂ-
ಸ್ತಂ ಮನ್ಯೇಽಹಂ ಬ್ರಾಹ್ಮಣಂ ವೈ ಮುನಿಂ ಚ ॥೧೪॥

ಯಾವನು ಮಾತಿನ ವೇಗವನ್ನು, ಮನಸ್ಸಿನಲ್ಲುಂಟಾಗುವ ಕೋಪದ ವೇಗವನ್ನು, ಅಯೋಗ್ಯ ವಸ್ತುಗಳಲ್ಲಿ ಹುಟ್ಟುವ ತೀವ್ರ ಆಕಾಂಕ್ಷೆಯನ್ನು, ಹಸಿವು-ಬಾಯಾರಿಕೆ-ಕಾಮಾಭಿಲಾಷೆ ಇವುಗಳನ್ನೆಲ್ಲ ತನ್ನ ಶಕ್ತಿಯಿಂದ ಅಡಗಿಸಲು ಸಮರ್ಥನಾಗಿದ್ದಾನೋ ಅವನನ್ನೇ ಬ್ರಾಹ್ಮಣನೆಂದೂ, ಮುನಿ ಎಂದೂ ಭಾವಿಸುತ್ತೇನೆ.

ಅಕ್ರೋಧನಃ ಕ್ರುದ್ಧ್ಯತಾಂ ವೈ ವಿಶಿಷ್ಟ-
ಸ್ತಥಾ ತಿತಿಕ್ಷುರತಿತಿಕ್ಷೋರ್ವಿಶಿಷ್ಟಃ ।
ಅಮಾನುಷಾನ್ಮಾನುಷೋ ವೈ ವಿಶಿಷ್ಟ-
ಸ್ತಥಾಜ್ಞಾನಾಜ್ಜ್ಞಾನವಾನ್ ವೈ ಪ್ರಧಾನಃ ॥೧೫॥

ಕೋಪಶೀಲರಿಗಿಂತಲೂ ಕೋಪ ಇಲ್ಲದೆ ಇರುವವನು ಮೇಲೆನಿಸುತ್ತಾನೆ. ವಿರಕ್ತಿ ಇಲ್ಲದವನಿಗಿಂತಲೂ ವಿರಕ್ತಿ ಉಳ್ಳವನು ಶ್ರೇಷ್ಠನೆನಿಸುತ್ತಾನೆ. ಮನುಷ್ಯನಿಲ್ಲದೆ ಇರುವ ಅಶ್ವಾದಿಗಳಿಗಿಂತಲೂ ಮನುಷ್ಯಗುಣವುಳ್ಳವನು ಶ್ರೇಷ್ಠನೆನಿಸುತ್ತಾನೆ. ಇದರಂತೆ ಜ್ಞಾನಹೀನನಿಗಿಂತಲೂ ಜ್ಞಾನಿಯು ಶ್ರೇಷ್ಠನೆನಿಸುತ್ತಾನೆ.

ಆಕ್ರುಶ್ಯಮಾನೋ ನಕ್ರೋಶೇನ್ಮನ್ಯುರೇವ ತಿತಿಕ್ಷತಃ ।
ಆಕ್ರೋಷ್ಟಾರಂ ನಿರ್ದಹತಿ ಸುಕೃತಂ ಚಾಸ್ಯ ವಿಂದತಿ ॥೧೬॥

ಒಬ್ಬನು ನಿಂದಿಸುತ್ತಿದ್ದರೂ ಅದಕ್ಕೆ ಬದಲಾಗಿ ನಿಂದಿಸುವ ವ್ಯಕ್ತಿಯನ್ನು ಯಾವನು ನಿಂದಿಸುವುದಿಲ್ಲವೋ ಅಂತಹ ಕ್ಷಮಾಗುಣ ಉಳ್ಳಂತಹ ವ್ಯಕ್ತಿಗಳಲ್ಲಿ ತಡೆಯಲ್ಪಟ್ಟ ಕೋಪಾಗ್ನಿಯೇ ನಿಂದಿಸುವ ವ್ಯಕ್ತಿಯನ್ನು ತೃಣದಂತೆ ದಹಿಸಿಬಿಡುತ್ತದೆ. ಇಷ್ಟೇ ಅಲ್ಲದೆ, ನಿಂದಿಸುವವನಲ್ಲಿರುವ ಸುಕೃತವನ್ನು ಕ್ಷಮಾಶೀಲನಾದ ವ್ಯಕ್ತಿಯು ಪಡೆದುಕೊಳ್ಳುತ್ತಾನೆ.

ಯೋ ನಾತ್ಯುಕ್ತಃ ಪ್ರಾಹ ರೂಕ್ಷಂ ಪ್ರಿಯಂ ವಾ
ಯೋ ವಾ ಹತೋ ನ ಪ್ರತಿಹಂತಿ ಧೈರ್ಯಾತ್ ।
ಪಾಪಂ ಚ ಯೋ ನೇಚ್ಛತಿ ತಸ್ಯ ಹಂತು-
ಸ್ತಸ್ಮೈ ದೇವಾಃ ಸ್ಪೃಹಯಂತೇ ಸದೈವ ॥೧೭॥

ಯಾವನು ಬೇರೆ ವ್ಯಕ್ತಿಯು ನಿಂದಿಸುತ್ತಿದ್ದರೂ, ಸ್ತುತಿಸುತ್ತಿದ್ದರೂ ಕಠಿಣವಾದ ಮಾತುಗಳನ್ನಾಗಲಿ, ಪ್ರಿಯವಾದ ಮಾತುಗಳನ್ನಾಗಲಿ ಆಡುವುದಿಲ್ಲವೋ, ಬೇರೆಯವನು ಹೊಡೆಯುತ್ತಿದ್ದರೂ ಮನಸ್ಥೈರ್ಯವನ್ನು ಹೊಂದಿ ಅವನನ್ನು ಪ್ರತಿಯಾಗಿ ಹೊಡೆಯಲು ಹೋಗುವುದಿಲ್ಲವೋ, ಹೊಡೆಯುವ ವ್ಯಕ್ತಿಗೆ ಕೇಡನ್ನು ಬಯಸುವುದಿಲ್ಲವೋ ಅಂತಹ ಮಹಾತ್ಮನನ್ನು ನೋಡಲು ದೇವತೆಗಳೂ ಸದಾಕಾಲದಲ್ಲಿ ಆಸೆ ಪಡುತ್ತಾರೆ.

ಪಾಪೀಯಸಃ ಕ್ಷಮೇತೈವ ಶ್ರೇಯಸಃ ಸದೃಶಸ್ಯ ಚ ।
ವಿಮಾನಿತೋ ಹತೋಽಽಕ್ರುಷ್ಟ ಏವಂ ಸಿದ್ಧಿಂ ಗಮಿಷ್ಯತಿ ॥೧೮॥

ತನ್ನ ವಿಷಯದಲ್ಲಿ ಅಪರಾಧವನ್ನು ಮಾಡುವ, ತನಗಿಂತ ಅಧಮನಾದ ವ್ಯಕ್ತಿಯಾಗಿದ್ದರೂ, ತನಗಿಂತ ಉತ್ತಮನಾಗಿದ್ದರೂ, ತನಗೆ ಸಮಾನನಾದ ವ್ಯಕ್ತಿಯಾಗಿದ್ದರೂ ಅಂತಹ ವ್ಯಕ್ತಿಗಳಿಂದ ಅಪಮಾನಿಸಲ್ಪಟ್ಟರೆ, ಹೊಡೆಯಲ್ಪಟ್ಟರೆ ಅವರನ್ನು ಕ್ಷಮಿಸಬೇಕು. ಯಾವ ವಿಧವಾದ ಪ್ರತೀಕಾರವನ್ನು ಮಾಡಹೋಗಬಾರದು. ಕ್ಷಮಾಗುಣವನ್ನೇ ಆಶ್ರಯಿಸಿರುವ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.

ವ್ಯಾಖ್ಯಾನ ವಿಶೇಷ– 'ಕ್ಷಮಾ ಸರ್ವತ್ರ ಧರ್ಮೋ ನ ಪಾಪಹೇತುಶ್ಚ ದುರ್ಜನೇ' ಭಗವಂತನ ದ್ವೇಷಿಗಳಲ್ಲಿ ಕ್ಷಮಾಗುಣವು ಪ್ರಶಸ್ತವಾದುದೇನಲ್ಲ. ತನ್ನ ವೈಯಕ್ತಿಕ ದ್ವೇಷ– ನಿಂದನೆಗಳಿಗೆ ಸಂಬಂಧಪಟ್ಟಂತೆ ಈ ಕ್ಷಮಾಗುಣದ ಬಗ್ಗೆ ವೇದವ್ಯಾಸದೇವರು ವರ್ಣಿಸಿರುತ್ತಾರೆ. ಯಾರು ಭಗವಂತನನ್ನೇ ದ್ವೇಷಿಸುತ್ತಾರೋ ಅಂತಹವರ ಬಗ್ಗೆ ಕ್ಷಮಾ ಗುಣ ಎನ್ನುವುದು ಉಚಿತವಾದುದು ಎಂದೇ ಶ್ರೀಮದಾಚಾರ್ಯರ ಅಭಿಪ್ರಾಯವಾಗಿದೆ.

ಸದಾಹಮಾರ್ಯಾನ್ನಿಭೃತೋಽಪ್ಯುಪಾಸೇ
ನ ಮೇ ವಿವಿತ್ಸಾ ನ ಚ ಮೇಽಸ್ತಿ ರೋಷಃ ।
ನ ಚಾಪ್ಯಹಂ ಲಿಪ್ಸಮಾನಃ ಪರೈಮಿ
ನ ಚೈವ ಕಿಂಚಿದ್ ವಿಷಮೇಣ ಯಾಮಿ ॥೧೯॥

ಸಾಧ್ಯದೇವತೆಗಳೇ, ನಾನು ಎಲ್ಲವನ್ನೂ ಪಡೆದು ಕೃತಾರ್ಥನಾಗಿದ್ದರೂ ಪೂಜ್ಯರನ್ನು ಸೇವಿಸಲು ಬಯಸುತ್ತೇನೆ. ನನಗೆ ವಿಷಯದ ಅಭಿಲಾಷೆಗಳಾಗಲಿ, ರೋಷವಾಗಲಿ, ಉತ್ಸಾಹದಿಂದ ಕಾರ್ಯವನ್ನು ಮಾಡವು. ಅವುಗಳ ವಿಷಯದಲ್ಲಿ ಉತ್ಸಾಹವನ್ನು

ಹೊಂದುವುದಿಲ್ಲ. ಯಾವುದನ್ನಾದರೂ ಪಡೆದುಕೊಳ್ಳಬೇಕೆಂಬ ಲೋಭದಿಂದ ಅಧರ್ಮ ಮಾರ್ಗವನ್ನು ಅನುಸರಿಸಿ ನಡೆಯುವುದಿಲ್ಲ. ವಿಷಯಾಪೇಕ್ಷೆಯನ್ನು ಬಯಸಿ ಎಂದೂ ಪ್ರವೃತ್ತಿಯನ್ನು ಮಾಡೆನು.

ನಾಹಂ ಶಪ್ತಃ ಪ್ರತಿಶಪಾಮಿ ಕಿಂಚಿದ್-
ದಮಂ ದ್ವಾರಂ ಹ್ಯಮೃತಸ್ಯೇಹ ವೇದ್ಮಿ ।
ಗುಹ್ಯಂ ಬ್ರಹ್ಮ ತದಿದಂ ವೋ ಬ್ರವೀಮಿ
ನ ಮಾನುಷಾಚ್ಛ್ರೇಷ್ಠತರಂ ಹಿ ಕಿಂಚಿತ್ ॥೨೦॥

ನನ್ನನ್ನು ಯಾರಾದರೂ ಶಪಿಸಿದಲ್ಲಿ ಪ್ರತಿಯಾಗಿ ನಾನು ಶಾಪ ಕೊಡುವುದಿಲ್ಲ. ಇಂದ್ರಿಯಗಳ ನಿಗ್ರಹವು ಮೋಕ್ಷದ್ವಾರವೆಂದು ಅರಿತಿದ್ದೇನೆ. ಈ ಪ್ರಸಂಗದಲ್ಲಿ ಒಂದು ರಹಸ್ಯವನ್ನು ವಿವರಿಸುತ್ತೇನೆ, ಕೇಳಿರಿ. ಮನುಷ್ಯನ ಯೋನಿಗಿಂತಲೂ ಅಧಿಕವಾದ ಯೋನಿಯು ಮತ್ತೊಂದಿರುವುದಿಲ್ಲ.

ವಿಮುಚ್ಯಮಾನಃ ಪಾಪೇಭ್ಯೋ ಧನೇಭ್ಯ ಇವ ಚಂದ್ರಮಾಃ ।
ವಿರಜಾಃ ಕಾಲಮಾಕಾಂಕ್ಷನ್ ಧೀರೋ ಧೈರ್ಯೇಣ ಸಿದ್ಧ್ಯತಿ ॥೨೧॥

ಮನುಷ್ಯನಾಗಿ ಹುಟ್ಟಿದವನು ಮೋಡಗಳಿಂದ ಬಿಡಲ್ಪಟ್ಟ ಚಂದ್ರನಂತೆ ಪಾಪಗಳಿಂದಲೂ ಧನಾದಿಗಳಿಂದಲೂ ಮುಕ್ತನಾಗಿ ಧೈರ್ಯದಿಂದ ಕಾಲವನ್ನು ಪ್ರತೀಕ್ಷಿಸುತ್ತಿದ್ದರೆ ಸಿದ್ಧಿಯನ್ನು ಹೊಂದುತ್ತಾನೆ.

ಯಃ ಸರ್ವೇಷಾಂ ಭವತಿ ಹ್ಯರ್ಚನೀಯ
ಉತ್ಸೇಚನೇ ಸ್ತಂಭ ಇವಾಭಿಜಾತಃ ।
ಯಸ್ಮೈ ವಾಚಂ ಸುಪ್ರಶಂಸ್ತಾಂ ವದಂತಿ
ಸ ವೈ ದೇವಾನ್ ಗಚ್ಛತಿ ಸಂಯತಾತ್ಮಾ ॥೨೨॥

ಯಾವನು ತನ್ನಲ್ಲಿ ಗರ್ವಪಡುವ ಗುಣಗಳು ಇದ್ದಾಗಲೂ ಕಂಬದಂತೆ ನಿಶ್ಚಲನಾಗಿ ಎಲ್ಲರಿಗೂ ಪೂಜ್ಯನೆನಿಸಿರುತ್ತಾನೋ, ಯಾವನನ್ನು ಕುರಿತು ಎಲ್ಲರೂ ಒಳ್ಳೆಯ ಮಾತುಗಳನ್ನೇ ಹೇಳುತ್ತಾರೋ ಅಂತಹ ವ್ಯಕ್ತಿಯು ದೇವತೆಗಳ ಸಾಮೀಪ್ಯವನ್ನು ಹೊಂದುತ್ತಾನೆ.

ನ ತಥಾ ವಕ್ತುಮಿಚ್ಛಂತಿ ಕಲ್ಯಾಣಾನ್ ಪುರುಷೇ ಗುಣಾನ್ ।
ಯಥೈಷಾಂ ವಕ್ತುಮಿಚ್ಛಂತಿ ನೈರ್ಗುಣ್ಯಮನುಯುಂಜಕಾಃ ॥೨೩॥

ಯಾರು ಇತರರ ಕುರಿತಾಗಿ ಅವರ ದುರ್ಗುಣಗಳನ್ನು ಹೇಳಲು ಬಯಸುತ್ತಿರುತ್ತಾರೋ ಅಂತಹ ವ್ಯಕ್ತಿಗಳು ಅವರಲ್ಲಿರುವ ಕಲ್ಯಾಣಗುಣಗಳನ್ನು ಹೇಳಲು ಎಂದೂ ಇಚ್ಛಿಸಲ್ಪಡುವುದಿಲ್ಲ.

ಯಸ್ಯ ವಾಙ್ಮನಸೀ ಗುಪ್ತೇ ಸಮ್ಯಕ್‌ಪ್ರಣಿಹಿತೇ ಸದಾ ।
ವೇದಾಸ್ತಪಶ್ಚ ತ್ಯಾಗಶ್ಚ ಸ ಇದಂ ಸರ್ವಮಾಪ್ನುಯಾತ್ ॥೨೪॥

ಯಾವ ವ್ಯಕ್ತಿಯ ಮಾತು, ಮನಸ್ಸು ಸದಾ ರಹಸ್ಯವಾಗಿ ಪರಮಾತ್ಮನಲ್ಲಿಯೇ ಆಸಕ್ತವಾಗಿರುತ್ತದೋ ಅಂತಹ ವ್ಯಕ್ತಿಯು ವೇದಾಧ್ಯಯನ, ತಪಸ್ಸು, ತ್ಯಾಗ ಇವುಗಳ ಫಲವನ್ನು ಪಡೆದುಕೊಳ್ಳುತ್ತಾನೆ.

ಆಕ್ರೋಶನಾವಮಾನಾಭ್ಯಾಮಬುಧಾದ್ ವರ್ಧತೇ ಬುಧಃ ।
ತಸ್ಮಾನ್ನ ವರ್ಧಯೇದನ್ಯಂ ನ ಚಾತ್ಮಾನಂ ವಿಹಿಂಸಯೇತ್ ॥೨೫॥

ವಿದ್ವಾಂಸನು ಅಜ್ಞಾನಿಗಳಿಗೆ ಬೋಧಿಸುವಾಗ ನಿಂದಿಸದೆ, ಅವಮಾನ ಮಾಡದೆ ಬೋಧಿಸಬೇಕು. ಅಜ್ಞಾನಿಗಳ ಎದುರಿನಲ್ಲಿ ಮತ್ತೊಬ್ಬರ ಆಧಿಕ್ಯವನ್ನು ವರ್ಣಿಸಬಾರದು. ಬೇರೆಯವರ ಆಧಿಕ್ಯವನ್ನು ಹೇಳಲು ಹೋದರೆ ಅದರಿಂದ ಕೆರಳಿದ ಅವರು ಹಿಂಸೆಗೆ ಮುಂದಾಗಬಹುದು. ಆದ್ದರಿಂದ ಅಂತಹ ವ್ಯಕ್ತಿಗಳ ಬಳಿ ಜಾಗೃತನಾಗಿರಬೇಕು ಎಂದು ಭಾವ.

ಅಮೃತಸ್ಯೇವ ಸನ್ತೃಪ್ಯೇದವಮಾನಸ್ಯ ವೈ ದ್ವಿಜಃ ।
ಸುಖಂ ಹ್ಯವಮತಃ ಶೇತೇ ಯೋವಮಂತಾ ಸ ನಶ್ಯತಿ ॥೨೬॥

ದುಷ್ಪರೇನಾದರೂ ಅಪಮಾನವನ್ನು ಮಾಡಿದರೆ ಅಪಮಾನಕ್ಕೆ ತುತ್ತಾದ ವಿದ್ವಾಂಸನು ಅಮೃತವನ್ನು ಪಾನ ಮಾಡಿದವನಂತೆ ಸಂತುಷ್ಟನಾಗಿರಬೇಕು. ಕಾರಣ ಅಪಮಾನಕ್ಕೆ ತುತ್ತಾದ ಪುರುಷನು ಸುಖವಾಗಿ ನಿದ್ರಿಸುತ್ತಾನೆ. ಆದರೆ ಅವಮಾನ ಮಾಡಿದ ವ್ಯಕ್ತಿಯು ವಿನಾಶಕ್ಕೆ ತುತ್ತಾಗುತ್ತಾನೆ.

ಯತ್ಕೋಧನೋ ಯಜತೇ ಯದ್ ದದಾತಿ
ಯದ್ವಾ ತಪಸ್ತಪ್ಯತಿ ಯಜ್ಜುಹೋತಿ ।
ವೈವಸ್ವತಸ್ತದ್ಧರತೇಽಸ್ಯ ಸರ್ವಂ
ಮೋಘಃ ಶ್ರಮೋ ಭವತಿ ಕ್ರೋಧನಸ್ಯ ॥೨೭॥

ಕ್ರುದ್ಧನಾದ ಮನುಷ್ಯನು ಮಾಡಿದ ಯಜ್ಞ, ದಾನ, ತಪಸ್ಸು, ಹೋಮ - ಈ ಎಲ್ಲಸತ್ಕರ್ಮಗಳ ಫಲವನ್ನು ಯಮರಾಜನು ಅಪಹರಿಸುತ್ತಾನೆ. ಆದ್ದರಿಂದ ಕ್ರುದ್ಧನಾಗಿ ಮಾಡಿದ ಸತ್ಕರ್ಮಗಳ ಫಲವೆಲ್ಲವೂ, ಶ್ರಮವೆಲ್ಲವೂ ವ್ಯರ್ಥವಾದಂತೆಯೇ ಸರಿ.

ಚತ್ವಾರಿ ಯಸ್ಯ ದ್ವಾರಾಣಿ ಸುಗುಪ್ತಾನ್ಯಮರೋತ್ತಮಾಃ ।
ಉಪಸ್ಥಮುದರಂ ಹಸ್ತೌ ವಾಕ್ಚತುರ್ಥೀ ಸ ಧರ್ಮವಿತ್ ॥೨೮॥

ದೇವೋತ್ತಮರೇ, ಯಾವ ಪುರುಷನ ಉಪಸ್ಥ, ಉದರ, ಕೈಗಳು, ಮಾತು - ಈ ನಾಲ್ಕು ದ್ವಾರಗಳು ಸುರಕ್ಷಿತವಾಗಿರುವವೋ ಅವನೇ ಧರ್ಮಜ್ಞನೆಂದು ತಿಳಿಯಿರಿ.

ಸತ್ಯಂ ದಮಂ ಹ್ಯಾರ್ಜವಮಾನೃಶಂಸ್ಯಂ
ಧೃತಿಂ ತಿತಿಕ್ಷಾಮಭಿಸೇವಮಾನಃ ।
ಸ್ವಾಧ್ಯಾಯನಿತ್ಯೋಽಸ್ಪೃಹಯನ್ ಪರೇಷಾ-
ಮೇಕಾಂತಶೀಲ್ಯೂರ್ಧ್ವಗತಿರ್ಭವೇತ್ ಸಃ ॥೨೯॥

ಯಾವ ಮನುಷ್ಯನು ಸತ್ಯ, ಇಂದ್ರಿಯನಿಗ್ರಹ, ಆರ್ಜವ, ದಯಾ, ಧೈರ್ಯ, ಕ್ಷಮಾ ಎಂಬ ಶ್ರೇಷ್ಠ ಗುಣಗಳನ್ನು ಅಧಿಕವಾಗಿ ಹೊಂದಿರುತ್ತಾನೋ, ವೇದಾಧ್ಯಯನ ನಿರತನಾಗಿರುತ್ತಾನೋ, ಮತ್ತೊಬ್ಬರ ದ್ರವ್ಯಗಳಿಗೆ ಆಸೆ ಪಡುವುದಿಲ್ಲವೋ, ಏಕಾಂತದಲ್ಲಿ ಇರುವ ಸ್ವಭಾವವುಳ್ಳವನೋ ಅಂತಹವನು ಮೋಕ್ಷವನ್ನು ಹೊಂದುತ್ತಾನೆ.

ಸರ್ವಾನೇತಾನನುಚರನ್ ವತ್ಸವಚ್ಚತುರಃ ಸ್ತನಾನ್ ।
ನ ಪಾವನತಮಂ ಕಿಂಚಿತ್ ಸತ್ಯಾದಧ್ಯಗಮಂ ಕ್ವಚಿತ್ ॥೩೦॥

ಹೇಗೆ ಹಸುವಿನ ಬಳಿ ಹೋಗಿರುವ ಕರುವು ನಾಲ್ಕು ಮೊಲೆಗಳಲ್ಲಿರುವ ಹಾಲನ್ನು ಕುಡಿಯುತ್ತದೋ ಇದರಂತೆ ಮೇಲೆ ಹೇಳಿದ ಸದ್ಗುಣಗಳನ್ನು ಯಾವತ್ತೂ

ಆಚರಣೆಯಲ್ಲಿಟ್ಟುಕೊಳ್ಳಬೇಕು. ನಾನು ಇಷ್ಟರತನಕ ಸತ್ಯಕ್ಕಿಂತಲೂ ಶ್ರೇಷ್ಠವಾದ ಬೇರೆ ಯಾವ ವಸ್ತುವನ್ನು ಯಾರಿಂದಲೂ ಪಡೆದುಕೊಂಡಿರುವುದಿಲ್ಲ.

ಆಚಕ್ಷೇऽಹಂ ಮನುಷ್ಯೇಭ್ಯೋ ದೇವೇಭ್ಯಃ ಪ್ರತಿಸಂಚರನ್ ।
ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ ॥೩೧॥

ಎಲ್ಲಕಡೆಯಲ್ಲಿಯೂ ಸಂಚರಿಸುತ್ತಾ ದೇವತೆಗಳಿಗೆ, ಮನುಷ್ಯರಿಗೆ ಸತ್ಯವು ಸ್ವರ್ಗದ ಸೋಪಾನವೆಂದೂ, ಸಮುದ್ರವನ್ನು ದಾಟುವ ನೌಕೆಯಂತೆ ಸಾಧನವೆಂದು ಹೇಳುತ್ತಲೇ ಇದ್ದೇನೆ.

ಯಾದೃಶೈಃ ಸನ್ನಿವಸತಿ ಯಾದೃಶಾಂಶ್ಚೋಪಸೇವತೇ ।
ಯಾದೃಗಿಚ್ಛೇಚ್ಚ ಭವಿತುಂ ತಾದೃಗ್ ಭವತಿ ಪೂರುಷಃ ॥೩೨॥

ಮನುಷ್ಯನು ಎಂತಹ ಮನುಷ್ಯರ ಜೊತೆ ವಾಸ ಮಾಡುತ್ತಾನೋ, ಎಂತಹ ಪುರುಷರ ಸೇವೆಯನ್ನು ಮಾಡುತ್ತಾನೋ, ಯಾವ ರೀತಿ ಇರಬೇಕೆಂದು ಬಯಸುತ್ತಾನೋ ಹಾಗೆಯೇ ಆಗುತ್ತಾನೆ.

ಯದಿ ಸಂತಂ ಸೇವತೇ ಯದ್ಯಸಂತಂ
ತಪಸ್ವಿನಂ ಯದಿ ವಾ ಸ್ತೇನಮೇವ ।
ವಾಸೋ ಯಥಾ ರಂಗವಶಂ ಪ್ರಯಾತಿ
ತಥಾ ಸ ತೇಷಾಂ ವಶಮಭ್ಯುಪೈತಿ ॥೩೩॥

ಬೆಳ್ಳಗಿರುವ ಬಟ್ಟೆಗೆ ಯಾವ ಬಣ್ಣವನ್ನು ಹಾಕುತ್ತೇವೋ ಆ ಬಣ್ಣದ ರೂಪದಲ್ಲಿ ವಸ್ತ್ರವು ಪರಿವರ್ತನೆಯನ್ನು ಹೊಂದುತ್ತದೆ. ಅದರಂತೆ ಮನುಷ್ಯನು ಸತ್ಪುರುಷರ ಸೇವೆಯಿಂದ ಸಜ್ಜನನೂ, ಅಸತ್ಪುರುಷರ ಸಹವಾಸದಿಂದ ಅಸಜ್ಜನನೂ ಆಗುತ್ತಾನೆ. ತಪಸ್ವಿಜನರ ಸೇವೆಯಿಂದ ತಪಸ್ವಿಯಾದರೆ, ಕಳ್ಳನ ಸಂಗದಿಂದ ಕಾಲಾನುಗುಣವಾಗಿ ಕಳ್ಳನೇ ಆಗುತ್ತಾನೆ.

ಸದಾ ದೇವಾಃ ಸಾಧುಭಿಃ ಸಂವದಂತೇ
ನ ಮಾನುಷಂ ವಿಷಯಂ ಯಾಂತಿ ದ್ರಷ್ಟುಮ್ ।

ನೇಂದುಃ ಸಮಃ ಸ್ಯಾದಸಮೋ ಹಿ ವಾಯು-
ರುಚ್ಚಾವಚಂ ವಿಷಯಂ ಯಃ ಸ ವೇದ ॥೩೪॥

ದೇವತೆಗಳು ಯಾವಾಗಲೂ ಸತ್ಪುರುಷರ ಸಂಗವನ್ನು ಮಾಡುತ್ತಾ ಅವರ ಜೊತೆ ವಾಸ ಮಾಡುತ್ತಾರೆ. ಆದ್ದರಿಂದ ಮನುಷ್ಯಯೋನಿಗೆ ಸಂಬಂಧಿಸಿದ ಕ್ಷಣಿಕ ಸುಖಗಳನ್ನು ನೋಡಿಯೂ ಅಂಧರಂತಿರುತ್ತಾರೆ, ಕೇಳಿಯೂ ಕಿವುಡರಂತೆ ಇರುತ್ತಾರೆ. ಆದ್ದರಿಂದ ವಿಷಯ ಸುಖಗಳು ಕ್ಷಣಿಕವಾದವುಗಳು, ತಾತ್ಕಾಲಿಕವಾದವುಗಳು ಎಂದು ಯಾವನು ತಿಳಿದಿರುತ್ತಾನೋ ಅಂತಹ ವ್ಯಕ್ತಿಗೆ ಚಂದ್ರನೂ ಸಮಾನನಾಗಿರುವುದಿಲ್ಲ, ವಾಯುವೂ ಸಮಾನನಾಗಿರುವುದಿಲ್ಲ.

ಅದುಷ್ಟಂ ವರ್ತಮಾನೇ ತು ಹೃದಯಾಂತರಪೂರುಷೇ ।
ತೇನೈವ ದೇವಾಃ ಪ್ರೀಯಂತೇ ಸತಾಂ ಮಾರ್ಗಸ್ಥಿತೇನ ವೈ ॥೩೫॥

ಹೃದಯದಲ್ಲಿರುವ ಜೀವಾತ್ಮನು ರಾಗ-ದ್ವೇಷರಹಿತನಾದಾಗ, ಸತ್ಪುರುಷರ ಸನ್ಮಾರ್ಗವನ್ನೇ ಆಶ್ರಯಿಸಿದಾಗ ಅಂತಹ ಆ ಸನ್ಮಾರ್ಗದಲ್ಲಿರುವ ವ್ಯಕ್ತಿಯನ್ನು ಕಂಡೇ ದೇವತೆಗಳು ಪ್ರಸನ್ನರಾಗುತ್ತಾರೆ.

ಶಿಶ್ನೋದರೇ ಯೇಽಭಿರತಾಃ ಸದೈವ
ಸ್ತೇನಾ ನರಾ ವಾಕ್ಪರುಷಾಶ್ಚ ನಿತ್ಯಮ್ ।
ಅಪೇತದೋಷಾನಿತಿ ತಾನ್ ವಿದಿತ್ವಾ
ದೂರಾದ್ ದೇವಾಃ ಸಂಪರಿವರ್ಜಯಂತಿ ॥೩೬॥

ಉಪಸ್ಥ, ಉದರಗಳ ಪೂರಣಗಳಿಗಾಗಿಯೇ ಆಸಕ್ತರಾಗಿರುತ್ತಾರೋ, ಕಳ್ಳರಾಗಿ ಕಠೋರ ಮಾತುಗಳನ್ನಾಡುತ್ತಿರುತ್ತಾರೋ ಅಂತಹ ಮನುಷ್ಯರು ಪ್ರಾಯಶ್ಚಿತ್ತದಿಂದ ದೋಷಗಳನ್ನು ಪರಿಹರಿಸಿಕೊಂಡಿದ್ದೇವೆ ಎಂದು ತಿಳಿದಿದ್ದರೂ ದೇವತೆಗಳು ಅವರನ್ನು ದೂರದಿಂದಲೇ ತ್ಯಜಿಸುತ್ತಾರೆ.

ನ ವೈ ದೇವಾ ಹೀನಸತ್ತ್ವೇನ ತೋಷ್ಯಾಃ
ಸರ್ವಾಶಿನಾ ದುಷ್ಕೃತಕರ್ಮಣಾ ವಾ ।
ಸತ್ಯವ್ರತಾ ಯೇ ತು ನರಾಃ ಕೃತಜ್ಞಾ
ಧರ್ಮೇ ರತಾಸ್ತೈಃ ಸಹ ಸಂಭಜಂತೇ ॥೩೭॥

ಆಚರಣೆಯಲ್ಲಿಟ್ಟುಕೊಳ್ಳಬೇಕು. ನಾನು ಇಷ್ಟರತನಕ ಸತ್ಯಕ್ಕಿಂತಲೂ ಶ್ರೇಷ್ಠವಾದ ಬೇರೆ ಯಾವ ವಸ್ತುವನ್ನು ಯಾರಿಂದಲೂ ಪಡೆದುಕೊಂಡಿರುವುದಿಲ್ಲ.

ಆಚಕ್ಷೇऽಹಂ ಮನುಷ್ಯೇಭ್ಯೋ ದೇವೇಭ್ಯಃ ಪ್ರತಿಸಂಚರನ್ ।
ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ ॥೩೧॥

ಎಲ್ಲ ಕಡೆಯಲ್ಲಿಯೂ ಸಂಚರಿಸುತ್ತಾ ದೇವತೆಗಳಿಗೆ, ಮನುಷ್ಯರಿಗೆ ಸತ್ಯವು ಸ್ವರ್ಗದ ಸೋಪಾನವೆಂದೂ, ಸಮುದ್ರವನ್ನು ದಾಟುವ ನೌಕೆಯಂತೆ ಸಾಧನವೆಂದು ಹೇಳುತ್ತಲೇ ಇದ್ದೇನೆ.

ಯಾದೃಶೈಃ ಸನ್ನಿವಸತಿ ಯಾದೃಶಾಂಶ್ಚೋಪಸೇವತೇ ।
ಯಾದೃಗಿಚ್ಛೇಚ್ಚ ಭವಿತುಂ ತಾದೃಗ್ ಭವತಿ ಪೂರುಷಃ ॥೩೨॥

ಮನುಷ್ಯನು ಎಂತಹ ಮನುಷ್ಯರ ಜೊತೆ ವಾಸ ಮಾಡುತ್ತಾನೋ, ಎಂತಹ ಪುರುಷರ ಸೇವೆಯನ್ನು ಮಾಡುತ್ತಾನೋ, ಯಾವ ರೀತಿ ಇರಬೇಕೆಂದು ಬಯಸುತ್ತಾನೋ ಹಾಗೆಯೇ ಆಗುತ್ತಾನೆ.

ಯದಿ ಸಂತಂ ಸೇವತೇ ಯದ್ಯಸಂತಂ
ತಪಸ್ವಿನಂ ಯದಿ ವಾ ಸ್ತೇನಮೇವ ।
ವಾಸೋ ಯಥಾ ರಂಗವಶಂ ಪ್ರಯಾತಿ
ತಥಾ ಸ ತೇಷಾಂ ವಶಮಭ್ಯುಪೈತಿ ॥೩೩॥

ಬೆಳ್ಳಗಿರುವ ಬಟ್ಟೆಗೆ ಯಾವ ಬಣ್ಣವನ್ನು ಹಾಕುತ್ತೇವೋ ಆ ಬಣ್ಣದ ರೂಪದಲ್ಲಿ ವಸ್ತ್ರವು ಪರಿವರ್ತನೆಯನ್ನು ಹೊಂದುತ್ತದೆ. ಅದರಂತೆ ಮನುಷ್ಯನು ಸತ್ಪುರುಷರ ಸೇವೆಯಿಂದ ಸಜ್ಜನನೂ, ಅಸತ್ಪುರುಷರ ಸಹವಾಸದಿಂದ ಅಸಜ್ಜನನೂ ಆಗುತ್ತಾನೆ. ತಪಸ್ವಿ ಜನರ ಸೇವೆಯಿಂದ ತಪಸ್ವಿಯಾದರೆ, ಕಳ್ಳನ ಸಂಗದಿಂದ ಕಾಲಾನುಗುಣವಾಗಿ ಕಳ್ಳನೇ ಆಗುತ್ತಾನೆ.

ಸದಾ ದೇವಾಃ ಸಾಧುಭಿಃ ಸಂವದಂತೇ
ನ ಮಾನುಷಂ ವಿಷಯಂ ಯಾಂತಿ ದ್ರಷ್ಟುಮ್ ।

ನೇಂದುಃ ಸಮಃ ಸ್ಯಾದಸಮೋ ಹಿ ವಾಯು-
ರುಚ್ಚಾವಚಂ ವಿಷಯಂ ಯಃ ಸ ವೇದ ॥೩೪॥

ದೇವತೆಗಳು ಯಾವಾಗಲೂ ಸತ್ಪುರುಷರ ಸಂಗವನ್ನು ಮಾಡುತ್ತಾ ಅವರ ಜೊತೆ ವಾಸ ಮಾಡುತ್ತಾರೆ. ಆದ್ದರಿಂದ ಮನುಷ್ಯಯೋನಿಗೆ ಸಂಬಂಧಿಸಿದ ಕ್ಷಣಿಕ ಸುಖಗಳನ್ನು ನೋಡಿಯೂ ಅಂಧರಂತಿರುತ್ತಾರೆ, ಕೇಳಿಯೂ ಕಿವುಡರಂತೆ ಇರುತ್ತಾರೆ. ಆದ್ದರಿಂದ ವಿಷಯ ಸುಖಗಳು ಕ್ಷಣಿಕವಾದವುಗಳು, ತಾತ್ಕಾಲಿಕವಾದವುಗಳು ಎಂದು ಯಾವನು ತಿಳಿದಿರುತ್ತಾನೋ ಅಂತಹ ವ್ಯಕ್ತಿಗೆ ಚಂದ್ರನೂ ಸಮಾನನಾಗಿರುವುದಿಲ್ಲ, ವಾಯುವೂ ಸಮಾನನಾಗಿರುವುದಿಲ್ಲ.

ಅದುಷ್ಟಂ ವರ್ತಮಾನೇ ತು ಹೃದಯಾಂತರಪೂರುಷೇ ।
ತೇನೈವ ದೇವಾಃ ಪ್ರೀಯಂತೇ ಸತಾಂ ಮಾರ್ಗಸ್ಥಿತೇನ ವೈ ॥೩೫॥

ಹೃದಯದಲ್ಲಿರುವ ಜೀವಾತ್ಮನು ರಾಗ-ದ್ವೇಷರಹಿತನಾದಾಗ, ಸತ್ಪುರುಷರ ಸನ್ಮಾರ್ಗವನ್ನೇ ಆಶ್ರಯಿಸಿದಾಗ ಅಂತಹ ಆ ಸನ್ಮಾರ್ಗದಲ್ಲಿರುವ ವ್ಯಕ್ತಿಯನ್ನು ಕಂಡೇ ದೇವತೆಗಳು ಪ್ರಸನ್ನರಾಗುತ್ತಾರೆ.

ಶಿಶ್ನೋದರೇ ಯೇಽಭಿರತಾಃ ಸದೈವ
ಸ್ತೇನಾ ನರಾ ವಾಕ್ಪರುಷಾಶ್ಚ ನಿತ್ಯಮ್ ।
ಅಪೇತದೋಷಾನಿತಿ ತಾನ್ ವಿದಿತ್ವಾ
ದೂರಾದ್ ದೇವಾಃ ಸಂಪರಿವರ್ಜಯಂತಿ ॥೩೬॥

ಉಪಸ್ಥ, ಉದರಗಳ ಪೂರಣಗಳಿಗಾಗಿಯೇ ಆಸಕ್ತರಾಗಿರುತ್ತಾರೋ, ಕಳ್ಳರಾಗಿ ಕಠೋರ ಮಾತುಗಳನ್ನಾಡುತ್ತಿರುತ್ತಾರೋ ಅಂತಹ ಮನುಷ್ಯರು ಪ್ರಾಯಶ್ಚಿತ್ತದಿಂದ ದೋಷಗಳನ್ನು ಪರಿಹರಿಸಿಕೊಂಡಿದ್ದೇವೆ ಎಂದು ತಿಳಿದಿದ್ದರೂ ದೇವತೆಗಳು ಅವರನ್ನು ದೂರದಿಂದಲೇ ತ್ಯಜಿಸುತ್ತಾರೆ.

ನ ವೈ ದೇವಾ ಹೀನಸತ್ತ್ವೇನ ತೋಷ್ಯಾಃ
ಸರ್ವಾಶಿನಾ ದುಷ್ಕೃತಕರ್ಮಣಾ ವಾ ।
ಸತ್ಯವ್ರತಾ ಯೇ ತು ನರಾಃ ಕೃತಜ್ಞಾ
ಧರ್ಮೇ ರತಾಸ್ತೈಃ ಸಹ ಸಂಭಜಂತೇ ॥೩೭॥

ಸಾತ್ವಿಕ ಗುಣವಿಲ್ಲದೆ ಮಾಡುವ ಸತ್ಕರ್ಮಗಳಾಗಲಿ, ಭಕ್ಷ್ಯಾಭಕ್ಷ್ಯ ವಿವೇಚನೆ ಇಲ್ಲದೆ ತಿನ್ನುವ ಸ್ವಭಾವವುಳ್ಳ ವ್ಯಕ್ತಿಗಳು ಮಾಡುವ ಕರ್ಮದಿಂದಾಗಲಿ, ಪಾಪಿಷ್ಠನು ಮಾಡುವ ಕರ್ಮದಿಂದಾಗಲಿ ದೇವತೆಗಳು ಪ್ರಸನ್ನರಾಗರು. ಯಾರು ಸತ್ಯನಿಷ್ಠರೋ, ಮಾಡಿದ ಉಪಕಾರವನ್ನು ಸ್ಮರಿಸುವವರೋ, ಧರ್ಮನಿಷ್ಠರೋ ಅವರೊಡನೆ ದೇವತೆಗಳು ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ.

ಅವ್ಯಾಹೃತಂ ವ್ಯಾಹೃತಾಚ್ಛ್ರೇಯ ಆಹುಃ
ಸತ್ಯಂ ವದೇದ್ ವ್ಯಾಹೃತಂ ತದ್ ದ್ವಿತೀಯಮ್ ।
ಧರ್ಮಂ ವದೇದ್ ವ್ಯಾಹೃತಂ ತತ್ತೃತೀಯಂ
ಪ್ರಿಯಂ ವದೇದ್ ವ್ಯಾಹೃತಂ ತಚ್ಚತುರ್ಥಮ್ ॥೩೮॥

ವ್ಯರ್ಥವಾದ ಮಾತನಾಡುವುದಕ್ಕಿಂತ ಮಾತನಾಡದಿರುವುದು ಗುಣವೆಂದು ವಿದ್ವಾಂಸರ ಅಭಿಪ್ರಾಯ. ಇದು ಮಾತಿನ ಮೊದಲನೆಯ ನಿಯಮ. ಮಾತನ್ನಾಡುವ ಪ್ರಸಂಗ ಬಂದಾಗಲೂ ಸತ್ಯವಾದ ಮಾತುಗಳನ್ನೇ ಹೇಳಬೇಕು, ಇದು ಎರಡನೆಯ ನಿಯಮ. ಸತ್ಯವಾದ ಮಾತಾಗಿದ್ದರೂ ಪ್ರಿಯವಾದುದ್ದನ್ನೇ ಹೇಳಬೇಕು ಎಂಬುದು ಮೂರನೆಯ ನಿಯಮ. ಸತ್ಯವೂ, ಪ್ರಿಯವೂ, ಧರ್ಮಸಮ್ಮತವಾದ ಮಾತನ್ನೇ ಆಡಬೇಕೆಂಬುದು ಮಾತಿನ ನಾಲ್ಕನೆಯ ನಿಯಮವೆನಿಸಿದೆ.

ಸಾಧ್ಯಾಃ

ಕೇನಾಯಮಾವೃತೋ ಲೋಕಃ ಕೇನ ವಾ ನ ಪ್ರಕಾಶತೇ ।
ಕೇನ ತ್ಯಜತಿ ಮಿತ್ರಾಣಿ ಕೇನ ಸ್ವರ್ಗಂ ನ ಗಚ್ಛತಿ ॥೩೯॥

ಸಾಧ್ಯರು– ಹಂಸಪಕ್ಷಿಯೇ, ಈ ಲೋಕವು ಯಾವುದರಿಂದ ಆವೃತವಾಗಿದೆ? ಯಾವ ಕಾರಣದಿಂದ ಈ ಲೋಕವು ಪ್ರಕಾಶಮಾನವಾಗುತ್ತಿಲ್ಲ? ಮನುಷ್ಯನು ಯಾವ ಕಾರಣದಿಂದ ಮಿತ್ರರನ್ನು ತ್ಯಜಿಸುತ್ತಾನೆ? ಯಾವ ದೋಷದಿಂದ ಮನುಷ್ಯನು ಸ್ವರ್ಗಕ್ಕೆ ಹೋಗುವುದಿಲ್ಲ?

ಹಂಸಃ

ಅಜ್ಞಾನೇನಾವೃತೋ ಲೋಕೋ ಮಾತ್ಸರ್ಯಾನ್ನ ಪ್ರಕಾಶತೇ ।
ಲೋಭಾತ್ತ್ಯಜತಿ ಮಿತ್ರಾಣಿ ಸಂಗಾತ್ ಸ್ವರ್ಗಂ ನ ಗಚ್ಛತಿ ॥೪೦॥

ಹಂಸ– ಪ್ರಪಂಚವು ಅಜ್ಞಾನದಿಂದ ಆವೃತವಾಗಿದೆ. ಅಸೂಯೆಯ ಕಾರಣದಿಂದ ಜನರು ಪ್ರಕಾಶಿಸುತ್ತಿಲ್ಲ. ಲೋಭದಿಂದ ಮಿತ್ರರನ್ನು ತ್ಯಜಿಸುತ್ತಾರೆ. ಪುತ್ರ-ಮಿತ್ರ ಮುಂತಾದವರಲ್ಲಿ ಇರುವ ಅತಿಯಾದ ರಾಗವು ಸ್ವರ್ಗಕ್ಕೆ ಪ್ರತಿಬಂಧವೆನಿಸಿದೆ.

ಸಾಧ್ಯಾಃ

ಕಃ ಸ್ವಿದೇಕೋ ರಮತೇ ಬ್ರಾಹ್ಮಣಾನಾಂ
ಕಃ ಸ್ವಿದೇಕೋ ಬಹುಭಿರ್ಜೋಷಮಾಸ್ತೇ ।
ಕಃ ಸ್ವಿದೇಕೋ ಬಲವಾನ್ ದುರ್ಬಲೋಽಪಿ
ಕಃ ಸ್ವಿದೇಷಾಂ ಕಲಹಂ ನಾನ್ವವೈತಿ ॥೪೧॥

ಸಾಧ್ಯರು– ಬ್ರಾಹ್ಮಣರಲ್ಲಿ ಸುಖಿಯಾದ ಒಬ್ಬ ಪುರುಷನು ಯಾರು? ಅನೇಕರ ಜೊತೆ ಇದ್ದರೂ ಮೌನಿಯಾಗಿರುವ ಒಬ್ಬ ಮನುಜನು ಯಾರು? ದುರ್ಬಲನಾಗಿದ್ದರೂ ಬಲಿಷ್ಠನಾಗಿರುವ ವ್ಯಕ್ತಿಯು ಯಾರು? ಯಾರೊಡನೆಯೂ ಜಗಳವಾಡದೆ ಇರುವ ಆ ವ್ಯಕ್ತಿ ಯಾರು?

ಹಂಸಃ

ಪ್ರಾಜ್ಞ ಏಕೋ ರಮತೇ ಬ್ರಾಹ್ಮಣಾನಾಂ
ಪ್ರಾಜ್ಞ ಏಕೋ ಬಹುಭಿರ್ಜೋಷಮಾಸ್ತೇ ।
ಪ್ರಾಜ್ಞ ಏಕೋ ಬಲವಾನ್ ದುರ್ಬಲೋಽಪಿ
ಪ್ರಾಜ್ಞ ಏಷಾಂ ಕಲಹಂ ನಾನ್ವವೈತಿ ॥೪೨॥

ಹಂಸ– ಬ್ರಹ್ಮಜ್ಞಾನಿಯಾದವನು ಬ್ರಾಹ್ಮಣರಲ್ಲಿ ಒಬ್ಬನೇ ಸುಖಪುರುಷನು. ಅನೇಕರ ಜೊತೆ ಇದ್ದರೂ ಪ್ರಾಜ್ಞನಾದ ವ್ಯಕ್ತಿಯು ಮೌನಿ ಎನಿಸುತ್ತಾನೆ. ಪ್ರಾಜ್ಞನು ದೈಹಿಕವಾಗಿ ದುರ್ಬಲನಾಗಿದ್ದರೂ ಬಲಿಷ್ಠನೆನಿಸುತ್ತಾನೆ. ಪ್ರಾಜ್ಞನಾದವನು ಯಾರ ಬಳಿಯೂ ಕದನಕ್ಕೆ ನಿಲ್ಲನು.

ಸಾಧ್ಯಾಃ

ಕಿಂ ಬ್ರಾಹ್ಮಣಾನಾಂ ದೇವತ್ವಂ ಕಿಂ ಚ ಸಾಧುತ್ವಮುಚ್ಯತೇ ।
ಅಸಾಧುತ್ವಂ ಚ ಕಿಂ ತೇಷಾಂ ಕಿಮೇಷಾಂ ಮಾನುಷಂ ಮತಮ್ ॥೪೩॥

ಸಾಧ್ಯರು– ಬ್ರಾಹ್ಮಣರಲ್ಲಿರುವ ದೈವತ್ವವು ಯಾವುದು? ಸಾಧುತ್ವವು ಯಾವುದು? ಅಸಾಧುತ್ವವು ಯಾವುದು? ಮನುಷ್ಯತ್ವವು ಯಾವುದು?

ಹಂಸಃ

ಸ್ವಾಧ್ಯಾಯ ಏಷಾಂ ದೇವತ್ವಂ ವ್ರತಂ ಸಾಧುತ್ವಮುಚ್ಯತೇ ।
ಅಸಾಧುತ್ವಂ ಪರೀವಾದೋ ಮೃತ್ಯುರ್ಮಾನುಷಮುಚ್ಯತೇ ॥೪೪॥

ಹಂಸ– ಸಾಧ್ಯಾಯ, ಅಧ್ಯಯನವೇ ದೇವತ್ವವೆನಿಸಿದೆ. ವ್ರತಪರಿಪಾಲನೆಯೇ ಸಾಧುತ್ವವು. ಚಾಡಿ ಮಾತುಗಳನ್ನು ಆಡುವುದೇ ಅಸಾಧುತ್ವವು. ಮರಣ ಧರ್ಮವೇ ಮನುಷ್ಯತ್ವವು.

ಭೀಷ್ಮಃ

ಸಂವಾದ ಇತ್ಯಯಂ ಶ್ರೇಷ್ಠಃ ಸಾಧ್ಯಾನಾಂ ಪರಿಕೀರ್ತಿತಃ ।
ಕ್ಷೇತ್ರಂ ವೈ ಕರ್ಮಣಾಂ ಯೋನಿಃ ಸದ್ಭಾವಃ ಸತ್ಯಮುಚ್ಯತೇ ॥೪೫॥

ಭೀಷ್ಮ– ಯುಧಿಷ್ಠಿರನೇ, ಸಾಧ್ಯರಿಗೂ ಹಂಸಕ್ಕೂ ನಡೆದ ಸಂವಾದವನ್ನು ವಿಧಿಬದ್ಧವಾಗಿ ಹೇಳಿದ್ದೇನೆ. ಎಲ್ಲ ಕರ್ಮಗಳಿಗೂ ಈ ಶರೀರವೇ ಮೂಲಕಾರಣವಾಗಿದೆ. ಸದ್ಭಾವವನ್ನೇ ಸತ್ಯವೆಂದು ಸಜ್ಜನರು ಹೇಳುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಹಂಸಗೀತಾ ನಾಮ
ದ್ವಾತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ಮೂರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಯೋಗಶಾಸ್ತ್ರವನ್ನು ಉಪದೇಶಿಸಿದುದು.

ಯುಧಿಷ್ಠಿರಃ

ಸಾಂಖ್ಯೇ ಯೋಗೇ ಚ ಮೇ ತಾತ ವಿಶೇಷಂ ವಕ್ತುಮರ್ಹಸಿ ।
ತವ ಸರ್ವಜ್ಞ ಸರ್ವಂ ಹಿ ವಿದಿತಂ ಕುರುಸತ್ತಮ ॥೧॥

ಯುಧಿಷ್ಠಿರ– ಧರ್ಮಜ್ಞನೇ, ಪಿತಾಮಹನೇ, ಸಾಂಖ್ಯ ಮತ್ತು ಯೋಗಗಳಲ್ಲಿ ಒಂದಕ್ಕೊಂದಕ್ಕೆ ಇರುವ ವಿಶೇಷ ಗುಣಗಳನ್ನು ಕೃಪೆಯಿಂದ ತಿಳಿಸು. ಕುರುಸತ್ತಮನೇ, ನಿನಗೆ ಎಲ್ಲ ವಿಷಯಗಳು ತಿಳಿದಿರುತ್ತವೆ. ಸರ್ವಜ್ಞನಾಗಿರುವಿ.

ಭೀಷ್ಮಃ

ಸಾಂಖ್ಯಾಃ ಸಾಂಖ್ಯಂ ಪ್ರಶಂಸಂತಿ ಯೋಗಾ ಯೋಗಂ ದ್ವಿಜಾತಯಃ ।
ವದಂತಿ ಕಾರಣಂ ಶ್ರೇಷ್ಠಂ ಭಾವನಾದ್ ಭಾವನಾಯ ವೈ ॥೨॥

ಭೀಷ್ಮ– ಯುಧಿಷ್ಠಿರನೇ, ಸಾಂಖ್ಯರು ಸಾಂಖ್ಯವನ್ನೇ ಶ್ರೇಷ್ಠವೆಂದು ಹೇಳಿದರೆ, ಯೋಗಜ್ಞರಾದ ಬ್ರಾಹ್ಮಣರು ಯೋಗಮಾರ್ಗವನ್ನೇ ಶ್ರೇಷ್ಠವೆಂದು ಹೇಳುತ್ತಾರೆ. ಸಾಂಖ್ಯರು, ಯೋಗಿಗಳು ತಮ್ಮ ತಮ್ಮ ಪಕ್ಷಗಳ ಶ್ರೇಷ್ಠತೆಯನ್ನು ಪ್ರತಿಪಾದಿಸಲು ಉತ್ತಮವಾದ ಯುಕ್ತಿಗಳನ್ನೇ ಹೇಳುತ್ತಾರೆ.

ಅನೀಶ್ವರಃ ಕಥಂ ಮುಚ್ಯೇದಿತ್ಯೇವಂ ಶತ್ರುಕರ್ಶನ ।
ವದಂತಿ ಕಾರಣೈಃ ಶ್ರೈಷ್ಠ್ಯಂ ಯೋಗಾಃ ಸಮ್ಯಙ್ಮನೀಷಿಣಃ ॥೩॥

ಶತ್ರುಕರ್ಶನನೇ, ಜ್ಞಾನಾದಿ ಸಾಮರ್ಥ್ಯರಹಿತನಾದ ವ್ಯಕ್ತಿಯು ಹೇಗೆ ಮೋಕ್ಷವನ್ನು ಹೊಂದಲು ಸಾಧ್ಯ ? ಎಂಬ ಶ್ರೇಷ್ಠವಾದ ಕಾರಣಗಳನ್ನು ಯೋಗಧ್ಯಾನ ನಿರತರಾಗಿರುವ, ಪರಲೋಕ ಸಾಧನವನ್ನು ಹೇಳುವ ಸಾಧಕರು ಪ್ರಶ್ನಿಸುತ್ತಾರೆ.

ವದಂತಿ ಕಾರಣಂ ಚೇದಂ ಸಾಂಖ್ಯಾಃ ಸಮ್ಯಗ್ದ್ವಿಜಾತಯಃ ।
ವಿಜ್ಞಾಯೇಹ ಗತೀಃ ಸರ್ವಾ ವಿರಕ್ತೋ ವಿಷಯೇಷು ಯಃ ॥೪॥

ಊರ್ಧ್ವಂ ಸ ದೇಹಾತ್ ಸುವ್ಯಕ್ತಂ ವಿಮುಚ್ಯೇದಿತಿ ನಾನ್ಯಥಾ ।
ಏತದಾಹುರ್ಮಹಾಪ್ರಾಜ್ಞಾಃ ಸಾಂಖ್ಯಂ ವೈ ಮೋಕ್ಷದರ್ಶನಮ್ ॥೫॥

ಸಾಂಖ್ಯಮತವನ್ನು ತಿಳಿದಿರುವ ಜ್ಞಾನಿಗಳಾದ ಬ್ರಾಹ್ಮಣರು ತಮ್ಮ ಮತವನ್ನು ಯುಕ್ತಿಯುಕ್ತವಾದ ಜ್ಞಾನದಿಂದಲೇ ಪ್ರತಿಪಾದಿಸುತ್ತಾರೆ. ಯಾವಾತನು ಊರ್ಧ್ವ , ಮಧ್ಯ , ಅಧಮ ಎಂಬ ಗತಿಗಳ ಸ್ವರೂಪವನ್ನು ತಿಳಿದಿದ್ದಾನೋ, ವಿಷಯಗಳಿಂದ ವಿರಕ್ತನಾಗಿದ್ದಾನೋ ದೇಹತ್ಯಾಗದ ಬಳಿಕ ಮುಕ್ತಿಯನ್ನು ಹೊಂದುತ್ತಾನೆ ಎಂಬುದಾಗಿ ಸಾಂಖ್ಯ, ಯೋಗಜ್ಞರು ಮೋಕ್ಷಪ್ರಾಪ್ತಿಯ ವಿಷಯವನ್ನು ಹೇಳುತ್ತಾರೆ.

ಸ್ವಪಕ್ಷೇ ಕಾರಣಂ ಗ್ರಾಹ್ಯಂ ಸಮರ್ಥಂ ವಚನಂ ಹಿತಮ್ ।
ಶಿಷ್ಟಾನಾಂ ಹಿ ಮತಂ ಗ್ರಾಹ್ಯಂ ತದ್ವಿದ್ಭಿಃ ಶಿಷ್ಟಸಮ್ಮತೈಃ ॥೬॥

ಆಯಾ ಪಕ್ಷದವರಿಗೆ ತಮ್ಮ ತಮ್ಮ ಪಕ್ಷದ ವಿದ್ವಾಂಸರು ಹೇಳುವ ಯುಕ್ತಿಯುಕ್ತ ಕಾರಣಗಳೇ ಗ್ರಾಹ್ಯವೆನಿಸುತ್ತವೆ. ಶಿಷ್ಟ ಸಮ್ಮತರಾದ ನಿನ್ನಂತಹ ಜ್ಞಾನಿಗಳು ಎಲ್ಲಾ ಶಿಷ್ಟರಿಗೂ ಸಮ್ಮತವಾದ ಅಭಿಪ್ರಾಯವನ್ನೇ ಸ್ವೀಕರಿಸುವುದು ಯೋಗ್ಯವು.

ಪ್ರತ್ಯಕ್ಷಹೇತವೋ ಯೋಗಾಃ ಸಾಂಖ್ಯಾಃ ಶಾಸ್ತ್ರವಿನಿಶ್ಚಯಾಃ ।
ಉಭೇ ಚೈತೇ ಮತೇ ತತ್ತ್ವೇ ಮಮ ತಾತ ಯುಧಿಷ್ಠಿರ ॥೭॥

ಉಭೇ ಚೈತೇ ಮತೇ ಜ್ಞಾನೇ ನೃಪತೇ ಶಿಷ್ಟಸಮ್ಮತೇ ।
ಅನುಷ್ಠಿತೇ ಯಥಾಶಾಸ್ತ್ರಂ ನಯೇತಾಂ ಪರಮಾಂ ಗತಿಮ್ ॥೮॥

ಯೋಗಜ್ಞಾನಿಗಳು ಪ್ರತ್ಯಕ್ಷ ಕಾರಣಗಳಿಂದ ವಸ್ತುವನ್ನು ಪ್ರತಿಪಾದಿಸಿದರೆ ಪರಮಾತ್ಮನ ಯಥಾರ್ಥ ಜ್ಞಾನ ನಿಶ್ಚಯವನ್ನು ಹೊಂದಿರುವ ಸಾಂಖ್ಯರು ಶಾಸ್ತ್ರ ಪ್ರಮಾಣದಲ್ಲಿಯೇ ನಿಶ್ಚಯವನ್ನು ಹೊಂದಿದವರಾಗಿರುತ್ತಾರೆ. ಈ ಎರಡು ಮತಗಳು ಯೋಗ್ಯವಾದ ಮತಗಳೇ ಎಂಬುದು ನನ್ನ ಅಭಿಪ್ರಾಯ. ನರೇಶ್ವರನೇ, ಈ ಎರಡೂ ಮತಗಳು ಶಿಷ್ಟರಿಗೆ ಸಮ್ಮತವಾಗಿವೆ. ಶಾಸ್ತ್ರಾನುಸಾರವಾಗಿ ಅನುಷ್ಠಾನ ಮಾಡಿದರೆ ಸಾಂಖ್ಯ, ಯೋಗ ಮತಗಳು ಮನುಷ್ಯನನ್ನು ಉತ್ತಮ ಸ್ಥಾನಕ್ಕೆ ಕರೆದೊಯ್ಯುತ್ತವೆ.

ತುಲ್ಯಂ ಶೌಚಂ ತಯೋರ್ಯುಕ್ತಂ ದಯಾ ಭೂತೇಷು ಚಾನಘ ।
ವ್ರತಾನಾಂ ಧಾರಣಂ ತುಲ್ಯಂ ದರ್ಶನಂ ನ ಸಮಂ ತಯೋಃ ॥೯॥

ಅಂತಃಶುದ್ಧಿ, ಬಹಿರ್ಶುದ್ಧಿಗಳು, ತಪಸ್ಸು, ಭೂತದಯಾ, ಅಹಿಂಸಾ, ಸತ್ಯ, ಅಸ್ತೇಯ, ವ್ರತಪಾಲನ ಈ ಎಲ್ಲ ನಿಯಮಗಳು ಉಭಯ ಮತಗಳಲ್ಲಿ ಸಾಧಾರಣವಾಗಿವೆ. ಆದರೆ ತತ್ತ್ವದ ಫಲದಲ್ಲಿ ಸ್ವಲ್ಪ ವ್ಯತ್ಯಾಸವಿದೆ.

ಯುಧಿಷ್ಠಿರಃ

ಯದಿ ತುಲ್ಯಂ ವ್ರತಂ ಶೌಚಂ ದಯಾ ಚಾತ್ರ ಪಿತಾಮಹ ।
ತುಲ್ಯಂ ನ ದರ್ಶನಂ ಕಸ್ಮಾತ್ ತನ್ಮೇ ಬ್ರೂಹಿ ಪಿತಾಮಹ ॥೧೦॥

ಯುಧಿಷ್ಠಿರ– ಅಹಿಂಸೆ, ಸತ್ಯ , ಅಸ್ತೇಯ, ವ್ರತ, ಶೌಚ, ಪ್ರಾಣಿದಯಾ ಎರಡು ಮತದವರಿಗೂ ಸಮಾನವಾಗಿದ್ದರೂ ಫಲದಲ್ಲಿ ವ್ಯತ್ಯಾಸವು ಏಕೆ ಉಂಟಾಯಿತು? ಪಿತಾಮಹನೇ, ಇದನ್ನು ತಿಳಿಸು.

ಭೀಷ್ಮಃ

ರಾಗಂ ಮೋಹಂ ತಥಾ ಸ್ನೇಹಂ ಕಾಮಂ ಕ್ರೋಧಂ ಚ ಕೇವಲಮ್ ।
ಯೋಗಾಚ್ಚಿತ್ತ್ವಾದಿತೋ ದೋಷಾನ್ ಪಂಚೈತಾನ್ ಪ್ರಾಪ್ನುವಂತಿ ತತ್ ॥

ಭೀಷ್ಮ– ಯೋಗಿಯು ಕೇವಲ ಯೋಗಬಲದಿಂದ ರಾಗ, ಮೋಹ, ಸ್ನೇಹ, ಕಾಮ, ಕ್ರೋಧ - ಈ ಎಲ್ಲ ದೋಷಗಳನ್ನು ಕಡಿದು ಹಾಕಿಕೊಂಡು ಪರಮ ಪದವಿಯನ್ನು ಸೇರುತ್ತಾನೆ.

ಯಥಾ ಚಾನಿಮಿಷಾಃ ಸ್ಥೂಲಾ ಜಾಲಂ ಛಿತ್ತ್ವಾ ಪುನರ್ಜಲಮ್ ।
ಪ್ರಾಪ್ನುವಂತಿ ತಥಾ ಯೋಗಾಸ್ತತ್ಪದಂ ವೀತಕಲ್ಮಷಾಃ ॥೧೨॥

ಯಾವ ರೀತಿ ದೊಡ್ಡ ಮೀನುಗಳು ತಮ್ಮನ್ನು ಬಂಧಿಸಿರುವ ಬಲೆಯನ್ನೂ ಕತ್ತರಿಸಿ ಪುನಃ ನೀರಿಗೆ ಸೇರುತ್ತವೆಯೋ ಅದರಂತೆ ಯೋಗಿಗಳು ತಮ್ಮ ಯೋಗಾನುಷ್ಠಾನದಿಂದ ಸಾಂಸಾರಿಕ ಕ್ಲೇಶಗಳನ್ನು ಬಿಡಿಸಿಕೊಂಡು, ಪಾಪರಹಿತರಾಗಿ ಪರಮಪದವನ್ನು ಹೊಂದುತ್ತಾರೆ.

ತಥೈವ ವಾಗುರಾಂ ಛಿತ್ತ್ವಾ ಬಲವಂತೋ ಯಥಾ ಮೃಗಾಃ ।
ಪ್ರಾಪ್ನುಯುರ್ವಿಮಲಂ ಮಾರ್ಗಂ ವಿಮುಕ್ತಾಃ ಸರ್ವಬಂಧನೈಃ ॥೧೩॥

ಲೋಭಜಾನಿ ತಥಾ ರಾಜನ್ ಬಂಧನಾನಿ ಬಲಾನ್ವಿತಾಃ ।
ಛಿತ್ತ್ವಾ ಯೋಗಾಃ ಪರಂ ಮಾರ್ಗಂ ಗಚ್ಛಂತಿ ವಿಮಲಾಃ ಶಿವಮ್ ॥

ಯಾವ ರೀತಿಯಾಗಿ ಬಲಿಷ್ಠವಾದ ಮೃಗಗಳು ತಮ್ಮನ್ನು ಬಂಧನ ಮಾಡಲು ಕಟ್ಟಿರುವ ಬಲೆಗಳನ್ನೇ ಕಡಿದು, ಸಕಲ ವಿಧವಾದ ಬಂಧನದಿಂದ ಮುಕ್ತವಾಗಿ ಸುಖ ಮಾರ್ಗವನ್ನು ಅನುಸರಿಸಿ ಹೋಗುತ್ತವೆಯೋ ಅದೇ ರೀತಿ ಯೋಗಬಲದಿಂದ ಭವಬಂಧನವನ್ನು ಪರಿಹರಿಸಿಕೊಂಡ ಯೋಗಿಯು ಮಂಗಳಕರವಾದ, ಶ್ರೇಷ್ಠವಾದ ಮಾರ್ಗವನ್ನೇ ಅನುಸರಿಸಿ ಹೋಗುತ್ತಾನೆ.

ಅಬಲಾಶ್ಚ ಮೃಗಾ ರಾಜನ್ವಾಗುರಾಸು ತಥಾಪರೇ ।
ವಿನಶ್ಯಂತಿ ನ ಸಂದೇಹಸ್ತದ್ವದ್ಯೋಗಬಲಾದೃತೇ ॥೧೫॥

ಹೇಗೆ ದುರ್ಬಲವಾದ ಮೃಗಗಳು ಬಲೆಯಲ್ಲಿ ಸಿಕ್ಕಿಕೊಂಡು ಸಂದೇಹವಿಲ್ಲದೆ ವಿನಾಶ ಹೊಂದುತ್ತವೆಯೋ, ಇದೇ ರೀತಿ ಯೋಗಬಲವಿಲ್ಲದ ವ್ಯಕ್ತಿಯು ಸಂಸಾರ ಬಂಧನದಿಂದ ತಪ್ಪಿಸಿಕೊಳ್ಳಲಾಗದೆ ವಿನಾಶ ಹೊಂದುತ್ತಾನೆ.

ಬಲಹೀನಾಶ್ಚ ಕೌಂತೇಯ ಯಥಾ ಜಾಲಗತಾ ಝಷಾಃ ।
ಅಂತಂ ಗಚ್ಛಂತಿ ರಾಜೇಂದ್ರ ತಥಾ ಯೋಗಾಃ ಸುದುರ್ಬಲಾಃ ॥೧೬॥

ಯಾವ ರೀತಿಯಾಗಿ ಬಲೆಯಲ್ಲಿ ಸಿಕ್ಕಿರುವ ಮೀನುಗಳು ಸಂಶಯವಿಲ್ಲದೆ ಬಲೆಯಿಂದ ಬಿಡಿಸಿಕೊಳ್ಳಲಾಗದೆ ಮರಣವನ್ನಪ್ಪುತ್ತವೆಯೋ ಅದರಂತೆ ಯೋಗಬಲದಿಂದ ಅತ್ಯಂತ ದೂರನಾದ ಮನುಷ್ಯನಿಗೂ ಈ ಬಂಧನದ ದುಃಖಗಳು ಒದಗಿ ಬರುತ್ತವೆ.

ಯಥಾ ಚ ಶಕುನಾಃ ಸೂಕ್ಷ್ಮಾಃ ಪ್ರಾಪ್ಯ ಜಾಲಮರಿಂದಮ ।
ತತ್ರ ಸಕ್ತಾ ವಿಪದ್ಯಂತೇ ಮುಚ್ಯಂತೇ ಚ ಬಲಾನ್ವಿತಾಃ ॥೧೭॥

ಹೇಗೆ ಸೂಕ್ಷ್ಮವಾದ ಬಲೆಯಲ್ಲಿ ಸಿಕ್ಕಿ ಬಿದ್ದಿರುವ ದುರ್ಬಲವಾದ ಹಕ್ಕಿಗಳು ಬೇಡನ ಕೈಗೆ ಸಿಕ್ಕಿ ವಿನಾಶ ಹೊಂದುತ್ತವೆಯೋ ಅದೇ ರೀತಿ ಯೋಗಬಲವಿಲ್ಲದ ವ್ಯಕ್ತಿಗಳು ಕರ್ಮಪಾಶದಿಂದ ಬಿಗಿಯಲ್ಪಟ್ಟು ನಾಶ ಹೊಂದುತ್ತಾರೆ.

ಕರ್ಮಜೈರ್ಬಂಧನೈರ್ಬದ್ಧಾಸ್ತದ್ವದ್ ಯೋಗಾಃ ಪರಂತಪ ।
ಅಬಲಾ ವೈ ವಿನಶ್ಯಂತಿ ಮುಚ್ಯಂತೇ ಚ ಬಲಾನ್ವಿತಾಃ ॥೧೮॥

ಬಲಿಷ್ಠವಾದ ಹಕ್ಕಿಗಳು ಬಂಧನವನ್ನು ಬಿಡಿಸಿಕೊಂಡು ಸಾಗುವಂತೆ ಯೋಗ ಬಲವನ್ನು ಹೊಂದಿರುವ ಸತ್ಪುರುಷರು ಕರ್ಮಬಂಧನವನ್ನು ಬಿಡಿಸಿಕೊಂಡು ಮುಕ್ತರಾಗುತ್ತಾರೆ.

ಅಲ್ಪಕಶ್ಚ ಯಥಾ ರಾಜನ್ ವಹ್ನಿಃ ಶಾಮ್ಯತಿ ದುರ್ಬಲಃ ।
ಆಕ್ರಾಂತ ಇಂಧನೈಃ ಸ್ಥೂಲೈಸ್ತದ್ವದ್ಯೋಗೋಽಬಲಃ ಪ್ರಭೋ ॥೧೯॥

ರಾಜನೇ, ಯಾವ ರೀತಿ ಅಣುಪ್ರಮಾಣದಲ್ಲಿರುವ ಬೆಂಕಿಯು ದಪ್ಪ ದಪ್ಪ ಕಟ್ಟಿಗೆಗಳಿಂದ ಆಕ್ರಾಂತವಾದಾಗ ಬಲಹೀನವಾಗಿ ನಂದಿಹೋಗುತ್ತದೋ ಅದರಂತೆ ಅಲ್ಪ ಯೋಗಬಲದವರಿಗೆ ಮಹಾವಿಷಯ ಪದಾರ್ಥಗಳು ಆವೃತವಾದಾಗ ಆ ಭಾರವನ್ನು ಸಹಿಸದೆ ಅವರು ವಿನಾಶವನ್ನೇ ಹೊಂದುತ್ತಾರೆ.

ಸ ಏವ ಚ ಯದಾ ರಾಜನ್ ವಹ್ನಿರ್ಜಾತಬಲಃ ಪುನಃ ।
ಸಮೀರಣಯುತಃ ಕೃತ್ಸ್ನಂ ದಹೇತ್ ಕ್ಷಿಪ್ರಾಂ ಮಹೀಮಪಿ ॥೨೦॥

ಅದೇ ಅಲ್ಪವಾದ ಬೆಂಕಿಯು ಗಾಳಿಯ ಸಹಾಯವನ್ನು ಹೊಂದಿದಾಗ ವೃದ್ಧಿಗೊಂಡು ಬಲಿಷ್ಠವಾದರೆ ಅಖಂಡವಾದ ಭೂಮಿಯನ್ನೇ ದಹಿಸಲು ಸಾಮರ್ಥ್ಯವನ್ನು ಹೊಂದುತ್ತದೆ.

ತದ್ವಜ್ಜಾತಬಲೋ ಯೋಗೀ ದೀಪ್ತತೇಜಾ ಮಹಾಬಲಃ ।
ಅಂತಕಾಲ ಇವಾದಿತ್ಯಃ ಕೃತ್ಸ್ನಂ ಸಂಶೋಷಯೇಜ್ಜಗತ್ ॥೨೧॥

ಇದರಂತೆ ಯೋಗಾಭ್ಯಾಸದಿಂದ ಬಲಿಷ್ಠನಾದ ಯೋಗಿಯು ತನ್ನ ಅಧಿಕವಾದ ಬಲದಿಂದ ತೇಜಸ್ಸನ್ನು ಪಡೆದು, ಪ್ರಳಯಕಾಲದ ಸೂರ್ಯನು ಸಮಸ್ತ ಜಗತ್ತನ್ನು ದಹಿಸುವಂತೆ ತನ್ನಲ್ಲಿ ಅಡಕವಾದ ರಾಗಾದಿ ದೋಷಗಳನ್ನು ನಾಶಗೊಳಿಸುತ್ತಾನೆ.

ದುರ್ಬಲಶ್ಚ ಯಥಾ ರಾಜನ್ ಸ್ರೋತಸಾ ಹ್ರಿಯತೇ ನರಃ ।
ಬಲಹೀನಸ್ತಥಾ ಯೋಗೋ ವಿಷಯೈರ್ಹ್ರಿಯತೇಽವಶಃ ॥೨೨॥

ದುರ್ಬಲನಾದ ವ್ಯಕ್ತಿಯನ್ನು ನದಿಯ ಪ್ರವಾಹವು ನದಿಯನ್ನು ದಾಟುವ ಸಮಯದಲ್ಲಿ ಹೇಗೆ ಸೆಳೆಯುತ್ತದೋ ಅದೇ ರೀತಿ ಇಂದ್ರಿಯಾಧೀನನಾಗಿ ವಿಷಯಗಳಿಂದ ಆಸಕ್ತನಾದ ವ್ಯಕ್ತಿಯನ್ನು ವಿಷಯಗಳೆಂಬ ಸುಳಿಯು ಭರದಿಂದ ಸೆಳೆಯುತ್ತದೆ.

ತದೇವ ಚ ಯಥಾ ಸ್ರೋತೋ ವಿಷ್ಟಂಭಯತಿ ವಾರಣಃ ।
ತದ್ವದ್ ಯೋಗಬಲಂ ಲಬ್ಧ್ವಾ ವ್ಯೂಹತೇ ವಿಷಯಾನ್ ಬಹೂನ್ ॥

ಪ್ರವಾಹದ ನಡುವೆ ಸಿಕ್ಕಿರುವ ಆನೆಯು ಆ ಪ್ರವಾಹದಿಂದ ನೀರಿಗೆ ಹೇಗೆ ವಿಚಲಿತವಾಗುವುದಿಲ್ಲವೋ ಅದರಂತೆ ಯೋಗಬಲವನ್ನು ಹೊಂದಿದ ವ್ಯಕ್ತಿಯು

ವಿಷಯ ಪದಾರ್ಥಗಳು ತನಗೆ ತಡೆಯಾಗಿವೆ ಎಂದು ಅದನ್ನು ತರ್ಕದಿಂದ ವಿಮರ್ಶಿಸಿ ತನ್ನ ಯೋಗಮಾರ್ಗಕ್ಕೆ ತಡೆಯಾಗದಂತೆ ಮಾಡುತ್ತಾನೆ.

ವಿಶಂತಿ ಚಾವಶಾಃ ಪಾರ್ಥ ಯೋಗಾ ಯೋಗಬಲಾನ್ವಿತಾಃ ।
ಪ್ರಜಾಪತೀನೃಷೀನ್ ದೇವಾನ್ ಮಹಾಭೂತಾನಿ ಚೇಶ್ವರಾಃ ॥೨೪॥

ಭಗವಂತನಲ್ಲಿಯೇ ಆಸಕ್ತ ಮನಸ್ಕರಾದ ಯೋಗಿಗಳು ಯೋಗಬಲದಿಂದ ಕೂಡಿದವರಾಗಿ ಮೃತ್ಯುವಶರಾಗದೆ ಪ್ರಜಾಪತಿಗಳನ್ನು, ಋಷಿಗಳನ್ನು, ದೇವತೆಗಳನ್ನು ಪಂಚ ಮಹಾಭೂತಗಳನ್ನು ಯೋಗಸಾಮರ್ಥ್ಯದಿಂದ ಪ್ರವೇಶಿಸುತ್ತಾರೆ.

ನ ಯಮೋ ನಾಂತಕಃ ಕ್ರುದ್ಧೋ ನ ಮೃತ್ಯುರ್ಭೀಮವಿಕ್ರಮಃ ।
ಈಶತೇ ನೃಪತೇ ಸರ್ವೇ ಯೋಗಸ್ಯಾಮಿತತೇಜಸಃ ॥೨೫॥

ಮಹಾರಾಜನೇ, ಕ್ರುದ್ಧನಾದ ಯಮನಾಗಲಿ, ಪರಾಕ್ರಮಿಯಾದ ಮೃತ್ಯುವಾಗಲಿ ತೇಜಸ್ವಿಯಾದ ಯೋಗಿಯ ಮೇಲೆ ತಮ್ಮ ಸಾಮರ್ಥ್ಯವನ್ನು ತೋರಿಸಲು ಸಮರ್ಥರಾಗರು.

ಆತ್ಮನಾಂ ಚ ಸಹಸ್ರಾಣಿ ಬಹೂನಿ ಭರತರ್ಷಭ ।
ಯೋಗಃ ಕುರ್ಯಾದ್ ಬಲಂ ಪ್ರಾಪ್ಯ ತೈಶ್ಚ ಸರ್ವೈರ್ಮಹೀಂ ಚರೇತ್ ॥

ಯೋಗಿಯು ತನ್ನ ಯೋಗಸಾಮರ್ಥ್ಯದಿಂದ ಅನೇಕ ಶರೀರಗಳನ್ನು ಪಡೆದುಕೊಳ್ಳಬಲ್ಲನು. ಅದರಂತೆ ಯೋಗಿಗಳೊಡನೆ ಪೃಥಿವಿಯಲ್ಲಿ ಸಂಚರಿಸಬಲ್ಲನು.

ಪ್ರಾಪ್ನುಯಾದ್ ವಿಷಯಾಂಶ್ಚೈವ ಪುನಶ್ಚೋಗ್ರಂ ತಪಶ್ಚರೇತ್ ।
ಸಂಕ್ಷಿಪೇಚ್ಚ ಪುನಃ ಪಾರ್ಥ ಸೂರ್ಯಸ್ತೇಜೋಗುಣಾನಿವ ॥೨೭॥

ಯೋಗಬಲದಿಂದ ಸಂಪನ್ನನಾದ ಯೋಗಿಯು ಸಹಸ್ರಾರು ದೇಹಗಳನ್ನು ಪಡೆದು ವಿಷಯ ಸುಖಗಳನ್ನು ಅನುಭವಿಸಬಲ್ಲನು. ಪುನಃ ಉಗ್ರವಾದ ತಪಸ್ಸನ್ನು ಆಚರಿಸಬಲ್ಲನು. ಸಾಯಂಕಾಲದಲ್ಲಿ ಕಂತುವ (ಮುಳುಗುವ) ಸೂರ್ಯನು ತನ್ನ ಕಿರಣಗಳನ್ನು ಸೆಳೆದುಕೊಂಡು ಪುನಃ ಉದಯಮಾನದ ಸಮಯದಲ್ಲಿ ಕಿರಣಗಳನ್ನು ಜಗತ್ತಿಗೆ ಸೂಸುವಂತೆ ಯೋಗಿಯಾದವನು ತನ್ನ ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿ

ಇಟ್ಟುಕೊಂಡಿರುತ್ತಾನೆ. ಬೇಕಾದಂತೆ ಇಂದ್ರಿಯಸುಖವನ್ನು ಪಡೆಯುವ ಸಾಮರ್ಥ್ಯವನ್ನು ಹೊಂದಿರುತ್ತಾನೆ ಎಂದು ಭಾವ.

ಬಲಸ್ಥಸ್ಯ ಹಿ ಯೋಗಸ್ಯ ಬಂಧನೇಶಸ್ಯ ಪಾರ್ಥಿವ ।
ವಿಮೋಕ್ಷೇ ಪ್ರಭವಿಷ್ಣುತ್ವಮುಪಪನ್ನಮಸಂಶಯಮ್ ॥೨೮॥

ಮಹಾಬಲಿಷ್ಠನಾದ ಯೋಗಿಯು ವಿಷಯ ಪದಾರ್ಥಗಳನ್ನು ನಿಗ್ರಹಿಸಲು ಸಾಮರ್ಥ್ಯವನ್ನು ಹೊಂದಿರುವುದರಿಂದ ಮೋಕ್ಷವನ್ನು ಹೊಂದುತ್ತಾನೆ ಎಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಬಲಾನಿ ಯೋಗೇ ಪ್ರೋಕ್ತಾನಿ ಮಯೈತಾನಿ ವಿಶಾಂ ಪತೇ ।
ನಿದರ್ಶನಾರ್ಥಂ ಸೂಕ್ಷ್ಮಾಣಿ ವಕ್ಷ್ಯಾಮಿ ಚ ಪುನಸ್ತವ ॥೨೯॥

ಪ್ರಜಾಪಾಲಕನೇ, ಯೋಗದಿಂದ ಪಡೆಯಬಹುದಾದ ಬಲದ ವಿಷಯದಲ್ಲಿ ದೃಷ್ಟಾಂತವಾಗಿ ಕೆಲವು ಸೂಕ್ಷ್ಮ ತತ್ತ್ವವನ್ನು ಹೇಳುತ್ತೇನೆ, ಕೇಳು.

ಆತ್ಮನಶ್ಚ ಸಮಾಧಾನೇ ಧಾರಣಾಂ ಪ್ರತಿ ಚಾಭಿಭೋ ।
ನಿದರ್ಶನಾನಿ ಸೂಕ್ಷ್ಮಾಣಿ ಶೃಣು ಮೇ ಭರತರ್ಷಭ ॥೩೦॥

ಭರತಶ್ರೇಷ್ಠನೇ, ಆತ್ಮನ ನಿಗ್ರಹದಲ್ಲಿ, ಧಾರಣೆಯ ವಿಷಯದಲ್ಲಿ ಸೂಕ್ಷ್ಮವಾದ ನಿದರ್ಶನಗಳಿವೆ. ಅವುಗಳನ್ನು ಕೇಳು.

ಅಪ್ರಮತ್ತೋ ಯಥಾ ಧನ್ವೀ ಲಕ್ಷ್ಯಂ ಹಂತಿ ಸಮಾಹಿತಃ ।
ಯುಕ್ತಃ ಸಮ್ಯಕ್ತಥಾ ಯೋಗೀ ಮೋಕ್ಷಂ ಪ್ರಾಪ್ನೋತ್ಯಸಂಶಯಮ್ ॥೩೧॥

ಪ್ರಮತ್ತನಾಗದಿರುವ ಬಿಲ್ಲುಗಾರನು ಏಕಾಗ್ರತೆಯಿಂದ ಲಕ್ಷ್ಯವನ್ನು ಭೇದಿಸುವಂತೆ ಪರಮಾತ್ಮನ ಧ್ಯಾನದಲ್ಲಿಯೇ ಏಕಾಗ್ರತೆಯನ್ನು ಹೊಂದಿರುವ ಯೋಗಿಯು ಸಂಶಯವಿಲ್ಲದೆ ಮೋಕ್ಷವನ್ನು ಹೊಂದುತ್ತಾನೆ.

ಸ್ನೇಹಪೂರ್ಣೇ ಯಥಾ ಪಾತ್ರೇ ಮನ ಆಧಾಯ ನಿಶ್ಚಲಮ್ ।
ಪುರುಷೋ ಯತ್ರ ಆರೋಹೇತ್ ಸೋಪಾನಂ ಯುಕ್ತಮಾನಸಃ ॥೩೨॥

ಯುಕ್ತ್ವಾ ತಥಾಯಮಾತ್ಮಾನಂ ಯೋಗಃ ಪಾರ್ಥಿವ ನಿಶ್ಚಲಮ್ ।
ಕರೋತ್ಯಮಲಮಾತ್ಮಾನಂ ಭಾಸ್ಕರೋಪಮದರ್ಶನಮ್ ॥೩೩॥

ತಲೆಯ ಮೇಲೆ ಎಣ್ಣೆಯ ಪಾತ್ರೆಯನ್ನು ಹೊತ್ತುಕೊಂಡು ಸಾಗುವ ವ್ಯಕ್ತಿಯು ತನ್ನ ಮನಸ್ಸನ್ನು ಪಾತ್ರೆಯಲ್ಲಿರುವ ಎಣ್ಣೆಯು ಚೆಲ್ಲದಂತೆ ಏಕಾಗ್ರತೆಯಿಂದ ಹೇಗೆ ನಿಶ್ಚಂಚಲಗೊಳಿಸಿ ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಸಾಗುತ್ತಾನೋ, ಇದರಂತೆ ಯೋಗಿಯು ಯೋಗದಿಂದ ಕೂಡಿದ ಮನಸ್ಸಿನಿಂದ ಯುಕ್ತನಾಗಿ ತನ್ನ ಮನಸ್ಸನ್ನು ಪರಮಾತ್ಮನಲ್ಲಿ ಕೇಂದ್ರೀಕರಿಸಿ ಅವನನ್ನೇ ಪಡೆಯಲು ಸಾಗುತ್ತಾನೆ. ಸ್ಥಿರವೂ, ಸೂರ್ಯನ ತೇಜಸ್ಸಿಗೆ ಸಮಾನವೂ ಆದ ಪ್ರಕಾಶದಿಂದ ಕೂಡಿರುವಂತಹ ಪರಬ್ರಹ್ಮನನ್ನೇ ಏಕಾಗ್ರತೆಯಿಂದ ನೋಡುತ್ತಾನೆ.

ಯಥಾ ಚ ನಾವಂ ಕೌಂತೇಯ ಕರ್ಣಧಾರಃ ಸಮಾಹಿತಃ ।
ಮಹಾರ್ಣವಗತಾಂ ಶೀಘ್ರಂ ನಯೇತ್ ಪಾರ್ಥಿವ ಪತ್ತನಮ್ ॥೩೪॥

ತದ್ವದಾತ್ಮಸಮಾಧಾನಂ ಯುಕ್ತ್ವಾ ಯೋಗೇನ ತತ್ತ್ವವಿತ್ ।
ದುರ್ಗಮಂ ಸ್ಥಾನಮಾಪ್ನೋತಿ ಹಿತ್ವಾ ದೇಹಮಿಮಂ ನೃಪ ॥೩೫॥

ಕುಂತೀಪುತ್ರನೇ, ಸಮುದ್ರಕ್ಕೆ ಹಡಗನ್ನು ತೆಗೆದುಕೊಂಡು ಹೋಗಿರುವ ನಾವಿಕನು ಜಾಗ್ರತೆಯಿಂದ ಶೀಘ್ರವಾಗಿ ಆ ನೌಕೆಯನ್ನು ಹೇಗೆ ನಿರ್ದಿಷ್ಟವಾದ ಸ್ಥಳಕ್ಕೆ ಕೊಂಡೊಯ್ಯುತ್ತಾನೋ, ಅದರಂತೆ ತತ್ತ್ವಜ್ಞಾನಿಯಾದ ಯೋಗಿಯು ಯೋಗದ ಮೂಲಕ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ, ಯೋಗಾಭ್ಯಾಸದಿಂದ ದೇಹವನ್ನು ತ್ಯಜಿಸಿ ಯಾರಿಂದಲೂ ಹೋಗಲಾಗದ ಪರಮಪದವನ್ನು ಹೊಂದುತ್ತಾನೆ.

ಸಾರಥಿಶ್ಚ ಯಥಾ ಯುಕ್ತ್ವಾ ಸದಶ್ವಾನ್ ಸುಸಮಾಹಿತಃ ।
ದೇಶಮಿಷ್ಟಂ ನಯತ್ಯಾಶು ಧನ್ವಿನಂ ಪುರುಷರ್ಷಭ ॥೩೬॥

ತಥೈವ ನೃಪತೇ ಯೋಗೀ ಧಾರಣಾಸು ಸಮಾಹಿತಃ ।
ಪ್ರಾಪ್ನೋತ್ಯಾಶು ಪರಂ ಸ್ಥಾನಂ ಲಕ್ಷಂ ಮುಕ್ತ ಇವಾಶುಗಃ ॥೩೭॥

ಹೇಗೆ ಏಕಾಗ್ರ ಮನಸ್ಸನ್ನು ಸಾಧಿಸಿಕೊಂಡಿರುವ ಸಾರಥಿಯು ಒಳ್ಳೆಯ ಕುದುರೆಗಳನ್ನು ರಥಕ್ಕೆ ಜೋಡಿಸಿ ಧನುರ್ಧಾರಿಯಾದ ರಥಿಕನನ್ನು ಅವನು ಬಯಸಿದ ಜಾಗಕ್ಕೆ

ಕರೆದೊಯ್ಯುತ್ತಾನೋ ಅದರಂತೆ ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧಿ ಮೊದಲಾದ ಧಾರಣಗಳಲ್ಲಿ ಏಕಾಗ್ರತೆಯನ್ನು ಸಂಪಾದಿಸಿಕೊಂಡಿರುವ ಯೋಗಿಯು ತನ್ನ ಮನಸ್ಸು ತನಗೆ ಇಷ್ಟವಾದ ಪರಬ್ರಹ್ಮನ ಕಡೆ ಸಾಗುವಂತೆ ಮಾಡುತ್ತಾನೆ. ಧನುರ್ಮುಕ್ತವಾದ ಬಾಣವು ಶೀಘ್ರವಾಗಿ ಗುರಿಯನ್ನು ಮುಟ್ಟುವಂತೆ ವೇಗವಾಗಿ ಪರಮಪದವನ್ನು ಹೊಂದುತ್ತಾನೆ.

ಆವೇಶ್ಯಾತ್ಮನಿ ಚಾತ್ಮಾನಂ ಯೋಗೀ ತಿಷ್ಠತಿ ಯೋಽಚಲಃ ।
ಪಾಪಂ ಹಂತೇವ ಮೀನಾನಾಂ ಪದಮಾಪ್ನೋತಿ ಸೋಽಜರಮ್ ॥೩೮॥

ಯಾವ ಯೋಗಿಯು ಸಮಾಧಿಯ ಮೂಲಕ ಪರಮಾತ್ಮನನ್ನು ಹೃದಯದಲ್ಲಿ ನೆಲೆಗೊಳಿಸಿ ಅಚಲನಾಗಿರುತ್ತಾನೋ ಅವನು ತನ್ನ ಪಾಪವನ್ನು ತೊಡೆದುಕೊಂಡು ಪವಿತ್ರಾತ್ಮನಿಗೆ ಲಭಿಸುವ, ನಾಶ ಹೊಂದದೇ ಇರುವ ಮೋಕ್ಷವನ್ನು ಹೊಂದುತ್ತಾನೆ.

ನಾಭ್ಯಾಂ ಕಂಠೇ ಚ ಶೀರ್ಷೇ ಚ ಹೃದಿ ವಕ್ಷಸಿ ಪಾರ್ಶ್ವಯೋಃ ।
ದರ್ಶನೇ ಸ್ಪರ್ಶನೇ ಚಾಪಿ ಘ್ರಾಣೇ ಚಾಮಿತವಿಕ್ರಮ ॥೩೯॥

ಸ್ಥಾನೇಷ್ವೇತೇಷು ಯೋ ಯೋಗೀ ಮಹಾವ್ರತಸಮಾಹಿತಃ ।
ಆತ್ಮನಾ ಸೂಕ್ಷ್ಮಮಾತ್ಮಾನಂ ಯುಂಕ್ತೇ ಸಮ್ಯಗ್ ವಿಶಾಂ ಪತೇ ॥೪೦॥

ಸ ಶೀಘ್ರಮಮಲಪ್ರಜ್ಞಃ ಕರ್ಮ ದಗ್ಧ್ವಾ ಶುಭಾಶುಭಮ್ ।
ಉತ್ತಮಂ ಯೋಗಮಾಸ್ಥಾಯ ಯದೀಚ್ಛತಿ ವಿಮುಚ್ಯತೇ ॥೪೧॥

ಪರಾಕ್ರಮಿಯೇ, ಯೋಗಾಭ್ಯಾಸವೆಂಬ ರಥದಲ್ಲಿ ಏಕಾಗ್ರತೆಯಿಂದ ಇರುವ ಯೋಗಿಯು ಹೊಕ್ಕಳು, ಕುತ್ತಿಗೆ, ತಲೆ, ಹೃದಯ, ವಕ್ಷಸ್ಥಲ, ತನ್ನ ಎರಡು ಪಾರ್ಶ್ವಗಳು, ಕಣ್ಣು, ಕಿವಿ, ಮೂಗು - ಈ ಸ್ಥಾನಗಳಲ್ಲಿ ಧಾರಣೆಯ ಮೂಲಕ ತನ್ನ ಮನಸ್ಸನ್ನು ಪರಮಾತ್ಮನಲ್ಲಿಯೇ ನೆಲೆಗೊಳಿಸುತ್ತಾನೆ. ಅಂತಹ ವ್ಯಕ್ತಿಯು ತಾನು ಬಯಸಿದಲ್ಲಿ ಪರ್ವತದಂತಿರುವ ಶುಭಾಶುಭ ಕರ್ಮಗಳನ್ನು ಯೋಗದಿಂದಲೇ ಭಸ್ಮ ಮಾಡಿ, ಆ ಉತ್ತಮವಾದ ಯೋಗದಿಂದಲೇ ಮುಕ್ತಿಯನ್ನು ಹೊಂದಬಲ್ಲನು.

ಯುಧಿಷ್ಠಿರಃ

ಆಹಾರಾನ್ ಕೀದೃಶಾನ್ ಕೃತ್ವಾ ಕಾನಿ ಜಿತ್ವಾ ಚ ಭಾರತ ।
ಯೋಗೀ ಬಲಮವಾಪ್ನೋತಿ ತದ್ಭವಾನ್ ವಕ್ತುಮರ್ಹತಿ ॥೪೨॥

ಯುಧಿಷ್ಠಿರ– ಭಾರತನೇ, ಯೋಗಿಯಾದವನು ಯಾವ ರೀತಿಯಾದ ಆಹಾರವನ್ನು ಸ್ವೀಕರಿಸಿ, ಯಾವುಗಳನ್ನು ಜಯಿಸಿ ಅಸಾಧಾರಣವಾದ ಬಲವನ್ನು ಹೊಂದುತ್ತಾನೆ? ಈ ವಿಷಯವನ್ನು ಕೃಪೆತೋರಿ ತಿಳಿಸಿ.

ಭೀಷ್ಮಃ

ಕಣಾನಾಂ ಭಕ್ಷಣೇ ಯುಕ್ತಃ ಪಿಣ್ಯಾಕಸ್ಯ ಚ ಭಕ್ಷಣೇ ।
ಸ್ನೇಹಾನಾಂ ವರ್ಜನೇ ಯುಕ್ತೋ ಯೋಗೀ ಬಲಮವಾಪ್ನುಯಾತ್ ॥

ಭೀಷ್ಮ– ಯಾರು ಧಾನ್ಯಗಳ ನುಚ್ಚನ್ನು, ಎಳ್ಳು ಮೊದಲಾದ ಎಣ್ಣೆಯ ಕಾಳುಗಳನ್ನು ಅಧಿಕವಾಗಿ ಉಪಯೋಗಿಸುತ್ತಾ ಜಿಡ್ಡಿನ ಪದಾರ್ಥಗಳಲ್ಲಿ ವಿರಕ್ತನಾಗಿರುತ್ತಾನೋ ಅಂತಹ ಯೋಗಿಯು ಬಲಿಷ್ಠನಾಗಿರುತ್ತಾನೆ.

ಭುಂಜಾನೋ ಯಾವಕಂ ರೂಕ್ಷಂ ದೀರ್ಘಕಾಲಮರಿಂದಮ ।
ಏಕಾರಾಮೋ ವಿಶುದ್ಧಾತ್ಮಾ ಯೋಗೀ ಬಲಮವಾಪ್ನುಯಾತ್ ॥೪೪॥

ಬಹಳ ಕಾಲದ ತನಕ ಒಂದೇ ಬಾರಿ ಜವೆ ಗೋಧಿಯ ಗಂಜಿಯನ್ನು ಸ್ವೀಕರಿಸುವ ಯೋಗಿಯು ಶುದ್ಧಚಿತ್ತನೂ, ಬಲಿಷ್ಠನೂ ಆಗಿರುತ್ತಾನೆ.

ಪಕ್ಷಾನ್ ಮಾಸಾನೃತೂಂಶ್ಚಿತ್ರಾನ್ ಸಂಚರಂಶ್ಚ ಗುಹಾಸ್ತಥಾ ।
ಅಪಃ ಪೀತ್ವಾ ಪಯೋಮಿಶ್ರಾ ಯೋಗೀ ಬಲಮವಾಪ್ನುಯಾತ್ ॥೪೫॥

ಯೋಗಿಯು ಹದಿನೈದು ದಿನಗಳ ತನಕ ಹಾಲಿನಿಂದ ಮಿಶ್ರವಾದ ನೀರನ್ನು ಪಾನ ಮಾಡಬೇಕು. ಕ್ರಮವಾಗಿ ಒಂದು ತಿಂಗಳ ತನಕ ಹೀಗೆ ಅಭ್ಯಾಸ ಮಾಡಿಕೊಂಡು ಹೋಗಬೇಕು. ಅಭ್ಯಾಸವಾದ ಬಳಿಕ ಅನೇಕ ಮಾಸಗಳಲ್ಲಿಯೂ ಹೀಗೆ ಆಹಾರವನ್ನು ಸ್ವೀಕರಿಸುವ ಅಭ್ಯಾಸವನ್ನು ಮಾಡಿಕೊಂಡು, ಅನೇಕ ಸಂವತ್ಸರಗಳ ತನಕ ಹಾಲು ಮಿಶ್ರವಾದ ನೀರನ್ನೇ ಆಹಾರವನ್ನಾಗಿ ಮಾಡಿಕೊಂಡಾಗ ಯೋಗಬಲವನ್ನು ಹೊಂದುತ್ತಾನೆ.

ಅಖಂಡಮಪಿ ವಾ ಮಾಸಂ ಸತತಂ ಮನುಜೇಶ್ವರ ।
ಉಪೋಷ್ಯ ಸಮ್ಯಕ್ ಶುದ್ಧಾತ್ಮಾ ಯೋಗೀ ಬಲಮವಾಪ್ನುಯಾತ್ ॥೪೬॥

ಯಾವನು ಜೀವನಪೂರ್ತಿ ಮಾಂಸವನ್ನು ಸ್ವೀಕರಿಸದೆ ಪರಿಶುದ್ಧಾತ್ಮನಾಗಿರುತ್ತಾನೋ ಅಂತಹ ಯೋಗಿಯು ಯೋಗಬಲವನ್ನು ಹೊಂದುತ್ತಾನೆ.

ಕಾಮಂ ಜಿತ್ವಾ ತಥಾ ಕ್ರೋಧಂ ಶೀತೋಷ್ಣೇ ವರ್ಷಮೇವ ಚ ।
ಭಯಂ ನಿದ್ರಾಂ ತಥಾ ಶ್ವಾಸಂ ಪೌರುಷಂ ವಿಷಯಾಂಸ್ತಥಾ ॥೪೭॥

ಸ್ವರತಿಂ ದುರ್ಜಯಾಂ ಚೈವ ಘೋರಾಂ ತೃಷ್ಣಾಂ ಚ ಪಾರ್ಥಿವ ।
ಸ್ಪರ್ಶಾನ್ ಸರ್ವಾಂಸ್ತಥಾ ತಂದ್ರೀಂ ದುರ್ಜಯಾಂ ನೃಪಸತ್ತಮ ॥೪೮॥

ದೀಪಯಂತಿ ಮಹಾತ್ಮಾನಃ ಸೂಕ್ಷ್ಮಮಾತ್ಮಾನಮಾತ್ಮನಾ ।
ವೀತರಾಗಾ ಮಹಾಪ್ರಾಜ್ಞಾ ಧ್ಯಾನಾಧ್ಯಯನಸಂಪದಾ ॥೪೯॥

ನರಶ್ರೇಷ್ಠನೇ, ಕಾಮ, ಕ್ರೋಧ, ಶೀತ, ಉಷ್ಣ, ಮಳೆ, ಭಯ, ಶೋಕ, ಶ್ವಾಸ, ಮನುಷ್ಯನಿಗೆ ಪ್ರಿಯವೆನಿಸಿದ ವಿಷಯಗಳು, ಜಯಿಸಲು ಅಸಾಧ್ಯವಾದ ಬಂಧು ಮೋಹ, ಘೋರವಾದ ತೃಷ್ಣೆ, ಸ್ಪರ್ಶ, ನಿದ್ರೆ, ಯಾರಿಂದಲೂ ಜಯಿಸಲಾಗದ ಆಲಸ್ಯ ಇವುಗಳನ್ನು ಯಾವನು ಜಯಿಸಿರುತ್ತಾನೋ ಅಂತಹ ಮಹಾತ್ಮನಾದ ಯೋಗಿಯು ಬಲಿಷ್ಠನಾಗಿರುತ್ತಾನೆ. ಧ್ಯಾನ, ಅಧ್ಯಯನ, ಇವುಗಳಿಂದ ಸೂಕ್ಷ್ಮ ಬುದ್ಧಿಯಿಂದ ಪರಮಾತ್ಮನನ್ನು ಕಾಣುತ್ತಾ ಜ್ಞಾನಿಯಾಗಿ, ರಾಗಮುಕ್ತನಾಗಿ, ಧ್ಯಾನ-ಅಧ್ಯಯನ ಸಂಪತ್ತುಗಳಿಂದ ಪರಮಾತ್ಮನನ್ನು ಬೆಳಗುತ್ತಾನೆ. ಮತ್ತೊಬ್ಬರಿಗೂ ತೋರಿಸಲು ಸಮರ್ಥನಾಗುತ್ತಾನೆ.

ದುರ್ಗಸ್ತ್ವೇಷ ಮತಃ ಪಂಥಾ ಬ್ರಾಹ್ಮಣಾನಾಂ ವಿಪಶ್ಚಿತಾಮ್ ।
ನ ಕಶ್ಚಿದ್ ವ್ರಜತಿ ಹ್ಯಸ್ಮಿನ್ ಕ್ಷೇಮೇಣ ಭರತರ್ಷಭ ॥೫೦॥

ಭರತಶ್ರೇಷ್ಠನೇ, ಯೋಗಮಾರ್ಗವು ಅತ್ಯಂತ ಕಠಿಣವಾದುದು ಎಂಬುದು ವಿಪಶ್ಚಿತರ ಅಭಿಪ್ರಾಯವು. ಕೆಲವು ವ್ಯಕ್ತಿಗಳು ಮಾತ್ರವೇ ಈ ಮಾರ್ಗದಲ್ಲಿ (ಜ್ಞಾನಿಗಳ) ಕ್ಷೇಮದಿಂದ ಮುಂದುವರೆಯಬಲ್ಲರು.

ಯಥಾ ಕಶ್ಚಿದ್ವನಂ ಘೋರಂ ಬಹುಸರ್ಪಸರೀಸೃಪಮ್ ।
ಶ್ವಭ್ರವತ್ತೋಯಹೀನಂ ಚ ದುರ್ಗಮಂ ಬಹುಕಂಟಕಮ್ ॥೫೧॥

ಅಭಕ್ತಮಟವೀಪ್ರಾಯಂ ದಾವದಗ್ಧಮಹೀರುಹಮ್ ।
ಪಂಥಾನಂ ತಸ್ಕರಾಕೀರ್ಣಂ ಕ್ಷೇಮೇಣಾಭಿಪತೇದ್ಯುವಾ ॥೫೨॥

ಯೋಗಮಾರ್ಗಂ ತಥಾಸಾದ್ಯ ಯಃ ಕಶ್ಚಿದ್ ಭಜತೇ ದ್ವಿಜಃ ।
ಕ್ಷೇಮೇಣೋಪರಮೇನ್ಮಾರ್ಗಾದ್ ಬಹುದೋಷೋ ಹಿ ಸ ಸ್ಮೃತಃ ॥೫೩॥

ಒಬ್ಬ ವ್ಯಕ್ತಿಯು ವಿಷಜಂತುಗಳಿಂದ ಕೂಡಿರುವ, ಗುಹೆಗಳಿಂದ ಕೂಡಿರುವ, ನೀರೇ ಇಲ್ಲದ, ದುರ್ಗಮವಾದ, ಮುಳ್ಳು ಕೊಂಪೆಗಳಿಂದ ಆವೃತವಾಗಿರುವ, ಆಹಾರವಿಲ್ಲದಿರುವ, ಕಾಡ್ಗಿಚ್ಚಿನಿಂದ ಸುಟ್ಟುಹೋದ ವನದಿಂದ ಕೂಡಿರುವ, ಕಳ್ಳರಿಂದ ತುಂಬಿರುವ ಅರಣ್ಯದಲ್ಲಿ ಸಂಚರಿಸಬೇಕೆಂದರೆ ತುಂಬಾ ಧೀರನೇ ಆಗಿರಬೇಕು. ಧೀರ ಪುರುಷನು ಮಾತ್ರ ನಿರ್ಭೀತಿಯಿಂದ ಕ್ಷೇಮವಾಗಿ ಸಾಗಬಲ್ಲನು. ಇದರಂತೆ ಯೋಗಮಾರ್ಗವನ್ನು ಆಶ್ರಯಿಸಿದ ಕೆಲವೇ ದ್ವಿಜರು ಆ ಮಾರ್ಗದ ಮೂಲಕ ಕ್ಷೇಮದಿಂದ ಪರಮಪದವಿಯನ್ನು ಹೊಂದುತ್ತಾರೆ. ಯೋಗಮಾರ್ಗವು ಕಠಿಣ ಅಭ್ಯಾಸದಿಂದ ಕೂಡಿರುವುದರಿಂದ ಆ ಮಾರ್ಗದಲ್ಲಿ ಸಾಗುವುದು ಕಷ್ಟಸಾಧ್ಯವು.

ಸುಸ್ಥೇಯಂ ಕ್ಷುರಧಾರಾಸು ನಿಶಿತಾಸು ಮಹೀಪತೇ ।
ಧಾರಣಾಸು ತು ಯೋಗಸ್ಯ ದುಃಸ್ಥೇಯಮಕೃತಾತ್ಮಭಿಃ ॥೫೪॥

ಮಹಾರಾಜನೇ, ಚೂಪಾದ ಕತ್ತಿಯ ಅಲುಗಿನ ಮೇಲಾದರೂ ಕ್ಷಣಕಾಲ ಸುಖವಾಗಿ ನಿಲ್ಲಬಹುದು, ಆದರೆ ಜಿತೇಂದ್ರಿಯರಲ್ಲದವರಿಗೆ ಯೋಗಕ್ಕೆ ಸಂಬಂಧಿಸಿದ ಧಾರಣೆಗಳಲ್ಲಿ ಏಕಾಗ್ರತೆಯಿಂದ ಕ್ಷಣಕಾಲವೂ ಮನಸ್ಸನ್ನು ನಿಲ್ಲಿಸುವುದು ಕಠಿಣವೇ ಸರಿ.

ವಿಪನ್ನಾ ಧಾರಣಾಸ್ತಾತ ನಯಂತಿ ನಶುಭಾಂ ಗತಿಮ್ ।
ನೇತೃಹೀನಾ ಯಥಾ ನಾವಃ ಪುರುಷಾನರ್ಣವೇ ನೃಪ ॥೫೫॥

ನಾವಿಕನಿಲ್ಲದ ನೌಕೆಯು ಸಮುದ್ರದಲ್ಲಿ ಸಾಗುವಾಗ ಮನುಷ್ಯರನ್ನು ಹೇಗೆ ದಡ ಮುಟ್ಟಿಸದೋ ಅದೇ ರೀತಿ ಸಿದ್ಧಿಹೊಂದದಿರುವ ಧಾರಣೆಗಳು ಸಾಧಕನನ್ನು ಶುಭಗತಿಗೆ ಕೊಂಡೊಯ್ಯವು.

ಯಸ್ತು ತಿಷ್ಠತಿ ಕೌಂತೇಯ ಧಾರಣಾಸು ಯಥಾವಿಧಿ ।
ಮರಣಂ ಜನ್ಮ ದುಃಖಂ ಚ ಸುಖಂ ಚ ಸ ವಿಮುಂಚತಿ ॥೫೬॥

ಕುಂತೀಸುತನೇ, ಧಾರಣೆಗಳಲ್ಲಿ ಯಾವನು ಮನಸ್ಸನ್ನು ಸ್ಥಿರಗೊಳಿಸುವನೋ ಅಂತಹ ವ್ಯಕ್ತಿಯು ಮರಣ, ಜನ್ಮಗಳ ದುಃಖವನ್ನು ಪರಿಹರಿಸಿಕೊಂಡು ತಾತ್ಕಾಲಿಕವಾದ ಸಾಂಸಾರಿಕ ಸುಖಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ನಾನಾಶಾಸ್ತ್ರೇಷು ನಿಷ್ಪನ್ನಂ ಯೋಗೇಷ್ವಿದಮುದಾಹೃತಮ್ ।
ಪರಂ ಯೋಗಂ ತು ಯತ್ಕೃತ್ಸ್ನಂ ನಿಶ್ಚಿತಂ ತದ್ ದ್ವಿಜಾತಿಷು ॥೫೭॥

ಯುಧಿಷ್ಠಿರನೇ, ನಾನಾ ಶಾಸ್ತ್ರಗಳಲ್ಲಿ ಸಿದ್ಧಾಂತವೆಂದು ಹೇಳಿರುವ ಯೋಗಶಾಸ್ತ್ರಗಳ ರಹಸ್ಯವನ್ನು ನಿನಗೆ ಹೇಳಿದ್ದೇನೆ. ಯೋಗಸಾಧನೆಗೆ ಯಾವ ಯಾವ ಕರ್ತವ್ಯವಿದೆಯೋ ಅವೆಲ್ಲವೂ ಜ್ಞಾನಿಗಳಿಂದ ನಿಶ್ಚಯಿಸಲ್ಪಟ್ಟಿದೆ.

ಪರಂ ಮಹದ್ ಬ್ರಹ್ಮ ಮಹನ್ಮಹಾತ್ಮನ್
ಬ್ರಹ್ಮಾಣಮೀಶಂ ವರದಂ ಚ ವಿಷ್ಣುಮ್ ।
ಭವಂ ಚ ಧರ್ಮಂ ಚ ಷಡಾನನಂ ಚ
ಷಡ್‌ಬ್ರಹ್ಮಪುತ್ರಾಂಶ್ಚ ಮಹಾನುಭಾವಾನ್ ॥೫೮॥

ಮಹಾತ್ಮನಾದ ಯುಧಿಷ್ಠಿರನೇ, ಯೋಗಕೌಶಲದಿಂದ ಕೂಡಿರುವ ಶ್ರೇಷ್ಠವಾದ ಯೋಗವೆಂದರೆ ವೇದಗಳೇ ಆಗಿವೆ. ಯೋಗವು ವೇದಗಳ ಸಾರವಾದುದರಿಂದ ಯೋಗವನ್ನೂ ವೇದವೆಂದೇ ಹೇಳುತ್ತಾರೆ. ಇಂತಹ ಯೋಗಸಿದ್ಧಿಯನ್ನು ಪಡೆದ ಮಹಾತ್ಮನಾದ ಪುರುಷನು ಇಚ್ಛಿಸಿದಲ್ಲಿ ಕೂಡಲೇ ಮುಕ್ತನಾಗಿ ಪರಬ್ರಹ್ಮನನ್ನು, ವರದನಾದ ವಿಷ್ಣುವನ್ನು, ಈಶ್ವರನನ್ನು, ಯಮಧರ್ಮನನ್ನು, ಷಣ್ಮುಖನನ್ನು, ಬ್ರಹ್ಮನ ಮಾನಸ ಪುತ್ರರಾದ ಸನಕಾದಿಗಳನ್ನು ಹೊಂದಬಲ್ಲನು.

ತಮಶ್ಚ ಕಷ್ಟಂ ಸುಮಹದ್ರಜಶ್ಚ
ಸತ್ತ್ವಂ ಚ ಶುದ್ಧಂ ಪ್ರಕೃತಿಂ ಪರಾಂ ಚ ।
ಸಿದ್ಧಿಂ ಚ ದೇವೀಂ ವರುಣಸ್ಯ ಪತ್ನೀಂ
ತೇಜಶ್ಚ ಕೃತ್ಸ್ನಂ ಸುಮಹಚ್ಚ ಧೈರ್ಯಮ್ ॥೫೯॥

ತಾರಾಧಿಪಂ ವೈ ವಿಮಲಂ ಸತಾರಂ
ವಿಶ್ವಾಂಶ್ಚ ದೇವಾನುರಗಾನ್ ಪಿತೄಂಶ್ಚ ।
ಶೈಲಾಂಶ್ಚ ಕೃತ್ಸ್ನಾನುದಧೀಂಶ್ಚ ಘೋರಾ-
ನ್ನದೀಶ್ಚ ಸರ್ವಾಃ ಸವನಾಂಘನಾಂಶ್ಚ ॥೬೦॥

ನಾಗಾನ್ನಗಾನ್ ಯಕ್ಷಗಣಾನ್ ದಿಶಶ್ಚ
ಗಂಧರ್ವಸಂಘಾನ್ ಪುರುಷಾನ್ ಸ್ತ್ರಿಯಶ್ಚ ।
ಪರಸ್ಪರಂ ಪ್ರಾಪ್ಯ ಮಹಾನ್ಮಹಾತ್ಮಾ
ವಿಶೇತ ಯೋಗೀ ನಚಿರಾದ್ ವಿಮುಕ್ತಃ ॥೬೧॥

ಕಷ್ಟವಾದ ತಮೋಭಾವವನ್ನಾಗಲಿ, ರಜೋಭಾವವನ್ನಾಗಲಿ, ಸತ್ತ್ವಭಾವವನ್ನಾಗಲಿ, ಶುದ್ಧವಾದ ಪ್ರಕೃತಿಯನ್ನಾಗಲಿ, ಸಿದ್ಧಿಯನ್ನಾಗಲಿ, ವರುಣನ ಪತ್ನಿಯನ್ನಾಗಲಿ, ಸಂಪೂರ್ಣವಾದ ತೇಜಸ್ಸನ್ನಾಗಲಿ, ಶ್ರೇಷ್ಠವಾದ ಧೈರ್ಯವನ್ನಾಗಲಿ, ತಾರಾಧಿಪತಿಯಾದ ಚಂದ್ರನನ್ನಾಗಲಿ, ವಿಶ್ವೇದೇವತೆಗಳನ್ನಾಗಲಿ, ಸರ್ಪಗಳನ್ನಾಗಲಿ, ಪಿತೃಗಳನ್ನಾಗಲಿ, ಸಮಸ್ತವಾದ ಪರ್ವತಗಳನ್ನಾಗಲಿ, ಭಯಂಕರವಾದ ಸಮುದ್ರಗಳನ್ನಾಗಲಿ, ಅಖಿಲವಾದ ನದಿಗಳನ್ನಾಗಲಿ, ವನಗಳನ್ನಾಗಲಿ, ಮೇಘಗಳನ್ನಾಗಲಿ, ನಾಗಗಳನ್ನಾಗಲಿ, ವೃಕ್ಷಗಳನ್ನಾಗಲಿ, ದಿಕ್ಕುಗಳನ್ನಾಗಲಿ, ಗಂಧರ್ವ ಗುಣಗಳನ್ನಾಗಲಿ, ಸಮಸ್ತ ಸ್ತ್ರೀ-ಪುರುಷರನ್ನಾಗಲಿ ಸಂಧಿಸಿ ಅವರವರಂತೆ ಸ್ಥಾನವನ್ನು ಹೊಂದಲು ಸಮರ್ಥನಾಗುತ್ತಾನೆ.

ವ್ಯಾಖ್ಯಾನ ವಿಶೇಷ– ಸರ್ವೋತ್ತಮನಾದ ಭಗವಂತನನ್ನು ಯೋಗಕೌಶಲದಿಂದ ಹೊಂದಿದ ಮಹಾತ್ಮನಾದ ಯೋಗಿಯು ಶೀಘ್ರವಾಗಿ ಬಂಧನದಿಂದ ಬಿಡುಗಡೆಯನ್ನು ಹೊಂದಿದವನಾಗಿ ಈ ಎಲ್ಲಸ್ಥಾನಗಳಲ್ಲಿಯೂ ಮನಬಂದಂತೆ ವಿಹರಿಸಲು ಸಾಮರ್ಥ್ಯವನ್ನು ಹೊಂದುತ್ತಾನೆ ಎಂದು ಅಭಿಪ್ರಾಯ.

ಕಥಾ ಚ ಯೇಯಂ ನೃಪತೇ ಪ್ರಸಕ್ತಾ
ದೇವೇ ಮಹಾವೀರ್ಯಮತೌ ಶುಭೇಯಮ್ ।
ಯೋಗಾನ್ ಸ ಸರ್ವಾನಭಿಭೂಯ ಮರ್ತ್ಯಾ-
ನ್ನಾರಾಯಣಾತ್ಮಾ ಕುರುತೇ ಮಹಾತ್ಮಾ ॥೬೨॥

ಬಲದಿಂದಲೂ, ಬುದ್ಧಿಯಿಂದಲೂ ಸಂಪನ್ನವಾದ ಪರಮಾತ್ಮನಿಗೆ ಸಂಬಂಧಿಸಿದ ಕಲ್ಯಾಣಕರವಾದ ಕಥೆಯನ್ನು ನಾನು ಪ್ರಾಸಂಗಿಕವಾಗಿ ನಿನಗೆ ಬೋಧಿಸಿದ್ದೇನೆ. ಯೋಗಸಿದ್ಧಿಯನ್ನು ಪಡೆದ ಮಹಾತ್ಮನು ಜಗತ್ತಿಗೆ ವಿಲಕ್ಷಣನಾಗಿ ನಿಂತು ನಾರಾಯಣನಲ್ಲಿ ತನ್ನ ಮನಸ್ಸನ್ನು ನೆಲೆಗೊಳಿಸಿಕೊಂಡು ಭಗವಂತನಂತೆ ಅವನ ಸಂಕಲ್ಪಕ್ಕನುಗುಣವಾಗಿ ಸತ್ಕರ್ಮಗಳನ್ನು ನಡೆಸಲು ಸಾಮರ್ಥ್ಯವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಯೋಗವಿಧಿರ್ನಾಮ
ತ್ರಯಸ್ತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ನಾಲ್ಕನೆಯ ಅಧ್ಯಾಯ

ಯುಧಿಷ್ಠಿರನನ್ನು ಕುರಿತು ಯೋಗದ ಮಹತ್ವ ಮತ್ತು ಫಲವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಸಮ್ಯಕ್ತ್ವಯಾಯಂ ನೃಪತೇ ವರ್ಣಿತಃ ಶಿಷ್ಟಸಮ್ಮತಃ ।
ಯೋಗಮಾರ್ಗೋ ಯಥಾನ್ಯಾಯಂ ಶಿಷ್ಯಾಯೇಹ ಹಿತೈಷಿಣಾ ॥೧॥

ಯುಧಿಷ್ಠಿರ– ತನ್ನ ಹಿತವನ್ನು ಚಿಂತಿಸುವ ನೀನು ನಮ್ಮ ಶಿಷ್ಯನಾದ ನನಗೆ ಜ್ಞಾನಿಗಳಿಗೆ ಸಮ್ಮತವಾದ ಯೋಗಮಾರ್ಗವನ್ನು ಯಥಾನ್ಯಾಯವಾಗಿ ವಿವರಿಸು.

ಸಾಂಖ್ಯೇ ತ್ವಿದಾನೀಂ ಕಾರ್ತ್ಸ್ನ್ಯೇನ ವಿಧಿಂ ಪ್ರಬ್ರೂಹಿ ಪೃಚ್ಛತೇ ।
ತ್ರಿಷು ಲೋಕೇಷು ಯಜ್ಜ್ಞಾನಂ ಸರ್ವಂ ತದ್ ವಿದಿತಂ ಹಿ ತೇ ॥೨॥

ನಾನೀಗ ಸಾಂಖ್ಯಶಾಸ್ತ್ರಕ್ಕೆ ಸಂಬಂಧಿಸಿದ ಉಗ್ರವಾದ ನಿಯಮಗಳ ಬಗ್ಗೆ ಪ್ರಶ್ನಿಸುತ್ತಿದ್ದೇನೆ. ಕೃಪೆತೋರಿ ಅದನ್ನು ತಿಳಿಸು. ಮೂರುಲೋಕಗಳಲ್ಲಿರುವ ಸಮಸ್ತ ಜ್ಞಾನಗಳ ಬಗ್ಗೆ ಬಲ್ಲವನು ನೀನು.

ಭೀಷ್ಮಃ

ಶೃಣು ಮೇ ತ್ವಮಿದಂ ಶುದ್ಧಂ ಸಾಂಖ್ಯಾನಾಂ ವಿದಿತಾತ್ಮನಾಮ್ ।
ವಿಹಿತಂ ಯತಿಭಿರ್ಬುದ್ಧೈಃ ಕಪಿಲಾದಿಭಿರೀಶ್ವರೈಃ ॥೩॥

ಭೀಷ್ಮ– ಯುಧಿಷ್ಠಿರನೇ, ಭಗವತ್ತತ್ತ್ವವನ್ನು ತಿಳಿದಿರುವ ಸಾಂಖ್ಯರ ಸೂಕ್ಷ್ಮವಾದ ವಿಷಯವನ್ನು ಕೇಳಿಸಿಕೊ. ಈಶ್ವರನಾದ ಕಪಿಲನೇ ಮೊದಲಾದ ಎಲ್ಲರಿಂದಲೂ ಈ ಸಾಂಖ್ಯ ಶಾಸ್ತ್ರವು ಹೇಳಲ್ಪಟ್ಟಿದೆ.

ಯಸ್ಮಿನ್ನ ವಿಭ್ರಮಾಃ ಕೇಚಿದ್ ದೃಶ್ಯಂತೇ ಮನುಜರ್ಷಭ ।
ಗುಣಾಶ್ಚ ಯಸ್ಮಿನ್ ಬಹವೋ ದೋಷಹಾನಿಶ್ಚ ಕೇವಲಾ ॥೪॥

ಈ ಸಾಂಖ್ಯಶಾಸ್ತ್ರದಲ್ಲಿ ಯಾವುದೇ ದೋಷಗಳು ಇರುವುದಿಲ್ಲ. ಗುಣಗಳಂತು ಬಹಳವಾಗಿವೆ. ದೋಷರಹಿತವಾಗಿವೆ.

ವ್ಯಾಖ್ಯಾನ ವಿಶೇಷ– ಭಗವತ್ತತ್ತ್ವವನ್ನು ಯಥಾರ್ಥವಾಗಿ ತಿಳಿಸುವ ಶಾಸ್ತ್ರವೇ ಸಾಂಖ್ಯಶಾಸ್ತ್ರವೆನಿಸಿದೆ.

ಜ್ಞಾನೇನ ಪರಿಸಂಖ್ಯಾಯ ಸದೋಷಾನ್ ವಿಷಯಾನ್ನೃಪ ।
ಮಾನುಷಾನ್ ದುರ್ಜಯಾನ್ ಕೃತ್ಸ್ನಾನ್ ಪೈಶಾಚಾನ್ ವಿಷಯಾಂಸ್ತಥಾ ॥

ಜ್ಞಾನಿಗಳು ತಮ್ಮ ಜ್ಞಾನದ ಮೂಲಕ ಚೆನ್ನಾಗಿ ವಿಮರ್ಶೆ ಮಾಡಿ, ವಿಷಯಗಳೆಲ್ಲವೂ ದೋಷಯುಕ್ತವಾಗಿವೆ ಎಂಬುದನ್ನು ತಮ್ಮ ಜ್ಞಾನದಿಂದ ಚಿಂತಿಸಿ, ಮನುಷ್ಯರಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ತಿಳಿದುಕೊಂಡು, ಆ ರಾಗಾದಿ ವಿಷಯಗಳು ಸಾಮಾನ್ಯರಿಂದ ಗೆಲ್ಲಲು ಸಾಧ್ಯವಿಲ್ಲವೆಂದು ತಿಳಿದು, ಅದರಂತೆ ಪಿಶಾಚರಿಗೆ ಸಂಬಂಧಿಸಿದ ವಿಷಯಗಳನ್ನು ದುರ್ಜಯಗಳೆಂದೇ ತಿಳಿದಿರುತ್ತಾರೆ.

ರಾಕ್ಷಸಾನ್ ವಿಷಯಾನ್ ಜ್ಞಾತ್ವಾ ಯಕ್ಷಾಣಾಂ ವಿಷಯಾಂಸ್ತಥಾ ।
ವಿಷಯಾನೌರಗಾನ್ ಜ್ಞಾತ್ವಾ ಗಾಂಧರ್ವವಿಷಯಾಂಸ್ತಥಾ ॥೬॥

ಪಿತೄಣಾಂ ವಿಷಯಾನ್ ಜ್ಞಾತ್ವಾ ತಿರ್ಯಕ್ಷು ಚರತಾಂ ನೃಪ ।
ಸುಪರ್ಣವಿಷಯಾನ್ ಜ್ಞಾತ್ವಾ ಮರುತಾಂ ವಿಷಯಾಂಸ್ತಥಾ ॥೭॥

ರಾಜರ್ಷಿವಿಷಯಾನ್ ಜ್ಞಾತ್ವಾ ಬ್ರಹ್ಮರ್ಷಿವಿಷಯಾಂಸ್ತಥಾ ।
ಆಸುರಾನ್ ವಿಷಯಾನ್ ಜ್ಞಾತ್ವಾ ವೈಶ್ವದೇವಾಂಸ್ತಥೈವ ಚ ॥೮॥

ದೇವರ್ಷಿವಿಷಯಾನ್ ಜ್ಞಾತ್ವಾ ಯೋಗಾನಾಮಪಿ ಚೇಶ್ವರಾನ್ ।
ವಿಷಯಾಂಶ್ಚ ಪ್ರಜೇಶಾನಾಂ ಬ್ರಹ್ಮಣೋ ವಿಷಯಾಂಸ್ತಥಾ ॥೯॥

ಜ್ಞಾನಿಗಳು ಯಕ್ಷರಿಗೆ ಸಂಬಂಧಿಸಿದ ವಿಷಯಗಳನ್ನು, ಉರಗಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿದಿರುತ್ತಾರೆ. ಗಂಧರ್ವರಿಗೆ ಸಂಬಂಧಿಸಿದ ವಿಷಯಗಳನ್ನು, ಪಿತೃಗಳಿಗೆ, ತಿರ್ಯಗ್ಯೋನಿಗಳಿಗೆ, ಗರುಡ ಪಕ್ಷಿಗಳಿಗೆ, ಮರುತ್ತುಗಳಿಗೆ, ರಾಜರ್ಷಿಗಳಿಗೆ, ಬ್ರಹ್ಮರ್ಷಿಗಳಿಗೆ, ಅಸುರರಿಗೆ, ವಿಶ್ವೇದೇವತೆಗಳಿಗೆ, ದೇವರ್ಷಿಗಳಿಗೆ, ಯೋಗಿಗಳಿಗೆ, ಪ್ರಜಾಪತಿಗಳಿಗೆ, ಬ್ರಹ್ಮನಿಗೆ, ಯಾವ ಯಾವ ವಿಷಯಗಳಲ್ಲಿ ಅಭಿಲಾಷೆ ಇದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ.

ಆಯುಷಶ್ಚ ಪರಂ ಕಾಲಂ ಲೋಕೇ ವಿಜ್ಞಾಯ ತತ್ತ್ವತಃ ।
ಸುಖಸ್ಯ ಚ ಪರಂ ತತ್ತ್ವಂ ವಿಜ್ಞಾಯ ವದತಾಂ ವರ ॥೧೦॥

ಲೋಕದಲ್ಲಿ ಮನುಷ್ಯನಿಗೆ ಅಧಿಕವಾದ ಆಯುಷ್ಯ ಕಾಲವು ಎಷ್ಟೆಂಬುದನ್ನು ಯಥಾವತ್ತಾಗಿ ತಿಳಿದಿರುತ್ತಾರೆ. ಐಹಿಕ, ಆಮುಷ್ಮಿಕ, ಆಧ್ಯಾತ್ಮಿಕ ಸುಖಗಳ ತತ್ತ್ವಗಳನ್ನು ಚೆನ್ನಾಗಿ ತಿಳಿದಿರುತ್ತಾರೆ.

ಪ್ರಾಪ್ತೇ ಕಾಲೇ ಚ ಯದ್ದುಃಖಂ ಪತತಾಂ ವಿಷಯೈಷಿಣಾಮ್ ।
ತಿರ್ಯಕ್ಚ ಪತತಾಂ ದುಃಖಂ ಪತತಾಂ ನರಕೇ ಚ ಯತ್ ॥೧೧॥

ವಿಷಯಗಳನ್ನು ಬಯಸುವಂತಹ ವ್ಯಕ್ತಿಗಳಿಗೆ ಎಂತೆಂತಹ ದುಃಖವು ಸಂಭವಿಸುತ್ತದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ. ಯಾವ ಪಾಪದಿಂದ ಪ್ರಾಣಿ ಯೋನಿಗಳಲ್ಲಿ ಜನ್ಮ ತಾಳುತ್ತಾರೆ? ಆ ಜನ್ಮದಲ್ಲಿರುವ ದುಃಖಗಳೇನು? ನರಕಕ್ಕೆ ಹೋಗುವವರ ದುಃಖವೇನು ಎಂಬುದನ್ನು ತಿಳಿದುಕೊಂಡಿರುತ್ತಾರೆ.

ಸ್ವರ್ಗಸ್ಯ ಚ ಗುಣಾನ್ ಕೃತ್ಸ್ನಾನ್ ದೋಷಾನ್ ಸರ್ವಾಂಶ್ಚ ಭಾರತ ।
ವೇದವಾದೇ ಚ ಯೇ ದೋಷಾ ಗುಣಾ ಯೇ ಚಾಪಿ ವೈದಿಕಾಃ ॥೧೨॥

ಸ್ವರ್ಗದಲ್ಲಿರುವ ಗುಣಗಳ ಬಗ್ಗೆ, ದೋಷಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಹೊಂದಿರುತ್ತಾರೆ. ವೇದಗಳಲ್ಲಿನ ವೈದಿಕ ಕರ್ಮಗಳಲ್ಲಿರುವ ಗುಣ- ದೋಷಗಳನ್ನು ತಿಳಿದಿರುತ್ತಾರೆ.

ಜ್ಞಾನಯೋಗೇ ಚ ಯೇ ದೋಷಾ ಗುಣಾ ಯೋಗೇ ಚ ಯೇ ನೃಪ ।
ಸಾಂಖ್ಯಜ್ಞಾನೇ ಚ ಯೇ ದೋಷಾಸ್ತಥೈವ ಚ ಗುಣಾ ನೃಪ ॥೧೩॥

ಜ್ಞಾನಯೋಗದಲ್ಲಿ ಯಾವ ಗುಣ-ದೋಷಗಳಿವೆ ಎಂಬುದನ್ನು ಅರ್ಥ ಮಾಡಿಕೊಂಡಿರುತ್ತಾರೆ. ಇದರಂತೆ ಸಾಂಖ್ಯಜ್ಞಾನದಲ್ಲಿರುವ ಗುಣಗಳೇನು, ದೋಷಗಳೇನು ಎಂಬುದನ್ನು ತಿಳಿದುಕೊಂಡಿರುತ್ತಾರೆ.

ಸತ್ತ್ವಂ ದಶಗುಣಂ ಜ್ಞಾತ್ವಾ ರಜೋ ನವಗುಣಂ ತಥಾ ।
ತಮಶ್ಚಾಷ್ಟಗುಣಂ ಜ್ಞಾತ್ವಾ ಬುದ್ಧಿಂ ಸಪ್ತಗುಣಾಂ ತಥಾ ॥೧೪॥

ಅದರಂತೆ ಸತ್ತ್ವಗುಣದಲ್ಲಿರುವ ಹತ್ತು ಗುಣಗಳಲ್ಲಿ ಅಸಾಧಾರಣ ಗುಣವೆನಿಸಿದ ತತ್ತ್ವಜ್ಞಾನವು, ಆ ತತ್ತ್ವಜ್ಞಾನಕ್ಕೆ ಸಹಕಾರಿಯಾದ ಶಮ, ದಮ, ವಿಷಯ ಪದಾರ್ಥಗಳಿಂದ ಉಪಹತಿ, ದ್ವಂದ್ವಸಹಿಷ್ಣುತೆ, ಚಿತ್ತ ಸಮಾಧಾನ, ಗುರೂಪಸತ್ತಿ, ಶ್ರವಣ, ಮನನ, ಧ್ಯಾನ ಹೀಗೆ ಹತ್ತು ಗುಣಗಳ ಬಗ್ಗೆ ಸರಿಯಾದ ಜ್ಞಾನವನ್ನು ಹೊಂದಿರುತ್ತಾರೆ. ಜ್ಞಾನವೆಂಬ ಅಂಗಕ್ಕೆ ಅಂಗೀಭೂತವಾದ ಗುಣಗಳು ಶಮ-ದಮಾದಿಗಳು. ಇದರಂತೆ ರಜೋಗುಣದ ಅಸಾಧಾರಣ ಗುಣವು ಸಂಶಯವೆನಿಸಿದೆ. ಸಂಶಯಕ್ಕೆ ಉಪಯುಕ್ತವಾದ ಅಂಗವೆನಿಸಿದ ಗುಣಗಳು ಕೆಲವೊಮ್ಮೆ ಸಜ್ಜನರ ಸಹವಾಸ, ಕೆಲವೊಮ್ಮೆ ದುಷ್ಟರ ಸಹವಾಸ, ಕೆಲವೊಮ್ಮೆ ಸಚ್ಛಾಸ್ತ್ರ ಶ್ರವಣ, ಯಾವಾಗಲೋ ಒಮ್ಮೆ ದುಶ್ಶಾಸ್ತ್ರ ಶ್ರವಣ, ವಿಷಯ ಪದಾರ್ಥಗಳಲ್ಲಿ ಅಭಿಲಾಷೆ, ಧನದಲ್ಲಿ ಅತಿಯಾದ ಆಸಕ್ತಿ, ದಾರಾಪತ್ಯಾದಿಗಳಲ್ಲಿ ಲೋಲುಪತೆ - ಹೀಗೆ ಅಂಗಾಂಗಿ ಭಾವಗಳಿಂದ ಕೂಡಿದ ರಜೋಗುಣದ ಒಂಬತ್ತು ಗುಣಗಳನ್ನು ತಿಳಿದವರಾಗಿರುತ್ತಾರೆ. ಇದರಂತೆ ತಮೋಗುಣದ ಅಸಾಧಾರಣವಾದ ಗುಣವು ಮಿಥ್ಯಾಜ್ಞಾನವೆನಿಸಿದೆ. ಈ ಅಸಾಧಾರಣ ಗುಣವೆಂಬ ಅಂಗಿಗೆ ಅಂಗಭೂತವಾದ ಗುಣಗಳು ಏಳು. ವಿಷ್ಣುದ್ವೇಷ, ಅಸಜ್ಜನರ ಸೇವನೆ, ದುಶ್ಶಾಸ್ತ್ರ ಶ್ರವಣ, ಕ್ರೋಧ, ಪ್ರಮಾದ, ನಿದ್ರಾ, ಆಲಸ್ಯ ಎಂಬುದಾಗಿ. ಹೀಗೆ ಅಂಗಾಂಗಿಗಳಿಂದ ಕೂಡಿದ ತಮೋಗುಣದ ಎಂಟು ಗುಣಗಳನ್ನು ಜ್ಞಾನಿಗಳು ಅರ್ಥಮಾಡಿಕೊಂಡಿರುತ್ತಾರೆ. ಇದರಂತೆ ಬುದ್ಧಿಯ ಅಸಾಧಾರಣ ಗುಣವು ನಿಶ್ಚಯ ಜ್ಞಾನವು. ಅಸಾಧಾರಣ ಗುಣವೆನಿಸಿದ ನಿಶ್ಚಯ ಜ್ಞಾನವೆಂಬ ಅಂಗಿಗೆ ಅಂಗಭೂತವಾದ ಆರು ಇಂದ್ರಿಯಗಳಿಂದ ಹುಟ್ಟುವಂತಹ ಆರು ವಿಧವಾದ ಜ್ಞಾನವು ಸಾಧಾರಣ ಗುಣವೆನಿಸಿದೆ. ವಾಸ್ತವಿಕವಾಗಿ ಜ್ಞಾನವು ಮನಸ್ಸಿಗೆ ಸಂಬಂಧಿಸಿದುದೇ ಆಗಿದ್ದರೂ ಮನಸ್ಸು ವಿಷಯಗಳನ್ನು ಪರೀಕ್ಷಿಸಿ ನಿರ್ಣಯಿಸಲು ಅಸಮರ್ಥವಾದುದ-ರಿಂದ ಪರೀಕ್ಷಕವಾದ ಬುದ್ಧಿಯು ಆ ಮನಸ್ಸಿನಲ್ಲಿರುವ ವಿಷಯಗಳನ್ನು ತಾನು

ಗ್ರಹಿಸುತ್ತದೆ. ಆದ್ದರಿಂದ ಇಲ್ಲಿ ಏಳು ಗುಣಗಳೆಂದು ಹೇಳಲಾಗಿದೆ. ಒಟ್ಟು ಬುದ್ಧಿಯೂ ಸೇರಿ ಎಂಟು ಗುಣಗಳಾಗುತ್ತವೆ.

ಷಡ್ಗುಣಂ ಚ ನಭೋ ಜ್ಞಾತ್ವಾ ಮನಃ ಪಂಚಗುಣಂ ತಥಾ ।
ಬುದ್ಧಿಂ ಚತುರ್ಗುಣಾಂ ಜ್ಞಾತ್ವಾ ತಮಶ್ಚ ತ್ರಿಗುಣಂ ಮಹತ್ ॥೧೫॥

ಮನಸ್ಸಿನ ಅಸಾಧಾರಣ ಗುಣವು ಸ್ಮರಣೆ ಎನಿಸಿದೆ. ಪಂಚೇಂದ್ರಿಯಗಳಿಂದ ಹುಟ್ಟುವಂತಹ ಐದು ವಿಧವಾದ ಜ್ಞಾನವು ಸಾಧಾರಣ ಗುಣವೆನಿಸಿದೆ. ಪ್ರಳಯ ಕಾಲದಲ್ಲಿಯೂ ಮನಸ್ಸು ಶ್ರೋತ್ರಾದಿ ಇಂದ್ರಿಯಗಳಿಂದ ನಿವೃತ್ತಿಯನ್ನು ಹೊಂದುತ್ತದೆ. ಅವುಗಳಿಂದ ಹುಟ್ಟುವ ಜ್ಞಾನವು ನಿಂತು ಹೋಗುತ್ತದೆ. ಆದ್ದರಿಂದಲೇ ಬಾಹ್ಯ ವಿಷಯಗಳ ಅನುಸಂಧಾನವು ಮನಸ್ಸಿಗೆ ಇರುವುದಿಲ್ಲ. ತನ್ನಿಂದಲೇ ಹುಟ್ಟಿದ ಶ್ರುತಿಯ ಉಪರಮ, ತನ್ನಿಂದಲೇ ಆರಂಭವಾದ ಅವಯವಗಳ ಅಪಚಯ - ಹೀಗೆ ಐದು ಗುಣಗಳಿಂದ ಸಹಿತವಾಗಿ ಮನಸ್ಸೂ ಸೇರಿದಲ್ಲಿ ಆರು ಗುಣಗಳು ಮನಸ್ಸಿಗೆ ಸಂಬಂಧಿಸಿದವು ಎಂದು ಜ್ಞಾನಿಗಳು ತಿಳಿದಿರುತ್ತಾರೆ. ಬುದ್ಧಿಯು ಬಾಹ್ಯಜ್ಞಾನವನ್ನು ಅನುಸಂಧಾನ ಮಾಡುವ ಸ್ವಭಾವವುಳ್ಳದ್ದು. ಮನಸ್ಸಿನ ಜ್ಞಾನವನ್ನು ಅನುಸಂಧಾನ ಮಾಡುವ ಸ್ವಭಾವವುಳ್ಳದ್ದು. ಬುದ್ಧಿಯು ತನ್ನಲ್ಲಿ ಹುಟ್ಟುವ ಕ್ರಿಯೆಗಳನ್ನು ನಿಯಂತ್ರಿಸುವಂತಹದ್ದು. ಬುದ್ಧಿಯನ್ನು ಬೆಳೆಸುವ, ಅವಯವಗಳನ್ನು ನಾಶಗೊಳಿಸುವಂತಹ ಸ್ವಭಾವವುಳ್ಳದ್ದು ಎಂದು ನಾಲ್ಕು ಬುದ್ಧಿಯ ಗುಣವೆನಿಸಿವೆ. ತಮೋಗುಣಕ್ಕೆ ಸಂಬಂಧಿಸಿದ ಮಹತ್ವಪೂರ್ಣವಾದ ಮೂರು ಗುಣಗಳಿವೆ. ಬಾಹ್ಯ ಪದಾರ್ಥಗಳ ಜ್ಞಾನಕ್ಕೆ ಪ್ರತಿಬಂಧಕವನ್ನೊಡ್ಡದೆ ಬಾಹ್ಯ ಮಿಥ್ಯಾ ಜ್ಞಾನವನ್ನು ಹುಟ್ಟಿಸದೆ ತನ್ನ ಶಕ್ತಿಯನ್ನು ಕಳೆದುಕೊಳ್ಳುವಂತಹದ್ದು ಎಂಬುದಾಗಿ ತಮೋಗುಣದ ಮೂರು ಗುಣಗಳು.

ದ್ವಿಗುಣಂ ಚ ರಜೋ ಜ್ಞಾತ್ವಾ ಸತ್ತ್ವಮೇಕಗುಣಂ ಪುನಃ ।
ಮಾರ್ಗಂ ವಿಜ್ಞಾಯ ತತ್ತ್ವೇನ ಪ್ರಲಯೇ ಪ್ರೇಕ್ಷಣಂ ತಥಾ ॥೧೬॥

ರಜೋಗುಣಕ್ಕೆ ಸಂಬಂಧಿಸಿದ ಎರಡು ಗುಣಗಳನ್ನು ತಿಳಿದಿರುತ್ತಾರೆ. ತನ್ನಲ್ಲೇ ಹುಟ್ಟುವ ಸಂಶಯವನ್ನು ಸ್ವೀಕರಿಸದಿರುವುದು, ತನ್ನ ಶಕ್ತಿಯನ್ನು ಕಳೆದುಕೊಳ್ಳುವುದು ಎಂಬುದು ರಜೋಗುಣದ ಎರಡು ಗುಣಗಳು. ಸತ್ತ್ವಗುಣಕ್ಕೆ ಸಂಬಂಧಿಸಿದ ಒಂದು ಗುಣವನ್ನು ಅರಿತಿರುತ್ತಾರೆ. ಎಲ್ಲ ಕಾಲದ ಶಕ್ತಿಯನ್ನು ಹ್ರಾಸಗೊಳಿಸುವುದು ಎಂಬುದೇ

ಜ್ಞಾನಯೋಗದಲ್ಲಿ ಯಾವ ಗುಣ-ದೋಷಗಳಿವೆ ಎಂಬುದನ್ನು ಅರ್ಥ ಮಾಡಿಕೊಂಡಿರುತ್ತಾರೆ. ಇದರಂತೆ ಸಾಂಖ್ಯಜ್ಞಾನದಲ್ಲಿರುವ ಗುಣಗಳೇನು, ದೋಷಗಳೇನು ಎಂಬುದನ್ನು ತಿಳಿದುಕೊಂಡಿರುತ್ತಾರೆ.

ಸತ್ತ್ವಂ ದಶಗುಣಂ ಜ್ಞಾತ್ವಾ ರಜೋ ನವಗುಣಂ ತಥಾ ।
ತಮಶ್ಚಾಷ್ಟಗುಣಂ ಜ್ಞಾತ್ವಾ ಬುದ್ಧಿಂ ಸಪ್ತಗುಣಾಂ ತಥಾ ॥೧೪॥

ಅದರಂತೆ ಸತ್ತ್ವಗುಣದಲ್ಲಿರುವ ಹತ್ತು ಗುಣಗಳಲ್ಲಿ ಅಸಾಧಾರಣ ಗುಣವೆನಿಸಿದ ತತ್ತ್ವಜ್ಞಾನವು, ಆ ತತ್ತ್ವಜ್ಞಾನಕ್ಕೆ ಸಹಕಾರಿಯಾದ ಶಮ, ದಮ, ವಿಷಯ ಪದಾರ್ಥಗಳಿಂದ ಉಪಹತಿ, ದ್ವಂದ್ವಸಹಿಷ್ಣುತೆ, ಚಿತ್ತ ಸಮಾಧಾನ, ಗುರೂಪಸತ್ತಿ, ಶ್ರವಣ, ಮನನ, ಧ್ಯಾನ ಹೀಗೆ ಹತ್ತು ಗುಣಗಳ ಬಗ್ಗೆ ಸರಿಯಾದ ಜ್ಞಾನವನ್ನು ಹೊಂದಿರುತ್ತಾರೆ. ಜ್ಞಾನವೆಂಬ ಅಂಗಕ್ಕೆ ಅಂಗೀಭೂತವಾದ ಗುಣಗಳು ಶಮ-ದಮಾದಿಗಳು. ಇದರಂತೆ ರಜೋಗುಣದ ಅಸಾಧಾರಣ ಗುಣವು ಸಂಶಯವೆನಿಸಿದೆ. ಸಂಶಯಕ್ಕೆ ಉಪಯುಕ್ತವಾದ ಅಂಗವೆನಿಸಿದ ಗುಣಗಳು ಕೆಲವೊಮ್ಮೆ ಸಜ್ಜನರ ಸಹವಾಸ, ಕೆಲವೊಮ್ಮೆ ದುಷ್ಟರ ಸಹವಾಸ, ಕೆಲವೊಮ್ಮೆ ಸಚ್ಛಾಸ್ತ್ರ ಶ್ರವಣ, ಯಾವಾಗಲೋ ಒಮ್ಮೆ ದುಶ್ಶಾಸ್ತ್ರ ಶ್ರವಣ, ವಿಷಯ ಪದಾರ್ಥಗಳಲ್ಲಿ ಅಭಿಲಾಷೆ, ಧನದಲ್ಲಿ ಅತಿಯಾದ ಆಸಕ್ತಿ, ದಾರಾಪತ್ಯಾದಿಗಳಲ್ಲಿ ಲೋಲುಪತೆ - ಹೀಗೆ ಅಂಗಾಂಗಿ ಭಾವಗಳಿಂದ ಕೂಡಿದ ರಜೋಗುಣದ ಒಂಬತ್ತು ಗುಣಗಳನ್ನು ತಿಳಿದವರಾಗಿರುತ್ತಾರೆ. ಇದರಂತೆ ತಮೋಗುಣದ ಅಸಾಧಾರಣವಾದ ಗುಣವು ಮಿಥ್ಯಾಜ್ಞಾನವೆನಿಸಿದೆ. ಈ ಅಸಾಧಾರಣ ಗುಣವೆಂಬ ಅಂಗಿಗೆ ಅಂಗಭೂತವಾದ ಗುಣಗಳು ಏಳು. ವಿಷ್ಣುದ್ವೇಷ, ಅಸಜ್ಜನರ ಸೇವನೆ, ದುಶ್ಶಾಸ್ತ್ರ ಶ್ರವಣ, ಕ್ರೋಧ, ಪ್ರಮಾದ, ನಿದ್ರಾ, ಆಲಸ್ಯ ಎಂಬುದಾಗಿ. ಹೀಗೆ ಅಂಗಾಂಗಿಗಳಿಂದ ಕೂಡಿದ ತಮೋಗುಣದ ಎಂಟು ಗುಣಗಳನ್ನು ಜ್ಞಾನಿಗಳು ಅರ್ಥಮಾಡಿಕೊಂಡಿರುತ್ತಾರೆ. ಇದರಂತೆ ಬುದ್ಧಿಯ ಅಸಾಧಾರಣ ಗುಣವು ನಿಶ್ಚಯ ಜ್ಞಾನವು. ಅಸಾಧಾರಣ ಗುಣವೆನಿಸಿದ ನಿಶ್ಚಯ ಜ್ಞಾನವೆಂಬ ಅಂಗಿಗೆ ಅಂಗಭೂತವಾದ ಆರು ಇಂದ್ರಿಯಗಳಿಂದ ಹುಟ್ಟುವಂತಹ ಆರು ವಿಧವಾದ ಜ್ಞಾನವು ಸಾಧಾರಣ ಗುಣವೆನಿಸಿದೆ. ವಾಸ್ತವಿಕವಾಗಿ ಜ್ಞಾನವು ಮನಸ್ಸಿಗೆ ಸಂಬಂಧಿಸಿದುದೇ ಆಗಿದ್ದರೂ ಮನಸ್ಸು ವಿಷಯಗಳನ್ನು ಪರೀಕ್ಷಿಸಿ ನಿರ್ಣಯಿಸಲು ಅಸಮರ್ಥವಾದುದ-ರಿಂದ ಪರೀಕ್ಷಕವಾದ ಬುದ್ಧಿಯು ಆ ಮನಸ್ಸಿನಲ್ಲಿರುವ ವಿಷಯಗಳನ್ನು ತಾನು

ಗ್ರಹಿಸುತ್ತದೆ. ಆದ್ದರಿಂದ ಇಲ್ಲಿ ಏಳು ಗುಣಗಳೆಂದು ಹೇಳಲಾಗಿದೆ. ಒಟ್ಟು ಬುದ್ಧಿಯೂ ಸೇರಿ ಎಂಟು ಗುಣಗಳಾಗುತ್ತವೆ.

ಷಡ್ಗುಣಂ ಚ ನಭೋ ಜ್ಞಾತ್ವಾ ಮನಃ ಪಂಚಗುಣಂ ತಥಾ ।
ಬುದ್ಧಿಂ ಚತುರ್ಗುಣಾಂ ಜ್ಞಾತ್ವಾ ತಮಶ್ಚ ತ್ರಿಗುಣಂ ಮಹತ್ ॥೧೫॥

ಮನಸ್ಸಿನ ಅಸಾಧಾರಣ ಗುಣವು ಸ್ಮರಣೆ ಎನಿಸಿದೆ. ಪಂಚೇಂದ್ರಿಯಗಳಿಂದ ಹುಟ್ಟುವಂತಹ ಐದು ವಿಧವಾದ ಜ್ಞಾನವು ಸಾಧಾರಣ ಗುಣವೆನಿಸಿದೆ. ಪ್ರಳಯ ಕಾಲದಲ್ಲಿಯೂ ಮನಸ್ಸು ಶ್ರೋತ್ರಾದಿ ಇಂದ್ರಿಯಗಳಿಂದ ನಿವೃತ್ತಿಯನ್ನು ಹೊಂದುತ್ತದೆ. ಅವುಗಳಿಂದ ಹುಟ್ಟುವ ಜ್ಞಾನವು ನಿಂತು ಹೋಗುತ್ತದೆ. ಆದ್ದರಿಂದಲೇ ಬಾಹ್ಯ ವಿಷಯಗಳ ಅನುಸಂಧಾನವು ಮನಸ್ಸಿಗೆ ಇರುವುದಿಲ್ಲ. ತನ್ನಿಂದಲೇ ಹುಟ್ಟಿದ ಶ್ರುತಿಯ ಉಪರಮ, ತನ್ನಿಂದಲೇ ಆರಂಭವಾದ ಅವಯವಗಳ ಅಪಚಯ - ಹೀಗೆ ಐದು ಗುಣಗಳಿಂದ ಸಹಿತವಾಗಿ ಮನಸ್ಸೂ ಸೇರಿದಲ್ಲಿ ಆರು ಗುಣಗಳು ಮನಸ್ಸಿಗೆ ಸಂಬಂಧಿಸಿದವು ಎಂದು ಜ್ಞಾನಿಗಳು ತಿಳಿದಿರುತ್ತಾರೆ. ಬುದ್ಧಿಯು ಬಾಹ್ಯಜ್ಞಾನವನ್ನು ಅನುಸಂಧಾನ ಮಾಡುವ ಸ್ವಭಾವವುಳ್ಳದ್ದು. ಮನಸ್ಸಿನ ಜ್ಞಾನವನ್ನು ಅನುಸಂಧಾನ ಮಾಡುವ ಸ್ವಭಾವವುಳ್ಳದ್ದು. ಬುದ್ಧಿಯು ತನ್ನಲ್ಲಿ ಹುಟ್ಟುವ ಕ್ರಿಯೆಗಳನ್ನು ನಿಯಂತ್ರಿಸುವಂತಹದ್ದು. ಬುದ್ಧಿಯನ್ನು ಬೆಳೆಸುವ, ಅವಯವಗಳನ್ನು ನಾಶಗೊಳಿಸುವಂತಹ ಸ್ವಭಾವವುಳ್ಳದ್ದು ಎಂದು ನಾಲ್ಕು ಬುದ್ಧಿಯ ಗುಣವೆನಿಸಿವೆ. ತಮೋಗುಣಕ್ಕೆ ಸಂಬಂಧಿಸಿದ ಮಹತ್ವಪೂರ್ಣವಾದ ಮೂರು ಗುಣಗಳಿವೆ. ಬಾಹ್ಯ ಪದಾರ್ಥಗಳ ಜ್ಞಾನಕ್ಕೆ ಪ್ರತಿಬಂಧಕವನ್ನೊಡ್ಡದೆ ಬಾಹ್ಯ ಮಿಥ್ಯಾ ಜ್ಞಾನವನ್ನು ಹುಟ್ಟಿಸದೆ ತನ್ನ ಶಕ್ತಿಯನ್ನು ಕಳೆದುಕೊಳ್ಳುವಂತಹದ್ದು ಎಂಬುದಾಗಿ ತಮೋಗುಣದ ಮೂರು ಗುಣಗಳು.

ದ್ವಿಗುಣಂ ಚ ರಜೋ ಜ್ಞಾತ್ವಾ ಸತ್ತ್ವಮೇಕಗುಣಂ ಪುನಃ ।
ಮಾರ್ಗಂ ವಿಜ್ಞಾಯ ತತ್ತ್ವೇನ ಪ್ರಲಯೇ ಪ್ರೇಕ್ಷಣಂ ತಥಾ ॥೧೬॥

ರಜೋಗುಣಕ್ಕೆ ಸಂಬಂಧಿಸಿದ ಎರಡು ಗುಣಗಳನ್ನು ತಿಳಿದಿರುತ್ತಾರೆ. ತನ್ನಲ್ಲೇ ಹುಟ್ಟುವ ಸಂಶಯವನ್ನು ಸ್ವೀಕರಿಸದಿರುವುದು, ತನ್ನ ಶಕ್ತಿಯನ್ನು ಕಳೆದುಕೊಳ್ಳುವುದು ಎಂಬುದು ರಜೋಗುಣದ ಎರಡು ಗುಣಗಳು. ಸತ್ತ್ವಗುಣಕ್ಕೆ ಸಂಬಂಧಿಸಿದ ಒಂದು ಗುಣವನ್ನು ಅರಿತಿರುತ್ತಾರೆ. ಎಲ್ಲ ಕಾಲದ ಶಕ್ತಿಯನ್ನು ಹ್ರಾಸಗೊಳಿಸುವುದು ಎಂಬುದೇ

ಸತ್ತ್ವಗುಣದ ಹ್ರಾಸವು ಎಂಬುದನ್ನು ಬಲ್ಲವರಾಗಿರುತ್ತಾರೆ. ಪ್ರಳಯ ಕಾಲದಲ್ಲಿಯೂ ಮುಖ್ಯಪ್ರಾಣನ ಮನಸ್ಸಿನಲ್ಲಿ ತತ್ತ್ವಜ್ಞಾನವು ಸ್ಥಿರವಾಗಿ ಪ್ರಕಾಶಮಾನವಾಗಿರುವುದರಿಂದ ಸತ್ತ್ವಗುಣವು ಬಾಹ್ಯವಾಗಿರುವ ಸಾರ್ವತ್ರಿಕ ಜ್ಞಾನವನ್ನು ನಾಶಪಡಿಸಿದರೂ ತನ್ನ ಮೂಲಭೂತವಾದ ಗುಣದ ಕ್ಷಯವನ್ನು ಹೊಂದಿರುವುದಿಲ್ಲ. ಸರ್ವಥಾ ಶಕ್ತಿ, ಹ್ರಾಸವೆಂಬುದು ಸತ್ತ್ವಗುಣಕ್ಕೆ ಇರುವುದಿಲ್ಲ. ಆದ್ದರಿಂದಲೇ ಇದನ್ನು ವ್ಯಾಸರು ಏಕಗುಣ ಎಂದು ಹೇಳಿದ್ದಾರೆ. ಪ್ರಳಯಕಾಲದಲ್ಲಿ ಜಗತ್ತೇ ನಾಶವಾಗುವುದರಿಂದ ಆ ಗುಣಗಳ ಮೂಲವೂ, ಸ್ವರೂಪವೂ ಹಾನಿಯಾಗುತ್ತದೆ. ಆ ಗುಣಗಳಿವೆ ಎಂದು ಹೇಳಲು ಕಾರಣವು ಬೇಕಾಗಿಲ್ಲ. ಆದ್ದರಿಂದ ರಜೋಗುಣಗಳು, ತಮೋಗುಣಗಳು ನಾಶವನ್ನು ಹೊಂದುತ್ತವೆ ಎಂದು ಪ್ರತ್ಯೇಕವಾಗಿ ಹೇಳಲು ಹೋಗಲಿಲ್ಲ. ಸತ್ತ್ವಗುಣವೊಂದು ಸ್ಥಿರವಾಗಿರುತ್ತದೆ. ಆದ್ದರಿಂದ ಇದನ್ನು ತಿಳಿಸಿದ್ದಾರೆ. ಮನಸ್ಸು, ಬುದ್ಧಿಗಳಿಗೆ ಮೂಲಕಾರಣವಾದ ಅಪಚಯವು ಉಂಟಾಗುವುದರಿಂದ ರಜಸ್ಸು, ತಮಸ್ಸುಗಳಿಗೆ ನಾಶವಾಗುತ್ತದೆ ಎಂದು ತಿಳಿಸಿದಂತಾಗಿದೆ. ಆದ್ದರಿಂದ ಪುನಃ ತಮಸ್ಸು, ರಜಸ್ಸುಗಳ ಮೂಲಸ್ವರೂಪವು ಹಾನಿಯಾಗುತ್ತದೆ ಎಂದು ಪ್ರತ್ಯೇಕವಾಗಿ ಹೇಳಲಿಲ್ಲ ಎಂದು ತಿಳಿಯಬೇಕು.

ಜ್ಞಾನವಿಜ್ಞಾನಸಂಪನ್ನಾಃ ಕಾರಣೈರ್ಭಾವಿತಾಃ ಶುಭೈಃ ।
ಪ್ರಾಪ್ನುವಂತಿ ಶುಭಂ ಮೋಕ್ಷಂ ಸೂಕ್ಷ್ಮಾ ಇವ ನಭಃ ಪರಮ್ ॥೧೭॥

ಯಾವ ಜ್ಞಾನಿಗಳು ಜ್ಞಾನ-ವಿಜ್ಞಾನಗಳಿಂದ ಸಂಪನ್ನರಾಗಿದ್ದಾರೋ ಅದಕ್ಕೆ ಸಂಬಂಧಿಸಿದ ಶುಭವಾದ ಹೇತುಗಳಿಂದ ಯುಕ್ತರಾಗಿರುತ್ತಾರೋ ಅಂತಹ ಸಜ್ಜನರು ಪರಮ ಮಂಗಳವಾದ ಮೋಕ್ಷವನ್ನು ಸೂಕ್ಷ್ಮವಾದ ತ್ರಸರೇಣುಗಳು ಅಥವಾ ಸೂಕ್ಷ್ಮವಾದ ವಾಯುವು ಆಕಾಶವನ್ನು ನಿತ್ಯ ಹೊಂದಿರುವಂತೆ ಮೋಕ್ಷವನ್ನು ನಿತ್ಯವೂ ಹೊಂದುತ್ತಾರೆ.

ರೂಪೇಣ ದೃಷ್ಟಿಂ ಸಂಯುಕ್ತಾಂ ಘ್ರಾಣಂ ಗಂಧಗುಣೇನ ಚ ।
ಶಬ್ದೇ ಸಕ್ತಂ ತಥಾ ಶ್ರೋತ್ರಂ ಜಿಹ್ವಾಂ ರಸಗುಣೇಷು ಚ ॥೧೮॥

ಸಾಂಖ್ಯಯೋಗಿಗಳು ಕಣ್ಣುಗಳು ರೂಪಗುಣದಿಂದ ಕೂಡಿದೆ ಎಂದು, ಮೂಗು ಗಂಧಗುಣದಿಂದ, ಕಿವಿಯು ಶಬ್ದಗುಣದಿಂದ, ನಾಲಿಗೆಯು ರಸಗುಣದಿಂದ ಕೂಡಿದೆ ಎಂದು ತಿಳಿದಿರುತ್ತಾರೆ.

ತನುಂ ಸ್ಪರ್ಶೇ ತಥಾ ಸಕ್ತಂ ವಾಯುಂ ನಭಸಿ ಚಾಶ್ರಿತಮ್ ।
ಮೋಹಂ ತಮಸಿ ಸಂಸಕ್ತಂ ಲೋಭಮರ್ಥೇಷು ಸಂಶ್ರಿತಮ್ ॥೧೯॥

ಶರೀರವು ಸ್ಪರ್ಶಗುಣದಿಂದ ಕೂಡಿದೆ ಎಂದು, ವಾಯುವು ಆಕಾಶವನ್ನು ಆಶ್ರಯಿಸಿದೆ ಎಂದು, ಮೋಹವು ತಮೋಗುಣವನ್ನು ಹೊಂದಿದೆ ಎಂದು, ಲೋಭವು ಇಂದ್ರಿಯಾರ್ಥಗಳಿಗೆ ಸೇರಿದ ಎಂದು ಸಾಂಖ್ಯರು ತಿಳಿದಿರುತ್ತಾರೆ.

ವಿಷ್ಣುಂ ಕ್ರಾಂತೇ ಬಲೇ ಶಕ್ರಂ ಕೋಷ್ಠೇ ಸಕ್ತಂ ತಥಾನಲಮ್ ।
ಅಪ್ಸು ದೇವೀಂ ತಥಾ ಸಕ್ತಾಮಪಸ್ತೇಜಸಿ ಚಾಶ್ರಿತಾಃ ॥೨೦॥

ಜೀವರ ಪಾದಗಳಲ್ಲಿ ವಿಷ್ಣುವೇ ಇದ್ದಾನೆಂದು, ಬಲದಲ್ಲಿ ಇಂದ್ರನನ್ನು, ಹೊಟ್ಟೆಯಲ್ಲಿ ಅಗ್ನಿಯನ್ನು, ನೀರಿನಲ್ಲಿ ಭೂದೇವಿಯನ್ನು, ನೀರು ತೇಜಸ್ಸಿನಲ್ಲಿ ಸೇರಿದೆ ಎಂಬುದನ್ನು ಸಾಂಖ್ಯ ಯೋಗಿಗಳು ತಿಳಿದಿರುತ್ತಾರೆ.

ತೇಜೋ ವಾಯೌ ತು ಸಂಸಕ್ತಂ ವಾಯುಂ ನಭಸಿ ಚಾಶ್ರಿತಮ್ ।
ನಭೋ ಮಹತಿ ಸಂಯುಕ್ತಂ ಮಹದ್ ಬುದ್ಧೌ ಚ ಸಂಶ್ರಿತಮ್ ॥೨೧॥

ತೇಜಸ್ಸು ವಾಯುವಿನಲ್ಲಿ ಸೇರಿದೆ ಎಂಬುದನ್ನು, ವಾಯುವು ಆಕಾಶವನ್ನು ಆಶ್ರಯಿಸಿದೆ, ಆಕಾಶವು ಮಹತ್ತತ್ತ್ವವನ್ನು ಆಶ್ರಯಿಸಿದೆ, ಮಹತ್ತತ್ತ್ವವು ಬುದ್ಧಿಯ ಅಧಿಷ್ಠಾನವನ್ನು ಹೊಂದಿದೆ ಎಂಬುದಾಗಿ ಸಾಂಖ್ಯರು ತಿಳಿದಿರುತ್ತಾರೆ.

ಬುದ್ಧಿಂ ತಮಸಿ ಸಂಸಕ್ತಾಂ ತಮೋ ರಜಸಿ ಚಾಶ್ರಿತಮ್ ।
ರಜಃ ಸತ್ತ್ವೇ ತಥಾ ಸಕ್ತಂ ಸತ್ತ್ವಂ ಸಕ್ತಂ ತಥಾತ್ಮನಿ ॥೨೨॥

ಬುದ್ಧಿಯು ತಮೋಗುಣದಲ್ಲಿ ಸೇರಿದೆ ಎಂಬುದನ್ನು, ತಮಸ್ಸು ರಜಸ್ಸಿನಲ್ಲಿ, ರಜಸ್ಸು ಸತ್ತ್ವದಲ್ಲಿ, ಸತ್ತ್ವವು ಜೀವಾತ್ಮನಲ್ಲಿ ಸೇರಿದೆ ಎಂಬುದನ್ನು ತಿಳಿದಿರುತ್ತಾರೆ.

ಸಕ್ತಮಾತ್ಮಾನಮೀಶೇ ಚ ದೇವೇ ನಾರಾಯಣೇ ತಥಾ ।
ದೇವಂ ಮೋಕ್ಷೇ ಚ ಸಂಸಕ್ತಂ ಮೋಕ್ಷಂ ಸಕ್ತಂ ತು ನ ಕ್ವಚಿತ್ ॥೨೩॥

ಜೀವಾತ್ಮನು ಈಶನಾದ ನಾರಾಯಣನನ್ನು ಆಶ್ರಯಿಸಿದ್ದಾನೆ ಎಂಬುದನ್ನು, ನಾರಾಯಣನು ಮೋಕ್ಷದಲ್ಲಿ ಇದ್ದಾನೆ ಎಂಬುದನ್ನು, ಮೋಕ್ಷವು ಯಾರೊಂದಿಗೂ

ಇಲ್ಲವೆಂಬುದನ್ನು, ನಾಶವಿಲ್ಲದೆ ಇರುವುದು, ಯಾರನ್ನೂ ಆಶ್ರಯಿಸದೆ ಇರುವುದು ಎಂಬುದನ್ನು ಸಾಂಖ್ಯರು ತಿಳಿದಿರುತ್ತಾರೆ.

ಜ್ಞಾತ್ವಾ ಸತ್ತ್ವಯುತಂ ದೇಹಂ ವೃತಂ ಷೋಡಶಭಿರ್ಗುಣೈಃ ।
ಸ್ವಭಾವಂ ಚೇತನಾಂ ಚೈವ ಜ್ಞಾತ್ವಾ ವೈ ದೇಹಮಾಶ್ರಿತೇ ॥೨೪॥

ಸತ್ತ್ವಗುಣಗಳಿಂದ ಕೂಡಿದ ದೇಹವನ್ನು ದಶೇಂದ್ರಿಯಗಳು, ಮನಸ್ಸು, ಪಂಚ ಪ್ರಾಣಗಳು - ಹೀಗೆ ಹದಿನಾರು ಕಲೆಗಳಿಂದ ಕೂಡಿದ ದೇಹವನ್ನು ಸಾಂಖ್ಯ ಯೋಗಿಗಳು ತಿಳಿದಿರುತ್ತಾರೆ. ಸ್ವಭಾವ ಮತ್ತು ಚೇತನಗಳು ದೇಹವನ್ನು ಆಶ್ರಯಿಸಿಕೊಂಡಿವೆ ಎಂಬುದನ್ನು ತಿಳಿದಿರುತ್ತಾರೆ.

ಮಧ್ಯಸ್ಥಮೇಕಮಾತ್ಮಾನಂ ಪಾಪಂ ಯಸ್ಮಿನ್ನ ವಿದ್ಯತೇ ।
ದ್ವಿತೀಯಂ ಕರ್ಮ ವಿಜ್ಞಾಯ ನೃಪತೇ ವಿಷಯೈಷಿಣಾಮ್ ॥೨೫॥

ಪಾಪರಹಿತನಾದ ಜೀವಾತ್ಮನು ಹೃದಯ ಕಮಲದ ಮಧ್ಯದಲ್ಲಿ ಇದ್ದಾನೆಂದು, ವಿಷಯ ಸುಖಗಳನ್ನು ಇಷ್ಟಪಡುವ ಮನುಷ್ಯನ ಯಾವ ಕರ್ಮವಿದೆಯೋ ಆ ಕರ್ಮವು ಆತ್ಮನಿಗಿಂತ ಅತಿರಿಕ್ತವಾಗಿದೆ ಎಂಬುದನ್ನು ಸಾಂಖ್ಯಯೋಗಿಗಳು ತಿಳಿದಿರುತ್ತಾರೆ.

ಇಂದ್ರಿಯಾಣೀಂದ್ರಿಯಾರ್ಥಾಂಶ್ಚ ಸರ್ವಾನಾತ್ಮನಿ ಸಂಶ್ರಿತಾನ್ ।
ಪ್ರಾಣಾಪಾನೌ ಸಮಾನಂ ಚ ವ್ಯಾನೋದಾನೌ ಚ ತತ್ತ್ವತಃ ॥೨೬॥

ಇಂದ್ರಿಯಗಳು, ಇಂದ್ರಿಯಾರ್ಥಗಳು - ಈ ಎಲ್ಲವೂ ಭಗವಂತನನ್ನೇ ಆಶ್ರಯಿಸಿವೆ ಎಂಬುದನ್ನು, ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನ ಎಂಬ ಐದು ಪ್ರಾಣಗಳನ್ನು ಸಾಂಖ್ಯಯೋಗಿಯು ತಿಳಿದಿರುತ್ತಾನೆ.

ಅವಾಕ್ಚೈವಾನಿಲಂ ಜ್ಞಾತ್ವಾ ಪ್ರವಹಂ ಚಾನಿಲಂ ಪುನಃ ।
ಸಪ್ತ ವಾತಾಂಸ್ತಥಾ ಶೇಷಾನ್ ಸಪ್ತಧಾ ವಿಧಿವತ್ ಪುನಃ ॥೨೭॥

ಅಧೋಮುಖವಾಗಿ ಸಂಚರಿಸುವ ವಾಯುವನ್ನು, ಊರ್ಧ್ವಮುಖವಾಗಿ ಹರಿಯುವ ಏಳನೆಯ ಪ್ರವಹ ಎಂಬ ವಾಯುವನ್ನು ಯಥಾರ್ಥವಾಗಿ ತಿಳಿದಿರುತ್ತಾರೆ. ಹೀಗೆ ಏಳು ವಾಯುಗಳನ್ನು ತಿಳಿದ ಬಳಿಕ ಪುನಃ ಅವುಗಳಲ್ಲಿರುವ ಏಳೇಳು

ಪ್ರಭೇದವನ್ನು ವಿಧಿವತ್ತಾಗಿ ತಿಳಿದಿರುತ್ತಾರೆ. ಒಟ್ಟಿನಲ್ಲಿ ವಾಯುವಿನ ನಲವತ್ತೊಂಬತ್ತು ದೇಹದಲ್ಲಿರುವ ಪ್ರಭೇದಗಳನ್ನು ಸಾಂಖ್ಯರು ತಿಳಿದಿರುತ್ತಾರೆ.

ಪ್ರಜಾಪತೀನೃಷೀಂಶ್ಚೈವ ಮಾರ್ಗಾಂಶ್ಚ ಸುಬಹೂನ್ ವರಾನ್ ।
ಸಪ್ತರ್ಷೀಂಶ್ಚ ಬಹೂನ್ ಜ್ಞಾತ್ವಾ ರಾಜರ್ಷೀಂಶ್ಚ ಪರಂತಪ ॥೨೮॥

ಅದರಂತೆ ಈ ಸಾಂಖ್ಯ ಯೋಗಿಗಳು ಅನೇಕ ಪ್ರಜಾಪತಿಗಳನ್ನು, ಅನೇಕ ಋಷಿಗಳನ್ನು, ಅವರ ಬಳಿ ಸಾಗಬೇಕಾದ ಶ್ರೇಷ್ಠವಾದ ಅನೇಕ ಮಾರ್ಗಗಳನ್ನು ಕಂಡುಕೊಂಡಿದ್ದಾರೆ.

ಸುರರ್ಷೀನ್ಮಹತಶ್ಚಾನ್ಯಾನ್ಮಹರ್ಷೀನ್ ಸೂರ್ಯಸನ್ನಿಭಾನ್ ।
ಐಶ್ವರ್ಯಾಚ್ಚ್ಯವಿತಾನ್ ಜ್ಞಾತ್ವಾ ಕಾಲೇನ ಮಹತಾ ನೃಪ ॥೨೯॥

ಸಪ್ತರ್ಷಿಗಳನ್ನು, ಬಹುಸಂಖ್ಯಾತರಾದ ರಾಜರ್ಷಿಗಳನ್ನು, ದೇವರ್ಷಿಗಳನ್ನು, ಸೂರ್ಯ ಪ್ರಕಾಶ ಸದೃಶರಾದ ಬ್ರಹ್ಮರ್ಷಿಗಳನ್ನು ಸಾಂಖ್ಯಯೋಗಿಗಳು ತಿಳಿದಿರುತ್ತಾರೆ. ಅಂತಹ ಶ್ರೇಷ್ಠವಾದ ಲೋಕಗಳಿಗೆ ಹೋದವರೆಲ್ಲರೂ ಬಹಳ ಕಾಲದ ಬಳಿಕ ಅಲ್ಲಿನ ಸಂಪತ್ತಿನಿಂದ ಭ್ರಷ್ಟರಾದುದನ್ನು ನೋಡಿರುತ್ತಾರೆ.

ಮಹತಾಂ ಭೂತಸಂಘಾನಾಂ ಶ್ರುತ್ವಾ ನಾಶಂ ಚ ಪಾರ್ಥಿವ ।
ಗತಿಂ ಚಾಪ್ಯಶುಭಾಂ ಜ್ಞಾತ್ವಾ ನೃಪತೇ ಪಾಪಕರ್ಮಣಾಮ್ ॥೩೦॥

ಈ ದೊಡ್ಡ ದೊಡ್ಡ ಪ್ರಾಣಿ ಸಮೂಹವು ಒಂದು ಬಾರಿ ಸಂಪೂರ್ಣವಾಗಿ ನಾಶವಾಗುತ್ತದೆ ಎಂಬುದನ್ನು ತಿಳಿದಿರುತ್ತಾರೆ. ಪಾಪಕರ್ಮಿಗಳು ಹೊಂದುವ ದುರ್ಗತಿಯನ್ನು ಅವರು ತಿಳಿದಿರುತ್ತಾರೆ.

ವೈತರಣ್ಯಾಂ ಚ ಯದ್ದುಃಖಂ ಪತಿತಾನಾಂ ಯಮಕ್ಷಯೇ ।
ಯೋನೀಷು ಚ ವಿಚಿತ್ರಾಸು ಸಂಸಾರಾನಶುಭಾಂಸ್ತಥಾ ॥೩೧॥

ವೈತರಣಿ ನದಿಯಲ್ಲಿ ಬಿದ್ದಾಗ ಅವರು ಅನುಭವಿಸುವ ದುಃಖವನ್ನು, ಯಮಲೋಕದಲ್ಲಿ ಅನುಭವಿಸುವ ಚಿತ್ರವಿಚಿತ್ರವಾದ ಶಿಕ್ಷೆಗಳನ್ನು, ವಿಚಿತ್ರ ಯೋನಿಗಳಲ್ಲಿ ಜನ್ಮವನ್ನು ಪಡೆದು ಅಶುಭವಾದ ಸಂಸಾರವನ್ನು ಹೇಗೆ ಅನುಭವಿಸುತ್ತಾರೆ ಎಂಬುದನ್ನು ಸಾಂಖ್ಯಯೋಗಿಗಳು ತಿಳಿದಿರುತ್ತಾರೆ.

ಜಠರೇ ಚಾಶುಭೇ ವಾಸಂ ಶೋಣಿತೋದಕಭಾಜನೇ ।
ಶ್ಲೇಷ್ಮಮೂತ್ರಪುರೀಷೇ ಚ ತೀವ್ರಗಂಧಸಮನ್ವಿತೇ ॥೩೨॥

ಶುಕ್ರಶೋಣಿತಸಂಘಾತೇ ಮಜ್ಜಾಸ್ನಾಯುಪರಿಗ್ರಹೇ ।
ಸಿರಾಶತಸಮಾಕೀರ್ಣೇ ನವದ್ವಾರೇ ಪುರೇऽಶುಚೌ ॥೩೩॥

ವಿಜ್ಞಾಯಾಹಿತಮಾತ್ಮಾನಂ ಯೋಗಾಂಶ್ಚ ವಿವಿಧಾನ್ನೃಪ ।
ತಾಮಸಾನಾಂ ಚ ಜಂತೂನಾಂ ರಮಣೀಯಾವೃತಾತ್ಮನಾಮ್ ॥೩೪॥

ಸಾತ್ತ್ವಿಕಾನಾಂ ಚ ಜನ್ತೂನಾಂ ಕುತ್ಸಿತಂ ಭರತರ್ಷಭ ।
ಗರ್ಹಿತಂ ಮಹತಾಮರ್ಥೇ ಸಾಂಖ್ಯಾನಾಂ ವಿದಿತಾತ್ಮನಾಮ್ ॥೩೫॥

ಜೀವನು ಕಫ, ಮೂತ್ರ , ಮಲಗಳಿಂದ ಕೂಡಿದ, ತೀಕ್ಷ್ಣವಾದ ವಾಸನೆಯಿಂದ ಕೂಡಿರುವ, ರೇತಸ್ಸು-ರಕ್ತಗಳ ಸಮಾವೇಶವಿರುವ, ಮಜ್ಜೆ-ಸ್ನಾಯುಗಳ ಸಂಬಂಧವಿರುವ, ನೂರಾರು ನರಗಳಿಂದ ವ್ಯಾಪಕವಾಗಿರುವ, ಒಂಬತ್ತು ಬಾಗಿಲುಳ್ಳ, ಅಶುಚಿಯಾದ ಶರೀರವೆಂಬ ಪಟ್ಟಣದಲ್ಲಿ ವಾಸಿಸುವ ರೀತಿಯನ್ನು, ರಕ್ತ-ಮೂತ್ರಗಳ ಪಾತ್ರೆಯಂತಿರುವ ಅಪವಿತ್ರವಾದ ಗರ್ಭಚೀಲದಲ್ಲಿ ವಾಸ ಮಾಡಬೇಕಾದ ಸ್ಥಿತಿಯನ್ನು ಸಾಂಖ್ಯ ಯೋಗಿಗಳು ತಿಳಿದಿದ್ದು, ಜೀವನಿಗೆ ಅತ್ಯಂತ ಹಿತಚಿಂತಕನಾದ ಪರಮಾತ್ಮನನ್ನು, ಅವನನ್ನು ತಿಳಿಯಲು ಇರುವ ನಾನಾ ಪ್ರಕಾರವಾದ ಉಪಾಯಗಳನ್ನು ಸಾಂಖ್ಯಯೋಗಿಗಳು ಚೆನ್ನಾಗಿ ತಿಳಿದಿರುತ್ತಾರೆ. ಆತ್ಮಜ್ಞಾನಿಗಳಾದ ಸಾಂಖ್ಯಯೋಗಿಗಳು ತಾಮಸ-ರಾಜಸ- ಸಾತ್ವಿಕ ಜೀವರ ಮೋಕ್ಷವಿರೋಧಿಯಾದ, ಕುತ್ಸಿತವಾದ ಯಾವ ಯಾವ ವ್ಯವಹಾರಗಳಿವೆಯೋ ಅವೆಲ್ಲವನ್ನೂ ತಿಳಿದಿರುತ್ತಾರೆ.

ಉಪಪ್ಲವಾಂಸ್ತಥಾ ಘೋರಾನ್ ಶಶಿನಸ್ತೇಜಸಸ್ತಥಾ ।
ತಾರಾಣಾಂ ಪತನಂ ದೃಷ್ಟ್ವಾ ನಕ್ಷತ್ರಾಣಾಂ ಚ ಪರ್ಯಯಮ್ ॥೩೬॥

ಘೋರವಾದ ಉತ್ಪಾತಗಳು, ಚಂದ್ರಗ್ರಹಣ, ಸೂರ್ಯಗ್ರಹಣ, ನಕ್ಷತ್ರ ಪತನ, ನಕ್ಷತ್ರಗಳ ವಕ್ರಗತಿ ಇವುಗಳನ್ನು ಚೆನ್ನಾಗಿ ತಿಳಿದಿರುತ್ತಾರೆ.

ದ್ವಂದ್ವಾನಾಂ ವಿಪ್ರಯೋಗಂ ಚ ವಿಜ್ಞಾಯ ಕೃಪಣಂ ನೃಪ ।
ಅನ್ಯೋನ್ಯಭಕ್ಷಣಂ ದೃಷ್ಟ್ವಾ ಭೂತಾನಾಮಪಿ ಚಾಶುಭಮ್ ॥೩೭॥

ಪರಸ್ಪರ ಸಂಬಂಧವನ್ನು ಹೊಂದಿದ ಮನುಷ್ಯ ಜೀವರ ವಿಯೋಗಗಳನ್ನು, ಇವುಗಳಿಂದ ಹೊಂದುವ ಕಷ್ಟಗಳನ್ನು ಸಾಂಖ್ಯಯೋಗಿಗಳು ತಿಳಿದಿರುತ್ತಾರೆ. ಪ್ರಪಂಚದಲ್ಲಿ ಒಂದು ಪ್ರಾಣಿ ಮತ್ತೊಂದು ಪ್ರಾಣಿಯನ್ನು ಹೇಗೆ ತಿನ್ನುತ್ತದೆ ಎಂಬ ಅಶುಭ ಅವಸ್ಥೆಯನ್ನು ತಿಳಿದಿರುತ್ತಾರೆ.

ಬಾಲ್ಯೇ ಮೋಹಂ ಚ ವಿಜ್ಞಾಯ ಕ್ಷಯಂ ದೇಹಸ್ಯ ಚಾಶುಭಮ್ ।
ರಾಗೇ ಮೋಹೇ ಚ ಸಂಪ್ರಾಪ್ತೇ ಕ್ವಚಿತ್ ಸತ್ತ್ವಂ ಸಮಾಶ್ರಿತಮ್ ॥

ಮನುಷ್ಯರು ಬಾಲ್ಯದಲ್ಲಿ ಮೋಹವನ್ನು ಹೊಂದುತ್ತಾರೆ ಎಂಬುದನ್ನು ತಿಳಿದು, ವೃದ್ಧಾವಸ್ಥೆಯಲ್ಲಿ ಅಶುಭವಾದ ದೇಹದ ಕ್ಷಯವನ್ನು ಗಮನಿಸುತ್ತಾ, ರಾಗ-ಮೋಹಗಳೆರಡು ಒದಗಿ ಬರುತ್ತಿರಲು ಕೆಲವರು ಸತ್ತ್ವಗುಣವನ್ನು ಆಶ್ರಯಿಸುತ್ತಾರೆ ಎಂಬುದನ್ನು ತಿಳಿದಿರುತ್ತಾರೆ.

ಸಹಸ್ರೇಷು ನರಃ ಕಶ್ಚಿನ್ಮೋಕ್ಷಬುದ್ಧಿಂ ಸಮಾಶ್ರಿತಃ ।
ದುರ್ಲಭತ್ವಂ ಚ ಮೋಕ್ಷಸ್ಯ ವಿಜ್ಞಾಯ ಶ್ರುತಿಪೂರ್ವಕಮ್ ॥೩೯॥

ಸಾವಿರ ಜನರಲ್ಲಿ ಒಬ್ಬ ಮನುಷ್ಯನು ಮೋಕ್ಷದ ಬುದ್ಧಿಯನ್ನು ಹೊಂದಿರುತ್ತಾನೆ. ದುರ್ಲಭವಾದ ಮೋಕ್ಷವನ್ನು ಶ್ರುತಿ ಪೂರ್ವಕವಾಗಿ ಚೆನ್ನಾಗಿ ತಿಳಿದು ಈ ಜನ ಸಮುದಾಯದಲ್ಲಿ ಒಬ್ಬನು ಪ್ರಯತ್ನಿಸುತ್ತಾನೆ ಎಂಬುದನ್ನು ತಿಳಿದಿರುತ್ತಾರೆ.

ಬಹುಮಾನಮಲಬ್ಧೇಷು ಲಬ್ಧೇ ಮಧ್ಯಸ್ಥತಾಂ ಪುನಃ ।
ವಿಷಯಾಣಾಂ ಚ ದೌರಾತ್ಮ್ಯಂ ವಿಜ್ಞಾಯ ನೃಪತೇ ಪುನಃ ॥೪೦॥

ರಾಜನೇ, ಮೋಕ್ಷವು ದುರ್ಲಭವಾದುದು ಎಂಬುದನ್ನು ತಿಳಿದು, ದುರ್ಲಭವಾದ ಮೋಕ್ಷದ ವಿಷಯದಲ್ಲಿಯೇ ಆಸಕ್ತಿಯನ್ನು ಹೊಂದಿರುತ್ತಾರೆ. ವಿಷಯಗಳಲ್ಲಿರುವಂತಹ ದೌಷ್ಟ್ಯವನ್ನು ಪುನಃ ಪುನಃ ತಿಳಿದಿರುತ್ತಾರೆ.

ಗತಾಸೂನಾಂ ಚ ಕೌಂತೇಯ ದೇಹಾನ್ ದೃಷ್ಟ್ವಾ ತಥಾಶುಭಾನ್ ।
ವಾಸಂ ಕುಲೇಷು ಜನ್ತೂನಾಂ ದುಃಖಂ ವಿಜ್ಞಾಯ ಭಾರತ ॥೪೧॥

ಪ್ರಾಣವನ್ನು ಬಿಟ್ಟವರ ದೇಹಗಳನ್ನು ಗಮನಿಸಿ ಅವುಗಳನ್ನು ಅಶುಭವೆಂದು

ತಿಳಿದಿರುತ್ತಾರೆ. ಮನುಷ್ಯಕುಲದ ವಾಸವೇ ದುಃಖದಾಯಕ ಎಂಬುದನ್ನು ಸಾಂಖ್ಯರು ತಿಳಿದುಕೊಂಡಿರುತ್ತಾರೆ.

ಬ್ರಹ್ಮಘ್ನಾನಾಂ ಗತಿಂ ಜ್ಞಾತ್ವಾ ಪತಿತಾನಾಂ ಸುದಾರುಣಾಮ್ ।
ಸುರಾಪಾನೇ ಚ ಸಕ್ತಾನಾಂ ಬ್ರಾಹ್ಮಣಾನಾಂ ದುರಾತ್ಮನಾಮ್ ।
ಗುರುದಾರಪ್ರಸಕ್ತಾನಾಂ ಗತಿಂ ವಿಜ್ಞಾಯ ಚಾಶುಭಾಮ್ ॥೪೨॥

ಬ್ರಹ್ಮಹತ್ಯೆಯನ್ನು ಮಾಡಿ ಪತಿತರಿಗಾಗುವವರ ಭಯಂಕರ ಶಿಕ್ಷೆಗಳನ್ನು, ಸುರಾಪಾನದಲ್ಲಿ ಆಸಕ್ತರಾದವರಿಗೆ, ದುರಾತ್ಮರಾದ ಬ್ರಾಹ್ಮಣರಿಗೆ ಆಗುವ ಶಿಕ್ಷೆಗಳನ್ನು, ಗುರುಪತ್ನಿಯ ಗಮನದಿಂದಾಗುವ ಅಶುಭ ಗತಿಗಳನ್ನು ಚೆನ್ನಾಗಿ ತಿಳಿದವರಾಗಿರುತ್ತಾರೆ.

ಜನನೀಷು ಚ ವರ್ತಂತೇ ಯೇ ನ ಸಮ್ಯಗ್ಯುಧಿಷ್ಠಿರ ।
ಸದೇವಕೇಷು ಲೋಕೇಷು ಯೇ ನ ವರ್ತಂತಿ ಮಾನವಾಃ ॥೪೩॥

ತೇನ ಜ್ಞಾನೇನ ವಿಜ್ಞಾಯ ಗತಿಂ ಚಾಶುಭಕರ್ಮಣಾಮ್ ।
ತಿರ್ಯಗ್ಯೋನಿಗತಾನಾಂ ಚ ವಿಜ್ಞಾಯ ಗತಯಃ ಪೃಥಕ್ ॥೪೪॥

ಯುಧಿಷ್ಠಿರನೇ, ಯಾರು ತಮ್ಮ ತಂದೆ-ತಾಯಂದಿರ ವಿಷಯದಲ್ಲಿ ಸರಿಯಾಗಿ ವರ್ತಿಸುವುದಿಲ್ಲವೋ, ದೇವತೆಗಳ ವಿಷಯದಲ್ಲಿ ಯಾರು ಸರಿಯಾಗಿ ನಡೆದು ಕೊಳ್ಳುವುದಿಲ್ಲವೋ, ಲೋಕದ ಜನರ ವಿಷಯದಲ್ಲಿ ಯಾರು ಸರಿಯಾಗಿ ವರ್ತಿಸುವುದಿಲ್ಲವೋ ಅಂತಹ ಪಾಪಕರ್ಮಿಗಳಿಗೆ ಆಗುವ ದುರ್ಗತಿಗಳನ್ನು, ಪಶು-ಪಕ್ಷಿಗಳ ತಿರ್ಯಗ್ಯೋನಿಗಳ ವಿಭಿನ್ನ ದುಃಖಗಳನ್ನು, ಗತಿಗಳನ್ನು ಅರಿತ ಸಾಂಖ್ಯ ಯೋಗಿಗಳು ಮೋಕ್ಷಮಾರ್ಗವನ್ನೇ ಅವಲಂಬಿಸುತ್ತಾರೆ.

ವೇದವಾದಾಂಸ್ತಥಾ ಚಿತ್ರಾನೃತೂನಾಂ ಪರ್ಯಯಾಂಸ್ತಥಾ ।
ಕ್ಷಯಂ ಸಂವತ್ಸರಾಣಾಂ ಚ ಮಾಸಾನಾಂ ಪ್ರಕ್ಷಯಂ ತಥಾ ॥೪೫॥

ವೇದವಾದಗಳನ್ನು, ಬಗೆ ಬಗೆಯಾದ ಋತುಗಳನ್ನು, ಪರಿವರ್ತನೆಯನ್ನು, ಅವುಗಳ ನಾಶಗಳನ್ನು, ಸಂವತ್ಸರಗಳನ್ನು, ಮಾಸಗಳನ್ನು, ಅವುಗಳ ನಾಶಗಳನ್ನು ತಿಳಿದವರಾಗಿರುತ್ತಾರೆ.

ಪಕ್ಷಕ್ಷಯಂ ತಥಾ ದೃಷ್ಟ್ವಾ ದಿವಸಾನಾಂ ಚ ಸಂಕ್ಷಯಮ್ ।
ಕ್ಷಯಂ ವೃದ್ಧಿಂ ಚ ಚಂದ್ರಸ್ಯ ದೃಷ್ಟ್ವಾ ಪ್ರತ್ಯಕ್ಷತಸ್ತಥಾ ॥೪೬॥

ಪಕ್ಷಗಳ ಕ್ಷಯವನ್ನು ವೃದ್ಧಿಯನ್ನು, ದಿವಸಗಳ ಕ್ಷಯವನ್ನು ವೃದ್ಧಿಯನ್ನು, ಚಂದ್ರನ ವೃದ್ಧಿ-ಕ್ಷಯಗಳನ್ನು ಪ್ರತ್ಯಕ್ಷವಾಗಿ ನೋಡುತ್ತಿರುತ್ತಾರೆ.

ವೃದ್ಧಿಂ ದೃಷ್ಟ್ವಾ ಸಮುದ್ರಾಣಾಂ ಕ್ಷಯಂ ತೇಷಾಂ ತಥಾ ಪುನಃ ।
ಕ್ಷಯಂ ಧನಾನಾಂ ಚ ತಥಾ ಪುನರ್ವೃದ್ಧಿಂ ತಥೈವ ಚ ॥೪೭॥

ಸಮುದ್ರಗಳಲ್ಲಾಗುವ ಏರುಪೇರುಗಳನ್ನು, ಐಶ್ವರ್ಯದಲ್ಲಿ ಉಂಟಾಗುವ ವೃದ್ಧಿ-ಕ್ಷಯಗಳನ್ನು ಪ್ರತ್ಯಕ್ಷವಾಗಿ ನೋಡಿ ಇವುಗಳು ಅಸ್ಥಿರವೆಂದು ನಿಶ್ಚಯ ಮಾಡಿಕೊಳ್ಳುತ್ತಾರೆ.

ಸಂಯೋಗಾನಾಂ ಕ್ಷಯಂ ದೃಷ್ಟ್ವಾ ಯುಗಾನಾಂ ಚ ವಿಶೇಷತಃ ।
ಕ್ಷಯಂ ಚ ದೃಷ್ಟ್ವಾ ಶೈಲಾನಾಂ ಕ್ಷಯಂ ಚ ಸರಿತಾಂ ತಥಾ ॥೪೮॥

ವರ್ಣಾನಾಂ ಚ ಕ್ಷಯಂ ದೃಷ್ಟ್ವಾ ಕ್ಷಯಾಂತಂ ಚ ಪುನಃ ಪುನಃ ।
ಜರಾಮೃತ್ಯುಂ ತಥಾ ಜನ್ಮ ದೃಷ್ಟ್ವಾ ದುಃಖಾನಿ ಚೈವ ಹ ॥೪೯॥

ಬಂಧು-ಮಿತ್ರರ ಸಂಯೋಗವು, ಯುಗಗಳ ಕ್ಷಯವು, ಪರ್ವತಗಳ ಕ್ಷಯವು, ನದಿಗಳ ಕ್ಷಯ, ವರ್ಣಗಳ ಕ್ಷಯ, ಮುಪ್ಪು-ಮೃತ್ಯು-ಜನ್ಮಗಳು ಎಲ್ಲ ಜೀವರಿಗೂ ದುಃಖದಾಯಕ ಎಂಬುದನ್ನು, ಎಲ್ಲವೂ ನಾಶ ಹೊಂದುತ್ತದೆ ಎಂಬುದನ್ನು ಪುನಃ ಪುನಃ ನೋಡುತ್ತಾ ಶಾಶ್ವತವಾದ ಸನಾತನವಾದ ಮೋಕ್ಷಮಾರ್ಗವನ್ನೇ ಅವಲಂಬಿಸುತ್ತಾರೆ.

ದೇಹದೋಷಾಂಸ್ತಥಾ ಜ್ಞಾತ್ವಾ ತೇಷಾಂ ದುಃಖಂ ಚ ತತ್ತ್ವತಃ ।
ದೇಹವಿಕ್ಲವತಾಂ ಚೈವ ಸಮ್ಯಗ್ ವಿಜ್ಞಾಯ ಭಾರತ ॥೫೦॥

ಮನುಷ್ಯ ದೇಹದಲ್ಲಿರುವ ದೋಷಗಳನ್ನು, ಅನುಭವಿಸ ಬೇಕಾದ ದುಃಖಗಳನ್ನು, ಶರೀರದ ವ್ಯಾಕುಲತೆಯನ್ನು ಚೆನ್ನಾಗಿ ತಿಳಿದು ಸಾಂಖ್ಯರು ದೇಹಾಭಿಮಾನವನ್ನೇ ತೊರೆಯುತ್ತಾರೆ.

ಆತ್ಮದೋಷಾಂಶ್ಚ ವಿಜ್ಞಾಯ ಸರ್ವಾನಾತ್ಮನಿ ಸಂಶ್ರಿತಾನ್ ।
ಸ್ವದೇಹಾದುತ್ಥಿತಾನ್ ಗಂಧಾಂಸ್ತಥಾ ವಿಜ್ಞಾಯ ಚಾಶುಭಾನ್ ॥ ೫೧॥

ಜೀವನಲ್ಲಿರುವ ದೋಷಗಳನ್ನು, ಎಲ್ಲ ಜೀವರು ಪರಮಾತ್ಮನನ್ನು ಆಶ್ರಯಿಸಿದ್ದಾರೆಂಬುದನ್ನು, ತನ್ನ ದೇಹದಲ್ಲಿ ಉತ್ಪನ್ನವಾಗುವ ದುರ್ಗಂಧಗಳನ್ನು, ಅಶುಭವಾದ ಚೇಷ್ಟೆಗಳನ್ನು ಚೆನ್ನಾಗಿ ತಿಳಿದು ವಿರಕ್ತರಾಗಿರುತ್ತಾರೆ.

ಯುಧಿಷ್ಠಿರಃ

ಕಾನ್ ಸ್ವಗಾತ್ರೋದ್ಭವಾನ್ ದೋಷಾನ್ ಪಶ್ಯಸ್ಯಮಿತವಿಕ್ರಮ ।
ಏತನ್ಮೇ ಸಂಶಯಂ ಕೃತ್ಸ್ನಂ ವಕ್ತುಮರ್ಹಸಿ ತತ್ತ್ವತಃ ॥೫೨॥

ಯುಧಿಷ್ಠಿರ– ಅಮಿತ ಪರಾಕ್ರಮಿಯಾದ ಭೀಷ್ಮನೇ, ಶರೀರದಲ್ಲಿ ಯಾವ ವಿಧವಾದ ದೋಷಗಳು ಹುಟ್ಟುತ್ತವೆ ಎಂಬುದನ್ನು ನೀನು ಗಮನಿಸಿರುತ್ತಿ. ನನಗೆ ಈ ವಿಷಯದಲ್ಲಿ ಸಂಶಯವಿದೆ. ಸಮಗ್ರವಾಗಿ, ಯಥಾರ್ಥವಾಗಿ ಈ ವಿಷಯವನ್ನು ತಿಳಿಸು.

ಭೀಷ್ಮಃ

ಪಂಚ ದೋಷಾನ್ ಪ್ರಭೋ ದೇಹೇ ಪ್ರವದಂತಿ ಮನೀಷಿಣಃ ।
ಮಾರ್ಗಜ್ಞಾಃ ಕಾಪಿಲಾಃ ಸಾಂಖ್ಯಾಃ ಶೃಣು ತಾನರಿಸೂದನ ॥೫೩॥

ಭೀಷ್ಮ– ರಾಜನೇ, ವಿದ್ವಾಂಸರಾದ ಮೋಕ್ಷಜ್ಞರು, ಕಪಿಲದೇವನೇ ಮೊದಲಾದ ಸಾಂಖ್ಯಯೋಗಿಗಳು ದೇಹದಲ್ಲಿ ಐದು ವಿಧವಾದ ದೋಷಗಳನ್ನು ಹೇಳುತ್ತಾರೆ. ಅದನ್ನು ವಿವರಿಸುತ್ತೇನೆ, ಅರಿಸೂದನನೇ ಕೇಳು.

ಕಾಮಕ್ರೋಧೌ ಭಯಂ ನಿದ್ರಾ ಪಂಚಮಃ ಶ್ವಾಸ ಉಚ್ಯತೇ ।
ಏತೇ ದೋಷಾಃ ಶರೀರೇಷು ದೃಶ್ಯಂತೇ ಸರ್ವದೇಹಿನಾಮ್ ॥೫೪॥

ಛಿಂದಂತಿ ಕ್ಷಮಯಾ ಕ್ರೋಧಂ ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಶೀಲನಾನ್ನಿದ್ರಾಮಪ್ರಮಾದಾದ್ಭಯಂ ತಥಾ ।
ಛಿಂದಂತಿ ಪಂಚಮಂ ಶ್ವಾಸಂ ಲಘ್ವಾಹಾರತಯಾ ನೃಪ ॥೫೫॥

ಕಾಮ, ಕ್ರೋಧ, ಭಯ, ನಿದ್ರಾ, ಶ್ವಾಸ - ಈ ಐದು ಶಾರೀರಿಕ ದೋಷಗಳೆಂದು ಹೇಳಲ್ಪಟ್ಟಿವೆ. ಈ ಐದು ದೋಷಗಳು ಎಲ್ಲ ಶರೀರಗಳಲ್ಲಿಯೂ ಕಂಡು ಬರುತ್ತವೆ. ಯಥಾರ್ಥ ಜ್ಞಾನವನ್ನು ಹೊಂದಿದ ವಿದ್ವಾಂಸರು ಕ್ಷಮೆಯಿಂದ ಕ್ರೋಧವನ್ನು, ಸಂಕಲ್ಪ

ತ್ಯಾಗದಿಂದ ಕಾಮವನ್ನು, ಸತ್ತ್ವಗುಣದಿಂದ ನಿದ್ರೆಯನ್ನು, ಜಾಗರೂಕತೆಯಿಂದ ಭಯವನ್ನು, ಅಲ್ಪಾಹಾರ ಸೇವನೆಯಿಂದ ಶ್ವಾಸದೋಷವನ್ನು ಪರಿಹರಿಸಿಕೊಳ್ಳುತ್ತಾರೆ.

ಗುಣಾಂಗುಣಶತೈರ್ಜ್ಞಾತ್ವಾ ದೋಷಾಂದೋಷಶತೈರಪಿ ।
ಹೇತೂನ್ ಹೇತುಶತೈಶ್ಚಿತ್ರೈಶ್ಚಿತ್ರಾನ್ ವಿಜ್ಞಾಯ ತತ್ತ್ವತಃ ॥೫೬॥

ಭರತಸುತನೇ, ಮಹಾರಾಜನೇ, ಯಥಾರ್ಥ ಜ್ಞಾನವನ್ನು ಹೊಂದಿದ ಪಕ್ವ ಯೋಗಿಗಳು ತಮ್ಮ ಯೋಗಶಕ್ತಿಯಿಂದ ನೂರು ವಿಧವಾದ ಗುಣಗಳನ್ನು, ನೂರು ಪ್ರಕಾರ ದೋಷಗಳನ್ನು, ನೂರು ಪ್ರಕಾರ ವಿಚಿತ್ರ ಕಾರಣಗಳಿಂದ ಅದಕ್ಕೆ ಸಂಬಂಧಿಸಿದ ಕಾರಣವನ್ನು ಯಥಾರ್ಥವಾಗಿ ತಿಳಿದಿರುತ್ತಾರೆ.

ಅಪಾಂ ಫೇನೋಪಮಂ ಲೋಕಂ ವಿಷ್ಣೋರ್ಮಾಯಾಶತೈಃ ಕೃತಮ್ ।
ಚಿತ್ತಭಿತ್ತಿಪ್ರತೀಕಾಶಂ ನಲಸಾರಮನರ್ಥಕಮ್ ॥೫೭॥

ಈ ಜಗತ್ತೆಲ್ಲವೂ ನೀರಿನ ಮೇಲಿನ ಗುಳ್ಳೆಯಂತೆ ನಶ್ವರವಾದುದು. ಮಹಾವಿಷ್ಣುವಿನ ಸೃಷ್ಟಿ-ರಚನಾ ಕೌಶಲದಿಂದ ಈ ಜಗತ್ತು ರಚನೆ ಹೊಂದಿರುವುದು. ಗೋಡೆಯ ಮೇಲೆ ಬರೆದ ಚಿತ್ರವಿಚಿತ್ರವಾದ ಚಿತ್ರಗಳಂತೆ ಬಹುಸುಂದರವಾಗಿ ಜಗತ್ತು ಕಾಣಿಸುತ್ತಿದೆ. ಬಾಹ್ಯವಾಗಿ ಸುಂದರವಾಗಿ ಕಾಣುವ ಎಲೆಗರಿಕೆಯಂತೆ ಅಥವಾ ಬಿದುರಿನಂತೆ ಬಹಳ ಸುಂದರವಾಗಿ ಈ ಜಗತ್ತು ಕಾಣಿಸುತ್ತಿದೆ.

ವ್ಯಾಖ್ಯಾನ ವಿಶೇಷ– ವಿಷ್ಣುವಿನ ಮಾಯೆಯಿಂದ ಈ ಜಗತ್ತು ಸೃಷ್ಟಿಯಾಗಿದೆ ಎಂಬುದಕ್ಕೆ ಕೆಲವರು ಜಗತ್ತೆಲ್ಲ ಕಾಲ್ಪನಿಕ ಎಂದು ಅಪಾರ್ಥ ಮಾಡಿಕೊಂಡಿದ್ದಾರೆ. ಆದರೆ ಚಿತ್ತಭಿತ್ತಿಪ್ರತೀಕಾಶಂ ಎಂದು ಗೋಡೆಯ ಮೇಲೆ ಬರೆದ ಚಿತ್ರದಂತೆ ರಮಣೀಯವಾಗಿದೆ ಎಂಬ ಮುಂದಿನ ಮಾತಿನಿಂದ ಮಾಯಾ ಶಬ್ದಕ್ಕೆ 'ಮಾಜ್ ಮಾನೇ' ಎಂಬ ಧಾತುವಿನ ಹಿನ್ನೆಲೆಯಲ್ಲಿ ರಚನಾ ಕೌಶಲ ಎಂಬ ಅರ್ಥವನ್ನು ಸ್ವೀಕರಿಸಬೇಕು. ಎಷ್ಟು ಜಗತ್ತು ಸುಂದರವಾಗಿದೆ ಎಂಬುದು ಒಳಗಡೆ ಈ ಜಗತ್ತು ನಿಸ್ಸಾರವಾದುದೇ. ನಾಳೆಯ ದಿನ ಕ್ಷಯವನ್ನು ಹೊಂದುವ ಸ್ವಭಾವ ಉಳ್ಳದ್ದೆ ಎಂಬುದನ್ನು ಯಥಾರ್ಥ ಜ್ಞಾನಿಗಳು ಅರಿತಿರುತ್ತಾರೆ ಎಂದು ಭಾವ.

ತಮಃ ಶ್ವಭ್ರನಿಭಂ ದೃಷ್ಟ್ವಾ ವರ್ಷಬುದ್ಬುದಸನ್ನಿಭಮ್ ।
ನಾಶಪ್ರಾಯಂ ಸುಖಾದ್ದೀನಂ ನಾಶೋತ್ತರಮಭಾವಗಮ್ ।
ರಜಸ್ತಮಸಿ ಸಮ್ಮಗ್ನಂ ಪಂಕೇ ದ್ವಿಪಮಿವಾವಶಮ್ ॥೫೮॥

ಈ ಜಗತ್ತು ಅಜ್ಞಾನದಿಂದ ತುಂಬಿರುವ ಗುಹೆಯಂತಿದೆ. ಮಳೆಗಾಲದ ನೀರಿನ ಗುಳ್ಳೆಯಂತೆ ನಶ್ವರವಾದುದು. ಸುಖದಿಂದ ರಹಿತವಾಗಿದೆ. ಅಸ್ವತಂತ್ರವಾದುದು. ಕೊನೆಗೊಂದು ದಿನ ನಾಶ ಹೊಂದುವ ಸ್ವಭಾವವುಳ್ಳದ್ದು. ಕೆಸರಿನಲ್ಲಿ ಹುದುಗಿ ಹೋದ ಅಸ್ವತಂತ್ರ ಆನೆಯಂತೆ ಜಗತ್ತೆಲ್ಲವೂ ರಜೋಗುಣ, ತಮೋಗುಣವೆಂಬ ಕೆಸರಿನಲ್ಲಿ ಮುಳುಗಿಹೋಗಿದೆ ಎಂಬುದನ್ನು ಸಾಂಖ್ಯಯೋಗಿಗಳು ಅರಿತಿರುತ್ತಾರೆ.

ಸಾಂಖ್ಯಾ ರಾಜನ್ ಮಹಾಪ್ರಾಜ್ಞಾಸ್ಯಕ್ತ್ವಾ ದೇಹಂ ಪ್ರಜಾಕೃತಮ್ ।
ಜ್ಞಾನಜ್ಞೇಯೇನ ಸಾಂಖ್ಯೇನ ವ್ಯಾಪಿನಾ ಮಹತಾ ನೃಪ ॥೫೯॥

ರಾಜಸಾನಶುಭಾನ್ ಗಂಧಾಂಸ್ತಾಮಸಾಂಶ್ಚ ತಥಾವಿಧಾನ್ ।
ಪುಣ್ಯಾಂಶ್ಚ ಸಾತ್ತ್ವಿಕಾನ್ ಗಂಧಾನ್ ಸ್ಪರ್ಶಜಾನ್ ದೇಹಸಂಶ್ರಿತಾನ್ ।
ಛಿತ್ತ್ವಾ ತು ಜ್ಞಾನಶಸ್ತ್ರೇಣ ತಪೋದಂಡೇನ ಭಾರತ ॥೬೦॥

ಸಾಂಖ್ಯಯೋಗದಿಂದ ಯಥಾರ್ಥ ಜ್ಞಾನ ಹೊಂದಿರುವ, ಮಹಾಬುದ್ಧಿವಂತರಾದ ಜ್ಞಾನಿಗಳು ಮನುಷ್ಯರಿಂದ ನಿರ್ಮಿತವಾದ ಪ್ರಾಕೃತ ದೇಹವನ್ನು ತ್ಯಜಿಸಿ ತತ್ತ್ವಜ್ಞಾನದಿಂದ ತಿಳಿಯಲು ಯೋಗ್ಯವಾದ ಜಗತ್ತನ್ನು ವ್ಯಾಪಿಸಿರುವ ಭಗವಂತನನ್ನು ಯಥಾರ್ಥ ಜ್ಞಾನದಿಂದ ಅರಿತು ರಾಜಸಗಳಾದ ಅಶುಭ ಗಂಧಗಳನ್ನು, ತಾಮಸಗಳೆನಿಸಿದ ಅಶುಭ ಗಂಧಗಳನ್ನು, ಪ್ರತಿಬಂಧಕಗಳೆನಿಸಿದ ಸಾತ್ವಿಕ ಪುಣ್ಯ ಗಂಧಗಳನ್ನು, ದೇಹವನ್ನಾಶ್ರಯಿಸಿರುವ ಸ್ಪರ್ಶವೇ ಮೊದಲಾದ ವಿಷಯಗಳನ್ನು ಜ್ಞಾನವೆಂಬ ಶಸ್ತ್ರದಿಂದ ಕೂಡಲೇ ನಾಶಗೊಳಿಸಿ ತಪೋದಂಡವನ್ನು ಧರಿಸಿ ಭಗವನ್ನಿಷ್ಠರಾಗಿರುತ್ತಾರೆ.

ತತೋ ದುಃಖೋದಕಂ ಘೋರಂ ಚಿಂತಾಶೋಕಮಹಾಹ್ರದಮ್ ।
ವ್ಯಾಧಿಮೃತ್ಯುಮಹಾಗ್ರಾಹಂ ಮಹಾಭಯಮಹೋರಗಮ್ ॥೬೧॥

ಜ್ಞಾನಯೋಗಿಗಳು ಜ್ಞಾನವೆಂಬ ದೋಣಿಯನ್ನು ಆಶ್ರಯಿಸಿ ಸಂಸಾರವೆಂಬ ಘೋರ ಸಮುದ್ರವನ್ನು ದಾಟಿ ಭಗವಂತನನ್ನು ಸೇರುತ್ತಾರೆ. ಸಾಂಸಾರಿಕ ದುಃಖಗಳೇ ಸಂಸಾರ ಸಮುದ್ರದ ನೀರು. ಚಿಂತಾ, ಶೋಕಗಳೇ ದೊಡ್ಡ ದೊಡ್ಡ ಮಡುಗಳು. ವ್ಯಾಧಿ-ಮೃತ್ಯುಗಳೇ ದೊಡ್ಡ ಮೊಸಳೆಗಳು. ಮಹಾಭಯವೆಂಬುದೇ ಮಹಾಸರ್ಪವು.

ತಮಃಕೂರ್ಮಂ ರಜೋಮೀನಂ ಪ್ರಜ್ಞಯಾ ಸಂತರಂತ್ಯುತ ।
ಸ್ನೇಹಪಂಕಂ ಜರಾದುರ್ಗಂ ಸ್ಪರ್ಶದ್ವೀಪಮರಿಂದಮ ॥೬೨॥

ಶತ್ರುನಿಗ್ರಹಿಯೇ, ತಮೋಗುಣವು ಈ ಸಂಸಾರ ಸಮುದ್ರದ ಆಮೆ ಎನಿಸಿದೆ. ರಜೋಗುಣವು ಮೀನುಗಳು. ಇಂತಹ ಘೋರವಾದ ಸಂಸಾರದಲ್ಲಿ ಸ್ನೇಹವೆಂಬುದು ಕೆಸರಿನಂತಿದೆ. ಸ್ಪರ್ಶವೇ ದ್ವೀಪದಂತಿದೆ.

ಕರ್ಮಾಗಾಧಂ ಸತ್ಯತೀರಂ ಸ್ಥಿತವ್ರತಮಿದಂ ನೃಪ ।
ಹಿಂಸಾಶೀಘ್ರಮಹಾವೇಗಂ ನಾನಾರಸಮಹಾಕರಮ್ ॥೬೩॥

ಸಮುದ್ರದ ಆಳದಂತೆ ಕರ್ಮದ ಗತಿಯು. ಸತ್ಯವು ಈ ಸಮುದ್ರದ ತೀರದಂತಿದೆ. ವ್ರತ-ನಿಯಮಗಳೇ ಸಮುದ್ರದಲ್ಲಿರುವ ಸ್ಥಿರತೆ. ಹಿಂಸೆ ಎಂಬುದೇ ಶೀಘ್ರವಾದ ಮಹಾವೇಗವು. ಈ ಸಮುದ್ರವು ನಾನಾ ವಿಷಯ ರಸಗಳಿಂದ ತುಂಬಿ ಹೋಗಿದೆ.

ನಾನಾಪ್ರೀತಿಮಹಾರತ್ನಂ ದುಃಖಜ್ವರಸಮೀರಣಮ್ ।
ಶೋಕತೃಷ್ಣಾಮಹಾವರ್ತಂ ತೀಕ್ಷ್ಣವ್ಯಾಧಿಮಹಾಗಜಮ್ ॥೬೪॥

ಅನೇಕ ಮುಖ ಪ್ರೀತಿಗಳೇ ಸಂಸಾರ ಸಮುದ್ರದ ರತ್ನಗಳು. ಅನೇಕ ಮುಖವಾದ ದುಃಖ-ಸಂತಾಪಗಳೇ ಸಂಸಾರ ಸಾಗರದ ಮೇಲೆ ಬೀಸುವ ಗಾಳಿಯು. ಶೋಕ-ತೃಷ್ಣೆಗಳು ಸುಳಿಗಳು. ವ್ಯಾಧಿಗಳು ದೊಡ್ಡ ತಿಮಿಂಗಿಲಗಳು.

ಅಸ್ಥಿಸಂಘಾತಸಂಘಾಟಂ ಶ್ಲೇಷ್ಮಫೇನಮರಿಂದಮ ।
ದಾನಮುಕ್ತಾಕರಂ ಭೀಮಂ ಶೋಣಿತಹ್ರದವಿದ್ರುಮಮ್ ॥೬೫॥

ಮೂಳೆ ಸಮೂಹವೆಂಬ ತಳಭಾಗವು. ಶ್ಲೇಷ್ಮ ಎಂಬುದೇ ದೊಡ್ಡ ನೊರೆಯ ಸಮುದ್ರವು. ಇಲ್ಲಿ ಸತ್ಕರ್ಮಗಳಲ್ಲಿ ಮಾಡುವ ದಾನವೇ ಸಾಗರದ ಮುತ್ತಿನ ರಾಶಿಯು. ರಕ್ತ ಸರೋವರವೇ ಹವಳದ ರಾಶಿಯು.

ಹಸಿತೋತ್ಕುಷ್ಟನಿರ್ಘೋಷಂ ನಾನಾಜ್ಞಾನಸುದುಸ್ತರಮ್ ।
ರೋದನಾಶ್ರುಮಲಕ್ಷಾರಂ ಸಂಗತ್ಯಾಗಪರಾಯಣಮ್ ॥೬೬॥

ಅಟ್ಟಹಾಸಗಳೇ ಸಂಸಾರದ ಭೋರ್ಗರೆತ. ಅನೇಕ ಮುಖ ಅಜ್ಞಾನವೇ ಸಾಗರವನ್ನು ದಾಟಲು ಪ್ರತಿಬಂಧಕಗಳು. ಪ್ರಾಣಿಗಳ ರೋದನವೇ ಮಲಿನವಾದ ಉಪ್ಪು ನೀರು. ವಿಷಯಾಸಕ್ತಿ ತ್ಯಾಗವೇ ಸಾಗರದ ಭಯವನ್ನು ಪರಿಹರಿಸಿಕೊಳ್ಳಲು ಯೋಗ್ಯತಾಣ.

ಪುನರಾಜನ್ಮಲೋಕೌಘಂ ಪುತ್ರಬಾಂಧವಪತ್ತನಮ್ ।
ಅಹಿಂಸಾಸತ್ಯಮರ್ಯಾದಂ ಪ್ರಾಣತ್ಯಾಗಮಹೋರ್ಮಿಣಮ್ ॥೬೭॥

ಪುತ್ರ-ಭಾರ್ಯಾದಿಗಳು ಸಂಸಾರದಲ್ಲಿ ಜಿಗಣೆ. ಮಿತ್ರರು-ಬಂಧುಗಳು ಸಾಗರದ ತೀರದಲ್ಲಿರುವ ಪಟ್ಟಣ, ಅಹಿಂಸೆ-ಸತ್ಯಗಳೇ ಮೇರೆಯಂತಿದೆ. ಪ್ರಾಣತ್ಯಾಗವೇ ಸಂಸಾರ ಸಮುದ್ರದ ಅಲೆಯಂತಿದೆ.

ವೇದಾಂತಗಮನದ್ವೀಪಂ ಸರ್ವಭೂತದಯೋದಧಿಮ್ ।
ಮೋಕ್ಷದುಷ್ಪ್ರಾಪವಿಷಯಂ ವಡವಾಮುಖಸಾಗರಮ್ ॥೬೮॥

ವೇದಾಂತ ಜ್ಞಾನವೇ ಸಾಗರದ ಮಧ್ಯದ ಆಶ್ರಯದ್ವೀಪವು. ಪ್ರಾಣಿಗಳಲ್ಲಿರುವ ದಯಾ ಭಾಗವು ಜಲರಾಶಿಯು. ಮೋಕ್ಷವೆಂಬುದು ದುರ್ಲಭವಾದ ವಿಷಯವು. ನಾನಾ ಸಂತಾಪಗಳು ಸಮುದ್ರದ ವಡವಾನಲವು.

ತರಂತಿ ಮುನಯಃ ಸಿದ್ಧಾ ಜ್ಞಾನಯೋಗೇನ ಭಾರತ ।
ತೀರ್ತ್ವಾ ಚ ದುಸ್ತರಂ ಜನ್ಮ ವಿಶಂತಿ ವಿಮಲಂ ನಭಃ ॥೬೯॥

ಇಂತಹ ಭವಸಾಗರವನ್ನು ಸಿದ್ಧರಾದ ಮುನಿಗಳು ಜ್ಞಾನವೆಂಬ ದೋಣಿಯನ್ನು ಆಶ್ರಯಿಸಿ ದಾಟುತ್ತಾರೆ. ದುಸ್ತರವಾದ ಸಮುದ್ರವನ್ನು ದಾಟಿ ನಿರ್ಮಲವಾದ ಆಕಾಶದಂತೆ ಅಸಂಗನಾದ ಭಗವಂತನನ್ನು ಹೊಂದುತ್ತಾರೆ.

ತತಸ್ತಾನ್ ಸುಕೃತೀನ್ ಸಾಂಖ್ಯಾನ್ ಸೂರ್ಯೋ ವಹತಿ ರಶ್ಮಿಭಿಃ ।
ಪದ್ಮತಂತುವದಾವಿಶ್ಯ ಪ್ರವಹನ್ ವಿಷಯಾನ್ನೃಪ ॥೭೦॥

ಬಳಿಕ ಇಂತಹ ಯಥಾರ್ಥ ಜ್ಞಾನವನ್ನು ಹೊಂದಿದ ಪುಣ್ಯಪುರುಷರನ್ನು ಸೂರ್ಯನು ತಾವರೆ ದಂಟಿನ ನೂಲಿನಂತಿರುವ ತನ್ನ ಕಿರಣಗಳಿಂದ ಪ್ರವೇಶಿಸಿ, ಅವರನ್ನು ಎಲ್ಲಿಗೆ ಹೊಂದಿಸಬೇಕೋ ಅಂತಹ ಅವರವರಿಗೆ ಊರ್ಧ್ವಲೋಕಗಳಿಗೆ ಕೊಂಡೊಯ್ಯುತ್ತಾನೆ.

ತತ್ರ ತಾನ್ ಪ್ರವಹೋ ವಾಯುಃ ಪ್ರತಿಗೃಹ್ಣಾತಿ ಭಾರತ ।
ವೀತರಾಗಾನ್ ಯತೀನ್ ಸಿದ್ಧಾನ್ ವೀರ್ಯಯುಕ್ತಾಂಸ್ತಪೋಧನಾನ್ ॥

ಸೂಕ್ಷ್ಮಃ ಶೀತಃ ಸುಗಂಧೀ ಚ ಸುಖಸ್ಪರ್ಶಶ್ಚ ಭಾರತ ।
ಸಪ್ತಾನಾಂ ಮರುತಾಂ ಶ್ರೇಷ್ಠೋ ಲೋಕಾನ್ ಗಚ್ಛತಿ ಯಃ ಶುಭಾನ್ ।
ಸ ತಾನ್ ವಹತಿ ಕೌಂತೇಯ ನಭಸಃ ಪರಮಾಂ ಗತಿಮ್ ॥೭೨॥

ಬಳಿಕ ರಾಗಾದಿ ದೋಷಗಳಿಂದ ಮುಕ್ತರಾದ, ವಿರಕ್ತರಾದ, ತಪಸ್ಸಿನಿಂದ ಸಿದ್ಧಿಯನ್ನು ಹೊಂದಿದ ಆ ಯತಿಗಳನ್ನು ಅಲ್ಲಿ ಮೃದುವಾಗಿಯೂ, ತಂಪಾಗಿಯೂ, ಸುಗಂಧ ಸ್ಪರ್ಶವುಳ್ಳದ್ದಾಗಿಯೂ ಇರುವ, ಸಪ್ತ ಮರುತ್ತುಗಳಲ್ಲಿ ಶ್ರೇಷ್ಠವಾದ ಪ್ರವಹವೆಂಬ ವಾಯುವು ಪರಮಗತಿಯ ಕಡೆ ಸಾಗಿಸುತ್ತಾನೆ.

ನಭೋ ವಹತಿ ಲೋಕೇಶ ರಜಸಃ ಪರಮಾಂ ಗತಿಮ್ ।
ರಜೋ ವಹತಿ ರಾಜೇಂದ್ರ ಸತ್ತ್ವಸ್ಯ ಪರಮಾಂ ಗತಿಮ್ ॥೭೩॥

ಆಕಾಶಾಭಿಮಾನಿ ದೇವತೆಯು ತೇಜೋಮಯವಾದ ವಿದ್ಯುದಭಿಮಾನಿ ದೇವತೆಯ ಕಡೆ ಯೋಗಿಯನ್ನು ಕರೆದೊಯ್ಯುತ್ತದೆ. ರಜೋಗುಣವು ಸತ್ತ್ವಗುಣದ ಕಡೆಗೆ ಕರೆದೊಯ್ಯುತ್ತದೆ.

ಸತ್ತ್ವಂ ವಹತಿ ಶುದ್ಧಾತ್ಮಾ ಪರಂ ನಾರಾಯಣಂ ಪ್ರಭುಮ್ ।
ಪ್ರಭುರ್ವಹತಿ ಶುದ್ಧಾತ್ಮಾ ಪರಮಾತ್ಮಾನಮಾತ್ಮನಾ ॥೭೪॥

ಶುದ್ಧಾತ್ಮನೇ, ಸತ್ತ್ವಾಭಿಮಾನಿಯು ಸಾಂಖ್ಯಯೋಗಿಯನ್ನು ಶ್ರೇಷ್ಠವಾದ ಶ್ರೀಮನ್ನಾರಾಯಣನ ಬಳಿಗೆ ಕೊಂಡೊಯ್ಯುತ್ತಾನೆ. ಶುದ್ಧಾತ್ಮನಾದ ಶ್ರೀಮನ್ನಾರಾಯಣನು ಸಾಂಖ್ಯಯೋಗಿಗಳನ್ನು ತಾನೇ ಆದ ಪರಮಾತ್ಮನ ಬಳಿಗೆ ಕೊಂಡೊಯ್ಯುತ್ತಾನೆ.

ಪರಮಾತ್ಮಾನಮಾಸಾದ್ಯ ತದ್ಭೂತಾ ಯತಯೋಮಲಾಃ ।
ಅಮೃತತ್ವಾಯ ಕಲ್ಪಂತೇ ನ ನಿವರ್ತಂತಿ ಚಾಭಿಭೋ ।
ಪರಮಾ ಸಾ ಗತಿಃ ಪಾರ್ಥ ನಿರ್ದ್ವಂದ್ವಾನಾಂ ಮಹಾತ್ಮನಾಮ್ ॥೭೫॥

ಪರಮಾತ್ಮನನ್ನು ಹೊಂದಿರುವ ಯೋಗಿಗಳು ಪರಮಾತ್ಮನೆಂಬ ನಾರಾಯಣನಲ್ಲಿ ಸೇರಿದವರಾಗಿ ಅಮೃತತ್ವವನ್ನು ಹೊಂದುತ್ತಾರೆ. ಎಂದಿಗೂ ಈ ಸಂಸಾರದ ಕಡೆಗೆ ತಿರುಗಿ ಬರುವುದಿಲ್ಲ. ಪಾರ್ಥನೇ, ದ್ವಂದ್ವ ದುಃಖರಹಿತರಾದ ಆ ಮಹಾತ್ಮರಿಗೆ ದೊರಕುವ ಆ ಗತಿಯೇ ಪರಮಗತಿ ಎನಿಸಿದೆ.

ಯುಧಿಷ್ಠಿರಃ

ಸ್ಥಾನಮುತ್ತಮಮಾಸಾದ್ಯ ಭಗವಂತಂ ಸ್ಥಿರವ್ರತಾಃ ।
ಆಜನ್ಮಮರಣಂ ವಾ ತೇ ಸ್ಮರಂತ್ಯುತ ನ ವಾನಘ ॥೭೬॥

ಯದತ್ರ ತಥ್ಯಂ ತನ್ಮೇ ತ್ವಂ ಯಥಾವದ್ವಕ್ತುಮರ್ಹಸಿ ।
ತ್ವದೃತೇ ಮಾನವಂ ನಾನ್ಯಂ ಪ್ರಾಪ್ತುಮರ್ಹಾಮಿ ಕೌರವ ॥೭೭॥

ಯುಧಿಷ್ಠಿರ– ಪಾಪರಹಿತನೇ, ಪಿತಾಮಹನೇ, ಸ್ಥಿರತೆಯಿಂದ ಶ್ರೇಷ್ಠವಾದ ವ್ರತಗಳನ್ನು ಪರಿಪಾಲಿಸುವ ಯಥಾರ್ಥ ಜ್ಞಾನಿಗಳಾದ ಯೋಗಿಗಳು ಪರಮಾತ್ಮನನ್ನು ಅವನ ಸ್ಥಾನವಾದ ಮೋಕ್ಷವನ್ನು ಹೊಂದಿದ ಬಳಿಕ ಹುಟ್ಟಿನಿಂದ ಸಾಯುವ ತನಕ ಮಾಡಿರುವ ಕರ್ಮಗಳನ್ನು ಸ್ಮರಿಸುತ್ತಾರೋ ಅಥವಾ ಇಲ್ಲವೋ? ಇದರ ಬಗ್ಗೆ ಯಥಾರ್ಥವಾಗಿ ತಿಳಿಸು. ಈ ವಿಷಯದಲ್ಲಿ ಯಾವುದು ಯಥಾರ್ಥವಾಗಿದೆಯೋ ಅದನ್ನು ತಿಳಿಸು. ನಿನ್ನ ಹೊರತಾಗಿ ನಾನು ಬೇರೆ ಯಾರನ್ನೂ ಹೀಗೆ ಪ್ರಶ್ನಿಸೆನು.

ವ್ಯಾಖ್ಯಾನ ವಿಶೇಷ– ಧರ್ಮರಾಜನು ಕರ್ಮಗಳನ್ನು ಸ್ಮರಿಸುತ್ತಾರೋ ಇಲ್ಲವೋ ಎಂದು ಪ್ರಶ್ನಿಸುತ್ತಾನೆ. ಸ್ಮರಿಸುತ್ತಾರೆ ಎಂಬುದೇ ಉತ್ತರವು. ಗುರುಗಳಿಗೆ ಅನುಕೂಲನಾದ ಶಿಷ್ಯನಂತೆ ಇಂದ್ರಿಯಗಳೆಲ್ಲವೂ ಮುಕ್ತಾತ್ಮನಿಗೆ ವಶವಾಗಿರುತ್ತವೆ. ಇಂದ್ರಿಯಗಳಿಂದ ಮುಕ್ತನಾಗಿರುವುದರಿಂದ ಹಿಂದಿನದ್ದನ್ನು ನೆನಪಿಸಿಕೊಂಡರೂ ತಜ್ಜನ್ಯ ದುಃಖಗಳು ಆ ವ್ಯಕ್ತಿಗೆ ಉಂಟಾಗುವುದಿಲ್ಲ. ಸುಖವೇ ಉಂಟಾಗುತ್ತದೆ. ಇದರಿಂದ ಧರ್ಮರಾಜನ ಹೃದಯದಲ್ಲಿರುವ ಶಂಕೆಯು ಪರಿಹಾರವಾಯಿತು ಎಂದು ತಾತ್ಪರ್ಯ. ಧರ್ಮರಾಜನಿಗೆ ತಾನು ಮಾಡಿದ ಕರ್ಮದ ಬಗ್ಗೆ ದುಃಖ ಉಂಟಾಗಿದೆ. ಇದರ ಬಗ್ಗೆ ಸರಿಯಾದ ಯಥಾರ್ಥ ಜ್ಞಾನವನ್ನು ಭೀಷ್ಮರು ಉಪದೇಶಿಸಿರುವುದರಿಂದ ಇದನ್ನು ಯಥಾರ್ಥವಾಗಿ ತಿಳಿದ ಧರ್ಮರಾಜನ ಹೃದಯದಲ್ಲಡಕವಾದ ಸಂಶಯವು ಪರಿಹಾರವಾಯಿತು. ಇದರ ಮೂಲಕ ದುಃಖವು ಪರಿಹಾರವಾಯಿತು ಎಂದೇ ನಿಶ್ಚಯವು.

ಮೋಕ್ಷದೋಷೋ ಮಹಾನೇಷ ಪ್ರಾಪ್ಯ ಸಿದ್ಧಿಂ ಗತಾನೃಷೀನ್ ।
ಯದಿ ತತ್ರೈವ ವಿಜ್ಞಾನೇ ವರ್ತಂತೇ ಯತಯಃ ಪರೇ ॥೭೮॥

ಪ್ರವೃತ್ತಿಲಕ್ಷಣಂ ಧರ್ಮಂ ಪಶ್ಯಾಮಿ ಪರಮಂ ನೃಪ ।
ಮಗ್ನಸ್ಯ ಹಿ ಪರೇ ಜ್ಞಾನೇ ಕಿಂ ನು ದುಃಖತರಂ ಭವೇತ್ ॥೭೯॥

ಮೋಕ್ಷಶಾಸ್ತ್ರವನ್ನು ಕಂಡಾಗ ಈ ವಿಷಯದಲ್ಲಿ ನನಗೆ ಸಂದೇಹವು ಕಾಣಿಸುತ್ತಿದೆ. ಕೆಲವು ಶಾಸ್ತ್ರಜ್ಞರು ಮುಕ್ತದೆಶೆಯಲ್ಲೂ ಹಿಂದಿನ ಸ್ಮರಣೆ ಏನೂ ಇರುವುದಿಲ್ಲ ಎನ್ನುತ್ತಾರೆ.

ಕೆಲವರು ಸ್ಮರಣೆ ಇದೆ ಎಂದು ಹೇಳುತ್ತಾರೆ. ಹಿಂದಿನ ಸ್ಮರಣೆ ಇರುವ ಪಕ್ಷದಲ್ಲಿ ಪ್ರವೃತ್ತಿ ಧರ್ಮವೇ ಶ್ರೇಷ್ಠವೆಂದು ನನಗೆ ಕಾಣಿಸುತ್ತದೆ. ಮುಕ್ತದೆಶೆಯಲ್ಲಿ ಹಿಂದಿನ ಸ್ಮರಣೆಯೇ ಇಲ್ಲವೆಂದಾದಲ್ಲಿ ಪೂರ್ಣಜ್ಞಾನವು ನಾಶವಾಗುತ್ತದೆ ಎಂದು ಹೇಳಿದಂತಾಯಿತು. ಸುಷುಪ್ತಿಯಲ್ಲಿರುವಂತೆ ಅಜ್ಞಾನಕ್ಕೆ ಜೀವನು ವಶನಾಗಿರುತ್ತಾನೆ ಎಂದು ಹೇಳಿದಂತಾಯಿತು. ಈ ಸುಷುಪ್ತಿಗಿಂತಲೂ ಮೋಕ್ಷವು ದುರವಸ್ಥೆಯಿಂದ ಕೂಡಿದೆ ಎಂದು ಹೇಳಿದಂತಾಗುತ್ತದೆ. ಕಾರಣ, ಸುಷುಪ್ತಿಕಾಲದಲ್ಲಿ ಮಾತ್ರ ಜ್ಞಾನವು ನಾಶವಾಗಿರುತ್ತದೆ ಹೊರತು ಪುನಃ ಎಚ್ಚರದಲ್ಲಿ ಆ ಜ್ಞಾನವು ಲಭಿಸುತ್ತದೆ. ಆದರೆ ಮುಕ್ತಿಯಲ್ಲಿ ಸರ್ವಾತ್ಮನಾ ಜ್ಞಾನಲೋಪವಾಗಿರುವುದರಿಂದ ಸ್ಮರಣೆಗೆ ಬಾರದಿದ್ದಲ್ಲಿ ದುಃಖವೇ ಅಧಿಕವಾಗುತ್ತದೆಯಲ್ಲ ಎಂದು ಯುಧಿಷ್ಠಿರನು ಪ್ರಶ್ನಿಸುತ್ತಾನೆ.

ಭೀಷ್ಮಃ

ಯಥಾನ್ಯಾಯಂ ತ್ವಯಾ ತಾತ ಪ್ರಶ್ನಃ ಪೃಷ್ಟಃ ಸುಸಂಕಟಃ ।
ಬುದ್ಧಾನಾಮಪಿ ಸಮ್ಮೋಹಃ ಪ್ರಶ್ನೇऽಸ್ಮಿನ್ ಭರತರ್ಷಭ ।
ಅತ್ರಾಪಿ ತತ್ತ್ವಂ ಪರಮಂ ಶೃಣು ಸಮ್ಯಙ್ಮಯೇರಿತಮ್ ॥೮೦॥

ಭೀಷ್ಮ– ಭರತರ್ಷಭನೇ, ನಿನ್ನ ಪ್ರಶ್ನೆಗೆ ಸಮಾಧಾನವನ್ನು ಹೇಳುವುದು ಕಷ್ಟವಾದರೂ ಈ ಪ್ರಶ್ನೆಯು ಯೋಗ್ಯವೇ ಆಗಿದೆ. ಈ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುವ ವಿಷಯದಲ್ಲಿ ವಿದ್ವಾಂಸರು ಗೊಂದಲಕ್ಕೀಡಾಗುತ್ತಾರೆ. ಆದರೂ ನಿನಗೆ ತಿಳಿಯುವಂತೆ ಅದರ ತತ್ತ್ವವನ್ನು ಹೇಳುತ್ತೇನೆ. ಇದೇ ವಿಷಯದಲ್ಲಿ ನಾನು ಹೇಳುವುದನ್ನು ಕೇಳಿಸಿಕೊ.

ಬುದ್ಧಿಶ್ಚ ಪರಮಾ ಯತ್ರ ಕಾಪಿಲಾನಾಂ ಮಹಾತ್ಮನಾಮ್ ।
ಇಂದ್ರಿಯಾಣ್ಯಪಿ ಬುದ್ಧ್ಯಂತೇ ಸ್ವದೇಹಂ ದೇಹಿನೋ ನೃಪ ।
ಕಾರಣಾನ್ಯಾತ್ಮನಸ್ತಾನಿ ಸೂಕ್ಷ್ಮಃ ಪಶ್ಯತಿ ತೈಸ್ತು ಸಃ ॥೮೧॥

ಆತ್ಮನಾ ವಿಪ್ರಹೀಣಾನಿ ಕಾಷ್ಠಕುಡ್ಯಸಮಾನಿ ತು ।
ವಿನಶ್ಯಂತಿ ನ ಸಂದೇಹಃ ಫೇನಾ ಇವ ಮಹಾರ್ಣವೇ ॥೮೨॥

ಮಹಾತ್ಮರಾದ ಕಪಿಲರು ತಮ್ಮ ಶ್ರೇಷ್ಠವಾದ ಬುದ್ಧಿಯನ್ನು ಈ ವಿಷಯದಲ್ಲಿ ಉಪಯೋಗಿಸಿದ್ದಾರೆ. ಪ್ರಾಣಿಗಳ ದೇಹದಲ್ಲಿ ಜ್ಞಾನೇಂದ್ರಿಯಗಳು ತಮ್ಮ ತಮ್ಮ

ವ್ಯಾಪಾರದಿಂದ ವಿಷಯಗಳನ್ನು ಗ್ರಹಿಸುತ್ತವೆ. ಆದ್ದರಿಂದ ಆತ್ಮನಿಗೆ ಈ ಜ್ಞಾನೇಂದ್ರಿಯಗಳು ಕರ್ಣವೆನಿಸಿದೆ. ಆತ್ಮನು ಈ ಇಂದ್ರಿಯಗಳ ಮೂಲಕವೇ ಎಲ್ಲವನ್ನೂ ಗ್ರಹಿಸುತ್ತಾನೆ. ಅವು ಆತ್ಮನ ಸಂಬಂಧವನ್ನು ಬಿಟ್ಟ ಕೂಡಲೇ ಕಟ್ಟಿಗೆಗೂ, ಗೋಡೆಗೂ, ಸಮುದ್ರದ ನೊರೆಗೂ ಸಮಾನವಾಗಿ ತಮ್ಮ ವ್ಯಾಪಾರಗಳನ್ನೆಲ್ಲ ಕಳೆದುಕೊಂಡು ನಶಿಸಿ ಹೋಗುತ್ತವೆ.

ಇಂದ್ರಿಯೈಃ ಸಹ ಸುಪ್ತಸ್ಯ ದೇಹಿನಃ ಶತ್ರುತಾಪನ ।
ಸೂಕ್ಷ್ಮಶ್ಚರತಿ ಸರ್ವತ್ರ ನಭಸೀವ ಸಮೀರಣಃ ॥೮೩॥

ಸ ಪಶ್ಯತಿ ಯಥಾನ್ಯಾಯಂ ಸ್ಪರ್ಶಾನ್ ಸ್ಪೃಶತಿ ಚಾಭಿಭೋ ।
ಬುಧ್ಯಮಾನೋ ಯಥಾಪೂರ್ವಮಖಿಲೇನೇಹ ಭಾರತ ॥೮೪॥

ಇಂದ್ರಿಯಾಣೀಹ ಸರ್ವಾಣಿ ಸ್ವೇ ಸ್ವೇ ಸ್ಥಾನೇ ಯಥಾವಿಧಿ ।
ಅನೀಶತ್ವಾತ್ ಪ್ರಲೀಯಂತೇ ಸರ್ಪಾ ಹತವಿಷಾ ಇವ ॥೮೫॥

ಇಂದ್ರಿಯಾಣಾಂ ತು ಸರ್ವೇಷಾಂ ಸ್ವಸ್ಥಾನೇಷ್ವೇವ ಸರ್ವಶಃ ।
ಆಕ್ರಮ್ಯ ಗತಯಃ ಸೂಕ್ಷ್ಮಶ್ಚರತ್ಯಾತ್ಮಾ ನ ಸಂಶಯಃ ॥೮೬॥

ಮನುಷ್ಯನು ತನ್ನ ಇಂದ್ರಿಯಗಳ ಜೊತೆಗೆ ನಿದ್ರೆ ಮಾಡುವಾಗ ಸೂಕ್ಷ್ಮವಾದ ಆತ್ಮನು ಆಕಾಶದಲ್ಲಿನ ವಾಯುವಿನಂತೆ ಸಂಚರಿಸುತ್ತಿರುತ್ತಾನೆ. ಸ್ಪರ್ಶವನ್ನು ಅನುಭವಿಸುತ್ತಾನೆ. ಸುಷುಪ್ತಿಯಲ್ಲಿ ಸಮಸ್ತ ಇಂದ್ರಿಯಗಳು ವಿಷರಹಿತವಾದ ಸರ್ಪಗಳಂತೆ ಶಕ್ತಿಹೀನಗಳಾಗಿ ತಮ್ಮ ತಮ್ಮ ಮೂಲಸ್ಥಾನಗಳಲ್ಲಿ ಅಡಗಿರುತ್ತವೆ. ಅಂತಹ ಸಮಯದಲ್ಲಿ ಆತ್ಮನು ಇಂದ್ರಿಯಗಳು ಲಯ ಹೊಂದಿದ ಆ ಸ್ಥಾನಗಳಿಗೆ ಹೋಗಿ ಅವುಗಳ ವ್ಯಾಪಾರಗಳಿಗೆ ಸಹಕರಿಸುತ್ತಾನೆ.

ಸತ್ತ್ವಸ್ಯ ಚ ಗುಣಾನ್ ಕೃತ್ಸ್ನಾನ್ ರಜಸಶ್ಚ ಗುಣಾನ್ ಪುನಃ ।
ಗುಣಾಂಶ್ಚ ತಮಸಃ ಸರ್ವಾನ್ ಗುಣಾನ್ ಬುದ್ಧೇಶ್ಚ ಭಾರತ ॥೮೭॥

ಗುಣಾಂಶ್ಚ ಮನಸಸ್ತದ್ವನ್ನಭಸಶ್ಚ ಗುಣಾಂಸ್ತಥಾ ।
ಗುಣಾನ್ವಾಯೋಶ್ಚ ಧರ್ಮಾತ್ಮಂಸ್ತೇಜಸಶ್ಚ ಗುಣಾನ್ ಪುನಃ ॥೮೮॥

ಅಪಾಂ ಗುಣಾಂಸ್ತಥಾ ಪಾರ್ಥ ಪಾರ್ಥಿವಾಂಶ್ಚ ಗುಣಾನಪಿ ।
ಸರ್ವಾತ್ಮನಾ ಗುಣೈರ್ವ್ಯಾಪ್ಯ ಕ್ಷೇತ್ರಜ್ಞಃ ಸ ಯುಧಿಷ್ಠಿರ ॥೮೯॥

ಆತ್ಮಾ ಚ ಯಾತಿ ಕ್ಷೇತ್ರಜ್ಞಂ ಕರ್ಮಣೇ ಚ ಶುಭಾಶುಭೇ ।
ಶಿಷ್ಯಾ ಇವ ಮಹಾತ್ಮಾನಮಿಂದ್ರಿಯಾಣಿ ಚ ತಂ ವಿಭೋ ॥೯೦॥

ಯುಧಿಷ್ಠಿರನೇ, ಪರಮಾತ್ಮನು ಸತ್ತ್ವಗುಣಗಳನ್ನು, ಸಮಗ್ರವಾದ ರಜೋಗುಣಗಳನ್ನು, ತಮೋಗುಣಗಳನ್ನು, ಬುದ್ಧಿಯ ಗುಣಗಳನ್ನು, ಆಕಾಶದ ಗುಣಗಳನ್ನು, ವಾಯುವಿನ ಗುಣಗಳನ್ನು, ತೇಜಸ್ಸಿನ ಗುಣಗಳನ್ನು, ನೀರಿನ ಗುಣಗಳನ್ನು, ಭೂಮಿಯ ಗುಣಗಳನ್ನು ತನ್ನ ಗುಣಗಳಿಂದ ವ್ಯಾಪಿಸಿ, ಜೀವರನ್ನು ಶುಭಾಶುಭ ಕರ್ಮಗಳಲ್ಲಿ ನಿಯೋಜಿಸಿ, ಇಂದ್ರಿಯಗಳನ್ನು ಪ್ರೇರಿಸಿ ನಿಯಮಿಸುತ್ತಾನೆ. ಜೀವನಾದರೂ ಗುರುವನ್ನು ಶಿಷ್ಯನು ಅನುಸರಿಸುವಂತೆ ಪರಮಾತ್ಮನನ್ನು ಅನುಸರಿಸುತ್ತಾನೆ.

ಪ್ರಕೃತಿಂ ಚಾಪ್ಯತಿಕ್ರಮ್ಯ ಗಚ್ಛತ್ಯಾತ್ಮಾನಮವ್ಯಯಮ್ ।
ಪರಂ ನಾರಾಯಣಾತ್ಮಾನಂ ನಿರ್ದ್ವಂದ್ವಂ ಪ್ರಕೃತೇಃ ಪರಮ್ ॥೯೧॥

ವಿಮುಕ್ತಃ ಪುಣ್ಯಪಾಪೇಭ್ಯಃ ಪ್ರವಿಷ್ಟಸ್ತಮನಾಮಯಮ್ ।
ಪರಮಾತ್ಮಾನಮಗುಣಂ ನ ನಿವರ್ತತಿ ಭಾರತ ॥೯೨॥

ಜೀವನು ಅನಾದಿಕಾಲದ ಪ್ರಕೃತಿಯನ್ನು ಅತಿಕ್ರಮಿಸಿ ನಾಶರಹಿತನಾದ ಪರಮಾತ್ಮನನ್ನು ಹೊಂದುತ್ತಾನೆ. ಪ್ರಕೃತಿಗುಣವನ್ನು ಮೀರಿನಿಂತಿರುವ, ನಿರ್ದ್ವಂದ್ವನಾದ, ಸರ್ವೋತ್ತಮನಾದ, ಸರ್ವಾಂತರ್ಯಾಮಿಯಾದ ನಾರಾಯಣನನ್ನು ಜೀವನು ಹೊಂದಿದ ಬಳಿಕ ಸಮಸ್ತ ಪುಣ್ಯಪಾಪಗಳಿಂದಲೂ ಬಿಡುಗಡೆ ಹೊಂದಿದವನಾಗಿ, ದೋಷದೂರನಾಗಿ, ಭಗವಂತನನ್ನು ಸೇರಿದವನಾಗಿ ಪರಮಾತ್ಮನ ಅಧೀನವಾಗಿ ಇರುವ ಜೀವನು ಎಂದಿಗೂ ಪ್ರಾಕೃತಿಕ ಗುಣಗಳ ಜೊತೆಗೆ ಹಿಂದಿರುಗಿ ಬರುವುದಿಲ್ಲ.

ಶಿಷ್ಟಂ ತತ್ರ ಮನಃ ಕರ್ಮಾಣೇಂದ್ರಿಯಾಣಿ ಚ ಭಾರತ ।
ಅಸೂಯಾಂತಿ ಯಥಾಕಾಲಂ ಗುರೋಃ ಸಂದೇಶಕಾರಿಣಃ ॥೯೩॥

ಪರಮಾತ್ಮನನ್ನು ಸೇರಿದ ಬಳಿಕ ಜೀವಾತ್ಮನಲ್ಲಿ ಉಳಿದಿರುವ ಚಿನ್ಮಾತ್ರವಾದ ಸ್ವರೂಪಭೂತವಾದ ಮನಸ್ಸು ಮಾತ್ರ. ಆ ಸ್ವರೂಪಭೂತವಾದ ಮನಸ್ಸು ಜೀವನಲ್ಲೇ ಅಡಕವಾದ ಸ್ವರೂಪಭೂತವಾದ ಕರ್ಮೇಂದ್ರಿಯಗಳನ್ನು, ಸ್ವರೂಪಭೂತವಾದ ಜ್ಞಾನೇಂದ್ರಿಯಗಳನ್ನು ಬೇಕಾದಂತೆ ಪ್ರೇರಣೆ ಮಾಡಿ ಬಳಸಿಕೊಳ್ಳುತ್ತದೆ. ಆ ಜೀವಾತ್ಮನಿಗೆ

ಅನುಕೂಲವಾಗುವಂತೆ ಅವನ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ವ್ಯಾಪಾರವನ್ನು ಮಾಡುತ್ತವೆ. ಅವನೆಂದಿಗೂ ದುಃಖಕ್ಕೆ ತುತ್ತಾಗುವುದಿಲ್ಲ. ಆದ್ದರಿಂದ ತನ್ನ ಯೋಗ್ಯತೆಗನುಗುಣವಾಗಿ ಪರಮಾತ್ಮನಂತೆ ಸುಖಿಯಾಗಿ ಇರುತ್ತಾನೆ. ಅವನಲ್ಲಿ ಯಾವ ದೋಷಗಳೂ ಇರುವುದಿಲ್ಲ. ಗುರುವಿನ ಆದೇಶವನ್ನು ಪಾಲನೆ ಮಾಡುವ ಶಿಷ್ಯನಂತೆ ಆ ಯೋಗಿಯ ಆದೇಶಕ್ಕನುಗುಣವಾಗಿ ಸ್ವರೂಪಭೂತವಾದ ಮನಸ್ಸು, ಇಂದ್ರಿಯಗಳು ನಡೆದುಕೊಳ್ಳುತ್ತವೆ. ಆದ್ದರಿಂದ ದುಃಖಕ್ಕೆ ಯಾವ ಕಾರಣವೂ ಇಲ್ಲ ಎಂದು ಭಾವ.

ಶಕ್ಯಂ ಚಾಲ್ಪೇನ ಕಾಲೇನ ಶಾಂತಿಂ ಪ್ರಾಪ್ತುಂ ಗುಣಾರ್ಥಿನಾ ।
ಏವಂ ಯುಕ್ತೇನ ಕೌಂತೇಯ ಯುಕ್ತಜ್ಞಾನೇನ ಮೋಕ್ಷಿಣಾ ॥೯೪॥

ಈ ರೀತಿಯಾಗಿ ಹೇಳಿದ ಸಾಂಖ್ಯಯೋಗದ ಭಾವದಿಂದ ಕೂಡಿದ, ಮೋಕ್ಷಕ್ಕೆ ಅಧಿಕಾರಿಯಾದ, ಆಧ್ಯಾತ್ಮಿಕ ಉನ್ನತಿಯನ್ನು ಹೊಂದಲು ಬಯಕೆಯುಳ್ಳ ಮನುಷ್ಯನು ಸ್ವಲ್ಪಕಾಲದಲ್ಲಿಯೇ ಶಾಂತಿಯನ್ನು ಪಡೆಯುವ ಸಾಧ್ಯತೆ ಇದೆ.

ಸಾಂಖ್ಯಾ ರಾಜನ್ಮಹಾಪ್ರಾಜ್ಞಾ ಗಚ್ಛಂತಿ ಪರಮಾಂ ಗತಿಮ್ ।
ಜ್ಞಾನೇನಾನೇನ ಕೌಂತೇಯ ತುಲ್ಯಂ ಜ್ಞಾನಂ ನ ವಿದ್ಯತೇ ॥೯೫॥

ಕುಂತೀಸುತನೇ, ಮಹಾಜ್ಞಾನಿಗಳಾದ ಸಾಂಖ್ಯಯೋಗಿಗಳು ಇಂತಹ ಜ್ಞಾನದಿಂದ ಪರಮಗತಿಯನ್ನು ಹೊಂದುತ್ತಾರೆ. ಈ ಜ್ಞಾನಕ್ಕೆ ಸಮಾನವಾದ ಜ್ಞಾನವು ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ.

ಅತ್ರ ತೇ ಸಂಶಯೋ ಮಾ ಭೂಜ್ಜ್ಞಾನಂ ಸಾಂಖ್ಯಂ ಪರಂ ಮತಮ್ ।
ಅಕ್ಷರಂ ಧ್ರುವಮವ್ಯಕ್ತಂ ಪೂರ್ವಂ ಬ್ರಹ್ಮ ಸನಾತನಮ್ ॥೯೬॥

ಈ ಯಥಾರ್ಥ ಜ್ಞಾನದ ವಿಷಯದಲ್ಲಿ ಇದರ ಉತ್ಕೃಷ್ಟತೆಯ ಬಗ್ಗೆ ನಿನಗೆ ಯಾವ ಸಂಶಯವೂ ಉಳಿಯದಿರಲಿ. ಈ ಶಾಸ್ತ್ರದಲ್ಲಿ ಎಂದೂ ನಾಶವಾಗದ, ಸ್ಥಿರವಾದ, ಸನಾತನನಾದ ಪರಬ್ರಹ್ಮನು ಪ್ರತಿಪಾದಿತನಾಗಿದ್ದಾನೆ.

ಅನಾದಿಮಧ್ಯನಿಧನಂ ನಿರ್ದ್ವಂದ್ವಂ ಕರ್ತೃ ಶಾಶ್ವತಮ್ ।
ಕೂಟಸ್ಥಂ ಚೈವ ನಿತ್ಯಂ ಚ ಯದ್ವದಂತಿ ಶಮಾತ್ಮಕಾಃ ॥೯೭॥

ಆ ಪರಬ್ರಹ್ಮನು ಆದಿ-ಮಧ್ಯಾಂತಗಳಿಂದ ದೂರನಾಗಿದ್ದಾನೆ. ವಿರುದ್ಧ ಗುಣಗಳಿಂದ, ದ್ವಂದ್ವಗಳಿಂದ ರಹಿತನಾಗಿದ್ದಾನೆ. ಜಗತ್ತಿನ ಉತ್ಪತ್ತಿಗೆ ಕಾರಣನಾಗಿದ್ದಾನೆ. ಶಾಶ್ವತನಾಗಿದ್ದಾನೆ. ಇವನನ್ನು ಜ್ಞಾನಿಗಳು ಕೂಟಸ್ಥನೆಂದು, ನಿತ್ಯನೆಂದು ಕರೆಯುತ್ತಾರೆ.

ಯತಃ ಸರ್ವಾಃ ಪ್ರವರ್ತಂತೇ ಸರ್ಗಪ್ರಲಯವಿಕ್ರಿಯಾಃ ।
ಯಚ್ಚ ಶಂಸಂತಿ ಶಾಸ್ತ್ರೇಷು ವದಂತಿ ಪರಮರ್ಷಯಃ ॥೯೮॥

ಪರಮಾತ್ಮನ ದೆಸೆಯಿಂದಲೇ ಈ ಜಗತ್ತಿನ ಸೃಷ್ಟಿ-ಪ್ರಳಯ ಮೊದಲಾದ ವಿಕಾರಗಳು ಉಂಟಾಗುತ್ತವೆಯೋ ಅಂತಹ ಪರಬ್ರಹ್ಮನನ್ನೇ ಶಾಸ್ತ್ರಗಳಲ್ಲಿ ಸ್ತುತಿಸಿದ್ದಾರೆ. ಶ್ರೇಷ್ಠರಾದ ಋಷಿಗಳೂ ಇವನ ವಿಷಯದಲ್ಲಿಯೇ ನಿರಂತರ ಮಾತನಾಡುತ್ತಾರೆ.

ಸರ್ವೇ ವಿಪ್ರಾಶ್ಚ ದೇವಾಶ್ಚ ತಥಾಗಮವಿದೋ ಜನಾಃ ।
ಬ್ರಹ್ಮಣ್ಯಂ ಪರಮಂ ದೇವಮನಂತಂ ಪರತೋಽಚ್ಯುತಮ್ ॥೯೯॥

ಪ್ರಾರ್ಥಯಂತಶ್ಚ ತಂ ವಿಪ್ರಾ ವದಂತಿ ಗುಣಬುದ್ಧಯಃ ।
ಸಮ್ಯಗ್ಯುಕ್ತಾಸ್ತಥಾ ಯೋಗಾಃ ಸಾಂಖ್ಯಾಶ್ಚಾಮಿತದರ್ಶನಾಃ ॥೧೦೦॥

ಸಮಸ್ತ ವಿಪ್ರವೃಂದವು, ದೇವತೆಗಳು, ಕ್ಷಮೆ ಹೊಂದಿರುವ ಸಜ್ಜನರು, ಯೋಗ ಸಿದ್ಧಿಯನ್ನು ಪಡೆದವರು, ಅಪಾರ ಯೋಗವುಳ್ಳ ಸಾಂಖ್ಯಯೋಗಿಗಳು ಬ್ರಾಹ್ಮಣ ಪ್ರಿಯನಾದ, ಸರ್ವೋತ್ತಮನಾದ, ಅಚ್ಯುತನಾದ, ಪರಮದೇವನಾದ ಭಗವಂತನನ್ನು ಪ್ರಾರ್ಥಿಸುತ್ತಾ ಅವನ ಗುಣಗಳನ್ನೇ ಕೀರ್ತನೆ ಮಾಡುತ್ತಾರೆ.

ಅಮೂರ್ತೇಸ್ತಸ್ಯ ಕೌಂತೇಯ ಸಾಂಖ್ಯಂ ಮೂರ್ತಿರಿತಿ ಶ್ರುತಿಃ ।
ಅಭಿಜ್ಞಾನಾನಿ ತಸ್ಯಾಹುರ್ಮತಂ ಹಿ ಭರತರ್ಷಭ ॥೧೦೧॥

ಪ್ರಾಕೃತ ಮೂರ್ತಿರಹಿತನಾದ ಭಗವಂತನಿಗೆ ಯಥಾರ್ಥ ಜ್ಞಾನವೇ ಕರಚರಣಾದಿ ಆಕಾರವುಳ್ಳ ಶರೀರವಾಗಿದೆ. ಪರಬ್ರಹ್ಮನನ್ನು ಚೆನ್ನಾಗಿ ತಿಳಿಸಿಕೊಡುವಂತಹ ಶಾಸ್ತ್ರವೇ ಸಾಂಖ್ಯಶಾಸ್ತ್ರವೆನಿಸಿದೆ.

ದ್ವಿವಿಧಾನೀಹ ಭೂತಾನಿ ಪೃಥಿವ್ಯಾಂ ಪೃಥಿವೀಪತೇ ।
ಜಂಗಮಾಗಮಸಂಜ್ಞಾನಿ ಜಂಗಮಂ ತು ವಿಶಿಷ್ಯತೇ ॥೧೦೨॥

ಪೃಥಿವೀಪತಿಯೇ, ಜಗತ್ತಿನಲ್ಲಿ ಜಂಗಮ-ಸ್ಥಾವರ ಎಂಬ ಎರಡು ವಿಧ ಪ್ರಾಣಿಗಳಿವೆ. ಎರಡು ಬಗೆಯ ಪ್ರಾಣಿಗಳಲ್ಲಿ ಸ್ಥಿರವಾದ ಗಿಡ-ಮರಗಳಿಗಿಂತಲೂ ಚಲಿಸುವ ಪ್ರಾಣಿಗಳು ಶ್ರೇಷ್ಠವಾದವುಗಳು.

ಜ್ಞಾನಂ ಮಹದ್ ಯದ್ಧಿ ಮಹತ್ಸು ರಾಜನ್
ವೇದೇಷು ಸಾಂಖ್ಯೇಷು ತಥೈವ ಯೋಗೇ ।
ಯಚ್ಚಾಪಿ ದೃಷ್ಟಂ ವಿವಿಧಂ ಪುರಾಣಂ
ಸಾಂಖ್ಯಾಗತಂ ತನ್ನಿಖಿಲಂ ನರೇಂದ್ರ ॥೧೦೩॥

ಮಹಾರಾಜನೇ, ಮಹಾತ್ಮರಾದ ಬ್ರಹ್ಮಜ್ಞಾನಿಗಳಲ್ಲಿ, ವೇದಗಳಲ್ಲಿ, ಸಾಂಖ್ಯ ದರ್ಶನಗಳಲ್ಲಿ, ಯೋಗಶಾಸ್ತ್ರಗಳಲ್ಲಿ, ಪುರಾಣಗಳಲ್ಲಿ, ನಾನಾ ಪ್ರಕಾರಗಳಾದ ಭಗವದ್ವಿಷಯಕ ಜ್ಞಾನಗಳು ಏನು ಕಂಡುಬಂದಿವೆಯೋ ಅವೆಲ್ಲವೂ ಸಾಂಖ್ಯ ಯೋಗದಿಂದಲೇ ಬಂದವುಗಳೆಂದು ತಿಳಿ.

ಯಚ್ಚೇತಿಹಾಸೇಷು ಮಹತ್ಸು ದೃಷ್ಟಂ
ಯಚ್ಚಾರ್ಥಶಾಸ್ತ್ರೇ ನೃಪ ಶಿಷ್ಟಜುಷ್ಟೇ ।
ಜ್ಞಾನಂ ಚ ಲೋಕೇ ಯದಿಹಾಸ್ತಿ ಕಿಂಚಿತ್
ಸಾಂಖ್ಯಾಗತಂ ತಚ್ಚ ಮಹನ್ಮಹಾತ್ಮನ್ ॥೧೦೪॥

ಮಹಾತ್ಮನೇ, ಅತಿಶಯವಾದ ಇತಿಹಾಸಗಳಲ್ಲಿ, ಸತ್ಪುರುಷರಿಂದ ಸೇವಿಸಲ್ಪಡುತ್ತಿರುವ ಅರ್ಥ-ಶಾಸ್ತ್ರಗಳಲ್ಲಿ ಯಾವ ಜ್ಞಾನವು ಕಂಡುಬರುವುದೋ ಅದೂ ಸಾಂಖ್ಯಯೋಗದಿಂದಲೇ. ಪ್ರಪಂಚದಲ್ಲಿ ಉತ್ಕೃಷ್ಟಜ್ಞಾನವೆಂಬುದು ಯಾವುದಿದೆಯೋ ಅದೂ ಸಾಂಖ್ಯಶಾಸ್ತ್ರದಿಂದಲೇ ಬಂದಿರುವುದಾಗಿದೆ.

ಶಮಶ್ಚ ದೃಷ್ಟಃ ಪರಮಂ ಬಲಂ ಚ
ಜ್ಞಾನಂ ಚ ಸೂಕ್ಷ್ಮಂ ಚ ಯಥಾವದುಕ್ತಮ್ ।
ತಪಾಂಸಿ ಸೂಕ್ಷ್ಮಾಣಿ ಸುಖಾನಿ ಚೈವ
ಸಾಂಖ್ಯೇ ಯಥಾವದ್ ವಿಹಿತಾನಿ ರಾಜನ್ ॥೧೦೫॥

ಸಾಂಖ್ಯಯೋಗದಲ್ಲಿ ಶಮದ ವಿಷಯವಾಗಿ ಹೇಳಲ್ಪಟ್ಟಿದೆ. ಶ್ರೇಷ್ಠವಾದ ಬಲ ಎಂಬುದು ಯಾವುದು? ಅದನ್ನು ಹೇಗೆ ಸಂಪಾದಿಸಿಕೊಳ್ಳಬೇಕು? ಸೂಕ್ಷ್ಮಜ್ಞಾನವು ಯಾವುದು? ತಪಸ್ಸೆಂದರೆ ಯಾವುದು? ಅದರಿಂದ ಲಭಿಸುವ ಸುಖಗಳ್ಯಾವುವು? ಇವೆಲ್ಲವೂ ವಿಷದವಾಗಿ ತಿಳಿಸಲ್ಪಟ್ಟಿವೆ.

ವಿಪರ್ಯಯೇ ತಸ್ಯ ಹಿ ಪಾರ್ಥ ದೇವಾನ್
ಗಚ್ಛಂತಿ ಸಾಂಖ್ಯಾಃ ಸತತಂ ಸುಖೇನ ।
ತಾಂಶ್ಚಾನುಸಂಚಿರ್ಯ ತತಃ ಕೃತಾರ್ಥಾಃ
ಪತಂತಿ ವಿಪ್ರೇಷು ಯತೇಷು ಭೂಯಃ ॥೧೦೬॥

ಮೋಕ್ಷಕ್ಕಿಂತ ವಿಪರೀತವಾದ ಪ್ರವೃತ್ತಿ ಕರ್ಮದಲ್ಲಿ ಕೆಲವೊಮ್ಮೆ ಆಸಕ್ತರಾದರೂ ಸಾಂಖ್ಯತತ್ತ್ವವನ್ನು ಆಶ್ರಯಿಸಿ ದೇವತೆಗಳು ಸಾಧನ ಮಾರ್ಗವನ್ನು ಅವಲಂಬಿಸುತ್ತಾರೆ. ಪ್ರವೃತ್ತಿ ಕರ್ಮದಲ್ಲಿ ಸಂಚರಿಸಿ ಕೃತಾರ್ಥರಾದ ವ್ಯಕ್ತಿಗಳು ಪುನಃ ಜಿತೇಂದ್ರಿಯರಾದ ಬ್ರಾಹ್ಮಣ ಯೋನಿಯಲ್ಲಿ ಜನ್ಮವನ್ನು ತಾಳುತ್ತಾರೆ.

ಹಿತ್ವಾ ಚ ದೇಹಂ ಪ್ರವಿಶಂತಿ ಮೋಕ್ಷಂ
ದಿವೌಕಸೋ ದ್ಯಾಮಿವ ಪಾರ್ಥ ಸಾಂಖ್ಯಾಃ ।
ತತೋಽಧಿಕಂ ತೇಽಭಿರತಾ ಮಹಾರ್ಹೇ
ಸಾಂಖ್ಯೇ ದ್ವಿಜಾಃ ಪಾರ್ಥಿವ ಶಿಷ್ಟಜುಷ್ಟೇ ॥೧೦೭॥

ಕೌಂತೇಯನೇ, ಆಯಾ ದೇಹಗಳಲ್ಲಿ ಸಾಧನೆಯನ್ನು ಮಾಡಿಕೊಂಡು, ಆ ದೇಹವನ್ನು ತ್ಯಜಿಸಿ ದೇವತೆಗಳು ಸ್ವರ್ಗವನ್ನು ಸೇರುವಂತೆ ಸಾಂಖ್ಯಯೋಗಿಗಳು ಮೋಕ್ಷಕ್ಕೆ ಸಾಗುತ್ತಾರೆ. ಆದ್ದರಿಂದ ಶಿಷ್ಟಪುರುಷರಿಂದ ಸೇವಿಸಲ್ಪಡುವ, ಪೂಜೆಗೆ ಅರ್ಹವಾದ ಸಾಂಖ್ಯಶಾಸ್ತ್ರದ ವಿಷಯದಲ್ಲಿ ಎಲ್ಲ ದ್ವಿಜರು ಹೆಚ್ಚಿನ ಆಸಕ್ತಿಯುಳ್ಳವರಾಗಿರುತ್ತಾರೆ.

ತೇಷಾಂ ಗತಿರ್ಯದ್ ಗಮನಂ ಹಿ ದೃಷ್ಟಂ
ನಾವಾಗ್ಗತಿಃ ಪಾಪಕೃತಾಂ ನಿವಾಸಃ ।
ನ ಚಾಬುಧಾನಾಮಪಿ ತೇ ದ್ವಿಜಾತಯೋ
ಯೇ ಜ್ಞಾನಮೇತನ್ನಪತೇಽನುರಕ್ತಾಃ ॥೧೦೮॥

ಸಾಂಖ್ಯಶಾಸ್ತ್ರದಲ್ಲಿ ಯಾರು ಆಸಕ್ತರಾಗಿರುತ್ತಾರೋ ಅಂತಹ ವ್ಯಕ್ತಿಗಳು ಮರಣೋನ್ಮುಖರಾದ ಬಳಿಕ ತಿರ್ಯಗ್ಯೋನಿಗಳಲ್ಲಿ ಹುಟ್ಟುವುದಿಲ್ಲ. ನರಕಕ್ಕೂ ಹೋಗುವುದಿಲ್ಲ. ಪಾಪಿಗಳ ಮಧ್ಯೆ, ದಡ್ಡರ ಮಧ್ಯೆ ಜನ್ಮವನ್ನು ತಾಳುವುದಿಲ್ಲ. ಉತ್ತಮವಾದ ಮೋಕ್ಷಗಮನವನ್ನೇ ಹೊಂದಿದವರಾಗಿರುತ್ತಾರೆ.

ಸಾಂಖ್ಯಂ ವಿಶಾಲಂ ಪರಮಂ ಪುರಾಣಂ
ಮಹಾರ್ಣವಂ ವಿಮಲಮುದಾರಕಾಂತಮ್ ।
ಕೃತ್ಸ್ನಂ ಚ ಸಾಂಖ್ಯಂ ನೃಪತೇ ಮಹಾತ್ಮಾ
ನಾರಾಯಣೋ ಧಾರಯತೇಽಪ್ರಮೇಯಮ್ ॥೧೦೯॥

ಸಾಂಖ್ಯಯೋಗವು ವಿಶಾಲವಾದುದು, ಪ್ರಾಚೀನವಾದುದು. ಮಹಾಸಾಗರದಂತೆ ಅಗಾಧವೂ, ನಿರ್ಮಲವೂ, ಉದಾರಭಾವದಿಂದ ಪೂರ್ಣವೂ, ಸುಂದರವೂ ಆಗಿದೆ. ಷಡ್ಗುಣೈಶ್ವರ್ಯ ಸಂಪನ್ನನಾದ ನಾರಾಯಣನನು ಅಪ್ರಮೇಯವಾದ ಈ ಸಮಗ್ರ ಸಾಂಖ್ಯತತ್ತ್ವವನ್ನು ಧರಿಸಿರುತ್ತಾನೆ.

ಏತನ್ಮಯೋಕ್ತಂ ನರದೇವ ತತ್ತ್ವಂ
ನಾರಾಯಣೋ ವಿಶ್ವಮಿದಂ ಪುರಾಣಮ್ ।
ಸ ಸರ್ಗಕಾಲೇ ಚ ಕರೋತಿ ಸರ್ಗಂ
ಸಂಹಾರಕಾಲೇ ಚ ತದತ್ತಿ ಭೂಯಃ ॥೧೧೦॥

ನರದೇವನೇ, ಇಂತಹ ಶ್ರೇಷ್ಠವಾದ ಸಾಂಖ್ಯತತ್ತ್ವವನ್ನು ನಿನಗೆ ಉಪದೇಶಿಸಿದ್ದೇನೆ. ಪುರಾತನವಾದ ಜಗತ್ತು ನಾರಾಯಣನಿಂದ ಸೃಷ್ಟವಾಗಿದೆ. ಆ ಸೃಷ್ಟಿಯ ಸಮಯದಲ್ಲಿ ಜಗತ್ತನ್ನು ಸೃಷ್ಟಿಸಿ ಪುನಃ ಸಂಹಾರ ಕಾಲದಲ್ಲಿ ತನ್ನಲ್ಲೇ ಲಯಗೊಳಿಸುತ್ತಾನೆ. ಈ ಜಗತ್ತಿನ ಅಂತರ್ಯಾಮಿಯಾದ ನಾರಾಯಣನು ಸಮಗ್ರವಾದ ಜಗತ್ತನ್ನು ತನ್ನಲ್ಲೇ ಲಯ ಮಾಡಿಕೊಂಡು ವಿಶಾಲವಾದ ಪ್ರಳಯ ಕಾಲದ ಸಮುದ್ರದಲ್ಲಿ ಪವಡಿಸುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಚತುಸ್ತ್ರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೈದನೆಯ ಅಧ್ಯಾಯ

ವಸಿಷ್ಠ ಕರಾಲ ಜನಕರ ಸಂವಾದ. ಕ್ಷರ-ಅಕ್ಷರ ತತ್ತ್ವಗಳ ನಿರೂಪಣೆ ಮತ್ತು ಅವುಗಳ ಜ್ಞಾನದಿಂದ ಸಿಗುವ ಫಲ.

ಯುಧಿಷ್ಠಿರಃ

ಕಿಂ ತದಕ್ಷರಮಿತ್ಯುಕ್ತಂ ಯಸ್ಮಾನ್ನಾವರ್ತತೇ ಪುನಃ ।
ಕಿಂ ಚ ತತ್ಕ್ಷರಮಿತ್ಯುಕ್ತಂ ಯಸ್ಮಾದಾವರ್ತತೇ ಪುನಃ ॥೧॥

ಯುಧಿಷ್ಠಿರ– ಪಿತಾಮಹನೇ, ಯಾವುದನ್ನು ಹೊಂದಿದ ಬಳಿಕ ಪುನಃ ಮರಳಿ ಈ ಸಂಸಾರಕ್ಕೆ ಬರುವುದಿಲ್ಲವೋ ಅಂತಹ ಅಕ್ಷರ ಪುರುಷನ ಲಕ್ಷಣವೇನು? ಯಾವುದನ್ನು ಹೊಂದುವುದರಿಂದ ಪುನಃ ಈ ಸಂಸಾರ ಸ್ಥಿತಿಯನ್ನು ಹೊಂದುತ್ತಾನೋ ಅಂತಹ ಕ್ಷರ ವಸ್ತುವಿನ ಲಕ್ಷಣವಾದರೂ ಏನು?

ಅಕ್ಷರಕ್ಷರಯೋರ್ವ್ಯಕ್ತಿಮಿಚ್ಛಾಮ್ಯರಿನಿಷೂದನ ।
ಉಪಲಬ್ಧುಂ ಮಹಾಬಾಹೋ ತತ್ತ್ವೇನ ಕುರುನಂದನ ॥೨॥

ಶತ್ರುಗಳನ್ನು ಸದೆಬಡಿದವನೇ, ಮಹಾಬಾಹುವೇ, ಕುರುಶ್ರೇಷ್ಠನೇ, ಕ್ಷರ ಮತ್ತು ಅಕ್ಷರ ಪುರುಷರ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಳ್ಳುವ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ತ್ವಂ ಹಿ ಜ್ಞಾನನಿಧಿರ್ವಿಪ್ರೈರುಚ್ಯಸೇ ವೇದಪಾರಗೈಃ ।
ಋಷಿಭಿಶ್ಚ ಮಹಾಭಾಗೈರ್ಯತಿಭಿಶ್ಚ ಮಹಾತ್ಮಭಿಃ ॥೩॥

ವೇದಾಂತವನ್ನು ತಿಳಿದ, ಮಹಾಭಾಗ್ಯಶಾಲಿಗಳಾದ ಋಷಿಗಳು, ಮಹಾತ್ಮರಾದ ಯತಿಗಳು ನಿನ್ನನ್ನೇ ಜ್ಞಾನನಿಧಿ ಎಂದು ಹೇಳುತ್ತಾರೆ.

ಶೇಷಮಲ್ಪಂ ದಿನಾನಾಂ ತೇ ದಕ್ಷಿಣಾಯನಭಾಸ್ಕರೇ ।
ಆವೃತ್ತೇ ಭಗವತ್ಯರ್ಕೇ ಗಂತಾಸಿ ಪರಮಾಂ ಗತಿಮ್ ॥೪॥

ಸೂರ್ಯನು ಈಗ ದಕ್ಷಿಣಾಯನದಲ್ಲಿ ಇರುತ್ತಾನೆ. ನಿನ್ನ ಆಯುಷ್ಯದ ಕೆಲವೇ ದಿವಸಗಳು ಉಳಿದುಕೊಂಡಿರುತ್ತವೆ. ಪೂಜ್ಯನಾದ ಸೂರ್ಯನು ಉತ್ತರಾಯಣಕ್ಕೆ ಬಂದ ಕೂಡಲೇ ನೀನು ಪರಮಗತಿಯನ್ನು ಹೊಂದಲಿರುವಿ.

ತ್ವಯಿ ಪ್ರತಿಗತೇ ಶ್ರೇಯಃ ಕುತಃ ಶ್ರೋಷ್ಯಾಮಹೇ ವಯಮ್ ।
ಕುರುವಂಶಪ್ರದೀಪಸ್ತ್ವಂ ಜ್ಞಾನದ್ರವ್ಯೇಣ ದೀಪ್ಯಸೇ ॥೫॥

ನೀನು ಉತ್ತಮ ಸ್ಥಾನವನ್ನು ಸೇರಿದ ಬಳಿಕ ನಮ್ಮ ಬದುಕಿಗೆ ಬೇಕಾದ ಶ್ರೇಯಸ್ಸಿನ ಬಗ್ಗೆ ನಾವು ಯಾರಿಂದ ಕೇಳೋಣ? ಕುರುವಂಶವನ್ನು ಬೆಳಗಿದ ನೀನು ಜ್ಞಾನದ ಬೆಳಕಿನಿಂದ ಬೆಳಗುತ್ತಿರುವೆ.

ತದೇತಚ್ಛ್ರೋತುಮಿಚ್ಛಾಮಿ ತತ್ತ್ವತಃ ಕುರುಕುಲೋದ್ವಹ ।
ನ ತೃಪ್ಯಾಮೀಹ ರಾಜೇಂದ್ರ ಶೃಣ್ವನ್ನಮೃತಮೀದೃಶಮ್ ॥೬॥

ಕುರುಕುಲಶ್ರೇಷ್ಠನೇ, ರಾಜೇಂದ್ರನೇ, ಆದ್ದರಿಂದ ನಿನ್ನ ಮೂಲಕ ಈ ಸಮಸ್ತ ವಿಷಯವನ್ನು ತಿಳಿಯಬಯಸಿರುವೆ. ನಿನ್ನಿಂದ ಅಮೃತಮಯವಾದ ಪ್ರವಚನವನ್ನು ಕೇಳುತ್ತಿರುವುದರಿಂದ ತೃಪ್ತಿ ಎಂಬುದಿಲ್ಲ. ಮತ್ತೂ ಕೇಳಬೇಕೆಂದಿರುವ ನನಗೆ ಕ್ಷರಾಕ್ಷರಗಳ ಬಗ್ಗೆ ವಿವರಿಸು.

ಭೀಷ್ಮಃ

ಅತ್ರ ತೇ ವರ್ತಯಿಷ್ಯೇಽಹಮಿತಿಹಾಸಂ ಪುರಾತನಮ್ ।
ವಸಿಷ್ಠಸ್ಯ ಚ ಸಂವಾದಂ ಕರಾಲಜನಕಸ್ಯ ಚ ॥೭॥

ಭೀಷ್ಮ– ಯುಧಿಷ್ಠಿರನೇ, ಇದೇ ವಿಷಯದಲ್ಲಿ ನಾನು ನಿನಗೆ ಹಿಂದೆ ನಡೆದ ವಸಿಷ್ಠ ಮತ್ತು ಕರಾಲಜನಕನ ಪುರಾತನವಾದ, ಇತಿಹಾಸರೂಪವಾದ ಸಂವಾದವನ್ನು ತಿಳಿಸುತ್ತೇನೆ.

ವಸಿಷ್ಠಂ ಶ್ರೇಷ್ಠಮಾಸೀನಮೃಷೀಣಾಂ ಭಾಸ್ಕರದ್ಯುತಿಮ್ ।
ಪಪ್ರಚ್ಛ ಜನಕೋ ರಾಜಾ ಜ್ಞಾನಂ ನೈಃಶ್ರೇಯಸಂ ಪರಮ್ ॥೮॥

ಹಿಂದೊಮ್ಮೆ ಕರಾಲಜನಕನು ಶ್ರೇಷ್ಠ ಋಷಿಗಳಾದ, ಸೂರ್ಯಸಮಾನ ತೇಜಸ್ವಿಯಾದ, ಸುಖವಾಗಿ ಕುಳಿತಿದ್ದ ವಸಿಷ್ಠರನ್ನು ಸಮೀಪಿಸಿ ಆತ್ಯಂತಿಕ ಸುಖಕ್ಕೆ ಕಾರಣವಾದ ಜ್ಞಾನ ಯಾವುದೆಂಬುದನ್ನು ಪ್ರಶ್ನಿಸಿದನು.

ಪರಮಧ್ಯಾತ್ಮಕುಶಲಮಧ್ಯಾತ್ಮಗತಿನಿಶ್ಚಯಮ್ ।
ಮೈತ್ರಾವರುಣಿಮಾಸೀನಮಭಿವಾದ್ಯ ಕೃತಾಂಜಲಿಃ ॥೯॥

ಅಧ್ಯಾತ್ಮ ವಿದ್ಯೆಯಲ್ಲಿ ಜ್ಞಾನಿಗಳಾದ, ಅಧ್ಯಾತ್ಮ ಮಾರ್ಗದಲ್ಲಿ ನಿಶ್ಚಯವಾದ ಜ್ಞಾನವನ್ನು ಹೊಂದಿರುವ ಮಿತ್ರಾವರುಣರ ಮಕ್ಕಳಾದ ವಸಿಷ್ಠರ ಬಳಿ ಹೋಗಿ ಮಹರ್ಷಿಗಳನ್ನು ನಮಸ್ಕರಿಸಿದನು.

ಸ್ಫಟಿಕರಂ ಪ್ರಶ್ರಿತಂ ವಾಕ್ಯಂ ಮಧುರಂ ಚಾಪ್ಯನುಲ್ಬಣಮ್ ।
ಪಪ್ರಚ್ಛರ್ಷಿವರಂ ರಾಜಾ ಕರಾಲಜನಕಃ ಪುರಾ ॥೧೦॥

ಕೈಮುಗಿದು ಒಳ್ಳೆಯ ಅಕ್ಷರ ಸಂಪತ್ತಿನಿಂದ ಕೂಡಿದ, ಜ್ಞೇಯ ಪೂರ್ಣವಾದ, ಮಧುರವಾದ, ಕರ್ಕಶವಲ್ಲದ ಮಾತುಗಳಿಂದ ಕರಾಲಜನಕನು ಕಶ್ಯಪರನ್ನು ಹೀಗೆ ಪ್ರಶ್ನಿಸಿದನು.

ಭಗವನ್ ಶ್ರೋತುಮಿಚ್ಛಾಮಿ ಪರಂ ಬ್ರಹ್ಮ ಸನಾತನಮ್ ।
ಯಸ್ಮಾನ್ನ ಪುನರಾವೃತ್ತಿಮಾಪ್ನುವಂತಿ ಮನೀಷಿಣಃ ॥೧೧॥

ಪೂಜ್ಯರೇ, ಯಾವ ಸ್ಥಾನದಿಂದ ಮನುಷ್ಯರು ಪುನಃ ಈ ಸಂಸಾರಕ್ಕೆ ಮರಳಿ ಬರುವುದಿಲ್ಲವೋ ಅಂತಹ ಸನಾತನನಾದ ಪರಬ್ರಹ್ಮನ ಬಗ್ಗೆ ನಿಮ್ಮ ಬಳಿ ಕೇಳಲು ಬಯಸುತ್ತೇನೆ.

ಯಚ್ಚ ತತ್ಕ್ಷರಮಿತ್ಯುಕ್ತಂ ಯತ್ರೇದಂ ಕ್ಷರತೇ ಜಗತ್ ।
ಯಚ್ಚಾಕ್ಷರಮಿತಿ ಪ್ರೋಕ್ತಂ ಶಿವಂ ಕ್ಷೇಮ್ಯಮನಾಮಯಮ್ ॥೧೨॥

ಯಾವುದು ಕ್ಷರವೆಂದು ಹೇಳಲ್ಪಡುತ್ತದೆ? ಜಗತ್ತೆಲ್ಲವೂ ಯಾವ ವಸ್ತುವಿನಲ್ಲಿ ನಾಶವನ್ನು ಹೊಂದುತ್ತದೆ? ಯಾವುದು ಮಂಗಳಕರವಾಗಿಯೂ, ಕ್ಷೇಮಕರವಾಗಿಯೂ, ಯಾವುದೇ ದೋಷಗಳಿಲ್ಲದೆ ಇರುವ ಅಕ್ಷರವೆಂದು ಹೇಳಲ್ಪಟ್ಟಿದೆ? ಈ ವಿಷಯವನ್ನು ನಿಮ್ಮಿಂದ ತಿಳಿಯಬಯಸುತ್ತೇನೆ.

ವಸಿಷ್ಠಃ

ಶ್ರೂಯತಾಂ ಪೃಥಿವೀಪಾಲ ಕ್ಷರತೀದಂ ಯಥಾ ಜಗತ್ ।
ಯನ್ನ ಕ್ಷರತಿ ಪೂರ್ವೇಣ ಯಾವತ್ ಕಾಲೇನ ಚಾಪ್ಯಥ ॥೧೩॥

ವಸಿಷ್ಠರು– ಭೂಪಾಲನೇ, ಈ ಜಗತ್ತೆಲ್ಲವೂ ಹೇಗೆ ವಿಕಾರವನ್ನು ಹೊಂದುತ್ತದೆ

ಎಂಬ ವಿಷಯವನ್ನು, ಯಾವುದು ವಿಕಾರ ಹೊಂದುವುದಿಲ್ಲ ಎಂಬ ವಿಷಯವನ್ನು ಹೇಳುತ್ತೇನೆ, ಕೇಳು.

ಯುಗಂ ದ್ವಾದಶಸಾಹಸ್ರಂ ಕಲ್ಪಂ ವಿದ್ಧಿ ಚತುರ್ಯುಗಮ್ ।
ದಶಕಲ್ಪಶತಾವೃತ್ತಂ ತದಹರ್ಬ್ರಹ್ಮಮುಚ್ಯತೇ ।
ರಾತ್ರಿಶ್ಚೈತಾವತೀ ರಾಜನ್ ಯಸ್ಯಾಂತೇ ಪ್ರತಿಬುದ್ಧ್ಯತೇ ॥೧೪॥

ದೇವತೆಗಳ ಲೆಕ್ಕದ ಪ್ರಕಾರ ಹನ್ನೆರಡು ಸಾವಿರ ವರ್ಷಗಳಿಗೆ ಒಂದು ಚತುರ್ಯುಗವಾಗುತ್ತದೆ. ಇದನ್ನು ಕಲ್ಪವೆಂದು ಅಥವಾ ಮಹಾಯುಗವೆಂದು ಕರೆಯುತ್ತಾರೆ. ಇಂತಹ ಒಂದು ಸಾವಿರ ಕಲ್ಪಗಳು ಅಥವಾ ಮಹಾಯುಗವು ಬ್ರಹ್ಮನಿಗೆ ಒಂದು ದಿವಸವಾಗುತ್ತದೆ. ಬ್ರಹ್ಮನ ರಾತ್ರಿಯು ಒಂದು ಸಾವಿರ ಕಲ್ಪ ಪರಿಮಾಣವುಳ್ಳದ್ದೇ ಆಗಿದೆ. ಇಂತಹ ಒಂದು ಹಗಲು-ರಾತ್ರಿಯು ಕಳೆದ ಬಳಿಕ ಬ್ರಹ್ಮನು ಸೃಷ್ಟಿಗಾಗಿ ಎಚ್ಚರಗೊಳ್ಳುತ್ತಾನೆ.

ಸೃಜತ್ಯನಂತಕರ್ಮಾಣಂ ಮಹಾಂತಂ ಭೂತಮಗ್ರಜಮ್ ।
ಮೂರ್ತಿಮಂತಮಮೂರ್ತಾತ್ಮಾ ವಿಶ್ವಂ ಶಂಭುಃ ಸ್ವಯಂಭುವಮ್ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನಂ ಜ್ಯೋತಿರವ್ಯಯಮ್ ॥೧೫॥

ಶಂಭು ಎನಿಸಿದ ನಾರಾಯಣನು ಅನಂತ ಕರ್ಮಗಳಿಂದ ಕೂಡಿದ, ಅನಂತ ಮೂರ್ತಿಗಳಿಂದ ಕೂಡಿರುವ, ಮಹಾಭೂತನಾದ, ಎಲ್ಲರಿಗೂ ಹಿರಿಯನಾದ, ಮೂರ್ತಸ್ವರೂಪನಾದ, ವಿಶ್ವರೂಪನಾದ, ಸ್ವಯಂಭು ಎನಿಸಿದ ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸುತ್ತಾನೆ. ಈ ಸ್ವಯಂಭು ಎನಿಸಿದ ಚತುರ್ಮುಖ ಬ್ರಹ್ಮನಾದರೂ ಅಣಿಮಾ, ಲಘಿಮಾ, ಪ್ರಾಪ್ತಿ, ಈಶಾನ, ಜ್ಯೋತಿ, ಅವ್ಯಯ ಇವೇ ಮೊದಲಾದ ಸಿದ್ಧಿಗಳನ್ನು ಪಡೆದಿರುತ್ತಾನೆ.

ಸರ್ವತಃಪಾಣಿಪಾದಾಂತಂ ಸರ್ವತೋಕ್ಷಿಶಿರೋಮುಖಮ್ ।
ಸರ್ವತಃಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೬॥

ಎಲ್ಲ ಕಡೆಯಲ್ಲೂ ವ್ಯಾಪ್ತವಾದ ಕೈ-ಕಾಲುಗಳಿಂದಲೂ, ಕಣ್ಣು-ಶಿರಸ್ಸುಗಳಿಂದಲೂ, ಮುಖಗಳಿಂದಲೂ ಕೂಡಿರುವ, ಎಲ್ಲ ಕಡೆಯಲ್ಲಿಯೂ ಕಿವಿಗಳನ್ನು ಹೊಂದಿರುವ ಪರಮಾತ್ಮನು ಎಲ್ಲವನ್ನೂ ಆವರಿಸಿ ನಿಂತಿರುತ್ತಾನೆ.

ಹಿರಣ್ಯಗರ್ಭೋ ಭಗವಾನೇಷ ಬುದ್ಧಿರಿತಿ ಸ್ಮೃತಃ ।
ಮಹಾನಿತಿ ಚ ಯೋಗೇಷು ವಿರಿಂಚ ಇತಿ ಚಾಪ್ಯಜಃ ॥೧೭॥

ಷಡ್ಗುಣಪೂರ್ಣನಾದ ಹಿರಣ್ಯಗರ್ಭನು ಬುದ್ಧಿ ಎಂದು ಹೇಳಲ್ಪಡುತ್ತಾನೆ. ಯೋಗಶಾಸ್ತ್ರದಲ್ಲಿ ಇವನನ್ನೇ ವಿರಿಂಚಿ, ಮಹತ್, ಅಜ ಎಂದು ಕರೆಯುತ್ತಾರೆ.

ಸಾಂಖ್ಯೇ ಚ ಪಠ್ಯತೇ ಶಾಸ್ತ್ರೇ ನಾಮಭಿರ್ಬಹುಧಾತ್ಮಕಃ ।
ವಿಚಿತ್ರರೂಪೋ ವಿಶ್ವಾತ್ಮಾ ಏಕಾಕ್ಷರ ಇತಿ ಸ್ಮೃತಃ ॥೧೮॥

ಸಾಂಖ್ಯಶಾಸ್ತ್ರದಲ್ಲಿಯೂ ಅನೇಕ ನಾಮಗಳಿಂದ ಇವನ ವರ್ಣನೆಯು ಇದೆ. ವಿಚಿತ್ರರೂಪ, ವಿಶ್ವಾತ್ಮ, ಏಕಾಕ್ಷರ ಎಂದು ಕರೆಯಲ್ಪಡುತ್ತಾನೆ.

ವೃತಂ ನೈಕಾತ್ಮಕಂ ಯೇನ ಕೃತ್ಸ್ನಂ ತ್ರೈಲೋಕ್ಯಮಾತ್ಮನಾ ।
ತಥೈವ ಬಹುರೂಪತ್ವಾದ್ ವಿಶ್ವರೂಪ ಇತಿ ಸ್ಮೃತಃ ॥೧೯॥

ಈ ಹಿರಣ್ಯಗರ್ಭನು ನಾನಾ ರೂಪವಾದ ಜಗತ್ತನ್ನು ಸೃಷ್ಟಿಸಿ, ಆ ಜಗತ್ತಿನಲ್ಲಿ ವ್ಯಾಪಿಸಿರುವುದರಿಂದ ವಿಶ್ವರೂಪನೆಂದು ಕರೆಯಲ್ಪಡುತ್ತಾನೆ.

ಏಷ ವೈ ವಿಕ್ರಿಯಾಪನ್ನಃ ಸೃಜತ್ಯಾತ್ಮಾನಮಾತ್ಮನಾ ।
ಅಹಂಕಾರಂ ಮಹಾತೇಜಾಃ ಪ್ರಜಾಪತಿಮಹಂಕೃತಮ್ ॥೨೦॥

ಮಹಾತೇಜಸ್ವಿಯಾದ, ಪೂಜ್ಯನಾದ ಹಿರಣ್ಯಗರ್ಭನು ವಿಕಾರವನ್ನು ಹೊಂದಿ ಅಹಂಕಾರವೆಂಬ ತತ್ತ್ವವನ್ನು, ಅದರ ಅಭಿಮಾನಿಯಾದ ಪ್ರಜಾಪತಿಯನ್ನು ತನ್ನ ಮೂಲಕ ಸೃಷ್ಟಿಸಿರುತ್ತಾನೆ.

ಅವ್ಯಕ್ತಾದ್ ವ್ಯಕ್ತಮುತ್ಪನ್ನಂ ವಿದ್ಯಾಸರ್ಗಂ ವದಂತಿ ತಮ್ ।
ಮಹಾಂತಂ ಚಾಪ್ಯಹಂಕಾರಮವಿದ್ಯಾಸರ್ಗಮೇವ ಚ ॥೨೧॥

ಅವ್ಯಕ್ತ ತತ್ತ್ವದಿಂದ ವ್ಯಕ್ತವೆನಿಸಿದ ಮಹತ್ತತ್ತ್ವವು ಸೃಷ್ಟಿಹೊಂದಿದೆ. ಮಹತ್ತತ್ತ್ವ, ಅಹಂಕಾರ ತತ್ತ್ವಗಳಿಗೆ ಗುರುವಾಗಿರುವುದರಿಂದ ಅವ್ಯಕ್ತ ತತ್ತ್ವವನ್ನು ವಿದ್ಯಾ ಸ್ವರ್ಗವೆನ್ನುತ್ತಾರೆ. ಮಹತ್ತತ್ತ್ವ, ಅಹಂಕಾರತತ್ತ್ವಗಳಿಗೆ ಅವಿದ್ಯಾ ಸ್ವರ್ಗ ಎಂದು ಹೆಸರು.

ಅಪರಶ್ಚ ಪರಶ್ಚೈವ ಸಮುತ್ಪನ್ನೌ ತಥೈಕತಃ ।
ವಿದ್ಯಾವಿದ್ಯೇತಿ ವಿಖ್ಯಾತೇ ಶ್ರುತಿಶಾಸ್ತ್ರಾರ್ಥಚಿಂತಕೈಃ ॥೨೨॥

ಅಪರ ಎನಿಸಿದ ಅಹಂಕಾರ ತತ್ತಾ ಭಿಮಾನಿಯಾದ ರುದ್ರನು, ಪರ ಎನಿಸಿದ ಚತುರ್ಮುಖ ಬ್ರಹ್ಮನು ಒಬ್ಬನೇ ನಾರಾಯಣನಿಂದ ಉತ್ಪತ್ತಿಯನ್ನು ಹೊಂದಿರುತ್ತಾರೆ. ಚತುರ್ಮುಖ ಬ್ರಹ್ಮನು ಬ್ರಹ್ಮ ಎಂಬ ಭಗವಂತನ ರೂಪವನ್ನು ತನ್ನ ಹೃದಯದಲ್ಲಿ ಇರಿಸಿಕೊಂಡು ಜಗತ್ತನ್ನು ಸೃಷ್ಟಿಸುತ್ತಾನೆ ಎಂಬುದನ್ನು ಸೂಚಿಸಲು ಏಕತಃ ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ ಎಂದು ಭಾವ. ಶ್ರುತಿ ಮತ್ತು ಶಾಸ್ತ್ರಗಳ ಅರ್ಥವನ್ನು ವಿಚಾರ ಮಾಡುವ ವಿದ್ವಾಂಸರು ವಿದ್ಯೆ, ಅವಿದ್ಯೆ ಎಂಬ ಪದಗಳಿಂದ ಇವುಗಳನ್ನು ಕರೆದಿರುತ್ತಾರೆ.

ಭೂತಸರ್ಗಮಹಂಕಾರಾತ್ತೃತೀಯಂ ವಿದ್ಧಿ ಪಾರ್ಥಿವ ।
ಅಹಂಕಾರೇಷು ಸರ್ವೇಷು ಚತುರ್ಥಂ ವಿದ್ಧಿ ವೈಕೃತಮ್ ॥೨೩॥

ಅಹಂಕಾರದಿಂದ ಯಾವ ಭೂತ ಸೂಕ್ಷ್ಮಗಳ ಸೃಷ್ಟಿಯಾಗಿದೆಯೋ ಅದನ್ನು ಮೂರನೆಯ ಸೃಷ್ಟಿ ಎಂದು ರಾಜನೇ, ತಿಳಿದುಕೊ. ವೈಕಾರಿಕ, ತೈಜಸ, ತಾಮಸ ಎಂಬ ಅಹಂಕಾರಗಳಲ್ಲಿ ವೈಕಾರಿಕ ತೈಜಸಗಳಿಂದ ಸೃಷ್ಟಿಯನ್ನು ಪಡೆದಿರುವ ವಸ್ತುವನ್ನು ನಾಲ್ಕನೆಯದ್ದಾದ ವೈಕೃತ ಸೃಷ್ಟಿ ಎಂದು ತಿಳಿದುಕೊ.

ವಾಯುರ್ಜ್ಯೋತಿರಥಾಕಾಶಮಾಪೋऽಥ ಪೃಥಿವೀ ತಥಾ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಸ್ತಥೈವ ಚ ॥೨೪॥

ಆಕಾಶ, ವಾಯು, ತೇಜಸ್ಸು, ಪೃಥಿವಿ, ನೀರು - ಈ ಐದು ಮಹಾ-ಭೂತಗಳೆನಿಸಿವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಈ ಐದು ಭೂತಗಳಿಂದ ಹುಟ್ಟಿರುವ ವಿಷಯಗಳು.

ಏವಂ ಯುಗಪದುತ್ಪನ್ನಂ ದಶವರ್ಗಮಸಂಶಯಮ್ ।
ಪಂಚಮಂ ವಿದ್ಧಿ ರಾಜೇಂದ್ರ ಭೌತಿಕಂ ಸರ್ಗಮರ್ಥವತ್ ॥೨೫॥

ಈ ಹತ್ತು ಪದಾರ್ಥಗಳ ಉತ್ಪತ್ತಿಯು ಒಂದೇ ಕಾಲದಲ್ಲಿ ಉಂಟಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ರಾಜೇಂದ್ರನೇ, ಓಷಧಿ, ವನಸ್ಪತ್ಯಾದಿಗಳನ್ನು ಐದನೆಯ

ಸೃಷ್ಟಿ ಎನ್ನುತ್ತಾರೆ. ಈ ಸೃಷ್ಟಿಯು ಪ್ರಾಣಿಗಳಿಗೆ ಅನೇಕ ಪ್ರಯೋಜನಗಳಿಂದ ಕೂಡಿರುತ್ತದೆ.

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ಘ್ರಾಣಮೇವ ಚ ಪಂಚಮಮ್ ।
ವಾಕ್ಚ ಹಸ್ತೌ ಚ ಪಾದೌ ಚ ಪಾಯುರ್ಮೇಢ್ರಂ ತಥೈವ ಚ ॥೨೬॥

ಬುದ್ಧೀಂದ್ರಿಯಾಣಿ ಚೈತಾನಿ ತಥಾ ಕರ್ಮೇಂದ್ರಿಯಾಣಿ ಚ ।
ಸಂಭೂತಾನೀಹ ಯುಗಪನ್ಮನಸಾ ಸಹ ಪಾರ್ಥಿವ ॥೨೭॥

ಕಿವಿಗಳು, ಚರ್ಮ, ಕಣ್ಣುಗಳು, ನಾಲಿಗೆ, ಮೂಗು ಇವುಗಳು ಜ್ಞಾನೇಂದ್ರಿಯಗಳು. ವಾಕ್, ಪಾಣಿ, ಪಾದ, ಗುದ, ಉಪಸ್ಥ ಇವು ಕರ್ಮೇಂದ್ರಿಯಗಳು. ಮನಸ್ಸಿನಿಂದ ಕೂಡಿದ ಈ ಹತ್ತು ಇಂದ್ರಿಯಗಳು ಏಕಕಾಲದಲ್ಲಿಯೇ ಸೃಷ್ಟಿಗೊಂಡಿರುತ್ತವೆ.

ಏಷಾ ತತ್ತ್ವಚತುರ್ವಿಂಶತ್ ಸರ್ವಾಕೃತಿಷು ವರ್ತತೇ ।
ಯಾಂ ಜ್ಞಾತ್ವಾ ನಾಭಿಶೋಚಂತಿ ಬ್ರಾಹ್ಮಣಾಸ್ತತ್ತ್ವದರ್ಶಿನಃ ॥೨೮॥

ಏತದ್ದೇಹಂ ಸಮಾಖ್ಯಾತಂ ತ್ರೈಲೋಕ್ಯೇ ಸರ್ವದೇಹಿಷು ।
ವೇದಿತವ್ಯಂ ನರಶ್ರೇಷ್ಠ ಸದೇವನರದಾನವೇ ॥೨೯॥

ಈ ಹಿಂದೆ ಹೇಳಿದ ಇಪ್ಪತ್ನಾಲ್ಕು ತತ್ತ್ವಗಳು ಎಲ್ಲ ಪ್ರಾಣಿಗಳ ಶರೀರದಲ್ಲಿಯೂ ನೆಲೆಗೊಂಡಿರುತ್ತವೆ. ಮಹತ್ತತ್ತ್ವ, ಅಹಂಕಾರತತ್ತ್ವ, ಮನಸ್ಸು, ಬುದ್ಧಿ ಇವುಗಳಿಂದ ಸಹಿತವಾದ ಪಂಚಭೂತಗಳು, ಪಂಚತನ್ಮಾತ್ರಗಳು, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು ಎಂಬ ಇಪ್ಪತ್ನಾಲ್ಕು ತತ್ತ್ವಗಳನ್ನು ತಿಳಿದುಕೊಂಡ ತತ್ತ್ವಜ್ಞಾನಿಗಳು ಯಾವುದೇ ಕಾರಣದಿಂದ ದುಃಖಿತರಾಗುವುದಿಲ್ಲ.

ಸಯಕ್ಷಭೂತಗಂಧರ್ವೇ ಸಕಿನ್ನರಮಹೋರಗೇ ।
ಸಚಾರಣಪಿಶಾಚೇ ವೈ ಸದೇವರ್ಷಿನಿಶಾಚರೇ ॥೩೦॥

ಸದಂಶಕೀಟಮಶಕೇ ಸಪೂತಿಕೃಮಿಮೂಷಕೇ ।
ಶುನಿ ಶ್ವಪಾಕೇ ವೈಣೇಯೇ ಸಚಂಡಾಲೇ ಸಪುಲ್ಕಸೇ ॥೩೧॥

ಹಸ್ತ್ಯಶ್ವಖರಶಾರ್ದೂಲೇ ಸವೃಕ್ಷೇ ಗವಿ ಚೈವ ಹ ।
ಯಚ್ಚ ಮೂರ್ತಿಮಯಂ ಕಿಂಚಿತ್ ಸರ್ವತ್ರೈತನ್ನಿದರ್ಶನಮ್ ॥೩೨॥

ಈ ಜಗತ್ತಿನಲ್ಲಿ ಎಷ್ಟು ಜೀವರು ಪಾಂಚಭೌತಿಕ ಶರೀರವನ್ನು ಹೊಂದಿರುತ್ತಾರೋ ಅವರೆಲ್ಲರ ದೇಹವು ಇಪ್ಪತ್ನಾಲ್ಕು ತತ್ತ್ವಗಳ ಶರೀರದಿಂದಲೇ ಕೂಡಿದೆ ಎಂಬುದನ್ನು ತಿಳಿದುಕೊ. ದೇವತೆಗಳು, ಮನುಷ್ಯರು, ದಾನವರು, ಯಕ್ಷರು, ಭೂತಗಳು, ಗಂಧರ್ವರು, ಕಿನ್ನರರು, ಮಹಾ ಉರಗಗಳು, ಚಾರಣರು, ದೇವರ್ಷಿಗಳು, ನಿಶಾಚರರು, ಕಾಡು ನೊಣಗಳು, ಕೀಟಗಳು, ಸೊಳ್ಳೆಗಳು, ದುರ್ಗಂಧದಿಂದ ಕೂಡಿದ ಕ್ರಿಮಿಗಳು, ಇಲಿಗಳು, ನಾಯಿ-ಶ್ವಪಾಕರು, ಜಿಂಕೆ, ಚಂಡಾಲ, ಮ್ಲೇಚ್ಛ, ಆನೆ, ಕುದುರೆ, ಕತ್ತೆ, ಸಿಂಹ, ವ್ಯಕ್ಷ, ಹಸು - ಇವೇ ಮೊದಲಾದ ಯಾವ ಯಾವ ಶರೀರವನ್ನು ಹೊಂದಿರುವ ಪ್ರಾಣಿಗಳು ಇವೆಯೋ ಅವೆಲ್ಲದರಲ್ಲೂ ಈ ಇಪ್ಪತ್ನಾಲ್ಕು ತತ್ತ್ವಗಳನ್ನು ಕಾಣಬಹುದು.

ಜಲೇ ಭುವಿ ತಥಾಕಾಶೇ ನಾನ್ಯತ್ರೇತಿ ವಿನಿಶ್ಚಯಃ ।
ಸ್ಥಾನಂ ದೇಹವತಾಮಸ್ತಿ ಇತ್ಯೇವಮನುಶುಶ್ರುಮ ॥೩೩॥

ನೀರು, ಪೃಥಿವಿ, ಆಕಾಶಗಳಲ್ಲಿ ಮಾತ್ರವೇ ದೇಹವನ್ನು ಧರಿಸಿರುವ ಪ್ರಾಣಿಗಳ ವಾಸವಿದೆ. ಬೇರೆ ಎಲ್ಲಿಯೂ ಇಲ್ಲ ಎಂಬುದು ನಿಶ್ಚಿತವಾಗಿದೆ. ಈ ವಿಷಯವನ್ನು ವಿದ್ವಾಂಸರಿಂದ ನಾನು ತಿಳಿದಿದ್ದೇನೆ.

ಕೃತ್ಸ್ನಮೇತಾವತಸ್ತಾತ ಕ್ಷರತೇ ವ್ಯಕ್ತಸಂಜ್ಞಕಮ್ ।
ಅಹನ್ಯಹನಿ ಭೂತಾತ್ಮಾ ತತಃ ಕ್ಷರ ಇತಿ ಸ್ಮೃತಃ ॥೩೪॥

ಸಂಪೂರ್ಣವಾದ ಈ ಜಗತ್ತು ವ್ಯಕ್ತ ಎಂಬ ಹೆಸರನ್ನು ಪಡೆದುಕೊಂಡಿದೆ. ಪ್ರತಿನಿತ್ಯವೂ ಪಂಚಭೂತಾತ್ಮಕವಾದ ಈ ಜಗತ್ತು ವಿಕಾರವನ್ನು ಹೊಂದುತ್ತಲೇ ಇದೆ. ಆದ್ದರಿಂದಲೇ ಈ ಜಗತ್ತಿಗೆ ಕ್ಷರ ಎಂದು ಹೆಸರು.

ಏತದಕ್ಷರಮಿತ್ಯುಕ್ತಂ ಕ್ಷರತೀದಂ ಯಥಾ ಜಗತ್ ।
ಜಗನ್ಮೋಹಾತ್ಮಕಂ ಪ್ರಾಹುರವ್ಯಕ್ತಂ ವ್ಯಕ್ತಸಂಜ್ಞಕಮ್ ॥೩೫॥

ಈ ಕ್ಷರ ಎನಿಸಿದ ಜಗತ್ತಿಗಿಂತ ವಿಲಕ್ಷಣವಾದುದು ಅಕ್ಷರ ಎನಿಸುತ್ತದೆ. ಈ ಅವ್ಯಕ್ತವಾದ ಅಕ್ಷರ ತತ್ತ್ವದಿಂದಲೇ ಈ ಮೋಹಾತ್ಮಕವಾದ ವ್ಯಕ್ತ ಎಂಬ ಹೆಸರಿನ ಜಗತ್ತು ಹುಟ್ಟುಕೊಂಡಿದೆ.

ಮಹಾಂಶ್ಚೈವಾಗ್ರಜೋ ನಿತ್ಯಮೇತತ್ ಕ್ಷರನಿದರ್ಶನಮ್ ।
ಕಥಿತಂ ತೇ ಮಹಾರಾಜ ಯಸ್ಮಾನ್ನಾವರ್ತತೇ ಪುನಃ ॥೩೬॥

ಇಪ್ಪತ್ನಾಲ್ಕು ತತ್ತ್ವಗಳ ಈ ಕ್ಷರ ಎನಿಸಿದ ಜಗತ್ತಿನಲ್ಲಿ ಮೊದಲು ಮಹತ್ತತ್ತ್ವವು ಸೃಷ್ಟಿಯಾಯಿತು. ಇದೇ ಕ್ಷರ ಎನ್ನುವುದರ ಪರಿಚಯವು. ಮಹಾರಾಜನೇ, ಕ್ಷರಾಕ್ಷರಗಳ ವಿಷಯದಲ್ಲಿ ನೀನು ಪ್ರಶ್ನಿಸಿದಂತೆ ಉತ್ತರಿಸಿರುತ್ತೇನೆ.

ಪಂಚವಿಂಶತಿಮೋ ವಿಷ್ಣುರ್ನಿಸ್ತತ್ತ್ವಸ್ತತ್ತ್ವಸಂಜ್ಞಕಃ ।
ತತ್ತ್ವಸಂಶ್ರಯಣಾದೇತತ್ ತತ್ತ್ವಮಾಹುರ್ಮನೀಷಿಣಃ ॥೩೭॥

ಹಿಂದೆ ಹೇಳಿದ ಇಪ್ಪತ್ನಾಲ್ಕು ತತ್ತ್ವಗಳನ್ನೂ ಮೀರಿದ ಮಹಾವಿಷ್ಣುವು ಇಪ್ಪತ್ತೈದನೆಯ ತತ್ತ್ವವೆಂದು ಹೇಳಲ್ಪಟ್ಟಿದ್ದಾನೆ. ಮಹಾವಿಷ್ಣುವು ತತ್ತ್ವಗಳಿಗಿಂತ ವಿಲಕ್ಷಣನಾಗಿದ್ದರೂ ಆ ತತ್ತ್ವಗಳಿಗೆ ಆಶ್ರಯವನ್ನು ನೀಡಿರುವುದರಿಂದ ಅವನನ್ನೂ ತತ್ತ್ವವೆಂದೇ ಹೇಳುತ್ತಾರೆ.

ಯದಮೂರ್ತ್ಯಸೃಜದ್ವ್ಯಕ್ತಂ ತತ್ತನ್ಮೂರ್ತ್ಯಧಿತಿಷ್ಠತಿ ।
ಚತುರ್ವಿಂಶತಿಮೋ ವ್ಯಕ್ತೋ ಹ್ಯಮೂರ್ತಃ ಪಂಚವಿಂಶಕಃ ॥೩೮॥

ಇಪ್ಪತ್ನಾಲ್ಕನೆಯ ತತ್ತ್ವವು ಪ್ರಕೃತಿ ತತ್ತ್ವವು. ಇಪ್ಪತ್ತೈದನೆಯ ತತ್ತ್ವವು ಅಮೂರ್ತನೆನಿಸಿದ ಪರಮಾತ್ಮನು. ಅವನು ಎಲ್ಲರ ಶರೀರದಲ್ಲಿಯೂ ಅಂತರ್ಯಾಮಿಯಾಗಿ ನೆಲೆಸಿರುತ್ತಾನೆ.

ಸ ಏವ ಹೃದಿ ಸರ್ವಾಸು ಮೂರ್ತಿಷ್ವಾತಿಷ್ಠತೇऽऽತ್ಮವಾನ್ ।
ಚೇತಯಂಶ್ಚೇತನೋ ನಿತ್ಯಃ ಸರ್ವಮೂರ್ತಿರಮೂರ್ತಿಮಾನ್ ॥೩೯॥

ನಿತ್ಯನಾದ, ಎಲ್ಲ ರೀತಿಯಾದ ರೂಪವನ್ನು ತಾಳಿದ, ಪ್ರಾಕೃತ ಮೂರ್ತಿ ರಹಿತನಾದ, ಎಲ್ಲರಿಗೂ ಅಂತರ್ಯಾಮಿಯಾದ ಚೇತನನೇ ಸಮಸ್ತ ದೇಹಧಾರಿಗಳ ಹೃದಯದಲ್ಲಿಯೂ ನೆಲೆ ನಿಂತಿರುತ್ತಾನೆ.

ಸರ್ಗಪ್ರಲಯಧರ್ಮಿಣ್ಯಾ ಅಸರ್ಗಪ್ರಳಯಾತ್ಮಕಃ ।
ಗೋಚರೇ ವರ್ತತೇ ನಿತ್ಯಂ ನಿರ್ಗುಣೋ ಗುಣಸಂಜ್ಞಕಃ ॥೪೦॥

ಸೃಷ್ಟಿ-ಸ್ಥಿತಿ-ಲಯಗಳನ್ನು ಹೊಂದುವ ಸ್ವಭಾವವುಳ್ಳ ಜೀವರಲ್ಲಿ ಸೃಷ್ಟಿ- ಸ್ಥಿತಿ-

ಲಯಗಳನ್ನು ಹೊಂದದೆ ಇರುವಂತಹ ಪರಮಾತ್ಮನು ನಿತ್ಯವೂ ಪ್ರಾಕೃತ ಗುಣರಹಿತನಾಗಿ, ಗುಣವಂತನಾಗಿ ಗೋಚರನಾಗಿರುತ್ತಾನೆ.

ಏವಮೇಷ ಮಹಾನಾತ್ಮಾ ಸರ್ಗಪ್ರಲಯಕೋವಿದಃ ।
ವಿಕುರ್ವಾಣಃ ಪ್ರಕೃತಿಮಾನಭಿಮನ್ಯತ್ಯಬುದ್ಧಿಮಾನ್ ॥೪೧॥

ಪ್ರಕೃತಿಯ ಗುಣಗಳನ್ನು ಹೊಂದಿರುವ ಜೀವನು ಹಾಲಿನ ಜೊತೆಗೆ ಬೆರೆತ ನೀರಿನಂತೆ ಒಂದೇ ದೇಹದಲ್ಲಿ ಪರಮಾತ್ಮನ ಸಂಗವನ್ನು ಹೊಂದಿರುವುದರಿಂದ ನಾನು ಬೇರೆಯಲ್ಲ, ಪರಮಾತ್ಮನು ಬೇರೆಯಲ್ಲ, ಗುಣಾತೀತನಾದ ಪರಮಾತ್ಮನೇ ನಾನು ಎಂದು ತಿಳಿಯುತ್ತಾ,

ತಮಃಸತ್ತ್ವರಜೋಯುಕ್ತಸ್ತಾಸು ತಾಸ್ವಿಹ ಯೋನಿಷು ।
ಲೀಯತೇಽಪ್ರತಿಬುದ್ಧತ್ವಾದಬುದ್ಧಜನಸೇವನಾತ್ ॥೪೨॥

ಪ್ರಕೃತಿಯ ಸಂಪರ್ಕದಿಂದ ಜೀವನು ಸತ್ತ್ವಗುಣ, ರಜೋಗುಣ, ತಮೋಗುಣವನ್ನು ಹೊಂದುತ್ತಾನೆ. ಅಜ್ಞಾನಿಗಳ ಸಂಗದಲ್ಲಿ ಇರುವುದರಿಂದ ಭಗವತ್ ಸ್ವರೂಪವನ್ನು ಸರಿಯಾಗಿ ತಿಳಿಯದೆ ಅನೇಕ ಯೋನಿಗಳಲ್ಲಿ ಬಳಲುತ್ತಾನೆ. ಯಥಾರ್ಥ ವಿಷಯಕ್ಕೆ ವಿರುದ್ಧವಾಗಿ ಮಾತನಾಡುತ್ತಾನೆ ಎಂದು ಭಾವ.

ಸಹವಾಸೋ ಸಾತ್ ನಿವಾಸಾತ್ಮಾ ನಾನ್ಯೋಽಹಮಿತಿ ಮನ್ಯತೇ ।
ಯೋಽಹಂ ಸೋಽಹಮಿತಿ ಹ್ಯುಕ್ತ್ವಾ ಗುಣಾನನು ನಿವರ್ತತೇ ॥೪೩॥

ದುಷ್ಟರ ಸಹವಾಸ, ಪ್ರಕೃತಿಯ ಸಹವಾಸದಿಂದ ತನ್ನ ತನವನ್ನು ಕಳೆದುಕೊಂಡ ಚೇತನನು ನಾನು ಬೇರೆಯಲ್ಲ, ಪರಮಾತ್ಮನು ಬೇರೆಯಲ್ಲ ಎಂದು ತಿಳಿಯುತ್ತಾನೆ. ನಾನೇ ಪರಮಾತ್ಮನೆಂದು ಹೇಳುತ್ತಾ ಗುಣಗಳ ಬಂಧನದಲ್ಲಿಯೇ ಸುತ್ತುತ್ತಾನೆ.

ತಮಸಾ ತಾಮಸಾನ್ ಭಾವಾನ್ ವಿವಿಧಾನ್ ಪ್ರತಿಪದ್ಯತೇ ।
ರಜಸಾ ರಾಜಸಾಂಶ್ಚೈವ ಸಾತ್ತ್ವಿಕಾನ್ ಸತ್ತ್ವಸಂಶ್ರಯಾತ್ ॥೪೪॥

ತಮೋಗುಣದಿಂದ ತಾಮಸ ಭಾವನೆಗಳನ್ನು ಅನೇಕ ರೀತಿಯಾಗಿ ಹೊಂದುತ್ತಿರುತ್ತಾನೆ. ರಜೋಗುಣದಿಂದ ರಾಜಸ ಭಾವಗಳನ್ನು, ಸತ್ತ್ವಗುಣದಿಂದ ಸಾತ್ವಿಕ ಭಾವನೆಗಳನ್ನು ಹೊಂದುತ್ತಿರುತ್ತಾನೆ.

ಶುಕ್ಲಲೋಹಿತಕೃಷ್ಣಾನಿ ರೂಪಾಣ್ಯೇತಾನಿ ತ್ರೀಣಿ ತು ।
ಸರ್ವಾಣ್ಯೇತಾನಿ ರೂಪಾಣಿ ಜಾನೀಹಿ ಪ್ರಾಕೃತಾನಿ ವೈ ॥೪೫॥

ಸತ್ತ್ವಗುಣವು ಬಿಳಿ ಬಣ್ಣವನ್ನು, ರಜೋಗುಣವು ಕೆಂಪು ಬಣ್ಣವನ್ನು, ತಮೋಗುಣವು ಕಪ್ಪು ಬಣ್ಣವನ್ನು ಸೂಚಿಸುತ್ತದೆ. ಪ್ರಕೃತಿಯಲ್ಲಿ ಯಾವ ರೂಪಗಳು ಪ್ರಕಟವಾಗುತ್ತವೋ ಅವುಗಳೆಲ್ಲ ಈ ಮೂರು ಬಣ್ಣಗಳಲ್ಲಿಯೇ ಸೇರಿಕೊಂಡಿರುತ್ತವೆ.

ತಾಮಸಾ ನಿರಯಂ ಯಾಂತಿ ರಾಜಸಾ ಮಾನುಷಾಂಸ್ತಥಾ ।
ಸಾತ್ತ್ವಿಕಾ ದೇವಲೋಕಾಯ ಗಚ್ಛಂತಿ ಸುಖಭಾಗಿನಃ ॥೪೬॥

ತಮೋಗುಣದಿಂದ ನರಕವನ್ನು ಹೊಂದುತ್ತಾನೆ. ರಜೋಗುಣದಿಂದ ಮನುಷ್ಯ ಲೋಕದಲ್ಲಿರುತ್ತಾನೆ. ಸತ್ತ್ವಗುಣವನ್ನಾಶ್ರಯಿಸಿದ ಪುರುಷನು ಸುಖಭಾಗಿಯಾಗಿ ದೇವಲೋಕಕ್ಕೆ ಹೋಗುತ್ತಾನೆ.

ನಿಷ್ಕೃವಲ್ಯೇನ ಪಾಪೇನ ತಿರ್ಯಗ್ಯೋನಿಮವಾಪ್ನುಯಾತ್ ।
ಪುಣ್ಯಪಾಪೇನ ಮಾನುಷ್ಯಂ ಪುಣ್ಯೇನೈಕೇನ ದೇವತಾಃ ॥೪೭॥

ಸಂಪೂರ್ಣವಾಗಿ ಪಾಪಕರ್ಮಗಳನ್ನೇ ಆಚರಿಸುವುದರಿಂದ ಚೇತನನು ತಿರ್ಯಗ್ಯೋನಿಗಳಲ್ಲಿ ಹುಟ್ಟುತ್ತಾನೆ. ಪುಣ್ಯ-ಪಾಪಗಳೆರಡನ್ನೂ ಮಾಡಿದವನು ಮನುಷ್ಯನಾಗಿ ಹುಟ್ಟುತ್ತಾನೆ. ಕೇವಲ ಪುಣ್ಯವನ್ನೇ ಮಾಡಿದವನು ದೇವಯೋನಿಯಲ್ಲಿ ಹುಟ್ಟುತ್ತಾನೆ.

ಏವಮವ್ಯಕ್ತವಿಷಯಂ ಕ್ಷರಮಾಹುರ್ಮನೀಷಿಣಃ ।
ಪಂಚವಿಂಶತಿಗೋ ಯೋಽಯಂ ಜ್ಞಾನಾದೇವ ಪ್ರವರ್ತತೇ ॥೪೮॥

ಹೀಗೆ ವಿದ್ವಾಂಸರು ಪ್ರಕೃತಿಯಿಂದ ಹುಟ್ಟಿದ ವಸ್ತುಗಳಿಗೆ ಕ್ಷರವೆಂದು ಹೇಳುತ್ತಾರೆ. ಇಪ್ಪತ್ತೈದನೆಯ ತತ್ತ್ವವು ಯಾವುದಿದೆಯೋ ಅವನೇ ಅಕ್ಷರನು. ಅವನ ಜ್ಞಾನವು ಶಾಸ್ತ್ರಜ್ಞಾನದಿಂದಲೇ ಹುಟ್ಟುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚತ್ರಿಂಶೋತ್ತರತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತಾರನೆಯ ಅಧ್ಯಾಯ

ವಸಿಷ್ಠ ಮತ್ತು ಕರಾಳ ಜನಕರ ಸಂವಾದ.

ವಸಿಷ್ಠಃ

ಏವಮಪ್ರತಿಬುದ್ಧತ್ವಾದಬುದ್ಧಮನುವರ್ತತೇ ।
ದೇಹಾದ್ದೇಹಸಹಸ್ರಾಣಿ ತಥಾ ಸಮಭಿಪದ್ಯತೇ ॥೧॥

ವಸಿಷ್ಠ– ಜನಕರಾಜನೇ, ಚೇತನನು ತನ್ನ ನಿಜಸ್ವರೂಪವನ್ನು ತಿಳಿಯದಿರುವ ಕಾರಣದಿಂದ ಅಜ್ಞಾನವನ್ನು ಆಶ್ರಯಿಸಿರುತ್ತಾನೆ. ಆದ್ದರಿಂದಲೇ ಒಂದು ದೇಹದಲ್ಲಿ ಕರ್ಮವನ್ನು ಆಚರಿಸಿ ಅದರ ನಿಮಿತ್ತದಿಂದ ಸಹಸ್ರಾರು ಶರೀರಗಳನ್ನು ಅಜ್ಞಾನದ ಮೂಲಕ ಹೊಂದುತ್ತಲೇ ಇರುತ್ತಾನೆ.

ತಿರ್ಯಗ್ಯೋನಿಸಹಸ್ರೇಷು ಕದಾಚಿದ್ದೇವತಾಸ್ವಪಿ ।
ಉಪಪದ್ಯತಿ ಸಂಯೋಗಾದ್ ಗುಣೈಃ ಸಹ ಗುಣಕ್ಷಯಾತ್ ॥೨॥

ತ್ರಿಗುಣಗಳ ಸಂಬಂಧವನ್ನು ಹೊಂದಿದ ಚೇತನನು ಸಾವಿರಾರು ತಿರ್ಯಗ್ಯೋನಿಗಳಲ್ಲಿ ಜನ್ಮ ತಾಳುತ್ತಾನೆ. ಕೆಲವೊಮ್ಮೆ ಆ ಗುಣಗಳ ಸಂಬಂಧದಿಂದ ದೇವತಾ ಯೋನಿಗಳಲ್ಲೂ ಹುಟ್ಟುತ್ತಾನೆ.

ಮಾನುಷತ್ವಾದ್ ದಿವಂ ಯಾತಿ ದಿವೋ ಮಾನುಷ್ಯಮೇವ ಚ ।
ಮಾನುಷ್ಯಾನ್ನಿರಯಸ್ಥಾನಮಾನಂತ್ಯಂ ಪ್ರತಿಪದ್ಯತೇ ॥೩॥

ಚೇತನನು ಮನುಷ್ಯ ಜನ್ಮದಿಂದ ದೇವಲೋಕಕ್ಕೂ, ದೇವಲೋಕದಿಂದ ಪುನಃ ಮನುಷ್ಯ ಜನ್ಮಕ್ಕೂ ಸಂಚರಿಸುತ್ತಾನೆ. ಮನುಷ್ಯ ಜನ್ಮದಿಂದ ಕೊನೆಯಿಲ್ಲದ ನರಕವನ್ನೂ ಹೊಂದುತ್ತಾನೆ.

ಕೋಶಕಾರೋ ಯಥಾತ್ಮಾನಂ ಕೀಟಃ ಸಮನುರುಂಧತಿ ।
ಸೂತ್ರತಂತುಗುಣೈರ್ನಿತ್ಯಂ ತಥಾಯಮಗುಣೋ ಗುಣೈಃ ॥೪॥

ರೇಷ್ಮೆ ಹುಳುವು ತನ್ನಿಂದಲೇ ಹುಟ್ಟಿದ ನೂಲಿನಿಂದ ತನ್ನನ್ನು ಸುತ್ತಲೂ ಸುತ್ತಿಕೊಂಡು ಆ ಗೂಡಿನಲ್ಲಿಯೇ ಸಿಕ್ಕಿಬೀಳುವಂತೆ ತ್ರಿಗುಣಗಳ ಸಂಬಂಧವಿಲ್ಲದ ಚೇತನನು ತ್ರಿಗುಣಗಳಿಂದ ಆವೃತನಾಗಿ ಅದರಿಂದಲೇ ಬಂಧಿತನಾಗಿರುತ್ತಾನೆ.

ದ್ವಂದ್ವಮೇತಿ ಚ ನಿರ್ದ್ವಂದ್ವಸ್ತಾಸು ತಾಸ್ವಿಹ ಯೋನಿಷು ।
ಶೀರ್ಷರೋಗೇಽಕ್ಷಿರೋಗೇ ಚ ದಂತಶೂಲೇ ಗಲಗ್ರಹೇ ॥೫॥

ಸಹಜವಾಗಿ ಜೀವನಿಗೆ ಸುಖ-ದುಃಖಾದಿ ದ್ವಂದ್ವಗುಣಗಳಿಲ್ಲದಿದ್ದರೂ ದ್ವಂದ್ವಗಳಿಗೆ ತನ್ನನ್ನು ತಾನೇ ಗುರಿ ಮಾಡಿಕೊಳ್ಳುತ್ತಾನೆ. ರೋಗಗಳ ಸಂಬಂಧ ಇಲ್ಲದಿದ್ದರೂ ತಲೆ, ಕಣ್ಣು, ಹಲ್ಲು, ಗಂಟಲು ಮುಂತಾದ ರೋಗಳಿಗೆ ತುತ್ತಾಗುತ್ತಾನೆ.

ಜಲೋದರೇಽರ್ಶಸಾಂ ರೋಗೇ ಜ್ವರಗಂಡವಿಷೂಚಿಕೇ ।
ಶ್ವಿತ್ರೇ ಕುಷ್ಠೇಽಗ್ನಿದಾಹೇ ಚ ಸಿಧ್ಮಾಪಸ್ಮಾರಯೋರಪಿ ॥೬॥

ಜಲೋದರ, ದಾಹಜ್ವರ, ಜಲಗಂಡ, ವಿಶೂಚಿ, ಕುಷ್ಠ, ಬಿಳಿ ಕುಷ್ಠ, ಅಗ್ನಿದಾಹ, ಸಿಬ್ಬು, ಅಪಸ್ಮಾರ ಮುಂತಾದ ಹಲವು ರೋಗಗಳಿಗೆ ತಾನು ಗುರಿಯಾದಂತೆ ಕಷ್ಟಗಳನ್ನು ಅನುಭವಿಸುತ್ತಾನೆ.

ಯಾನಿ ಚಾನ್ಯಾನಿ ದ್ವಂದ್ವಾನಿ ಪ್ರಾಕೃತಾನಿ ಶರೀರಿಷು ।
ಉತ್ಪದ್ಯಂತೇ ವಿಚಿತ್ರಾಣಿ ತಾನ್ಯೇಷೋಪ್ಯಭಿಮನ್ಯತೇ ।
ಅಭಿಮನ್ಯತ್ಯಭೀಮಾನಾತ್ತಥೈವ ಸುಕೃತಾನ್ಯಪಿ ॥೭॥

ಅಜ್ಞಾನದಿಂದಲೇ ಜೀವನು ತಾನು ಪಡೆದ ಆಯಾ ಜನ್ಮಗಳಿಗೆ ಅನುಗುಣವಾಗಿ ತಿರ್ಯಗ್ ಎಂದು, ದೇವತೆ ಎಂದು, ಇತರ ಜಂತು ಎಂದು ತನ್ನನ್ನು ತಿಳಿದುಕೊಂಡು ಪಾಪದ ಫಲವಾಗಿ ದುಃಖವನ್ನು, ಸುಕೃತ ಫಲವಾಗಿ ಸುಖವನ್ನು ಅನುಭವಿಸುತ್ತಿರುತ್ತಾನೆ.

ಏಕವಾಸಾಶ್ಚ ದುರ್ವಾಸಾಃ ಶಾಯೀ ನಿತ್ಯಮಧಸ್ತಥಾ ।
ಮಂಡೂಕಶಾಯೀ ಚ ತಥಾ ವೀರಾಸನಗತಸ್ತಥಾ ॥೮॥

ಸಾವಿರಾರು ತಿರ್ಯಗ್ಯೋನಿಗಳಲ್ಲಿ ಹುಟ್ಟನ್ನು ಪಡೆದ ಚೇತನನು ಪಶುವೇ ತಾನೆಂಬ ಅಜ್ಞಾನವನ್ನು ಕಟ್ಟಿಕೊಂಡು, ತನಗೆ ಒದಗುವ ಬೇರೆ ಬೇರೆ ಶರೀರಗಳ ದೇಹಾಭಿಮಾನಕ್ಕೆ ತುತ್ತಾಗಿ ಈಗ ನಾನು ಬಿಳಿ ವಸ್ತ್ರವನ್ನು ಉಟ್ಟಿರುತ್ತೇನೆ. ಈಗ ಮಲಿನ ವಸ್ತ್ರವನ್ನು ಧರಿಸಿರುತ್ತೇನೆ. ಈಗ ನಾನು ಸುಪ್ಪತ್ತಿಗೆ ಇಲ್ಲದೆ ಕೇವಲ ನೆಲದಲ್ಲಿ ಮಲಗಿದ್ದೇನೆ. ಈಗ ಕಪ್ಪೆಯಂತೆ ಕೈ-ಕಾಲುಗಳನ್ನು ಉಡುಗಿಸಿಕೊಂಡು ಮಲಗಿದ್ದೇನೆ. ಈಗ ವೀರಾಸನದಲ್ಲಿ ಕುಳಿತಿದ್ದೇನೆ.

ಚೀರಧಾರಣಮಾಕಾಶೇ ಶಯನಂ ಸ್ಥಾನಮೇವ ಚ ।
ಇಷ್ಟಕಾಪ್ರಸ್ತರೇ ಚೈವ ಕಂಟಕಪ್ರಸ್ತರೇ ತಥಾ ॥೯॥

ಈಗ ನಾರುಬಟ್ಟೆಯನ್ನು ಧರಿಸಿದ್ದೇನೆ. ಈಗ ಬಯಲಿನಲ್ಲಿ ಮಲಗಿದ್ದೇನೆ. ಈಗ ನಿಂತಿದ್ದೇನೆ. ಈಗ ನಿಂತಿರುವೆ. ಈಗ ಇಟ್ಟಿಗೆಗಳಿಂದಲೂ, ಕಲ್ಲುಗಳಿಂದಲೂ ಕಟ್ಟಿದ ಉಪ್ಪರಿಗೆ ಮನೆಯಲ್ಲಿದ್ದೇನೆ. ಈಗ ಮುಳ್ಳು ಮುಳ್ಳಾದ ಕಲ್ಲುಗಳ ಮೇಲೆ ಮಲಗಿದ್ದೇನೆ.

ಭಸ್ಮಪ್ರಸ್ತರಶಾಯೀ ಚ ಭೂಮಿಶಯ್ಯಾನುಲೇಪನಃ ।
ವೀರಸ್ಥಾನಾಂಬುಪಂಕೇ ಚ ಶಯನಂ ಫಲಕೇಷು ಚ ॥೧೦॥

ವಿವಿಧಾಸು ಚ ಶಯ್ಯಾಸು ಫಲಗೃದ್ಧ್ಯಾನ್ವಿತೋಽಫಲಃ ।
ಮುಂಜಮೇಖಿಲನಗ್ನತ್ವಂ ಕ್ಷೌಮಕೃಷ್ಣಾಜಿನಾನಿ ಚ ॥೧೧॥

ಶಾಣೇವಾಲಪರೀಧಾನೋ ವ್ಯಾಘ್ರಚರ್ಮಪರಿಚ್ಛದಃ ।
ಸಿಂಹಚರ್ಮಪರೀಧಾನಃ ಪಟ್ಟವಾಸಾಸ್ತಥೈವ ಚ ॥೧೨॥

ಕೀಟಕಾವಸನಶ್ಚೈವ ಚೀರವಾಸಾಸ್ತಥೈವ ಚ ।
ವಸ್ತ್ರೇ ಚಾನ್ಯಾನಿ ಬಹೂನ್ಯಭಿಮನ್ಯತ್ಯಬುದ್ಧಿಮಾನ್ ॥೧೩॥

ಈಗ ಬೂದಿಯ ಮೇಲೆ ಮಲಗಿರುತ್ತೇನೆ. ಈಗ ಹಾಸಿಗೆಯ ಮೇಲೆ ಮಲಗಿರುತ್ತೇನೆ. ಈಗ ಮಣ್ಣಿನ ಮೇಲೆ ಮಲಗಿರುತ್ತೇನೆ. ಈಗ ಕೆಸರಿನಲ್ಲಿದ್ದೇನೆ. ಈಗ ಹಲಗೆಯ ಮೇಲೆ ಮಲಗಿದ್ದೇನೆ ಎಂದು ತನ್ನ ನಿಜಸ್ಥಿತಿಯನ್ನು ತಿಳಿಯದೆ, ಮೇಲೆ ಹೇಳಿದ ತನ್ನ ಭಾವಗಳನ್ನು ತನ್ನಲ್ಲಿ ಆರೋಪಿಸಿಕೊಂಡು ಫಲಾಪೇಕ್ಷೆಯಿಂದ ಕರ್ಮಗಳನ್ನು ಮಾಡುತ್ತಾ, ಮೌಂಜಿಯ ಉಡಿದಾರವನ್ನು ಧರಿಸಿ, ಕೌಪೀನವನ್ನು ಧರಿಸಿರುತ್ತಾನೆ. ಕೆಲವೊಮ್ಮೆ ನಗ್ನನಾಗಿಯೂ ಇರುತ್ತಾನೆ. ಕೆಲವೊಮ್ಮೆ ಪಟ್ಟೆ ಮಡಿಯನ್ನು ಧರಿಸಿರುತ್ತಾನೆ. ಕೆಲವೊಮ್ಮೆ ಕೃಷ್ಣಾಜಿನವನ್ನು, ಕೆಲವೊಮ್ಮೆ ಸೊಬಗಿನ ನಾರನ್ನು, ಒಮ್ಮೆ ಹುಲಿಯ ಚರ್ಮವನ್ನು ಕಟ್ಟಿದಂತೆ ಒಮ್ಮೆ ಮರದ ಪಟ್ಟೆಯನ್ನಾಗಲಿ, ಮುಳ್ಳಿನ ವಸ್ತ್ರವನ್ನಾಗಲಿ ಉಟ್ಟಂತೆ ಇನ್ನೊಮ್ಮೆ ಹತ್ತಿಯ ಬಟ್ಟೆಯನ್ನು, ಇನ್ನೊಮ್ಮೆ ಬೇರೆ ವಿಧವಾದ ಬಟ್ಟೆಯನ್ನು ತಾನು ಧರಿಸಿರುವಂತೆ ಅಜ್ಞಾನಿಯಾದ ಜೀವನು ತಿಳಿದಿರುತ್ತಾನೆ. ಎಲ್ಲವೂ ಅಭಿಮಾನದ ನಿಮಿತ್ತದಿಂದ ತನ್ನದೇ ಎಂದು ತಿಳಿದಿರುತ್ತಾನೆ. ಇದಕ್ಕೆ ಅಜ್ಞಾನವೇ ಕಾರಣವಾಗಿರುತ್ತದೆ.

ಭೋಜನಾನಿ ವಿಚಿತ್ರಾಣಿ ರತ್ನಾನಿ ವಿವಿಧಾನಿ ಚ ।
ಏಕವಸ್ಯಾಂತರಾಶಿತ್ವಮೇಕಕಾಲಿಕಭೋಜನಮ್ ॥೧೪॥

ಚತುರ್ಥಾಷ್ಟಮಕಾಲಶ್ಚ ಷಷ್ಠಕಾಲಿಕ ಏವ ಚ ।
ಷಡ್ರಾತ್ರಭೋಜನಶ್ಚೈವ ತಥೈವಾಷ್ಟಾಹಭೋಜನಃ ॥೧೫॥

ಸಪ್ತರಾತ್ರದಶಾಹಾರೋ ದ್ವಾದಶಾಹಾರ ಏವ ಚ ।
ಮಾಸೋಪವಾಸೀ ಮೂಲಾಶೀ ಫಲಾಹಾರಸ್ತಥೈವ ಚ ॥೧೬॥

ತಾನು ಪಡೆದ ಜನ್ಮಕ್ಕೆ ಅನುಗುಣವಾಗಿ ವಿಚಿತ್ರವಾದ ಭೋಜನಗಳನ್ನು ಸ್ವೀಕರಿಸುತ್ತಾನೆ. ನಾನಾ ವಿಧವಾದ ರತ್ನಗಳನ್ನು ಧರಿಸುತ್ತಾನೆ. ಒಂದು ರಾತ್ರಿ ಅನಂತರದಲ್ಲಿ ಭೋಜನ ಮಾಡುತ್ತಾನೆ. ದಿನಕ್ಕೊಮ್ಮೆ ಭೋಜನ ಮಾಡುತ್ತಾನೆ. ದಿನದ ನಾಲ್ಕನೆಯ, ಆರನೆಯ, ಎಂಟನೆಯ ಮುಹೂರ್ತಗಳಲ್ಲಿ ಊಟ ಮಾಡುತ್ತಾನೆ. ಆರು ರಾತ್ರಿ ಕಳೆದ ನಂತರ ಭೋಜನ ಮಾಡುತ್ತಾನೆ. ಆರು ದಿವಸಗಳ ಬಳಿಕ, ಎಂಟು ದಿವಸಗಳ ಬಳಿಕ, ಹತ್ತು ದಿವಸಗಳ ಬಳಿಕ, ಹನ್ನೆರಡು ದಿವಸಗಳ ಬಳಿಕ ಭೋಜನವನ್ನು ಮಾಡುವ ನಿಯಮಗಳನ್ನು ಹಾಕಿಕೊಳ್ಳುತ್ತಾನೆ. ಒಂದು ತಿಂಗಳು ಉಪವಾಸವಿದ್ದು ಅನಂತರ ಕಂದ-ಮೂಲಗಳನ್ನೇ ತಿನ್ನುತ್ತಾನೆ. ಹಣ್ಣುಗಳನ್ನು ಸೇವಿಸುತ್ತಾನೆ.

ವಾಯುಭಕ್ಷೋಽಂಬುಪಿಣ್ಯಾಕಗೋಮಯಾದನ ಏವ ಚ ।
ಗೋಮೂತ್ರಭೋಜನಶ್ಚೈವ ಶಾಕಪುಷ್ಪಾದ ಏವ ಚ ॥೧೭॥

ಶೈವಾಲಭೋಜನಶ್ಚೈವ ತಥಾಚಾಮೇನ ವರ್ತಯನ್ ।
ವರ್ತಯನ್ ಶೀರ್ಣಪರ್ಣೈಶ್ಚ ಪ್ರಕೀರ್ಣಫಲಭೋಜನಃ ॥೧೮॥

ಗಾಳಿಯನ್ನೇ ಆಹಾರವನ್ನಾಗಿ ಸ್ವೀಕರಿಸುತ್ತಾನೆ. ನೀರನ್ನು ಸೇವಿಸುತ್ತಾನೆ. ಹಿಂಡಿಯನ್ನು ಸ್ವೀಕರಿಸುತ್ತಾನೆ. ಮೊಸರನ್ನವನ್ನು ಆಹಾರವನ್ನಾಗಿ ಸೇವಿಸುತ್ತಾನೆ. ಪಂಚಗವ್ಯಗಳನ್ನು ಸೇವಿಸುತ್ತಾನೆ. ಕಾಯಿಪಲ್ಯಗಳನ್ನು, ಹೂಗಳನ್ನೇ ತಿಂದು ಜೀವನವನ್ನು ನಿರ್ವಹಿಸುತ್ತಾನೆ. ಪಾಚಿಯನ್ನು ತಿನ್ನುತ್ತಾನೆ, ಅನ್ನದ ಗಂಜಿಯನ್ನೇ ಕುಡಿಯುತ್ತಾನೆ. ತರಗೆಲೆಗಳಿಂದಲೇ ಜೀವಿಸುತ್ತಾನೆ. ವೃಕ್ಷದಿಂದ ಬಿದ್ದ ಹಣ್ಣುಗಳಿಂದಲೇ ಜೀವಿಸುತ್ತಾನೆ.

ವ್ಯಾಖ್ಯಾನ ವಿಶೇಷ– ಇಲ್ಲಿ ವ್ಯಾಸರು ಒಂದು ಜನ್ಮಕ್ಕೆ ಸಂಬಂಧಪಟ್ಟ ಆಹಾರದ ಕ್ರಮವನ್ನು ತಿಳಿಸಿರುವುದಿಲ್ಲ. ಅನೇಕ ಜನ್ಮಗಳಲ್ಲಿ ಕ್ರಿಮಿ ಕೀಟಗಳಾಗಿ, ಪಶು– ಪಕ್ಷಿಗಳಾಗಿ ಅನೇಕ ವಿಧದ ಜೀವ

ಜಂತುಗಳಾಗಿ ಅವರು ಸ್ವೀಕರಿಸುವ ಎಲ್ಲ ಆಹಾರದ ವಿವರಣೆಯನ್ನು ನೀಡಿರುತ್ತಾರೆ ಎಂದು ತಿಳಿಯಬೇಕು.

ವಿವಿಧಾನಿ ಚ ಕೃಚ್ಛ್ರಾಣಿ ಸೇವತೇ ಸುಖಿಕಾಂಕ್ಷಯಾ ।
ಚಾಂದ್ರಾಯಣಾನಿ ವಿಧಿವಲ್ಲಿಂಗಾನಿ ವಿವಿಧಾನಿ ಚ ॥೧೯॥

ಜೀವನು ಸುಖವನ್ನು ಬಯಸಿಕೊಂಡು ನಾನಾ ವಿಧವಾದ ಕೃಚ್ಛವ್ರತವನ್ನು ಸೇವಿಸುತ್ತಾನೆ. ಚಾಂದ್ರಾಯಣ ವ್ರತವನ್ನು ವಿಧಿವತ್ತಾಗಿ ಆಚರಿಸುತ್ತಾನೆ. ನಾನಾ ವಿಧವಾದ ಧಾರ್ಮಿಕ ಚಿಹ್ನೆಗಳನ್ನು ಧರಿಸುತ್ತಾನೆ.

ಚಾತುರಾಶ್ರಮ್ಯಪಂಥಾನಮಾಶ್ರಯತ್ಯಾಶ್ರಮಾನಪಿ ।
ಉಪಾಸೀನಶ್ಚ ಪಾಷಂಡಾನ್ ಗುಹಾಃ ಶೈಲಾಂಸ್ತಥೈವ ಚ ॥೨೦॥

ನಾಲ್ಕು ವಿಧವಾದ ಆಶ್ರಮ ಧರ್ಮಗಳನ್ನು ಆಶ್ರಯಿಸಿರುತ್ತಾನೆ. ಆಶ್ರಮ ಧರ್ಮಕ್ಕೆ ವಿರುದ್ಧವಾದ ಧರ್ಮಗಳನ್ನೂ ಅನುಸರಿಸುತ್ತಾನೆ. ಪಾಶುಪತವೇ ಮೊದಲಾದ ಪಾಷಂಡ ಧರ್ಮಗಳನ್ನು ಆಶ್ರಯಿಸಿರುತ್ತಾನೆ. ಗುಹೆಗಳಲ್ಲಿ, ಶಿಲೆಗಳಲ್ಲಿ, ಪ್ರದೇಶಗಳಲ್ಲಿ ವಾಸಿಸುತ್ತಾನೆ.

ವಿವಿಕ್ತಾಶ್ಚ ಶಿಲಾಧಾಯಾಸ್ತಥಾ ಪ್ರಸ್ರವಣಾನಿ ಚ ।
ವಿವಿಧಾನಿ ಚ ಜಪ್ಯಾನಿ ವಿವಿಧಾನಿ ವ್ರತಾನಿ ಚ ॥೨೧॥

ನಿಯಮಾನ್ ಸುವಿಚಿತ್ರಾಂಶ್ಚ ವಿವಿಧಾನಿ ತಪಾಂಸಿ ಚ ।
ಯಜ್ಞಾಂಶ್ಚ ವಿವಿಧಾಕಾರಾನ್ ವಿಧೀಂಶ್ಚ ವಿವಿಧಾಂಸ್ತಥಾ ॥೨೨॥

ಏಕಾಂತದ ಬಂಡೆಯ ನೆರಳುಗಳಲ್ಲಿ, ಹರಿಯುವ ನೀರುಗಳಲ್ಲಿ, ವಿವಿಧ ದೇವಾಲಯಗಳಲ್ಲಿ, ಸರಸ್ಸುಗಳಲ್ಲಿ ನಾನಾ ವಿಧವಾದ ವ್ರತಗಳನ್ನಾಚರಿಸುತ್ತಾ, ಅತ್ಯಂತ ವಿಚಿತ್ರವಾದ ನಿಯಮಗಳನ್ನು ವಿಧಿಸಿಕೊಂಡು, ವಿವಿಧವಾದ ತಪಸ್ಸುಗಳನ್ನಾಚರಿಸುತ್ತಾ, ನಾನಾ ಬಗೆಯ ಯಜ್ಞಗಳನ್ನು, ವಿಧವಿಧವಾದ ವಿಧಿಗಳನ್ನು ಆಚರಿಸುತ್ತಿರುತ್ತಾನೆ.

ವಣಿಕ್ಪಥಂ ದ್ವಿಜಕ್ಷತ್ರಂ ವೈಶ್ಯಶೂದ್ರಂ ತಥೈವ ಚ ।
ದಾನಂ ಚ ವಿವಿಧಾಕಾರಂ ದೀನಾಂಧಕೃಪಣೇಷ್ವಪಿ ॥೨೩॥

ಚೇತನನು ವ್ಯಾಪಾರ ಮಾಡುತ್ತಾನೆ. ದ್ವಿಜನಾಗಿ ಬ್ರಾಹ್ಮಣಕರ್ಮವನ್ನು ಮಾಡುತ್ತಾನೆ. ಕ್ಷತ್ರಿಯನಾಗಿ ಕ್ಷಾತ್ರಧರ್ಮವನ್ನೂ, ವೈಶ್ಯನಾಗಿ ವೈಶ್ಯಕರ್ಮವನ್ನೂ, ಶೂದ್ರನಾಗಿ ಶೂದ್ರ ಕರ್ಮವನ್ನೂ ಮಾಡುತ್ತಾನೆ. ದೀನರಿಗೂ, ಅಂಧರಿಗೂ, ಕೃಪಣರಿಗೂ ಬಗೆಬಗೆಯಾದ ದಾನಗಳನ್ನು ಮಾಡುತ್ತಾನೆ.

ಅಭಿಮನ್ಯತ್ಯಸಂಬೋಧಾತ್ತಥೈವ ತ್ರಿವಿಧಾನ್ ಗುಣಾನ್ ।
ಸತ್ತ್ವಂ ರಜಸ್ತಮಶ್ಚೈವ ಧರ್ಮಾರ್ಥೌ ಕಾಮ ಏವ ಚ ।
ಪ್ರಕೃತ್ಯಾತ್ಮಾನಮೇವಾತ್ಮಾ ಏವಂ ಪ್ರವಿಭಜತ್ಯುತ ॥೨೪॥

ಹೀಗೆ ಚೇತನನು ದಾನ ಮಾಡಿ, ಅಜ್ಞಾನವಶದಿಂದ ತಾನು ದಾನ ಮಾಡಿರುವುದಾಗಿ ಅಭಿಮಾನವನ್ನು ಹೊಂದುತ್ತಾನೆ. ಇದರಂತೆ ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳನ್ನು, ಅವುಗಳಿಗೆ ಸಂಬಂಧಿಸಿದ ಧರ್ಮಾರ್ಥ ಕಾಮಗಳನ್ನು ಚೇತನನು ತನ್ನದ್ದೆಂದೇ ಭಾವಿಸುತ್ತಾನೆ. ಪ್ರಕೃತಿಯ ಮೂಲಕವಾಗಿ ತನ್ನನ್ನೇ ಅನೇಕ ಪ್ರಕಾರವಾಗಿ ಹೀಗೆ ವಿಭಾಗಿಸಿಕೊಳ್ಳುತ್ತಾನೆ.

ಸ್ವಧಾಕಾರವಷಟ್‌ಕಾರೌ ಸ್ವಾಹಾಕಾರನಮಸ್ಕ್ರಿಯಾಃ ।
ಯಾಜನಾಧ್ಯಾಪನಂ ದಾನಂ ತಥೈವಾಹುಃ ಪ್ರತಿಗ್ರಹಮ್ ।
ಯಜನಾಧ್ಯಯನೇ ಚೈವ ಯಚ್ಚಾನ್ಯದಪಿ ಕಿಂಚನ ॥೨೫॥

ಸ್ವಧಾ, ವಷಟ್, ಸ್ವಾಹಾ, ನಮಸ್ಕಾರ ಮುಂತಾದ ಸತ್ಕರ್ಮಗಳಲ್ಲಿ ಪ್ರವೃತ್ತಿಯನ್ನು ಮಾಡುತ್ತಾನೆ. ಯಜ್ಞ ಮಾಡುತ್ತಾನೆ, ಮಾಡಿಸುತ್ತಾನೆ. ತಾನು ವೇದಾಧ್ಯಯನವನ್ನು ಮಾಡಿ ಮತ್ತೊಬ್ಬರಿಗೂ ಬೋಧಿಸುತ್ತಾನೆ. ದಾನ ಮಾಡಿ ಪ್ರತಿಗ್ರಹಿಸುತ್ತಾನೆ. ಹೀಗೆ ಇತರ ಅನೇಕ ಕರ್ಮಗಳನ್ನು ಜೀವನು ಮಾಡುತ್ತಿರುತ್ತಾನೆ.

ಜನ್ಮಮೃತ್ಯುವಿವಾದೇ ಚ ತಥಾ ವಿಶಸನೇಽಪಿ ಚ ।
ಶುಭಾಶುಭಮಯಂ ಸರ್ವಮೇತದಾಹುಃ ಕ್ರಿಯಾಪಥಮ್ ॥೨೬॥

ಹುಟ್ಟು, ಸಾವುಗಳನ್ನು ಪಡೆಯುತ್ತಾನೆ. ವಿವಾದ ಮಾಡುತ್ತಾನೆ. ಯುದ್ಧದಲ್ಲಿ ತೊಡಗುತ್ತಾನೆ. ಪ್ರಕೃತಿ ಸಂಬಂಧವಾದ ಈ ಜೀವನ ವ್ಯವಹಾರಗಳೆಲ್ಲವೂ ಶುಭಾಶುಭವಾದವುಗಳೆಂದು, ಕರ್ಮ ಮಾರ್ಗಕ್ಕೆ ಸೇರಿದವೆಂದು ವಿದ್ವಾಂಸರು ಹೇಳುತ್ತಾರೆ.

ಪ್ರಕೃತಿಃ ಕುರುತೇ ದೇವೀ ಮಹಾಪ್ರಲಯಮೇವ ಚ ।
ದಿವಸಾಂತೇ ಗುಣಾನೇತಾನಭ್ಯೇತ್ಯೈಕೋऽವತಿಷ್ಠತಿ ॥೨೭॥

ರಶ್ಮಿಜಾಲಮಿವಾದಿತ್ಯಸ್ತತ್ಕಾಲೇನ ನಿಯಚ್ಛತಿ ।
ಏವಮೇಷೋऽಸಕೃತ್ ಸರ್ವಂ ಕ್ರೀಡಾರ್ಥಮಭಿಮನ್ಯತೇ ॥೨೮॥

ಮೂಲಪ್ರಕೃತಿಯು ಜಗತ್ತಿನ ಸೃಷ್ಟಿ-ಪ್ರಳಯಗಳನ್ನು ಮಾಡುತ್ತಿರುತ್ತಾಳೆ. ಸೂರ್ಯನು ಪ್ರಾತಃಕಾಲವಾಗುತ್ತಾ ಕಿರಣಗಳನ್ನು ಎಲ್ಲೆಡೆಯೂ ವ್ಯಾಪಿಸುವಂತೆ ಮಾಡಿ ಸಾಯಂಕಾಲವಾಗುತ್ತಲೇ ಆ ಕಿರಣಗಳನ್ನು ತನ್ನಲ್ಲಿಯೇ ಸೇರಿಸಿಕೊಳ್ಳುತ್ತಾಳೆ. ಇದರಂತೆ ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳನ್ನು ಜಗತ್ತಿನಾದ್ಯಂತ ವ್ಯಾಪಿಸಿ ಕಲ್ಪದ ಕೊನೆಯಲ್ಲಿ ಆ ಮೂರುಗುಣಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತದೆ. ಹೀಗೆ ಪ್ರಕೃತಿಯಿಂದ ಕೂಡಿರುವ ಚೇತನನು ಅನೇಕ ಬಾರಿ ಪ್ರಕೃತಿಯಿಂದ ನಿರ್ಮಿತವಾದ ರೂಪ-ರಸಾದಿ ಗುಣಗಳನ್ನು ಕ್ರೀಡೆಗಾಗಿಯೆಂದು ಅಭಿಮಾನದಿಂದಲೇ ಅನುಭವಿಸುತ್ತಿರುತ್ತಾನೆ.

ಆತ್ಮರೂಪಗುಣಾನೇತಾನ್ ವಿವಿಧಾನ್ ಹೃದಯಪ್ರಿಯಾನ್ ।
ಏವಮೇವ ವಿಕುರ್ವಾಣಃ ಸರ್ಗಪ್ರಲಯಕರ್ಮಣೇ ॥೨೯॥

ಹೀಗೆ ತ್ರಿಗುಣಗಳ ಅಧಿಪತಿ ತಾನೆಂದು, ತನಗಿಷ್ಟವಾದ ಅನೇಕ ವಿಧವಾದ ಪ್ರಕೃತಿಯ ಗುಣಗಳಲ್ಲೇ ವಿಕಾರವನ್ನು ಹೊಂದುತ್ತಾ ಜೀವನು ಉತ್ಪತ್ತಿ, ನಾಶಗಳಿಗೆ ಆಶ್ರಯವಾದ ಕರ್ಮವನ್ನು ಅನುಭವಿಸುತ್ತಲೇ ಇರುತ್ತಾನೆ.

ಕ್ರಿಯಾಕ್ರಿಯಾ ಪಥೇ ರಕ್ತಸ್ತ್ರಿಗುಣಸ್ತ್ರಿಗುಣಾತಿಗಃ ।
ಕ್ರಿಯಾಕ್ರಿಯಾಪಥೋಪೇತಸ್ತಥಾ ತದಿತಿ ಮನ್ಯತೇ ॥೩೦॥

ಆತ್ಮನು ಸ್ವತಃ ತ್ರಿಗುಣಗಳನ್ನು ಮೀರಿದವನಾಗಿದ್ದರೂ ಕರ್ಮ ಮಾರ್ಗದಲ್ಲಿ ಸಿಕ್ಕಿ ಬಿದ್ದು, ತ್ರಿಗುಣಗಳ ವಿಕಾರವನ್ನು ಹೊಂದುತ್ತಾ, ಸೃಷ್ಟಿ-ಪ್ರಳಯಗಳೇ ಧರ್ಮವುಳ್ಳವನಾಗಿ ಆ ಪ್ರಕೃತಿಯನ್ನು ತನ್ನದ್ದೆಂದೇ ಭಾವಿಸಿಕೊಂಡಿರುತ್ತಾನೆ.

ಏವಂ ದ್ವಂದ್ವಾನ್ಯಥೈತಾನಿ ವರ್ತಂತೇ ಮಮ ನಿತ್ಯಶಃ ।
ಮಯ್ಯೇವೈತಾನಿ ಜಾಯಂತೇ ಬಾಧಂತೇ ತಾನಿ ಮಾಮಿತಿ ॥೩೧॥

ನಿಸ್ತರ್ತವ್ಯಾನ್ಯಥೈತಾನಿ ಸರ್ವಾಣೀತಿ ನರಾಧಿಪ ।
ಮನ್ಯತೇಽಯಂ ಹ್ಯಬುದ್ಧಿತ್ವಾತ್ತಥೈವ ಸುಕೃತಾನ್ಯಪಿ ॥೩೨॥

ಭೋಕ್ತವ್ಯಾನಿ ಮಯೈತಾನಿ ದೇವಲೋಕಗತೇನ ವೈ ।
ಇಹೈವ ಚೈನಂ ಭೋಕ್ಷ್ಯಾಮಿ ಶುಭಾಶುಭಫಲೋದಯಮ್ ॥೩೩॥

ಹೀಗೆ ಪ್ರಕೃತಿಯ ಸಂಸರ್ಗದಿಂದ ಸುಖ-ದುಃಖಾದಿ ದ್ವಂದ್ವಗಳು ಅನುದಿನವೂ ಬಂದು ಹೋಗುತ್ತಲೇ ಇರುತ್ತವೆ. ಚೇತನನು ಅಜ್ಞಾನದಿಂದ ಈ ದುಃಖಗಳು ನನ್ನ ಸಂಬಂಧವಾಗಿಯೇ ಹುಟ್ಟಿವೆ, ನನ್ನನ್ನೇ ಬಾಧಿಸುತ್ತಿವೆ, ಇವುಗಳನ್ನು ನಾನೇ ಪರಿಹರಿಸಿಕೊಳ್ಳಬೇಕು ಎಂದು ಚಿಂತಿಸುತ್ತಾ ದುಃಖವನ್ನು ಅನುಭವಿಸುತ್ತಾನೆ. ಅಜ್ಞಾನದಿಂದಲೇ ಸುಕೃತದಲ್ಲಿಯೂ ಹೀಗೆ ಭಾವಿಸುತ್ತಾನೆ. ಪೂರ್ವಜನ್ಮದಲ್ಲಿ ಮಾಡಿದ ಶುಭಾಶುಭ ಕರ್ಮಗಳನ್ನು ಅನುಭವಿಸುತ್ತಿದ್ದೇನೆ. ಈ ಜನ್ಮದಲ್ಲಿ ಮಾಡಿದ ಅನೇಕ ಪುಣ್ಯಕಾರ್ಯಗಳಿಂದ ದೇವಲೋಕಕ್ಕೆ ಹೋದ ಬಳಿಕ ಅಲ್ಲಿಯ ಪುಣ್ಯಫಲಗಳನ್ನು ಅನುಭವಿಸುತ್ತೇನೆ. ಇಲ್ಲಿಯೂ ಶುಭಾಶುಭ ಕರ್ಮಗಳನ್ನು ಅನುಭವಿಸುತ್ತೇನೆ ಎಂದು ಜೀವನು ತನಗೆ ಸಂಬಂಧ ಇಲ್ಲದಿರುವ, ಸುಖ-ದುಃಖಗಳ ಸಂಬಂಧವನ್ನು ಅಜ್ಞಾನದಿಂದ ತಿಳಿದು ಪರಿಭ್ರಮಣವನ್ನು ಹೊಂದುತ್ತಿರುತ್ತಾನೆ.

ಸುಖಮೇವ ಚ ಕರ್ತವ್ಯಂ ಸಕೃತ್ ಕೃತ್ವಾ ಸುಖಂ ಮಮ ।
ಯಾವದಂತಂ ಚ ಮೇ ಸೌಖ್ಯಂ ಜಾತ್ಯಾಂ ಜಾತ್ಯಾಂ ಭವಿಷ್ಯತಿ ॥೩೪॥

ನಾನು ಸುಖಕ್ಕೆ ಸಾಧನವಾದ ಪುಣ್ಯಕರ್ಮವನ್ನೇ ಮಾಡಬೇಕು. ಪುಣ್ಯಕರ್ಮವನ್ನು ಒಮ್ಮೆ ಆಚರಿಸಿದರೂ ನಿತ್ಯವೂ ಸುಖವುಂಟಾಗುತ್ತದೆ. ಜನ್ಮಾಂತರದಲ್ಲಿಯೂ ಸುಖ ಉಂಟಾಗುತ್ತದೆ ಎಂದು ಭಾವಿಸುತ್ತಾನೆ.

ಭವಿಷ್ಯತಿ ಚ ಮೇ ದುಃಖಂ ಕೃತೇನೇಹಾಪ್ಯನಂತಕಮ್ ।
ಮಹದ್ದುಃಖಂ ಹಿ ಮಾನುಷ್ಯಂ ನಿರಯೇ ಚಾಪಿ ಮಜ್ಜನಮ್ ॥೩೫॥

ನಾನು ಈ ಜನ್ಮದಲ್ಲಿ ದುಷ್ಕರ್ಕಾರ್ಯವನ್ನೆಸಗಿದರೆ ಮಹಾದುಃಖವನ್ನೇ ಅನುಭವಿಸಬೇಕಾಗುತ್ತದೆ. ಮನುಷ್ಯ ಜನ್ಮವು ಮಹಾದುಃಖದಿಂದ ಕೂಡಿದ್ದಾಗಿದೆ. ಇಷ್ಟು ಮಾತ್ರವಲ್ಲದೆ ಕೆಟ್ಟ ಕೆಲಸಗಳನ್ನು ಮಾಡಿದರೆ ನರಕದಲ್ಲಿಯೂ ಬೀಳಬೇಕಾಗುತ್ತದೆ ಎಂದು ಚೇತನನು ಭಾವಿಸುತ್ತಿರುತ್ತಾನೆ.

ನಿರಯಾಚ್ಚಾಪಿ ಮಾನುಷ್ಯಂ ಕಾಲೇನೈಷ್ಯಾಮ್ಯಹಂ ಪುನಃ ।
ಮನುಷ್ಯತ್ವಾಚ್ಚ ದೇವತ್ವಂ ದೇವತ್ವಾತ್ ಪೌರುಷಂ ಪುನಃ ।
ಮನುಷ್ಯತ್ವಾಚ್ಚ ನಿರಯಂ ಪರ್ಯಾಯೇಣೋಪಗಚ್ಛತಿ ॥೩೬॥

ಪಾಪಕರ್ಮದ ಫಲದಿಂದ ನರಕದಲ್ಲಿ ಬಹಳ ಕಾಲ ಇದ್ದು, ಅಲ್ಲಿಂದ ಬಿಡುಗಡೆ ಹೊಂದಿದ ಬಳಿಕ ಮನುಷ್ಯ ಜನ್ಮವನ್ನು ಪಡೆದುಕೊಳ್ಳುತ್ತೇನೆ. ಮನುಷ್ಯ ಜನ್ಮದಲ್ಲಿ ಸುಕೃತವನ್ನು ಮಾಡಿ ದೇವತ್ವವನ್ನು ಹೊಂದುತ್ತೇನೆ. ಪುನಃ ಪುಣ್ಯವು ತೀರಿದ ಬಳಿಕ ಮನುಷ್ಯನಾಗಿಯೂ ಹುಟ್ಟುತ್ತೇನೆ ಎಂದು ಮನುಷ್ಯನು ಭಾವಿಸುತ್ತಾನೆ. ಚೇತನನು ಪರಿಹಾರವಾಗಿ ನರಕಕ್ಕೂ, ಮನುಷ್ಯ ಲೋಕಕ್ಕೂ, ದೇವಲೋಕಕ್ಕೂ ಹೋಗುತ್ತಿರುತ್ತಾನೆ.

ಯ ಏವಂ ವೇತ್ತಿ ವೈ ನಿತ್ಯಂ ನಿರಾತ್ಮಾತ್ಮಗುಣೈರ್ವೃತಃ ।
ತೇನ ದೇವಮನುಷ್ಯೇಷು ನಿರಯೇ ಚೋಪಪದ್ಯತೇ ॥೩೭॥

ಮಮತ್ವೇನಾವೃತೋ ನಿತ್ಯಂ ತತ್ರೈವ ಪರಿವರ್ತತೇ ।
ಸರ್ಗಕೋಟಿಸಹಸ್ರಾಣಿ ಮರಣಾಂತಾಸು ಮೂರ್ತಿಷು ॥೩೮॥

ಪ್ರಕೃತಿಯ ಗುಣಗಳಿಂದ ಸಿಲುಕಿದ ಜೀವನು ತನಗೊಬ್ಬ ನಿಯಾಮಕನಿಲ್ಲವೆಂದು ತಿಳಿದುಕೊಂಡು ದೇವ-ಮನುಷ್ಯ ಜನ್ಮಗಳನ್ನು ಪರಮಾತ್ಮನಿಂದಲೇ ಹೊಂದುತ್ತಿರುತ್ತಾನೆ. ನಾನು, ನನ್ನದು ಎಂಬ ಮಮತ್ವದಿಂದ ಆವೃತನಾದ ಚೇತನನು ಸಾವಿರ ಕೋಟಿ ಸೃಷ್ಟಿಕಾಲ ಪರ್ಯಂತವಾಗಿ ಮರಣ ಧರ್ಮವುಳ್ಳ ಶರೀರದಲ್ಲಿಯೇ ಸುತ್ತುತ್ತಿರುತ್ತಾನೆ.

ಯ ಏವಂ ಕುರುತೇ ಕರ್ಮ ಶುಭಾಶುಭಫಲಾತ್ಮಕಮ್ ।
ಸ ಏವ ಫಲಮಶ್ನಾತಿ ತ್ರಿಷು ಲೋಕೇಷು ಮೂರ್ತಿಮಾನ್ ॥೩೯॥

ಯಾವಾತನು ಶುಭಾಶುಭ ಫಲಗಳನ್ನು ನೀಡುವ ಕರ್ಮಗಳನ್ನು ಆಚರಿಸುತ್ತಾನೋ, ಮೂರು ಲೋಕಗಳಲ್ಲಿಯೂ ಅಂತಹ ವ್ಯಕ್ತಿಯು ಆ ಕರ್ಮಗಳ ಫಲವನ್ನು ಅವನೇ ಅನುಭವಿಸುತ್ತಾನೆ.

ಪ್ರಕೃತಿಃ ಕುರುತೇ ಕರ್ಮ ಶುಭಾಶುಭಫಲಾತ್ಮಕಮ್ ।
ಪ್ರಕೃತಿಸ್ತು ತದಶ್ನಾತಿ ತ್ರಿಷು ಲೋಕೇಷು ಕಾಮಗಾ ॥೪೦॥

ಜೀವರಿಗೆ ಅಂಟಿದ ಸ್ವಭಾವವು ಶುಭಾಶುಭ ಫಲಗಳನ್ನು, ಶುಭಾಶುಭ ಕರ್ಮಗಳಿಗೆ ಅನುಗುಣವಾಗಿ ನೀಡುತ್ತದೆ. ಪ್ರಕೃತಿಯು ಜೀವನಿಗೆ ಆ ಫಲಗಳನ್ನು ತಿನ್ನಿಸುತ್ತದೆ. ಮೂರು ಲೋಕಗಳಲ್ಲಿಯೂ ಈ ವ್ಯವಸ್ಥೆಯು ಪ್ರಕೃತಿಯಿಂದಲೇ ಸ್ವಚ್ಛಂದವಾಗಿ ನಡೆಯುತ್ತಿದೆ.

ತಿರ್ಯಗ್ಯೋನೌ ಮನುಷ್ಯತ್ವೇ ದೇವಲೋಕೇ ತಥೈವ ಚ ।
ತ್ರೀಣಿ ಸ್ಥಾನಾನಿ ಚೈತಾನಿ ಜಾನೀಯಾತ್ ಪ್ರಾಕೃತಾನಿ ಹ ॥೪೧॥

ತಿರ್ಯಗ್ಯೋನಿ, ಮನುಷ್ಯಯೋನಿ, ದೇವಲೋಕದಲ್ಲಿರುವ ದೇವಯೋನಿ - ಈ ಮೂರು ಕರ್ಮಫಲಗಳನ್ನು ಅನುಭವಿಸುವ ಸ್ಥಾನಗಳಾಗಿವೆ. ಇವುಗಳನ್ನು ಪ್ರಕೃತಿಗೆ ಸಂಬಂಧಿಸಿದವೆಂದು ತಿಳಿಯಬೇಕು.

ಅಲಿಂಗಾಂ ಪ್ರಕೃತಿಂ ಚಾಹುರ್ಲಿಂಗೈರನುಮಿಮೀಮಹೇ ।
ತಥೈವ ಪೌರುಷಂ ಲಿಂಗಮನುಮಾನಾದ್ಧಿ ಪಶ್ಯತಿ ॥೪೨॥

ಪ್ರಕೃತಿಯು ಇಂದ್ರಿಯಗಳಿಗೆ ಗೋಚರವಾಗುವುದಿಲ್ಲವಾದ್ದರಿಂದ ಕಣ್ಣಿಗೆ ಕಾಣುವ ಯಾವ ಚಿಹ್ನೆಗಳೂ ಇದರಲ್ಲಿ ಇರುವುದಿಲ್ಲ. ಮಹದಾದಿ ಕಾರ್ಯಗಳಿಂದ ಪ್ರಕೃತಿ ಇದೆ ಎಂದು ಊಹಿಸುತ್ತೇವೆ. ಇದೇ ರೀತಿ ಜೀವನಿಗೆ ಸಂಬಂಧಿಸಿದ ಅಸ್ವಾತಂತ್ರ್ಯ ಮೊದಲಾದ ಚಿಹ್ನೆಗಳಿಂದ, ದುಃಖಾದಿ ಲಿಂಗಗಳಿಂದ ಜೀವನ ಅವಸ್ಥೆಯನ್ನು ತಿಳಿಯುತ್ತೇವೆ.

ಸ ಲಿಂಗಾಂತರಮಾಸಾದ್ಯ ಪ್ರಾಕೃತಂ ಲಿಂಗಮವ್ರಣಮ್ ।
ವ್ರಣದ್ವಾರಾಣ್ಯಧಿಷ್ಠಾಯ ಕರ್ಮಾತ್ಮಾನಂ ಮನ್ಯತೇ ॥೪೩॥

ಜೀವನು ದುಃಖದ ಚಿಹ್ನೆಗಿಂತ ಬೇರೆಯಾಗಿರುವ ಪ್ರಾಕೃತವಾದ ಮತ್ತೊಂದು ದೇಹವನ್ನು ಹೊಂದಿ, ಶರೀರದಲ್ಲಿರುವ ದೋಷದ ದ್ವಾರಗಳಾದ ಇಂದ್ರಿಯಗಳನ್ನು ಆಶ್ರಯಿಸಿ, ಪ್ರಕೃತಿಗೆ ಸಂಬಂಧಿಸಿದ ಇಂದ್ರಿಯಗಳ ಮೂಲಕ ನಡೆಯುವ ಕರ್ಮಗಳೆಲ್ಲವನ್ನು ತನ್ನದ್ದೇ ಎಂದು ಭಾವಿಸಿಕೊಳ್ಳುತ್ತಾನೆ.

ಶ್ರೋತ್ರಾದೀನಿ ತು ಸರ್ವಾಣಿ ಪಂಚ ಕರ್ಮೇಂದ್ರಿಯಾಣಿ ಚ ।
ವಾಗಾದೀನಿ ಪ್ರವರ್ತಂತೇ ಗುಣೇಷ್ವೇವ ಗುಣೈಃ ಸಹ ।
ಅಹಮೇತಾನಿ ವೈ ಕುರ್ವನ್ಮಮೈತಾನೀಂದ್ರಿಯಾಣಿ ಚ ॥೪೪॥

ನಿರಿಂದ್ರಿಯೋಭಿಮನ್ಯೇತ ವ್ರಣವಾನಸ್ಮಿ ನಿರ್ವ್ರಣಃ ।
ಅಲಿಂಗೋ ಲಿಂಗಮಾತ್ಮಾನಮಕಾಲಃ ಕಾಲಮಾತ್ಮನಃ ॥೪೫॥

ಕಿವಿಯೇ ಮೊದಲಾದ ಪಂಚಜ್ಞಾನೇಂದ್ರಿಯಗಳು, ವಾಕ್ ಮೊದಲಾದ ಕರ್ಮೇಂದ್ರಿಯಗಳು ತಮ್ಮ ತಮ್ಮ ಗುಣಗಳ ಜೊತೆಗೆ ಪಾಂಚಭೌತಿಕವಾದ ಶರೀರದಲ್ಲಿಯೇ ನೆಲೆಸಿರುತ್ತವೆ. ಚೇತನನು ಪ್ರಕೃತಿಗೆ ಸಂಬಂಧಿಸಿದ ಇಂದ್ರಿಯಗಳಿಂದ ರಹಿತನಾಗಿದ್ದರೂ ನಾನೇ ಈ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದೇನೆ ಎಂದು ಭಾವಿಸುತ್ತಾನೆ. ಯಾವುದೇ ದೋಷಗಳಿಂದ ಕೂಡದವನಾಗಿದ್ದರೂ ದೋಷಿ ಎಂದು ಭಾವಿಸುತ್ತಾನೆ. ಶರೀರ ಧರ್ಮ ಇಲ್ಲದವನಾಗಿದ್ದರೂ ಪ್ರಾಕೃತ ಶರೀರವುಳ್ಳವನೆಂದು ಭಾವಿಸಿಕೊಳ್ಳುತ್ತಾನೆ. ಮರಣ ಧರ್ಮವಿಲ್ಲದವನಾಗಿದ್ದರೂ ಮರಣ ಧರ್ಮವುಳ್ಳವನೆಂದು ಭಾವಿಸಿಕೊಳ್ಳುತ್ತಾನೆ.

ಅಸತ್ತ್ವಂ ಸತ್ತ್ವಮಾತ್ಮಾನಮತತ್ತ್ವಂ ತತ್ತ್ವಮಾತ್ಮನಃ ।
ಅಮೃತ್ಯುರ್ಮೃತ್ಯುಮಾತ್ಮಾನಮಚರಶ್ಚರಮಾತ್ಮನಃ ॥೪೬॥

ತನ್ನಲ್ಲಿ ಸಾಮರ್ಥ್ಯವಿಲ್ಲದಿದ್ದರೂ ಸಾಮರ್ಥ್ಯವುಳ್ಳವನೆಂದೂ, ಸತ್ತ್ವಗುಣವಂತನೆಂದಾಗಲಿ ಭಾವಿಸುತ್ತಾನೆ. ಯಥಾರ್ಥ ಜ್ಞಾನವಿಲ್ಲದಿದ್ದರೂ ತತ್ತ್ವಜ್ಞಾನಿಯನ್ನಾಗಿ ತಿಳಿದುಕೊಳ್ಳುತ್ತಾನೆ. ಮೃತ್ಯುರಹಿತನಾಗಿದ್ದರೂ ಮೃತ್ಯುಗ್ರಸ್ಥನೆಂದೂ, ಅಚಲನಾಗಿದ್ದರೂ ಸಂಚರಿಸತಕ್ಕವನೆಂದೂ ತಿಳಿದುಕೊಳ್ಳುತ್ತಾನೆ.

ಅಕ್ಷೇತ್ರಃ ಕ್ಷೇತ್ರಮಾತ್ಮಾನಮಸರ್ಗಃ ಸರ್ಗಮಾತ್ಮನಃ ।
ಅತಮಾಸ್ತಮ ಆತ್ಮಾನಮಗತಿರ್ಗತಿಮಾತ್ಮನಃ ॥೪೭॥

ಪಾಂಚಭೌತಿಕ ಶರೀರದಿಂದ ಭಿನ್ನನಾಗಿದ್ದರೂ ತಾನೇ ಶರೀರನೆಂದೂ, ಜನ್ಮ-ಸ್ಥಿತಿಯಿಂದ ದೂರನಾಗಿದ್ದರೂ ಉತ್ಪತ್ತಿ ಉಳ್ಳವನೆಂದೂ, ತನ್ನಲ್ಲಿ ಯಾವುದೇ ಕೇಡುಗಳಿಲ್ಲದಿದ್ದರೂ ಕೇಡುಗಳುಳ್ಳವನೆಂದೂ, ಗಮನಶೀಲನಲ್ಲದಿದ್ದರೂ ಗಮನಶೀಲನೆಂದೂ ಭಾವಿಸಿಕೊಳ್ಳುತ್ತಾನೆ.

ಅಭವೋ ಭವಮಾತ್ಮಾನಮಭಯೋ ಭಯಮಾತ್ಮನಃ ।
ಅಕ್ಷರಃ ಕ್ಷರಮಾತ್ಮಾನಮಬುದ್ಧಿಸ್ತ್ವಭಿಮನ್ಯತೇ ॥೪೮॥

ಸಂಸಾರಿ ಅಲ್ಲದಿದ್ದರೂ ಸಂಸಾರಿ ಎಂದೂ, ಭಯರಹಿತನಾಗಿದ್ದರೂ ಭೀತನಾಗಿರುವೆನೆಂದೂ, ಅವಿನಾಶಿಯಾಗಿದ್ದರೂ ನಾಶವುಳ್ಳವನೆಂದೂ, ಜ್ಞಾನ ರಹಿತನಾದುದರಿಂದ ಅಭಿಮಾನದಿಂದ ಹೀಗೆ ಜೀವನು ತಿಳಿದಿರುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ವಸಿಷ್ಠಕರಾಲಜನಕಸಂವಾದೇ
ಷಟ್‌ತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೇಳನೆಯ ಅಧ್ಯಾಯ

ವಸಿಷ್ಠ-ಜನಕರ ಸಂವಾದ.

ವಸಿಷ್ಠಃ

ಏವಮಪ್ರತಿಬುದ್ಧತ್ವಾದಬುದ್ಧಜನಸೇವನಾತ್ ।
ಸರ್ಗಕೋಟಿಸಹಸ್ರಾಣಿ ಪತನಾಂತಾನಿ ಗಚ್ಛತಿ ॥೧॥

ವಸಿಷ್ಠ- ಹೀಗೆ ಜೀವನು ಅಜ್ಞಾನದಿಂದ, ಅಜ್ಞಾನಿಗಳ ಸಹವಾಸದಿಂದ ಪತನವನ್ನು ಹೊಂದುತ್ತಲೇ ಇರುತ್ತಾನೆ. ಸಾವಿರ ಕೋಟಿ ಜನ್ಮಗಳನ್ನು ತಾಳುತ್ತಲೇ ಇರುತ್ತಾನೆ.

ಧಾಮ್ನಾ ಧಾಮಸಹಸ್ರಾಣಿ ಮರಣಾಂತಾನಿ ಗಚ್ಛತಿ ।
ತಿರ್ಯಗ್ಯೋನೌ ಮನುಷ್ಯತ್ವೇ ದೇವಲೋಕೇ ತಥೈವ ಚ ॥೨॥

ಒಂದೊಂದು ಸ್ಥಾನದಿಂದ ಸಾವಿರಾರು ಸ್ಥಾನಗಳಿಗೆ ಹೋಗುತ್ತಾ ಜನನ ಮರಣಗಳನ್ನು ಹೊಂದುತ್ತಲೇ ಇರುತ್ತಾನೆ.

ಚಂದ್ರಮಾ ಇವ ಭೂತಾನಾಂ ಪುನಸ್ತತ್ರ ಸಹಸ್ರಶಃ ।
ಲೀಯತೇऽಪ್ರತಿಬುದ್ಧತ್ವಾದೇವಮೇಷ ಹ್ಯಬುದ್ಧಿಮಾನ್ ॥೩॥

ಜೀವನು ಅಜ್ಞಾನಿಯಾದುದರಿಂದ, ಪಂಚದಶ ಕಲೆಗಳು ತನಗೆ ಸಂಬಂಧಿಸಿದವುಗಳಲ್ಲ ಎಂಬುದನ್ನು ತಿಳಿಯದೆ ಉಳಿದ ಹದಿನಾರನೆಯ ಕಲೆಯಿಂದ ಕೂಡಿರುವ ಚಂದ್ರನು ಪುನಃ ಆ ಒಂದೇ ಕಲೆಯಿಂದ ಪ್ರತಿದಿನವೂ ಅಭಿವೃದ್ಧಿಯನ್ನು ಹೊಂದುತ್ತಾ

ಹದಿನೈದು ಕಲೆಗಳಿಂದ ಸಹಿತನಾಗಿ ಪೂರ್ಣಮಂಡಲದಲ್ಲಿ ಕಾಣಿಸಿಕೊಳ್ಳುತ್ತಾ ಪುನಃ ಒಂದೊಂದೇ ಕಲೆಗಳಿಂದ ಹೀನನಾಗಿ ಅಮಾವಾಸ್ಯೆಯ ದಿವಸ ಒಂದೇ ಕಲೆಯಿಂದ ಕೂಡಿದವನಾಗಿ ಪುನಃ ಅಭಿವೃದ್ಧಿಯನ್ನು ಹೇಗೆ ಹೊಂದುತ್ತಾನೋ, ತನ್ನಲ್ಲಿರುವ ಈ ವೃದ್ಧಿ- ಹ್ರಾಸಗಳನ್ನು ಹೇಗೆ ಅರಿಯುವುದಿಲ್ಲವೋ, ಈ ರೀತಿ ಚಂದ್ರನಂತೆಯೇ ಪರಮಾತ್ಮಜ್ಞಾನದಿಂದ ರಹಿತನಾದ ಜೀವನು ಏಕಾದಶೇಂದ್ರಿಯಗಳಿಂದ ಸಹಿತವಾದ, ಪಂಚಭೂತಗಳಿಂದ ಕೂಡಿರುವ, ಷೋಡಶ ಕಲೆಗಳಿಂದ ದೂರನಾದರೂ ಜೀವನು ಪುನಃ ಹುಟ್ಟನ್ನು ಪಡೆದು ಅವುಗಳಿಂದ ಸಮೃದ್ಧಿಯನ್ನು ಹೊಂದಿ, ಪುನಃ ಮರಣವನ್ನು ಹೊಂದುತ್ತಾ, ಹೀಗೆ ಸಾವಿರಾರು ಬಾರಿ ಉತ್ಪತ್ತಿ-ಲಯಗಳನ್ನು ಹೊಂದುತ್ತಲೇ ಇರುತ್ತಾನೆ. ಹಿಂದೆ ಈ ವಿಚಾರವನ್ನೇ 'ಧಾಮ್ನಾ ಧಾಮಸಹಸ್ರಾಣಿ' ಎಂದು ತಿಳಿಸಿರುತ್ತಾರೆ.

ಕಲಾಃ ಪಂಚದಶಾ ಯೋನಿಸ್ತದ್ವಾಮ ಇತಿ ಪಠ್ಯತೇ ।
ನಿತ್ಯಮೇತದ್ ವಿಜಾನೀಹಿ ಸೋಮಃ ಷೋಡಶಮೀ ಕಲಾ ॥೪॥

ಚಂದ್ರಮಂಡಲವು ಹದಿನೈದು ಕಲೆಗಳಿಂದ ಕೂಡಿದೆ ಎಂಬುದಾಗಿ ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಚಂದ್ರನಿಂದ ಸಹಿತವಾದಾಗ ಹದಿನಾರು ಕಲೆಗಳಿಂದ ಯುಕ್ತವಾದುದು ಚಂದ್ರಮಂಡಲ ಎಂಬುದನ್ನು ತಿಳಿದುಕೊ.

ಕಲಾಯಾಂ ಜಾಯತೇऽಜಸ್ರಂ ಪುನಃ ಪುನರಬುದ್ಧಿಮಾನ್ ।
ಧಾಮ ತಸ್ಯೋಪಯುಂಜಂತಿ ಭೂಯ ಏವ ತು ಜಾಯತೇ ॥೫॥

ಚಂದ್ರನಲ್ಲಿ ಮೂಲಭೂತವಾಗಿರುವ ಕಲೆಯು ಒಂದೇ ಆಗಿದ್ದರೂ ಸೇರಿಕೊಂಡಂತಹ ಕಲೆಗಳನ್ನೆಲ್ಲ ತನ್ನದ್ದೇ ಎಂದು ಭಾವಿಸಿಕೊಳ್ಳುತ್ತಾನೆ. ಆದರೆ ಆಯಾ ಕಲೆಗಳಿಗೆ ಅಭಿಮಾನಿಗಳಾದ ದೇವತೆಗಳು ಚಂದ್ರನಲ್ಲಿ ವೃದ್ಧಿಯನ್ನು ಪಡೆದು ಪುನಃ ತಮ್ಮ ಕಲೆಗಳನ್ನು ತಾವೂ ಉಪಭೋಗಿಸುತ್ತವೆ. ಉಪಭೋಗಿಸಿದಾಗ ಚಂದ್ರನು ಒಂದೇ ಕಲೆಯಿಂದ ಕೂಡಿರುತ್ತಾನೆ. ಪುನಃ ಆಯಾ ದೇವತೆಗಳು ಇವನಲ್ಲಿ ಸೇರಿದಾಗ ಹುಟ್ಟನ್ನು, ಅಭಿವೃದ್ಧಿಯನ್ನೂ ಹೊಂದುತ್ತಾನೆ.

ಷೋಡಶೀ ತು ಕಲಾ ಸೂಕ್ಷ್ಮಾ ಸ ಸೋಮ ಉಪಧಾರ್ಯತಾಮ್ ।
ನ ತೂಪಯುಜ್ಯತೇ ದೇವೈರ್ದೇವಾನುಪಯುನಕ್ತಿ ಸಾ ॥೬॥

ಚಂದ್ರನಲ್ಲಿ ಕಾಣುವ ಹದಿನಾರು ಕಲೆಗಳನ್ನು ದೇವತೆಗಳು ಕೃಷ್ಣಪಕ್ಷದಲ್ಲಿ ಸ್ವೀಕರಿಸಿದಾಗ ಚಂದ್ರನು ಒಂದೇ ಕಲೆಯಿಂದ ಕೂಡಿಕೊಳ್ಳುತ್ತಾನೆ. ಪುನಃ ದೇವತೆಗಳು ಶುಕ್ಲಪಕ್ಷದಲ್ಲಿ ಆ ಚಂದ್ರನ ಜೊತೆಗೆ ತಮ್ಮ ಕಲೆಗಳಿಂದ ಸೇರಿಕೊಂಡಾಗ ಚಂದ್ರನು ನಾನು ಪೂರ್ಣನೆಂದು ಭಾವಿಸುತ್ತಾನೆ. ವಸ್ತುತಃ ಹದಿನಾರನೆಯ ಕಲೆ ಎನಿಸಿದ ಸೂಕ್ಷ್ಮ ಕಲೆ ಏನಿದೆಯೋ ಅದು ಮಾತ್ರ ಚಂದ್ರನೆಂದು ನೀನೂ ತಿಳಿದುಕೊ.

ಏತಾನ್ನ ಕ್ಷಪಯಿತ್ವಾ ಹಿ ಜಾಯತೇ ನೃಪಸತ್ತಮ ।
ಸಾ ಹ್ಯಸ್ಯ ಪ್ರಕೃತಿರ್ದಷ್ಟಾ ತತ್‌ಕ್ಷಯಾನ್ಮೋಕ್ಷ ಉಚ್ಯತೇ ॥೭॥

ಈ ಕಲೆಯನ್ನು ವಿನಾಶಗೊಳಿಸದೆ ಇರುವುದರಿಂದಲೇ ಚಂದ್ರನು ಪುನಃ ಪುನಃ ಹುಟ್ಟುತ್ತಿರುತ್ತಾನೆ. ಈ ಕಲೆಯೇ ಪ್ರಕೃತಿ ಎನಿಸಿದೆ. ಅದರ ಕ್ಷಯದಿಂದ ಮೋಕ್ಷವು ಹೇಳಲ್ಪಟ್ಟಿದೆ.

ತದೇವಂ ಷೋಡಶಕಲಂ ದೇಹಮವ್ಯಕ್ತಸಂಜ್ಞಕಮ್ ।
ಮಮಾಯಮಿತಿ ಮನ್ವಾನಸ್ತತ್ರೈವ ಪರಿವರ್ತತೇ ॥೮॥

ಈ ಚಂದ್ರನಂತೆಯೇ ಷೋಡಶ ಕಲೆಗಳಿಂದ ಕೂಡಿರುವ ಜೀವನು ಅವ್ಯಕ್ತ ಎಂಬ ಹೆಸರಿನ ದೇಹವನ್ನು ಹೊಂದಿರುತ್ತಾನೆ. ಪಂಚಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನಸ್ಸು ಇವುಗಳನ್ನು ತನ್ನದ್ದೆಂದು ಭಾವಿಸಿರುತ್ತಾನೆ. ಆದ್ದರಿಂದಲೇ ಈ ಸಂಸಾರದಲ್ಲಿಯೇ ಸುತ್ತುತ್ತಿರುತ್ತಾನೆ.

ಪಂಚವಿಂಶಸ್ತಥೈವಾತ್ಮಾ ತಸ್ಯೈವಾ ಪ್ರತಿಬೋಧನಾತ್ ।
ವಿಮಲಸ್ಯ ವಿಶುದ್ಧಸ್ಯ ಶುದ್ಧಾನಿಲನಿಷೇವಣಾತ್ ॥೯॥

ಅಶುದ್ಧ ಏವ ಶುದ್ಧಾತ್ಮಾ ತಾದೃಗ್ಭವತಿ ಪಾರ್ಥಿವ ।
ಅಬುದ್ಧಸೇವನಾಚ್ಚಾಪಿ ಬುದ್ಧೋಽಪ್ಯಬುಧತಾಂ ವ್ರಜೇತ್ ॥೧೦॥

ಇಪ್ಪತ್ತೈದನೆಯ ತತ್ತ್ವವು ಪರಮಾತ್ಮನೇ ಆಗಿದ್ದಾನೆ. ಅಂತಹ ಪರಮಾತ್ಮನು ಜೀವರ ಶರೀರದಲ್ಲಿಯೇ ಇದ್ದಾನೆ. ಅಂತಹ ಪರಮಾತ್ಮನನ್ನು ತಿಳಿಯದೆ ಇರುವ ಕಾರಣದಿಂದ ಪ್ರಕೃತಿ ಬಂಧನದಲ್ಲಿಸಿಲುಕಿದ್ದಾನೆ. ವಿಮಲನೂ, ವಿಶುದ್ಧನೂ ಆದ ಜೀವನು ಶುದ್ಧವಾದ ಆಹಾರವನ್ನು ಸ್ವೀಕರಿಸುವುದರಿಂದ ಅಶುದ್ಧನಾಗಿದ್ದರೂ ಪರಮಾತ್ಮನ ಅನುಗ್ರಹದಿಂದ

ಶುದ್ಧಾತ್ಮನಾಗುತ್ತಾನೆ. ಅಜ್ಞಾನಿಗಳ ಸಂಗದಿಂದ ಜ್ಞಾನಿಯಾಗಿದ್ದರೂ ಅಜ್ಞಾನಿಯಾಗುತ್ತಾನೆ.

ತಥೈವಾಪ್ರತಿಬುದ್ಧೋಽಪಿ ಜ್ಞೇಯೋ ನೃಪತಿಸತ್ತಮ ।
ಪ್ರಕೃತೇಸ್ತ್ರಿಗುಣಾಯಾಸ್ತು ಸೇವನಾತ್ ಪ್ರಾಕೃತೋ ಭವೇತ್ ॥೧೧॥

ಅವಿವೇಕಿಯಾಗಿದ್ದರೂ ವಿವೇಕಿಗಳ ಸಹವಾಸದಿಂದ ವಿವೇಕಿಯಾಗುತ್ತಾನೆ. ತ್ರಿಗುಣಾತ್ಮಕವಾದ ಪ್ರಕೃತಿಯ ಸಂಬಂಧದಿಂದ ಜೀವನು ಪ್ರಾಕೃತನಂತೆ ಆಗಿರುತ್ತಾನೆ.

ಕರಾಲಜನಕಃ

ಅಕ್ಷರಕ್ಷರಯೋರೇಷ ದ್ವಯೋಃ ಸಂಬಂಧ ಇಷ್ಯತೇ ।
ಸ್ತ್ರೀಪುಂಸೋರ್ವಾಪಿ ಭಗವನ್ ಸಂಬಂಧಸ್ತದ್ವದುಚ್ಯತೇ ॥೧೨॥

ಕರಾಲಜನಕ– ವಸಿಷ್ಠರೇ, ಅಕ್ಷರನಾದ ಜೀವನಿಗೆ ಕ್ಷರವೆನಿಸಿದ ಪ್ರಕೃತಿಗೂ ಈ ರೀತಿಯಾದ ಸಂಬಂಧವು ಅಂಗೀಕರಿಸಲ್ಪಟ್ಟಿದೆ. ಸ್ತ್ರೀ-ಪುರುಷರಿಗಿರುವ ಸಂಬಂಧದಂತೆ ಈ ಜೀವ ಮತ್ತು ಪ್ರಕೃತಿಗಳಿಗೆ ಸಂಬಂಧವಿದೆ.

ಋತೇ ನ ಪುರುಷೇಣೇಹ ಸ್ತ್ರೀ ಗರ್ಭಂ ಧಾರಯತ್ಯುತ ।
ಋತೇ ಸ್ತ್ರಿಯಂ ನ ಪುರುಷೋ ರೂಪಂ ನಿರ್ವರ್ತಯೇತ್ತಥಾ ॥೧೩॥

ಸ್ತ್ರೀಯು ಜಗತ್ತಿನಲ್ಲಿ ಪುರುಷನ ಸಂಬಂಧವಿಲ್ಲದೆ ಗರ್ಭವನ್ನು ಧರಿಸಳು. ಇದರಂತೆ ಸ್ತ್ರೀ ಇಲ್ಲದಿದ್ದರೆ ಪುರುಷನು ಮತ್ತೊಂದು ಶರೀರವನ್ನು ಸೃಷ್ಟಿಸಲಾರ.

ಅನ್ಯೋನ್ಯಸ್ಯಾಭಿಸಂಬಂಧಾದನ್ಯೋನ್ಯಗುಣಸಂಶ್ರಯಾತ್ ।
ರೂಪಂ ನಿರ್ವರ್ತಯತ್ಯೇತದೇವಂ ಸರ್ವಾಸು ಯೋನಿಷು ॥೧೪॥

ದಂಪತಿಗಳ ಪರಸ್ಪರ ಸಂಬಂಧದಿಂದ, ಪರಸ್ಪರ ಗುಣಗಳ ಆಶ್ರಯದಿಂದ ಮಕ್ಕಳನ್ನು ಪಡೆಯಲು ಸಾಧ್ಯವಾಗುತ್ತದೆ. ಸಮಸ್ತ ತಿರ್ಯಗ್, ಮನುಷ್ಯ, ದೇವತಾ ಯೋನಿಗಳಲ್ಲಿಯೂ ಇದೇ ರೀತಿಯಾದ ಸಂಬಂಧಗಳಿವೆ.

ರತ್ಯರ್ಥಮಭಿಸಂರೋಧಾದನ್ಯೋನ್ಯಗುಣಸಂಶ್ರಯಾತ್ ।
ಋತೌ ನಿರ್ವರ್ತತೇ ರೂಪಂ ತದ್ ವಕ್ಷ್ಯಾಮಿ ನಿದರ್ಶನಮ್ ॥೧೫॥

ಯೇ ಗುಣಾಃ ಪುರುಷಸ್ಯೇಹ ಯೇ ಚ ಮಾತೃಗುಣಾಸ್ತಥಾ ।
ಅಸ್ಥಿ ಸ್ನಾಯು ಚ ಮಜ್ಜಾ ಚ ಜಾನೀಮಃ ಪಿತೃತೋ ದ್ವಿಜ ॥೧೬॥

ಸುಖಕ್ಕಾಗಿಯೇ ಸ್ತ್ರೀಯೊಡನೆ ಪುರುಷನ ಸಂಬಂಧವಾದಾಗ ಇಬ್ಬರ ಗುಣಗಳ ಮೇಲಣದಿಂದ ಪುತ್ರೋತ್ಪತ್ತಿಯಾಗುತ್ತದೆ. ಪುರುಷನ ಯಾವ ಗುಣಗಳಿಂದ ತಾಯಿಯ ಯಾವ ಗುಣಗಳು ಸೇರಿ ಪ್ರಜೋತ್ಪತ್ತಿಯಾಗುತ್ತದೆ ಎಂಬುದನ್ನು ದೃಷ್ಟಾಂತ ಪೂರ್ವಕವಾಗಿ ಹೇಳುತ್ತೇನೆ. ಮೂಳೆ, ನರ, ಮಜ್ಜೆ ಇವುಗಳು ತಂದೆಯ ಗುಣಗಳೆಂದು ನಾವು ತಿಳಿದಿರುತ್ತೇವೆ.

ತ್ವಗ್ಮಾಂಸಂ ಶೋಣಿತಂ ಚೈವ ಮಾತೃಜಾನ್ಯಪಿ ಶುಶ್ರುಮ ।
ಏವಮೇತದ್ದ್ವಿಜಶ್ರೇಷ್ಠ ವೇದಶಾಸ್ತ್ರೇಷು ಪಠ್ಯತೇ ॥೧೭॥

ಚರ್ಮ, ಮಾಂಸ, ರಕ್ತಗಳು ತಾಯಿಯಿಂದ ಬಂದ ಗುಣಗಳೆಂದು ತಿಳಿದಿದ್ದೇವೆ. ಈ ವಿಷಯ ವೇದಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ ಹೇಳಲ್ಪಟ್ಟಿದೆ.

ಪ್ರಮಾಣಂ ಯಚ್ಚ ವೇದೋಕ್ತಂ ಶಾಸ್ತ್ರೋಕ್ತಂ ಯಚ್ಚ ಪಠ್ಯತೇ ।
ವೇದಶಾಸ್ತ್ರಪ್ರಮಾಣಂ ಚ ಪ್ರಮಾಣಂ ತತ್ ಸನಾತನಮ್ ॥೧೮॥

ಏವಮೇವಾಭಿಸಂಬದ್ಧೌ ನಿತ್ಯಂ ಪ್ರಕೃತಿಪೂರುಷೌ ।
ಪಶ್ಯಾಮಿ ಭಗವಂಸ್ತಸ್ಮಾನ್ಮೋಕ್ಷಧರ್ಮೋ ನ ವಿದ್ಯತೇ ॥೧೯॥

ವೇದೋಕ್ತವಾದ ಯಾವ ಪ್ರಮಾಣವಿದೆಯೋ, ಶಾಸ್ತ್ರೋಕ್ತ ಪ್ರಮಾಣವನ್ನು ಯಾವ ಪಂಡಿತರು ಹೇಳುತ್ತಾರೋ ಅವೆರಡೂ ಸನಾತನವಾದ ಪ್ರಮಾಣಗಳೇ ಆಗಿವೆ. ಹೀಗೆ ಪರಸ್ಪರ ಗುಣಗಳ ಆಶ್ರಯದಿಂದ ಪ್ರಕೃತಿ-ಪುರುಷರು ಪರಸ್ಪರವಾಗಿ ಸೃಷ್ಟಿ ಕಾರ್ಯವನ್ನು ಮಾಡುತ್ತಾರೆ. ಪ್ರಕೃತಿ-ಪುರುಷರಿಗೆ ನಿತ್ಯ ಸಂಬಂಧವು ಇದ್ದೇ ಇದೆ. ಈ ರೀತಿ ಇದ್ದಾಗ ಮೋಕ್ಷವೆಂಬುದು ಹೇಗೆ ಸಾಧ್ಯ ? ಆದ್ದರಿಂದ ಮೋಕ್ಷವೇ ಇಲ್ಲ ಎಂದು ಭಾವಿಸುತ್ತೇನೆ.

ಅಥ ವಾನಂತರಕೃತಂ ಕಿಂಚಿದೇವ ನಿದರ್ಶನಮ್ ।
ತನ್ಮಮಾಚಕ್ಷ್ವ ತತ್ತ್ವೇನ ಪ್ರತ್ಯಕ್ಷೋ ಹ್ಯಸಿ ಸರ್ವಥಾ ॥೨೦॥

ಪ್ರಕೃತಿ ಸಂಬಂಧವಿದ್ದರೂ ಪುರುಷನಿಗೆ ಮೋಕ್ಷವಾಗಿದೆ ಎಂಬುದಕ್ಕೆ ನಿಮ್ಮ ಬಳಿ ದೃಷ್ಟಾಂತವೇನಾದರೂ ಇದ್ದರೆ ಯಥಾರ್ಥವಾಗಿ ನನಗೆ ತಿಳಿಸಿರಿ. ತಮಗೆ ಎಲ್ಲ ವಿಷಯಗಳು ಪ್ರತ್ಯಕ್ಷವಾಗಿಯೇ ಕಾಣಿಸುತ್ತವೆ.

ಮೋಕ್ಷಕಾಮಾ ವಯಂ ಚಾಪಿ ಕಾಂಕ್ಷಿಮೋ ಯದನಾಮಯಮ್ ।
ಅದೇಹಮಜರಂ ದಿವ್ಯಮತೀಂದ್ರಿಯಮನೀಶ್ವರಮ್ ॥೨೧॥

ನಮಗೂ ಮೋಕ್ಷದ ಬಯಕೆ ಇದೆ. ನಿರ್ವಿಕಾರನಾದ, ಯಾವುದೇ ರೋಗ-ರುಜಿನಗಳಿಲ್ಲದ, ಪ್ರಾಕೃತದೇಹವಿಲ್ಲದ, ಅಜರನಾದ, ದಿವ್ಯನಾದ, ಪ್ರಾಕೃತ ಇಂದ್ರಿಯರಹಿತನಾದ, ಈಶ್ವರನಿಗಿಂತ ಭಿನ್ನನಾದ ಮುಕ್ತಜೀವನ ಬಗ್ಗೆ ತಿಳಿಯುವ ಬಯಕೆ ನನಗಿರುತ್ತದೆ.

ವಸಿಷ್ಠಃ

ಯದೇತದುಕ್ತಂ ಭವತಾ ವೇದಶಾಸ್ತ್ರನಿದರ್ಶನಮ್ ।
ಏವಮೇತದ್ಯಥಾ ಚೈತನ್ನ ಗೃಹ್ಣಾತಿ ತಥಾ ಭವಾನ್ ॥೨೨॥

ವಸಿಷ್ಠ– ಜನಕರಾಜನೇ, ವೇದಶಾಸ್ತ್ರಗಳ ದೃಷ್ಟಾಂತವನ್ನು ಕೊಟ್ಟು ಯಾವ ಪ್ರಕೃತಿ ಪುರುಷರ ನಿತ್ಯ ಸಂಬಂಧವನ್ನು ನೀನು ತಿಳಿಸಿದೆಯೋ ಆ ವಿಚಾರವು ನಾನು ಹೇಳಿದ ಪ್ರಮೇಯಗಳಂತೆ ಯಥಾರ್ಥವಾಗಿದೆ. ನೀನು ತಿಳಿದಂತೆ ಯಥಾರ್ಥವಾಗಿರುವುದಿಲ್ಲ.

ವ್ಯಾಖ್ಯಾನ ವಿಶೇಷ– ಈ ಪ್ರಕೃತಿ-ಪುರುಷರ ಬಗ್ಗೆ ಮುಂದೆ ನಾನು ಹೇಳುವಂತೆ ನೀನು ತಿಳಿದುಕೊಳ್ಳಬೇಕು. **'ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಕ್ಷರ ಉಚ್ಯತೇ। ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮಾ'** ಎಂಬ ಗೀತಾವಚನದಂತೆ ಮೂರು ಪುರುಷರು ಎಂದು ತಿಳಿದಾಗ ಅಕ್ಷರಪದವಾಚ್ಯಳಾದ ನಿತ್ಯಮುಕ್ತಳಾದ ಮಹಾಲಕ್ಷ್ಮಿಯು, ಕ್ಷರಾಕ್ಷರ ಅತೀತನಾದ ನಾರಾಯಣನು, ಕ್ಷರ ಪುರುಷರೆನಿಸಿದ ಜೀವರು ಎಂದು ಹೀಗೆ ಗ್ರಹಿಸಬೇಕು. ಇಬ್ಬರು ಪುರುಷರು ಎಂದು ವಿವಕ್ಷೆ ಇಟ್ಟುಕೊಂಡಲ್ಲಿ **'ಕ್ಷರಃ ಸರ್ವಾಣಿ ಭೂತಾನಿ'** ಎಂಬ ವಚನದಂತೆ ಕ್ಷರನೆನಿಸಿದ ಜೀವ, ಅಕ್ಷರನಾದ ನಾರಾಯಣ ಎಂದು ತಿಳಿಯಬೇಕು. ಇದಕ್ಕೆ ಪೂರಕವಾಗಿ **'ಅಕ್ಷರಮಂಬರಾಂತಧೃತೇಃ'** ಎಂಬ ವ್ಯಾಸರ ಸೂತ್ರದ ಪ್ರಮಾಣವೂ ಇದೆ. ಜೀವನು ಅಕ್ಷರ ಪುರುಷನೆಂದು ಯಾವ ಶಾಸ್ತ್ರವೂ ಹೇಳಲಿಲ್ಲ. ನೀನು ಜೀವನನ್ನು ಅಕ್ಷರ ಪುರುಷನೆಂದು ತಿಳಿದುಕೊಂಡಿರುವುದರಿಂದ ಈ ಶಾಸ್ತ್ರ ರಹಸ್ಯವನ್ನು ತಿಳಿಯಲಾಗುತ್ತಿಲ್ಲ ಎಂದು ವಸಿಷ್ಠರು ಜನಕನನ್ನು ಕುರಿತು ಬೋಧಿಸಿದ್ದಾರೆ ಎಂದು ತಿಳಿಯಬೇಕು.

ಧಾರ್ಯತೇ ಹಿ ತ್ವಯಾ ಗ್ರಂಥ ಉಭಯೋರ್ವೇದಶಾಸ್ತ್ರಯೋಃ ।
ನ ತು ಗ್ರಂಥಸ್ಯ ತತ್ತ್ವಜ್ಞೋ ಯಥಾವತ್ತ್ವಂ ನರೇಶ್ವರ ॥೨೩॥

ವೇದ,ಶಾಸ್ತ್ರಗಳಿಗೆ ಸಂಬಂಧಿಸಿದ ಎಲ್ಲ ಗ್ರಂಥಗಳನ್ನು ನೀನು ಬುದ್ಧಿಯಲ್ಲಿ ಧರಿಸಿರುವಿ. ಆದರೆ ಆ ಗ್ರಂಥಗಳಲ್ಲಿನ ಯಥಾವತ್ತಾದ ತತ್ತ್ವಗಳನ್ನು ನರೇಶ್ವರನೇ, ನೀನು ಅರ್ಥ ಮಾಡಿಕೊಂಡಿರುವುದಿಲ್ಲ.

ಯೋ ಹಿ ವೇದೇ ಚ ಶಾಸ್ತ್ರೇ ಚ ಗ್ರಂಥಧಾರಣತತ್ಪರಃ ।
ನ ಚ ಗ್ರಂಥಾರ್ಥತತ್ತ್ವಜ್ಞಸ್ತಸ್ಯ ತದ್ಧಾರಣಂ ವೃಥಾ ॥೨೪॥

ಯಾವಾತನು ವೇದ-ಶಾಸ್ತ್ರಗಳನ್ನು, ವೇದ-ಶಾಸ್ತ್ರ ಗ್ರಂಥಗಳನ್ನು ಧಾರಣೆ ಮಾಡುವುದರಲ್ಲಿ ಆಸಕ್ತನಾಗಿರುತ್ತಾನೋ, ಅದರ ಯಥಾರ್ಥ ತತ್ತ್ವಗಳನ್ನು ತಿಳಿದುಕೊಂಡಿರುವುದಿಲ್ಲವೋ ಅಂತಹ ವ್ಯಕ್ತಿಗೆ ಆ ವೇದ-ಶಾಸ್ತ್ರಗಳ ಧಾರಣೆಯು ವ್ಯರ್ಥವೇ ಸರಿ.

ಭಾರಂ ಸ ವಹತೇ ತಸ್ಯ ಗ್ರಂಥಸ್ಯಾರ್ಥಂ ನ ವೇತ್ತಿ ಯಃ ।
ಯಸ್ತು ಗ್ರಂಥಾರ್ಥತತ್ತ್ವಜ್ಞೋ ನಾಸ್ಯ ಗ್ರಂಥಾಗಮೋ ವೃಥಾ ॥೨೫॥

ಯಾವನು ಗ್ರಂಥದ ಅಭಿಪ್ರಾಯವನ್ನು ತಿಳಿಯದೆ ಕೇವಲ ಗ್ರಂಥದ ಶ್ಲೋಕಗಳನ್ನು ಬಾಯಿಪಾಠ ಮಾಡಿರುತ್ತಾನೋ ಅವನು ಗ್ರಂಥದ ಭಾರವನ್ನು ಹೊತ್ತಿದ್ದಾನೆ ಎಂದು ಅರ್ಥ. ಇದರಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ. ಗ್ರಂಥಾರ್ಥವನ್ನು ಹೃದ್ಗತ ಮಾಡಿಕೊಂಡಲ್ಲಿಗ್ರಂಥಾಧ್ಯಯನವು ವ್ಯರ್ಥವಾಗದು.

ಗ್ರಂಥಸ್ಯಾರ್ಥಂ ಚ ಪೃಷ್ಟಃ ಸಂಸ್ತಾದೃಶೋ ವಕ್ತುಮರ್ಹತಿ ।
ಯಥಾ ತತ್ತ್ವಾಭಿಗಮನಾದರ್ಥಂ ತಸ್ಯ ಸ ವಿಂದತಿ ॥೨೬॥

ಗ್ರಂಥಾರ್ಥವನ್ನು ತಿಳಿದ ವಿದ್ವಾಂಸನು, ಪ್ರಶ್ನಿಸಿದಲ್ಲಿ ಸರಿಯಾದ ತತ್ತ್ವವನ್ನು ತಿಳಿಸಲು ಸಮರ್ಥನಾಗುತ್ತಾನೆ. ಕಾರಣ ಆ ಗ್ರಂಥದ ಅರ್ಥವನ್ನು ಅವನು ಸರಿಯಾಗಿ ತಿಳಿದಿರುತ್ತಾನೆ.

ಯಸ್ತು ಸಂಸತ್ಸು ಕಥಯೇದ್ಗ್ರಂಥಾರ್ಥಂ ಸ್ಥೂಲಬುದ್ಧಿಮಾನ್ ।
ಸ ಕಥಂ ಮಂದವಿಜ್ಞಾನೋ ಗ್ರಂಥಂ ವಕ್ಷ್ಯತಿ ನಿರ್ಣಯಾತ್ ॥೨೭॥

ಯಾವನು ಸ್ಥೂಲವಾದ ಬುದ್ಧಿಯುಳ್ಳವನೋ ಅವನು ವಿದ್ವಾಂಸರ ಸಭೆಯಲ್ಲಿ ಗ್ರಂಥಾರ್ಥವನ್ನು ಹೇಳಲು ಅಸಮರ್ಥನು. ಅಲ್ಪಜ್ಞನಾದ ಅವನು ತನಗೆ ತಿಳಿಯದ ಗ್ರಂಥದ ನಿರ್ಣಯವನ್ನು ಹೇಗೆ ತಾನೆ ಹೇಳಿಯಾನು?

ನಿರ್ಣಯಂ ಚಾಪಿ ಛಿದ್ರಾತ್ಮಾ ನ ತಂ ವಕ್ಷ್ಯತಿ ತತ್ತ್ವತಃ ।
ಸೋಪಹಾಸಾತ್ಮತಾಮೇತಿ ಯಸ್ಮಾಚ್ಚೈವಾತ್ಮವಾನಪಿ ॥೨೮॥

ಯಾವನು ಬುದ್ಧಿಯು ಶಾಸ್ತ್ರಜ್ಞಾನದಿಂದ ರಹಿತವಾಗಿರುತ್ತದೋ ಅವನು ಯಥಾರ್ಥವಾಗಿ ಶಾಸ್ತ್ರಾರ್ಥವನ್ನು ತಿಳಿಸಲಾರನು. ಬುದ್ಧಿವಂತನಾಗಿದ್ದರೂ ಶಾಸ್ತ್ರಜ್ಞಾನ ಇಲ್ಲದವನು ಶಾಸ್ತ್ರದ ನಿರ್ಣಯವನ್ನು ಹೇಳಲು ಹೊರಟರೆ ಅಪಹಾಸ್ಯಕ್ಕೆ ತುತ್ತಾಗುತ್ತಾನೆ.

ತಸ್ಮಾತ್ತ್ವಂ ಶೃಣು ರಾಜೇಂದ್ರ ಯಥೈತದನುದೃಶ್ಯತೇ ।
ಯಾಥಾತಥ್ಯೇನ ಸಾಂಖ್ಯೇಷು ಯೋಗೇಷು ಚ ಮಹಾತ್ಮಸು ॥೨೯॥

ರಾಜೇಂದ್ರನೇ, ಆದ್ದರಿಂದ ಸಾಂಖ್ಯಯೋಗಗಳನ್ನು ತಿಳಿದಿರುವ ಜ್ಞಾನಿಗಳಲ್ಲಿ ಮೋಕ್ಷಕ್ಕೆ ಸಂಬಂಧಿಸಿದ ಅಭಿಪ್ರಾಯ ಏನಿರುತ್ತದೆ ಎಂಬುದನ್ನು ಯಥಾವತ್ತಾಗಿ ತಿಳಿಸುತ್ತೇನೆ, ಕೇಳು.

ಯದೇವ ಯೋಗಾಃ ಪಶ್ಯಂತಿ ಸಾಂಖ್ಯೈಸ್ತದನುಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಬುದ್ಧಿಮಾನ್ ॥೩೦॥

ಯೋಗಮಾರ್ಗವನ್ನು ಆಶ್ರಯಿಸಿದವರು ಯಾವ ಪರಬ್ರಹ್ಮನನ್ನು ಕಾಣುತ್ತಾರೋ, ಸಾಂಖ್ಯಯೋಗಿಗಳು ಅದನ್ನೇ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಫಲದ ದೃಷ್ಟಿಯಿಂದ ಯೋಗ, ಸಾಂಖ್ಯ ಎರಡೂ ಮಾರ್ಗಗಳನ್ನು ಒಂದೇ ಅಭಿಪ್ರಾಯವುಳ್ಳವುಗಳೆಂದು ಯಾವನು ತಿಳಿದಿರುತ್ತಾನೋ ಅವನೇ ಜಾಣನು.

ತ್ವಙ್ಮಾಂಸಂ ರುಧಿರಂ ಮೇದಃ ಪಿತ್ತಂ ಮಜ್ಜಾಸ್ಥಿ ಸ್ನಾಯು ಚ ।
ಏತದ್ಶೈಂದ್ರಿಯಕಂ ತಾತ ಯದ್ಬವಾನಿದಮಾಹ ವೈ ॥೩೧॥

ಶರೀರದಲ್ಲಿರುವ ಚರ್ಮ, ಮಾಂಸ, ರಕ್ತ, ಮೇಧಸ್ಸು, ಪಿತ್ತ, ಮಜ್ಜೆ, ಸ್ನಾಯು ಇವುಗಳಲ್ಲಿ ಶುಕ್ಲಶೋಣಿತಗಳು ಬಿಳಿ ರಕ್ತ ಎನಿಸಿರುವುದರಿಂದ ಇಂದ್ರಿಯ ಸಂಬಂಧಿ

ಯಾದ ಪ್ರಮೇಯವೆನಿಸಿವೆ. ಪ್ರತಿಯೊಬ್ಬರೂ ಕಣ್ಣಿನಿಂದ ಇಂತಹ ದೇಹವನ್ನು ನೋಡಬಹುದಾಗಿದೆ. ಇದರಲ್ಲಿ ಯಾವ ಅಪೂರ್ವತೆಯೂ ಇರುವುದಿಲ್ಲ.

ದ್ರವ್ಯಾದ್ ದ್ರವ್ಯಸ್ಯ ನಿಷ್ಪತ್ತಿರಿಂದ್ರಿಯಾದಿಂದ್ರಿಯಂ ತಥಾ ।
ದೇಹಾದ್ ದೇಹಮವಾಪ್ನೋತಿ ಬೀಜಾದ್ ಬೀಜಂ ತಥೈವ ಚ ॥೩೨॥

ಹೇಗೆ ಬೀಜದಿಂದ ಬೀಜವು ಉತ್ಪತ್ತಿಯನ್ನು ಹೊಂದುತ್ತದೋ, ದ್ರವ್ಯದಿಂದ ದ್ರವ್ಯದ ಉತ್ಪತ್ತಿಯು ಆಗುತ್ತದೋ ಇದರಂತೆ ಇಂದ್ರಿಯಗಳಿಂದ ಇಂದ್ರಿಯಗಳ ಉತ್ಪತ್ತಿ, ದೇಹದಿಂದ ದೇಹದ ಉತ್ಪತ್ತಿಯು ಆಗುತ್ತದೆ.

ನಿರಿಂದ್ರಿಯಸ್ಯ ಬೀಜಸ್ಯ ನಿರ್ದ್ರವ್ಯಸ್ಯಾಸ್ಯ ದೇಹಿನಃ ।
ಕಥಂ ಗುಣಾ ಭವಿಷ್ಯಂತಿ ನಿರ್ಗುಣತ್ವಾನ್ಮಹಾತ್ಮನಃ ॥೩೩॥

ಪ್ರಾಕೃತ ಇಂದ್ರಿಯ ರಹಿತನಾದ, ಸಮಸ್ತ ಜಗತ್ತಿಗೆ ನಿಮಿತ್ತ ಕಾರಣನಾದ, ಪ್ರಕೃತಿ ಎಂಬ ದ್ರವ್ಯ ಸಂಬಂಧದಿಂದ ರಹಿತನಾದ, ಜ್ಞಾನಾನಂದಮಯ ಶರೀರವುಳ್ಳ, ಅಕ್ಷರ ಪದ ವಾಚ್ಯವುಳ್ಳ ಪರಮಾತ್ಮನಿಗೆ, ಸತ್ವಾದಿ ಗುಣರಹಿತನಾದುದರಿಂದ ಶ್ವೇತ ಶುಕ್ಲತ್ವ, ವಿಕಾರಿತ್ವಮೊದಲಾದ ಗುಣಗಳು ಹೇಗೆ ಬರಲು ಸಾಧ್ಯ ? ಆದ್ದರಿಂದ ನೀನು ಹೇಳಿದ ಎಲ್ಲ ವಿಷಯಗಳು ಅಜ್ಞಾನದಿಂದ ವಿಜೃಂಭಿತವಾಗಿವೆ ಎಂದು ಅಭಿಪ್ರಾಯ.

ಗುಣಾ ಗುಣೇಷು ಜಾಯಂತೇ ತತ್ರೈವ ನಿವಿಶಂತಿ ಚ ।
ಏವಂ ಗುಣಾಃ ಪ್ರಕೃತಿತೋ ಜಾಯಂತೇ ಚ ನ ಸಂತಿ ಚ ॥೩೪॥

ಪ್ರಕೃತಿಯಲ್ಲಿರುವ ಶ್ವೇತ, ರಕ್ತ, ಕೃಷ್ಣ ಎಂಬ ಗುಣಗಳು ಪ್ರಕೃತಿಯ ಕಾರ್ಯವಾದ ದೇಹಗಳಲ್ಲಿ ಕಾಣುತ್ತವೆ. ಪ್ರಳಯ ಕಾಲದಲ್ಲಿ ಅಲ್ಲಿಯೇ ಲಯವನ್ನು ಹೊಂದುತ್ತವೆ. ಇದೇ ರೀತಿಯಾಗಿ ಪ್ರಾಕೃತ ಗುಣಗಳು ಪ್ರಕೃತಿಯಿಂದಲೇ ಹುಟ್ಟುತ್ತವೆ ಹೊರತು ಅಕ್ಷರ ಪುರುಷನಾದ ಪರಮಾತ್ಮನಲ್ಲಿ ಆ ಗುಣಗಳಿರುವುದಿಲ್ಲ ಎಂದು ಭಾವ.

ತ್ವಙ್ಮಾಂಸಂ ರುಧಿರಂ ಮೇದಃ ಪಿತ್ತಂ ಮಜ್ಜಾಸ್ಥಿ ಸ್ನಾಯು ಚ ।
ಅಷ್ಟೌ ತಾನ್ಯಥ ಶುಕ್ಲೇನ ಜಾನೀಹಿ ಪ್ರಾಕೃತಾನಿ ವೈ ॥೩೫॥

ಚರ್ಮ, ಮಾಂಸ, ರಕ್ತ, ಮೇಧಸ್ಸು, ಪಿತ್ತ, ಮಜ್ಜೆ, ಮೂಳೆ, ನರ ಎಂಬ ಎಂಟು

ಪದಾರ್ಥಗಳು ವೀರ್ಯದಿಂದ, ರಕ್ತದಿಂದ ಉತ್ಪನ್ನವಾಗುತ್ತವೆ. ಆದ್ದರಿಂದ ಇವೆಲ್ಲವೂ ಪ್ರಕೃತಿಗೆ ಸಂಬಂಧಿಸಿದವುಗಳು ಎಂದು ತಿಳಿದುಕೊ.

ಪುಮಾಂಶ್ಚೈವಾಪುಮಾಂಶ್ಚೈವ ತ್ರೈಲಿಂಗ್ಯಂ ಪ್ರಾಕೃತಂ ಸ್ಮೃತಮ್ ।
ನೈವಾಪುಮಾನ್ ಪುಮಾಂಶ್ಚೈವ ಸ ಲಿಂಗೀತ್ಯಭಿಧೀಯತೇ ॥೩೬॥

ಗುಣತ್ರಯಗಳ ಸಂಬಂಧವನ್ನು ಹೊಂದಿದ ಜೀವನನ್ನಾಗಲಿ ಅಥವಾ ದೇಹವನ್ನಾಗಲಿ ಪ್ರಾಕೃತ ಎಂದು ಕರೆಯಬಹುದು. ಆದರೆ ಜೀವ ವ್ಯತಿರಿಕ್ತನಾದ, ಗುಣತ್ರಯಗಳಿಂದ ಅತೀತನಾದ, ಪರಮಪುರುಷನಾದ ನಾರಾಯಣನನ್ನು ಎಂದೂ ಗುಣತ್ರಯ ಸಂಬಂಧ ಉಳ್ಳವನು ಎಂದು ಹೇಳಲಾಗುವುದಿಲ್ಲ.

ಅಲಿಂಗಾ ಪ್ರಕೃತಿರ್ಲಿಂಗೈರುಪಲಭ್ಯತಿ ಸಾತ್ಮಜೈಃ ।
ಯಥಾ ಪುಷ್ಪಫಲೈರ್ನಿತ್ಯಮೃತವೋ ಮೂರ್ತಯಸ್ತಥಾ ॥೩೭॥

ಕಣ್ಣಿಗೆ ಕಾಣುವ ಚಿಹ್ನೆಗಳಿಂದ ರಹಿತವಾದ ಮೂಲಪ್ರಕೃತಿಯು ಅದೃಶ್ಯಮಾನವಾದ ಕಾರಣ ಆ ಮೂಲಪ್ರಕೃತಿಯಿಂದ ಹುಟ್ಟಿದ ಮಹದಾದಿ ಕಾರ್ಯಗಳಿಂದ ಅದನ್ನು ಅನುಮಾನ ಮಾಡಿ ತಿಳಿದುಕೊಳ್ಳಬಹುದು. ಪರಸ್ಪರ ವೈಲಕ್ಷಣವನ್ನು ಹೊಂದಿರುವ ಗಿಡ-ಮರಗಳಲ್ಲಿ ಅವುಗಳ ಪುಷ್ಪ-ಫಲಗಳ ಅಭಿವ್ಯಕ್ತಿಯಿಂದ ಆಯಾ ಋತುಗಳಲ್ಲಿ ಮರಗಳ ಭೇದವನ್ನು ತಿಳಿಯುವಂತೆ ಮಹದಾದಿ ಕಾರ್ಯಗಳಿಂದ ಮೂಲಪ್ರಕೃತಿಯನ್ನು ತಿಳಿಯಬಹುದು.

ಏವಮಪ್ಯನುಮಾನೇನ ಹ್ಯಲಿಂಗಮುಪಲಭ್ಯತೇ ।
ಪಂಚವಿಂಶತಿಮಸ್ತಾತ ಲಿಂಗೇಷು ನಿಯತಾತ್ಮಕಃ ॥೩೮॥

ಇದೇ ರೀತಿ ಕಾರ್ಯತ್ವ, ಅನುಮಾನದಿಂದ ಕಣ್ಣಿಗೆ ಕಾಣದೆ ಇರುವ ಚಿಹ್ನೆಗಳು ಇಲ್ಲದಿದ್ದರೂ ಪ್ರಕೃತಿಯಂತೆ ಪರಮಾತ್ಮನನ್ನು ಅನುಮಾನದ ಮೂಲಕ ತಿಳಿಯಬಹುದು. ಭಗವಂತನು ಸ್ವಾತಂತ್ರ್ಯಾದಿ ಚಿಹ್ನೆಯುಳ್ಳವನು, ನಿಯತ ಸ್ವರೂಪಿಯು. ಆದ್ದರಿಂದಲೇ ಕಣ್ಣಿಗೆ ಕಾಣುವ ಯಾವ ಚಿಹ್ನೆಯೂ ಈ ಪರಬ್ರಹ್ಮನಲ್ಲಿ ತೋರುವುದಿಲ್ಲ. ಇಂತಹ ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನು ಎಲ್ಲ ಶರೀರಗಳಲ್ಲಿಯೂ ನಿಯತನಾಗಿ ಇದ್ದಾನೆ.

ಅನಾದಿನಿಧನೋನಂತಃ ಸರ್ವದರ್ಶೀ ನಿರಾಮಯಃ ।
ಕೇವಲಂ ತ್ವಭಿಮಾನಿತ್ವಾದ್ ಗುಣೇಷ್ವಗುಣ ಉಚ್ಯತೇ ॥೩೯॥

ಅನಾದಿ ಕಾಲದಿಂದ ಹುಟ್ಟು-ಸಾವುಗಳಿಲ್ಲದವನು, ಅನಂತನು, ಸರ್ವದರ್ಶಿಯು, ನಿರಾಮಯನು, ಸ್ವರೂಪಭೂತವಾದ ಸರ್ವಜ್ಞತ್ವಾದಿ ಗುಣಗಳಿಂದ ಕೂಡಿದವನು. ಮಾಯಾದಿ ಉಪಾಧಿಗಳಿಲ್ಲದೆ ಸಮಸ್ತ ಜೀವರಿಗೆ ಅಭಿಮಾನಿಯಾಗಿರುವುದರಿಂದ ಅಗುಣ ಎಂದು ಕರೆಸಿಕೊಳ್ಳುತ್ತಾನೆ. ಅನಂತ ಗುಣಸ್ವರೂಪನಾಗಿರುವುದರಿಂದ ಭಗವಂತನು ಅಗುಣ ಎಂದು ಕರೆಸಿಕೊಳ್ಳುತ್ತಾನೆ.

ಗುಣಾ ಗುಣವತಃ ಸಂತಿ ನಿರ್ಗುಣಸ್ಯ ಕುತೋ ಗುಣಾಃ ।
ತಸ್ಮಾದೇವಂ ವಿಜಾನಂತಿ ಯೇ ಜನಾ ಗುಣದರ್ಶಿನಃ ॥೪೦॥

ಗುಣಗಳಿಗೆ ಆಶ್ರಯನಾದ ಒಬ್ಬ ಗುಣಿಯು ಇರಬೇಕು. ಭಗವಂತನು ವಿಶೇಷ ಶಕ್ತಿಯಿಂದ ಗುಣಿಯೂ ಆಗುತ್ತಾನೆ, ಗುಣವೂ ಆಗುತ್ತಾನೆ. ಸರ್ವಥಾ ಭಗವಂತನು ಗುಣರಹಿತನೆಂದರೆ ಜ್ಞಾನಾನಂದಾದಿ ಗುಣಗಳನ್ನಾದರೂ ಯಾವ ಪ್ರಮಾಣದಿಂದ ಹೇಳಬೇಕು? ಆದ್ದರಿಂದ ಭಗವಂತನ ಗುಣಗಳನ್ನು ಚೆನ್ನಾಗಿ ವಿಮರ್ಶಿಸುವ ಸಜ್ಜನರು ಪ್ರಾಕೃತ ಗುಣರಹಿತನೆಂದೇ ಹೇಳುತ್ತಾರೆ ವಿನಾ ಸರ್ವಾತ್ಮನಾ ಗುಣರಹಿತನೆಂದು ಹೇಳುವುದಿಲ್ಲ. ಪ್ರಕೃತಿಯ ಗುಣದಿಂದ ನಿತ್ಯವೂ ದೂರನಾದವನು ಎಂದೇ ಹೇಳುತ್ತಾರೆ.

ಯದಾ ತ್ವೇಷ ಗುಣಾನೇತಾನ್ ಪ್ರಾಕೃತಾನಭಿಮನ್ಯತೇ ।
ತದಾ ಸ ಗುಣಹಾನ್ಯೈನಂ ಪರಂ ಸಮನುಪಶ್ಯತಿ ॥೪೧॥

ಯಾವ ಭಗವಂತನ ದೆಸೆಯಿಂದ ಜೀವನು ಪ್ರಾಕೃತವಾದ ಗುಣಗಳನ್ನೇ ತನ್ನ ಗುಣಗಳೆಂದು ಅಭಿಮಾನ ಹೊಂದಿರುತ್ತಾನೋ ಅಂತಹ ಭಗವಂತನ ಅನುಗ್ರಹದಿಂದ ವಿವೇಕವನ್ನು ಪಡೆದುಕೊಂಡ ಜೀವನು ಪರಮಾತ್ಮನು ಪ್ರಾಕೃತ ಗುಣರಹಿತನೆಂದು ತಿಳಿದಾಗ, ತನ್ನಲ್ಲಿರುವ ಗುಣಗಳು ತಾತ್ಕಾಲಿಕವೆಂದು ಅರ್ಥ ಮಾಡಿಕೊಂಡು ಪರಮಾತ್ಮನು ತನಗಿಂತ ಭಿನ್ನನಾಗಿದ್ದಾನೆ, ಅತ್ಯಂತ ಉತ್ತಮನಾಗಿದ್ದಾನೆ ಎಂಬುದನ್ನು ತಿಳಿಯುತ್ತಾನೆ. ತಾನು ಬದ್ಧನು, ಪರಮಾತ್ಮನು ಬಂಧರಹಿತನು. ಆದ್ದರಿಂದ ಜೀವ-ಪರಮಾತ್ಮನಿಗೆ ಭೇದವೇ ಇದೆ ಎಂಬುದನ್ನು ತಿಳಿಯುತ್ತಾನೆ. ನಿತ್ಯವೂ ಬಂಧರಹಿತನಾದ

ವಿಷ್ಣುವು ತನಗಿಂತ ಉತ್ತಮನು ಎಂಬ ಯಥಾರ್ಥ ಜ್ಞಾನವು ಜೀವನಿಗೆ ಉಂಟಾಗುತ್ತದೆ. (ಪರಮಾತ್ಮನ ಅನುಗ್ರಹದಿಂದ ಈ ರೀತಿಯಾದ ಗುಣವನ್ನು ಹೊಂದುತ್ತಾನೆ ಎಂದು ಭಾವ).

ಯತ್ತದ್ ಬುದ್ಧೇಃ ಪರಂ ಪ್ರಾಹುಃ ಸಾಂಖ್ಯಾ ಯೋಗಾಶ್ಚ ಸರ್ವಶಃ ।
ಬುದ್ಧ್ಯಮಾನಂ ಮಹಾಪ್ರಾಜ್ಞಮಬುದ್ಧಪರಿವರ್ಜನಾತ್ ॥೪೨॥

ಅಪ್ರಬುದ್ಧಮಥಾವ್ಯಕ್ತಂ ಅಗುಣಂ ಪ್ರಾಹುರೀಶ್ವರಮ್ ।
ನಿರ್ಗುಣಂ ಚೇಶ್ವರಂ ನಿತ್ಯಮಧಿಷ್ಠಾತಾರಮೇವ ಚ ॥೪೩॥

ಸಾಂಖ್ಯಯೋಗಿಗಳು ಪರಬ್ರಹ್ಮ ವಸ್ತುವನ್ನು ಬುದ್ಧಿತತ್ತ್ವವನ್ನೂ ಮೀರಿದ ವಸ್ತುವೆಂದು ಹೇಳುತ್ತಾರೆ. ಅಂತಹ ಅಜ್ಞಾನದ ಪರಿತ್ಯಾಗದಿಂದ ತಿಳಿಯಲ್ಪಡುವ, ಮಹಾಪ್ರಾಜ್ಞನಾದ ಜ್ಞಾನದಿಂದ ತಿಳಿಯಲ್ಪಡುವ, ಸಾಕಲ್ಯೇನ ತಿಳಿಯಲು ಶಕ್ಯವಿಲ್ಲದ, ಅವ್ಯಕ್ತ ಸ್ವಭಾವದವನಾದ, ಸತ್ವಾದಿ ಗುಣರಹಿತನಾದ ಭಗವಂತನನ್ನು ಈಶ್ವರನೆಂದು ಹೇಳುತ್ತಾರೆ. ಸಮಸ್ತ ಜೀವರ ಅಂತರ್ಯಾಮಿಯಾಗಿ ನಿತ್ಯವೂ ನೆಲೆನಿಂತಿದ್ದಾನೆ ಎಂದು ಹೇಳುತ್ತಾರೆ.

ಪ್ರಕೃತೇಶ್ಚ ಗುಣಾನಾಂ ಚ ಪಂಚವಿಂಶತಿಕಂ ಬುಧಾಃ ।
ಸಾಂಖ್ಯಯೋಗೇ ಚ ಕುಶಲಾ ಬುದ್ಧ್ಯಂತೇ ಪರಮೈಷಿಣಃ ॥೪೪॥

ಪ್ರಕೃತಿಯ ಗುಣವಾದ ಇಪ್ಪತ್ನಾಲ್ಕು ತತ್ತ್ವಗಳನ್ನು ಮೀರಿದ ಇಪ್ಪತ್ತೈದನೆಯ ತತ್ತ್ವವೆಂದು ಭಗವಂತನನ್ನು ಹೇಳುತ್ತಾರೆ. ಸಾಂಖ್ಯಯೋಗದಲ್ಲಿ ಕುಶಲರಾದ, ಪರತತ್ತ್ವವನ್ನು ತಿಳಿಯಲು ಬಯಸಿದ ವಿದ್ವಾಂಸರು ಹೀಗೆ ತಿಳಿದಿರುತ್ತಾರೆ.

ಯದಾ ಪ್ರಬುದ್ಧಾಸ್ತ್ವವ್ಯಕ್ತಮವಸ್ಥಾಜನ್ಮಭೀರವಃ ।
ಬುದ್ಧ್ಯಮಾನಂ ಪ್ರಬುದ್ಧ್ಯಂತಿ ಗಮಯಂತಿ ಸಮಂ ತದಾ ॥೪೫॥

ಯಾವಾಗ ಬಾಲ್ಯ-ಯೌವನಾದಿ ಅವಸ್ಥಾ ವಿಷಯದಲ್ಲಿ ಭಯಗೊಂಡ ವಿವೇಕಿಗಳು ತಿಳಿಯಲು ಯೋಗ್ಯನಾದ ಪರಬ್ರಹ್ಮನನ್ನು ಯೋಗ್ಯವಾದ ಕಾಲದಲ್ಲಿ ತಿಳಿಯುತ್ತಾರೋ ಆಗ ಅಂತಹ ಪರಬ್ರಹ್ಮನನ್ನೇ ಹೊಂದುತ್ತಾರೆ.

ಏತನ್ನಿದರ್ಶನಂ ಸಮ್ಯಗಸಮ್ಯಗನುದರ್ಶನಮ್ ।
ಬುದ್ಧ್ಯಮಾನಾಪ್ರಬುದ್ಧಾಭ್ಯಾಂ ಪೃಥಕ್‌ಪೃಥಗರಿಂದಮ ॥೪೬॥

ಅರಿಂದಮನೇ, ಸಾಂಖ್ಯಯೋಗದ ಜ್ಞಾನವು ಯುಕ್ತಿಯುಕ್ತವಾಗಿರುವುದರಿಂದ ಉತ್ತಮವಾಗಿದೆ. ಇದಕ್ಕೆ ವಿಪರೀತವಾದ ಅಜ್ಞಾನಿಗಳ ಯಾವ ಜ್ಞಾನವಿದೆಯೋ ಅದು ಯುಕ್ತಿಯುಕ್ತವಾದುದಲ್ಲ. ಸಾಂಖ್ಯಯೋಗ ಜ್ಞಾನಯೋಗಕ್ಕಿಂತ ಬೇರೆಯಾಗಿದೆ.

ಪರಸ್ಪರೇಣೈತದುಕ್ತಂ ಕ್ಷರಾಕ್ಷರನಿದರ್ಶನಮ್ ।
ಏಕತ್ವಮಕ್ಷರಂ ಪ್ರಾಹುರ್ನಾನಾತ್ವಂ ಕ್ಷರಮುಚ್ಯತೇ ॥೪೭॥

ಕ್ಷರಾಕ್ಷರರ ನಿದರ್ಶನವು ಹೀಗೆ ಪರಸ್ಪರ ಸಂಬಂಧದಿಂದ ಕೂಡಿದೆ ಎಂಬುದಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಯಾವಾಗಲೂ ಒಂದೇ ರೀತಿಯಾಗಿರುವ ವಸ್ತುವನ್ನೇ ಅಕ್ಷರವೆಂದು ಹೇಳುತ್ತಾರೆ. ನಾನಾ ಯೋನಿಗಳಲ್ಲಿ ಉತ್ಪತ್ತಿಯನ್ನು ಪಡೆಯುವ ತತ್ತ್ವವನ್ನೇ ಕ್ಷರ ಎಂದು ಹೇಳುತ್ತಾರೆ.

ಪಂಚವಿಂಶತಿನಿಷ್ಠೋಽಯಂ ಯದಾ ಸಮ್ಯಕ್ ಪ್ರವರ್ತತೇ ।
ಏಕತ್ವಂ ದರ್ಶನಂ ಚಾಸ್ಯ ನಾನಾತ್ವಂ ಚಾಪ್ಯದರ್ಶನಮ್ ॥೪೮॥

ಯಾವಾಗ ಮನುಷ್ಯನು ಕ್ಷರಾಕ್ಷರ ಸ್ವಭಾವವೆಲ್ಲವೂ ಇಪ್ಪತ್ತೈದನೆಯ ತತ್ತ್ವವಾದ ಪರಬ್ರಹ್ಮನನ್ನು ಅವಲಂಬಿಸಿಕೊಂಡಿದೆ ಎಂದು ಇಪ್ಪತ್ತೈದನೆಯ ತತ್ತ್ವವನ್ನೇ ಚೆನ್ನಾಗಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೋ ಅವನು ಅಧ್ಯಾತ್ಮಮಾರ್ಗದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾನೆ. ಏಕಪ್ರಕಾರವಾದ ಭಗವಂತನ ಜ್ಞಾನವೇ ನಿಜವಾದ ಜ್ಞಾನವು. ಭಿನ್ನ ಭಿನ್ನರಾದ ಜೀವರ ಜ್ಞಾನವೇ ನಶ್ವರ ಜ್ಞಾನವು.

ತತ್ತ್ವನಿಸ್ತತ್ತ್ವಯೋರೇತತ್ ಪೃಥಗೇವ ನಿದರ್ಶನಮ್ ।
ಪಂಚವಿಂಶತಿಸರ್ಗಂ ತು ತತ್ತ್ವಮಾಹುರ್ಮನೀಷಿಣಃ ॥೪೯॥

ಯಥಾರ್ಥ ಜ್ಞಾನ, ಪರಿತಾರ್ಥಜ್ಞಾನಗಳಿಗೆ ಪ್ರತ್ಯೇಕವಾಗಿ ನಿದರ್ಶನವನ್ನು ಈ ರೀತಿಯಾಗಿ ನೀಡಲಾಗಿದೆ. ಇಪ್ಪತ್ತೈದು ತತ್ತ್ವಗಳ ಸೃಷ್ಟಿಯನ್ನೇ ಜ್ಞಾನಿಗಳು ತತ್ತ್ವ ಎಂದು ಹೇಳುತ್ತಾರೆ. ತತ್ತ್ವಾಭಿಮಾನಿಗಳಿಂದ ಕೂಡಿದ ತತ್ತ್ವವೇ ತತ್ತ್ವ. ಈ ತತ್ತ್ವಗಳ ಸಮುದಾಯವನ್ನು ನಾರಾಯಣನೇ ಸೃಷ್ಟಿಸಿದ್ದಾನೆ ಎಂದು ತಿಳಿಯುತ್ತಾರೆ.

ನಿಸ್ತತ್ತ್ವಂ ಪಂಚವಿಂಶಸ್ಯ ಪರಮಾಹುರ್ನಿದರ್ಶನಮ್ ।
ಸರ್ಗಸ್ಯ ವರ್ಗಮಾಧಾರಂ ತತ್ತ್ವಂ ತತ್ತ್ವಾತ್ ಸನಾತನಾನ್ ॥೫೦॥

ಜೀವನಿಗೆ ಅಸ್ವಾಭಾವಿಕವಾದ ತತ್ತ್ವಗಳ್ಯಾವವು, ಇಪ್ಪತ್ತೈದನೆಯ ತತ್ತ್ವಯಾವುದು ಎಂಬುದನ್ನು ತಿಳಿಸಿದ್ದೇವೆ. ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನೇ ಶ್ರೇಷ್ಠವಾದ ತತ್ತ್ವವು. ಸೃಷ್ಟಿಗೆ ಪಂಚಭೂತಗಳೇ ಆಧಾರವಾಗಿವೆ. ಹೀಗೆ ತತ್ತ್ವಗಳ ವಿಮರ್ಶೆಯಿಂದ ಸನಾತನವಾದ ಬ್ರಹ್ಮತತ್ತ್ವವು ನಿರೂಪಿಸಲ್ಪಟ್ಟಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತಂ ಲೋಕಸಾಕ್ಷಿಣಮಜಂ ಪುರುಷಂ
ರವಿವರ್ಣಮೀಶ್ವರಗತಿಂ ಬಹುಶಃ ।
ಪ್ರಣಮದ್ಭವೈಕಮತಯೋಯತಯಃ
ಸಲಿಲೋದ್ಭವೋಽಪಿ ತಮೃಷಿಂ ಪ್ರಣತಃ ॥

ಲೋಕಸಾಕ್ಷಿಯೂ, ಪುರಾಣಪುರುಷನೂ,
ಜನ್ಮರಹಿತನೂ, ಸೂರ್ಯವರ್ಣನೂ ಆದ
ನಾರಾಯಣನನ್ನು ಎಲ್ಲ ಪ್ರಕಾರಗಳಲ್ಲಿಯೂ
ಸದ್ಗತಿಪ್ರದನಾದ ಶ್ರೀಹರಿಯನ್ನು ಬಾರಿ ಬಾರಿಗೂ
ನಮಸ್ಕರಿಸಿರಿ. ಸಲಿಲೋದ್ಭವನಾದ
ಚತುರ್ಮುಖ ಬ್ರಹ್ಮನೂ ನಾರಾಯಣನನ್ನು
ನಮಸ್ಕರಿಸುತ್ತಾನೆ.

ISBN: 978-93-88813-33-4